ನವಯುಗ

Phone No. 226

NAVAYUGA

leading rationalist weekly

೨೦ ಪೈಸೆ

ಕಥಾ ಪ್ರಪಂಚ

ಜನರ ಬಾಯಿಗೆ ಬೀಗ

ಇಂಗ್ಲಿಷ್ ಮೂಲ: ಶ್ರೀ ಆರ್. ಚೂಡಾಮಣಿ.
ಭಾವಾನುವಾದ: ಶ್ರೀ ಕೆ. ಎಸ್. ಪುರಾಣಿಕ.

ಮಿತ್ರನು ಹೇಳಿದ ಸುದ್ದಿಯನ್ನು ಕೇಳಿ ಕೃಷ್ಣನ್ ದಂಗಾಗಿ ಹೋಗಿದ್ದನು.

"ಖಂಡಿತವಾಗಿಯೂ ಸಾಧ್ಯವಿಲ್ಲ".

"ಏನೇ ಇರಲಿ, ಅದು ಹೌದು".

"ಈ ತರಹದ ಮಾತುಗಳು ಖಂಡಿತ ಇರಲಿಕ್ಕಿಲ್ಲ".

"ಖಂಡಿತವಾಗಿಯೂ ಹೌದು".

"ಹಾಗಾದರೆ ನನ್ನ ವಿಷಯವಾಗಿ ಅಲ್ಲವೇನೋ!'

"ನಿನ್ನ ವಿಷಯವಾಗಿಯೇ. ಕೃಷ್ಣನ್ ಎಂದರೆ ನೀನೇ ತಾನೇ".

"ಆದರೆ ನಾನು ಮುದುಕನಾಗಿದ್ದೇನೆ. ಇನ್ನೊಂದು ಎರಡು ತಿಂಗಳುಗಳಲ್ಲಿ ನನಗೆ ಐವತ್ತೇಳು ತುಂಬುವುದು."

"ಅದೇನೇ ಇರಲಿ, ನೀನೊಬ್ಬ ಮನುಷ್ಯನೆಂಬ ದು ನಿಜವಷ್ಟೆ? ಸುದ್ದಿಯನ್ನು ಹರಡಿಸುವವರಿಗೆ ಅಷ್ಟೇ ಸಾಕು. ಹೇಗಿದ್ದರೂ ನೀನೊಬ್ಬ ಗಂಡು, ಅವಳೊಬ್ಬಳು ಹೆಂಗಸು ಹೌದಲ್ಲವೇ?"

ಈ ಮಾತುಗಳನ್ನು ಕೇಳಿ ಕೃಷ್ಣನನು ಮೂಕನಾಗಿ ಹೋಗಿದ್ದನು. ಹೌದು! ಜಾನಕಿಯು ಒಬ್ಬಳು ಹೆಂಗಸಾಗಿದ್ದಾಳೆ ಅದೂ ಸುಮಾರು ಮೂವತ್ತರ ಹೆಂಗಸು. ಆದರೆ ಅವಳು ಅವನ ಅಡಿಗೆಯವಳಾಗಿ ಮಾತ್ರ ಇದ್ದಳು ಆದರಲ್ಲಿ ತಪ್ಪೇನಿದ್ದಿತು? ಯಾವುದೇ ಹೆಂಗಸು ಒಬ್ಬ ಗಂಡಸಿನ ಹತ್ತಿರ ಅಡಿಗೆಯವಳಾಗಿ ಇರಬಾರದೆಂದೇನೂ ಕಾನೂನು ಇಲ್ಲವಷ್ಟೇ?

ಅವನು ಒಬ್ಬ ವಿಧುರನಾಗಿದ್ದನು. ತನಗೆ ಸಿಗುತ್ತಿದ್ದ ಪೆನ್ಶನ್‌ನಲ್ಲಿ ಸ್ವಂತ ಮನೆಯಲ್ಲಿ ಮಕ್ಕಳನ್ನು ಬಿಟ್ಟು ಸುಖವಾಗಿ ಜೀವಿಸುತ್ತಿದ್ದನು ತನ್ನ ಮನೆಯ ಕೆಲಸಗಳನ್ನೆಲ್ಲ ತಾನೇ ಮಾಡುತ್ತ ಆನಂದ ಪಡುತ್ತಿದ್ದನು.

ಆದರೆ....ಒಂದು ವಿಷಯದಲ್ಲಿ ಮಾತ್ರ ಆತನು ಹಿಂದಿದ್ದನು ಅದೇ ಅಡುಗೆ. ತನ್ನ ಹೆಂಡತಿಯು ನಿರಾಯಾಸವಾಗಿ, ರುಚಿಕರವಾದ ಅಡುಗೆಯನ್ನು ಮಾಡುತ್ತಿದ್ದ ದಿನಗಳು ಇನ್ನು ಅವನ ಕಣ್ಣುಗಳೆದುರು ತೇಲುತ್ತಿದ್ದವು. ಹೆಂಡತಿಯ ಮರಣದ ನಂತರ ಮೂರು ನಾಲ್ಕು ಅಡುಗೆಯವರು ಅವನಲ್ಲಿದ್ದರು. ಆದರೆ ಅವರೆಲ್ಲರೂ ಗಂಡಸರಾಗಿದ್ದರು. ಆದರೆ ಕೊನೆಯವನೊಬ್ಬ ಹೇಳದೇ ಓಡಿದಾಗ ಯಾರೂ ಬೇಗನೇ ಸಿಗಲಿಲ್ಲ.

ಂ ಂ ಂ ಂ

ಇದರ ಪರಿಣಾಮವಾಗಿ ಜಾನಕಿಯ ಆಗಮನವು ಆ ಮನೆಯಲ್ಲಾಯಿತು ಉಪವಾಸದಿಂದಿದ್ದು ಅದರ ಮೇಲೆ ವೃದ್ಧ ತಾಯಿ ಮತ್ತು ಸಣ್ಣ ಪ್ರಾಯದ ತಮ್ಮ ಇವರನ್ನು ಸಾಕಬೇಕಾಗಿದ್ದ ಜಾನಕಿಗೆ ಈ ಕೆಲಸ ದೊರಕಿದ್ದು ಸ್ವರ್ಗವೇ ದೊರಕಿದಂತಾಗಿತ್ತು. ಬೇರೆ ಯಾರು ಯಾರೋ ದುಷ್ಟರಲ್ಲಿ ಕೆಲಸ ಮಾಡುವುದಕ್ಕಿಂತ ಕೃಷ್ಣನ್‌ರಂತಹವರಲ್ಲಿ ಕೆಲಸ ಸಿಕ್ಕಿದುದು ಇನ್ನೂ ಸಂತೋಷದ ವಿಷಯವಾಗಿದ್ದಿತು.

ಕೆಲಸದಲ್ಲಿ ನಿರತವಳಾಗಿದ್ದ ಅವಳು ಯಾವಾಗಲೂ ಬೇಗ ಬಂದು ಹಾಲಿನವನ ಹತ್ತಿರ ಹಾಲು ತೆಗೆದುಕೊಂಡು ಇಡೀ ದಿನ ಕೆಲಸ ಮಾಡಿ ರಾತ್ರಿ ಕೃಷ್ಣನ್‌ನಿಗೆ ಬಡಿಸಿ ತಾನೂ ಊಟ ಮಾಡಿ ಮನೆಗೆ ಮರಳುತ್ತಿದ್ದಳು.

ಮೊದಮೊದಲು ಕೃಷ್ಣನ್‌ನಿಗೆ ಏನೇನೋ ಆದರೂ ಕಡೆಗೆ ಪರಿಸ್ಥಿತಿಗೆ ಹೊಂದಿಕೊಂಡು ಹೋಗತೊಡಗಿದನು. ಜಾನಕಿಯ ಕಾರ್ಯತತ್ಪರತೆಯೇ ಅದಕ್ಕೆ ಕಾರಣವಾಗಿದ್ದಿತು. ಆದುದರಿಂದಲೇ ಅವನು ಮಿತ್ರನು ಹೇಳಿದ ಸದ್ದಿಯನ್ನು ಕೇಳಿ ದಂಗಾಗಿ ಹೋಗಿದ್ದನು'

"ಎಷ್ಟೊಂದು ಶುದ್ಧ ಹಾಗೂ ಎಣಿಸಲಾರದಂತಹ ದುಷ್ಕೃತ್ಯ!"

"ಈಗ ಮುದುಕನಿಗೆ ಮನೆಯಲ್ಲಿ ಹೆಂಗಸು ಬೇಕಂತೆ!"

"ನಾಚಿಕೆಗೇಡು "

"ಅದೂ ಈ ವಯಸ್ಸಿನಲ್ಲಿ!"

"ಈ ಮುದುಕನಂತಹ ಮತ್ತೊಬ್ಬ ಹುಚ್ಚನಿಲ್ಲ!"

"ಬಹುಶಃ ತಾರುಣ್ಯವು ಮರಳಿದೆಯೋ ಏನೊ? ಅಲ್ಲದಿದ್ದರೆ ಆ ಒಂದು ಹೆಂಗಸಿನೊಂದಿಗೆ ಇಡೀ ಮನೆಯಲ್ಲಿ ಒಬ್ಬನೇ ಇರುವುದೆಂದರೆ!"

"ಅವಳಾದರೋ, ತರುಣಿಯಾಗಿದ್ದಾಳೆ!"

"ಅಡುಗೆಯವಳಂತೆ. ಅವಳ ತಲೆ!"

"ಅವನು ಅವಳನ್ನು ಮದುವೆಯಾದರೂ ಆಗಬಹುದಿತ್ತು. ಹೀಗೇ ಇರುವುದಕ್ಕಿಂತ ಅದೂ ಒಳ್ಳೆಯದು."

ಈ ಮಾತುಗಳೆಲ್ಲಾ ಕೃಷ್ಣನ್‌ನ ಹೃದಯದಲ್ಲಿ ನಾಟಿ ಹೋಗಿದ್ದುವು. ಜನರು ತನ್ನಲ್ಲಿ ಕಂಡ ತಪ್ಪಾದರೂ ಏನು?

ಅವನು ಒಮ್ಮೆ ಅಡುಗೆ ಮಾಡುತ್ತಿದ್ದ ಜಾನಕಿಯೆಡೆಗೆ ನೋಡಿದ. ಅವಳು ಇದಾವುದರ ಪರಿವೆಯೇ ಇಲ್ಲದೆ ತನ್ನ ಕೆಲಸದಲ್ಲಿ ನಿರತಳಾಗಿದ್ದಳು.

"ಜಾನಕಿ! ಇಂದಿನ ಅಡುಗೆಯು ಇಷ್ಟು ದಿನದ ಅಡುಗೆಗಿಂತ ಬಹಳ ರುಚಿಕರವಾಗಿದೆ" ಎನ್ನುತ್ತಾ ಕರುಣೆ ತುಂಬಿದ ದನಿಯಲ್ಲಿ ಕೃಷ್ಣನ್ ಜಾನಕಿಗೆ ಹೇಳಿದ. ಜನರು ಆಕೆಯನ್ನು ಅವಹೇಳನ ಮಾಡುವುದು ಆವನಿಗೆ ಸಹಿಸಲಿಲ್ಲ.

ಇದೇ ಸುದ್ದಿ ಆಕೆಗೆ ತಿಳಿದರೆ ಅವಳಿಗೆ ಎಷ್ಟು ಬೇಸರವಾಗಲಿಕ್ಕಿಲ್ಲ? ಮನಸ್ಸಿನಲ್ಲಿ ಏನೇನೋ ಯೋಚಿಸುತ್ತ ಅವನು ಇನ್ನೊಮ್ಮೆ "ಜಾನಕಿ! ನಿನ್ನ ಇಂದಿನ ಅಡುಗೆಯು ಬಹಳ ರುಚಿಕರವಾಗಿದೆ" ಎಂದನು.

"ನೀವು ಮೆಚ್ಚಿದ್ದರಿಂದ ನನಗೆ ಸಂತೋಷವಾಯಿತು" ಎಂದಳಾಕೆ,

ಇನ್ನೇನು ಮಾತನಾಡಬೇಕೆಂದು ಅವನಿಗೆ ತಿಳಿದಿರಲಿಲ್ಲ

"ನೀನು ...ಉತ್ತಮ ಅಡುಗೆ ಮಾಡುತ್ತಿ ಎಂದನು.

"ಈ ಬದನೆಗಳನ್ನು ನಾಳೆಗೆ ಉಪಯೋಗಿಸುತ್ತೇನೆ" ಜಾನಕಿ ಉತ್ತರಿಸಿದಳು ಅವಳು ಬರೀ ಅಡುಗೆಯವಳಾಗಿ ಮಾತನಾಡಿದ್ದಳು ತನ್ನನ್ನು ನಿಂದಿಸುವ ಲೋಕದ ಎದುರು ತಾನು ನಿರಪರಾಧಿಯೆಂದು ತೋರಿಸಲು ಅವಳು ಸಿದ್ಧಳಿರಬೇಕಾಗಿತ್ತು.

ಂ ಂ ಂ

ಕೃಷ್ಣನ್‌ನ ಮನಸ್ಸಿನಲ್ಲಿ ಯಾವಾಗಲೂ ಕ್ಲೇಶವೇ ತುಂಬಿರುತ್ತಿತ್ತು. ರಸ್ತೆಯಲ್ಲಿ ಹೋಗುವಾಗ ಸುತ್ತುಮುತ್ತಲೂ ಜನ ಪಿಸುಗುಟ್ಟುವುದು ಕೇಳುತ್ತಿತ್ತು.

ಇದರಿಂದ ಅವನಿಗೆ ಕೋಪ ಬರುತ್ತಿತ್ತು. ಜನರಿಗೆ ಇದರಿಂದ ಏನು ಸಿಗುತ್ತದೆ? ಅವರು ಯಾಕೆ ಹೀಗೆ ಮಾಡುತ್ತಾರೆ? ಎಂಬುದು ಅವನಿಗೆ ತಿಳಿಯದಾಗಿತ್ತು.

ಏನೇ ಇರಲಿ ಜಾನಕಿಯ ವಿಷಯದಲ್ಲಿ ಏನಾದರೂ ನಿರ್ಧಾರ ಮಾಡಲೇಬೇಕೆಂದು ಮನೆಗೆ ಬಂದವನೇ ಜಾನಕಿಯನ್ನು ಕರೆದ.

"ಜಾನಕಿ, ನಿನಗೆ ಇಷ್ಟವಿಲ್ಲದಿದ್ದರೆ ಈ ಕೆಲಸವನ್ನು ಬಿಡಬಹುದು. ನಿನಗೆ ಬೇಕಾದರೆ ಎಲ್ಲಿಯಾದರೂ ನನ್ನ ಮಿತ್ರರಲ್ಲಿ ಕೆಲಸ ತೆಗೆಸಿಕೊಡುತ್ತೇನೆ".

ಅವಳು ಈ ಮಾತುಗಳನ್ನು ಕೇಳಿದವಳೇ ತುಂಬಾ ದುಃಖಪೂರಿತಳಾದಳು.

"ನನ್ನನ್ನು ಯಾರು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ?'

"ನೀನು ಸ್ವಲ್ಪ ಸಮಯ ಕಾಯಬೇಕಾಗುವುದು."

"ಅದುವರೆಗೆ?"

ಇದಕ್ಕೆ ಉತ್ತರ ಇರಲಿಲ್ಲ.

"ನನ್ನ ತಾಯಿ ಮುದುಕಿ ಮತ್ತು ಸೌಖ್ಯವಿಲ್ಲದವಳು. ತಮ್ಮನು ಕೆಲಸ ಮಾಡುವ ಪ್ರಾಯದವನಲ್ಲ. ನಾನು ಕೆಲಸಮಾಡಿದರೇನೇ ಅವರು ಉಣ್ಣಬಹುದು. ಕೆಲವು ಸಲ ನಾನು ಇಲ್ಲಿ ಎರಡು ಸಲ ಊಟ ಮಾಡಿ ಅವರು ಅಲ್ಲಿ ಉಪವಾಸ ಬಿದ್ದಿರುವಾಗ ನನಗೆಷ್ಟು ಬೇಸರವಾಗುವುದೆಂದು ನಿಮಗೆ ತಿಳಿದಿದೆಯೇ?"

ಆತನ ತಲೆ ಬಗ್ಗಿತ್ತು. ಕೆಲವು ಕ್ಷಣಗಳ ನಂತರ ತಲೆಯನ್ನು ಮೇಲೆತ್ತಿದ.

ಅವನ ಮನಸ್ಸು ಒಂದು ನಿರ್ಧಾರಕ್ಕೆ ಬಂದಿತ್ತು.

"ನಿನಗೆ ಮದುವೆ ಯಾಗಿಲ್ಲ ಅಲ್ಲವೆ?"

"ಇಲ್ಲ, ನಾವು ಬಹಳ ಬಡವರು. ಯಾರು ಮದುವೆಯಾಗುತ್ತಾರೆ?"

"ನೀನು ನನ್ನನ್ನು ಮದುವೆಯಾಗುತ್ತೀಯಾ?"

ಂ ಂ ಂ

ಬಡ ಕುಟುಂಬದ ಕಷ್ಟಗಳೆಲ್ಲ ಕೊನೆಗೊಂಡಿದ್ದುವು ಅವರಿಗೆ ಉಪವಾಸ ಬೀಳುವ ಆವಶ್ಯಕತೆಯೇ ಇರಲಿಲ್ಲ. ಕೃಷ್ಣನನ್ನು ಮದುವೆಯಾದ ಜಾನಕಿಯು ಸಂತೋಷದಿಂದಿದ್ದಳು ಕೃಷ್ಣನ್‌ನಿಗೂ ಒಂದು ಬಡ ಕುಟುಂಬವನ್ನು ಉದ್ಧರಿಸಿದ ಬಗ್ಗೆ ಬಹಳ ಸಂತೋಷವಾಗಿತ್ತು. ಎಲ್ಲದಕ್ಕಿಂತಲೂ ಜನರ ಬಾಯಿಗೆ ಬೀಗ ಬೀಳುವುದೆಂದು ಅವನೆಣಿಸಿದ್ದನು.

ಆದರೆ?

ಜನರ ಮಾತುಗಳನ್ನು ತನ್ನ ಮಿತ್ರನಿಂದ ಕೇಳಿದಾಗ ಆತನಿಗೆ ಅತೀವ ವೇದನೆಯಾಗಿತ್ತು.

ಎಂತಹ ಮಾತುಗಳು!

"ಆ ಮುದುಕನು ಅವನ ಅಡುಗೆಯವಳನ್ನು ಮದುವೆಯಾಗಿದ್ದಾನೆ!"

"ಎಂತಹ ನಾಚಿಕೆಗೇಡು!"

"ಆತನು ಈ ವಯಸ್ಸಿನಲ್ಲಿ ಯಾಕೆ ಮದುವೆಯಾದನೆಂದು ನನಗೆ ತಿಳಿಯದು!"

"ಅದೂ ಒಬ್ಬಳು ಅಡುಗೆಯವಳನ್ನು!"

"ಈ ವಯಸ್ಸಿನಲ್ಲಿ ಆನಂದ ಪಡುವುದೆಂದರೆ ಅಸಹ್ಯದ ಮಾತು!'

(ಹದಿನೈದನೇ ಪುಟ ನೋಡಿರಿ)

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ.

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist]

11-ಬಿ ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳೆದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು= ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು.



Phone No. 226

Estd. 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ಪತ್ರ, ಲೇಖನ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಹಂಗೇರಿಯ ಟೆಲಿವಿಸನಿನಲ್ಲಿ ಅಲ್ಲಿಯ ಮಹಿಳೆಯೊಬ್ಬಳು ದೃಶ್ಯವೊಂದನ್ನು ವೀಕ್ಷಿಸುತ್ತಿರುವುದು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೧೯	೭—೧—೧೯೬೫	No. 19

ಬೆಲೆಯೇರಿಕೆ-ವೇತನ ಹೆಚ್ಚಳ

ಬೆಲೆಯೇರಿಕೆಯು ಆಕಾಶವನ್ನು ಮುಟ್ಟುತ್ತಿರುವ ಇಂದಿನ ದಿನಗಳಲ್ಲಿ ಮಧ್ಯಮ ವರ್ಗದ ಜೀವನ ಸ್ಥಿತಿಯು ತೀರ ಶೋಚನೀಯವೆನಿಸಿದೆ. ಆಯದ ಬಹ್ವಂಶವನ್ನು ಆಹಾರ ಪದಾರ್ಥಗಳಿಗಾಗಿಯೇ ವಿನಿಯೋಗಿಸುವ ಈ ವರ್ಗವು ಇಂದಿನ ಬೆಲೆಯೇರಿಕೆಯಿಂದ ತೀರ ಕಂಗೆಟ್ಟಿರುವುದು ಸ್ವಾಭಾವಿಕ ಸರಕಾರಿ ನೌಕರರ, ಮುಖ್ಯವಾಗಿ ಎನ್. ಜಿ. ಓ.ಗಳ ಸ್ಥಿತಿಗತಿಗಳು ಮೂರಾಬಟ್ಟೆಯಾಗಿದೆ, ಅವರ ಜೀವನದ ಬುನಾದಿಯೇ ಅಡಿಮೇಲಾಗಿದೆ. ಇಂತಹ ವಿಷಮಾವಸ್ಥೆಗೆ ಗುರಿಯಾದ ತನ್ನ ನೌಕರರತ್ತ ದೃಷ್ಟಿ ಹಾಯಿಸುವುದು, ಅವರ ಕರುಣಾಜನಕ ಪರಿಸ್ಥಿತಿಯನ್ನು ಸುಧಾರಿಸುವುದು ಸರಕಾರದ ಮುಖ್ಯ ಕರ್ತವ್ಯವೆಂದೇ ಹೇಳಬೇಕು, ಏಕೆಂದರೆ, ನೌಕರರ ಆತೃಪ್ತಿ ಮಾಡುವ ಕೆಲಸದ ಮೇಲೆ ಅನಪೇಕ್ಷಣೀಯವಾದ ಪ್ರಭಾವವನ್ನು ಬೀರಿಯೇ ಬೀರುತ್ತದೆ. ಇದನ್ನು ಗಮನಿಸಿಯೇ ಕರ್ನಾಟಕದ ರಾಜ್ಯಸರಕಾರವು ರೂ ೪೦೦ಕ್ಕಿಂತ ಕಡಿಮೆ ವೇತನ ಪಡೆಯುವ ತನ್ನ ನೌಕರರಿಗೆ ರೂ. ೫ರಂತೆ ತುಟ್ಟಿ ಭತ್ತೆಯನ್ನು ಕೊಡಮಾಡುವ ಆಜ್ಞೆಯನ್ನು ಹೊರಡಿಸುತ್ತಿದೆಯೆಂದು ಗೊತ್ತಾಗಿದೆ. ಮನೆ ಬಾಡಿಗೆ ಮತ್ತು ನಗರ ಭತ್ತೆಯಲ್ಲಿಯೂ ಹುಸ ಏರಿಕೆಯನ್ನು ಮಾಡುತ್ತಿದೆಯೆಂದೂ ತಿಳಿಯುತ್ತದೆ.

ಎನ್. ಜಿ. ಓ. ಗಳ ಬೇಡಿಕೆಯು ಏನೇ ಇದ್ದರೂ ಸರಕಾರವು ಅದನ್ನು ಸಹಾನುಭೂತಿಯಿಂದ ಪರಿಶೀಲಿಸಿ ಈ ಚಿಕ್ಕ ಪ್ರಮಾಣದ ಪರಿಹಾರವನ್ನೂ ನೀಡಲು ಹವಣಿಸಿರುವುದು ಸಂತೋಷದ ಸಂಗತಿ. ಈ ಹೆಚ್ಚುವರಿಯು ಸಾಕೇ ಎಂಬ ಪ್ರಶ್ನೆಯನ್ನು ಬದಿಗಿಟ್ಟರೆ, ಸರಕಾರ ಕೈಕ ತನ್ನ ನೌಕರರ ವೇತನ ಹೆಚ್ಚಿಸುವಲ್ಲಿರುವ ಕಳಕಳಿಯು ಪ್ರಶಂಸನೀಯ. ಕಳೆದ ಮೂರು ವರ್ಷಗಳಿಂದಲೂ ಭತ್ತೆಯನ್ನು ಸರಕಾರವು ಏರಿಸುತ್ತಲೇ ಬಂದಿದೆಯೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಸರಕಾರಕ್ಕೆ ಸದ್ಯ ಏರಿಸಿದ ದರದ ತುಟ್ಟಿ ಭತ್ತೆ ನೀಡಲು ವರ್ಷಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳು ಹೆಚ್ಚು ಬೇಕಾಗುವುದೆಂದು ತಿಳಿಯುತ್ತದೆ. ಸರಕಾರದ ಬೊಕ್ಕಸದಿಂದ ಹೋಗುತ್ತಿರುವ ಮೊತ್ತದ ಮುಂದೆ ಇದೇನೂ ದೊಡ್ಡದಾಗಲಾರದು ಎಂದು ಯಾರಾದರೂ ಹೇಳಬಹುದು.

ಇತ್ತೀಚಿನ ವರ್ಷಗಳಲ್ಲಿ ಸರಕಾರಿ ನೌಕರರ ವೇತನವು ಹೆಚ್ಚಿದೆ; ಆದರೆ, ಅದರ ಜತೆಗೆ ಜೀವನದ ವೆಚ್ಚವೂ ಬಹಳಷ್ಟು ಏರಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ರಾಜ್ಯದ ಎನ್. ಜಿ. ಓ.ಗಳು ಕೇಂದ್ರ ಸರಕಾರದ ನೌಕರರ ವೇತನ ಮಟ್ಟಕ್ಕೆ ತಮ್ಮ ವೇತನವನ್ನು ತಂದು ನಿಲ್ಲಿಸಬೇಕೆಂದು ಬಯಸುವುದು ಅನ್ಯಾಯವಲ್ಲ. ರಾಜ್ಯ ಸರಕಾರದ ಸಂಪನ್ಮೂಲಗಳು ಪರಿಮಿತವಾಗಿರುವುದರಿಂದ ಹೀಗೆ ಮಾಡುವ ಆಸೆಯಿದ್ದರೂ ಅದು ಅಸಾಧ್ಯವೆಂಬ ಅಭಿಪ್ರಾಯವು ರಾಜ್ಯ ಸರಕಾರದ್ದು. ರಾಜ್ಯ ಪುನರ್ಘಟನೆಯಾದ ತರುವಾಯ ಎರಡು ಬಾರಿ ವೇತನ ಪುನರ್ವಿಮರ್ಶೆ ಮಾಡಿ ಅದನ್ನು ಹೆಚ್ಚಿಸಿದೆಯೆಂದು ಹೇಳುತ್ತದೆ ಸರಿಯೇ. ಆದರೆ, ವೇತನವು ೧-೨-೩ ೪ ಎಂದು ಹೆಚ್ಚುತ್ತ ಬರುವಾಗ ಬೆಲೆಯು ೧ ೪ ೮-೧೬ ಎಂದು ಏರುತ್ತ ಬರುತ್ತಿದೆಯೆಂಬುದಕ್ಕೆ ಜೀವನ ವೆಚ್ಚದ ಮೂಲ್ಯಾಂಕನವೇ ಸಾಕ್ಷಿ ಹೇಳುತ್ತದೆ. ನಮ್ಮ ಯೋಜನೆಗಳಲ್ಲಿ ತೊಡಗಿಸಿದ ಹಣದ ಪ್ರತಿಫಲವು ನಮಗೆ ದೊರೆಯಲು ಇನ್ನೂ ಕೆಲವು ವರ್ಷಗಳು ಬೇಕಾಗಬಹುದೆಂದೂ, ಆ ಮೇಲೆ ರಾಜ್ಯಾದಾಯ ಹೆಚ್ಚುವುದೆಂದೂ ಆಗ ಆರ್ಥಿಕ ಸ್ಥಿತಿಗತಿಗಳು ಸುಧಾರಿಸುವುವೆಂದೂ ಮಂತ್ರಿಗಳ ಅಂಬೋಣ. ಸಂಪತ್ತನ್ನು ತೊಡಗಿಸುವುದರಲ್ಲಿ ತೀವ್ರ ಎಚ್ಚರಿಕೆಯನ್ನು ವಹಿಸುವುದು ಅಗತ್ಯವಿದೆ. ಬರೇ ದೀರ್ಘಕಾಲದ ಯೋಜನೆಗಳಲ್ಲಿಯೇ ಹಣ ತೊಡಗಿಸಿದರೆ, ಕೈ ಕಟ್ಟಿದಂತಾಗುತ್ತದೆಯೆಂದು ಹೇಳಲು ಯಾವ ಅರ್ಥಶಾಸ್ತ್ರಿಯ ಅಗತ್ಯವೂ ಇಲ್ಲ. ನಮಗಿಂದು ಬೇಕಾಗಿರುವುದು ಶೀಘ್ರ ಫಲದಾಯಕವಾದ ಯೋಜನೆಗಳು ಭವಿಷ್ಯತ್ತು ಭವ್ಯವಾಗಬೇಕೆಂದು ಎಲ್ಲರೂ ಬಯಸುತ್ತಾರೆ, ನಿಜ. ಆದರೆ, ಇಂದಿನದು ಕಳೆದ ಬಳಿಕ ತಾನೇ ನಾಳಿನ ಚಿಂತೆ? ನಾಳೆ ಮೃಷ್ಟಾನ್ನ ಭೋಜನ ದೊರೆಯುವುದೆಂದು ಇಂದು ಏಕಾದಶಿಯಾಚರಿಸುವುದು ಸಾಧ್ಯವಿಲ್ಲ. ರಾಜ್ಯದ ಎನ್ ಜಿ. ಓ.ಗಳ ಗತಿಯೂ ಇದೇ. ಕಠಿನದಲ್ಲಿ ಕಠಿನವಾದ ಸಮಯವನ್ನವರು ದಾಟಬೇಕಾಗಿದೆ, ಅವರಿಗೆ ನಿಕಟ ಭವಿಷ್ಯದಲ್ಲಿ ಭವ್ಯತೆಯೂ ಗೋಚರಿಸುವುದಿಲ್ಲ ಆದುದರಿಂದ ಸರಕಾರವು ಅವರ ಕೇಳಿಕೆಗಳನ್ನು ತೀರ ಅಲ್ಲಗಳೆಯುವುದು ಸಾಧ್ಯವಿಲ್ಲ.

ಸರಕಾರದಲ್ಲಿ ದಕ್ಷತೆಯು ಹೆಚ್ಚಿದರೆ, ಒಂದಲ್ಲ ಹಲವು ವಿಧಗಳಿಂದ ಅದರ ಆಯ ಹೆಚ್ಚಿಸಬಹುದು. ಕರವಸೂಲಿಯಲ್ಲಿ ಸರಕಾರ ಹಿಂದೆಬಿದ್ದಿದೆ, ಕರತಪ್ಪಿಸುವಿಕೆಯನ್ನು ತಡೆಗಟ್ಟುವಲ್ಲಿ ಅದಿನ್ನೂ ಸಂಪೂರ್ಣ ಯಶಸ್ವಿಯಾಗಿರುವುದಿಲ್ಲ. ಆಡಿಟ್ ವರದಿಗಳ ಅಂಶವನ್ನು ಎತ್ತಿ ನೋಡಿದರೆ, ಸರಕಾರದ ಲಕ್ಷಾಂತರ ರೂಪಾಯಿಗಳು ಯಾವ ಪ್ರತಿಫಲವೂ ಇಲ್ಲದೆ ಕೊಳೆಯುತ್ತಿವೆ. ಮಂತ್ರಿ ಮಾಗಧರ ಸಂಚಾರವನ್ನು ಕಡಿಮೆ ಮಾಡುವುದು ಸಾಧ್ಯವಿದೆ ಯೋಜನೆಯ ಹೆಸರಿನಲ್ಲಿ ಸೋರಿ ಹೋಗುತ್ತಿರುವ ಮೊತ್ತದ ಪರಿಮಾಣವೇನೂ ಕಡಿಮೆಯಿಲ್ಲ—ಇವೇ ಮೊದಲಾದ ದೋಷಗಳಲ್ಲಿ ಸರಕಾರದ ಆಡಳಿತದಲ್ಲಿ ಬಿಗಿತ ಬಂದರೆ, ಸಂಪತ್ತಿನ ಉಳಿತಾಯವಾಗಲಾರದೆ? ನೌಕರರು ವೇತನದ ಹೆಚ್ಚುವರಿಯನ್ನು ಮಾತ್ರ ಕೇಳದೆ, ತಮ್ಮ ಕರ್ತವ್ಯಗಳತ್ತಲೂ ಗಮನ ಹರಿಸುವುದರಿಂದ ಪ್ರಯೋಜನ ದೊರೆಯದೇ

ಇಲ್ಲಿ ಒಂದು ಮಾತು. ಜೀವನ ವೆಚ್ಚವನ್ನು ಸರಿದೂಗಿಸಲು ವೇತನ ಹೆಚ್ಚಿಸುವುದೊಂದೇ ಮಾರ್ಗವಲ್ಲ. ಬಾನಗಲ ಹರಡಿರುವ ಬೆಲೆಯನ್ನು ಇಳಿಸುವುದೇ ನಿಜವಾದ ಮತ್ತು ಉಚಿತವಾದ ವಿಧಾನ. ಆದರೆ, ಹಣದುಬ್ಬರದ ಇಂದಿನ ದಿನಗಳಲ್ಲಿ ಇದು ಅಸಾಧ್ಯವಾಗಿದೆ. ಎಂತಲೇ ವೇತನ ಏರಿಕೆಯು ಅನಿವಾರ್ಯವಾಗಿದೆ. ಹೀಗೆಯೇ ಮುಂದ ಸರಿದರೆ, ಹಣದುಬ್ಬರವು ಇಳಿಮುಖವಾಗಬಹುದೆ- ಎಂಬ ಪ್ರಶ್ನೆ ಹಾಗೆಯೇ ನಿಲ್ಲುತ್ತದೆ ದೇಶದ ಅರ್ಥಶಾಸ್ತ್ರಜ್ಞರು ಒಂದಾಗಿ ಹಣದುಬ್ಬರವನ್ನಿಳಿಸುವುದಕ್ಕೆ ರಚನಾತ್ಮಕ ಕ್ರಮ ಕೈಗೊಳ್ಳುವ ಅಗತ್ಯ ಇಂದು ಎಂದಿಗಿಂತ ಹೆಚ್ಚಿದೆ. ಅದು ಸಾಧಿತವಾಗುವ ತನಕ ಅಧಿಕ ವೇತನದ ಬೇಡಿಕೆ ಮುಂದಿಯೇ ಮಾಡುತ್ತದೆ; ಇದು ಅಸ್ವಾಭಾವಿಕವೆಂದು ತಳ್ಳಿಹಾಕುವುದು ಎಂದಿಗೂ ಸಾಧ್ಯವಿಲ್ಲ

ವಚನ ಸುಧೆ

ಓಂ ಕ್ರತೋ ಸ್ಮರ | ಕೃತಂ ಸ್ಮರ ||
(ಈಶಾವಾಸ್ಯೋಪನಿಷತ್ ೧೭)

೦ ಪ್ರಯತ್ನಶೀಲನೇ, ಪರಮೇಶ್ವರನನ್ನು ಸ್ಮರಿಸು, ಹಾಗೆಯೇ ನೀ ಮಾಡಿದ ಕೆಲಸವನ್ನು ಸ್ಮರಿಸಿಕೊಳ್ಳು.

೦೦ ನಿಮ್ಮ ಸ್ವಭಾವವನ್ನು ಪುರುಷಾರ್ಥಿಯನ್ನಾಗಿ ಮಾಡಿರಿ. ನಿತ್ಯವೂ ದೇವರನ್ನೂ ನೀವು ಮಾಡಿದ ಕೆಲಸಗಳನ್ನೂ ಸ್ಮರಿಸಿಕೊಳ್ಳಿರಿ ದಿನದಲ್ಲಿ ಮಾಡಿದವನ್ನು ರಾತ್ರಾರಂಭದಲ್ಲೂ ರಾತ್ರಿ ಗೈದುದನ್ನು ಪ್ರಾತಃಕಾಲವೂ ವಿಮರ್ಶಿಸಿ ನೋಡಿರಿ. ನ್ಯೂನಾತಿರೇಕಗಳು ಕಂಡುಬಂದರೆ ಅವನ್ನು ತಿದ್ದಿಕೊಂಡು ಮುನ್ನಡೆಯಿರಿ.

ನರಸಣ್ಣನ ಸರಸ



"ಏನಯ್ಯಾ, ಇನ್ನಾದರೂ ತುಸು ಅರಾಮದಿಂದ ಉಸಿರ್ಬಿಡಬಹುದಲ್ಲಾ ಐದು ರೂಪಾಯಿ ಡಿಎ ಏರ್‍ಸಿದರಲ್ಲಾ ನಮ್ಮ ಘನ ಸರಕಾರ."

'ಏನು ಹೇಳೋದು ಸ್ವಾಮಿ, ಅದನ್ನ ಕೇಳಿದ್ದೇ ತಡ, ಮಸಾಲೆ ದೋಸೆಗೆ ಐದು ಪೈಸೆ, ಕಾಫಿಗೆ ಮೂರು ಪೈಸೆ ಏರ್‍ಸಿಯೇ ಬಿಟ್ರಲ್ಲಾ"

"ಹಾಗೂ ಉಂಟೆ? ."

ಗೇಹ ರಾಜ್ಯದಲ್ಲಿ

ಮಾವನ ಸ್ವಾಗತಕ್ಕೆ ಆತಂಕ

"ಸ್ವಲ್ಪ ಇಲ್ಲಿ ಕೇಳೀಂದ್ರೆ...."

"ಏನೇ ಅದು, ಇನ್ನೂ ಮುಗೀಲಿಲ್ಲಾ ನಿನ್ನ...."

"ಅಲ್ಲಾ ಮಾತು ಮಾತಿಗೆ ಯಾಕೆ ಹೀಗೆ ಮುನಿಸು ಬೀಳ್ತೀರೀಂತ...."

"ನೋಡು ಮುಂಜಾನೆಯಿಂದ ಇದುವರೆಗೂ ಒಂದೇ ಒಂದು ಕ್ಷಣ ಬಿಡುವಿಲ್ದೆ—"

"ಅಯ್ಯೋ ಪಾಪ, ದುಡಿಯೋದು ನೀವು ಮಾತ್ರಾಂತ ತೋರುತ್ತೆ. ಅದೇ ಅಂತಾರಲ್ಲಾ...."

"ಏನೂಂತ?"

"ಅತ್ತೆ ಒಡೆದ ಮಡಕೆಗೆ ಬೆಲೆಯಿಲ್ಲಾಂತ. ಹಾಗೆ, ನಾವು ಹೆಂಗಸ್ರು ಗಾಣದೆತ್ತಿನ ಹಾಗೆ ಪ್ಯುಸುಡಿ ಮಾಡಿಕೊಂಡ್ರೆ ಅದ್ಯಾವ ಲೆಕ್ಕಕ್ಕೂ ಇಲ್ಲ. ನೀವು ಗಂಡಸ್ರು ಮಾತ್ರ...."

"ನೋಡು ನಿನಗೆ ಒಂದಲ್ಲ ನೂರು ಬಾರಿ ಹೇಳಿದ್ದೀನೆ. ಗಂಡಸ್ರನ್ನೂ, ಹೆಂಗಸ್ರನ್ನೂ ಒಂದೇ ತಕ್ಕಡಿಯಲ್ಲಿ ತೂಗ ಬಾರ್ದೂಂತ."

'ಅದೇನೂಂತ? ನೀವೇ ಅಂದಿದ್ರಿ, ನೋಡಿ, ಇದು ಪ್ರಜಾಪ್ರಭುತ್ವ. ಎಲ್ಲರಿಗೂ ಸಮಾನಾಧಿಕಾರ. ಎಲ್ಲರೂ ಸ್ವತಂತ್ರರು. ಮಹಿಳೆಯರಿಗೂ ಮಹನೀಯರಿಗೂ ಯಾವ ಭೇದವೂ ಇಲ್ಲಾಂತ..."

'ಸಾಕು ಮಾಡೇ ನಿನ್ನ ಪುರಾಣವನ್ನ. ಅಲ್ಲ, ನೀನು ಭೇದವಿಲ್ಲಾಂತಂದ ಮಾತ್ರಕ್ಕೆ ಯಾರಾದ್ರೂ ಒಪ್ತಾರೇನು?"

"ಯಾಕೆ ಹಾಗಂತೀರಿ?"

"ನಿನ್ಗೆ ಬುದ್ಧಿ ಬೆಳೆದಿರೋದು ಸಾಲದು. ನಾಗರಿಕಾಧಿಕಾರವನ್ನ ಅನುಭವಿಸುವುದಕ್ಕಷ್ಟೆ ಭೇದವಿಲ್ಲ ಹೊರ್ತು..."

"ಅಂದ್ರೆ ನಾವು ನಿಮ್ಮಂತವ್ರ ಹಂಗಿನಲ್ಲೇ ಉಳೀಬೇಕೂಂತಾಯ್ತು."

"ನೋಡು, ಅದು ಹಂಗಲ್ಲ. ಸಾಮರಸ್ಯ. ಸಮರಸವೇ ಜೀವನ ಅಂತಾರಲ್ಲಾ... ಆ ಸಮರಸವಿದ್ದಲ್ಲಿ ಮಾನವ ಯಾವ ತ್ಯಾಗಕ್ಕೂ ಸಿದ್ಧನಾಗ್ತಾನೆ. ನನ್ನ ಬಗ್ಗೆ ನೀನು, ನಿನ್ನ ಬಗ್ಗೆ ನಾನು ತುಸುವಾದ್ರೂ ತ್ಯಾಗ ಮಾಡಲೇಬೇಕು. ಸ್ವಾತಂತ್ರ್ಯವನ್ನು, ಅಧಿಕಾರವನ್ನು, ಎಲ್ಲವನ್ನೂ ಬಳಸುವಾಗ ಇತರರ ಸ್ವಾತಂತ್ರ್ಯಕ್ಕೆ, ಅಧಿಕಾರಕ್ಕೆ ಧಕ್ಕೆ ತರಬಾರದು ನೋಡು."

"ತಂದರೆ?...."

"ಆಗ ಸಮರಸ ಹೋಗುತ್ತದೆ, ವಿರಸವಾಗುತ್ತದೆ. ಇದರಿಂದ ಯಾರಿಗೆ ತಾನೇ ಸುಖ?"

"ಅಂದ್ರೆ, ನಮ್ಮ ಸ್ವಾತಂತ್ರ್ಯಕ್ಕೂ ಒಂದು ಮಿತಿಯಿದೇಂತ ಅಂದ ಹಾಗಾಯ್ತು."

"ಸರಿ ಸರಿ. ಸ್ವಾತಂತ್ರ್ಯವೆಂದರೆ ಸ್ವೈರವಲ್ಲ. ಅದಕ್ಕೂ ಅರ್ಥವಿದೆ, ಮಿತಿಯಿದೆ. ಅದನ್ನು ಮೀರಿತು ಅಂದರೆ, ಅನರ್ಥ ಖಂಡಿತ. ಕೆಲವೊಮ್ಮೆ ಸ್ವೈರವೃತ್ತಿ ವ್ಯಕ್ತಿ ದ್ರೋಹ ಸಮಾಜ ದ್ರೋಹ ಮಾತ್ರವಲ್ಲ ದೇಶ ದ್ರೋಹಕ್ಕೂ ಕಾರಣವಾಗುತ್ತದೆ."

"ಅದೇ ನೋಡಿ, ಈಗ ಮತ್ತೆ ಕೆಂಪಿನವರನ್ನೆಲ್ಲಾ ಬಂಧಿಸಲು ತೊಡಗಿದ್ದಾರಂತಲ್ಲಾ....ಅವ್ರು ಏನೋ ದೇಶ ದ್ರೋಹದ ಕೃತಿಗಳನ್ನು ಮಾಡು'ದ್ದಾರಂತೆ.."

"ಹೌದು ಕಣೇ, ಕೆಂಪು ಕಮ್ಯೂನಿಷ್ಟರ ಒಂದು ಪಂಗಡದ ನಾಯಕರನ್ನು ರಾಷ್ಟ್ರ ಹಿತದೃಷ್ಟಿಯಿಂದ ಸೆರೆ ಹಿಡಿಯ ತೊಡಗಿದ್ದಾರೆ.'

"ಅಲ್ಲಾ, ಅವ್ರನ್ನ ಹಾಗೆಲ್ಲಾ ಸೆರೆಹಿಡಿಯಲು ಅವರು ಮಾಡಿದ ತಪ್ಪು?"

"ನೋಡು ನಿನಗೆ ನೆನಪಿರಬಹುದು ಕೆಲ ಸಮಯಕ್ಕೆ ಮೊದಲು ಅವರ ಪಕ್ಷದಲ್ಲಿಯೂ ಎಡ-ಬಲ ಎಂಬ ಎರಡು ಪಂಗಡಗಳು ತಲೆದೋರಿದ್ದುವು."

"ಹೌದು, ಅಂದ್ರೆ ಚೀನೀಯ ಕರಡಿಯ ಬಾಲ ಅಲ್ಲಾಡಿಸುವವರು ಮತ್ತು ರಶ್ಯನ್ ಕರಡಿಯ ಅನುಯಾಯಿಗಳು ಅಲ್ವೆ?'

"ಏನೋ, ಕರಡಿಯಂತೂ ಹೌದು. ಅಥವಾ ಒಂದು ತೋಳ ಮತ್ತೊಂದು ಕರಡಿಯೆನ್ನ ಬೇಕಾದ್ರೆ....'

"ಅದ್ಯಾವ ಪ್ರಾಣಿಯೇ ಇರಲಿ ನಮಗೇನಂತೆ?"

"ಎಡ ಗುಂಪಿನವರು ಭಾರತದ ಪವಿತ್ರ ಪುಣ್ಯ ಭೂಮಿಯ ಮೇಲೆ ಕ್ರೂರ ಚೀನೀಯರು ಮಾಡಿದ ಆಕ್ರಮಣವನ್ನೇ ಒಪ್ಪುವುದಿಲ್ಲ. ಆದರೆ ಬಲದವರು ಇದಕ್ಕೆ ವಿರುದ್ಧ...."

"ಆದುದರಿಂದಲೇ ಆ ಕೆಂಪು ಕಡುಕೆಂಪು—ನಸುಗೆಂಪು ಎಂತ ಒಡೆದು ಬೇರೆಯಾದದ್ದು. ಅಲ್ಲಾ, ಈಗ ಎಡಗುಂಪಿನವರನ್ನು ಹಿಡಿಯುತಿದ್ದಾರೇನ್ರಿ"

"ಸರಿಯೇ. ಬಲದವರು ಕೆಂಪಿನವರಾದ್ರೂ ಅವರಲ್ಲಿ ದೇಶದ ಬಗ್ಗೆ ಅನಿಷ್ಟವಿದ್ದಂತೆ ಗೋಚರವಾಗಿಲ್ಲ..."

"ಹಾಗಲ್ಲ, ಅವ್ರು ಸದ್ಯ ಚೀನಾವನ್ನು ಭಾರತ ದ್ರೋಹಿ, ಆಕ್ರಮಣಕಾರ ಅಂತ ಕರೆಯುವಷ್ಟಾದರೂ ತಯಾರಾಗಿದ್ದಾರೆ......"

"ಪರ್ವಾಗಿಲ್ಲ ಕಣೇ ನೀನು, ಉಗುರು ತೋರ್ಸಿದ್ರೆ ಬೆರಳು ನುಂಗೋ ಜಾತಿ ನಿಮ್ಮದು..."

"ಸಾಕು ಸುಮ್ಮನಿರೀಂದ್ರೆ... ನೀವು ಹೊಗಳೋದೋ ತೆಗಳೋದೋ ಒಂದೂ ಅರ್ಥವಾಗೋದಿಲ್ಲ."

"ಅರ್ಥವಾಗೋ ಕಾಲಕ್ಕೆ ಆಗುತ್ತೆ ಬಿಡು. ನೋಡು, ಎಡಗುಂಪಿನವ್ರ ತಂತ್ರ ಈಗೆಲ್ಲಾ ಬಯಲಾಗತೊಡಗಿದೆ. ಆದುದರಿಂದಲೇ....'

"ಅಲ್ಲಾ, ಅವ್ರು ಮಾಡಿದ್ದಾದ್ರೂ ಏನು? ಅವ್ರು ದೇಶದ್ರೋಹ ಮಾಡ್ತಾ ಇದ್ದಾರೆಂಬುದಕ್ಕೆ ಸಾಕ್ಷಿಯಾದ್ರೂ ಏನು?"

"ಏನೂಂತದ್ರೆ? ನೋಡು, ಕೇಂದ್ರ ಗೃಹ ಮಂತ್ರಿ ನಂದಾ ಹೇಳ್ತಾ ಇದ್ದಾರೆ: ಕಮ್ಯೂನಿಷ್ಟರ ಎಡ ಗುಂಪು ದೇಶದಲ್ಲಿ ಕೆಂಪು ಚೀನೀಯರನ್ನು ಸ್ವಾಗತಿಸುವ ಮತ್ತು ದೇಶದೊಳಗಡೆ ಸಶಸ್ತ್ರ ಕ್ರಾಂತಿಯೆಬ್ಬಿಸಿ ಪ್ರಜಾಶಕ್ತಿಯನ್ನು ಉರುಳಿಸುವ ಸಂಚು ಹೂಡುತ್ತಿದೆ."

"ಹೌದೇ? ಇದು ನಿಜವೇನ್ರಿ?'

'ಅಷ್ಟು ಪುರಾವೆಯಿಲ್ಲದೆ ಸುಂಸುಮ್ನೆ ಯಾಕೆ ಅನ್ನುತ್ತಾರೆ? ಮತ್ತೆ ನಾವು ಕೇಳಿತ್ತಲ್ಲಾ 1962ರಲ್ಲಿ ಚೀನಾ ಮೊತ್ತ ಮೊದಲಿಗೆ ಭಾರಿ ಪ್ರಮಾಣದ ಆಕ್ರಮಣ ನಡೆಸಿದಾಗ, ಗಡಿ ಪ್ರದೇಶದಲ್ಲಿ ಅಲ್ಲಿನ ಜನರನ್ನು ನಾನಾ ಪ್ರಕಾರದ ಕರಪತ್ರಗಳ ಮೂಲಕ ವಂಚಿಸಿ ಚೀನೀ ಮಾವನಿಗೆ ಸ್ವಾಗತ ನೀಡುವಲ್ಲಿ ಈ ಪಂಗಡದವರೇ ತಯಾರಾಗಿದ್ದರೂಂತ.'

"ಅಬ್ಬ ಅವರ ಮನಸ್ಸೆ! ದೇಶವನ್ನು ಚೀನೀಯರಿಗೆ ಕೊಟ್ಟು ಬಿಡಲೂ ಅವರು ಮುಂದಾದಾರು...'

"ನೋಡು, ನಮ್ಮ ದೇಶದ ಚರಿತ್ರೆಯೇ ಇದನ್ನು ಸಾರಿ ಹೇಳುತ್ತದೆ. ಭಾರತ ದೇಶವನ್ನು ಸೃಷ್ಟಿ ಮಾಡುವಾಗಲೇ ಬ್ರಹ್ಮ ಅದರ ಹಣೆಯಲ್ಲಿ ಬರೆದು ಬಿಟ್ಟಿದ್ದಾನೆ: ನಿನ್ನ ಮಕ್ಕಳೇ ನಿನ್ನ ಪತನಕ್ಕೆ ಕಾರಣವಾಗಲೀಂತ."

"ಹ್ಞಾಂ....ಇದ್ರಲ್ಲೇನು ಬಂತು? ಕುಮಾರಿ-ಕುಮಾರರು ಏಳ್ಗೆ ಪಡೆದರೆ ಮಾತ್ರ ತಾಯಿ ತಂದೆಗಳಿಗೆ ಇಹಪರ ಸುಖ ಸಮನಿಸುದಲ್ವೆ?"

"ಸರೀನ್ನು. ಈ ಎಡ ಗುಂಪಿನ ಕೆಂಪಿನವ್ರು ಮಾವೋನ ಅನನ್ಯ ಭಕ್ತರು. ತಮ್ಮ ಸಭೆ ಸಮ್ಮೇಳನಗಳಲ್ಲಿ ಅವರು ಆದರ್ಶವೆಂದು ತೂಗಹಾಕುವುದು ಮಾವನ ಚಿತ್ರವನ್ನು. ದೇಶದೊಳಗಡೆ ವಾತಾವರಣವನ್ನು ಕಲಕಿ, ಅವಾಂತರವೆಬ್ಬಿಸಿ, ಶಾಂತಿಯನ್ನೂ ನೆಮ್ಮದಿಯನ್ನೂ ಇಲ್ಲದಂತೆ ಮಾಡಿ, ಜನತೆಯ ಜೀವ-ವಿತ್ತಗಳಿಗೆ ಅಭದ್ರತೆಯಿದೆಯೆಂದು ಮುಂತಾಗಿ ಪ್ರಚಾರ ಮಾಡಿ, ಇಡಿಯ ದೇಶದಲ್ಲಿ ಗೊಂದಲಮಯ ಪರಿಸ್ಥಿತಿಯನ್ನುಂಟುಮಾಡಿ, ಇಂತಹ ವಿಪನ್ನಾವಸ್ಥೆಯಿಂದ ಭಾರತೀಯರನ್ನೆತ್ತಿ ಅವರನ್ನು ಉದ್ಧಾರ ಮಾಡಲು ಚೀನೀಯ ಮಾವ ಬರುತಿದ್ದಾನೆ ಎಂದು ಆತನ ಸ್ವಾಗತಕ್ಕೆ ಭಾರಿ ಸಿದ್ಧತೆ ನಡೆಸಿದ್ದಾರೆಂದು ತೋರುತ್ತದೆ. ಪಾಪ, ಅವರ ರಹಸ್ಯವೀಗ ಸ್ಫೋಟವಾಯಿತು.—ನರಿಯ ಬಣ್ಣ ಬಯಲಾಯಿತು."

"ನೀವು ಉದ್ದುದ್ದ ಲೆಕ್ಚರ್ ಬಿಟ್ರೆ ನನಗೆಲ್ಲಿ ಅರ್ಥವಾಗಬೇಕ? ಒಟ್ನಾರೆ, ದೇಶದಲ್ಲಿ ದೊಂಬಿ ಎಬ್ಬಿಸಿ ಚೀನೀಯ ಮಾವನಿಗೆ ತಾಯಿಯನ್ನು ಕೊಟ್ಟುಬಿಡಲು ಸಂಚು ಹೂಡಿದ್ದರೂನ್ನಿ."

'ಹ್ಞಾಂ.... ಹಾಗೇ ಅನ್ನು.'

"ಅಲ್ಲ, ಹೀಗೆಲ್ಲಾ ಅವ್ರನ್ನ ಸೆರೆಹಿಡಿದ್ರೆ ಲಾಭ?"

'ಲಾಭವೇನು? ದೇಶದ್ರೋಹ ಕಾರ್ಯ ಕೃತಿಗಳು ನಡೆಯದಂತೆ ಮಾಡಿ, ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವುದು.'

'ಅಲ್ರಿ, ನೋಡಿ ಕೇರಳದಲ್ಲಿ ಚುನಾವಣೆ ವೇಳೆ ಹೀಗೆಲ್ಲಾ ಮಾಡಿದ್ರೆ ನಿಮ್ಮ ಟೋಪಿಯವರಿಗೆ ಅಪವಾದವಲ್ವೆ?"

"ಅಧಿಕಾರ ಸ್ಥಾನದಲ್ಲಿರುವವರಿಗೆ ಹೇಗಿದ್ರೂ ಅಪವಾದವೇ. ಕ್ರಮ ಕೈಕೊಂಡ್ರೂ ತಪ್ಪು, ಕೈಕೊಳ್ಳದಿದ್ರೆ ದ್ರೋಹ..."

'ಅದು ಹೌದನ್ನಿ. ನೋಡಿ, ನಾನು ಹೇಗೆ ಅಡುಗೆ ಮಾಡಿ ಹಾಕಿದ್ರೂ ನೀವು ಅದಕ್ಕೊಂದು ನ್ಯೂನ ಹೇಳೇ ಹೇಳ್ತೀರಿ.'

"ಹ್ಹ ಹ್ಹ ಹ್ಹ....ಅದೇ ನೋಡು, ಇನ್ನೂ ಸರಿಯಾಗಿ ರುಚಿ ರುಚಿಯಾಗಿ ಮಾಡಬೇಕೂಂತ ಹಾಗನ್ನೋದು..."

(ಹದಿನಾರನೇ ಪುಟ ನೋಡಿರಿ)

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O.S. 143/61; R. E P. 74/64

ದೊಡ್ಡಕ್ಕ ಸೆಡ್ತಿ ಕೂಡಾ—ಅರ್ಜಿದಾರರು

ಮತ್ತು

ಮುತ್ತಕ್ಕ ಸೆಡ್ತಿ ಕೂಡಾ- ಎದ್ರಿದಾರರು

ಇವರೊಳಗೆ.

ಉಡುಪಿ ತಾಲೂಕು ನಂಬ್ರ 62ನೇ ಹೇರೂರು ಗ್ರಾಮದಲ್ಲಿರುವ ಕೃಷ್ಣಮ್ಮ ಸೆಡ್ತಿ ಮಕ್ಕಳು 30 ನೇ ಎದ್ರಿ ನಾರಾಯಣ ಸೆಟ್ಟಿ, 32ನೇ ಎದ್ರಿ ರಘುರಾಮ ಸೆಟ್ಟಿ ಇವರಿಗೆ ತಿಳಿಯಪಡಿಸುವದೇನೆಂದರೆ:

ಅರ್ಜಿದಾರರು ನಿಮ್ಮ ಕುಟುಂಬದ ಬಾಬ್ತು ಸ್ಥಿರಾಸ್ತಿ ವಿಕ್ರಯದ ಬಗ್ಗೆ ದಾಖಲು ಮಾಡಿದ ಏಲಂ ಇಸ್ತಿಹಾರಿಗೆ ನಿಮಗೇನಾದರೂ ಆಕ್ಷೇಪ ಇದ್ದರೆ ನೀವು 16-1-65ನೇ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಕೋರ್ಟು ಮುಂದೆ ಹಾಜರಾಗಿ ತಕರಾರು ಮಾಡತಕ್ಕದ್ದು. ತಪ್ಪಿದ್ರೆ ಇಸ್ತಿಹಾರು ಮಂಜೂರು ಮಾಡಿ ಆಸ್ತಿ ಏಲಂಗೆ ಇಡೋ ಹಾಗುತ್ತದೆ.

Y. D. Hegde B. A , B. L.

Advocate for Petitioners

ಉಡುಪಿ 28—12—1964

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಒಂದು ಅಭಿಪ್ರಾಯ

ಅಣ್ವಸ್ತ್ರ ತಯಾರಿಕೆಗೆ ಅಡೆತಡೆಗಳು

ಬರೆದವರು: ಶ್ರೀ ಶಿವಶಂಕರ

ಭಾರತದ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆಸ್ಸ್ ಹಾಗೂ ಕಮ್ಯೂನಿಸ್ಟ್ ಪಕ್ಷಗಳು ಭಾರತವು ಅಣ್ವಸ್ತ್ರ ತಯಾರಿಸಕೂಡದೆನ್ನುವ ಅಭಿಪ್ರಾಯವನ್ನು ಹೊರಗೆಡಹಿವೆ. ಸಂಯುಕ್ತ ಸಮಾಜವಾದಿ ಹಾಗೂ ಭಾರತೀಯ ಜನಸಂಘ ಪಕ್ಷಗಳು ಅಣ್ವಸ್ತ್ರ ತಯಾರಿಸಲೇಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ. ಸ್ವತಂತ್ರ ಪಾರ್ಟಿ (ಪಕ್ಷ?) ಗಬ್ಬಿಲದ ಹಾಗೆ ಇದೆ (ಬಹುಶಃ ಅದರಲ್ಲಿರುವ ಮುದುಕರಿಗೆ ಬಿರುದು ಬಾವಲಿಗಳಿರುವುದರಿಂದ ಹಾಗೆ ಇರಬಹುದು.) ಭಾರತದ ರಕ್ಷಣೆಯ ಹೊಣೆಯನ್ನು ಅಮೇರಿಕಕ್ಕೆ ಬಿಟ್ಟುಕೊಡಬೇಕೆಂಬ ಅದು ವಾದಿಸುತ್ತಿದೆ. ಕೆಲ ಕಾಂಗ್ರೆಸ್ಸ್ ಪ್ರಮುಖರು ಅಣ್ವಸ್ತ್ರ ತಯಾರಿಸಲೇಬೇಕೆಂದು ಹೇಳುತ್ತಿರುವದರಿಂದ ಅವರನ್ನು ಸಂತೈಸುವದೇ ಪ್ರಧಾನಿ ಲಾಲಬಹದೂರ ಶಾಸ್ತ್ರಿಯವರಿಗೆ ಪ್ರಯಾಸವಾಗಿದೆ. ಇವೆಲ್ಲವನ್ನೂ ಹಿಂದಿನ ಸಂಚಿಕೆಗಳು ಸ್ಪಷ್ಟವಾಗಿ ವಾಚಕರಿಗೆ ತಿಳಿಸಲಾಗಿದೆ.

ಭಾರತದ ರಾಷ್ಟ್ರಾಧ್ಯಕ್ಷ ಡಾ| ರಾಧಾಕೃಷ್ಣನ್‌ರವರು ಇತ್ತೀಚೆಗೆ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುತ್ತಿದ್ದಾಗ ಭಾರತವು ಅಣ್ವಸ್ತ್ರ ಸಂದ್ಯಾಟದಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿರುವರು. ಪ್ರಧಾನಿ ಲಾಲಬಹದೂರ ಶಾಸ್ತ್ರೀಜಿಯವರು ಒಂದೇ ಸ್ವರದಿಂದ ಮಾತನಾಡಬೇಕೆಂದು ಭಾರತದ ಪ್ರತಿನಿಧಿ ಸಭಾ ಸದಸ್ಯರಿಗೆ ತಿಳಿಸಿರುವರು. ಹಾಗೆಯೇ ಅರ್ಥಿಕ ಅಮಾತ್ಯರೂ, ರಕ್ಷಣಾ ಸಚಿವರೂ ಅಣ್ವಸ್ತ್ರ ತಯಾರಿಸಕೂಡದೆಂದೇ ಹೇಳಿರುವರು. ಈ ರೀತಿ ಅವರೆಲ್ಲರೂ ಅನ್ನಬೇಕಾದರೆ ಅಣ್ವಸ್ತ್ರ ತಯಾರಿಕೆಗೆ ಇರುವ ಅಡೆತಡೆಗಳೇನೆಂಬುದನ್ನು ನೋಡುವ.

ರಾಷ್ಟ್ರಾಧ್ಯಕ್ಷ ರಾಧಾಕೃಷ್ಣನ್‌ರವರು ನಾವು ಬುದ್ಧ, ಗಾಂಧಿ, ನೆಹರುಗಳ ನಾಡಿನವರಿರುವದರಿಂದ ಅಣುಗುಂಡು ತಯಾರಿಸಕೂಡದೆಂದಿರುವರು. ಇಂದು ಆ ಮೂರು ಮಹಾನ್ ವ್ಯಕ್ತಿಗಳು ಇರುತ್ತಿದ್ದಲ್ಲಿ ಅಣ್ವಸ್ತ್ರ ತಯಾರಿಕೆಗೆ ಎದುರು ಬರುತ್ತಿದ್ದರೇ? ಅದರ ಮೇಲೆ ನಾವು ಗಾಳಿಗೋಪುರ ಕಟ್ಟಬಹುದು ಅಷ್ಟೆ. ಅದನ್ನು ಬಿಟ್ಟು 'ಇದಮಿತ್ಥಂ' ಎನ್ನುವುದು ಬಹಳ ಕಷ್ಟ. ಅಷ್ಟಾದಭೂತಿಯ ಹಾಗೆ ಮೂವರ ಪರವಾಗಿ ಮಾತಾಡಲು ಹಕ್ಕು ಗಿಟ್ಟಿಸಿಕೊಂಡಿರುವವನಂತೆ ಬೇಕಾದಲ್ಲಿ ಘಂಟೆಗಟ್ಟಲೆ ಭಾಷಣ ಹೊಡೆಯಲು ಸಾಧ್ಯ. ಪಾಕಿಸ್ತಾನಿಗಳು ಕಾಶ್ಮೀರದ ಮೇಲೆ ಧಾಳಿ ನಡೆಸಿದಾಗ ಭಾರತ ಅತ್ತ ಆಕ್ರಮಣವನ್ನೆದುರಿಸಲು ಸೇನೆ ಕಳುಹಿದ್ದರ ಬಗ್ಗೆ ಗಾಂಧೀಜೀಯವರಾಗಲೀ, ನೆಹರೂಜೀಯವರಾಗಲೀ ವಿರೋಧಿಸಿರುವದಿಲ್ಲವೆನ್ನುವದನ್ನು ಜ್ಞಾಪಿಸಿಕೊಳ್ಳುವಾಗ ಇಂದಿನ ಪರಿಸ್ಥಿತಿಯಲ್ಲಿ ಅವರು ಅಣ್ವಸ್ತ್ರ ತಯಾರಿಕೆಗೆ ಎದುರು ಬರುತ್ತಿರಲಿಲ್ಲವೆನ್ನಬಹುದು. ಆ ಮೂವರ ನಾಮ ಜಪಿಸುತ್ತಿರುವ ಯಾವ 'ಶಾಂತಿಯ ಮೂರ್ತಿ'ಯೂ ಗಡಿಗೆ ಹೋಗಿ ಚೈನಿ ಕಮ್ಯೂನಿಸ್ಟರೆದುರು ಉಪವಾಸ ಅಥವಾ ಸತ್ಯಾಗ್ರಹ ಮಾಡುವದೆಂದಿಲ್ಲ. ಇಷ್ಟರ ವರೆಗೆ ಅದ್ಯಾರೂ ತಾನು ಹೋಗುತ್ತೇನೆಂದು ಹೇಳಿರುವದಿಲ್ಲ! ಹಾಗಿರುವಾಗ ಗಾಂಧಿ-ನೆಹರೂ ಹೆಸರು ಹೇಳಲು ನಮಗ್ಯಾವ ಹಕ್ಕಿದೆ?

ಅಣು ಶಕ್ತಿಯನ್ನು ಶಾಂತಿಯುತ ಉದ್ದೇಶಕ್ಕಾಗಿ ಮಾತ್ರ ಬಳಸಬೇಕೆಂದು ಶಾಂತ ಮೂರ್ತಿ ಶಾಸ್ತ್ರೀಜೀಯವರು ಕಾಂಗ್ರೆಸ್ ಸದಸ್ಯರಿಗೆ ಸೂಚಿಸಿರುವರು. ಇದನ್ಯಾರೂ ಅಲ್ಲಗಳೆದಿರುವದಿಲ್ಲ. ಆದರೆ ಅದು ಸ್ಮಶಾನ ಶಾಂತಿಗಾಗಿ ಇರಬಾರದು ಅಷ್ಟೆ. ಅಂದರೆ, ಕೇವಲ ದೀಪಗಳನ್ನು ಉರಿಸಲು ಮಾತ್ರ ಅಣುಶಕ್ತಿಯ ಉಪಯೋಗವಾಗದಿರಲಿ. ಭಾರತದ ರಕ್ಷಣೆಗಾಗಿ, ಭಾರತದ ಶಾಂತಿಯ ರಕ್ಷಣೆಗಾಗಿ ಅದರ ಉಪಯೋಗವಾಗಲೇಬೇಕು. ಅಣು ಗುಂಡು ತಯಾರಿಸಿ ಕೊಂಡೊಯ್ದು ಪೆಕಿಂಗಿನಲ್ಲಿ ಬಿಸಾಡಬೇಕೆಂದು ಅದ್ಯಾರೂ ಹೇಳಿಲ್ಲ. ನಾವೂ ಅದನ್ನು ತಯಾರಿಸಿ ಇಟ್ಟುಕೊಂಡಲ್ಲಿ, ನಮ್ಮ ಮೇಲೆ ಅದನ್ನು ಪ್ರಯೋಗಿಸಲು ಎದುರಾಳಿಗೆ ಧೈರ್ಯ ಬರುವದಿಲ್ಲವೆಂದು ಮಾತ್ರ ಹೇಳುವವರು ಕೆಲವರಿದ್ದಾರೆ. ಹಾಗೆ ಮಾಡದಿದ್ದಲ್ಲಿ ಆ ದಾರಿಯಲ್ಲಿ ಕಮ್ಯೂನಿಸ್ಟ್ ಚೈನಾವು ತ್ವರಿತ ಗತಿಯಲ್ಲಿ ಮುಂದರಿಯುವದರಲ್ಲಿ ಸಂದೇಹವೇ ಇಲ್ಲ.

ಅಣ್ವಸ್ತ್ರ ತಯಾರಿಸುವದಕ್ಕಿಂತಲೂ ವಿಶ್ವದಲ್ಲಿ ಅಣ್ವಸ್ತ್ರ ಇಲ್ಲದಂತೆ ಮಾಡುವದೇ ಮುಖ್ಯವೆಂದು ಶ್ರೀ ಲಾಲಬಹದೂರ ಶಾಸ್ತ್ರಿಯವರು ತಿಳಿಸಿರುವರು. ಆದರೆ ಇದು ಇಂದು ಸಾಧ್ಯವೇನು? ಪ್ರಪಂಚದಲ್ಲಿ ನಮ್ಮ ಮಾತು ಕೇಳುವ ರಾಷ್ಟ್ರ ಒಂದಾದರೂ ಇದೆ ಏನು? ಪರರಾಷ್ಟ್ರಗಳಲ್ಲಿರುವ ನಮ್ಮ ರಾಯಭಾರಿಗಳಲ್ಲಿ ಅದೆಷ್ಟುಮಂದಿ ಅವರಿರುವ ರಾಷ್ಟ್ರಗಳನ್ನು ನಮಗೆ ಮಿತ್ರ ರಾಷ್ಟ್ರಗಳನ್ನಾಗಿ ಮಾಡಿಕೊಂಡಿದ್ದಾರೆ. ಬಾಯಿ ಮಾತಿನ ಮಿತ್ರರು ಬೇಕಾದಷ್ಟು ಮಂದಿ ಇರಬಹುದು ಆದರೆ ನಿಜವಾಗಿ ಯಾರಿದ್ದಾರೆ? ಹಾಗಿರುವಾಗ ಅಣ್ವಸ್ತ್ರ ತಯಾರಿಸಕೂಡದೆಂದು ನಾವು ಹೇಳಿದಲ್ಲಿ ಅದನ್ನು ಪಡೆದಿರುವ ರಾಷ್ಟ್ರಗಳು ಏನು ಹೇಳಬಹುದು? "ಹೌದ, ಹೌದು, ನರಿ ಹೇಳುತ್ತದೆ ದ್ರಾಕ್ಷೆ ಹುಳಿ ಹುಳೀಂತ." ನಮ್ಮ ಸ್ಥಿತಿ ಹಾಗೆ ಆಗಿದೆ. ಇಂದು ಹಾಗಿರುವಾಗ ಬೇಕಾದಲ್ಲಿ ನಾವು ಮಾತ್ರ ಅಣ್ವಸ್ತ್ರ ಸಂದ್ಯಾಟದಲ್ಲಿ ಭಾಗ ವಹಿಸದೆ ಇರಬಹುದು ಅಷ್ಟೆ. ಇತರರನ್ನು ಭಾಗ ವಹಿಸದಂತೆ ಮಾಡುವದು ಇಂದು ಆಗದ ಹೋಗದ ಮಾತೇ ಸರಿ.

ಒಂದು ವೇಳೆ ಅಣ್ವಸ್ತ್ರ ತಯಾರಿಸಲು ಭಾರತ ಮುಂದಾದಲ್ಲಿ ಅದು ಇಷ್ಟರ ವರೆಗೆ ಹೇಳುತ್ತ ಬಂದಿರುವದು ಸುಳ್ಳಾಗುತ್ತದೆಂದು ಪ್ರಧಾನಿ ಲಾಲಬಹದೂರ ಜೀಯವರು ಕಾಂಗ್ರೆಸ್ ಸದಸ್ಯರಿಗೆ ಎಚ್ಚರಿಕೆ ಇತ್ತಿದ್ದಾರೆ ಹೌದು. ಭಾರತೀಯರು ಹರಿಶ್ಚಂದ್ರನ ವಂಶಜರಾಗಿದ್ದಾರೆ. ವಿರೋಧಿಗಳು ಕೂಡಾ ಭಾರತೀಯರು ಸುಳ್ಳು ಹೇಳುವದಿಲ್ಲವೆಂದು ಬರೆದಿಟ್ಟಿದ್ದಾರೆ. ಹೀಗಿರುವಾಗ ಇಂದು ಪ್ರಪಂಚದಲ್ಲಿ ನಾವು ಸುಳ್ಳು ಹೇಳುವವರಾಗುವದೇ? ಬೆಕ್ಕು ಕಣ್ಣು ಮುಚ್ಚಿಕೊಂಡೇ ಹಾಲು ಕುಡಿದರೆ ಇತರರು ನೋಡುವದಿಲ್ಲವೇನು? ಉಷ್ಟ್ರಪಕ್ಷಿ ಮರಳಡಿಯಲ್ಲಿ ಮುಖ ಹುದುಗಿಟ್ಟರೆ ಇತರರು ಅದನ್ನು ನೋಡಲಾರರೇನು? ಇಂದು ನಮ್ಮ ಪರಿಸ್ಥಿತಿ ಹಾಗೆಯೇ ಆಗಿದೆ. ದೇಶ ವಿಭಜನೆಗೆ ನಾವು ಒಪ್ಪುವದಿಲ್ಲವೆಂದೆವು; ಭಾಷಾವಾರು ಪ್ರಾಂತ್ಯ ರಚನೆಗೆ ಸಾಧ್ಯವಿಲ್ಲವೆಂದೆವು, ಮಹಾರಾಷ್ಟ್ರ-ಗುಜರಾತು ವಿಂಗಡಿಸಲು ಸಾಧ್ಯವೇ ಇಲ್ಲವೆಂದೆವು, ನಾಗಾಲೇಂಡ್ ಸಾಧ್ಯವಿಲ್ಲವೆಂದೆವು ....ಈ ರೀತಿ ಅದೆಷ್ಟೋ ಹೇಳಿದ್ದೆವು. ಕೊನೆಯಲ್ಲಿ ಆದದ್ದಾದರೂ ಏನು? ಕಡ್ಡಾಯ ಲೇವಣಾತಿ ಹಾಗೂ ಚಿನ್ನ ನಿಯಂತ್ರಣ ಏನಾದುವು? ಸಮಯಕ್ಕೆ ಸರಿಯಾಗಿ ಅವೇನೋ ಆಡುತ್ತೇವೆ, ಕಾಲಕ್ಕನುಗುಣವಾಗಿ ಅದೇನೋ ಮಾಡುತ್ತೇವೆ ಹಾಗಿರುವಾಗ ಇದೇನು ಮಹಾ? ಇದರಿಂದ ಹರಿಶ್ಚಂದ್ರನ ಹೆಸರಿಗೆ ಕಳಂಕ ಬರುವದಾದರೂ ಹೇಗೆ?

ಕೆಲ ದಿನಗಳ ಹಿಂದೆ ನಾಗಪುರದಲ್ಲಿ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಇತರರ ಮೇಲೆ ಪ್ರಯೋಗಿಸಲಿಕ್ಕಾಗಿ ಚೈನಾವು ಅಣುಗುಂಡನ್ನು ತಯಾರಿಸಿರುವದಿಲ್ಲವೆಂದು ಹೇಳಿದರು. ಶ್ರೀ ಶಾಸ್ತ್ರೀಜೀಯವರು ಅಷ್ಟ್ಯಾವ ಕವಡೆಯನ್ನು ಕಂಡು ಭವಿಷ್ಯ ಹೇಳುತ್ತಿರುವರೋ ಗೊತ್ತಿಲ್ಲ. ಪ್ರಯೋಗಿಸಲಿಕ್ಕಲ್ಲವಾದಲ್ಲಿ ಮತ್ತೇಕೆ? ತಮ್ಮ ಮಕ್ಕಳಿಗೆ ಆಟದ ಸಾಮಾನೆಂದು ತಯಾರಿಸುವರೇನು? ಹಿಂದಿನ ಪ್ರಧಾನಿಯವರು, ಒಂದು ಸಮಾಜವಾದಿ ರಾಷ್ಟ್ರವು ಇನ್ನೊಂದು ಸಮಾಜವಾದಿ ರಾಷ್ಟ್ರದ ಮೇಲೆ ಎಂದೂ ಆಕ್ರಮಣ ನಡೆಸುವದಿಲ್ಲವೆಂದು ಹೇಳುತ್ತಿದ್ದರು. ಅಲ್ಲದೆ ಆಕ್ರಮಣ ನಡೆದಿದೆ ಎಂದು ಹೇಳಿ ರಾಷ್ಟ್ರ ಜಾಗೃತಿ ಕಾರ್ಯವನ್ನು ಮಾಡಿದವರಿಗೆ ಟೀಕೆ ಮಾಡಿ ಹಾಕಿ ಬಿಟ್ಟು, ಅವರನ್ನು ಯುದ್ಧಪ್ರಿಯರು, ಮಾನವತಾ ದ್ರೋಹಿಗಳು, ಕಿಚ್ಚು ಹಬ್ಬಿಸುವವರೆಂದೆಲ್ಲಾ ಟೀಕಿಸಿರಲಿಲ್ಲವೇನು? ಆದರೆ ದುರಾದೃಷ್ಟವಶಾತ್ ನಾನೆ

(ಹನ್ನೆರಡನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು % p.a	7ರಿಂದ 11 ತಿಂಗಳು % p.a	12ರಿಂದ 23 ತಿಂಗಳು % p.a	24ರಿಂದ 35 ತಿಂಗಳು % p.a	36ರಿಂದ 47 ತಿಂಗಳು % p.a	48ರಿಂದ 59 ತಿಂಗಳು % p.a	60ರಿಂದ 83 ತಿಂಗಳು % p.a	84ರಿಂದ 120 ತಿಂಗಳು % p.a
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6 00	6-25	6-50	6-75
ರೂ 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ.	5-25	5-50	5 75	6-00	6 25	6 50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್]

ರಿಜಿಸ್ಟರ್ಡ್ ಆಫೀಸು.— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ವಿಚಾರ ವರ್ಷ

ಆಹಾರ ಸಮಸ್ಯೆಯ ಪರಿಹಾರ ಸೂತ್ರಗಳು

ಬರೆದವರು

ಶ್ರೀ ಎಂ. ವಿ. ಪಡಿಯೂರ್, C. A. I. I. B.

ಭಾರತವಿಂದು ಎದುರಿಸುತ್ತಿರುವ ಆಹಾರದ ಸಮಸ್ಯೆ ಶೋಚನೀಯವಾದುದು. ದೇಶದ ಆರ್ಥಿಕ ಮತ್ತು ರಾಜಸ್ಥಿತಿಕ ಭದ್ರತೆಯು ಈ ಪಿಡುಗನ್ನು ಪರಿಣಾಮಕಾರಿಯಾಗಿ ದೂರಮಾಡುವುದರಿಂದಲೇ ಸಾಧ್ಯ. ಆಹಾರಾಭಾವದೊಡನೆ ಹೋರಾಡಲು ಕೆಲವೊಂದು ಸಲಹೆಗಳನ್ನು ಇಲ್ಲಿ ಮಾಡಬಹುದು. ಇವುಗಳಲ್ಲಿ ಕೆಲವನ್ನಾದರೂ ಕೂಡಲೇ ಸ್ವೀಕರಿಸಿ ಕಾರ್ಯಕೃತಗೊಳಿಸುವುದರಿಂದ ನಾವು ಬದುಕುವುದು ಸಾಧ್ಯ.

೧ ಮಣ್ಣಿನ ಮಗನನ್ನು ಮಣ್ಣಿನ ಒಡೆಯನನ್ನಾಗಿ ಮಾಡುವಂತೆ ಏಕರೂಪದ ಭೂಸುಧಾರಣೆಯು ಇಡಿಯ ದೇಶದಲ್ಲಾಗಬೇಕು. ಭೂಮಿಯ ಸಮೃದ್ಧತೆ, ನೀರಾವರಿ ಸೌಕರ್ಯಗಳನ್ನು ಗಮನಿಸಿ ಸರಕಾರವು ಅದರ ಮಾಲಿಕರಿಗೆ ನ್ಯಾಯವಾದ ಪರಿಹಾರ ನೀಡಬೇಕು. ಪರಿಹಾರವನ್ನು ಸರಕಾರವು ಬಾಂಡುಗಳ ಮೂಲಕ ನೀಡಿ, ಆ ಹಣವನ್ನು ೩೦-೪೦ ವರ್ಷಗಳ ಸುಲಭ ವಾರ್ಷಿಕ ಕಂತುಗಳಿಂದ ಧಾನ್ಯ ರೂಪದಲ್ಲಿ ರೈತನಿಂದ ವಸೂಲುಮಾಡಬೇಕು.

೨. ಬೇಸಾಯಕ್ಕೆ ಅಳವಡಿಸಿಕೊಳ್ಳಬಹುದಾದ ಪಡಲುಬಿದ್ದಿರುವ ಸರಕಾರಿ ಭೂಮಿಯನ್ನು ಕೋ-ಓಪರೇಟಿವ್ ತಳಹದಿಯಲ್ಲಿ ಭೂರಹಿತ ಬೇಸಾಯ ಕೂಲಿಗಳಿಗೆ ಕೊಡಬೇಕು. ಅಗತ್ಯವಾದ ಆರ್ಥಿಕ ಸಹಾಯದೊಡನೆ ಬೀಜ ಗೊಬ್ಬರಾದಿಗಳನ್ನೂ ಸರಕಾರ ನೀಡಿ, ಐದು ವರ್ಷಗಳ ತನಕ ತೆರಿಗೆ ವಿನಾಯತಿ ನೀಡಬೇಕು.

೩. ಹಿಡುವಳಿಯನ್ನು ವಿಭಜಿಸುವ ಪರಂಪರೆಯನ್ನು ಕೂಡಲೇ ತಡೆಗಟ್ಟಬೇಕು. ಏಕೆಂದರೆ, ಭೂಮಿಯು ಹರಿಹಂಚಾಗಿ ಹೋಗುವುದರಿಂದ ಹಿಡುವಳಿಯು ಆರ್ಥಿಕ ನಷ್ಟಕ್ಕೆ ಕಾರಣವಾಗುವುದು; ರೈತರನ್ನು ಸಂಕಷ್ಟಕ್ಕೆ ಗುರಿಮಾಡುವುದು.

೪. ಜರ್ಮನಿಯಲ್ಲಿ ಮಾಡಿದಂತೆ ಉತ್ತರಾಧಿಕಾರ ಶಾಸನವನ್ನು ತಿದ್ದುಪಡಿಮಾಡಿ ಭೂಮಿಯು ಹಿರಿಯ ಅಥವಾ ಕಿರಿಯವನಿಗೆ ಸೇರುವಂತೆಯೂ ಆದರ ಉತ್ಪತ್ತಿಯಲ್ಲಿ ಮಾತ್ರ ಉಳಿದವರಿಗೆ ಪಾಲು ದೊರೆಯುವಂತೆಯೂ ಮಾಡಬೇಕು.

೫. ಯಾವುದೇ ಕಾರಣದಿಂದ ಬೇಸಾಯ ಮಾಡಲಾರದ ರೈತರು ತಮ್ಮ ಭೂಮಿಯನ್ನು ಸರಕಾರಕ್ಕೆ ಬಿಟ್ಟುಕೊಡಬೇಕು. ಸರಕಾರವು ಇಂತಹ ಭೂಮಿಗೆ ತಾಗಿಕೊಂಡಿರುವ ನಷ್ಟಪ ಹಿಡುವಳಿದಾರನಿಗೆ ಅದನ್ನು ಒಪ್ಪಿಸಬೇಕು. ಅಂತಹವರು ಇಲ್ಲವಾದರೆ, ಭೂ ರಹಿತ ಕರ್ಮಜೀವಿಗಳಿಗೆ ನೀಡಬೇಕು.

೬. ಸರಕಾರದ ಸಹಾಯ ಪಡೆದೂ ತನ್ನ ಹಿಡುವಳಿಯಲ್ಲಿ ಅನಾಸಕ್ತಿಯಿಂದ ದುಡಿಯುವವರನ್ನು ಎಚ್ಚರಿಸಬೇಕು. ಆ ಮೇಲೆಯೂ ಅವರು ೨—೩ ವರ್ಷ ನಿರ್ಲಕ್ಷ ತೋರಿಸಿದರೆ, ಅಂತಹವರ ಭೂಮಿಯನ್ನು ಸರಕಾರ ತನ್ನ ವಶಪಡಿಸಿ ಅದನ್ನು ನಷ್ಟಪರಾದ ಹಿಡುವಳಿದಾರರಿಗೂ ಆ ಮೇಲೆ ಭೂರಹಿತ ಬೇಸಾಯದ ಕೂಲಿಗಳಿಗೂ ಹಂಚಬೇಕು.

೭. ಮಿತ ಪರಿವಾರವೊಂದಕ್ಕೆ ಆಗತ್ಯ ಬೀಳುವ ಭೂಮಿಯನ್ನು ನೀರಾವರಿ ಸೌಕರ್ಯ, ಸಂಮೃದ್ಧತೆಗಳನ್ನು ಹೊಂದಿಕೊಂಡು ನಿತುಗೊಳಿಸಬೇಕು.

ಆ ಉತ್ಪಾದನೆಯ ವೆಚ್ಚ ಮತ್ತಿತರ ವಸ್ತುಗಳ ಮೌಲ್ಯಗಳನ್ನು ಗಮನಿಸಿ ಎಲ್ಲ ವಿಧಗಳ ಧಾನ್ಯಗಳ ಮೇಲೆ ಬೆಲೆಯನ್ನು ಗೊತ್ತುಮಾಡಬೇಕು. ರೈತನಿಗೆ ತನ್ನಿತರ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ಶಕ್ತಿಯು ಅಗತ್ಯವಿರಬೇಕಾದುದರಿಂದ ಹೀಗೆ ಮಾಡುವುದು ಅತ್ಯವಶ್ಯ.

೯. ರೈತರಿಗೆ ಲಾಭದಾಯಕವಾಗುವಂತೆ ಗೊತ್ತುಮಾಡುವ ಧಾನ್ಯ ಬೆಲೆಯು ಏರಿಕೆಯಲ್ಲಿರುವುದರಿಂದ ವಾರ್ಷಿಕ ರೂ. ೨,೪೦೦/= ಕ್ಕಿಂತ ಕಡಿಮೆ ಆದಾಯವುಳ್ಳ ಮಧ್ಯಮ ಮತ್ತು ಸಿಮ್ನ ವರ್ಗವು ವಿಪನ್ನಾವಸ್ಥೆಗೆ ಗುರಿಯಾಗುವುದರಿಂದ ಅಂತಹ ಕುಟುಂಬಗಳಿಗೆ ರೇಶನ್ ಕಾರ್ಡನ್ನು ಕೊಡಬೇಕು. ಒಕ್ಕಲುದಾರರನ್ನು ಇದರಿಂದ ಹೊರತು ಪಡಿಸಬೇಕು.

೧೦. ಆಹಾರ ವಿಕ್ರಯ ಕಾರ್ಪೊರೇಶನ್ನು ರೈತನ ಕುಟುಂಬಕ್ಕೆ ಆ ವರ್ಷಕ್ಕೆ ಬೇಕಾದುದಕ್ಕಿಂತ ಹೆಚ್ಚಿನ ಎಲ್ಲ ಬಗೆಯ ಧಾನ್ಯಗಳನ್ನು ಗೊತ್ತುಮಾಡಿದ ಬೆಲೆಗೆ ವಶಪಡಿಸಬೇಕು. ಅವನ್ನು ಕುಟ್ಟಿಸಿ, ವ್ಯಾಪಾರಿಗಳಿಗೆ ಅಲ್ಪ ಲಾಭಾಂಶವನ್ನಿಟ್ಟು ವಿತರಣೆ ಮಾಡಲು ಬೆಲೆ ನಿಯಂತ್ರಿಸಿ ಕೊಡಬೇಕು. ವ್ಯಾಪಾರಿಗಳು ಈ ಧಾನ್ಯ ಮಾರಾಟದ ಲೆಕ್ಕವನ್ನು ಸಂಬಂಧಿಸಿದವರಿಗೆ ಒಪ್ಪಿಸಬೇಕು.

೧೧. ಕೃಷಿಕ ಒಕ್ಕಲುದಾರರಿಗೆ ಸಾಕಷ್ಟು ಗೊಬ್ಬರ, ಸುಧಾರಿತ ತಳಿಯ ಬೀಜ ಮತ್ತಿತರ ಉಪಕರಣಗಳು ಉತ್ಪಾದಕರ ಕೋ-ಓಪರೇಟಿವ್‌ಗಳಿಂದ ದೊರೆಯಬೇಕು. ರೈತರ ಉತ್ಪಾದನೆಯನ್ನು ಆಹಾರ ವಿಕ್ರಯ ಕಾರ್ಪೊರೇಶನ್ ಕೊಂಡುಕೊಂಡಾಗ ಇವುಗಳ ಮೌಲ್ಯವನ್ನು ಹೊಂದಿಸಿಕೊಳ್ಳಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ಗೊಬ್ಬರದ ಕಾರಖಾನೆಯನ್ನು ಸ್ಥಾಪಿಸಿ ಗೊಬ್ಬರದ ಬೇಡಿಕೆಯನ್ನು ಪೂರಯಿಸಲು ಸರಕಾರ ಮುಂದೆ ಬರಬೇಕು.

೧೨. ಅಂದಾಜು ಭತ್ತದ ಬೆಲೆಯಲ್ಲಿ ಸೇ. ೧೦ನ್ನು ಬಿತ್ತನೆಯ ಕಾಲದಲ್ಲೂ ಸೇ. ೧೦ನ್ನು ಕೊಯಿಲಿನ ಕಾಲದಲ್ಲೂ ಕೋ-ಓಪರೇಟಿವ್‌ಗಳ ಮೂಲಕ ಮುಂಗಡ ನೀಡಿ ಕೃಷಿಕರಿಗೆ ನೆರವು ನೀಡಬೇಕು.

೧೩. ಸಾಲನೀಡುವ ಸಹಕಾರಿ ಸಂಘಗಳ ಹೊರತು ಮತ್ತಾರಿಂದಲೂ ರೈತರು ಸಾಲ ಪಡೆಯದಂತೆ ನೋಡಬೇಕು.

೧೪. ಗದ್ದೆಯಲ್ಲಿರುವ ಧಾನ್ಯದ ಮೇಲೆ ಸರಕಾರ ಅಥವಾ ಕಾರ್ಪೊರೇಶನ್‌ನ ಹಕ್ಕು ಪ್ರಪ್ರಥಮವಾದುದಾಗಬೇಕು.

೧೫. ರೈತರಿಗೆ ತ್ರಾಸವಾಗದಂತೆ ಭೂಕಂದಾಯವು ಆದಷ್ಟು ಕಡಿಮೆಯಿರಬೇಕು.

೧೬. ಭೂಮಿಯ ಎತ್ತರಿಕೆಗಾಗಿ ಬಾವಿ ತೋಡುವುದು, ಪಂಪು ಸೆಟ್ಟುಗಳನ್ನಿಡುವುದು, ಹೋರಿಗಳನ್ನು ಕೊಳ್ಳುವುದು, ಮನೆಕಟ್ಟುವುದು ಮೊದಲಾದುವುಗಳಿಗೆ ಸಹಕಾರಸಂಘಗಳ ಮೂಲಕ ಸರಕಾರವು ಸಾಲವೊದಗಿಸುವ ಸೌಲಭ್ಯ ಕಲ್ಪಿಸಬೇಕು.

೧೭. ಬೀಜ ಸಂಶೋಧನಾ ಕೇಂದ್ರಗಳ ಸಂಖ್ಯೆಯು ಅವಶ್ಯ ಹೆಚ್ಚಬೇಕು. ಶೋಧ ಪ್ರಯೋಗಾಲಯಗಳು (ವಿಜ್ಞಾನ ಕಾಲೇಜುಗಳ ಸಹಾಯದಿಂದ) ಪ್ರತಿ ಜಿಲ್ಲೆಯಲ್ಲಿಯೂ ಸ್ಥಾಪಿತವಾಗಿ ಮಣ್ಣಿನ ಪರೀಕ್ಷೆ ನಡೆಯಬೇಕು. ಸರಕಾರವು ಆವಶ್ಯಕ ಉಪಕರಣಗಳನ್ನೂ ತಾಂತ್ರಿಕ ಸೌಕರ್ಯವನ್ನೂ ಒದಗಿಸಬೇಕು. ಕ್ರಿಮಿ ನಿಯಂತ್ರಣಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಕೇಂದ್ರಗಳು ನಿರ್ಮಾಣಗೊಂಡು ರೈತರಿಗೆ ಉಚಿತ ಸೇವೆಯು ದೊರೆಯುವಂತೆ ಮಾಡಬೇಕು.

೧೮. ಪ್ರಾಯೋಗಿಕ ಕೃಷಿ ಕೇಂದ್ರಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸಬೇಕು. ನಡೆದ ಪ್ರಯೋಗಗಳ ಪರಿಣಾಮವನ್ನು- ಸುಧಾರಿತ್ವ ವೈಜ್ಞಾನಿಕ ವಿಧಾನಗಳು—ಎಲ್ಲ ಕೃಷಿಕರಿಗೂ ಸಾಹಿತ್ಯ, ಪ್ರದರ್ಶನ, ಪ್ರಚಾರ, ಗ್ರಾಮಸೇವಕರುಗಳಿಂದ ತಿಳಿಸಬೇಕು. ತನ್ನ ಹಿಡುವಳಿಯಲ್ಲಿ ಪರಮಾವಧಿಯ ಉತ್ಪತ್ತಿ ಬೆಳೆದವರಿಗೆ ಬಹುಮಾನ ನೀಡುವುದೂ ಸೂಕ್ತವಾಗಿದೆ.

೧೯. ಕಬ್ಬು, ಅಡಿಕೆ ಮೊದಲಾದ ಹಣ ತರುವ ಬೆಳೆ ಬೆಳೆಯಲು ಉಪಯೋಗಿಸಬಹುದಾದ ಭೂಮಿಯ ಮಿತಿಯನ್ನು ಗೊತ್ತುಮಾಡಬೇಕು. ಭತ್ತವು ಬೆಳೆಯಲಾರದ ಭೂಮಿಯನ್ನು ಮಾತ್ರ ಇದಕ್ಕಾಗಿ ಬಳಸಲು ಗೊತ್ತುಪಡಿಸಬೇಕು.

೨೦. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕೃಷಿ ವಿಷಯವನ್ನು

(ಹನ್ನೊಂದನೇ ಪುಟ ನೋಡಿರಿ)

'ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ. 1-50 ನ. ಪೈಸೆ.

ಭೂವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ

ನವಭಾರತಪುಸ್ತಕ ಭಂಡಾರ, ಉಡುಪಿ.

ಠೇವಣಾತಿದಾರರಿಗೆ ಸುಸಂದರ್ಭ!

ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¾%ರ ವರೆಗಿನ ಬಡ್ಡಿ ನೀಡಲಾಗುವುದು.

5 ವರ್ಷ ವ ಅವುಗಳಿಗೆ ಮೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಶ್ರೀ ಕೆ.ಕೆ ಶೆಟ್ಟಿ, ಎಂ.ಎಲ್.ಸಿ.ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ!	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಇದು ನಿಮಗೂ ತಿಳಿದಿರಲಿ

ವಿದೇಶಗಳಲ್ಲಿ ನೆಹರೂ ಯಶಸ್ಸಿನ ರಹಸ್ಯ

ಬರೆದವರು:— ಶ್ರೀ ಬ. ನ. ಸುಂದರ ರಾವ್.

ಪರಿಚಯ:— ಡಾ| ಪಂಡಿತ್ ಜವಾಹರಲಾಲ್ ನೆಹರೂ, ಎಂ. ಎ., ಬಾರ್ ಅಟ್ ಲಾ ಅವರು ಭಾರತದ ಪ್ರಮುಖ ನಾಯಕರು ಸ್ವತಂತ್ರ ಭಾರತದ ಪ್ರಪ್ರಥಮ ಪ್ರಧಾನಿಯಾಗಿ ಅವಿಚ್ಛಿನ್ನರಾಗಿ ಹದಿನೇಳು ವರ್ಷಗಳ ಕಾಲ ದುಡಿದ ಧೀರರು. ಮಹಾತ್ಮಾ ಗಾಂಧೀಜಿಯವರ ಪಟ್ಟ ಶಿಷ್ಯರು. ಕ್ರಿ. ಶ. ೧೮೮೯ರಲ್ಲಿ ಇವರ ಜನನವಾಯಿತು. ಇವರ ತಂದೆ ಪಂಡಿತ್ ಮೋತೀಲಾಲ ನೆಹರೂ ಪ್ರಸಿದ್ಧ ವಕೀಲರಾಗಿದ್ದು, ಕಡೆಗೆ ಎಲ್ಲವನ್ನೂ ತ್ಯಾಗಮಾಡಿ, ಗಾಂಧೀಜಿಯವರ ಪಂಥಕ್ಕೆ ಸೇರಿ ದೇಶ ಸೇವೆಗಾಗಿ ಹೋರಾಡಿದ ವೀರಾಗ್ರಣಿ.

ಜವಾಹರಲಾಲರ ಲಂಡನ್ನಿನ ಶಿಕ್ಷಣ ಹ್ಯಾರೋ ಮತ್ತು ಟ್ರಿನಿಟಿ ಕಾಲೇಜುಗಳಲ್ಲಿ ನಡೆಯಿತು. ಇನ್ನರ್ ಟೆಂಪಲ್‌ನಲ್ಲಿ ಬಾರ್-ಅಟ್ ಲಾ ಪದವಿ ಪಡೆದರು. ಸ್ವಲ್ಪ ಕಾಲ ಅಲಹಾಬಾದಿನಲ್ಲಿ ವಕೀಲರಾಗಿದ್ದಾಗ ೧೯೧೬ರಲ್ಲಿ ಕಮಲಾ ದೇವಿಯವರೊಡನೆ ವಿವಾಹವಾಯಿತು. ಮೂರನೆಯ ವರ್ಷವೇ ಗಾಂಧೀಜಿಯವರ ಪ್ರಥಮ ಭೇಟಿ, ೧೯೧೮ರಲ್ಲಿ ಹೋಂರೂಲಿನ ಕಾರ್ಯದರ್ಶಿಯಾಗಿದ್ದರು. ೧೯೨೯ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ, ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಫಲವಾಗಿ ಬಂಧನ, ೩೧ ಜನವರಿ ೨೬ರಲ್ಲಿ ಬಿಡುಗಡೆ ೧೯೩೨ರಲ್ಲಿ ಕಾರಾಗೃಹವಾಸ, ೧೯೩೫ರಲ್ಲಿ ಬಿಡುಗಡೆ, ೫.೯ ಬಂಧನ ೧೯೩೫ರಲ್ಲಿಯೇ ಮತ್ತೆ ಬಿಡುಗಡೆ ೧೯೩೬ರಲ್ಲಿ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ, ೧೯೪೦ರಲ್ಲಿ ಪುನಃ ಜೈಲುವಾಸ, ಕೆಲವು ಕಾಲಾನಂತರ ಬಿಡುಗಡೆ, ೧೯೪೧ರಲ್ಲಿ ಪುನಃ ಬಂಧನ, ಬಿಡುಗಡೆ, ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯ ಬಂಧನ, ಪುನಃ ೧೯೪೫ ಜೂನ್ ೧೫ರಂದು ಬಿಡುಗಡೆ.

೧೯೪೭ರ ನವೆಂಬರ್ ತಿಂಗಳಿನಲ್ಲಿ ಪಾಟ್ನಾ ವಿಶ್ವವಿದ್ಯಾನಿಲಯದಿಂದ ಎಲ್. ಎಲ್. ಡಿ. ಪದವಿ ಸ್ವೀಕಾರ, ೧೯೪೭ ಆಗಸ್ಟ್ ಹದಿನೈದರಂದು ಮಹಾ ಪ್ರಧಾನಿ ಪದವಿ ಸ್ವೀಕಾರ, ಪ್ರಧಾನಿ ಪಟ್ಟದಲ್ಲಿದ್ದಾಗಲೇ ೧೯೬೪ರ ಮೇ ತಿಂಗಳಿನಲ್ಲಿ ಮರಣ.

೦೦ ೦೦ ೦೦

ಎರಡು ಕಾರಣಗಳು

ಜವಾಹರಲಾಲ್ ನೆಹರು ಆಗಾಗ ವಿದೇಶಗಳಲ್ಲಿ ಸಂಚಾರ ಮಾಡುತ್ತಿದ್ದುದು ಸರಿಯಷ್ಟೆ. ಎಲ್ಲೆಲ್ಲಿಯೂ ಇವರಿಗೆ ಅದ್ಭುತ ಸ್ವಾಗತ, ಗೌರವವೇ ದೊರಕುತ್ತಿದ್ದುವು. ಇದರ ರಹಸ್ಯವೇನು? ಅಮೆರಿಕದಲ್ಲಿರುವ ಇಂಡಿಯಾ ಲೀಗಿನ ಅಧ್ಯಕ್ಷರಾದ ಶ್ರೀ ಜೆ. ಜೆ. ಸಿಂಗ್‌ರವರು ಈ ಬಗ್ಗೆ ಹೇಳುವುದನ್ನು ಸ್ವಲ್ಪ ಕೇಳೋಣ— "ಜವಾಹರ್‌ರವರಿಗೆ ಪರದೇಶಗಳಲ್ಲಿ ಇಷ್ಟೊಂದು ಗೌರವ ದೊರೆಯುವುದಕ್ಕೆ ಮೊದಲನೆಯ ಕಾರಣ— ಅವರು ಮಹಾತ್ಮ ಗಾಂಧಿಯವರ ಪಟ್ಟ ಶಿಷ್ಯರೆಂಬುದು. ಎರಡನೆಯದು— ಅವರ ಅಪಾರ ವಿದ್ವತ್ತು. ನೆಹರೂ ಒಬ್ಬ ಪ್ರಸಿದ್ಧ ಇತಿಹಾಸಕಾರರಾಗಿದ್ದಾರೆ ಜಗತ್ತಿನ ಪ್ರಜಾ ಪ್ರಭುತ್ವದ ರಹಸ್ಯವನ್ನರಿತ ವೇದಾಂತಿಗಳಾಗಿದ್ದಾರೆ ಎಲ್ಲಕ್ಕೂ ಮಿಗಿಲಾಗಿ ಭಾರತದ ಸ್ವಾತಂತ್ರ್ಯಕ್ಕಾಗಿ ತನು ಮನವನ್ನರ್ಪಿಸಿ ಹೋರಾಡಿದ ಮಹಾ ದೇಶಭಕ್ತ. ಪರದೇಶಗಳಲ್ಲಿ ಟ್ಯಾಕ್ಸಿ ಡ್ರೈವರುಗಳಿಂದ ಮೊದಲ್ಗೊಂಡು ಅಲ್ಲಿಯ ಪ್ರಧಾನಿಗಳವರೆಗೆ ನೆಹರೂ ಮಾತೇ ಮಾತು, ಅವರು ಜೈಲುಗಳಿಗೆ ಹೋದದ್ದು, ಚಳುವಳಿ ನಡೆದದ್ದು— ಇತ್ಯಾದಿ."

೦ ೦ ೦

ಸಾರ್ವಜನಿಕ ಸ್ಥಳಗಳಲ್ಲಿ

ಎಲ್ಲಾದರೂ ಒಂದು ನಾಟಕಮಂದಿರದಲ್ಲಿ ನೆಹರೂ ಇರುವರೆಂದು ತಿಳಿದರೆ ಸಾಕು ಕೂಡಲೇ ಜನಸ್ತೋಮ ಕಿಕ್ಕಿರಿದು ನೆರೆಯುತ್ತಿತ್ತು. ನೆಹರೂ ಹಡಗಿನಿಂದ ಇಳಿಯುವುದೇ ತಡ, ಪತ್ರಿಕೋದ್ಯಮಿಗಳು ಸುತ್ತುವರೆಯುತ್ತಿದ್ದರು. ಇಂಗ್ಲೆಂಡ್ ಮತ್ತು ಅಮೆರಿಕದ ಮಹಿಳೆಯರಿಗಂತೂ ನೆಹರೂ ಎಂದರೆ ಪ್ರಾಣ. ಸ್ಯಾನ್ ಫ್ರಾನ್ಸಿಸ್ಕೋ ಕ್ರಾನಿಕಲ್ ಪತ್ರಿಕೆಯ ವರದಿಗಾರರೊಬ್ಬರು— "ನೆಹರೂ ತುಂಬಾ ಸರಳರು— ಪ್ರಾಮಾಣಿಕ ವ್ಯಕ್ತಿಗಳು, ಅವರನ್ನು ನೋಡಿದರೆ ಎಂಥವರಿಗೂ ಸ್ಫೂರ್ತಿ ಬರುತ್ತದೆ. ಆದರೆ ಅವರನ್ನು ಅರ್ಥಮಾಡಿಕೊಳ್ಳುವುದು ಮಾತ್ರ ಬಹಳ ಕಷ್ಟ" ಎಂದು ವರ್ಣಿಸಿದ್ದಾರೆ.

ಅಮೆರಿಕದ ಒಬ್ಬ ಹಿರಿಯ ವಿದ್ವಾಂಸರು- "ಗಾಂಧಿ ಭಾರತದ ಮಹಾತ್ಮರಾದರೆ, ನೆಹರೂ ಅದರ ಮಹಾನಾಯಕರಾಗಿದ್ದಾರೆ," ಎಂದು ಹೇಳಿದ್ದಾರೆ. ನೆಹರೂ ಪ್ರವಾಸ ಮಾಡುವಾಗ ಟೆಲೆಗ್ರಾಫ್ ಕಛೇರಿಗಳಿಗಂತೂ ಬಿಡುವೇ ಇಲ್ಲವಂತೆ, ಸಹಸ್ರಾರು ಪದಗಳು ಅತ್ತಿಂದಿತ್ತ, ಇತ್ತಿಂದತ್ತ ಓಡಾಡುತ್ತಿರುತ್ತವಂತೆ ನೆಹರೂ ಜೊತೆಯಲ್ಲಿ ಪ್ರವಾಸಮಾಡುವ ಪತ್ರಿಕಾ ವರದಿಗಾರರಿಗಂತೂ ವಿರಾಮವೆಂಬುದು ಸ್ವಪ್ನ. ನೆಹರೂ ಭಾಷಣವನ್ನು ಕೇಳಲು ಸಭೆಯಲ್ಲಿ ಸೇರುತ್ತಿದ್ದ ಜನದ ಸಂಖ್ಯೆ ಸರಾಸರಿ ೫೫,೦೦೦ ಎಂದು ಗೊತ್ತಾಗಿದೆ.

ಮಿಸೆಸ್ ಫ್ರಾಂಕ್ಲಿನ್ ರೂಸ್‌ವೆಲ್ಟ್ ರವರಿಗಂತೂ ನೆಹರೂ ಭಾಷಣವೆಂದರೆ ಬಹಳ ಮೆಚ್ಚು, ಆಕೆ ತಾನಾಗಿ ಮುಂದೆ ಬಂದು ಅಮೆರಿಕದ ಜನತೆಗೆ ನೆಹರೂರವರ ಪರಿಚಯ ಮಾಡಿಕೊಡುತ್ತಿದ್ದರು.

೦೦ ೦೦

ಗ್ರಾಮಾಂತರದಲ್ಲಿ

ಚಿಕಾಗೋ ಸನ್ ಟೈಮ್ಸ್ ಎಂಬ ಪತ್ರಿಕೆಯಂತೂ ನೆಹರೂ ಹಳ್ಳಿಗಾಡಿನಲ್ಲಿ ಸಂಚರಿಸಿದ ವಿಚಾರ, ರೈತರೊಡನೆ ಸಂಭಾಷಣೆ ನಡೆಸಿದ ವಿಚಾರಗಳನ್ನು ಸಚಿತ್ರವಾಗಿ ಪ್ರಕಟಿಸಿತು. ಲೂಯಿ ಜಾನ್‌ಸನ್‌ರವರು (ಡಿಫೆನ್ಸ್ ಕಾರ್ಯದರ್ಶಿಗಳಾಗಿದ್ದವರು) ನೆಹರೂರವರನ್ನು ಬಹಳವಾಗಿ ಮೆಚ್ಚುತ್ತಾರೆ. ಅಲ್ಲದೆ ಲೂಯಿ ಜಾನ್‌ಸನ್‌ರವರು ಭಾರತದಲ್ಲಿ ಸ್ವಲ್ಪ ಕಾಲ ಇದ್ದವರು ಹೀಗಾಗಿ ಒಮ್ಮೆ ಅವರು ನೆಹರೂರವರನ್ನೂ ೧೬೦ ಇತರ ಮುಖ್ಯ ಅತಿಥಿಗಳನ್ನೂ ಕರೆದು ದಿವ್ಯವಾದ ಔತಣವೇರ್ಪಡಿಸಿದ್ದರು.

೦ ೦ ೦

ಬ್ರಾಂದಿ ಮಿಶ್ರಿತ ಕಾಫಿ

ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಮಿಸೆಸ್ ಫ್ರಾನ್ಸಿಸ್ ಡಿಹಲ್ ಎಂಬಾಕೆ ನೆಹರೂ ಗೌರವಾರ್ಥವಾಗಿ ಭಾರಿ ಔತಣವನ್ನೇರ್ಪಡಿಸಿದ್ದಳು ಆಕೆ ಶ್ರೀಮಂತರಲ್ಲಿ ಶ್ರೀಮಂತಳಾಗಿದ್ದಳು. ಆಕೆಯ ಸೌಧ ಹದಿನೆಂಟು ಮಹಡಿಗಳುಳ್ಳದ್ದಾಗಿದ್ದು, ಅತ್ಯಂತ ಮನೋಹರವಾಗಿತ್ತು.

ಭೋಜನಾನಂತರ ಶ್ರೀಮತಿ ಡಿಹಲ್‌ರವರು ಬ್ರಾಂದಿ ಮಿಶ್ರಿತ ಕಾಫಿಯನ್ನು ನೆಹರೂರವರಿಗೆ ಕೊಟ್ಟು ಉಪಚರಿಸಿದರು. ಈ ಹೊಸ ವಿಧವಾದ ಕಾಫಿ ನೆಹರೂರವರಿಗೆ ಬಹಳ ರುಚಿಸಿತು. ಇದಕ್ಕೆ ಪುಟವಿಟ್ಟಂತೆ ಆಕೆ—"ನನ್ನ ಮಾವನವರಿಗೂ ಇಂಥ ಕಾಫಿ ಬಹಳ ಇಷ್ಟ. ಅವರೂ ಸಹ ಪುನಃ ಪುನಃ ಕೇಳಿ ತೆಗೆದುಕೊಳ್ಳುವರು" ಎಂದಳು ಆ ಮಾತನು ಕೇಳಿ ನೆಹರೂ "ಹಾಗಾದರೆ, ನನಗೂ ಇನ್ನಷ್ಟು ಕೊಡಿ"—ಎಂದರಂತೆ.

೦೦ ೦೦

ನಾಟಕ ಮಂದಿರದಲ್ಲಿ

ಒಂದು ರಾತ್ರೆ ನೆಹರೂರವರು 'ಸೌತ್‌ಪೆಸಿಫಿಕ್' ಎಂಬ ಹಾಸ್ಯಭರಿತ ನಾಟಕವನ್ನು ನೋಡಲು ನಾಟಕಮಂದಿರಕ್ಕೆ ಹೊರಟರು. ಚಿತ್ರದ ನಿರ್ಮಾಪಕರಾದ ಮಿ| ಆಸ್ಕರ್ ಹ್ಯಾಮರ್‌ಸ್ಟೀನ್ ಎಂಬುವವರು ನೆಹರೂ ಬಗ್ಗೆ ತಮಗಿರುವ ವಿಶ್ವಾಸವನ್ನು ವ್ಯಕ್ತಪಡಿಸುವುದಕ್ಕಾಗಿ ಈ ವ್ಯವಸ್ಥೆಯನ್ನು ಮಾಡಿದರು. ಅಲ್ಲಿ ಅದರಲ್ಲೂ ಆ ದಿನ ಟಿಕೆಟ್ ಸಿಗುವುದೇ ದುರ್ಲಭವಾಗಿತ್ತು. ದಟ್ಟವಾದ ಜನಸಂದಣಿ ಸೇರಿತ್ತು ಮುನ್ನೂರು ರೂಗಳಿಗೊಂದು ಟಿಕೆಟ್‌ನಂತೆ ಮಾರಾಟವಾಗುತ್ತಿತ್ತೆಂದು ವರದಿಗಾರರು ತಿಳಿಸಿದ್ದಾರೆ. ಎದಕ್ಕೂ ಬ್ಲಾಕ್ ಮಾರ್ಕೆಟ್.

ನಾಟಕ ಮಂದಿರದವರು ನೆಹರೂರವರನ್ನು ಸ್ವಾಗತಿಸಿ ಹಿಂಬಾಗದ ಕೊಠಡಿಗಳಿಗೆ ಕರೆದೊಯ್ದು ಅಲ್ಲಿದ್ದ ನಟಿ ಹಾಗೂ ನರ್ತಕಿಯರಾದ ಮೇರಿ ಮಾರ್ಟಿನ್ ಮತ್ತು ಎಜಯೋ ಎಫ್. ಫಿಂಜ್ ಎಂಬುವವರನ್ನು ಪರಿಚಯ ಮಾಡಿಸಿದರು. (ಇವರೇ ಆ ದಿನದ ನಾಟಕದಲ್ಲಿ ಮುಖ್ಯ ಪಾತ್ರದಾರಿಗಳಾಗಿದ್ದವರು.) ಅನಂತರ ನೆಹರೂರವರಿಗೂ ಅವರ ಪರಿವಾರದವರಿಗೂ ಉತ್ತಮ ಆಸನಗಳನ್ನು ಒದಗಿಸಲಾಯಿತು. ನಾಟಕ ಮುಗಿಯಿತು. ನೆಹರೂ ಬಹಳವಾಗಿ ಮೆಚ್ಚಿದರು. ಅನಂತರ ನೆಹರೂ ತಮ್ಮ ಪರಿವಾರದೊಡನೆ ಹೊರಟು ಹೋದರು.

ಆಗ ಮೇರಿ ಮಾರ್ಟಿನ್ ಹೇಳಿದಳು— "ನೆಹರೂರವರನ್ನು ನೋಡಿದೆಯಾ? ಆತನೊಬ್ಬ ದೇವತೆಯಿದ್ದಂತೆ- ಇದ್ದಾನಲ್ಲವೆ? ಆತನ ಕಣ್ಣುಗಳು, ಎಷ್ಟು ಎಷ್ಟು ಚುರುಕು! ಎಷ್ಟು ಸೊಗಸು!!" ಅದಕ್ಕೆ ಉತ್ತರವಾಗಿ ಫಿಂಜ್ ಹೇಳಿದಳು— "ಆತನು ನಿಜವಾಗಿಯೂ ನನ್ನ ಮೆಸ್ಸಯ್ಯ!, ದೇವ ದೂತನೇ ಸರಿ. ಆತನ ಮುಖ ಕಾಂತಿ ನೋಡು, ಆತನ ಕಣ್ಣುಗಳನ್ನು ನೋಡು. ಇಡೀ ವಿಶ್ವದ ನಾಯಕ

(ಹದಿಮೂರನೇ ಪುಟ ನೋಡಿರಿ)

ಸಂತೋಷವನ್ನು ದ್ವಿಗುಣಿತಗೊಳಿಸಿರಿ

ಸಾಮೂಹಿಕ ಕೂಟವಾಗಿರಲಿ, ವಿವಾಹ ಸಮಾರಂಭವಾಗಿರಲಿ,
ಇಲ್ಲವೆ ಇನ್ನಾವುದೇ ಸಂತೋಷ ಸಮಾರಂಭವಾಗಿರಲಿ

Shetty Ice Cream

ಶೆಟ್ಟಿ ಐಸ್ ಕ್ರೀಮ್

ನಿಮ್ಮ ಅತಿಥಿ ಅಭ್ಯಾಗತರನ್ನು ತಣಿಸಿ ಸಂತೋಷವನ್ನು
ದ್ವಿಗುಣಿತಗೊಳಿಸಬಲ್ಲುದು

ಸಂದರ್ಶಿಸಿರಿ! ಸವಿಯಿರಿ!! ಆನಂದಿಸಿರಿ!!!

ಶೆಟ್ಟಿ ಐಸ್ ಕ್ರೀಮ್ ಹೌಸ್
ಪಣಂಬೂರು (ದ. ಕನ್ನಡ)
ಫೋನ್: 13

ಶೆಟ್ಟಿ ಐಸ್ ಕ್ರೀಮ್ ಭೇಲ್ಪುರಿ ಹೌಸ್
ನಾನಾ ಚೌಕ್
ಬೊಂಬಾಯಿ 7

'ದುಡಿಮೆ ದೇವರು'—

ಜಿಲ್ಲೆಯ ನಾಲ್ವರು

ಎಕೆಡೆಮಿ, ರೋಟರಿ ಕ್ಲಬ್ಬು ಹಾಗೂ

ಹೊಸ ವರ್ಷವು ಆರಂಭವಾಗಿದೆ. ಹೊಸ ವರ್ಷದ ಪ್ರಥಮ ದಿನದಂದು ನಮ್ಮ ಹಿತಚಿಂತಕರಿಗೆ, ಗೆಳೆಯರಿಗೆ, ಬಂಧುಗಳಿಗೆ, ಆಪ್ತರಿಗೆ ಹೊಸ ವರ್ಷದ ಶುಭಾಶಯಗಳನ್ನು ಅರ್ಪಿಸಿ, ಹೊಸ ವರ್ಷವು ಸುಖಪ್ರದವಾಗಲಿ ಎಂದು ಹಾರೈಸುವುದು ಸಂಪ್ರದಾಯ. ಜನವರಿ ಒಂದನೇ ದಿನಾಂಕ ಎಲ್ಲರೂ ಹೊಸ ವರ್ಷದ ಆಗಮನವನ್ನು ಸ್ವಾಗತಿಸಿ, ಸುಖ ಸಂತೋಷದಲ್ಲಿ ಕಾಲ ಕಳೆಯುವುದು ವಾಡಿಕೆ.

ಆದರೆ ನಾವು ಹೊಸ ವರ್ಷ ಸುಖಪ್ರದವಾಗಬೇಕೆಂದು ಹಾರೈಸುವುದರ ಜತೆಗೆ ಆ ಹಾರೈಕೆ ನಿಜವಾಗುವುದಕ್ಕಾಗಿ ಶ್ರಮಿಸುವುದೂ ಅಗತ್ಯವಲ್ಲವೇ? ಈ ಸಂದರ್ಭದಲ್ಲಿ ನಾವು ಗತ ಜೀವನವನ್ನು ಸಿಂಹಾವಲೋಕನ ಮಾಡಿ, ಮುಂದಿನ ಜೀವನದಲ್ಲಿ ಸಾಧಿಸಬೇಕಾದುದೇನು ಎಂಬುದನ್ನು ಚಿಂತಿಸಬೇಕಾದುದು ನ್ಯಾಯ. ನಮ್ಮ ಈ ಚಿಂತನೆಗೆ ನೆರವಾಗುವ ಸಾಧನಗಳು ಅನೇಕ. ಇವುಗಳಲ್ಲಿ ನಮ್ಮ ಹಿರಿಯರ ಅನುಭವ, ಸುಪ್ರಸಿದ್ಧ ವ್ಯಕ್ತಿಗಳ ಜೀವನ, ವಿಶಿಷ್ಟ ಕ್ಷೇತ್ರಗಳಲ್ಲಿ ದುಡಿದು ಸಿದ್ಧಿಯನ್ನು ಪಡೆದ ಕರ್ಮಪುರುಷರ ಹಿತನುಡಿಗಳೂ ಸೇರಿವೆ. ನಮ್ಮ ಜನರ ಸಾಧನೆಗಳನ್ನು ಗುರುತಿಸಿ, ಜೀವನದಲ್ಲಿ ಅವರು ಕೈಗೂಡಿಸಿಕೊಂಡ ಸಿದ್ಧಿಯ ಗುಟ್ಟನ್ನರಿತು, ಅವರು ಸಮಾಜಕ್ಕೆ, ನಮಗೆ, ಒಟ್ಟಿನಲ್ಲಿ ಜನತೆಯ ಹಿತಕ್ಕಾಗಿ ಮಾಡಿರುವ ಘನ ಸೇವೆಗಳ ಕುರಿತು ಕೃತಜ್ಞತೆ ಸಮರ್ಪಿಸಿ, ಅಂಥಹ ಸಿದ್ಧಿ ಪುರುಷರನ್ನು ಗೌರವಿಸುವುದೂ ಒಂದು ಅನುಕರಣೀಯ ಆದರ್ಶ.

ಉಡುಪಿಯಲ್ಲಿ ಎಕೆಡೆಮಿ ಆಫ್ ಜನರಲ್ ಎಜುಕೇಶನ್ ಹಾಗೂ ಇನ್ನಿತರ ಸಂಘ ಸಂಸ್ಥೆಗಳು ಜಿಲ್ಲೆಯ ಹಿರಿಯ ಗಣ್ಯ ವ್ಯಕ್ತಿಗಳನ್ನು ಹೊಸ ವರ್ಷಾರಂಭದಂದು ಗೌರವಿಸಿ ಅವರಿಂದ ಹೊಸ ವರ್ಷದ ಸಂದೇಶವನ್ನು ಪಡೆಯುವ ಒಂದು ಸತ್ಸಂಪ್ರದಾಯವನ್ನು ಈಗ್ಗೆ ಹಲವಾರು ವರ್ಷಗಳಿಂದ ಬಿಡದೆ ಅನುಸರಿಸುತ್ತಾ ಬಂದಿವೆ. ಜಿಲ್ಲೆಯ ಅಥವಾ ಜಿಲ್ಲೆಯವರಾಗಿದ್ದು ಪರವೂರುಗಳಲ್ಲಿ ಕೀರ್ತಿ ಗಳಿಸಿದ ಇಲ್ಲವೇ ಪರವೂರಿನವರಾಗಿದ್ದು ಈ ಜಿಲ್ಲೆಯಲ್ಲಿ ನೆಲೆನಿಂತು ಜಿಲ್ಲೆಯ ಜನತೆಯ ಆದರಕ್ಕೆ ಪಾತ್ರರಾದವರನ್ನು ವರ್ಷಂಪ್ರತಿ ಗೌರವಿಸುವುದರ ಮೂಲಕ ಈ ಯೋಜನೆಯ ಕಾರ್ಯಕರ್ತರು ಇತರ ಊರುಗಳಿಗೊಂದು ಮಾದರಿಯನ್ನು ಹಾಕಿ ಕೊಟ್ಟಿರುತ್ತಾರೆ. ಇಂತಹ ಗೌರವವನ್ನು, ಈ ವರೆಗೆ ಈ ಜಿಲ್ಲೆಯ ಹಲವಾರು ಮಹನೀಯರುಗಳಿಗೆ ಸಲ್ಲಿಸಲ್ಪಟ್ಟಿದೆ.

ಈ ಬಾರಿಯಂತೂ ವಿಶಿಷ್ಟವಾದ ನಾಲ್ಕು ರಂಗಗಳಲ್ಲಿ ಅಪ್ರತಿಮ ಸೇವೆ ಸಲ್ಲಿಸಿ, ಸುಪ್ರಸಿದ್ಧರೆನಿಸಿದ ನಾಲ್ವರು ಗಣ್ಯ ವ್ಯಕ್ತಿಗಳನ್ನು, ವಿಶಿಷ್ಟವಾದ ರೀತಿಯಲ್ಲಿ ಕಳೆದ ೧ನೇ ರಂದು ಉಡುಪಿಯ ಕಲ್ಪನಾ ಥಿಯೇಟರಿನಲ್ಲಿ ನೆರೆದ ಸಭೆಯಲ್ಲಿ ಗೌರವಿಸಲಾಯಿತು. ಎಕೆಡೆಮಿ, ಉಡುಪಿ ರೋಟರಿ ಕ್ಲಬ್ಬು ಹಾಗೂ ಇತರ ಒಂಭತ್ತು ಸಂಸ್ಥೆಗಳು ಈ ಕಾರ್ಯಕ್ರಮವನ್ನು ನಿಯೋಜಿಸಿದ್ದುವು. ಹೋಟೇಲು ಉದ್ಯಮದಲ್ಲಿ ಗಣ್ಯರೆನಿಸಿದ ಶ್ರೀ ಕುತ್ಪೆತ್ತೂರು ಸೀತಾರಾಮರಾವ್', ವೈದ್ಯಕೀಯರಂಗದಲ್ಲಿ ದುಡಿದು ದಾಖಲೆ ನಿರ್ಮಿಸಿದ ಡಾ|

ಶ್ರೀ ಕೆ. ಸೀತಾರಾಮ ರಾವ್

●

ಕೆ. ಎಂ. ರೈ, ಶಿಕ್ಷಣ ಕ್ಷೇತ್ರದಲ್ಲಿ ವಿಚಕ್ಷಣರೆನಿಸಿದ ಶ್ರೀ ಜಿ. ಡಿ. ವೇಲಿಯಂಶ್, ಹಾಗೂ ಕೃಷಿ ಕ್ಷೇತ್ರದಲ್ಲಿ ಪವಾಡವನ್ನು ಮಾಡಿದ ಶ್ರೀ ಎನ್. ರಾಮರಾವ್ ಇವರೇ ಈ ಬಾರಿಯ ಗೌರವಾನ್ವಿತರಾದ ಜಿಲ್ಲೆಯ ಸುಪುತ್ರರು. ಇವರಲ್ಲಿ ಒಬ್ಬರು ಜಿಲ್ಲೆಗೆ ಬಂದು ನೆಲೆನಿಂತವರಾದರೆ, ಇನ್ನಿಬ್ಬರು ಈ ಜಿಲ್ಲೆಯಿಂದ ದೇಶದ ಇತರ ಊರುಗಳಿಗೆ ಹೋಗಿ ನೆಲೆಸಿ ಅಲ್ಲಿ ಕೀರ್ತಿಶಾಲಿಗಳಾದವರು ಮತ್ತೊಬ್ಬರು ಈ ಜಿಲ್ಲೆಯ ಮಣ್ಣಲ್ಲೇ ಹೊನ್ನನ್ನು ಕಂಡ ಧೀಮಂತರು.

ಶುಕ್ರವಾರದ ಶುಭದಿನದ ಮುಂಜಾನೆಯ ಒಂಭತ್ತರ ವರೆಗೆ ಆರಂಭವಾದ ಈ ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀ|| ಟಿ. ರಮೇಶ ಪೈಗಳು ಸಭಿಕರಿಗೆ ಹೊಸ ವರ್ಷದ ಶುಭಾಶಯಗಳನ್ನರ್ಪಿಸುತ್ತಾ ಅಂದಿನ ಕಾರ್ಯಕ್ರಮದ ವಿವರವನ್ನು ತಿಳಿಸಿದರು. ಆ ಬಳಿಕ ಡಾ| ಟಿ.ಎಂ.ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ವ್ಯಕ್ತಿಯೊಬ್ಬನು ಎಲ್ಲಾ ಕ್ಷೇತ್ರದಲ್ಲೂ ನಿಪುಣನಾಗಲು ಸಾಧ್ಯವಿಲ್ಲ. ವಿವಿಧ ಕ್ಷೇತ್ರದಲ್ಲಿ ಹಲವರು ದುಡಿದು ಆ ಕ್ಷೇತ್ರದಲ್ಲಿ ದಾಖಲೆಯನ್ನು ನಿರ್ಮಿಸುತ್ತಾರೆ. ಇದರಲ್ಲಿ ಕೃಷಿ, ಉದ್ದಿಮೆ, ಶಿಕ್ಷಣ, ವೈದ್ಯಕೀಯ ಎಂಬ ಭೇದ ಭಾವಕ್ಕೆ ಎಡೆ ಇಲ್ಲ. ಪ್ರತಿಯೊಬ್ಬನೂ ಅವನ ಕೆಲಸದಲ್ಲಿ ಸಿದ್ಧಿವಂತನಾದರೆ ಒಳಿತು. ಇಂತಹ ಸಂದರ್ಭದಲ್ಲಿ ದೇಶದ ಪರಮಾವಶ್ಯಕತೆಗಳೆನಿಸಿರುವ ಶಿಕ್ಷಣ, ಕೃಷಿ, ವೈದ್ಯಕೀಯ ಸೌಲಭ್ಯ ಮೊದಲಾದ ಕ್ಷೇತ್ರಗಳಲ್ಲಿ ದುಡಿದು, ತಮ್ಮ ಸೇವೆಯನ್ನು ಸಲ್ಲಿಸಿರುವ ಈ ಜಿಲ್ಲೆಯ ಗಣ್ಯ ವ್ಯಕ್ತಿಗಳನ್ನು ಗೌರವಿಸುವುದರ ಮೂಲಕ ನಾವು ಅವರ ಆದರ್ಶವನ್ನು ಅನುಕರಿಸುವುದರತ್ತ ಸಾಗುತ್ತಿದ್ದೇವೆ ಎಂದರು. ತನ್ನ ಅಣ್ಣನವರಾದ ದಿ| ಟಿ. ಉಪೇಂದ್ರ ಪೈಗಳು ಆರಂಭಿಸಿದ ಈ ಹೊಸ ಉಪಕ್ರಮ ಈಗ್ಗೆ ೨೨ ವರ್ಷಗಳಿಂದ ಸತತವಾಗಿ ನಡೆದುಕೊಂಡು ಬರುತ್ತಿದೆ ಎಂದೂ ತಿಳಿಸಿದರು.

ವೇದಿಕೆಯಲ್ಲಿ ಆಸೀನರಾಗಿದ್ದ ಅಂದಿನ ಮುಖ್ಯ ಅತಿಥಿಗಳನ್ನು ಸಭಿಕರಿಗೆ ಪರಿಚಯ ಮಾಡಿಕೊಡಲಾಯಿತು. ಶ್ರೀ ಕೆ. ಕೆ. ಪೈಗಳು ಶ್ರೀ ಕೆ. ಸೀತಾರಾಮರಾಯರ ಪರಿಚಯ ಮಾಡಿಕೊಡುತ್ತಾ ಜಿಲ್ಲಾಧಿಕಾರಿಗಳ ಕಛೇರಿಯ ಗುಮಾಸ್ತರಾಗಿದ್ದ ಶ್ರೀ ರಾಯರು ದಿಟ್ಟತನದಿಂದ ಹೊಟೇಲು ಉದ್ದಿಮೆಯನ್ನು ಕೈಕೊಂಡು ಆ ಉದ್ದಿಮೆಯಲ್ಲಿ ಅಪಾರ ಯಶಸ್ಸು ಗಳಿಸಿದುದನ್ನು ತಿಳಿಸಿ, ಅವರು ಹೊಟೇಲು ಉದ್ದಿಮೆಯಲ್ಲಿ ನಿಪುಣರಾಗಿದ್ದಂತೆ, ಆಧ್ಯಾತ್ಮಿಕ ಜೀವನದಲ್ಲೂ ಸಾಫಲ್ಯವನ್ನು ಸಾಧಿಸಿದ ಸಫಲ ಜೀವಿಗಳು ಎಂದರು.

ಡಾ|| ಕೆ. ಎಂ. ರೈಗಳ ಪರಿಚಯವನ್ನು ಡಾ| ಕೆ. ಎಲ್. ಐತಾಳ್ ಅವರು ಮಾಡಿಕೊಡುತ್ತಾ ಬೆಳ್ಳಾರೆಯಲ್ಲಿ ಜನನಕ್ಕೆ ಬಂದ ಡಾ| ರೈಗಳು ಮದ್ರಾಸು ಸಂಸ್ಥಾನದ ವೈದ್ಯಕೀಯ ಇಲಾಖೆಯಲ್ಲಿ ದುಡಿದು, ರೇಡಿಯಾಲಜಿಯಲ್ಲಿ ವಿದೇಶಗಳಲ್ಲಿ ಶಿಕ್ಷಣ ಪಡೆದು, ದೇಶ ವಿದೇಶಗಳಲ್ಲಿ ಕೀರ್ತಿ ಗಳಿಸಿದ ಡಾಕ್ಟರೆಂದು ತಿಳಿಸಿ, ಅವರು ಕ್ಯಾನ್ಸರ್ ರೋಗದ ಚಿಕಿತ್ಸೆಯಲ್ಲಿ ನಿಷ್ಣಾತರೆಂದು ವಿವರಿಸಿ, ವೈದ್ಯಕೀಯ ಪತ್ರಿಕೆಗಳಲ್ಲಿ ಅವರು ಬರೆದಿರುವ ಲೇಖನಗಳು ವಿದೇಶಗಳಲ್ಲೂ ಮೆಚ್ಚುಗೆ ಗಳಿಸಿವೆ ಎಂದರು.

ಸಮಾರಂಭದ ಹಿರಿತನ ವಹಿಸಿದ ಡಾ| ಟಿ. ಎಂ. ಎ. ಪೈ

●

ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಡಾ| ಜಿ. ಡಿ. ವೇಲಿಯಂರ ಪರಿಚಯ ಮಾಡಿಕೊಡುತ್ತ ಅವರು ವೈದ್ಯಕೀಯ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಗಳಿಸಿದ ಜನಪ್ರಿಯತೆಯ ಉಲ್ಲೇಖವನ್ನು ಮಾಡಿ, ಅವರು ಅಧ್ಯಾಪಕರ ಅಧ್ಯಾಪಕರು, ಡಾಕ್ಟರರ ಡಾಕ್ಟರರು ಎಂದರು.

ಶ್ರೀ ಪಿ. ಶ್ರೀಪತಿ ಆಚಾರ್ಯರು ಶ್ರೀ

ಡಾ| ಕೆ. ಎಂ. ರೈ

●

ಎನ್. ರಾಮರಾಯರ ಪರಿಚಯ ಮಾಡಿಕೊಡುತ್ತಾ ವಕೀಲರಾಗಿದ್ದ ಶ್ರೀ ರಾಯರು ಪ್ರಾಕ್ಟೀಸು ತೊರೆದು, ಕೃಷಿಯತ್ತ ಒಲುಮೆ ಹರಿಸಿದ ಮಣ್ಣಿನ ಮಕ್ಕಳೆಂದು ವಿವರಿಸಿ, ಅವರು ಹಲವಾರು ಸೇವಾ ಸಂಸ್ಥೆಗಳಲ್ಲೂ ದುಡಿಯುತ್ತಿರುವುದರ ಉಲ್ಲೇಖ ಮಾಡಿದರು. ಕೃಷಿಯ ಅಭಿವೃದ್ಧಿಗಾಗಿ ಅವರು ಸ್ವತಃ ದುಡಿದು ಅಪಾರ ಅನುಭವ ಗಳಿಸಿರುವರಲ್ಲದೆ, ತಾನು ಗಳಿಸಿದ ಜ್ಞಾನವನ್ನು ಇತರರಿಗೆ ಹಂಚುವುದರಲ್ಲಿ ಮುಂದಾಗಿರುವುದನ್ನು ತಿಳಿಯಪಡಿಸಿದರು.

ಗೌರವಾನ್ವಿತ ಅತಿಥಿಗಳಿಗೆ ಗಂಧದ ಕರಂಡಕದಲ್ಲಿ ಗೌರವಪತ್ರವನ್ನು ಅರ್ಪಿಸಿದ ಬಳಿಕ ಮುಖ್ಯ ಅತಿಥಿಗಳೊಬ್ಬೊಬ್ಬರೇ ತಮ್ಮ ಹೊಸ ವರ್ಷದ ಸಂದೇಶವನ್ನು ತಿಳಿಸಿದರು.

ಶ್ರೀ| ಕೆ. ಸೀತಾರಾಮರಾಯರು ಉತ್ತರರೂಪವಾಗಿ ಮಾತನಾಡುತ್ತಾ ತನಗೆ ಸಲ್ಲಿಸಿದ ಈ ಗೌರವವು ದೇವರ ಪ್ರಸಾದನೆಂದು ತಾನು ತಿಳಿದಿರುವೆನೆಂದೂ, ಈ ಗೌರವವು ತನ್ನ ತಂದೆಯವರಾದ ಭಕ್ತ ಶ್ರೀ ಗೋವಿಂದ ದಾಸರಿಗೆ ಸಲ್ಲುವುದೆಂದೂ ಹೇಳಿ, ಹೋಟೇಲು ಉದ್ದಿಮೆಯಲ್ಲಿ ತನ್ನ ಯಶಸ್ಸಿನ ಗುಟ್ಟನ್ನು ವಿವರಿಸುತ್ತಾ ಸೌಜನ್ಯತೆಯೇ ಯಶಸ್ಸಿನ ಜೀವಾಳ ಎಂದರು. ಹಿರಿಯರು, ಗುರುಗಳು, ಹಾಗೂ ಪರಮಾತ್ಮನ ಆಶೀರ್ವಾದಗಳು ಯಶಸ್ಸಿಗೆ ಅತ್ಯಾವಶ್ಯವೆಂದು ಹೇಳಿದರು.

ಡಾ|| ಕೆ. ಎಂ. ರೈಗಳು ಯುವಜನಾಂಗಕ್ಕೆ ಹೊಸ ವರ್ಷದ ಸಂದೇಶವನ್ನೀಯುತ್ತಾ ಪರಿಶ್ರಮ, ಸಾದಗಿ, ಉದ್ದೇಶದ ಪ್ರಾಮಾಣಿಕತೆ, ಮಿತ್ರರಲ್ಲಿ ವಿಶ್ವಾಸ ಇವುಗಳೇ ಜೀವನ ಸಾರ್ಥಕ್ಯದ ದಾರಿಗಳೆಂದು ಹೇಳಿ, ಕಠಿಣ ಪರಿಶ್ರಮವಿಲ್ಲದೆ

ಹೊಸ ವರ್ಷದ ಸಂದೇಶ

ಸುಪುತ್ರರಿಗೆ ಸನ್ಮಾನ

ಇತರ ಸಂಸ್ಥೆಗಳ ಅನುಕರಣೀಯ ಆದರ್ಶ

ಯಶಸ್ಸು ದೊರೆಯುವುದು ಅಸಾಧ್ಯವೆಂದರು. ವಿದ್ಯಾಸಂಪತ್ತು ಅಮೂಲ್ಯ ಸಂಪತ್ತೆಂಬ ಸಂಸ್ಕೃತದ ಶ್ಲೋಕವನ್ನು ಸ್ಮರಣೆಗೆ ತಂದು, ತಾನು ತನ್ನ ಜೀವನದಲ್ಲಿ ಈ ಸಂಪತ್ತನ್ನು ಪಡೆಯಲು ಪಟ್ಟ ಶ್ರಮವನ್ನು

ಡಾ। ಜಿ. ಡಿ. ವೆಲ್ಲಿಯತ್

ವಿವರಿಸಿ, ಕಠಿಣ ಪರಿಶ್ರಮಿಗೆ, ಪ್ರಾಮಾಣಿಕತನದಿಂದ ದುಡಿಯುವವನಿಗೆ ಒಂದಲ್ಲ ಒಂದು ದಿನ ಯಶಸ್ಸು ದೊರೆಯುವುದು ಎಂದರು. ಗುರುಹಿರಿಯರನ್ನು ಗೌರವಿಸುವ ಸತ್ಪ್ರವೃತ್ತಿಯನ್ನು ಇಂದಿನ ಯುವಕರಲ್ಲಿ ಮೂಡಬೇಕೆಂದೂ, ಧರ್ಮ ಮಾರ್ಗ ಬಿಟ್ಟು ನಡೆಯಕೂಡದೆಂದೂ ಹೇಳಿದರು.

ಡಾ॥ ಜಿ. ಡಿ. ವೆಲಿಯತರು ಮಾತನಾಡುತ್ತಾ ಅಧ್ಯಾಪಕನ ಜೀವನವು ದೇಶದ ಕಲ್ಯಾಣಕ್ಕೆ ನೆರವಾಗುವ ಒಂದು ಪವಿತ್ರ ಜೀವನ ಎಂದು ಹೇಳಿ, ಅಧ್ಯಾಪಕರು ಭಾವೀಜನಾಂಗವನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ನಿರ್ವಹಿಸ ಬೇಕಾದ ಇಂದಿನ ದಿನಗಳಲ್ಲಿ ಕರ್ತವ್ಯ ಬದ್ಧರಾದ ಅಧ್ಯಾಪಕರ ಪ್ರಾಮಾಣಿಕ ಜೀವನವು ದೇಶದ ಭವಿಷ್ಯವನ್ನು ರೂಪಿಸುವುದು ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಕೆಟ್ಟವರು ಎಂಬ ವರ್ಗ ಇಲ್ಲವೆಂದೂ ಕೆಟ್ಟ ವಿದ್ಯಾರ್ಥಿಗಳೆಂದ ನಾವು ಕರೆಯುತ್ತಿರುವ ಮಕ್ಕಳು ಮಾನಸಿಕ ರೋಗದಿಂದ ಬಳಲುವವರೆಂದೂ, ಅಂಥವರನ್ನು ತಿಳಿದುಕೊಂಡು ಅನುಕಂಪದಿಂದ ಅವರೊಡನೆ ವರ್ತಿಸಿದರೆ ಅವರೂ ಒಳ್ಳೆಯ ವಿದ್ಯಾರ್ಥಿಗಳಾಗುವರೆಂದೂ ತಿಳಿಸಿದರು.

ತನ್ನ ಸ್ವಾರಸ್ಯಕರ ಹಾಗೂ ಹಾಸ್ಯಪೂರಿತ ಉತ್ತರದಲ್ಲಿ ಶ್ರೀ ಎನ್. ರಾಮರಾಯರು ಇಂದಿನ ಸಮಾಜವಾದಿ ಮಾದರಿಯ ಸಮಾಜ ರಚನೆಯ ದಿನಗಳಲ್ಲಿ ಪಮಾನ ಹಕ್ಕೆಂದು ಭೂಮಿಯನ್ನು ಹಂಚಿದರೆ ಪ್ರಯೋಜನವಿಲ್ಲವೆಂದೂ, ಮನಮುಟ್ಟಿ ಬೇಸಾಯ ಮಾಡುವವನಿಗೆ ಭೂಮಿ ದೊರಕಬೇಕೆಂದೂ ಹೇಳಿ, ಇಂದಿನ ದಿನಗಳಲ್ಲಿ ಕೃಷಿಯನ್ನು ಮಾಡುವ ರೀತಿಯಲ್ಲಿ ಮಾಡಿದರೆ ಅದಕ್ಕಿಂತ ಲಾಭದಾಯಕವಾದ ಉದ್ಯೋಗ ಬೇರೊಂದಿಲ್ಲ ಎಂದರು. ಹೊಸ ವರ್ಷಕ್ಕೆ ಉತ್ತಮ ಸಂದೇಶದಿಂದ ಈ ವರೆಗೆ ಫಲವು ಲಭಿಸಲಿಲ್ಲವೆಂದೂ, ಇಂದಿನದು ಮಾಡಿ ತೋರಿಸಬೇಕಾದ ಕಾಲವೆಂದೂ ಹೇಳಿದರು.

ಎಲ್ಲಾ ಭಾಷಣಕಾರರೂ ಡಾ॥ ಪೈಗಳ ಸಾಧನೆಗಳನ್ನು ಕೊಂಡಾಡಿ, ಅವರು ಜೀವನದಲ್ಲಿ ಸಾರ್ಥಕ್ಯವನ್ನು ಪಡೆದ ಕರ್ಮಯೋಗಿ ಎಂದು ಹೊಗಳಿದರಲ್ಲದೆ, ಅವರ ಹೃದಯ ವೈಶಾಲ್ಯತೆಯೇ ಇಂದು ತಮ್ಮನ್ನು ಗೌರವಿಸುವಂತೆ ಮಾಡಿದೆ ಎಂದು ಹೇಳಿದರು.

ಸಮಾರಂಭದ ಅಂತ್ಯದಲ್ಲಿ ಡಾ। ಎ. ಕೃಷ್ಣರಾಯರು ಧನ್ಯವಾದ ಅರ್ಪಿಸುತ್ತಾ ಒಂದೊಂದು ಕ್ಷೇತ್ರದಲ್ಲಿ ಸಿದ್ಧಿಯನ್ನು ಪಡೆದ ಈ ಮಹಾನುಭಾವರನ್ನು ಗೌರವಿಸುವುದೂ ಒಂದು ಭಾಗ್ಯವೆಂದು ಹೇಳಿ, ಅವರು ಇನ್ನು ಹೆಚ್ಚಾಗಿ ಈ ಜಿಲ್ಲೆಗೆ ಸೇವೆ ಸಲ್ಲಿಸಿ ಕೀರ್ತಿಯನ್ನು ಗಳಿಸಲಿ ಎಂದರು. ಡಾ। ಪೈಗಳು ಮಂಗಳೂರಿನಲ್ಲೇ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ತೆರೆಯಬೇಕೆಂದು ಹಾರೈಸಿದ ಅವರು, ಶ್ರೀ। ಎನ್. ರಾಮ

ಶ್ರೀ ಎನ್. ರಾಮರಾವ್

ರಾಯರಂತಹ ಕೃಷಿಕರಿದ್ದರೆ ದೇಶದಲ್ಲಿ ಹಾಹಾಕಾರವೆಬ್ಬಿಸಿರುವ ಆಹಾರ ಸಮಸ್ಯೆ ಪರಿಹಾರವಾಗುವುದು ಖಂಡಿತ ಎಂದು ತಿಳಿಸಿದರು.

ವಿಶಿಷ್ಟವಾದ ರೀತಿಯಲ್ಲಿ ಏರ್ಪಡಿಸಲ್ಪಟ್ಟಿದ್ದ ಈ ಸಮಾರಂಭವು ಅತ್ಯಂತ ಯಶಸ್ವಿಯಾಗಿ ಜರಗಿತು. ಗೌರವಿಸಲ್ಪಟ್ಟ ಅತಿಥಿಗಳ ಸಾಧನೆಗಳು ಹಾಗೂ ಅವರಿತ್ತ ಹೊಸ ವರ್ಷದ ಸಂದೇಶಗಳು ನಮ್ಮ ಜನರು ಮೆಲುಕು ಹಾಕುವಂತವುಗಳು. ಬರಿಯ ಉಪದೇಶದಿಂದ ಕಾರ್ಯಸಾಧನೆಯಾಗುವುದಿಲ್ಲ. ಉಪದೇಶವನ್ನು ಆಚರಣೆಗೆ ತರುವುದರ ಮೂಲಕ ಮೇಲಿನ ಮಹಾನುಭಾವರು ಹಾಕಿಕೊಟ್ಟ ದಾರಿಯಲ್ಲಿ ನಾವೂ ನಡೆದರೆ ಆಗ ಹೊಸ ವರ್ಷ ಶುಭವಾದರೂ ಹೊಸತಾಗಿ ಕಂಡೀತು.

ವಿಶೇಷವಾಗಿ ಈ ಪದ್ಧತಿಯನ್ನು ಬಳಸಿಕೊಂಡು ಬಂದಿರುವ ಕಾರ್ಯಕರ್ತರು ಅಭಿನಂದನೆಗೆ ಅರ್ಹರು.

ಹೊಸ ವರ್ಷವು ಸರ್ವರಿಗೂ ಸುಖಪ್ರದವಾಗಲಿ.

ಲಂಡನ್ನಿಗೆ ಪ್ರಧಾನಮಂತ್ರಿಗಳ ಪ್ರಥಮ ಭೇಟಿ

ಸಾಧನೆಯ ಒಂದು ಸಮೀಕ್ಷೆ

ಪ್ರಧಾನ ಮಂತ್ರಿ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಲಂಡನ್ನಿಗೆ ಭೇಟಿ ನೀಡುವ ಮೊದಲು ಎರಡೇ ಎರಡು ರಾಷ್ಟ್ರಗಳಿಗೆ ಭೇಟಿ ನೀಡಿದ್ದರು. ನೇಪಾಳ ಮತ್ತು ಸಂಯುಕ್ತ ಅರಬ್ ಗಣರಾಜ್ಯ— ಇವು ಪ್ರಧಾನ ಮಂತ್ರಿಗಳ ಭೇಟಿ ನೀಡಿದ ರಾಷ್ಟ್ರಗಳು. ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಲಂಡನ್ನಿನಲ್ಲಿ ಸಮಾವೇಶಗೊಂಡಿದ್ದ ಪ್ರಧಾನ ಮಂತ್ರಿಗಳ ಪರಿಷತ್ತಿನಲ್ಲಿ ಭಾಗವಹಿಸಲು ಹೋಗುವ ಸಾಧ್ಯತೆಯಿತ್ತು. ಆದರೆ ಅನಾರೋಗ್ಯ ಕಾರಣದಿಂದಾಗಿ ಅವರು ಲಂಡನ್ನಿಗೆ ಹೋಗಲು ಸಾಧ್ಯವಾಗಲಿಲ್ಲ. ಆನಂತರ ಬ್ರಿಟನ್ನಿನ ಮಾಜಿ ಪ್ರಧಾನ ಮಂತ್ರಿ ಸರ್ ಅಲೆಕ್ ಡಗ್ಲಾಸ್ ಹೋಂ ಅವರು ಶೀಘ್ರದಲ್ಲಿಯೇ ಲಂಡನ್ನಿಗೆ ಭೇಟಿ ನೀಡಬೇಕೆಂದು ಒತ್ತಾಯಪಡಿಸಿ ಪ್ರಧಾನ ಮಂತ್ರಿ ಶ್ರೀ ಶಾಸ್ತ್ರಿ ಅವರಿಗೆ ಆಹ್ವಾನವನ್ನು ಕಳಿಸಿದರು. ಬ್ರಿಟನ್ನಿನ ಹೊಸ ಪ್ರಧಾನ ಮಂತ್ರಿ ಹೆರಾಲ್ಡ್ ವಿಲ್ಸನ್ ಅವರು ಈ ಆಹ್ವಾನವನ್ನು ಪುನಃ ನೀಡಿದರು. ಶ್ರೀ ಶಾಸ್ತ್ರಿಯವರು ತಮ್ಮ ಲಂಡನ್ ಭೇಟಿಯನ್ನು ಅನಾವಶ್ಯಕವಾಗಿ ವಿಳಂಬಗೊಳಿಸಲು ಬಯಸುತ್ತಿರಲಿಲ್ಲ. ಆಗ ನವದೆಹಲಿಯಲ್ಲಿ ಪಾರ್ಲಿಮೆಂಟಿನ ಅಧಿವೇಶನವು ಸಮಾವೇಶಗೊಂಡಿದ್ದರಿಂದ ಭಾರತವನ್ನು ಬಿಟ್ಟು ಅವರು ದೀರ್ಘಾವಧಿಯ ವರೆಗೆ ಪ್ರಯಾಣ ಮಾಡುವಂತಿರಲಿಲ್ಲ. ಈ ಕಾರಣದಿಂದಾಗಿಯೇ ಅವರು ಲಂಡನ್ನಿಗೆ ಕೇವಲ ಮೂರು ದಿನಗಳ ಅವಧಿಯ ಭೇಟಿ ನೀಡಲು ನಿರ್ಧರಿಸಿದರು. ಪ್ರಧಾನ ಮಂತ್ರಿಗಳ ಲಂಡನ್ ಭೇಟಿಯು ಅತ್ಯಂತ ಯಶಸ್ವಿಯಾಯಿತೆಂಬ ಅಭಿಪ್ರಾಯವನ್ನು ಬ್ರಿಟಿಷ್ ಪತ್ರಿಕೆಗಳು ವ್ಯಕ್ತಪಡಿಸಿವೆ. ಬ್ರಿಟನ್ನಿನ ಲೇಖಕರೊಬ್ಬರು ಶ್ರೀ ಶಾಸ್ತ್ರಿ ಅವರ ಭೇಟಿಯನ್ನು ಕುರಿತು ಪ್ರಸ್ತಾಪಿಸುತ್ತಾ ಅವರು ತಮ್ಮ ಸೌಜನ್ಯದಿಂದ ಬ್ರಿಟನ್ನಿನ ಜನತೆಯ ಹೃನ್ಮನಗಳನ್ನು ಸೂರೆಗೊಂಡರೆಂದು ಅಭಿಪ್ರಾಯಪಟ್ಟಿದ್ದಾರೆ. ಶಾಸ್ತ್ರಿಗಳ ಸರಳತೆ, ಅವರ ಸೌಜನ್ಯ, ಸಮಸ್ಯೆಗಳನ್ನು ನೇರವಾಗಿ ಮತ್ತು ನಿದಾಕ್ಷಿಣ್ಯವಾಗಿ ಪ್ರತಿಪಾದಿಸುವ ರೀತಿ ಇವು ವಿಶೇಷವಾಗಿ ಲಂಡನ್ನಿನ ಜನರ ಮೆಚ್ಚುಗೆಗೆ ಪಾತ್ರವಾದುವು. ಅವರು ಲಂಡನ್ನಿನಲ್ಲಿ ಇದ್ದಾಗ ಬ್ರಿಟನ್ನಿನ ರಾಜಕಾರಣಿಗಳು, ಕೈಗಾರಿಕೋದ್ಯಮಿಗಳು, ಮತ್ತು ಪತ್ರಿಕಾಕರ್ತರನ್ನು ಭೇಟಿಯಾದರು. ಟೆಲಿವಿಷನ್ ಸಂದರ್ಶನವೊಂದನ್ನು ನೀಡಿದರು. ತನ್ನನ್ನು ಭೇಟಿಯಾದವರೆಲ್ಲರ ಮೇಲೂ ಅವರು ಅಚ್ಚಳಿಯದ ಪ್ರಭಾವವನ್ನು ಬೀರಿದರು. ಪ್ರಧಾನ ಮಂತ್ರಿಗಳ, ಅಣುಶಕ್ತಿಯುಳ್ಳ ಪ್ರಬಲ ರಾಷ್ಟ್ರಗಳು ವಿಶ್ವದಲ್ಲಿ ಶಾಂತಿ ಸ್ಥಾಪನೆಗೆ ಯಾವ ರೀತಿ ಸಹಾಯವಾಗಬೇಕೆಂಬುದನ್ನು ವಿವರಿಸಿದರು. ಭಾರತದ ಅಲಿಪ್ತ ನೀತಿಯನ್ನು ಮನಸೀಯ ರೀತಿಯಲ್ಲಿ ತಿಳಿಸಿಕೊಟ್ಟರು.

ಶ್ರೀ ಶಾಸ್ತ್ರಿ ಮತ್ತು ಲಾರ್ಡ್ ಮೇಯರ್ (ಬಲದಲ್ಲಿ) ಇವರೊಂದಿಗೆ ಲಂಡನ್ನಿನಲ್ಲಿ ಭಾರತದ ಹೈಕಮಿಶನರರಾಗಿರುವ ಡಾ। ಜೆ. ಮೆಹತಾ (ಎಡದಲ್ಲಿ)

ಅಭಿಪ್ರಾಯ

ರಾಷ್ಟ್ರಕವಿ ಸ್ಮಾರಕೋತ್ಸವದ ಕೆಲ ವಿಚಾರಗಳು

ಬರೆದವರು

ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್, ಸುರತ್ಕಲ್ಲು

ಇದೇ 1964 ದಶಂಬರ 20-21ರಲ್ಲಿ ಕುಂದಾಪುರ ಭಂಡಾರ್ಕಾರ್ ಕಲಾಶಾಲೆಯಲ್ಲಿ ನಡೆದ ಈ ವೇಳಿನ ಸಮಾರಂಭದ ಕೆಲವು ವಿಚಾರಗಳು ಅವಿಸ್ಮರಣೀಯಗಳಾಗಿವೆ.

ಸಭಾ ಕಾರ್ಯಕ್ರಮಗಳು ಕ್ಲಿಪ್ತ ಕಾಲಕ್ಕೆ ಪ್ರಾರಂಭವಾದುವೋ ಎಂಬ ತವಕದಿಂದ ಅರೆಗಂಟೆ ತಡೆದು ಹೊರಟ ನಾನು ಬರುವಾಗ 'ಇಂಡಿಯನ್ ಸ್ಟೈಲ್' ಎಂಬಂತೆ ಆ ಸಮಾರಂಭವೂ ಕ್ಲಿಪ್ತಕಾಲಕ್ಕಿಂತ ಅರೆ ಗಂಟೆ ತಡವೇ ತೊಡಗಿದ್ದು, ಸಾದ್ಯಂತವಾಗಿ ಕಾಣಲು (ಕೇಳಲು) ಅವಕಾಶವಾಯಿತು. ಆ ಮೊದಲಾಗಿ ನಾದಾ ಸಂಗೀತದ ಕಾರ್ಯಕ್ರಮವಿತ್ತು. ಈ ಕಾರ್ಯಕ್ರಮವು ಪೂರ್ವನಿಶ್ಚಿತ - ಪ್ರಸಾರಿತವಾಗಿದ್ದಿಲ್ಲವೆಂಬುದೇ ವಿಚಾರಣೀಯವಾಗಿದೆ. ಅರೆ ಗಂಟೆಯಲ್ಲಿ ಆ ಸಭಾ ವೇದಿಕೆಯಲ್ಲಿ ಏಳೆಂಟು ಮಂದಿ ಮಾಕನೀಯರ ಆಗಮನವಾಯಿತು.

ಸಭಾಧಿಯಲ್ಲಿ ಶ್ರೀ ಗೋವಿಂದ ಪೈಯವರು ಬರೆದ 'ತಾನು ಬಾರ ಮೊಗವ ತೋರ' ಎಂಬ ಕವನ ಹಾಡಿದ್ದು, ಸಾಹಿತ್ಯಶ್ರವಣಪ್ರಟಗಿತ್ತಲ್ಲದೆ, ಸರಸತೆಯ ಹಾಡುಗಾರಿಕೆಯಿಲ್ಲದೆ, ತೀರಾ ಸಪ್ಪೆಯಾಗಿತ್ತು! ಸಭಾ ಮಂಟಪವು ತಾತ್ಕಾಲಿಕವಾಗಿ ಏರ್ಪಟ್ಟುದಾದರೂ ವೇಲು ಹೊದಿಕೆ ಹಾಗೂ ಈಗದಗಳ ಸುರುಳಿಗಳಿಂದ ಅಲಂಕೃತವಾಗಿತ್ತು! ಏಳೆಂಟು ಮಂದಿ ಮಹನೀಯರು ಕುಳಿತ ಮೇಲೆ – ಸಭಾಧ್ಯಕ್ಷರು, ನಾಲ್ಕಾರು ಮಂದಿ ಭಾಷಣಕಾರರು, ಗ್ರಂಥ-ಸಂಚಿಕೆಗಳ ಉದ್ಘಾಟಕರು, ತೈಲಚಿತ್ರಗಳ ಉದ್ಘಾಟಕರುಗಳ ಮುಂದೆ– ಅಲ್ಲಿ ಛಾಯಾಗ್ರಾಹಕರಿಬ್ಬರು ತ್ವರಿತದಿಂದ ಓಡಾಡುತ್ತಾ ಇದ್ದರು.

ರಾಜಕೀಯ ಸಹಕಾರವೂ ಸಾಹಿತ್ಯ ಪ್ರಸಾರಣೆಗೆ ಅವಶ್ಯಾಂಗವೆಂಬಂತೆ, ಉತ್ಸವದ ಸಭೆಯ ಅಧ್ಯಕ್ಷರಾಗಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ನಡುವೆ ಕಂಗೊಳಿಸುತ್ತಿದ್ದರು. ಅವರೊತ್ತಿಗೆ ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರು ಮಂಡಿಸಿದ್ದರು. ಶ್ರೀ ಶಿವರಾಮ ಕಾರಂತರು, ಶ್ರೀ ವಿ. ಎಸ್. ಕುಡ್ವರು, ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ಮೊದಲಾದ ಭಾಷಣಕಾರರು ಅತ್ತಿತ್ತ ಸಾಲಿನಲ್ಲಿ ಕಾಣುತ್ತಿದ್ದರು. ಶ್ರೀ ಶರ್ಮರನ್ನುಳಿದು ಮಿಕ್ಕೆಲ್ಲರ ವಾಕ್ಯಜಾಲಗಳು ಸ್ಮಾರಕ ಗ್ರಂಥದಲ್ಲಿ ಪ್ರಕಟವಾದ ಅವರವರ ಲೇಖನಗಳಿಗಿಂತ ಬಲು ಹೆಚ್ಚಾಗಿರಲಿಲ್ಲ! (ಅಲ್ಲಿ ಹೇಳದ ವಿಷಯಗಳಿಲ್ಲ!) ಶ್ರೀ ವಿ.ಸೀ. ಮೊದಲಾದ ಒಬ್ಬಿಬ್ಬರು ಬಂದಿಲ್ಲ! ಸ್ಪೀಕರ್ ಶ್ರೀ ಬಾಳಿಗರು ಶ್ರೀ ಪೈಯವರ ಚಿತ್ರ ಉದ್ಘಾಟಿಸುತ್ತಾ "ಕನ್ನಡಿಗರ ಹಣವು ಹಂಕೆಯಾಗಿ ತಿರುಪತಿಗೆ ಸಲ್ಲುತ್ತಿರುವುದನ್ನು ತಿರುಗಿ ಕನ್ನಡ ಜನಕ್ಕೆ ಉಪಯೋಗಕ್ಕೆ ದೊರೆಯುವಂತೆ ಸಾರ್ವಜನಿಕರು ಎಚ್ಚರವಹಿಸ ಬೇಕೆಂದುದು'— ರಾಜಕೀಯದ ವಿಚಾರ ನುಸುಳಿ ಹೊರಬಂದುದು—ವಿಕೋ ತಿಳಿಯದು ಅಂತೆ, ಸಮಾರಂಭದಲ್ಲಿ ಸಭೆಯ ಅಧ್ಯಕ್ಷರಾಗಿದ್ದ ಶ್ರೀ ನಿಜಲಿಂಗಪ್ಪನವರು ಮಾತಾಡುತ್ತಾ "ಮಂಗಳೂರು ಬಳಿಯ ಬಂದರ"ದ ಬಗ್ಗೆ ಜನತೆಗೆ ಪ್ರತಿವಾಕ್ಯವಾಡಿದ್ದು ಆವಶ್ಯಾತ್ಮಕವಾಗಿಲ್ಲವೆಂದೇ ಹೇಳಬಹುದು. (ಅಂದು ಬೆಳಗ್ಗೆ ಇವರು ಬೇರೆ ಕಾರ್ಯಕ್ರಮಕ್ಕೆ ಹೋಗಿದ್ದು ಅಲ್ಲಿ ಸಭೆಯಲ್ಲಿ ಆಡಲಾಗಿಲ್ಲದ ಮಾತು ಬಾಯಿಂದ ನುಸುಳಿತೆನ್ನಬಹುದಲ್ಲವೇ?) ಶ್ರೀ ಗೋವಿಂದ ಪೈ ಸ್ಮಾರಕ ಪ್ರಬಂಧ ಸ್ಪರ್ಧೆಯಲ್ಲಿ ಉತ್ತಮ ಲೇಖನ ಬರೆದ ಮಾನರಿಗೆ ಬಹುಮಾನವಾತ್ರ ಇದೀಗ ಅಧ್ಯಕ್ಷರಿಂದ ನೀಡಲಾಗಿತ್ತು. ಮರುದಿನದಲ್ಲಿ ಕವಿಗೋಷ್ಠಿಯ ಅಧ್ಯಕ್ಷರಿಂದ ಅವರಿಗೆ "ದೀವಿಗೆ" (ಶ್ರೀ ಪೈ ಸ್ಮಾರಕ ಗ್ರಂಥ)ಯ ಒಂದೊಂದು ಪ್ರತಿ ಉಚಿತವಾಗಿ ದೊರೆಯಿತು! ಶ್ರೀ ಪೈಗಳ ಸೋದರರ ಪುತ್ರರಾದ ಶ್ರೀ ಕಾರಾಮ ಪೈಯವರು ಮೊತ್ತಮೊದಲಾಗಿ ಅಧ್ಯಕ್ಷರ ಕೈಯಿಂದ ಕೊಡಲಾಗಿದ್ದ 'ದೀವಿಗೆ'ಯ ಪ್ರತಿ ಪಡೆದರು!

ಆ ರಾತ್ರಿ "ಚಿತ್ರಭಾನು ಅಥವಾ ಗಾಳಿ" ಎಂಬುದಾಗಿ ಶ್ರೀ ಪೈ ಬರೆದ ನಾಟಕದ ಅಭಿನಯ ಹಾಗೂ ಶ್ರೀ ಹಾರಾಡಿ ರಾಮಗಾಣಿಗ ಮೊದಲಾದವರು ಭಾಗವಹಿಸಿದ ಬಯಲಾಟವೂ ಜನರಂಜನೆಗಾಗಿ ನಡೆದುವು. ಆ ನಾಟಕವು ಆಡುವ ನಾಟಕಕ್ಕಿಂತಲೂ ಓದುವ ನಾಟಕವಾಗಿದೆಯೆಂದು ಇಲ್ಲಿ ಹೊಳೆಯುತ್ತದೆ. ಆಟವು ಕಲಾಭಿರುಚಿಯ ದೃಷ್ಟಿಯಿಂದ ಸಮಾಧಾನಕರವಾಗಿತ್ತು.

ತಾ. ೨೧ರ (ಮರುದಿನ) ಬೆಳಗ್ಗೆ ಹತ್ತು ಮಂದಿ ಕವಿಗಳ ಕೂಟಕ್ಕೆ ಶ್ರೀ ಗೋಪಾಲಕೃಷ್ಣ ಅಡಿಗರು ಅಧ್ಯಕ್ಷರು. ಒಬ್ಬಿಬ್ಬರು ಕವಿಗಳು ಕಾರಣಾಂತರದಿಂದ ಬಂದಿಲ್ಲ. ಶ್ರೀ ಅಡಿಗರು ಅಧ್ಯಕ್ಷ ಭಾಷಣದಲ್ಲಿ ಕವಿತೆಯ ವಿಚಾರಗಳನ್ನು ಚೆಲುವಾಗಿ ವಿವರಿಸಿ, "ಅಂದು ಓದಿದ ಕವಿತೆಗಳ ಬಗ್ಗೆ ಅಭಿಪ್ರಾಯವನ್ನು ಅವರವರಿಗೆ ಏಕಾಂತವಾಗಿ ಹೇಳುವೆ"ನೆಂದರು! ಇವರು ಓದಿದ ಕವಿತೆ ಹೊಸತು 'ಹದ್ದು', ಮಿಕ್ಕ ಕೆಲವರು ಆ ಸ್ಮಾರಕ ಗ್ರಂಥದಲ್ಲಿ (ಮುಂಚಿನ ದಿನ ಪ್ರಕಟವಾದುದರಲ್ಲಿ) ಅಚ್ಚಾದ ತಮ್ಮ ಕವಿತೆಗಳನ್ನು ಓದಿದ್ದರು. (ಶ್ರೀ ಕಯ್ಯಾರ್ ಓದಿದ್ದು ಹೊಸತಾಗಿ 'ನವೋನವೋ ಭವತಿ ಜಾಯಮಾನಃ' ಎಂಬ ಹೆಸರಿನದು!)

ಆದೊಬ್ಬರು ಕವಿತೆಯಲ್ಲಿ "ಮರದಲ್ಲಿ ಹಣ್ಣಿಲ್ಲ ಮರವೆ ಹಣ್ಣಾಗಿತ್ತು ಮುಪ್ಪಿನಂಗಳದಲ್ಲಿ ಮರವೆ ಮಣ್ಣಾಗಿತ್ತು" ಎಂದೂ,' ಮಂಜೇಶ್ವರದಲ್ಲಿ ಕನ್ನಡಿಗರಿಗಿನ್ನು ಕೆಲಸವಿಲ್ಲ"ವೆಂದೂ ಶ್ರೀ ಗೋವಿಂದ ಪೈಯವರನ್ನು ಕುರಿತು ಆಡಿದುದು ಯಾವ ತರದ ನವ್ಯ ಕವಿತಾ ಲಕ್ಷಣದ ಪ್ರತಿಮಾ ರೂಪದ - ಆವಿಷ್ಕಾರವೋ ಎಂಬ ನೆನೆಗುದಿಯಿನ್ನೂ ಆರಿಲ್ಲ! (ಅದು 'ದೀವಿಗೆ'ಯಲ್ಲಿ ಅಚ್ಚಾಗಿದೆ. ಪುಟ ೬೯) "ಶ್ರೀ ಪೈಯವರು ಇದ್ದಾಗ ಇಂಥ ಕವಿತೆ ಪ್ರಕಟವಾಗಿಲ್ಲ!"ವೆಂದು ಓದುಗನಿಗೆ (ಕೇಳುಗನಿಗೆ) ಅನ್ನಿಸುತ್ತದೆಯಲ್ಲವೇ? ನಾನು ಕಾರಣಾಂತರದಿಂದ ತಡವಾಗಿ ಅಲ್ಲಿಗೆ ಹೋಗುವಾಗಲೇ ಈ ಪದ್ಯ ಓದುತ್ತಿದ್ದರು. ಅದು ಇನ್ನೂ ಮನೋಬುದ್ಧಿಗಳ ಫಲಕದಲ್ಲಿ ನನಗೆ ಮಾಸಿಲ್ಲ! ಕೆಲವರು ತಮ್ಮ ಕವಿತೆ ಬೇರೆ ಅಚ್ಚಿಸಿದ್ದರು. ಅವು "ದೀವಿಗೆ"ಯ ಎರಡನೆಯ ಭಾಗದಲ್ಲಿ ಮುಂದೆ ಬಂದಾವೆಂದು ಹಾರೈಕೆ.

ಸಂಜೆ ಡಾ| ಟಿ. ಎಂ. ಎ. ಪೈಯವರು ಸಭಾಧ್ಯಕ್ಷರು, ಶ್ರೀ ಹುರುಳಿ ಭೀಮರಾಯರು "ಮುದ್ದಣ"ನ ತೈಲಚಿತ್ರ ಅನಾವರಣ ಮಾಡಿದ್ದರು. ಭಾಷಣಕಾರರಾಗಿದ್ದವರಲ್ಲಿ ಕೆಲವರು ನಾಟಕ, ಸಂಶೋಧನೆಗಳು, ಯಕ್ಷಗಾನಗಳು ಶ್ರೀ ಪೈಗಳ ಸಾಹಿತ್ಯ ರಚನೆಯಲ್ಲಿ ಅದಾವ ವೈಖರಿಯಿಂದ ಸಾಗಿವೆಯೆಂದು ಸೂಚಿಸಿದ್ದರು. ಶ್ರೀ ಕೂಡಲಿ ಚಿದಂಬರಂ ಅಯ್ಯರ್ 'ಮಾತಾಡುವುದಕ್ಕಿಂತ ಶ್ರೀ ಪೈಗಳ ಪ್ರಕಟನೆ ಮಾಡುವುದೇ ಲೇಸೆಂದು' ಹೇಳಿ ಕ್ರಮಶಃ ಎಲ್ಲಾ ಕವಿತೆ – ಲೇಖನಗಳು ಪುಸ್ತಕಾಕಾರವಾಗಿ ಸಂಕಲಿತವಾಗುತ್ತವೆಯೆಂದರು! ಶ್ರೀ ಡಾ. ಪೈಯವರು ಸಾಹಿತಿಯಲ್ಲದರೂ, ಸಾಹಿತ್ಯಾಭಿರುಚಿ— ಸಾಹಿತ್ಯಾಭಿಮಾನಗಳಿಂದ ತುಂಬಿದವರೆಂದು ಅವರ ಅಧ್ಯಕ್ಷ ಭಾಷಣದಿಂದ ತಿಳಿಯುತ್ತದೆ. ಅಂತೂ, ಈ ಹೊತ್ತಿನ ಕಾರ್ಯಕ್ರಮವು 'ಅವ್ವೀಲ್'ನಂತೆ ವೈವಿಧ್ಯದಿಂದ ಕೂಡಿ, ತುಸು ಮನಸ್ಸನ್ನು ಅಡಿಮುಟ್ಟ ಕಲಕಿ ತಣಿಸುವಂತಿತ್ತು! ಈ ಹೊತ್ತಿನ ಭಾಷಣಗಳ ಸಾರಾಂಶವೂ "ದೀವಿಗೆ"ಯಲ್ಲಿ ಮುಂದೆ ಬೆಳಕು ಕಾಣತಕ್ಕದಾಗಿದೆ.

ಅದೇ ರಾತ್ರಿ "ಹೆಬ್ಬೆರಳು" ನಾಟಕದ ಕೊನೆಯ ದೃಶ್ಯದ ಅಭಿನಯವಿತ್ತು. ಏಕಲವ್ಯನು ಬೇಡರ ವಗನಗಿದ್ದು, ಕ್ಷತ್ರಿಯನಾದ ರಾಜಕುಮಾರ ಅರ್ಜುನನ ವೇಷಾಲಂಕಾರಗಳಿಂದ ಕೂಡಿದ್ದು ಅಭಾಸವಾಗಿದೆ. ಮತ್ತೆ "ಕೆಂಬೂತ ಎಂಬ ಪ್ರಹಸನಾರ್ಥ ಹಾಗೂ ಅದರ "ಟೇಪ್ ರಿಕಾರ್ಡ್"ನ ಪುನಃ ಪ್ರಸಾರಣೆಯಾದ ವೇಳೆ ಪ್ರಹಸನಾರ್ಧದ ಪ್ರದರ್ಶನವಿತ್ತು. ಈ ಉಭಯ (ಪ್ರಸಾರ—ಪುನಃ ಪ್ರಸಾರ) ರೀತಿಯೇಕೆಂದು ಸಾರ್ವತ್ರಿಕವಾಗಿ ತಿಳಿಯಲಾರದು "ಅಸಂಬದ್ಧ" ಕವಿಯ ಪಾತ್ರವು ತನ್ನ ದ್ವಿಶ್ಯಾರ್ಥ ನೋಡಿಯೂ ಸ್ಪಷ್ಟನಾಗದೆ, ಭ್ರಾಂತನಾಗೇ ಇದ್ದನೆಂಬುದು ಇಲ್ಲಿ ಗೋಚರಿಸಲು ಈ ವ್ಯವಸ್ಥೆಯಿರಬಹುದೇನೋ ಅನ್ನಿಸುತ್ತದೆ.

ಈ ಒಂದು ದಿನ ಒಂದು ಕೋಣೆಯಲ್ಲಿ ಶ್ರೀ ಪೈಗಳ ಕೈ ಬರೆಹದ— ಅಚ್ಚಾದ — ಪುಸ್ತಕ ಪತ್ರ ಲೇಖನಗಳ— ಹಾಗೂ ಚಿತ್ರಗಳ ಕೆಲವು ಹಾಳೆಗಳ ಪ್ರದರ್ಶನವಿತ್ತು; ಈ ಪ್ರದರ್ಶನವೂ ಮುಂದಾಗಿ ಯೋಚಿಸಿಲ್ಲವಾಗಿರಬಹುದು, ಮುಂದಾಗಿ ಪ್ರಚುರಿಸಿದ್ದರೆ ಇನ್ನೂ ಹಲವು ಕೃತಿಗಳು ಕಂಡಿತವಾಗಿಯೂ ಒದಗುತ್ತಿದ್ದುವೆಂದು ಹೇಳಲಡ್ಡಿಯಿಲ್ಲ.

"ರಾಷ್ಟ್ರ ಕವಿ" ಶ್ರೀ ಗೋವಿಂದ ಪೈ ಸ್ಮಾರಕೋತ್ಸವವು ಸಾಹಿತ್ಯ ಸಮ್ಮೇಳನಕ್ಕಿಂತ ಕಡಿಮೆಯಾಗಿದ್ದಿಲ್ಲ! ಇಂತಹ ಉತ್ಸವಗಳು ಹತ್ತಾರು ದಿನದ ಬಿಡುವಿನ ವೇಳೆ ಜರಗಬೇಕಿತ್ತು. ಆ ಕಾದಿನ ಕೆಲವರು ಒದಗುತ್ತಿರಲಿಲ್ಲವೇನೋ? ಇಂತಹ ದೊಡ್ಡ ಒಳ್ಳೆಯ ಕೆಲಸ ಮಾಡಿದ ಭಂಡಾರ್ಕಾರ್ ಕಲಾ ಶಾಲೆಯಲ್ಲಿ ಮುಂದೆಯೂ ಅನೇಕ ಮಹೋತ್ಸವಾರಂಭಗಳು ನಡೆಯಲಿ! ಎಲ್ಲೆಡೆಯೂ ಶ್ರೀ ಗೋವಿಂದ ಪೈಯವರ ಸ್ಮಾರಕೋತ್ಸವವು ನೆರವೇರಲಿ! ಇಂತಹ ಅನೇಕ "ದೀವಿಗೆ"ಗಳು ಬೆಳಗಿ, ಜ್ಞಾನಪಿಪಾಸುಗಳಿಗೆ ಆಪ ... ಇತ್ತಲಿ!

NAVAYUGA

REPUBLIC DAY SPECIAL 1965

is planned by us as a bountiful and sumptuous volume catering to the literary and cultural taste of the readers as also the demands of modern advertisement

Please reach us your advertisement on or before 10-1-65.

ADVERTISEMENT RATES

Full Page	Rs. 150/-	Back Cover Page	Rs. 650/-
Half Page	Rs. 75/-	Inside 1st Cover Page	Rs. 450/-
Quarter Page	Rs. 40/-	Inside 2nd Cover Page	Rs. 350/-
Ordinary Full Page in Double colours			Rs. 250/-
Inside Pages facing the Cover Pages			Rs. 200/-

MECHANICAL DATA:

Paper Size... 15" × 10" (37.5 Cm. × 25 Cm.)

Size of type page... 13" × 8" (32.5 Cm. × 20 Cm.)

Date of Publication: 26-1-1965

ADVT. MANAGER.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಆಹಾರ ಸಮಸ್ಯೆಯ ಪರಿಹಾರಸೂತ್ರಗಳು

(ಆರನೇ ಪುಟದಿಂದ)

ಬೋಧಿಸ ತೊಡಬೇಕು. ಈ ವಿದ್ಯಾರ್ಥಿಗಳು ಮುಂದೆ ಕೃಷಿಕರಾದಾಗ ತಮ್ಮ ಹಿಡುವಳಿಯನ್ನು ಉತ್ತಮವಾಗಿ ನೋಡಿಕೊಳ್ಳಲು ಇದು ನೆರವಾಗುತ್ತದೆ.

೨೧. ಉತ್ಪಾದಕರ, ಗಿರಾಕಿಗಳ, ಸಾಲಿಗರ ಮತ್ತು ವಿಕ್ರಯಗಾರರ ಸಹಕಾರಿ ಸಂಘಗಳ ಅಧಿಕ ಸಂಖ್ಯಾಕರಾದ ರೈತರ ಕೈಯಲ್ಲಿಯೇ ಉಳಿಯಬೇಕು. ಪಡಿಪ್ಪಾಯಿ, ಆನಾನಾಸು ಮೊದಲಾದುವುಗಳನ್ನು ರೈತರು ಬೆಳೆಸಿ ತಮ್ಮ ಉತ್ಪಾದನೆಯನ್ನು ಹೆಚ್ಚಿಸುವಂತೆ ಮಾಡಬೇಕು. ಇವನ್ನು ಉತ್ಪಾದಕರ ಸಹಕಾರಿ ಸಂಘವು ಪೇಟೆಯಲ್ಲಿ ಉತ್ತಮ ಬೆಲೆಗೆ ಮಾರಬೇಕು.

೨೨ ಸಹಕಾರತತ್ವದ ತಳಹದಿಯಲ್ಲಿ ಗ್ರಾಮಸಮಾಜವನ್ನು ಕಟ್ಟಲು ವೈಜ್ಞಾನಿಕ ರೇಖೆಗಳ ಮೇಲೆ ಸಹಕಾರಿ ಸಂಘಗಳನ್ನು ಕಟ್ಟಲು, ನಡೆಸಲು ನಾವು ನಿಸ್ವಾರ್ಥ ಸೇವೆಯನ್ನು ನೀಡಬೇಕು.

೨೩. ಬಿಡುವಿನ ವೇಳೆಯನ್ನು ರೈತರು ಲಾಭಕರವಾಗಿ ಕಳೆಯುವಂತೆ ಮಾರ್ಗ ನಿರ್ಮಾಣ, ಭವನ ರಚನೆ, ಸೇತು ನಿರ್ಮಾಣ, ಬಾವಿಯನ್ನು ಆಳವಾಗಿಸುವುದೇ ಮೊದಲಾದ ಕಾಮಗಾರಿಗಳನ್ನೂ, ಕೈಮಗ್ಗ, ನಾರಿ ಹಗ್ಗ ತಯಾರಿ ಮೊದಲಾದ ಗ್ರಾಮ ಕೈಗಾರಿಕೆಗಳನ್ನೂ ಸರಕಾರ ಸಹಕಾರಿ ಸಂಘಗಳ ಮೂಲಕ ಹೂಡಗಿಸಿ, ಸಹಾಯವನ್ನೂ, ತಾಂತ್ರಿಕ ನೆರವನ್ನೂ, ಅಧಿಕಾರಿಗಳ ಸೇವೆಯನ್ನೂ ಒದಗಿಸಬೇಕು. ಇಲ್ಲಿ ಉತ್ಪಾದಿತವಾದ ಸರಕುಗಳು ವಿಕ್ರಯದ ಸಹಕಾರ ಸಂಘದ ಮೂಲಕ ಮಾರಲ್ಪಡಬೇಕು.

೨೪. ಗ್ರಾಮಗಳ ಸಹಕಾರಿ ಸಂಘಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಸರಕಾರವು ಪ್ರತಿ ಎರಡು-ಮೂರು ಗ್ರಾಮಗಳಿಗೊಬ್ಬರಂತೆ ವಿಶ್ವಸ್ಥ ಸಂಭಾವಿತ ಅಧಿಕಾರಿಯ ಸೇವೆಯನ್ನು ಒದಗಿಸಬೇಕು.

೨೫. ನೀರಾವರಿ ಸೌಕರ್ಯವಿಲ್ಲದೆಡೆಯಲ್ಲಿ ಇರುವ ಕೆರೆಗಳ ದುರಸ್ತಿ, ಹೊಸ ಕೆರೆಗಳ ಅಗೆತ ಮೊದಲಾದ ಚಿಕ್ಕ ನೀರಾವರಿ ಸೌಲಭ್ಯಗಳಲ್ಲಿ ಸರಕಾರ ಆಸಕ್ತಿ ತೋರಿಸಬೇಕು. ದೇಶದ ಮೂಲೆ ಮೂಲೆಯೂ ನೀರಾವರಿ ಸೌಕರ್ಯಗಳಿಂದ ಕೂಡುವಂತೆ ಮಾಡುವುದೇ ಸರಕಾರದ ಉದ್ದೇಶವಿರಬೇಕು.

೨೬. ರೂ. ೩,೬೦೦ಕ್ಕೆ ಮಿಕ್ಕಿದ ಕೃಷಿಯ ಆದಾಯವೂ ಕ್ರಮಾನುಸಾರ ಆದಾಯ ತೆರಿಗೆಗೆ ಒಳಪಡಬೇಕು.

೨೭. ರೈತನಲ್ಲಿ ಆರ್ಥಿಕಭದ್ರತೆಯ ಭಾವವನ್ನು ಹುಟ್ಟಿಸಿ, ಉತ್ತಮ ಭವಿಷ್ಯದ ಆಸೆಯು ಆತನಲ್ಲಿ ಉಂಟಾಗುವಂತೆ ಮಾಡಲು ಧಾನ್ಯ, ಒಕ್ಕಲ ಪ್ರಾಣಿಗಳು ಮತ್ತು ಒಕ್ಕಲು ಇವರಿಗೆ ವಿಮೆಯ ಸೌಲಭ್ಯವನ್ನೊದಗಿಸಬೇಕು. ಇದಕ್ಕೆ ತಗಲುವ ಪ್ರೀಮಿಯಂನಲ್ಲಿ ಅರ್ಧಾಂಶವನ್ನು ಸರಕಾರ ಕೊಡಬೇಕು.

೨೮. ಈಯೆಲ್ಲಾ ಸೂಚನೆಗಳನ್ನು ಕಾರ್ಯಕೃತಗೊಳಿಸಲು ಸರಕಾರಕ್ಕೆ ಧಾರಾಳ ಸಂಪನ್ಮೂಲವು ಬೇಕಾಗುತ್ತದೆ. ಕೃಷಿಕರಂಗದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಮಾಡಿ, ದೇಶದಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿ, ಹಸಿವೆಯಿಂದ ಸಾಯುವುದನ್ನು ತಪ್ಪಿಸುವುದಕ್ಕೆ ಎಲ್ಲೆಲ್ಲೂ ಸಂಪೂರ್ಣ ಅಸಫಲವೆಂದು ಅನುಭವಕ್ಕೆ ಬಂದ ವಾಸಪ್ರತಿಬಂಧವನ್ನು ಕಿತ್ತೊಗೆದರೆ ಸುಗಮವಾಗಲಾರದೆ?

ಮೇಲೆ ಹೇಳಿದ ಸೂಚನೆಗಳಲ್ಲಿ ಕೆಲವು ತೀರ ಕ್ರಾಂತಿಕಾರಕವೆಂಬ ಟೀಕೆಗೆ ಒಳಗಾಗಬಹುದು ಆದರೆ, ಕ್ರಾಂತಿಕಾರಕವೆನಿಸದ ಯಾವ ಸೂಚನೆಯೂ ಹಸಿವೆಯಿಂದ ನಮಗೆ ವಿಮೋಚನೆಯೊದಗಿಸಲಾರದು.

ದೇಶದ ಗ್ರಾಮೀಣ ಜನತೆಯ ಉದ್ಧಾರವಾಗದೆ ದೇಶದ ಉದ್ಧಾರವಾಗಲಾರದು. ಅದರ ಜೀವನ ಮಟ್ಟ, ಕೊಡಕೊಳ್ಳುವ ಶಕ್ತಿ ಸಾಕಷ್ಟು ಹೆಚ್ಚದೆ ಗತ್ಯಂತರವಿಲ್ಲ. ಮೂಲ ಕೈಗಾರಿಕೆಗಳು, ಬಂದರ ನಿರ್ಮಾಣ, ಮಾರ್ಗ ವಿಸ್ತರಣೆ—ಮೊದಲಾದುವುಗಳಿಂದ ನಗರಗಳನ್ನು ಬೆಳೆಸುವುದು ಆರ್ಥಿಕ ಬೆಳವಣಿಗೆಗೆ ಆಗತ್ಯವಾದರೂ ಗ್ರಾಮ—ನಗರಗಳೆರಡೂ ಏಕ ಸಮವಾಗಿ ಬೆಳೆಯುವುದು ಪ್ರಜಾಸತ್ತೆಗೆ ಹಿತವಾಗಿದೆ. ಇಲ್ಲವಾದರೆ ವರ್ಗಕಲಹವೇ ಮೊದಲಾದ ಅನಪೇಕ್ಷಣೀಯ ಘಟನೆಗಳು ಮೊಳೆಯಬಹುದು. ಸಮತೂಕದ ಆರ್ಥಿಕ ಪುನಾರಚನೆಯೇ ನಾವು ಸ್ವೀಕರಿಸಿದ ಪ್ರಜಾಪ್ರಭುತ್ವವಾದಿ ಸಮಾಜವಾದಿ ಸಮಾಜ ರಚನೆಗೆ ತಾರಕೋಪಾಯವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಕೃತಿ ಪರಿಚಯ



ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಆಶಾಂಕುರ: ಲೇಖಕರು: ಶ್ರೀಗಳಾದ ಬಿ. ಎನ್. ಜೋಗಿತ್ತಾಯ ಮತ್ತು ಎನ್. ಬಿ. ಮೊಗಸಾಲೆ. ಪ್ರಕಾಶಕರು: ಸರಸ್ವತಿ ಪ್ರಕಾಶನ, ಕಡಿಯಾಳಿ, ಉಡುಪಿ. ಬೆಲೆ: 1-25; ಪುಟಗಳು: 114.

'ಆಶಾಂಕುರ' ಇಬ್ಬರು ಕತೆಗಾರರ ಒಂಭತ್ತು ಕತೆಗಳ ಎಸಳುಗಳುಳ್ಳ ಒಂದು ಹೂವಿನ ಮೊಗ್ಗು. ಶ್ರೀ ಬಿ ಎನ್. ಜೋಗಿತ್ತಾಯರ ಐದು ಕತೆಗಳೂ, ಶ್ರೀ ಎನ್. ಬಿ. ಮೊಗಸಾಲೆಯವರ ನಾಲ್ಕು ಕತೆಗಳೂ ಈ ಅಂಕುರದಲ್ಲಿವೆ. ಎಳೆ ಹರೆಯದ ಕತೆಗಾರರ ಮೇಲೆ ಪ್ರಪಂಚದ ಅಗಾಧ, ಅಪರಿಮಿತ ಶ್ರಮದ, ತೊಳಲಾಟದ ಪರಿಣಾಮದ ಕಿರಣ ಬಿದ್ದಿದೆ.

ಶ್ರೀ ಜೋಗಿತ್ತಾಯರ "ಪ್ರೀತಿಯ ಚಾಚಾ ನೆಹರೂಜೀಗೆ" ಮತ್ತು "ಹಿಂತಿರುಗಿ ಬನ್ನಿ ಬಾಪೂಜಿ"—ನಮ್ಮನ್ನಗಲಿದ ಮಹಾತ್ಮರಿರ್ವರ ಕುರಿತಾಗಿ ಬರೆದ ಮೊದ್ದು ಬರಹಗಳು "ಆ ಭಾಗ್ಯವಿಲ್ಲದವಳು' ತಾಯಿಯಾಗಬೇಕೆಂಬ ಹಂಬಲದ ಹೆಣ್ಣಿನ ಗೋಳಿನ ಚಿತ್ರಣವಾದರೆ, "ದೇವರೇ ಈ ದಾರಿ ಬೇಡ" ವೇಶ್ಯೆಯ ಬಾಳಿನ ಕತೆಯನ್ನು ವ್ಯಕ್ತಪಡಿಸುತ್ತದೆ. "ಆಶಾಂಕುರ"-ಕಾಲೇಜು ಸಹಪಾಠಿಗಳ ಸ್ನೇಹದ ಕತೆಯನ್ನು ವರದಿ ಮಾಡುವುದು. ಶ್ರೀಯುತರ ಕತೆಗಳಲ್ಲಿ ಅನುವಾದದ ಕೈಯಾಡಿದುದು, ಹಿಂದಿ ಸಾಹಿತ್ಯದ ಪ್ರಭಾವವಿದ್ದುದು, ಅವರ ಹಿಂದೀ ಸಾಹಿತ್ಯಾಭ್ಯಾಸದ ಪರಿಣಾಮವಿರಬಹುದು. ಅವರು ಶ್ರಮಿಸಿದರೆ ಉತ್ತಮ ಕತೆಗಳನ್ನು ನೀಡಿಯಾರೆಂದು ಹಾರೈಸಬಹುದಾಗಿದೆ.

ಶ್ರೀ ಮೊಗಸಾಲೆಯವರ ಲೆಕ್ಕಣಿಕೆಯಾಡವು ಉತ್ತಮ ಪರಿಣಾಮವನು ಸಾಹಿತ್ಯದ ಮೇಲೆ ಬೀರಬಹುದಾಗಿದೆ. ಅವರ "ಒಂದೇ ಗೊಂಚಲ ಎರಡು ಹೂ" ಬಾಲ್ಯ ಜೀವನದ ಭಾವೀ ಸ್ವಪ್ನಕ್ಕೂ ನಿಜ ಜೀವನದ ವಾಸ್ತವಿಕತೆಗೂ ಇರುವ ಭೇದ, ಅವುಗಳನ್ನು ಸುಧಾರಿಸಿಕೊಂಡು ಹೋಗುವ ವಿಧಾನವನ್ನು ಬೋಧಿಸುವ ವಸ್ತುವಿನಿಂದ ಕೂಡಿದರೆ, "ತಾಯಿಯ ಕರುಳು"—ಹೆರಿಗೆಯ ನೋವಿಗೆ ಹೆದರುವ ಮಾನಿನಿಯು ತಾಯ್ತನದ ಸುಖವನ್ನು ಆಶಿಸುವ ಪರಿಯನ್ನು ಹೇಳುತ್ತದೆ. "ಆ ಹಳ್ಳಿಯ ಕತೆ"ಯು ಹಳ್ಳಿಯ ರಾಜಕೀಯಕ್ಕೆ ಸಂಬಂಧಿಸಿದರೆ "ಬದುಕು" ನಿರುದ್ಯೋಗ ಸಮಸ್ಯೆಯ ಮೇಲೆ ತನ್ನ ಛಾಯೆಯನ್ನು ಬೀರಿದೆ. ಶ್ರೀಯುತರ ಶೈಲಿ, ಕಥಾ ವಿಧಾನ ಕನ್ನಡಿಗರಿಗೆ ಆಶಾಂಕುರವನ್ನು ತೋರಿಸುತ್ತದೆ.

ಒಟ್ಟಿನಲ್ಲಿ "ಆಶಾಂಕುರ" ಕಥಾ ಸಂಕಲನ ಪ್ರಕಟಣೆಯಿಂದ ಇಬ್ಬರು ತರುಣ ಕತೆಗಾರರ ಪರಿಚಯ ಕನ್ನಡಿಗರಿಗೆ ಆದುದೇ ವಿಶೇಷ. ಕನ್ನಡಿಗರು ಈ ತರುಣ ಕತೆಗಾರರಿಂದ ಇನ್ನೂ ಹೆಚ್ಚಿನ ಉತ್ತಮ ಮಟ್ಟದ ಕತೆಗಳನ್ನಾಶಿಸಿದರೆ ತಪ್ಪಾಗಲಾರದು.

— ಚೇತನಾ.

ಸ್ವಾಮಿ ವಿವೇಕಾನಂದರ ವೀರವಾಣಿ: ಸಂಗ್ರಾಹಕ ಮತ್ತು ಪ್ರಕಾಶಕರು: ಶ್ರೀ ಕಾ. ವಿನಾಯಕ ಶೆಣೈ, ಹಿಂದು ಧರ್ಮ ಪ್ರಕಾಶನ, ಕಾಸರಗೋಡು. ಪುಟಗಳು: 36. ಬೆಲೆ: ಆಂಪೈಸೆ.

ಭಾರತೀಯತೆಯನ್ನು ಭಾರತದಲ್ಲಿ ಮತ್ತೆ ಎತ್ತಿಹಿಡಿದು, ವಿದೇಶಗಳಲ್ಲಿ ಭಾರತದ ಬಗ್ಗೆ ನವಜಾಗೃತಿಯನ್ನುಂಟುಮಾಡಿ ಅವರ ಕಂಗಳನ್ನು ತೆರೆದ ಸ್ವಾಮಿ ವಿವೇಕಾನಂದರ ವಾಣಿಯು ಪ್ರಿಯೋಚಿತವಿದೆ. ಅವರು ಅಂದು ತೋರಿಸಿದ ಕೆಚ್ಚನ್ನು ಇಂದು ಭಾರತೀಯರು ತೋರಿಸಬೇಕು. ಭಾರತೀಯರೆಲ್ಲ ಐಕ್ಯಸೂತ್ರದಲ್ಲಿ ಒಂದಾಗಿ ದೇಶದ ಸಂರಕ್ಷಣೆ—ಸಂವೃದ್ಧಿ ಮತ್ತು ಸುಭಿಕ್ಷೆಗಳಿಗಾಗಿ ದುಡಿಯಬೇಕು. ಅದಕ್ಕಾಗಿ ವಿವೇಕಾನಂದರ ವಿವೇಕಯುಕ್ತ ವೀರವಾಣಿಯನ್ನು ಪದೇ ಪದೇ ಮೆಲುಕಾಡಬೇಕು: ಆ ಧೀರೋಕ್ತಿಯನು, ಅರ್ಥವಿಸಿ ವೀರರಾಗಬೇಕು. ಇದಕ್ಕೆ ಉಪಯುಕ್ತವಾಗುವಂತೆ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ವಿಷಯಗಳನ್ನೆತ್ತಿ ಉಸುರಿದ ಮುತ್ತಿನಂತಹ ಮಾತುಗಳನ್ನು ಶ್ರೀ ಶೆಣೈಯವರು ಇಲ್ಲಿ ಸಂಗ್ರಹಿಸಿ ಕನ್ನಡ ಜನತೆಗೆ ಉಪಕಾರಮಾಡಿದ್ದಾರೆ. ಅವರ ಪರಿಶ್ರಮ ಸ್ತುತ್ಯ.

—ಗೋರ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 290/64

ನರಸಿಂಹ ನ್ಯಾಕ ... ವಾದಿ.
ಪಾಂಚಜನ್ಯ ಗೌಡ ಸಹಾ ...ಪ್ರತಿವಾದಿರು.
7. ಚೆನ್ನಮ್ಮ. ಕಿಟ್ಟ ಗೌಡರ ವಿಧವೆ. ಬೆಳ್ತಂಗಡಿ ತಾಲ್ಲೂಕು ಕೊಕ್ಕಡ ಗ್ರಾಮದಲ್ಲಿ.
ಇವರಿಗೆ—

ವಾದಿಯು ನಿಮ್ಮ ಮೇಲೆ ಗೇಣಿ ಬಾಕಿ ಬಗ್ಗೆ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 25-1-1965ಕ್ಕೆ ಇಟ್ಟಿದೆ. ಸದ್ರಿ ದಿವಸ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉತ್ತರಿಸದಿದ್ದಲ್ಲಿ ನಿಮ್ಮನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟ್ ಹುಕುಂ ಪ್ರಕಾರ

Sd K. Rama Bhat
(Advocate for Plaintiff)
Puttur, 6—12—1964.

TENDER NOTIFICATION

Sealed tenders are invited from the Registered Contractors for the following work and will be received by the undersigned upto 4 P. M. on 15—1—1965 and will be opened on the same day at 4 P. M.

Name of the Work.	Estimated Cost.	E M.Deposit
1. Construction of a rat-proof godown at Siddapura.	Rs 14900 - 00	Rs 372 - 50

2. The form of tender is to quote at less or above or Estimated rates.
3. The President reserved the right to reject all or any of the tenders without assigning any reasons.
4. The work should be completed before 28—2—65.
5. Further particulars can be had from the Society.

K. Soorappa Naik,
President
Siddapur Service Co-Operative Society,
Post Siddapur, Coondapoor Tq , S. K.

Siddapur)
31-12-64)

ಯುವಜನರನ್ನು ಒಂದುಗೂಡಿಸುವ ಸಾಧನಗಳು

ಹಾಲೆಂಡಿನ ವಿದ್ಯಾರ್ಥಿ ನಿಲಯಗಳು

ಹಾಲೆಂಡಿನ ಪ್ರಜೆಗಳಿಗೆ, ಅದರಲ್ಲೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸೈಕಲ್ ಸವಾರಿಯೆಂದರೆ ಜೀವ. ಅವರು ಗುಂಪುಗುಂಪಾಗಿ ಸೈಕಲ್ ಸವಾರಿ ಹೊರಟು, ಹಾಗೆಯೇ ಊರೂರುಗಳನ್ನು ಸುತ್ತುವುದೂ ಉಂಟು. ಹಾಗೆ ಅವರು ಪ್ರವಾಸವನ್ನು ಕೈಗೊಂಡಾಗ ರಾತ್ರಿಯ ವೇಳೆಗಳಲ್ಲಿ ತಂಗಲು ಹಾಲೆಂಡಿನ ವಿದ್ಯಾರ್ಥಿ ನಿಲಯಗಳು ಒಳ್ಳೆಯ ಜಾಗಗಳಾಗಿವೆ. ಈ ರೀತಿಯಲ್ಲಿ ಅವು ಬೇರೆ ಬೇರೆ ಭಾಗಗಳ ಯುವಜನರ ಹೃದಯವನ್ನು ಬೆಸೆಯುವ ಸಾಧನಗಳಾಗಿವೆ.

ಹಾಲೆಂಡ್ ಹೆಚ್ಚು ಪೇರುಗಳಿಲ್ಲದ ಸಮತಟ್ಟಾದ ಭೂಮಿಯನ್ನು ಹೊಂದಿರುವುದರಿಂದಲೋ, ಏನೋ ಅಲ್ಲಿ ಸೈಕಲ್ ಸವಾರಿಯು ಅತಿ ಹೆಚ್ಚಿನ ಜನರ ಹೊತ್ತು ಕಳೆಯುವ ಸಾಧನವಾಗಿ ಪರಿಣಮಿಸಿದೆ. ರಜಾ ದಿನಗಳಲ್ಲಿ, ಹಾಲೆಂಡಿನ ಯುವಕ ಯುವತಿಯರು ಸಾಲುಗಟ್ಟಿ, ಕೇಕೆ ಹಾಕುತ್ತಾ, ಹಾಡುತ್ತಾ, ನಲಿಯುತ್ತಾ ಸೈಕಲ್ಲುಗಳ ಮೇಲೆಯೇ ದಿನವಿಡೀ ಸಂಚರಿಸುತ್ತಿರುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ! ವಸಂತೋದಯವಾಯಿತೆಂದಾಗಲಂತೂ, ಸೈಕಲ್ ಸವಾರರ ಆನಂದವು ಪರಮಾವಧಿಯನ್ನು ಮುಟ್ಟುತ್ತದೆ.

ಹೀಗೆ, ಸೈಕಲ್ಲುಗಳ ಮೇಲೆ ಊರೂರು ಸುತ್ತುವವರಿಗೆ ಹಾಲೆಂಡಿನ ವಿದ್ಯಾರ್ಥಿ ನಿಲಯಗಳು ಒಳ್ಳೆಯ ತಂಗುವ ಸ್ಥಳಗಳಾಗಿವೆ. ಈ ನಿಲಯಗಳನ್ನು ಇಂತಹವರಿಗಾಗಿಯೇ ಕಟ್ಟಲಾಗಿದೆಯೇ ಎಂಬಂತಿವೆ. ಹಾಲೆಂಡ್ ದೇಶದಾದ್ಯಂತವಿರುವ ಐವತ್ತಾರು ನಿಲಯಗಳಲ್ಲಿ ಯುವ ಜನರು ಅತ್ಯಂತ ಕಡಿಮೆಯ ಬಾಡಿಗೆಯನ್ನು ಕೊಟ್ಟು ತಂಗಬಹುದು. ಒಂದೊಂದರಲ್ಲೂ ಸುಮಾರು ೫೦೦ ಮಂದಿ ತಂಗಬಹುದು. ಇವುಗಳಲ್ಲಿ ಈಜುವ ಕೊಳ, ದೋಣಿ ಪ್ರಿಯರಿಗೆ ಕಟಾಕ, ಚಿತ್ರಗ್ರಾಹಕರಿಗೆ ಕತ್ತಲೆ ಕೋಣೆ, ಒಳಾವರಣದ ಆಟಗಳು, ಹೊರಾವರಣದ ಆಟಗಳಿಗೆಲ್ಲಾ ಅನುಕೂಲಗಳು, ಸೈಕಲ್ಲುಗಳನ್ನು ನಿಲ್ಲಿಸುವ ತಾಣ ಮುಂತಾದವೆಲ್ಲಾ ಇವೆ. ಇಲ್ಲಿನ ವಿದ್ಯಾರ್ಥಿನಿಲಯಗಳ ನಿರ್ಮಾಣವನ್ನು ಕಳೆದ ಮೂವತ್ತು ವರ್ಷಗಳಿಂದಲೇ ಕೈಗೊಳ್ಳಲಾಗುತ್ತಿದೆ. ಯುದ್ಧ ನಡೆಯುತ್ತಿರುವಾಗಲೂ ಇವುಗಳ ನಿರ್ಮಾಣ ಸಾಗುತ್ತಲೇ ಇತ್ತು.

ಒಂದೊಂದು ವಿದ್ಯಾರ್ಥಿ ನಿಲಯವನ್ನು ನೋಡಿಕೊಳ್ಳಲು ವಾರ್ಡನ್ನರನ್ನು ನೇಮಿಸಲಾಗಿದೆ. ಇವರನ್ನು 'ಫಾದರ್' ಎಂದು ಕರೆಯಲಾಗುವುದು, ಸ್ತ್ರೀಯರಿಗೇ ಪ್ರತ್ಯೇಕ ನಿಲಯಗಳಿದ್ದು, ಅವುಗಳ ಮೇಲ್ವಿಚಾರಣೆಯನ್ನು "ಮದರ್" ಗಳಿಗೆ ಒಪ್ಪಿಸಲಾಗಿದೆ ಒಂದೇ ಕಾಲದಲ್ಲಿ, ಒಂದೇ ವಿದ್ಯಾರ್ಥಿನಿಲಯದಲ್ಲಿ ದೇಶದ ಹಲವಾರು ಭಾಗದ ವಿದ್ಯಾರ್ಥಿಗಳನ್ನು ಕಾಣಬಹುದು. ಪ್ರತಿ ರಾತ್ರಿಯೂ ಭೋಜನ ಕಾಲದಲ್ಲಿ, ಫಾದರ್ ಎಲ್ಲಾ ವಿದ್ಯಾರ್ಥಿಗಳನ್ನೂ ತಮ್ಮ ತಮ್ಮ ಪರಿಚಯವನ್ನು ಮಾಡಿಕೊಡಲು ಹೇಳುವರು. ಅವರೆಲ್ಲರೂ ಒಬ್ಬರೊಡನೊಬ್ಬರು ಮನಸ್ಸು ಬಿಚ್ಚಿ ವ್ಯವಹರಿಸಲು ಸೌಕರ್ಯವನ್ನು ಕಲ್ಪಿಸಿಕೊಡಲಾಗುವುದು. ಪ್ರಜೆಗಳಲ್ಲಿ ಸೋದರ ಪಾಶವನ್ನು ಕಲ್ಪಿಸುವುದೇ ಈ ಸಂಸ್ಥೆಗಳ ಪ್ರಥಮ ಉದ್ದೇಶ.

ಸಾಮಾನ್ಯವಾಗಿ ಸೈಕಲ್ಲುಗಳ ಮೇಲೆ ಬರುವ ಬೇರೆ ಭಾಗದ ಯುವ ಜನರು ಮಧ್ಯಾಹ್ನ ಮೂರು ಗಂಟೆಗೆ ನಿಲಯಗಳಿಗೆ ಬರುವರು. ಅಲ್ಪೋಪಹಾರ, ಚಹಾಗಳಾದ ಮೇಲೆ ಹಾಸ್ಟೆಲ್ ವಾರ್ಡನ್ನರು ಅವರನ್ನು ನಿಲಯದಲ್ಲಿರುವ ಹಳಬರಿಗೆ ಪರಿಚಯ ಮಾಡಿ ಕೊಡುವರು. ಸಾಯಂಕಾಲ ೭ ಗಂಟೆಗೆ ಅವರೆಲ್ಲರೂ ದೊಡ್ಡ ಹಜಾರದಲ್ಲಿ ಸಂಧಿಸಿ ಸಾಮೂಹಿಕ ಗಾನ, ಮನರಂಜನೆಗಳಲ್ಲಿ ತೊಡಗುವರು. ವಿದೇಶೀಯರು ಅವರವರ ದೇಶಗಳ ಗೀತೆಗಳನ್ನು ಹಾಡುವರು. ರಾತ್ರಿ ೧೦ ಗಂಟೆಯೊಳಗೆ ಊಟ ತಿಂಡಿಗಳಾಗಿ ಎಲ್ಲರೂ ಮಲಗಿ ಬಿಡಬೇಕು.

ಮರುದಿನ ಬೆಳಗ್ಗೆ ೭ ಗಂಟೆಯ ವರೆಗೆ ಅವರೆಲ್ಲರೂ ನಿದ್ರಿಸಬಹುದು ೭-೮ರ ವರೆಗೆ, ಅವರು ಮುಖಮಜ್ಜನ ಇತ್ಯಾದಿಗಳನ್ನು ಮಾಡಿಕೊಂಡು ಪ್ರಯಾಣಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವರು. ೯ ಗಂಟೆಗೇ ಎಲ್ಲರ ಊಟ ಮುಗಿಯುವುದು. ನಂತರದ ಒಂದು ಗಂಟೆಯ ಕಾಲ ವಿಶ್ರಾಂತಿ ೧೦ ಗಂಟೆಗೆ ಸರಿಯಾಗಿ ಸೈಕಲ್ ಸವಾರಿ ಆರಂಭವಾಗುವುದು.

ಒಂದು ನಿಲಯದಲ್ಲಿ, ಒಬ್ಬರು ೩ ದಿನಗಳು ಮಾತ್ರ ತಂಗಬಹುದು ದಿನವೊಂದಕ್ಕೆ ತಂಗುವವರು ೪ ಶಿಲ್ಲಿಂಗ್‌ಗಳನ್ನು ಕಟ್ಟಬೇಕಾಗುವುದು. ಸೈಕಲ್ ಸವಾರಿಯಲ್ಲಿ ಆಸಕ್ತಿಯುಳ್ಳ ಯುವತಿ ಯುವಕರಿಗೆ ಈ ನಿಲಯಗಳು ಒಳ್ಳೆಯ ಆಶ್ರಯ ಸ್ಥಾನಗಳಾಗಿವೆ. ಈ ನಿಲಯಗಳು ಅವರನ್ನು ತೆರೆದ ಬಾಗಿಲುಗಳಿಂದ ಆನಂದದಿಂದ ಸ್ವಾಗತಿಸುತ್ತವೆ.

ಸರ್ಕಾರವು ಈಗ ಇನ್ನೂ ಕೆಲವು ವಿದ್ಯಾರ್ಥಿ ನಿಲಯಗಳನ್ನು ಕಟ್ಟುವ ಸನ್ನಾಹದಲ್ಲಿದೆ. ಅದಕ್ಕೆ ಸಾರ್ವಜನಿಕರ ಬೆಂಬಲವೂ ಪೂರ್ಣವಾಗಿದೆ.

ಅಣ್ವಸ್ತ್ರ ತಯಾರಿಕೆಗೆ ಅಡೆತಡೆಗಳು

(ಐದನೇ ಪುಟದಿಂದ)

ಯಲ್ಲಿ ಆದುದಾದರೂ ಏನು? ಚಿಕ್ಕ ಮಕ್ಕಳಂತೆ, ನಾನು ಮೋಸಹೋಗಿಬಿಟ್ಟೆನೆಂದು ಅವರು ತಪ್ಪನ್ನೊಪ್ಪಿಕೊಳ್ಳಬೇಕಾಯಿತು. ಇಂದಿನ ಪರಿಸ್ಥಿತಿ ಅದಕ್ಕೆ ಭಿನ್ನವಾಗಿದೆ ಎನ್ನಲು ಸಾಧ್ಯವೇನು? ಕೆಟ್ಟ ಮೇಲೆ ಬುದ್ಧಿ ಎನ್ನುವಂತೆ ನಂತರ ನಾವು ತಲೆಯ ಮೇಲೆ ಕೈ ಇಟ್ಟುಕೊಂಡು 'ಅಯ್ಯೋ ಮೋಸಹೋದೆವೆಂದಲ್ಲಿ ಏನು ಫಲ?

ಅಣ್ವಸ್ತ್ರ ಪಂದ್ಯಾಟದಲ್ಲಿ ಭಾರತ ಸೇರಿಕೊಳ್ಳದಂತೆ ಆರ್ಥಿಕ ಪರಿಸ್ಥಿತಿಯು ತಡೆಯಾಗಿದೆ ಎಂದು ಆರ್ಥಿಕ ಅಮಾತ್ಯ ಟಿ. ಟಿ. ಕೆ. ಯವರು ಲೋಕಸಭೆಯಲ್ಲಿ ತಿಳಿಸಿರುವರು. ಹೌದು ಪ್ರತಿಯೊಂದು ರಂಗದಲ್ಲೂ ಮುನ್ನಡೆಗೆ ಬಲವಾದ ಲಗಾಮಾಗಿರುವದು ನಮ್ಮ ಇಂದಿನ ಆರ್ಥಿಕ ಪರಿಸ್ಥಿತಿಯೆ. ಆದರೂ ಆ ರಂಗದಲ್ಲಿ ನಾವು ಮುಖ ತೋರಿಸಿಲ್ಲವೇನು? ನಮ್ಮ ಮಂತ್ರಿ ಮಹಾಶಯರುಗಳು ಪರರಾಷ್ಟ್ರಗಳಿಗೆ ಹೋಗಿ ನೆರವು ಪಡೆದುಕೊಂಡು ಬರುತ್ತಿಲ್ಲವೇನು? ಇಲ್ಲಿನ ಸಿರಿಸಂಪತ್ತಿನ ಮೇಲೆ ಹದ್ದಿನ ನೋಟ ಬೀರಿಕೊಂಡು ಲೂಟಿಗಾರರ ಪ್ರವಾಹವೇ ಬಂದಿತ್ತು. ಅದರೆ ಇಂದು ಇಲ್ಲಿಂದ ಭಿಕ್ಷುಕರ ಪ್ರವಾಹವೇ ಹರಿಯುತ್ತಿದೆ! ಅಷ್ಟು ಬಡತನ ತಾಂಡವವಾಡಿದರೂ ರಾಷ್ಟ್ರದ ರಕ್ಷಣೆಗಾಗಿ ಏನಾದರೂ ಮಾಡಲು ನಮ್ಮಿಂದ ಸಾಧ್ಯವಿಲ್ಲವೇನು? ಬ್ರಿಟಿಷ್ ಸರಕಾರವು ಯುದ್ಧಕಾಲದಲ್ಲಿ ಕಬ್ಬಿಣದ ಅವಶ್ಯಕತೆ ಇದೆಯೆಂದಾಗ ಮನೆ ಮನೆಗಳಿಂದ ಕಬ್ಬಿಣದ ರಾಶಿಗಳು ಬಂದಿದ್ದುವಂತೆ. ನಮ್ಮ ರಾಷ್ಟ್ರದ ರಕ್ಷಣೆಗೋಸ್ಕರ ನಮ್ಮ ರಾಷ್ಟ್ರದವರು ಹಾಗೆಯೇ ಮುಂದೆ ಬರಲಾರರೇನು? ಅವರಲ್ಲಿ ದೇಶಭಕ್ತಿ ಒಂದಿನಿತೂ ಇಲ್ಲವೇನು? ಆ ಬರಗಾಲಕ್ಕೆ ಬೇರಿನ್ನಾರೂ ಕಾರಣವಾಗಿರಬಹುದು. ಆದರೆ ನಮ್ಮ ಪರಂಪರೆ ಆ ರೀತಿಯದ್ದಿರುವದಲ್ಲ. ವಜ್ರಾಯುಧಕ್ಕಾಗಿ ತನ್ನ ಬೆನ್ನೆಲುಬನ್ನೇ ತೆಗೆದುಕೊಟ್ಟವರಿದ್ದಾಗೆ ಆಗ ಅದ್ಯಾವ ಮೋಹವೂ ಅವರಿಗೆ ಅಡ್ಡಿ ಬಂದಿರುವದಿಲ್ಲ. ಇಂದು ನಮ್ಮಿಂದದು ಸಾಧ್ಯವಿಲ್ಲವೇನು? ಭಾರತದ ರಕ್ಷಣೆಗಾಗಿ ಅಣುಗುಂಡು ತಯಾರಿಕೆಗೆ ಇರುವ ಅಡೆತಡೆಯನ್ನು ನೀಗಲು ಭಾರತೀಯರು ಇಷ್ಟಪಡುವದಿಲ್ಲವೇನು? ನಿಜವಾಗಿ, ಅಲ್ಲಿ ಸಂದೇಹಕ್ಕೆ ಎಡೆಯೇ ಇರುವದಿಲ್ಲ. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತೆಂಬಂತೆ ಅಣುಗುಂಡು ತಯಾರಿಕೆಗೆ ಒಲ್ಲದ ನಮ್ಮ ಆರ್ಥಿಕ ಮಂತ್ರಿಯವರಿಗೆ ಅದೊಂದು ನೆವನ ಮಾತ್ರ ಇದೆ. ಒಂದು ದೃಷ್ಟಿಯಿಂದ ನೋಡಿದಾಗ ಅದು ಸತ್ಯಸ್ಥಿತಿಯಾದರೂ ಇನ್ನೊಂದು ದೃಷ್ಟಿಯಿಂದ ನೋಡುವಾಗ ಅದು ರಾಷ್ಟ್ರೀಯರೇ ರಾಷ್ಟ್ರಕ್ಕೆ ಮಾಡುವ ಅಪಮಾನವಾಗಿರುತ್ತದೆ

ಪೆಪ್ಪರ್ ಮಿಂಟ್, ಶರಬತ್ತು ಮೊದಲಾದ 'ಬಿಕ್ಕೊ'ರವರ ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿಪಟ್ಟಿವೆ.



ವಿದೇಶಗಳಲ್ಲಿ ನೆಹರೂ ಯಶಸ್ಸಿನ ರಹಸ್ಯ

(೭ನೇ ಪುಟದಿಂದ)

—ಇಂಥವನ ಮುಂದೆ ನಾಟ್ಯವಾಡಿದುದೇ ನಮ್ಮ ಭಾಗ್ಯ"

○ ○ ○

ಜಾನ್ ಡ್ಯೂಯಿಯವರ ಭೇಟಿ

ಒಮ್ಮೆ ಸುಪ್ರಸಿದ್ಧ ತತ್ವಜ್ಞಾನಿಯಾದ ಜಾನ್ ಡ್ಯೂಯಿ—ಎಂಬಾತನ ತೊಂಭತ್ತನೆ ವರ್ಷದ ವರ್ಧಂತಿ ಉತ್ಸವವು ಬಹಳ ವೈಭವದಿಂದ ನಡೆಯಿತು. ಇದಕ್ಕಾಗಿ ಪರರೆಲ್ಲರೂ ಸೇರಿ ಸಾರ್ವಜನಿಕ ಭೋಜನಕೂಟವೊಂದನ್ನು ಏರ್ಪಡಿಸಿದ್ದರು. ಅದೇ ರಾತ್ರೆ ಮತ್ತೊಂದೆಡೆ ಪಂಡಿತ್ ನೆಹರೂರವರ ಗೌರವಾರ್ಥವಾಗಿ ಭೋಜನಕೂಟವೊಂದನ್ನು ಏರ್ಪಡಿಸಲಾಗಿತ್ತು. ಶ್ರೀ ಜೆ. ಜೆ. ಸಿಂಗ್‌ರವರು ನೆಹರೂರವರಿಗೆ—"ಹೇಗಾದರೂ ಮಾಡಿ ನೀವು ನಿಮ್ಮ ಔತಣವನ್ನು ಮುಗಿಸಿಕೊಂಡು ಜಾನ್‌ಡ್ಯೂಯಿ ಔತಣಕೂಟಕ್ಕೆ ಬರಬೇಕು. ಅಲ್ಲಿ ಅನೇಕ ತತ್ವಜ್ಞಾನಿಗಳೂ ವಿಜ್ಞಾನಿಗಳೂ, ಶಿಕ್ಷಣ ತಜ್ಞರೂ, ರಾಜಕೀಯ ನಾಯಕರೂ ಸೇರುತ್ತಾರೆ. ಅವರಿಗೆಲ್ಲ ನಿಮ್ಮ ಪರಿಚಯವಾಗುತ್ತದೆ ಹಾಗೂ ಅವರ ಪರಿಚಯ ನಿಮಗೂ ಆಗುತ್ತದೆ" ಎಂದು ಸಲಹೆ ಕೊಟ್ಟರು. ನೆಹರೂ ಒಪ್ಪಿದರು. ಆದರೆ ಆದದ್ದೇನು? ನೆಹರೂರವರ ಭೋಜನ ಕೂಟ ವಿಲಂಬಿಸಿತು. ಎಷ್ಟು ಹೊತ್ತಾದರೂ ಮುಗಿಯಲಿಲ್ಲ. ಇತ್ತ ಜಾನ್‌ಡ್ಯೂಯಿಯವರ ಗೌರವಾರ್ಥವಾಗಿ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಎಲ್ಲ ಅತಿಥಿಗಳೂ ನಿಧಾನವಾಗಿಯೇ ಭೋಜನ ಮಾಡುತ್ತಾ ನೆಹರೂರವರ ಬರುವಿಕೆಗಾಗಿಯೇ ಕಾದಿದ್ದರು. ಕಡೆಗೆ ಭೋಜನವೂ ಮುಗಿಯುತ್ತ ಬಂತು. ಅತಿಥಿಗಳಿಗೆ ಕಾತುರತೆ ಹೆಚ್ಚಿತು. ಆಗ ಸಿಂಗ್‌ರವರು "ನೆಹರೂ ಮಾತುಕೊಟ್ಟ ಮೇಲೆ ಖಂಡಿತ ಒಂದೇ ಬರುತ್ತಾರೆ." ಎಂದು ಮುಂತಾಗಿ ಸಮಾಧಾನ ಹೇಳಿದುದರಿಂದ ಅತಿಥಿಗಳೆಲ್ಲ ಕಾದು ಕುಳಿತರು. ನೆಹರೂ ಆಗಮನಕ್ಕಾಗಿ ಒಂದು ಸಾವಿರದ ಒಂಬೈನೂರು ಅತಿಥಿಗಳು ಕಾದಿದ್ದರೆಂದು ಒಬ್ಬ ಪತ್ರಿಕಾ ವರದಿಗಾರ ತಿಳಿಸಿದ್ದಾನೆ- ಕಟ್ಟಕಡೆಗೆ ನೆಹರೂ ಬಂದೇ ಬಂದರು. ಬಂದವರೇ ಜಾನ್‌ಡ್ಯೂಯಿಯವರನ್ನು ಕಂಡು ಹಸ್ತ ಲಾಘವ ಕೊಟ್ಟು ಕ್ಷಮಾಪಣೆ ಬೇಡಿದರು. ಅನಂತರ ಜಾನ್ ಡ್ಯೂಯಿಯವರ ಲೇಖನಗಳಿಂದ ತಮಗುಂಟಾದ ಲಾಭ ಮನಶ್ಶಾಂತಿಗಳನ್ನು ವರ್ಣಿಸಿದರು. ಬಳಿಕ ಎಲ್ಲ ಅತಿಥಿಗಳ ಪರಿಚಯ, ಕುಶಲ ಪ್ರಶ್ನೆಗಳಾದುವು. ಕೈಗಾರಿಕಾ ತಕ್ಕ ಪ್ರಚಾರ ಲೀಗಿನ ಡೈರೆಕ್ಟರ್ ಆಗಿದ್ದ ವಿಲಿಯಮ್ ಹ್ಯಾರಿಲೆಫ್ಲರ್‌ರವರು ಆ ದಿನದ ಭೋಜನ ಕೂಟದ ಅಧ್ಯಕ್ಷತೆ ವಹಿಸಿದರು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ನೆಹರೂರವರ ಗುಣಗಾನಮಾಡುತ್ತ ನವಭಾರತದ ಶಿಲ್ಪಿ ಎಂದು ಕೊಂಡಾಡಿದರು.

○ ○ ○

ಅಪಾರ ಗೌರವ

ಈ ರೀತಿ ಪಂಡಿತ್ ನೆಹರೂರವರಿಗೆ ಹೋದೆಡೆಯಲ್ಲೆಲ್ಲಾ ಅದ್ಭುತ ಸ್ವಾಗತ, ಅಪೂರ್ವ ಗೌರವ ದೊರಕುತ್ತಿತ್ತು. ಪಂಡಿತ್ ನೆಹರೂರವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬ ಅಮೆರಿಕನ್ ವಿದ್ಯಾವಂತನೂ ಓದಿದ್ದಾನೆಂದರೆ ಅತಿಶಯೋಕ್ತಿಯಾಗಲಾರದು. ಹೀಗೆ ಓದಿರುವುದರಿಂದಲೇ ಅವರಿಗೆ ನೆಹರೂ ಬಗ್ಗೆ ಅಷ್ಟೊಂದು ಆಸಕ್ತಿ-ಉತ್ಸಾಹ. ಯಾರ ಬಾಯಲ್ಲಿ ನೋಡಿದರೂ—"ಎಷ್ಟು ಸಲ ಜೈಲಿಗೆ ಹೋದವನೀತ! ಹೆಂಡತಿಯನ್ನೂ ದೇಶಸೇವೆಗಾಗಿಯೇ ಕಳೆದುಕೊಂಡನಲ್ಲಾ—" ಎಂಬ ಉದ್ಗಾರವೇ.

ನೆಹರೂರವರ ಪ್ರಾಮಾಣಿಕತೆ, ದೇಶಾಭಿಮಾನ, ಸ್ಫೂರ್ತಿಯುತ ಭಾಷಣ, ವಿಚಾರಪೂರಿತ ಲೇಖನಗಳು, ಸರಸ ಸಂಭಾಷಣೆ, ಅಚ್ಚುಮೆಚ್ಚಾದ ನಡೆವಳಿಕೆ, ಶಿಸ್ತಿನ ಜೀವನ, ಚೊಕ್ಕವಾದ ಉಡುಪುಗಳು, ಜಾತ್ಯಾತೀತ ಮನೋಭಾವ, ವೇದಾಂತಗಳಲ್ಲಿ ಹಾಗೂ ವಿಜ್ಞಾನಗಳಲ್ಲಿ ಸಮಾನ ಗೌರವ—ಇತ್ಯಾದಿ ಸದ್ಗುಣಗಳೇ ಅವರ ಯಶಸ್ಸಿನ ರಹಸ್ಯವೆಂದರೆ—ಅದು ಸತ್ಯವಾದ ಮಾತು.

[ಇಂಡಿಯನ್ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಆಧಾರದ ಮೇಲೆ]

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ ಎಲ್. ಐತಾಳ, ಎಂ ಬಿ ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಾವನ ಸ್ವಾಗತಕ್ಕೆ ಆತಂಕ

(ನಾಲ್ಕನೇ ಪುಟದಿಂದ)

"ಇದೇ ಮಾತನ್ನ ನಿಮ್ಮ ಟೋಪಿಯವರ್ಗೆ ಯಾಕೆ ಅನ್ವಯಿಸಬಾರ್ದು?"

"ಅನ್ವಯಿಸದೆ ಉಂಟೆ ಮತ್ತೆ? ಆದ್ರೂ ನಾನೂ ನೀನೂ ಅಡಿಕೊಂಡ್ರೆ ಕೇಳೋರು ಯಾರು? ಇದೇ ನಾಲ್ಕು ಗೋಡೆ ತಾನೆ? ಸರಕಾರ್ದ ಕತೆ ಹಾಗಲ್ಲ ನೋಡು."

"ಅದು ಹೋಗ್ಲಿ. ಎಡ ಕೆಂಪಿನವ್ರ ಕಥೆ ಹೇಗಂತಾಯ್ತು..."

"ಅವ್ರು ಅರ್ಥೈಸುತ್ತಾರ್ರೆ ಚುನಾವಣಾ ತಂತ್ರಾಂತ ಆದ್ರೂ ಚುನಾವಣೆ ಹಿಡಿದವ್ರು ವಿಶಾಲ ಪ್ರಜಾಸತ್ತಾ ನಾಗರದಲ್ಲಿ ಪಯಣಿಸಬೇಕಲ್ಲಾ!"

"ಒಂದು ಸಮಾಧಾನ ಸದ್ಯ .."

"ಏನದು?"

"ಈಗಲಾದರೂ ನಿಮ್ಮವರಿಗೆ ಇಂತಹ ಒಂದು ತಂಡ ದೇಶದೊಳಗಿದೇಂತ ಅರಿವಾಯ್ತಲ್ಲಾ ..?"

'ಅರಿವು ಮೊದಲೇ ಆದ್ರೂ ಪರಾಂಬರಿಸದೆ ಕ್ರಮ ಕೈಕೊಳ್ಳಲಾಗುತ್ಯೆ? ಈಗ ದೇಶದೊಳಗಿನ ಈ ಪಂಚಮ ದಳದವರ ತಂತ್ರ—ಕುತಂತ್ರ-ಸಂಚು- ಹೊಂಚು—ದೇಶದ್ರೋಹ- ಅನ್ಯ ದೇಶ್ಯನಿಷ್ಠೆ ಎಲ್ಲವೂ ಬಹಿರಂಗವಾಯಿತು."

"ಅರ್ರೆ, ನೀವು ಅದೇನೋ ಅಂದ್ರಲ್ಲಾ ....ಪಂಚ ದಳ ಅಲ್ಲ ."

'ಹೌದ ...'

"ಅಂದ್ರೇನೊಂತ? ಆಗಾಗ ಪೇಪರ‍್ರಗಳಲ್ಲಿ ಬರುತ್ತೆ ಅದು ."

ಅದ್ರ ಅರ್ಥ ?....ಏನೋಪ್ಪ, ಪ್ರಾಯಃ ವರ್ಣಗಳಲ್ಲಿ ಪಂಚಮ ವರ್ಣಂತಂದ್ರೆ ಅಸ್ಪೃಶ್ಯರೊಂತ. ಹಾಗೇ ಈ ಪಂಚಮದಳದವ್ರು ದೇಶನಿಷ್ಠೆಗೆ ದೂರಾದವರೊಂತ ಇರಬೇಕು ."

"ಇದ್ದರೂ ಇರಬಹುದು. ಅಂತೂ ಏನೋಪ್ಪ, ಗೀತಾ ಇನ್ನೇನೇನು ತರುತ್ತೋ?'

"ಸದ್ಯ, ಹೊಸವರ್ಷ ಇತ್ತ ನನ್ನ ಗೃಹಿಣಿ ಪಟ್ಟದಲ್ಲೇ ಆರಂಭವಾಯ್ತು ಅತ್ತ ಮಾವನ ಸ್ವಾಗತಕ್ಕೆ ಆತಂಕವನ್ನೂ ತಂದಿತ್ತು. ..."

ಅಯ್ಯೋ ಪಾಪ, ಸಾಕಿನ್ನು ಮಾತು-ಹೋಗಿ, ನೀವೂ ಊಟಮಾಡಿ, ನನ್ಗೂ ಹಾಕಿ. ನಾಳೆ ಹೇಗೂ ಬರ್ತೀನಲ್ಲಾ ಒಳಮನೆಗೆ?'

"ಹ್ಞ....ಖಂಡ್ತಾಗಿಲ್ಲ ಕಣೇ...."

—ಗೋರಾ

ಪ್ರಕಟಣೆ

ಸ್ವಾಮಿ ಶ್ರೀ ಕೃಷ್ಣ ಚೈತನ್ಯ ಚೈತನ್ಯ ನಿವಾಸ, ಜವಾಹರ ನಗರ, ಖಾರ (ಪೂರ್ವ) ಮುಂಬಯಿ ನಂ, ೫೨, ಇವರು ಈ ಮೂಲಕ ಜಾಹೀರು ಮಾಡುವುದೇನೆಂದ್ರೆ, —

ನಾನು ಕುಂದಾಪುರ ತಾಲ್ಲೂಕು ಪೋಸ್ಟ್, ಶೀರೂರು ಗ್ರಾಮದಲ್ಲಿರುವ ಚಲಿಂಬಿ ಆಸ್ತಿಯ ಮೂಲಕ ಇರುತ್ತೇನೆ ನಾನು ಸದ್ರಿ ಆಸ್ತಿಯನ್ನು ಮಾರಲಿಕ್ಕೆ ಶ್ರೀಯುತ ಸಂಜೀವರಾವ್ ಇವರಿಗೆ ಮುಕ್ತ್ಯಾರ್ ನಾಮೆ ಕೊಟ್ಟಿದ್ದೆ ಆದರೆ ನನಗೆ ಹೀಗೆ ತಿಳಿದು ಬರುತ್ತದೆ ಏನಂದ್ರೆ:— ಸದ್ರಿಯವರು ನನ್ನ ಪರವಾನಗಿ ಇಲ್ಲದ್ದು ಮತ್ತು ನನಗೆ ತಿಳಿಸದೇ ಪರಮೇಶ್ವರ ಹೆಗಡೆ ಇವರಿಗೆ ಟ್ರಸ್ಟ್ ಮಾಡಿ ಕೊಟ್ಟಿದ್ದಾಗಿ ತಿಳಿದು ಬರುತ್ತದೆ, ಆದ್ದರಿಂದ ಆ ಟ್ರಸ್ಟನ್ನು ಇವರ ಮೂಲಕ ನಾನು ರದ್ದು ಪಡಿಸಿದ್ದೇನೆ. ನಾನು ಸದ್ರಿಯವರಿಗೆ ಟ್ರಸ್ಟ್ ಮಾಡಿ ಆಸ್ತಿಯನ್ನು ಕೊಡಲಿಕ್ಕೆ ಮುಕ್ತ್ಯಾರ್‌ನಾಮೆಯನ್ನು ಕೊಡಲಿಲ್ಲವಾದ್ದರಿಂದ ಸದ್ರಿಯವರು ಮಾಡಿದ ಸದ್ರೀ ಟ್ರಸ್ಟನ್ನು ನಾನು ರದ್ದು ಮಾಡಿದ್ದೇನೆ. ನಾನು ಜೀವಂತ ಇರುವಾಗ ನನ್ನ ಕಬೂಲಿ ಶಿವಾಯ ಟ್ರಸ್ಟ್ ಮಾಡಲಿಕ್ಕೆ ಬರುವ ಹಾಗಿಲ್ಲ ಮಾಡುವವಾದರೆ ಅದಕ್ಕೆ ನನ್ನ ಕಬೂಲಿ ಬೇಕಿತ್ತು.

ಆದ್ದರಿಂದ ನಾನು ಈ ಮೂಲಕ ಸದ್ರಿ ಟ್ರಸ್ಟನ್ನು ರದ್ದು ಪಡಿಸಿದ್ದೇನೆ, ಮತ್ತು ಸದ್ರಿ ಆಸ್ತಿಯನ್ನು ನಾಂಟಿಕ್ಕೆ ಇಡುತ್ತೇನೆ, ಯಾರಾದರೂ ಕೊಂಡುಕೊಳ್ಳುವವರಿದ್ದರೆ ಅವರು ನನಗೆ ಪತ್ರ ವ್ಯವಹಾರ ಮಾಡಬೇಕು

ಆಸ್ತಿಗಳು ಕುಂದಾಪುರ ತಾಲೂಕಿನ ನಂ. ಒಂದನೇ ಶೀರೂರು ಗ್ರಾಮದಲ್ಲಿದ್ದು ಮೈಸೂರು ರಾಜ್ಯದ ಬೈಂದೂರು ಸಬ್ ಡಿಸ್ಟ್ರಿಕ್ಟ್ ರಿಜಿಸ್ಟ್ರೇಶನಿಗೂ ದಕ್ಷಿಣ ಕನ್ನಡ ಜಿಲ್ಲಾ ರಿಜಿಸ್ಟ್ರೇಶನಿಗೂ ಒಳಪಟ್ಟಿವೆ. ಅವುಗಳ ವಿವರ:—

ಕ್ರಮ ನಂಬ್ರ	ಸರ್ವೆ ನಂಬ್ರ	ಸಬ್-ಡಿವಿಜನ್ ನಂಬ್ರ	ಕಿಸಾಮ್	ವಿಸ್ತೀರ್ಣ ಎ ಚೆ	ತೀರ್ವೆ ರೂ ಪೈಸಾ
1.	242	1	ಬಾಗಾಯ್ತು	0 17	0=75
2.	242	2	ಬಾಗಾಯ್ತು	0-02	0=06
3.	242	4	ಪುಂಜ	0-45	0=31
4.	383	2	ಪುಂಜ	4 12	3=06

ಮೇಲಿನ ಎಲ್ಲಾ ಆಸ್ತಿಗಳ ಮೇಲಿನ ಮೂಲೀ ಹಕ್ಕು.

ಮಂಗಳೂರಿನ ಟೌನ್‌ಹಾಲಿನ ಉದ್ಘಾಟನೆ

ಕಳೆದ ತಾ. 29ರಂದು ಮಂಗಳೂರಿನಲ್ಲಿ ಸುಮಾರು 10 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲ್ಪಟ್ಟ ಟೌನ್‌ಹಾಲಿನ ಉದ್ಘಾಟನೆಯು ರಾಜ್ಯಪಾಲ ಶ್ರೀ ನಾಗೇಶ್‌ರವರಿಂದ ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ನಗರ ಸಭಾಪತಿ ಶ್ರೀ ಬಿ. ಸೋಮಶೇಖರ ರಾಯರು ಸ್ವಾಗತಿಸಿದರು ಶ್ರೀಮತಿ ಕಲ್ಯಾಣಿ ಆಳ್ವರವರು ಪ್ರಥಮವಾಗಿ ಕಾರ್ಯಕ್ರಮವನ್ನು ಆರಂಭಿಸುವ ಮುನ್ನ ಜ್ಯೋತಿಯನ್ನು ಹಚ್ಚಿದರು. ಶ್ರೀ ನಾಗೇಶ್‌ರವರು ಉದ್ಘಾಟನಾ ಭಾಷಣ ಮಾಡುತ್ತಾ, ದಿನದಿನಕ್ಕೆ ಅಭಿವೃದ್ಧಿಯತ್ತ ಸಾಗುತ್ತಿರುವ ಮಂಗಳೂರು ನಗರದ ಸಾರ್ವಜನಿಕ ಚಟುವಟಿಕೆಗಳಿಗೆ ಇದೊಂದು ಯೋಗ್ಯ ಕೇಂದ್ರವಾಗಲಿ ಎಂದು ಹಾರೈಸಿದರು ಅಧ್ಯಕ್ಷರು ಮಾತಾಡುತ್ತಾ ಮುಂದಿನ ವರ್ಷ ಶತಮಾನೋತ್ಸವವನ್ನು ಆಚರಿಸಲಿರುವ ಮಂಗಳೂರು ನಗರ ಸಭೆಯು ಬೇಗನೇ ತನ್ನದೇ ಆದ ಸ್ವಂತ ಕಟ್ಟಡಕ್ಕಾಗಿ ಪ್ರಯತ್ನಿಸಬೇಕೆಂದರು.

ಈ ಸಂದರ್ಭದಲ್ಲಿ ನಗರ ಸಭೆಯ ಸಿಬ್ಬಂದಿಯಾಗಿರುವ 'ಶ್ರೀಮಾನ್ ಮೈಸೂರ್' ಶ್ರೀ ಕೆ. ಜನಾರ್ಧನ್‌ರವರಿಗೆ ಪ್ರಶಸ್ತಿಯೊಂದನ್ನಿತ್ತಲಾಯಿತು ಅಂತ್ಯದಲ್ಲಿ ಮನರಂಜನಾ ಕಾರ್ಯಕ್ರಮಗಳಿದ್ದುವು.

ಗೀತಾ ಜಯಂತಿ

"ಗೀತೆಯು ಆತ್ಮೋದ್ಧಾರಕ್ಕೆ ಪರಮ ಸಾಧನವೆಂದೂ ಪ್ರತಿಯೊಬ್ಬ ಭಾರತೀಯನೂ ಇದನ್ನು ಓದಿ ತನ್ನ ಬಾಳನ್ನು ಪಾವನಗೊಳಿಸಿಕೊಳ್ಳಬೇಕೆಂದೂ ಶ್ರೀ ಬಿ. ನ ಸುಂದರ ರಾಯರು ಮಂಗಳೂರಿನಲ್ಲಿ ನಡೆದ ಗೀತಾ ಜಯಂತಿ ಉತ್ಸವವನ್ನು ಉದ್ಘಾಟಿಸುತ್ತಾ ತಿಳಿಸಿದರು

ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಆರ್ ಆಚಾರ್ಯರು ವಹಿಸಿದ್ದರು ಸಂದೇಶಗಳನ್ನು ಯು. ಎಸ್. ರಾಮಚಂದ್ರ ರಾಯರು ಓದಿದರು ಭಜನೆ, ಸಂಗೀತ ಗೋಷ್ಠಿ ಲಾದ ಕಾರ್ಯಕ್ರಮಗಳೂ ನಡೆದುವು. ಕಾರ್ಯದರ್ಶಿಗಳಾದ ಶ್ರೀ ಕೂಳೂರು ವಾಸುದೇವ ಕಾಮತರು ಸ್ವಾಗತಿಸಿದರಲ್ಲದೆ, ಕೊನೆಯಲ್ಲಿ ವಂದನೆಗಳನ್ನರ್ಪಿಸಿದರು

READ &
ADVERTISE IN
NAVAYUGA WEEKLY

ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಪಣಂಬೂರು ಗ್ರಾಮ ನಿವಾಸಿಗಳ ಅನ್ನ ಸತ್ಯಾಗ್ರಹ

ಕಳೆದ ತಾ. ೨೧-೧೨-೬೪ರಂದು ಪಣಂಬೂರು, ಬೈಕಂಪಾಡಿ, ತಣ್ಣೀರುಬಾವಿ, ಮತ್ತು ಪಡುಕೋಡಿ ಗ್ರಾಮಗಳ ಸುಮಾರು ೭,೦೦೦ ಜನರಿಂದ ಕೂಡಿದ ಶಾಂತ ಪಾದಯಾತ್ರೆಯು ಬೈಕಂಪಾಡಿಯಿಂದ ಮಂಗಳೂರಿಗೆ ಸಾಗಿತು. ಬಂದರಕ್ಕಾಗಿ ಸರಕಾರ ವಶಪಡಿಸಿಕೊಳ್ಳಬೇಕೆಂದು ನಿರ್ಧರಿಸಿದ ೧೫೦೦ ಎಕರೆ ಭೂಮಿಯನ್ನು ಬಿಟ್ಟುಕೊಡಲಾರೆವೆಂಬ ಪ್ರತಿಭಟನೆಯ ಸಂಕೇತವಾಗಿ ಈ ಶಾಂತ ಪಾದಯಾತ್ರೆ ಹಾಗೂ ಅನ್ನ ಸತ್ಯಾಗ್ರಹ ನಡೆದಿತ್ತು. ಹೆಂಗಸರು, ಮಕ್ಕಳು, ಮುದುಕರು, ಮುದುಕಿಯರಿಂದ ಕೂಡಿದ್ದ ಈ ಮೆರವಣಿಗೆಯ ದೃಶ್ಯ ಮಂಗಳೂರು ತಲಪುವ ಹೊತ್ತಿಗೆ ಕಣ್ಣೀರು ಬರಿಸುವಂತಿತ್ತು. ಆಯಾಸದಿಂದ ಕಂಗೆಟ್ಟು ದಾರಿಯಲ್ಲಿ ಮೂರ್ಛೆಗೊಂಡವರು ಹಲವರು; ಬಿಸಿಲಿನ ತಾಪದಿಂದ ಕಂಗಾಲಾದವರು ಇನ್ನು ಕೆಲವರು; ಮಕ್ಕಳನ್ನು ಹೊತ್ತು ಸಾಗುವಾಗ ಸೋತು ಸುಣ್ಣವಾದವರು ಮತ್ತು ಕೆಲವರು. ಕರುಳು ಕರಗಿಸುವ ಈ ಬಡ ಜನರ ಶಾಂತ ಮೆರವಣಿಗೆಯನ್ನು ಮಂಗಳೂರಲ್ಲಿ ಕಂಡ ಗುಜರಾತಿ ವೃದ್ಧೆಯೊಬ್ಬರ ಹೃದಯ ಕರಗಿ ಒತ್ತಾಯ ಪೂರ್ವಕ ಈ ಜನರಿಗೆ ಬೆಲ್ಲನೀರುಗಳನ್ನು ಹಂಚಿದರು!

ಮಂಗಳೂರು ಜಿಲ್ಲಾಧಿಕಾರಿಗಳ ಕಛೇರಿಯ ಮುಂದುಗಡೆ ಸತ್ಯಾಗ್ರಹಿಗಳು ಶಾಂತ ರೀತಿಯಲ್ಲಿ ಸತ್ಯಾಗ್ರಹ ಮಾಡಿದರು. ಜಿಲ್ಲಾಧಿಕಾರಿಗಳು ಆ ದಿನ ಕಛೇರಿಗೆ ಬಾರದಿದ್ದುದರಿಂದ ಅವರ ಸಹಾಯಕರಿಗೆ ಒಂದು ಮನವಿಯನ್ನು ಅರ್ಪಿಸಲಾಯಿತು. ಆ ದಿನ ಸಂಜೆ ಮಂಗಳೂರು ನೆಹರೂ ಮೈದಾನದಲ್ಲಿ ಶ್ರೀ॥ ಬಿ. ಎಸ್. ಐತಾಳರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಗ್ರಾಮ ರಕ್ಷಣಾ ಸಮಿತಿಯ ಕಾರ್ಯದರ್ಶಿ ಶ್ರೀ॥ ಕೆ. ಸಿ. ಶೆಟ್ಟಿಯವರು ಸಮಿತಿಯ ಚಟುವಟಿಕೆಗಳನ್ನು ವಿವರಿಸುವ ಒಂದು ಸಂಕ್ಷಿಪ್ತ ವರದಿಯನ್ನು ಮುಂದಿರಿಸಿ, ಈ ಹೋರಾಟದ ಉದ್ದೇಶ ಹಾಗೂ ನಿಲುವುಗಳನ್ನು ವಿವರಿಸಿದರು.

ಶ್ರೀ। ಪಿ. ವಿ. ಐತಾಳರು ಸರಕಾರವು ಕೇವಲ ವಾಣಿಜ್ಯ ಹಾಗೂ ಉದ್ದಿಮೆದಾರರ ಹಿತಕ್ಕಾಗಿ ಈಗ ೧೫೦೦ ಎಕರೆ ಭೂಮಿಯನ್ನು ಬಂದರದ ಹೆಸರಲ್ಲಿ ವಶಪಡಿಸಿಕೊಳ್ಳುವುದರ ಔಚಿತ್ಯವನ್ನು ಪ್ರಶ್ನಿಸಿ, ಈಗಾಗಲೇ ಬಂದರದ ಹೆಸರಲ್ಲಿ ನಿರ್ಗತಿಕರಾದ ನಿವಾಸಿಗಳನ್ನು ಸರಕಾರ ಕಾಣುತ್ತಿರುವ ಕ್ರಮವನ್ನು ವಿವರಿಸಿ, ಅವರಿಗೆ ಕೊಡಲ್ಪಟ್ಟ ಆಶ್ವಾಸನೆಗಳನ್ನು ಸರಕಾರವು ಪೂರೈಸದಿದ್ದುದನ್ನು ಖಂಡಿಸಿದರು. ಡಾ॥ ಸಂಜೀವನಾಥ ಐಕಳ್, ಎಂ. ಎಲ್. ಎ., ಹಾಗೂ ಶ್ರೀ। ಡಿ. ಮೋಹನರಾವ್‌ರವರು ಸರಕಾರದ ಈ ಯೋಜನೆಯನ್ನು ಖಂಡಿಸಿ, ಸರಕಾರವು ಈ ಭಾಗದ ೧೫೦೦೦ ಜನತೆಯ ಮತಗಳನ್ನು ಲಕ್ಷ್ಯಕ್ಕೆ ತಾರದೆ ಪ್ರಜಾಪ್ರಭುತ್ವದ ಅಣಕ ಮಾಡುತ್ತಿದೆ ಎಂದರು.

ಅಧ್ಯಕ್ಷ ಸ್ಥಾನದಿಂದ ಶ್ರೀ॥ ಐತಾಳರು ಮಾತನಾಡುತ್ತಾ, ಸರಕಾರವು ಗ್ರಾಮ ನಿವಾಸಿಗಳಿಗೆ ಕೊಟ್ಟ ಆಶ್ವಾಸನೆಗಳೆಲ್ಲವೂ ಇಲಾಖೆಗಳ ಕಾರ್ಯ ಪದ್ಧತಿಯ ನೆಪದಲ್ಲಿ ಪೂರೈಕೆಯಾಗದಿರುವುದನ್ನು ವಿವರಿಸಿ, ಮನೆಮಾರು ಕಳೆದುಕೊಂಡ ಜನತೆಯ ಮನೋಭಾವನೆಯನ್ನು ಸರಕಾರ ಅರ್ಥ ಮಾಡಿಕೊಳ್ಳಬೇಕೆಂದರು. ಶ್ರೀ ಬಿ. ಎ. ಖಾದರ್‌ರವರು ಧನ್ಯವಾದ ಸಮರ್ಪಣೆ ಮಾಡಿದರು.

ಆ ದಿನ ದಕ್ಷಿಣ ಕನ್ನಡದ ೬ಂ ಗ್ರಾಮಗಳ ಮೀನುಗಾರರು, ಪಣಂಬೂರು, ಬೈಕಂಪಾಡಿಗಳ ಗ್ರಾಮಸ್ಥರ ಚಳವಳಿಗೆ ಸಹಾನುಭೂತಿಯನ್ನು ತೋರಿಸುವ ಸಲುವಾಗಿ, ಕೆಲಸಕ್ಕೆ ಹೋಗದೆ ಹರತಾಳವನ್ನಾಚರಿಸಿದ್ದರು. ಅಲ್ಲದೆ ತಾ. ೨೭-೧೨-೬೪ರಂದು ಉಳ್ಳಾಲದಲ್ಲಿ ಶ್ರೀ ಪ್ರಿ. ನಿವಾಸ ಕೋಟ್ಯಾನರ ಅಧ್ಯಕ್ಷತೆಯಲ್ಲಿ ಸೇರಿದ್ದ ದಕ್ಷಿಣ ಕನ್ನಡ ಜಿಲ್ಲಾ ಮೊಗವೀರರ ಮಹಾಸಭೆಯ ಅಧಿವೇಶನದಲ್ಲಿ ಸರಕಾರವು ಹೊಸತಾಗಿ ೧೫೦೦ ಎಕರೆ ಭೂಮಿಯನ್ನು ವಶಪಡಿಸುವ ಕುರಿತು ಹೊರಡಿಸಿರುವ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆನ್ನುವ ಹಾಗೂ ಈ ಗ್ರಾಮಸ್ಥರ ನ್ಯಾಯಯುತವಾದ ಹೋರಾಟಕ್ಕೆ ಬೆಂಬಲವನ್ನು ವ್ಯಕ್ತಪಡಿಸುವ ನಿರ್ಣಯಗಳು ಕೈಗೊಳ್ಳಲ್ಪಟ್ಟವು.

ಇಷ್ಟು ಮಾತ್ರವಲ್ಲದೆ ದಕ್ಷಿಣ ಕನ್ನಡದ ಮುಸ್ಲಿಂ ಜಮಾಯತ್, ಮಂಗಳೂರು ಇದರ ಸಭೆ ಕೂಡಾ ಜರಗಿ, ಪಣಂಬೂರು ಗ್ರಾಮಸ್ಥರ ಹೋರಾಟಕ್ಕೆ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು.

ಈ ವರೆಗಿನ ಕಾರ್ಯಕ್ರಮಗಳ ಕುರಿತು ವಿಮರ್ಶಿಸಿ, ಇದಕ್ಕೆ ಬಂದ ಪ್ರತಿಕ್ರಿಯೆಯನ್ನು ಪರಿಶೀಲಿಸಿ ಮುಂದಿನ ಕಾರ್ಯಕ್ರಮಗಳ ಕುರಿತು ಸಮಾಲೋಚಿಸಲು ಪಣಂಬೂರೇ ಮೊದಲಾದ ನಾಲ್ಕು ಗ್ರಾಮಸ್ಥರ ಸಭೆಯು ಇದೇ ಬರುವ ತಾ. ೯-೧-೬೫ರಂದು ಜರಗುವುದೆಂದು ತಿಳಿದು ಬರುತ್ತದೆ.

ತಜ್ಞರ ಸಮಿತಿಯ ಸಂದರ್ಶನೆ

ಕೇಂದ್ರ ಸರಕಾರದ ಬಂದರುಗಳ ತಜ್ಞರ ಸಮಿತಿಯ ಅಧ್ಯಕ್ಷರಾದ ಶ್ರೀ॥ ಶ್ರೀನಿವಾಸನ್ನರು ಹಾಗೂ ಇತರ ಸದಸ್ಯರು ಕಳೆದ ತಾ. ೨೩-೧೨-೬೪ರಂದು ಪಣಂಬೂರು ಹಾಗೂ ಆಸುಪಾಸಿನ ಗ್ರಾಮಗಳನ್ನು ಸಂದರ್ಶಿಸಿದರು. ಅವರು ಮಂಗಳೂರು ಪಣಂಬೂರು ರೈಲ್ವೆ ಮಾರ್ಗದ ಆಸುಪಾಸಿನಲ್ಲಿ ಕೈಗಾರಿಕಾ ನಿವೇಶನಕ್ಕೆ ತಕ್ಕುದಾದ ಇತರ ಸ್ಥಳಗಳ ಕುರಿತು ಪರಿಶೀಲನೆ ನಡೆಸಿದರೆಂದು ವರದಿ. ಅವರ ವರದಿ ಹಾಗೂ ಶಿಫಾರಸುಗಳೇನೆಂದು ಈವರೆಗೆ ತಿಳಿದು ಬಂದಿಲ್ಲ.

ವಿದಾಯ ಸತ್ಕಾರ

ಬೈಕಂಪಾಡಿ, ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ತಾ. 15-12-64ರಂದು ನಿವೃತ್ತರಾದ ಜನಾಬ್ ಅಬ್ದುಲ್ ಖಾದರ್ ಸಾಹೇಬರಿಗೆ ವಿದಾಯ ಸತ್ಕಾರವು ಜನಾಬ್ ಮುಹಮ್ಮದ್ ಮಾಲವಿ ಇವರ ಅಧ್ಯಕ್ಷತೆಯಲ್ಲಿ ತಾ. 3-1-65ರಂದು ಜರಗಿತು. ಶಾಲೆಯ ಮುಖ್ಯೋಪಾಧ್ಯಾಯ ಎಚ್. ರಫೀಕ್ ಅಹಮ್ಮದರು ಸ್ವಾಗತಿಸಿದರು. ಶ್ರೀಗಳಾದ ಪಿ. ವಾಸುದೇವ ಉಪಾಧ್ಯಾಯ, ಎಸ್. ಸಾಧು, ಕೆ. ಚಂದ್ರಶೇಖರ ಶೆಟ್ಟಿ, ಎಡ್ವೋಕೇಟ್, ಬಿ. ಎ. ಕಾದರ್ ಇವರು ಮಾತನಾಡಿ ಅತಿಥಿ ಅಬ್ದುಲ್ ಖಾದರರು ಶಾಲೆಯ ಪ್ರಗತಿಗಾಗಿ ಪಟ್ಟ ಪರಿಶ್ರಮ, ಶಾಲಾ ಕಟ್ಟಡ, ರಸ್ತೆ ನಿರ್ಮಾಣಕ್ಕಾಗಿ ಅವರು ವಹಿಸಿದ ಪಾತ್ರ, ಅವರ ಜನಪ್ರಿಯತೆಗಳ ಕುರಿತು ಭಾಷಣ ಮಾಡಿದರು. ಅಬ್ದುಲ್ ಖಾದರರು ಉತ್ತರಿಸುತ್ತ ಸ್ಥಳೀಯ ಜನರ ಸಹಕಾರದಿಂದ ತನ್ನ ಕರ್ತವ್ಯ ನಿರ್ವಹಿಸಲು ಸಾಧ್ಯವಾಯಿತೆಂದು ತನ್ನನ್ನು ಸತ್ಕರಿಸಿದ ಬಗ್ಗೆ ಕೃತಜ್ಞತೆ ಸೂಚಿಸಿದರು. ಅಧ್ಯಕ್ಷರು ಅತಿಥಿಗಳ ವ್ಯಕ್ತಿತ್ವವನ್ನು ಕೊಂಡಾಡಿ ಮಾತನಾಡಿದ ಮೇಲೆ ಉಪಾಹಾರ ಮುಖ್ಯೋಪಾಧ್ಯಾಯರಿಂದ ಧನ್ಯವಾದ, ಗ್ರೂಪ್ ಫೋಟೋಗಳಿಂದ ಸಭೆ ಅಂತ್ಯವಾಯಿತು.

ಸ್ಪಷ್ಟೀಕರಣ

ಕಳೆದ ತಿಂಗಳಲ್ಲಿ ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ನಮ್ಮ ಜಿಲ್ಲೆಯನ್ನು ಸಂದರ್ಶಿಸಿದಾಗ ಪಣಂಬೂರು ಬೈಕಂಪಾಡಿ ಗ್ರಾಮರಕ್ಷಣಾ ಸಮಿತಿಯವರು ಅವರ ಸ್ವಾಗತಕ್ಕೆ ಸಿದ್ಧತೆ ನಡೆಸಿದ್ದರೆಂದೂ, ಸಾರ್ವಜನಿಕ ಸಭೆಗಾಗಿ ತಕ್ಕ ಏರ್ಪಾಡು ನಡೆಸಿ ಅವರ ಬರವನ್ನು ನಿರೀಕ್ಷಿಸುತಿದ್ದರೆಂದೂ ತಿಳಿದು ಬರುತ್ತದೆ. ಈ ಸಂದರ್ಭದಲ್ಲಿ ಪತ್ರಿಕಾ ಪ್ರತಿನಿಧಿಗಳು, ಪೋಲೀಸು ಸಿಬ್ಬಂದಿಯವರು ಹಾಗೂ ಇತರರೂ ಗ್ರಾಮರಕ್ಷಣಾ ಸಮಿತಿಯ ಆಫೀಸಿನ ಬಳಿ ಕಾದಿದ್ದರೆಂದೂ, ಆದರೆ ಯಾರೋ ಆಸಕ್ತ ವರ್ಗದವರು, ಮುಖ್ಯ ಮಂತ್ರಿಗಳಿಗೆ ತಪ್ಪು ತಿಳುವಳಿಕೆ ಕೊಟ್ಟು, ಸಭೆ ಜರಗುವುದಿಲ್ಲ ಎಂಬ ಭಾವನೆ ಹುಟ್ಟಿಸಿದರೆಂದೂ ತಿಳಿದುಬರುತ್ತದೆ. ಪಣಂಬೂರು, ಬೈಕಂಪಾಡಿ ಗ್ರಾಮಸ್ಥರು ಪ್ರತಿಭಟನಾರ್ಥ ಈ ರೀತಿ ಮುಖ್ಯಮಂತ್ರಿಗಳನ್ನು ಕಾಣಲಿಲ್ಲ ಎಂಬ ವಾದವು ಸತ್ವಹೀನವಾದುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಶ್ರೀ ಟಿ. ಎ. ಪೈಯವರಿಗೆ ವಿದಾಯ ಸತ್ಕಾರ

ಕೆಲವು ಕಾಲ ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಸ್ಥಾಪಕ ಅಧ್ಯಕ್ಷರಾಗಿದ್ದು, ಯೋಗ್ಯ ಮಾರ್ಗದರ್ಶನದಿಂದ ಮುನ್ನಡೆಸಿ, ಇದೀಗ ಆಹಾರ ಕೊರ್ಪೊರೇಶನ್ ಅಧ್ಯಕ್ಷರಾಗಿ ಹೋಗಲಿರುವ ಶ್ರೀ ಟಿ. ಎ. ಪೈಯವರನ್ನೂ ಸಂಘದ ನೂತನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಎಂ. ಮಧ್ವರಾಜ್, ಯಂ. ಯಲ್. ಎ.ಯವರನ್ನೂ ಗೌರವಿಸಿ ಸತ್ಕರಿಸುವ ಸಲುವಾಗಿ ಸಂಘದ ವಿಶೇಷ ಮಹಾಸಭೆಯೊಂದು ತಾ. 30ರಂದು ಮಣಿಪಾಲ ಹೈಸ್ಕೂಲಿನಲ್ಲಿ ಜರಗಿತು. ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ಯಸ್. ಮುಕುಂದರಾವ್, ಯಂ. ಯಲ್. ಸಿ.ಯವರು ವಹಿಸಿದ್ದರು. ಕಾರ್ಯದರ್ಶಿ ಶ್ರೀ ಕೊರು ಕಾಲು ಗಣಪಯ್ಯ ಶೆಟ್ಟರು ಸ್ವಾಗತಿಸಿದರು.

ಸಂಘದ ಉಪಾಧ್ಯಕ್ಷ ರೆ। ಫಾ। ಬಿ. ಯಸ್. ಗಿ ಸೋಜರು ಶ್ರೀ ಟಿ ಎ. ಪೈಯವರಿಗೆ ಮಾನಪತ್ರವನ್ನು ಅರ್ಪಿಸಿ ಮುಂದಕ್ಕೂ ಅವರ ಸಹಕಾರ ಕೋರಿದರು.

ಶ್ರೀ ಟಿ ಎ ಪೈಯವರು ತನ್ನನ್ನು ಗೌರವಿಸಿದ ಬಗ್ಗೆ ಕೃತಜ್ಞತೆಯನ್ನು ಸೂಚಿಸುತ್ತಾ ಆಹಾರ ಅಭಾವದ ಈ ಸಂದಿಗ್ಧ ಸಮಯದಲ್ಲಿ ಆಹಾರ ಸಮಿತಿಯ ಅಧ್ಯಕ್ಷನಾಗಬೇಕೆಂದು ಕೇಳಿಕೊಂಡಾಗ ತಾನು ಸೇವಾ ಭಾವನೆಯಿಂದ ಒಪ್ಪಿಕೊಂಡೆನೆಂದೂ, ಈ ಮಹಾ ಜವಾಬ್ದಾರಿಯನ್ನು ನಿರ್ವಹಿಸುವಾಗ ಯಾವ ಹಂಗು, ದಾಕ್ಷಿಣ್ಯಗಳಿಗೂ ತಾನು ಒಳಗಾಗಬಾರದೆಂಬ ಉದ್ದೇಶದಿಂದ ವೇತನವನ್ನು ಕೂಡಾ ನಿರಾಕರಿಸಿರುವೆನೆಂದೂ ತಿಳಿಸಿದರು. ಅವರು ಮುಂದುವರಿಯುತ್ತಾ ಆಹಾರದ ಮಟ್ಟಿಗೆ ಇನ್ನಾದರೂ ಸ್ವಾವಲಂಬಿಗಳಾಗದೆ ಗತ್ಯಂತರವಿಲ್ಲವೆಂದೂ, ಆಹಾರಧಾನ್ಯಗಳು ವ್ಯರ್ಥ ಪೋಲಾಗುವುದನ್ನು ನಿಲ್ಲಿಸಿ, ಹೆಚ್ಚು ಆಹಾರ ಬೆಳೆಸುವ ಚಳವಳವನ್ನು ಹಳ್ಳಿಹಳ್ಳಿಗಳಲೂ ಹಬ್ಬಿಸಬೇಕೆಂದೂ, ಜೊತೆಯಲ್ಲೇ ಕುಟುಂಬ ಯೋಜನೆಯ ಕಡೆಗೆ ಗಮನ ಹರಿಸಬೇಕೆಂದೂ ಹೇಳಿದುದಲ್ಲದೆ, ಈ ನಿಟ್ಟಿನಲ್ಲಿ ಶಾಲಾ ಅಧ್ಯಾಪಕರಿಂದಲೂ, ಆಡಳಿತೆಯವರಿಂದಲೂ ತಾನು ಹೆಚ್ಚಿನ ಸಹಕಾರವನ್ನು ನಿರೀಕ್ಷಿಸುತ್ತೇನೆಂದೂ, ತನ್ನ ಬೆಂಬಲವು ಅವರಿಗೆ ಸದಾ ಇದ್ದೇ ಇದೆ ಎಂದೂ ಹೇಳಿದರು.

ಶ್ರೀ ಯಂ. ಮಧ್ವರಾಜ, ಯಂ. ಯಲ್. ಎ.ಯವರು ಮಾತನಾಡುತ್ತಾ ಶ್ರೀ ಟಿ. ಎ. ಪೈಯವರು ತನ್ನ ರಾಜಕೀಯ ಗುರುವೆಂದೂ, ಅವರ ಮಾರ್ಗದರ್ಶನದಿಂದ ತನ್ನ ವ್ಯಕ್ತಿತ್ವವು ವಿಕಾಸವಾಯಿತೆಂದೂ ಹೇಳಿ, ಅವರು ಹೊತ್ತಿರುವ ಮಹಾ ಜವಾಬ್ದಾರಿಯಲ್ಲಿ ಯಶಸ್ವಿಗಳಾಗಿ ಅವರು ಭಾರತದ ಉಜ್ವಲ ರತ್ನವಾಗಿ ಬೆಳಗಲೆಂದು ಹಾರೈಸಿದುದಲ್ಲದೆ, ಸರಕಾರದಿಂದ ಶಾಲಾ ಆಡಳಿತದಾರರಿಗೆ ಉಂಟಾದ ಕಷ್ಟಗಳನ್ನು ನಿವಾರಿಸಲು ತನ್ನ ಕೈಲಾದ ಸಹಾಯ ಮಾಡುವುದಾಗಿ ಆಶ್ವಾಸನೆಯಿತ್ತರು.

ಅಧ್ಯಕ್ಷಸ್ಥಾನದಿಂದ ಶ್ರೀ ಎಸ್. ಮುಕುಂದರಾಯರು ಮಾತನಾಡುತ್ತಾ ಶ್ರೀ ಟಿ.ಎ. ಪೈಯವರನ್ನು ಗೌರವಿಸುವುದೆಂದರೆ ನಮ್ಮನ್ನೇ ಗೌರವಿಸಿಕೊಂಡಂತೆ ಎಂದೂ, ರಾಜಕೀಯ, ಸಾಮಾಜಿಕ ಹಾಗೂ ಶೈಕ್ಷಣಿಕ ರಂಗಗಳಲ್ಲಿ ಶ್ರೀ ಪೈಯವರು ವಹಿಸಿದ ಪಾತ್ರ ಅಮೋಘವಾಗಿದೆ ಎಂದೂ ಹೇಳಿದರು. ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರು ಧನ್ಯವಾದ ಅರ್ಪಿಸಿದರು.

ತಿದ್ದುಪಡಿ

ಕಳೆದ ಸಂಚಿಕೆಯ 11ನೆ ಪುಟದಲ್ಲಿ ಪ್ರಕಟವಾದ ಉಡುಪಿ ಮು. ಕೋರ್ಟಿನ, 16ನೇ ಪುಟದಲ್ಲಿ ಪ್ರಕಟವಾದ ಉಡುಪಿ ಸಿವಿಲ್ ಜಡ್ಜರ ಕೋರ್ಟಿನ ನೋಟೀಸುಗಳಲ್ಲಿ ಕೆಲವು ಪ್ರತಿಗಳಲ್ಲಿ ಎಡ್ವಕೇಟ್ M. V. Kamath ಎಂದು ತಪ್ಪಾಗಿ ಬಿದ್ದಿದೆ. ಅದು N. V. Kamath ಎಂದಾಗಬೇಕು. (ಸಂ. ಸ.)

ಚಂದಾಹಣ ಬಾಕಿ ಇರುವವರು ದಯಮಾಡಿ ಬೇಗನೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು

ರಿಜಿಸ್ಟರ್ಡ್ ಆಫೀಸು:-

ಲೈಟ್ ಹಾಉಸ್ ಹಿಲ್ ರೋಡು, ಮಂಗಳೂರು —3

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾನೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ—ವ— ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 9.1.65ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 11-1-1965ಕ್ಕೆ ಅಪರಾಹ್ನ ಗಂಟೆ 3½ಗೆ ಸರಿಯಾಗಿ ಬೇಂಕಿನ ಸ್ಥಳದಲ್ಲಿ ಬಹಿರಂಗ ಹರಾಜು ಮಾಡಲಾದೀತು. ಯಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ-ಯಾ-ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು-ವ-ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ನಂಬ್ರ	ಸಾಲದ ಜಂಜಾ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ತಾ. 31.12.64ರ ವರೆಗಿನ ಅಸಲು ಬಡ್ಡಿ ಕೂಡಾ
1.	62/62	ಎಮ್. ಬಿ. ನೂರ್ ಮಹಮ್ಮದ್, ಇದಿನಬ್ಬರ ಮಗ, ಬೊಟ್ಟು ಮನೆ, ಪೋಸ್ಟು ಮೂಳೂರು.	791=55
2.	584/62	ಗಾವಿನ ಸಾಮಿಯೆಲ್ ಕುಂದರ್, ಯೋಕೋಬ ಕುಂದರರ ಮಗ, ಕಳತ್ತೂರು ಗ್ರಾಮ, ಪೋಸ್ಟು ಕಳತ್ತೂರು	63=10
3.	1270/62	ಪೊನ್ನಯ ಕುಂದರ್, ಅಣ್ಣು ಸಾಲಿಯಾನರ ಮಗ, ಪೊಲಿಪು ಪಟ್ಣ "ಭಾರತ ಭವನ" ಪೋಸ್ಟು ಕಾಪು.	97=16
4.	1384/62	ಮೋನಪ್ಪ ಪಿ. ಕಾಂಚನ್, ಹೆಗ್ಗು ಕೋಟ್ಯಾನರ ಮಗ, ಪಡು ಗ್ರಾಮ, ಪೊಲಿಪು, ಪೋಸ್ಟು ಕಾಪು.	449=80

ಸ್ಥಳ: ಕಾಪು
ತಾ. 4-1-65

K. Bhojaraja Hegde
ಮೆನೇಜರ್

ಮಕ್ಕಳ ಕಥೆಗಳು

ಮೊಲ ಮೊಲನೇ

ಒಮ್ಮೆ ಹುಲಿ ಚೆನ್ನಾಗಿ ನಿದ್ರಿಸುತ್ತಿತ್ತು. ಅದರ ಬಳಿಗೆ ಹಾವು ಹೋಗುತ್ತಿದ್ದುದನ್ನು ಮೊಲ ಕಂಡಿತು.

"ಹಾವು ಕಚ್ಚುವುದಕ್ಕೆ ಮೊದಲೇ ಹುಲಿಯನ್ನು ಎಬ್ಬಿಸುವುದು ಒಳ್ಳೆಯದು"—ಎಂದು ನಿರ್ಧರಿಸಿ, ಅತಿ ಭೀತಿಯಿಂದ ನಡುಗುತ್ತಲೇ ಮೊಲವು ಹುಲಿಯ ಬಾಲವನ್ನು ಬಲವಾಗಿ ಎಳೆಯಿತು.

"ನನ್ನನ್ನೆಬ್ಬಿಸುವ ಧೈರ್ಯ ಯಾರಿಗೆ ಬಂತು?"—ಎಂದು ಹುಲಿ ಆರ್ಭಟಿಸಿತು.

"ಕ್ಷಮಿಸಿ, ನಾನೇ ಎಬ್ಬಿಸಿದ್ದು. ಆ ಕಡೆ ನೋಡಿ. ಹಾವು ಬರುತ್ತಿದೆ. ಹುಷಾರಾಗಿರಿ"—ಎಂದು ಮೊಲವು ಮೆಲ್ಲನೆ ಮೆಲು ನುಡಿ ನುಡಿಯಿತು.

ಹುಲಿಯು ಹಿಂದಿರುಗಿ ನೋಡಿತು. ಹಾವನ್ನು ಕಂಡು, ಪಕ್ಕಕ್ಕೆ ಕುಪ್ಪಳಿಸಿತು.

"ಎಲ್ಲಿ, ನಿನ್ನ ಪಂಜಾ ಈ ಕಡೆ ಬಾಚು! ನಿನ್ನ ಧೈರ್ಯ, ಘನತೆ ನಾನು ಮೆಚ್ಚಿದೆ. ಇನ್ನು ಮೇಲೆ ನಾವು ಸ್ನೇಹಿತರಾಗಿ ಇರೋಣ. ನನ್ನ ರಕ್ಷಣೆ ನಿನಗಿದೆ ನೀನು ಯಾರಿಗೂ ಹೆದರಬೇಡ ಇನ್ನು"-ಎಂದಿತು ಹುಲಿ.

ಮೊಲಕ್ಕೆ ಈ ಮಾತಿನಿಂದ ತುಂಬ ಸಂತೋಷವಾಯಿತು. ಆದರೆ ಪೊದೆಯಲ್ಲಿ ನರಿಯು ಇಣಿಕಿ ನೋಡುತ್ತಿದ್ದುದನ್ನು ಕಂಡು, ಒಡನೆಯೇ ಗಾಬರಿಗೊಂಡು ಮೊಲವು ಕಾಲಿಗೆ ಬುದ್ಧಿ ಹೇಳಿತು.

ಇದನ್ನು ಕಂಡು ಹುಲಿಗೆ ಆಶ್ಚರ್ಯವಾಯಿತು. ಬೆರಗಾಗಿ ಅದು ತಲೆಯಲ್ಲಾಡಿಸಿತು. ಅಂದು ಸಂಜೆಗೆ ಮಾತ್ರವೇ ಅದು ಮೊಲವನ್ನು ಕಾಣುವುದು ಸಾಧ್ಯವಾಯಿತು.

"ಏಕೆ ಹಾಗೆ ಓಡಿಹೋದೆ ನೀನು?"—ಎಂದು ಕೇಳಿತು ಹುಲಿ.

"ನಾನು ನರಿ ನೋಡಿದೆ"

"ಆದರೆ ನಾನು ಹತ್ತಿರವಿದ್ದೆನಲ್ಲ. ನಿನ್ನನ್ನು ರಕ್ಷಿಸುವುದಾಗಿ ನಾನು ಮಾತು ಕೊಟ್ಟಿರಲಿಲ್ಲವೇ ನಿನಗೆ?"

"ಹೌದು, ಮಾತುಕೊಟ್ಟದ್ದಿರಿ ...

"ಬಹುಶಃ ನನ್ನ ಮಾತು ನೀನು ನಂಬುತ್ತಿಲ್ಲವೆನಿಸುತ್ತೆ".

"ನಂಬುತ್ತೇನೆ"

"ಪ್ರಾಯಶಃ ನನಗಿಂತಲೂ ನರಿಯೇ ಹೆಚ್ಚು ಬಲಶಾಲಿಯೆಂದು ನೀನು ನಂಬುತ್ತಿರಬಹುದಲ್ಲವೇ?"

'ಇಲ್ಲ, ಇಲ್ಲ. ನೀವೇ ಹೆಚ್ಚು ಶಕ್ತಿವಂತರು"!

"ಹಾಗಾದರೆ ನೀನು ಓಡಿಹೋದದ್ದೇಕೆ?"

"ಅದು ನಿಯಮಾಧೀನ ನಿರಿಚ್ಛಾ—ಪ್ರತಿಕ್ರಿಯೆ!" ಎಂದು ಮೊಲವು ಕಿರಿಕಿರಿಯಿಂದ ಒಪ್ಪಿಕೊಂಡಿತು.

ಥೂ - - - — ನಿನ!

ಒಮ್ಮೆ ಆನೆಯು ನಿಧಾನವಾಗಿ, ಪ್ರಶಾಂತವಾಗಿ, ಸೊಂಡಿಲನ್ನು ಅಲ್ಲಾಡಿಸುತ್ತ ಸಾಗಿ ನಡೆಯುತ್ತಿತ್ತು. ಮೊಲವು ತನ್ನ ಹಿಂದೆ ಅಡಗಿಕೊಂಡು ಬರುತ್ತಿರುವುದನ್ನು ಒಡನೆಯೇ ಕಂಡಿತು.

ಮೊಲದ ನಡತೆಯಿಂದ ಆನೆಗೆ ಆಶ್ಚರ್ಯವಾಯಿತು. ಅದು ಬಹುಶಃ ಹುಚ್ಚಾಗಿರಬಹುದೆಂದು ನಿರ್ಧರಿಸಿ ಆನೆಯು ಜೋರಾಗಿ ನಡೆಯತೊಡಗಿತು, ಮೊಲವೂ ಅಷ್ಟೇ ವೇಗವಾಗಿ ಆನೆಯನ್ನು ಹಿಂಬಾಲಿಸಿತು.

"ಇನ್ನು ನಾನು ಮಾಡುವುದೇನು? ಈ ಮೊಲದಿಂದ ತಪ್ಪಿಸಿಕೊಳ್ಳುವದು ಹೇಗೆ?" ಎಂದು ಆನೆ ಯೋಚಿಸಿತು. ಅದು ತನ್ನ ನಡಿಗೆಯ ವೇಗವನ್ನು ಇನ್ನೂ ಹೆಚಿಸಿತು.

"ಮೊಲಗಳು ಆನೆಗಳನ್ನು ಅಟ್ಟಿಸಿಕೊಂಡು ಹೋಗುವುದನ್ನು ಹಿಂದೆಂದೂ ನಾನು ಕೇಳಿಲ್ಲ!"—ಎಂದು ಆನೆಯು ಮನಸ್ಸಿನಲ್ಲೇ ಮೆಲುಕು ಹಾಕುತ್ತಿತ್ತು.

ಆ ಮೇಲೆ ಆನೆಯು ಓಡತೊಡಗಿತು. ಪುನಃ ಪುನಃ ಹಿಂದಕ್ಕೆ ತಿರುಗಿ ನೋಡುತ್ತಿತ್ತು—ಮೊಲ ಏನು ಮಾಡುತ್ತಿದೆಯೋ ಎಂದು.

ಆ ಮೊಲವೂ ಸಹ ಆನೆಯನ್ನು ಅಟ್ಟಿಸಿಕೊಂಡು ಬರುತ್ತಲೇ ಇತ್ತು.

ಇದ್ದಕ್ಕಿದ್ದ ಹಾಗೆಯೇ ಮುಂದೆ ಬಂದು ಆಳವಾದ ಹಳ್ಳ ಕಂಡುಬಂದಿತು.

"ಇನ್ನಾಯಿತು! ನನ್ನ ಗತಿ ತೀರಿತು!" ಎಂಬ ವಿಚಾರವು ಆನೆಯ ಮನಸ್ಸಿನಲ್ಲಿ ಸುಳಿಯಿತು. ಅದು ನಿಂತೇಬಿಟ್ಟಿತು.

ಎದುಸಿರು ಬಿಡುತ್ತ ಮೊಲವು ಓಡಿಬಂದಿತು.

"ನನ್ನಿಂದ ನಿನಗೇನಾಗಬೇಕಾಗಿದೆ?" ಎಂದು ಆನೆಯು ಕಂಪಿಸುತ್ತ ಕೇಳಿತು.

"ದಯವಿಟ್ಟು ಕ್ಷಮಿಸಿ. ನಿಮ್ಮ ಆಟೋಗ್ರಾಫ್ (ಸ್ವಹಸ್ತಾಕ್ಷರ) ಕೊಡುತ್ತೀರಾ?" ಎನ್ನುತ್ತ ಮೊಲವು ತಲೆಯೆತ್ತಿ ಆನೆಯನ್ನು ನೋಡುತ್ತ, ಧೈನ್ಯದಿಂದ ಕೇಳಿಕೊಂಡಿತು. "ದಯವಿಟ್ಟು ಕೊಡುತ್ತೀರಾ?"

"ಥೂ . . . . ನಿನ" ಎಂದಿತು ಆನೆ.

ಜನರ ಬಾಯಿಗೆ ಬೀಗ

(ಎರಡನೇ ಪುಟದಿಂದ)

"ಅದರಲ್ಲೇನೂ ವಿಶೇಷವಿಲ್ಲ. ಕೆಲಸಕ್ಕೆ ಹೇಗೂ ಜನಬೇಕು. ಅದೇ ಜನವನ್ನು ಮದುವೆಯಾದರೆ ತಪ್ಪೇನು ಮಹಾ! ಹ್ಹ! ಹ್ಹ! ಹ್ಹ!"

"ನಿಜವಾಗಿಯೂ!"

"ಆದರೆ ಅವನು ಅವಳನ್ನು ಮದುವೆಯಾಗುವ ಆವಶ್ಯಕತೆ ಇರಲಿಲ್ಲ!"

"ಎಂತಹ ಪ್ರಮಾದ!"

"ಇದು ಅವನ ನೀಚತನವನ್ನು ಎತ್ತಿತೋರಿಸುತ್ತದೆ. ಥೂ!"

ಕೃಷ್ಣನ್‌ನು ಏನೂ ಮಾತಲಾರದ ಸ್ಥಿತಿಯಲ್ಲಿದ್ದ. ಹೇಗಾದರೂ ಒಮ್ಮೆ ಜನರ ಬಾಯಿಯನ್ನು ಮುಚ್ಚಿಸುವ ಸಾಧನವೊಂದು ಅವನಿಗೆ ಬೇಕಾಗಿತ್ತು.

ಕ್ಷಯರೋಗದ ಕುರಿತು ನೀವು ತಿಳಿಯಬೇಕಾದುದು

ಶ್ವಾಸಕೋಶದ ಕ್ಷಯರೋಗವು ಅಂಟು ರೋಗವಾಗಿದೆ. ಕ್ಷಯರೋಗವಿರುವ ಮನುಷ್ಯನಿಂದ ಇದು ಒಬ್ಬ ಆರೋಗ್ಯಶಾಲಿ ಜನಕ್ಕೆ ಹರಡಬಲ್ಲದು. ರೋಗಿಯ ಶ್ವಾಸಕೋಶಗಳಲ್ಲಿರುವ ರೋಗಹೇತುವಾದ ಕ್ರಿಮಿಗಳು ಕೆಮ್ಮುವಾಗ ಎಂಜಲು ಮತ್ತು ಜೊಲ್ಲಿನಲ್ಲಿ ಹೊರಗೆ ಬರುತ್ತವೆ ಕ್ಷಯರೋಗವಿರುವ ಮನುಷ್ಯನು ಎಂಜಲನ್ನಾಗಲೀ ಜೊಲ್ಲನ್ನಾಗಲೀ ಉಗುಳಿದರೆ ಕ್ರಿಮಿಗಳು ಹೊರಬಂದು ಯಾವದೇ ಸಾಂಸರ್ಗಿಕ ನಿರೋಗಿಗೆ ಅದು ಅಂಟಿಕೊಳ್ಳುತ್ತದೆ.

ಈ ಕ್ರಿಮಿಗಳು ಹೊಸ ಗಾಳಿ ಮತ್ತು ಸೂರ್ಯನ ಬೆಳಕಿನಲ್ಲಿ ಊರ್ಜಿತಗೊಳ್ಳುವುದಿಲ್ಲ. ಎದೆಯ ಕ್ಷ-ಕಿರಣವೊಂದು ಶ್ವಾಸಕೋಶದ ಕ್ಷಯರೋಗವನ್ನು ಸೂಚನೆಗಳು ತಾವಾಗಿಯೇ ಕಾಣಿಸಿಕೊಳ್ಳುವ ಎಷ್ಟೋ ಮೊದಲೇ ತೋರಿಸುತ್ತದೆ. ದಣಿವು, ರುಚಿ ಮತ್ತು ಭಾರ ಕಡಿಮೆಯಾಗುವುದು, ಪದೇ ಪದೇ ಕೆಮ್ಮುವುದು, ಜ್ವರ, ರಾತ್ರಿ ಬೆವರುವುದು, ಮತ್ತು ಹಲವು ಸಂದರ್ಭಗಳಲ್ಲಿ ರಕ್ತ ಉಗುಳುವುದು ಇವೇ ಸಾಮಾನ್ಯವಾಗಿ ಕ್ಷಯರೋಗದ ಚಿಹ್ನೆಗಳು. ನಿಮಗೆ ಈ ಚಿಹ್ನೆಗಳಲ್ಲಿ ಯಾವುದಾದರೂ ಒಂದು ಇದೆ ಎಂದು ಅನುಮಾನ ಬಂದರೆ ಕೂಡಲೇ ನಿಮ್ಮ ಡಾಕ್ಟರರನ್ನು ನೋಡಿರಿ. ಎದೆಯ ಒಂದು ಕ್ಷ-ಕಿರಣ ತೆಗೆಸಿರಿ ಮತ್ತು ನಿಮ್ಮ ಕುಟುಂಬದವರೆಲ್ಲರ ಎಕ್ಸ್‌ರೇ ಮಾಡಿಸಿರಿ.

ಟಿ ಬಿ ಮೊಹರು ಮಾರಾಟ ಚಳವಳವು ನಿಮಗೆ ಈ ವಿಚಾರ ಪ್ರಚಾರ ಮಾಡುತ್ತದೆ ಮತ್ತು ಈ ರೋಗದ ಕುರಿತು ಹೆಚ್ಚಿನ ವಿವರ ತಿಳಿಯಲು ನಿಮ್ಮ ರಾಜ್ಯದ ಟಿ ಬಿ ಸಂಘದ ಸಂಪರ್ಕ ಬೆಳೆಸುವುದು ನಿಮ್ಮ ಕೆಲಸವಾಗಿದೆ. ಈ ಚಳವಳದ ಅವಧಿಯಲ್ಲಿ ಟಿ ಬಿ ಮೊಹರುಗಳನ್ನು ಕೊಂಡುಕೊಂಡು ನಿಮ್ಮ ರಾಜ್ಯದ ಟಿ ಬಿ ಸಂಘವನ್ನು ಬಲಪಡಿಸುವುದು ನಿಮ್ಮ ಪಾಲಿನ ಕೆಲಸವಾಗಿದೆ. **ಒಂದು ಮೊಹರಿನ ಬೆಲೆ 10 ಪೈಸೆ ಮಾತ್ರ** ಮೊಹರುಗಳು ಸಿಗುವ ಸ್ಥಳಗಳು: 1. ದಕ್ಷಿಣ ಕನ್ನಡ ಜಿಲ್ಲಾ ಟಿ ಬಿ ಎಸೋಸಿಯೇಶನ್, ಮಂಗಳೂರು, 2. ದಿ ಮೈಸೂರು ಸ್ಟೇಟ್ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್, ಕುರುಬರ ಸಂಘ, ಹೊಸ್ಟೆಲ್ ಬಿಲ್ಡಿಂಗ್, ಗಾಂಧಿ ನಗರ, ಬೆಂಗಳೂರು ಮತ್ತು ಇವುಗಳ ಬೇರೆ ಬೇರೆ ಏಜನ್ಸಿಗಳು.

15 ನೆ ಟಿ ಬಿ ಮೊಹರು ಮಾರಾಟ ಚಳವಳ

(ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡಿಲ್ಲಿ ಇವರ ಹೊಣೆಗಾರಿಕೆಗೊಳಪಟ್ಟುದು)

ಸ್ಥಳದಾನ ಮಾಡಿದವರು:

ನವಯುಗ, ಉಡುಪಿ.

NAVAYUGA 7—1—1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೭-೧-೬೫ರಿಂದ ೧೩-೧-೬೫ರ ವರೆಗೆ

೧. ಮೇಷ

ಸಾಹಸಿಗಳೂ ಕರ್ತವ್ಯದಕ್ಷರೂ ಆದ ನಿಮ್ಮ ಸಕಲ ಕಾರ್ಯಕಲಾಪಗಳೂ ಇಂದು ನಿರಾತಂಕವಾಗಿ ನೆರವೇರಲಿವೆ. ಪರಿಶ್ರಮಕ್ಕೆ ತಕ್ಕುದಾದ ಫಲವೂ ಲಭಿಸುವುದರಿಂದ ದಿನ ಯಾಪನೆಯು ಸುಗಮವಾಗುವದು. ಸಮಾಜದಲ್ಲಿ ನಿಮಗೆ ಹೆಚ್ಚಿನ ಸ್ಥಾನಮಾನಗಳು ಲಭಿಸದಿದ್ದರೂ ರಾಜಕೀಯ ರಂಗದಲ್ಲಿ ಗಣ್ಯ ವ್ಯಕ್ತಿಗಳಾಗುವಿರಿ. ಸೋದರರೊಳು ಮನಸ್ತಾಪ, ಮಕ್ಕಳುಮರಿಗಳ ಕಿರಿಕಿರಿ, ಸ್ವದೇಹಾಲಸ್ಯದಿಂದ ಕೂಡಿದ ನಿಮಗೆ ತಾ. 7, 8, 11, 12 ಈ ದಿನಗಳು ಸುಖ ಲಾಭಭೋಗದಾಯಿಗಳಾಗಿವೆ.

೨ ವೃಷಭ

ಮಂಪದಾಪತ್ತಿನಿಂದ ನೀವಿಂದು ಒಂದೊಮ್ಮೆ ಪಾರಾದಿರೆನ್ನಬಹುದು. ಕೈಗಾರಿಕೆ ವ್ಯಾಪಾರಾದಿ ಉದ್ಯಮಗಳಲ್ಲಿ ಮತ್ತು ನೌಕರಿ ವಿಭಾಗದಲ್ಲೂ ಕೂಡ ಸ್ವಲ್ಪ ಚೇತರಿಸಿಕೊಳ್ಳುವಿರಿ. ಅನುದಿನದ ಖರ್ಚಿಗೆ ಸಾಕಷ್ಟು ಧನಾಗಮವಾಗಲಿದೆ. ಆಪ್ತೇಷ್ಟವರ್ಗದವರ ವಿಯೋಗ ವಿರೋಧಗಳುಂಟಾಗಲಿವೆ. ದೇಹಾಲಸ್ಯ ಮನೋರೋಗಗಳು ಸದಾ ಪೀಡಿಸುವವು. ಅನಿರೀಕ್ಷಿತವಾಗಿ ಪುಣ್ಯ ತೀರ್ಥ ಕ್ಷೇತ್ರಗಳ ದರ್ಶನ ಲಾಭದ ಯೋಗವಿರುವುದು. ತಾ. 11, 12ರಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಖರ್ಚುಗಳು ಮನಶ್ಚ್ಯುತಿಯ ಪ್ರಸಂಗವೂ ಉಂಟಾಗಲಿವೆ.

೩. ಮಿಥುನ

ಲಾಭಸ್ಥ ಬೃಹಸ್ಪತಿಯೋರ್ವನನ್ನುಳಿದು ಇತರ ಎಲ್ಲಾ ಗ್ರಹರೂ ನಿಮಗಿಂದು ಪ್ರತಿಕೂಲರಾಗಿರುವುದರಿಂದ ಹೆಚ್ಚಿನ ನಿಮ್ಮ ಬಯಕೆಗಳು ಸಂಕಲ್ಪರೂಪದಲ್ಲಿಯೇ ಉಳಿಯಲಿವೆ. ವಿರೋಧಿ ವರ್ಗದವರ ಉಪಟಳದಿಂದಾಗಿ ನೀವು ಯಾವೊಂದು ಕಾರ್ಯದಲ್ಲೂ ಕೃತಕೃತ್ಯರಾಗಲಾರಿರಿ. ಆರ್ಥಿಕ ದುರವಸ್ಥೆ, ಅಧಿಕಾರಿಗಳ ಕೋಪ, ಗೃಹತಾಪತ್ರಯಾದಿಗಳಿಂದಾಗಿ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರದು. ಆದರೂ ಗುರ್ವನುಗ್ರಹವಂ ಪಡೆದ ನೀವು ತಾ 9ರಿಂದ 12ರ ವರೆಗಿನ ದಿನಗಳನ್ನು ಸುಖವಾಗಿ ಕಳೆವಿರಿ.

೪. ಕರ್ಕಟ

ಧನಪತಿಯ ಕೃಪೆಗೆ ಪಾತ್ರರಾದ ನೀವು ಇಂದು ಆರ್ಥಿಕ ತಗಾದೆಯಿಂದ ಮುಕ್ತರಾಗಿ ಸುಖಜೀವನವನ್ನು ಸಾಗಿಸುವಿರಿ. ಶತ್ರುಜನರಿಂದ ಕೆಲವೊಂದು ವಿಘ್ನವಿಡ್ಡೂರಗಳೊದಗಿದರೂ ಸಾಹಸಿಗಳಾದ ನಿಮ್ಮ ಉದ್ಯಮ ವ್ಯವಹಾರಗಳು ನಿರೀಕ್ಷಿಸಿದ ಗುರಿಯನ್ನು ಸೇರುವವು. ವಿಶೇಷತಃ ರಾಜಕೀಯದಲ್ಲಿ ಕೀರ್ತಿಗೌರವಗಳನ್ನು ಪಡೆವಿರಿ. ವ್ಯಾಪಾರೀ ವರ್ಗದವರಿಗೆ ತಮ್ಮ ಉದ್ಯಮದಲ್ಲಿ ಕೆಲವೊಮ್ಮೆ ನಷ್ಟವಾಗುವ ಸಂಭವವಿದೆ. ವಾತಪ್ರಕೋಪದಿಂದಾಗಿ ದೇಹಾಲಸ್ಯವು ಕಂಡುಬಂದೀತು. ವಾರಾಂತ್ಯದ 3 ದಿನಗಳು ಇಷ್ಟಪ್ರದಗಳವೆ.

೫. ಸಿಂಹ

ವಿನಾಕಾರಣ ನಿಮಗಿಂದು ಹಲವರೊಡನೆ ಕಲಹವಾದೀತು. ಹೆಚ್ಚೇಕೆ ಹೆಂಡತಿ ಮಕ್ಕಳು ಕೂಡ ನಿಮ್ಮೊಡನಿಂದು ಜಗಳ ಮಾಡಲಿರುವರು. ನೀವೆಷ್ಟೇ ವ್ಯವಹಾರ ಚತುರರಿದ್ದರೂ ಇಂದು ವಿರೋಧಿಗಳ ಬಲೆಗೆ ಸಿಲುಕಲಿರುವಿರಿ. ಕೋರ್ಟು ಕಛೇರಿಗಳ ವ್ಯವಹಾರಗಳಲ್ಲಿ ಧನ ನಾಶ ಮಾನಚ್ಯುತಿಯ ಪ್ರಸಂಗವೂ ಕೂಡ ಕೆಲವೊಮ್ಮೆ ಕಂಡುಬರಲಿದೆ. ನಿಮ್ಮ ಪರಿಶ್ರಮವಿಂದು ವಿಫಲವಾಗಲೊಲ್ಲದು. ಜನಾನುರಾಗವಂ ಗಳಿಸಿದ ನಿಮಗೆ ಬಂಧು ಮಿತ್ರರ ನೆರವೂ ಇಂದು ಸಾಕಷ್ಟು ಲಭಿಸಲಿದೆ. ತಾ. 7, 8, 10, ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮವಾಗಿವೆ.

೬. ಕನ್ಯಾ

ಯಾರೊಬ್ಬರ ತಂಟೆಗೂ ನೀವು ಹೋಗದೆ ನಿಮ್ಮ ದಾರಿಯಲ್ಲೇ ನೀವು ಮುಂದುವರಿವಿರಾದರೂ ಜನತೆಯು ಇಂದು ನಿಮ್ಮನ್ನು ವಕ್ರ ದೃಷ್ಟಿಯಿಂದ ಕಾಣುವದು. ನಿಮ್ಮ ಉದ್ಯೋಗ ವ್ಯವಹಾರಗಳು ನಿರ್ವಿಘ್ನದಿಂದ ಮುಂದುವರಿಯಲಿವೆ. ಅನುದಿನದ ಖರ್ಚಿಗೆ ಸಾಕಷ್ಟು ದುಡಿಮೆಯಾಗುವುದರಿಂದ ದಿನಯಾಪನೆಯು ಸುಗಮವಾಗುವದು. ಪ್ರವಾಸಕ್ಕೀಕಾಲವು ಉಚಿತವಲ್ಲ. ಕಫ ದೋಷದಿಂದಾಗಿ ಆರೋಗ್ಯವು ಕೆಡುವ ಸಂಭವವಿದೆ. ವಾರಾಧಿಯ 4 ದಿನಗಳಲ್ಲಿ ಧನ ಲಾಭ ಗೃಹ ಸುಖಗಳನ್ನು ಪಡೆವಿರಿ.

೭. ತುಲಾ

ಕರ್ತವ್ಯಶೀಲರಾದ ನಿಮ್ಮ ಇಂದಿನ ಕಾರ್ಯಕಲಾಪಗಳು ಯಶಸ್ವಿಯಾಗಿ ನೆರವೇರಲಿವೆ. ಹಲವಾರು ತೆರದಿಂದ ಧನಾಗಮವಾಗುವವು. ವಿಶೇಷತಃ ಕೃಷಿ ಮತ್ತು ಭೂಸಂಬಂಧವಾದ ವ್ಯವಹಾರಗಳಲ್ಲಿ ಹೆಚ್ಚಿನ ಧನಲಾಭವಿದೆ. ಸಮಾಜದಲ್ಲಿ ಸ್ಥಾನ ಮಾನಗಳನ್ನೂ ಪಡೆವಿರಿ. ಪಿತ್ಥ ದೋಷದಿಂದ ಆರೋಗ್ಯಕ್ಕೆ ಸ್ವಲ್ಪ ಹಾನಿಯಿದೆ. ಸೋದರ ವರ್ಗದವರ ಕೂಡೆ ಮನಸ್ತಾಪವುಂಟಾದೀತು. ಬಂಧು ಮಿತ್ರರ ನೆರವುಳ್ಳ ನಿಮಗೆ ಇಂದಿನ ದಿನಗಳು ಸುಖ ಸಂತಸದಾಯಿಗಳಾಗಿ ಪರಿಣಮಿಸಲಿವೆ. ತಾ. 9ರಿಂದ 12ರ ವರೆಗಿನ ದಿನಗಳಲ್ಲಿ ಗೃಹ ಸುಖ ಧನಮಾನಾದಿಗಳು ಲಭಿಸುವವು.

೮. ವೃಶ್ಚಿಕ

ಬೇರಾರ ನೆರವು ನಿಮಗಿಂದು ಲಭಿಸದಾದರೂ ಸ್ವಯಂ ಶಕ್ತರಾದ ನೀವು ಆರಂಭಿಸಿದ ಕಾರ್ಯಗಳನ್ನು ಕೊನೆಗಾಣಿಸಿಯೇ ತೀರುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ಬಹುಮಟ್ಟಿಗೆ ಸುಧಾರಿಸಲಿದೆ. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನೀವು ನಿಶ್ಚಿಂತೆಯಿಂದ ಕಾಲ ಕಳೆವಿರಿ. ಮನೋ ದೌರ್ಬಲ್ಯದಿಂದಾಗಿ ಗುರು ಹಿರಿಯರ ಕೂಡೆ ಮನಸ್ತಾಪವುಂಟಾಗಲಿದೆ. ಪ್ರವಾಸಕ್ಕೀ ಸಮಯವು ಚೆನ್ನಾಗಿಲ್ಲ. ವೈದ್ಯ ವಕೀಲರುಗಳಿಗೀ ಕಾಲವು ಅತೀವ ಪ್ರಶಸ್ತವಿರುವುದು. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಬಯಕೆಯು ಈಡೇರಲಿದೆ.

೯. ಧನು

ಸುಸಮಯವು ಸನ್ನಿಹಿತವಾಗಿಯದು. ನಿಮ್ಮ ಎಲ್ಲ ತರದ ಆಶಾಕಾಂಕ್ಷೆಗಳೂ ಇಂದು ನಿರಾತಂಕವಾಗಿ ನೆರವೇರುವವು. ಎಂತಹ ದುರ್ಧರ ಪ್ರಸಂಗವೊದಗಿದರೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ಬಂಧು ಮಿತ್ರರ ನೆರವು ಪರಿಪೂರ್ಣವಾಗಿರತಕ್ಕ ನಿಮಗೆ ಸಮಾಜದಲ್ಲಿ ಸ್ಥಾನಮಾನ ಲಭಿಸೀತು. ರಾಜಕೀಯದಲ್ಲೂ ಯಶಸ್ಸಂಪಾದಿಸುವಿರಿ. ಅನಿರೀಕ್ಷಿತ ಪ್ರವಾಸದ ಯೋಗವಿದೆ. ಸ್ವಂತ ಆರೋಗ್ಯದತ್ತ ಸ್ವಲ್ಪ ನಿಗಾವಹಿಸಿರಿ. ತಾ. 7, 8, 12 ಅತ್ಯುತ್ತಮವಾಗಿವೆ.

೧೦. ಮಕರ

ನಿಮ್ಮ ವ್ಯವಸ್ಥಾನದಲ್ಲಿಂದು ಗ್ರಹತ್ರಯಾಗಮನವಾಗಿರುವುದು. ದುಡಿಮೆಯು ಅತ್ಯಲ್ಪವಿದ್ದು ಬಹುಮುಖವಾದ ಖರ್ಚುಗಳನ್ನು ನಿರ್ವಹಿಸಲು ನೀವಿಂದು ಸಾಲಮಾಡಬೇಕಾದ ಪ್ರಸಂಗ ಬರಲಿದೆ. ಭೂಸಂಬಂಧವಾದ ವ್ಯವಹಾರ ನಿಮಿತ್ತ ಬಂಧು ಮಿತ್ರರ ಕೂಡೆ ಮನಸ್ತಾಪ ಕಲಹಗಳಾಗಲಿವೆ. ನೌಕರವರ್ಗದವರು ಅಧಿಕಾರಿಗಳ ಕೋಪಕ್ಕೆ ಸಿಲುಕಲಿರುವರು. ದೇಹಾಲಸ್ಯ ಮನೋರೋಗಗಳಿಂದ ಸಂತತ ಪೀಡಿತರಾದ ನಿಮಗೆ ತಾ. 9 10 ಮಾತ್ರ ಸ್ವಲ್ಪ ಉತ್ತಮವಾಗಿ ಕಾಣಿಸಲಿವೆ.

೧೧. ಕುಂಭ

ಜನ್ಮರಾಶಿಗಾಶನಿಶ್ಚರನೂ ಅಷ್ಟಮಸ್ಥ ಅಂಗಾರಕನೂ ನಿಮಗಿಂದು ಕಷ್ಟ ಅನಿಷ್ಟ ಪರಂಪರೆಗಳನ್ನು ತಂದೊಡ್ಡಲಿರುವರಾದರೂ ಆರ್ಥಿಕ ಬಲಸಂಪನ್ನರಾದ ನೀವು ಅವುಗಳಿಂದ ಪಾರಾಗುವಿರಿ. ಶತ್ರುಜನರ ಕಾಟವು ಅಸಹನೀಯವೆನಿಸೀತು. ಆದರೂ ಸುಖ ಭಾಗ್ಯದನ ಅನುಗ್ರಹಕ್ಕೆ ಪಾತ್ರರಾದ ನೀವು ಯಾವೊಂದು ತಾಪತ್ರಯಗಳಿಗೆ ಸಿಲುಕದೆ ನಿಮ್ಮ ದಾರಿಯಲ್ಲಿ ಮುಂದರಿವಿರಿ. ಆಹಾರದೋಷದಿಂದಾಗಿ ಆರೋಗ್ಯಕ್ಕೆ ಸ್ವಲ್ಪ ಹಾನಿಯಿದೆ. ಪ್ರವಾಸಾದಿಗಳನ್ನು ಸದ್ಯ ಕೈಬಿಡುವದೊಳ್ಳಿತು. ತಾ. 7, 8, 11, 12 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೧೨ ಮೀನ

ವಿಶಕ್ತಿಯರಿಂದ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬಂದರೂ ಸಾಧ್ಯ ನೀವು ಆರಂಭಿಸಿದ ಕಾರ್ಯಗಳನ್ನು ಮಧ್ಯದಲ್ಲಿ ಕೈಬಿಡಲಾರಿರಿ. ಗುರು ಹಿರಿಯರ ಅನುಗ್ರಹವುಳ್ಳ ನಿಮಗೆ ಬಂಧು ಮಿತ್ರರ ನೆರವೂ ಲಭಿಸುವದರಿಂದ ಯಾವ ಕಾರ್ಯವೂ ನಿಮಗೆ ಅಸಾಧ್ಯವೆನಿಸದು. ಆರ್ಥಿಕ ತಗಾದೆಯಿಂದ ಮುಕ್ತರಾದನಿಮಗೆ ವಿನಾ ಕಾರಣ ವಾಕ್ಕಲಹವುಂಟಾದೀತು. ಸಾಡೇಸಾತ್ ಶನಿಯ ದೆಸೆಯಿಂದಾಗಿ ಅನಿರೀಕ್ಷಿತ ಅನರ್ಥಗಳೊದಗಲಿವೆ. ಸದಾ ಜಾಗರೂಕರಾಗಿರಿ. ತಾ. 9, 10, 12, ಈ ದಿನಗಳು ನಿಮ್ಮ ಆಶಾಕಾಂಕ್ಷೆಗಳನ್ನು ಪೂರೈಸಲು ಶಕ್ತವಾಗಿವೆ.

ಶ್ರೀ ಪಿ. ಎನ್. ಹೆಬ್ಬಾರ (ಸಿರಿಪತಿ)
ಅವರ
ನವೀನ ಕೃತಿ ಇದೀಗ ಹೊರಬಂದಿದೆ.
"ದಾರಿ ದೀಪ"
(ನೀತಿ ಕಥೆಗಳು)
(ಶ್ರೀ ಟಿ. ಎ ಪೈಯವರ ಮುನ್ನುಡಿ)
ಬೆಲೆ: 1=50.
ನಿಮ್ಮ ಪ್ರತಿಗಾಗಿ ಉಡುಪಿಯ ಪುಸ್ತಕ ವ್ಯಾಪಾರಿಗಳಿಗೆ ಯಾ ನೇರವಾಗಿ ಕೆಳ ವಿಳಾಸಕ್ಕೆ ಬರೆಯಿರಿ.
ಪಿ. ಎನ್. ಹೆಬ್ಬಾರ್ಸ್, ವೀಣಾ ಪ್ರಕಾಶನ
ಹೆಬ್ಬಾರ ಕಂಪೌಂಡು
ಕುಂಜಿಬೆಟ್ಟು, ಉಡುಪಿ. (ದ. ಕ.)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
LETTER WRITING MADE EASY
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ರೋಗಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಕೆಂಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)

Edited, Printed & Published by K. H. Shetty at the Navayuga Press, Udipi, S. India

నవయుగ



NAVAYUGA

౧౦

ಗಸಗಸೆಯ ಬಂಗಾರದ ಹೂಗಳು

ಹೊಳೆಯುವ ಆಯುಧಗಳನ್ನು ಹೊತ್ತ ರಾಹುತರು ಕುದುರೆಗಳ ಮೇಲೆ ಮುಂದೆ ಸಾಗುತ್ತಿದ್ದರು. ಬಂದೂಕಗಳ ತುದಿಯಲ್ಲಿ ಆ ಚೂಪಾದ ಕೃಪಾಣಗಳು ನಿಗಿನಿಗಿ ಹೊಳೆಯುತ್ತಿದ್ದುವು. ದಂಡನಾಯಕ ಆದೇ ತಾನೆ ಬೆಟ್ಟಗಳ ಹಿಂದೆ ಮರೆಯಾಗುತ್ತಿದ್ದ ಚಂದ್ರನತ್ತ ನೋಡಿ ದೀರ್ಘವಾಗಿ ನಿಟ್ಟುಸಿರೆಳೆದ. ಆ ರಾಹುತರ ಹಿಂದೆ ಕಾಲ್ನಡಿಗೆಯ ಯೋಧರ ತಂಡ ಸಾಗಿತ್ತು. ಅವರು ಕೂಡಿ ಹಾಡುತ್ತಿದ್ದ, ಎದೆಯನ್ನು ಕಲಕಿಸಿ ಆಶಾಕಿರಣವನ್ನು ಮಿನುಗುವಂತೆ ಮಾಡುವ, ಗೋಷ್ಠಿಗಾನವನ್ನು ಆಲಿಸುತ್ತಾ ದಂಡನಾಯಕ ಯೋಚಿಸುತ್ತಿದ್ದ. ಚಂದ್ರ ಮರೆಯಾಗುವ ಮುನ್ನವೇ ಬೆಟ್ಟವನ್ನಿಳಿದು ಆಚೆ ಬದಿಗೆ ಸಾಗಬೇಕೆಂಬುದೇ ಆ ದಂಡನಾಯಕನ ನಿರ್ಧಾರ. ಹಾಡು ಕೇಳಿಬರುತ್ತಲೇ ಇತ್ತು. ಸೆಪ್ಟೆಂಬರಿನ ನಿಶ್ಶಬ್ದ ರಾತ್ರಿಯ ಪ್ರಶಾಂತ ವಾತಾವರಣ ಹಾಡಿಗೆ ವರ್ಣಿಸಲಾಗದ ಇಂಬು ಕೊಟ್ಟಿತ್ತು.

ಆಶಾಕಿರಣಗಳು ಮೂಡುತ್ತಿದ್ದಂತೆಯೇ ಅವನ ಮನಸ್ಸು ಸ್ವಲ್ಪ ಮಟ್ಟಿಗೆ ರೋಸಿ, ಕುದುರೆಯನ್ನು ವೇಗವಾಗಿ ಓಡಿಸಿ ಮುಂದೆ ಮುಂದೆ ಸಾಗಿದ. ಎಲ್ಲಾ ತಂಡಗಳನ್ನೂ ದಾಟಿ ಕಾಲ್ನಡಿಗೆಯ ಯೋಧರನ್ನೂ ಹಿಂದಕ್ಕೆ ಹಾಕಿ ಮುಂದಿದ್ದ ರೈತರ ತಂಡದ ಬಳಿ ಕುದುರೆಯನ್ನು ನಿಲ್ಲಿಸಿದ. ದಂಡನಾಯಕ ಹಿಂದಿರುಗಿ ನೋಡದೆ

"ಸಾರ್ಜೆಂಟ್ ಮಿಹೊವ್, ಇವರಿಗೆ ಹಾಡು ಹೇಳಲು ಅಪ್ಪಣೆ ಇತ್ತವರಾರು? ನಾನಂತೂ ಅಪ್ಪಣೆ ನೀಡಲಿಲ್ಲ" ಎಂದು ಗುಡುಗಿದ.

"ಯಾರೂ ಇಲ್ಲ ದೊರೆಯೇ" ಸಾರ್ಜೆಂಟ್ ಉತ್ತರಿಸಿದ. ಹಾಗೆಯೇ, ಹಾಡುತ್ತಿದ್ದವರ ಕಡೆ ಮುಖ ಮಾಡಿ

"ಸದ್ದು ಸದ್ದು. ನಿಮ್ಮ ಅರಚಾಟವನ್ನು ನಿಲ್ಲಿಸಿ" ಎಂದು ಕೂಗಿದ.

ಗುಂಪಿನ ಮಧ್ಯದಿಂದ ಒಂದು ದನಿ ಕೇಳಿಬಂತು.

"ಅವರು ಅರಚುತ್ತಿಲ್ಲ, ಹಾಡುತ್ತಿದ್ದಾರೆ" ಎಂದು.

ಸಾರ್ಜೆಂಟಿಗೆ ಇದಾವ ಪ್ರತಿಭಟನೆಯನ್ನೂ ಕೇಳುವುದು ಬೇಕಿರಲಿಲ್ಲ. ಅವನ ಪಕ್ಕದಲ್ಲಿ, ಸೆರೆಬಿದ್ದ ದಂಗೆಕೋರ ರೈತರ ಗುಂಪು ನಡೆದು ಬರುತ್ತಿತ್ತು. ಎಲ್ಲರನ್ನೂ ಕೈ ಕೋಳಗಳಿಂದ ಬಂಧಿಸಿ ಬಿಗಿಯಲಾಗಿತ್ತು. ಎಲ್ಲರ ಮೈಯಲ್ಲೂ ಗಾಯಗಳು. ಮುಖದ ಮೇಲೆಲ್ಲ ರಕ್ತ ಹೆಪ್ಪುಗಟ್ಟಿ ನಿಂತಿತ್ತು. ಸಾರ್ಜೆಂಟನು ಧೂಳಿನಿಂದ ಕೂಡಿದ ಆ ರಸ್ತೆಯ ಬದಿಗೆ ಬಂದು ನಿಂತು ಸುತ್ತಲೂ ಕಣ್ಣು ಹಾಯಿಸಿದನು. ಪಕ್ಕದಲ್ಲೇ ಇಳಿಜಾರಿನಂತೆ ಇಳಿಯುತ್ತಿದ್ದ ಪ್ರದೇಶದ ಕಡೆಯಿಂದ ಸುಯ್ಯೆಂದು ತಂಪಾದ ಗಾಳಿ ಬೀಸುತ್ತಿತ್ತು.

"ಓಗೊಸ್ತ ಇಲ್ಲಿಯೇ ಎಲ್ಲಿಯೋ ಸಮೀಪದಲ್ಲೇ ಇರಬೇಕು" ಎಂದು ಆಲೋಚಿಸಿದ.

ಕುದುರೆಯ ಬೆನ್ನಿನ ಮೇಲೆ ಯೋಚನಾ ಮಗ್ನನಾಗಿ ಕುಳಿತಿದ್ದ ದಂಡನಾಯಕನಿಗೆ ಅನತಿ ದೂರದಲ್ಲೇ ಆಳದಲ್ಲಿ ನದಿ ಹರಿಯುತ್ತಿದ್ದುದು ಗೋಚರವಾಯಿತು. ವಿಶಾಲವಾಗಿ ಹರಿಯುತ್ತಿದ್ದ ನದಿಯ ನೀರು ಆ ಮಸುಕು ಬೆಳಕಿನಲ್ಲಿಯೂ ಮಿಂಚಿನಂತೆ ಮಿನುಗುತ್ತಿತ್ತು. ಕುದುರೆಯು ಹರ್ಷದಿಂದ ಕೆನೆಯುತ್ತಾ ಒಂದೇ ನೆಗೆತಕ್ಕೆ ನದಿಯ ಪ್ರದೇಶದತ್ತ ಚಿಮ್ಮಿತು.

ಬಂದಿಗಳಾಗಿದ್ದ ರೈತರ ಪೈಕಿ ಮುಂದಿನ ಸಾಲಿನಲ್ಲಿದ್ದ ಅಂತೋನನೂ ನದಿಯನ್ನು ನೋಡಿದ. ನದಿಯ ಇಕ್ಕಡೆಗಳಲ್ಲೂ ಎಲ್ಲೂ ಮರಗಳ ಸಾಲು ಬೆಳೆದು ನಿಂತಿತ್ತು. ಬೆಳ್ಳಿಯ ಪದರಗಳಂತಿದ್ದ ನೀರಿನ ಅಲೆಗಳು ದಡಗಳಿಗೆ ಬಂದು ಅಪ್ಪಳಿಸುತ್ತಿದ್ದುವು. ತಮ್ಮ ಪ್ರಯಾಣ ಆ ನದಿಯ ವರೆಗೆ ಮಾತ್ರ ಎನ್ನುವುದು ಅಂತೋನನಿಗೆ ಹೊಳೆದಿತ್ತು. ಆ ನದಿಯ ದಡವನ್ನು ಸೇರಿದ ಮೇಲೆ ತಮ್ಮೆಲ್ಲರ ಭವಿಷ್ಯವೂ ಅಂದಗೊಳ್ಳುವುದೆಂದು ಆತನಿಗೆ ಗೋಚರವಾಗಿತ್ತು. ಅದೇ ನದಿಯ ದಡದ ಮೇಲೆಯೇ ಆ ಇಪ್ಪತ್ತು ರೈತರು ತಮ್ಮ ನೇಗಿಲುಗಳನ್ನು ಬಿಸುಟು ಬಂದೂಕುಗಳನ್ನು ಹೆಗಲೇರಿಸಿದ್ದರು. ಹೊಸ ಹುರುಪಿನಲ್ಲಿ ತಮ್ಮ ಬಂಧು ಬಳಗದವರೆಲ್ಲರನ್ನೂ ದಂಗುಬಡಿಸಿ ಸೈನ್ಯದ ಪೋಷಾಕನ್ನು ಧರಿಸಿ ಶತ್ರುಗಳನ್ನು ಹಿಮ್ಮೆಟ್ಟಿಸಲು ಧೈರ್ಯದಿಂದ ಮುನ್ನುಗ್ಗಿದರು.

ನದಿಯತ್ತಣಿಂದ ಬರುತ್ತಿದ್ದ ತಂಗಾಳಿಯನ್ನು ಅಂತೋನ್ ಸೇವಿಸುತ್ತಿರುವಂತೆಯೇ ಪಕ್ಕದಲ್ಲಾರೋ ಅಳುತ್ತಿದ್ದ ಶಬ್ದ ಕೇಳಿಬಂತು.

ಅತ್ತ ತಿರುಗಿನೋಡಿದಾಗ ರೈತ ಹುಡುಗನೊಬ್ಬ ಕಳೆಗುಂದಿದ ಮುಖದಿಂದ ದುಃಖಿಸುತ್ತಿದ್ದುದು ಕಂಡು ಬಂತು.

"ಧೈರ್ಯ ತೆಗೆದುಕೊ ಸೋದರ," "ಅತ್ತು ನಿನ್ನ ಶತ್ರುಗಳನ್ನು ಹಿಮ್ಮೆಟ್ಟಿಸಲಾರದೆ, ಯುದ್ಧಮಾಡಲೂ ಸಾಯಲೂ ಸಿದ್ಧರಿದ್ದೇವೆಂಬುದನ್ನು ಶತ್ರುಗಳಿಗೆ ತೋರಿಸೋಣ," ಎಂದು ಅಂತೋನ್ ಸಮಾಧಾನ ಹೇಳಿದ.

ಮೆಲುದನಿಯಲ್ಲಿ ಹಾಡೊಂದನ್ನು ಹಾಡಲು ಅಂತೋನ್ ಮೊದಲುಮಾಡಿದ. ಆ ಹಾಡಿನ ದಾಟಿ ಅವನ ಹಿಂದಿದ್ದ ರೈತ ಜನರನ್ನು ಹುರಿದುಂಬಿಸುವಂತೆ ಕಂಡಿತು. ಸೂರ್ಯನ ರಶ್ಮಿಯನ್ನು ಕಂಡು ಆನಂದಿಸಲು ಬಿರಿದು ನಿಂತ ಗಸಗಸೆಯ ಮೊಗ್ಗುಗಳಿಗೆ ತಂಗಾಳಿಯ ಸ್ಪರ್ಶವಾದಾಗ ಸೆಟೆದೆದ್ದು ನಿಲ್ಲುವಂತೆ ಆಗಿತ್ತು ಹಾಡಿನ ಪ್ರತಿಕ್ರಿಯೆ. ದುಃಖದಿಂದ ಕೂಡಿದ್ದರೂ ಆಶೆಯನ್ನು ಕೆರಳಿಸುವಂತಿದ್ದ ಆ ಹಾಡನ್ನು ಸ್ವಲ್ಪ ಏರಿಸಿದ ದನಿಯಲ್ಲೇ ಹಾಡುತ್ತಾ ಎಲ್ಲರೂ ಒತ್ತಾಗಿ ಕಣಿವೆಯ ತಿಟ್ಟನ್ನು ಇಳಿಯಹತ್ತಿದರು. ದೂರದಲ್ಲಿ ಓಗೊಸ್ತ ನದಿಯು ಎಂದಿನಂತೆ ಗಂಭೀರವಾಗಿ ಹರಿಯುತ್ತಿದ್ದರೂ ಅದರ ದಡದ ಮೇಲೆ ಸವಾರನೊಬ್ಬನು ನಿಂತಿದ್ದುದೂ ರೈತರಿಗೆ ಕಾಣಿಸಿತು. ಆ ಸವಾರ ಬೇರಾರೂ ಆಗಿರದೆ ಇವರಿಗಾಗಿ ಕಾಯುತ್ತಿದ್ದ ದಂಡನಾಯಕನೇ ಆಗಿದ್ದ.

ಸೆಪ್ಟೆಂಬರಿನ ರಾತ್ರಿ ಸೈನಿಕರಿಗೆ ಸಾಕಷ್ಟು ಸುಸ್ತು ಮಾಡಿತ್ತು. ನಡೆದು ನಡೆದೂ ಕಾಲುಗಳು ಊದಿದ್ದುವು. ದಿನ ದಿನವೂ ನಡೆದಿದ್ದ ಘಟನೆಗಳನ್ನೆಲ್ಲಾ ನೋಡಿ ಮನಸ್ಸುಗಳು ತಳಮಳಗೊಂಡಿದ್ದು, ಮುಂದೆ ಕಾಣುತ್ತಿದ್ದ ನದಿಯನ್ನೇ ನೋಡುತ್ತಾ ಕಾಲುಗಳನ್ನು ಎಳೆದೆಳೆದು ಹಾಕುತ್ತಿದ್ದರು. ಮುಂದೆ ಹೋಗುತ್ತಿದ್ದ ದಂಗೆಕೋರರ ಕಾಲುಗಳಿಂದ ಧೂಳೆದ್ದು ಪರದೆಯಂತೆ ಹರಡಿತ್ತು. ಆ ರೈತ ದಂಗೆಕೋರರ ನಡುವೆ ಬಂಧಿತನಾಗಿದ್ದ ಒಬ್ಬ ಸೈನಿಕನಿದ್ದ. ಮುಪ್ರೋದಿ ಎಂಬ ಆ ಸೈನಿಕ ತನ್ನ ಮುಂದೆ ಹೋಗುತ್ತಿದ್ದ ಬಗ್ಗಿದ ಬೆನ್ನಿನ ರೈತಾಳುಗಳು ಹೋಗುವುದನ್ನೇ ದೃಷ್ಟಿಸಿ ನೋಡುತ್ತಿದ್ದ. ಉತ್ತು ಬಿತ್ತು ಕಬ್ಬಿಣದಂತಿದ್ದ ಅವರುಗಳ ದೇಹಗಳಿಂದ ಬೆವರು ಸುರಿಯುತ್ತಿತ್ತು. ಆ ಬೆವರಿನ ವಾಸನೆ ಮುಪ್ರೋದಿಗೆ ಚಿರಪರಿಚಿತವಾದದ್ದೇ. ರೈತ ಕುಟುಂಬದಲ್ಲೇ ಜನಿಸಿ ರೈತ ಜನರ ಮಧ್ಯದಲ್ಲೇ ಬೆಳೆದು ಬಂದಿದ್ದ ಮುಪ್ರೋದಿಗೆ ಅಂದು ರಾತ್ರಿ ತನಗೂ ತನ್ನ ಸಂಗಾತಿಗಳಿಗೂ ಕಾದಿದ್ದ ಗಂಡ ತಿಳಿದಿತ್ತು. ಅಂದು ರಾತ್ರಿಯೇ ಅವರೆಲ್ಲರನ್ನೂ ಗುಂಡಿಟ್ಟು ಕೊಲ್ಲುವುದೆಂದಾಗಿತ್ತು. ಹೊಟ್ಟೆಯಲ್ಲೇನೋ ಹೇಳಲಾಗದ ಸಂಕಟ ಅವನಿಗೆ; ಮನಸ್ಸು ಶಾಂತಿಯನ್ನು ಕಳೆದುಕೊಂಡು ತಳಮಳಗೊಂಡಿತ್ತು. ತನ್ನ ರೈತ ಬಾಂಧವರು ಹೇಳುತ್ತಿದ್ದ ಮಧುರವಾದ ಹಾಡು ಅಲೆಅಲೆಯಾಗಿ ಬಂದು ಅವನ ಕರುಳನ್ನು ಹಿಂಡುತ್ತಿತ್ತು; ಗಂಟಲು ಕಟ್ಟಿಬರುವಂತಾಗುತ್ತಿತ್ತು. ಅವನಿಗರಿವಿಲ್ಲದೆಯೇ ಕಣ್ಣಿನಿಂದ ನೀರು ತೊಟ್ಟಿಕ್ಕುತ್ತಿತ್ತು. ಧೂಳಿನಿಂದ ಮಲಿನವಾದ ಅವನ ಮುಖದ ಮೇಲೆ ನೀರು ಇಳಿದು ಒಂದು ಹಾದಿಯನ್ನು ಕೊರೆದಿತ್ತು. ಮಾಸಿದ ಕೈಗಳಿಂದ ಹಾಗೇ ತನ್ನ ಕಣ್ಣೀರನ್ನು ಒರೆಸಿಕೊಂಡು ಹೆಜ್ಜೆ ಹಾಕಿದ.

ಸಾರ್ಜೆಂಟನು ರೈತರ ಸಮೂಹವನ್ನು ಸಮೀಪಿಸಿ ತ್ವರೆಯಿಂದ ಮುಂದುವರೆಯಬೇಕೆಂದು ಗರ್ಜಿಸಿದಾಗ ಮುಪ್ರೋದಿಯು ಕಾಣುತ್ತಿದ್ದ ಕನಸಿಗೆ ಭಂಗ ಬಂದಿತು. ಧೂಳಿನ ಪರದೆಯಿಂದಾಚೆಗೆ ನದಿ ಹರಿಯುತ್ತಿತ್ತು. ಅದರ ದಡದಲ್ಲೇ ಬೆಂಕಿಯ ಉರಿ; ಆ ಉರಿಯಲ್ಲಿ ಮೀನುಗಳನ್ನು ಹುರಿಯುವ ಸದ್ದು. ಎಲ್ಲವೂ ಮುಪ್ರೋದಿಯ ಮನಸ್ಸಿನಲ್ಲಿ ಸುಳಿದುಹೋದುವು. ಆದರೆ ಈಗ ಆ ಧೂಳಿನ ಪರದೆಯಾಚೆ ಕಾಣಿಸುತ್ತಿದ್ದುದು ಎಲ್ಲೋ ಮರಗಳ ಮಧ್ಯೆ ನಿಂತಿದ್ದ ದಂಡನಾಯಕನ ಆಕೃತಿ.

ಕುರಿ ಮಂದೆಯಂತೆ ಅಸಹಾಯಕರಾಗಿ ಸಾಗುತ್ತಿದ್ದ ರೈತರಿಗೂ ಅನೇಕ ನೆನಪುಗಳು ಬಂದಿರಬೇಕು. ಮುಂದಿದ್ದ ನದಿಗೂ ಆ ರೈತರ ಜೀವನಕ್ಕೂ ವರ್ಣಿಸಲಿಕ್ಕಾಗದ ಬೆಸುಗೆಯಿತ್ತು. ಅವರಿಗೂ ತಮ್ಮ ಹೆಂಡಿರು ಮಕ್ಕಳೊ, ತಮ್ಮ ಹಿಂದಿನ ಧೈರ್ಯ ಸಾಹಸಗಳೋ ತಮ್ಮ ಹುಡುಗತನದ ಆಟಪಾಟವಿನೋದಗಳೋ ನೆನಪಿಗೆ ಬಂದಿರಬೇಕು. ಅವರುಗಳಿಗೆ ಅಪಾರ ವಿಶ್ವಾಸವಿದ್ದದ್ದು ಕ್ರಾಂತಿ ಒಂದರಲ್ಲೇ. ಮೊದಲಿನಿಂದಲೂ ಕ್ರಾಂತಿಯ ಗಾಳಿಯನ್ನೇ ಉಸಿರಾಡಿ ಕ್ರಾಂತಿಯ ವಾತಾವರಣದಲ್ಲೇ ಬೆಳೆದು ಬಂದಿದ್ದವರು ಆ ರೈತ ತರುಣರು. ವಯಸ್ಸಿಗೆ ಬಂದಾಗಿನಿಂದಲೂ ಕ್ರಾಂತಿಗಾಗಿಯೇ ತಮ್ಮನ್ನು ಅರ್ಪಿಸಿಕೊಂಡಿದ್ದರು.

ಧಾಳಿಕಾರರೂ ಸೈನಿಕರೂ ಬೆಟ್ಟವನ್ನಿಳಿದು ಬಯಲು ಪ್ರದೇಶದತ್ತ ಸಾಗುತ್ತಿದ್ದ ಹಾಗೇ ಅಲ್ಲಿ ನಿಂತಿದ್ದ ದಂಡನಾಯಕನ ಆಕೃತಿಯನ್ನೂ ಮಗ್ಗುಲಲ್ಲೇ ಹರಿಯುತ್ತಿದ್ದ ನೀರಿನ ಮೇಲೆ ಚೆಲ್ಲಾ

(ಪದಿನೈದನೇ ಪುಟ ನೋಡಿರಿ)

ಪೆಪ್ಪರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ
ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿ ಪಟ್ಟಿವೆ

ಶ್ರೀ ಕೆ ಕೆ ಶೆಟ್ಟಿ, ಎಂ ಎಲ್ ಸಿ, ಯವರು
ಸವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶೋಧ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ: ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಭಾಗದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಟಪಾಲಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ

ಮುಖಪತ್ರದಲ್ಲಿ:

ಪ್ರಧಾನಿ ಶ್ರೀ ಲಾಲ್ ಬಹಾದೂರ್ ಶಾಸ್ತ್ರಿಯವರು ಲಂಡನಿಗೆ ಸಂದರ್ಶನ ಇತ್ತಾಗ ಅಲ್ಲಿಯ ಭಾರತ ಕಚೇರಿಯಲ್ಲಿ ಸ್ವಾಗತ ಸತ್ಕಾರ ನಡೆದ ಸಂದರ್ಭದಲ್ಲಿ ಬ್ರಿಟನಿನ ಕಾಂಗ್ರೆಸ್ಸಿನ ಹಿರಿಯ ಮುತ್ಸದ್ದಿ ಕರ್ನಲ್ ಬರ್ಮಾದ ಅರ್ಲ್ ಮೌಂಟ್‌ಬ್ಯಾಟನ್ ಅವರೊಂದಿಗೆ ತೆಗೆದ ಚಿತ್ರ.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೨೦	೧೪—೧—೧೯೬೫	No. 20

ದುರ್ಗಾಪುರ ಅಧಿವೇಶನ

ದುರ್ಗಾಪುರದಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಅಧಿವೇಶನವು ಬಿಕ್ಕಟ್ಟಿನ ವೇಳೆಯಲ್ಲಿಯೇ ಸೇರುತ್ತಿದೆಯೆನ್ನಬಹುದು. ಕಳೆದ ವರ್ಷ ಇದೇ ವೇಳೆಯಲ್ಲಿ ಭುವನೇಶ್ವರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದ ವೇಳೆ ಅಸ್ವಸ್ಥಕ್ಕೊಳಗಾದ ಜವಾಹರಲಾಲ ನೆಹರುರವರು ಐದೇ ತಿಂಗಳಲ್ಲಿ ನಮ್ಮನ್ನಗಲಿ ಹೋದುದರಿಂದ ಈ ವರ್ಷದ ಅಧಿವೇಶನದಲ್ಲಿ ಅವರ ಅನುಪಸ್ಥಿತಿಯು ಸನ್ನಿವೇಶ ಎಲ್ಲೆಲ್ಲೂ ಎದ್ದು ತೋರುವಂತಿತ್ತೆನ್ನಬೇಕು. ದೇಶವಲ್ಲಿ ಕಾಣಿಸಿಕೊಂಡಿರುವ ಆಹಾರದ ಅಭಾವ, ಬೆಲೆಯೇರಿಕೆಯ ಯಕ್ಷಪ್ರಶ್ನೆಯನ್ನು ಉತ್ತರಿಸುವುದಕ್ಕೆ ಸರಕಾರಕ್ಕೆ ಸೂಕ್ತ ಮಾರ್ಗದರ್ಶನವನ್ನು ಅಧಿವೇಶನ ಮಾಡುವ ಅಗತ್ಯವಿತ್ತು. ಇಂತಹ ವೇಳೆಯಲ್ಲೇ ಚೀನಾವು ಅಣುಬಾಂಬನ್ನು ತಯಾರಿಸಿದುದರಿಂದ ಉಂಟಾದ ಹೊಸ ವಿಲಕ್ಷಣ ಸನ್ನಿವೇಶದ ಹಿನ್ನಲೆಯೂ ಕಾಂಗ್ರೆಸ್ ಅಧಿವೇಶನಕ್ಕೆ ದೊರಕಿತು. ಆದರೂ ಅಧಿವೇಶನವು ತನ್ನ ಘನತೆಗನುಸಾರವಾಗಿಯೇ ಕಾರ್ಯವೆಸಗಿತೆಂದು ಸಮಾಧಾನಪಡಬಹುದು.

ಕಳೆದ ವರ್ಷ ಕಾಂಗ್ರೆಸ್ ಸ್ವೀಕರಿಸಿದ ಪ್ರಜಾಪ್ರಭುತ್ವದ ತಳಹದಿಯ ಸಮಾಜವಾದ ನೀತಿಯನ್ನು ಈ ವರ್ಷವೂ ಮತ್ತೆ ಉಚ್ಚರಿಸಲಾಯಿತು. ದೇಶದ ಅಭ್ಯುತ್ಥಾನಕ್ಕೆ ಇದಕ್ಕಿಂತ ಸೂಕ್ತವಾದ ಚಿಕಿತ್ಸೆ ಬೇರೊಂದಿಲ್ಲ; ಪಂಡಿತ ನೆಹರೂ ನಮ್ಮ ಮುಂದೆ ಇಟ್ಟ ದಿವ್ಯ ಜ್ಯೋತಿ ಇದೇ. ಜವಾಹರಲಾಲರು ಮೆಟ್ಟಿ ತೊಡಗಿದ ದಾರಿಯಲ್ಲೇ ಅವರು ತೋರಿದ ಬೆಳಕಿನಲ್ಲೇ ಮುಂದುವರಿಯುವ ದೃಢ ನಿಲುವನ್ನು ಕಾಂಗ್ರೆಸ್ಸು ತಳೆಯಿತು. ಇದು ಸ್ವಾಭಾವಿಕ. ದೇಶದಲ್ಲಿ ತೋರಿರುವ ಅಭಾವ ಮತ್ತು ಬೆಲೆಯೇರಿಕೆಯ ಪರಿಸ್ಥಿತಿಗಳು ಭೀಷಣವಾಗಿದ್ದು ಇವನ್ನು ಹತೋಟಿಗೆ ತರಲು ಅಧಿಕ ಉತ್ಪಾದನೆಯೊಂದೇ ತಾರಕೋಪಾಯವೆಂದೂ ಒಕ್ಕಲತನ-ಉದ್ದಿಮೆಗಳಿಗೆ ಅಗ್ರಪ್ರಾಶಸ್ತ್ಯ ನೀಡಬೇಕೆಂದೂ ಅಧಿವೇಶನ ಸರಕಾರಕ್ಕೆ ಆದೇಶವಿತ್ತಿರುವುದು ಸಹಜವೇ. ಏಕೆಂದರೆ, ಉತ್ಪಾದನೆಯ ಹೆಚ್ಚಳವೆ ಸುಭಿಕ್ಷೆಯ ಸಾಧ್ಯವಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಕ್ಕಲುತನಕ್ಕೆ ಅಗ್ರಪ್ರಾಶಸ್ತ್ಯ ನೀಡಬೇಕೆಂಬ ಸಲಹೆಯನ್ನು ಯಾರೂ ಅಲ್ಲಗಳೆಯುವುದು ಸಾಧ್ಯವಿಲ್ಲ. ಈಗಾಗಲೇ ಸರಕಾರವು ಪರಿಸ್ಥಿತಿಯನ್ನು ಸುಧಾರಿಸಲು ಕೈಕೊಂಡ ಕ್ರಮಗಳನ್ನು ಕಟುವಾಗಿ ಟೀಕಿಸಿ ಉಗ್ರ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವನ್ನು ಸದಸ್ಯರು ಎತ್ತಿ ಹೇಳಿದುದು ನ್ಯಾಯೋಚಿತ. ಲಂಚಕೋರತನ, ಕಳ್ಳ ಹಣದ ಸಂಗ್ರಹ, ಅವಶ್ಯಕ ವಸ್ತುಗಳ ಅಕ್ರಮ ಸಂಚಯ—ಇವುಗಳನ್ನು ಕಟ್ಟುನಿಟ್ಟಾಗಿ ನಿಲ್ಲಿಸದೆ ಹೋದರೆ, ಜನಸಾಮಾನ್ಯರ ಜೀವನವು ಕಠಿನವಾಗುವುದೆಂಬುದನ್ನೂ ಆಡಳಿತೆಯಲ್ಲಿ ಶೈಥಿಲ್ಯ ಹೆಚ್ಚಿ, ಸರಕಾರವು ಜನತೆಯ ವಿಶ್ವಾಸವನ್ನು ಕಳೆದುಕೊಳ್ಳಬೇಕಾಗುವುದೆಂಬುದನ್ನು ಸದಸ್ಯರು ಸರಿಯಾಗಿ ಮನಗಂಡಿರುವುದರಿಂದಲೇ ಅಧಿವೇಶನದ ವೇಳೆ ಬಿಚ್ಚು ಮನಸ್ಸಿನ ಚರ್ಚೆ ನಡೆಯಿತು; ಪ್ರಧಾನಿ ಶಾಸ್ತ್ರಿಯವರು ಪ್ರತಿಚರ್ಚೆ ತಿಂಗಳ ಜೊತೆಗೆ ದೃಢವಾದ ಆಹಾರ ನೀತಿಯನ್ನು ರೂಪಿಸುವ ಆಶ್ವಾಸನವನ್ನೂ ಕೊಟ್ಟರು. ಅಣ್ವಸ್ತ್ರ ತಯಾರಿಕೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಮೂಡಿದರೂ ಕೊನೆಗೆ ಭಾರತ ಸರಕಾರದ ಅಣುಶಕ್ತಿ ನೀತಿಯನ್ನು ಮಹಾಧಿವೇಶನವು ಒಪ್ಪಿಕೊಂಡಿತು. ಇದರಿಂದಾಗಿ ಈ ಸಂಬಂಧದಲ್ಲಿ ನಡೆಯುತ್ತಿದ್ದ ಸುದೀರ್ಘ ಚರ್ಚೆಯು ಕೊನೆಗೊಂಡಂತಾಯಿತು. ಜಮ್ಮೂ ಮತ್ತು ಕಾಶ್ಮೀರದಲ್ಲಿರುವ ರಾಷ್ಟ್ರೀಯ ಪರಿಷತ್ತನ್ನು ಕಾಂಗ್ರೆಸ್ಸಿನಲ್ಲಿ ವಿಲೀನಗೊಳಿಸಿ ಅಲ್ಲಿ ಪ್ರಾದೇಶಿಕ ಕಾಂಗ್ರೆಸ್ಸನ್ನು ಸ್ಥಾಪಿಸುವ ನಿರ್ಧಾರವು ಸರ್ವತ್ರ ಪ್ರಶಂಸನೀಯವೆನಿಸಿದೆ. ಭಾರತದಲ್ಲಿನ ಇತರ ರಾಜ್ಯಗಳ ಸ್ಥಾನಮಾನಗಳನ್ನೇ ಜಮ್ಮೂ—ಕಾಶ್ಮೀರಕ್ಕೂ ನೀಡುವ ಸರಕಾರದ ನೀತಿಗೆ ಇದರಿಂದ ಬೆಂಬಲ ದೊರೆತಂತಾಯಿತು. ಗೋವೆಯು ಹತ್ತು ವರ್ಷಗಳ ವರೆಗೆ ಕೇಂದ್ರಾಧೀನ ಪ್ರದೇಶವಾಗಿಯೇ ಉಳಿಯಬೇಕೆಂಬ ನಿರ್ಧಾರದ ಪುನರುಚ್ಚಾರವೂ ಸ್ವಾಗತಾರ್ಹವಾದುದು. ಭಾರತದ ಅಲಿಪ್ತ ತಳಹದಿಯ ವಿದೇಶ ನೀತಿಯು ಅಧಿವೇಶನದಲ್ಲಿ ಮತ್ತೆ ಪುರಸ್ಕಾರವಾದುದು ವಿಸ್ಮಯವೇನಲ್ಲ. ಜನಪ್ರತಿನಿಧಿಗಳು ಜನತೆಯ ನಿಕಟ ಸಂಪರ್ಕವನ್ನು ಹೊಂದಿ ಲೋಕ ಕಲ್ಯಾಣಕಾರಕ ಕಾರ್ಯಗಳಲ್ಲಿ ಕಾಳಜಿ ವಹಿಸಬೇಕೆಂಬ ವಾದವೂ ಹೆಚ್ಚಿನವರಿಂದ ಪುರಸ್ಕೃತವಾಯ್ತು.

ಆಂತೂ ಹಬ್ಬವು ಚರ್ಚೆ-ಗೊತ್ತುವಳಿಗಳಿಂದ ಮುಕ್ತಾಯವಾಯಿತು. ಆದರೆ, ಬರೇ ಗೊತ್ತುವಳಿಗಳ ಸ್ವೀಕಾರದಿಂದ ಯಾವ ಕಾರ್ಯವೂ ಸಾಧಿತವಾಗುವುದಿಲ್ಲ. ಅದನ್ನು ಕಾರ್ಯರೂಪಕ್ಕೆ ಇಳಿಸುವ ದೃಢ ನಿಲುವು ಬೇಕು. ತನ್ನ ನಾಯಕತ್ವದ ಸರಕಾರಕ್ಕೆ ಅಧಿವೇಶನ ನೀಡಿದ ಸಲಹೆಗಳನ್ನು ಪ್ರಧಾನಿ ಶಾಸ್ತ್ರಿಯವರೂ ರಾಜ್ಯಗಳ ಮುಖ್ಯಮಂತ್ರಿಗಳೂ ಕೃತಿಗಿಳಿಸಬೇಕು, ಕೃತಿಬಲದಿಂದ ಜನತೆಯ ಒಲವನ್ನು ಸಂಪಾದಿಸಬೇಕು.

ವಚನ ಸುಧೆ

ಪಾಪೋ ನೃಷದ್ವರೋ ಜನಃ
ಇಂದ್ರ ಇಚ್ಚರತಃ ಸಖಾ॥
(ಐತರೇಯ ಬ್ರಾಹ್ಮಣ, ೭.೧೫)

೦ ಅಲಸಿ ಮತ್ತು ಸೋಮಾರಿಗಳಾದವರೇ ಪಾಪಿಗಳು. ಪರಮಾತ್ಮನು ಪುರುಷಾರ್ಥಿಯ ಸ್ನೇಹಿತನು.

೦೦ ಆಲಸ್ಯ, ಉದಾಸೀನತೆಗಳು ಮಹಾ ಪಾಪಗಳು. ಪುರುಷಾರ್ಥಸಂಚಯ ಮಾಡದವನು ಪಾಪಿಯು. ಪುರುಷಾರ್ಥಿಯನ್ನು ಪರಮಾತ್ಮನು ಕೈಹಿಡಿಯುತ್ತಾನೆ. ಆದುದರಿಂದ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳನ್ನು ಸಾಧಿಸುವುದು ಮಾನವನ ಆದ್ಯ ಕರ್ತವ್ಯ.

ಪಾಯಸದಲ್ಲಿ ಪಾಪಾಸು

ಮಲೇಶ್ಯಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶ ನೀಡಿದ್ದರ ವಿರೋಧವಾಗಿ ಇಂಡೋನೇಶ್ಯವು ವಿಶ್ವ ಸಂಸ್ಥೆಯಿಂದ ಹೊರನಡೆದಿರುವುದಾಗಿ ಘೋಷಿಸಿ ಒಂದು ಹೊಸ ಪ್ರಸಂಗವನ್ನು ತಂದು ಹಾಕಿದೆ. ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿ ಯು. ಥಾಂಟರು ಈ ನಿರ್ಧಾರವನ್ನು ಪುನರ್ವಿಮರ್ಶಿಸುವಂತೆ ವಿನಂತಿಸಿದರೂ ಅದರಿಂದೇನೂ ಪ್ರಯೋಜನವಾದಂತೆ ತೋರುವುದಿಲ್ಲ. ಭಾರತ ಕೂಡ ಇಂತಹ ದುಡುಕಿನ ಕ್ರಮದಿಂದ ದೂರವಿರಬೇಕೆಂದು ಅದನ್ನು ಕೇಳಿಕೊಂಡಿದೆ; ಪರಿಣಾಮ ಮಾತ್ರ ಶೂನ್ಯವಾಗುವ ನಿರೀಕ್ಷೆಯೇ ಹೆಚ್ಚು. ಅದೇ ರೀತಿಯಲ್ಲಿ ಕಾಶ್ಮೀರದ ಪ್ರಶ್ನೆಯು (ತನಗನುಕೂಲವಾದ ರೀತಿಯಲ್ಲಿ) ಬಗೆಹರಿಯದೆ ಹೋದರೆ, ಪಾಕಿಸ್ತಾನವೂ ವಿಶ್ವಸಂಸ್ಥೆಯಿಂದ ಹೊರ ನಡೆಯುವುದೆಂಬ ವದಂತಿಯೂ ಇದೆ. ಇಂಡೊನೇಶ್ಯ, ಪಾಕಿಸ್ತಾನಗಳನ್ನು ಇನ್ನೂ ಕೆಲವು ರಾಷ್ಟ್ರಗಳು ಅನುಸರಿಸುವುವೆಂಬ ಬೆದರಿಕೆಯೂ ಬಂದಿದಿದೆ. ಹೀಗಾದಲ್ಲಿ ವಿಶ್ವೈಕ್ಯವು ಕಲ್ಪನೆಯ ಕೂಸಾಗಿ ಮಾತ್ರ ಉಳಿದೀತು; ಹಿಂದೊಮ್ಮೆ ಜನಾಂಗ ಸಂಘವು ದುರಂತಕ್ಕೆ ಸಿಕ್ಕಾದಂತೆ ವಿಶ್ವಸಂಸ್ಥೆಯೂ ಸಾಭಾದೀತೇ ಎಂಬ ಭೀತಿಯೂ ತಲೆದೋರುತ್ತಿದೆ. ಹೀಗಾಗದಂತೆ ಎಚ್ಚರಿಕೆ ವಹಿಸುವುದು ಮಾತ್ರ ಎಲ್ಲರ ಕರ್ತವ್ಯವೂ ಹೌದು. ವಿಶ್ವನಾಶದ ದಾರಿ ಯಾರಿಗೂ ಅಪೇಕ್ಷಣೀಯವಲ್ಲ ತಾನೆ?

ನರಸಣ್ಣನ ಸರಸ

"ಪಂಜಾಬದ ಮಾಜಿ ಮುಖ್ಯಮಂತ್ರಿ ಪ್ರತಾಪ ಸಿಂಹ ಕೈರಾನರು ಇನ್ನೂ ರಾಜಕೀಯದಲ್ಲಿ ಸಕ್ರಿಯ ಭಾಗ ವಹಿಸಲು ಇಚ್ಛಿಸುತ್ತಿರುವಾಗ, ನೀವು ಆಹಾರ ಧಾನ್ಯ ವಿತರಣೆಯ ಸರ್ಪಾಗಿಸುವುದರಲ್ಲಿ ತಪ್ಪೇನಿದೆ ಸ್ವಾಮಿ?"

ಗೇಹ ರಾಜ್ಯದಲ್ಲಿ

ಎಲ್ಲಾ ಹಳ್ತು, ಒಂದು ಮಾತ್ರಾ ಹೊಸ್ತು

"ಸ್ವಲ್ಪ ಇಲ್ಲಿ ಕೇಳೀಂದ್ರೆ..."

"ಕೇಳ್ತಲೇ ಇದ್ದೀನಲ್ಲಾ...."

"ಹೌದು, ನೀವೇನೋ ಇದ್ದೀರಿ. ಆದ್ರೆ, ನಿಮ್ಮ ಕಿವಿಗಳಿಗೆ ಶ್ರವಣ ಶಕ್ತಿ ಉಡುಗಿ ಹೋಗೋದು ಜಾಸ್ತಿಯಾಗ್ತಾ ಇದೆ. ಅದೂ ಈಗೀಗ..."

"ಏನೇ ಹಾಗೆಲ್ಲಾ ಅನ್ನುತ್ತಿ? ಸದ್ಯ ಅಷ್ಟೇನೂ ಆಗ್ಲಿಲ್ಲ ನೋಡು."

"ನೋಡಿದ್ರೆ ಏನು ತಿಳಿಯುತ್ತೆ? ಅಲ್ಲಾ, ಒಂದು ಸೂಜಿ ತಂದು ಕೊಡಿ, ಈ ಬ್ಯಾಗನ್ನ ಹೊಲಿದಿಡ್ತೀನೇಂತ ಹೇಳಿ ದಿನಾ ನಾಲ್ಕಾಯ್ತು. ಇನ್ನೂ ಬಂದಿಲ್ಲ ನೋಡಿ.."

"ಓ, ಈಗ ನೆನಪಾಯ್ತು ಕಣೇ...."

"ಹೌದಾದು. ಎಲ್ಲಾ ಗೊತ್ತು ನನಗೆ. ನಾನು ಹೇಳಿದ್ದು ನನ್ನೆದುರಲ್ಲಿ ಮಾತ್ರ ನಿಮ್ಗೆ ಜ್ಞಾಪಕವಾಗೋದು. ಮನೇ ಬಿಟ್ಟು ಹೊರಗೆ ಹೋದಿರೀಂತಂದ್ರೆ-",

'ಸಾಕು ಮಾಡೇ ನಿನ್ನ ಪ್ರಲಾಪ...,

'ಹೌದಪ್ಪ, ನಾನು ಅನ್ನೋದೆಲ್ಲಾ ನಿಮಗೆ ಪ್ರಲಾಪ.."

'ಅಲ್ಲ ಮಾರಾಯ್ತಿ ಅಲ್ಲ. ಸರಿ. ತಪ್ಪು ನನ್ನದು. ಆಯ್ತಲ್ಲಾ....,

'ಅಲ್ಲಾ, ತಪ್ಪು ನನ್ನದು ಅಂತ ಹೇಳಿದ್ಬಿಟ್ರೆ ಸೂಜಿ ಬರುತ್ತೆಯೇಂತ?...'

'ಶರಣಾಗತಿಯ ಮಂತ್ರ ಪಠಿಸಿದ ಮೇಲೂ ದೋಷಾರೋಪಣೆಯೆ?'

'ದೋಷ ರೋಪಣೆಯೇನು ಬಂತ.? ನೀವು ನಿಮ್ಮ ಕರ್ತವ್ಯ ಪಾಲಿಸಲಿಲ್ಲಾಂತ ಹೇಳಿದೆ ಅಷ್ಟೇ....'

'ಸರಿ ಕಣೇ. ನನ್ನ ಮೇಲೆ ದೂರು ಹೇರಿ ಕರ್ತವ್ಯ ಭ್ರಷ್ಟಾಂತ ಸಾಧಿಸೋದು ತಾನೇ ನಿನ್ನಿಂಗಿತ? ಸರಿಹೋಯ್ತು. ಒಪ್ಪಿಕೊಂಡೆ..."

"ಛಿ...ಛಿ....ಹಾಗೆ ಅನ್ನಲು ನಾನೆಷ್ಟರವಳು?"

"ಆ ನಿನ್ನ ದೈನ್ಯವೇನೂ ಬೇಡ. ಮಾಡಿದ ತಪ್ಪನ್ನ ಒಪ್ಪಿಕೊಳ್ಳೋಕೆ ನಾಚಿಗೆಯಾದ್ರೂ ಏಕೆ?"

"ನಿನ್ನ ಅಪ್ಪಾದ್ರೂ ಇದ್ದೀರಲ್ಲಾ.... ನೋಡಿ, ಒಂದು ಮಾತು ಯಾರೋ ಹೇಳಿದ್ರು...."

"ಹೌದು. ನಿನಗೆಲ್ಲಾ ಯಾವಾಗ್ಲೂ ಒಂದೊಂದೇ ಮಾತನ್ನ ಯಾರ್ಯಾರೋ ಹೇಳೋದು...."

"ಹ್ಞಾಂ....ತಿಳೀತು ಬಿಡಿ. ಯಾರ್ಯಾರೇ ಸಲ್ಲ, ನೀವೇ ಅಂದಿದ್ದು...."

"ಪತ್ತೆಯಾಯ್ತಲ್ಲಾ ಈಗ.... ಅಲ್ಲಾ ನಾನೇನಪ್ಪ ನಿನ್ಗೆ ಅಂದಿದ್ದೆ?"

"ಅಯ್ಯಯ್ಯ ನಿಮ್ಮ ಕರ್ಮ...."

"ಮತ್ತೆ...?"

"ಅಲ್ಲಾ, ಅದೇನೋ ಸಮ್ಮೇಳನವೋ ಅಧಿವೇಶನವೋ ಇದೇಂತ..."

"ಎಂಥದೋ ನುಣ್ಣು! ಅದದ್ದು ಈಗ ಮೂರು ದಿನಗಳಿಂದ ಉತ್ಸವ...'

'ಅದೇ ಅಂದ್ರೆ... ಎಲ್ಲಿ...'

"ಏನೂ ಗೊತ್ತಿಲ್ಲದವ್ರ ಹಾಗೆ ಕೇಳ್ತಾ ಇದ್ದೀಯಲ್ಲಾ....ಅದೂ ಕಣ್ಣಾರೆ ಕಂಡು ಬಂದೂ....?"

"ನೀವೊಬ್ರು....ಹೋಗೀಂದ್ರೆ..'

"ನಾನೊಬ್ಳು ಅಲ್ಲಾ...ಬರೇ ಅರ್ಧಗಂಟೆ ನಿನ್ನ ಮುಂದೆ ಬಂಬಡಿ ಬಾರ್ಸಿ ಬಾರ್ಸಿ ಸಾಕಾಗಿ ಹೋಯ್ತು..."

"ಹೋಗೀಂದ್ರೆ...."

"ಮತ್ತೆ ಅದೇ ಮಾತು ಅಲ್ಲಾ, ನನ್ನ ಮನೆಗೆ ನಾನು ಬಂದಿರೋವಾಗ ಹೋಗೀಂತ ಅನ್ನೋಕೆ ನಿನಗೆಷ್ಟೇ ಧೈರ್ಯ? ಅದೂ ಈ ಹೊತ್ತಿಗೆ ಹೋಗಿಂತಂದ್ರೆ ಹೇಗೇಂತ ?

'ಅಯ್ಯೋ, ನೀವೇ.. ಅಂತೂ ಏನಾದ್ರೂ ಆದ್ಕೊಂಡ', ನನ್ನನ್ನ ಗೋಳು ಹೊಯ್ಯೋದೆಂದ್ರೆ ನಿಮ್ಗೆ ಭಾರಿ ಇಷ್ಟಾಂತ ತೋರುತ್ತೆ...'

'ನೋಡು, ಅಂದವೂ ನೀನೇ, ಅಳೋಪವ್ರೂ ನೀನೇ ಆದ್ರೆ... ಬೇಡ ಕಣೇ.... ಇಲ್ಲವಮ್ಮ ಇಲ್ಲ... ಮಾತಿಗೆ ಮಾತಾಡಿದ್ರೆ ಯಾರಾದ್ರೂ ಹೀಗೆಲ್ಲಾ ಮಾಡ್ತಾರೇನು?'

"................"

"ಬೇಡ ಕಣೇ....ನೋಡೋಣ, ತುಸು ಮುಖವೆತ್ತು...ಹಾಗಲ್ಲ. ಹೀಗೆ ಹೀಗೆ.... ಹ್ಞಾಂ...ಭಾರೀ ಚಲೋ ಕಾಣುತ್ತಿ ಕಣೆ.. ಯಾರೋ ಅಂತಿದ್ರು...."

"ಏನಂತ?"

ಮತ್ತೇನಿಲ್ಲಾ....ಸಿಟ್ಟು ಬರೋವಾಗ ನನ್ನಾಕೆ ರಂಭೇಂತ..."

"ನಾನೇನೂ ರಂಭೇನೂ ಅಲ್ಲ. ಮೇನಕೇನೂ ಅಲ್ಲ..."

ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಕಾಮರಾಜ

"ಮತ್ತೆ ಊರ್ವಶಿ.." ಕಿಲೋತ್ತಮೆ...."

"ಛೀ.. ನಿಮ್ಗೇನಾಗಿದೇಂದ್ರೆ..."

'ಆಗೋದೇನೂ? ಚಿತ್ರ ನೋಡಿ ನೋಡಿ ನಿಂತು ನಿಂತು ಸಾಕಾಗಿ ಹೋಗಿದೆ...."

'ಒರಗಿಕೊಳ್ಳಿ ಪಾಪ.... ಈ ಜಿಚಯಂದು ಬಿಡಿಸಿಯೇ ಇದೆ....'

'ಉಸ್ಸಪ್ಪ, ಅಲ್ಲಾ ಅದೇನೋ ಕೇಳ್ತಾ ಇದ್ದಿಯಲ್ಲಾ....'

"ಕೇಳ್ತಾ ಇದ್ದೆ.... ಆದ್ರೆ..."

"ಬೇಡ ಮಾರಾಯ್ತಿ.... ಹೌದು, ಕಾಂಗ್ರೆಸ್ ಅಧಿವೇಶನ ದುರ್ಗಾಪುರದಲ್ಲಿ..."

'ಹೌದು, ಈಗ ನೆನಪಾಯ್ತು....'

"ಇನ್ನು ನೀನು ಬಾಯಿ ಬಿಡಿಸೋದು ಬೇಡ ನಾನೇ ಎಲ್ಲಾ ಹೇಳ್ತೀನಿ..."

(ಹದಿಮೂರನೇ ಪುಟ ನೋಡಿರಿ)

1964 - ಕೆನರಾ ಬ್ಯಾಂಕಿನ ಮಹತ್ವಾಧನೆಯ ವರ್ಷ

ಡಿಪಾಸಿಟ್ಸ್

1963

ರೂ. 72.37 ಕೋಟಿಗಳು

1964

ರೂ. 88.06 ಕೋಟಿಗಳು

(ಆಡಿಟ್ ಆಗಲಿರುವ ಅಂಕಿಗಳು)

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪಿತ: 1906)

ರಿಜಿಸ್ಟರ್ಡ್ ಆಫೀಸ್: ಮಂಗಳೂರು   ಆಡಳಿತ ಕಛೇರಿ: ಬೆಂಗಳೂರು

ವಿಶ್ವದಾದ್ಯಂತ ಪ್ರತಿನಿಧಿಗಳು

ಚಂದಾದಾರರಲ್ಲಿ

ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44 ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿಯೂ ವಿನಂತಿಸಿದ್ದೆವು ಇನ್ನೂ ಕಳಿಸದವರು ಚಂದಾಹಣವನ್ನ ಸಿಂಡಿಕೇಟ್ ಬ್ಯಾಂಕಿನ ಯಾವಡೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ವಿಚಾರ ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು ವಿ.ಪಿ ಮಾಡಿದರೆ ?? ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ವಿ.ಪಿ. ಮಾಡಬೇಕಾಗುತ್ತದೆ

ಭಾರತದಲ್ಲಿ

ಅಣ್ವಸ್ತ್ರ ತಯಾರಿಗೆ ಅಡೆತಡೆಗಳು

ಬರೆದವರು: ಶ್ರೀ ಶಿವಶಂಕರ.

ಭಾರತದ ಅರ್ಥಿಕ ಅಮಾತ್ಯ ಟಿ. ಟಿ. ಕೆ.ಯವರು ಭಾರತದ ಆರ್ಥಿಕ ಪರಿಸ್ಥಿತಿ ಅಣ್ವಸ್ತ್ರ ತಯಾರಿಕೆಗೆ ಅನುಕೂಲವಾಗಿಲ್ಲವೆಂದಿರುವದರ ಕುರಿತು ಕಳೆದ ವಾರ ಚರ್ಚಿಸಿರುವೆವು. ಭಾರತೀಯರಿಗೆ ಆ ಮಾತು ಎಂತು ಅಪಮಾನಕರವಾಗಿದೆಂಬುದನ್ನೂ ನೋಡಿರುವೆವು. ಸ್ವಾಭಿಮಾನಿ ಸಿಂಹ ರಾಣಾಪ್ರತಾಪನು ಕಾಡುಮೇಡುಗಳಲ್ಲಿ ತಿರುಗಾಡುತ್ತಿದ್ದಾಗ ಇದ್ದ ಪರಿಸ್ಥಿತಿಗಿಂತಲೂ ಇಂದಿನ ನಮ್ಮ ಸರಕಾರದ ಸ್ಥಿತಿ ನಿಜವಾಗಿ ಶೋಚನೀಯವಾಗಿ ಇದೆ ಏನು? ಆರ್ಥಿಕ ಪರಿಸ್ಥಿತಿಯಲ್ಲಂತೂ ಖಂಡಿತ ಹಾಗೆ ಇಲ್ಲ. ಆಕ್ರಮಣಗಾರರ ಆಳ್ವಿಕೆಯನ್ನು ಕೊನೆಗೊಳಿಸಲೇಬೇಕೆಂದಾತ ರಕ್ಷೆ ಕಟ್ಟಿಕೊಂಡಿದ್ದ. ಭಾರತ ಮಾತೆಯ ಬಂಧನವನ್ನಾತ ಬಿಡಿಸಿದ. ನಮ್ಮಲ್ಲಿಂದ ಆ ದೃಢತೆ ಇದೆಯೇ? ಅದಕಷ್ಟು ಇಲ್ಲದಿರುವದರಿಂದಲೇ ಮೀನಮೇಷವೆಣ್ಣುತ್ತಿದ್ದೇವೆ. ಕಮ್ಯೂನಿಸ್ಟ್ ಚೈನಾದ ವಿದೇಶಾಂಗ ಮಂತ್ರಿ ಚೆನ್ ಈಯು ಮಾತುಗಳನ್ನು ಈ ಸಂದರ್ಭದಲ್ಲಿ ಕೊಡುವದೊಳ್ಳೆಯದು. "ಉಪವಾಸವಾದರೂ ಬಿದ್ದೇನ, ಏದರಕ್ಷೆ ಇಲ್ಲದೆ ಹೋದೇನು ಅಥವಾ ಬತ್ತಲೆ ಬೇಕಾದರೂ ಇದ್ದೇನು ಆದರೂ ಅಣುಗುಂಡು ತಯಾರಿಸುವ ಹಕ್ಕನ್ನು ಬಿಟ್ಟು ಕೊಡಲಾರೆನು. ಅಣುಗುಂಡನ್ನು ತಯಾರಿಸಿ ಹಸಿವೆಯಿಂದಾದರೂ ಇದ್ದೇನು ಮತ್ತು ಬತ್ತಲೆ ಬೇಕಾದರೂ ಹೋದೇನು, ಆದರೂ ರಕ್ಷಣಾರಂಗದಲ್ಲಿ ಬತ್ತಲೆ ನಿಲ್ಲಲಾರೆನ." ನಾವು ಇಂದು ಏನು ಹೇಳುತ್ತಿದ್ದೇವೆ? ರಕ್ಷಣೆಯು ಮಾತು ಹಾಗಿರಲಿ, ಬತ್ತಲೆಯಾಗಿದ್ದರೂ ಚಿಂತಿಲ್ಲ ಹೊಟ್ಟೆಗೆ ದೊರಕಿದರೆ ಸಾಕು! ಎಂತಹ ವ್ಯತ್ಯಾಸ! ಈ ದೃಷ್ಟಿಕೋನದಿಂದ ಇತರ ರಂಗಗಳಲ್ಲಾದರೂ ಮುಂದೆ ಓಡಲು ಸಾಧ್ಯವೇನು?

ಈ ರೀತಿ ಕಾಂಗ್ರೆಸ್ ಮಂತ್ರಿ ಮಂಡಳವು ತನ್ನ ಆರ್ಥಿಕ ದುಸ್ಥಿತಿಯನ್ನು ಪ್ರಕಟಿಸುತ್ತಿರುವದಕ್ಕೆ ಸರಿಯಾಗಿಯೇ ಎಂಬಂತೆ ಸ್ವತಂತ್ರ ಪಕ್ಷವು ಭಾರತದ ರಕ್ಷಣಾ ಭಾರವನ್ನು ಅಮೇರಿಕಕ್ಕೆ ಬಿಟ್ಟುಕೊಡಲು ಹೇಳುತ್ತಿದೆ. ಕಾಂಗ್ರೆಸ್ ಮಂತ್ರಿ ಮಂಡಳವು ಬಾಯಿಬಿಟ್ಟು ಇದಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸದಿದ್ದರೂ, ಪರೋಕ್ಷವಾಗಿ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಪದ ಶಬ್ದ ಬೇರೆಯಾದರೂ ಇಂಗಿತಾರ್ಥ ಒಂದೇ. ಇಂದು ಚೈನಾವು ಅಣುಗುಂಡು ಹಾಕಿ ಬಿಟ್ಟಲ್ಲಿ ಉಳಿದ ಜಗತ್ತು ಸುಮ್ಮಗಿರುವದಿಲ್ಲ ಇದೆ. ನಮಗೆ ಸಹಾಯ ಮಾಡುತ್ತದೆ. ಅಮೇರಿಕಾ ನಮಗೆ ಆಶ್ವಾಸನೆ ಇತ್ತಿದೆ ಇತ್ಯಾದಿಯಾಗಿ ನಮ್ಮ ಮಂತ್ರಿ ಮಹಾಶಯರುಗಳು ಹೇಳುತ್ತಿದ್ದಾರೆ. ಅಮೇರಿಕದಿಂದಾದರೂ ಸರಿ, ರಷ್ಯಾದಿಂದಾದರೂ ಸರಿಯೇ, ಸಹಾಯ ಎಲ್ಲಿಂದ ಬಂದರೂ ಸ್ವೀಕರಿಸಿಕೊಂಡು ನಮ್ಮ ಕಾಲಿನ ಮೇಲೆಯೇ ನಾವು ನಿಂತುಕೊಳ್ಳಬೇಕೆಂದು ಭಾರತೀಯ ಜನಸಂಘ ಸಾರುತ್ತಿದೆ. ಏನಿದ್ದರೂ ರಷ್ಯಾದಿಂದ ನೆರವು ಬರುವಂತಿಲ್ಲವೆಂಬುದನ್ನು ಕೆಟ್ಟಿನವರು ಒಪ್ಪಿಕೊಂಡಿದ್ದಾರೆ. ಒಪ್ಪಂದ ನಡೆದಿದೆಯಾದರೂ, ನಮ್ಮ ಹಿಮಾಲಯದ ಪೂರ್ಣ ಪರಿಚಯವನ್ನು ರಷ್ಯನರಿಗೆ ಮಾಡಿಸಿಕೊಟ್ಟರುವೆವಾದರೂ ಅವರ ಮಿಗ್ ಇಂದೂ ಪ್ರದರ್ಶನದ ವಸ್ತುವೇ ಆಗಿಬಿಟ್ಟಿದೆ ಅದರಿಂದ. 'ಬರುತ್ತದೆ' ಅಥವಾ ಬದಕ್ಕಿಂತಲೂ 'ನಿರೀಕ್ಷಿಸಿರಿ, ಬರಲಿಕ್ಕಿದೆ' ಯಾಗಿದೆ. ಕಳೆದ ಸಲ ಅಮೇರಿಕ ಶಸ್ತ್ರ ಸಹಾಯ ನೀಡಿರುವದರಿಂದ ಈಗಲೂ ಹಲವರು ಅದರ ಕನಸನ್ನೇ ಕಾಣುತ್ತಿದ್ದಾರೆ. ನಮಗೆ ಬೇಕಾದಂತೆ ಅಮೇರಿಕ ನೆರವು ನೀಡೀತೇ? ಅದರ ಉತ್ತರ ಆಶಾದಾಯಕವಾಗಿರುವದಿಲ್ಲ. ಅದಕ್ಕೆ ಕಾರಣ ಪಾಕಿಸ್ತಾನವಿದೆ ಹಿಂದೆಯೂ ಇದರಿಂದಾಗಿಯೇ ನಮಗೆ ನಾಶ್ಯವಾಗಿರುತ್ತಿಸೆ. ನಾವು ಎಫ್ ೧೦೪ ಫೈಟರನ್ನು ಕೇಳಿದ್ದೆವು. ಅಮೇರಿಕ ಕೊಡಲು ಒಪ್ಪಲಿಲ್ಲ, ನಿರಾಕರಿಸಿಬಿಟ್ಟಿತು. ಯಾಕೆ? ಪಾಕಿಸ್ತಾನ ಪ್ರಕೋಪ ಪ್ರಕಟಿಸಿತು. ಸಾಗಾಣಿಕೆಯ ವಿಮಾನವನ್ನಾದರೂ ಅಮೇರಿಕ ಏಕೆ ಕೊಡಲಿಲ್ಲ? ನಮಗದರ ಆವಶ್ಯಕತೆ ಹೇಳತೀರದು. ಅವನ್ನು ಕೊಡಲು ಅಮೇರಿಕನರಿಗೆ ಮನಸ್ಸಿರಬಹುದಾದರೂ ಹೊರಗೆ ತಡೆ ಇದೆ. ಹೀಗಿರಲಾಗ ನಾವು ಕೈ ಕಟ್ಟಿ ಕುಳಿತುಕೊಂಡು, ಸಾಲದ ಹಣದಿಂದ ತುಪ್ಪ ಉಣ್ಣುತ್ತ, ಅಮೇರಿಕ ನಾಮ ಜಪಿಸುತ್ತಿದ್ದರೆ ಚೈನಿ ಅಣುಗುಂಡಿನಿಂದ ತಪ್ಪಿಸಿಕೊಳ್ಳಲು ಸಾಧ್ಯವೇನು? ಇದು ಒಂದು ಮುಖ.

ಅಣುಗುಂಡು ತಯಾರಿಸಕೂಡದೆಂದು ಅಮೇರಿಕ, ಬ್ರಿಟನ್, ರಷ್ಯಾ ..ಹೇಳುತ್ತಿವೆ. ಹೇಳುತ್ತಿರುವಂತೆ ಅವು ಪ್ರಗತಿಪಥದಲ್ಲಿ ಸಾಗುತ್ತಿವೆ. ಮಾತ್ರವಲ್ಲ, ಚೈನಾಕ್ಕೆ ಅಣುಗುಂಡು ತಯಾರಿಕೆಗೆ ಬೇಕಾಗಿರುವ ಯಂತ್ರ ಸಾಮಗ್ರಿಗಳನ್ನು ಬ್ರಿಟನ್ ಕೊಟ್ಟಿರುತ್ತದೆ. ಚೈನಾಕ್ಕೂ ಬ್ರಿಟನಿಗೂ ವ್ಯಾಪಾರ ಒಪ್ಪಂದ ನಡೆದಿರುತ್ತದೆ. ಅಮೇರಿಕವೂ ಅಂತಹ ಒಪ್ಪಂದ ಮಾಡಿಕೊಳ್ಳಲಿಕ್ಕಿಲ್ಲವೆಂದು ಹೇಗೆ ಹೇಳುವದು? ಚೈನೀಯರು ಅಮೇರಿಕರನ್ನು ಹೀನಾಯವಾಗಿ ಕಾಣುತ್ತಿರುವದರಿಂದವೇನು? ಕಮ್ಯೂನಿಸ್ಟರಿಗೂ ಬಿರ್ಲಾರಿಗೂ ಏನು ಸಂಬಂಧ? ಎಣ್ಣೆ-ಸೀಗೆ ಎಂಬ ಉತ್ತರ ತಟ್ಟನೆ ಬಂದೀತು. ವಾಸ್ತವ್ಯ ಸ್ಥಿತಿ ಹಾಗಿಲ್ಲ. ಕೇರಳದಲ್ಲಿ ಕಮ್ಯೂನಿಸ್ಟ್ ಕರಾರ ಶಾಸನವಿದ್ದಾಗ ಅವರು ಬಿರ್ಲಾರಿಗೆ ಸುಸ್ವಾಗತವಿತ್ತರು. ಕೈಗಾರಿಕಾಧಿಪತಿ ಕೇರಳವನ್ನು ಕಾಪಾಡು ಎಂದರು. ಅವರೂ ಮುಂದೆ ಬಂದರು. ಅನಂತರ ಕಾಂಗ್ರೆಸ್ಸ್ ಶಾಸನ ಬಂದಾಗ ಎಲ್ಲಾ ಹಾಳಾಗಿತ್ತು. ಹೀಗೆ ಮಾರುಕಟ್ಟೆಗಳಿಗಾಗಿ ಬಂಡವಾಳಿಗರು ಪ್ರಯತ್ನಿಸುವದು ಹೊಸತೇನಲ್ಲ. ನಾಳೆ ಕೈಕೆಸರಿಗೇನಾದರೂ ಆಗಿ, ಕಮ್ಯೂನಿಸ್ಟ್ ಚೈನಾ ಅಮೇರಿಕವನ್ನು ಆಲಂಗಿಸಿ ಚೆಲ್ಲಾಟಕ್ಕೆ ಬಗೆದಲ್ಲಿ ಅಮೇರಿಕನರು ಅಡಿಯ ಮುಂದಿಡದಿರಲಾರರು "ಅಯ್ಯೋ! ನಾವು ಮೋಸ ಹೋದೆವೆಂದು ನಂತರ ನಾವು ತಲೆ ಮೇಲೆ ಕೈ ಇಟ್ಟುಕೊಂಡು ಕುಳಿತುಕೊಳ್ಳಬೇಕಾದೀತು.

ಅಮೇರಿಕದ ಆಶ್ವಾಸನೆ ಅನುಕೂಲವಾಗಿಲ್ಲವಾದರೂ ನಾವು ಶಾಂತಿಪ್ರಿಯರು, ಸಮಾಧಾನವಾದಿಗಳು ಅಣುಗುಂಡನ್ನು ತಯಾರಿಸುವದಿಲ್ಲವೆಂದು ಶ್ರೀ ಶಾಸ್ತ್ರೀಜೀಯವರು ಶಾಂತಿನಿಕೇತನದಲ್ಲಿ ಇತ್ತೀಚೆಗೆ ತಿಳಿಯಪಡಿಸಿರುವರು. ಚೈನಾದ ಮೇಲೆ ಹಾಕಲಿಕ್ಕಾಗಿ ಭಾರತ ಅಣುಗುಂಡು ತಯಾರಿಸಬೇಕೆಂದು ಭಾರತೀಯ ಜನತೆ ಹೇಳುತ್ತಿದೆ. ಏನು? ಕಾಲು ಕೆದರಿ, ಹಾಕಲಿಕ್ಕಾಗಿ ಖಂಡಿತ ಅಲ್ಲ. ಇಲ್ಲಿ ಸಂದರ್ಭಕ್ಕೆ ಸನ್ಯಾಸಿಯು ಸನ್ಯಾಸ ಅಥವಾ ಶಾಂತಿ ದೀಕ್ಷೆಯನ್ನಿತ್ತಿದ್ದ ಕಥೆ ತಟ್ಟನೇ ಜ್ಞಾಪಕಕ್ಕೆ ಬಂದೀತು. ಕಡಿಯಬಾರದು. ವಾಸ್ತವ, ಆದರೆ ಬುಸುಗುಟ್ಟಿ ಭಯ ಹುಟ್ಟಿಸಕೂಡದೆಂದು ಆ ದಿವ್ಯ ಸನ್ಯಾಸಿಯೂ ಹೇಳಲಾರ. ಹಾಗೆಯೇ ಅಣುಗುಂಡು ಹಾಕಲು ಬರುವ ಚೈನಾಕ್ಕೆ ಬುಸುಗುಟ್ಟುವಂತೆ ಅಣುಗುಂಡಿನ ಬೆದರಿಕೆ ಹಾಕಲು ನಮ್ಮ ಬಳಿಯಲ್ಲಿ ಅದು ಇರಬೇಕು, ಅಷ್ಟೆ.

ಭಾರತ ಅಣುಗುಂಡನ್ನು ತಯಾರಿಸುವದಿಲ್ಲವೆನ್ನುತ್ತಾರೆ ಭಾರತದ ಪ್ರಧಾನಿಯವರು. ಭಾರತವು ಅಣುಗುಂಡನ್ನು ತಯಾರಿಸಕೂಡದೆನ್ನುತ್ತಾರೆ ಬ್ರಿಟನಿನ ಪ್ರಧಾನಿಯವರು. ಅದರಲ್ಲಡಗಿರುವದೇ ಅವರವರ ಮನೋಭಾವನೆ. ಶ್ರೀ ಶಾಸ್ತ್ರೀಜೀಯವರಂತಹರೋ ನಿಷ್ಕಳಂಕ, ಅಂದರೆ ಮನಸ್ಸಿನಲ್ಲಿ ಗುಣಾಕಾರ ಭಾಗಾಕಾರ ಹಾಕಿಕೊಳ್ಳದೆ ಹೇಳಿದ್ದಾರೆ, ಬ್ರಿಟನಿನ ಪ್ರಧಾನಿಯವರು ತಮ್ಮ ರಕ್ತದಲ್ಲಿ ಬಂದಿರುವ ವ್ಯಾಪಾರೀ ಮನೋಭಾವದಿಂದಲೇ ಅದನ್ನು ಹೇಳಿರುವರು. ಭಾರತ ಅಣುಗುಂಡನ್ನು ತಯಾರಿಸದಿದ್ದಲ್ಲಿ ಬ್ರಿಟನಿಗೆ ಅದೊಂದು ಮಾರುಕಟ್ಟೆಯಾಗುತ್ತದೆ, ಒಂದು ಗಿರಾಕಿ ಸಿಗುತ್ತದೆ, ನಾಳೆ ಏನಾದರೂ ಅದರ ಆವಶ್ಯಕತೆ ಕಂಡು ಬಂದಲ್ಲಿ ಕೊಳ್ಳಲು ಅಥವಾ ರಾಜಗೋಪಾಲಾಚಾರಿಯವರಂತಹ ಅತಿ ತೀಕ್ಷ್ಣ ಬುದ್ಧಿವಂತರು ಒಂದು ಉಪಾಯ ಹು

(ಹನ್ನೆರಡನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p.a	7ರಿಂದ 11 ತಿಂಗಳು % p a	12ರಿಂದ 23 ತಿಂಗಳು. % p a.	24ರಿಂದ 35 ತಿಂಗಳು % p a.	36ರಿಂದ 47 ತಿಂಗಳು. % p a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು % p a
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ -	5-25	5-50	5-75	6 00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್] ಶ್ರೀ
ರಿಜಿಸ್ಟರ್ಡ್ ಆಫೀಸು:— ಕೋರ್ಟ್ ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ಒಂದು ಅಭಿಪ್ರಾಯ

ಪಣಂಬೂರಿನ ಸರ್ವ ಋತು ರೇವು! ಮತ್ತದರಲ್ಲಿ ಮುಳುಗುತ್ತಿರುವ ನಾವು!!

ಪ್ರಿಯ ನಂದನೇಶ್ವರನಿಗೆ,

ನಿನ್ನ ದೂರದ ಸಹೋದರ ವಿಶ್ವೇಶ್ವರನ ಅನಂತ ಆಶೀರ್ವಾದಗಳು.

ನೀನು ಕೂಲಂಕಷವಾಗಿ ಬರೆಯುದಿದ್ದರೂ, ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವಾರ್ತಾವಿವರಗಳನ್ನೂ, ಚಿತ್ರಗಳ ಪಡಿಯಚ್ಚುಗಳನ್ನೂ ಅವಲೋಕಿಸಿದ ನನಗಿಂದು ನವಮ್ಮಾರಿನ ನಿವಾಸಿಗಳ ಬಗೆಗೆ ಎಷ್ಟೊಂದು ಗೌರವ, ಹೆಮ್ಮೆ, ಆದರಗಳು ಮೂಡಿವೆ ಎಂಬುದನ್ನು ವಿವರಿಸಲು ಪದ ಸಮೂಹಗಳೇ ಕನ್ನಡದಲ್ಲಿ ಸಿಗಲಾರವೋ ಎಂಬಷ್ಟು ವಿಭ್ರಮೆಗೊಂಡಿಹುದಾಗಿದೆ. ನೀವು ಕಳೆದ ತಾ. 21-12-64 ರಂದು ನಡೆಸಿದ ಸಾಮೂಹಿಕ ಅನ್ನ ಸತ್ಯಾಗ್ರಹ, ಪ್ರದರ್ಶನಗಳ ಪ್ರತಿಕ್ರಿಯೆ ಇಲ್ಲಿ ಎಷ್ಟೊಂದು ಮಟ್ಟಿಗೆ ಜನತೆಯ ಕುತೂಹಲವನ್ನು ಕೆರಳಿಸಿದೆಯೆಂದರೆ, ದೇಶದಾದ್ಯಂತ ಜನತೆ ಮತ್ತು ಪತ್ರಿಕೆಗಳು ಪಣಂಬೂರಿನತ್ತ ಕಣ್ಣೆತ್ತಿ ನೋಡುವಂತಾಗಿದೆ, ಕಿವಿ ನಿಮಿರಿಸಿ ಕೇಳುವಂತಾಗಿದೆ. ಹೊರ ನಾಡಿನಲ್ಲಿರುವ ನಾವೆಲ್ಲ ಅಭಿಮಾನದಿಂದ, ನಾವು ಬಾಲ್ಯದಲ್ಲಿ ಕುಡಿದ ಜಲ, ನಡೆದ ನೆಲ, ಮತ್ತು ಓಡಾಡಿದ ಸ್ಥಳಗಳನ್ನು ಸ್ಮರಿಸುವಂತಾಗಿದೆ. ಸಾಮೂಹಿಕ ಸತ್ಯಾಗ್ರಹದಲ್ಲಿ ದೇಶಕ್ಕೇ ಆದರ್ಶಪ್ರಾಯವಾದ ಹೊಸ ಇತಿಹಾಸ ನಿರ್ಮಿಸಿದ ಕೀರ್ತಿ ನಿಮ್ಮದಾಗಿದೆ.

ಆದರೆ ನಾನಿಂದು ಬೆರಗಾಗುತ್ತಿರುವುದು ಇನ್ನೊಂದು ವಿಚಾರಕ್ಕಾಗಿ; ಜನತೆಯಿಂದಲೇ ಆರಿಸಲ್ಪಟ್ಟ ಜನತಾ ಸರಕಾರ, ಜನರ ಕೂಗಿಗೇ ಕಿವುಡಾಗಿರುವ ವಿಚಿತ್ರ ಪ್ರವೃತ್ತಿಗಾಗಿ. ಹಸಿದ ಹೊಟ್ಟೆಯಲ್ಲಿ ಕೂತಿದ್ದ, ಹಾಲುಗೆನ್ನೆಯ ಹಸುಗೂಸುಗಳ, ಮುಪ್ಪಡರಿದ ಮಾತೆಯರ, ಬಾಡಿದ ಮುಖಗಳನ್ನು ಕಂಡು ಕಟುಕನಾದರೂ ಕರಗಬಹುದಾಗಿದ್ದಾಗ, ತನ್ನ ಜಿಲ್ಲೆಯ ಜನರ ಸುಖದುಃಖಗಳಲ್ಲಿ, ಸಂಕಷ್ಟಗಳಲ್ಲಿ ಸಮಭಾಗಿಯಾಗಿರಬೇಕಾಗಿದ್ದ, ಜಿಲ್ಲಾಧಿಕಾರಿಯಲ್ಲಿ, ತನ್ನವರ ಮುಖದರ್ಶನ ಮಾಡಿ, ಒಂದೆರಡು ಸಮಾಧಾನದ ಮಾತುಗಳನ್ನಾದರೂ ಆಡುವಷ್ಟು ದಯೆ ಇಲ್ಲದಾಯಿತೇ? ೬–೭ ಸಾವಿರ ಮಂದಿ, ೬–೭ ಮೈಲಿ ದೂರದಿಂದ ನಡೆದು ಬಂದು, ದೀನವದನರಾಗಿ ಕುಳಿತಿದ್ದಾಗ, ಅವರನ್ನು ಮನುಷ್ಯ ವರ್ಗದವರೆಂದು ಗಣಿಸದಷ್ಟು ಕಠಿಣಾತ್ಮರೇ ಸರಕಾರದ ಅಧಿಕಾರಿಗಳು? ನೀವೇನೂ ಅಲ್ಲಿಗೆ ಅವರ ಅಧಿಕಾರವನ್ನು ಅವರ ಕೈಯಿಂದ ಕಿತ್ತುಗೊಳ್ಳಲು, ಸರಕಾರದ ವಿರುದ್ಧ ದಂಗೆಯೆಬ್ಬಿಸಲು ಹೋಗಿಲ್ಲ. ನೀವು ಹೋದುದು, ಬರಿಯ ನಿಮ್ಮ ಕೊರಗನ್ನು ಹೇಳಿಕೊಳ್ಳುವುದಕ್ಕೆ. ಅದೂ, ದೇಶದ ಹಿತದೃಷ್ಟಿಯಿಂದ, ನಾಕೆನಿಸುವಷ್ಟು ಭೂತ್ಯಾಗ ಮಾಡಿ, ನೊಂದು, ಕೊನೆಗೆ "ಇನ್ನು ಸಾಧ್ಯವಿಲ್ಲ ನಾವೂ ಬದುಕಬೇಕು, ನಮ್ಮ ಹೆಂಡತಿ ಮಕ್ಕಳನ್ನು ಬಂದರದ ಹೆಸರಿನಲ್ಲಿ ಬೀದಿಗೆಳೆಯಬೇಡಿ, ಹೊಲ ಜಮೀನುಗಳನ್ನು ಬಂಜರಾಗಿಸಬೇಡಿ. ನಮ್ಮನ್ನು ತ್ರಿಶಂಕುಸ್ವರ್ಗದಿಂದ ಕಾಪಾಡಿ" ಎಂದು ಮೊರೆಯಿಡುವುದಕ್ಕೆ.

ನೀವು ಬೃಹತ್ ಬಂದರ ನಿರ್ಮಾಣಕ್ಕೆ ಪ್ರತಿಕೂಲರಲ್ಲ ಎಂಬುದು ನಿಮ್ಮ ವರ್ತನೆಯಿಂದಲೇ ವಿದಿತವಾಗುತ್ತದೆ. ಬಂದರವೇ ಬೇಡವೆಂಬ ಭಾವನೆ ನಿಮ್ಮಲ್ಲಿರುತ್ತಿದ್ದರೆ, ಬಂದರು ನಿವೇಶನಕ್ಕೆ ಅಗತ್ಯವಿರುವ ೧೨೦೦ ಎಕ್ರೆ ಜಮೀನನ್ನು ತೊರೆಯಲು ಸಿದ್ಧರಾಗುತ್ತಿದ್ದಿರಾ? ತಾತ ಮುತ್ತಾತರ ಕಾಲದಿಂದ ಹುಟ್ಟಿ, ಬೆಳೆದು, ಬಾಳಿ ಬಂದ ಹೊನ್ನಿನಂತಹ 'ಹೊನ್ನ ಬಯಲ'ನ್ನು ತೊರೆದು, 'ಕಾಟಿಪಳ್ಳ'ದಂತಹ ಕಟ್ಟಡವಿಗೆ ಎಷ್ಟು ಮಂದಿ ಆಗಲೇ ಹೋಗಿಲ್ಲ? ಅಂತಹ ನಿರಾಶ್ರಿತರಿಗೆ ಸರಕಾರ ಏನು ಅನುಕೂಲತೆ ಒದಗಿಸಿದೆ? ಕುಡಿಯಲು ನೀರೆ? ಉಳಲು ಹೊಲವೆ? ಮುಂಗಾರು ಮಳೆಯ ಹೊಡೆತವನ್ನು ತಡೆದುಕೊಳ್ಳಲು ಶಕ್ತವಾಗಿರುವ ಒಂದೇ ಒಂದು ಗುಡಿಸಲೇ? 'ರಾಜಕೀಯ ಸಂತ್ರಸ್ಥರು' ಎಂಬ ಶಿರೋನಾಮೆಯ ಕೆಳಗೆ, ಪಾತ್ರಾಪಾತ್ರ ವಿವೇಚನೆಯಿಲ್ಲದೆ ೫–೧೦ ಎಕ್ರೆಗಳಷ್ಟು ಭೂಮಿ ಹಂಚುತ್ತಿರುವ ಸರಕಾರ, ನಾಡಿನ ಹಿತಕ್ಕಾಗಿ ವನವಾಸ ಮಾಡುತ್ತಿರುವ ಜನತೆಗೆ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆ ಕೂಡಾ ಮಾಡಿಲ್ಲ! ಬದಲಾಗಿ ಬರಿಯ ಬಣ್ಣನೆಯ ಮಾತುಗಳಿಂದ, ...ಆಶ್ವಾಸನೆಗಳ ಥಳುಕಿನಿಂದ, ಇನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಮಾರೀಚನು ಚಿನ್ನದ ಜಿಂಕೆಯಾಗಿ, ರಾಮನನ್ನು ದೂರ,ದೂರ ಸೆಳೆದಂತೆ, ಜನರನ್ನು ಹಳ್ಳಕ್ಕೆಳೆದಿದೆ. ಇದನ್ನು ಕಂಡು ಉಳಿದ ನಿವಾಸಿಗಳು ಬೆದರಿದ್ದಾರೆ. ಹೀಗಾದರೆ, ಮುಂದೆ ನಮ್ಮ ಗತಿಯೇನು ಎಂದು ಚಿಂತಾಕ್ರಾಂತರಾಗಿದ್ದಾರೆ.

ಇನ್ನೂ ಹೆಚ್ಚಿನ ೧೫೦೦ ಎಕ್ರೆ ಜಮೀನಿನ ಮೇಲಿಕೇ ಸರಕಾರದ ಕಣ್ಣು? ಕಲ್ಪನೆಯೂ ಮೂಡಿ ಬಾರದ, ಗಗನ ಕುಸುಮದಂತಿರುವ ವಾಣಿಜ್ಯೋದ್ಯಮಗಳ ಉದ್ಧಾರಕ್ಕಾಗಿ ಈಗಲೇ ನಿವೇಶನಗಳನ್ನು ಖಾಲಿಮಾಡಿಸಿ, ಕಾದಿರಿಸುವ ಈ ಹುಚ್ಚೇನೆನ್ನಬೇಕು? ತೆಲುಗಿನಲ್ಲೊಂದು ಗಾದೆಯಿದೆಯಂತೆ!—"ಅಳಿಯ ದೊರಕಿಲ್ಲ, ಮಗಳಿಗಿನ್ನೂ ಮದುವೆಯಾಗಿಲ್ಲ, ಮಗುವಿನ್ನೂ ಹುಟ್ಟಿಲ್ಲ. ಮೊಮ್ಮಗನ ಹೆಸರು ವೆಂಕಟರಮಣ." ಹಾಗಿದೆ, ಈ ಕತೆ! ನಮಗೂ ಈಗೀಗ ಅರ್ಥವಾಗುತ್ತಿದೆ. ಈ ಕಣ್ಣು ಮುಚ್ಚಾಲೆಯಾಟದ ಹಿಂದಿರುವ ಶಕ್ತಿಗಳೇನು ಎಂದು. ದೇಶೋನ್ನತಿಯ ಹೆಸರಲ್ಲಿ, ಹಲ ಕೆಲವು ಜನ ಬಂಡವಲಶಾಹಿಗಳು ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವ ಯತ್ನ ನಡೆಸಿದ್ದಾರೆ. ನಿರ್ಮಿತವಾಗಲಿರುವ ಬೃಹತ್ ಬಂದರದ, ಆಗು ಹೋಗುಗಳು, ಭವಿಷ್ಯತ್, ತಮ್ಮ ಕೈಯೊಳಗಿರಬೇಕೆಂಬ ದೃಷ್ಟಿಯಿಂದ ಇಂತಹ ವ್ಯಕ್ತಿಗಳು ಬಂದರದ ಸುತ್ತಮುತ್ತ ತಮ್ಮ, ತಮ್ಮವರ, ಕಾರ್ಖಾನೆಗಳ ಕೋಟೆಯನ್ನು ನಿರ್ಮಿಸಿ, ಮೂರನೆಯವರು, ಅಲ್ಲಿ ಕಾಲಿಡದಂತೆ ಮಾಡುತ್ತಾರೆ. ಸರಕಾರ ಕೂಡಾ ಅವರಿಚ್ಛೆಯಂತೆ ಕುಣಿಯಬೇಕಾಗುತ್ತದೆ, ಈಗಲೇ ಕುಣಿಯುತ್ತಲೂ ಇದೆ.

ಆದರೂ ನನಗೆ ದೃಢವಾದ ನಂಬುಗೆಯಿದೆ. ಈ ಕಾನೂನಿನ ಕಣ್ಣುಮುಚ್ಚಾಲೆ, ದಬ್ಬಾಳಿಕೆ ಬಹಳ ದಿನ ನಡೆಯಲಾರದು. ಏಕೆಂದರೆ ನೀವೀಗ ಎಚ್ಚತ್ತಿದ್ದೀರಿ. ಕಾನೂನಿನ ಹೆಸರಲ್ಲಿ ನಡೆಯುವ ಬಹುದಾದ ಅನ್ಯಾಯಗಳನ್ನು ಎದುರಿಸಿ, ಹೋರಾಡಲು ದೃಢಮನಸ್ಕರಾಗಿದ್ದೀರಿ. ನಿಮ್ಮ ಜಿಲ್ಲೆಯ ಜನತೆಗೆ ಹೆದರಿ, ಸಾಗರಕೂಡಾ ತನ್ನ ಮೇರೆಮೀರಿ ಮುಂದೊತ್ತುವುದಿಲ್ಲವಂತೆ. ಆದುದರಿಂದ ನಿಮ್ಮ ಸಂಘಟನೆಯ 'ಮಹಾ ಪರಶು'ವಿನ ಮುಂದೆ, ದುರಾಡಳಿತದ ಯಾವ ಕಾನೂನಿನ ಕರಗಳೂ ಮೇಲೇಳಲಾರವು.

ಸಾಕು! ಬರೆಯುತ್ತಾ ಬರೆಯುತ್ತಾ, ನಿಮಗಿಂತ ಹೆಚ್ಚಾದ ಆವೇಶ ನನಗೇ ಬರುವಂತಿದೆ. ಕ್ಷಮಿಸು. ಇನ್ನೊಮ್ಮೆ ಬರೆಯುತ್ತೇನೆ. ನಿಮ್ಮ ಮುಂದಿನ ಚಟುವಟಿಕೆಗಳ ಕುರಿತು ಸುದೀರ್ಘ ಪತ್ರವನ್ನು ನಿರೀಕ್ಷಿಸುತ್ತಿರುವ,

—ನಿನ್ನಣ್ಣ ವಿಶ್ವೇಶ್ವರ.

Notice

In the Court of the Munsif of Coondapoor.

R. E. P. No. 514/64 in O. S. No. 397/48.

Between:

Venkamma ... Petitioner

and

Parameshwara Bhatta and others ... Respondents.

To,

1. Ramakrishna Bhatta son of Shankara Bhatta.
2. Manjunatha Bhatta son of Shankara Bhatta.
3. Mukamma widow of Shankara Bhatta for herself and as guardian of her minor children Shankari and Ganapathy Bhatta.
4. Manorama Amma wife of Ganapathy Bhatta.
5. Parvathy Amma wife of Gajanana Bhatta.

(Respondents 2, 3, 9, 11 and 12).

Please take notice that the above execution petition filed by the petitioner against the respondents for recovering arrears of maintenance due to her as decree in O. S. No. 397/48 on the file of the above Court, in which the petitioner had filed sale papers in order to bring the immoveable properties charged for maintenance to sale, and the said execution petition stands posted to 18–1–1965, for settlement of the terms of sale. You are hereby given notice that you are requested to appear before the said court on 11 A.M. on 18-1-65 either in person or through a duly instructed pleader. Failing which you will be declared ex parte and further orders will be passed in your absence.

Sd. K. Ramappayya,
B. A. B. L.
Advocate for petitioner.

Coondapoor, 7–1–1965.

ಠೇವಣಾತಿದಾರರಿಗೆ ಸುಸಂದರ್ಭ!

ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¾%ರಿಂದ 6¾%ರ ವರೆಗಿನ ಬಡ್ಡಿ ನೀಡಲಾಗುವುದು.

೧ ವರ್ಷ ವ ಅವುಗಳಿಗೆ ಮೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6¼%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಉಡುಪಿ, ಪಿ. ಮು. ಕೋರ್ಟಿನಲ್ಲಿ

O. S. No. 363/64.

ಎಂ. ಶೀನಪ್ಪ ಶೆಟ್ಟಿ .... ವಾದಿ.

ಮತ್ತು

೧. ಜಲಜ ಶೆಡ್ತಿ–ಉಳಿಯಾರುಗೋಳಿ ಕೊರಗಯ್ಯ ಶೆಟ್ರಿ ವಿಧವೆ, 2. ಜಯಕರ, ೩. ರತ್ನಾಕರ, ೪. ದಿವಾಕರ, ೫. ಜಯಲಕ್ಷ್ಮಿ—

1ನೇ ಪ್ರತಿವಾದಿಳ ವ್ಯವಸ್ಥ ಮಕ್ಕಳು–ರಕ್ಷಕಳು—1ನೇ ಪ್ರತಿವಾದಿಳು— ಉಡ್ಪಿ ತಾಲ್ಲೂಕು ಕೋರಂಗ್ರಪಾಡಿ ಗ್ರಾಮದಲ್ಲಿರುವವರು — ಪ್ರತಿವಾದಿರು.

ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದರೆ—

1ನೇ ಪ್ರತಿವಾದಿಳ ಗಂಡ ಮತ್ತು ಮಿಕ್ಕ ಪ್ರತಿವಾದಿರ ತಂದೆ ಈಗ ಮೃತಪಟ್ಟಿರುವ ಉಳಿಯಾರುಗೋಳಿ ಕೊರಗಯ್ಯ ಸೆಟ್ರಿ ವಾದಿಗೆ ತಾ. 21–9–64ರಲ್ಲಿ ರೂ. 1000/-ಕ್ಕೆ ಬರೆಸಿಕೊಟ್ಟ ಯಾದಿನ ಅಸಲು ಬಡ್ಡಿ ಖರ್ಚು ವಸೂಲಿಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ. 20.1.1965ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಮೇಲಿನ ದಾವೆಯಲ್ಲಿ ವ್ಯವಹರಿಸುವುದಿದ್ದರೆ ಸದ್ರಿ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನಲ್ಲಿ ಸ್ವತಹಾ ವ ವಕೀಲ ಮೂಲ್ಕ ಹಾಜರಾಗಿ ಬಾಹೀಸು ಮಾಡಿಕೊಳ್ಳತಕ್ಕದ್ದು.

(By order of court)

Y. C. S. Hegde
Advocate for Pl'ff

ಉಡ್ಪಿ, ತಾ. 7–1.65.

ವಿಚಾರ ವರ್ಷ

ವಿದ್ಯಾರ್ಥಿಗಳ ವಿಕಟ ಸಮಸ್ಯೆಗಳು

ವಿದ್ಯಾರ್ಥಿ ಜೀವನವು ಮಾನವನ ಸುವರ್ಣಕಾಲ. ಹೆಚ್ಚಿನ ವಿದ್ಯಾರ್ಥಿಗಳ ಮಟ್ಟಿಗೆ ಇದು ನಿಜ. ಆದರೆ, ಇಂದು ಈ ಸುವರ್ಣ ಯುಗದಲ್ಲಿಯೇ ಅಸಂತೋಷಗೊಳ್ಳುವ, ಕೆಲವೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಾ ಬರುತ್ತಿದೆ. ಇದು ದುರ್ದೈವವಲ್ಲವೆ?

ಅಮೇರಿಕೆಯ ಒಂದು ಸುಪ್ರಸಿದ್ಧ ಕಾಲೇಜು ರಾತ್ರಿಯ ಸಮಯ. ಒಬ್ಬ ನವಯುವಕ ಕಾಲೇಜಿನ ಆವರಣದಲ್ಲಿ ನಾಲ್ಕನೆಯ ಮಾಳಿಗೆಯಿಂದ ವಾಲುತ್ತ ನಡೆದು ಬರುತ್ತಿದ್ದಾನೆ. ಕೆಳಗೆ ಪೋಲೀಸು, ಡಾಕ್ಟರ ಮತ್ತು ಆತನ ಸ್ನೇಹಿತರು ಉಸಿರು ಹಿಡಿದು ಆತನನ್ನೇ ಎದುರು ನೋಡುತಿದ್ದಾರೆ!

ಒಂದು ಪಾಶ್ಚಾತ್ಯ ವಿಶ್ವವಿದ್ಯಾಲಯದ ದೃಶ್ಯ. ರಾತ್ರಿಯ ಎರಡು ತಾಸಿಗೆ ಒಬ್ಬ ನವಯುವತಿ ಕಾಲೇಜಿನ ಉಪಾಹಾರಗೃಹದಿಂದ ಹೊರಡುತ್ತಾಳೆ. ಹೊರಗೆ ಕಾರಿನೊಳಗೆ ಅತ್ಯಧಿಕ ಶಂಕಿತನೂ ಭಯಭೀತನೂ ಆದ ನವಯುವಕನೊಬ್ಬನು ಆಕೆಯನ್ನು ಕಾಯುತಿದ್ದಾನೆ ಆತನಿಗೆ ನೂರು ಮೈಲು ದೂರದ ಡಾಕ್ಟರರೊಬ್ಬರಲ್ಲಿಗೆ ಆಕೆಯನ್ನು ಕರೆದುಕೊಂಡು ಹೋಗಬೇಕಾಗಿದೆ-ಗರ್ಭಪಾತಕ್ಕಾಗಿ!

ಇನ್ನೊಂದು ಉದಾಹರಣೆ. ಫಿಲಡೆಲ್ಫಿಯಾದ ಬಳಿಯ ರೇಲು ಹಳಿಗಳ ಪಂಕ್ತಿ. ಮುಂಜಾವದ ವೇಳೆ. ಒಂದು ರೇಲುಗಾಡಿ ವೇಗವನ್ನು ಕಡೆದು ದಢಮ್ಮನೆ ನಿಲ್ಲುತ್ತದೆ. ೧೮ ವರ್ಷದ ಬಾಲಿಕೆಯೊಬ್ಬಳ ತಲೆ ರೇಲುಪಟ್ಟಿಯಲ್ಲಿ ನೇಲುತ್ತಿದೆ!

ಇದೇ ಮಾದರಿಯ ಮಾನಸಿಕ ಅಸಂತುಷ್ಟಿಯು ಎಲ್ಲ ದೇಶದ ವಿದ್ಯಾರ್ಥಿಗಳಲ್ಲಿಯೂ ಮನೆ ಮಾಡಿದೆ. ಪಾಶ್ಚಾತ್ಯ ದೇಶಗಳ ಕಾಲೇಜುಗಳಲ್ಲಿ ಮೇಲಿನಂತಹ ಘಟನೆಗಳ ಸಂಖ್ಯೆ ಅತ್ಯಧಿಕ. ಆದುದರಿಂದ ಅಲ್ಲಿ ಇದಕ್ಕೆ ತಕ್ಕ ಚಿಕಿತ್ಸೆಯ ಏರ್ಪಾಡೂ ಇದೆ. ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಸುಮಾರು ಸೇ. ೨೦ ವಿದ್ಯಾರ್ಥಿಗಳು ಮಾನಸಿಕ ಆರೋಗ್ಯಕ್ಕೆ ಚಿಕಿತ್ಸೆ ಮಾಡಿಸುತ್ತಾರೆ. ಹಾರ್ವರ್ಡ್‌ನಲ್ಲಿ ಸೇ. ೨೫. ಆದರೂ ಈ ವಿಶ್ವವಿದ್ಯಾಲಯಗಳ ಗೌರವಕ್ಕೆ ಚ್ಯುತಿ ಬಂದಿಲ್ಲ. ಅಮೇರಿಕೆಯ ಬೇರೆ ಬೇರೆ ಕಾಲೇಜುಗಳಲ್ಲಿ ಸುಮಾರು ೬೦೦ ಮಾನಸಿಕಪರೀಕ್ಷಜ್ಞರಿದ್ದಾರೆ. ಇವರ ಅಭಿಪ್ರಾಯದಂತೆ ಅಲ್ಲಿನ ವಿದ್ಯಾರ್ಥಿಗಳಲ್ಲಿ ಸೇ. ೩೦ ಮಂದಿಗೆ ಮಾನಸಿಕ ಚಿಕಿತ್ಸೆಯ ಆವಶ್ಯಕತೆಯಿದೆ; ಸೇ. ೧೦ರಷ್ಟು ಮಾತ್ರ ಚಿಕಿತ್ಸೆನಡೆಸುತ್ತಾರೆ

ಪಾಶ್ಚಾತ್ಯ ದೇಶೀಯ ವಿದ್ಯಾರ್ಥಿಗಳಲ್ಲಿರುವ ಮಾನಸಿಕ ವಿಕ್ಷೋಭೆ ಮತ್ತು ಅಸಮತೋಲನೆಯ ಅನೇಕ ಚಿತ್ರಗಳು ಗೋಚರವಾಗುತ್ತವೆ. ಕೆಲವೊಮ್ಮೆ ತಲೆನೋವು, ದುಃಸ್ವಪ್ನ, ಪರೀಕ್ಷಾಪೂರ್ವದ ಕೋಟಲೆಗಳು ಕಂಡು ಬರುತ್ತವೆ. ಮತ್ತೆ ಕೆಲವೊಮ್ಮೆ ಜೂಜಾಟ, ಪ್ರಣಯ ಸಂಬಂಧಿ ಸಮಾಚಾರಗಳು ಬರುತ್ತವೆ. ಮಾನಸಿಕ ಗ್ಲಾನಿ, ಘೋರ ನಿರಾಶೆಗಳಲ್ಲಿ ಮುಳುಗಿದ ವಿದ್ಯಾರ್ಥಿಗಳ ಜೇಬಿನಲ್ಲಿ ವಿಷದ ಬಾಟಲಿಗಳೂ ಚಿಕಿತ್ಸಕರಿಗೆ ಕಂಡು ಬರುತ್ತವೆ. ಇನ್ನೂ ಹೇಳುವುದಾದರೆ, ಆತ್ಮಹತ್ಯೆಗೆಂದು ಹತ್ತನೆಯ ಮಾಳಿಗೆಯ ಕಿಡಿಕಿಯ ಬಳಿ ಅವಕಾಶ ಕಾಯುತ್ತಿರುವ ವಿದ್ಯಾರ್ಥಿಗಳೂ ತೋರಿಬರುತ್ತಾರೆ!

ವಿದ್ಯಾರ್ಥಿಸಮಾಜದ ಈ ದಾರುಣ ಚಿತ್ರವು ಎಲ್ಲ ದೇಶಗಳ ಮುಂದಿರುವ ಘೋರ ಸಮಸ್ಯೆ. ಯೌವನದಲ್ಲಿ ಕೆಲಸಮಯ ಮೊದಲು ವಿದ್ಯಾರ್ಥಿ ಜೀವನವು ಸ್ವರ್ಗ ಸುಖದಾಯಕವೆಂದು ಹೇಳುತಿದ್ದರು. ಆದರೆ, ಇಂದು ಅಲ್ಲಿ ದುರ್ಮರಣವು ಭೀಕರಾಕಾರ ತಳೆದಿದೆ!

ವಿದ್ಯಾರ್ಥಿ ಸಮಾಜದ ಮೇಲೆ ರಾಷ್ಟ್ರವು ಬಹು ಆಶೆಯನ್ನಿಟ್ಟುಕೊಳ್ಳುತ್ತದೆ. ಹಾಗಿರುವಾಗ, ಅವರ ಈ ದುಸ್ಥಿತಿ ಚಿಂತನೀಯವೇ. ಅವರ ಈ ಬಗೆಯ ದುಃಸ್ಥಿತಿಗೆ ಒಂದಲ್ಲ, ಹಲವು ಕಾರಣಗಳಿರುವುದು ಗೊತ್ತಾಗುತ್ತದೆ.

ಅಮೇರಿಕನ್ನರು ಕಾಲೇಜು ಜೀವನದ ವಿಷಯವಾಗಿ ವಿಶಿಷ್ಟ ಭಾವನೆಯಿಟ್ಟುಕೊಂಡಿದ್ದಾರೆ. ಸಾಮಾನ್ಯವಾಗಿ ಅಲ್ಲಿ ಕಾಲೇಜಿನ ಯೋಗ್ಯ ಪದವಿ ಪಡೆಯುವ ಪ್ರಯಾಸ ಕಾಲವೇ ಕಾಲೇಜು ಜೀವನ. ಈ ಪ್ರಯತ್ನ ಸಫಲವಾಗಲು ಅಲ್ಲಿ ವಿಶಿಷ್ಟ ಪದವಿಗಳಿಸಲು ವಿಶಿಷ್ಟ ಪ್ರಕಾರದ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು. ಇಲ್ಲಿಂದಲೇ ವಾಸ್ತವಿಕ ಸಮಸ್ಯೆ ಪ್ರಾರಂಭವಾಗುತ್ತದೆ.

ದ್ವಿತೀಯ ಲೋಕ ಸಮರಾನಂತರ ಕಾಲೇಜಿನ ಶಿಕ್ಷಣದಲ್ಲಿ ಒಂದು ಬಗೆಯ ಆಕರ್ಷಣೆ ಹೆಚ್ಚಿದೆ. ಈ ಶತಮಾನದ ಮೂರು ದಶಕಗಳ ವರೆಗೆ ವಿಶ್ವವಿದ್ಯಾಲಯ ಶಿಕ್ಷಣ ಪಡೆಯುತಿದ್ದವರ ಸಂಖ್ಯೆ ಅತ್ಯಲ್ಪ. ಆದರೆ, ಇಂದು ಎಲ್ಲರೂ ಕಾಲೇಜು ಮೆಟ್ಟಲು ಹತ್ತಲು ಬಯಸುವವರೇ. ಕಾಲೇಜಿನಲ್ಲಿ ಪ್ರವೇಶ ಪಡೆಯುವುದಕ್ಕೆ ಮೊದಲು ಅವರು ನಿದ್ರಿಸುವುದೂ ಇಲ್ಲ! ಅವರಿಗೆ ಮಾನಸಿಕ ಶಾಂತಿಯೂ ಇಲ್ಲ. ಕಾಲೇಜಿನಲ್ಲಿ ಪ್ರವೇಶ ಪಡೆಯುವುದರಿಂದಲೇ ತಮ್ಮ ಜೀವನ ಸಫಲವೆಂಬುದು ಅವರಲ್ಲಿ ಬೇರು ಬಿಟ್ಟಿರುತ್ತದೆ. ಪ್ರವೇಶ ದೊರೆಯಿತೆಂದಾದ ಮೇಲೂ ಈ ಸಂಕಷ್ಟ ದೂರ ಹೋಗುವುದಿಲ್ಲ. ಅಲ್ಲಿನ ಓದು — ಅದು ಮುಗಿದು ಪದವಿ ಪಡೆದ ಮೇಲೂ ಶಾಂತಿ ದೂರವೇ. ಒಟ್ಟಿನಲ್ಲಿ ಇಂದಿನ ವಿದ್ಯಾರ್ಥಿಗಳು ತಾವೇ ತಂದುಕೊಂಡ ಸಂಘರ್ಷಣೆ, ದ್ವಂದ್ವಗಳ ಮಧ್ಯೆ ನುಗ್ಗುನುರಿಯಾಗುತಿದ್ದಾರೆ. ಆದುದರಿಂದಲೇ ಒಂದು ಕ್ಷಣವೂ ಅವರಿಗೆ ಶಾಂತಿ ದೊರೆಯುವುದಿಲ್ಲ.

ತಾಯ್ತಂದೆಗಳ ಅಭಿಲಾಷೆಯಂತೆ ಅಧ್ಯಯನ ಮಾಡುವವರ ಸಂಕಟ ಇನ್ನೂ ಹೆಚ್ಚು. ಕೆಲವು ಹೆತ್ತವರು ತಮ್ಮ ಮಗು ಇದೇ ವಿದ್ಯಾಲಯ ಸೇರಬೇಕೆಂದು ಬಯಸುತ್ತಾರೆ. ವಿದ್ಯಾರ್ಥಿಯ ಅಭಿರುಚಿಯನ್ನು ಕಡೆಗಣಿಸುತ್ತಾರೆ. ಇದರಿಂದಾಗಿ ವಿದ್ಯಾರ್ಥಿ ಹೋದಲ್ಲಿ ಬಂದಲ್ಲಿ ಸೋಲುಣ್ಣುತ್ತಾನೆ.

ಹಾರ್ವರ್ಡ್ ವಿಶ್ವವಿದ್ಯಾಲಯದ ಒಬ್ಬ ವಿದ್ಯಾರ್ಥಿ ತನ್ನ ಸಹಪಾಠಿಯ ಬಗ್ಗೆ ಹೀಗೆ ಹೇಳಿದ್ದಾನೆ: ಅವನೊಬ್ಬ ಒಳ್ಳೆಯ ಹುಡುಗ, ಹಾರ್ವರ್ಡಿನ ಹೊರಗಾದ ಒಳ್ಳೆಯವನಾಗಿ ಓದಬಲ್ಲವನಿದ್ದ. ಆದರೆ ಅವನ ತಂದೆ ಹಾರ್ವರ್ಡನ್ನೇ ಸೇರುವಂತೆ ಬಲಾತ್ಕರಿಸಿದ. ಇದರಿಂದಾಗಿ ಹುಡುಗ ತನ್ನ ಪ್ರಯತ್ನಗಳಲ್ಲಿ ಅಯಶಸ್ವಿಯಾದ. ಇಂದು ಆತ ತನ್ನ ಅನುತ್ತೀರ್ಣತೆಯಲ್ಲೇ ಸಂತೋಷಪಡುತ್ತಿದ್ದಾನೆ."

ರೋನಾಲ್ಡ್‌ನ ಉದಾಹರಣೆಯೊಂದು. ಹೆತ್ತವರ ಆಕಾಂಕ್ಷೆ ಅವನ ಗತಿಯನ್ನೇ ತಡೆಯಿತು. ಅಯಿವೀ ಲೀಗ್ ಕಾಲೇಜಿನಲ್ಲಿ ಆತ ಓದಬೇಕಾಯಿತು. ಆತನಿಗದು ಒಪ್ಪಿತವಿಲ್ಲ. ಅವನು ಸುಂದರ ಆಕರ್ಷಕ ವ್ಯಕ್ತಿತ್ವವುಳ್ಳವನು. ಬಾಹ್ಯ ಜೀವನದಿಂದ ದೂರವಾಗಿ ಪುಸ್ತಕದ ಕೀಟವಾಗ ಬೇಕಾಯಿತು. ತನ್ನ ಕೋಣೆಯಿಂದ ಆತ ಹೊರಹೋಗಲಾರ. ಕೊನೆಕೊನೆಗೆ ಆತ ಕೋಣೆಗೆ ಹೋಗುವುದನ್ನೇ ಬಿಟ್ಟು ಬಿಟ್ಟ. ಶರಾಬು ಕುಡಿಯುವುದು, ಪೋಲಿ ಜನರಂತೆ ಇರುವುದು ತೊಡಗಲಾಯಿತು. ಕಾಲೇಜಿನಿಂದ ಹೊರದೂಡಿಸಿಕೊಳ್ಳುವಷ್ಟರ ವರೆಗೂ ಅವನ ಗತಿ ಕೆಟ್ಟುಹೋಯಿತು!

ಇಂತಹ ಪರಿಸ್ಥಿತಿಯಲ್ಲಿ ಆತನನ್ನು ಮಾನಸ ಚಿಕಿತ್ಸಕರ ಬಳಿಗೆ ಒಯ್ದರು. ತಾನು ಈ ವಿದ್ಯಾಲಯದಲ್ಲಿ ಪ್ರವೇಶ ಬಯಸಲಿಲ್ಲ; ತನ್ನ ತಂದೆಯ ಅಭಿಲಾಷೆಯಂತೆ ತಾನಿಲ್ಲಿಗೆ ಬಂದಿದ್ದೆ. ತಂದೆಯು ತನಗೆ ಬಹುಮಾನ ದೊರೆಯಬೇಕು, ಬೇರೆ ಬೇರೆ ಕ್ಲಬ್ಬುಗಳಲ್ಲಿ ಹೋಗಬೇಕು-ಇದರಿಂದ ಹಾರ್ವರ್ಡಿನ ವಾತಾವರಣಕ್ಕೆ ಹೊಂ

(ಪತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕ್..........

ಉಳಿಸುವವನ ಆಯ್ಕೆ

ಪಿಗ್ಮಿ:	ದಿವಸಕ್ಕೆ 25 ಪೈಸೆಯಷ್ಟು ಕೂಡಾ ನೀವು ತೆರಬಹುದು. ಠೇವಣಿಯನ್ನು ಪಡೆಯಲು ನಮ್ಮ ಸಂಗ್ರಾಹಕರು ನಿಮ್ಮಲ್ಲಿಗೆ ಬರುವರು.
ಸೇವಿಂಗ್ಸ್ ಬ್ಯಾಂಕ್:	ನಿಮ್ಮ ಖಾತೆಯಲ್ಲಿರುವ ಹಣವು ಸೇಕಡಾ 3ರಂತೆ ಬಡ್ಡಿಯನ್ನು ಸಂಪಾದಿಸುವುದು. ಹಣ ಹಿಂದೆ ಪಡೆಯುವ ಮೊತ್ತದ ಬಗ್ಗೆ ನಿರ್ಬಂಧವಿಲ್ಲ. ನೋಟೀಸು ಕೊಡ ಬೇಕಾಗಿಲ್ಲ.
ಕ್ಯುಮಲೇಟಿವ್ ಠೇವಣಾತಿ:	ತಿಂಗಳ ಉಳಿತಾಯದ ಯೋಜನೆ— ಒಂದರಿಂದ ಐದು ವರ್ಷಗಳ ಅವಧಿ.
ಸ್ಥಿರ ಠೇವಣಾತಿ:	ಆಕರ್ಷಕ ಬಡ್ಡಿಯ ದರವನ್ನು ಕೊಡಲಾಗುವುದು— ಬಡ್ಡಿ ಪಾವತಿ ಅರ್ಧ ವರ್ಷಕ್ಕೊಮ್ಮೆ.

ಮತ್ತು ಇನ್ನೂ ಹಲವಾರು ಆಕರ್ಷಕ ಯೋಜನೆಗಳು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

200ಕ್ಕೂ ಮಿಕ್ಕಿನ ಶಾಖೆಗಳು

ಚಲಾವಣಾ ಸಂಪತ್ತು: ರೂ. 60 ಕೋಟಿಗೂ ಮಿಕ್ಕಿದೆ.

....ವಿಶ್ವವ್ಯಾಪ್ತ ಬ್ಯಾಂಕಿಂಗ್ ಬಗ್ಗೆ ....

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್ ವಿಠಾಳ್, ಎಂ. ಬಿ ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂರ್ಯೋಪಾಸನೆಯ ಪರ್ವದಿನ

ಮಕರ ಸಂಕ್ರಮಣ

ಹೊಸವರ್ಷದ ಆರಂಭವಾದ ಕೆಲವೇ ದಿನಗಳಲ್ಲಿ ಬರುವ ಹಬ್ಬ ಮಕರ ಸಂಕ್ರಮಣ. ಆ ದಿನ ಹಿಂದುಗಳಿಗೆ ಸಂಕ್ರಾಂತಿ ಭಾರತದ ವಿವಿಧ ಭಾಗಗಳ ಜನರು ವಿಶಿಷ್ಟ ರೀತಿಯಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಹೊಸ ವರ್ಷದ ನವ ಚೇತನದ ಜತೆಗೆ ಸಂಕ್ರಮಣದ ಸಂಭ್ರಮ ಕೂಡ ಸೇರಿ ಈ ಹಬ್ಬದ ಆನಂದವನ್ನು ಹೆಚ್ಚಿಸುತ್ತದೆ. ನಮ್ಮ ಎಲ್ಲಾ ಹಬ್ಬ ಹರಿದಿನಗಳ ಹಿನ್ನೆಲೆಯಾಗಿ ವಿಶಿಷ್ಟವಾದ ಹಲವು ಕತೆಗಳೂ, ಆಖ್ಯಾಯಿಕೆಗಳೂ ಸೇರಿಕೊಂಡಿವೆ. ಇವುಗಳನ್ನು ಚೆನ್ನಾಗಿ ಅರಿತುಕೊಂಡು ಹಬ್ಬಗಳನ್ನು ಆಚರಿಸುವುದರಿಂದ ದೇಹಕ್ಕೆ ಸಮಾಧಾನ ಶಾಂತಿ ದೊರೆತಂತೆ ಮನಸ್ಸಿಗೂ ದೊರೆಯುತ್ತದೆ. ಹಬ್ಬ ಹರಿದಿನಗಳೆಂದರೆ ಉಂಡು ತಿಂದು ನಲಿಯುವ, ಆನಂದಿಸುವ ದಿನಗಳೆಂಬ ಭಾವನೆ ನಮ್ಮಲ್ಲಿದೆ. ಆದರೆ ಪ್ರತಿಯೊಂದು ಹಬ್ಬದ ಮೂಲಭೂತ ಸಂಗತಿಗಳನ್ನು ವೇದ್ಯ ಮಾಡಿಕೊಂಡರೆ ಆಗ ನಮ್ಮ ಭಾರತೀಯ ಸಂಸ್ಕೃತಿಯು ಸುಖ ಜೀವನಕ್ಕೆ ಹೇತುವಾಗುವ ರೀತಿಯಲ್ಲಿ ರೂಪಿಸಲ್ಪಟ್ಟಿದೆ ಎಂಬ ಮನವರಿಕೆಯಾಗದಿರದು.

ಮಕರ ಸಂಕ್ರಾಂತಿಯು ಸೂರ್ಯನಿಗೆ ಸಂಬಂಧಿಸಿದ ಹಬ್ಬ. ಮೇಷಾದಿ ದ್ವಾದಶ ರಾಶಿಗಳಲ್ಲಿ ಕ್ರಮಿಸುತ್ತಿರುವ ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುವ ಸಂಭ್ರಮವನ್ನೇ ಮಕರ ಸಂಕ್ರಮಣವಾಗಿ ಆಚರಿಸಲಾಗುತ್ತಿದೆ. ಈ ಮಕರ ಸಂಕ್ರಾಂತಿಯ ದಿನದಿಂದ ಸೂರ್ಯನು ಉತ್ತರಾಭಿಮುಖವಾಗಿ ಚಲಿಸುವಂತೆ ಭಾಸವಾಗುತ್ತಿರುವುದರಿಂದ ಉತ್ತರಾಯಣದ ಆರಂಭವಾಗುವುದೆಂದು ಖಗೋಳ ಶಾಸ್ತ್ರಜ್ಞರೂ, ಜ್ಯೋತಿ ಶಾಸ್ತ್ರಜ್ಞರೂ ಹೇಳುತ್ತಾರೆ. ಮಕರ ಸಂಕ್ರಾಂತಿಯು ಹಬ್ಬದ ಸಂಭ್ರಮವನ್ನು ಹೆಚ್ಚಿಸುವುದು ವಸಂತ ಋತುವಿನ ಆಗಮನದ ಚಿಹ್ನೆಗಳು.

ಹಿಂದುಗಳಲ್ಲಿ ಮಕರ ಸಂಕ್ರಾಂತಿಯ ಕುರಿತು ಇನ್ನೊಂದು ಭಾವನೆ ಇದೆ. ಮಕರ ಸಂಕ್ರಾಂತಿಯ ದಿನ ಉತ್ತರಾಯಣವು ಆರಂಭವಾಗುವುದೆಂದೂ, ಈ ಉತ್ತರಾಯಣವು ದೇವತೆಗಳ ಪಾಲಿನ ಹಗಲಾಗಿದ್ದು ಸ್ವರ್ಗದ ಬಾಗಿಲು ಮಕರ ಸಂಕ್ರಾಂತಿಯ ದಿನ ತೆರೆಯಲ್ಪಡುತ್ತದೆ ಎಂದೂ ಅವರ ನಂಬಿಕೆ. ಆದುದರಿಂದ ಮೃತರಾಗುವವರು ಉತ್ತರಾಯಣದಲ್ಲಿ ಮೃತರಾದರೆ ಸ್ವರ್ಗವನ್ನೇ ಸೇರುವರೆಂಬ ನಂಬಿಕೆ ಹಿಂದುಗಳಲ್ಲಿ ಬಲವಾಗಿದೆ. ಪುರಾಣದ ಭೀಷ್ಮರೇ ಮೊದಲಾದ ಪ್ರಭೃತಿಗಳೂ ದೇಹ ತ್ಯಾಗಕ್ಕಾಗಿ ಮಕರ ಸಂಕ್ರಾಂತಿಯ ದಿನವನ್ನು ಇದಿರು ನೋಡುತ್ತಿದ್ದರೆಂಬ ಕಥೆಗಳೂ ನಮ್ಮಲ್ಲಿ ಪ್ರಚಾರದಲ್ಲಿವೆ.

ಮಕರ ಸಂಕ್ರಾಂತಿಯು ಸೂರ್ಯನಿಗೆ ಸಂಬಂಧಿಸಿದ ಹಬ್ಬವಾದುದರಿಂದ ಆ ದಿನ ಸೂರ್ಯನ ಪ್ರೀತ್ಯರ್ಥವಾಗಿ ತಿಲದಾನವೇ ಮುಂತಾದುವನ್ನು ಮಾಡುತ್ತಾರೆ. ಮಕರ ಸಂಕ್ರಾಂತಿಯ ವೈಶಿಷ್ಟ್ಯ. ಅಂದು ಗಂಗಾ ಸ್ನಾನ, ಸಮುದ್ರ ಸ್ನಾನ ತೈಲಾಭ್ಯಂಜನಾದಿಗಳನ್ನೂ ಶಾಸ್ತ್ರೋಕ್ತ ದಾನ ಧರ್ಮಗಳನ್ನೂ ಮಾಡುವುದು ಸಂಪ್ರದಾಯ.

ದೇಶದ ಒಂದೊಂದು ಭಾಗದ ಜನ ಒಂದೊಂದು ರೀತಿಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ತಮಿಳರಲ್ಲಿ ಈ ಹಬ್ಬ "ಪೊಂಗಲ್" ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ದಿನ "ಪೊಂಗಲ್" ಎಂಬ ತಿಂಡಿಯನ್ನು ಮಾಡಿ ಹಬ್ಬ ಆಚರಿಸುವ ವಾಡಿಕೆ. ಮಹಾರಾಷ್ಟ್ರದಲ್ಲಿ ಹಾಗೂ ಉತ್ತರ ಕರ್ನಾಟಕದಲ್ಲಿ ಬೆಲ್ಲ ಯಾ ಸಕ್ಕರೆ ಮತ್ತು ಎಳ್ಳನ್ನು ಬೆರೆಸಿದ ಸಿಹಿ ತಿಂಡಿಯನ್ನು ಚಪ್ಪರಿಸುತ್ತಿದ್ದಂತೆ ಇಷ್ಟೇ ಸವಿಯಾದ ಮಾತು ಹೊರಡುತ್ತಿರಲಿ ಎಂಬ ಆಕಾಂಕ್ಷೆಯನ್ನು ಜನ ವ್ಯಕ್ತಗೊಳಿಸುತ್ತಾರೆ. ದೂರದ ಮಿತ್ರರಿಗೆ ಬಂಧುಗಳಿಗೆ ರೇಷ್ಮೆ ಅಥವಾ ಉಣ್ಣೆಯ ಬಟ್ಟೆಯ ಚೀಲದಲ್ಲಿ ಎಳ್ಳನ್ನು ಕಟ್ಟಿ ಅಂಚೆಯಲ್ಲಿ ಕಳುಹಿಸುವ ಪರಿಪಾಠವು ಇಂದಿಗೂ ನಡೆದುಕೊಂಡು ಬಂದಿದೆ. ಬಂಗಾಲಿಗಳು ಧಾನ್ಯದ ಸಂಗ್ರಹವಿರುವ ಕೋಣೆಯ ಸುತ್ತಲೂ ಹುಲ್ಲಿನ ಹಗ್ಗವನ್ನು ಬಿಗಿದು, ಧಾನ್ಯವು ಐವತ್ತು ಪಟ್ಟು ಹೆಚ್ಚಲಿ ಎಂದು ಪ್ರಾರ್ಥಿಸುವುದು ವಾಡಿಕೆ.

ಮಕರ ಸಂಕ್ರಮಣದ ಸಂಭ್ರಮ ಕಾಣಲು ನಾವು ತಮಿಳು ನಾಡಿಗೇ ಹೋಗಬೇಕು. ಮೂರು ದಿನಗಳ ಪರ್ಯಂತ ಆಚರಿಸಲ್ಪಡುವ ಈ ಹಬ್ಬದ ದಿನ ಜನರು ಮಳೆಯನ್ನು ಕರುಣಿಸುವ ದೇವರಾಜ ಇಂದ್ರನ ನೆನಪನ್ನು ಮಾಡುತ್ತಾರೆ. ಕೃಷಿಯ ಕಾರ್ಯಕ್ಕೆ ನೆರವು ಈಯುವ ಗೋವುಗಳನ್ನು ಈ ಕಾಲ ಪೂಜಿಸುವುದುಂಟು. ಕೊಯ್ಲಿನ ಕಾಲ ಕಳೆದು, ಕಣಜ ತುಂಬಿರುವ ಈ ಸಮಯದಲ್ಲಿ ಸಂತಸ್ಟವಾದ ರೈತರು ಸೂರ್ಯನಿಗೆ ಪ್ರೀತಿ ಹಾಗೂ ಭಕ್ತಿಯಿಂದ 'ಪೊಂಗಲ್' ಎಂಬ ತಿಂಡಿಯನ್ನು ಮಾಡಿ ನೈವೇದ್ಯವಾಗಿ ಅರ್ಪಿಸುತ್ತಾರೆ. ಮನೆಯನ್ನು ಹೆಂಗಳೆಯರು ಗುಡಿಸಿ, ಸಾರಿಸಿ, ರಂಗೋಲೆ ಇರಿಸಿ, ಓರಣಗೊಳಿಸುವುದರಲ್ಲಿ ತಲ್ಲೀನರಾಗುತ್ತಾರೆ. ಮಕ್ಕಳು ಗಾಳಿಪಟ ಹಾರಿಸುವ ದೃಶ್ಯ ಈ ಕಾಲ ತಮಿಳು ನಾಡಿನಲ್ಲಿ ಕಾಣಸಿಗುತ್ತದೆ.

ಉಡುಪಿಯ ಬ್ರಹ್ಮರಥ



ಉಡುಪಿಯಲ್ಲಿ ಜರಗುವ ಕೆರೆ ಉತ್ಸವ

ಉಡುಪಿಯಲ್ಲಿ ಮಕರ ಸಂಕ್ರಮಣ ಉತ್ಸವವು ಅತೀ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಏಳು ದಿನಗಳ ಉತ್ಸವದ ಮೂಲಕ ಈ ಹಬ್ಬವನ್ನು ಆಚರಿಸಲಾಗುತ್ತದೆ. ಭಾರತದಲ್ಲಿಯೇ ಅತ್ಯಂತ ಸುಂದರವಾದ ಹಾಗೂ ಸಾತ್ವಿಕ ಯುಕ್ತವಾದ ಶೃಂಗರಿಸಿದ ರಥಗಳಲ್ಲಿ ದೇವರ ಮೂರ್ತಿಯನ್ನು ಕುಳ್ಳಿರಿಸಿ ತೇರು ಬೀದಿಯಲ್ಲಿ ಎಳೆಯಲಾಗುತ್ತದೆ. ಮಕರ ಸಂಕ್ರಾಂತಿಯ ದಿನ ಮೂರು ರಥಗಳನ್ನು ಎಳೆಯುವರು. ಈ ಮೂರು ರಥಗಳು ಒಂದೇ ಸಾಲಿನಲ್ಲಿ ನಿಂತಾಗ ಕಾಣುವ ದೃಶ್ಯ ಮಾತ್ರ ಮನಮೋಹಕ. ಈ ಒಂದು ದಿನ ಮಾತ್ರ ಮೂರು ರಥಗಳನ್ನು ಎಳೆಯಲಾಗುತ್ತದೆ. ಮರುದಿನ ಚೂರ್ಣೋತ್ಸವವೂ, ಅವಭೃಥ ಸ್ನಾನವೂ ಜರಗುತ್ತದೆ. ಹಗಲು ಅತಿ ದೊಡ್ಡದಾದ ಬ್ರಹ್ಮರಥವನ್ನು ಎಳೆಯುತ್ತಾರೆ. ಎರಡು ವರ್ಷಗಳಿಗೊಮ್ಮೆ ಜರಗುವ ಪರ್ಯಾಯ ಉತ್ಸವವು ಜರಗುವುದು ಈ ಮಕರ ಸಂಕ್ರಮಣದ ನಂತರವೇ. ಈ ಸಂದರ್ಭ ಉಡುಪಿಗೆ ದೇಶದ ನಾನಾ ಭಾಗಗಳಿಂದ ಯಾತ್ರಿಕರು ಬರುತ್ತಾರೆ. ಶ್ರೀ ಕೃಷ್ಣನ ದರ್ಶನ ಲಾಭದ ಜತೆಗೆ, ಮನಸ್ಸಿಗೂ ಹೃದಯಕ್ಕೂ ನೆಮ್ಮದಿಯನ್ನೀಯುವ ಮಕರ ಸಂಕ್ರಮಣದ ಉತ್ಸವವನ್ನು ಈಕ್ಷಿಸಿ ತಾವು ಧನ್ಯರೆಂದು ಸಂತೃಪ್ತಿ ತಾಳುತ್ತಾರೆ.

ಉಡುಪಿಯ ತೇರು ಬೀದಿ ಈ ಕಾಲ ಜನ ಸಂದಣಿಯಿಂದ ತುಂಬಿರುತ್ತದೆ. ಸಂಕ್ರಮಣ ಸಂಭ್ರಮ ಎಲ್ಲೆಲ್ಲೂ ಕಾಣಬರುತ್ತದೆ. ಸಂಕ್ರಾಂತಿಯು ಜನತೆಯ ಜೀವನದಲ್ಲಿ ಸಂಕ್ರಾಂತಿಯ ದಿನವಾಗಿ ಪರಿಣಮಿಸಿದರೆ ಆಗ, ಹಬ್ಬದ ಆಚರಣೆ ಮಾಡಿದುದು ಸಾರ್ಥಕವೆಂದೀತು.

ಸ್ವತಂತ್ರ ಭಾರತದ ಹೆಮ್ಮೆಯ ಸಂಸ್ಥೆ

ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆ



೧

ಪ್ರಗತಿಯ ಒಂದು ದಶಕ

ಸ್ವತಂತ್ರ ಭಾರತವು ಕೈಗಾರಿಕಾಭಿವೃದ್ಧಿ ಮಾರ್ಗದಲ್ಲಿ ನಡೆಯ ತೊಡಗಿದಾಗ ದೇಶಕ್ಕೆ ಒಂದು ಸುಸಂಘಟಿತವಾದ ಮೆಶಿನ್ ಟೂಲ್ಸ್ ಕೈಗಾರಿಕೆಯು ಅಗತ್ಯವಾಗಿ ಕಂಡುಬಂದಿತು. ಈ ಗುರಿ ಸಾಧನೆಗಾಗಿಯೇ ಬೆಂಗಳೂರಿನಲ್ಲಿ ಸರ್ಕಾರಿ ಕ್ಷೇತ್ರದ ಸಂಸ್ಥೆಯಾದ ಹಿಂದೂಸ್ಥಾನ್ ಮೆಶಿನ್ ಟೂಲ್ಸ್ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಮೊಟ್ಟಮೊದಲನೆಯ ಕಾರ್ಖಾನೆಯು ೧೯೫೩ರ ಅಕ್ಟೋಬರ್ ತಿಂಗಳಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಿತು. ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರಿಂದ ಸಂಸ್ಥೆಗೆ ೧೯೬೦-೬೧ರಲ್ಲಿ ಶೇಕಡಾ ೫೦ ರಷ್ಟು ಲಾಭವಾಯಿತು. ಈ ಲಾಭದ ಹಣವನ್ನೇ ಮತ್ತೆ ಬಂಡವಾಳ ರೂಪದಲ್ಲಿ ತೊಡಗಿಸಿ ಈ ಸಂಸ್ಥೆಯು ೧೯೬೧ರ ಜುಲೈ ತಿಂಗಳಲ್ಲಿ ಬೆಂಗಳೂರಿನಲ್ಲಿಯೇ ಇನ್ನೊಂದು ಕಾರ್ಖಾನೆಯನ್ನು ಯಶಸ್ವಿಯಾಗಿ ಸ್ಥಾಪಿಸಿತು.

ವಿದೇಶಗಳಿಂದ ಯಾವುದೇ ತಾಂತ್ರಿಕ ನೆರವು ಪಡೆಯದೆ ಈ ಕಾರ್ಖಾನೆಯನ್ನು ಸ್ಥಾಪಿಸಿ ಉತ್ಪಾದನೆಯನ್ನು ಆರಂಭಿಸಲಾಯಿತು. ಈ ಕಾರ್ಖಾನೆಗಳ ಉತ್ಪಾದನೆಯು ವರ್ಷ ವರ್ಷವೂ ಅಧಿಕವಾಗುತ್ತ ನಡೆದಿದೆ. ಇವುಗಳಲ್ಲಿ ಮೊದಲನೆಯ ಕಾರ್ಖಾನೆಯು ೫೬-೫೭ರಲ್ಲಿ ೫೦ ಲಕ್ಷ ರೂ ಮೌಲ್ಯದ ೧೩೫ ಯಂತ್ರಗಳನ್ನು ತಯಾರಿಸಿತು. ೧೯೬೦ — ೬೧ರಲ್ಲಿ ಅದು ೩೫೦ ಲಕ್ಷ ರೂ. ಬೆಲೆ ಬಾಳುವ ೧೦೦೨ ಯಂತ್ರಗಳನ್ನು ಸ್ಥಾಪಿಸಿತು. ಬೆಂಗಳೂರಿನ ಎರಡೂ ಹೆಚ್. ಎಂ. ಟಿ. ಕಾರ್ಖಾನೆಗಳ ಉತ್ಪಾದನೆಯು ೧೯೬೩—೬೪ರಲ್ಲಿ ದ್ವಿಗುಣಗೊಂಡಿತು. ಈ ಅವಧಿಯಲ್ಲಿ ಕಾರ್ಖಾನೆಗಳು ೯೩೫ ಲಕ್ಷ ರೂ. ಮೌಲ್ಯದ ೨೦೦೦ ಯಂತ್ರಗಳನ್ನು ತಯಾರಿಸಿದವು. ಈ ಸಂಸ್ಥೆಯು ೧೯೬೨—೬೩ರಲ್ಲಿ ಪಂಜಾಬಿನ ಪಿಂಜೋರ್‌ನಲ್ಲಿ ತನ್ನ ಮೂರನೆಯ ಕಾರ್ಖಾನೆಯನ್ನು ಸ್ಥಾಪಿಸಿತು. ಈ ಕಾರ್ಖಾನೆಯು ೧೯೬೫-೬೬ರ ಹೊತ್ತಿಗೆ ನಿಯೋಜಿತ ಉತ್ಪಾದನಾ ಸಾಮರ್ಥ್ಯವನ್ನು ಮುಟ್ಟುವುದೆಂದು ನಿರೀಕ್ಷಿಸಲಾಗಿದೆ. ನಾಲ್ಕನೆಯ ಹೆಚ್. ಎಂ. ಟಿ. ಕಾರ್ಖಾನೆಯನ್ನು ಎರ್ನಾಕುಲಂ ಬಳಿ ಸ್ಥಾಪಿಸಲಾಗಿದ್ದು ಅದು ೧೯೬೪ರ ಅಕ್ಟೋಬರ್ ೨ರಂದು ಉತ್ಪಾದನೆಯನ್ನು ಆರಂಭಿಸಿತು. ಈ ಕಾರ್ಖಾನೆಯು ಬಂಡವಾಳ ವಸ್ತುಗಳಿಗೆ ತಗಲಿದ ೭.೭೫ ಕೋಟಿ ರೂ. ವೆಚ್ಚವನ್ನು ಮೆಶಿನ್ ಟೂಲ್ಸ್ ಸಂಸ್ಥೆಯು ತನ್ನ ಆಂತರಿಕ ಸಂಪತ್ಸಾಧನಗಳಿಂದಲೇ ಪೂರೈಸಿದೆ. ಹೈದರಾಬಾದಿನಲ್ಲಿ ೭.೭೫ ಕೋಟಿ ರೂ. ವೆಚ್ಚದಿಂದ ಐದನೆಯ ಹೆಚ್. ಎಂ. ಟಿ. ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತದೆ. ಈ ಕಾರ್ಖಾನೆಯು ೧೯೬೫ರ ಹೊತ್ತಿಗೆ ಉತ್ಪಾದನೆಯನ್ನು ಕೈಗೊಳ್ಳುವ ನಿರೀಕ್ಷೆಯಿದೆ. ಹಿಂದೂಸ್ಥಾನ್ ಮೆಶಿನ್ ಟೂಲ್ಸ್ ಸಂಸ್ಥೆಯ ಎಲ್ಲ ಕಾರ್ಖಾನೆಗಳು ಉತ್ಪಾದನೆಯನ್ನು ಆರಂಭಿಸಿದಾಗ, ೧೯೬೭ರ ಹೊತ್ತಿಗೆ ಈ ಉತ್ಪನ್ನಗಳ ಒಟ್ಟು ಮೌಲ್ಯ ಪ್ರತಿ ವರ್ಷ ೨೫ ಕೋಟಿ ರೂ.ಗಳಷ್ಟಾಗುವುದೆಂದು ಅಂದಾಜಿದೆ.

ಮತ್ತೆ ಐದು ಕಾರ್ಖಾನೆಗಳು

ನಾಲ್ಕನೆಯ ಯೋಜನೆಯು ಮುಗಿಯುವ ಹೊತ್ತಿಗೆ ಅಂದರೆ ೧೯೭೦—೭೧ರ ಹೊತ್ತಿಗೆ ಸುಮಾರು ೧೦೦ ಕೋಟಿ ರೂ. ಮೌಲ್ಯದ ಮೆಶಿನ್ ಟೂಲ್ಸ್‌ಗಳಿಗೆ ಬೇಡಿಕೆಯಿರುವುದೆಂದು ಅಂದಾಜಿದೆ. ದೇಶದಲ್ಲಿ ಹೆಚ್ಚುತ್ತಿರುವ ಈ ಬೇಡಿಕೆಯಲ್ಲಿ ಅರ್ಧದಷ್ಟನ್ನಾದರೂ ಪೂರೈಸಲು ಮತ್ತು ಇನ್ನುಳಿದ ಅಲ್ಪ ಭಾಗವನ್ನು ಹೊರದೇಶಗಳಿಗೆ ರಫ್ತು ಮಾಡಲು ಸಾಧ್ಯವಾಗುವಂತೆ ಹಿಂದೂಸ್ಥಾನ್ ಮೆಶಿನ್ ಟೂಲ್ಸ್ ಸಂಸ್ಥೆಯು ಮತ್ತೆ ಐದು ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡಿದೆ.

ಕೈ ಗಡಿಯಾರಗಳ ತಯಾರಿ

ದೇಶದಲ್ಲಿ ಮೊತ್ತಮೊದಲನೆಯ ಕೈಗಡಿಯಾರಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸುವ ಸಮಗ್ರ ಹೊಣೆಯನ್ನು ಈ ಸಂಸ್ಥೆಗೇ ವಹಿಸಿಕೊಡಲಾಯಿತು. ಈ ಕಾರ್ಖಾನೆಯನ್ನು ಮತ್ತು ಅದಕ್ಕೆ ಅಗತ್ಯವಾದ ಯಂತ್ರ ಸ್ಥಾವರಗಳನ್ನು ಸ್ಥಾಪಿಸಿದ ನಂತರ ದೇಶದ ಶೀಘ್ರವನ್ನು ಸಂಪತ್ಪಾದನೆಗಳನ್ನು ತೊಡಗಿಸಿ ೧೯೬೩ರಲ್ಲಿ ಕೈಗಡಿಯಾರಗಳ ತಯಾರಿಕೆಯನ್ನು ಆರಂಭಿಸಲಾಯಿತು. ೧೯೬೩-೬೪ನೇ ಸಾಲಿನಲ್ಲಿ ಮೂರು ನಮೂನೆಯ ಸುಮಾರು ೧೭,೦೦೦ ಕೈಗಡಿಯಾರಗಳನ್ನು ತಯಾರಿಸಲಾಯಿತು. ೧೯೬೪ರ ಆದಿಭಾಗದಲ್ಲಿ ಈ ಕಾರ್ಖಾನೆಯು ಯೋಧರಿಗಾಗಿ ರೇಡಿಯಂ ಡಯಲ್ ಉಳ್ಳ ಜವಾನ್ ಕೈಗಡಿಯಾರವನ್ನು ತಯಾರಿಸಿತು. ಕಾರ್ಖಾನೆಯು ಈಗ ಪ್ರತಿ ದಿನ ೬೦೦ ಕೈಗಡಿಯಾರಗಳನ್ನು ಉತ್ಪಾದಿಸುತ್ತಿದೆ.

ಚಿತ್ರಗಳು

೧. ಹಿಂದೂಸ್ಥಾನ್ ಮೆಶಿನ್ ಟೂಲ್ಸ್ ಕಾರ್ಖಾನೆಯ ವರ್ಕ್‌ಶಾಪಿನ ಒಳಭಾಗದ ಒಂದು ನೋಟ.

೨. ಹಿಂದೂಸ್ಥಾನ್ ಮೆಶಿನ್ ಟೂಲ್ಸ್‌ನ ಕೈಗಡಿಯಾರ ಕಾರ್ಖಾನೆಯಲ್ಲಿ 'ಲೇಥ್' ಎಸೆಂಬ್ಲಿಯ ದೃಶ್ಯ.

೩. ಎರಡನೆಯ ಮೆಶಿನ್ ಟೂಲ್ ಕಾರ್ಖಾನೆಯನ್ನು ೧೯೬೧ ಜುಲೈ ೨ರಂದು ದಿವಂಗತ ಜವಾಹರಲಾಲ ನೆಹರೂರವರು ಉದ್ಘಾಟಿಸಿದ ಸಂದರ್ಭ ಕಾರ್ಖಾನೆಯನ್ನು ಕಾರಿನ ಮೂಲಕ ನಿರೀಕ್ಷಿಸುತ್ತಿರುವುದು.

೩

ಜನವರಿ 26

ಪ್ರಜಾರಾಜ್ಯ ವಿಶೇಷಾಂಕ

ಪ್ರಖ್ಯಾತ ಬರಹಗಾರರ ವಿಚಾರಪರ ಲೇಖನ, ಕವನ, ಕಥೆ ಮೊದಲಾದುವನ್ನೊಳಗೊಂಡು ಎಂದಿಗಿಂತಲೂ ವಿಗಲಾದ ರೀತಿಯಲ್ಲಿ ನವಯುಗದ ಪ್ರಜಾರಾಜ್ಯ ಸಂಚಿಕೆ ಪ್ರಕಟವಾಗುವುದು.

ಕರ್ನಾಟಕದಲ್ಲೂ ಇತರ ಕಡೆಗಳಲ್ಲೂ ವಿಶೇಷ ಪ್ರಚಾರದಲ್ಲಿರುವ ನವಯುಗವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ಸ್ವತಂತ್ರ ಭಾರತದ ಹೆಮ್ಮೆಯ ಸಂಸ್ಥೆ

ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆ



೧



೨

ಪ್ರಗತಿಯ ಒಂದು ದಶಕ

ಸ್ವತಂತ್ರ ಭಾರತವು ಕೈಗಾರಿಕಾಭಿವೃದ್ಧಿ ಮಾರ್ಗದಲ್ಲಿ ನಡೆಯ ತೊಡಗಿದಾಗ ದೇಶಕ್ಕೆ ಒಂದು ಸುಸಂಘಟಿತವಾದ ಮೆಷಿನ್ ಟೂಲ್ಸ್ ಕೈಗಾರಿಕೆಯು ಅಗತ್ಯವಾಗಿ ಕಂಡುಬಂದಿತು. ಈ ಗುರಿ ಸಾಧನೆಗಾಗಿಯೇ ಬೆಂಗಳೂರಿನಲ್ಲಿ ಸರ್ಕಾರಿ ಕ್ಷೇತ್ರದ ಸಂಸ್ಥೆಯಾದ ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಮೊಟ್ಟಮೊದಲನೆಯ ಕಾರ್ಖಾನೆಯು ೧೯೫೫ರ ಅಕ್ಟೋಬರ್ ತಿಂಗಳಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಿತು. ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರಿಂದ ಸಂಸ್ಥೆಗೆ ೧೯೬೦-೬೧ರಲ್ಲಿ ಶೇಕಡಾ ೨೦ ರಷ್ಟು ಲಾಭವಾಯಿತು. ಈ ಲಾಭದ ಹಣವನ್ನೇ ಮತ್ತೆ ಬಂಡವಾಳ ರೂಪದಲ್ಲಿ ತೊಡಗಿಸಿ ಈ ಸಂಸ್ಥೆಯು ೧೯೬೧ರ ಜುಲೈ ತಿಂಗಳಲ್ಲಿ ಬೆಂಗಳೂರಿನಲ್ಲಿಯೇ ಇನ್ನೊಂದು ಕಾರ್ಖಾನೆಯನ್ನು ಯಶಸ್ವಿಯಾಗಿ ಸ್ಥಾಪಿಸಿತು.

ವಿದೇಶಗಳಿಂದ ಯಾವುದೇ ತಾಂತ್ರಿಕ ನೆರವು ಪಡೆಯದೆ ಈ ಕಾರ್ಖಾನೆಯನ್ನು ಸ್ಥಾಪಿಸಿ ಉತ್ಪಾದನೆಯನ್ನು ಆರಂಭಿಸಲಾಯಿತು. ಈ ಕಾರ್ಖಾನೆಗಳ ಉತ್ಪಾದನೆಯು ವರ್ಷ ವರ್ಷವೂ ಅಧಿಕವಾಗುತ್ತಾ ನಡೆದಿದೆ. ಇವುಗಳಲ್ಲಿ ಮೊದಲನೆಯ ಕಾರ್ಖಾನೆಯು ೫೬-೫೭ರಲ್ಲಿ ೫೦ ಲಕ್ಷ ರೂ. ಮೌಲ್ಯದ ೧೩೫ ಯಂತ್ರಗಳನ್ನು ತಯಾರಿಸಿತು. ೧೯೬೦-೬೧ರಲ್ಲಿ ಅದು ೩೫೦ ಲಕ್ಷ ರೂ. ಬೆಲೆ ಬಾಳುವ ೧೦೦೨ ಯಂತ್ರಗಳನ್ನು ಸ್ಥಾಪಿಸಿತು. ಬೆಂಗಳೂರಿನ ಎರಡೂ ಹೆಚ್. ಎಂ. ಟಿ. ಕಾರ್ಖಾನೆಗಳ ಉತ್ಪಾದನೆಯು ೧೯೬೩-೬೪ರಲ್ಲಿ ದ್ವಿಗುಣಗೊಂಡಿತು. ಈ ಅವಧಿಯಲ್ಲಿ ಕಾರ್ಖಾನೆಗಳು ೯೩೫ ಲಕ್ಷ ರೂ. ಮೌಲ್ಯದ ೩೦೦೦ ಯಂತ್ರಗಳನ್ನು ತಯಾರಿಸಿದವು. ಈ ಸಂಸ್ಥೆಯ ೧೯೬೨-೬೩ರಲ್ಲಿ ಪಂಜಾಬಿನ ಪಿಂಜೋರ್‌ನಲ್ಲಿ ತನ್ನ ಮೂರನೆಯ ಕಾರ್ಖಾನೆಯನ್ನು ಸ್ಥಾಪಿಸಿತು. ಈ ಕಾರ್ಖಾನೆಯು ೧೯೬೫-೬೬ರ ಹೊತ್ತಿಗೆ ನಿಯೋಜಿತ ಉತ್ಪಾದನಾ ಸಾಮರ್ಥ್ಯವನ್ನು ಮುಟ್ಟುವುದೆಂದು ನಿರೀಕ್ಷಿಸಲಾಗಿದೆ. ನಾಲ್ಕನೆಯ ಹೆಚ್. ಎಂ. ಟಿ. ಕಾರ್ಖಾನೆಯನ್ನು ಎರ್ನಾಕುಲಂ ಬಳಿ ಸ್ಥಾಪಿಸಲಾಗಿದ್ದು ಅದು ೧೯೬೪ರ ಅಕ್ಟೋಬರ್ ೨ರಂದು ಉತ್ಪಾದನೆಯನ್ನು ಆರಂಭಿಸಿತು. ಈ ಕಾರ್ಖಾನೆಯ ಬಂಡವಾಳ ವಸ್ತುಗಳಿಗೆ ತಗಲಿದ ೭.೭೫ ಕೋಟಿ ರೂ. ವೆಚ್ಚವನ್ನು ಮೆಷಿನ್ ಟೂಲ್ಸ್ ಸಂಸ್ಥೆಯು ತನ್ನ ಆಂತರಿಕ ಸಂಪತ್ಸಾಧನೆಗಳಿಂದಲೇ ಪೂರೈಸಿದೆ. ಹೈದರಾಬಾದಿನಲ್ಲಿ ೭.೭೫ ಕೋಟಿ ರೂ. ವೆಚ್ಚದಿಂದ ಐದನೆಯ ಹೆಚ್. ಎಂ. ಟಿ. ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತಿದೆ. ಈ ಕಾರ್ಖಾನೆಯು ೧೯೬೫ರ ಹೊತ್ತಿಗೆ ಉತ್ಪಾದನೆಯನ್ನು ಕೈಗೊಳ್ಳುವ ನಿರೀಕ್ಷೆಯಿದೆ. ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಸಂಸ್ಥೆಯ ಎಲ್ಲ ಕಾರ್ಖಾನೆಗಳು ಉತ್ಪಾದನೆಯನ್ನು ಆರಂಭಿಸಿದಾಗ, ೧೯೬೭ರ ಹೊತ್ತಿಗೆ ಈ ಉತ್ಪನ್ನಗಳ ಒಟ್ಟು ಮೌಲ್ಯ ಪ್ರತಿ ವರ್ಷ ೨೫ ಕೋಟಿ ರೂ.ಗಳಷ್ಟಾಗುವುದೆಂದು ಅಂದಾಜಿದೆ.

ಮತ್ತೆ ಐದು ಕಾರ್ಖಾನೆಗಳು

ನಾಲ್ಕನೆಯ ಯೋಜನೆಯು ಮುಗಿಯುವ ಹೊತ್ತಿಗೆ ಅಂದರೆ ೧೯೭೦-೭೧ರ ಹೊತ್ತಿಗೆ ಸುಮಾರು ೧೦೦ ಕೋಟಿ ರೂ. ಮೌಲ್ಯದ ಮೆಷಿನ್ ಟೂಲ್ಸ್‌ಗಳಿಗೆ ಬೇಡಿಕೆಯಿರುವುದೆಂದು ಅಂದಾಜಿದೆ. ದೇಶದಲ್ಲಿ ಹೆಚ್ಚುತ್ತಿರುವ ಈ ಬೇಡಿಕೆಯಲ್ಲಿ ಅರ್ಧದಷ್ಟನ್ನಾದರೂ ಪೂರೈಸಲು ಮತ್ತು ಇನ್ನುಳಿದ ಅಲ್ಪ ಭಾಗವನ್ನು ಹೊರದೇಶಗಳಿಗೆ ರಫ್ತು ಮಾಡಲು ಸಾಧ್ಯವಾಗುವಂತೆ ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಸಂಸ್ಥೆಯು ಮತ್ತೆ ಐದು ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡಿದೆ.

ಕೈ ಗಡಿಯಾರಗಳ ತಯಾರಿ

ದೇಶದಲ್ಲಿ ಮೊತ್ತಮೊದಲನೆಯ ಕೈಗಡಿಯಾರಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸುವ ಸಮಗ್ರ ಹೊಣೆಯನ್ನು ಈ ಸಂಸ್ಥೆಗೇ ವಹಿಸಿಕೊಡಲಾಯಿತು. ಈ ಕಾರ್ಖಾನೆಯನ್ನು ಮತ್ತು ಅದಕ್ಕೆ ಅಗತ್ಯವಾದ ಯಂತ್ರ ಸ್ಥಾವರಗಳನ್ನು ಸ್ಥಾಪಿಸಿದ ನಂತರ ದೇಶದ ಶೇ. ೫೪ವನ್ನು ಸಂಪತ್ಪಾದನೆಗಳನ್ನು ತೊಡಗಿಸಿ ೧೯೬೩ರಲ್ಲಿ ಕೈಗಡಿಯಾರಗಳ ತಯಾರಿಕೆಯನ್ನು ಆರಂಭಿಸಲಾಯಿತು. ೧೯೬೩-೬೪ನೇ ಸಾಲಿನಲ್ಲಿ ಮೂರು ನಮೂನೆಯ ಸುಮಾರು ೧೨೦,೦೦೦ ಕೈಗಡಿಯಾರಗಳನ್ನು ತಯಾರಿಸಲಾಯಿತು. ೧೯೬೪ರ ಆದಿಭಾಗದಲ್ಲಿ ಈ ಕಾರ್ಖಾನೆಯು ಯೋಧರಿಗಾಗಿ ರೇಡಿಯಂ ಡಯಲ್ ಉಳ್ಳ ಜವಾನ್ ಕೈಗಡಿಯಾರವನ್ನು ತಯಾರಿಸಿತು. ಕಾರ್ಖಾನೆಯು ಈಗ ಪ್ರತಿ ದಿನ ೬೦೦ ಕೈಗಡಿಯಾರಗಳನ್ನು ಉತ್ಪಾದಿಸುತ್ತಿದೆ.

ಚಿತ್ರಗಳು

೧. ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆಯ ವರ್ಕ್‌ಶಾಪಿನ ಒಳ ಭಾಗದ ಒಂದು ನೋಟ.

೨. ಹಿಂದೂಸ್ಥಾನ್ ಮೆಷಿನ್ ಟೂಲ್ಸ್‌ನ ಕೈಗಡಿಯಾರ ಕಾರ್ಖಾನೆಯಲ್ಲಿ 'ಲೇಥ್' ಎಸೆಂಬ್ಲಿಯ ದೃಶ್ಯ.

೩. ಎರಡನೆಯ ಮೆಷಿನ್ ಟೂಲ್ ಕಾರ್ಖಾನೆಯನ್ನು ೧೯೬೧ ಜುಲೈ ೨ರಂದು ದಿವಂಗತ ಜವಾಹರಲಾಲ ನೆಹರೂರವರು ಉದ್ಘಾಟಿಸಿದ ಸಂದರ್ಭ ಕಾರ್ಖಾನೆಯನ್ನು ಕಾರಿನ ಮೂಲಕ ನಿರೀಕ್ಷಿಸುತ್ತಿರುವುದು.



ಜನವರಿ 26
ಪ್ರಜಾರಾಜ್ಯ ವಿಶೇಷಾಂಕ
ಪ್ರಖ್ಯಾತ ಬರಹಗಾರರ ವಿಚಾರಪರ ಲೇಖನ, ಕವನ, ಕಥೆ ಮೊದಲಾದುವನ್ನೊಳಗೊಂಡು ಎಂದಿಗಿಂತಲೂ ಮಿಗಿಲಾದ ರೀತಿಯಲ್ಲಿ ನವಯುಗದ ಪ್ರಜಾರಾಜ್ಯ ಸಂಚಿಕೆ ಪ್ರಕಟವಾಗುವುದು.
ಕರ್ನಾಟಕದಲ್ಲೂ ಇತರ ಕಡೆಗಳಲ್ಲೂ ವಿಶೇಷ ಪ್ರಚಾರದಲ್ಲಿರುವ ನವಯುಗವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ವಿದ್ಯಾರ್ಥಿಗಳ ವಿಕಟ ಸಮಸ್ಯೆಗಳು

(ಏಳನೇ ಪುಟದಿಂದ)

ದಿಕೊಳ್ಳಬೇಕು ಎಂದು ಬಯಸಿದ್ದ. ತಾನು ಹಾಗೆ ಮಾಡಿಯೂ ಇದ್ದ. ಆದರೆ, ಇದರ ಪರಿಣಾಮ ನೆಟ್ಟಗಾಗಲಿಲ್ಲ. ಶಾಲಾ ಶಿಕ್ಷಣದಲ್ಲಿ ತನಗೆ ಪ್ರತಿ ಪರೀಕ್ಷೆಯಲ್ಲಿಯೂ ಉನ್ನತ ಸ್ಥಾನ ದೊರೆಯುತ್ತಿತ್ತು. ಹಾರ್ವರ್ಡದಲ್ಲಿ ಮಾತ್ರ ಹಾಗಾಗಲಿಲ್ಲ.—ಆತನು ಒಪ್ಪಿಕೊಂಡ.

"ಇಲ್ಲಿ ಎಲ್ಲವೂ ವಿಪರೀತವಾಯಿತು. ನನ್ನ ಮಾತನ್ನು ಯಾರೂ ಕೇಳಲಿಲ್ಲ. ಆದುದರಿಂದ ಕುಡಿಯಲು ಸುರು ಮಾಡಿದೆ. ಇದರಿಂದ ಸಹಪಾಠಿಗಳು ಮತ್ತೂ ತಿರಸ್ಕಾರ ತೋರಿದರು ನಾನು ಎಲ್ಲರಿಂದಲೂ ಬೇರೆಯಾಗಿಯೇ ಇರತೊಡಗಿದೆ. ನಾನೇನು ಮಾಡಬೇಕೆಂಬುದರ ಅರಿವೆ ನನಗಿಲ್ಲ"—ಆತ ಮುಂದುವರಿದು ಹೇಳಿದ. ರೋನಾಲ್ಡನನ್ನು ಬೇರೆ ಕಾಲೇಜಿಗೆ ಸೇರಿಸುವುದೇ ಸೂಕ್ತವೆಂದು ಚಿಕಿತ್ಸಕರು ಅಭಿಪ್ರಾಯಪಟ್ಟರು. ಅಲ್ಲಿನ ಹೊಸ ವಾತಾವರಣದಲ್ಲಿ ಆವನು ಪ್ರಗತಿ ಹೊಂದಿದನು.

ಕಾಲೇಜು ಬದಲಿಸುವ ಅವಕಾಶ ರೋನಾಲ್ಡನಿಗೆ ಸಿಕ್ಕಿತು, ಆವನು ಭಾಗ್ಯಶಾಲಿ. ಆದರೆ ಹೆಚ್ಚಿನವರಿಗೆ ಆ ಕೆಟ್ಟ ವಾತಾವರಣದಲ್ಲಿಯೇ ಇನ್ನೂ ಕೊಳೆತು ಮಾನಸಿಕ ದೌರ್ಬಲ್ಯದಿಂದ ನರಳಲೇ ಬೇಕಾಗುತ್ತದೆ.

ಪರೀಕ್ಷೆಗಳಲ್ಲಿ ತಮ್ಮ ಮಕ್ಕಳು ಉನ್ನತ ಗುಣಗಳನ್ನು ಪಡೆಯಬೇಕೆಂದು ಹೆಚ್ಚಿನ ಹೆತ್ತವರ ಅಭಿಲಾಷೆ. ತಮ್ಮ ಮಕ್ಕಳು ಬಹಳ ಬುದ್ಧಿವಂತರು ಎಂಬ ಭಾವನೆ ಅವರಲ್ಲಿರುತ್ತದೆ. ಮಕ್ಕಳ ಮೇಲೆ ಈ ಭಾವನೆಯ ಪ್ರಭಾವ ತುಂಬ ಬೀಳುತ್ತದೆ. ಬಾರ್ಬರಾ ಎಂಬವಳು ಹೆತ್ತವರ ಒತ್ತಡದಿಂದ ಸಿ ಅಥವಾ ಡಿ ಗ್ರೇಡನ್ನೇ ಪಡೆದಳು. ಇದಕ್ಕಾಗಿ ರಾತ್ರಿಹಗಲು ಓದು ಮಾಡಬೇಕಾಯಿತಂತೆ!

ಕೆಲ ಸಮಯದ ಬಳಿಕ ಒಬ್ಬ ಹುಡುಗನೊಡನೆ ಆಕೆಗೆ ಸ್ನೇಹವಾಯಿತು. ಆದರೆ ಆತನು ಮಾತ್ರ ಪ್ರಣಯವನ್ನು ಉತ್ತೇಜಿಸಲಿಲ್ಲ. ಇದರಿಂದಾಗಿ ಪರೀಕ್ಷಾ ಪರಿಣಾಮದಲ್ಲಿ ಆಕೆ ಬಹಳ ಹಿಂದುಳಿದಳು. ಮಾನಸ ಚಿಕಿತ್ಸಕರು ರಜೆಯ ವೇಳೆ ಮನೆಗೆ ಕರೆದೊಯ್ಯುವಂತೆ ಆಕೆಯ ಹೆತ್ತವರಿಗೆ ಬರೆದಾಗ, ಉತ್ತರ ಬಂತು: "ನಮ್ಮ ಮಗಳು ಬಹಳ ಬುದ್ಧಿವಂತೆ. ಆಕೆಯನ್ನು ಮನೆಗೆ ಕರೆ ತಂದರೆ, ನಮ್ಮ ಯೋಜನೆಗಳೆಲ್ಲಾ ಹಾಳಾಗುತ್ತವೆ. ಆದುದರಿಂದ ಆತನ ಸ್ನೇಹವನ್ನು ಬಿಟ್ಟು ಇಮ್ಮಡಿ ಉತ್ಸಾಹದಿಂದ ಅಭ್ಯಾಸವನ್ನು ಮುಂದುವರಿಸುವಂತೆ ಆಕೆಗೆ ತಿಳಿಸಿರಿ."

ಬಾರ್ಬರಾಳಿಗೆ ಈ ಸಂಗತಿ ತಿಳಿಯಿತು. ಆಕೆ ಕುಪಿತಳಾಗಿ ಒಂದು ರಾತ್ರಿ ಒಂದು ಡಜನು ನಿದ್ರೆಯ ಬಿಲ್ಲೆಗಳನ್ನು ನುಂಗಿದಳು. ಆದರೆ, ಯಾರೋ ಇದನ್ನು ನೋಡಿದ್ದರಿಂದ ಚಿಕಿತ್ಸೆ ಮಾಡಿಸಿ, ಆಕೆಯ ಮನೆಗೆ ಕಳಿಸಿಕೊಟ್ಟರು.

ಮಕ್ಕಳ ಇಚ್ಛೆಗೆ ವಿರುದ್ಧವಾದ ಉದ್ಯೋಗವನ್ನು ಹೆತ್ತವರು ಅವರಮೇಲೆ ಹೊರಿಸುತ್ತಾರೆ. ಹಲವರ ವಿಕಾಸವು ಇದರಿಂದಾಗಿಯೇ ಕುಂಠಿತವಾಗುತ್ತದೆ. ಅವರ ಇಚ್ಛಾನುಸಾರ ವಿಕಾಸ—ಪ್ರಗತಿಯ ಮಾರ್ಗ ಹಿಡಿಯುವ ಅವಕಾಶ ಅವರಿಗೆ ಒದಗುವುದಿಲ್ಲ.

ಇಂದಿನದು ಸ್ಪರ್ಧಾಯುಗ. ಸ್ಪರ್ಧಾ ಭಾವನೆಯ ವಿಕಾಸವು ವಿದ್ಯಾರ್ಥಿಗಳ ಮನಸ್ಸು-ಮೆದುಳುಗಳನ್ನು ಆಕರ್ಷಿಸಿಕೊಂಡಿದೆ. ಈ ಭಾವನೆಯು ಸಾಮಾನ್ಯ ಹಾಗೂ ಓದಿನಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಪತನಕ್ಕೆ ಕಾರಣವಾಗುತ್ತದೆ; ಕೆಲವೊಮ್ಮೆ ಮೇಧಾವಿಗಳೂ ಹಾಸಿಗೊಳಗಾಗುತ್ತಾರೆ. ಶಾಲೆಯಲ್ಲಿ ಎ ಗ್ರೇಡ್ ಪಡೆಯುತ್ತಿದ್ದವನು ಕಾಲೇಜಿನಲ್ಲಿ ಸಿ ಗ್ರೇಡಿಗೆ ಇಳಿದಾಗ, ಆತನ ನಿರಾಶೆಗೆ ಪಾರವಿಲ್ಲ; ಸಂಕಟ ಅವರ್ಣನೀಯ.

ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪಾರಸ್ಪರಿಕ ಸಂಬಂಧವೇ ಹಲವು ವೇಳೆ ಮಾನಸಿಕ ವಿಕ್ಷೋಭಕ್ಕೆ ಕಾರಣವಾಗುತ್ತದೆ. ನನ್ನಲ್ಲಿ ಪುರುಷತ್ವವಿದೆಯೇ ಎಂಬ ಪ್ರಶ್ನೆ ನವಯುವಕರನ್ನು ಅಶಾಂತಗೊಳಿಸುತ್ತದೆ. ಹುಡುಗಿಯರ ಮುಂದಿರುವ ಸಮಸ್ಯೆಯ ರೀತಿ ಬೇರೆ. ವಿವಾಹಕ್ಕೆ ಮೊದಲು ಇಂತಹ ಸಂಬಂಧ ಬೆಳೆಸಲು ಹೆತ್ತವರು, ಸಹಚರರು ಯಾರೂ ಅನುಮತಿ ನೀಡುವುದಿಲ್ಲವೆಂದು ಅವರಿಗೂ ಗೊತ್ತು. ತಾವು ಮುಗ್ಧೆಯನ್ನೂ ಮೀರಿರುವುದನ್ನು ಕೆಲವು ಹುಡುಗಿಯರು ಒಪ್ಪಿಕೊಂಡಿದ್ದಾರೆ. ಇದನ್ನು ರಹಸ್ಯವಾಗಿಟ್ಟುಕೊಳ್ಳಬೇಕಾದುದರಿಂದ ತಾವು ಮಾನಸಿಕ ಪೀಡೆಯಿಂದ ನರಳುತ್ತಿರುವುದಾಗಿ ಅವರು ಹೇಳಿದ್ದಾರೆ.

ಹುಡುಗಿಯರನ್ನು ಕಾಡುವ ಇನ್ನೊಂದು ಸಮಸ್ಯೆಯಿದೆ. ಒಬ್ಬ ಹುಡುಗ ತನ್ನ ಪ್ರೇಮಿಸಿ ನಿಕಟ ಬರುವಾಗ, ಅವರು ಸಹಜವಾಗಿಯೇ ದೂರ ಸರಿಯುವುದಿಲ್ಲ. ಆಕೆ ಗರ್ಭವತಿಯಾದಾಗ, ಆಕೆಯ ಪ್ರೇಮಿ ಮಿತ್ರ ಗರ್ಭಪಾತ ಮಾಡಲು ನಿಶ್ಚಯಿಸಿದಾಗ, ಮಾನಸಿಕ ವಿಕ್ಷೋಭದ ಕಠಿನ ಪ್ರಸಂಗ ಬರುತ್ತದೆ. ವಿದೇಶಗಳಲ್ಲಿ ಕಾಲೇಜಿನಲ್ಲಿಯೇ ಗರ್ಭವತಿಯರಾಗುವ ಹುಡುಗಿಯರ ಸಂಖ್ಯೆ ಕಡಿಮೆಯಿಲ್ಲ. ಒಂದು ಬಹಳ ಗೌರವಾನ್ವಿತವಾದ ಮಹಿಳಾ ಕಾಲೇಜಿನ ಅಧಿಕಾರಿಯು ತನ್ನ ಕಾಲೇಜಿನ ಹುಡುಗಿಯರಲ್ಲಿ ಸುಮಾರು ಅರ್ಧಾಂಶದಷ್ಟು ತಮ್ಮ ಪ್ರೇಮಿ--ಮಿತ್ರರೊಡನೆ ರಾತ್ರಿ ಕಳೆಯುತ್ತಾರೆ ಎಂದಿದ್ದಾರೆ.

ಇಂದಿನ ವಿದ್ಯಾರ್ಥಿಗಳ ನೆಮ್ಮದಿಯು ಒಂದಲ್ಲ ಹಲವು ಕಾರಣಗಳಿಂದ ಕೆಟ್ಟಿದೆ. ಪಾಶ್ಚಾತ್ಯ ದೇಶಗಳಲ್ಲಿ ಮಾತ್ರವಲ್ಲ, ಪೌರ್ವಾತ್ಯ ದೇಶಗಳಲ್ಲಿಯೂ ಇದರ ಗಾಳಿ ಹರಡಿದೆ. ಭಾರತದಲ್ಲಿ ಇಂತಹ ಮಾನಸಿಕ ಅಸಮತೋಲನ ಮತ್ತು ಅಸಂತೃಪ್ತಿಯ ಬೀಜ ಬಿತ್ತನೆಗೆ ತೊಡಗುತ್ತಿದೆ. ಇದನ್ನು ಮೊಳೆಯಗೊಡದಂತೆ ಹೆತ್ತವರ, ಸಮಾಜ ಮತ್ತು ಸರಕಾರಗಳು ತ್ರಿಕರಣ ಪೂರ್ವಕ ದುಡಿಯಬೇಕು. ಇಲ್ಲವಾದರೆ, ನೈತಿಕ ಪತನದೊಡನೆ ವ್ಯಕ್ತಿತ್ವ ನಾಶ ಖಂಡಿತ.

(ಆಧಾರದಿಂದ)

ನಾವು ಒಂದೆ

ಕಣ್ಣೇಕೆ ಮಿಟುಕಿಸುವೆ
ಕಾಲೇಕೆ ಕುಲುಕಿಸುವೆ
ಕೈಯೇಕೆ ಆಡಿಸುವೆ—ನನ್ನ ರಾಣಿ

ಮೂಗೇಕೆ ಮುಗ್ಗಿಸುವೆ
ಕಿವಿಯೇಕೆ ನಿಮಿರುತಿಹೆ
ತಲೆಯೇಕೆ ತಗ್ಗಿಸುವೆ – ನಾಗವೇಣಿ.

ತುಟಿಯೇನು ಆಡುತಿದೆ
ಕಣ್ಣೇನು ನೋಡುತಿದೆ
ತನುವೇಕೆ ಬಾಗುತಿದೆ - ಮೋಹವೇಣಿ.
ಜಡೆಯೇನು ಆಡುತಿದೆ
ಕೊರಳೇನು ಬೆಳುಕುತಿದೆ
ಕಟಿಯೇನು ಪುಟಿಯುತಿದೆ-ಸುಧಾಶ್ರೇಣಿ.

ಮನವೇನು ನೆನೆಯುತಿದೆ
ಗುಣವೇನು ಗುಣಿಗುತಿದೆ
ಏನೇನ ಬಯಸುತಿಹೆ-ನಲುಮೆ ಬೆರಸಿ
ಕಂತೆಗಳ ಕೊನರೊಡೆಯು
ದಿನವೆಲ್ಲ ಚಿಂತಿಸುವೆ.
ತನುವೇನು ಬಾಡಿದುದೆ-ಮೋಹದರಸಿ

ಆಗೊಮ್ಮೆ—ಆ ತೆರನ
ಈಗೊಮ್ಮೆ– ಈ ತೆರನ
ಹೀಗೆಲ್ಲ ಕಾಣುತಿದೆ- ನನ್ನ ಮುಂದೆ
ನನ ನಿನಗೆ ಬೇಕಾದ
ಬೇರೊಂದು ಸಂಬಂಧ
ಆದಾಗ ಋಣುಬಂಧ-ನಾವು ಒಂದೆ.

—ಕವಿ: ಅಬ್ದುಲ್ ರಹಿಮಾನ್,
ಅರಸಳಿಕೆ.

ವಿಚಾರ ಕಿಡಿಗಳು

ಗೆಜ್ಜೆ ಕಟ್ಟಿ ಕುಣಿಯುವವರು ಹೆಜ್ಜೆ ತಪ್ಪಿನಲಿ ನಗೆಗೀಡಾಗುತ್ತಾರೆ!— ಗೌರವಕ್ಕಾಗಿ ಹೆಣಗಾಡುವವರು ಗರ್ವ ಮಾಡಿ ದುಡಿಕಿದರೆ ನಿಂದೆಗೊಳಗಾಗುವರು.

೦ ೦ ೦

ದುಡ್ಡಿನ ಮೋಹ ಬಿಡದವರು ಗಡ್ಡ ಎಷ್ಟುದ್ದ ಬೆಳೆಸಿದರೂ ಫಲವಿಲ್ಲ. ಮಾಡುವ ಕರ್ಮ ಶುದ್ಧವಿಲ್ಲದೆ ಆಡುವ ಧರ್ಮ ನೀತಿಗೆ ಬೆಲೆ ಇಲ್ಲ!

—ಕೆ. ಜೆ. ಶೆಟ್ಟಿ, ಕಡಂದಲೆ.

NAVAYUGA

REPUBLIC DAY SPECIAL 1965

is planned by us as a bountiful and sumptuous volume catering to the literary and cultural taste of the readers as also the demands of modern advertisement

Please reach us your advertisement on or before 20-1-65.

ADVERTISEMENT RATES:

Full Page	Rs. 150/-	Back Cover Page	Rs. 650/-
Half Page	Rs. 75/-	Inside 1st Cover Page	Rs. 450/-
Quarter Page	Rs. 40/-	Inside 2nd Cover Page	Rs. 350/-

Ordinary Full Page in Double colours Rs. 250/-
Inside Pages facing the Cover Pages Rs. 200/-

MECHANICAL DATA:

Paper Size .. 15" × 10" (37.5 Cm. × 25 Cm.) Size of type page... 13" × 8" (32.5 Cm. × 20 Cm.)

Date of Publication : 26—1—1965.

ADVT. MANAGER.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಿಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ನಿಮಗೂ ತಿಳಿದಿರಲಿ

ಕೈದಿಗಳಿಗೆ ಪುನರ್ಜನ್ಮ ಕೊಡುತ್ತಾರೆ

ಜೈಲಿಗೆ ಹೋದವರೆಲ್ಲಾ ಕೆಟ್ಟವರೇ ಎಂದು ಹೇಳಲು ಸಾಧ್ಯವಿಲ್ಲ. ವಿಪರೀತ ಸಂದರ್ಭಗಳಲ್ಲಿ ಅಕಸ್ಮಾತ್ ನಡೆದು ಹೋಗುವ ಕೆಲವು ಪ್ರಮಾದಗಳ ಕಾರಣದಿಂದ ಸೆರೆಮನೆಯ ವಾಸವನ್ನನುಭವಿಸುವವರೂ ಇದ್ದಾರೆ. ನಿರುದ್ಧ ಸಾಕ್ಷ್ಯಗಳು ದೊರೆತು ಜೈಲಿಗೆ ತೆರಳಿದ ನಿರಪರಾಧಿಗಳೂ ಇದ್ದಾರೆ. ಇವರಲ್ಲಿ ಅನೇಕರು ಜೈಲಿನಲ್ಲಿಯೇ ಬಹುಮಟ್ಟಿಗೆ ಸುಧಾರಿತರಾಗಿರುತ್ತಾರೆ. ಆದರೂ, ಹೊರಗೆ ಬಂದ ಮೇಲೆ, ಅವರಿಗೆ ಸ್ಥಾನ ಕೊಡಲು, ಕೆಲಸ ನೀಡಲು ಸಾಮಾನ್ಯವಾಗಿ ಎಲ್ಲರೂ ಹಿಂದೆಗೆಯುತ್ತಾರೆ. ಆಗ ಅವರ ಗತಿ ...?

ಯಾರಾದರೊಬ್ಬರು ತನ್ನ ಜೀವಮಾನ ಕಾಲದಲ್ಲಿ, ಒಂದು ಬಾರಿ ಸೆರೆವಾಸಕ್ಕೆ ಹೋಗಿ ಬಂದರೆಂದರೆ ಅವರ ಇತಿಶ್ರೀ ಆಗಿ ಹೋಯಿತೆಂದೇ ಹೇಳಬಹುದು. ಸ್ವಾತಂತ್ರ್ಯಕ್ಕಾಗಿ, ದೇಶಕ್ಕಾಗಿ ಹೋರಾಡುವವರಲ್ಲದೆ, ಉಳಿದ ಯಾವುದಾದರೂ ಸಣ್ಣದ ಕಾರ್ಯ ಮಾಡಿ ಜೈಲಿಗೆ ಹೋಗಿ ಬರುವವರೆಲ್ಲರ ಭವಿಷ್ಯವೂ ಅಂಧಕಾರವಾವರಿಸಿದಂತೆಯೇ ಇರುತ್ತದೆ. ಅವರು ಎಷ್ಟೇ ಸುಧಾರಿಸಿರಲಿ, ಸತ್ಯವಂತರಾಗಿರುತ್ತೇವೆಂದು ಎಷ್ಟೇ ಪ್ರಮಾಣಮಾಡಿ ಹೇಳಲಿ ಯಾರೂ ನಂಬುವುದಿಲ್ಲ. ಸೆರೆಯಲ್ಲಿರುವಷ್ಟು ಕಾಲ ನಾಲ್ಕು ಗೋಡೆಗಳ ನಡುವೆ ಕೈದಿಯಾಗಿದ್ದವನು, ಹೊರಗೆ ಬಂದ ಕೂಡಲೇ ಸುತ್ತಲೂ ಗೋಡೆಯಿಲ್ಲದಿದ್ದರೂ ಕೈದಿಯಂತೆಯೇ ಆಗುತ್ತಾನೆ. ಒಳಗಿದ್ದುದೇ ಮೇಲಾಗಿತ್ತು ಎಂದು ಸಹಾ ಅವನೆಂದುಕೊಳ್ಳುವ ಸ್ಥಿತಿಯನ್ನು ಅವನ ಸುತ್ತಲಿನ ಜನರು ತಂದಿಡುತ್ತಾರೆ.

ಆದರೆ, ನಿಜವಾಗಿ ಹೇಳಬೇಕೆಂದರೆ, ಒಬ್ಬೊಬ್ಬ ಕೈದಿಯ ಹೃದಯದ ಒಳಹೊಕ್ಕು ಪರೀಕ್ಷೆ ಮಾಡಿ ನೋಡಿದರೆ, ಸಂದರ್ಭವಶಾತ್ ಜರುಗಿದ ಪ್ರಮಾದದ ದೆಸೆಯಿಂದ ಅವನು ಜೈಲಿಗೆ ಹೋಗುವಂತಾಯಿತೇ ವಿನಾ, ಅವನು ಮಾನವನೇ ಎಂಬುದು ಗೋಚರವಾಗುವುದು. ಕೆಲವು ಕಳ್ಳರು ಮಾತ್ರ ಈ ನಿಯಮಕ್ಕೆ ಲೋಪ. ಸೆರೆಮನೆಯಿಂದ ಹೊರಬಂದ ಮೇಲೆ ಮತ್ತೆ ಮತ್ತೆ ಕಳ್ಳತನ ಮಾಡಿ ಸೆರೆಗೆ ಹಿಂದಿರುಗುವುದೇ ಅವರ ಕಾಯಕ. ಅಂತೂ ಸಾಧಾರಣವಾಗಿ ಬಹು ಮಂದಿ ಕೈದಿಗಳೂ ಮನುಷ್ಯರೇ! ಬುದ್ಧಿ ಹತೋಟಿಯಲ್ಲಿದ್ದಾಗಲೇ ಇಲ್ಲದಿದ್ದಾಗಲೋ ಮಾಡಿದ ತಪ್ಪಿಗೆ ಅವರು ಸೆರೆಮನೆ ಹೋಗಿ ಬಂದಿರುತ್ತಾರೆ. ಅಲ್ಲಿ ಪಡಬಾರದ ಕಷ್ಟಗಳನ್ನೆಲ್ಲಾ ಅನುಭವಿಸಿ, ಅವರ ಗುಣ ಸಂಪೂರ್ಣವಾಗಿ ಬದಲಾಯಿಸಿರುತ್ತದೆ. ಅಂತಹವರಲ್ಲಿ, ಅವನು ಹೊರಬಂದ ಮೇಲೆಯೂ ಅವನಿಗೆ ಬದುಕಲು ಅವಕಾಶವನ್ನು ನೀಡಲಿಲ್ಲವೆಂದರೆ, ಮಾನವ ಸಮಾಜದ ಮೇಲೆಯೇ ಅವನಿಗೆ ಒಂದು ಬಗೆಯ ದ್ವೇಷವು ಹುಟ್ಟಿ, ಅವನು "ಮೃಗ"ವಾದರೂ ಆಶ್ಚರ್ಯವಿಲ್ಲ.

ಆ ಕಾರಣದಿಂದ ಹಾಲೆಂಡಿನಲ್ಲಿ ಕೈದಿಗಳಿಗೆ ಪುನರ್ಜನ್ಮ ನೀಡುವ ಸಂಸ್ಥೆಗಳು ಇವೆ. ಈ ಸಂಘಗಳಿಗೆ ಸರಕಾರದ ಪೂರ್ಣ ಬೆಂಬಲವಿರುವುದರಿಂದ, ಇವು ಕೈದಿಯು ಸೆರೆಮನೆ ಸೇರಿದಾಗಲೇ ಅವನನ್ನು ಸುಧಾರಿಸಿ, ಸನ್ಮಾರ್ಗಕ್ಕೆ ತರುವ ಕಾರ್ಯವನ್ನು ಕೈಗೊಳ್ಳುತ್ತವೆ. ಈ ಸಂಘದ ಮನಶ್ಶಾಸ್ತ್ರಜ್ಞರು ಅಪರಾಧಿಗಳ ಮಾನಸಿಕ ಪರಿವರ್ತನೆಯ ಕಾರ್ಯವನ್ನು ಕೈಗೊಳ್ಳುವರು. ಸೆರೆಯಿಂದ ಕೈದಿಯು ಹೊರಬಂದ ಮೇಲೆ ಹೊರಜಗತ್ತಿನ ಉಳಿದವರೊಂದಿಗೆ ಸರಿಸಮನಾಗಿ ಬಾಳುವುದಕ್ಕೆ ಬೇಕಾದ ಮನದ ಸ್ಥೈರ್ಯವನ್ನು ಅವನಲ್ಲಿ ತುಂಬಿಸುತ್ತಾರೆ. ಅವನ ಮನಸ್ಸಿನಲ್ಲಿರುವ "ದೀನತನ"ವನ್ನು ಹೋಗಲಾಡಿಸಲು ಮಾನಸಿಕ ಚಿಕಿತ್ಸೆಯನ್ನು ಅವನಿಗೆ ನೀಡುತ್ತಾರೆ.

ಹಾಲೆಂಡಿನ ಜೈಲಿನಧಿಕಾರಿಗಳೂ ಈ ವಿಷಯದಲ್ಲಿ ಮತ್ತೂ ಒಂದು ಹೆಜ್ಜೆ ಮುಂದುವರಿದಿದ್ದಾರೆ. ಕೈದಿಯು ನಿಜವಾಗಿ ಸಜ್ಜನನೆಂದು ಅವರಿಗೆ ಖಾತ್ರಿಯಾಯಿತೆಂದರೆ, ಅವನಿಗೆ ಅಲ್ಲೇ ಏನಾದರೂ ಒಳ್ಳೆಯ ಕೆಲಸವನ್ನು ಕೊಡುವರು. ಅವನನ್ನು ಕಬ್ಬಿಣದ ಸಲಾಕೆಯ ಕೊಠಡಿಗಳಲ್ಲಿ ಕೂಡಿ ಹಾಕುವದಿಲ್ಲ. ಹಗಲಿನ ಹೊತ್ತು, ಯಾರ ಉಸ್ತುವಾರಿಯೂ ಇಲ್ಲದೆ, ಅವನನ್ನು ಹೊರಗೆ ಬಿಡುತ್ತಾರೆ. ಅವನು ತನ್ನ ಮನೆಗೋ, ತನ್ನ ಇಷ್ಟಮಿತ್ರರ ಮನೆಗೋ ಹೋಗಿ ಬರಬಹುದು. ಅವಧಿಯು ಮುಗಿಯದಿದ್ದರೂ, ಅವನು ಹೊರಗೆ ಬಂದು, ಹೋಗುತ್ತಿರುವುದನ್ನು ಕಂಡು ಅವನ ಸುತ್ತಮುತ್ತಲಿನವರಿಗೆ ಅವನ ಒಳ್ಳೆಯ ಗುಣದ ಬಗ್ಗೆ ಖಾತ್ರಿಯಾಗುವುದು. ಕೈದಿಗೂ ತನ್ನನ್ನು ಸೆರೆಯಲ್ಲಿಟ್ಟವರ ಮೇಲೆ ಕೃತಜ್ಞತಾಭಾವನೆ ಉದಿಸುವುದು; ಜೈಲಿಗೇ ಹೋಗದವನಿಗಿಂತ ಅವನು ಒಳ್ಳೆಯವನಾದರೂ ಆಶ್ಚರ್ಯವಿಲ್ಲ. ಇಷ್ಟಲ್ಲದೆ, ಕೊನೆಗೆ ಅವನ ಸದ್ವರ್ತನೆಯ ಕಾರಣದಿಂದಾಗಿ ಅವನ ಜೈಲು ವಾಸದ ಅವಧಿಯಲ್ಲಿ ರಿಯಾಯಿತಿಯನ್ನೂ ತೋರಿಸುತ್ತಾರೆ. ಉಳಿದಿರುವ ಅವಧಿಯ ಕಾಲದಲ್ಲಿ ಅವನು ಪೋಲೀಸ್ ಅಧಿಕಾರಿಗಳಿಗೆ ಹಾಜರಿ ನೀಡಬೇಕೆಂಬ ನಿಯಮವಿದ್ದರೂ, ಉಳಿದೆಲ್ಲಾ ವಿಷಯದಲ್ಲಿಯೂ ಅವನು ಪೂರ್ಣ ಸ್ವತಂತ್ರನೇ.

ಈ ಮಧ್ಯೆ ಕೈದಿಯು ಯಾವ ಕಾರಣದಿಂದ ಜೈಲಿಗೆ ಹೋಗುವಂತಾಯಿತು ಎಂಬುದನ್ನು ಈ ಸಂಘವು ಪರಿಶೀಲಿಸುವುದು. ಮನೆಯಲ್ಲಿ ತೀರಾ ಬಡತನವಿದ್ದು ಆರ್ಥಿಕ ಕಾರಣಗಳಿಂದಾಗಿ ಒಬ್ಬನು ಕಳ್ಳತನ ಮಾಡಿದ್ದಲ್ಲಿ, ಅವನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನಗಳನ್ನೂ ಕೈಗೊಳ್ಳಲಾಗುವುದು. ಇದಕ್ಕಾಗಿಯೇ, ಈ ಸಂಸ್ಥೆಯಲ್ಲಿ ಶೇಖರಿಸಿರುವ ನಿಧಿಯಿಂದ ಕೆಲವಂಶವನ್ನು ಅವನ ಕುಟುಂಬಕ್ಕೆ ನೀಡಲಾಗುವುದು. ಕೈದಿಯಾಗಿದ್ದವನು ಏನು ಕೆಲಸ ಮಾಡಬಲ್ಲ, ಅವನ ಜ್ಞಾನದ ಪರಿಮಿತಿಯೆಷ್ಟು, ಎಂಬುದನ್ನು ಅರ್ಥಮಾಡಿಕೊಂಡು ಅವನಿಗೆ ತಕ್ಕ ಉದ್ಯೋಗವನ್ನು ಹುಡುಕಿಕೊಡುವ ಕಾರ್ಯವನ್ನು ಈ ಸಂಸ್ಥೆಯೇ ನೋಡಿಕೊಳ್ಳುವುದು.

ಕೈದಿಯು ವಾಸಿಸುವ ಪ್ರದೇಶದಲ್ಲಿರುವ ಗಣ್ಯ ವ್ಯಕ್ತಿಯೊಬ್ಬರ ಜವಾಬ್ದಾರಿಗೆ ಆ ಕೈದಿಯನ್ನು ಬಿಡಲಾಗುವುದು. ಅವನಿಗೆ ಎಂತಹ ಕಷ್ಟಗಳು ಬಂದರೂ, ಯಾವುದೇ ವೇಳೆಯಲ್ಲಿಯೂ ಅವನು ಅವರಲ್ಲಿಗೆ ಹೋಗಿ ಸಲಹೆ, ಸಹಾಯಗಳನ್ನು ಪಡೆಯಬಹುದು. ಹೀಗಾಗಿ, ಕ್ರಮೇಣ ಕೈದಿಯಲ್ಲಿ ಎಲ್ಲರೂ ವಿಶ್ವಾಸವಿಡತೊಡಗುತ್ತಾರೆ, ಅವನೂ ಪುನಃ ತನ್ನ ಅಂತಸ್ತನ್ನು ಸಂಪಾದಿಸಲು ಸಾಧ್ಯವಾಗುತ್ತದೆ.

ಕೈದಿಗಳ ಸನ್ಮಾರ್ಗ ಪ್ರವರ್ತಕ ಸಂಘಗಳವರು ಪ್ರತಿ ವರ್ಷವೂ ತಮ್ಮ ಈ ಸೇವೆಗಾಗಿ ಅಕ್ಟೋಬರ್ ತಿಂಗಳಲ್ಲಿ ನಿಧಿ ಸಂಗ್ರಹ ಮಾಡುತ್ತಾರೆ. ಆಗ, ಈ ಸಂಘದ ಸದಸ್ಯರು ಮನೆ ಮನೆಗೂ ಹೋಗಿ ಕೈದಿಗಳ ಪುನರುದ್ಧಾರಕ್ಕಾಗಿ ಹಣವನ್ನೂ ವಸ್ತುಗಳನ್ನೂ ಸಂಗ್ರಹಿಸುತ್ತಾರೆ. ಹಾಲೆಂಡಿನ ಈ ಸಂಘಗಳು ಮಾಡುತ್ತಿರುವ ಸತ್ಕಾರ್ಯದ ಅರಿವು ಈಗ ಅಲ್ಲಿನ ಜನರಿಗೆಲ್ಲಾ ಚೆನ್ನಾಗಿ ತಿಳಿದು ಬಂದಿರುವುದರಿಂದ, ಯಾರೂ ಈ ಕಾರ್ಯಕ್ಕೆ ದಾನ ನೀಡಲು ಹಿಂಜರಿಯುವುದಿಲ್ಲ. ಈ ಸಂಸ್ಥೆಗೆ ಸರಕಾರವೂ ಪ್ರೋತ್ಸಾಹ ಧನವನ್ನು ನೀಡುತ್ತಿದೆ. ಹಾಲೆಂಡಿನ ಹಿಂದಿನ ಕಾಲದ ಕೈದಿಗಳಿಗೂ, ಈ ಸಂಘಗಳ ಸ್ಥಾಪನೆಯ ನಂತರದ ಕೈದಿಗಳಿಗೂ ಗಣನೀಯ ವ್ಯತ್ಯಾಸವಿದೆಯೆಂದು ತಿಳಿದು ಬಂದಿದೆ. ಇದೇ ಬಗೆಯ ಪ್ರಯೋಗಗಳನ್ನು ಉಳಿದೆಡೆಯೂ ಯಾಕೆ ಮಾಡಬಾರದು?

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O S 347/64

Between

Sri Shankaranna Alse Mutt Sri Gopalkrishna Devru Temple— Nalkur by trustee Sri Narasimha Bhatta .... ವಾದಿ.

ಮತ್ತು

Krishnayya Shetty ... ಪ್ರತಿವಾದಿ

ಕುಂದಾಪುರ ತಾಲೂಕಿನ ಆಲ್ಬಾಡಿ ಗ್ರಾಮದ ಆರ್ಡಿಯಲ್ಲಿರುವ ನಾಡಕೇರಿ ಬುಗ್ಗಪ್ಪ ಶೆಟ್ಟಿ ಅಳಿಯ ಕೃಷ್ಣಯ್ಯ ಶೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ— ನಿಮ್ಮಿಂದ ಬಹ ಗೇಣಿ ಬಾಕಿ ವಸೂಲಿ ಕೇಳಿ ಮಾಡಿದ ಸದ್ರಿ ದಾವೆಯು 16-1-1965ನೇ ತಾರೀಕಿಗೆ ಇದೆ. ಈ ಬಾಬ್ತು ನಿಮ್ಮ ಆಕ್ಷೇಪ ಏನಾದರೂ ಇದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದುರಿಸಿ ಕೊಳ್ಳತಕ್ಕದ್ದು. ಇಲ್ಲದಿದ್ದರೆ ನಿಮ್ಮನ್ನು ಬಿಟ್ಟು ವಿಚಾರಿಸಲಾದೀತು.

P.N. Krishnamoorthy Rao.
Advocate
Udipi (S. K.) 18-12-1964

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ಕವಿತಾ ವಿಕಾಸ

ಮುನ್ನಡೆತ

ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು.

೧. ಮೊದಲ ನುಡಿ ಋಷಿಯಿಂದ
ಮೊಳಗಿದತ್ತು,
'ಅಗ್ನಿಮೀಳೇ ಪುರೋಹಿತಂ'.
ಇದರಂತೆ ನಮಗೊಬ್ಬ
ಮುಂದಾಳು ಬೇಕೆನುತ
ಅರಸನನು ಎಲ್ಲೆಡೆಯು
ಗೊತ್ತುಪಡಿಸಿತ್ತು.

೨. ಮೊದಲಾಳು ನಡೆದಂತೆ
ಹಿಂದಿ ಅನುಸರಿಸೆ,
'ಮರುದ್ಭಿರಗ್ನ ಆಗಹಿ',
ಇದೆ ನುಡಿದು ತಮ್ಮೊಳಗೆ
ಆದರ್ಶಕೆಂದು
ಅರಸಗೊಬ್ಬನು ಮಂತ್ರಿ
ಯಿರಲೆಂದಿತು.

೩. ಜತೆಯೊಳೇ ಮುನ್ನಡೆತ
ಸಾಗುತಿರಲೆಂದು,
'ತರಕ್ಷ ಮಂದೀಧಾವತಿ' ಎಂಬ
ಹಿತವಚನವಿದಕೆಂತು
ಸಮನಿಸಿಕೆಯದೆಂದು
ಮತಿಯುಕ್ತಿಗಳನಂತು
ಸಮಕೊಳಿಸಿತು.

೪. ಸವ್ಯಕ್ತ್ವಮಾದರಿ—
ದಲಿ ತಾವು ನಡೆದು
'ಸಂಗಚ್ಛಧ್ವಂ ಸಂವದಧ್ವಂ' ಎಂದು
ಸಂತತಿಯ ಸದ್ಗತಿಯ
ಮುನ್ನೋಟದಿಂದೆ,
ಸಂತತಂ ಸಂಸ್ಕೃತಿ
ಸಾಗುತಲಿದೆ.

'ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ. 2-00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಣ್ವಸ್ತ್ರ ತಯಾರಿಗೆ ಅಡೆತಡೆಗಳು

(ಐದನೇ ಪುಟದಿಂದ)

ಬಿಸಬಹುದು. ನಾವು ಅಣುಗುಂಡು ತಯಾರಿಸುವುದಿಲ್ಲವೆಂದಿದ್ದೆವು. ವಿನಃ ಅದನ್ನು ಪಡೆದುಕೊಳ್ಳುವುದಿಲ್ಲವೆಂದು ಹೇಳಿದ್ದೇ ಇಲ್ಲವಲ್ಲಾ! ನಾವು ಹರಿಶ್ಚಂದ್ರರೇ ಇದ್ದೇವೆ! ಆರ್ಥಿಕ ಪರಿಸ್ಥಿತಿಗನುಸಾರವಾಗಿ ಕಂತಿನಲ್ಲಿ ಅವರಿಗೆ ಹಣ ಕೊಟ್ಟರಾಯಿತು. ಆರ್ಥಿಕ ದುಸ್ಥಿತಿಗೂ ಪರಿಹಾರೋಪಾಯ ಇದು. ಹೀಗೆ ಎರಡು ಹಕ್ಕಿಗಳನ್ನು ಒಂದೇ ಕಲ್ಲಿನಿಂದ ಹೊಡೆಯುವ ಉಪಾಯ ಇದೆಂದು ಕೆಲವರು ಹೇಳಬಹುದು. ಇಲ್ಲಿ ಇನ್ನೊಂದು ಮುಖ್ಯ ವಿಷಯವಿದೆ. ನಮಗೆ ಬೇಕಾದಾಗ ಬ್ರಿಟನು ಅಣುಗುಂಡನ್ನೊದಗಿಸಬಲ್ಲುದೇ? ಅದಿಲ್ಲವಾದಲ್ಲಿ ಅಮೇರಿಕಾವಾದರೂ ಒದಗಿಸಬಲ್ಲುದೇ? ನಮಗೆ ಕೊಡುವವರು ಅಧಿಕ ಲಾಭದೊರಕುವಾಗ ಅನ್ಯರಿಗೆ (ಅದು ಚೈನಾವಾದರೂ ಸರಿ, ಬೇರೆನ್ನಾರಾದರೂ ಸರಿ) ಕೊಡದಿರಲಾರರೇನು? ಹಿಂದೆ ಹಣಕೊಟ್ಟು ನಾವು ತರಿಸಿದ್ದ ಆಯುಧ ತುಂಬಿದ್ದ ಹಡಗು ಪಾಕಿಸ್ತಾನಕ್ಕೆ ಹೋಗಲಿಲ್ಲವೇನು? ಇಂದು ಅದೆಂತು ನಾವು ಆ ದಾರಿಯಲ್ಲಿ ಹಿಂದೆ ಬಿದ್ದಿದ್ದೇವೆ? ಅನ್ಯ ರಾಷ್ಟ್ರಗಳು ನಮ್ಮ ಆವಶ್ಯಕತೆಗನುಸಾರವಾಗಿ, ಆರ್ಥಿಕ ಲಾಭವನ್ನು ಬದಿಗಟ್ಟಿ, ಬೇಕಾದಂತೆ, ಬೇಕಾದಾಗ ಅಣುಗುಂಡನ್ನೊದಗಿಸಿಯಾವೆನ್ನುವದು ಹಗಲು ಕನಸೇ ಸರಿ. ಅದರ ಶೇಖರಣೆಯೂ ಸಾಮಾನ್ಯ ವಿಷಯವಿರುವದಿಲ್ಲ— ಉಪ್ಪಿನ ಕಾಯಿ ಹಾಕಿಟ್ಟಹಾಗೆ.

ಒಂದು ವೇಳೆ ಅನ್ಯ ರಾಷ್ಟ್ರಗಳು ಕೊಟ್ಟರೂ, ಅಥವಾ ನಾವೇ ತಯಾರಿಸಿದರೂ ನಿಜವಾಗಿ ಪ್ರಯೋಗ ಮಾಡಲೇಬೇಕಾದ ಪ್ರಸಂಗ ಬಂದಲ್ಲಿ ನಮ್ಮ ನಾಡಿಗೆ ಬಹಳ ಕಷ್ಟವೇ ಸರಿ. ಭಾರತದ ಗಡಿಯಿಂದ ಬಹಳ ದೂರಕ್ಕಿದೆ ಚೈನಾ. ಅವರಿಗೆ ಹಾಗಲ್ಲ ನಮ್ಮ ಗಡಿ ಬಹಳ ಹತ್ತಿರವಿದೆ. ಹಾಗಾಗಿ ಅವರಿಗೆ ಆಕ್ರಮಣಕ್ಕೆ ಬಹಳ ಸುಲಭ. ಅವರು ಅದನ್ನು ಗಡಿಯಲ್ಲಿ ಸ್ಫೋಟನಗೊಳಿಸಿದರೂ ಭಾರತಕ್ಕೆ ಭಾರೀ ನಷ್ಟ, ಹಾನಿಯಾಗುತ್ತದೆ. ನಾವು ಗಡಿಯಲ್ಲಿ ಸ್ಫೋಟನಗೊಳಿಸಿದರೆ ಅವರಿಗೇನು ಅವರಪ್ಪನ ಗಂಟು ಹೋಯಿತು? ನಮಗೇನೇ ನಷ್ಟ. ನೇಫಾ, ಲಡಾಖ್ ಮುಂತಾದ ಪ್ರದೇಶಗಳಂತೂ ನಮ್ಮವೇ ಇವೆ. ತ್ರಿವಿಷ್ಟಪದ ನಾಶವಾದರೂ ಚೈನೀಯರಿಗೇನಿಲ್ಲ. ನಮಗೆ ಅದೂ ನಷ್ಟವೇ ಇದೆ. ಹೀಗೆ ಚೈನಾದ ಸಮೀಪಕ್ಕೆ ವಿಮಾನದಲ್ಲೇ ಆಗಲಿ ಅದನ್ನು ಸಾಗಿಸುವದು ಬಹಳ ಕಷ್ಟವೇ ಇದೆ. ಆ ಮಟ್ಟಿನ ಪ್ರಗತಿಯ ವಿಮಾನ ಉಪಯೋಗಿಸಿದರೂ ಅದನ್ನು ತಡೆಯಲು ಅವರಿಗೆ ಸಾಧ್ಯವಿದೆ.

ಆದುದರಿಂದಲೇ ಅದನ್ನು ಮಾರಕಾಸ್ತ್ರವೆನ್ನುವರು. ಅದನ್ನು ರಕ್ಷಣೆಗಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ ಬದಲು ನಾಶಕ್ಕಾಗಿ ಮಾತ್ರ ಉಪಯೋಗಿಸಬಹುದು. ಆ ದೃಷ್ಟಿಯಿಂದ ನೋಡಿದಲ್ಲಿ ಅದ್ಯಾವದು ಮಾರಕಾಸ್ತ್ರವಿರುವದಿಲ್ಲ. ಕೈಗುಂಡುಗಳನ್ನೀಗ ತಯಾರು ಮಾಡಲಾಗುತ್ತಿದೆನ್ನಲಾಗುತ್ತಿದೆ. ಆದಾದರೂ ಏನು? ಅದನ್ನು ಆಕ್ರಮಣಗಾರರನ್ನೆದುರಿಸಲಿಕ್ಕಾಗಿ ತಯಾರಿಸುವದಲ್ಲವೇನು? ಅಥವಾ ನಮ್ಮ ಜನತೆಯ ಮೇಲೆ ಅಂದರೆ ಸಂಪು ಮಾಡುವವರ ಮೇಲೆ, ಅನ್ನ ಕೇಳುವವರ, ಸಂಬಳ ಜಾಸ್ತಿ ಕೇಳುವವರ ಮೇಲೆ ಪ್ರಯೋಗಿಸಲಿಕ್ಕಾಗಿ ಅವನ್ನು ತಯಾರಿಸುವದೇನು? ಕೈ ಗುಂಡನ್ನು ಆಕ್ರಮಣಗಾರರ ಮೇಲೆ ಬಿಸಾಡಬಹುದಾದಲ್ಲಿ ಅಣುಗುಂಡನ್ನೇತಕ್ಕೆ ಬಿಸಾಡಬಾರದು?

ಇದನ್ನು ಯೋಚಿಸುವಾಗ ನಮಗೆ ಸೇನೆಯ ಆವಶ್ಯಕತೆಯಾದರೂ ಏನಿದೆ? ಸುಮ್ಮಗೆ ಹಣ ದಂಡ ತಾನೇ? ಇದನ್ನು ಬೇರಿನ್ನಾವ ರಚನಾತ್ಮಕ ಕಾರ್ಯಕ್ಕಾಗಿಯಾದರೂ ಉಪಯೋಗಿಸುವದು ಬಹಳ ಒಳ್ಳೆಯದು. ಆಕ್ರಮಣಗಾರರನ್ನೆದುರಿಸಲು ಇಲ್ಲಿಯ ಶಾಂತಿ ಸೇನೆಯವರಾಗಲೀ, ರಕ್ಷಣಾ ಮಂತ್ರಿಯವರಾಗಲೀ ಗಡಿ ಪ್ರದೇಶಗಳಿಗೆ (ಚೈನಾಕ್ಕಲ್ಲವಾದರೂ) ಹೋಗಿ ಸತ್ಯಾಗ್ರಹ ಹೂಡಬೇಕು. ಅದಕ್ಕಾಗಿ ಹಾಲುಗಲ್ಲದ ಕಂದವರ ಮಕ್ಕಳನ್ನು ಕಳುಹಿಸುವದು ಸರಿಯಲ್ಲ. ಲೋಕಕ್ಕೆ ಉಪದೇಶ ಕೊಡುವವರೇ ಹೋಗುವದೊಳ್ಳೆಯದು. ಅವರು ಮಾರ್ಗದರ್ಶಿಗಳಾಗಬೇಕು. ಆದಕ್ಕಾರು ಮುಂದೆ ಬರುವರು?

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಅಕ್ಕನ ಮದುವೆ

ಬರೆದವರು: ಕು. ಗೋ. ಪ್ರಕಾಶಕರು: ಭಾರ್ಗವ ಪ್ರಕಾಶನ, ಹಿರೇಮಗಳೂರು, ಚಿಕ್ಕಮಗಳೂರು. ಬೆಲೆ: ರೂ. ೨-೫೦.

ಕನ್ನಡದಲ್ಲಿ ತರುಣ ಬರೆಹಗಾರರು ಉತ್ಸಾಹದಿಂದ ಸಾಹಿತ್ಯ ಸೇವೆ ಮಾಡುತ್ತಿರುವುದು ಒಂದು ಶುಭ ಸೂಚನೆ. ತಾರುಣ್ಯದ ಉತ್ಸಾಹಕ್ಕನುಗುಣವಾಗಿ ಬರೆದು ಜನಪ್ರಿಯತೆಯನ್ನು ಗಳಿಸಬೇಕೆಂಬ ಹಂಬಲ ಬರಹಗಾರರಲ್ಲಿ ಇರುವುದು ಸ್ವಾಭಾವಿಕ. ಆದರೆ ಬರೆದುದೆಲ್ಲ ಅಚ್ಚಾಗಬೇಕೆಂಬ ಭಾವನೆ ಇಂದಿನ ತರುಣ ಲೇಖಕರಲ್ಲಿ ತುಂಬಿರುವುದೇ ಅವರು ಉತ್ತಮ ಬರೆಹಗಾರರಾಗಲು ಇರುವ ಅಡ್ಡಿ ಎಂದು ಹಿಂದೊಮ್ಮೆ ಹಿರಿಯ ಸಾಹಿತಿಗಳೊಬ್ಬರು ಹೇಳಿದ್ದುಂಟು. ಇದಕ್ಕೆ ಕಾರಣ ಇಂದಿನ ಹಲವಾರು ತರುಣ ಬರೆಹಗಾರರ ಉತ್ಸಾಹದ ಭರದಿಂದ ತಿಂಗಳು ತುಂಬುವ ಮೊದಲೇ ಹುಟ್ಟಿಕೊಂಡ ಮಕ್ಕಳಂತಿರುವ ಕೆಲವು ಕೃತಿಗಳು. ಆದರೆ ತರುಣ ಬರೆಹಗಾರರಲ್ಲಿ ಉತ್ತಮ ಬರೆಹಗಾರರಿಲ್ಲವೆಂದಲ್ಲ. ಮೊದಲ ಕಾದಂಬರಿಯಿಂದಲೇ ಜನಪ್ರಿಯತೆಯನ್ನು ಗಳಿಸಿದ ತರುಣ ಬರೆಹಗಾರರೂ ಇದ್ದಾರೆ. ಆದರೆ ಅಂಥವರ ಸಂಖ್ಯೆ ಮಾತ್ರ ಬೆರಳೆಣಿಕೆಯಷ್ಟು.

ತರುಣ ಬರೆಹಗಾರ ಶ್ರೀ ಕು. ಗೋ.ರವರ ಪುಸ್ತಕ "ಅಕ್ಕನ ಮದುವೆ" ಅವರ ಪ್ರಥಮ ಪ್ರಕಾಶಿತ ಕೃತಿಯಾದ ಈ ಪುಸ್ತಕ ತನ್ನದೇ ಆದ ಒಂದು ಆಕರ್ಷಣೆಯಿಂದ ಓದುಗರನ್ನು ಸೆರೆ ಹಿಡಿಯುತ್ತದೆ. ಇದು ಕಥಾ ಸಂಕಲನವೂ ಅಲ್ಲ; ವಿಡಂಬನಾತ್ಮಕ ಬರೆಹಗಳ ಸಂಗ್ರಹವೂ ಅಲ್ಲ; ಬದಲು ಕನ್ನಡದಲ್ಲಿ ಅಪರೂಪವಾಗಿ ಕಾಣ ಸಿಗುವ ಲಘು ಪ್ರಬಂಧಗಳ ಸಂಕಲನ. ಹಾಗಾಗಿ ಕನ್ನಡಕ್ಕೆ ಇದೊಂದು ಅಪರೂಪದ ಕೊಡುಗೆ. ಓದುಗರಿಗೆ ಅಪರೂಪದ ಅಡುಗೆ; ಹಾಗಾಗಿ ರುಚಿಸುವುದರಲ್ಲಿ ಅಡ್ಡಿಯಿಲ್ಲ.

ಲೇಖಕರು ತಾವು ಜೀವನದಲ್ಲಿ ಕಂಡ, ಕೇಳಿದ, ಅನುಭವಿಸಿದ, ಅವಲೋಕಿಸಿದ, ತನ್ನ ಸುತ್ತು ಮುತ್ತಲಿನ ಜನರ ಜೀವನದ ಹಲವಾರು ಪ್ರಸಂಗಗಳನ್ನೆತ್ತಿಕೊಂಡು ಸುಂದರವಾಗಿ ನಿಬಂಧ ರಚಿಸಿದ್ದಾರೆ. ಓದುಗರನ್ನು ಅಲ್ಲಲ್ಲಿ ಹಾಸ್ಯದ ಚಟಾಕಿಗಳಿಂದ ನಗಿಸುತ್ತಾರೆ; ಒಮ್ಮೊಮ್ಮೆ ತನ್ನ ಕಟುವಾದ ಮಾತುಗಳಿಂದ ಸಮಾಜದ ಲೋಪದೋಷಗಳನ್ನು ಟೀಕಿಸುತ್ತಾರೆ; ಮತ್ತೊಮ್ಮೆ ಜೀವನವೆಂದರೆ ಇದೇ, ಇವೆಲ್ಲವೂ ಇರುವುದು ಸ್ವಾಭಾವಿಕ ಎಂಬ ಸಮಾಧಾನ ತಂದುಕೊಳ್ಳುತ್ತಾರೆ.

ಇಲ್ಲಿರುವ ಲಘು ಪ್ರಬಂಧಗಳು ಒಂದೊಂದು ಒಂದೊಂದು ತೆರದ ಅನುಭವವನ್ನು ಕೊಡುತ್ತವೆ. ಈ ಎಲ್ಲಾ ಪ್ರಬಂಧಗಳಲ್ಲಿ ಕೇಂದ್ರ ವ್ಯಕ್ತಿಯಾಗಿರುವವರೆಂದರೆ 'ನಾನು' ಎಂಬ ಲೇಖಕರು. ಹಾಗಾಗಿ ಇಲ್ಲಿ ಕಲ್ಪನೆಗಿಂತಲೂ ಸ್ವಂತ ಅನುಭವಕ್ಕೆ ಹೆಚ್ಚಿನ ಪ್ರಾಧಾನ್ಯತೆ ಬಂದಿದೆ.

ಶ್ರೀ ಕು. ಗೋ.ರವರಲ್ಲಿ ಬರೆಯುವ ಶಕ್ತಿ ಇದೆ. ವಿಷಯಗಳನ್ನಾರಿಸಿಕೊಳ್ಳುವಲ್ಲಿ ವೈವಿಧ್ಯತೆ ಇದೆ. ಮುನ್ನುಡಿಯಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ಹೇಳಿದಂತೆ ಶ್ರೀ ಕು. ಗೋ.ರವರು ಒಳ್ಳೆಯ ಪುಸ್ತಕವನ್ನು ಬರೆದಿದ್ದಾರೆಂದು ಹೇಳಲು ಸಂತೋಷವಾಗುತ್ತದೆ. ಜಾಹೀರಾತುಗಳ ಹಾವಳಿ ಇಲ್ಲದೆ, ಸುಂದರವಾದ ಮುಖಪತ್ರ ಹಾಗೂ ತಪ್ಪುಗಳಿಲ್ಲದ ಮುದ್ರಣದಿಂದ ಹೊರಬಂದ ಈ ಪುಸ್ತಕವನ್ನು ಕನ್ನಡಿಗರು ಸ್ವಾಗತಿಸುವರೆಂದು ಹಾರೈಸಬಹುದು. —ಸ.

ಕೆಲವು ವರ್ಷಗಳ ಹಿಂದೆ ಈ ದೇಶದಲ್ಲಿ ಒಬ್ಬ ಕ್ಷಯರೋಗಿಗೆ ಏನಾಯಿತು ಎಂಬುದನ್ನು ನಿಮ್ಮಷ್ಟಕ್ಕೆ ನೀವು ಪ್ರಶ್ನಿಸುವುದನ್ನು ಎಂದಾದರೂ ನಿಲ್ಲಿಸಿದ್ದೀರಾ? ಆ ವರ್ಷಗಳಲ್ಲಿ ಕ್ಷಯರೋಗವು ಗುಣವಾಗುವ ರೋಗವಲ್ಲ ಎಂದು ಪರಿಗಣಿಸಲ್ಪಟ್ಟಿತ್ತು; ಮತ್ತು ಯಾರಿಗೆ ಅದು ತಗಲುತಿತ್ತೋ ಅಂತಹ ಸಂತ್ಯಕ್ತರನ್ನು ಅದರ ಆಕ್ರಮಣದಿಂದ ಬಿಡಿಸುವುದೂ ಅಸಾಧ್ಯವಾಗಿತ್ತು. ಹಿಂದಿನ ಕಾಲದವರು ಕ್ಷಯರೋಗವು ವಂಶಪಾರಂಪರ್ಯವಾದದ್ದೆಂದೂ ಅದೂ ಆತೆಯಿಲ್ಲದುದೆಂದೂ ನೆನೆಸಿದ್ದರು. ಅವರು ಟಿ ಬಿ ಗೆ ಬಲಿಯಾದವರನ್ನು ಸಾಮಾನ್ಯವಾಗಿ ಸಾಯಬಿಡುತ್ತಿದ್ದರು.

ಆದರೆ ಇಂದದು ಹಾಗಿಲ್ಲ. ನಾವು ಕ್ಷಯರೋಗವನ್ನು ನಿರೋಧಿಸಬಹುದು; ಮತ್ತು ಹತೋಟಿಗೆ ತರಬಹುದು. ಆದರೂ ಈ ಕಾಯಿಲೆಯು ಈ ದೇಶದಲ್ಲಿ ಹಲವು ಜನರನ್ನು ದಿನಂಪ್ರತಿ ಬಲಿ ತೆಗೆದುಕೊಳ್ಳುತ್ತದೆ. ಆದರೆ ಪ್ರತಿಯೊಬ್ಬರೂ ಸಹಾಯ ಮಾಡಿದರೆ ಇದನ್ನು ಒಂದು ದಿನ ಸಂಪೂರ್ಣವಾಗಿ ನಿಲ್ಲಿಸಲು ನಾವು ಶಕ್ತರಾಗಬಹುದು. ಸಹಾಯದ ಒಂದು ದಾರಿಯೆಂದರೆ ಟಿ ಬಿ ಮೊಹರುಗಳನ್ನು ತೆಗೆದುಕೊಳ್ಳುವುದು ಮತ್ತು ನಿಮ್ಮ ಟಪ್ಪಾಲಿನ ಮೇಲೆ ಅದನ್ನು ಉಪಯೋಗಿಸುವುದು. ಒಂದು ಟಿ ಬಿ ಮೊಹರಿನ ಬೆಲೆ 10 ಪೈಸೆ ಮಾತ್ರ. ಮೊಹರುಗಳು ಸಿಗುವ ಸ್ಥಳಗಳು: 1. ದಕ್ಷಿಣ ಕನ್ನಡ ಜಿಲ್ಲಾ ಟಿ ಬಿ ಎಸೋಸಿಯೇಶನ್, ಮಂಗಳೂರು, 2. ದಿ ಮೈಸೂರು ಸ್ಟೇಟ್ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್, ಕುರುಬರ ಸಂಘ ಹೊಸ್ಟೆಲ್ ಬಿಲ್ಡಿಂಗ್, ಗಾಂಧಿ ನಗರ, ಬೆಂಗಳೂರು ಮತ್ತು ಇವುಗಳ ಬೇರೆ ಬೇರೆ ಏಜನ್ಸಿಗಳು.

ನಕಾಶೆಗಳು ಬೇಕಾಗಿವೆ: 16ನೆ ಟಿ ಬಿ ಮೊಹರು ಚಳವಳಕ್ಕೆ ಸಾದಾ ಮತ್ತು ಆಕರ್ಷಕವಾದ ನಕಾಶೆಗಳನ್ನು ಆಮಂತ್ರಿಸಲಾಗಿದೆ. ಉತ್ತಮವಾದ ನಕಾಶೆಗೆ ರೂ. 500/-ರ ಒಂದು ಪಾರಿತೋಷಕ ಕೊಡಲಾಗುವುದು. ವಿವರವಾದ ಫೋರ್ಮ್ಸ್‌ಗಳಿಗೆ ಬರೆಯಿರಿ— ಸೆಕ್ರೆಟರಿ, ಟ್ಯುಬರ್ ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, 3—ರೆಡ್ ಕ್ರೋಸ್ ರೋಡ್, ನ್ಯೂ-ಡಿಲ್ಲಿ-1.

15ನೆ ಟಿ ಬಿ ಮೊಹರು ಮಾರಾಟ ಚಳವಳ

(ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ-ಡಿಲ್ಲಿ ಇವರ ಹೊಣೆಗಾರಿಕೆಗೊಳಪಟ್ಟುದು)

ಸ್ಥಳದಾನ ಮಾಡಿದವರು:

Union Carbide India Ltd., Calcutta.

ಎಲ್ಲಾ ಹಳತು, ಒಂದು ಮಾತ್ರ ಹೊಸತು

(ನಾಲ್ಕನೇ ಪುಟದಿಂದ)

"ಒಳ್ಳೇದಾಯ್ತು ಬಿಡಿ...."

"ಏನು ಹೇಳ್ಬೇಕು?...."

"ಅಲ್ಲಾ, ಹೇಳ್ತೀನೀಂತ ಒಪ್ಪಿದವ್ರು ನೀವೇ. ಈಗ ಏನೂಂತ ಕೇಳೋವ್ರೂ ನೀವೇ..."

"ಜಾಗಲ್ವೆ...ಅಲ್ಲಿ ಏನೇನೋ ಆಯ್ತು. ಪತ್ರಿಕೆಗಳಲ್ಲಿ ಏನೇನೋ ಬಂತು. ನಿಂಗೆ ಏನೇನು ಬೇಕೂಂತ ಹೇಗೆ ನನ್ಗೆ ಗೊತ್ತಾಗ್ಬೇಕು?"

"ಮತ್ತೆಲ್ಲಾ ಹೇಳ್ತೀನೀಂತಂದ್ರಲ್ಲಾ..."

"ತಪ್ಪಾಯ್ತು ತಪ್ಪಾಯ್ತು....ಇಲ್ಲಿ, ನಿನಗೆ ಏನು ಬೇಕು ಕೇಳು, ಯಥಾಮತಿ ಉತ್ತರಿಸುತ್ತೇನೆ..."

"ಇದಿಲ್ಲಿ, ನಿಮ್ಮ ಟೋಪಿಯವ್ರ ಅಧಿವೇಶನದಲ್ಲಿ ಅಧ್ಯಕ್ಷರ ಭಾಷಣ ಭಾರಿ ಗಡದ್ದಿತ್ತಂತೆ"

"ಹಣ್ಣು... ಇತ್ತಿತ್ತಣ್ಣ..."

"ಹೇಗೆ?'

"ಓ, ಅದೇ ಬೇಕಾಗಿರೋದೇನು ನಿನಗೆ? ಸರೀನ್ನು. ಅಧ್ಯಕ್ಷರ ಭಾಷಣಾಂತಂದ್ರೆ ಪ್ರಾಣ ಅಲ್ವೆ?"

'ಮತ್ತೆ ಸರಿಯಾಗಿ ನೋಡಿದ್ರೆ ರಣಾಂಗಣದಲ್ಲೊಂದು ಪಿಟೀಲು ಬಾರಿಸಿದರಂತೆ...."

"ಇದ್ದದ್ದನ್ನ ಹೇಳಿದೆ..?

"ಹಾಗೆ ಹೇಳೋದ್ರಲ್ಲಿ ನೀವು ನಿಸ್ಸೀಮರಲ್ವೆ?"

"ಇಂದಿನ ಪ್ರಶಸ್ತಿ ಸಿಕ್ಕಿತು. ಇನ್ನು ನಾಳೆ ಮಾಡೋಣ..'

'ಒಳ್ಳೇ ಕತೆಯಾಯ್ತಲ್ಲಾ ಇದು? ಹೇಳ್ತೀನೇಂತ ಹೇಳಿದ್ದು....'

'ಅಂದ್ರೆ ನೀವು ಮನ್ನೇ ಬಿಡೋಳಿಲ್ಲಾಂತಾಯ್ತು?"

"ಮತ್ತೆ ನಾನೇನು ಕಟ್ಟಿ ಹಾಕಿದ್ದೇನೆಯ?"

"ಇಲ್ಲಪ್ಪಾ, ಮಾತಿನ ಹಗ್ಗದಿಂದ ಮಾತ್ರ..."

"ಹೇಳೋದಾದ್ರೆ ಹೇಳಿ. ನನ್ಗೂ ನಿದ್ದೆ ಬರುತ್ತೆ...."

"ಹಾಗಾದ್ರೆ ನಾಳೆಗೆ ವಿಷಯ ಮುಂದುವರಿಸೋಣ...."

"ನಿನ್ನ ದಮ್ಮಯ್ಯ....ಇಲ್ಲ ನಿದ್ದೆ ಬರೋದಿಲ್ಲಾ..."

"ಹ್ಞೂ...ಕಂಡಿತ ತಾನೆ? ಎಲ್ಲಿಂದ ಶುರು ಮಾಡ್ಲಿ? .. ಹೌದು... ಅಧ್ಯಕ್ಷ ಕಾಮರಾಜರ ಭಾಷಣ ಅಲ್ವೇ"

"ಹ್ಞೂಂ...."

"ಮೊದಲಿಗೆ ಅವ್ರು ಗಾಂಧಿಯವರ ದುರ್ಘಟನೆಗಳನ್ನು ಹೇಳಿದ್ರು.."

"ಅಂದ್ರೆ, ಅದೇ ಭಾರತ ರತ್ನದ ಮರಣ.... '

"ಹೌದು. ಕಳೆದ ವರ್ಷದ ಭುವನೇಶ್ವರ ಅಧಿವೇಶನದಲ್ಲಿ ರೋಗಪೀಡಿತರಾದ ಜವಾಹರರ ಬಗ್ಗೆ ಗೌರವ ತೋರಿಸಿದರು..."

"ಸರೀನ್ನಿ. ಅದುವರೆಗೆ ಪ್ರತಿಯೊಂದಕ್ಕೂ ನೆಹ್ರೂ ಮುಖ ನೋಡುತಿದ್ದವ್ರು, ಪಾಪ...ನೀವೂ ಅನಾಥರಾದಿರಿ. ನಮ್ಮನ್ನೂ ನಡು ನೀರಲ್ಲಿ ಕೈ ಬಿಟ್ಟಿರಿ..."

"ನೆಹರು ನಿಧನದ ವೇಳೆಯಲ್ಲಿ ಪ್ರಜಾಪ್ರಭುತ್ವದ ತತ್ವಗಳನ್ನು ನೆಮ್ಮಿ ಹೊಸ ನಾಯಕನನ್ನು ಒಮ್ಮತದಿಂದ ಆರಿಸುವ ಜಾಣ್ಮೆ ತೋರಿದ್ದಕ್ಕೆ ಅಭಿನಂದನೆ ಸಲ್ಲಿಸಿದಾರು..."

"ಹೌದೂಂದ್ರೆ. ನೀವು ಮಾಡಿದ ಒಂದೇ ಒಂದು ಒಳ್ಳೆಯ ಕೆಲಸಾಂತಂದ್ರೆ ಇದು...."

'ನಾಕೇ ನೀನು.... ಅಲ್ಲಾ ಭಾಷಣದ ಹಿಂದೆ ಗೀಷಣಾಂತಂದ ಹಾಗೆ..."

"ಇಲ್ಲಾಂದ್ರೆ... ಇನ್ನು ಅನ್ನೋಕೆ ಇಲ್ಲ.."

"ಕಾಂಗ್ರೇಸ್ಸಿನ ಈ ಸಾಧನೆಗಾಗಿ ದೇಶವೂ ವಿದೇಶಗಳೂ ಸಂತೋಷಗೊಂಡವು.... ನೆಹರೂ ನೀತಿಯನ್ನೇ ಅನುಸರಿಸಿ ಮುಂದುವರಿಸಿಕೊಂಡಿರುವುದನ್ನು ಎತ್ತಿ ಹೇಳಿದರು."

"ಅದು ಆಯ್ತಲ್ಲಾ, ಮುಂದೆ....?"

"ಚೀನಾದ ಆಕ್ರಮಣ ಭೀತಿ, ಸಾಮ್ರಾಜ್ಯವಾದದ ಪ್ರಸಾರ ಕಡಿಮೆಯಾಗಿಲ್ಲ; ಇದು ಕೆಲಂಬೋ ಸಲಹೆಗಳನ್ನು ಒಪ್ಪದೆ ಅಪಮಾನ ಮಾಡಿದೆ ಇದರಿಂದ ಭಾರತವು ರಕ್ಷಣಾ ಸಿದ್ಧತೆಯನ್ನು ಮಾಡಲೇ ಬೇಕಾಗಿದೆ; ಮಾಡುತ್ತಲೇ ಇದೆ ಎಂದರು..."

"ಇದು ಎಲ್ಲರಿಗೂ ತಿಳಿದದ್ದೇ...."

"ಪಾಕಿಸ್ತಾನದೊಡನೆ ಸೌಹಾರ್ದದಿಂದ ನಡೆದುಕೊಳ್ಳಬೇಕೆಂಬ ಭಾರತದ ಇಚ್ಛೆಯನ್ನವರು ಪುನರುಚ್ಚರಿಸಿದರು."

"ಹಣ್ಣಂ...ಮತ್ತೆ, ಚೀನಾದ ಅಟಂಬಾಂಬು?"

"ಚೀನಾವು ಅಟಂಬಾಂಬು ತಯಾರಿಸಿ ಅಸ್ವಾಸ್ಥ್ಯವನ್ನು ಹೆದರಿಸಿದೆ, ಆದರೂ ಭಾರತವು ತನ್ನ ಅಲಿಪ್ತ ನೀತಿಯನ್ನು ಬಿಟ್ಟುಕೊಡುವುದಿಲ್ಲ ಎಂಬುದನ್ನವರು ಸ್ಪಷ್ಟಪಡಿಸಿದರು.

"ಇದೇ ರೀತಿಯ ನಿರ್ಧಾರವೂ ಆಗಬಹುದು, ಅಟಂಬಾಂಬು ತಯಾರಿಸಲು ಭಾರತ ಒಪ್ಪುವುದಿಲ್ಲಾಂತ."

"ಹ್ಞೂಂ. ಆಗುತ್ತದೆ... ಮತ್ತೆ ರಷ್ಯದ ನಾಯಕತ್ವದಲ್ಲಿ ಬದಲಾವಣೆಯಾದರೂ ಅದರಿಂದ ಭಾರತಕ್ಕೂ ವಿಶ್ವಶಾಂತಿಗೂ ಪ್ರತಿಕೂಲವಾಗನೆಂದು ತಿಳಿಸಿದರು..."

"ಅಂದ್ರೆ, ರಷ್ಯದ ನಾಯಕರ ಮೇಲಿನ ವಿಶ್ವಾಸ ಹಾರಿ ಹೋಗಿಲ್ಲಾಂತ ಅಲ್ವೆ? ಇದೆಲ್ಲಾ ಹೊರಗಿನ ಕತೆಯಾಯ್ತು. ಮತ್ತೆ ಒಳಗಿನದ್ದು?"

"ಆಹಾರ ಸಮಸ್ಯೆಯ ಪರಿಹಾರದತ್ತ ತೀವ್ರ ಗಮನ ಹರಿಸುವ ಆಗತ್ಯವನ್ನವರು ಪ್ರತಿಬಿಂಬಿಸಿದರು. ಸರಕಾರದೊಡನೆ ಜನತೆ, ಮುಖ್ಯವಾಗಿ ಕಾಂಗ್ರೆಸಿಗರು ಸಹಕರಿಸಬೇಕೆಂದರು."

"ಹೇಗೆ?"

"ಲಭ್ಯವಿರುವ ಸಾಧನ ಸಾಮಗ್ರಿಗಳನ್ನು ಬಳಸಿ ಅಧಿಕಾಧಿಕ ಉತ್ಪಾದನೆ ಮಾಡುವುದರಿಂದ ಮತ್ತು ನ್ಯಾಯೋಚಿತವಾದ ಆಹಾರಧಾನ್ಯ ವಿತರಣೆಯಿಂದ"?

"ಹ್ಞೂಂ...."

"ನಾಲ್ಕನೆಯ ಯೋಜನೆಗೆ ಸುಮಾರು ೩ ಸಾವಿರ ಕೋಟಿ ರೂಪಾಯಿಗಳಷ್ಟು ದೇಶದೊಳಗೆ ಹೆಚ್ಚು ಸಂಗ್ರಹಿಸುವ ಬಗ್ಗೆ ಸಾಧನ್ಮೂಲಗಳನ್ನು ಕಂಡು ಹಿಡಿಯಬೇಕಂತೆ...ಉದ್ದಿಮೆಗಳಲ್ಲಿ ಖಾಸಗಿಯವರು ಅಧಿಕ ಸಹಕಾರ ನೀಡಬೇಕಂತೆ..ಕಾರ್ಖಾನೆಗಳನ್ನು ತೆರೆದು ಜನತೆಗೆ ತರಬೇತಿ ನೀಡಿ, ಉದ್ದಿಮೆಗಳಲ್ಲಿ ಅವಕಾಶ ಪಡೆಯುವಂತೆ ಅಥವಾ ಸ್ವತಂತ್ರವಾಗಿ ದುಡಿಯುವಂತೆ ಮಾಡಬೇಕಂತೆ... ಸೆಕೆಂಡರಿ ಶಿಕ್ಷಣವನ್ನು ವಿಸ್ತೃತಗೊಳಿಸುತ್ತಿರುವುದರಿಂದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಂತೆ....'

"ಅಲ್ಲಾ, ಇದ್ರಲ್ಲೆಲ್ಲಾ ಹೊಸತು ಏನೂಂತ?"

"ಅಯ್ಯೋ ದೇವ್ರೆ. ಹೊಸತು ಏನು ಬಂತೆ?"

"ಮತ್ತೆ ಏನೂಂತ ಹೇಳೋದು?"

"ನೋಡು, ನಮ್ಮ ಸಮಸ್ಯೆಗಳೆಲ್ಲಾ ಹಳೆಯವೇ. ಅವಿನ್ನೂ ಪರಿಹಾರಗೊಂಡಿಲ್ಲ ನೋಡು ಹಾಗಿರುವಾಗ, ಅವನ್ನೇ ಹೇಳದೆ ಮತ್ತೇನು ಅನ್ನೋದು? ಆದ್ರೂ ಒಂದು ಹೊಸ ಮಾತೂ ಇದೆ..."

'ಯಾವುದೂಂದ್ರೆ ಆದು?"

"ಮತ್ತೇನೂ ಇಲ್ಲ. ಗಾಂಧೀಜಿಯವರು ವಾಗ ದೇಶ ಅವರ ಮುಖ ನೋಡುತಿತ್ತು. ಅವರು ನೆಹರು, ರಾಜೇಂದ್ರ, ಸರ್ದಾರರನ್ನು ಬಿಟ್ಟು ಹೋದ್ರು. ಈಗ ಅವ್ರೆಲ್ಲಾ ನಮ್ಮ ಸ್ವರ್ಗದಲಿ ಹೋಗಿದ್ದಾರೆ. ನಾವು ದುಡಿಯದೆ ಹೋದರೆ ನಮ್ಮನ್ನು ಕೇಳುವವರ ಇಲ್ಲಾಂತ..."

"ಅದು ಸರೀಂದ್ರೆ.... ಹಿಂದೆಯೇನೇನೋ ಅವ್ರ ಹೆಸ್ರು ಹೇಳಿ ಆಗುತಿತ್ತು ನಾಟಕ...."

"ಸ್ವಾತಂತ್ರ್ಯದ ಬಗ್ಗೆ ಏಕ ಮನಸ್ಸಿನಿಂದ ಒಂದಾಗಿ ದುಡಿದಂತೆಯೇ ಕರ್ತವ್ಯ ಪಾಲನೆಯಲ್ಲೂ ಕಾಯಕ ನಡೆಸುವ ದೃಢತೆಯೊಡನೆ ಅವರು ಜೈಹಿಂದ್ ಎಂದರು...."

"ಆಯ್ತಪ್ಪಾ, ನಾವೂ ಜೈಹಿಂದ್ ಎನ್ನೋಣ ಆಗದೆ? ಬಾಯಿ ಆಗಲಿಂದಲೇ ಆಕಳಿಸುತ್ತಿದೆ..."

"ಹ್ಞಾ...ಹೇಗೂ ಸೋತು ಹೋಗಿದ್ದೀಯ! ಪಾಪ, ಯಾರೋ ನೆನೆಯುತ್ತಿರಬೇಕು ನಿನ್ನ..."

"ಹೌದು, ನೆನೆಯದೆ ಮತ್ತೇನಂತೆ? ನಿಮಗೆ ಹಾಗಾಗ್ಲೂ ತಮಾಷೆಯೇ...."

"ನಿನ್ನೊಡನೆ ಮಾತ್ರ..."

"ಸದ್ಯ ಅದೇ ಸಮಾಧಾನ..."

"ಹ್ಹ ಹ್ಹ ಹ್ಹ..."

—ಗೋರಾ

ಯಕ್ಷಗಾನ ಕಲಾಮಂಡಲದ ವಾರ್ಷಿಕೋತ್ಸವ

ಉಡುಪಿ, ತಾ. 29-12-1964ರಲ್ಲಿ ಶ್ರೀ ಅನಂತೇಶ್ವರ ದೇವಳದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಯಕ್ಷಗಾನ ಕಲಾಮಂಡಲದ ವಾರ್ಷಿಕೋತ್ಸವ ಜರಗಿತು. ಕಲಾಮಂಡಲದ ಉಪಾಧ್ಯಕ್ಷ ಶ್ರೀ ಸೀತಾನದಿ ಗಣಪಯ್ಯ ಶೆಟ್ಟರು ಸ್ವಾಗತಿಸಿದರು. ಶ್ರೀ ಜನ್ನಿಬೆಟ್ಟು ಗೋಪಾಲ ಶೆಟ್ಟರು ಸಂದೇಶಗಳನ್ನೋದಿದರು. ಕಾರ್ಯದರ್ಶಿ ನಾರಾಯಣ ಶೆಟ್ಟರು ವಂದಿವಾಚನಗೈದರು. ಶ್ರೀ ಪಿ. ಶೀನಶೆಟ್ಟರು ಮಾತನಾಡಿದ ಬಳಿಕ ಶ್ರೀ ಪೈಗಳು ಆಹಾರ ಸಮಸ್ಯೆ ಪರಿಹಾರ ಮೊದಲಾದ ಕುರಿತು ವಿಚಾರಪೂರಿತ ಭಾಷಣವಿತ್ತರು. ಶ್ರಮಿಸುವ ಜಾಗೃತಿ ಎಲ್ಲರಲ್ಲಿಯೂ ಉಂಟಾಗುವಂತೆ ಯತ್ನಿಸಬೇಕೆಂದರು. ಸಮಾಜವನ್ನು ಸದ್ಧರ್ಮಾನುರತವಾಗುವಂತೆ ಮಾಡಬಲ್ಲ ಈ ಯಕ್ಷಗಾನ ಕಲಾಪ್ರಚಾರದ ಸಂದರ್ಭದ ಸದವಕಾಶವನ್ನು ತಾನುಪಯೋಗಿಸಿ ಕೊಂಡುದು ಸಂತೋಷದಾಯಕವೆಂದರು. ಸಂಘದ ಅಧ್ಯಕ್ಷ ಪೊಲ್ಯ ದೇಜು ಶೆಟ್ಟರ ಧನ್ಯವಾದ ಸಮರ್ಪಣೆಯೊಂದಿಗೆ ಬಲಾಬಂಧವಧೆ ಮತ್ತು ಕಾರ್ತವೀರ್ಯಾರ್ಜುನ ಕಾಳಗವೆಂಬ ಯಕ್ಷಗಾನ ಕೂಟವು ಪ್ರಸಿದ್ಧ ಕಲಾಗಾರರಿಂದ ಅತ್ಯಂತ ಯಶಸ್ವಿಯಾಗಿ ಸಮಾವೇಶಗೊಂಡಿತು.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ 23ರಂದು "ಶ್ರೀ ಕೃಷ್ಣ ಸಾರಥ್ಯ" ಯಕ್ಷಗಾನ ಕೂಟವು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ವೇಷಧಾರಿ ಶ್ರೀ ಗುಡ್ಡಪ್ಪ ಗೌಡರ ಪತಿಯಿಂದ ನಡೆಸಲಾದ ಈ ಕಾರ್ಯಕ್ರಮದಲ್ಲಿ ಸರ್ವಶ್ರೀ ಕೀ. ಮ. ಕೇಶವ, ಬಾಬು ರೈ, ಬಿ. ಪಿ. ವಿನೋದ, ಕೆ. ಎ. ಭಂಡಾರಿ, ಪರಮೇಶ್ವರ ಭಟ್, ಅಪ್ಪು ಮಣಿಯಾಣಿ, ಮಾಸ್ಟರ್ ಸಾಂತಪ್ಪ ಗೌಡ, ರಾಮ ಪಾಟಾಳಿ, ಲಕ್ಷ್ಮಣ ಗೌಡರೇ ಮೊದಲಾದವರು ಭಾಗವಹಿಸಿದ್ದು—ಕೊನೆಗೆ ಶ್ರೀ ಕೆ. ಬಿ. ರೈಗಳು ಧನ್ಯವಾದವಿತ್ತರು.

A NOTE TO VISITORS TO SOUTH KANARA

A FEW MORE STEPS FROM MANGALORE AND YOU WILL ENJOY

Shetty Ice Cream

PANAMBUR

We have our Ice Cream products in all important places of South Kanara to serve you.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು

ರಿಜಿಸ್ಟರ್ಡ್ ಆಫೀಸು:-

ಲೈಟ್ ಹೌಸ್ ಹಿಲ್ ರೋಡು, ಮಂಗಳೂರು – 3

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾನೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ—ವ— ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 25ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 6-2-1965ಕ್ಕೆ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಬೇಂಕಿನ ವ್ಯಾಪಾರದಲ್ಲಿ ಬಹಿರಂಗ-ಯಾ-ಖಾಸಗೀಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಜಂಜರಾ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ತಾ. 31-12-64ರ ವರೆಗಿನ ಅಸಲು ಬಡ್ಡಿ ಕೂಡಾ
229/62	ಶ್ರೀ ನರಸಿಂಹ ಮಂಜುನಾಥ ಪ್ರಭು, ಮಂಜುನಾಥ ಪ್ರಭುಸಿನ ಮಗ, ಉಪ್ಪುಂದ ಗ್ರಾಮ, ಪೋಸ್ಟು ಉಪ್ಪುಂದ, ಕುಂದಾಪುರ ತಾಲೂಕು.	33=85
254/62	ಶ್ರೀ ಹೊನ್ನಯನ ಮಂಜುನಾಥ ಶೇರಿಗಾರ, ಅಣ್ಣಪ್ಪ ಶೇರಿಗಾರನ ಮಗ. P. O. ಪಡುವರಿ. (ಕುಂದಾಪುರ ತಾಲೂಕು)	57=40
534/62	ಶ್ರೀ ಶಂಸುದ್ದೀನ್ ಸಾಹೇಬ, ಅಲ್ಲಿ ಸಾಹೇಬರ ಮಗ, ಕಿರಿಮಂಜೇಶ್ವರ. P.O. ಕಿರಿ ಮಂಜೇಶ್ವರ. ಕುಂದಾಪುರ ತಾಲ್ಲೂಕು.	112=90
799/62	ಶ್ರೀ ಅಪ್ಪಯನ ನಾಗಪ್ಪ ಶೇರಿಗಾರ, ತಿಮ್ಮಪ್ಪ ಶೇರಿಗಾರನ ಮಗ, ಪಡುವರಿ. P.O. ಪಡುವರಿ. ಕುಂದಾಪುರ ತಾಲೂಕು.	78=80
930/62	ಶ್ರೀ ಕರ್ಯಾ ಇಸ್ಮಾಯಿಲ್, ಆದಮರ ಮಗ, ಶಿರೂರು ಗ್ರಾಮ, P.O. ಶಿರೂರು. ಕುಂದಾಪುರ ತಾಲೂಕು.	41=20
1000/62	ಶ್ರೀಮತಿ ಮಂಜಿ, ಲಕ್ಷ್ಮಿಯ ಮಗಳು, ಚೆನ್ನಮ್ಮ ಜಿ ಮನೆ. ಯಡ್ತರೆ. P.O. ಬೈಂದೂರು (ದ. ಕ.)	18=15
1076/62	ಶ್ರೀ ಹಾಡಿಮನೆ ಮಂಜ, ದುರ್ಗಿ ಹೆಂಗ್ಸಿನ ಮಗ, ಬೈಂದೂರು, P.O. ಬೈಂದೂರು (ದ. ಕ)	31=90
1128/62	ಶ್ರೀ ಎನ್. ವಿ. ಮಂಜಯ ಶೆಟ್ಟಿ. ಸುಬ್ಬಯ ಶೆಟ್ಟಿ ಅಳಿಯ, ತಗ್ಗರ್ಸೆ ಗ್ರಾಮ. P.O. ತಗ್ಗರ್ಸೆ, ಕುಂದಾಪುರ ತಾಲ್ಲೂಕು.	60=20
1155/62	ಶ್ರೀ ಗುಲ್ಬ, ಸುಕ್ರನ ಅಳಿಯ, ಮೂರ್ತಿ ಮನೆ, ಬಿಜೂರು ಗ್ರಾಮ. P.O. ಬಿಜೂರು. ಕುಂದಾಪುರ ತಾಲ್ಲೂಕು.	73=70
168/63	ಶ್ರೀ ಕಬ್ಸ ಅಹಮ್ಮದ್, ಇಸೂಪ ಸಾಹೇಬರ ಮಗ, ಹಡವಿನ ಕೋಣೆ. P. O. ಶಿರೂರು ಕುಂದಾಪುರ ತಾಲೂಕು.	30=15
302/63	ಶ್ರೀ ಪೊಂಗೆ ಹಸನ್, ಅಬ್ದುಲ್ ಖಾದರನ ಮಗ, ಕಳಿಹಿತ್ಲು, ಶಿರೂರು ಗ್ರಾಮ, P. O. ಶಿರೂರು ಕುಂದಾಪುರ ತಾಲ್ಲೂಕು.	31=10
309/63	ಶ್ರೀ ಅಲಿ ಅಬ್ದುಲ್ ರಝಾಕ್, ಅಬೂಬೇಕರನ ಮಗ, ಕೆಸರ ಕೋಡಿ, ಶಿರೂರು ಗ್ರಾಮ. P. O. ಶಿರೂರು.	31=65
409/63	ಶ್ರೀ ಮೂಚ, ಮೂಚಿ ಮಗ, ಶಿರೂರು ಪೋಲ್ಪಂಕ್ತಿ ದೊಡ್ಡಮನೆ. ಶಿರೂರು ಗ್ರಾಮ. P. O. ಶಿರೂರು. ಕುಂದಾಪುರ ತಾಲೂಕು.	167=00
436/63	ಶ್ರೀ ಬುಡ್ಡು ಅಲ್ಲಿ ಇಬ್ರಾಹಿಮ್ ಸಾಹೇಬ, ಇಬ್ರಾಹಿಮ್ ಸಾಹೇಬರ ಮಗ, ನಾಕುಂದ ಮುಲ್ಲಾ. P. O ಶಿರೂರು. ಕುಂದಾಪುರ ತಾಲೂಕು.	33=75
513/63	ಶ್ರೀ ಕೊಸೆ ಮೂಸಾ, ಇಬ್ರಾಹಿಮರ ಮಗ, ಹಡವಿನ ಕೋಣೆ, P.O ಶಿರೂರು. ಕುಂದಾಪುರ ತಾಲೂಕು.	29=70
599/63	ಶ್ರೀ ಸುಬ್ರಾಯ ಮಯ್ಯ, ರಾಮಕೃಷ್ಣ ಮಯ್ಯರ ಮಗ, ಯಳಜಿತ ಗ್ರಾಮ. P. O. ಯಳಜಿತ, ಕುಂದಾಪುರ ತಾಲೂಕು.	105=10
626/63	ಶ್ರೀ ಹನುಮಂತ ಶೇರಿಗಾರ, ಸುಬ್ರಾಯ ಶೇರಿಗಾರನ ಮಗ, ಬಿಯೂರ, ಬೈಂದೂರು ಗ್ರಾಮ. P. O. ನಾಯ್ಕಾಡಿ.	28=80
651/63	ಶ್ರೀ ಅಬ್ದುಲ ಅಬ್ದುಲ್ಲಾ, ಕಾಸಿಮರ ಮಗ, ನಾಕುದ ಮಹಾಲ್ ಶಿರೂರು ಗ್ರಾಮ. P. O. ಶಿರೂರು. ಕುಂದಾಪುರ ತಾಲೂಕು.	26=45
681/63	ಶ್ರೀ ನಾರಾಯಣ, ದಾರನ ಅಳಿಯ, ದಾರನ ಮನೆ, ಬೈಂದೂರು ಗ್ರಾಮ. P. O. ಬೈದೂರು.	40=75
722/63	ಶ್ರೀ ಕಾಜಿ ಹಸನ್ ಸಾಹೇಬ, ಮೊಯ್ದೀನ್ ಸಾಹೇಬನ ಮಗ, ಕೆಸರ ಕೋಡಿ ಶಿರೂರು ಗ್ರಾಮ P. O. ಶಿರೂರು. ಕುಂದಾಪುರ ತಾಲೂಕು.	71=20
798/63	ಶ್ರೀ ಪೇದೆ ರಾಮಯ ಶೇರಿಗಾರ, ಜಣ್ಣಯ್ಯ ಸೇರಿಗಾರನ ಮಗ, ಬೈಂದೂರು ಗ್ರಾಮ. P O. ನಾಯ್ಕಾಡಿ.	33=50
837/64	ಶ್ರೀ ಜೇಸಿಸ್ ನಪ್ರುಲ್, ಡಿಯೋಗ್ ನಜ್ರೆತ್ತರ ಮಗ, ಕಲ್ಲಾಗಿಹಿತ್ಲು, ಪಡುವರಿ ಗ್ರಾಮ, P. O. ಪಡುವರಿ. ಕುಂದಾಪುರ ತಾಲೂಕು.	42=40

ಬೈಂದೂರು
8-1-1965

A. Vittal Shetty.
MANAGER.

ಎಲ್ಲೆಲ್ಲಿ ಏನೇನು?

ಸಮಾಜ ಅಧ್ಯಯನ ಗೋಷ್ಠಿ

ಮಣಿಪಾಲ ಹೈಸ್ಕೂಲಿನ ಸೋಶಲ್ ಸ್ಟಡೀಸ್ ಕ್ಲಬ್ ಮೀಟಿಂಗ್ 9-1-1965ರಲ್ಲಿ ಶ್ರೀ ವಾಸುದೇವಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಭಾರತದ ಮುಕುಟ ಕಾಶ್ಮೀರ, ಭಾರತದಲ್ಲಿ ಅಕ್ಕಿಯ ಬೆಳೆ, ಸೆಣಬಿನ ಕೈಗಾರಿಕೆ. ಭಾರತ ಮತ್ತು ಸಿಲೋನ್‌ಗಳ ಸಂಪರ್ಕ ಮೊದಲಾದ ವಿಷಯಗಳ ಕುರಿತು ಭಾಷಣ ನಡೆಯಿತು.

ಅಧ್ಯಕ್ಷರು ಮೇಲಿನ ಎಲ್ಲಾ ವಿಷಯಗಳ ಕುರಿತು ಹಲವು ವಿಷಯಗಳನ್ನು ಹೇಳಿದರು. ನಂತರ ಮುಖ್ಯೋಪಾಧ್ಯಾಯರು ಸೋಶಲ್ ಸ್ಟಡೀಸ್ ಕ್ಲಬ್ಬಿನ ಅಭಿವೃದ್ಧಿಯ ಕುರಿತು ಮಾತಾಡಿದರು.

ಸಾರ್ವಜನಿಕ ಸಭೆ

ಪಣಂಬೂರು, ಇದೇ ತಾ. 9ರಂದು ಗಾಂಧೀ ಮೈದಾನಿನಲ್ಲಿ ಪಣಂಬೂರು, ಬೈಕಂಪಾಡಿ, ತಣ್ಣೀರುಬಾವಿ ಮತ್ತು ಪಡುಕೋಡಿ ಗ್ರಾಮಸ್ಥರ ಸಾರ್ವಜನಿಕ ಸಭೆಯೊಂದು ಶ್ರೀ ಕೆ. ಆರ್. ಆಚಾರ್, ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಎಡ್ವೊಕೇಟ್ ಶ್ರೀ ಪಿ. ವಿ. ಐತಾಳರು ಸ್ವಾಗತಿಸಿದ ಬಳಿಕ ಎಡ್ವೊಕೇಟ್ ಬಿ. ಗಂಗಾಧರ ದಾಸರು ಸರಕಾರದವರು ವಾಗ್ದಾನ ಮಾಡಿದ ಸೌಕರ್ಯಗಳನ್ನು ಕೊನೆಗೆ ನಿರಾಕರಿಸಿದ ಬಗ್ಗೆ ವಿಷಾದ ವ್ಯಕ್ತಪಡಿಸಿ ಮಾತನಾಡಿದರು. ಶ್ರೀಗಳಾದ ಪಿ. ಖಾದರ್ ಸಾಹೇಬ್, ಡಿ ಮೋಹನ್‌ರಾವ್, ಎಸ್. ಸೋನ್ಸ್, ಸಂಜೀವನಾಥ ಐಕಳ್, ಎಂ. ಎಲ್. ಎ., ಕೇಶವ ಕಾಮತ್ ಮೊದಲಾದವರು ಮಾತಾಡಿ ಕಾಟಿಪಳ್ಳ ಜನರ ಪಾಡನ್ನು ವಿವರಿಸಿ ಮಾತನಾಡಿದರು.

ಧರ್ಮ ಸಮ್ಮೇಳನ

ಸುಬ್ರಹ್ಮಣ್ಯ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಕಿರುಷಷ್ಠಿ ಮಹೋತ್ಸವದ ಅಂಗವಾಗಿ ತಾ. 9ರಂದು ಮಂಗಳೂರು ಗವರ್ನ್‌ಮೆಂಟ್ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಂ. ಎಚ್. ನಾಯಕರ ಅಧ್ಯಕ್ಷತೆಯಲ್ಲಿ ಧರ್ಮ ಸಮ್ಮೇಳನವು ಯಶಸ್ವಿಯಾಗಿ ಜರಗಿತು. ಆರಂಭದಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯ ಗೌಡರು ಸ್ವಾಗತಿಸಿ, ಅಧ್ಯಕ್ಷರ ಮತ್ತು ಭಾಷಣಕರ್ತ ಶ್ರೀ ಮುಕುಂದ ರಾಯರ ಪರಿಚಯ ಮಾಡಿದರು. ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಬಿ. ನಾರಾಯಣ ಶೇಖರು ವರದಿಯನ್ನೊಪ್ಪಿಸುತ್ತಾ ಸಮ್ಮೇಳನದ ಉದ್ದೇಶಾದಿಗಳನ್ನು ವಿವರಿಸಿದರು ಶ್ರೀ ಎಸ್. ಮುಕುಂದ ರಾವ್, ಎಂ. ಎಲ್. ಸಿ. ಯವರು ಶಾಶ್ವತ ಧರ್ಮ—ಕಾಲಧರ್ಮ ಎಂಬ ಕುರಿತು ಭಾಷಣವಿತ್ತರು. ಶ್ರೀ ಎಸ್. ಎನ್. ಕೃಷ್ಣ ಶಾಸ್ತ್ರಿಗಳು ಭಗವದ್ಗೀತೆಯ ಮಹಾತ್ಮೆಯನ್ನು ವಿವರಿಸಿದರು. ಅಧ್ಯಕ್ಷರು ಸಮ್ಮೇಳನವನ್ನು ಜರಗಿಸುತ್ತಿರುವ ಬಗ್ಗೆ ಆಡಳಿತ ಮಂಡಳಿಯವರನ್ನು ಅಭಿನಂದಿಸಿ ಧರ್ಮದ ಕುರಿತು ಮಾತನಾಡಿದರು. ಮೆನೇಜರ್ ಶ್ರೀ ಎಸ್. ರಾಮಕೃಷ್ಣ ಭಟ್ಟರು ವಂದನೆಗಳನ್ನರ್ಪಿಸಿದರು.

ರಾತ್ರಿ ಸಂಗೀತ ವಿದ್ವಾನ್ ಶ್ರೀ ಕಾಂಚನ ಸುಬ್ರಹ್ಮಣ್ಯಂ ಇವರ ಶಾಸ್ತ್ರೀಯ ಸಂಗೀತ ಕಚೇರಿಯು, ಮಾಸ್ಟರ್ ಸುಬ್ಬರತ್ನಂ ರ ವಾಯೋಲಿನ್, ಟಿಚ್ಚಿ ಶ್ರೀ ರಾಘವ ಅಯ್ಯರ ಮೃದಂಗ, ಶ್ರೀ ಕಾಂಚನ ಕೃಷ್ಣ ಅಯ್ಯರ ಗಂಜೀರ ಇವರ ಹಿಮ್ಮೇಳದೊಂದಿಗೆ ಜರಗಿತು. ಆರಂಭದಲ್ಲಿ ಶ್ರೀ ಲಕ್ಷ್ಮೀನಾರಾಯಣ ಸಂಗೀತ ಕಲಾಶಾಲಾ ಶಿಷ್ಯ ವೃಂದದವರಿಂದಲೂ ಸಂಗೀತ ನೆರವೇರಿತು.

ಶ್ರೀ ನಾರಾಯಣ ಶೇಖರು ಸಂಗೀತಗಾರರ ಪ್ರತಿಭೆಯನ್ನು ಕೊಂಡಾಡಿ ವಂದನೆಗಳನ್ನರ್ಪಿಸಿದರು. ಶ್ರೀ ರಾಮಕೃಷ್ಣ ಭಟ್ಟರು ಸಂಗೀತಗಾರರಿಗೂ ಮೃದಂಗವಾದಕರಿಗೂ ಸಂಭಾವನೆಯನ್ನರ್ಪಿಸಿದರು.

ಆಹಾರ ಸಮಸ್ಯೆ

ಮಂಗಳೂರು, ಜಿಲ್ಲಾ ಸಹಕಾರಿ ಯೂನಿಯನ್ ತಾ. 10ರಂದು ಏರ್ಪಡಿಸಿದ ಚರ್ಚಾಗೋಷ್ಠಿಯೊಂದರಲ್ಲಿ ಫುಡ್ ಕೊಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಮಾತನಾಡುತ್ತಾ ಆಹಾರ ಸಮಸ್ಯೆ ಪರಿಹಾರವಾಗಲು ರಾಷ್ಟ್ರೀಯ ಧೋರಣೆಯಿರಬೇಕು, ಆಹಾರ ಸಮಸ್ಯೆಯನ್ನು ಪರಿಹರಿಸುವ ದೃಷ್ಟಿಯಿಂದ ಉತ್ಪಾದನೆ ಮತ್ತು ವಿತರಣೆಯ ಎಲ್ಲ ಅಂಶಗಳಿಂದ ಕೂಡಿದ ರಾಷ್ಟ್ರೀಯ ಆಹಾರ ಧೋರಣೆಯೊಂದನ್ನು ತಯಾರಿಸಬೇಕೆಂದು ಹೇಳಿದರು. ಜಿಲ್ಲೆಯಲ್ಲಿ ಪ್ರಥಮತಃ ರೈತರಿಗೆ ಉತ್ಪಾದನೆ ಪಾವತಿ ಮೇಲೆ ಸಾಲ ನೀಡುವ ಯೋಜನೆ ಕಾರ್ಯಗತವಾಗುವುದು ಎಂದು ಹೇಳಿದರು ಮಣಿಪಾಲದಲ್ಲಿ ಮಣ್ಣಿನ ಪ್ರಯೋಗಾಲಯವೊಂದರ ಸ್ಥಾಪನೆಗೆ ಸಿಂಡಿಕೇಟ್ ಬೇಂಕ್ ನಿರ್ಧರಿಸಿದೆಯೆಂದು ಬೇಂಕಿನ ಕೃಷಿತಜ್ಞ ಡಾ॥ ನಿರಂಜನ್ ಮೊಹತಾರವರು ಹೇಳಿದರು.

ಗ್ರಾಮಸ್ಥರ ಸಭೆ

ನಿಡಂಬೂರು, ತಾ. 27-12-64ರಂದು ನಿಡಂಬೂರು ಪಂಚಾಯತ್ ಕಟ್ಟಡದಲ್ಲಿ ನಿಡಂಬೂರು ಪಂಚಾಯತದ ಗ್ರಾಮಸ್ಥರ ಸಭೆಯು ಪಂಚಾಯತ್ ಅಧ್ಯಕ್ಷ ಶ್ರೀ ಕೆ. ಶ್ಯಾಮ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು.

ಪಂಚಾಯತದ 1964-65ರ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಪಂಚಾಯತ್ ಕೃಷಿ ಅಭಿವೃದ್ಧಿ ಯೋಜನೆಯನ್ನು ವರದಿ ರೂಪದಲ್ಲಿ ವಿವರಿಸಿದ ನಂತರ ಅಧಿಕ ಆಹಾರ ಉತ್ಪಾದನೆಯ ಬಗ್ಗೆ ಪಂಚಾಯತ ವಿಸ್ತೀರ್ಣದೊಳಗಡೆ ಹರಿಯುತ್ತಿರುವ ಮೂರು ತೋಡಿಗೆ ಕಿಂಡೀ ಅಣೆಕಟ್ಟುಗಳ ರಚನೆಯ ಕುರಿತು ಮತ್ತು ಪೆರಂಬೋಕು ಕೆರೆಗಳ ದುರಸ್ತಿಯ ಬಗ್ಗೆ ಅಗತ್ಯವಿರುವ ಎಲ್ಲಾ ವಿವರಗಳ ಸಹಿತ ಉಡ್ಪಿ ಬ್ಲೋಕಿಗೆ ಬರೆಕೊಂಡಿದ್ದರೂ ಇದುವರೆಗೂ ಯಾವುದೊಂದು ಕ್ರಮಕೊಳ್ಳದಿರುದರ ಬಗ್ಗೆ ಗ್ರಾಮಸ್ಥರು ವಿಷಾದಿಸುವುದಾಗಿಯೂ, ಈಗಿನ ಆಹಾರದ ಪರಿಸ್ಥಿತಿಯು ತೀರಾ ಹದಗೆಡುತ್ತಿರುವುದರಿಂದಲೂ, ಈ ವರಾರದಲ್ಲಿ ವಿಗತಿಯ ಅಕ್ಕಿ ಇರುವುದಿಲ್ಲವಾದುದರಿಂದ ಈ ವರಾರಕ್ಕೆ ಬೇಕಾದ ಅಕ್ಕಿಯನ್ನು ಪಂಚಾಯತ ಮತ್ತು ಸೊಸೈಟಿಯ ಮೂಲಕ ಒದಗಿಸಿಕೊಡುವಂತೆ ಅಧಿಕಾರಿಗಳನ್ನು ಕೇಳಿಕೊಳ್ಳುವ, ಈ ಕ್ಷೇತ್ರಕ್ಕೆ ಪ್ರೈಮರಿ ಹೆಲ್ತ್ ಸೆಂಟರ್, ಒಂದು ವೆಟರ್ನರೀ ಸ್ಟೋಕ್ ಮೇನ್ ಸೆಂಟರನ್ನೂ ಮಂಜೂರು ಮಾಡಿಸುವಂತೆ ಈ ಕ್ಷೇತ್ರದ ಶಾಸಕರನ್ನು ಕೇಳಿಕೊಳ್ಳುವ ನಿರ್ಧಾರಗಳಾದುವು.

ಉಡುಪಿ ಸಿವಿಲ್ ಜಡ್ಜರ್ರವರ ಕೋರ್ಟಿನಲ್ಲಿ

O. S. 216 / 1950,
R. E. P. 84 / 1963.

ದುಗ್ಗಪ್ಪ ಸೇರಿಗಾರ ... ... ಅರ್ಜಿದಾರ

ಮತ್ತು

ರುಕ್ಮಿಣಿ ಶೆಡ್ತಿ ಕೂಡಾ — — ಎದ್ರಿರು-

ಇವರೊಳಗೆ-

ಎದ್ರಿರು: –

2. ನಾರಾಯಣ ಶೆಟ್ಟಿ 4. ರಾಜೀವಿ ಶೆಡ್ತಿ 5. ವಿಶ್ವನಾಥ ಶೆಟ್ಟಿ 6. ರತ್ನಾವತಿ ಶೆಡ್ತಿ 7. ಸುಶೀಲ ಶೆಡ್ತಿ —

—ರುಕ್ಮಿಣಿ ಶೆಡ್ತಿ ಮಕ್ಕಳು—2, 5 to 7ನೇಯವರು ಕುಂದಾಪುರ ತಾಲೂಕು ಉಳ್ತೂರು ಗ್ರಾಮದ ಹಳ್ತೂರು ಮೇಲ್ಮನೆ ಯೆಂಬಲ್ಲಿಯೂ — 4ನೇ ಯವಳು ಮಂಗಳೂರು ತಾಲೂಕು ಹೆಜಮಾಡಿ ಗ್ರಾಮದ ಗರಡಿ ಮನೆಯಲ್ಲಿಯೂ ಯಿರುವವರು—

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ಅರ್ಜಿದಾರನು ಸ್ಥಿರಾಸ್ತಿ ಏಲಂ ಬಗ್ಗೆ ಹಾಜರು ಪಡಿಸಿದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವರೆ ತಾ. 20—1—65ಕ್ಕೆ ಇಟ್ಟಿರುತ್ತದೇಂತ ಯಿದರಿಂದ ನಿಮಗೆ ತಿಳಿಯಪಡಿಸಿದ್ದುದೆ— ಆಕ್ಷೇಪಣೆ ಏನಾದರೂ ಯಿದ್ದರೆ ಆ ದಿವಸ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

K. Balachandra Rao.
Vakil for petitioner.

Udipi. 29—12—64.

ಗಸಗಸೆಯ ಬಂಗಾರದ ಹೂಗಳು

(ಎರಡನೇ ಪುಟದಿಂದ)

ಟವಾಡುತ್ತಿದ್ದ ಬೆಳಕಿನ ಕಿರಣಗಳನ್ನೂ ಕಂಡರು.

ಎಲ್ಲರಿಗೂ ತಾವಿದ್ದ ಜಾಗದಲ್ಲೇ ನಿಲ್ಲಲು ಅಪ್ಪಣೆಯಾಯಿತು. ಕುದುರೆಯ ಮೇಲೆ ಕುಳಿತಿದ್ದ ದಂಡನಾಯಕ ಮುಂದೆ ಬಂದು ಒಬ್ಬ ರೈತನನ್ನು ತನ್ನ ಬಳಿಗೆ ಕರೆದ. ಸೈನಿಕರು ಅವನ ಬಂಧನವನ್ನು ಕಳಚಿ ಅವನನ್ನು ದಂಡನಾಯಕನೆದುರು ನಿಲ್ಲಿಸಿದರು. ಕುದುರೆಯಿಂದ ಇಳಿದಿದ್ದ ಸಾರ್ಜೆಂಟನು ಹಿಂದೆ ಕತ್ತಿಯನ್ನು ಕೈಯಲ್ಲಿ ಹಿಡಿದು ಸುತ್ತಲೂ ಪರೀಕ್ಷಿಸಿದನು.

"ಏಯ್ ನೀನು, ಕೇಳಿಸಿತೇ. ಗುಂಡಿನ ಸದ್ದು ಕೇಳಿ ಕುದುರೆ ಬೆಚ್ಚೀತು. ನೀನು ಕುದುರೆಯನ್ನು ಗಟ್ಟಿಯಾಗಿ ಹಿಡಿದುಕೋ" ಎಂದು ದಂಡನಾಯಕ ಕೂಗಿದನು.

ರೈತ ಯಾವ ಉತ್ತರವನ್ನೂ ಕೊಡಲಿಲ್ಲ. ಕುದುರೆಯಿಂದ ದಂಡನಾಯಕ ಕೆಳಕ್ಕೆ ಧುಮುಕಿದ.

"ಮುಂದೆ ನೀನು ಇದನ್ನು ಎಲ್ಲರಿಗೂ ತಿಳಿಸುವೆಯಂತೆ", ದಂಡನಾಯಕ ರೈತನಿಗೆ ಹೇಳಿದ, "ದಂಡನಾಯಕ ಎವ್‌ತಿಮೊವ್ ಸಾವಿರದ ಒಂಭೈನೂರ ಇಪ್ಪತ್ತಮೂರರಲ್ಲಿ ಈ ಹುಳಗಳನ್ನು ಹೇಗೆ ಹೊಸಕಿ ಹಾಕಿದನೆಂಬುದನ್ನು ನೀನು ಎಲ್ಲರಿಗೂ ವಿವರಿಸುವೆಯಂತೆ"

ಆ ಎರಡು ಕುದುರೆಗಳ ಕಡಿವಾಣಗಳನ್ನೂ ರೈತ ತನ್ನ ಕೈಗೆ ತೆಗೆದುಕೊಂಡ. ಎತ್ತರವಾಗಿ ಬೆಳೆದು ನಿಂತಿದ್ದ ಆ ಎರಡು ಕುದುರೆಗಳು! ಸರಿಯಾಗಿ ಉಪಯೋಗಿಸಿದ್ದರೆ ಆ ಪ್ರದೇಶವನ್ನೆಲ್ಲಾ ಉತ್ತು ಬಿತ್ತಿ ಧಾನ್ಯ ತೆಗೆಯಲು ಆ ಎರಡು ಕುದುರೆಗಳೂ ಆ ಸಾಮಾನ್ಯ ಪ್ರಯೋಜನಕ್ಕೆ ಬರುತ್ತಿದ್ದುವು. ಸಾಲಾಗಿ ನಿಂತಿದ್ದ ಗ್ರಾಮ ಕ್ರಾಂತಿ ವೀರರನ್ನೆಲ್ಲಾ ಈ ರೈತ ಒಮ್ಮೆ ನೋಡಿದ. ಹಾಗೆಯೇ ಬಂದೂಕಗಳನ್ನು ಕೈಯಲ್ಲಿ ಹಿಡಿದು ಸಿದ್ಧವಾಗಿ ನಿಂತಿದ್ದ ಸೈನಿಕರನ್ನೂ ದೃಷ್ಟಿಸಿ ನೋಡಿದ. ಕ್ರಾಂತಿಕಾರರ ಕಡೆ ನೋಡುತ್ತಾ, ಕೆದರಿದ ಕೂದಲಿನಿಂದ ಕರಾಳ ರೂಪಿನವನಾಗಿದ್ದ ದಂಡನಾಯಕ ಗರ್ಜಿಸಿದ; "ಯಾರಾದರೂ ಕ್ಷಮೆಯಾಚಿಸುವವರಿದ್ದೀರಾ?"

ಯಾರೂ ಅವನ ಕಡೆ ಓರೆಗಣ್ಣಿನಿಂದ ಸಹಾ ನೋಡಲಿಲ್ಲ. ಯಾರೂ ಕ್ಷಮೆಯಾಚಿಸಲಿಲ್ಲ.

ರೈತ ಅಂಟೋನ್ ಸೈನಿಕರ ಕಡೆಯೇ ದೃಷ್ಟಿಸುತ್ತಿದ್ದ. ಅವರೆಲ್ಲರೂ ಅವನ ಮಕ್ಕಳ ವಾರಿಗೆಯವರಂತಿದ್ದರು. ಅವನ ಮುಂದೆ ಮಾಸಿದ ಮುಖದ ಮಪ್ರೋದಿ ನಿಂತಿದ್ದ. ಮಪ್ರೋದಿಯ ಹೊಳಪಿನ ಕಣ್ಣುಗಳೂ ಅಂಟೋನ್‌ನನ್ನೇ ನೋಡುತ್ತಿದ್ದುವು.

"ಬಂಧುಗಳೇ, ಒಡನಾಡಿಗಳೇ!" ಅಂಟೋನ್ ಕೂಗಿದ. ಸೆಪ್ಟೆಂಬರಿನ ರಾತ್ರಿಯಲ್ಲಿ ಅವನ ಧ್ವನಿ ಪ್ರತಿಧ್ವನಿತವಾಗುತ್ತಿತ್ತು. "ನೀವು ಹೊಡೆಯುವ ಗುಂಡು ಕ್ರಾಂತಿಪಥಕ್ಕೆ; ನಿಮ್ಮ ಭವಿಷ್ಯವನ್ನೇ ನೀವು ಗುಂಡಿಟ್ಟು ಕೊಲ್ಲುತ್ತಿದ್ದೀರಿ. ನೀವು ನಿಮ್ಮ ಸಹೋದರರನ್ನೇ ತಂದೆಯರನ್ನೇ ಶತ್ರುಗಳೆಂದು ತಪ್ಪುತಿಳಿದು ಅವರವಿರೋಧ ನಿಂತಿದ್ದೀರಿ. ಯಾವ ಪುರುಷಾರ್ಥಕ್ಕಾಗಿ ಕ್ರಾಂತಿಗೆಂದೆಂದಿಗೂ ಚ್ಯುತಿಯಿಲ್ಲ; ಅದು...."

ಮಾತು ಇದಕ್ಕಿಂತ ಮುಂದೆ ಮರಿಯುವ ಮುನ್ನವೇ ದಂಡನಾಯಕ ತನ್ನ ಪಿಸ್ತೂಲಿನಿಂದ ಅವನ ಮುಖದ ಮೇಲೆ ಹೊಡೆದ. ರಕ್ತ ಅವನ ಮುಖದಿಂದ ಚಿಮ್ಮಿತು. ನಿಲ್ಲಲು ಕಷ್ಟವಾಗಿ ತೂರಾಡುವಂತಾದರೂ ಅಂಟೋನ್ ಬೀಳಲಿಲ್ಲ. ದಂಡನಾಯಕ ಸೈನಿಕರೆಲ್ಲರನ್ನೂ ಸಿದ್ಧರಿರಲು ಹೇಳಿದ.

ರಾಜನ ಬಗ್ಗೆಯೂ ರಾಜಭಕ್ತಿಯ ಬಗ್ಗೆಯೂ ಒಂದು ಚಿಕ್ಕ ಭಾಷಣವನ್ನು ಮಾಡಿದ. ರಾಜ! ರಾಜಭಕ್ತಿ!! ಇವೆರಡರ ಹೆಸರಿನಲ್ಲೇ, ಇವೆರಡರ ಉದ್ಧಾರಕ್ಕಾಗಿಯೇ ಆ ಸೈನಿಕರೆಲ್ಲರೂ ಕ್ರಾಂತಿಯನ್ನು ಗುಂಡಿಟ್ಟು ಕೊಲ್ಲಲು ಅಲ್ಲಿ ಸಿದ್ಧರಾಗಿ ನಿಂತಿದ್ದರು. ಕ್ರಾಂತಿಕಾರರನ್ನು ಕೊಂದು ತಮ್ಮ ವೀರತ್ವವನ್ನು ಸಮರ್ಥ ಮಾಡಿಕೊಡಲು ಕಾತರರಾಗಿದ್ದರು.

ಸೈನಿಕ ಮಪ್ರೋದಿಗೆ ದಂಡನಾಯಕನಿತ್ತ ಭಾಷಣದ ಅರ್ಥವೇ ಆಗಲಿಲ್ಲ. ಆವನ ಕಣ್ಣಿಗೂ ಮನಸ್ಸಿಗೂ ಗೋಚರವಾಗುತ್ತಿದ್ದುದು ಒಂದೇ; ಅದು ಅಂಟೋನನ ಮುಖ, ಅವನ ಚಿಂದಿಯಾದ ಅಂಗಿ. ಅವನನ್ನು ನೋಡಿದಾಗಲೆಲ್ಲಾ ತನ್ನ ತಂದೆಯ ನೆನಪಾಗುತ್ತಿತ್ತು ಮಪ್ರೋದಿಗೆ. ಅವನ ತಂದೆಯೂ ಅಂತಹವೇ ಅಂಗಿಯನ್ನು ತೊಟ್ಟುಕೊಳ್ಳುತ್ತಿದ್ದ. ಅವನದೇ ಮುಖ. ಆ ನೆನಪು ಬಂದಂತೆಲ್ಲಾ ಅವನ ಗಂಟಲು ಒತ್ತಿ ಬರುತ್ತಿತ್ತು. ತನ್ನ ಕೈಯಲ್ಲಿದ್ದ ಬಂದೂಕು ತನ್ನ ತಂದೆಯನ್ನೇ ಕೊಲ್ಲಲು ಸಿದ್ಧವಿರುವುದೇನೋ; ಇನ್ನೊಂದು ನಿಮಿಷದಲ್ಲಿ ಆ ಚಿರಪರಿಚಿತ ವಸ್ತುವಿನಂತೆ ಕಂಡ ಅಂಗಿ ಧೂಳಿನಲ್ಲಿ ಬಿದ್ದು ಹೋಗುವುದೇನೋ--ಎಂಬಿವೇ ಯೋಚನೆಗಳು ಮಪ್ರೋದಿಯ ಮನಸ್ಸಿನಲ್ಲಿ.

ಸೈನಿಕನ ಕೈಗಳು ಕೆಲಸ ಮಾಡದೇ ಹಾಗೆಯೇ ನಿಂತವು. ಎದ್ದು ನಿಂತಿದ್ದ ಬಂದೂಕ ಕ್ರಮೇಣ ಇಳಿಮುಖವಾಗತೊಡಗಿತು. ಅಂಟೋನನ ದೃಷ್ಟಿಯನ್ನು ಮಪ್ರೋದಿಯ ದೃಷ್ಟಿ ಸಂಧಿಸಿದಾಯಿತು. ಅವನ ಕಾಲೇ ದಿಟ್ಟವಾಗಿ ನಿಲ್ಲಲಾರದಾಯಿತು. ಬಂದೂಕು ನೆಲ ಮುಟ್ಟಿತು. ನಾಲಿಗೆಯೆಲ್ಲಾ ಒಣಗಿ ಹೋದಂತಾಗಿತ್ತು ಸೈನಿಕನ ಪರಿಸ್ಥಿತಿ. ಉಳಿದ ಸೈನಿಕರತ್ತ ಮಪ್ರೋದಿ ಕಣ್ಣು ಹಾಯಿಸಿದ. ಅವರೆಲ್ಲರ ಬಂದೂಕಗಳೂ ಕ್ರಾಂತಿಕಾರರ ರಕ್ತ ಗುರಿಮಾಡಿ ಸಿದ್ಧವಾಗಿ ನಿಂತಿದ್ದುವು.

ವಿಧೇಯನಾದ ಸಾರ್ಜೆಂಟನು ಕ್ಷಣಮಾತ್ರದಲ್ಲಿ ಎಲ್ಲವನ್ನೂ ಅರಿತು ಎಚ್ಚೆತ್ತುಗೊಂಡ. ಕೂಡಲೇ ಎಲ್ಲರಿಗೂ ಆಜ್ಞೆಯಿತ್ತ. ಸೈನಿಕರು ಇವನ ಆಜ್ಞೆಯನ್ನು ಕೇಳದಾದರೂ ಗರಬಡಿದವರಂತೆ ಹಾಗೆಯೇ ನಿಂತಿದ್ದರು. ಸಾರ್ಜೆಂಟನು ಮಪ್ರೋದಿಯನ್ನು ಹಿಡಿದು ಕ್ರಾಂತಿಕಾರರ ಪಕ್ಕದಲ್ಲಿ ನಿಲ್ಲಿಸಿದ. ದಂಡನಾಯಕ ಮತ್ತೊಮ್ಮೆ ಇತ್ತಿಂದತ್ತ ಓಡಾಡಿ, ಕರ್ಕಶನಾಗಿದ್ದ ಸೈನಿಕನತ್ತ ದುರುಗುಟ್ಟಿ ನೋಡಿ ಎಲ್ಲರಿಗೂ ಗುಂಡುಹಾರಿಸಲು ಸಿದ್ಧರಿರಬೇಕೆಂದು ಇನ್ನೊಂದು ಬಾರಿ ಅಪ್ಪಣೆ ಮಾಡಿದ.

ಚಂದ್ರ ಆನೇ ತಾನೆ ಬೆಟ್ಟಗಳ ತುದಿ ಮುಟ್ಟಿದ್ದ. ಅಲ್ಲಿಂದ ತನ್ನ ಶೀತಲ ಕಿರಣಗಳನ್ನು ಬೀರಿ ಕ್ರಾಂತಿಕಾರರ ಬಿಳಿಯ ಅಂಗಿಗಳ ಮೇಲೂ ಸೈನಿಕರ ಬಂದೂಕಗಳ ಮೇಲೂ ಬೆಳಕು ಚೆಲ್ಲಿದ. ನದಿಯು ತನಗೆ ಕೊನೆಯೇ ಇಲ್ಲವೇನೋ ಎಂಬಂತೆ ಅವ್ಯಾಹತವಾಗಿ ಹರಿಯುತ್ತಲೇ ಇತ್ತು. ಅದರ ದಂಡೆಯ ಮೇಲೆ ನಿಂತಿದ್ದ ಕ್ರಾಂತಿಕಾರರು ಮಿನುಗುತ್ತಾ ಬಂಗಾರದ ಪದರಗಳಂತೆ ಕಾಣುತ್ತಿದ್ದ ನೀರನ್ನೇ ನೋಡುತ್ತಿದ್ದರು. ಅವರ ಜೀವಗಳಿಗೆ ಆ ದಂಡೆಯೇ ಅಂತ್ಯವಾದರೂ ಆ ನೀರಿನಲ್ಲಿ ಅವರ ಉಜ್ವಲ ಭವಿಷ್ಯತ್ತು ರೂಪುಗೊಂಡಿದ್ದಂತಿತ್ತು.

ಅಂಟೋನನ ಪಕ್ಕದಲ್ಲೇ ನಿಂತಿದ್ದ ಸೈನಿಕ ಮಪ್ರೋದಿಯೂ ಹರಿಯುತ್ತಿದ್ದ ನೀರಿನ ಕಡೆಗೇ ನೋಡುತ್ತಿದ್ದ. ಯಾವುದೋ ಒಂದು ಕೈ ಅವನ ಕೈಯನ್ನು ಬಲವಾಗಿ ಹಿಡಿದಿತ್ತು. ಆದರೆ ಅವನ ಧ್ಯಾನವೆಲ್ಲಾ ಆ ಗಸಗಸೆಯ ಮೊಗ್ಗುಗಳು ತಂಗಾಳಿಗೆ ಉಯ್ಯಾಲೆಯಾಡುವ ಹಾಡಿನ ಮೇಲೆಯೇ ಇತ್ತು.

ಆ ಹಾಡು ಅವನ ಹೃದಯದ ಮೊಗ್ಗನ್ನು ಬಿರಿಯುವಂತೆ ಮಾಡಿ ಅವನೆಲ್ಲೂ ಕ್ರಾಂತಿಕಾರರಲ್ಲಿದ್ದ ಭಾವೋನ್ಮಾದಗಳೇ ಏಳುವಂತೆ ಮಾಡಿತು.

ಬಂದೂಕಿನಿಂದ ಹಾರಿದ ಗುಂಡುಗಳು ಅವನ ಕಣ್ಣಿಗೆ ಮುಸುಕಿಟ್ಟುವು. ಒರಟಾದ ಕೈಯೊಂದು ಅವನ ಕೈಯನ್ನು ಹಿಡಿದೇ ಇತ್ತು. ಆದರೆ ಅದರ ಬಿಸಿ ತಾಕಲಿಲ್ಲ.

೦ ೦ ೦

ಮರು ವಸಂತದಲ್ಲಿ ಹೊಲದಲ್ಲಿ ಕಳೆ ಕೀಳಲು ರೈತರು ಬಂದಾಗ ನದಿಯ ದಂಡೆಯ ಮೇಲೆ ಅನೇಕ ಗಸಗಸೆ ಗಿಡಗಳನ್ನು ಕಂಡರು. ಅವುಗಳ ಬಂಗಾರದ ಬಣ್ಣದ ಹೂಗಳು ಜ್ವಾಲೆಗಳಂತೆ ಕಂಡುವು. ಇಪ್ಪತ್ತು ವರ್ಷಗಳ ನಂತರ ಸೈನಿಕರ ತಂಡವೊಂದು ಅದೇ ಮಾರ್ಗವಾಗಿ ಹೋದಾಗ ಆ ಗಸಗಸೆ ಹೂಗಳನ್ನು ಕಿತ್ತು ತಮ್ಮ ಬಂದೂಕುಗಳಲ್ಲಿ ಸಿಕ್ಕಿಸಿ ತಮ್ಮ ತಂದೆ ತಾತಂದಿರು ಆರಂಭಿಸಿದ ಸ್ವಾತಂತ್ರ್ಯದ ಕ್ರಾಂತಿಗೆ ಜಯ ತರುವುದಕ್ಕಾಗಿ ಯುದ್ಧಕ್ಕೆ ತೆರಳಿದರು.

ಯುದ್ಧದ ನಂತರ ಆ ಭೂಮಿಯಲ್ಲಿ ಅಮೃತ ಶಿಲೆಯ ಸ್ಮಾರಕವೊಂದನ್ನು ನಿರ್ಮಿಸಿದರು. ಪ್ರತಿ ವಸಂತದಲ್ಲೂ ಜ್ವಾಲೆಗಳಂತೆ ಗಸಗಸೆಯ ಹೂಗಳು ಬೆಳಗಿದಾಗ ಜನರೆಲ್ಲರೂ, ಹಿಂದೆ ತಮ್ಮ ಪ್ರಾಣಾರ್ಪಣೆ ಮಾಡಿದ ಆ ಕ್ರಾಂತಿಕಾರರ ಜೀವಗಳೇ ಗಸಗಸೆಯ ಹೂವುಗಳಾಗಿ ಪರಿಣಮಿಸಿದೆಯೆಂದು ಆಡಿಕೊಳ್ಳುತ್ತಾರೆ. ಇದು ನಿಜವೆ ಆದರೆ ಹಿಂದೆ ಮಡಿದ ಪ್ರತಿಯೊಬ್ಬ ಕ್ರಾಂತಿವೀರನ ಜೀವವೂ ಪ್ರತಿ ವಸಂತದಲ್ಲಿ ಹೂವಿನ ರೂಪದಲ್ಲಿ ಜೀವ ತಾಳುತ್ತದೆ.

(ಇದೊಂದು ಬಲ್ಗೇರಿಯನ್ ಕಥೆ)

ಪ್ರಕಟಣೆ

ಸ್ವಾಮಿ ಶ್ರೀ ಕೃಷ್ಣ ಚೈತನ್ಯ ಚೈತನ್ಯ ನಿವಾಸ, ಜವಾಹರ ನಗರ, ಖಾರ (ಪೂರ್ವ) ಮುಂಬಯಿ ನಂ. ೫೨, ಇವರು ಈ ಮೂಲಕ ಜಾಹೀರು ಮಾಡುವುದೇನೆಂದ್ರೆ,—

ನಾನು ಕುಂದಾಪುರ ತಾಲ್ಲೂ ಪೇಟೆ, ಶೀರೂರು ಗ್ರಾಮದಲ್ಲಿರುವ ಪಿತ್ರಾರ್ಜಿತ ಆಸ್ತಿಯ ಮಾಲಕ ಇರುತ್ತೇನೆ. ನಾನು ಸದ್ರಿ ಆಸ್ತಿಯನ್ನು ಮಾರಲಿಕ್ಕೆ ಶ್ರೀಯುತ ಸಂಜೀವ ರಾವ್ ಇವರಿಗೆ ಮುಕ್ತ್ಯಾರ್ ನಾಮೆ ಕೊಟ್ಟಿದ್ದೆ. ಆದರೆ ನನಗೆ ಹೀಗೆ ತಿಳಿದು ಬರುತ್ತದೆ ಏನಂದ್ರೆ:— ಸದ್ರಿಯವರು ನನ್ನ ಹೆಸರಿನಲ್ಲಿ ಶಿಷ್ಯ ಮತ್ತು ನನಗೆ ತಿಳಿಸದೇ ಪರಮೇಶ್ವರ ಹೆಗಡೆ ಇವರಿಗೆ ಟ್ರಸ್ಟ್ ಮಾಡಿ ಕೊಟ್ಟದ್ದಾಗಿ ತಿಳಿದು ಬರುತ್ತದೆ, ಆದ್ದರಿಂದ ಆ ಟ್ರಸ್ಟನ್ನು ಇದರ ಮೂಲಕ ನಾನು ರದ್ದು ಪಡಿಸಿದ್ದೇನೆ. ನಾನು ಸದ್ರಿಯವರಿಗೆ ಟ್ರಸ್ಟ್ ಮಾಡಿ ಆಸ್ತಿಯನ್ನು ಕೊಡಲಿಕ್ಕೆ ಮುಕ್ತ್ಯಾರ್ ನಾಮೆಯನ್ನು ಕೊಡಲಿಲ್ಲವಾದ್ದರಿಂದ ಸದ್ರಿಯವರು ಮಾಡಿದ ಸದ್ರೀ ಟ್ರಸ್ಟನ್ನು ನಾನು ರದ್ದು ಮಾಡಿದ್ದೇನೆ, ನಾನು ಜೀವಂತ ಇರುವಾಗ ನನ್ನ ಕಬೂಲಿ ಶಿವಾಯ ಟ್ರಸ್ಟ್ ಮಾಡಲಿಕ್ಕೆ ಬರುವ ಹಾಗಿಲ್ಲ. ಮಾಡುವದಾದರೆ ಅದಕ್ಕೆ ನನ್ನ ಕಬೂಲಿ ಬೇಕಿತ್ತು.

ಆದ್ದರಿಂದ ನಾನು ಈ ಮೂಲಕ ಸದ್ರಿ ಟ್ರಸ್ಟನ್ನು ರದ್ದು ಪಡಿಸಿದ್ದೇನೆ. ಮತ್ತು ಸದ್ರಿ ಆಸ್ತಿಯನ್ನು ಮಾರಾಟಕ್ಕೆ ಇಡುತ್ತೇನೆ. ಯಾರಾದರೂ ಕೊಂಡುಕೊಳ್ಳುವವರಿದ್ದರೆ ಅವರು ನನಗೆ ಪತ್ರ ವ್ಯವಹಾರ ಮಾಡಬೇಕು.

ಆಸ್ತಿಗಳು ಕುಂದಾಪುರ ತಾಲೂಕಿನ ನಂ. ಒಂದನೇ ಶೀರೂರು ಗ್ರಾಮದಲ್ಲಿದ್ದು ಬೈಂದೂರು ಸಬ್ ಡಿಸ್ಟ್ರಿಕ್ಟ್ ರಿಜಿಸ್ಟ್ರೇಶನಿಗೂ ದಕ್ಷಿಣ ಕನ್ನಡ ಜಿಲ್ಲಾ ರಿಜಿಸ್ಟ್ರೇಶನಿಗೂ ಒಳಪಟ್ಟಿವೆ. ಅವುಗಳ ವಿವರ:—

ಕ್ರಮ ನಂಬ್ರ	ಸರ್ವೆ ನಂಬ್ರ	ಸಬ್-ಡಿವಿಜನ ನಂಬ್ರ	ಕಿಸಾವರ್	ವಿಸ್ತೀರ್ಣ ಎ ಜಿ	ಶೀರ್ವೆ ರೂ. ಪೈಸಾ
1	212	1	ಬಾಗಾಯ್ತು	0 17	0=75
2	111	2	ಬಾಗಾಯ್ತು	0-02	0=06
3	111	1	ಪುಂಜ	0-45	0=31
4	333	2	ಪುಂಜ	4-12	3=06

ನೋಂದಿನ ಎಲ್ಲಾ ಆಸ್ತಿಗಳ ಮೇಲಿನ ಮೂಲೀ ಪಕ್ಕ.

NAVAYUGA 14—1—1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೪-೧-೬೫ರಿಂದ ೨೦-೧-೬೫ರ ವರೆಗೆ

೧. ಮೇಷ

ಸ್ವಯಂ ಶಕ್ತರೂ ದಕ್ಷರೂ ಆದ ನಿಮಗೆ ಈ ವಾರವು ತುಂಬ ಅನುಕೂಲವಾಗಿ ಪರಿಣಮಿಸಲಿದೆ. ಎಂತ ಮಹತ್ತರವಾದ ಕಾರ್ಯವು ಕೂಡ ನಿಮಗಿಂದು ತೃಣಸಮಾನವೆನಿಸುವುದು. ಪ್ರಬಲ ಇದಿರಾಳಿಗಳೂ ಕೂಡ ನಿಮ್ಮ ಕರ್ತವ್ಯ ಶಕ್ತಿಯನ್ನು ಕಂಡು ದೂರದಿಂದಲೇ ಪಲಾಯನಗೈವರು. ಕೋರ್ಟು ಕಚೇರಿಗಳ ಕಾರ್ಯಗಳು ನಿಮ್ಮಂತೆ ಕೊನೆ ಹೊಂದಲಿವೆ. ಸಮಾಜದಲ್ಲಿ ನಿಮಗೆ ಹೆಚ್ಚಿನ ಗೌರವ ಲಭಿಸದಾದರೂ ರಾಜಕೀಯದಲ್ಲಿ ಒಳ್ಳೆ ಕೀರ್ತಿ ಸಂಪಾದಿಸುವಿರಿ. ತಾ. 15, 16, 17 ಈ ದಿನಗಳಲ್ಲಿ ನಿಮ್ಮ ಬಯಕೆಯು ಪೂರ್ಣವಾಗಲಿದೆ.

೨ ವೃಷಭ

ದಿನಯಾಪನೆಯು ಬಹಳ ಕಷ್ಟಕ್ಕೆ ಬರಲಿದೆ. ಸ್ವಯಂ ಅಶಕ್ತರಾದ ನಿಮಗೆ ಯಾರೊಬ್ಬರ ನೆರವೂ ಇಂದು ಲಭಿಸದ ಕಾರಣ ದಿನಯಾಪನೆಯು ಬಹಳ ದುಸ್ತರವಾದೀತು. ಪೇಟಾಲಸ್ಯ ಗೃಹತಾಪತ್ರಯಗಳಿಂದ ಬೇಸತ್ತ ನಿಮಗೆ ಪ್ರವಾಸವು ಕೂಡ ಗಂಟುಬೀಳಲಿದೆ. ಆಯಕ್ಕಿಂತ ದ್ವಿಗುಣವಾಗಿ ಖರ್ಚುಗಳು ಪ್ರಾಪ್ತವಾಗುವುದರಿಂದ ಪರರ ಕೂಡೆ ಸಾಲಮಾಡುವ ಪರಿಸ್ಥಿತಿ ಬರಲಿದೆ. ಹಣದ ನಿಮಿತ್ತ ಜನರೊಡನೆ ಕಲಹವಾಗುವ ಸಂಭವವಿದೆ. ತಾ. 14, 18, 19 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮ.

೩. ಮಿಥುನ

ನಿಮ್ಮ ಅದೃಷ್ಟವಿಂದು ತೀರಾ ಕೆಟ್ಟಿರುವುದರಿಂದ ನಿಮ್ಮ ಯಾವತ್ತೂ ಬಯಕೆಗಳು ಕನ್ನಡಿಯೊಳಗಿನ ಗಂಟೆಸಂತಾಗಲಿವೆ. ಮನೋದೌರ್ಬಲ್ಯವಿಂದು ಅಧಿಕವಾಗಲಿದೆ. ವಿರೋಧಿವರ್ಗದವರ ಕಾಟದಿಂದಾಗಿ ಹೆಚ್ಚಿನ ಕಾರ್ಯಗಳು ಅರ್ಧದಲ್ಲೇ ತಡೆದು ನಿಲ್ಲುವವು. ಮಾತ್ರವಲ್ಲ ವ್ಯಾಪಾರದಲ್ಲಿ ನಷ್ಟ ವ್ಯವಹಾರದಲ್ಲಿ ಸೋಲನ್ನೂ ಅನುಭವಿಸುವಿರಿ. ವಿಶೇಷತಃ ಶ್ರಮ ಜೀವಿಗಳಿಗೆ ಮೇಲಿಂದ ಮೇಲೆ ಆಪದನಿಷ್ಟಗಳು ಬರಲಿವೆ. ಆದರೂ ಗುರ್ವನುಗ್ರಹವುಳ್ಳ ನಿಮಗೆ ಸಕಾಲದಲ್ಲಿ ಹಿರಿಯರ ನೆರವು ಲಭಿಸುವುದರಿಂದ ಹಣದ ತೊಂದರೆ ಕಾಣಿಸದು. ತಾ. 15, 16, 20 ಅನುಕೂಲ.

೪. ಕರ್ಕಟ

ಕಳೆದವಾರಕ್ಕಿಂತ ಇಂದಿನ ದಿನಗಳು ಸ್ವಲ್ಪ ಬಿಕ್ಕಟ್ಟಿನದಾಗಿ ಕಾಣಿಸುವವು. ಶಕ್ತಿಮೀರಿ ದುಡಿಯುವಿರಿ. ಆದರೆ ನಿಮ್ಮ ಶ್ರಮಕ್ಕೆ ತಕ್ಕ ಫಲಮಾತ್ರ ಲಭಿಸದು. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಖರ್ಚುಗಳ ನಿರ್ವಹಣೆಗಾಗಿ ಕೆಲವೊಮ್ಮೆ ಸಾಲಮಾಡುವ ಪ್ರಸಂಗ ಬರಲಿದೆ. ಬಂಧು ಮಿತ್ರರೊಳು ಸೌಮನಸ್ಯವಿರದು. ಆತ್ಮೀಯರ ವಿರಹ ದುಃಖಕ್ಕೆ ಗುರಿಯಾಗುವಿರಿ. ಅರ್ಧಾಂಗಿಯ ಆರೋಗ್ಯ ಕೆಡುವ ಸಂಭವವಿದೆ. ತಾ. 14, 18, 19ರಲ್ಲಿ ಭೋಗ ಲಾಭಗಳನ್ನು ಪಡೆವಿರಿ.

೫. ಸಿಂಹ

ಗುರ್ವನುಗ್ರಹವು ನಿಮಗಿಂದು ಚೆನ್ನಾಗಿರುವುದರಿಂದ ಸದ್ಯದ ದಿನಗಳನ್ನು ಸುಖದಿಂದ ಕಳೆವಿರಿ. ಹೆಚ್ಚಿನ ಕಾರ್ಯಗಳು ನಿಮ್ಮ ಅಪೇಕ್ಷೆಯಂತೆ ಕೊನೆ ಹೊಂದುವವು. ಆರ್ಥಿಕ ಪರಿಸ್ಥಿತಿಯು ತುಂಬ ಸುಧಾರಿಸಲಿದೆ. ಇಷ್ಟೆಲ್ಲಾ ಸೌಕರ್ಯಗಳಿದ್ದರೂ ಮನೆಯಲ್ಲಿ ನಿಮಗೆ ಸುಖವಿಲ್ಲವು. ಹೆಂಡಿರು ಮಕ್ಕಳ ಕಾಟ ಕಲಹ ಅನುದಿನ ತಪ್ಪದು. ಮಾತು ಮಾತಿಗೆ ಕಲಹವಾಗುವದು. ಅಧಿಕಾರಿ ವರ್ಗದವರ ಕೋಪಕ್ಕೆ ಸಿಲುಕಲಿರುವಿರಿ. ಮಾತ್ರವಲ್ಲ ಪಿತ್ತೋಷ್ಣ ಪ್ರಕೋಪದಿಂದಾಗಿ ಆರೋಗ್ಯವು ಕೆಡಲಿದೆ. ತಾ. 14, 15, 16, 20 ಈ ದಿನಗಳಲ್ಲಿ ಮಿತ್ರರ ನೆರವು ಹಲವಾರು ಕಡೆಯಿಂದ ಧನಾಗಮವೂ ಆಗಲಿದೆ.

೬. ಕನ್ಯಾ

ಕಷ್ಟಪಟ್ಟು ದುಡಿಯುವಿರಿ. ಆದರೆ ನಿಮ್ಮ ಇಷ್ಟಾರ್ಥವು ಬಿಸಿಲ್ಗುದುರೆಯಂತಾದೀತು. ಶತ್ರು ಜನರ ಪೀಡೆಯಿಂದ ನೀವಿಂದು ಮುಕ್ತರಾಗಿದ್ದರೂ ಗುರುಹಿರಿಯರ ಕೂಡೆ ಸೌಮನಸ್ಯವಿರಲೊಲ್ಲದು. ರಾಜಕೀಯದಲ್ಲಿ ಪರಾಭವವುಂಟಾಗಲಿದೆ. ಆಕಸ್ಮಿಕ ಪ್ರವಾಸದ ಯೋಗವಿದೆ. ನಿಮಗಿಂದು ಹಣದ ತೊಂದರೆ ಕಾಣಿಸದಾದರೂ ತನುಮನಗಳಿಗೆ ಸುಖ ನೆಮ್ಮದಿಗಳಿರಲಾರವು. ವಾರದ ಅದ್ಯಂತ ದಿನಗಳಲ್ಲಿ ವ್ಯರ್ಥ ಖರ್ಚು ದೇಹಾಲಸ್ಯವಧಿಕವಾಗಲಿವೆ.

೭. ತುಲಾ.

ನಿಮ್ಮ ಧನಪತಿಯಾದ ಕುಜನಿಂದು ವ್ಯಯಸ್ಥಾನಕ್ಕೆ ಬಂದಿಹನು. ಭಾಗ್ಯಲಾಭಪತಿಗಳೂ ಪ್ರತಿಕೂಲ ಸ್ಥಾನವನ್ನೈದಿಹರೆಂಬ ಕಾರಣ ಈ ವಾರದಲ್ಲಿ ನಿಮಗೆ ಹಣದ ಅಡಚಣೆಯು ವಿಶೇಷವಾಗಲಿದೆ. ಪತ್ನೀಪುತ್ರರ ವಿರಹ ಸ್ವಜನರ ವಿಯೋಗ, ವಿರೋಧಿಗಳ ಕಾಟಗಳು ನಿಮ್ಮನ್ನು ನೆಮ್ಮದಿಯಿಂದಿರಗೊಡಲೊಲ್ಲವು. ದುಡಿಮೆಯು ಬಹ್ವಂಶವುದು ವ್ಯರ್ಥವಾದೀತು. ಬೇಕಾದ ವಸ್ತು ಪಡಿನೆಗಳು ನಿಮ್ಮಲ್ಲಿದ್ದರೂ ಸಮಯಕ್ಕೆ ಅವುಗಳು ದೊರೆಕಲಾರವು. ವಾರಾಂತ್ಯದ 3 ದಿನಗಳು ಉಳಿದ ದಿನಗಳಿಗಿಂತ ಉತ್ತಮ.

೮. ವೃಶ್ಚಿಕ

ಧನ ಪತಿಯಾದ ಗುರುವು ನಿಮಗಿಂದು ಪ್ರತಿಕೂಲನಾಗಿದ್ದರೂ ಇತರ ಗ್ರಹ ಬಲವು ಉತ್ತಮವಿರುವುದರಿಂದ ನೀವೀ ವಾರದಲ್ಲಿ ಹಿಡಿದ ಕಾರ್ಯವು ಯಶಸ್ವಿಯಾಗುವುದಲ್ಲದೆ ಹೆಚ್ಚಿನ ಧನಲಾಭವೂ ಆಗಲಿದೆ. ಮಾನಸಿಕ ದೌರ್ಬಲ್ಯವು ನಿಮ್ಮಲ್ಲಿರುವದಾದರೂ ನಿಮ್ಮ ಕಾರ್ಯದಕ್ಷತೆಯು ಶ್ಲಾಘನೀಯವಿರುವದು. ವಿಪಕ್ಷೀಯರು ನಿಮ್ಮ ದೃಷ್ಟಿಗೆ ಗೋಚರಿಸಲಾರರು. ರಾಜಕೀಯ ರಂಗದಲ್ಲಿ ಒಳ್ಳೆ ಗೌರವವನ್ನು ಪಡೆವಿರಿ. ಸಾಹಸಿಗಳಾದ ನಿಮಗೆ ತಾ. 14, 20 ಅತೀವ ಉತ್ತಮವಾಗಿವೆ.

೯. ಧನು

ಎಂತಹ ದುಃಸಾಧ್ಯವಾದ ಕಾರ್ಯವು ನಿಮಗಿಂದು ತೃಣಸಮವೆನಿಸುವದು. ಆ ಸಹಾಯ ಶೂರರೆನಿಸಿದ ನಿಮ್ಮನ್ನು ಸರ್ವತ್ರ ವಿಜಯಶ್ರೀಯು ಸ್ವಾಗತಿಸುವಳು. ದುಡಿಮೆಯ ಬಹ್ವಂಶವನ್ನು ಮಂಗಲಾದಿ ಸತ್ಕಾರ್ಯಗಳಿಗೆ ವಿನಿಯೋಗಿಸುವಿರಿ. ಪಶು ಭೃತ್ಯಾದಿ ಪರಿವಾರ ವರ್ಗದವರಿಂದ ಕೂಡಿ ಸಂತಸದಿಂದ ಕಾಲ ಕಳೆವಿರಿ. ಬೇಕು ಬೇಕಾದ ಸುಖ ಭೋಗಗಳು ಅನಾಯಾಸವಾಗಿ ಲಭಿಸಲಿದೆ. ಕೆಲವೊಮ್ಮೆ ಮಿತ್ರ ವರ್ಗದೊಳು ಮನಸ್ತಾಪವುದಿಸುವ ಸಂಭವವಿದೆ. ವಾರಾದಿಯ 4 ದಿನಗಳು ವಿಜಯ ಲಾಭವಾಯಿಗಳಾಗಿವೆ.

೧೦. ಮಕರ

ದೈವಬಲದಿಂದ ವಂಚಿತರಾದ ನಿಮಗೆ ಇಂದಿನ ದಿನಗಳು ಮನೋರೋಗ ಸ್ವಜನ ವಿಯೋಗಾದಿ ದುಃಖಗಳನ್ನು ತಂದೊಡ್ಡಲಿವೆ. ಕಾಸುಇಲ್ಲದವರು ಕಲ್ಲಿಗೆ ಸಮನೆಂಬ ಗಾದೆಯಂತೆ ರಿಕ್ತ ಹಸ್ತರಾದ ನಿಮ್ಮನ್ನಾರೂ ಆದರಿಸಲಾರರು. ಸೋದರರೊಡನೆ ಕಲಹವಾದೀತು. ನಿರಾಶೆಯೆಂಬುದು ನಿಮ್ಮ ಚಿತ್ತಸ್ಥೈರ್ಯವನ್ನು ಅಪಹರಿಸಲಿದೆ. ಒಂದೊಮ್ಮೆ ಪುರಸ್ಕೃತರಾದ ಸ್ಥಳದಲ್ಲಿ ನೀವಿಂದು ತಿರಸ್ಕಾರವನ್ನು ಪಡೆವಿರಿ. ಅತೀವ ಕಷ್ಟದಿಂದ ದಿನಕಳೆಯುತಕ್ಕ ನಿಮಗೆ, ತಾ. 15ರಿಂದ 19ರ ವರೆಗಿನ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೧೧. ಕುಂಭ

ಹಿಂದಿಗಿಂತ ನಿಮ್ಮ ಆದಾಯವಿಂದು ಕುಂದುವದಲ್ಲದೆ ಖರ್ಚಿನ ಭಾಗಗಳೂ ಇಂದು ಹೆಚ್ಚಲಿವೆ. ಅರ್ಧಾಂಗಿಯ ಸಲುವಾಗಿ ಹೆಚ್ಚಿನ ಧನ ವ್ಯಯವಾದೀತು. ಶತ್ರು ಜನರಿಂದ ನಿಮ್ಮ ಧನ ಮಾನಗಳಿಗೆ ಹಾನಿಯುಂಟಾದೀತು. ಭೂ ಸಂಬಂಧವಾದ ವ್ಯವಹಾರದಲ್ಲಿ ನಷ್ಟವೂ ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ಪ್ರತಿಪಕ್ಷದವರಿಂದ ಪರಾಭವವೂ ಉಂಟಾಗಲಿದೆ. ಉದ್ಯಮ ಶೀಲರಿಗೆ ವಾರಾಂತ್ಯದ 3 ದಿನಗಳು ಸ್ವಲ್ಪ ಅನುಕೂಲವಾಗಿ ಕಾಣಿಸುವವು.

೧೨. ಮೀನ

ನಿಮ್ಮ ಪರಿಶ್ರಮಕ್ಕಿಂತಲೂ ಹೆಚ್ಚಿನ ಫಲವು ನಿಮಗಿಂದು ಲಭಿಸಲಿದೆ. ಹಣದ ಕೊರತೆ ನಿಮಗಿಲ್ಲವಾದರೂ ಮನಸ್ಸಿಗೆ ನೆಮ್ಮದಿಯಿರದು. ಮಾತನಾಡಿದವರೊಡನೆ ಕಲಹವಾಗಲಿದೆ. ಹೆಚ್ಚೇಕೆ ನಿಮ್ಮ ಅರ್ಧಾಂಗಿಯೇ ನಿಮಗೆದುರು ನಿಲ್ಲಲಿರುವಳು. ಆದಾಯವು ಹೆಚ್ಚಿದಂತೆ ಖರ್ಚುಗಳೂ ಬೆಳೆಯುವವು. ಕನಸಿನಲ್ಲೂ ನೆನಸದ ಅಪದನರ್ಥಗಳು ಬರಲಿವೆ. ನಿರಾಮಯರಾದ ನಿಮಗೆ ವಾರದ ಆದ್ಯಂತ ದಿನಗಳಲ್ಲಿ ಹೆಚ್ಚಿನ ಶುಭ ಲಾಭವನ್ನೀಯುವವು.

ಶ್ರೀ ಪಿ. ಎನ್. ಹೆಬ್ಬಾರ (ಸಿರಿಪತಿ)
ಅವರ
ನವೀನ ಕೃತಿ ಇದೀಗ ಹೊರಬಂದಿದೆ.
"ದಾರಿ ದೀಪ"
(ನೀತಿ ಕಥೆಗಳು)
(ಶ್ರೀ ಟಿ. ಎ. ಪೈಯವರ ಮುನ್ನುಡಿ)
ಬೆಲೆ: 1=50.
ನಿಮ್ಮ ಪ್ರತಿಗಾಗಿ ಉಡುಪಿಯ ಪುಸ್ತಕ ವ್ಯಾಪಾರಿಗಳಿಗೆ ಯಾ ನೇರವಾಗಿ ಕೆಳ ವಿಳಾಸಕ್ಕೆ ಬರೆಯಿರಿ.
ಪಿ. ಎನ್. ಹೆಬ್ಬಾರ, ವೀಣಾ ಪ್ರಕಾಶನ
ಹೆಬ್ಬಾರ್ಸ್ ಕಂಪೌಂಡು
ಕುಂಜಿಬೆಟ್ಟು, ಉಡುಪಿ, (ದ. ಕ.)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
LETTER WRITING MADE EASY
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯಿಂದಾವಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆಂಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ. ಪ್ರತ್ಯೇಕ)



Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಜನವರಿ, ೨೧, ೬೫ [ಸಂಚಿಕೆ ೨೧



Phone No.
ಫೋನ್ ಸಂಖ್ಯೆ 226

NAVAYUGA

leading nationalist weekly

೨೦ ಪೈಸೆ

ಕಥಾ ಪ್ರಪಂಚ

ಬಯಕೆ ಹಣ್ಣಾಯಿತು

ಬರೆದವರು: ಶ್ರೀ ಸ. ನಾರಾಯಣ. ಚಿತ್ರದುರ್ಗ.

ಇಂದಿರಾ ಆಫೀಸ್ ಮ್ಯಾನೇಜರ್ ಕೃಷ್ಣಮೂರ್ತಿಯೊಂದಿಗೆ ಮನೆಯ ದಾರಿ ಹಿಡಿದಳು. ಆಕೆ ಅವರ ಆಫೀಸಿನಲ್ಲಿಯೇ ಟೈಪಿಸ್ಟ್ ಆಗಿ ಕೆಲಸ ಮಾಡುತ್ತಿದ್ದಳು. ಕೃಷ್ಣಮೂರ್ತಿ ಹಾಗೂ ಇಂದಿರಾ ಆಫೀಸಿಗೆ ಬರುವಾಗ್ಯೆ ಮತ್ತು ಮನೆಗೆ ತೆರಳುವಾಗ್ಯೆ ಒಂದೇ ರಸ್ತೆಯನ್ನು ಅನುಸರಿಸಬೇಕಿತ್ತು. ಇಬ್ಬರೂ ಒಂದೇ ಬಸ್ಸಿನಲ್ಲಿಯೇ ಕುಳಿತು ಬರುತ್ತಿದ್ದರಾದರೂ ಇಂದಿರಾ ಮನೆಗಿಂತಲೂ ಕೃಷ್ಣಮೂರ್ತಿಯ ಕೋಣೆ ನಾಲ್ಕು ಮೈಲು ಹೆಚ್ಚು ದೂರದಲ್ಲಿಯೇ ಇತ್ತು. ಇಬ್ಬರಲ್ಲಿಯೂ ಯಾವ ಬಗೆಯ ಸಂಕೋಚವೂ ಇರಲಿಲ್ಲ. ವಿಶೇಷವಾದ ಸಲುಗೆ, ಸ್ನೇಹ ಬೆಳೆದಿದ್ದುದರಿಂದ ಇಬ್ಬರೂ ನಿಸ್ಸಂಕೋಚವಾಗಿ ವರ್ತಿಸುತ್ತಿದ್ದರು.

ಆಫೀಸಿನಲ್ಲಿ ನೆರೆಹೊರೆಯಲ್ಲಿ ಅವರಿಬ್ಬರ ಬಗ್ಗೆ ಪಿಸುಮಾತು ನಡೆಯುತ್ತಿರಲಿಲ್ಲ, ಇಬ್ಬರ ಸ್ವಭಾವ, ಗುಣ, ನಡತೆ ಅರಿತಿದ್ದವರು ಅವರಿಬ್ಬರ ಬಗೆಗೆ ಯಾವ ಬಗೆಯಲ್ಲಿಯೂ ಸಂದೇಹ ತಾಳಿರಲಿಲ್ಲ.

ಕೃಷ್ಣಮೂರ್ತಿ ಆಫೀಸಿಗೆ ಮ್ಯಾನೇಜರಾಗಿ ಬಂದ ಕೆಲ ತಿಂಗಳುಗಳಲ್ಲಿಯೇ ಇಂದಿರಾ ಅದೇ ಆಫೀಸಿನ ಟೈಪಿಸ್ಟಾಗಿ ನೇಮಕವಾದಳು. ಇಂದಿರಾಳ ಆಕರ್ಷಣೀಯ ಸೌಂದರ್ಯ, ಗುಣ ಸ್ವಭಾವ ಕೃಷ್ಣಮೂರ್ತಿಯನ್ನು ಸೆಳೆಯಲು ಹೆಚ್ಚು ದಿನ ಬೇಕಾಗಿರಲಿಲ್ಲ. ಆತನ ನಿಷ್ಕಪಟ ಸರಳತನ ಇಂದಿರಾಳನ್ನು ಮಗ್ನಳನ್ನಾಗಿ ಮಾಡಿತ್ತು. ಲಕ್ಷಾಧೀಶ್ವರರ ಮಗ ನೂರಾರು ರೂಪಾಯಿ ಸಂಬಳ ಪಡೆಯುವ ಅಧಿಕಾರಿ ಇಷ್ಟು ಸಲುಗೆಯಿಂದ, ವಿವೇಕದಿಂದ ವರ್ತಿಸುತ್ತಾರೆಯೇ? ಎಂದು ಆಶ್ಚರ್ಯ ಪಡುತ್ತಿದ್ದಳು.

ಮೊದಮೊದಲು ಪರಸ್ಪರ ಮಾತನಾಡಲು ಹಿಂಜರಿಯುತ್ತಿದ್ದ ಇಬ್ಬರೂ ಕ್ರಮೇಣ ಸ್ನೇಹದಿಂದ ವರ್ತಿಸಲಾರಂಭಿಸಿದರು. ಅವರ ಸ್ನೇಹ ಪರಸ್ಪರ ಪರಿಚಯಾದಿಗಳಿಗೆ ಇಂದಿರಾಳ ಅಣ್ಣ ವೆಂಕಟೇಶನೇ ಕಾರಣನಾದ. ಮೊದಲು ಆಫೀಸಿನ ವ್ಯವಹಾರಗಳ ಮಾತುಕತೆಯಲ್ಲಿಯೇ ಆರಂಭವಾದ ಪರಿಚಯ ಕ್ರಮೇಣ, ಸ್ನೇಹ, ಸಲುಗೆ ಬೆಳೆದು ಇಬ್ಬರೂ ಪರಸ್ಪರ ನಿಕಟವರ್ತಿಗಳಾದರು

ತಂಗಿ ಕೆಲಸಕ್ಕೆ ಸೇರಿ ದುಡಿಯಲಾರಂಭಿಸಿದ ಕೆಲ ದಿನಗಳಲ್ಲಿಯೇ ಅವಳನ್ನು ಕಂಡು ಹೋಗಲು ಬಂದ ವೆಂಕಟೇಶ ಆಫೀಸ್ ಮ್ಯಾನೇಜರ್ ಕೃಷ್ಣಮೂರ್ತಿಯನ್ನು ಭೇಟಿ ಮಾಡಿದ. ಪರಸ್ಪರ ಪರಿಚಯ ಲಘು ಸಂಭಾಷಣೆ ಮುಗಿದ ನಂತರ ವೆಂಕಟೇಶ "ನಾನಿರುವುದು ಹೈದರಾಬಾದಿನಲ್ಲಿ; ನನ್ನ ತಂದೆ ತಂಗಿ ಇಲ್ಲಿ. ತಂದೆ ಈ ಊರನ್ನು ಬಿಟ್ಟು ಬರಲಿಚ್ಛಿಸುವುದಿಲ್ಲ. ಇಂದಿರಾ ತಂದೆಯಿಂದ ದೂರವಿರಲು ಒಪ್ಪುವುದಿಲ್ಲ. ಈ ಕಾರಣದಿಂದ ಅವರಿಬ್ಬರೂ ಇಲ್ಲಿಯೇ ಉಳಿದಿದ್ದಾರೆ. ನಮ್ಮ ಆರ್ಥಿಕ ಸ್ಥಿತಿಯೂ ಉತ್ತಮವಾಗಿಲ್ಲದ ಕಾರಣ ಇಂದಿರಾ ದುಡಿಯಲು ಬರಬೇಕಾಯಿತು. ನಿಮ್ಮ ಸಂಗತಿಯನ್ನು ನನ್ನ ಮಿತ್ರರೊಬ್ಬರು ತಿಳಿಸಿದರು. ನನ್ನ ತಂಗಿಯದು ಮಗುವಿನ ಸ್ವಭಾವ. ಏನೂ ಅರಿಯದ ಸರಳ ಹೃದಯ. ಅವಳ ರಕ್ಷಣೆ ನಿಮ್ಮ ಹೊಣೆ" ಎಂದ.

"ನಿಮ್ಮ ಹೊಗಳಿಕೆಗೆ ಯೋಗ್ಯನಾಗುವ ಶಕ್ತಿ ನಾನು ಪಡೆದಿಲ್ಲ ವೆಂಕಟೇಶ್. ಆದರೂ ನಿಮ್ಮ ಅಭಿಮಾನ, ವಿಶ್ವಾಸ ಉಳಿಸಿಕೊಳ್ಳಲು ಪ್ರಯತ್ನಿಸುತ್ತೇನೆ" ಎಂದು ಭರವಸೆಯಿತ್ತ ಕೃಷ್ಣಮೂರ್ತಿ.

ಇಂದಿರಾ ಕೃಷ್ಣಮೂರ್ತಿ ಇವರ ಸ್ನೇಹಾಭಿಮಾನಗಳ ಧಾರೆ ನಿರರ್ಗಳವಾಗಿ ಹರಿಯಿತು.

ಇಂದಿರಾ ತಂದೆ ಗುಂಡಣ್ಣನವರು ತಾಯಿಯಿಲ್ಲದ ಮಗಳನ್ನು ತಾಯಿಗಿಂತಲೂ ಹೆಚ್ಚಿನ ಪ್ರೀತಿಯಿಂದ ಸಾಕಿದ್ದರು. ಮಗಳ ಗುಣ, ನಡತೆಯ ವಿಷಯದಲ್ಲಿ ಅವರಿಗೆ ಸಂಶಯವೇ ಇರಲಿಲ್ಲ. ಕೃಷ್ಣಮೂರ್ತಿಯ ಅಲ್ಪ ಸ್ವಲ್ಪ ಪರಿಚಯವೂ ಅವರಿಗಿತ್ತು. ಕೃಷ್ಣಮೂರ್ತಿ ಇಂದಿರಾ ದಂಪತಿಗಳೇಕಾಗಬಾರದು ಎಂಬ ಆಸೆ ಅವರಿಗೆ ಹುಟ್ಟದಿರಲಿಲ್ಲ, ಆದರೆ ಅಂತಹ ಶ್ರೀಮಂತ ಪುತ್ರ ಎಲ್ಲಿಯಾದರೂ ನಮ್ಮ ಸಂಬಂಧ ಬೆಳೆಸುವನೆ ಎಂದು ನಿರಾಶರಾಗುತ್ತಿದ್ದರು.

ಕೃಷ್ಣಮೂರ್ತಿಯ ಮನಸ್ಸಿನ ಮೇಲೆ ಇಂದಿರಾಳ ಸುಂದರ ಚಿತ್ರ ಅಚ್ಚೊತ್ತಿದಂತೆ ನಿಂತಿತ್ತು.

೨

"ಇಂದಿರಾ."

"ಅದೇಕೆ ರಾಗ ಹೇಳಿ..."

"ಅದು ನನ್ನ ವೈಯಕ್ತಿಕ ಪ್ರಶ್ನೆ ಅಥವಾ ಬೇಡಿಕೆ. ನೆರವೇರಿಸಿ ಕೊಡುವೆಯಾ?"

"ನೀವು ಹೇಳುವ ಮುಂಚೆಯೇ ಏನೆಂದು ಉತ್ತರಿಸಲಿ?"

"ನನ್ನ ಮಾತಿನ ಬಗ್ಗೆ ನಿನಗೆ ವಿಶ್ವಾಸವಿದೆಯೇ ಇಂದಿರಾ?"

"ಸಧ್ಯ ಸಾಕು ಈ ಪೀಠಿಕೆ, ಅದೇನು ಹೇಳಿ ...?"

"ನನ್ನನ್ನು ಮದುವೆ ಮಾಡಿಕೊಳ್ಳಲು ಒಪ್ಪುತ್ತೀಯಾ" ಎಂದು ಅನುಮಾನಿಸುತ್ತಲೇ ಪ್ರಶ್ನಿಸಿದ ಕೃಷ್ಣಮೂರ್ತಿ. ಇಂದಿರಾ ತಬ್ಬಿಬ್ಬಾದಳು. ಏನು ಉತ್ತರ ಕೊಡಬೇಕೆಂಬುದೇ ತೋಚಲಿಲ್ಲ. ತಡೆ ತಡೆದೇ...."ಬೇಡಿ ಸ್ವಾಮಿ. ನಮ್ಮ ಸ್ನೇಹ ವಿಶ್ವಾಸ ಇಷ್ಟರಲ್ಲಿಯೇ ಇರಲಿ. ನಿಮ್ಮನ್ನು ಕೈ ಹಿಡಿಯಲು ಅದಾವ ಲಕ್ಷ್ಮೀಪುತ್ರಿ ಕಾದಿದ್ದಾಳೆಯೋ'—ಎಲ್ಲಿಗೆಲ್ಲಿಯ ಸಂಬಂಧ....? ನನ್ನಂತಹ ನಿರ್ಗತಿಕಳ ಸಹವಾಸ ನಿಮಗೆ ಬೇಡ" ಎಂದು ಮುಖ ತಿರುಗಿಸಿದಳು ಇಂದಿರಾ.

ಕೃಷ್ಣಮೂರ್ತಿಯ ಮನಸ್ಸಿಗೆ ನೋವಾಯಿತು. "ನಿನ್ನ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸು ಇಂದಿರಾ. ನಿನ್ನ ಅಭಿಪ್ರಾಯ ಕೇಳಿದೆನಷ್ಟೆ." ಎಂದು ನೊಂದು ನುಡಿದ.

"ನಾನಷ್ಟು ಪುಣ್ಯವಂತಳಲ್ಲ" ಎಂದು ಇಂದಿರಾ ಕೋಣೆಯಿಂದ ಹೊರಟಳು.

ಕೃಷ್ಣಮೂರ್ತಿ ಅಂಗಲಾಚುವ ದನಿಯಲ್ಲಿ "ದಯವಿಟ್ಟು ಯಾರಿಗೂ ಈ ಸಂಗತಿ ತಿಳಿಸಬೇಡ ಇಂದಿರಾ" ಎಂದು ಯೋಚಿಸುತ್ತಾ ಕುಳಿತ.

ನಿರ್ಭೀತಿಯಿಂದ ಇಂದಿರಾ ಕೃಷ್ಣಮೂರ್ತಿಗೆ ಉತ್ತರ ಕೊಟ್ಟಿದ್ದಳು. ಆದರೆ ಅವಳ ಆತ್ಮ "ನಿನ್ನ ಉತ್ತರ ಆತ್ಮಸಂತೋಷದಿಂದ ಬಂದುದಲ್ಲ. ನಿನ್ನ ಉತ್ತರದಿಂದ ಅವರ ಮನಸ್ಸಿಗೆ ನೋವಾಗಿದೆ" ಎಂದು ಸೂಚಿಸುತ್ತಿತ್ತು.

ಗುಂಡಣ್ಣನವರು ಮಗಳ ಬೇಸರಕ್ಕೆ ಅನ್ಯಮನಸ್ಕತೆಗೆ ಕಾರಣ ತಿಳಿಯಲು ಪ್ರಯತ್ನಿಸಿ ವಿಫಲರಾದರು. ಮಗಳ ವಿವಾಹಕ್ಕೆ ಅವರು ಪ್ರಯತ್ನ ನಡೆಸದಿರಲಿಲ್ಲ. ದುರದೃಷ್ಟದಿಂದ ಅವರ ಪ್ರಯತ್ನ ಯಶಸ್ವಿಯಾಗಲಿಲ್ಲ.

೩

ಕೃಷ್ಣಮೂರ್ತಿ ಒಂದು ತಿಂಗಳ ರಜೆ ಪಡೆದು ಊರು ತಲುಪಿದ. ಅವನ ತಂದೆ ಹಾಗೂ ಹಿರಿಯಣ್ಣ ಆಸ್ತಿಗಳ ವ್ಯವಹಾರ ನೋಡಿಕೊಳ್ಳುತ್ತಿದ್ದರು. ಕೃಷ್ಣಮೂರ್ತಿ ದುಡಿಯಬೇಕಾದ ಆವಶ್ಯಕತೆಯೇ ಇರಲಿಲ್ಲ. ವರಮಾನ ಸಾಕಷ್ಟಿತ್ತು. ಮನೆಯಲ್ಲಿ ಕುಳಿತು ಕಾಲಕಳೆಯುವುದಕ್ಕಿಂತಲೂ ಉದ್ಯೋಗದಲ್ಲಿರುವುದು ಮೇಲೆಂದು ಬೆಂಗಳೂರಿನಲ್ಲಿ ಕೆಲಸಮಾಡುತ್ತಿದ್ದನಷ್ಟೆ.

ತಂದೆ ತಾಯಿ ಅಣ್ಣ ಎಲ್ಲರಿಗಿಂತಲೂ ಅತ್ತಿಗೆಯಲ್ಲಿ ಕೃಷ್ಣಮೂರ್ತಿಗೆ ಅಪರಿಮಿತ ಅಭಿಮಾನ, ವಿಶ್ವಾಸ ಅತ್ತಿಗೆ ಶಾರದಮ್ಮ ಅವನ ದುಗುಡವನ್ನು ಗಮನಿಸಿ "ಯಾಕೋ ಮೂರ್ತಿ ಹೀಗಿದ್ದೀಯಾ?" ಎಂದರು.

"ಹೇಗಿದ್ದೇನೆ? ಸರಿಯಾಗಿಯೇ ಇದ್ದೇನಲ್ಲ ಅತ್ತಿಗೆ" ಎಂದು ಜಾರಿಕೊಳ್ಳಲು ಪ್ರಯತ್ನಿಸಿದ ಕೃಷ್ಣಮೂರ್ತಿ. ತಾಯಿಗಿಂತಲೂ ಹೆಚ್ಚು ಅಕ್ಕರೆಯಿಂದ ಕಾಣುತ್ತಿದ್ದ ಅತ್ತಿಗೆಗೆ ಅವರ ಒತ್ತಾಯದ ಕಾರಣ ಇಂದಿರಾ ಸಂಗತಿ ನಡೆದ ಸಂಭಾಷಣೆ ಎಲ್ಲವನ್ನೂ ವಿವರವಾಗಿ ತಿಳಿಸಿ "ಎಲ್ಲವನ್ನೂ ತಿಳಿಸಿದ್ದೇನೆ ಅತ್ತಿಗೆ....ಏನು ಮಾಡೋದು ಹೇಳು" ಅಂದ.

"ನೀನು ಮೃದು ಸ್ವಭಾವದವನು ಏನೂ ಅರಿಯದವನು ಎಂದುಕೊಂಡಿದ್ದೆ. ಪರವಾಗಿಲ್ಲ" ಎಂದು ನಕ್ಕರು ಅತ್ತಿಗೆ ಶಾರದಮ್ಮ.

"ಪ್ಲೀಜ್ ಯಾರಿಗೂ ತಿಳಿಸಬೇಡ ಅತ್ತಿಗೆ ಅಮ್ಮ, ಅಣ್ಣನಿಗೆ ಗೊತ್ತಾದರೆ.."

"ಹೆದರಬೇಡಪ್ಪೋ ಆ ಹುಡುಗಿಗೆ ಹೇಳ್ತೀನೆ...."ಅಂತ ಎಂದರು ಶಾರದಮ್ಮ.

"ಕೃಷ್ಣಮೂರ್ತಿ ಒಳಕ್ಕೆ ನಡೆದ.

(ಹನ್ನೊಂದನೇ ಪುಟ ನೋಡಿರಿ)



ಕನ್ನಡಿಗರ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ವಿಶಿಷ್ಟ್ಯದ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳಗಣ್ಣಿನ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು= ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗಾಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವವು

ಶ್ರೀ ಕೆ ಕೆ ಶೆಟ್ಟಿ, ಎಂ.ಎಲ್.ಸಿ.ಯವರು ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕಾಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಡೆಮಿಯ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಲೇಖನ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.
ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ

ಮುಖಪತ್ರದಲ್ಲಿ:

ದಕ್ಷಿಣ ಕನ್ನಡದ ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲೊಂದಾದ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಬ್ರಹ್ಮರಥ

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೨೧	೨೧—೧—೧೯೬೫	No. 21

ಒರಿಸ್ಸಾದ ವಿದ್ಯಮಾನ

ಒರಿಸ್ಸಾದ ಮಂತ್ರಿ ಮಂಡಲದ ನಾಯಕತ್ವಕ್ಕೆ ಒಮ್ಮೆ ರಾಜಿನಾಮೆಯಿತ್ತು ಮತ್ತೆ ಅದೇ ಸ್ಥಾನಕ್ಕೆ ಆಯ್ಕೆಗೊಂಡಿದ್ದ ಬಿರೇನ್ ಮಿತ್ರ ಈಗ ಮರಳಿ ರಾಜೀನಾಮೆ ಒಪ್ಪಿಸುವ ಸಂದರ್ಭ ಬಂದಿದೆ. ಪಂಜಾಬಿನ ಅನಭಿಷಿಕ್ತ ದೊರೆಯೆನಿಸಿದ್ದ ಪ್ರತಾಪ ಸಿಂಹ ಕೈರೋನರ ಮೇಲೆ ಭ್ರಷ್ಟಾಚಾರದ ಆರೋಪವು ಬಿದ್ದು ಅವರ ಪದಚ್ಯುತಿಗೆ ಅದುವೇ ಕಾರಣವಾಗಿತ್ತು. ಸುಮಾರು ಅದೇ ಸಮಯಕ್ಕೆ ಒರಿಸ್ಸಾದ ನಾಯಕರ ಮೇಲೆಯೂ ಅಂತಹುದೇ ದೋಷ ಆರೋಪಿಸಲ್ಪಟ್ಟಿತ್ತು. ಅದೇನೋ ಕೆಲವು ಸಮಯ ಆರೋಪದ ಬಗ್ಗೆ ವಾದ—ಪ್ರತಿವಾದಗಳಲ್ಲೇ ಕಳೆಯಿತು. ಈ ನಡುವೆಯೇ ಕೇರಳದ ಶಂಕರ ಸಂಪುಟ ಇಂತಹ ಅಪವಾದಗಳನ್ನೇ ಹೊತ್ತು ಸನ್ನವರಿಂದಲೇ ಪದಚ್ಯುತವಾಯಿತು. ಇದೀಗ ಕೇಂದ್ರ ಸಚಿವ ಸಂಪುಟವು ಬಿರೇನ್ ಮಿತ್ರರೂ ಕೆಲವೊಂದು ವಿಷಯಗಳಲ್ಲಿ ಅಪರಾಧಿಗಳೆಂದು ಅಭಿಪ್ರಾಯಪಟ್ಟಿದೆ. ತನ್ನ ಅಭಿಪ್ರಾಯವನ್ನು ಅದು ಮಿತ್ರರಿಗೂ ತಿಳಿಸಿದೆ. ಮಿತ್ರರ ಸರ್ವಾಧಿಕಾರಿಯಾಗಿದ್ದ ಬಿಜಯಾನಂದ ಪಟನಾಯಕರನ್ನೂ ಅದು ಎಳೆದುಕೊಂಡು ಅವರನ್ನೂ ಮಿತ್ರರ ಸಾಲಿಗೆ ಸೇರಿಸಿದೆ.

ಒರಿಸ್ಸಾದ ಈ ಬಗೆಯ ಆರೋಪಗಳು ಒಂದು ಕಾಲ ಹಿಂದಿನವು. ಬಿಜಯಾನಂದ ಪಟನಾಯಕರು ಹಿಂದಿನ ಪ್ರಧಾನಿ ನೆಹರೂರವರಿಗೆ ಬೇಕಾಗಿದ್ದವರಾದರೂ ಕಾಮರಾಜ ಸೂತ್ರದಿಂದ ಜಗ್ಗಲ್ಪಟ್ಟರು. ಒಮ್ಮೆಗೆ ತಣ್ಣಗಾದ ವಾತಾವರಣವು ಕೈರೋನರ ಪದಚ್ಯುತಿಯಿಂದ ಮತ್ತೆ ಕಲುಷಿತಗೊಂಡಿತು. ಅನುಗರಿಂದಲೇ ಪಟನಾಯಕ—ಮಿತ್ರರು ಇಂದು ಒಟ್ಟಾಗಿಯೇ ಆರೋಪವನ್ನು ಹೊರಬೇಕಾಗಿ ಬಂತು. ಲಂಚಗುಳಿತನವು ಆಡಳಿತೆಯಲ್ಲಿ ಶಿಥಿಲತೆಯನ್ನು ತರುವುದು; ಅಧಿಕಾರಿಗಳ ಸದ್ಭಾವನೆಯು ಅವರ ಮುಳುವಿಗೆ ಕಾರಣವಾಗುವುದು. ಪ್ರಜಾಪ್ರಭುತ್ವದಲ್ಲಿ ಯಾವ ಪಕ್ಷಪಾತಗಳಿಗೂ ಅವಕಾಶವಿಲ್ಲ. ಜನರಿಗಾಗಿ ಜನರ ಪ್ರಭುತ್ವವಿರುವುದರಿಂದ ಅದು ನಿಷ್ಕಲುಷವಾಗಬೇಕು. ಯಾವ ಮಂತ್ರಿಯೇ ಇರಲಿ, ಪ್ರಜೆಗೆ ಪ್ರಜಾಪ್ರಭುತ್ವಕ್ಕೆ ದ್ರೋಹ ಬಗೆದನೆಂದರೆ, ಆತನು ಅಧಿಕಾರದಿಂದ ಹೊರ ಬರಲೇಬೇಕು. ಶಾಸ್ತ್ರಿಯವರ ಮಂತ್ರಿಮಂಡಲವು ಈ ದಿಸೆಯಲ್ಲಿ ದೃಢವಾದ ನಿಲುಮೆಯನ್ನು ತಳೆದಿದೆಯೆಂದು ಒರಿಸ್ಸಾದ ಈ ಘಟನೆಯಿಂದ ತಿಳಿಯಬಹುದು. ಪಟ್ಟ ಭದ್ರಪಡಿಸಿಕೊಳ್ಳುವುದಕ್ಕಾಗಿ ದಿನವಿಡಿ ಚಿಂತಿಸಿ, ಪ್ರಜಾಪ್ರಭುತ್ವಕ್ಕೆ ಅಪಚಾರವೆಸಗುವವರು ಪಟ್ಟದಿಂದ ಜಾರಿಯೇ ಹೋಗಬೇಕು. ಜನತೆಯ ಪ್ರತಿನಿಧಿ ಸ್ಥಾನದಲ್ಲಿರುವವರು ಜನತೆಯ ಸುಖ ದುಃಖಗಳನ್ನು ಸಾಮೂಹಿಕವಾಗಿ ಲಕ್ಷ್ಯಿಸಬೇಕೇ ಹೊರತು ಯಾವುದೇ ಒಂದು ವರ್ಗದ ಹಿತವನ್ನಲ್ಲ; ಒಬ್ಬನ ಹಿತವನ್ನಂತೂ ಅಲ್ಲವೇ ಅಲ್ಲ.

ಪಟನಾಯಕರು ಅಧಿಕಾರದಿಂದ ಬಹುಗಡೆ ಹೊಂದಿದ್ದಾರೆ; ಆದರೂ ಕಾಂಗ್ರೆಸ್ ಸಂಸ್ಥೆಯಲ್ಲಿ ಅವರದೇ ಕೈವಾಡವಿನ್ನೂ ಇದೆ. ಮಿತ್ರರನ್ನೇ ತನ್ನ ಉತ್ತರಾಧಿಕಾರಿಯನ್ನಾಗಿ ಆರಿಸುವಲ್ಲಿ ಹಾಗೂ ರಾಜಿನಾಮೆಯಿತ್ತ ಅವರನ್ನೇ ಮತ್ತೆ ಆಯ್ದುಕೊಳ್ಳುವಂತೆ ಮಾಡುವಲ್ಲಿ ಅವರ ಕೈ ಬಹಳಷ್ಟು ಸಾಹಸವೆಸಗಿದೆ; ಕಾಂಗ್ರೆಸ್ ಹೈಕಮಾಂಡನ್ನೂ ಅವರು ದಿಗ್ಭ್ರಮೆಗೊಳಿಸಿದ್ದಾರೆ. ಆದರೆ, ಜಾರುತ್ತಿರುವ ಮಿತ್ರರು ಇವರದನ್ನೂ ಕೈ ಹಿಡಿದೆಳೆದು ಬಿಟ್ಟರು. ಒರಿಸ್ಸಾದ ಈ ನಾಯಕದ್ವಯರ ಆಚರಣೆಯ ಬಗ್ಗೆ ಕೇಂದ್ರದ ಅಭಿಪ್ರಾಯದ ಮೇಲೆ ತಮ್ಮದನ್ನು ವ್ಯಕ್ತಪಡಿಸಲು ಅವಕಾಶವೀಯಬಹುದು. ಆಗ ಅವರು ಆರೋಪಗಳನ್ನು ಅಲ್ಲಗಳೆಯಲೂ ಬಹುದು. ಕಾಂಗ್ರೆಸ್ ಹೈಕಮಾಂಡು ಆಗ ಯಾವ ಕ್ರಮಕೈಗೊಳ್ಳುವುದೆಂದು ಈಗಲೇ ಹೇಳುವಂತಿಲ್ಲ; ಅಂತಹ ವಿಷಮ ಸನ್ನಿವೇಶ ಬಾರದಿರಲಿ—ಆರೋಪಿಗಳೆಂದು ಒಮ್ಮೆ ಬಹಿರಂಗವಾದ ಮೇಲೆ ಮಿತ್ರರು ಮುಖ್ಯ ಮಂತ್ರಿಯಾಗಿ ಮುಂದುವರಿಯಲು ಹೈಕಮಾಂಡು ಒಪ್ಪಿಗೆ ಕೊಡದು ಸಾಧ್ಯವಿಲ್ಲ. ಪ್ರಧಾನಿ ಶಾಸ್ತ್ರಿಯವರೂ ಇತ್ತೀಚೆಗೆ ಮಿತ್ರರು ರಾಜಿನಾಮೆ ನೀಡುವುದೇ ಉಚಿತವೆಂದು ಅಂದಿದ್ದಾರೆಂದು ವರದಿ. ಆರೋಪ ಹೊರುವಲ್ಲಿ ಕೈರೋನರಂತಾದ ಅವರು ಅಧಿಕಾರ ತ್ಯಜಿಸುವಲ್ಲಿಯೂ ಅವರನ್ನೇ ಹಿಂಬಾಲಿಸಿ ಪ್ರಜಾಪಕ್ಷಕ್ಕೆ ಇದೊಂದಾದರೂ ಆದರ್ಶವನ್ನು ಹಾಕಿಕೊಡುವರೆಂದು ವಿಶ್ವಾಸವಿಡಬಹುದೆ?

ಮಿತ್ರರು ರಾಜಿನಾಮೆಯಿತ್ತ ಮಾತ್ರಕ್ಕೆ ಅಲ್ಲಿನ ಸಮಸ್ಯೆ ಮುಗಿಯಿತೆಂದು ಹೇಳುವಂತಿಲ್ಲ. ಅವರ ಉತ್ತರಾಧಿಕಾರಿಯನ್ನು ಆಯ್ದುಕೊಳ್ಳುವಲ್ಲಿಯೂ ಚದುರಂಗದಾಟವೇ ಆಡುವುದು ಅಸಾಧ್ಯವಲ್ಲ. ಆದುದರಿಂದ ಕಾಂಗ್ರೆಸ್ ಹೈಕಮಾಂಡು ಈಗ ಅತೀವ ಎಚ್ಚರಿಕೆ ತೋರಿಸಬೇಕು. ಇಲ್ಲಿ ತಾನು ತಪ್ಪಿತೆಂದರೆ, ಕೇರಳದಂತೆಯೇ ರಾಷ್ಟ್ರಪತಿ ಆಳಿಕೆಯೇ ಒರಿಸ್ಸಾದ ನಾಗರಿಕರ ಪಾಲಿಗೆ ಬಂದೀತು. ಲಂಚಾಸುರನಿಗೆ ಎರಡು ಆಹುತಿ ಪ್ರತ್ಯಕ್ಷವಾಗಿ ನೀಡಿದಂತಾಯಿತು. ಇನ್ನು ಮೂರನೆಯ ಬಲಿ ಯಾರದು?

ವಚನ ಸುಧೆ

ಪುಷ್ಪಿಣ್ಯೌ ಚರತೋ ಜಂಘೇ
ಭೂಷ್ಣುರಾತ್ಮಾ ಫಲಗ್ರಹಿಃ||

(ಐತರೇಯ ಬ್ರಾಹ್ಮಣ ೭—೧೫)

O ನಡೆಯುವ ಅಭ್ಯಾಸವಿರುವವನ ತೊಡೆಗಳು ಪುಷ್ಟವಾಗಿರುತ್ತವೆ. ಪುರುಷಾರ್ಥಿಯಾದ ಮಾನವನ ಆತ್ಮವು ಉನ್ನತಿ ಹೊಂದುವುದು, ಫಲಪ್ರಾಪ್ತಿಯಾಗುವವರೆಗೂ ದುಡಿಯುವುದು.

OO ವ್ಯಾಯಾಮ ಮಾಡುವವನ ದೇಹವು ಪರಿಪುಷ್ಟವಾಗಿಯೂ ಬಲಶಾಲಿಯಾಗಿಯೂ ಇರುವುದು; ವ್ಯಾಯಾಮ ಮಾಡದವನು ನಿರ್ಬಲನಾಗುವನು. ಫಲ ದೊರೆಯುವ ವರೆಗೆ ಕಾರ್ಯ ಮಾಡುವುದರಿಂದ ಮಾನವನು ಉನ್ನತನಾಗುವನು.

ಪ್ರಸವಿಸುವ ಪರ್ವತ

ಇದೇ ಜನವರಿ ೨೬ರಿಂದ ಹಿಂದೀ ಭಾಷೆಯು ಭಾರತದ ರಾಜ ಭಾಷೆಯಾಗುವುದು. ಅದರೊಡನೆ ಇಂಗ್ಲಿಷ್ ಕೂಡಾ ತನ್ನ ಈಗಿನ ರೀತಿಯಲ್ಲೇ ಉಳಿಯುವುದು. ಹಿಂದೀ ಭಾಷೆಯನ್ನು ಒತ್ತಾಯದಿಂದ ಹೇರುವುದಿಲ್ಲವೆಂಬ ಭರವಸೆಯನ್ನು ಅಹಿಂದೀ ಭಾಷಾ ಪ್ರದೇಶಗಳಿಗೆ ನೀಡುವ ಕಾರ್ಯ ನಡೆಯುತ್ತಲೇ ಇದೆ. ಇದಕ್ಕಾಗಿಯೇ ಹಿಂದೀ—ಇಂಗ್ಲಿಷ್‌ಗಳ ಪ್ರಯೋಗ. ಇದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಇಲ್ಲಿ ನಾವು ಯೋಚಿಸಬೇಕಾದ ವಿಚಾರವೆಂದರೆ ಇಂತಹ ಕಾರ್ಯಾಚರಣೆಯ ವೆಚ್ಚವನ್ನು! ಕೇಂದ್ರ ಸರಕಾರವು ರಾಜ್ಯ ಸರಕಾರಗಳೊಡನೆ ವ್ಯವಹರಿಸಬೇಕು—ಅದರೊಡನೆ ಪತ್ರದ ಇಂಗ್ಲಿಷ್ ಅನುವಾದವನ್ನೂ ಇಡಬೇಕು! ಪಾರ್ಲಿಮೆಂಟುಗಳಿಗಾಗಿ ವಿಧೇಯಕಾದಿಗಳನ್ನು ಎರಡೂ ಭಾಷೆಗಳಲ್ಲಿ ಸಿದ್ಧಪಡಿಸಿ ಇಡಬೇಕು! ಇದೇ ಮಾದರಿ ಎಲ್ಲೆಲ್ಲೂ. ಮಿತವ್ಯಯದ ಅಗತ್ಯವಿರುವ ಈ ಕಾಲದಲ್ಲಿ ಇದಕ್ಕಾಗಿ ಮಾಡುವ ವೆಚ್ಚ ಕೇವಲ ಹಿಂದೀ ವಾದಿಗಳ ಸಂತೃಪ್ತಿಗಾಗಿ ಮಾತ್ರವಲ್ಲವೆ? ಹಿಂದಿಯ ಪ್ರಚಾರ ಭರದಿಂದ ಸಾಗುತ್ತ ಬಂದಂತೆ ಅಹಿಂದೀ ಭಾಷಿಗಳೂ ಹಿಂದಿಯನ್ನು ಸ್ವೀಕರಿಸಲು ಸಿದ್ಧರಾಗಿಯೇ ಆಗುತ್ತಾರೆ. ಆ ಸುದಿನ ಬೇಗನೆ ಬಂದರೂ ಬರಬಹುದು. ಅದುವರೆಗೆ ಕಾದರೆ, ಅದರಿಂದ ಯಾರಿಗೆ ನಷ್ಟ. ವಾದೀ ಶಿರೋಮಣಿಗಳು ಕೃಷ್ಣಶಕ, ಹಿಂದಿಯೊಡನೆ, ಕಿಲೋಮೀಟರ್ ನೊಡನೆ ಮೈಲು—ಇಂಗ್ಲಿಷ್, ಈ ಕೊಂಡಿ ಪ್ರಸವಿಸಬಹುದಾದ ಪರ್ವತವಾವುದು?

ನರಸಣ್ಣನ ಸರಸ



"ರಾಜ್ಯದೊಳಗೆ ಆಹಾರ ಧಾನ್ಯ ಸಾಗಾಟಕ್ಕೆ ಪ್ರತಿಬಂಧವಿಲ್ಲೆಂತ ಮಂತ್ರಿಗಳು ಭಾಷಣ ಬಿಗಿದ್ರೂನೂ ಅಕ್ಕೀ ಸಾಗಾಟಾನೇ ಬಂದು ಬಿದ್ದಿದೆ ಸ್ವಾಮಿ. ಯಾರಲ್ಲಿ ಕೇಳಿದ್ರೂ ಆದೇಶಂದು ಕೇಳ್ತೇದಿ ಅಂತಾನೇ ಉತ್ತರ...."

ಗೇಹ ರಾಜ್ಯದಲ್ಲಿ

ಊಟಕ್ಕಿಲ್ಲದ ಉಪ್ಪಿನಕಾಯಿ



"ಬರೋವಾಗ ಹಡವಾಗುತ್ತೇಂತ ಅಂದವ್ರು ಬೇಗ್ನೇ ಬಂದು ಬಿಟ್ರಲ್ಲಾ..."

"ಏನಂತೆ ಅದು ಮಹಾಪರಾಧ ವಾಯ್ತು?'

"ಅಲ್ಲಾ, ಅಪರಾಧಾಂತ ಹೇಳಿದ್ರಾದ್ರೂ ಯಾರೂಂತ?'

'ಮತ್ತೆ, ಮಾತಿನ ಧಾಟಿ ನೋಡುವಾಗ ದೋಷಾರೋಪಣೆ ಮಾಡುವ ಹಾಗೇನೇ ಇದೆ. ."

'ಏನೋಪ್ಪ. ನಿಮ್ಮೊಡನೆ ಮಾತಾಡೋದೆಂದ್ರೆ ಈಗೀಗ ಭಾರಿ ಕಷ್ಟವಾಗ್ತಾನೇ ಇದೆ."

"ಯಾಕೆ? ಏನಾಯ್ತೀಗ?..."

"ಆಗೋದೇನು? ಏನೂ ಇಲ್ಲ."

"ಮತ್ತೆ ಯಾಕೆ ಅಂತಹ ಉದ್ಗಾರ ಹೊರಟಿತೂಂತ?"

"ಗೊತ್ತಾಗೋದಿಲ್ವೆ? ನಿಮ್ಮನಸ್ಸಿಗೆ?"

"ನಂಗೇನೂ ತಿಳಿಯೋದಿಲ್ಲ....

"ತಿಳೀದಿದ್ರೆ ಬಿಟ್ಟುಬಿಡಿ...."

"ಹಿಡಿದದ್ದನ್ನ ಅಷ್ಟು ಸುಲಭವಾಗಿ ಬಿಡೋಕಾಗುತ್ಯೆ?"

"ಬೇಡಾಂತಾದ ಮೇಲೆ ಮತ್ತೆ ಮಾಡೋದಾದ್ರೂ ಏನು?"

"ಯಾರಿಗೆ ಬೇಡವಾಗಿರೋದು?"

"ಎಂಥದು?"

"ಅದೇ, ನೀನು ಬಿಟ್ಟುಬಿಡಿ ಅಂದಿರಲ್ಲಾ ಅದು ಅಲ್ಲಾ, ನಂಗೇನೂ ತಿಳಿಯೋದೂಂತಂದ ಮೇಲೆ ತಿಳಿಸವ್ರಾದ್ರೂ ಹೇಳ್ಬೇಕಲ್ಲಾ..."

"ಇಲ್ಲಿ ತಿಳಿದಿರೋದಾದ್ರೂ ಯಾರಿಗೆ?"

"ಸದ್ಯ ಹಾಗೇ ಹೇಳದೆ ಬಿಡು. ಪುಣ್ಯಕ್ಕೆ...."

"ಏನು?"

"ಏನಿಲ್ಲಾ ಬಿಟ್ಟುಬಿಡಿ..."

"ಒಳ್ಳೇ ಕತೆಯಾಯ್ತಲ್ಲಾ ಇದು....!"

"ಯಾವುದು?"

"ಅದೇ ನೋಡಿ. ನಾನು ಅಂದದ್ದಕ್ಕೆ ನಿಮ್ಮ ಮಾತು ಅಲ್ವೆ? ಅಷ್ಟೂ ನನಗೆ ತಿಳಿಯದೆ?"

"ಹ್ಞಾಂ. ಸದ್ಯ ನಿನಗೆ ತಿಳಿವು ಇದೇಂತಾಯ್ತು. ಇದ್ರ ಅರ್ಥ...."

"ಛೇ ಛೆ ... ಹಾಗೆಲ್ಲಾ ಅನ್ನಬೇಡಿ ಮತ್ತೆ. ಸುಂಸುಮ್ನೆ ಒಂದಕ್ಕೆ ಇನ್ನೊಂದು ತಿಳ್ಕೊಂಡು...."

"ಅಂದ್ರೆ, ನನಗೂ ತಿಳಿವು ಇದೇಂತ ಒಪ್ಕೊಂಡ ಹಾಗಾಯ್ತು. ಬದುಕಿದೇ ಅನ್ನು...."

"ನಿಮ್ಗೇನು? ಕತ್ತೇ ಅಂತಾನೂ ಅನ್ನೀರಿ. ಬದ ಕಿದೇಂತಾನೂ ಅನ್ನೀರಿ. ಆದ್ರೆ ಅಂದ ಮಾತ್ರಕ್ಕೆ ಹಾಗೆ ಆಗೋದುಂಟೆ?"

"ಅಯ್ತಲ್ಲ ಮತ್ತೆ ಸರಿ. ನಾನೇನನ್ನಿ ಕತ್ತೆ ಇಲ್ಲಾಂತ ಅಲ್ವ?"

"ಯಾರು ಹಾಗಂದ್ರು? ಅನ್ನಿ. ಏನೇ ಸ್ವೀಕೋ ಅದನ್ನೆಲ್ಲಾ ಅಂದ್ಕೊಳ್ಳಿ .."

"ಅಂದು ಕೊಳ್ಳೋದ್ರಿಂದ ಏನು ಬಂತೆ?"

"ಮತ್ತೆ ಅನ್ನೋದಾದ್ರೂ ಯಾಕೆ?"

"ಅನ್ನ ವ್ರಣ್ಣೋದು ಯಾಕೇಂತ ಕೇಳ್ಲಿಲ್ಲ."

"ಅದೂ ಕೇಳೋ ಕಾಲ ಬಂದೀತು."

"ಬಂದೀತೇನ? ಬಂತೂನ್ನು. ."

"ನೋಡಿ, ನಿಮ್ಮ ಟೋಪಿಯೊಡೆಯರು ಎನ್‌ಜಿವೋಗಳಿಗೆ ಹೊಸ ವರ್ಷದ ಉಡುಗೊರೆ ಕೊಟ್ರಲ್ಲಾ. ."

"ಕೊಟ್ಟಿದ್ದು ಎಲ್ಲಿ? ಕೊಡ್ತೇವೇಂತ ಆರ್ಡರು ಮಾಡಿದ್ದಾರೆ.. ."

"ಆದ್ರೆ, ಅದು ನಮಗೆ ಕಡಿಮೆಯಾಯ್ತೂಂತ ಹೇಳಿ ನಿರಾಕರಿಸುತ್ತಾರಂತಲ್ಲಾ...."

"ಹೌದಂತೆ .."

"ಅದೇ ನೋಡಿ, ನಮ್ಮ ತಿಮ್ಮ ಹೇಳಿದ್ದ .."

"ತಿಮ್ಮನೂ ಕೇಳ್ತಾನೆ, ಮಂಗನೂ ಹೇಳ್ತಾನೆ."

"ಏನೂಂತ?

"ಕೇಳಿದವ್ರಿಗೇ ಗೊತ್ತು ... ಹೇಳು ಮತ್ತೆ...."

"ಹ್ಞ .. ಏನೋ ದೇವ್ರು ಕೊಟ್ರೂ ಪೂಜಾರಿ ಕೊಡಾಕೆ ಬಿಡೋಲ್ಲಾಂತಂದ ಹಾಗೆ..."

"ಹೌದು, ಕೊಡೋದೇವ್ರು ಭಕ್ತನ ಆಶೇನೆಲ್ಲಾ ಪೂರೈಸುವಂತೆ ಕೊಡ್ಬೇಕೂಂತ ಇರ್ಬಹುದು."

"ಮತ್ತಲಿಂದ ಅಷ್ಟಾದ್ರೂ ಕೊಟ್ರಲ್ಲ, ಕೊಟ್ಟದ್ದನ್ನ ಸಂತೋಷದಿಂದ ತೆಗದು ಕೊಂಡು ಮತ್ತೆ ಕೇಳ್ಬೇಕಿತ್ತು ಇನ್ನೂ ಕೊಡೀರಿ ಅಂತ...."

"ಅವನ ಮಟ್ಟಿಗೆ ಅದು ಸರೀನ್ನು..."

"ಯಾಕೆ?"

'ಯಾಕೇಂತಂದ್ರೆ? ಕೊಡೋರಾದ್ರೂ ಒಂದೇ ಸಲ ಎಲ್ಲಿಂದ ಕೊಟ್ಟಾರು.?"

"ಆದ್ರೆ ನೋಡಿ, ಅರೆ ಹೊಟ್ಟೆ ಉಂಡು ನರಳೋದಕ್ಕಿಂತ, ಉಪವಾಸ ಬಿದ್ದು ಸಾಯೋದೇ ಮೇಲು....'

"ಭಾರಿ ಚಲೋ ಮಾತು ಅಂದೆ ಕಣೇ...... ಇದನ್ನ ಎಲ್ಲರೂ ಅನುಕರಿಸಿದ್ರೆ, ದೇಶದ ಆಹಾರವನ್ನೆಲ್ಲಾ ಚೀನಾಕ್ಕೆ ರಫ್ತು ಮಾಡಬಹುದು...."

"ಅಂದ್ರೆ?"

"ಅಂದ್ರೆ ಏನೂಂತೀಯ? ಇವತ್ತು ದೇಶದಲ್ಲಿ ಹೊಟ್ಟೆ ತುಂಬ ಉಣ್ಣೋರು ಎಷ್ಟು ಮಂದೀಂತ ಅನ್ನಿ?"

ನನ್ಗೇನು ಗೊತ್ತು?"

"ಗೊತ್ತಿಲ್ಲಾಂತನ್ನ ಆದ್ರೂ ಅಂದಾಜು."

"ಇರ್ಬಹುದು ಎರಡರಲ್ಲಿ ಒಂದಾದಷ್ಟು...."

"ಇಲ್ಲಾ ಮೂರರಾಯ್ತು ಅಷ್ಟೂ ಇಲ್ಲ."

"ಏನಂತೀರಾ ನೀವು?"

"ಅನ್ನೋದೇನು ಇದ್ದಷ್ಟೇ ಅನ್ನು. ನಿನ್ನ ತಿಮ್ಮನನ್ನೇ ತೆಗೆದುಕೋ. ಅವನಿಗೆ ಬರೋ ಎಪ್ಪತ್ತೈದು ರೂಪಾಯಿಲಿ ಅತ ಎಂಟೋ—ಹತ್ತೋ ಜೀವಗಳನ್ನ ಸಾಕೋದು ಹೇಗೇಂತ?"

"ಅದೇ ನೋಡಿ ಅನ್ನುತಿದ್ದದ್ದು ಅವ!"

"ಅವ ಅನ್ನೋದೂ ಅದನ್ನೇ, ನಾನು ಅನ್ನೋದೂ ಅದನ್ನೇ ..."

"ಹಾಗಾದ್ರೆ...."

"ಏನೂ ಇಲ್ಲ. ಸರೀ ಲೆಕ್ಕಾಚಾರ ಮಾಡಿ ನೋಡಿದ್ರೆ, ನೂರಕ್ಕೆ ಒಬ್ಬನೂ ಇಲ್ಲ. ಮತ್ತೂ ನೋಡು. ಐದು ರೂಪಾಯಿ ಏರುತ್ತೆ ಭತ್ತೇಂತ ಬಹಿರಂಗವಾಗೋದ್ರೊಳಗೇ ಇಪ್ಪತ್ತು ರೂಪಾಯಿಯಷ್ಟು ಬೆಲೇನೂ ಏರಿಬಿಟ್ತು. ಹಾಗಿರುವಾಗ ಯಾರಾದ್ರೂ ಮಾಡೋದೇನು?'

"ಹೌದಪ್ಪ ಅಂತೂ ನೌಕರಿಯವ್ರ ಗತಿ ಹೀಗೇನೇ ಅನ್ನಿ..."

"ಎಲ್ರ ಗತಿನೂ ಅಷ್ಟೇ. ಹಣದ ವ್ಯವಹಾರ ಹೆಚ್ಚಾಗ್ತಾ ಬಂದ ಹಾಗೆ ಮಾಲುಗಳ ಬೆಲೆ ಏರುತ್ತಲೇ ಇರುತ್ತೆ. ಸುಮ್ನೆ ಉದಾಹರಣೆ ನೋಡು, ಮನೇ ಬಾಡಿಗೆ ಹತ್ತು ಹೋಗಿ ಇಪ್ಪತ್ತು ಆಗೋವಾಗ, ಎರಡು ರೂಪಾಯಿ ಭತ್ತೆ ಹೆಚ್ಚಿಸಿದ್ರೆ ಸಾಕೆ?"

"ಎಲ್ಲಾ ಗೋಳೇ ಎನ್ನಿ...'

"ಹೌದು, ನಾಯಕರು ಅನ್ನುತ್ತಿಂದ್ರೆ... ಆರ್ಥಿಕಾಭಿವೃದ್ಧಿಯತ್ತ ಸಾಗುತ್ತಿರುವಾಗ ಇದೆಲ್ಲಾ ಸ್ವಾಭಾವಿಕ. ಆದ್ರೂ ದೇಶದ ಸ್ಥಿತಿ ಗಟ್ಟಿಯಾಗಿಯೇ ಇದೇಂತ....'

(ಒಂಭತ್ತನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p a.	7ರಿಂದ 11 ತಿಂಗಳು % p a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು. % p. a.	36ರಿಂದ 47 ತಿಂಗಳು. % p a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು % p. a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್]
ರಿಜಿಸ್ಟರ್ಡ್ ಆಫೀಸು:— ಕೋರ್ಟ್ ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ಕೃಷಿಕ ರಂಗ

ಭವಿಷ್ಯವನ್ನು ಕಡೆಗಣಿಸ ಬೇಡಿರಿ

ಈ ತಿಂಗಳು ಸಂಕ್ರಾಂತಿ ಸಂಭ್ರಮ. ದೇಶದ ಅನೇಕ ಭಾಗಗಳಲ್ಲಿ ಬೆಳೆ ಹುಲುಸಾಗಿ ಬಂದು ಈಗ ತಾನೆ ಕಟಾವು ಮಾಗಿದಿದೆ. ಬಂದ ಫಸಲನ್ನು ಜಾಗ್ರತೆಯಿಂದ ಸಂಗ್ರಹಿಸಬೇಕು. ಇಲ್ಲವೇ ಚಾಣಾಕ್ಷತನದಿಂದ ಒಳ್ಳೆಯ ದರ ಬರುವುದನ್ನೇ ಕಾದುಕೊಂಡಿದ್ದು ಸಹಕಾರಿ ಸಂಘಗಳ ಮೂಲಕ ಮಾರಬೇಕು. ಸಹಕಾರಿ ಸಂಸ್ಥೆಗಳನ್ನು ಏರ್ಪಡಿಸಿಕೊಂಡು ಅವುಗಳ ಮೂಲಕ ಮಾರುವುದಾಗಲಿ, ಕೊಳ್ಳುವುದಾಗಲಿ ಮಾಡದಿದ್ದರೆ ರೈತರಿಗೆ ನಷ್ಟ ಖಂಡಿತ. ಸಂಕ್ರಾಂತಿ ಸುಗ್ಗಿಯ ಉತ್ಸವದಲ್ಲಿ ಬೇಸಿಗೆ ಬೆಳೆಗಳನ್ನು ಮರೆಯದೆ ಈಗ ಕೈಗೆ ಬಂದಿರುವುದನ್ನು ಜೋಪಾನ ಮಾಡಿದರೆ ರೈತರಿಗೂ ಏಳಿಗೆ, ದೇಶಕ್ಕೂ ಏಳಿಗೆ.

ಭತ್ತದ ಸಂಗ್ರಹ

ಭತ್ತವನ್ನು ಸಂಗ್ರಹಿಸುವಾಗ ಅನೇಕ ಮುಂಜಾಗರೂಕತೆಯ ಕ್ರಮಗಳನ್ನು ಗಮನದಲ್ಲಿಡಬೇಕು. ಸಂಗ್ರಹಿಸಿಟ್ಟ ಭತ್ತಕ್ಕೆ ಅನೇಕ ರೀತಿಗಳಲ್ಲಿ ಹುಳುಗಳು ಬೀಳುವುವು. ಭತ್ತದ ಕಾಳಿನಲ್ಲಿ ಶೇಕಡ ೧೦ಕ್ಕಿಂತ ಹೆಚ್ಚಿನ ತೇವಾಂಶವಿದ್ದರೆ ಹುಳುಗಳ ಅಭಿವೃದ್ಧಿಗೆ ಪುಷ್ಟಿ ಕೊಟ್ಟಂತಾಗುವುದು. ಆದದರಿಂದ ಭತ್ತವನ್ನು ಸಂಗ್ರಹಿಸುವ ಮುಂಚೆ ಇಲ್ಲಿ ತಿಳಿಸಿರುವ ಸೂಚನೆಗಳಿಗೆ ಗಮನ ಕೊಡಿ—

೧) ಭತ್ತ ಸಂಗ್ರಹಿಸುವ ಉಗ್ರಾಣವನ್ನು ಚೆನ್ನಾಗಿ ಶುಭ್ರಗೊಳಿಸಿ—ನೆಲ, ಗೋಡೆ ಮತ್ತು ಮೇಲ್ಛಾವಣಿಗಳಿಗೆ ಶೇಕಡ ೧೦ರ ಬಿ. ಹೆಚ್. ಸಿ. ಪುಡಿಯನ್ನು ತೆಳುವಾಗಿ ಹರಡಬೇಕು.

೨) ಉಗ್ರಾಣದ ಗೋಡೆ ಅಥವಾ ನೆಲದಲ್ಲಿ ಬಿರುಕುಗಳಿದ್ದರೆ ಅವನ್ನು ಸಿಮೆಂಟಿನಿಂದ ಮುಚ್ಚಬೇಕು.

(೩) ಗೋಣಿ ಚೀಲಗಳಲ್ಲಿ ಭತ್ತವನ್ನು ಸಂಗ್ರಹಿಸುವುದಾದರೆ ಚೀಲಗಳಿಗೆ ತುಂಬುವ ಮುಂಚೆ ಭತ್ತವನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು.

(೪) ಬೀಜಕ್ಕಾಗಿ ಇಡುವುದಾದರೆ ಭತ್ತವನ್ನು ಒಣಗಿಸಿದ ನಂತರ ಪ್ರತಿ ನೂರು ಪೌಂಡು ಭತ್ತಕ್ಕೆ ನಾಲ್ಕು ಔನ್ಸಿನಷ್ಟು ಬಿ. ಹೆಚ್. ಸಿ. (ಶೇ. ೧೦ರ) ಪುಡಿಯನ್ನು ಬೆರಸಬೇಕು. ಇದು ಬೀಜದ ಭತ್ತವಾದ್ದರಿಂದ ಮತ್ತು ಇದರಲ್ಲಿ ಬಿ. ಹೆಚ್. ಸಿ ಇರುವುದರಿಂದ ತಿನ್ನುವ ಭತ್ತದಿಂದ ಇದನ್ನು ದೂರವಿಡಬೇಕು; ಎಚ್ಚರಿಕೆ. ಭತ್ತವನ್ನು ಆಗಿಂದಾಗ್ಗೆ ಬಿಸಿಲಿನಲ್ಲಿ ಒಣಗಿಸಿಡುವುದು ಉತ್ತಮ.

ಕಬ್ಬಿನ ಗದ್ದೆ

ಡಿಸೆಂಬರ್ ತಿಂಗಳಿನಲ್ಲಿ ಕಬ್ಬನ್ನು ನಾಟಿರಬಹುದು. ನಾಟಿಲ್ಲದಿದ್ದವರು ಇನ್ನು ತಡ ಮಾಡದೆ ಈ ತಿಂಗಳಿನಲ್ಲಿಯೇ ಕಬ್ಬಿನ ತುಂಡುಗಳನ್ನು ನಾಟಬೇಕು. ಸಾಲುಗಳ ದಿಂಡುಗಳ ಮೇಲೆ ಆರಿಸಿದ ಕಬ್ಬಿನ ತುಂಡುಗಳನ್ನು ಸಾಲಾಗಿ ಇಟ್ಟುಕೊಳ್ಳಬೇಕು. ಹಾಕಿದ ಗೊಬ್ಬರ ಕೊಚ್ಚಿಹೋಗದಂತೆ ಸಾಲುಗಳಲ್ಲಿ ಸ್ವಲ್ಪವಾಗಿ ನೀರು ಬಿಟ್ಟುಕೊಳ್ಳಬೇಕು.

ತುಂಡುಗಳನ್ನು ಒತ್ತಿ ಇಡುವುದಕ್ಕಿಂತ ಹಸಿ ಮಣ್ಣಿನಲ್ಲಿ ಹಗುರವಾಗಿ ಇಡುವುದು ಒಳ್ಳೆಯದು. ಆಗಾಗ್ಗೆ ಮಿತವಾಗಿ ಎಳೆಯ ಸಸಿಗಳಿಗೆ ಬಾಧಕವಾಗದಂತೆ ಮಣ್ಣಿನಲ್ಲಿ ತಕ್ಕಷ್ಟು ತೇವವಿರುವ ಹಾಗೆ ನೀರು ಹಾಯಿಸುತ್ತಿರಬೇಕು. ತುಂಡುಗಳನ್ನು ನಾಟಿದ ಹದಿನೈದು ದಿವಸಗಳಲ್ಲಿ ಮೊಳಕೆ ಕಾಣಿಸಿಕೊಳ್ಳುವುದು.

ಅಡಿಕೆ ತೋಟ

ಹಣ್ಣಾದ ಅಡಿಕೆಗಳನ್ನು ಜನವರಿಯಲ್ಲಿ ಕೊಯ್ಯಬಹುದು. ಕೊಯ್ಯಲು ಯೋಗ್ಯವಾದ ಗೊಂಚಲುಗಳನ್ನು ಹಗ್ಗದ ಮೂಲಕ ಕೆಳಗಿಳಿಸಬೇಕು. ಬಿತ್ತನೆಗೆ ಉಪಯೋಗಿಸುವುದಾದರೆ ಗುರುತಿಸಿದ ತಾಯಿಮರಗಳ ಮಧ್ಯದ ಎರಡನೆ ಮತ್ತು ಮೂರನೆ ಗೊಂಚಲುಗಳಿಂದ ಮರದಲ್ಲೇ ಹಣ್ಣಾದ ಬೀಜಗಳನ್ನು ಉಪಯೋಗಿಸಬೇಕು. ಚುನಾಯಿಸಿದ ಬೀಜಗಳನ್ನು ಕೊಯ್ದು ಸ್ವಲ್ಪ ಸಮಯದಲ್ಲೇ ಬಿತ್ತಬಹುದು. ನೆಟ್ಟ ನಲವತ್ತು ದಿನಗಳಿಂದ ನೂರು ದಿನಗಳ ವರೆಗೆ ಬೀಜಗಳು ಮೊಳಕೆ ಬರುತ್ತಿರುತ್ತವೆ. ಮೊಳಕೆ ಬಂದ ಬೀಜಗಳನ್ನು ಪಾತಿಗಳಲ್ಲಿ ನೆಡುವ ನಾಲ್ಕು ಐದು ತಿಂಗಳ ಮೊದಲೇ ಬಾಳೆಗಿಡಗಳನ್ನು ನೆಡುವುದರಿಂದ ಎಳೆಯ ಗಿಡಗಳಿಗೆ ನೆರಳು ಸಿಗುತ್ತದೆ. ಬಾಳೆಯ ನೆರಳು ಸಾಕಾಗದಿದ್ದರೆ ಸೆಸ್ಬೇನಿಯಾ ಮುಂತಾದ ನೆರಳುಕೊಡುವ ಗಿಡಗಳನ್ನು ಪಾತಿಗಳ ಪಶ್ಚಿಮಕ್ಕೆ ಬೆಳೆಸಬಹುದು. ಸಸಿಗಳಲ್ಲಿ ಹಾಗೂ ಹಣ್ಣು ಬಿಡುವ ಮರಗಳಲ್ಲಿ ಕೆಂಪು ಮತ್ತು ಬಿಳಿ ಬಣ್ಣದ ಜೇಡನ ಜಾತಿಯ ಹುಳುಗಳ ಹಾವಳಿ ತಲೆದೋರಬಹುದು. ಈ ಹುಳುಗಳು ಎಲೆಗಳ ಹಸಿರು ರಸವನ್ನು ಹೀರುವುದರಿಂದ ಎಲೆಗಳಲ್ಲಿ ಹಳದಿ ಬಣ್ಣದ ಮಚ್ಚೆಗಳಾಗಿ ಕೊನೆಗೆ ಅವು ಒಣಗಿ ಹೋಗುತ್ತವೆ. ಇವನ್ನು ತಡೆಗಟ್ಟಲು ಮೊದಲು ಹುಳು ಬಿದ್ದಿರುವ ಮತ್ತು ಒಣಗಿದ ಎಲೆಗಳನ್ನು ಕೊಯ್ದು ಸುಡಬೇಕು. ನಂತರ "ವೆಟ್ಟಬಲ್" ಗಂಧಕವನ್ನು ೧೫೦ ಲೀಟರ್ ನೀರಿಗೆ ೧ ಕಿ. ಗ್ರಾಂ ಗಂಧಕದ ಪ್ರಮಾಣದಲ್ಲಿ ಸಿಂಪಡಿಸಬೇಕು. ಎಲೆಗಳ ಅಡಿಭಾಗದಲ್ಲಿ ಔಷಧಿಯು ಚೆನ್ನಾಗಿ ಅಂಟಿಕೊಳ್ಳುವಂತೆ ಜಾಗ್ರತೆ ವಹಿಸಬೇಕು.

ತೆಂಗಿನ ತೋಟ

ಎಲೆಗಳಿಗೆ ರೋಗ ತಗುಲದಂತೆ ಈ ತಿಂಗಳೇ ಶೇಕಡ ೧ರ ಪ್ರಮಾಣದ ಬೋರ್ಡೊ ಮಿಶ್ರಣ ಸಿಂಪಡಿಸಬೇಕು. ರೋಗ ತಗಲಿದ ಎಲೆಗಳ ಕೊನೆಗಳು ಕಪ್ಪಾಗಿ ಮುದುಡಿಕೊಂಡಿರುವುವು. ಇದರಿಂದ ಗಿಡಕ್ಕೆ ಧಕ್ಕೆ ತಗಲದಿರಬಹುದು. ಆದರೆ ಕಾಯಿಗಳ ಇಳುವರಿಗೆ ಭಾರಿ ಧಕ್ಕೆಯುಂಟಾಗುವುದು. ಕಳೆಗಳನ್ನೂ ಹುಲ್ಲನ್ನೂ ತೆಂಗಿನ ತೋಟದಿಂದ ಕಿತ್ತೆಸೆಯಬೇಕು. ಇದನ್ನು ಜನವರಿಯಲ್ಲಿ ಪೂರೈಸದಿದ್ದರೆ ಬರುವ ಬೇಸಿಗೆ ತಿಂಗಳುಗಳಲ್ಲಿ ಭೂಮಿಯಲ್ಲಿನ ತೇವವು ತೆಂಗಿನ ಗಿಡಗಳಿಗೆ ದೊರಕದಂತೆ ಕಳೆಗಳೇ ಹೀರಿ ತೊಂದರೆ ಮಾಡುವುವು.

ಹಿಂದಿನ ತಿಂಗಳಿನಲ್ಲಿ ಗುಣಿಗಳನ್ನು ತೋಡಿ ಮಣ್ಣಿನ ಗುಪ್ಪೆಗಳನ್ನು ಹಾಕಿದ್ದ ಪಕ್ಷಕ್ಕೆ ಅವುಗಳನ್ನೆಲ್ಲಾ ಈಗ ಸಮ ಮಾಡಬಹುದು. ಹೊಸದಾಗಿ ನೆಟ್ಟ ಸಸಿಗಳಿಗೆ ಜನವರಿಯಿಂದ ವಾರಕ್ಕೆ ಎರಡಾವರ್ತಿ ನೀರೆರೆಯಬೇಕು. ಫೆಬ್ರುವರಿಯಿಂದ ಬೀಜದ ಕಾಯಿಗಳನ್ನು ಚುನಾಯಿಸಲು ಪ್ರಾರಂಭ ಮಾಡಬೇಕಾದುದರಿಂದ ಉತ್ತಮವಾದ ಬೀಜದ ಕಾಯಿಗಳನ್ನು ಉತ್ತಮ ತೆಂಗಿನ ತಳಿಗಳಿಂದ ಆರಿಸಿಕೊಳ್ಳುವುದು ಮುಖ್ಯವಾದುದು. ಉತ್ತಮವಾದ ಒಳ್ಳೆಯ ಗಾತ್ರದ ಬೀಜದ ಕಾಯಿಗಳನ್ನು ಪಕ್ವವಾದ ಮಧ್ಯವಯಸ್ಸಿನ ಮತ್ತು ಫಲ ಕೊಡುವ ತಾಯಿಮರಗಳಿಂದ ಆರಿಸಿಕೊಳ್ಳಬೇಕು.

ಆಲೂಗೆಡ್ಡೆ

ಡಿಸೆಂಬರಿನಲ್ಲಿ ನೆಟ್ಟ ಆಲೂಗೆಡ್ಡೆ ಬೀಜಗಳಿಂದ ಈ ಹೊತ್ತಿಗೆ ಮೊಳಕೆ ಒಡೆದಿರುತ್ತದೆ. ಮೊಳಕೆ ಬರುವುದಕ್ಕೆ ಸಾಮಾನ್ಯವಾಗಿ ೧೦—೧೫ ದಿನಬೇಕು. ಮೊಳಕೆ ಬಂದ ಮೇಲೆ ಸಲಿಕೆಯ ಅಥವಾ ಕೈ ಗುದ್ದಲಿಯ ಸಹಾಯದಿಂದ ಕಳೆ ಕೀಳಬೇಕು. ಇಲ್ಲಿಂದಾಚೆಗೆ ಸಸಿಗಳ ಬೆಳವಣಿಗೆ ಜೋರಾಗಿರುವುದು. ಕಳೆ ಕಿತ್ತ ನಂತರ ವಾರಕ್ಕೊಂದಾವರ್ತಿ ಅಥವಾ ಪ್ರತಿ ೫ ದಿನಗಳಿಗೊಮ್ಮೆ ನೀರು ಹಾಯಿಸಿದರೆ ಸಾಕು.

ಚುಟುಕ

ಕಾಳಸಂತೆ

ಸಿಕ್ಕದಾಯಿತು ಅಕ್ಕಿ ನ್ಯಾಯ ಬೆಲೆಯಲ್ಲಿ,
ರೊಕ್ಕ ಕೊಟ್ಟರು ಅಂಗಡಿಯ ಬಾಗಿಲಲ್ಲಿ.
ಹೆಚ್ಚು ಬೆಲೆಯಿತ್ತಾಗ ತೆರೆಯುವುದು ಮೆಲ್ಲ,
ಮುಚ್ಚಿದ್ದ ಹಿಂಬದಿಯ ಬಾಗಿಲದು ಮೆಲ್ಲ!

—ಪಿ. ಕೆ. ಶೆಟ್ಟಿ, ಕರೋಪಾಡಿ.

NOTE TO VISITORS TO
SOUTH KANARA

A FEW MORE STEPS FROM MANGALORE
AND YOU WILL ENJOY

Ice Cream

PANAMBUR

We have our Ice Cream products in all important places of South Kanara to serve you.

— ಮಂಗಳೂರಿನಲ್ಲಿ —
ಯಶಸ್ವೀ 4ನೇ ವಾರದಲ್ಲಿ
- ಃ ಕಲಾರಸಿಕರಿಗೊಂದು ಅಪೂರ್ವ ಸುಸಂದರ್ಭ ಃ -
ಕರ್ನಾಟಕ ಯಕ್ಷಗಾನ ನಾಟಕದವರ
ವಿಶೇಷ ಕಲಾ ಕಾಣಿಕೆ
ತಾ. 14—1—65 ರಿಂದ
ನೆಹರೂ ಮೈದಾನದಲ್ಲಿರುವ ಕರ್ನಾಟಕ ಥಿಯೇಟರಿನಲ್ಲಿ
ಲಂಕಾದಹನ
ಅಭಿನಯಾಂಗದಲ್ಲಿ ಅಪೂರ್ವ ಬದಲಾವಣೆ
ವಿ. ಬಾಬುರಾವ್ ಇವರ ನವ್ಯ ಹಾಗೂ ರೋಮಾಂಚಕಾರಿ
ಟ್ರಾನ್ಸ್‌ಫರ್ ಸೀನು ಸೀನರಿಗಳು.
ವ್ಯವಸ್ಥಾಪಕ:- ಕೆ. ವಿಠಲ ಶೆಟ್ಟಿ

ಭಾರತ ದರ್ಶನ ತೆಂಗಿನ ನಾರು

ಬಂಗಾರದ ಕಾಂತಿಯುಳ್ಳ ತೆಂಗಿನ ನಾರು ತೆಂಗಿನ ಸಿಪ್ಪೆಯಲ್ಲಿರುವ ಮೃದುವಾದ ಎಳೆಗಳಿಂದ ತಯಾರಾಗುತ್ತದೆ. ಮಲೆಯಾಳಿ ಭಾಷೆಯಲ್ಲಿ ಈ ನಾರಿಗೆ 'ಕಾಯಿರ್' ಎಂದು ಹೆಸರು. ಈ ಪದವು ೭೦೦ ವರ್ಷಗಳ ಹಿಂದೆ ಯುರೋಪಿನ ಭಾಷೆಗಳಲ್ಲಿ ಕೊಯಿರ್ ಆಗಿ ಮಾರ್ಪಟ್ಟಿತೆಂದು ನಂಬಲಾಗಿದೆ.

ತೆಂಗು ಭಾರತದ ಪಶ್ಚಿಮ ಕರಾವಳಿಯಲ್ಲಿ ವಿಪುಲವಾಗಿ ಬೆಳೆಯುತ್ತಿದೆ. ಗಾಳಿಯ ಚಲನೆಯೊಂದಿಗೆ ಬಳುಕುವ ತೆಂಗಿನ ಮರಗಳು ಸಾಗರಗಳಲ್ಲಿ ಪಯಣಮಾಡುವವರ ಕಣ್ಮನಗಳಿಗೆ ಹಬ್ಬವನ್ನುಂಟುಮಾಡುತ್ತವೆ. ಫಿಲಿಪ್ಪೈನ್ಸ್‌ನಿಂದ ಭಾರತದ ಪಶ್ಚಿಮ ಕರಾವಳಿಯವರೆಗೆ ಒಟ್ಟು ೭೦ ಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ತೆಂಗು ಬೆಳೆಯುತ್ತದೆ. ಭಾರತದಲ್ಲಿ ಸುಮಾರು ೧೧.೬ ಲಕ್ಷ ಎಕರೆ ಪ್ರದೇಶದಲ್ಲಿ ತೆಂಗು ಬೆಳೆಯುತ್ತಿದ್ದು ಈ ಬಗೆಯಲ್ಲಿ ಎರಡನೆಯ ಸ್ಥಾನ ಪಡೆದಿದೆ. ಭಾರತ ಮತ್ತು ಸಿಂಹಳ ಈ ಎರಡೂ ದೇಶಗಳೂ ತೆಂಗಿನನಾರಿನ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿವೆ. ಈ ಕೈಗಾರಿಕೆಗಳು ತೆಂಗಿನ ನಾರಿನಿಂದ ಉಪಯುಕ್ತವಾದ ಅನೇಕ ವಸ್ತುಗಳನ್ನು ತಯಾರಿಸುತ್ತವೆ.

ಭಾರತದಲ್ಲಿ ದಕ್ಷಿಣ ಕರಾವಳಿ ಪ್ರದೇಶವಲ್ಲದೆ ಮಹಾರಾಷ್ಟ್ರ, ಗುಜರಾತ್, ಒರಿಸ್ಸಾ, ಪಶ್ಚಿಮ ಬಂಗಾಳ, ಅಸ್ಸಾಂ, ಅಂಡಮಾನ್ ನಿಕೋಬಾರ್ ದ್ವೀಪಗಳು ಮತ್ತು ಲಕ್ಷದ್ವೀಪ ಹಾಗೂ ಅಮೀನ್ ದೀವ್ ದ್ವೀಪಗಳಲ್ಲಿ ತೆಂಗಿನ ಕೃಷಿ ಕೈಗೊಳ್ಳಲಾಗಿದೆ. ಈ ಪ್ರದೇಶದ ಜನರಿಗೆ ತೆಂಗಿನ ಮರಗಳು ಆರ್ಥಿಕ ದೃಷ್ಟಿಯಿಂದ ಹೆಚ್ಚು ಲಾಭದಾಯಕವಾಗಿವೆ. ಅಧಿಕ ಜನವಸತಿಯಿರುವ ಕರಾವಳಿ ರಾಜ್ಯವಾದ ಕೇರಳದಲ್ಲಿಯೂ ತೆಂಗಿನ ಕೃಷಿ ಒಂದು ಮುಖ್ಯ ಉದ್ಯೋಗವಾಗಿದ್ದು ಅದು ಜೀವನ ವಿಧಾನವೂ ಆಗಿದೆ.

ಹುರಿಹಗ್ಗದ ಮಗ್ಗದಲ್ಲಿ ಕಾಯಕದಲ್ಲಿ ಈತ ನಿಮಗ್ನನಾಗಿದ್ದಾನೆ.

ಅಧಿಕ ಉಪಯೋಗ

ತೆಂಗಿನ ನಾರು ಬಾಳಿಕೆಗೆ ಹೆಸರಾಗಿದೆ. ಅದೆಂದೂ ಕೊಳೆಯುವದಿಲ್ಲ. ಕೈಗಾರಿಕೆಗಳಿಗೆ ಮತ್ತು ವ್ಯವಸಾಯಕ್ಕೆ ಅದು ಹೆಚ್ಚು ಉಪಯುಕ್ತವಾಗಿದೆ. ಮನೆ ಒಳಕೆಯ ಹಗ್ಗಗಳನ್ನು ಮತ್ತು ಬಂದರುಗಳಲ್ಲಿ ಹಡಗುಗಳನ್ನು ಲಂಗರು ಹಾಕಲು ಅಗತ್ಯವಾದ ಹಗ್ಗಗಳನ್ನು ತಯಾರಿಸಲಾಗುತ್ತದೆ.

ತೆಂಗಿನ ನಾರಿನ ಕೈಗಾರಿಕೆಯು ಈಗ ಒತ್ತಟ್ಟಿಗೆ ಕೇರಳದಲ್ಲಿ ಕೇಂದ್ರೀಕೃತವಾಗಿದೆ. ಕೇರಳ ರಾಜ್ಯವೊಂದರಲ್ಲಿಯೇ ೩೩೬ ಕೋಟಿ ತೆಂಗಿನ ಕಾಯಿಗಳ ಉತ್ಪಾದನೆಯಾಗುತ್ತವೆ. ಅಖಿಲ ಭಾರತ ಮಟ್ಟದ ಉತ್ಪಾದನೆ ಸುಮಾರು ೪೭೬ ಕೋಟಿಯಷ್ಟಾಗುವುದೆಂದು ಅಂದಾಜಿದೆ.

ಉತ್ಪಾದನಾ ವಿಧಾನ

ತೆಂಗಿನ ನಾರನ್ನು ಬಿಡಿಸುವುದು ಮತ್ತು ಈ ನಾರಿನಿಂದ ಹಗ್ಗವನ್ನು ಹೊಸೆಯುವುದು ಇವೇ ಮುಂತಾದ ಕೆಲಸಗಳನ್ನು ದೈಹಿಕ ಶ್ರಮದಿಂದಲೇ ಮಾಡಲಾಗುತ್ತದೆ. ಕೈಗಳಿಂದ ಮತ್ತು ಚರಖಾವನ್ನು ಹೋಲುವ ಚಕ್ರಗಳ ಸಹಾಯದಿಂದ ಹಗ್ಗವನ್ನು ಹೊಸೆಯಲಾಗುತ್ತದೆ. ತೆಂಗಿನ ನಾರಿನ ವಸ್ತುಗಳ ಉತ್ಪಾದನೆ ಹೆಚ್ಚುತ್ತಿರುವ ಈ ಕಾರಣದಿಂದಾಗಿ ಕೈಯಿಂದ ತೆಂಗಿನ ನಾರಿನ ಹಗ್ಗವನ್ನು ತಯಾರಿಸುವ ವ್ಯವಸ್ಥೆಗೆ ಬದಲು ಚಕ್ರಗಳ ಸಹಾಯದಿಂದ ಈ ಕಾರ್ಯ

ತೀವ್ರ ಎಚ್ಚರಿಕೆ · ಅಣ್ವಸ್ತ್ರ ತಯಾರಿ ಮತ್ತು ಕಮ್ಯುನಿಸ್ಟ್ ಪಕ್ಷ

ಬರೆದವರು: ಶ್ರೀ ಶಿವಶಂಕರ

"...ಭಾರತದ ಲೋಕ ಸಭೆಯೊಳಗೆ ಚೈನಿ ಅಣುಗಂಡು ಬಂದರೂ ಆಶ್ಚರ್ಯವಿಲ್ಲ. ಅದರಲ್ಲೂ ಕಮ್ಯೂನಿಸ್ಟ್ ಸದಸ್ಯರು ಅಲ್ಲೀ ಇರುವಾಗ ಆಶ್ಚರ್ಯಕ್ಕೆ ಆಸ್ಪದವಾದರೂ ಎಲ್ಲಿದೆ? ಅವರೇ ಇಲ್ಲಿ ಚೈನಿ ಅಣುಗುಂಡುಗಳಂತಿದ್ದಾರೆ. ಅದರಲ್ಲಿನಿತೂ ಸಂದೇಹವೇ ಇಲ್ಲ....." ದಿನಾಂಕ ೧೭-೧೨-೧೯೬೨ರ ಸಂಚಿಕೆಯನ್ನೋದಿರುವವರಿಗೆ ಈ ವಾಕ್ಯಗಳು ಜ್ಞಾಪಕದಲ್ಲಿ ಇರಬಹುದು. ಅದು ಪ್ರಕಟವಾದ ಎರಡು ವಾರಗಳೊಳಗೆ ಚೈನಿ ಚೇಲಾ ಕಮ್ಯೂನಿಸ್ಟರನ್ನು ಕಾರಾಗೃಹಕ್ಕೆ ಕಳುಹಿಸಲಾಯಿತು. ತನ್ನಿಂದಾಗಿಯೇ ಲೋಕ ಬೆಳಗುವದೆಂದ ಮಿಂಚು ಹುಳ ಹೇಳುತ್ತದೆಯಂತೆ! 'ನವಯುಗ' ಆ ಜಾತಿಗೆ ಸೇರಿದುದಲ್ಲ. ಅಂತೆಯೇ ಇತರ ಪತ್ರಿಕೆಗಳಂತೆ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳದೆ, ತಾನು ಆ ರೀತಿ ಪ್ರಕಟಿಸಿ, ಭಾರತ ಸರಕಾರದ ಕಣ್ಣು ತೆರೆ', ದೇಶ ದ್ರೋಹಿಗಳ ಬಂಧನಕ್ಕೆ ಕಾರಣನಾದೆನೆಂದು 'ನವಯುಗ' ಡಂಭ ಕೊಚ್ಚಿಕೊಳ್ಳದೆ, ರಾಷ್ಟ್ರದ ಸೇವೆಯಲ್ಲಿ ತನ್ನ ಕರ್ತವ್ಯವನ್ನದು ಮಾಡುತ್ತಿದೆ. ದೇಶ ದ್ರೋಹಿಗಳ ಕುರಿತು ಜನತೆಯನ್ನು ಹಾಗೂ ಸರಕಾರವನ್ನು "ನವಯುಗ" ಅದೇ ಪ್ರಥಮ ಸಲ ಎಚ್ಚರಿಸುವುದಲ್ಲ, ಆ ಪಥದಲ್ಲಿ ಅದು ತನ್ನ ಅಳಿಲ ಸೇವೆಯನ್ನು ಮಾಡಿಕೊಂಡು ಬರುತ್ತಿದೆ. ಸರಕಾರ ಇಷ್ಟರವರೆಗೆ ನಿದ್ದೆ ಮಾಡಿ ಕೇರಳದಲ್ಲಿ ಚುನಾವಣೆ ನಿಶ್ಚಯಿಸಿದ ವೇಳೆ ಈ ರೀತಿ ಎಚ್ಚರಗೊಂಡಿರುವುದಕ್ಕೆ "ನವಯುಗ" ವಿಷಾದಪಡುತ್ತದೆ. ಕಳೆದ ಬಾರಿ ಚೈನಿ ಕಮ್ಯೂನಿಸ್ಟರು ಭಾರೀ ಪ್ರಮಾಣದಲ್ಲಿ ಆಕ್ರಮಣ ನಡೆಸಿದಾಗ ಈ ಪ್ರದೇಶದ್ರೋಹಿಗಳು ಇಲ್ಲಿ ಗೊಂದಲವೆಬ್ಬಿಸಲು ಪ್ರಯತ್ನಿಸಿದ್ದರು. ಡಾರ್ಜಿಲಿಂಗ್ ಮುಂತಾದೆಡೆಗಳಲ್ಲಿ "ಮುಕ್ತಿ ಸೇನೆ' ಬರುವದಾಗಿ ಪ್ರಚಾರಮಾಡಿ, ಆ ಮುಗ್ಧ ಜನರಿಂದ ಹಣವನ್ನು ಗಿಟ್ಟಿಸಿಕೊಂಡಾಗಲೇ ಸರಕಾರ ಎಚ್ಚರಿಕೆ ವಹಿಸಬೇಕಾಗಿತ್ತು. ಚೈನಿ ಕಮ್ಯೂನಿಸ್ಟರು ಆಕ್ರಮಣ ನಡೆಸಿರುವದಿಲ್ಲ, ಬದಲು ಬಂಡವಾಳಶಾಹಿ ಪ್ರತಿಪಕ್ಷರು ಗಡಿ ನಿರ್ಣಯಿಸದೆ ಚೈನೀ ಭೂಪ್ರದೇಶವನ್ನು ವಶಪಡಿಸಿಟ್ಟುಕೊಂಡಿದ್ದುದರ ಕಾರಣವಾಗಿ ಗಡಿ ವಿವಾದವೆದ್ದಿದೆಂದು ಚೈನಿ ಕಮ್ಯೂನಿಸ್ಟರಿಗೆ ಅವರು ಪ್ರಶಸ್ತಿ ಪತ್ರ ಕೊಟ್ಟಾಗಲೇ ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗಿತ್ತು. ಸಡಿಲುಬಿಟ್ಟುದುದರ ಪರಿಣಾಮವಾಗಿ ಅದೇ ಮಾತನ್ನು ಇಂದು ಕಾಂಗ್ರೆಸ್ಸಿನ ಮುಖಂಡರೂ ಹೇಳಲಾರಂಭಿಸಿರುವರು. ಸುಧೀರ ಘೋಷ ಕೇವಲ ನಾಲ್ಕಾಣೆ ಕಾಂಗ್ರೆಸ್ಸಿಗರಿರುವದಿಲ್ಲ. ಇವರೆಲ್ಲರಿಗೂ ಗುರುವಾಗಿದ್ದಾರೆ ಮಾಜಿ ರಕ್ಷಣಾ ಮಂತ್ರಿ ಕೃಷ್ಣ ಮೆನನ್. ಅವರು ರಕ್ಷಣಾ ಮಂತ್ರಿಗಳಾಗಿದ್ದಾಗ ಆಕ್ರಮಣವೇ ನಡೆದಿಲ್ಲವೆಂದು ಹೇಳಿಕೊಂಡು ಬಂದಿದ್ದರು. ತನ್ನ ತಪ್ಪನ್ನೆಲ್ಲಾ ಅವರು ಹಿಂದಿನ ಪ್ರಧಾನಿ ಜವಾಹರಲಾಲ ನೆಹರೂಜಿಯವರ ತಲೆಯ ಮೇಲೆ ಹಾಕಿಬಿಟ್ಟಿದ್ದಾರೆ. ಕಮ್ಯೂನಿಸ್ಟರ ಬಾಯಿಯಿಂದ ಬಂದಾಗ ಮಾತ್ರ ದೇಶದ್ರೋಹಿ ಮಾತುಗಳಾಗುವದಲ್ಲ; ಕಾಂಗ್ರೆಸ್ಸಿಗರ ಬಾಯಿಯಿಂದ ಬಂದರೂ ದೇಶದ್ರೋಹಿ ಮಾತುಗಳು ದೇಶದ್ರೋಹಿ ಮಾತುಗಳೇ ಇವೆ. ಅವರು ಸರಿಯಾಗಿರದಿದ್ದಲ್ಲಿ ಕಮ್ಯೂನಿಸ್ಟರನ್ನು ದಂಡಿಸಲು ಅವರಿಗೆ ನೈತಿಕ ಹಕ್ಕು ಇರುವದಿಲ್ಲ. ಈ ಕಾರಣದಿಂದಾಗಿ ಇಷ್ಟರವರೆಗೆ ಕಾಂಗ್ರೆಸ್ ಗೃಹಖಾತೆ ಮೌನವಹಿಸಿತೇನು? ಪ್ರಶ್ನೆ ಸಹಜವೇ ಸರಿ.

ಕೃಷ್ಣಮೆನನರು ರಕ್ಷಣಾ ಮಂತ್ರಿಯಾಗಿದ್ದಾಗ ಕಮ್ಯೂನಿಸ್ಟರ ಸೈನಿಕ ಅಧಿಕಾರಿಗಳು ಉನ್ನತ ಸ್ಥಾನಕ್ಕೆ ಸೇರಿರುವದಾಗಿ ಹೇಳಲಾಗುತ್ತದೆ. ಇಂತಹ ಅಧಿಕಾರಿಗಳಿಂದಾಗಿ ಭಾರತವು ತುಲ್ಯ ಚೈನಿ ಕಮ್ಯೂನಿಸ್ಟರ ಕೈಯಲ್ಲಿ ಸೋಲನ್ನನುಭವಿಸುತ್ತಿರಬೇಕಾಯಿತು. ಆಯುಧದ ವಿಷಯದಲ್ಲೂ ಅಷ್ಟೆ. ಆಧುನಿಕ ಆಯುಧಗಳ ಸರಬರಾಜು ಮಾಡದೆ ಕಮ್ಯೂನಿಸ್ಟ್ ಪರ ಪತ್ರಿಕೆಗಳ ಸರಬರಾಜು ಮಾತ್ರ ಮಾಡಲಾಗಿರುತ್ತದೆ. ಇವೆಲ್ಲವನ್ನೂ ಅಂಜದೆ, ಅಳುಕದೆ, ಪಕ್ಷ ವ್ಯಾಮೋಹ ತಳೆಯದೆ "ನವಯುಗ" ಆಗಿಂದಾಗ ಜನತೆಯನ್ನು ಎಚ್ಚರಿಸಿರುತ್ತದೆ. ಕೇವಲ ಅಧಿಕಾರಿಗಳನ್ನು ಮಾತ್ರ ನಂತರ ಶಿಕ್ಷಿಸಲಾಗಿರುತ್ತದೆ. ಅಂತಹ ಅಧಿಕಾರಿಗಳು ಇನ್ನೂ ಕೆಲವರಿರುವದರಲ್ಲಿ ಸಂದೇಹವೇ ಇಲ್ಲ. ಅವರು ನಮ್ಮ ಸೇನೆಯ ರಹಸ್ಯಗಳನ್ನು ಚೈನಿ ಕಮ್ಯೂನಿಸ್ಟರಿಗೆ ತಿಳಿಸುವದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಕೆಲಸವನ್ನು ಕಮ್ಯೂನಿಸ್ಟ್ ಪರ ಅಧಿಕಾರಿಗಳೇ ಈಗ ನಡೆಸುವದೆಂದಲ್ಲ. ಪಂಚಮ ಸ್ಥಂಭೀಯ ಪಾಕಿಸ್ತಾನಿ ಪರ ಅಧಿಕಾರಿಗಳೂ ಸೇನೆಯಲ್ಲಿದ್ದಾರೆ. ಅವರ ಸಹಾಯವೂ ಈಗ ಕಮ್ಯೂನಿಸ್ಟ್ ಪರ ಅಧಿಕಾರಿಗಳಿಗೆ ಸಿಗುತ್ತದೆ. ಈ ಎಲ್ಲಾ ಅಧಿಕಾರಿಗಳನ್ನೂ ಆವಾಗಲೇ ಕೃಷ್ಣ ಮೆನನರನ್ನೂ ಕೆಳಗಿಳಿಸಿದಾಗಲೇ, ವಿಚಾರಣೆಗೊಳಪಡಿಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕಾಗಿತ್ತು. ಇಲ್ಲ ಭಾರತ ಸರಕಾರ

ಅಮೂಲ್ಯ ಸಂಪನ್ಮೂಲ

ಹುರಿಯನ್ನು ಒಣಗಿಸಿ ಅಣಿಗೊಳಿಸುತ್ತಿರುವ ಕಾರ್ಮಿಕರು.

ಕಾಲೊರಸುಗಳಿಗೆ ರೂಪುಗೊಡುತ್ತಿರುವ ದುಡಿಮೆಗಾರ

ನಿರ್ಮಾಣವಾಗುತ್ತಿದೆ. ಈ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರಲ್ಲಿ ಬಹುತೇಕ ಮಂದಿ ಮಹಿಳೆಯರಿರುವರು. ದೇಶಾದ್ಯಂತ ಈ ಕೈಗಾರಿಕೆಗಳಲ್ಲಿ ಈಗ ೧,೦೦,೦೦೦ ಕದಿಯುಗಳಿವೆ. ಚಾಪೆಗಳು, ರತ್ನಗಂಬಳಿಗಳು ಇವೇ ಮೊದಲಾದುವನ್ನು ತಯಾರಿಸುವ ಕೈಗಾರಿಕೆಯು ಒಂದು ಶತಮಾನದಷ್ಟು ಹಳೆಯದು. ತೆಂಗಿನ ನಾರಿನ ಚಾಪೆಗಳನ್ನು ನೇಯ್ಗೆಗಾಗಿ ಉಪಯೋಗಿಸುವ ಮಗ್ಗಗಳು ಹತ್ತಿ ಜವಳಿ ಬಟ್ಟೆಗಳ ನೇಯ್ಗೆಗಾಗಿ ಉಪಯೋಗಿಸಲಾಗುವ ಮಗ್ಗಗಳಂತೆಯೇ ಇವೆ

ಗುರಿ ಮೀರಿ ಸಾಧನೆ

ತೃತೀಯ ಯೋಜನೆಯ ಅವಧಿಯಲ್ಲಿ ೧೦೫ ಕೋಟಿ ರೂ ಮೌಲ್ಯದ ತೆಂಗಿನ ಉತ್ಪನ್ನಗಳನ್ನು ರಫ್ತುಮಾಡಲು ಉದ್ದೇಶಿಸಲಾಗಿದೆ. ಯೋಜನೆಯ ಮೊದಲ ವರ್ಷದಲ್ಲಿಯೇ ಈ ಗುರಿಯನ್ನು ಮೀರಿ ರಫ್ತು ಮಾಡಲಾಯಿತು.

ಝೆಕೊಸ್ಲೊವಾಕಿಯ, ನೆದರ್‌ಲ್ಯಾಂಡ್, ಇಟಲಿ, ಪಶ್ಚಿಮ ಜರ್ಮನಿ ಮತ್ತು ಬ್ರಿಟನ್ ಈ ದೇಶಗಳಿಗೆ ಮುಖ್ಯವಾಗಿ ಭಾರತದ ತೆಂಗಿನ ನಾರು ಮತ್ತು ಅದರಿಂದ ಹೊಸೆದ ಹಗ್ಗ ಇವೇ ಮೊದಲಾದುವುಗಳನ್ನು ರಫ್ತು ಮಾಡಲಾಗುತ್ತಿದೆ. ತೆಂಗಿನ ಚಾಪೆಗಳು, ಮನೆಗಳ ಬಾಗಿಲುಗಳ ಮುಂದೆ ಹಾಕುವ ಕಿರಿಯ ಚಾಪೆಗಳು, ರಗ್ಗುಗಳು, ರತ್ನಗಂಬಳಿಗಳು ಇವೇ ಮೊದಲಾದ ಸರಕುಗಳಿಗೆ ಬ್ರಿಟನ್, ಅಮೇರಿಕ, ಆಸ್ಟ್ರೇಲಿಯ, ಕೆನಡಾ, ಇರಾಕ್, ಪಶ್ಚಿಮ ಜರ್ಮನಿ, ಡೆನ್ಮಾರ್ಕ್, ಇಟಲಿ, ಇವು ಮುಖ್ಯ ಗಿರಾಕಿಗಳಾಗಿವೆ. ಬ್ರಿಟನ್ ಭಾರತದ ತೆಂಗಿನ ಉತ್ಪನ್ನಗಳಿಗೆ ಮುಖ್ಯ ಗಿರಾಕಿಯಾಗಿದ್ದು ಭಾರತವು ರಫ್ತು ಮಾಡುವ ಈ ಉತ್ಪನ್ನಗಳ ಅರ್ಧದಷ್ಟನ್ನು ಕೊಳ್ಳುತ್ತದೆ.

ರಫ್ತು ಗುರಿಗಳು

ಭಾರತ ಸರ್ಕಾರವು ತೆಂಗಿನ ಚಾಪೆ ತಯಾರಿಸುವ ಕೈಗಾರಿಕೆಯನ್ನು ಮೂರರಲ್ಲಿ ಒಂದರಷ್ಟು ಭಾಗವನ್ನು ಯಂತ್ರೀಕರಣಗೊಳಿಸಲು ಉದ್ದೇಶಿಸಿದೆ. ಈ ಕೈಗಾರಿಕೆಯ ಆಧುನೀಕರಣದ ದಿಶೆಗಳಲ್ಲಿ ಇದು ಮೊದಲ ಹೆಜ್ಜೆ. ಬಹುತೇಕ ದೇಶಗಳಿಂದ ಭಾರತದ ತೆಂಗಿನ ಚಾಪೆಗಳಿಗೆ ಬೇಡಿಕೆಯು ಹೆಚ್ಚುತ್ತಿದೆ. ತೆಂಗಿನ ಉತ್ಪನ್ನಗಳ ರಫ್ತು ವ್ಯಾಪಾರವು ೧೯೬೫-೬೬ನೇ ಸಾಲಿನ ಕೊನೆಯ ಹೊತ್ತಿಗೆ ೧೫ ಕೋಟಿ ರೂ ಗಳಷ್ಟು ಮತ್ತು ೧೯೭೦-೭೧ರ ಹೊತ್ತಿಗೆ ೨೦ ಕೋಟಿ ರೂ.ಗಳಷ್ಟು ಆಗುವದೆಂದು ಅಂದಾಜಿದೆ.

ದೇಶದ್ರೋಹಿಗಳಿಗೆ ಉದ್ದದ ಹಗ್ಗವನ್ನು ಕೊಟ್ಟಿರುತ್ತದೆ.

ಕಮ್ಯೂನಿಸ್ಟ್ ಪರ ಪತ್ರಿಕೆಗಳಿಗೂ ಹಾಗೆಯೇ. ಕಾಂಗ್ರೆಸ್ಸಿಗರೂ ಸಿಂಹದ ಬಾಲವನ್ನು ಕೊಡುತ್ತಿದ್ದಾರೆ. ಅಬ್ಬಾ! ಅವರಿಗೆ ಸಿಗುತ್ತಿರುವ ಸೌಲಭ್ಯಗಳೇ! ಇದಕ್ಕಾಗಿಯೇ ಮಂತ್ರಿಮಂಡಳದಲ್ಲಿ ಕೃಷ್ಣಮೆನನ್ — ಕೆ. ಡಿ ಮಾಳವೀಯರಂತಹ ಇನ್ನಿತರ ಕೆಲ ಮಂತ್ರಿಗಳಿದ್ದಾರೆ. ಈ ಪತ್ರಿಕೆಗಳಾದರೋ ಎಡೆಬಿಡದೆ ಅಪಪ್ರಚಾರ ನಡೆಸಿಕೊಂಡು ಬಂದಿವೆ—ಅವರನ್ನು ಹೊಗಳಿಕೊಂಡು

ಇಷ್ಟೆಲ್ಲಾ ಸಂದರ್ಭಗಳಲ್ಲಾಗಿಯೂ ಸರಕಾರ ಸುಮ್ಮನಿದ್ದು ಕೇರಳದಲ್ಲಿ ಚುನಾವಣೆ ಸಮೀಪಿಸುತ್ತಿರುವಾಗ ಈಗ ಎಚ್ಚರವಾಗಿರುವುದು ಸರಿಯೇ? ಕಾಲ ವಿಳಂಬವಾಗಿ ಎಚ್ಚರವಾದರೂ ಚಿಂತಿಲ್ಲ ಎಚ್ಚರವಾಯಿತಲ್ಲ ಎನ್ನುವ ತೃಪ್ತಿಯಾದರೂ ಬರುತ್ತದೆ. ಆದರೆ ಸ್ಥಿತಿ ಹಾಗಿರುವದಿಲ್ಲ. ಈ ದೇಶದ್ರೋಹಿಗಳನ್ನು ಇದೇನು ಪ್ರಥಮ ಬಾರಿ ಕಾರಾಗೃಹಕ್ಕೆ ಕಳುಹಿಸುವದಲ್ಲ. ಕಮ್ಯೂನಿಸ್ಟರಾದರೋ ಅಂತಹ ಸಂದರ್ಭಗಳಿಗಾಗಿ ಹಾತೊರೆಯುತ್ತಿದ್ದಾರೆ. ಅಂತಹವರ ಬಳಿ ಕಾಂಗ್ರೆಸ್ ಮಂತ್ರಿ ಮಂಡಳ ಕಣ್ಣುಮುಚ್ಚಾಲೆಯಾಟ ಆಡುತ್ತಿದೆ! ತಮಗೆ ಬೇಕಾದಾಗ ಅವರನ್ನು ಬಂಧಿಸುತ್ತದೆ, ಅನಂತರ ಬಿಟ್ಟುಬಿಡುತ್ತದೆ. ಆದುದರಿಂದ ಇಂಥವರ ಕ್ರಮವನ್ನು ಶಿಶುಪಾಲ ವಧೆಗೆ ಹೋಲಿಸುವದು ಸರಿಯಲ್ಲ. ಕಮ್ಯೂನಿಸ್ಟರ ದೇಶದ್ರೋಹಿ ಕುಕೃತ್ಯಗಳ ಕೊಡ ಎಂದೋ ತುಂಬಿದೆ, ಅಷ್ಟೇ ಅಲ್ಲ ಈಗ ತುಳುಕುತ್ತಿದೆ. ಈಗ ಆದರೂ, ಭಾರತ ಸರಕಾರ ಎಚ್ಚರಿಕೆಯಿಂದ ದಿಟ್ಟ ಹೆಜ್ಜೆ ಇಟ್ಟಲ್ಲಿ ಪಕ್ಷಕ್ಕೂ, ದೇಶಕ್ಕೂ ಹಿತವೆನಿಸೀತು. ಇಲ್ಲವಿದ್ದಲ್ಲಿ ಕಾಂಗ್ರೆಸ್ಸು ಮಂತ್ರಿ ಮಂಡಳ ಮಾತ್ರ ಬೀಳುವದಲ್ಲದೆ ಭಾರತ ದಾಸ್ಯಶೃಂಖಲೆಯ ಬಂಧನಕ್ಕೊಳಗಾಗಬೇಕಾಗುತ್ತದೆ.

ದೇಶದ್ರೋಹಿ ಕಮ್ಯೂನಿಸ್ಟರ ಈ ಕೃತ್ಯಗಳಿಂದ ಹಾಗೂ ಗೃಹಮಂತ್ರಿ ನಂದಾರವರ ಬಿಚ್ಚು ನುಡಿಗಳಿಂದ ಇವರಲ್ಲಿ ಕಾರಸ್ಥಾನ ನಡೆಸುತ್ತಿದ್ದಾರೆಂಬುದು ಭಾರತದ ಭದ್ರತೆಗೆ ಅವರು ಸುರಂಗ ತೋಡುತ್ತಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಅವರು ಇಲ್ಲಿಯ ಸ್ಥಿತಿಗತಿಗಳನ್ನು ರಹಸ್ಯಗಳನ್ನು ಆಕ್ರಮಣಗಾರ ಕಮ್ಯೂನಿಸ್ಟರಿಗೆ ತಿಳಿಸುತ್ತಾರೆ ಅವರ ಸ್ವಾಗತಕ್ಕಾಗಿ ಸಿದ್ಧತೆ ನಡೆಸುತ್ತಿದ್ದಾರೆ. ದೇಶದೊಳಗೆ ಗೊಂದಲ ನಡೆಸುತ್ತಾರೆ ಅದಕ್ಕೆ "ಕ್ರಾಂತಿ"ಯ ಚೀಟಿಯನ್ನು ತಾಗಿಸಲೂ ಅವರು ಹೇಸುವದಿಲ್ಲ!

ಹೀಗಿರುವಾಗ ಅಣುಗುಂಡು ತಯಾರಿಸಲು ಸಿದ್ಧವೇನು? ಭಾರತ ಸರಕಾರ ಅಣುಗುಂಡು ತಯಾರಿಗೆ ಸಿದ್ಧತೆ ನಡೆಸಿದಲ್ಲಿ ಅದರ ರಹಸ್ಯಗಳನ್ನು ಅವರು ಚೈನಿ ಕಮ್ಯೂನಿಸ್ಟರಿಗೆ ತಿಳಿಸುತ್ತಾರೆ. ಇಲ್ಲಿ ಕಾರ್ಖಾನೆ ಅಥವಾ ಪ್ರಯೋಗಶಾಲೆಯನ್ನು ಹಾಳುಮಾಡದೆ ಅವರು ಬಿಡುವದಿಲ್ಲ. ಒಂದು ವೇಳೆ ಅದು ಸಾಧ್ಯವಾಗದಿದ್ದಲ್ಲಿ ಒಳಗೆ ಸಂಪು ಮುಂತಾದುವನ್ನು ಹಬ್ಬಿಸುತ್ತಾರೆ ಅಲ್ಲದೆ ಉತ್ತಮ ಫಲ ಸಿಗದಂತೆ ಮಾಡುತ್ತಾರೆ ಸಕಾಲದಲ್ಲಿ ಅಣ್ವಸ್ತ್ರ ತಯಾರಿಯಾಗದೆ ಹೋಗುವಂತೆ ಅವರು ಪ್ರಯತ್ನಿಸುತ್ತಾರೆ.

ಕಮ್ಯೂನಿಸ್ಟ್ ಕಾರಸ್ತಾನದೊಂದಿಗೆ ಕೈಮಿಲಾಯಿಸಲು ಸಿದ್ಧವಿರುವದು ಲಂಚಾವತಾರ. ವಿದೇಶಿಯರ ದೃಷ್ಟಿಯಲ್ಲಿಂತೂ ಭಾರತವು ಲಂಚದ ಕಾರ್ಖಾನೆಯೇ ಇದೆ' ಎದೆನ್ನವರು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ವಿದೇಶಿಯರು ಇಲ್ಲಿ ಆಕ್ರಮಣ ನಡೆಸಿರುವದಾದರೂ ಹಾಗೆಯೇ, ಮತಾಂತರ ನಡೆಸುತ್ತಿರುವದೂ ಹಾಗೆಯೇ, ಭಾರತೀಯರೆಂದರೆ ಅವರ ಪಾಲಿಗೆ ಜಯಚಂದನ ಸಂತಾನದವರಾಗಿದ್ದಾರೆ! ಕಾಮಿನಿ ಕಾಂಚನಗಳ ಮೂಲಕ ಅದ್ಯಾವ ಕಾರ್ಯವನ್ನೂ ಮಾಡಿಸಿಕೊಳ್ಳಬಹುದೆಂಬುದು ಅವರ ದೃಢ ನಿಶ್ಚಯವಿದೆ. ಚೈನಿ ಕಮ್ಯೂನಿಸ್ಟರಾದರೂ ಅದೇ ಆಟವನ್ನು ಆಡಿದ್ದಾರೆ! ಭಾರೀ ಧಾಳಿಯ ಸಮಯ ಹಲವು ಸೇನಾಧಿಕಾರಿಗಳು ಡೇರೆಯಲ್ಲಿರಲೇ ಇಲ್ಲವೆಂಬ ಸುದ್ದಿ ಪತ್ರಿಕೆಗಳಲ್ಲಿ ಬಂದಿರುತ್ತದೆ. ಡೋಲ್—ಮಾ ಕಥೆ ವಾಚಕರಿಗೆ ಜ್ಞಾಪಕ ಇರಬಹುದು. ಚೈನಾ ಬ್ಯಾಂಕಿನ ಮೂಲಕ ಚೈನಿ ಕಮ್ಯೂನಿಸ್ಟರು ಇಲ್ಲಿರುವ ಕಮ್ಯೂನಿಸ್ಟರಿಗೆ ದೇಶದ್ರೋಹಿ ಕೃತ್ಯಗಳಿಗಾಗಿ ಹಣವನ್ನೂ ಒದಗಿಸುತ್ತಿದ್ದರು. ಇಂಡೋನೇಷ್ಯಾದ ದ್ವೀಪಾಂತರ) ರಾಯಭಾರಿ ಕಾರ್ಯಾಲಯ (ಅಯ್ಯೂಬ ಅವರಿಗೆ ಸಹಾಯ ಮಾಡುತ್ತಿತ್ತು. ಇವಲ್ಲದೆ ಇದ್ದೇ ಇದೆಯಲ್ಲವೇ ಪಾಕಿಸ್ತಾನದ ದೂತ ನಿವಾಸ! ಅದಕ್ಕಾಗಿಯೇ ಅಳಿಸಲ್ಲಿರುವದು. ಭಾರತ ಸರಕಾರಕ್ಕೆ ಇದೆಲ್ಲಾ ಗೊತ್ತಿದ್ದರೂ ಅದು ಹಗ್ಗವನ್ನು ಬಹಳ ಉದ್ದಕ್ಕೆ ಬಿಟ್ಟಿರುತ್ತದೆ, ಮತ್ತೆ ಇದೀಗ ಹಿಂದಕ್ಕೆಳೆಯಲು ಪ್ರಯತ್ನಿಸುತ್ತಿದೆ (ಅದೊಂದು ನಾಟಕವಾಗದಿರಲಿ.) ಅದರಲ್ಲಿ ಯಶಸ್ಸು ಸಿಕ್ಕೀತೇ?

ರಾಣಾ ಪ್ರತಾಪನನ್ನು, ಛತ್ರಪತಿ ಶಿವಾಜಿಯನ್ನು, ಕ್ರಾಂತಿದೂತ ತಾಂತ್ಯಾಟೋಪೆಯನ್ನು, ಚಿದಂಬರ ಪಿಳ್ಳೆಯನ್ನು ಅಲ್ಲದೆ ಅಂತಹ ಉತ್ತಮ ದೇಶಭಕ್ತರನ್ನು ಆಕ್ರಮಣಗಾರರಿಗೆ ಹಿಡಿದುಕೊಡಲು ಪ್ರಯತ್ನಿಸಿದವರ್ಯಾರು? ಹೆಸರು ಕೇವಲ ಉದಾಹರಣೆಗಾಗಿ ಅಷ್ಟೆ. ಜನರು ಕಾಂಚನ ಕಾಮಿನಿ ಮೋಹಕ್ಕೊಳಗಾದಂದಿನಿಂದ ಇಂತಹ ದೇಶದ್ರೋಹಿ ಪಾತಕ ಕೃತ್ಯಗಳು ನಡೆಯುತ್ತಾ ಬಂದಿವೆ. ಅದರೊಂದಿಗೆ ವ್ಯಕ್ತಿಗತ ವಿರೋಧ ಹಾಗೂ ಗದ್ದುಗೆಯ ಆಸೆಯೂ ಸೇರಿಕೊಂಡಿವೆ.

ಅಣ್ವಸ್ತ್ರ ತಯಾರಿಕೆಗೆ ಭಾರತದಲ್ಲಿರುವ ಕಮ್ಯೂನಿಸ್ಟರು ಹಾಗೂ ಲಂಚಾವತಾರ ಅಡೆತಡೆ ಎಂಬುದರಲ್ಲಿ ಯಾರಿಗೂ ಸಂದೇಹವಿರಲಿಕ್ಕಿಲ್ಲ. ಇದೀಗ ಮಾಧವಾ

([illegible]ನೇ ಪುಟ ನೋಡಿ)

ಆಧುನಿಕ ದೇವಾಲಯ

ಶರಾವತಿಯ ಬೃಹದ್ಯೋಜನೆ

• ಮೈಸೂರು ರಾಜ್ಯದ ಜೋಗ ಜಲಪಾತದ ಪ್ರದೇಶದಲ್ಲಿ, ಬೆಟ್ಟಗಳ ನಡುವೆ, ವಿಶಾಲವಾಗಿ ಹಬ್ಬಿದ ಮಹತ್ತರವಾದ ಶರಾವತಿ ಜಲ—ವಿದ್ಯುತ್ ಯೋಜನೆ, ಸ್ವತಂತ್ರ ಭಾರತ ತನ್ನ ಅಲ್ಪ ಕಾಲಾವಧಿಯ ಚರಿತ್ರೆಯಲ್ಲಿ ಕೈಗೊಂಡ ಅತಿ ದೊಡ್ಡ ನಿರ್ಮಾಣ ಕಾರ್ಯಗಳಲ್ಲಿ ಒಂದು.

ಈ ಯೋಜನೆ ಭಾರತ – ಅಮೆರಿಕಗಳ ನಡುವಿನ ಫಲದಾಯಕ ಯುಗವೊಂದನ್ನು ಮುಂದಿನ ತಲೆಮಾರಿನವರಿಗೆ ಸ್ಥಾಪಿಸುವ ಯೋಜನೆಯೂ ಹೌದು.

ಈಗಾಗಲೇ ಮೊದಲನೆ ವಿದ್ಯುದುತ್ಪಾದಕ ವಿದ್ಯುತ್ತನ್ನು ಮೈಸೂರು ಗ್ರಿಡ್ಡಿಗೆ ಒದಗಿಸುತ್ತಿದ್ದು, ಇದರಿಂದ ಮೈಸೂರು ರಾಜ್ಯದ ವಿದ್ಯುದುತ್ಪಾದನ ಸಾಮರ್ಥ್ಯ ಶೇಕಡ ೫೦ರಷ್ಟು ಹೆಚ್ಚಿದೆ. ಇಂತಹ ಇನ್ನೂ ಒಂಭತ್ತು ಉತ್ಪಾದಕಗಳು ಪ್ರತಿ ಆರು ತಿಂಗಳಿಗೆ ಒಂದರಂತೆ ಉತ್ಪಾದನೆಯನ್ನು ಆರಂಭಿಸಲಿವೆ.

ಎಲ್ಲಾ ಉತ್ಪಾದಕಗಳೂ ಕಾರ್ಯಾರಂಭ ಮಾಡಿದ ವೇಳೆ, ಶರಾವತಿಯೇ ಭಾರತದಲ್ಲಿ ಅತಿ ದೊಡ್ಡ ವಿದ್ಯುದ್ಯೋಜನೆಯಾಗುವುದು. ಸ್ಥಾಪನೆಯ ವೆಚ್ಚದ ದೃಷ್ಟಿಯಲ್ಲಿಯೂ ಈ ಯೋಜನೆ ಅತ್ಯಂತ ಮಿತವ್ಯಯದ್ದು ಎನಿಸಲಿದೆ. ಈ ಯೋಜನೆಗೆ ೮೫ ಕೋಟಿ ರೂ.ಗಳ ವೆಚ್ಚ ಬರಬಹುದೆಂದು ಅಂದರೆ ಕಿಲೋವಾಟ್ ಒಂದಕ್ಕೆ ಒಂದು ಸಾವಿರ ರೂ.ಗಳ ಸ್ಥಾಪನೆಯ ವೆಚ್ಚ ಬರಬಹುದೆಂದು ಲೆಕ್ಕಹಾಕಲಾಗಿದೆ.

ಅಗಾಧವಾದ ಪ್ರಮಾಣದಲ್ಲಿ ವಿದ್ಯುತ್ತನ್ನು ಒದಗಿಸಲಿರುವ ಈ ಯೋಜನೆ ಮೈಸೂರನ್ನು ಕೊರತೆಯ ಸ್ಥಿತಿಯಿಂದ ಸಮೃದ್ಧಿಗೆ ಏರಿಸಲಿದೆ. ಈ ಹೊಸ ವಿದ್ಯುತ್ತನ್ನು ದೊಡ್ಡ ಪ್ರಮಾಣದಲ್ಲಿ ಬಳಸಲು ಕೈಗಾರಿಕೋದ್ಯಮಿಗಳು ಈಗಾಗಲೆ ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ. ಈ ಹೆಚ್ಚುವರಿ ಶಕ್ತಿ ಮೈಸೂರಿನಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಇರುವ ಅಪಾರವಾದ ಅವಕಾಶವನ್ನು ಕಾರ್ಯರೂಪಕ್ಕೆ ತಂದು ತನ್ಮೂಲಕ ಸಂಪದಭಿವೃದ್ಧಿಗೆ ಕಾರಣವಾಗುವುದೆಂದು ನಿರೀಕ್ಷಿಸಲಾಗಿದೆ.

ಶರಾವತಿ ಯೋಜನೆಯಲ್ಲಿ ಅಗ್ಗವಾಗಿ ವಿದ್ಯುತ್ತನ್ನು ಉತ್ಪಾದಿಸಲು ಸಾಧ್ಯವಾಗಿರುವುದಕ್ಕೆ ನೈಸರ್ಗಿಕ ಸೌಕರ್ಯವೂ, ನಿರ್ಮಾಪಕರ ಚತುರತೆಯೂ ಕಾರಣಗಳಾಗಿವೆ.

ಶರಾವತಿಯ ಉದ್ದ ಕೇವಲ ೮೨ ಮೈಲಿ. ಆದರೆ ಈ ನದಿ ಧುಮುಕುವ ಆಳ ೨೦೦೦ ಅಡಿ. ಈ ನದಿಗೆ ಜಲ ಒದಗುವ ಪ್ರದೇಶದಲ್ಲಿ ವರ್ಷವೊಂದಕ್ಕೆ ೩೦೦ರಿಂದ ೩೨೦ ಅಂಗುಲಗಳಷ್ಟು ಮಳೆ ಬೀಳುತ್ತದೆ.

ಶರಾವತಿ ನದಿಗೆ ಇರುವ ವಿದ್ಯುದುತ್ಪಾದನಾ ಸಾಮರ್ಥ್ಯವನ್ನು ೧೯೧೮ರಷ್ಟು ಹಿಂದೆಯೇ ಪತ್ತೆಮಾಡಲಾಯಿತು. ಆದರೆ ನದಿಯನ್ನು ಸರ್ವೆ ಮಾಡುತ್ತಿದ್ದ ಇಬ್ಬರು —ಒಬ್ಬ ಇಂಗ್ಲಿಷ್‌ಮೇನ್ ಮತ್ತೊಬ್ಬ ಭಾರತೀಯ —ಆ ಪ್ರದೇಶದಲ್ಲಿ ಅಪರೂಪವಾಗಿದ್ದ ಸಮತಟ್ಟಿನ ಬಯಲೊಂದನ್ನು ಆಕಸ್ಮಾತ್ತಾಗಿ ಪತ್ತೆ ಮಾಡುವವರೆಗೂ ಆ ಯೋಜನೆಯ ಪರಿಶೀಲನೆಯ ಕಡೆಗೆ ಯಾರ ಗಮನವೂ ಹರಿದಿರಲಿಲ್ಲ. ಆಗ ಆನೆ, ಹುಲಿ ಹಾಗೂ ಚಿರತೆಗಳಿಗೆ ಕ್ರೀಡಾಂಗಣವೂ, ನೀರು ಕುಡಿಯುವ ಸ್ಥಳವೂ ಆಗಿದ್ದ ಈ ಬಯಲು ಇಂದು ಬೃಹದಾಕಾರದ ವಿದ್ಯುದುತ್ಪಾದಕಗಳ ಸ್ಥಾಪನೆಯ ಶಕ್ತಿಸೌಧವಾಗಿ ರೂಪುಗೊಂಡಿದೆ.

ಈ ಯೋಜನೆಯ ನಿರ್ಮಾಣ ಕಾರ್ಯದಲ್ಲಿ ಪಂಜಾಬಿನಿಂದ ಕೇರಳದ ವರೆಗಿನ ಎಲ್ಲ ಕಡೆಯ ಕುಶಲ ಹಾಗೂ ಅಕುಶಲ ಕಾರ್ಮಿಕರು ಕಳೆದ ಆರು ವರ್ಷಗಳಿಂದ ಕಾಡಿನ ಎಲ್ಲ ತೊಂದರೆಗಳನ್ನೂ, ನೈಸರ್ಗಿಕ ವಿಪತ್ತುಗಳನ್ನು ಎದುರಿಸಿ ದುಡಿದಿದ್ದಾರೆ. ಸ್ತ್ರೀ ಪುರುಷ ಕೆಲಸಗಾರರ ಸಂಖ್ಯೆ ಅತ್ಯಧಿಕವಾದಾಗ ೪೦,೦೦೦ದವರೆಗೆ ಏರಿತ್ತು. (ಈ ಪ್ರದೇಶದಲ್ಲಿ ಮಳೆ ಅತ್ಯಧಿಕವಾಗಿ ಬೀಳುವುದರಿಂದ ವರ್ಷದಲ್ಲಿ ೭ ತಿಂಗಳು ಮಾತ್ರ ಕೆಲಸಕ್ಕೆ ಅನುಕೂಲ.

ಶರಾವತಿ ಯೋಜನೆಯಲ್ಲಿ ಅಗಾಧವಾದ ನಿರ್ಮಾಣ ಕಾರ್ಯಗಳೂ, ಮಹತ್ತರವಾದ ಎಂಜಿನಿಯರಿಂಗ್ ಕಾರ್ಯಗಳೂ ಅಡಕವಾಗಿದ್ದು ಈ ಕಾರ್ಯಗಳ ಸಾಧನೆಗೆ ಅಮೆರಿಕ ಭಾರತಕ್ಕೆ ಅತ್ಯವಶ್ಯಕವಾದ ಪೂರಕ ಸಹಾಯವನ್ನು ಒದಗಿಸಿದೆ. ವಿದ್ಯುದುತ್ಪಾದನೆ ಹಾಗೂ ಗ್ರಾಹಕ ಕೇಂದ್ರಗಳಿಗೆ ಅವಶ್ಯವಾದ ಯಂತ್ರೋಪಕರಣಗಳನ್ನು ಕೊಳ್ಳಲು ಅವಶ್ಯವಾದ ವಿದೇಶೀ ವಿನಿಮಯವನ್ನು ಬಹುವಾಗಿ ಅಮೆರಿಕದ ಅಂತಾರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿಯ ಮೂಲಕ ಅಲ್ಪಬಡ್ಡಿಯ ಮೂರು ದೀರ್ಘಾವಧಿಯ ಸಾಲಗಳ ರೂಪದಲ್ಲಿ ಒದಗಿಸಿದೆ. ಇದಲ್ಲದೆ, ಅಮೆರಿಕ ಮೊದಲ ಎರಡು ಘಟ್ಟಗಳಿಗೆ (ಎಂಟು ಉತ್ಪಾದಕಗಳು) ಬೇಕಾದ ಸ್ಥಳೀಯ ವೆಚ್ಚಗಳಲ್ಲಿ ಶೇಕಡ ೬೨ರಷ್ಟನ್ನು ಪಿ. ಎಲ್ ೪೮೦ ಸಾಲಗಳ ಮೂಲಕ ಒದಗಿಸಿದೆ.

ಶರಾವತಿ ಯೋಜನೆಯಲ್ಲಿ ನದಿಗೆ ಅಡ್ಡವಾಗಿ ಕಟ್ಟಿದ ಬೃಹತ್ ಪ್ರಮಾಣದ ಲಿಂಗನಮಕ್ಕಿ ಜಲಾಶಯ ಪ್ರಧಾನವಾದುದು. ಈ ಪ್ರಧಾನ ಜಲಾಶಯದ ನೀರನ್ನು ಮಳಲಿ ಸುರಂಗದ ಮೂಲಕ ಸಮತೋಲ ಸಾಧಕ ಜಲಾಶಯವೆಂದು ಕರೆವ ತಲಕಳಲೆ ಅಣೆಕಟ್ಟೆಗೆ ಬಿಡಲಾಗುವುದು. ಅನಂತರ ನೀರು ಅವಳಿ ಸುರಂಗಗಳ ಮೂಲಕ ತೆರೆದ ಸರ್ಜ್ ಟ್ಯಾಂಕ್‌ಗಳಿಗೆ ನುಗ್ಗುತ್ತದೆ. ಅಲ್ಲಿಂದ ಓಡುವ ನೀರು ಉಕ್ಕಿನ ಹತ್ತು ಕೊಳವೆಗಳ— ಪ್ರತಿಯೊಂದು ಸರ್ಜ್ ಟ್ಯಾಂಕಿನಿಂದಲೂ ಕೈ ಬೆರಳುಗಳಂತೆ ಐದು ಕೊಳವೆಗಳು ಹೊರ ಹೊರಟಿವೆ—ಮೂಲಕ ಗುಡ್ಡದಿಂದಿಳಿದು ಶಕ್ತಿ ಸೌಧದಲ್ಲಿರುವ ಹತ್ತು ಟರ್ಬೈನ್‌ಗಳನ್ನು ತಿರುಗಿಸುತ್ತವೆ.

ಒಂದುವರೆ ಮೈಲಿಗಳ ಉದ್ದ ಹಾಗೂ ನದಿಯ ಪಾತ್ರದಿಂದ ೧೯೦ ಅಡಿಗಳ ಎತ್ತರವಿರುವ ಲಿಂಗನಮಕ್ಕಿ ಅಣೆಕಟ್ಟಿನ ನಿರ್ಮಾಣ ಮುಕ್ತಾಯದ ಹಂತವನ್ನು ತಲುಪಿದೆ. ಮಳಲಿ ಸುರಂಗ, ತಲಕಳಲೆಯ ಸಮತೋಲ ಸಾಧಕ ಜಲಾಶಯ, ಅವಳಿ ಸುರಂಗಗಳ ಬಹು ಭಾಗ, ಹಾಗೂ ಸರ್ಜ್ ಟ್ಯಾಂಕುಗಳು ಸಿದ್ಧವಾಗಿವೆ. ಹತ್ತು ಪೆನ್‌ಸ್ಟಾಕುಗಳು, ವಿದ್ಯುದುತ್ಪಾದಕಗಳ ಸ್ಥಾಪನ ಕಾರ್ಯ ಮುಂದುವರಿಯುತ್ತಿದೆ. ಮೊದಲನೆಯ ಯೂನಿಟ್ಟು ಸ್ಥಾಪಿತವಾದ ನಂತರದಿಂದ ಆರು ತಿಂಗಳಿಗೆ ಒಂದರಂತೆ ಇತರ ಯೂನಿಟ್ಟುಗಳ ಸ್ಥಾಪನೆ ನಡೆಯುತ್ತದೆ. ಶರಾವತಿಯಿಂದ ಬೆಂಗಳೂರಿಗೆ ೨೩೮ ಮೈಲಿಗಳ ದೂರದ ವರೆಗಿನ ಹೈಟೆನ್‌ಷನ್ ಪ್ರೇಷಕ ತಂತಿಗಳನ್ನು ಯೋಜನೆಯ ಅಂಗವಾಗಿ ಎಳೆಯಲಾಗಿದ್ದು, ಮೊದಲನೆ ಉತ್ಪಾದಕದ ವಿದ್ಯುತ್ತನ್ನು ಈ ತಂತಿಗಳ ಮೂಲಕ ಈಗಾಗಲೆ ಬೆಂಗಳೂರಿಗೆ ಕಳಿಸಲಾಗುತ್ತಿದೆ.

ಇಷ್ಟನ್ನೆಲ್ಲ ಸುಲಭವಾಗಿ ಸಾಧಿಸಲಾಯಿತು ಎಂದೇನೂ ಹೇಳುವಂತಿಲ್ಲ. ದುರ್ಗಮವಾದ ಅರಣ್ಯವನ್ನು ಕಡಿದು ಸ್ವಚ್ಛಗೊಳಿಸುವಾಗ ಕಾಡಿನ ಅಪಾಯಗಳನ್ನೆಲ್ಲ ಎದುರಿಸಬೇಕಾಯಿತು. ಕಡಿದಾದ ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಸಂಪರ್ಕ ಸಾಧಕ ವ್ಯವಸ್ಥೆ ಅತಿ ಪ್ರಯಾಸದ್ದಾಯಿತು. ನಿರ್ಮಾಣಕ್ಕೆ ಮುಖ್ಯವಾದ ಸಿಮೆಂಟು, ಉಕ್ಕು ಹಾಗೂ ಅಸ್ಫೋಟಕಗಳ ಕೊರತೆಯನ್ನು ಎದುರಿಸಬೇಕಾಯಿತು. ಈ ವಸ್ತುಗಳನ್ನು ಭಾರಿ ಪ್ರಮಾಣದಲ್ಲಿ ನಿರ್ಮಾಣದ ಪ್ರದೇಶಕ್ಕೆ ಸಾಗಿಸುವಾಗ ಅನೇಕ ಆತಂಕಗಳು ಅಡ್ಡ ಬಂದವು. ಎಷ್ಟೋ ಕಡೆ ನೆಲ ಕುಸಿಯಿತು, ಧಾರಾಕಾರವಾದ ಮಳೆಯ ಹೊಡೆತದಿಂದ ರಸ್ತೆಗಳಿಗೆ, ಸಲಕರಣೆಗಳಿಗೆ ನಷ್ಟವಾಯಿತು. ಅಮೆರಿಕದಿಂದ ಕಳಿಸಿದ ಒಂದು ಹಡಗು ಭರ್ತಿ ವಿಶೇಷ ಉಕ್ಕು, ನೌಕಾಘಾತದ ಫಲವಾಗಿ ಸಮುದ್ರದ ತಳವನ್ನು ತಲುಪಿತು. ಇಷ್ಟಲ್ಲದೆ ಕಾರ್ಯ ಮಧ್ಯೆ ಲಿಂಗನಮಕ್ಕಿ ಅಣೆಕಟ್ಟಿನ ರಚನೆಯಲ್ಲಿ ಅತ್ಯಾವಶ್ಯಕವಾದ ಬದಲಾವಣೆಗಳನ್ನು ಮಾಡಬೇಕಾಯಿತು.

ಭಾರತದಲ್ಲಿ ಎಲ್ಲೆಲ್ಲೂ ಕಂಡುಬರುವ ದೇವಾಲಯಗಳನ್ನು ಸ್ಥಳದಲ್ಲಿ ದೊರೆತ ಕಲ್ಲುಗಳಿಂದ ಕಟ್ಟಿರುವಂತೆ ಶರಾವತಿಯನ್ನೂ ಅಸಂಖ್ಯಾತ ಕೈಗಳು ಸ್ಥಳದ ಬಂಡೆಗಳಿಂದ ಒಡೆದ ಕಲ್ಲುಗಳಿಂದ ನಿರ್ಮಿಸಿವೆ. ದಿ|| ಪ್ರಧಾನಿ ನೆಹರೂ ಅವರು ಮಾತುಗಳಲ್ಲಿ ಹೇಳುವುದಾದರೆ 'ಆಧುನಿಕ ಭಾರತದ ದೇವಾಲಯಗಳಾದ' ಶರಾವತಿಯಂತಹ ಯೋಜನೆಗಳು ಜಲಿತಲಾಂತರಗಳಿಗೆ ಸಂಪತ್ಸಮೃದ್ಧಿಯ ಭರವಸೆಯನ್ನು ಒದಗಿಸುವ ಮುನ್ಸೂಚನೆಗಳು ಎನ್ನಬಹುದು.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಠೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¼%ರ ವರೆಗಿನ ಬಡ್ಡಿ ನೀಡಲಾಗುವುದು.

೫ ವರ್ಷದ ಅವಧಿಗಳಿಗೆ ಮೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6¼%ಗೆ ಮೀರದಂತೆ ½% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಪೆಪ್ಸರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿ ಪಟ್ಟಿವೆ.

ಊಟಕ್ಕಿಲ್ಲದ ಉಪ್ಪಿನಕಾಯಿ

(ನಾಲ್ಕನೇ ಪುಟದಿಂದ)

"ಇದೇ ಒಂದು ಮಾತಿದೆಯಲ್ಲಾ. ?"

"ಒಂದೇನು? ನೂರುಂಟು .."

"ಅಲ್ಲ, ಅದೇ ನೋಡಿ, ಎಲ್ಲಿಯೋ ಓದಿದ್ದು.. ಛೆ · ಹೊಟ್ಟೇಲಿದೆ ಬಾಯಿಗೆ ಬರೋದಿಲ್ಲಾ ."

"ಏನಪ್ಪ, ಅದೂ ಹೆದ್ರಿ ಹತ್ತಲ ದಾರಿಯಿಂದ ಜಾರಿ ಹೋಯ್ತೇ ಏನೋ ..."

'ಛಿ · ನೀವೊಂದು ... ಅದೇ ನೋಡಿ.. ಯಾರೋ ಒಬ್ಬ ಕವಿ ಅಂದಿದ್ದ ...'

'ಹಾದಪ್ಪ, ಅಂದಿರೋರೆಲ್ಲಾ ಕವಿಗಳ ... ಅನ್ನೋರಲ್ಲಾ...

"ಹೇಳಬಿಡಿ ಮತ್ತೆ .'

'ಏನೂ ಇಲ್ಲ ..."

"ಹೇಳ್ತೇನೇಂತ ಹೊರಟವ್ರು ಮತ್ತೆ...."

ಎಲ್ಲಿಯೋ ಹೇಳ್ತೇನೇಂತಂದಿದ್ದೆ .. ನೀನೇ ಅಲ್ವೇ ಏನನ್ನೋ ಹೇಳ್ಬೇಕೊಂತ ಬಾಯಿ ತೆರೆದು ಹೊಟ್ಟೆಯಿಂದ ಹೊರಗೆಳೆಯ ತೊಡಗಿದವ್ರು"

"ಇಲ್ಲಪ್ಪ, ನಂಗೇನೂ ನೆನಪಾಗೋದಿಲ್ಲ. ನೀವೇ ಹೇಳಿ.."

"ಏನನ್ನ.."

"ಅದೇ .. ಅನೋರೆಲ್ಲಾ ."

"ಹೇಳ್ಲೇಬೇಕೇನೂ?"

"ಮತ್ತೇ ಏನಂದನ್ಕೊಂಡೆ."

"ಹೇಡ್ಮೇಲೆ ಕೋಪಿಸ್ಕೋಬಾರ್ದು ಮತ್ತೆ...."

"... ಬೇಡ ಹಾಗಾದ್ರೇ. ನಾನೇ ಹೇಳ್ತೇನೆ"

"ಹೇಳು ..."

"ಅಂದಿರೋರೆಲ್ಲಾ ಕವಿಗಳು ಅಲ್ವೆ?'

"ಹೌದು...."

"... ಹ್ಞಾಂ— ಅನ್ನೋರೆಲ್ಲಾ ಕಪಿಗಳೂಂತ ತಾನೇ ನೀವನ್ನೋದು?"

"....ಅಲ್ಲ ಕಣೇ ."

"ಸುಳ್ಳು ಹೇಳ್ಬೇಡಿ ಮತ್ತೆ ."



ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಜರಗುವ ಭಂಡಿ ಉತ್ಸವದ ರಥ

'ಅಲ್ಲ ಅಲ್ಲ ."

"ಹೇಳಿ ಹಾಗಿದ್ರೆ.. ಕೋಪಿಸ್ಕೋದಿಲ್ಲ."

"..ಹ್ಞೂಂ..ಕೇಳಿ ತಿಗಳು!"

"ಇಷ್ಟೇನೇ? ಹ್ಞಾಂ...ಈಗ ನೆನಪಾಯ್ತು ಕವೀಶ್ವರನ ಮಾತು .....ಹೇಳಲೆ?"

"ಊಟಕ್ಕಿಲ್ಲದ ಉಪ್ಪಿನಕಾಯಿ "

"ಸರ್ವವದನಗ್ರಾಸವಾಗಿಹ ಕಪ್ಪುಮೆಕ್ಕಿಕ ಭಕ್ಷಣೀ ಬಯಸಿಪ್ಪತೆರದಲಿ ..."

"ಅದೇ! ಬಹಳ ಉಚಿತವಾಗಿದೆಯಲ್ಲ..."

"ಎಷ್ಟಾದ್ರೂ ಉಪ್ಪಿನ ಕಾಯಿ ರುಚಿ ಹೋಗೋದಿದೆಯೆ?"

"ನೋಡೋಣ ಎಷ್ಟಿದೇಂತ ..."

"ಇರೋದೆಲ್ಲಿ- ಇರೋವಷ್ಟರಲ್ಲಿಯೇ ಇರೋದು ...'

"ಸ್ವಲ್ಪ ರುಚಿ ನೋಡೋಣವೆ? ...

" .. ... . " —ಗೋರಾ.

(ಆರನೇ ಪುಟದಿಂದ)

ಸ ಆರಂಭವಾಗಿರುತ್ತದೆ. ಒಲಾತ್ಕಾರವೂ ಫ ಸ್ಥಾನದಿಂದಾದರೂ ಕಾಂಗ್ರೆಸ್ಸು ಅಣ್ಣಾ ಸ್ತ್ರ ತಯಾರಿಕೆಗೆ ಒಪ್ಪಿದರೂ ಈ ಬಿಡಿತಡೆಗಳು ನಮ್ಮನ್ನು ಬಿಡಬೇಕಲ್ಲ! ಮಕರ ಸಂಕ್ರಮಣ ಆದಾಗಲೇ ಕಳೆದು ಹೋಯಿತು. ಮಕರ ಸಂಕ್ರಮಣದ ಸಮಯ ತಮಿಳುನಾಡಿನಲ್ಲಿ ಒಂದು ವಿಶೇಷವಿದೆ. ಆ ಸಮಯದಲ್ಲಿ ಭೋಗಿಯಂದು ಮನೆಯ ಸತ್ತ ಇರುವ ಎಲ್ಲಾ ಕಸಕಡ್ಡಿಗಳನ್ನು ರಾಶಿ ಹಾಕಿ ಸುಡಲಾಗುತ್ತದೆ. ಆ ಸಮಯದಲ್ಲಿ ಈ ಅಡೆತಡೆಯ ಕಸಕಡ್ಡಿಗಳನ್ನು ಸುಟ್ಟು ಭಸ್ಮಗೊಳಿಸಲು ಭಾರತೀಯರಿಗೆ ಸಾಧ್ಯವೇನು? ಈ ಪ್ರಶ್ನೆಯನ್ನು ಮಾಘ ಮಾಸಾರಂಭದ ಇಂದು ಪ್ರತಿಯೊಬ್ಬ ಭಾರತೀಯನೂ ಕೇಳಿಕೊಳ್ಳಬೇಕಾಗಿರುತ್ತದೆ.

ಅಣ್ವಸ್ತ್ರ ತಯಾರಿ ಎಷ್ಟು ಸುಲಭದ ಕೆಲಸ ಇರುವದಿಲ್ಲವೋ ಹಾಗೆಯೇ ಈ ಅಡೆತಡೆಯ ಕಸಕಡ್ಡಿಗಳನ್ನು ದಹಿಸಿ ಬಿಡುವದೂ ಸುಲಭದ ವಿಷಯವಾಗಿರುವದಿಲ್ಲ. ಆ ದಕ್ಕೆ ಸಂಘಟಿತ ಪ್ರಯತ್ನ ಒಂದರಿಂದ ದಿನಗಳ ಪ್ರದಿಕೆಯ ಪ್ರೋಪಣ ಭಾಷಣಗಳಿಂದ ಆಗದು ಸಾಧ್ಯವಿಲ್ಲ.

ಜನತಾ ಉವಾಚ

ನಿಂತು ಪ್ರಯಾಣಿಸುವ ಪದ್ಧತಿ ಹೋಗಬೇಕು!

ಮೈಸೂರು ರಾಜ್ಯ ನಿರ್ಮಾಣದಿಂದ ದಕ್ಷಿಣ ಕನ್ನಡದ ಜನತೆಗೆ ದೊರಕಿದ ಒಂದು ದೊಡ್ಡ ಸೌಲಭ್ಯವೆಂದರೆ ಬಸ್ಸುಗಳಲ್ಲಿ ನಿಂತು ಸರ್ಕಸ್ ಮಾಡುವ ಅವಕಾಶ! ಸ್ಟೇಂಡಿಂಗ್ ಪೆಸೆಂಜರು ಹಾವಳಿ ಹೊಸ ಕ್ರಾಂತಿ ರಚನೆಯು ಮೊದಲು ನಮ್ಮ ಜಿಲ್ಲೆಯಲ್ಲಿ ಇರಲಿಲ್ಲ. ಆದರೆ ಮೈಸೂರು ಸರಕಾರದ ಕೊಡುಗೆಯಾಗಿ ಈ ಜಿಲ್ಲೆಗೂ ಘಟ್ಟದ ಮೇಲಿನಿಂದ ಆ ಪದ್ಧತಿ ಇಳಿದು ಬಂತು. ಸೆಟ್ಟಿಗೆ ನಿಲ್ಲಲ್ಲೂ ಕೂಡಾ ಅವಕಾಶ ಇಲ್ಲದ ಬಸ್ಸುಗಳಲ್ಲಿ ಪ್ರಯಾಣಿಕರು ಕತ್ತು ಬಗ್ಗಿಸಿಯೋ, ಸೊಂಟ ವಾಲಿಸಿಯೋ, ಬೆನ್ನು ಒರಗಿಸಿಯೋ ಅಂತೂ ಹಲವಾರು ವಿಧದ ಆಸನಗಳನ್ನು ಪ್ರದರ್ಶಿಸುತ್ತಾ ಸಂಚರಿಸುವಂತಹ ವ್ಯವಸ್ಥೆ ಒದಗಿದೆ. ಈಗ ಬಸ್ಸುಗಳಲ್ಲಿ ಬೇಲೂರು ಶಿಲಾ ಬಾಲಿಕೆಯರ ಭಂಗಿಯಿಂದ ಹಿಡಿದು ಆಧುನಿಕ ರಾಕ್ ಎಂಡ್ ರೋಲ್ ನೃತ್ಯದ ಭಂಗಿಗಳಲ್ಲಿ ಗಂಡಸರು ಹೆಂಗಸರು ಪ್ರಯಾಣಿಸುವ ದೃಶ್ಯ ಕಾಣಬಹುದು.

ಈ ಸ್ಟೇಂಡಿಂಗ್ ಪೆಸೆಂಜರ್ ಎಂಬ ಪದ್ಧತಿಯನ್ನು ಪ್ರಯಾಣಿಕರ ಹಿತಕ್ಕಾಗಿ ಜ್ಯಾರಿಗೆ ತಂದಿರುವುದಾದರೆ ಇದು ತೀರಾ ತಪ್ಪು ಕಲ್ಪನೆ. ನಿಂತು ಪ್ರಯಾಣಿಸುವವರು ತಾವು ಕಷ್ಟಪಡುವದಲ್ಲದೆ, ಕುಳಿತು ಕೊಂಡವರಿಗೂ ತುಂಬಾ ಉಪದ್ರವನ್ನು ಅನಿವಾರ್ಯವಾಗಿ ಕೊಡಲೇ ಬೇಕಾಗುತ್ತದೆ. ಮೈಲುಗಟ್ಟಲೆ ಈ ರೀತಿ ನಿಂತು ಪ್ರಯಾಣಿಸುವುದು ಯಾವ ಅಪರಾಧಕ್ಕೆ ತಕ್ಕ ಶಿಕ್ಷೆಯೋ ತಿಳಿದಿಲ್ಲ. ಅದರಲ್ಲೂ, ಸಣ್ಣ ಮಕ್ಕಳು, ಮುದುಕಿಯರು, ಮಕ್ಕಳನ್ನು ಹಿಡಿದು ಕೊಂಡ ಹೆಂಗಸರು— ಇವರ ಅವಸ್ಥೆ ಹೇಳಿ ಪ್ರಯೋಜನವಿಲ್ಲ.

ಸಂಬಂಧ ಪಟ್ಟವರು, ಇನ್ನಾದರೂ ಈ ಅನಾಗರಿಕ ಪದ್ಧತಿಯನ್ನು ದೂರ ಪ್ರಯಾಣದ ಬಸ್ಸುಗಳ ಮಟ್ಟಿಗಾದರೂ ರದ್ದುಗೊಳಿಸುವರೆ?

ಒಬ್ಬ ಪ್ರಯಾಣಿಕ

೧೦ನೇ ಪುಟ ನೋಡಿರಿ

ವಿಚಾರ ಕಿಡಿಗಳು

ಸಹನೆ ಮೀರಿದಲ್ಲಿ ಸಮಾಧಾನಕ್ಕೆ - ಸೋಮಾರಿಗಳೆಡೆಯಲ್ಲಿ ವಿಧನಗೆ ಬೆಲೆ ಇಲ್ಲ! — ಆಯುಸ್ಸು ಮುಗಿದಾಗ ಔಷಧಿ-ಕೈನೀಡಿರುವವನ ಕರುಣೆ ಫಲಕಾರಿಯಲ್ಲ!

ಂ ಂ ಂ ಂ

ಬೆಗೆ ಇಲ್ಲದಿರುವಾಗಲೂ ಗಾಳಿ ಹಾಕಿಕೊಳ್ಳುವವರು ಡಾಂಭಿಕರು. ಬೇನೆಯಿಲ್ಲವಾದರೂ 'ಅಯ್ಯೊ' 'ಅಪ್ಪಾ' ಎಂದು ಕೂಗಾಡುವವರು ಕಪಟಿಗಳು!

ಂ ಂ ಂ ಂ

ಒಳ್ಳೆಯ ಬುದ್ಧಿಯುಳ್ಳವನಿಂದ ಉತ್ತಮ ವಿಚಾರಗಳನ್ನು ಅರಿತುಕೊಳ್ಳಬಹುದು. ಒಳ್ಳೆಯ ಕ್ಷೇತ್ರದಲ್ಲಿ ಬಿದ್ದ ಬೀಜದಿಂದಲೇ ಉತ್ತಮ ಫಲ ದೊರಿಯುವುದು'

ಂ ಂ ಂ ಂ

ಮನುಷ್ಯನ ಜತೆಯಲ್ಲಿದ್ದುಕೊಂಡೇ ಮನಸ್ಸಿನ ಮೂಲವನ್ನರಿತುಕೊಳ್ಳಬೇಕು. ನೀರಿಗಿಳಿದೇ ಆಳವೆಷ್ಟೆಂದು ತಿಳಿಯಬೇಕು.

ಂ ಂ ಂ ಂ

ಸಂತೋಷದ ದಿನದಲ್ಲಿ ಸಂಕಷ್ಟದ ಸುದ್ದಿಯನ್ನೆತ್ತಿ ಮಾತಾಡಬಾರದು. ಹುಟ್ಟಿ ಹಬ್ಬವನ್ನಾಚರಿಸುವಂದು ಮರಣಗೊಂಡ ಹಿರಿಯರನ್ನು ನೆನೆದು ಮರುಗಬಾರದು!

ಂ ಂ ಂ ಂ

ಹಣ್ಣು ರುಚಿಯಾದಷ್ಟೂ ಅವಕ್ಕೆ ಗಿರಾಕಿಗಳು ಹೆಚ್ಚು. ಹುಳಿಯಾದರೆ ಕೇಳುವವರಿಲ್ಲ. ಒಳ್ಳೆಯತನ ಹೆಚ್ಚು ಇದ್ದಂತೆ ಜನ ಪ್ರೀತಿಸುತ್ತಾರೆ. ಕೆಟ್ಟವರಾದರೆ ಕೇಳುವವರಿಲ್ಲ.

—ಕೆ. ಜೆ. ಶೆಟ್ಟಿ, ಕಡಂದಲೆ.

ಜನವರಿ 26

ಪ್ರಜಾರಾಜ್ಯ ವಿಶೇಷಾಂಕ

ಪ್ರಖ್ಯಾತ ಬರಹಗಾರರ ವಿಚಾರಪರ ಲೇಖನ, ಕವನ, ಕಥೆ ಮೊದಲಾದುವನ್ನೊಳಗೊಂಡು ಎಂದಿಗಿಂತಲೂ ವಿಶಿಷ್ಟವಾದ ರೀತಿಯಲ್ಲಿ ನವಯುಗದ ಪ್ರಜಾರಾಜ್ಯ ಸಂಚಿಕೆ ಪ್ರಕಟವಾಗುವುದು.

ಕರ್ನಾಟಕದಲ್ಲೂ ಇತರ ಕಡೆಗಳಲ್ಲೂ ವಿಶೇಷ ಪ್ರಚಾರದಲ್ಲಿರುವ ನವಯುಗವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ಶ್ರೀ ಪಿ ಎಸ್. ಹೆಬ್ಬಾರ (ಸಿರಿಪತಿ)

ಅವರ

ನವೀನ ಕೃತಿ ಇದೀಗ ಹೊರಬಂದಿದೆ.

"ದಾರಿ ದೀಪ"

(ನೀತಿ ಕಥೆಗಳು)

(ಶ್ರೀ ಟಿ. ಎ. ಪೈಯವರ ಮುನ್ನುಡಿ)

ಬೆಲೆ: 1=50.

ನಿಮ್ಮ ಪ್ರತಿಗಾಗಿ ಉಡುಪಿಯ ಪುಸ್ತಕ ವ್ಯಾಪಾರಿಗಳಿಗೆ ಯಾ ನೇರವಾಗಿ ಕೆಳ ವಿಳಾಸಕ್ಕೆ ಬರೆಯಿರಿ.

ಪಿ. ಎಸ್. ಹೆಬ್ಬಾರ, ವೀಣಾ ಪ್ರಕಾಶಕ

ಹೆಬ್ಬಾರ್ಸ ಕಂಪೌಂಡು

ಕುಂಜಿಬೆಟ್ಟು, ಉಡುಪಿ, (ದ. ಕ.)

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No 257/1964

ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥಸ್ವಾಮಿಗಳು — ವಾದಿಯು.

ಮತ್ತು

1. ಅಕ್ಕಮ್ಮ ಶೆಡ್ತಿ
2. ಕೆ. ಶ್ಯಾಮರಾಯ ಶೆಟ್ಟಿ } ಪ್ರತಿವಾದಿರು.

ಇವರೊಳಗೆ

ಸದ್ರಿ ವ್ಯಾಜ್ಯದ 2ನೇ ಪ್ರತಿವಾದಿ — ಕೆ. ಶ್ಯಾಮರಾಯ ಶೆಟ್ಟಿ — ಅಕ್ಕಮ್ಮ ಶೆಡ್ತಿರ ಮಗ — ಉಡುಪಿ ತಾಲ್ಲೂಕು ಕೊಡವೂರು ಗ್ರಾಮ— ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಯು ಪ್ರತಿವಾದಿರ ಮೇಲೆ ಬಾಲಗೇಣಿ ಗೇಣಿ ಬಾಕಿಗೆ ಹೂಡಿರುವ ಮೇಲ್ಕಂಡ ವ್ಯಾಜ್ಯವನ್ನು ತಾ. 10-2-1965ಕ್ಕೆ 1ನೇ ಪ್ರತಿವಾದಿರ ನೋಟೀಸು ಬಗ್ಗೆ ಇಟ್ಟಿದೆ ಸದ್ರಿ ವ್ಯಾಜ್ಯದಲ್ಲಿ 2ನೇ ಪ್ರತಿವಾದಿಗೆ ಬಾಧಕವಿರುವುದಾದಲ್ಲಿ ಸದ್ರಿ ತಾ. 10-2-65ನೇ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ 2ನೇ ಪ್ರತಿವಾದಿಯ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೈಸಲು ಮಾಡಲಾದೀತು.

P V. Acharya,

Vakil for Plaintiff,

ಉಡುಪಿ, ತಾ| 13-1 65.

ಜನತಾ ಉವಾಚ

(ಒಂಭತ್ತನೇ ಪುಟದಿಂದ)

ಬಿಗಡಾಯಿಸಿದ ಜಿಲ್ಲೆಯ ಆಹಾರ ಪರಿಸ್ಥಿತಿ. ಜಿಲ್ಲಾಧಿಕಾರಿಗಳು ಕಣ್ಣು ತೆರೆಯುವರೆ?

ದೇಶದ ನಾಯಕರ ತಲೆ ತಿನ್ನುತ್ತಿರುವ ಭೀಕರ ಸಮಸ್ಯೆಯಾದ ಆಹಾರ ಸಮಸ್ಯೆ ಈ ಘಟ್ಟ ಮುಟ್ಟುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಈ ವರ್ಷದ ಸುಗ್ಗಿಯ ಬಳಿಕವಾದರೂ ಪರಿಸ್ಥಿತಿ ಸುಧಾರಿಸಬಹುದೆಂದು ಎಲ್ಲರೂ ಆಶೆಯ ತಾಳಿದಿದ್ದರು. ಆದರೆ, ಪರಿಸ್ಥಿತಿ ಮಾತ್ರ ದಿನದಿಂದ ದಿನಕ್ಕೆ ವಿಷಮತೆಯತ್ತ ಸಾಗುತ್ತಾ ಇದೆ.

ನಮ್ಮ ಜಿಲ್ಲೆಯಲ್ಲಂತೂ ಆಹಾರ ಪರಿಸ್ಥಿತಿ ತೀರಾ ಕೆಟ್ಟಿದೆ ಎಂದು ಅತಿ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಅಕ್ಕಿಯ ಕೊರತೆ ಇರುವುದು ನಿಜವಾದರೂ ಆ ಕೊರತೆ ಹೆಚ್ಚೆಂದರೆ ಎರಡು ಯಾ ಮೂರು ತಿಂಗಳುಗಳ ಅವಧಿಯದು ಮಾತ್ರ. ಆದರೆ ಈಗ ಈ ಸುಗ್ಗಿಯ ಸಮಯದಲ್ಲೇ ಅಕ್ಕಿಯ ಅಭಾವ ಎಂದರೆ ಇದಕ್ಕೆ ನಗಬೇಕೋ ಅಳಬೇಕೋ ತಿಳಿಯುವುದಿಲ್ಲ. ಮೊದಲ ಬೆಳೆ ಕೊಯ್ದು ಭತ್ತದ ಸಂಗ್ರಹ ಎಲ್ಲೆಲ್ಲೂ ವಿಪುಲವಾಗಿರುವ ಈ ದಿನಗಳಲ್ಲೇ ಅಕ್ಕಿಯ ಬೆಲೆ ಕಿಲೋ ಒಂದಕ್ಕೆ ರೂಪಾಯಿಯನ್ನು ಮುಟ್ಟಿದೆಯೆಂದರೆ, ಇದು ಸರಕಾರವಿರುವ ರಾಜ್ಯವೋ ಅಥವಾ ಅಂಧಾದರ್ಬಾರೋ ತಿಳಿಯುವುದಿಲ್ಲ.

ನಮ್ಮ ಮುಖ್ಯ ಮಂತ್ರಿಗಳಿಂದ ಹಿಡಿದು, ಅಧಿಕಾರಿಗಳ ವರೆಗೂ ಆಹಾರ ಪರಿಸ್ಥಿತಿ ಸುಧಾರಿಸುವುದು, ಸುಧಾರಿಸುವುದು ಎಂದು ಉದ್ದುದ್ದ ಭಾಷಣ ಬಿಗಿಯುವುದರಲ್ಲೇ ತೃಪ್ತರಾಗಿರುವರಲ್ಲದೆ, ಅದಕ್ಕೆ ತಕ್ಕ ಪರಿಣಾಮಕಾರಿಯಾದ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಮುಂದಾಗಿಲ್ಲ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಇಲ್ಲಿ ಅಧಿಕಾರ ಯಂತ್ರ ತೀರಾ ಕೇಂದ್ರೀಕೃತವಾಗಿ ಕಾರ್ಯವೆಸಗುವಂತಿದೆ. ಎಲ್ಲದಕ್ಕೂ ಡೆಪ್ಯೂಟಿ ಕಮೀಶನರ ಕಚೇರಿಯ ದರ್ಶನ; ಅವರ ಮೆಹರ್ಬಾನಿ ಹಾಗೂ ಮರ್ಜಿಗಳಿಗನುಗುಣವಾಗಿ ದಿನ ಧೋರಣೆಗಳ ನಿರೂಪಣೆ. ಯಾವುದಕ್ಕೂ ವ್ಯವಸ್ಥಿತವಾದ ಒಂದು ಕ್ರಮ ನಿಯಮ ಇಲ್ಲವೆಂಬ ಹಲವು ಬಾರಿ ಭಾಸವಾಗಲು ಎಡೆ ಇದೆ.

ಅಧಿಕಾರದ ವಿಕೇಂದ್ರೀಕರಣದ ಇಂದಿನ ದಿನಗಳಲ್ಲಿ, ಪರ್ಮಿಟು, ಲೈಸನ್ಸುಗಳನ್ನು ಕೊಡುವ ಸಮಸ್ತ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಸ್ವತಃ ತಾವೇ ಇಟ್ಟುಕೊಂಡಿರುವುದರ ಅರ್ಥವೇನೋ ತಿಳಿದಿಲ್ಲ. ಜಿಲ್ಲೆಯ ಮೂಲೆ ಮೂಲೆಯ ಜನ, ಒಂದು ಪರ್ಮಿಟಿಗಾಗಿ ಮಂಗಳೂರು ಯಾತ್ರೆ ಮಾಡಬೇಕು. ಹಾಗೆ ಮಂಗಳೂರಿಗೆ ಹೋದರೂ ಕೆಲಸ ಆಗುವುದೆಂಬ ಗ್ಯಾರಂಟಿಯೇನಿಲ್ಲ. ಜಿಲ್ಲಾಧಿಕಾರಿಗಳು ಆ ದಿನ ಕೇಂಪಿನಲ್ಲಿರಬೇಕು. ಕೇಂಪಿನಲ್ಲಿದ್ದರೂ ಅವರಿಗೆ ತಕ್ಕಷ್ಟು ಪುರುಸೊತ್ತು ಬೇಕು. ಅವರು ಪ್ರಯಾಣಕ್ಕೆ ಹೋದಾಗ ಅಥವಾ ಮಂತ್ರಿಗಳ ಸಂಚಾರದ ಕಾಲ ಅವರ ಬೆಂಗಾವಲಾಗಿ ಹೋದಾಗ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪರ್ಮಿಟು ಲೈಸನ್ಸುಗಳನ್ನು ಕೇಳುವವರಿಲ್ಲ.

ಜಿಲ್ಲಾಧಿಕಾರಿಗಳ ಕಛೇರಿಗೆ ಏಳೆಂಟು ಬಾರಿ ಪರ್ಮಿಟಿಗಾಗಿ ಹೋದ ಪ್ರತ್ಯಕ್ಷ ನಿದರ್ಶನಗಳೂ ಬೇಕಾದಷ್ಟಿವೆ.

ಹಿಂದಿನ ಕಾಲದಲ್ಲಿ ತಹಶೀಲದಾರರಿಗೆ ಅಸಿಸ್ಟೆಂಟ್ ಕಮಿಶನರುಗಳಿಗೆ ಈ ವಿಷಯಗಳ ಬಗ್ಗೆ ಸ್ವಲ್ಪ ಅಧಿಕಾರವಿತ್ತು. ಆದರೆ ಈಗ ಎಲ್ಲಾ ಅಧಿಕಾರ ಜಿಲ್ಲಾಧಿಕಾರಿಗಳ ಸ್ವಂತ ಕೈಯಲ್ಲಿ ಕೇಂದ್ರೀಕೃತವಾಗಿದೆ. ಇದನ್ನು ಸುಧಾರಣೆ ಎನ್ನೋಣವೇ ಅಥವಾ ಅಧಿಕಾರದ ಅತಿರೇಕ ಕೇಂದ್ರೀಕರಣ ಎನ್ನೋಣವೆ? ಸಾಮಾನ್ಯ ಜನರು ಮಂಗಳೂರು ಯಾತ್ರೆ ಮಾಡುವುದು ಸಾಧ್ಯವೆ? ಯಾರ ಉದ್ಧಾರಕ್ಕಾಗಿ ಈ ತರದ ಕ್ರಮ ಜಾರಿಗೆ ತಂದಿರುವರೋ ದೇವರೇ ಬಲ್ಲ!

ಅಧಿಕಾರಿಗಳು ಸ್ಥಳೀಯ ಪರಿಸ್ಥಿತಿಯನ್ನು ಚೆನ್ನಾಗಿ ಮನನಮಾಡಿಕೊಂಡು, ಜನತಾ ಪ್ರತಿನಿಧಿಗಳ ಸಲಹೆ ಸೂಚನೆಗಳನ್ನು ಕೇಳಿಕೊಂಡ, ಸಾರ್ವಜನಿಕ ಸಂಘ ಸಂಸ್ಥೆಗಳ ಅಭಿಪ್ರಾಯ ತಿಳಿದು, ಅನುಭವಸ್ಥರೊಡನೆ ಸಮಾಲೋಚನೆ ನಡೆಸಿ ಪ್ರಭಾವಿಯಾದ ಆಹಾರ ಧೋರಣೆಯನ್ನು ನಿರೂಪಿಸುವುದು ಈ ದಿಸೆಯಲ್ಲಿ ಅತ್ಯಗತ್ಯ.

ಜಿಲ್ಲಾಧಿಕಾರಿಗಳು ಕೇವಲ ಆಜ್ಞೆ ಜಾರಿ ಮಾಡಿಯೋ, ಅಥವಾ ಎಲ್ಲಾ ಅಧಿಕಾರವನ್ನು ತನ್ನ ಮುಷ್ಟಿಯಲ್ಲಿ ಇರಿಸಿಕೊಂಡೋ ಈ ಜಿಲ್ಲೆಯ ಪರಿಸ್ಥಿತಿಯನ್ನು ಇಷ್ಟು ಸುಧಾರಿಸಿದ್ದು ಸಾಕು. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಆಗ ಪರಿಣಾಮ ಭೀಕರವಾಗಬಹುದು.

ಬದಲಾದ ಈ ಕಾಲಕ್ಕೆ ಸರಿಯಾಗಿ, ಜನತಾ ರಾಜ್ಯದ ಅಧಿಕಾರಿಗಳಾದವರು ಜನಹಿತ ಸಾಧನೆ ಹಾಗೂ ಜನ ಕಲ್ಯಾಣದತ್ತ ಹೆಚ್ಚು ಮನಹರಿಸಿ, ಅಧಿಕಾರದ ಅಂಧಕಾರದಿಂದ ಹೊರಗೆ ಬರುವರೆಂದು ಆಶಿಸಬಹುದೆ?

—ಒರ್ವ ನಾಗರಿಕ.

ಎಲ್ಲೆಲ್ಲಿ ಏನೇನು?

ಸ್ತುತ್ಯ ದಾನ

ಆರೂರು ಕುಟುಂಬದ ಒಡೆತನದಲ್ಲಿರುವ ಶಂಕರ್ ವಿಠಲ್ ಮೋಟಾರ್ ಕಂಪೆನಿ, ಯುನೈಟೆಡ್ ಟ್ರೇಡಿಂಗ್ ಕೋಪೊರೇಶನ್ ಮತ್ತು ವರ್ಕ್‌ಶಾಪ್ ಲಿಮಿಟೆಡ್, ಮಂಗಳೂರು ಇವರು ಈ ಕೆಳಗಿನ ಸಂಸ್ಥೆಗಳಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ 1964ನೇ ವರ್ಷದಲ್ಲಿ ಉದಾರ ದಾನ ಮಾಡಿರುವರು.

ಎಸ್. ಎಂ. ಎಸ್. ಹೈಸ್ಕೂಲು, ಬ್ರಹ್ಮಾವರ ರೂ. 1,000, ಪೆರ್ಡೂರು ಹೈಸ್ಕೂಲು ರೂ. 501, ಅದಮಾರು ಹೈಯರ್ ಸೆಕೆಂಡರಿ ಸ್ಕೂಲ್ ರೂ 1,000, ಕ್ರಿಶ್ಚಿಯನ್ ಹೈಸ್ಕೂಲ್ ಬೆನಿಫಿಟ್ ಟ್ರಸ್ಟ್ ಫಂಡ್, ಉಡುಪಿ, ರೂ. 350, ಪೂರ್ಣಪ್ರಜ್ಞ ಕೋಲೇಜು ರೂ. 1,000 ಮೆಡಿಕಲ್ ರಿಲೀಫ್ ಎಸೋಸಿಯೇಶನ್, ಶಿರ್ವ ರೂ. 2,100, ರೋಟರಿ ಕ್ಲಬ್ ಚೆರಿಟೇಬಲ್ ಟ್ರಸ್ಟ್, ಮಂಗಳೂರು ರೂ. 1,500, ಭಗಿನಿ ಸಮಾಜ, ಮಂಗಳೂರು ರೂ. 220, ದುರ್ಗಾಪರಮೇಶ್ವರೀ ಹೈಸ್ಕೂಲ್, ಕಟೀಲ್ ರೂ. 801, ಇಂಡಿಯನ್ ಮೆಡಿಕಲ್ ಸರ್ವಿಸ್, ಡೆಲ್ಲಿ ರೂ. 200, ಟಿ. ಇ. ಎಮ್. ಗರ್ಲ್ಸ್ ಆರ್ಫನೇಜ್, ಮೂಲ್ಕಿ ರೂ. 200, ಮಹಿಳಾ ಕೇಂದ್ರ, ಸುರತ್ಕಲ್ ರೂ 200, ಭಾರತ ಹೈಸ್ಕೂಲ್, ಉಳ್ಳಾಲ ರೂ. 501, ವಿದ್ಯಾಬೋಧಿನಿ ಎಜುಕೇಶನಲ್ ಸೊಸೈಟಿ, ಬಾಳಿಲ ರೂ. 501, ಹಿಂದೂ ವಿದ್ಯಾದಾಯಿನಿ ಸಂಘ, ಸುರತ್ಕಲ್ ರೂ. 501, ಶಿತಾರ್ಡಿ ಎಜುಕೇಶನಲ್ ಸೊಸೈಟಿ ರೂ. 501, ಹಿಂದ್ ಕುಷ್ಠ ನಿವಾರಣಾ ಸಂಘ, ದ. ಕ. ರೂ. 1,000, ಎನ್ಮೂರ್ಳ್ ವಿದ್ಯೋದಯ ಸಂಘ ರೂ. 250, ಮಹಾವೀರ ವಿದ್ಯಾವರ್ಧಕ ಸಂಘ, ಮೂಡಬಿದ್ರಿ ರೂ. 1,500, ವಿವೇಕಾನಂದ ಶತಮಾನೋತ್ಸವದ ಸಮಿತಿ, ಬೆಂಗಳೂರು ರೂ. 2,000.

ಅಲ್ಲದೆ ಶಿಷ್ಯವೃತ್ತಿಗಾಗಿ ಈ ಕೆಳಗಿನಂತೆ ದತ್ತಿ ಕೊಟ್ಟಿರುವರು—ಎಂ. ಜಿ. ಎಂ. ಕಾಲೇಜ್ ರೂ 2000, ಬೋರ್ಡ್ ಹೈಸ್ಕೂಲ್, ಉಡುಪಿ. ರೂ. 1,000, ಪೂರ್ಣಪ್ರಜ್ಞ ಕಾಲೇಜ್ ರೂ. 2,000, ಜೇಕಾರ್ಡಿ ಹೈಸ್ಕೂಲ್ ರೂ. 1,000,

ಅ| ಕ| ಸಾಹಿತ್ಯ ಸ್ಪರ್ಧೆ

ಮಲ್ಲೇಶ್ವರದ ಶ್ರೀ ಸರಸ್ವತಿ ಕಲಾನಿಕೇತನದ ಸಂಸ್ಥೆಯ ಆಶ್ರಯದಲ್ಲಿ ಕನ್ನಡದಲ್ಲಿ ಪ್ರಬಂಧ, ಸಣ್ಣ ಕಥೆ ಹಾಗೂ ಕವನಗಳ ಸ್ಪರ್ಧೆಯನ್ನು ಸಂಸ್ಥೆಯ ತೃತೀಯ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಲಾಗಿದೆ.

"ಸಾಹಿತ್ಯ ಜನಜೀವನದ ಪ್ರತಿಬಿಂಬ" ಎಂಬುದು ಪ್ರಬಂಧದ ವಿಷಯ. ಪ್ರಬಂಧವು ಸಾವಿರದ ನೂರು ಪದಗಳಿಗೂ, ಕಥೆಯು ಎರಡು ಸಾವಿರ ಪದಗಳಿಗೂ, ಕವನವು ಫೂಲ್ಸ್‌ಕ್ಯಾಪ್ ಹಾಳೆಯ ಇಪ್ಪತ್ತು ಸಾಲುಗಳಿಗೂ ಮೀರಿರಬಾರದು.

ಪ್ರವೇಶಧನ ಪ್ರತಿಯೊಂದು ವಿಭಾಗದ ಪ್ರತಿ ಕೃತಿಗೂ ೧ ರೂಪಾಯಿ. ಸ್ಪರ್ಧೆಗೆ ಕೊನೆಯ ದಿನ ಫೆಬ್ರುವರಿ ೧೫ನೇ ತಾರೀಖು. ವಿವರಗಳನ್ನು ಶ್ರೀಮತಿ ಸರೋಜ, ಬಿ. ಎ., ಸಂಚಾಲಿಕೆ, ಸಾಹಿತ್ಯ ಸ್ಪರ್ಧೆ, ಶ್ರೀ ಸರಸ್ವತಿ ಕಲಾನಿಕೇತನ, ನಂ. ೧೭೦ ೧೬ನೇ ಅಡ್ಡರಸ್ತೆ, ಮಲ್ಲೇಶ್ವರ ಬೆಂಗಳೂರು-೩ ಇವರಿಂದ ಪಡೆಯಬಹುದು.

ಸ್ನೇಹ ಸಭೆ

ಉಡುಪಿ, ಹಿಂದೀ ಸೇವಾ ಸದನದ ಸ್ನೇಹ ಸಭೆಯು ಈ ೩ರಂದು ಡಾ| ಟಿ ಮಾಧವ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಉ. ಲಕ್ಷ್ಮೀನಾರಾಯಣ ಶೆಣೆಯವರು ಉಡುಪಿಯ ಹಿಂದೀ ಸೇವಾ ಸಂಸ್ಥೆಗಳ ಕುರಿತು ಭಾಷಣ ಮಾಡಿದರು. ಅಧ್ಯಕ್ಷರು ಸದನದ ಚಟುವಟಿಕೆಗಳನ್ನು ಮೆಚ್ಚಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಸ್ಮರಣಾರ್ಥ ಯಕ್ಷಗಾನ

ಉಡುಪಿ, ಯಕ್ಷಗಾನ ಕಲಾಮಂಡಳದ ಮಾಜಿ ಉಪಾಧ್ಯಕ್ಷ ದಿವಂಗತ ಪಂದುಬೆಟ್ಟು ಸೀನ ಶೆಟ್ಟಿಯವರ ಸ್ಮರಣಾರ್ಥ ಉಡುಪಿ, ಶಾಲೆಯ ಮಾಡದಲ್ಲಿ ಸುಧನ್ವ ಕಾಳಗವೆಂಬ ಯಕ್ಷಗಾನ ಕೂಟವು ಶ್ರೀಗಳಾದ ಕೆ. ನಾರಾಯಣ ಶೆಟ್ಟಿಯವರ ಹಾಡುಗಾರಿಕೆ, ಮಟ್ಟಿ ಸುಬ್ಬರಾವು, ಮಂಜುನಾಥ ಕಾಮತ, ಇವರ ಮೃದಂಗ ವಾದನ, ಕೋಟಿ ಸುಬ್ಬರಾವ್ ಸೀತಾನದಿ ಗಣಪಯ್ಯ ಶೆಟ್ಟಿ, ವೆಂಕಟಾಚಲ ಭಟ್, ಜನ್ನಿಬೆಟ್ಟು ಗೋಪಾಲ ಶೆಟ್ಟಿ, ಪುಟ್ಟೆಲ್ಲು ಕೃಷ್ಣಯ್ಯ ಶೆಟ್ಟಿ, ಕೆ ರಾಮಶೆಟ್ಟಿ ಇವರೇ ಮೊದಲಾದ ಕಲಾವಿದರು ಭಾಗವಹಿಸಿದ್ದರು. ಕೊನೆಯಲ್ಲಿ ಜನ್ನಿಬೆಟ್ಟು ಗೋಪಾಲ ಶೆಟ್ಟಿ ಧನ್ಯವಾದದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಕೊನೆಗೊಂಡಿತು.

ದುಃಖಸೂಚಕ ಸಭೆ

ಉಡುಪಿ, ತಾ. 14, ಯಕ್ಷಗಾನ ಕಲಾಮಂಡಲದ ಕಾರ್ಯಕಾರೀ ಸಮಿತಿಯ ಸಭೆಯು ಶ್ರೀ ಕೆ. ರಾಘವಾಚಾರಿಯವರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಪೋಷಕರೂ, ಉಜ್ವಲ ಯಕ್ಷಗಾನಾಭಿಮಾನಿಗಳೂ ಆಗಿದ್ದ ಶ್ರೀ ಹಾವಂಜೆ ಮಹಾಬಲ ಶೆಟ್ರ ನಿಧನಕ್ಕಾಗಿ ಸಂತಾಪ ವ್ಯಕ್ತಪಡಿಸುತ್ತಾ ಶ್ರೀ ಕೆ. ರಾಮಶೆಟ್ರು ದಿವಂಗತರ ಗುಣಗಾನ ಗೈದರು. ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಶೆಟ್ರು ಮಂಡಿಸಿದ ಸಂತಾಪ ಸೂಚಕ ಠರಾವು ಮಂಜೂರಾಯಿತು. ಅನಂತರ ಮಕರ ಸಂಕ್ರಾಂತಿ ಉತ್ಸವದ ಅಂಗವಾಗಿ ಶ್ರೀಮದನಂತೇಶ್ವರ ದೇವಾಲಯದ ಹೊರ[illegible]ಯಲ್ಲಿ ಶ್ರೀ ಕೃಷ್ಣ ರಾಯಭಾರ ಎಂಬ ಕಥಾಭಾಗದ ಯಕ್ಷಗಾನ ಕೂಟವು ಶ್ರೀ ಕೆ. ನಾರಾಯಣ ಶೆಟ್ರ ಹಾಡುಗಾರಿಕೆ, ಶ್ರೀ ಮಟ್ಟಿ ಗೋವರ್ಧನರಾವ್ ಮತ್ತು ಶ್ರೀ ಸಗ್ರಿ ಕಟ್ಟೆ ಚಾರಿಯವರ ಮೃದಂಗವಾದನ ಹಾಗೂ ಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ, ಶ್ರೀ ಕೋಟಿ ಸುಬ್ಬರಾವ್, ಶ್ರೀ ಲಕ್ಷ್ಮೀ ಜನಾರ್ದನ ಭಟ್, ಶ್ರೀ ಕೆ. ಕೃಷ್ಣಯ್ಯ ಶೆಟ್ಟಿ, ಶ್ರೀ ಕೆ. ರಾಘವಾಚಾರಿ, ಶ್ರೀ ವೆಂಕಟಾಚಲ ಭಟ್, ಶ್ರೀ ಜನ್ನಿಬೆಟ್ಟು ಗೋಪಾಲ ಶೆಟ್ಟಿ, ಶ್ರೀ ಆನಂದ ಗಾಣಿಗ, ಶ್ರೀ ರಾಘುಶೆಟ್ಟಿ, ಶ್ರೀ ಕೆ. ರಾಮಶೆಟ್ಟಿ ಮೊದಲಾದ ಕಲಾವಿದರ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿತು.

ಸರಕಾರಿ ತರಬೇತಿ ಕಾಲೇಜಿನ ವಾರ್ಷಿಕೋತ್ಸವ

ಕಳೆದ ತಾ. 16ರಂದು ಮಂಗಳೂರು ಸರಕಾರೀ ತರಬೇತಿ ಕಾಲೇಜಿನ ವಾರ್ಷಿಕೋತ್ಸವವು ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ನೆರವೇರಿತು. ಆರಂಭದಲ್ಲಿ ಯೂನಿಯನ್ನಿನ ಉಪಾಧ್ಯಕ್ಷೆ ಕುಮಾರಿ ಗಟ್ರೂಡ್ ಫರ್ನಾಂಡಿಸ್‌ರವರು ಸ್ವಾಗತಿಸಿದರು. ವೈಸ್ ಪ್ರಿನ್ಸಿಪಾಲ್ ಶ್ರೀ ವಿ. ಎಸ್. ಕೃಷ್ಣರಾವ್‌ರವರು ಕಾಲೇಜಿನ ವರದಿಯನ್ನೂ, ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಕೃಷ್ಣರಾವ್‌ರವರು ಹೈಸ್ಕೂಲಿನ ವರದಿಯನ್ನೂ ಓದಿದರು. ಹಳೇ ವಿದ್ಯಾರ್ಥಿ ಶ್ರೀ ಎಸ್. ವಿ. ಚಂದ್ರಶೇಖರರವರು ಮಾಡಿದ ಸ್ವಾಗತಕ್ಕೆ ರೆ| ಫಾ| ಪೀಟರ್ ಕುಂಞರವರು ಉತ್ತರ ನೀಡಿದರು.

ಡಾ| ಆಳ್ವರು ಮಾತನಾಡುತ್ತಾ ಕಾಲೇಜಿನ ಪ್ರಗತಿಯನ್ನೂ, ಪ್ರಿನ್ಸಿಪಾಲ್ ಎಂ. ಎಚ್. ನಾಯಕರ ಕಾರ್ಯತತ್ಪರತೆಯನ್ನೂ ಶ್ಲಾಘಿಸಿ, ವಿದ್ಯೆಯ ಮಹತ್ವವನ್ನು ವಿವರಿಸಿ ಮಾನವನ ಆರೋಗ್ಯಕ್ಕೆ ಯೋಗ್ಯ ಶಿಕ್ಷಣ ಅವಶ್ಯವೆಂದರು.

ಕೊನೆಯಲ್ಲಿ ಮನರಂಜನಾ ಕಾರ್ಯಕ್ರಮಗಳು ನೆರವೇರಿದುವು.

ದ. ಕ. ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

REP 124/1964
in O. S 200/1958.

ಪಿ ರಘುರಾಜ ಕಂಬಳಿ —ಅರ್ಜಿದಾರ.

ಮತ್ತು

ಕಿನ್ನಿ ಯಾನೆ ಜ್ವಾಲಸ್ತಿ, ಬೈದ್ಯಯ್ಯ ಅಧಿಕಾರಿಗಳ ಮಗಳು, ಬೆಳ್ತಂಗಡಿ ತಾಲ್ಲೂಕು ಹೊಸಂಗಡಿ ಗ್ರಾಮದ ಬಾಲ್ನಗುತ್ತು ಎಂಬಲ್ಲಿರುವವಳು —ಎದ್ರಿ.

ಕೋರ್ಟು ಹುಕುಂ ಪ್ರಕಾರ ಎದ್ರಿಗೆ ತಿಳಿಸುವುದೇನೆಂದರೆ—

ಮೇಲ್ಕಂಡ ಅನುಲ್ಬಾರಿ ಪ್ರಕಾರ ಅರ್ಜಿದಾರನಿಗೆ ಎದ್ರಿಯಿಂದ ಬರಬೇಕಾದ ಡಿಕ್ರಿ ಹಣ, ಖರ್ಚು ಇತ್ಯಾದಿ ರೂ. 1386-12 ಮತ್ತು ಖರ್ಚು ಮುಂದಿನ ಬಡ್ಡಿ ಸಹಾ ವಸೂಲು ಕುರಿತು ಹೊಸಂಗಡಿ ಗ್ರಾಮದ ಅನಂತಯ್ಯ ಮುದ್ಯರು ಎದ್ರಿಗೆ ಮೂಡಬಿದ್ರೆ ಸ. ರಿ. ಆಫೀಸ್ ನಂಬ್ರ 9/1919ಕ್ಕೆ ಬರೆದು ಕೊಟ್ಟ ಅಸಲು ಬಡ್ಡಿ ಐವೇಜನ್ನು ಅನಂತಯ್ಯ ಮುದ್ಯರ ವಿಧವೆ ಧರ್ಣಮ್ಮ ಹೆಂಗ್ಸಿನಿಂದ ವಸೂಲು ಮಾಡುವ ವಸೂಲಿ ಹಕ್ಕನ್ನು ಜಪ್ತಿಪಡಿಸಿ ನಿರ್ಬಂಧಿಸೋಣಾಗಿದೆಯೆಂತಲೂ ಸದ್ರಿ ಅನುಲ್ಬಾರಿಯನ್ನು ತಾ. 28-1-1965ಕ್ಕೆ ತನಿಖೆಗೆ ಇಟ್ಟಿರುತ್ತದೆಯೆಂತಲೂ ಈ ಮೂಲಕ ತಿಳಿಸೋಣಾಗಿಯದೆ. ಈ ಕುರಿತು ಆಕ್ಷೇಪ ಇದ್ದರೆ ಸದ್ರಿ ವ್ಯಾದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗತಕ್ಕದ್ದು. ತಪ್ಪಿದ್ದರೆ ಸದ್ರಿ ಅನುಲ್ಬಾರಿ ಮುಂದುವರಿಸಲಾದೀತು.

N. J. Kadamba,
Advocate.

ಬೆಳ್ತಂಗಡಿ, 16-1-1965

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ಬಯಕೆ ಹಣ್ಣಾಯಿತು

(ಎರಡನೇ ಪುಟದಿಂದ)

೪

"ಬಾರಯ್ಯ ಗುಂಡ, ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದಂತಾಯ್ತು" ಎಂದು ಹಳೆಯ ಗೆಳೆಯನನ್ನು ಆದರದಿಂದಲೇ ಸ್ವಾಗತಿಸಿದರು ರಾಮಣ್ಣ.

"ನೀನು ಲಕ್ಷ್ಮಿ ಪುತ್ರ ಕಣಯ್ಯಾ. ನನ್ನದು ದರಿದ್ರ ಲಕ್ಷ್ಮಿ ಅಷ್ಟೆ" ಎಂದು ಗೆಳೆಯನ ಪಕ್ಕದಲ್ಲಿಯೇ ಕುಳಿತುಕೊಂಡರು ಗುಂಡಣ್ಣ.

ಪರಸ್ಪರ ಕುಶಲ ಸಂಭಾಷಣೆ, ವಿಚಾರ ವಿನಿಮಯವಾಯಿತು.

ರಾಮಣ್ಣನವರ ಪ್ರಶ್ನೆಗೆ ದುಗುಡದಿಂದಲೇ "ನನ್ನ ಮಗಳಿಗೆ ಒಂದು ಗಂಡು ಹುಡುಕಿಕೊಂಡು ಬಂದಿದ್ದೆ ರಾಮು... ಈಗಿನ ಕಾಲದ ಗಂಡುಗಳಿಗೂ ಕಪಿಗಳಿಗೂ ವ್ಯತ್ಯಾಸವೇ ಇಲ್ಲ. ಕಳೆದ ವಾರ ಬಂದು ಇಂದಿರಾನ ಒಪ್ಪಿ ಈಗ ಆಗುವುದಿಲ್ಲವೆಂದ. ನನ್ನ ಗ್ರಹಚಾರ, ಎಂದಿಗೆ ಆ ಹುಡುಗಿಗೆ ಕಂಕಣ ಬಲ ಕೂಡಿ ಬರುತ್ತದೆಯೋ" ಎಂದರು ಗುಂಡಣ್ಣ.

"ನಿಜ ಗುಂಡ, ಎಲ್ಲ ವಿಚಿತ್ರ" ಎಂದು ಸಹಾನುಭೂತಿ ವ್ಯಕ್ತಪಡಿಸಿದರು ರಾಮಣ್ಣ. ಅದೇ ವೇಳೆಗೆ ಪೇಟೆಯಲ್ಲಿ ತಿರುಗಾಡಲು ಹೋಗಿದ್ದ ಕೃಷ್ಣಮೂರ್ತಿ ಮನೆಗೆ ಹಿಂದಿರುಗಿದ.

ಗುಂಡಣ್ಣನವರನ್ನು ಗುರುತಿಸಿದ ಕೃಷ್ಣಮೂರ್ತಿ ಸೌಜನ್ಯದಿಂದ—"ನಮಸ್ಕಾರ ಸ್ವಾಮಿ" ಎಂದು ಕೈಮುಗಿದ. ಗುಂಡಣ್ಣ ಆಶ್ಚರ್ಯದಿಂದ ಅವನನ್ನೇ ದಿಟ್ಟಿಸಿದರು. ರಾಮಣ್ಣ ನಗುತ್ತಾ "ಏನೋ ಗುಂಡ, ಹಾಗೆ ನೋಡುತ್ತಿ? ಅವನು ನನ್ನ ಎರಡನೇ ಮಗ ಕಣೋ" ಎಂದರು.

"ಸಂತೋಷವಪ್ಪ . ಪರಿಚಯವೂ ಇದೆ. ಇವರು ಬೆಂಗಳೂರು ಆಫೀಸು ಮ್ಯಾನೇಜರರಲ್ಲವೇ" ಎಂದರು ಗುಂಡಣ್ಣ. ರಾಮಣ್ಣ ಮಿತ್ರನೊಂದಿಗೆ ಜೀವನದ ವಿಷಯವನ್ನು ಪ್ರಸ್ತಾಪಿಸಲು ಪ್ರಾರಂಭಿಸಿದರು.

೦ ೦ ೦

"ಇವರೇ ಅತ್ತಿಗೆ, ಇಂದಿರಾ ತಂದೆ"

"ಸರಿ ಕಣೋ ನಾನು ಹೇಗೆ ವಿಷಯವನ್ನು ಪ್ರಾರಂಭ ಮಾಡಲೋ.... ಅತ್ತಿಗೆ ಹೇಳಿದ್ದೇನೆ...ಸ್ವಲ್ಪ ತಾಳು."

"ಆಗಲಿ ನನ್ನನ್ನ...."

"ನೀನು ಮಾನಧನ ಗೊತ್ತು ಅತ್ತೆಯವರಿಂದಲೇ ಸಸೂತ್ರವಾಗಿ ನಡೆಯಬೇಕು ಹಾಗೆ ಮಾಡೋಣ"

"ಸನ್ನಿಷ್ಟ ಅತ್ತಿಗೆ" ಎಂದ ಕೃಷ್ಣಮೂರ್ತಿ.

ಹಿರಿಯ ಸೊಸೆ ಮತ್ತು ಕಿರಿಯ ಮಗ ಇಬ್ಬರೂ ಅನ್ನಪೂರ್ಣಮ್ಮನವರಿಗೆ ಎಲ್ಲ ಸಂಗತಿಯನ್ನು ವಿವರಿಸಿ ಕೆಲವು ವಿಷಯವನ್ನು ಗೋಪ್ಯವಾಗಿ ಇಡುವಂತೆ ತಿಳಿಸಿದರು. ಶಾರದಮ್ಮ ಯಾವ ಗುಟ್ಟನ್ನು ಉಳಿಸದೆ ಮೊದಲೇ ಅತ್ತಿಗೆ ಎಲ್ಲ ಸಂಗತಿಯನ್ನೂ ತಿಳಿಸಿದ್ದರು ಗುಂಡಣ್ಣನವರೊಂದಿಗೆ ವಿವಾಹ ಪ್ರಸ್ತಾಪ ಮಾಡುವ ಮುಂಚೆಯೇ ಅವರು ತಾವಾಗಿಯೇ ಅವರ ಮನೆಗೆ ಬಂದರು. ಅನ್ನಪೂರ್ಣಮ್ಮ ನಗುತ್ತಾ "ಅಂತೂ ಒಟ್ಟಿಗೆ ನೀನೇ ಸರಿಯಾದ ಗುರು ಕಣೆ ಶಾರದಾ.... ಎಲ್ಲಿಯಾದರೂ ಸುಖವಾಗಿರಿ. ಸದ್ಯ ಎಂದು ಹಾರೈಸಿದರು.

ಮನೆಯವರೆಲ್ಲರೂ ಗುಂಡಣ್ಣನವರೊಂದಿಗೆ ಊಟಕ್ಕೆ ಕುಳಿತಿದ್ದರು. ಅನ್ನಪೂರ್ಣಮ್ಮ ಸೊಸೆ ಶಾರದಮ್ಮನೊಂದಿಗೆ ಬಡಿಸುತ್ತಿದ್ದರು.

"ನೀವು ಮನೆಗೆ ಬಂದ ಅತಿಥಿಗಳು, ನೀವು ಸಂತೋಷಪಡಬೇಕು. ಹಾಗೆಯೇ ನಿಮ್ಮಲ್ಲಿ ಒಂದು ಅಮೂಲ್ಯ ವಸ್ತುವಿದೆ. ಬೇಡುತ್ತೇನೆ ಕೊಡುತ್ತೀರಾ" ಎಂದು ಅನ್ನಪೂರ್ಣಮ್ಮ ಗುಂಡಣ್ಣನವರನ್ನು ಪ್ರಶ್ನಿಸಿದರು.

"ನಾನು ಬಡಿಗೈದಾಸ ತಾಯಿ. . ನಿಮ್ಮ ಮಾತೇ ಅರ್ಥವಾಗುವುದಿಲ್ಲ, ನೀವು ಸಾಕ್ಷಾತ್ ಅನ್ನಪೂರ್ಣೇಶ್ವರಿ ... ಸಂಕೋಚವಿಲ್ಲದೆ ಹೇಳಿ"

"ನಿಮ್ಮ ಮಗಳು ಇಂದಿರಾ ನಮ್ಮ ಸೊಸೆಯಾಗಬೇಕಷ್ಟೆ" ಎಂದರು ಅನ್ನಪೂರ್ಣಮ್ಮ.

"ಗುಂಡಣ್ಣ, ರಾಮಣ್ಣ ಇಬ್ಬರೂ ಕಕ್ಕಾಬಿಕ್ಕಿಯಾದರು. ಗುಂಡಣ್ಣನವರ ಕಣ್ಣಿಂದ ಆನಂದಾಶ್ರು ಹರಿಯಿತು.

ಸಂತೋಷದ ಭರದಲ್ಲಿ ಅವರ ಬಾಯಿಂದ ಮಾತೇ ಬಾರದಾಯಿತು. ರಾಮಣ್ಣ "ಏನೂ ಹೇಳಬೇಡ ಗುಂಡ. ನಿನ್ನ ಮನಸ್ಸಿನ ಸ್ಥಿತಿ ನನಗೆಲ್ಲರಿಗೂ ತಿಳಿದಿದೆ. ಅವಳ ಬೇಡಿಕೆ ಸಹಜವಾದದ್ದೇ ..." ಎಂದರು ಸಂತೈಸುವ ದನಿಯಲ್ಲಿ.

ಕೃಷ್ಣಮೂರ್ತಿಯ ಮುಖದಲ್ಲಿ ವಿಜಯದ ಸಂತಸ ತುಂಬಿತ್ತು.

ಅನ್ನಪೂರ್ಣಮ್ಮನವರು ಎಚ್ಚರಿಕೆ ಕೊಡುವಂತೆ—"ಆದರೆ, ಒಂದು ನಿಬಂಧನೆ ಇದೆ ನಮ್ಮ ಮನೆಯ ವಿವಾಹ. ನೀವು ಏನನ್ನೂ ಹೇಳಬಾರದು. ಏನನ್ನೂ ಪ್ರಶ್ನಿಸಬಾರದು. ಕಂಡೂ ಕಾಣದವರಂತಿರಬೇಕು. ಅಲ್ಲದೆ ನಿಮ್ಮ ಮಗಳಿಗೂ ಈ ವಿಷಯವನ್ನು ತಿಳಿಸಬಾರದು, ಎಲ್ಲ ತಿಳಿದಿದ್ದರೂ ತಿಳಿಯದವರಂತಿರಬೇಕು. ಅಷ್ಟೆ. ಉಳಿದುದೆಲ್ಲ ನಮ್ಮ ಪಾಲಿನದು" ಎಂದರು.

"ಕೃತಾರ್ಥನಾದೆ ತಾಯಿ" ಎಂದು ಗುಂಡಣ್ಣ ಕೃತಜ್ಞತಾಪೂರ್ವಕವಾಗಿ ನುಡಿದರು.

ಜಾತಕಾನುಕೂಲವಾದ ತರುವಾಯ ಮದುವೆಯ ದಿನವೂ ಗೊತ್ತಾಯಿತು. ಎಲ್ಲದಕ್ಕಿಂತಲೂ ಮನಸ್ಸು ಕಲೆತಿದ್ದವು.

ಕೃಷ್ಣಮೂರ್ತಿ ಅತ್ತಿಗೆಗೆ ಗುಟ್ಟಾಗಿ ಒಂದು ಸಂಗತಿ ತಿಳಿಸಿದ.

೫

"ನನ್ನನ್ನು ಕ್ಷಮಿಸುತ್ತೀಯಾ ಇಂದಿರಾ?"

"ತಪ್ಪು ಮಾಡಿದ್ದರೆ ತಾನೆ ಕ್ಷಮಿಸುವುದು? ನೀವೇನು ತಪ್ಪು ಮಾಡಿದ್ದೀರಿ."

"ನಿನಗೆ ನಿರಾಶೆಯಾಗಿರಬಹುದು....ನಿನ್ನನ್ನೇ ವಿವಾಹವಾಗಲು ಮನಸ್ಸು ಮಾಡಿದ್ದೆ ಇಂದಿರಾ... ನನ್ನ ತಂದೆ ಅವರ ಹಳೆಯ ಗೆಳೆಯರೊಬ್ಬರ ಮಗಳನ್ನು ನೋಡಿ ಒಪ್ಪಿದ್ದಾರೆ. ನಮ್ಮ ತಾಯಿಯ ಸಮ್ಮತಿಯೂ ಇದೆ. ಅವರನ್ನು ವಿರೋಧಿಸಿ ನಾನು ಬೇರೆ ಮದುವೆಯಾಗುವಂತಿಲ್ಲ. ಆ ಹುಡುಗಿಯೂ ಬಡವರ ಮಗಳು. ತುಂಬ ಒಳ್ಳೆಯ ಹುಡುಗಿ...ನೀನು ತಪ್ಪು ಭಾವಿಸಬೇಡ."

"ನೀವು ಸುಖವಾಗಿರಬೇಕೆಂಬುದೇ ನನ್ನ ಆಶೆ. ಅದಕ್ಕಿಂತಲೂ ನನಗೆ ಹೆಚ್ಚಿನದೇನು ಬೇಕು...ಮದುವೆಯಾಗಿ ಸುಖವಾಗಿರಿ" ಎಂದು ಮನಸ್ಸಿನ ದುಃಖವನ್ನು ತಡೆಹಿಡಿದು ಹೇಳಿದಳು ಇಂದಿರಾ.

"ಒಂದು ನಿಬಂಧನೆ ಇಂದಿರಾ".

"ಏನು ಹೇಳಿ...'

"ಮದುವೆಗೆ ಸಮ್ಮತಿಸಿದಂತೆ ನನ್ನ ಮದುವೆಗಾಗಿ ನಮ್ಮ ಮನೆಗೆ ಕೆಲವು ದಿನ ಮುಂಚೆಯೇ ಬರುವುದಾದರೆ ಮಾತ್ರ ನಾನ ಮದುವೆಗೆ ಹೋಗುತ್ತೇನೆ ಇಲ್ಲವಾದರೆ ಇಲ್ಲ'

"ನಿಮ್ಮ ದಮ್ಮಯ್ಯ ದಯವಿಟ್ಟು ಹಾಗೆ ಮಾಡಬೇಡಿ"

"ಇಂದಿರಾ ನೀನು ಬಾರದಿದ್ದಲ್ಲಿ ಖಂಡಿತ ಹೋಗುವುದಿಲ್ಲ."

"ಇದೊಳ್ಳೆ ಮೊಂಡಾಟ........ನಮ್ಮ ತಂದೆ ."

"ನಾನು ಒಪ್ಪಿಸುತ್ತೇನೆ...ನಿಮ್ಮ ತಂದೆಯವರೂ ಬರುವಂತೆ ಮಾಡಿಸುತ್ತೇನೆ"

"ಸಂತೋಷ ನೀವು ಸುಖವಾಗಿದ್ದರೆ ಸಾಕು...ಅದೇ ನನ್ನ ಮನದಾಸೆ" ಎಂದು ದುಃಖೋದ್ವೇಗದಿಂದಲೇ ನುಡಿದು ನಡೆದಳು ಇಂದಿರಾ.

ಕೃಷ್ಣಮೂರ್ತಿ ಮನಸ್ಸಿನಲ್ಲಿಯೇ ನಕ್ಕ.

೬

"ಸಂಕೋಚಪಟ್ಟುಕೋ ಬೇಡ ಇಂದಿರಾ. ಇದು ನಿನ್ನ ಮನೆ ಇದ್ದಂತೆಯೇ. . ಕೃಷ್ಣಮೂರ್ತಿ ಎಲ್ಲವನ್ನೂ ಹೇಳಿದ್ದಾನೆ. ನೀನು ಬಂದುದು ಬಹಳ ಸಂತೋಷವಮ್ಮ" ಎಂದು ಇಂದಿರಾನನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು ಶಾರದಮ್ಮ. "ನೀನು ಬಂಗಾರದಂತಹ ಹೆಣ್ಣು ಮಗಳು ಕಣೆ ತಾಯಿ ನೂರುವರ್ಷ ಸುಖವಾಗಿ ಬಾಳು" ಎಂದು ಅನ್ನಪೂರ್ಣಮ್ಮ ಇಂದಿರಾಳ ರೂಪ, ಗುಣ, ಸ್ವಭಾವ ಕಂಡು ಸಂತುಷ್ಟರಾಗಿ ನುಡಿದರು. ಇಂದಿರಾ ಮನೆಯವರೆಲ್ಲರ ಮನಸ್ಸನ್ನೂ ಸೂರೆಗೊಂಡಿದ್ದಳು.

"ನಿಮ್ಮನ್ನೂ ಒಂದು ವಿಷಯ ಕೇಳಬೇಕಿತ್ತು"

"ಸಂಕೋಚವೇನು ಕೇಳು ಇಂದಿರಾ"

"ನಿಮ್ಮ ಹೆಂಡತಿಯಾಗಲಿರುವ ಹುಡುಗಿಯನ್ನು ನೋಡಲೇ ಇಲ್ಲ"

"ಅಷ್ಟೇತಾನೇ. ಅತ್ತಿಗೆಗೆ ಹೇಳುತ್ತೇನೆ. ಸಂಜೆ ತೋರಿಸುತ್ತಾರೆ."

"ಅವರು ಎಲ್ಲಿದ್ದಾರೆ.."

ಅದೆಲ್ಲ ಬೇಡ ಇಂದಿರಾ ನೀನು ನನ್ನ ಭಾವಿ ಪತ್ನಿಯನ್ನು ನೋಡುವೆಯಂತೆ"

ಎಂದು ಸಮಾಧಾನ ಹೇಳಿದ ಕೃಷ್ಣಮೂರ್ತಿ ಕೂಡಲೇ ಗುಟ್ಟಾಗಿ ಸಂಗತಿಯನ್ನು ಅತ್ತಿಗೆಗೂ ತಿಳಿಸಿದ.

ಶಾರದಮ್ಮ ನಗುತ್ತಾ "ಒಳ್ಳೆ ಹುಡುಗ ಸಹವಾಸವಪ್ಪ" ಎಂದರು

೦ ೦ ●

ಜರತಾರಿಯ ಹಸುರಂಚಿನ ಸೀರೆ. ಅದಕ್ಕೊಪ್ಪುವ ಕುಪ್ಪಸ, ವಜ್ರದೋಲೆ. ಬಂಗಾರದ ಸರ ಎಲ್ಲವನ್ನೂ ಇಂದಿರಾ ಮುಂದಿಟ್ಟು ಶಾರದಮ್ಮ ಎಲ್ಲವನ್ನು ತೊಟ್ಟು ಅಲಂಕಾರ ಮಾಡಿಕೊಂಡಿರಮ್ಮ 'ಸಂಜೆಗೆ ಆ ಹುಡುಗಿ ತೋರಿಸುತ್ತೇನೆ' ಎಂದರು.

"ನನಗೇತಕ್ಕೆ ಇದೆಲ್ಲ" ಎಂದು ಆಶ್ಚರ್ಯದಿಂದಲೇ ಪ್ರಶ್ನಿಸಿದಳು ಇಂದಿರಾ.

"ನೀನು ನಮ್ಮ ಮನೆಯ ಹುಡುಗಿ ಎಂದು ಹೇಳಿಕೊಂಡಿದ್ದೇವೆ, ನೀನು ಒಬ್ಬೋಳೆ ಗೌರಮ್ಮನಂತೆ ನಿತ್ಯದ ಉಡುಪಿನಲ್ಲಿಯೇ ಇದ್ದರೆ ನಮಗೆ ತಾನೆ ಕೊಂಕು ಮಾತು....ಮಾತು ಬೇಡ ಸಿದ್ಧವಾಗಿರಮ್ಮ' ಎಂದು ವಾದಿಸಿದರು ಶಾರದಮ್ಮ.

ಇಂದಿರಾ ಸರ್ವಾಲಂಕಾರ ಭೂಷಿತಳಾಗಿ ಕೋಣೆಯಲ್ಲಿ ಕುಳಿತಿದ್ದಳು. ಎಷ್ಟು ಕಾಲವಾದರೂ ಯಾರೊಬ್ಬರ ದರ್ಶನವೂ ಆಗಲಿಲ್ಲ. ಶಾರದಮ್ಮ "ಇಂದಿರಾ" ಎನ್ನುತ್ತ ಪ್ರವೇಶಿಸಿದರು. "ಅವರು ಬಂದಿದ್ದಾರಾ ಅಕ್ಕ" ಎನ್ನುತ್ತ ನಿಂತಳು ಇಂದಿರಾ.

"ತೋರಿಸಬೇಕೆ ಇಂದಿರಾ"

"ಹುಂ. ಅಕ್ಕ"

'ಬಾ' ಎಂದು ಕರೆದುಕೊಂಡು ಹೊರಟ ಶಾರದಮ್ಮ ಪುರುಷ ಪ್ರಮಾಣದ ನಿಲುವುಗನ್ನಡಿಯ ಮುಂದೆ ನಿಲ್ಲಿಸಿ "ನೋಡು ಇಂದಿರಾ ಮೂರ್ತಿ ಹೆಂಡತಿ" ಎಂದರು. ಇಂದಿರಾ ನಾಚಿಕೆಯಿಂದ ಶ್ರಾವಣಮ್ಮನನ್ನಪ್ಪಿಕೊಂಡು 'ಅಕ್ಕಾ' ಎಂದಳು.

ಶಾರದಮ್ಮ ಇಂದಿರಾಳ ಬೆನ್ನನ್ನು ಮೃದುವಾಗಿ ತಟ್ಟುತ್ತಾ 'ಏನು ತಂಗಿ?' ಎಂದು ನಸುನಕ್ಕರು.



NAVAYUGA 21-1-1965
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೧-೧-೬೫ರಿಂದ ೨೭-೧-೬೫ರ ವರೆಗೆ

೧. ಮೇಷ

ದೈವಬಲ ಸಂಪನ್ನರಾದ ನೀವು ಇಂದಿನ ದಿನಗಳನ್ನು ಸದುಪಯೋಗಪಡಿಸಿಕೊಳ್ಳಿರಿ. ಧೈರ್ಯದಿಂದ ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗಿರಿ. ಏನೊಂದೂ ಎಡರುತೊಡರುಗಳಿಲ್ಲದೆ ನಿಮ್ಮ ಸಕಲ ಬಯಕೆಗಳೂ ಪೂರ್ಣವಾಗಲಿವೆ. ಯಾರೊಬ್ಬರ ನೆರವಿನ ಆವಶ್ಯಕತೆಯೂ ಇಂದು ನಿಮಗಿಲ್ಲವು. ಹಿಂದಿನ ಸಾಲಕಡಗಳಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನ ಸಂಗ್ರಹವಾಗಲಿದೆ. ಚಿಕ್ಕ ಪುಟ್ಟ ಗೃಹ ತಾಪತ್ರಯಗಳು ಕಾಣಿಸಿಕೊಂಡರೂ ತಾ. 22ರಿಂದ 25ರ ವರೆಗಿನ ದಿನಗಳಲ್ಲಿ ಸುಖ ನೆಮ್ಮದಿ.

೨. ವೃಷಭ

ಕೈಯಲ್ಲಿ ಕಾಸಿಲ್ಲ ಮೈಯಲ್ಲಿ ಮಾಂಸವಿಲ್ಲವೆಂಬ ಗಾದೆಯಂತಾಗಿದೆ ಇಂದಿನ ನಿಮ್ಮ ಪರಿಸ್ಥಿತಿ. ಸ್ವಯಂ ಅಶಕ್ತರಾದ ನಿಮಗೆ ಪರರ ನೆರವೂ ಲಭಿಸಲೊಲ್ಲದು. ಹೆಚ್ಚಿನ ಕಾರ್ಯಗಳನ್ನು ಮಧ್ಯದಲ್ಲೇ ಕೈಬಿಡುವ ಪ್ರಸಂಗ ಬರಲಿವೆ. ಆರ್ಥಿಕ ಪರಿಸ್ಥಿತಿಯು ತೀರ ಕೆಟ್ಟಿರುವುದರಿಂದ ದಿನಯಾಪನೆಯು ಬಹಳ ಕಷ್ಟವಾದೀತು. ರಾಜಕೀಯದಲ್ಲಿ ಪರಾಭವವುಂಟಾದೀತು. ಅನಿರೀಕ್ಷಿತ ಘಟನದಿಂದಾಗಿ ದೇಹಾಲಸ್ಯ ದುಃಖ ಮನೋರೋಗಗಳಿಗೆ ಗುರಿಯಾದೀರಿ. ವಾರಾಂತ್ಯದ 4 ದಿನಗಳು ಹೆಚ್ಚಿನ ದೋಷಕಾರಿಗಳಾಗಿ ಕಾಣಿಸಲಾರವು.

೩. ಮಿಥುನ

ವಿಪಕ್ಷೀಯರ ಮಾಯಾಜಾಲಕ್ಕೆ ಸಿಲುಕಿ ನಷ್ಟಕಷ್ಟಗಳನ್ನನುಭವಿಸಲಿರುವಿರಿ. ಸ್ತ್ರೀ ನಿಮಿತ್ತವಾದ ವ್ಯವಹಾರದಲ್ಲಿ ನಷ್ಟನಿಷ್ಠುರಗಳಾಗುವವಲ್ಲದೆ ಜನಾಪವಾದವು ಕೂಡ ಪ್ರಾಪ್ತವಾದೀತು. ಕೋರ್ಟುಕಚೇರಿಗಳಲ್ಲಿನ ವ್ಯವಹಾರಗಳಲ್ಲಿ ಶತ್ರುಪಕ್ಷದವರಿಂದ ನಷ್ಟಪರಾಭವಗಳುಂಟಾಗಲಿವೆ. ವ್ಯಾಪಾರೀ ವರ್ಗಕ್ಕೂ ಕುಶಲಕಲಾ ಜೀವಿಗಳಿಗೂ ಇಂದಿನ ದಿನಗಳು ದುರ್ದಿನಗಳೆನಿಸಲಿವೆ. ಆದರೂ ಸುರಗುರುವಿನೊಲುಮೆಗೆ ಪಾತ್ರರಾದ ನಿಮಗೆ ತಾ. 21, 26, 27 ಈ ದಿನಗಳು ಧನಲಾಭ ಗೃಹಸುಖಗಳನ್ನೀಯುವವು.

೪. ಕರ್ಕಟ

ಎಂತಹ ಎಡರುತೊಡರುಗಳು ಬಂದರೂ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ. ಪರಿಶ್ರಮಕ್ಕೆ ತಕ್ಕ ಫಲ ದೊರೆವುದರಿಂದ ನಿಮಗಿಂದು ಹಣದ ತೊಂದರೆ ಕಾಣಿಸದು. ಜನತೆಯ ಸಹಕಾರವು ಲಭಿಸದಿದ್ದರೂ ಶತ್ರುಜನರ ಕೀಟಲೆಯಿಂದ ಮುಕ್ತರಾಗಿರುವಿರಿ. ವ್ಯಾಪಾರದಲ್ಲಿ ಕೆಲವೊಮ್ಮೆ ನಷ್ಟನಿಷ್ಠುರಗಳೊದಗಲಿವೆ. ಗೃಹತಾಪತ್ರಯಗಳಿಂದ ನೀವಿಂದು ಮುಕ್ತರಾಗಿದ್ದರೂ ಸ್ವಂತ ಆರೋಗ್ಯವು ಚೆನ್ನಾಗಿರದು. ತಾ. 22, 23 ಈ ದಿನಗಳಲ್ಲಿ ಗೃಹಸುಖ ಕಾರ್ಯಸಿದ್ಧಿ ವಿಜಯ.

೫. ಸಿಂಹ

ಎಷ್ಟೇ ನಿಷ್ಠೆಯಿಂದ ಕಾರ್ಯ ನಿರ್ವಹಿಸಿದರೂ ನೀವಿಂದು ಅಧಿಕಾರಿಗಳ ಕೋಪಕ್ಕೆ ಸಿಲುಕಲಿರುವಿರಿ. ವ್ಯಾಪಾರ ವ್ಯವಹಾರಾದಿ ಉದ್ಯಮಗಳಲ್ಲಿ ನಿಮ್ಮ ಬಯಕೆಯು ಸಫಲವಾದೀತು. ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಿರುವುದರಿಂದ ದಿನಯಾಪನೆಯು ಕಷ್ಟವಾಗಲಾರದು. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಮನಸ್ಸಿಗೆ ನೆಮ್ಮದಿ ಇರಲೊಲ್ಲದು. ಬಂಧುಮಿತ್ರರ ನೆರವು ಸಾಕಷ್ಟಿದ್ದರೂ ರಾಜಕೀಯದಲ್ಲಿ ಪರಾಭವವುಂಟಾಗಲಿದೆ. ತಾ. 21, 24, 25 ಈ ದಿನಗಳಲ್ಲಿ ಧನಲಾಭ ಮಿತ್ರರ ಸಮಾಗಮವಾಗಲಿದೆ.

೬. ಕನ್ಯಾ

ಸ್ವಯಂ ಸಮರ್ಥರಾದ ನಿಮ್ಮ ಹೆಚ್ಚಿನ ಬಯಕೆಗಳು ಸಫಲವಾದರೂ ನಿರೀಕ್ಷಿಸಿದ ಫಲವು ಲಭಿಸಲೊಲ್ಲದು. ನೀವೆಷ್ಟೇ ವ್ಯವಹಾರ ಚತುರರಿದ್ದರೂ ಜನತೆಯೊಡನೆ ಕಲಹ ನಿಷ್ಠುರಗಳಾಗಲಿವೆ. ಪ್ರಬಲರಾದ ಇದಿರಾಳಿಗಳನ್ನು ಕೂಡ ಪರಾಭವಗೊಳಿಸಲು ಸಮರ್ಥರಾದ ನಿಮಗೆ ರಾಜಕೀಯದಲ್ಲಿ ಪ್ರತಿಪಕ್ಷಗಳಿಂದ ಸೋಲುಂಟಾದೀತು. ಆತ್ಮೀಯರ ವಿರಹ ವಿಯೋಗಗಳುಂಟಾಗಲಿವೆ. ಪ್ರವಾಸದಲ್ಲಿ ಅಪಘಾತಾದಿಗಳ ಭಯವಿದೆ. ತಾ. 22, 23, 26, 27 ಈ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೭. ತುಲಾ

ಸುರಗುರುವಿನ ಪೂರ್ಣದೃಷ್ಟಿಯು ನಿಮ್ಮ ಮೇಲಿದ್ದರೂ ಇಂದಿನ ನಿಮ್ಮ ಪರಿಶ್ರಮವು ನೀರಲ್ಲಿ ಗೈದ ಹೋಮದಂತೆ ವಿಫಲವಾಗುವದು. ಆಯಕ್ಕಿಂತ ದ್ವಿಗುಣ ವ್ಯಯವಿಂದು ಪ್ರಾಪ್ತವಾಗುವುದರಿಂದ ದಿನಯಾಪನೆಯ ಸಲುವಾಗಿ ಸಾಲ ಮಾಡುವ ಪರಿಸ್ಥಿತಿ ಬರಲಿದೆ. ಹೆಂಡತಿ ಮಕ್ಕಳ ಅನಾರೋಗ್ಯದ ನಿಮಿತ್ತ ಹೆಚ್ಚಿನ ಧನವ್ಯಯವಾದೀತು. ಪ್ರವಾಸಿಗಳಿಗೆ ನಾನಾತರದ ಕಷ್ಟನಷ್ಟಗಳೊದಗಲಿವೆ. ತಾ. 21, 24, 25 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮ.

೮. ವೃಶ್ಚಿಕ

ನಿಮ್ಮ ದೈನಂದಿನ ವ್ಯವಹಾರಗಳಿಗೆ ಹಲವಾರು ತರದ ಕಿರುಕುಳ ತೊಂದರೆಗಳೊದಗಿದರೂ ನೀವು ನಿಮ್ಮ ಕರ್ತವ್ಯದಿಂದ ಮುಕ್ತರಾಗಲಾರಿರಿ. ನಾನಾ ತೆರದಿಂದ ಇಂದು ಧನಾಗಮನವಾಗಲಿದೆ. ಪ್ರಬಲರಾದ ಪ್ರತಿಪಕ್ಷಿಗಳೂ ಕೂಡ ಮೃಗರಾಜನ ಕಂಡ ಹರಿಣಗಳಂತೆ ಮಾಯವಾಗುವರು. ರಾಜಕೀಯ ವ್ಯವಹಾರಗಳೆಲ್ಲವೂ ನಿಮ್ಮಂತೆಯೇ ಆಗಲಿವೆ. ಕೆಲವೊಮ್ಮೆ ವಿಷಯಾದಿಗಳ ಬಲೆಗೆ ಸಿಲುಕಿ ಕೆಲವಂಶ ಧನವನ್ನು ದುರ್ವ್ಯಯ ಮಾಡುವಿರಿ. ತಾ. 24, 26 ಹೊರತಾಗಿ ಉಳಿದ ದಿನಗಳು ತುಂಬ ಅನುಕೂಲವಾಗಿವೆ.

೯. ಧನು

ಧೈರ್ಯದಿಂದ ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗಿರಿ. ಅಸಹಾಯ ಶೂರರೆನಿಸಿದ ನಿಮಗೆ ಯಾವೊಂದು ತರದ ತೊಂದರೆಗಳೂ ಉಂಟಾಗಲಾರವು. ಹೆಚ್ಚಿನ ನಿಮ್ಮ ಸಂಕಲ್ಪಗಳಿಂದು ಕಾರ್ಯರೂಪಕ್ಕೆ ಬರಲಿವೆ. ಆರ್ಥಿಕ ಪರಿಸ್ಥಿತಿಯು ತುಂಬ ಸುಧಾರಿಸಲಿದೆ. ಬಂಧುಮಿತ್ರಾದಿ ಪರಿವಾರ ವರ್ಗದವರಿಂದಾವೃತರಾದ ನಿಮಗೆ ಸಮಾಜದಲ್ಲಿ ಒಳ್ಳೆ ಸ್ಥಾನವಿದೆ. ಕಫವಾತ ದೋಷದಿಂದ ಆರೋಗ್ಯಕ್ಕೆ ಸ್ವಲ್ಪ ತೊಂದರೆಯುಂಟಾದೀತು. ತಾ. 22ರಿಂದ 25ರ ವರೆಗಿನ ದಿನಗಳು ಅನುಕೂಲ.

೧೦. ಮಕರ

ಶುಕ್ರಾಚಾರ್ಯರೊರ್ವರನ್ನು ಬಿಟ್ಟು ಇತರ ಗ್ರಹಮಂಡಲವೇ ನಿಮಗೆ ಪ್ರತಿಕೂಲವಾಗಿರುವುದರಿಂದ ಸಪ್ತಾಹದ ದಿನಗಳು ಅತೀವ ದುಃಖದಾಯಿಗಳಾಗಿ ಪರಿಣಮಿಸಲಿವೆ. ಅನಿರೀಕ್ಷಿತ ವಿಪತ್ಪರಂಪರೆಗಳು ನಿಮ್ಮನ್ನು ಬಂದು ಮುತ್ತಲಿವೆ. ಆಪತ್ತಿಗಾಗಿ ಸಂಗ್ರಹಿಸಿಟ್ಟ ಧನವೂ ಇಂದು ಉಳಿಯಲಾರದು. ಪಿತ್ತದೋಷದಿಂದಾಗಿ ಅನಾರೋಗ್ಯ ದೌರ್ಬಲ್ಯಾದಿಗಳು ಕಾಣಿಸಿಕೊಳ್ಳುವವು. ಎಷ್ಟೇ ಮಿತಭಾಷಿಗಳಾಗಿದ್ದರೂ ಜನತೆಯೊಡನೆ ಕಲಹ ತಪ್ಪಲಾರದು. ವಾರಾಂತ್ಯದ 4 ದಿನಗಳು ಇದ್ದುದರಲ್ಲಿ ಉತ್ತಮವೆನಿಸುವವು.

೧೧. ಕುಂಭ

ಪರಿಶ್ರಮಕ್ಕೆ ತಕ್ಕ ಫಲ ಲಭಿಸಿತಾದರೂ ಇಂದಿನ ನಿಮ್ಮ ಖರ್ಚುವೆಚ್ಚಗಳನ್ನು ನಿರ್ವಹಿಸಲಾರದೆ ಹೆರವರ ಕೂಡೆ ಸಾಲ ಮಾಡಬೇಕಾಗಿ ಬರುವುದು. ಅಧಿಕಾರಿಗಳ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನಚಲನೆಯ ಸಂಭವವುಂಟಾದೀತು. ವಾತ ದೋಷದಿಂದ ಅಂಗಾಂಗಗಳಲ್ಲಿ ನೋವು ಕಾಣಿಸಲಿದೆ. ಶತ್ರುಜನರು ಪ್ರತೀಕಾರಾಸಕ್ತರಾಗಿರುವರು. ಬಂಧು ವಿಯೋಗದಿಂದ ದುಃಖಿತರಾಗ ನೀವು ತಾ. 21, 26, 27 ಈ ದಿನಗಳಲ್ಲಿ ನೆಮ್ಮದಿಯನ್ನು ಪಡೆವಿರಿ.

೧೨. ಮೀನ

ಕಾರ್ಯತತ್ಪರರಾದ ನಿಮಗೆ ಜನತೆಯ ಬೆಂಬಲ ಲಭಿಸುವುದು. ಉದ್ಯೋಗ ವ್ಯವಹಾರಗಳಲ್ಲಿ ನಿಮ್ಮ ನಿರೀಕ್ಷೆಯು ಸಫಲವಾಗಲಿದೆ. ಆರ್ಥಿಕ ದುರವಸ್ಥೆಯಿಂದ ನೀವಿಂದು ಮುಕ್ತರಾಗುವಿರಿ. ಆದರೂ ವ್ಯಯಗತ ಶನೈಶ್ಚರನಿಂದಾಗಿ ಅನಿರೀಕ್ಷಿತ ವಿಪತ್ತುಗಳೊದಗಲಿವೆ. ಬೇಕಾದ ವಸ್ತ್ರ ಒಡವೆಗಳು ಸಾಕಷ್ಟಿದ್ದರೂ ನೀವಿಂದು ಅರ್ಧಾಂಗಿಯ ಮುನಿಸಿಗೆರವಾಗುವಿರಿ. ವಾರಾದಿಯ 3 ದಿನಗಳಲ್ಲಿ ಧನಲಾಭ ಗೃಹಸುಖಗಳನ್ನು ಪಡೆಯುವಿರಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
LETTER WRITING MADE EASY
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ.ಖ ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)

ನಚಿಕೇತರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು
ಹಸುರು ಹಂಸ
ಬೆಲೆ: ರೂ. ಎರಡು.
ಋಣ ಯಾತ್ರೆ
ಬೆಲೆ ರೂ 1-50 ನ. ಪೈಸೆ.
ಭಾವಾರ್ಚನೆ
ಬೆಲೆ ರೂ. 2-00
ಪ್ರತಿಗಳು ಸಿಗುವ ಸ್ಥಳ.
ನವಯುಗಪ್ರೆಸ್, ಉಡುಪಿ
ನವಭಾರತಪುಸ್ತಕ ಭಂಡಾರ,
ಉಡುಪಿ.

BALMATTA ROAD, MANGALORE.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಜಾರಾಜ್ಯ ವಿಶೇಷಾಂಕ ೧೯೬೫

REPUBLIC DAY SPECIAL 1965

50 P

NAVAYUGA 21-1-1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ನಾಲಿಗ್ರಾಮ.

೨೧-೧-೬೫ರಿಂದ ೨೭-೧-೬೫ರ ವರೆಗೆ

೧. ಮೇಷ

ದೈವಬಲ ಸಂಪನ್ನರಾದ ನೀವು ಇಂದಿನ ದಿನಗಳನ್ನು ಸದುಪಯೋಗಪಡಿಸಿಕೊಳ್ಳಿರಿ. ಧೈರ್ಯದಿಂದ ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗಿರಿ. ಏನೊಂದೂ ಎಡರುತೊಡರುಗಳಿಲ್ಲದೆ ನಿಮ್ಮ ಸಕಲ ಬಯಕೆಗಳೂ ಪೂರ್ಣವಾಗಲಿವೆ. ಯಾರೊಬ್ಬರ ನೆರವಿನ ಆವಶ್ಯಕತೆಯೂ ಇಂದು ನಿಮಗಿಲ್ಲವು. ಹಿಂದಿನ ಸಾಲಕಡಗಳಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನ ಸಂಗ್ರಹವಾಗಲಿದೆ. ಚಿಕ್ಕ ಪುಟ್ಟ ಗೃಹ ತಾಪತ್ರಯಗಳು ಕಾಣಿಸಿಕೊಂಡರೂ ತಾ. ೨೨ರಿಂದ ೨೫ರ ವರೆಗಿನ ದಿನಗಳಲ್ಲಿ ಸುಖ ನೆಮ್ಮದಿ.

೨ ವೃಷಭ

ಕೈಯಲ್ಲಿ ಕಾಸಿಲ್ಲ ಮೈಯಲ್ಲಿ ಮಾಂಸವಿಲ್ಲವೆಂಬ ಗಾದೆ ಮಾತಾಗಿದೆ ಇಂದಿನ ನಿಮ್ಮ ಪರಿಸ್ಥಿತಿ. ಸ್ವಯಂ ಅಶಕ್ತರಾದ ನಿಮಗೆ ಪರರ ನೆರವೂ ಲಭಿಸಲೊಲ್ಲದು. ಹೆಚ್ಚಿನ ಕಾರ್ಯಗಳನ್ನು ಮಧ್ಯದಲ್ಲೇ ಕೈಬಿಡುವ ಪ್ರಸಂಗ ಬರಲಿದೆ. ಆರ್ಥಿಕ ಪರಿಸ್ಥಿತಿಯು ತೀರ ಕೆಟ್ಟಿರುವುದರಿಂದ ದಿನಯಾಪನೆಯು ಬಹಳ ಕಷ್ಟವಾದೀತು. ರಾಜಕೀಯದಲ್ಲಿ ಪರಾಭವವುಂಟಾದೀತು. ಅನಿರೀಕ್ಷಿತ ಪರ್ಯಟನದಿಂದಾಗಿ ದೇಹಾಲಸ್ಯ ದುಃಖ ಮನೋರೋಗಗಳಿಗೆ ಗುರಿಯಾದೀರಿ. ವಾರಾಂತ್ಯದ ೩ ದಿನಗಳು ಹೆಚ್ಚಿನ ದೋಷಕಾರಿಗಳಾಗಿ ಕಾಣಿಸಲಾರವು.

೩. ಮಿಥುನ

ವಿಪಕ್ಷೀಯರ ಮಾಯಾಜಾಲಕ್ಕೆ ಸಿಲುಕಿ ನಷ್ಟ ಕಷ್ಟಗಳನ್ನನುಭವಿಸಲಿರುವಿರಿ. ಸ್ತ್ರೀ ನಿಮಿತ್ತವಾದ ವ್ಯವಹಾರದಲ್ಲಿ ನಷ್ಟನಿಷ್ಠುರಗಳಾಗುವವಲ್ಲದೆ ಅಪವಾದವೂ ಕೂಡ ಪ್ರಾಪ್ತವಾದೀತು. ಕೋರ್ಟುಕಚೇರಿಗಳಲ್ಲಿನ ವ್ಯವಹಾರಗಳಲ್ಲಿ ಶತ್ರುಪಕ್ಷದವರಿಂದ ನಷ್ಟ ಸಂಭವಗಳುಂಟಾಗಲಿವೆ. ವ್ಯಾಪಾರೀ ವರ್ಗಕ್ಕೂ ಕುಶಲಕಲಾ ಜೀವಿಗಳಿಗೂ ಇಂದಿನ ದಿನಗಳು ದುರ್ದಿನಗಳೆನಿಸಲಿವೆ. ಆದರೂ ಸುರಗುರುವಿನೊಲುಮೆಗೆ ಪಾತ್ರರಾದ ನಿಮಗೆ ತಾ. 21, 26, 27 ಈ ದಿನಗಳು ಧನಲಾಭ ಗೃಹಸುಖಗಳನ್ನೀಯುವವು.

೪ ಕರ್ಕಟಿ

ಎಂತಹ ಎಡರುತೊಡರುಗಳು ಬಂದರೂ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ. ಪರಿಶ್ರಮಕ್ಕೆ ತಕ್ಕ ಫಲ ದೊರೆವುದರಿಂದ ನಿಮಗಿಂದು ಋಣದ ತೊಂದರೆ ಕಾಣಿಸದು. ಜನತೆಯ ಸಹಕಾರವು ಲಭಿಸದಿದ್ದರೂ ಶತ್ರುಜನರ ಕಿರುಕುಳದಿಂದ ಮುಕ್ತರಾಗಿರುವಿರಿ. ವ್ಯಾಪಾರದಲ್ಲಿ ಕೆಲವೊಮ್ಮೆ ನಷ್ಟನಿಷ್ಠುರಗಳೊದಗಲಿವೆ. ಗೃಹತಾಪತ್ರಯಗಳಿಂದ ನೀವಿಂದು ಮುಕ್ತರಾಗಿದ್ದರೂ ಸ್ವಂತ ಆರೋಗ್ಯವು ಚೆನ್ನಾಗಿರದು. ತಾ. 22, 23 ಈ ದಿನಗಳಲ್ಲಿ ಗೃಹಸುಖ ಕಾರ್ಯಸಿದ್ಧಿ ವಿಜಯ.

೫. ಸಿಂಹ

ಎಷ್ಟೇ ನಿಷ್ಠೆಯಿಂದ ಕಾರ್ಯ ನಿರ್ವಹಿಸಿದರೂ ನೀವಿಂದು ಅಧಿಕಾರಿಗಳ ಕೋಪಕ್ಕೆ ಸಿಲುಕಲಿರುವಿರಿ. ವ್ಯಾಪಾರ ವ್ಯವಹಾರಾದಿ ಉದ್ಯಮಗಳಲ್ಲಿ ನಿಮ್ಮ ಬಯಕೆಯು ಸಫಲವಾದೀತು. ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಿರುವುದರಿಂದ ದಿನಯಾಪನೆಯು ಕಷ್ಟವಾಗಲಾರದು. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಮನಸ್ಸಿಗೆ ನೆಮ್ಮದಿ ಇರಲೊಲ್ಲದು. ಬಂಧುಮಿತ್ರರ ನೆರವು ಸಾಕಷ್ಟಿದ್ದರೂ ರಾಜಕೀಯದಲ್ಲಿ ಪರಾಭವವುಂಟಾಗಲಿದೆ. ತಾ. 21, 24, 25 ಈ ದಿನಗಳಲ್ಲಿ ಧನಲಾಭ ಮಿತ್ರರ ಸಮಾಗಮವಾಗಲಿದೆ.

೬. ಕನ್ಯಾ

ಸ್ವಯಂ ಅಸಮರ್ಥರಾದ ನಿಮ್ಮ ಹೆಚ್ಚಿನ ಬಯಕೆಗಳು ಸಫಲವಾದರೂ ನಿರೀಕ್ಷಿಸಿದ ಫಲವು ಲಭಿಸಲೊಲ್ಲದು. ನೀವೆಷ್ಟೇ ವ್ಯವಹಾರ ಚತುರರಿದ್ದರೂ ಜನತೆಯೊಡನೆ ಕಲಹ ನಿಷ್ಠುರಗಳಾಗಲಿವೆ. ಪ್ರಬಲರಾದ ಇದಿರಾಳಿಗಳನ್ನು ಕೂಡ ಸಂಭಾಳಿಸಿಕೊಳ್ಳಲು ಸಮರ್ಥರಾದ ನಿಮಗೆ ರಾಜಕೀಯದಲ್ಲಿ ಪ್ರತಿಪಕ್ಷಿಗಳಿಂದ ಸೋಲುಂಟಾದೀತು. ಆತ್ಮೀಯರ ವಿರಹ ವಿಯೋಗಗಳುಂಟಾಗಲಿವೆ. ಪ್ರವಾಸದಲ್ಲಿ ಅಪಘಾತಾದಿಗಳ ಭಯವಿದೆ. ತಾ. 22, 23, 26, 27 ಈ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೭. ತುಲಾ

ಸುರಗುರುವಿನ ಪೂರ್ಣದೃಷ್ಟಿಯು ನಿಮ್ಮ ಮೇಲಿದ್ದರೂ ಇಂದಿನ ನಿಮ್ಮ ಪರಿಶ್ರಮವು ನೀರಲ್ಲಿ ಹೈದ ಹೋಮದಂತೆ ವಿಫಲವಾಗುವದು. ಆಯಕ್ಕಿಂತ ದ್ವಿಗುಣ ವ್ಯಯವಿಂದು ಪ್ರಾಪ್ತವಾಗುವುದರಿಂದ ದಿನಯಾಪನೆಯ ಸಲುವಾಗಿ ಸಾಲ ಮಾಡುವ ಪರಿಸ್ಥಿತಿ ಬರಲಿದೆ. ಹೆಂಡತಿ ಮಕ್ಕಳ ಅನಾರೋಗ್ಯದ ನಿಮಿತ್ತ ಹೆಚ್ಚಿನ ಧನವ್ಯಯವಾದೀತು. ಪ್ರವಾಸಿಗಳಿಗೆ ನಾನಾ ತರದ ಕಷ್ಟನಷ್ಟಗಳೊದಗಲಿವೆ. ತಾ. 21, 24, 25 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮ.

೮ ವೃಶ್ಚಿಕ

ನಿಮ್ಮ ದೈನಂದಿನ ವ್ಯವಹಾರಗಳಿಗೆ ಹಲವಾರು ತರದ ಕಿರುಕುಳ ತೊಂದರೆಗಳುದಿಸಿದರೂ ನೀವು ನಿಮ್ಮ ಕರ್ತವ್ಯದಿಂದ ಮುಕ್ತರಾಗಲಾರಿರಿ. ನಾನಾ ತೆರದಿಂದ ಇಂದು ಧನಾಗಮನವಾಗಲಿದೆ. ಪ್ರಬಲರಾದ ಪ್ರತಿಪಕ್ಷಿಗಳೂ ಕೂಡ ಮೃಗರಾಜನ ಕಂಡ ಹರಿಣಗಳಂತೆ ಪಲಾಯನವಾಗುವರು. ರಾಜಕೀಯ ವ್ಯವಹಾರಗಳೆಲ್ಲವೂ ನಿಮ್ಮಂತೆಯೇ ಆಗಲಿವೆ. ಕೆಲವೊಮ್ಮೆ ವಿನೋದಾದಿಗಳ ಬಲೆಗೆ ಸಿಲುಕಿ ಕೆಲವಂಶ ಧನವನ್ನು ದುರ್ವ್ಯಯ ಮಾಡುವಿರಿ. ತಾ. 24, 26 ಹೊರತಾಗಿ ಉಳಿದ ದಿನಗಳು ತುಂಬ ಅನುಕೂಲವಾಗಿವೆ.

೯. ಧನು

ಧೈರ್ಯದಿಂದ ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗಿರಿ. ಅಸಹಾಯ ಶೂರರೆನಿಸಿದ ನಿಮಗೆ ಯಾವುದೊಂದು ತರದ ತೊಂದರೆಗಳೂ ಉಂಟಾಗಲಾರವು. ಹೆಚ್ಚಿನ ನಿಮ್ಮ ಸಂಕಲ್ಪಗಳಿಂದು ಕಾರ್ಯರೂಪಕ್ಕೆ ಬರಲಿವೆ. ಆರ್ಥಿಕ ಪರಿಸ್ಥಿತಿಯು ತುಂಬ ಸುಧಾರಿಸಲಿದೆ. ಬಂಧುಮಿತ್ರಾದಿ ಪರಿವಾರ ವರ್ಗದವರಿಂದಾವೃತರಾದ ನಿಮಗೆ ಸಮಾಜದಲ್ಲಿ ಒಳ್ಳೆ ಸ್ಥಾನವಿದೆ. ಕಫ ವಾತ ದೋಷದಿಂದ ಆರೋಗ್ಯಕ್ಕೆ ಸ್ವಲ್ಪ ತೊಂದರೆಯುಂಟಾದೀತು. ತಾ. 22ರಿಂದ 25ರ ವರೆಗಿನ ದಿನಗಳು ಅನುಕೂಲ.

೧೦ ಮಕರ

ಶುಕ್ರಾಚಾರ್ಯರೋರ್ವರನ್ನು ಬಿಟ್ಟು ಇತರ ಗ್ರಹಮಂಡಲವೇ ನಿಮಗೆ ಪ್ರತಿಕೂಲವಾಗಿರುವುದರಿಂದ ಸಧ್ಯದ ದಿನಗಳು ಅತೀವ ದುಃಖದಾಯಿಗಳಾಗಿ ಪರಿಣಮಿಸಲಿವೆ. ಅನಿರೀಕ್ಷಿತ ವಿಪತ್ಪರಂಪರೆಗಳು ನಿಮ್ಮನ್ನು ಬಂದು ಮುತ್ತಲಿವೆ. ಆಪತ್ತಿಗಾಗಿ ಸಂಗ್ರಹಿಸಿಟ್ಟ ಧನವೂ ಇಂದು ಉಳಿಯಲಾರದು. ಪಿತ್ತದೋಷದಿಂದಾಗಿ ಅನಾರೋಗ್ಯ ದೌರ್ಬಲ್ಯಾದಿಗಳು ಕಾಣಿಸಿಕೊಳ್ಳುವವು. ಎಷ್ಟೇ ಹಿತಚಿಂತಕರಿದ್ದರೂ ಜನತೆಯೊಡನೆ ಕಲಹ ತಪ್ಪಲಾರದು. ವಾರಾಂತ್ಯದ ೩ ದಿನಗಳು ಇದ್ದುದರಲ್ಲಿ ಉತ್ತಮವೆನಿಸುವವು.

೧೧. ಕುಂಭ

ಪರಿಶ್ರಮಕ್ಕೆ ತಕ್ಕ ಫಲ ಲಭಿಸಿತಾದರೂ ಇಂದಿನ ನಿಮ್ಮ ಖರ್ಚುವೆಚ್ಚಗಳನ್ನು ನಿರ್ವಹಿಸಲಾರದೆ ಪರರ ಕೂಡೆ ಸಾಲ ಮಾಡಬೇಕಾಗಿ ಬರುವುದು. ಅಧಿಕಾರಿಗಳ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನಚಲನೆಯ ಸಂಭವವುಂಟಾದೀತು. ವಾತ ದೋಷದಿಂದ ಅಂಗಾಂಗಗಳಲ್ಲಿ ನೋವು ಕಾಣಿಸಲಿದೆ. ಶತ್ರುಜನರು ಪ್ರತೀಕಾರಾಸಕ್ತರಾಗಿರುವರು. ಬಂಧು ವಿಯೋಗದಿಂದ ದುಃಖಿತರಾಗಿ ನೀವು ತಾ. 21, 26, 27 ಈ ದಿನಗಳಲ್ಲಿ ನೆಮ್ಮದಿಯನ್ನು ಪಡೆವಿರಿ.

೧೨. ಮೀನ

ಕಾರ್ಯತತ್ಪರರಾದ ನಿಮಗೆ ಜನತೆಯ ನೆರವೂ ಲಭಿಸುವುದು. ಉದ್ಯೋಗ ವ್ಯವಹಾರಗಳಲ್ಲಿ ನಿಮ್ಮ ನಿರೀಕ್ಷೆಯು ಸಫಲವಾಗಲಿದೆ. ಆರ್ಥಿಕ ದುರವಸ್ಥೆಯಿಂದ ನೀವಿಂದು ಮುಕ್ತರಾಗುವಿರಿ. ಆದರೂ ವ್ಯಯಗತ ಶನೈಶ್ಚರನಿಂದಾಗಿ ಅನಿರೀಕ್ಷಿತ ವಿಪತ್ತುಗಳುದಿಸಲಿವೆ. ಬೇಕಾದ ಪಕ್ಕಾ ಪಡೆವೆಗಳು ಸಾಕಷ್ಟಿದ್ದರೂ ನೀವಿಂದು ಆಧಾರಂಗಿಯ ಮುನಿಸಿಗೆ ಗುರಿಯಾಗುವಿರಿ. ವಾರಾಂತ್ಯದ ೩ ದಿನಗಳಲ್ಲಿ ಧನಲಾಭ ಗೃಹಸುಖಗಳನ್ನು ಪಡೆಯುವಿರಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ –
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ ಖ ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ ಖ ಪ್ರತ್ಯೇಕ)

ನಚಿಕೇತರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ 2-00

ಪ್ರತಿಗಳು ಸಿಗುವ ಸ್ಥಳ:
ನವಯುಗಪ್ರೆಸ್, ಉಡುಪಿ
ನವಭಾರತಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಜಾರಾಜ್ಯ ವಿಶೇಷಾಂಕ ೧೯೬೫

REPUBLIC DAY SPECIAL 1965

50P

ARE YOU PLANNING TO VISIT SOUTH KANARA

THEN DO NOT FAIL TO MEET US

OF COURSE, WE ARE AVAILABLE THROUGH OUR STOCKISTS TOO. OUR STOCKISTS ARE THERE IN MOST IMPORTANT PLACES OF THIS DISTRICT.

WE ARE TASTY, CHOOSY,
MADE OUT OF FRESH MILK.
ONCE TESTED NEVER BE FORGOTTEN.

Shetty ICE CREAM

PANAMBUR

&

NANACHOWK, BOMBAY.

ಒಮ್ಮೆ ಸೇವಿಸಿದರೆ ಎಂದೂ ಮರೆಯಲಾಗದ
ಜನಾದರಣೀಯವಾದ ಆಹ್ಲಾದಕರ ಪಾನೀಯ

ಶೆಟ್ಟಿ ಐಸ್ ಕ್ರೀಮ್

ಪಣಂಬೂರು

THE LARGEST

TEXTILE-CUM-DEPARTMENT STORE

HAVING A SERIES OF SMALL

INDEPENDENT SHOPS

OFFERING YOU MORE THINGS
FOR BETTER LIVING UNDER ONE ROOF
IN AN AIR-CONDITIONED SHOPPING COMFORTS.

CHANDARANA BROTHERS

(Estd: 1935)

HAMPANKATTA — MANGALORE

Phone: 460   *Grams:* 'TEXTILES'

ಹೊಟೆಲ್ ದಾಸಪ್ರಕಾಶ : : ಮದರಾಸು

ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ ವಸತಿಯ ನೆಲೆವೀಡು

ಫೋನ್: 61111 (8 ಲೈನ್‌ಗಳು) ತಂತಿ: 'ದಾಸ್‌ಪ್ರಕಾಶ್'

ಕೋಣೆಗಳು 150ಕ್ಕೂ ಮಿಕ್ಕಿವೆ. : ಹೆಚ್ಚಿನವು ಏರ್ ಕಂಡಿಶನಿನವು . : ಮೂರು ಇಲೆಕ್ಟ್ರಿಕ್ ಲಿಫ್ಟುಗಳಿಂದ ಕೂಡಿವೆ

ಪರದೇಶದ ಪ್ರವಾಸಿಗರಿಗಾಗಿ ವಿಶಿಷ್ಟತರದ ಶಾಖಾಹಾರಿ ಪಾಕ ವ್ಯವಸ್ಥೆ

ಅತ್ಯಾಧುನಿಕವೂ ಕಲಾಪೂರ್ಣವೂ ಆಗಿ ಶೋಭಿಸುವ ಪಿಂಕ್ ಹೋಲ್ ಮತ್ತು ಮೂಡುರಹಿತ ಹೂದೋಟ

- - - - - ಇವು ಹೊಟೆಲಿನ ವಿಶಿಷ್ಟ ಆಕರ್ಷಣೆ - - - - -

ಬೆಟ್ಟ ನಿಲ್ದಾಣದ ರಾಣಿಯೆನಿಸಿದ ಊಟಿಯಲ್ಲಿ ರಜಾದಿನಗಳನ್ನು ಕಳೆವಾಗ

ಹೊಟೆಲ್ ದಾಸಪ್ರಕಾಶ : : ಊಟಿ

ಇಲ್ಲಿ ಉಳಕೊಳ್ಳಿರಿ!

ಫೋನ್ 434 & 435 ತಂತಿ. 'ದಾಸ್‌ಪ್ರಕಾಶ್'

ಭಾರತದ ಉದ್ಯಾನಗಳ ನಗರಕ್ಕೆ ಪ್ರವಾಸಿಗರು ಬಂದಾಗ

ಹೊಟೆಲ್ ದಾಸಪ್ರಕಾಶ : : ಮೈಸೂರು

ಇಲ್ಲಿ ಅವರ ಅವಕಾಶವನ್ನು ಸಂತೋಷದಿಂದ ಕಳೆಯಬಹುದು

ಫೋನ್: 742 ತಂತಿ. 'ದಾಸ್‌ಪ್ರಕಾಶ್'

........ಎಷ್ಟು ದೂರದಲ್ಲಿದ್ದರೂ ಮನೆಯಷ್ಟೇ ಸುಖ........

ದಾಸಪ್ರಕಾಶ ಹೊಟೆಲುಗಳ ಸಮುದಾಯ

ಮದರಾಸು..............ಮೈಸೂರು..............ಊಟಿ

ಗಣರಾಜ್ಯ ದಿನದ ಹಾರ್ದಿಕ ಶುಭಾಶಯಗಳು

ಕರ್ನಾಟಕ ಯಕ್ಷಗಾನ ನಾಟಕ ಸಭಾ

ಮಂಗಳೂರು

ನೆಹರೂ ಮೈದಾನಿನಲ್ಲಿರುವ ಕರ್ನಾಟಕ ಥಿಯೇಟರಿನಲ್ಲಿ

ವಿಟ್ಲ ಬಾಬುರಾವ್‌ರವರ ನವ ನವೀನ ಟ್ರಾನ್ಸ್‌ಫರ್ ಸೀನ್ - ಸೀನರಿಗಳೊಂದಿಗೆ

ಹೊಸ ಹೊಸ ಯಕ್ಷಗಾನ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾರೆ.

ಶ್ರೀ ರಾಜ ರಾಜೇಶ್ವರಿ ಪ್ರಸಾದಿತ ಯಕ್ಷಗಾನ ದಶಾವತಾರ ಮಂಡಳಿ, ಮಂಗಳೂರು

ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಬಡಗುತಿಟ್ಟು—ತೆಂಕುತಿಟ್ಟು ದಶಾವತಾರ ಆಟಗಳನ್ನು ಪ್ರದರ್ಶಿಸುತ್ತಿದ್ದಾರೆ.

ನವನವೀನ ಯಶಸ್ವೀ ಪ್ರಯೋಗಗಳು! ವಿವಿಧ ಮನೋರಂಜನಾ ಪ್ರದರ್ಶನಗಳು !!

ಸರ್ವರ ಪ್ರೋತ್ಸಾಹಕ್ಕಾಗಿ ವಿನಂತಿಸಲಾಗಿದೆ

ಕೆ. ವಿಠಲ ಶೆಟ್ಟಿ
ವ್ಯವಸ್ಥಾಪಕ.

7%

ಪ್ರಜಾಪ್ರಭುತ್ವ ದಿನದ ಶುಭಾಶಯಗಳು

ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p a.	7ರಿಂದ 11 ತಿಂಗಳು. % p a.	12ರಿಂದ 23 ತಿಂಗಳು. % p a.	24ರಿಂದ 35 ತಿಂಗಳು % p. a.	36ರಿಂದ 47 ತಿಂಗಳು. % p a.	48ರಿಂದ 59 ತಿಂಗಳು % p. a	60ರಿಂದ 83 ತಿಂಗಳು % p a	84ರಿಂದ 120 ತಿಂಗಳು % p a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6 50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ತಾ. 31-12-1964ರಲ್ಲು ರೂ. 2ಕೋಟಿಗೂ ಮಿಕ್ಕಿದ ಚಲಾವಣಾ ಸಂಪತ್ತು.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್]

ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

ಆರ್ಯ ವೈದ್ಯ ಶಾಲಾ,

ಕೋಟ್ಟಕ್ಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು: ಕೋಟ್ಟಕ್ಕಲ್ ಫೋನ್ ನಂ. 44 (ತಿರೂರು ಎಕ್ಸ್‌ಚೇಂಜ್)

ಶಾಖೆಗಳು:

1. ಕೋಳಿಕೋಡ್ (ಫೋನ್ ನಂ. 2155) ಕಲ್ಲಾಯ್ ರೋಡ್.
2. ತಿರೂರು (ಫೋನ್ ನಂ. 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್ ನಂ. 104) ವಡಕ್ಕಂತರ.
4. ಪಾಲ್ಘಾಟ್ ಸೇಲ್ಸ್ ಡಿಪೋ ಜಿ. ಬಿ. ರೋಡ್.
5. ಎರ್ನಾಕುಳಂ (ಫೋನ್ ನ. 3026) ಮಹಾತ್ಮಾ ಗಾಂಧೀ ರೋಡ್.
   ,, ವೈದ್ಯರ ನಿವಾಸ (ಫೋನ್ ನಂ. 674)
6. ತ್ರಿವೆಂಡ್ರಮ್ (ಫೋನ್ ನಂ. 3924) ಸ್ಟೇಚು ರೋಡ್.
7. ಈರೋಡು (ಫೋನ್ ನಂ. 172) 45, ಕಾವೇರಿ ರೋಡ್.
8. ಆಳ್ವಾಯಿ ಸೇಲ್ಸ್ ಡಿಪೋ ಬ್ಯಾಂಕ್ ರೋಡ್.

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಶಾಸ್ತ್ರೀಯವಾದ ಸುಪ್ರಸಿದ್ಧ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಳಿಚಿಲ್, ನವರಕಿಳಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್

ಇಲ್ಲಿ ನಡೆಸಲ್ಪಡುತ್ತವೆ.

ಎಲ್ಲಾ ಪತ್ರವ್ಯವಹಾರಗಳನ್ನು ಇಂಗ್ಲಿಷ್, ಮಲಯಾಳಂ ಅಥವಾ ತಮಿಳಿನಲ್ಲಿ ನಡೆಸಬೇಕು. ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ:

ಮೆನೇಜಿಂಗ್ ಟ್ರಸ್ಟಿ, ಆರ್ಯ ವೈದ್ಯ ಶಾಲಾ, ಕೋಟ್ಟಕ್ಕಲ್.

‘ಪ್ರಜಾಪ್ರಭುತ್ವ’ ದಿನದ ಶುಭಾಶಯಗಳು

ಸ್ವತಂತ್ರ ಭಾರತದಲ್ಲಿ ತಯಾರಾಗುವ ವೈವಿಧ್ಯಪೂರ್ಣ

ಹೀರಾ ಉಕ್ಕಿನ ಫರ್ನಿಚರುಗಳು





ಬೆತ್ತದ ಫರ್ನಿಚರುಗಳು

ಮೂರು ಸೈಜುಗಳಲ್ಲಿ ದೊರೆಯುವ ಹೀರಾ ಉಕ್ಕಿನ ಕಪಾಟುಗಳು

ಮನೆ, ಆಪೀಸು, ಆಸ್ಪತ್ರೆಗಳಿಗೆಲ್ಲಾ ಬೇಕಾಗುವ ಯಾವತ್ತೂ ಹೀರಾ ಉಕ್ಕಿನ ಫರ್ನಿಚರುಗಳು, ಉಪಕರಣಗಳು, ಬೆತ್ತದ ಸಾಹಿತ್ಯೋಪಕರಣಗಳು, ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ರೋಲಿಂಗ್ ಶಟ್ಟರ್ಸ್, ಉಕ್ಕಿನ ಕಿಟಕಿ ಬಾಗಿಲುಗಳು, ಮಕ್ಕಳಿಗಾಗಿ ನವೀನ ‘ಬೇಬಿ ವಾಕರ್’ ಇತ್ಯಾದಿಗಳಿಗೆ ವಿಚಾರಿಸಿರಿ— ಇಬ್ಬಗೆಯ ಉಪಯೋಗಕ್ಕೆ ಸೋಫಾ-ಕಂ-ಬೆಡ್ ಹೊಸತಾಗಿ ಮಾರ್ಕೆಟಿಗೆ ಬಂದ ಇಬ್ಬಗೆಯ ಉಪಯೋಗದ ಶಾಖ.ತಂಪು ಕೊಡುವ ಫ್ಯಾನು, ಫೋನ್ ರೆಸ್ಟ್ ಇತ್ಯಾದಿಗಳಿಗೆ ಹಂಪನಕಟ್ಟೆಯಲ್ಲಿರುವ ನಮ್ಮ ಶೋ ರೂಮನ್ನು ಸಂದರ್ಶಿಸಿರಿ!

ಶಾಸ್ತ್ರಿ & ಕೊ Shastry & Co.

ಮಂಗಳೂರು. MANGALORE.

ಫೋನ್: 788 Telegram: “SHASTRYCO”

ಪ್ರಜಾರಾಜ್ಯ ದಿನದ ಶುಭಾಶಯಗಳು

ಅಲಂಕಾರ್ ಥಿಯೇಟರ್

ಎಸ್. ಆರ್. ಬಿಲ್ಡಿಂಗ್ಸ್

ಮತ್ತು

ಕಲ್ಪನಾ ಥಿಯೇಟರ್

ಉಪೇಂದ್ರ ಭಾಗ್

ಉಡುಪಿ

ಮನೋರಂಜನೆಗೆ ಉತ್ತಮ ಚಲಚ್ಚಿತ್ರ ಮಂದಿರಗಳು

ಮಾಲಕರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್,

ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ, ದ. ಕನ್ನಡ.

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಚಾಲಕ-ಸಂಪಾದಕ:
ಕೆ ಹೊನ್ನಯ್ಯ ಶೆಟ್ಟಿ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

Vol 44 ಸಂಪುಟ ೪೪
No. 22 ಸಂಚಿಕೆ ೨೨

ಪ್ರಜಾರಾಜ್ಯ ದಿನೋತ್ಸವ ಸಂಚಿಕೆ ೧೯೬೫

ಮುಡಿಮೆಯಲಿ ದೇವರನು ಕಾಂಬ ಇವನ ದೃಷ್ಟಿ ।
ಭಾರತದ ನೇತಾರ ಮಾಡುವನು ನವ ಸೃಷ್ಟಿ ॥

ಭವಿಷ್ಯ ನಿರ್ಮಾಣದ ಸಂಕ್ರಾಂತಿ

ಹೌದು, ಭಾರತೀಯರ ಕಣ್ಮಣಿ ಭಾರತ ರತ್ನ ಜವಾಹರಲಾಲರಿಲ್ಲದೆ ಸ್ವಾತಂತ್ರ್ಯ ದಿನ ಕಳೆದಂತೆಯೆ ಪ್ರಜಾಪ್ರಭುತ್ವದಿನವೂ ದಾಟಿಹೋಗುತ್ತಿದೆ ಮಾನವನವತರನಲ್ಲ, "ಜಾತಸ್ಯ ಮರಣಂ ಧ್ರುವಂ" ಎಂಬ ಉಕ್ತಿಗಳ ಅರ್ಥವನ್ನು ನಾವಿನ್ನೂ ಮಾಡಿಕೊಳ್ಳಲಾರೆವೆ? ಜವಹರರ ಅಭಾವದ ಮರುಗು ಇದೀಗ ದಿನದಿಂದ ದಿನಕ್ಕೆ ಅರಿಯಾಗುತ್ತ ಬರುವುದು ಸ್ವಾಭಾವಿಕ. ಆದರೂ ಮಹಾ ಮಾನವನ ನೆಹರುವಿನ ಅಗಲಿಕೆಯ ಕೊರಗು ಬಹುಕಾಲ ಉಳಿಯುವುದು, ಆತನ ನೆನಕೆ ಭಾರತದಷ್ಟೇ ಸ್ಥಿರವಾಗುವುದು. ಸ್ವಾತಂತ್ರ್ಯ ದೊರೆತ ಆರು ಮಾಸಗಳಲ್ಲೇ ರಾಷ್ಟ್ರಪಿತ ನಮ್ಮನ್ನಗಲಿದ್ದರು. ಗಣರಾಜ್ಯವಾದ ಮೇಲೆ ಹದಿನೈದು ವರ್ಷಕಾಲ ನಮಗೆ ಮಾರ್ಗದರ್ಶನ ನೀಡಲಾದರೂ ರಾಷ್ಟ್ರ ನಿರ್ಮಾಪಕ ನಮ್ಮೊಡನಿದ್ದನೆಂದೀಗ ಸಮಾಧಾನ ಪಡಬೇಕು ಆವನು ತೋರಿದ ದಾರಿಯಲ್ಲಿ ಅಭ್ಯುತ್ಥಾನದ ಮೇರುವಿನತ್ತ ನಡೆಯಬೇಕು, ಗುರಿ ಮುಟ್ಟಬೇಕು.

ಭಾರತದ ಗಣರಾಜ್ಯಕ್ಕೆ ಕಳೆದ ವರ್ಷವು ಅತಿ ಮಹತ್ವದ ಕಾಲ. ಲೋಕವು ಚಿಕ್ಕದಾಗುತ್ತ ಬಂದಿದೆ, ಭಾರತದಂತಹ ಅಭಿವೃದ್ಧಿ ಪಥಗಾಮಿ ದೇಶಗಳಿಗೆ, ಪಂಚಶೀಲ ತತ್ವಾನುಯಾಯಿಗಳಿಗೆ ವಿಶ್ವವು ಬಹು ನಿಕಟ. ವಿಶ್ವದ ಯಾವ ಮೂಲೆಯಲ್ಲಿ ಏನು ನಡೆದರೂ ಅದರ ಪರಿಣಾಮ ಭಾರತದ ಮೇಲೆ ಬಿದ್ದೇ ಬೀಳುತ್ತದೆ.

ಭಾರತದ ಮೈತ್ರಿಯನ್ನು ಕೆನೆಡಿಯವರಂತೆಯೇ ಲಿಂಡನ್ ಜಾನ್ಸನ್ ಪರಿಪೋಷಿಸುತ್ತಿದ್ದಾರೆ. ಅವರೇ ಅಮೇರಿಕೆಯ ಅಧ್ಯಕ್ಷರಾಗಿ ಆಯ್ಕೆಗೊಂಡುದು ನಮಗೆ ಸಮಾಧಾನ. ಭಾರತಕ್ಕೆ ನೆರವು ನೀಡುವ ಅಮೆರಿಕೆಯ ಉದಾರ ನೀತಿ ಭಾರತದ ಅಭಿವೃದ್ಧಿಯೊಡನೆ ಭಾರತೀಯರ ಸದ್ಭಾವವನ್ನೂ ಗಳಿಸುತ್ತಿದೆ. ಜಾನ್ಸನರ ಅಧಿಕಾರಾವಧಿಯಲ್ಲಿ ಮಾನವತೆಯ ಭಾವನೆಯು ಜಗತ್ತಿನಲ್ಲಿ ಮನೆ ಮಾಡುವುದೆಂದು ನಂಬಬಹುದು.

ಬ್ರಿಟನ್ನಿನಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಅಲ್ಲಿ ಲೇಬರ್ ಸರಕಾರವು ಸ್ಥಾಪನೆಗೊಂಡಿದೆ. ಕಾಮನ್‌ವೆಲ್ತಿನ ರಾಣಿಯೂ ಇದು ಒಂದಲ್ಲ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅವುಗಳ ಸಿಕ್ಕಿನ ನಡುವೆಯೂ ಭಾರತದ ಬಗ್ಗೆ ಉದಾರ ನೀತಿಯನ್ನು ಸರಕಾರ ತಾಳಿದೆ. ಹಿಂದಿನ ಟೋರಿಗಳಿಗಿಂತ ಇವರು ಭಾರತದ ಕಡೆಗೆ ಹೆಚ್ಚು ಉದಾರರಾಗಿದ್ದಾರೆ. ಇದು ಶುಭ ಚಿಹ್ನೆಯಲ್ಲದೆ ಮತ್ತೇನು ?

ಸೋವಿಯತ್ ರಶ್ಯದಲ್ಲೂ ನಾಯಕತ್ವದಲ್ಲಿ ಸ್ಥಿತ್ಯಂತರಗಳಾದುವು. ಕ್ರುಶ್ಚೇವರು ಪತಿತರಾದರು. ಕೋಸಿಗಿನ್ ಅಧಿಕಾರಕ್ಕೇರಿದರು. ಆದರೂ ಇದರಿಂದ ಭಾರತದ ಮೇಲೆ ಇದುವರೆಗೆ ಯಾವ ದುಷ್ಪ್ರಭಾವವೂ ಬೀಳಲಿಲ್ಲ, ರಶ್ಯವು ಕ್ರುಶ್ಚೇವರ ಭಾರತ ನೀತಿಯನ್ನೇ ಅನುಸರಿಸುವುದೆಂಬ ಆಶ್ವಾಸನೆ ನಮಗೆ ದೊರೆತಿದೆ; ಇದು ನಿಜವಾಗಲಿ ಎಂದು ಬಯಸಿ ಹಾರೈಸುವುದು ಅಗತ್ಯ.

ನೆರೆಯ ಪಾಕಿಸ್ತಾನದಲ್ಲಿ ಅಯ್ಯೂಬಖಾನರು ಮತ್ತೆ ಚುನಾಯಿತರಾಗಿ ಅಧಿಕಾರ ಗದ್ದುಗೆಯೇರಿದ್ದಾರೆ. ಇದರಿಂದ, ಭಾರತ ಪಾಕಿಸ್ತಾನಗಳ ಸಂಬಂಧದ ಅನಿರ್ಧಾರಿತ ಸಮಸ್ಯೆಗಳ ಪರಿಹಾರವು ಕಷ್ಟಸಾಧ್ಯವೆಂದು ತೋರುತ್ತದೆ. ಮುಖ್ಯವಾಗಿ ಕಾಶ್ಮೀರದ ವಿಚಾರ ಹಾಗೂ ನಿರಾಶ್ರಿತರ ಕಟು ಪ್ರಶ್ನೆಗಳ ಬಗ್ಗೆ ಅಯ್ಯೂಬಖಾನರು ತಮ್ಮದೇ ಮೊಂಡುವಾದಕ್ಕೆ ಜೋತು ಬಿದ್ದಿರುವುದರಿಂದ ಆ ರಾಷ್ಟ್ರದೊಂದಿಗಿನ ಸಂಬಂಧ ಬಿಗಡಾಯಿಸಿಯೇ ಹೋದರೂ ಹೋಗಬಹುದು.

ಚೀನೀಯರ ಕೀಟಲೆಯು ಕಡಿಮೆಯಾಗುವುದಿಲ್ಲ. ಅವರ ಅಣುಬಾಂಬು ಅದನ್ನು ಸಾರುತ್ತದೆ, ಕೊಲಂಬೊ ಕಲಾಪಗಳಲ್ಲಿ ಹೇಳಲಾದ ತನ್ನ ಸೈನಿಕ ರಾಣೆ

ಶ್ರಮದಲ್ಲಿ ಸ್ವರ್ಗವನು ಬೆವರಲ್ಲಿ ತೀರ್ಥವನು ।
ಕಾಯಕಷ್ಟದಲಿ ಕೈಲಾಸವನ್ನು ॥
ಕಾಣುತಿಹ ಇವ ಯೋಗಿ ಭಾರತದ ನೇತಾರ ।
ಇವನ ಆದರ್ಶದಿಂದಲೆ ಬದುಕು ಬಂಗಾರ ॥

ಯನ್ನು ಬಿಟ್ಟುಕೊಡಲಾರೆವೆಂದ ಚೀನೀಯರು ಶಕ್ತಿ ಪ್ರದರ್ಶನದ ಸಿದ್ಧತೆಯಲ್ಲೇ ಮುಳುಗಿದ್ದಾರೆ ನಾವೂ ರಣ ಸಿದ್ಧರಾಗುತ್ತಿದ್ದೇವೆ; ದೇಶದ ಸ್ವಾತಂತ್ರ್ಯವನ್ನು ಉಳಿಸಲು ನಮ್ಮ ರಕ್ತದ ಕೊನೆಯ ಬಿಂದುವನ್ನೂ ಒಪ್ಪಿಸುವ ದೃಢಪ್ರತಿಜ್ಞೆಯನ್ನು ನಾವು ಮಾಡಿದ್ದೇವೆ. ಅವಕಾಶವೊದಗಿದಾಗ ಈ ಪ್ರತಿಜ್ಞೆಯನ್ನು ಪೂರೈಸಬೇಕು.

ಸಿಂಹಳದಲ್ಲಿ ಸಿರಿಮಾವೋ ಸರಕಾರವು ಅವರವರಿಂದಲೇ ಉರುಳಿ ಹೋಯಿತು. ಅಲ್ಲಿರುವ ಭಾರತೀಯ ಬುಡಕಟ್ಟಿನವರ ಸಮಸ್ಯೆಗಳನ್ನು ಇತ್ಯರ್ಥಗೊಳಿಸುವಲ್ಲಿ ಈ ವರ್ಷ ಯಶಸ್ಸು ಬಂದಿದೆ. ಇದು ಎರಡೂ ದೇಶಗಳ ಮಹಾ ಸಾಧನೆ.

ಇಂಡೋನೇಷ್ಯದ ಸುಕರ್ಣರು ಸಂಯುಕ್ತರಾಷ್ಟ್ರ ಸಂಘದಿಂದ ಹೊರಬರುವ ನಿರ್ಧಾರ ಮಾಡಿ ಗೊಂದಲವನ್ನುಂಟು ಮಾಡಿದ್ದಾರೆ. ಇದು ವಿಶ್ವೈಕ್ಯದ ದೃಷ್ಟಿಯಲ್ಲ. ಈ ಬಗ್ಗೆ ಅವರು ನೀಡುತ್ತಿರುವ ಹೇಳಿಕೆಗಳನ್ನು ಓದುವಾಗ, ಸುಕರ್ಣರ ಮೇಲೆ ಕೆಂಪು ಚೀನಾದ ಪ್ರಭಾವ ಬಿದ್ದಿದೆಯೆಂದು ತೋರುತ್ತದೆ. ಹೀಗಾದಲ್ಲಿ ಇದು ದುರ್ದೈವ. ಇಂಡೋನೇಷ್ಯದ ದಾರಿ ತುಳಿಯುವ ಹಂಬಲ ಕೆಲವರಿಗಾದರೂ ಇರಬಹುದು; ಆದರೆ ಸ್ವಾರ್ಥಸಾಧಕರಿಗೆ ವಿಶ್ವಸಂಸ್ಥೆ ವೇದಿಕೆಯಾಗಲಾರದು.

ಬಾಹ್ಯ ದೃಷ್ಟಿಯಿಂದ ಅಂತರ್ದೃಷ್ಟಿಗೆ ಬರೋಣ. ಕೇರಳದಲ್ಲಿ ರಾಷ್ಟ್ರಪತಿಯವರ ಆಡಳಿತೆ ಬಂದಿತು. ಒರಿಸ್ಸಾ ತೂಗಾಡುತ್ತಿದೆ. ಉತ್ತರ ಪ್ರದೇಶದ ಬಿರುಗಾಳಿ ತುಸು ಶಾಂತವಾಗಿದೆ. ಪಂಜಾಬದ ಹುಲಿ ತನ್ನ ಹಲ್ಲುಗಳನ್ನು ಕಳೆದುಕೊಂಡಿದೆ. ಕಾಶ್ಮೀರದಲ್ಲಿ 'ಒಂದು ತರಹ ಗಂಭೀರ' ಪರಿಸ್ಥಿತಿಯಿದೆ. ಕೆಲವು ರಾಜ್ಯಗಳ ಮಂತ್ರಿಮಂಡಳಗಳು ಲಂಚಗುಳಿತನದ ಆರೋಪವನ್ನು ಹೊತ್ತಿವೆ. ಆಡಳಿತೆಯ ರಂಗವು ಎತ್ತಿನ ಗಾಡಿಯಂತೆ ಕೇಂದ್ರದಲ್ಲೂ ರಾಜ್ಯಗಳಲ್ಲೂ ಸಾಗುತ್ತಿದೆ.

ಆಹಾರದ ಅಭಾವ ದೇಶದ ಮಹಾ ಪ್ರಶ್ನೆಯಾಗಿದೆ. ಕಳೆದ ಮಳೆಗಾಲದಲ್ಲಿ ಒಮ್ಮಿಂದೊಮ್ಮೆಲೇ ಎದ್ದು ಕಾಣಿಸಿದ ಈ ದೈತ್ಯನ ಉಚ್ಚಾಟನೆ ಸದ್ಯದಲ್ಲೇ ಆಗಲಿದೆಯೆಂಬ ಸಮಾಧಾನ ನಮಗೆ ದೊರೆಯುತ್ತಲಿದೆ. ಫುಡ್ ಟ್ರೇಡಿಂಗ್ ಕಾರ್ಪೊರೇಶನ್ ರಚಿತವಾಗಿ ಈ ಬಗ್ಗೆ ದುಡಿಯುತ್ತಿದೆ. ನಾವು ಯಶಸ್ಸು ಗಳಿಸಿದರೆ, ಅದೇ ಶ್ರೇಯಸ್ಸು. ಅನ್ನವಿಲ್ಲವೆಂಬ ಕೂಗು ಸುಖೀರಾಜ್ಯದಲ್ಲಿ ಕೇಳಬಾರದು ಅದು ಕೇಳುವ ವರೆಗೆ ಸುಖೀರಾಜ್ಯ ಕಲ್ಪನೆಗೂ ದೂರ.

ಚೀನೀಯರ ಅಣು ಬಾಂಬನ್ನೂ ಪಂಚಶೀಲದಿಂದಲೇ ಎದುರಿಸುವ ನಿರ್ಧಾರವನ್ನು ಮಾಡಿ ಕಾಂಗ್ರೆಸ್ಸು ತನ್ನ ನೈತಿಕ ಸ್ತರವನ್ನು ಜಗತ್ತಿಗೆ ಇನ್ನೊಮ್ಮೆ ತೋರಿಸಿದೆ. ಶಸ್ತ್ರಧಾರಿ ಬ್ರಿಟಿಷರನ್ನು ಸತ್ಯಾಗ್ರಹದ ಮೂಲಕ ಸೋಲಿಸಲು ಶಕ್ತರಾಗಿದ್ದೆವು ನಾವು; ಇದೀಗ ಚೀನಾದೊಂದಿಗೂ ನಾವು ಹಾಗೆ ಹೋರಾಡಿ ಯಶಸ್ವಿಯಾದೇವೆ? ಆಗುತ್ತೇವೆ ಎಂಬ ದೃಢತೆಯಿಂದ ಹೋರಬೇಕು. ಲಂಚ ನಿರ್ಮೂಲನದ ಬಗ್ಗೆ ನಂದಾ ಸೊಂಟ ಕಟ್ಟಿದ್ದಾರೆ. ಚೀನೀಯರ ಹಸ್ತಕರಾದ ಪಂಚಮ ದಳೀಯ ಕಮ್ಯೂನಿಸ್ಟ್ ಎಡ ಪಕ್ಷದ ನಾಯಕರನ್ನು ಬಂಧಿಸಿ ಅವರ ಚಟುವಟಿಕೆಗಳಿಗೆ ಅಂಕುಶವಿಟ್ಟಿದ್ದಾರೆ. ಸಮಯವೊದಗಿದಾಗ ದೇಶದ್ರೋಹಿ ದಳಗಳನ್ನು ಪ್ರತಿಬಂಧಿಸುವುದಕ್ಕೂ ಹಿಂದುಳಿಯಬಾರದು.

ಯೋಜನೆಯ ದಿಸೆಯಲ್ಲೂ ನಾವು ಮುಂದುವರಿದಿದ್ದೇವೆ? ಒಳಿತು—ಕೆಡುಕುಗಳೇನೇ ಇರಲಿ ಮುಂದುವರಿಯುತ್ತಿದ್ದೇವೆ. ಭಾರತವು ಸಂಕ್ರಾಂತಿ ಕಾಲದಲ್ಲಿದೆ ಈಗ ನಾವು ತೋರಿಸುವ ದೃಢತೆ, ಪ್ರಗತಿಯೇ ನಮ್ಮ ಭವಿಷ್ಯ ನಿರ್ಮಾಣ ಮಾಡುವುವು. ಪ್ರಜಾಶಕ್ತಿಯ ಯಶಸ್ಸಿಗೆ 'ಕಾಯಕವೇ ಕೈಲಾಸ" ಎಂಬುದು ಜನತೆಯ ಮೂಲ ಮಂತ್ರವಾಗಬೇಕು.

ದೇಶವೊಂದೆ ನಮ್ಮದು, ಧ್ಯೇಯವೊಂದೆ ನಮ್ಮದು, ಜನತೆಯೊಂದೆ ನಮ್ಮದು—ಇದರ ಸಾಧನೆಯ ಬಗ್ಗೆ ಹೋರಾಡೋಣ, ದುಡಿದು ದೇಶ ಕಟ್ಟೋಣ.

ಅಭಿನಂದನೆ

ಈ ಸಂಚಿಕೆಯ ನಿರ್ಮಾಣ ಕಾರ್ಯದಲ್ಲಿ ಹಲವು ರೀತಿಯಲ್ಲಿ ಹಲವಾರು ಮಹನೀಯರ, ಮಹಾ ಸಂಸ್ಥೆಗಳ, ಲೇಖಕರ—ಲೇಖಕಿಯರ ನೆರವಿದೆ. ಇವರೆಲ್ಲರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ಮುಖಚಿತ್ರ

ಭಾರತದ ಹಸಿದ ಜನತೆಯ ಆಶಾ-ಜ್ಯೋತಿಗಳಾಗಿ ಬೆಳಗುತ್ತಿರುವ ಭಾರತದ ಮಹಾ ಜೀವಗಳೆರಡು.

ಶ್ರೀ ಸಿ. ಸುಬ್ರಹ್ಮಣ್ಯಂ— ಆಹಾರ ಪರಿಸ್ಥಿತಿ ಪರದಾಟ, ಬಿಕ್ಕಟ್ಟಿನ ಸಂದರ್ಭದಲ್ಲಿ ದಿಟ್ಟತನದಿಂದ ಆಹಾರ ಮಂತ್ರಿಯಾಗಿ ಹೊಣೆ ಹೊತ್ತು ಧೈರ್ಯದಿಂದ ಪರಿಸ್ಥಿತಿಯ ಸುಧಾರಣೆಗೆ ಯತ್ನಿಸುತ್ತಿದ್ದಾರೆ

ಶ್ರೀ ಟಿ. ಅನಂತ ಪೈ— ಆಹಾರ ಪರಿಸ್ಥಿತಿಯ ಸುಧಾರಣೆಗಾಗಿ ಕಳೆದ ಜನವರಿ ಒಂದರಂದು ಕಾರ್ಯಾರಂಭಿಸಿದ ಫುಡ್ ಕಾರ್ಪೊರೇಶನ್ ಆಫ್ ಇಂಡಿಯಾದ ಅಧ್ಯಕ್ಷರು ಈ ಇಬ್ಬರು ಉತ್ಸಾಹಿ ಹಾಗೂ ನಿಸ್ಪೃಹ ನಾಯಕರ ನೇತೃತ್ವದಲ್ಲಿ ದೇಶದ ಆಹಾರ ಪರಿಸ್ಥಿತಿ ಸುಧಾರಿಸಿ ಸುಖೀರಾಜ್ಯದ ಅನುಭವ ಜನತೆಗೆ ಆಗಲಿ ಎಂದು ಹಾರೈಸೋಣ

ಜೈಹಿಂದ್!

ಗಣರಾಜ್ಯ ದಿನದ ಶುಭಾಶಯಗಳು

ಸ್ಥಾಪನೆ: 1914
ಫೋನ್ ನಂಬ್ರ. 428
ಟೆಲಿಗ್ರಾಂ 'ಸುದರ್ಶನ'

ಜಗತ್ಪ್ರಸಿದ್ಧವಾದ
ಜೈ ಹಿಂದ್
ಹಂಚುಗಳನ್ನೇ
ಸದಾ ಉಪಯೋಗಿಸಿರಿ

ತಯಾರಕರು:
ಸುದರ್ಶನ ಟೈಲ್ ವರ್ಕ್ಸ್
ಬೋಳಾರ, ಮಂಗಳೂರು—೧

ಟಿ. ಗೋಪಾಲ ಭಂಡಾರಿ
ಪ್ರೊಪ್ರೈಟರ್

USE
NATIONAL FLAG TILES

UNRIVALLED IN QUALITY

STRENGTH DURABILITY POPULARITY

Proprietor
J. A. Brito

He is an old Student of St. Aloysius College & Committee members of many Educational and Social Institutions- Hon General Secretary, Indian Red. Cross Society- Vice President, Small Industries- Co-operative Supply- ing and Marketing Society-President. South Kanara Hockey Association-member of National Savings Committee Productive Council Canara Chamber of Commerce, Dt. Congress Committee, and Chairman, Mysore Foot Ball Association.

NELLI PRAKASH
MANOHARA CAFE
BOARDING & LODGING
SHIMOGA

ನೆಲ್ಲಿ ಪ್ರಕಾಶ್

ಮನೋಹರ ಕೆಫೆ

ಅತ್ಯಾಧುನಿಕ ಮಾದರಿಯ ಬೋರ್ಡಿಂಗ್ ಮತ್ತು ಲೋಜಿಂಗ್

ಶಿವಮೊಗ್ಗ

ನೂತನವಾಗಿ ನಿರ್ಮಿಸಿದ ಏರ್ ಕಂಡೀಶನ್ಡ್ ರೂಮುಗಳು
ಬಾತ್ ರೂಮ್ ಲಗ್ತೀಕರಿಸಿದೆ.

ನಯನ ಮನೋಹರ ಹಾಗೂ ಆಹ್ಲಾದಕರ ರೂಫ್ ಗಾರ್ಡನ್ಸ್ ಇತ್ಯಾದಿ
ಸಕಲ ಆಧುನಿಕ ಸೌಕರ್ಯಗಳಿಂದೊಡಗೂಡಿದ

ಪ್ರಥಮ ಶ್ರೇಣಿಯ ಭೋಜನ ಮತ್ತು ವಸತಿ ಗೃಹ

ಪಿ. ಕೆ. ಜನಾರ್ದನ ನೆಲ್ಲಿ
ಪ್ರೊಪ್ರೈಟರ್.

Prop **P K Janardana Nelli**

ನಿಮ್ಮ ಆನಂದಕ್ಕೆ! ವಿರಾಮಕ್ಕೆ!! ವ್ಯವಹಾರಕ್ಕೆ!!!

ಕುಂದಾಪುರಕ್ಕೆ ಬಂದಾಗ
ನಗರದ ದ್ವಾರದಲ್ಲಿಯೇ ನಿಮ್ಮನ್ನು ಸ್ವಾಗತಿಸುವ
ಸುಂದರವಾದ ಮಂದಿರ — ಸುಖಕರ ವಾತಾವರಣ—

ಸೌಜನ್ಯ....ಸೌಕರ್ಯ....ಸೌಹಾರ್ದತೆ
ಇವೇ ಮೊದಲಾದುವುಗಳಿಂದ ಕೂಡಿದ

ಶಿವ ಪ್ರಸಾದ

ಕುಂದಾಪುರ, ದ. ಕ.

ಉತ್ತಮ ಊಟ, ಉಪಹಾರ
ಮತ್ತು ವಸತಿ ಗೃಹ

ಸಾಕಷ್ಟು ಗಾಳಿ ಬೆಳಕುಗಳಿರುವ
ಸುಸಜ್ಜಿತವಾದ ಕೊಠಡಿಗಳು
ಅತ್ಯಾಧುನಿಕ ಆಸನ ಸಲಕರಣೆಗಳು ವ್ಯವಸ್ಥಿತ ಸೇವೆ—
ನವ್ಯ ನಿರ್ಮಾಣದ ಭವ್ಯ ಭವನ

Phone: **203**.

Whenever You think of repairing

Your Auto

Make Your Choice
The Right One

HEGDE AUTO
ENGINEERING WORKS

Shiribeedu, UDIPI, S. K.

Prop: **K. J. HEGDE.**

●

ಮೋಟಾರು ಕಾರು, ಸ್ಕೂಟರು, ಮೋಟಾರು ಸೈಕಲು, ಬಸ್ಸು
ಲೋರಿ ಇತ್ಯಾದಿ ವಾಹನಗಳನ್ನೆಲ್ಲಾ ಉತ್ತಮ ತಾಂತ್ರಿಕ
ಜ್ಞಾನವುಳ್ಳ ತಜ್ಞರಿಂದ ಕ್ಲಪ್ತಕಾಲದಲ್ಲಿ ತೃಪ್ತಿಕರವಾಗಿ
ರಿಪೇರಿ ಮಾಡಿಕೊಡಲಾಗುವುದು.

ಹೆಗ್ಡೆ ಆಟೊ
ಇಂಜಿನಿಯರಿಂಗ್ ವರ್ಕ್ಸ್

ಶಿರಿಬೀಡು, ಉಡುಪಿ, ದ. ಕ.

ಪ್ರೊ: ಕೆ. ಜೆ. ಹೆಗ್ಡೆ.

ರೇಡಿಯೋ ಗುಳಿಗೆಗಳು

ವಿಜ್ಞಾನದ ಅಮೋಘ ಸಾಧನೆಗಳಲ್ಲಿ ಟ್ರಾನ್ಸಿಸ್ಟರ್ ರೇಡಿಯೋವೇ ವಿಲಕ್ಷಣವೆನಿಸಿದ ಕಾಲ ಕಳೆದ ದಶಕವಾಗಿದ್ದರೆ, ದೇಹದ ಅಂತರಾಳ ವ್ಯಾಪಾರದ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ನೆರವಾಗುವ ರೇಡಿಯೋ ಗುಳಿಗೆಗಳು ಈ ದಶಕದ ಅಮೂಲ್ಯ ವೈಜ್ಞಾನಿಕ ಕೊಡುಗೆಯೆನ್ನಬಹುದು ಈ ಗುಳಿಗೆಯೂ ಮನೆ ಮಾತಾಗುವ ಕಾಲ ಇನ್ನೇನು, ನಿಕಟ ಭವಿಷ್ಯದಲ್ಲೇ ಬರಲಿದೆ, ಬರುತ್ತದೆ.

ಬರೆದವರು

ಶ್ರೀ ಉ. ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ., ಎಲ್. ಟಿ.

ಇದು ಚಿಕ್ಕ ಪುಟ್ಟ ಗಾತ್ರದ ಟ್ರಾನ್ಸಿಸ್ಟರ್ ರೇಡಿಯೋಗಳ ದಶಕವೆನಿಸಿದೆ. ಚಿಕ್ಕ ಕೈಚೀಲದ ಗಾತ್ರದ ಪೆಟ್ಟಿಗೆಯೊಂದನ್ನು ಹೆಗಲ ಮೇಲೆ ತೂಗಾಡಿಸಿ ಅದರ ಮೇಲಣ ಒಂದೋ ಎರಡೋ ಹಿಡಿಗಳನ್ನು ತಿರುಗಿಸುತ್ತ ಹಾದಿಯುದ್ದಕ್ಕೂ ಸಂಗೀತವನ್ನೋ ಅಥವಾ, ಬಾನುಲಿಯು ಬಿತ್ತರಿಸುವ ವಾರ್ತೆಯನ್ನೋ, ಇಲ್ಲವೆ ಕ್ರಿಕೆಟ್, ಹಾಕಿ, ಕಮೆಂಟರಿಗಳನ್ನೋ ಕೇಳುತ್ತ ಆನಂದಿಸುತ್ತ ನಡೆಯುವ ಯುವಕರನ್ನು ದಿನಾಲೂ ನೋಡುತ್ತಲಿರುತ್ತೇವೆ. ಆರೆಂಟು ವರ್ಷಗಳ ಹಿಂದೆ, ಇವು ಅತ್ಯಂತ ಸೋಜಿಗದ ವಸ್ತುಗಳೆನಿಸಿದ್ದರೆ, ಇವು ಇಷ್ಟರಲ್ಲೇ "ಅಯ್ಯೋ! ಇವುಗಳ ಉಪದ್ರವವೆ?" ಎನಿಸುವಷ್ಟು ಧಾರಾಳವಾಗಿಪ್ಪ ಪ್ರಚಾರದಲ್ಲಿವೆ.

ಇವುಗಳಿಗಿಂತಲೂ ಚಿಕ್ಕಗಾತ್ರದ ಬಾನುಲಿಯ ವಿಸಾರಕ (Transmitter, ಪ್ರೇಷಕ) ಮತ್ತು ಗ್ರಾಹಕ (Receiver) ಗಳನ್ನು ರಚಿಸಿಕೊಂಡು ಇನ್ನೂ ಹೆಚ್ಚಿನ ಉಪಕಾರವನ್ನು ಪಡೆಯಲಾರೆವೆ? ಎಂಬ ಶಂಕೆಯು ನಮ್ಮಲ್ಲನೇಕರಲ್ಲಿ ಸಹಜವಾಗಿ ಉದಿಸಿದೆ. ವೈದ್ಯ ಭಾಗದಲ್ಲಂತೂ ಇಂಥ ಪ್ರಯೋಗಗಳು ಅದ್ಭುತ ಚಿಕಿತ್ಸೆಗೆ ಕಾರಣವಾಗಬಲ್ಲವು ಎಂದು ಕಂಡುಕೊಂಡ ಕೆಲ ಕನಸುಗಳು ಸತ್ಯವಾಗುವ ಕಾಲವು ಇದೀಗ ಸನ್ನಿಹಿತವಾಗಿದೆ. ಅಂಥ ಪ್ರಯೋಗಗಳಲ್ಲಿ ರೇಡಿಯೋ ಗುಳಿಗೆಯು (Radio-pill) ಒಂದು ಮುಖ್ಯ ಆವಿಷ್ಕಾರವೆನಿಸಿದೆ.

ದೇಹದೊಳಗೆ ಏನು ಜರಗುತ್ತಲಿದೆ? ರಕ್ತನಾಳಗಳಲ್ಲಿ ಎಷ್ಟು ವೇಗವಾಗಿ ರಕ್ತವು ಪ್ರವಹಿಸುತ್ತಲಿದೆ? ರಕ್ತದ ಒತ್ತಡವೆಷ್ಟು? ಪಚನಕಾರ್ಯವು ಹೇಗೆ ಸಾಗುತ್ತಲಿದೆ? ಪಚನ ಕಾರ್ಯದಲ್ಲಿ ಯಾವ ಜಠರ ಗ್ರಂಥಿಯು ಕಾರ್ಯೋನ್ಮುಖವಾಗದೆ? ದೇಹದ ಒಳಭಾಗದಲ್ಲಿನ ಶಾಖವೆಷ್ಟು? ಯಾವ ಭಾಗದಲ್ಲಿ ಹೆಚ್ಚಿನ ಶಾಖವಿದೆ? ಎಲ್ಲಿ ಕಮ್ಮಿ? ಎಂಬ ಇವೇ ಮೊದಲಾದ ಅನೇಕ ಪ್ರಶ್ನೆಗಳ ಉತ್ತರವನ್ನು ಹೊರಗಿನಿಂದಲೇ ಸೂಕ್ಷ್ಮವಾಗಿ ತಿಳಿದುಕೊಳ್ಳಲಾಗುವ ಯಂತ್ರವೇ ರೇಡಿಯೋ ಗುಳಿಗೆ.

ಇದು ಸುಮಾರು ಆರು ಘನ ಸೆಂಟಿಮೀಟರಿನಷ್ಟು (cubic centimetre) ಇಲ್ಲವೆ 0.1 ಘನ ಇಂಚಿನಷ್ಟು (cubic inch) ಗಾತ್ರವುಳ್ಳ ರೇಡಿಯೋ ಅಲೆಗಳ-ವಿದ್ಯುತ್ಕಾಂತ ತರಂಗಗಳ (electro-magnetic waves) ಉತ್ಪಾದಕ ಪ್ರೇಷಕ ಯಂತ್ರ. ಇಂಥ ಉಪಕರಣದಲ್ಲಿ ಇತರತಕ್ಕ ಅಂಗಗಳೆಲ್ಲವೂ, ಅಂದರೆ ಟ್ರಾನ್ಸಿಸ್ಟರ್, ವಿದ್ಯುತ್ ಉತ್ಪಾದಕ, ಪ್ರೇಷಕಾದಿಗಳು ಇಷ್ಟರ ಗಾತ್ರದಲ್ಲೇ ಇದ್ದು ನಿಯಮಿತ ಗಾತ್ರದ ತರಂಗಗಳನ್ನು ಇದು ಉತ್ಪಾದಿಸುತ್ತಲೇ ಇರಬೇಕು. ಮುಖ್ಯವಾಗಿ ಇದರ ಗಾತ್ರವು ಅತ್ಯಂತ ಸೀಮಿತವಿರಬೇಕು; ಹಾಗಿದ್ದರೇನೇ ಇದನ್ನು ನಾವು ನುಂಗಬಹುದು; ಅದು ಆಹಾರ ನಾಳದ ಉದ್ದಕ್ಕೂ, ಸಣ್ಣ ಕರುಳುಗಳಲ್ಲಿಯೂ ಪ್ರವೇಶ ಪಡೆದು, ಮುಂದುವರಿಯ ಬಲ್ಲುದು; ದೇಹದ ಯಾವ ಭಾಗದಲ್ಲಿಯೂ ಇದನ್ನು ಚುಚ್ಚಿಡಬಹುದು; ರಕ್ತ ಪ್ರವಾಹದೊಡನೆ ಇದನ್ನು ಚಲಿಸುವಂತೆ ಮಾಡಿ, ಬೇಕಾದಲ್ಲಿ ಅದನ್ನು ಬೇಕಾದಂತೆಯೇ ನಿಲ್ಲಿಸಿ ಪರೀಕ್ಷಿಸಬಹುದು.

ಇಂಥ ಪ್ರೇಷಕವು ತನ್ನ ಕಾರ್ಯಕ್ಕನುಗುಣವಾಗಿ ಸೆಕುಂಡು 1ರ ಸುಮಾರು :,00,000 ದಿಂದ 6,00,000 ಆವರ್ತನಸಂಖ್ಯೆಯ ಸ್ಪಂದನಗಳನ್ನೂ, ಹಾಗೆಯೇ ತರಂಗಗಳನ್ನು ಸೃಷ್ಟಿ ಮಾಡುತ್ತದೆ. ಇದರಲ್ಲಿನ ವಿದ್ಯುದುತ್ಪಾದಕವೋ ಈ ಅಕ್ಷರಗಳನ್ನು ಬರೆಯಲುಪಯೋಗಿಸಿದ ಪೆನ್ಸಿಲಿನ ಮೊನೆಯಷ್ಟು ದೊಡ್ಡದೂ ಇರಲಾರದು. ಅಲ್ಲದೆ ವಿದ್ಯುತ್ತರಂಗಗಳ, ಆವರ್ತನ ಸಂಖ್ಯೆಯು ನಿಶ್ಚಿತ ಬೆಲೆಯುಳ್ಳದ್ದೇ ಆಗಿರುತ್ತದೆ. ಆದರೆ ಈ ಆವರ್ತನ ಸಂಖ್ಯೆಯು ಶಾಖದಿಂದ ವ್ಯತ್ಯಸ್ತವಾಗಬಲ್ಲದು. ಒತ್ತಡದಿಂದಲೂ ವ್ಯತ್ಯಸ್ತವಾಗಬಲ್ಲುದು, ಉದ್ವೇಗದಿಂದ, ದುಃಖದಿಂದ, ರೋಷದಿಂದ ಉತ್ಪನ್ನವಾಗಬಲ್ಲ ಅಂತಃಸ್ರಾವಗಳಿಂದ ರಕ್ತವು ತುಸು ಕಲುಷಿತವಾದಾಗಲೂ, ಅಂದರೆ ತನ್ನ ರಚನೆ, ಮುಖ್ಯ ಹರಿವು ಮತ್ತು ಸಾಂದ್ರತೆಗಳಲ್ಲದರಲ್ಲೂ ವ್ಯತ್ಯಾಸವನ್ನು ತೋರಿದಾಗ, ಈ ವ್ಯತ್ಯಾಸಕ್ಕೆ ಕಾರಣವಾದ ಒತ್ತಡವನ್ನೋ, ಶಾಖವನ್ನೋ ಹೊರಗಿನಿಂದಲೇ ಗುಣಿಸಿ, ಎಣಿಸಬಹುದು.

ಮೊದಲು ಇಂಥ ಉಪಕರಣವೊಂದು ಬೇರೆ ಬೇರೆ ಶಾಖಗಳ ಸನ್ನಿವೇಶದಲ್ಲಿ ಎಷ್ಟೇ ಉದ್ದದ ತರಂಗಗಳನ್ನು ಉಂಟು ಮಾಡುತ್ತದೆ ಎಂದು ಪರೀಕ್ಷಿಸಬೇಕು. ಅ

(ಮೂವತ್ತೇಳು ಪುಟ ನೋಡಿರಿ)

ತಂತಿ: "ಸಹಕಾರಿ"] ಸ್ಥಾಪನೆ: 1919 [ಫೋನ್: 237.

THE S. K. A. C. M. SOCIETY LIMITED,

MANGALORE-1.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ, ಲಿ.,

ಸಹಕಾರಿ ಮಹಲ್, ಮಂಗಳೂರು-೧.

ಅಡಿಕೆ, ಯಾಲಕ್ಕಿ, ಕಾಳು ಮೆಣಸು, ತೆಂಗಿನಕಾಯಿ, ಬಾಳೆಕಾಯಿ ವಗೈರೆ ವ್ಯವಸಾಯದ ಎಲ್ಲಾ (ಅಕ್ಕಿ ಭತ್ತ ಹೊರತು) ಉತ್ಪತ್ತಿಗಳನ್ನು ಕಮಿಶನ್ ವ್ಯಾಪಾರಕ್ಕೆ ಪಡಕೊಂಡು ಯೋಗ್ಯ ಬೆಲೆಗೆ ವಿಕ್ರಯಿಸುವ ಜಿಲ್ಲೆಯ ಏಕಮಾತ್ರ ಸಹಕಾರಿ ಮಾರಾಟ ಸಂಘ. ಮೆಂಬರರಿಗೆ ಇಂಡೆಂಟು ಮೂಲಕ ಗೃಹಕೃತ್ಯದ ಸಾಮಾನುಗಳನ್ನು ಒದಗಿಸುವ ಏರ್ಪಾಡಿದೆ.

ಜಿಲ್ಲೆಯ ಎಲ್ಲಾ ಕೃಷಿಕರ ಸಹಕಾರವನ್ನು ಸಂಘವು ಅಪೇಕ್ಷಿಸುತ್ತದೆ.

ಬಿ. ಪ್ರಭಾಕರ ರಾವ್, M. A., B. L., ಅಧ್ಯಕ್ಷ.

ಎಸ್. ನರ್ಸಪ್ಪಯ್ಯ, B. A. B. L., M. L. C. ಉಪಾಧ್ಯಕ್ಷ.

ಜನ್ಮ ಜನ್ಮಕೆ ನವ್ಯವೀ ಚೇತನಮ್*

"ನವೋ ನವೋ ಭವತಿ ಜಾಯ ಮಾನ."

— ೧ —

ದಿಶಿ ನಿಶಿ ನಿತಾಂತ ಹಬ್ಬಿದ ಮಬ್ಬು ತೆರೆಯೆತ್ತಿ
ಉಷೆ ನಟಿಯು ನಲಿದು ಬರಲು;
ಏಳಶ್ವಗಳ ಮೇಳವಿಸಿ ತೇರನೇರಿಹನು
ಅರುಣ ಹರಿಕಾರನಿರಲು,
ಮೂಡು ಬೆಟ್ಟದ ಮೇಗೆ ಮೆರೆಯುತಿಹ ದೇಗುಲಕೆ
ಹೊಳೆವ ಹೊಂಗಳಸವಿರಿಸಿ,
ಸೃಷ್ಟಿಗೆ ಸುವರ್ಣವೃಷ್ಟಿಯ ಸುರಿಸಿ ರವಿರಾಜ
ಕಾಂಚನ ಕಿರೀಟ ಧರಿಸಿ,
ಬಂದಿಹನು ಬಾಂದಳಕೆ ನಿಂದಿಹನು ಶಿರವೆತ್ತಿ
ಜಾಡ್ಯ ಹಿಂದೋಡಿತ್ತು, ಜನವ ನದಲಿ—
ಹೊಸ ಹುರುಪು ಬಂತು! ದಿನ ದಿನ ನವೋದಯವಿಂತ !
ಯುಗ ಯುಗಕ ಮರಳಿ ಮರಳಿ!

— ೨ —

ಇರುಳುರುಳಿ ಬೆಳಕು ಬೆಳಗಿತು ಬಾಳ ದೇಗುಲದಿ
ನಲ್ಮೆನಂದಾದೀಪ ನಲಿಯುತ್ತಿರೆ
ಪೌರುಷದ ರಾಜತೇಜದ ಮಾಮರವ ಮೆಚ್ಚಿ
ಹೆಣ್ಣೆದೆಯ ಮೋಹ ಮಲ್ಲಿಗೆಯಪ್ಪಿರೆ,
ಬಂದನು ವಸಂತ! ರತಿಮನ್ಮಥರ ದಿಬ್ಬಣದ
ಸಂಭ್ರಮದ ಮೆರವಣಿಗೆ! ಸೊಗದ ಸುಗ್ಗಿ!
ಬಣ್ಣ ಬಣ್ಣದ ಸುಣ್ಣಸಿಯ ತಳಿರು ಹೂಹಣ್ಣು
ಗಂಧ ಮಂದಾನಿಲಂ ಕ್ರೀಡೆ ಹಿಗ್ಗಿ!
ಜೀವ ಮಧುರಂ ಜೀವಿತಭಾವ ಮಧುರಂ, ಮಿಲಿತ
ಮೇಳ ಮಧುರಂ—ನಿರಂತರ ನೂತನಂ!
ಮಗು ನಗುತ ಬಂತು! ಗಗನದ ತಾರೆ ಮಿನುಗಿತ್ತು
ಜನ್ಮ ಜನ್ಮಕೆ ನವ್ಯವೀ ಚೇತನಮ್

[ಕವಿ. ಶ್ರೀ ಕಯ್ಯಾರ ಕಿಞ್ಞಣ್ಣ ರೈ ಎಂ. ಎ.]

— ೩ —

ಕಾರ್ಮೋಡಗಳು ಗುಡುಗಿ, ಸಿಡಿಲು ಮಿಂಚುಗಳೆರಗಿ,
ಮುಸಲ ಧಾರೆಯ ಸರಿಯು ಸುರಿದ ಮೇಲೆ,
ಗಗನ ಮಂಡಲದ ಮಂಟಪದಿ ಮೆರೆದಾಡುತಿಹ
ರವಿಶಶಿಗೆ ಲಕ್ಷ ನಕ್ಷತ್ರ ಮಾಲೆ,
ಬೆಳ್ಳಿ ದೇವರ ಕಣ್ಣು ಧಾರಾಳ ದಯೆಯನ್ನು
ಚೆಲ್ಲಿ ಬಾನ ತಿರೆಯನ್ನು ಹರಸುತಿರಲು,
ಋತುರಾಜ ಬರುತಿಹನು! ತಳಿರು ತೋರಣವೇನು!
ನಿರ್ಮಲಂ ನೆಲಜಲಂ ಶರದಾಗಮಿಸಲು.
ಹಚ್ಚನೆಯ ಹಸಿರು ಸೀರೆಯನುಟ್ಟ ನೆಲ ತಾಯು—
ಗರ್ಭದಿಂದುದಿಸಿ ಬಂದಿತ್ತು ತೆನೆಯ ರಾಶಿ!
ನೀರೆರೆದ ದೇವಗರ್ಭಿತವಿಂತು, ಬೇರ್ಬಿಟ್ಟ
ಬುವಿಗೆ ಕಾಣಿಕೆ ಬಿತ್ತು! ಚೈತನ್ಯ ಸಾಕ್ಷಿ!

— ೪ —

ಶ್ರೀ ಪರಂಜ್ಯೋತಿ ಪರಮಾತ್ಮನಂಶಸ್ಮೃತಿಯು
ಜೀವಾತ್ಮನಂ ಬಿಡದೆ ಸ್ಪರ್ಶಿಸಂತೆ,
ಸೃಷ್ಟಿರಾಶಿಗೆ ದೃಷ್ಟಿಯಿತ್ತ ದಿನಮಣಿತೇಜ
ದೀಪ ದೀಪ್ತಿಯೊಳಡಗಿ ದರ್ಶಿಸಂತೆ,
ಕೆರೆಯ ತೋಡಿಸಿ, ಸಸಿಯ ನೆಟ್ಟು ಮನೆ ಕಟ್ಟಿಸಿದ
ಪಿತನ ಪುಣ್ಯವ ಪುತ್ರನಲಿ ತುಂಬಿಸಂತೆ;
ಶೀಲ ಸೌಭಾಗ್ಯ ವಿನಯ ವಿನೀತವತಿ ಸತಿಯು
ಮಗಳಲ್ಲಿ ಮಾತೃತ್ವ ಬಿಂಬಿಸಂತೆ,
ಶಾಖೋಪಶಾಖ ಪ್ರಕಾಂಡದ ಮಹಾವೃಕ್ಷ
ಬೀಜದಲಿ ಸಾಜವಂ ಸೇರಿಸಂತೆ,
ವಿಶ್ವ ವಿಜಯೀ ಸಾಹಸದ ಕೇತು ಚೇತನಮ್
ನವ ನವೋನ್ಮೇಷದಿಂದವತರಿಸಿದೆ!

*ದಿನಾಂಕ ೨೧-೧೨-೬೪ರಂದು ಕುಂದಾಪುರ ಭಂಡಾರ್‌ಕಾರರ ಕಾಲೇಜಿನಲ್ಲಿ ಜರಗಿದ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕೋತ್ಸವದ ಅಂಗವಾಗಿ ಏರ್ಪಡಿಸಿದ ಕವಿಸಮ್ಮೇಳನದಲ್ಲಿ ಹಾಡಿದುದು

ಅಭಿನಂದನೆಗಳು

ಜಯಂತಿ ಟೈಲ್ ಫೇಕ್ಟರಿ

ಕಲ್ಯಾಣಪುರ, ದ. ಕನ್ನಡ.

ಉತ್ತಮ ತರದ **ಬೈಸನ್ ಬ್ರಾಂಡ್ ಹಂಚು** ತಯಾರಕರು

ಜಯಂತಿ ಟ್ರೇಡರ್ಸ್

ಪಾರ್ಟ್‌ನರ್ಸ್

JAYANTHI TILE FACTORY

KALLIANPUR, S. K.

MANUFACTURERS OF

BISON BRAND MANGALORE TILES

JAYANTHI TRADERS

PARTNERS

ATTRACTIVE PHOTOGRAPHS

BLACK & WHITE

or

COLOUR

ROYAL STUDIO

HAMPANKATTA

MANGALORE 1

PHONE = 1288

USE ALWAYS

SPB

Quality Papers

Manufactured by

M/s Sheshasayee Paper & Boards Ltd.,

PALLIPALAYAM. (Salem Dt.)

Distributors for Mysore State:

SRINIVAS BROTHERS

CAR STREET MANGALORE-1

Phone: 449 Grams: "ACTIVE"

With Best Compliments from:

The United Trading Corporation & Workshop (Private) Limited,

Attavar, Nandigudde Road,

MANGALORE.

Dealers for

Hindustan Ambassador Cars.

ಭೂ ಸುಧಾರಣೆ ಮತ್ತು ಆಹಾರ ಸಮಸ್ಯೆ

ಲೇಖಕರು
ಶ್ರೀ ಎ. ಜೆ. ಅಲ್ಸೆ.

ಉಳುವವನೇ ನೆಲದೊಡೆಯನಾಗಬೇಕೆಂಬ ಕೂಗು ಸ್ವಾತಂತ್ರ್ಯ ಪೂರ್ವದ್ದು. ನಮ್ಮ ಜನತಾ ಸರಕಾರವಾದರೂ ಈ ದಿಸೆಯಲ್ಲಿ ಕಾರ್ಯ ಪ್ರವೃತ್ತವಾದರೂ ಸಂಪೂರ್ಣ ಅನುಷ್ಠಾನಕ್ಕೆ ಕಾನೂನು ಬಂದಿಲ್ಲ. ನಮ್ಮ ರಾಜ್ಯದಲ್ಲಿಯೂ ಇದೇ ಪರಿಸ್ಥಿತಿಯಿದ್ದು ಭೂ ಮಾಲಕ ಹಾಗೂ ಒಕ್ಕಲು ಈ ಎರಡು ವರ್ಗ ಭೂಮಿಯಲ್ಲಿ ಆಸಕ್ತಿ ಕಳೆದುಕೊಂಡಿದೆ. ತಾತ್ಕಾಲಿಕ ರಕ್ಷಣೆಗಾಗಿ ಮಾಡಿರುವ ಕಾನೂನಿನ ದುರುಪಯೋಗವನ್ನು ಹಲವರು ಮಾಡುತ್ತಿದ್ದಾರೆ. ಭೂ ಮಾಲಕ ಹಾಗೂ ಒಕ್ಕಲು- ಎರಡೂ ವರ್ಗದವರಿಗೆ ತೃಪ್ತಿಕರವಾದ ಒಂದು ವ್ಯವಸ್ಥೆ ಇರಬೇಕೆಂದೂ, ಹೀಗಾದರೆ ಆಹಾರ ಪರಿಸ್ಥಿತಿ ತುಸುವಾದರೂ ಸುಧಾರಿಸಬಹುದೆಂದು ಆಶಿಸಬಹುದು. ಅದೆಂತಹ ವ್ಯವಸ್ಥೆ ಎಂದು ಲೇಖಕರೇ ಸೂಚಿಸಿರುವರು.

"ಉಳುವವನೇ ನೆಲದೊಡೆಯ"ನೆಂಬ ತತ್ವವನ್ನು ಸ್ವಾತಂತ್ರ್ಯ ಪೂರ್ವದಿಂದ ನಾವು ಒಪ್ಪಿಕೊಂಡಿರುವೆವು. ಈ ದಿಸೆಯಲ್ಲಿ ರಾಜ್ಯ ರಾಜ್ಯಗಳಲ್ಲಿ ಭೂ ಸುಧಾರಣಾ ಕಾನೂನುಗಳು ಅಮಲಿಗೆ ಬಂದಿವೆ, ಬರುತ್ತಿವೆ.

ಬೇರೆ ಬೇರೆ ರಾಜ್ಯಗಳಿಗೆ ಸೇರಿದ್ದ ವಿಭಾಗಗಳ ಒಕ್ಕೂಟವಾದ ಮೈಸೂರು ರಾಜ್ಯದಲ್ಲಿ ಮಾತ್ರ ಏಕರೂಪವಾದ ಕಾನೂನು ಹಲವಾರು ಕಾರಣಗಳಿಂದ ಅಮಲಿಗೆ ಬಂದಿಲ್ಲ. ಪರಿಣಾಮವಾಗಿ ರಾಜ್ಯದಲ್ಲಿ ಒಂದು ಅನಿಶ್ಚಿತ ವಾತಾವರಣವನ್ನು ನಿರ್ಮಿಸಿಯದೆ. ಭೂ ಮಾಲಕರು ತಮ್ಮ ಕೈ ತಪ್ಪುವ ಭೂಮಿಯಲ್ಲಿ ಆಸ ತೊರೆದಿದ್ದಾರೆ. ಅದರ ಒಕ್ಕಲುಗಳಲ್ಲಿ ಭೂಮಿ ತನ್ನದೆಂಬ ಅಭಿಮಾನ ಬಂದಿಲ್ಲ. ಬದಲಿಗೆ ಗೇಣಿ ಕೊಡದಿದ್ದರೂ ಒಕ್ಕಲೆಬ್ಬಿಸ ಕೂಡದೆಂಬ ನಿಯಮದಿಂದ ಉತ್ತೇಜಿತರಾಗಿ ಅತ್ತ ಗೇಣಿಯನ್ನೂ ಕೊಡದೆ, ಇತ್ತ ಸಾಗುವಳಿಯನ್ನೂ ಮಾಡದ ಪರಿಸ್ಥಿತಿಯು ದ. ಕ. ಜಿಲ್ಲೆಯಲ್ಲಾದರೂ ಹೊಸತಲ್ಲ.

ಭೂಮಿಯ ಮೇಲೆ ಹಕ್ಕುಳ್ಳವರು ಇಂತಿಷ್ಟು ಜಮೀನಿನಲ್ಲಿ ಇಂತಿಷ್ಟು ಬೆಳೆಯಲೇ ಬೇಕೆಂಬ ನಿಯಮವೂ ನಮ್ಮ ದೇಶದಲ್ಲಿ ಇಲ್ಲವಾದುದರಿಂದ ಸಾಗುವಳಿ ಮಾಡುವುದು ಬಿಡುವುದು ಅವರವರ ಸ್ವೇಚ್ಛಾಚಾರಕ್ಕೆ ಸಂಬಂಧಿಸಿದ ವಿಷಯವಾಗಿದೆ. ಇಂದು ಕಾಣುತ್ತಿರುವ ಆಹಾರದ ಅಭಾವಕ್ಕೆ ಈ ಪರಿಸ್ಥಿತಿಯೂ ಒಂದು ಕಾರಣವೆಂಬುದನ್ನು ಹೆಚ್ಚಿನವರು ಗಮನಿಸಿದಂತಿಲ್ಲ.

ಇದ್ದ ಒಂದು ವ್ಯವಸ್ಥೆಯನ್ನು ಸುಧಾರಣಾ ರೂಪದಲ್ಲಿ ಪುನರ್ವ್ಯವಸ್ಥೆ ಮಾಡುವಾಗ ಇಂತಹ ಅನಿರೀಕ್ಷಿತ ಪ್ರಸಂಗಗಳು ಅನಿವಾರ್ಯವಿರಬಹುದೋ ಏನೋ! ಆದರೆ ಆಹಾರದ ಬಿಕ್ಕಟ್ಟಿನ ಸಮಯ ಸುಧಾರಣೆಯು ಬುಡವನ್ನೇ ಅಡಿಮೇಲು ಮಾಡುವ ರೀತಿಯಾಗಿರದೆ ಒಂದೊಂದೇ ಹಂತದಲ್ಲಿ ಪೂರೈಕೆಯಾಗುವುದು ಪ್ರಸಂಗೋಚಿತವೆಂದು ತೋರುವುದು. ಕ್ರಾಂತಿಕಾರಕ ಬದಲಾವಣೆಯ ಹೆಸರಿನಲ್ಲಿ ಹತ್ತಾರು ವರುಷಗಳ ತನಕ ಮೀನ ಮೇಷ ಮಾಡುವದಕ್ಕಿಂತ ಒಂದೊಂದೇ ಹೆಜ್ಜೆಯನ್ನಿಟ್ಟು ಗುರಿ ಮುಟ್ಟುವುದು ವ್ಯಾವಹಾರಿಕ ಕ್ರಮವಾಗುವುದು. ಆಹಾರ ಉತ್ಪತ್ತಿಯಲ್ಲಿ ನಿಶ್ಚಿತ ಹೆಚ್ಚಳವನ್ನು ಸಾಧಿಸಲೂ ಸಹಾಯಕವಾಗುವುದು.

ಮೈಸೂರು ರಾಜ್ಯದಲ್ಲಿ ರೂಪಿಸಲ್ಪಟ್ಟ ಭೂಸುಧಾರಣಾ ಕಾನೂನು ಬಹು ಕ್ಲಿಷ್ಟವೂ, ಜಟಿಲವೂ ಆಗಿರುವುದ. ಈ ಕಾನೂನು ಜ್ಯಾರಿಗೆ ಬರಲು ಕನಿಷ್ಠ ಐದು, ಹತ್ತು ವರುಷಗಳಾದರೂ ಬೇಕಾಗಬಹುದೋ ಏನೋ! ಏಕೆಂದರೆ ಈ ಕಾನೂನು ನ್ಯಾಯಾಂಗ ಶೋಧನೆಗೆ ಒಳಪಟ್ಟರೆ ಕೊನೆಯ ತೀರ್ಮಾನ ಸುಲಭದಲ್ಲಿ ಆಗತಕ್ಕದ್ದಲ್ಲ. ಕಾನೂನನ್ನು ಕಾರ್ಯಗತಗೊಳಿಸುವ ಸರಕಾರೀ ಯಂತ್ರವು ಅದೆಷ್ಟು ಸಮಯ ತೆಗೆದುಕೊಳ್ಳುವುದೋ ಹೇಳಲಾಗುವದಿಲ್ಲ. ಅಂತೂ ಅಷ್ಟರ ತನಕ ಭೂಮಾಲಿಕರಾಗಲಿ, ಒಕ್ಕಲಾಗಲಿ ಭೂಮಿಯಲ್ಲಿ ಆಸಕ್ತಿ ವಹಿಸದಿರುವುದು ಸಂಭವ. ಇದು ಅಪೇಕ್ಷಣೀಯವಲ್ಲ.

ಹಾಗಾದರೇನು ಮಾಡಬೇಕು? ಅತ್ತ ಒಕ್ಕಲುಗಳಿಗೂ ಭದ್ರತೆ, ಇತ್ತ ಭೂಮಾಲಕರಿಗೂ ಆಸಕ್ತಿ ಹುಟ್ಟಿಸುವ-- ಪರಿಣಾಮವಾಗಿ ಉತ್ಪತ್ತಿ ಹೆಚ್ಚಳಕ್ಕೆ ಅನುಕೂಲವಾಗುವ—ಕಾರ್ಯಕ್ರಮಗಳನ್ನು ಒಂದೊಂದಾಗಿ ರೂಢಿಗೆ ತರಬೇಕು.

ಹಿಡುವಳಿಯ ನ್ಯಾಯ ಗೇಣಿಯನ್ನು ನಿರ್ಧರಿಸಿ, ಆ ಗೇಣಿಯನ್ನು ಕೊಡುವಷ್ಟರ ತನಕ ಒಕ್ಕಲನ್ನು ಯಾವ ಕಾರಣದಿಂದಲೂ ಎಬ್ಬಿಸ ಕೂಡದೆಂಬ ನಿಯಮವನ್ನು ಪಾಲಿಸಬೇಕು. ಗೇಣಿಯನ್ನು ಕೊಡದೆ, ಸಾಗುವಳಿಯನ್ನೂ ಮಾಡದ ಬೇಜವಾಬ್ದಾರಿತನವು ಒಕ್ಕಲುಗಳಲ್ಲಿ ಬಾರದಂತೆ

WITH BEST COMPLIMENTS
FROM
KOTAK BROTHERS
EXPORTERS, IMPORTERS, MERCHANTS & COMMISSION AGENTS
MAHAKALI CHAWL, III FLOOR
PYDHONIE, OPP. GODIJI DERASAR
BOMBAY—3
SPECIALITY: PLASTIC JEWELRY, BANGLES, CONTAINERS
TOYS, STATUES, BAGS, FLOWERS,
ELECTRICAL GOODS ETC.

ಅಭಿನಂದನಾಪೂರ್ಣೆಯೊಂದಿಗೆ
ಕೊಟಕ್ ಬ್ರದರ್ಸ್
ರಫ್ತು ಮತ್ತು ಆಮದು ಮಾಡುವವರು, ವ್ಯಾಪಾರಿಗಳು, ಮತ್ತು ಕಮಿಶನ್ ಏಜಂಟರು
ಮಹಾಕಾಳಿ ಚಾಲ್, III ಫ್ಲೋರ್
ಪೈಧೋನಿಯೆ, ಗಾಡ್‌ಜಿ ದೆರಸಾರ್ ಎದುರು,
ಬೊಂಬಾಯಿ—3
ವೈಶಿಷ್ಟ್ಯಗಳು: ಪ್ಲಾಸ್ಟಿಕ್ ಜ್ಯುವೆಲ್ಲರಿ, ಕಂಕಣಗಳು, ಕಂಟೈನರ್ಸ್, ಆಟದ ಗೊಂಬೆಗಳು, ಪ್ರತಿಮೆಗಳು,
ಚೀಲಗಳು, ಹೂವುಗಳು, ಇಲೆಕ್ಟ್ರಿಕಲ್ ಸಾಮಾನುಗಳು ಇತ್ಯಾದಿ.

ನೋಡಿಕೊಳ್ಳಬೇಕು. ಯಾವುದೇ ಕಾನೂನು ಸಮಾಜದ ಒಂದು ವಿಭಾಗಕ್ಕೆ ನ್ಯಾಯ ಒದಗಿಸುವಾಗ ಇನ್ನೊಂದು ವಿಭಾಗಕ್ಕೆ ಅನ್ಯಾಯವನ್ನುಂಟುಮಾಡಬಾರದು. ವಕ್ಕಲುಗಳಿಗೆ ನ್ಯಾಯ ಬಗೆಯುವಾಗ ಭೂಮಾಲಿಕರಿಗೆ ಅನ್ಯಾಯವಾಗಬಾರದು ಸತ್ಯ. ಭೂಮಾಲಿಕರೆಂದರೆ ಎಲ್ಲರೂ ಜಮೀನ್ದಾರರಲ್ಲ. ಕೆಲವು ಚಿಕ್ಕಪುಟ್ಟ ಭೂಮಾಲಿಕರು ವಕ್ಕಲುಗಳಿಗಿಂತಲೂ ಕಳಪೆ ಸ್ಥಿತಿಯಲ್ಲಿದ್ದಾರೆ. ಇಂಥವರಿಗೆ ಗೇಣಿಯೂ ಬಾರದಿದ್ದರೆ, ಅಧಿಕ ತೆರಿಗೆಯನ್ನೂ ತೆರಬೇಕಾದಾಗ ಏನು ಅನ್ಯಾಯ ಆಗುತ್ತದೆಯೆಂಬುದನ್ನು ವಿವೇಚಿಸಬೇಡವೆ?

ವಂಶ ಪರಂಪರೆಯಿಂದ ಬಂದ ಹಕ್ಕಿನಿಂದ ಭೂಮಾಲಿಕರಾದವರ ಹಕ್ಕನ್ನು ನಿರ್ಮೂಲಿಸುವ ಯೋಜನೆಯನ್ನು ಸ್ವಾಗತಿಸಬೇಕು. ಏಕೆಂದರೆ ಕೃಷಿಯಲ್ಲಿ ಅಭಿರುಚಿಯಾಗಲಿ, ಹೆಚ್ಚು ಬೆಳೆಯನ್ನು ಬೆಳೆಯಬೇಕೆಂಬ ಆಸಕ್ತಿಯಾಗಲಿ ಇವರಲ್ಲಿ ಇದೆಯೆಂಬ ಕಾರಣದಿಂದ ಇವರು ಭೂಮಾಲಿಕರಾಗಿಲ್ಲ, ಆದರೆ ಅಂತೆಯೇ, ಬರೀ ವಕ್ಕಲಾಗಿ ಇರುವ ಕಾರಣದಿಂದಾಗಿ ಆತಗೆ ಭೂಮಿ ಕೊಡಿಸುವುದೂ ಈ ತತ್ವಕ್ಕೆ ಸರಿಹೋಗುವುದಿಲ್ಲ. ಆತನಲ್ಲಿ ಬೇಸಾಯದ ಆಸಕ್ತಿ ಇದೆಯೋ ಎಂಬುದನ್ನು ಪರಿಶೀಲಿಸಬೇಡವೆ? ಹಾಗೆ ಪರಿಶೀಲನೆ ಮಾಡದಿದ್ದರೆ ಒಂದು ಹಿತಾಸಕ್ತ ವರ್ಗವನ್ನು ನಿರ್ಮೂಲನಮಾಡಿ ಹೊಸತೊಂದು ಅಂತಹದೇ ವರ್ಗವನ್ನು ನಿರ್ಮಿಸಿದಂತಾಗುವುದು.

ಆದುದರಿಂದ ಭೂಮಾಲಕನಾಗಲಿ, ವಕ್ಕಲಾಗಲಿ — ಭೂಸ್ವಾಮಿತ್ವವನ್ನು ಹೊಂದುವ ಅರ್ಹತೆಯುಳ್ಳವನಾಗಬೇಕಾದರೆ ಆತಗೆ ಕೃಷಿಯಲ್ಲಿ ನಿಷ್ಠೆ ಇರಬೇಕು, ಮತ್ತು ತನ್ನ ಹಿಡುವಳಿಗೆ ಸರಿಯಾದ ನಿರಮ ಉತ್ಪತ್ತಿಯನ್ನು ಸಾಧಿಸುವ ಹೊಣೆಗಾರಿಕೆಯನ್ನು ಹೊರುವವನಾಗಿರಬೇಕು. ಅವನಿಗೆ ಆರ್ಥಿಕ ಅಥವಾ ಇನ್ಯಾವುದೇ ಅಡಚಣೆಗಳಿರುವುದಾದರೆ ಅವುಗಳನ್ನು ನೀಗಲು ಸಹಕಾರೀ ಸಂಘ ಅಥವಾ ಇನ್ನಿತರ ವ್ಯವಸ್ಥೆಗಳ ಮೂಲಕ ಸರಕಾರ ಅಥವಾ ಆಹಾರ ಕಾರ್ಪರೇಶನ್‌ನವರು ಸಹಕರಿಸಬಹುದು. ಈ ಸವಲತ್ತುಗಳ ಪ್ರಯೋಜನವಿದ್ದೂ ಆತ ಯೋಗ್ಯ ಪ್ರಮಾಣದಲ್ಲಿ ಬೆಳೆಯಲಾರನಾದರೆ ಅಂಥವನ ಹಿಡಿತದಲ್ಲಿ ಸಾಗುಭೂಮಿ ಇರುವುದು ಸಮಾಜಕ್ಕೆ ಉಪಯುಕ್ತವಲ್ಲ. ಆ ಭೂಮಿಯಲ್ಲಿ ಬೆವರಿಳಿಸಿ ಉತ್ಪತ್ತಿ ಹೆಚ್ಚಿಸುವ ಭರವಸೆ ಇರುವವರಿಗೆ ಅದನ್ನು ಕೊಡಬೇಕು. ಈ ಪ್ರಶ್ನೆಯಲ್ಲಿ ಯಾವುದೇ ಸ್ಥಾಪಿತ ಹಿತಾಸಕ್ತಿಗಳಿಗೆ ಪ್ರವೇಶವಿರಕೂಡದೆಂಬುದು ಮುಖ್ಯ.

ನ್ಯಾಯ ಗೇಣಿಯನ್ನು ನಿಶ್ಚಯಮಾಡುವುದರೊಂದಿಗೆ ಭೂಮಿಯ ನ್ಯಾಯ ಬೆಲೆಯನ್ನೂ ಗೊತ್ತುಪಡಿಸಬೇಕು. ಅಂತಹ ಬೆಲೆ ತೆತ್ತು ವಕ್ಕಲು ಯಾವಾಗಲೂ ಭೂಮಾಲಿಕನಿಂದ ಭೂಮಿಯ ಸ್ವಾಮಿತ್ವವನ್ನು ಪಡೆಯುವ ಅರ್ಹತೆಯನ್ನು ಹೊಂದಿರಬೇಕು. ಯಾವ ಭೂಮಾಲಿಕನಾದರೂ ಭೂಮಿಯನ್ನು ಇತರರಿಗೆ ಮಾರುವಾಗ ಮೊದಲು ವಕ್ಕಲನ್ನು ಕೇಳಿಕೊಳ್ಳಬೇಕು. ವಕ್ಕಲು ಖರೀದಿಸುವುದಿಲ್ಲವೆಂದ ಬಳಿಕವೇ ಅದನ್ನು ಇತರರಿಗೆ ಮಾರುವ ಹಕ್ಕು ಭೂಮಾಲಿಕನಿಗೆ ಬರಬೇಕು. ದಕ್ಷತೆಯುಳ್ಳ, ಪ್ರಾಮಾಣಿಕ ವಕ್ಕಲುಗಳು ಭೂಮಿಯನ್ನು ಕೊಂಡುಕೊಳ್ಳುವರೆ ಬೇಕಾಗುವ ಹಣಕಾಸಿನ ಸೌಲಭ್ಯವನ್ನು ಸರಕಾರವು ಸಹಕಾರೀ ಸಂಘಗಳ ಮೂಲಕ, ಅಥವಾ ಇನ್ನಿತರ ವ್ಯವಸ್ಥೆಯಿಂದ ನೀಡಬೇಕು. ಇಂತಹ ವ್ಯವಸ್ಥೆಯಿಂದ ಉಳುವ ಪ್ರಾಮಾಣಿಕ ವಕ್ಕಲುಗಳು ನೆಲೆದೊಡೆಯನಾಗಬಹುದು. ಉಳಿದ ವಕ್ಕಲುಗಳು ಹಿಡುವಳಿಯ ಮಟ್ಟಿಗೆ ಭದ್ರತೆ ಪಡೆಯುತ್ತಾರೆ.

ಈ ವ್ಯವಸ್ಥೆಯು ಭೂಮಾಲಿಕರಿಗೂ ತೃಪ್ತಿತರಬಹುದು. ಆ ಒಂದು ವರ್ಗಕ್ಕೆ ನ್ಯಾಯ ಒದಗಿಸುವುದರೊಂದಿಗೆ ವಕ್ಕಲುಗಳ ಹಿತಾಸಕ್ತಿಗೂ ರಕ್ಷಣೆ ಬಂದಂತಾಗುವುದು. ಪ್ರಾಕೃತ ಕಂಡು ಬರುತ್ತಿರುವ ಅನಿಶ್ಚಿತ ವಾತಾವರಣವನ್ನು ಕೊನೆಗೊಳಿಸಿದಂತಾಗುವುದು. ಕೃಷಿ ಕ್ಷೇತ್ರದಲ್ಲಿ ಉತ್ಪತ್ತಿಕಾರಕ ಚಟುವಟಿಕೆಗಳಿಗೆ ಪ್ರಚೋದನೆ ದೊರೆಯುವುದು.

ಇದರಿಂದ ಸ್ವಾರ್ಥ ಸಾಧನೆಗಾಗಿ ಧನಿ, ವಕ್ಕಲುಗಳ ಪ್ರಶ್ನೆಯಲ್ಲಿ ಮೂಗು ಹಾಕಿ ತನ್ನ ಬೇಳೆ ಬೇಯಿಸಿಕೊಳ್ಳುತ್ತಿರುವ ರಾಜಕೀಯ ಪಕ್ಷಗಳ ಅನಪೇಕ್ಷಿತ ಚಟುವಟಿಕೆಗಳಿಗೂ ಎಡೆ ಇರುವುದಿಲ್ಲ. ಇಂದು ವಕ್ಕಲುಗಳ ಅಗ್ಗದ ಅನುರಾಗ ಪಡೆಯಲು ಕೆಲವು ರಾಜಕೀಯ ಪಕ್ಷಗಳು "ಗೇಣಿ ಕೊಡಬೇಡಿ" ಎಂಬ ದುರ್ಬೋಧನೆಯನ್ನು ಮಾಡುತ್ತಿದ್ದಾವೆ. ಗೇಣಿ ಕೊಡದಿರುವಾಗ ಧನಿ ಎಲ್ಲಾದರೂ ಪೈರನ್ನು ಹಿಡಿಯಬಹುದಾದ ಕಾರಣ ಬೆಳೆಯನ್ನೂ ಬೆಳೆಸಬೇಡಿರೆಂಬ ಸಲಹೆಯೂ ಬರುತ್ತಿದೆ. ಇದರಿಂದ ಧನಿಗುಂಟಾಗುವ ತೊಂದರೆಗಿಂತ ವಕ್ಕಲುಗಳಲ್ಲಿ ಎಂತಹ ಬೇಜವಾಬ್ದಾರಿತನವನ್ನು ಸೃಷ್ಟಿಸಲಾಗುತ್ತಿದೆಯೆಂಬುದು ಗಮನೀಯ. ತಮ್ಮ ರಾಜಕೀಯ ಮೇಲ್ಮೈಗಾಗಿ ಈ ಪಕ್ಷಗಳು ಭೂಸುಧಾರಣೆಯ ಕಾನೂನು ಅಮಲಿಗೆ ಬಂದ ಬಳಿಕವೂ ಇಂದಿನಂತೆಯೇ "ಗೇಣಿ ಕೊಡಬೇಡಿ" ಎಂದೂ ವಕ್ಕಲುಗಳಿಗೆ ಕಿವಿಮಾತು ಹೇಳುವುವು. ಆಗ ಸರಕಾರಕ್ಕೆ ವತ್ತಾಯದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗುವುದು ಆಗಲೂ ಸರಕಾರ ಅಪ್ರಿಯವಾಗದಿರುವುದೆ? ವಕ್ಕಲುಗಳಿಂದ ಗೇಣಿ ಸಲ್ಲಿಸಿ ಧನಿಗೆ ಪರಿಹಾರ ನೀಡುವ ಈ ಜವಾಬ್ದಾರಿ ಸರಕಾರ ಯಾಕೆ ವಹಿಸಿಕೊಳ್ಳಬೇಕು? ಬದಲಿಗೆ ನ್ಯಾಯಬೆಲೆಯಲ್ಲಿ ಭೂಮಿಯನ್ನು ವಕ್ಕಲುಗಳು ಖರೀದಿಸುವರೆ ಬೇಕಾದ ಅನುಕೂಲತೆಗಳನ್ನು ವದಗಿಸಿ, ವಕ್ಕಲು ತನ್ನ ಜವಾಬ್ದಾರಿಯನ್ನು ಮರೆಯದಂತೆ ಮಾಡುವುದು ಸುಲಭ ಮಾರ್ಗವಲ್ಲವೆ?

ಈ ಪ್ರಶ್ನೆಯನ್ನು ಸರಕಾರವೂ, ಆಹಾರ ಕಾರ್ಪೊರೇಶನ್ನೂ ನ್ಯಾಯವಾದಿಗಳೂ ಪುನರ್ವಿಮರ್ಶಿಸುವ ಕಾಲ ಬಂದಿದೆ.

WITH COMPLIMENTS FROM

JAYSHREE NOVELTY

MANUFACTURERS & EXPORTERS
OF
PLASTIC IMITATION JEWELRY

FACTORY:
JAGJIVAN DAYAL WADI
AGRA RD., GHATKOPAR
BOMBAY—77
Phone: Call: 68205

SALES DEPOT
110, III BHOIWADA
II FLOOR
BOMBAY—2
Phone Call: 333679

ಅಭಿನಂದನೆಗಳು

ಜಯಶ್ರೀ ನೊವೆಲ್ಟಿ

ಪ್ಲ್ಯಾಸ್ಟಿಕ್ ಇಮಿಟೇಶನ್ ಆಭರಣಗಳನ್ನು
ತಯಾರಿಸುವವರು ಮತ್ತು ಹೊರಗೆ ಕಳಿಸುವವರು

ಕಾರಖಾನೆ:
ಜಗಜೀವನ್ ದಯಾಳ್ ವಾಡಿ
ಆಗ್ರಾ ರೋಡು, ಘಾಟ್‌ಕೊಪರ್
ಬೊಂಬಾಯಿ — 77
ಫೋನ್: ಕರೆ: 68205

ಮಾರಾಟದ ಡಿಪೋ
110, III ಭೋಯಿವಾಡಾ
II ಫ್ಲೋರ್
ಬೊಂಬಾಯಿ — 2
ಫೋನ್: ಕರೆ. 333679

ಪ್ರಜಾಪ್ರಭುತ್ವದ ಪ್ರಭುಗಳಿಗೊಂದು ಸವಾಲು

ಇದೀಗ ಪ್ರಜಾಪ್ರಭುತ್ವ ದಿನಾಚರಣೆಯನ್ನು ನಾವು ನೋಡುತ್ತಿದ್ದೇವೆ. ಗಣರಾಜ್ಯದ ಪ್ರಜೆಗಳು ಸಂತಸ ಪಡಬೇಕಾದ ದಿನವಿದು. ಆದರೆ ಭಾರತದ ಬಡ ಜನತೆಯ ಬಾಳು ಮಾತ್ರ ದಿನದಿಂದ ದಿನಕ್ಕೆ ಕಠಿಣವೆನಿಸುತ್ತಿದೆ. ದೇಶದ ಯೋಜನೆಗಳ ಫಲ ಅವರ ಬಾಗಿಲಿನತ್ತ ಸುಳಿಯುವುದೂ ಇಲ್ಲ. ಅವರು ಬದುಕುವುದೇ ದುಸ್ತರವೆನಿಸಿದೆ. ಪ್ರಜಾಪ್ರಭುತ್ವದಲ್ಲಿ ಪ್ರಭುಗಳೆನಿಸಿಕೊಂಡವರ ಕೃಪಾ ಛತ್ರದ ನೆರಳಿನ ಆಸರೆ ಎಲ್ಲರಿಗೂ ದೊರೆಯುವುದೆಂದು? ಜನರಿಗಾಗಿ, ಜನರಿಂದ ಆರಿಸಲ್ಪಟ್ಟ ಜನತಾ ಸರಕಾರದ ಕನಸಿನ ಗಂಟಾಗಿಯೇ ಉಳಿದೀತೆ? ಎಂದು ಸವಾಲು ಹಾಕುತ್ತಿದೆ ಬಡ ಜನತೆ, ಆದರೂ ನಾಳೆ ನಮ್ಮದೆಂಬ ವಿಶ್ವಾಸ ಅವರದು!

ಲೇಖಕರು.— ಸುದಾಸ

ಆಗ ಬಾರದು— ಹೀಗಾಗ ಬಾರದು.

—ಇದು ಪ್ರಜಾಪ್ರಭುತ್ವ. ಇಲ್ಲಿ, ನಮ್ಮ ಹೊಣೆ ದೊಡ್ಡದು. ನಾವು ಏನೂ ತಿಳಿಯದ ಮೊದ್ದುಗಳೆಂದು ತಿಳಿಯಬೇಡಿ—

—ನಮ್ಮ ಹಕ್ಕನ್ನು ನಾವು ಕೇಳುತ್ತೇವೆ. ಅದನ್ನು ಕೊಡಿ, ಒದಗಿಸಿಕೊಡಿ, ಇಲ್ಲ, ನಾವು ಕಸಿದು ಕೊಳ್ಳುತ್ತೇವೆ— ಕಾರಣ, ನಾವು ಹಸಿದಿದ್ದೇವೆ.

ಇದನ್ನು ಜನ ಕೇಳುತ್ತಾರೆ. ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇರಿಸಿಕೊಂಡವರು ಕೇಳುತ್ತಾರೆ. ಇದು ಭರವಸೆ ಇರಿಸಿಕೊಂಡಿದ್ದ ಜನರ ಪ್ರಶ್ನೆ.

ಈ ಪ್ರಶ್ನೆ ಬಗೆ ಹರಿಯುವದು ಸುಲಭದ ಮಾತೇನೂ ಅಲ್ಲ. ಎಲ್ಲವು ವಿಲಂಬವಾಗಿ ಆಗುವ ಪ್ರಜಾ ಪ್ರಭುತ್ವದಲ್ಲಿ, ಈ ಪ್ರಶ್ನೆ ಬಗೆಹರಿಯುವುದು ಸುಲಭದ ಮಾತೇನೂ ಅಲ್ಲ.

ಸುಲಭದ ಕೆಲಸ ಒಂದಿದೆ. ದೇಶಕ್ಕೆ "ಬರ" ಬಂದಿದ್ದರೂ, ಜನ ಅರ್ಥವಿಲ್ಲದ ಜೀವನವನ್ನು ಒಗ್ಗಿಸಿಕೊಳ್ಳುತ್ತಿದ್ದರೂ, 'ಪ್ರಭು'ಗಳ ಕೃಪಾದೃಷ್ಟಿಯಲ್ಲಿರುವ ಸುಲಭದ ಕೆಲಸ ಒಂದಿದೆ. ಯಾರೋ ಘನವಂತರು, ಯಾರೋ ಘನತೆವೆತ್ತವರು, ಹುಟ್ಟಿದ ದಿನ—ಸತ್ತ ದಿನವನ್ನು ಆಚರಿಸುವಿಕೆ—ಯಾವದೋ, ಯಾರದೋ, ನೆನಪಿಗಾಗಿ ಒಂದು ದಿನವನ್ನು ಮೀಸಲಾಗಿರಿಸುವಿಕೆಗಿಂತ ಹೆಚ್ಚು ಮಹತ್ವದ ಕೆಲಸ, ಖಂಡಿತ ಇನ್ನೊಂದಿಲ್ಲ.

ಸ್ವಾತಂತ್ರ್ಯಕ್ಕಾಗಿ ಎಷ್ಟು ಮಂದಿ ಮಡಿದಿಲ್ಲ? ಎಷ್ಟು ಮಂದಿ ರಕ್ತ ತರ್ಪಣವಿತ್ತಿಲ್ಲ? ಎಷ್ಟು ಮಂದಿ ಭವಿಷ್ಯದ ಫಲಾಫಲಗಳ ತ್ಯಾಗ ಮಾಡಿಲ್ಲ? ಎಷ್ಟು ಮಂದಿ ಇದಕ್ಕಾಗಿ ಸರ್ವಸ್ವವನ್ನು ಕಳೆದುಕೊಂಡ ನೋವು ಅನುಭವಿಸಿಲ್ಲ? ಎಷ್ಟು ಮಂದಿ ಗುರಿ ಮುಟ್ಟುವದಕ್ಕಾಗಿ ಹೋರಾಡಿ ಮಡಿದಿಲ್ಲ?

ಅವರೆಲ್ಲರ— ಎಲ್ಲರ—ನೆನಪಿಗಾಗಿ ನಾವೇನು ಮಾಡಿದ್ದೇವೆ? ನಾವೇನು ಸಾಧಿಸಿದ್ದೇವೆ?

ದಿನಾಚರಣೆಯೇ? ಪವಿತ್ರ ದಿನಗಳೆಂದು ಪಾವಿತ್ರ್ಯ ರಕ್ಷಣೆಯ ಸ್ಮರಣೆಯೇ? ಪ್ರತಿಜ್ಞೆಯೇ? ಇಲ್ಲ, ಅದಕ್ಕಾಗಿ-ಆ ದಿನಕ್ಕಾಗಿ ಸಿದ್ಧಪಡಿಸಿರುವ, ಸೊಗಸಾದ, ಹುರುಪಿನ, ಭಾಷಣವೇ?

ಸ್ವಾತಂತ್ರ್ಯಬೇಕು ಎಂದು ಬಯಸಿದ್ದ ಸ್ವಾತಂತ್ರ್ಯ ಬಂತು. ಅದನ್ನು ನಾವು ಪಡೆದೆವು. ಸ್ವಾತಂತ್ರ್ಯ ಪಡೆದ ಬಳಿಕ ಹದಿನೇಳು ವರ್ಷಗಳನ್ನು ನಾವು ಕಂಡೆವು. ಈ ಹದಿನೇಳು ವರ್ಷಗಳು ನಮಗೇನು ತಂದು ಕೊಟ್ಟಿವೆ? ನಾವೇನನ್ನು ಸಾಧಿಸಿದ್ದೇವೆ?

ಈ ಪ್ರಶ್ನೆ ಕೇಳುವಲ್ಲಿ ಅರ್ಥವಿಲ್ಲ. ಸ್ವಾತಂತ್ರ್ಯ ನಂತರ ಶಾಂತಿಯ ಗಾಳಿ ಬೀಸಿ, ಬೀಸಿ, ಉರಿ ಹೆಚ್ಚಿದೆ. ಜನ ಕ್ರಾಂತಿಯಾಗಲಿ ಎಂದು ಸಿಡಿದೇಳುತ್ತಿದ್ದಾರೆ.

ಕಾರಣ, ನಮಗೆ ಬೇಕಾದುದೇನೂ ಸಿಗಲಿಲ್ಲ. ನಾವು ಬಯಸಿದ್ದೊಂದೂ ಆಗಲಿಲ್ಲ

ನಮಗೆ ಸಿಕ್ಕ ಸ್ವಾತಂತ್ರ್ಯಕ್ಕಾಗಿ ಸಂತೋಷ ಪಟ್ಟವರು ನಾವು. ಅದನ್ನು ಪಡೆಯಲು ಮಾಡಿ ಮಡಿದವರ ಗೋರಿಯ ಮೇಲೊಂದು ಭವ್ಯ ರಾಷ್ಟ್ರ ನಿರ್ಮಾಣ ಮಾಡುತ್ತೇವೆಂದು ಟೊಂಕ ಕಟ್ಟಿದವರು ನಾವು.

ಬಿಗಿದ ಕಚ್ಚೆ ಸಡಿಲಾಯಿತು. ನಾವು ನರಳಿದೆವು. ನಮ್ಮ ನಗ್ನ ರೂಪವನ್ನು ಕಂಡು. ನಾವು ನಾಚಿಕೆಪಟ್ಟೆವು. ಅತ್ತೆವು. ಕೆರಳಿ ನಿಂತೆವು. ಹೀಗಾಗ ಬಾರದಿತ್ತು. ಹೀಗಾಗ ಬಾರದಿತ್ತು ಎಂದು ಎಚ್ಚರಿಕೆ ಇತ್ತೆವು.

ಪ್ರಜಾಪ್ರಭುತ್ವವು ಪ್ರಭುಗಳ ಪ್ರಭುತ್ವಕ್ಕೋಸ್ಕರವಾಗಿ, ಅರ್ಥವಿಲ್ಲದ ರೀತಿ ಬಣ್ಣಗೆಟ್ಟಿತು. ಬಣ್ಣವೇರ್ಪಟ್ಟಿತು. ಇವರಿಂದ ಆದುದು ಅರ್ಥವಲ್ಲ; ಅನರ್ಥ.

ಪ್ರಜೆಗಳೇ ಪ್ರಭುಗಳು ಎಂಬ ಮಾತಿನಲ್ಲಿ ವಿಶ್ವಾಸವಿರಿಸಿಕೊಂಡವರೇನೋ ಪ್ರಭುಗಳಾದರು. ಪ್ರಭುತ್ವಕ್ಕಾಗಿ ಕಾದಾಡಿದರು ಹೋರಾಡಿದರು. ಮುಗ್ಗರಿಸಿ ಬಿದ್ದವರು ಬಿದ್ದರು. ಎದ್ದವರು ಎದ್ದರು.

(ಮೂವತ್ತೆರಡನೇ ಪುಟ ನೋಡಿ)

RENEWED GOOD WISHES
ON THIS AUSPICIOUS DAY
FROM
KALAPI BANGLES
SIMSON COMPOUND,
ISHWARBHAI PATEL ROAD,
GOREGAON EAST
BOMBAY-62
MANUFACTURERS OF
ART BANGLES IN CELLULOID AND PLASTICS
ಇಂದಿನ ಪವಿತ್ರ ದಿನದಲ್ಲಿ
ನಮ್ಮ ನವೀಕರಿಸಿದ ಶುಭೇಚ್ಛೆಗಳು
ಕಲಾಪಿ ಬೇಂಗಲ್ಸ್
ಸಿಮ್ಸನ್ ಕಂಪೌಂಡು,
ಈಶ್ವರಭಾಯಿ ಪಟೇಲ್ ರೋಡ್
ಗೋರೇಗಾಂವ್ ಪೂರ್ವ
ಬೊಂಬಾಯಿ-62
ಸೆಲ್ಲುಲೋಯ್ಡ್ ಮತ್ತು ಪ್ಲಾಸ್ಟಿಕ್ಸ್‌ನಿಂದ ಕಲಾಪೂರ್ಣ ಕಂಕಣ ತಯಾರಿಸುವವರು.



ಬರೆದವರು

ಶ್ರೀ ಪಿ. ಕೆ. ಶೆಟ್ಟಿ, ಕರೊಪಾಡಿ.

●

ನಮ್ಮ ಬೇಕುಗಳ ಸಮಸ್ಯೆ

ನಮ್ಮ ಬೇಕುಗಳು- ಅಂದರೆ, ಆವಶ್ಯಕತೆಗಳು - ಇಂದು ಅಪಾರ. ಇವುಗಳನ್ನು ನಾವು ಪೂರೈಸಬೇಕಾದರೆ, ನಾವು ಬದುಕ ಬೇಕು, ಮಾನವರಾಗಿ ಬಾಳಬೇಕು. ಇದಕ್ಕೆ ದುಡಿಮೆಗಿಂತ ಮಿಗಿಲಾದ ಸಾಧನ ಮತ್ತೊಂದಿಲ್ಲ. ಅದೊಂದೇ ನಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರ ಹೇಳಬಲ್ಲದು.

ನಾವಿಂದು ಪ್ರಗತಿಯ ಹುಚ್ಚಿನಲ್ಲಿ ಮರುಳುಗೊಂಡು ನಿರ್ಗತಿಕರಾಗುತ್ತಿದ್ದೇವೆ. ನಾವು ಹೇಗೆ ಬದುಕ ಬೇಕೆಂಬುದೇ ತಿಳಿಯದೆ ಸಮಸ್ಯೆಗಳ ಸಂತೆಯಲ್ಲಿ ಅಲೆಯುವವರಾಗಿದ್ದೇವೆ. ಬಾಳನ್ನು ಮರೆತು ಅದನ್ನು ಕೀಳು ತರಗತಿಯೆಡೆಗೆ ದೂಡ ಹೊರಟಿದ್ದೇವೆ. ಇಂದು ನಮ್ಮ ಮುಂದಿರುವ ಪ್ರಶ್ನೆ ಒಂದೇ—ಅದು ಬದುಕುವುದು ಹೇಗೆಂದು! ಬದುಕುವ ಹಂಬಲವಿದ್ದರೂ ಭವಿಷ್ಯದ ಭರವಸೆಯಿಲ್ಲ. ತನ್ನ ಕೆಲಸದಲ್ಲಿ ಬೌದ್ಧಿಕವಾದ ವಿಶ್ವಾಸವಿಲ್ಲ. ಎಲ್ಲದಕ್ಕೂ ಬಹಳ ಸುಲಭದ ದಾರಿಯನ್ನು ಅರಸುವ ಉಪಾಯದ ಯೋಚನೆಯಲ್ಲಿಯೇ ಎಡವಿ ಬಿದ್ದು, ತಾನು ಇಂದು ಮಾಡಬೇಕಾದುದೇನೆಂದು ತಿಳಿಯದೆ ಮನುಷ್ಯತ್ವವನ್ನು ಕಳೆದುಕೊಂಡಿದ್ದಾನೆ—ಮನುಷ್ಯ!

ಇಂತಹ ಅಪಾಯಕಾರೀ ಸನ್ನಿವೇಶದಲ್ಲಿ ನಮ್ಮಲ್ಲಿ ವಿಶ್ವಾಸ, ವಿಶಾಲ ಮನೋಭಾವ, ಸಹನೆ, ಸತ್ಯ, ಸಹಕಾರ ಮತ್ತು ಸಂಯಮಗಳು ಅಂಕುರಿಸಬೇಕು; ಬೆಳೆದು ಹೆಮ್ಮರವಾಗಬೇಕು. ಸಾಮಾಜಿಕ ಜೀವನದ ಅರಿವಾಗ ಬೇಕು; ಅವಶ್ಯಕತೆಗಳ ಅಗತ್ಯವನ್ನು ಚೆನ್ನಾಗಿ ಅರಿತಿರಬೇಕು. ವಿವೇಕಯುತವಾದ ಉದಾತ್ತ ವಿಮರ್ಶೆಗಳಿಂದ ಜ್ಞಾನದ ಹೊಳೆ ಹರಿಯ ಬೇಕು. ಬದುಕು ಬಿಗುವಾಗಿರದೆ ಹದವಾಗಿರಬೇಕು.

ನಾವು ಭವ್ಯಭಾರತದ ಪ್ರಜೆಗಳು—ಭಾರತೀಯರು! ಸ್ವಾತಂತ್ರ್ಯದ ಧ್ವಜ ಹಾರಿ ಇನ್ನೂ ಎರಡು ದಶಕಗಳು ಕಳೆದಿಲ್ಲ. ವಿಶ್ವದ ಸಮಕಾಲೀನ ರಾಷ್ಟ್ರಗಳೊಡನೆ ಎದೆಗೆ ಎದೆಗೊಟ್ಟು ಧೈರ್ಯವಾಗಿ ತಲೆಯೆತ್ತಿ ನಿಲ್ಲುವ ಶಕ್ತಿಸಾಮರ್ಥ್ಯಗಳು ನಮಗಿನ್ನೂ ಬಂದಿಲ್ಲ. ಸಾಕಷ್ಟು ಶಕ್ತಿ ನಮ್ಮಲ್ಲಿ ಇದ್ದರೂ ನಾವಿನ್ನೂ ವಿವೇಕ ಕಳೆದು ಚೇತನಾಹೀನರಾಗಿಯೇ ಇದ್ದೇವೆ. ಇತರ ದೇಶಗಳವರು ಎಲ್ಲಾ ಬಗೆಗಳಲ್ಲೂ ಪರಿಪೂರ್ಣತೆಯನ್ನು ಪಡೆದು ಸುಖದ ಸುಪ್ಪತ್ತಿಗೆ ಏರಿದ್ದರೂ, ನಾವು ನಮ್ಮ ಮೂಲಭೂತ ಬೇಡಿಕೆಗಳಿಗೇ ಇನ್ನೊಬ್ಬರೆಡೆಗೆ ಕೈನೀಡಬೇಕೆಂದರೆ ಅದೂ ಒಂದು ಕೊರತೆಯಲ್ಲದೆ ಮತ್ತೇನು?

ನಮ್ಮ ಸರಕಾರದಲ್ಲಿ—ನಾವೇ ಆರಿಸಿ ಕಳುಹಿಸಿದ ನಮ್ಮವರೇ ದುಡಿಯುತ್ತಿದ್ದಾರೆ. ಯೋಜನೆ, ಕಾಯಿದೆ-ಕಾನೂನು, ನಿಯಮ-ನಿರ್ಬಂಧಗಳನ್ನೂ ನಮಗಾಗಿಯೇ ಜಾರಿಗೊಳಿಸುತ್ತಾರೆ. ಆದರೂ ನಮ್ಮ ದೇಶದಲ್ಲಿ ಹಾಲು-ಜೇನು ಸುರಿಯಲು ತೊಡಗಿಲ್ಲ—ಸುಖ ಬಂದಿಲ್ಲ! ಏಕೆ? ತಪ್ಪಿದ್ದೇನು? ತಪ್ಪಿದವರು ಯಾರು? ನಾವೇ ಅಲ್ಲವೇ? ನಾವೂ ನಮ್ಮವರೂ ನಮಗಾಗಿ ಏನು ಮಾಡಬೇಕು? ಬೇಕಾದುದನ್ನು ಬೇಡಬೇಕೆ? ಅಲ್ಲ, ಬೇಡುವುದಲ್ಲ—ಮಾಡಲು ಸಾಧ್ಯವಿದ್ದುದನ್ನೆಲ್ಲಾ ಬೇಡಿಯೇ ಕಾಡಿದರೆ ಬೇಡಿಕೆಯನ್ನು ಪೂರೈಸುವವರಾದರೂ ಯಾರು? ಹಾಗಿದ್ದರೆ, ನಮಗಾಗಿ ನಾವು ದುಡಿಯ ಬೇಕು; ನಮ್ಮ ಬೇಡಿಕೆಗಳನ್ನು ನಾವೇ ಒದಗಿಸಿಕೊಳ್ಳ ಬೇಕು.

ವ್ಯಕ್ತಿ, ಸಮಾಜ, ಜನಾಂಗ—ಯಾವ ದೃಷ್ಟಿಯಿಂದಲೇ ಆಗಲಿ ನಾವು ನಮ್ಮನ್ನೇ ಹೊಂದಿಕೊಂಡಿದ್ದರೆ ಅದಕ್ಕಿಂತ ಹೆಚ್ಚಿನದು ನಮಗೆ ಬೇರಾವುದೂ ಅನಗತ್ಯ. ಇದು ನಮ್ಮ ರಾಷ್ಟ್ರಪಿತ ಗಾಂಧೀಜಿಯವರೇ ಎತ್ತಿ, ಒತ್ತಿ ಹೇಳಿದ ವಿಚಾರ. ಇದೇ ಅವರು ಹೇಳಿದ ಸ್ವಾವಲಂಬನ ತತ್ವ.

ಅಂತಾರಾಷ್ಟ್ರೀಯ ಹಂತದಲ್ಲೂ ನಮ್ಮ ರಾಷ್ಟ್ರದ ಸಾಮಾಜಿಕ, ರಾಜಕೀಯ, ನೈತಿಕ ಮತ್ತು ಧಾರ್ಮಿಕ ಪರಿಸ್ಥಿತಿಗಳ ಸಮಸ್ಯೆಗಳನ್ನು ಬಿಡಿಸಲಾರದ ಸಮಸ್ಯೆಗಳೇ ಆಗಿ ಉಳಿದಿವೆ. ಅನ್ನದ ಅಭಾವ, ವಸತಿ ಸೌಕರ್ಯಗಳ ಕೊರತೆ, ನಿರುದ್ಯೋಗ— ಇವೆಲ್ಲವುಗಳಿಂದ ಬಡತನದ ಮಹಾ ಪಿಡುಗು ಜನತೆಯನ್ನು ಚೇತನಾಹೀನವಾಗಿಸಿದೆ. ವ್ಯಾಪಾರದ ವ್ಯಾಮೋಹ ಎಲ್ಲರನ್ನೂ ಧನ ಸಂಪಾದನೆಗೆ ಪ್ರೇರೇಪಿಸುತ್ತದೆ. ಶರೀರ ಶ್ರಮದ ಕೆಲಸದಲ್ಲಿ ಎಲ್ಲರೂ ಹಿಂದೆ ಸರಿದು ಸಮಾಜಾಭಿವೃದ್ಧಿಗೆ ಕೊಡಲಿಯೇಟು ಕೊಡುತ್ತಿದ್ದಾರೆ. ಸ್ವಾರ್ಥವೇ ಪುರುಷಾರ್ಥ ಎನ್ನುವ ತಾತ್ಪರ್ಯಕ್ಕೆ ಜನರೆಲ್ಲ ಇಂದು ಬಂದು ತಲುಪಿದ್ದಾರೆ.

ಈ ಹೊಸಲಿನಿಂದ, ಅಪಾಯಕರ ಸನ್ನಿವೇಶದಿಂದ ನಾವಿಂದು ಮೇಲೇರಬೇಕು. ನಾವೆಲ್ಲರೂ ಬದುಕಬೇಕು. ಇತರರೂ ನಮ್ಮೊಂದಿಗೆ ಬಾಳಬೇಕು. ಶ್ರಮ ವಹಿಸಿ, ಸಹಕರಿಸಿ ದುಡಿಯಬೇಕು; ಬದುಕಿಗೆ ಬಹು ಮುಖ್ಯ ಸಾಧನಗಳಾದ ಊಟ—ವಸತಿ— ಉಡುಪುಗಳ ಕೊರತೆಗಳನ್ನಾದರೂ ನೀಗಲು ನಾವು ಸ್ವಾವಲಂಬಿಗಳಾಗಲೇ ಬೇಕು.

ಕೃಷಿತೋ ನಾಸ್ತಿ ದುರ್ಭಿಕ್ಷಂ ಎನ್ನುವ ಅಮರ ನುಡಿಯಂತೆ, ವಿಶಾಲ ಹೊಲದಲ್ಲಿ ದುಡಿಯಲು ಮುಂದಾಗಿ ಬೆವರು ಇಳಿಸಿ, ಪ್ರಕೃತಿಯನ್ನು ಒಲಿಸಿದರೆ ನಮಗೆ ಅನ್ನ ದೊರೆಯದೇ?; ದುರ್ಭಿಕ್ಷ ದೂರ ಸರಿಯದೆ? ಇದನ್ನು ಮರೆತು, ಏನೂ ತಿಳಿಯದವರಂತೆ ಕೈಗೆ ಎಟುಕಲಾರದ, ನಡೆದರೆ ಗುರಿ ಮುಟ್ಟಲು ಅಸಾಧ್ಯವಾದ—ಬಾಳಿನ ಪಥದಲ್ಲಿ ಸಾಗುವುದರಿಂದ ಸಾಧಿಸುವುದನ್ನಾದರೂ ಏನನ್ನು? ಬಡತನವನ್ನೇ?

ನಿಮಿಷ ನಿಮಿಷಕ್ಕೆ ಪ್ರಪಂಚದ ಇತಿಹಾಸ ಬದಲಾಗುತ್ತಿದೆ. ಸಂಸ್ಕೃತಿಯ ಕುರುಹುಗಳೂ ಮಾಯವಾಗುತ್ತಿವೆ. ಹಲವಾರು ವಾದ(ಇಸಂ)ಗಳು ಹುಟ್ಟಿಕೊಂಡಿದ್ದರೂ ಅವುಗಳಿಂದಾಗುವ ಪರಿಣಾಮ ಅಸ್ಪಷ್ಟ! ಎಲ್ಲರೆದುರೂ ವಿರಾಟರೂಪ ತಳೆದು ನಿಲ್ಲುವುದು ಈ ಸಮಸ್ಯೆಗಳೇ. ಆಗ ಯಾವ ವಾದವೂ ದೃಢವಾಗಿ ನಿಲ್ಲಲಸಾಧ್ಯ—ಬಿಸಿ ತಾಗಿದಾಗ ಬೆಣ್ಣೆ ಕರಗುವಂತೆ!

ಮಾನವನಿಗಿಂದು ಪ್ರಗತಿಯ ಮರುಳು ಬೇಕಿಲ್ಲ. ಆತ ಬದುಕ ಬೇಕು. ಬರಿದೇ ಬದುಕುವುದೂ ಬೇಡವೇ ಬೇಡ. ಮಾನ, ಪ್ರಾಣ, ತ್ರಾಣಗಳು ಅವನ ಬದುಕಿಗೆ ಕಳೆಗೊಡದಿದ್ದರೆ ಬದುಕಿಯೂ ಸತ್ತಂತೆಯೇ. ಆದುದರಿಂದ ಈ ಎಲ್ಲಾ ಬೇಕುಗಳಿಗಾಗಿ ಶ್ರಮವಹಿಸಿ ದುಡಿಯುವುದು ಅಗತ್ಯ. "ತಾನು ಎಲ್ಲರಿಗಾಗಿ ಎಲ್ಲರು ತನಗಾಗಿ" ಎಂಬ ಧ್ಯೇಯವನ್ನು ಸದಾ ಜ್ಞಾಪಕದಲ್ಲಿಟ್ಟು, ನಾವೆಲ್ಲ ಒಂದೇ ತಾಯಿಯ ಮಕ್ಕಳಂತೆ ಸಹಕರಿಸಿ ದುಡಿದು, ಸ್ವಾವಲಂಬಿಗಳಾಗಿ ಶಾಂತಿಯಿಂದ ಬದುಕಬೇಕಾದುದು ಕಾಲೋಚಿತ.

ಜಾಹೀರಾತು

ದಕ್ಷಿಣ ಕನ್ನಡ ವ ಇನ್ನಿತರ
ಮಹಾ ಮೈಸೂರು ಪ್ರಾಂತ್ಯದಲ್ಲಿರುವ
ಪ್ರೇಕ್ಷಣೀಯ ಸ್ಥಳ
ಸಂದರ್ಶನ ಮಾಡುವವರಿಗೆ
ಸಾರಿಗೆ ಸೌಕರ್ಯಕ್ಕಾಗಿ
ನಮ್ಮ ಬಸ್ಸುಗಳು ಸದಾ ಸಿದ್ಧವಿವೆ.

ದಿ. ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿ ಪ್ರೈವೇಟು ಲಿಮಿಟೆಡ್
ಉಡುಪಿ, ದ. ಕ. ಜಿಲ್ಲೆ.

ಟೆಲಿಫೋನ್:
ಮೆನೇಜಿಂಗ್ ಡೈರೆಕ್ಟರ್ 19
ಡೈರೆಕ್ಟರ್ ಇನ್ ಚಾರ್ಜ್ ಆಫ್ ವರ್ಕ್ಸ್ } 19A

ಟೆಲಿಗ್ರಾಮ್ಸ್:
"ಹನುಮಾನ್‌ಕೊ"

'ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ 2-00

ಪ್ರತಿಗಳು ದೊರೆಯುವ ಸ್ಥಳ.
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸ್ವಲ್ಪ ಜ್ಞಾಪಿಸಿಕೊಳ್ಳಬೇಕಾದ ದಿವ್ಯಸ್ಮರಣೆ

ಬರೆದವರು
ಶ್ರೀ ಮೂದರಬೆಟ್ಟು ರಂಗರಾವ್.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮಾ ಗಾಂಧೀಜಿ ವಹಿಸಿದ ಪಾತ್ರ ಅಗ್ರಗಣ್ಯ. ಗಾಂಧೀಜಿಯವರಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು ನಿಜ; ಆದರೆ ಅದಕ್ಕೆಂದೇ ಅವರ ಜನ್ಮವಾಗಲಿಲ್ಲ. ಮಹಾತ್ಮರಿಂದ ನಮಗೆ ಸ್ವಾತಂತ್ರ್ಯದೊಡನೆ ಇನ್ನೂ ಅನೇಕ ಲಾಭಗಳು ದೊರೆತಿವೆ; ಅವಾವುವು? ಸ್ವಲ್ಪ ಜ್ಞಾಪಿಸಿಕೊಂಡು ಓದಿರಿ.

ಭಾರತ ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ಮೇಲೆ ಇಂದಿನ ವರೆಗೆ ಪ್ರತಿ ವರ್ಷವೂ ಸ್ವಾತಂತ್ರ್ಯೋತ್ಸವವೆಂದೂ, ಪ್ರಜಾರಾಜ್ಯ ದಿನೋತ್ಸವವೆಂದೂ ರಾಜಕೀಯ ಉತ್ಸವಗಳನ್ನು ಆಚರಿಸುತ್ತಾ ಬರುತ್ತಿದ್ದೇವೆ ಇಂತಹ ಪ್ರತಿ ಉತ್ಸವಗಳಲ್ಲಿಯೂ ಸ್ವಾತಂತ್ರ್ಯಾಗಮನಕ್ಕೆ ಕಾರಣ ಪುರುಷರಾದ ದೇಶಪಿತ ಮಹಾತ್ಮಾ ಗಾಂಧಿಯನ್ನೂ ನೆನೆಯುತ್ತಿದ್ದೇವೆ.

ಮಾತ್ರವಲ್ಲ, ಪ್ರತಿವರ್ಷ ಅಕ್ಟೋಬರಿನಲ್ಲಿ ಗಾಂಧೀ ಜಯಂತಿಯನ್ನೂ ಆಚರಿಸುತ್ತೇವೆ. ಇದೊಂದು ಸಂಪ್ರದಾಯವೇ ಆಯಿತು. ಈ ಸಂಪ್ರದಾಯದೊಳಗೆ ಸತ್ಯ ವಿಚಾರಗಳು ಎಷ್ಟರ ಮಟ್ಟಿಗಿವೆ? ದಿನ ಹೋದ ಹಾಗೆ ಅದರೊಳಗಿನ ವಿಚಾರ ಶಕ್ತಿ ಹೆಚ್ಚಾಗುತ್ತಿದೆಯೋ ಕಡಮೆಯಾಗುತ್ತಿದೆಯೋ? - ಸ್ವಲ್ಪ ನೋಡೋಣ

ಈ ಪ್ರಶ್ನೆಗಳನ್ನಿಟ್ಟುಕೊಂಡು ಯೋಚಿಸುವಾಗ ಈ ೧೭ ವರ್ಷಗಳಲ್ಲಿ ಗಾಂಧೀ ಸ್ಮಾರಕದ ರೀತಿಯಲ್ಲಿ ಬದಲಾವಣೆಯಾಗುತ್ತಾ ಬಂದುದನ್ನು ಕಾಣಬಹುದು. ಮೊದಲೈದು ವರ್ಷಗಳ ವರೆಗೆ ಪ್ರತಿ ದಿನವೂ ಮಹಾತ್ಮಾ ಗಾಂಧಿಯ ನೆನಪಿತ್ತು; ಅನಂತರ ಅದು ಕಡಮೆಯಾಗುತ್ತಾ, ಕಷ್ಟ ಕಾಲ ಬಂದಾಗ ಗಾಂಧಿಯ ಹೆಸರು ಹೇಳುತ್ತಾ ಬಲ ಪಡೆಯಕೊಳ್ಳಬೇಕಾದ ಸ್ಥಿತಿಗಿಳಿಯಿತು. ಬಾಯಿಯಿಂದ ಅವರ ನೀತಿ ನಡೆವಳಿಕೆಗಳನ್ನು ವರ್ಣಿಸುತ್ತಾ ತಮ್ಮನ್ನು ಕಾಪಾಡಿಕೊಳ್ಳುವ ಅದೊಂದು ಉದ್ಯಮವಾಗಿಯೇ ಮಾರ್ಪಟ್ಟಿತು. ಹೇಳುವುದು ಗಾಂಧೀವಾದ, ಮಾಡುವುದು ಸ್ವಾರ್ಥ ಸಾಧನೆ ಎಂದು ಜನರು ಗಾದೆ ಕಟ್ಟಿಕೊಳ್ಳುವ ವರೆಗೂ ಬಂತೆಂದರೆ ಅತಿಶಯೋಕ್ತಿಯೇನಿಲ್ಲ. ಪ್ರತಿ ಪಕ್ಷದವರೂ ಗಾಂಧೀವಾದವನ್ನೇ ಹೇಳಿಕೊಳ್ಳುತ್ತಿದ್ದಾರೆ. ಹೀಗೆ ಐದೈದು ವರ್ಷಗಳಲ್ಲಿ ಗಾಂಧೀವಾದಗಳನ್ನು ಹುಡುಕಾಡಿ ಶೋಧಿಸುತ್ತ ತಮತಮಗೆ ಬೇಕಾದ ಅಂಶಗಳನ್ನು ಸಂಗ್ರಹಿಸಿಕೊಂಡು ಅದನ್ನು ತಮ್ಮ ಹಿತಸಾಧನೆಗೆ ಉಪಯೋಗಿಸಿಕೊಳ್ಳುವ ಮಟ್ಟಕ್ಕೆ ಬಂದಿದೆ. ಉತ್ಸವ ಕಾಲದಲ್ಲಿ ಅವರನ್ನು ನೆನೆಯುವುದೊಂದು ಸಾಂಪ್ರದಾಯವಾಯಿತು. ಹೀಗೆ ಗಾಂಧೀಜಿ ಉತ್ಸವ ಮೂರ್ತಿಯಾಗುತ್ತಿದ್ದಾರೆ.

೦ ೦ ೦

ಇದಕ್ಕಾಗಿ ಯಾರನ್ನೂ ದೂರಿ ಪ್ರಯೋಜನವಿಲ್ಲ. ಮಾನವ ಸಹಜವಾದ ಸ್ವಭಾವವನ್ನು ಮೀರಲು ಯಾರಿಗೆ ತಾನೇ ಸಾಧ್ಯವುಂಟು? ಮಹಾತ್ಮರಂತೆ ಮಾನವಾತೀತರಾಗಿ ನಿಲ್ಲಲು ಎಲ್ಲರಿಂದಲೂ ಆದೀತೆ? ಏನೋ ಅವರಿರುವಾಗ ಅವರ ಮಹತ್ ಆತ್ಮ ಶಕ್ತಿಯಿಂದ,ದೇಶವೆಲ್ಲಾ ಒಂದು ಬಗೆಯ ಕಟ್ಟುಪಾಡಿಗೆ ಒಳಗಾಗಿತ್ತು. ಆದರೂ ಅವರಿಗೆ ವಿರೋಧಿಗಳೂ ಇದ್ದರು ಅಂತಹ ಒಂದು ವಿರೋಧ ಮೂರ್ತಿಯೇ ಕೊಟ್ಟ ಕೊನೆಗೆ ಅವರನ್ನೇ ಆಹುತಿ ತೆಗೆದುಕೊಂಡಿತಲ್ಲ!

ಏನೇ ಇರಲಿ, ವರುಷಕ್ಕೆ ಒಂದೆರಡು ಬಾರಿಯಾದರೂ ಗಾಂಧಿಯನ್ನು ನೆನೆಯುವ ಸಂಪ್ರದಾಯವು ಒಳ್ಳೆಯದೇ. ಈ ನೆನಕೆಯನ್ನು ನಾವು ಸರಿಯಾದ ರೀತಿಯಲ್ಲಿ, ವಿಚಾರಮಾಡಿ ನಡೆವಳಿಕೆಯನ್ನು ಸಂಗೊಳಿಸಿಕೊಳ್ಳುವ ರೀತಿಯಲ್ಲಿ ಮಾಡಬೇಕು. ಸುಮ್ಮನೆ ವೇಳೆ ಮೇಲೆ ಒಂದಿಷ್ಟು ಸ್ತುತಿಪಾಠ ಮಾಡಿ, ನಾವೆಲ್ಲ ಗಾಂಧಿ ಭಕ್ತರೆಂದು ಪ್ರದರ್ಶಿಸಿಕೊಂಡ ಮಾತ್ರಕ್ಕೆ ಏನಾದ ಹಾಗಾಯಿತು?

ಗಾಂಧಿಯನ್ನು ನೆನೆಯುತ್ತಾ ಹೋದಂತೆ ಅವರ ವಿಷಯಗಳು ಆಳವಾಗಿಯೂ ಅಗಾಧವಾಗಿಯೂ ಇರುವುದನ್ನು ಕಾಣಬಹುದು. ಅದೆಲ್ಲ ಹೋಗಲಿ, ನಿಜಕ್ಕೂ ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಗಾಂಧಿಯಿಂದಲೇ ಬಂದಿತೆ? ಗಾಂಧಿ ಹುಟ್ಟದೇ ಇರುತ್ತಿದ್ದರೆ ಸ್ವಾತಂತ್ರ್ಯವು ಬರುತ್ತಲೇ ಇದ್ದಿಲ್ಲವೇ?

ಹೌದು, ಗಾಂಧಿ ಹುಟ್ಟುವುದಕ್ಕೆ ಮೊದಲೇ ಸ್ವಾತಂತ್ರ್ಯೋದ್ಯಮವಿತ್ತು. ಅದನ್ನು ಗಾಂಧಿಯವರೇ ಹುಟ್ಟಿಸಿದವರೇನಲ್ಲ. ಬ್ರಿಟಿಷರು ಈ ದೇಶಕ್ಕೆ ಕಾಲಿಟ್ಟ ಸಮಯದಲ್ಲಿಯೆ, ಅವರನ್ನು ಈ ದೇಶದಿಂದ ತೊಲಗಿಸುವ ಎಷ್ಟೋ ಪ್ರಯತ್ನಗಳು ನಡೆದಿದ್ದುವು. ಅವುಗಳು ಆಗಾಗ ಪರಿಣಾಮಕರವಾಗಿ ಎದ್ದೂ ತೋರಿದ್ದುವು. ಅಂತಹುದೊಂದೇ "ಸಿಪಾಯಿದಂಗೆ". ಹಾಗೆಯೇ ಎದ್ದು ಕಾಣಿಸುವ ಸ್ವಾತಂತ್ರ್ಯ ಚೇತನವುಳ್ಳ ದಿವ್ಯ ಮೂರ್ತಿಗಳೇ ಟಿಪ್ಪು ಸುಲ್ತಾನ್, ತಾಂತ್ಯಾ ಟೋಪೆ, ನಾನಾಸಾಹೇಬ್. ಝಾನ್ಸಿರಾಣಿ ಮೊದಲಾದವರು. ಕೊನೆಗೆ ಲೋಕಮಾನ್ಯ ತಿಲಕರು "ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು!" ಎಂದು ಸಿಂಹದಂತೆ ಭುಸುಗುಟ್ಟಿದರು. ಆ ಮೇಲೆಯೇ ಗಾಂಧೀಜಿಯ ಪ್ರವೇಶವಾಯಿತು. ಒಂದು ವೇಳೆ ಗಾಂಧಿ, ತನಗೇಕೆ ಈ ರಾಜಕೀಯ ಜಂಜಾಟವೆಂದುಕೊಂಡು, ವಕೀಲರಾಗಿಯೇ ಇರುತ್ತಿದ್ದರೆ, ಸಾಕಷ್ಟು ಹಣ ಸಂಪಾದಿಸಿ,ಕಾರು ಗೀರು ಕೊಂಡು ಕೊಂಡು ಮೊಳಗೆ ಮನೆಗಳನ್ನು ಕಟ್ಟಿಸಿಕೊಂಡು ಈಗಿರುವ ಎಷ್ಟೋ ಶ್ರೀಮಂತರಂತೆ ಅವರೂ ಇರುತ್ತಿದ್ದರು. ಹೊರತು ಕೆಟ್ಟೇನೋ ಹೋಗುತ್ತಿರಲಿಲ್ಲ.

ಆದರೆ ನಾವಾರೂ ಗಾಂಧಿಯನ್ನು ನೆನೆಯುತ್ತಿರಲಿಲ್ಲ. ಎಷ್ಟೋ ಶ್ರೀಮಂತರು ಬದುಕಿದ್ದಾರೆ, ಸಾಯುತಿದ್ದಾರೆ. ಯಾರಾದರೂ ನೆನೆಯುತ್ತಾರೆಯೆ? ನೋಡುತ್ತಾರೆಯೇ? ನಮ್ಮ ನಿಮ್ಮ ಹಾಗೆಯೇ ಅವರೂ ಸಾಯುತ್ತಾರೆ. ಸಾವಿನಲ್ಲಿಯೂ ವಿಶೇಷವೇನಿಲ್ಲ. ಏನೋ ಜ್ವರ ಬರುತ್ತೆ. ಶ್ರೀಮಂತರಾದರೆ ಸ್ಪೆಶಲಿಸ್ಟ್ ಡಾಕ್ಟರು ಬರುತ್ತಾರೆ. ಒಂದು ತಿಂಗಳು ಜ್ವರ ಏರುತ್ತಾ ಇಳಿಯುತ್ತಾ ಒಮ್ಮೆಯಾರಾ ಕಡಮೆಯಾದಂತಾಗುತ್ತದೆ. ಮತ್ತೊಂದು ದಿನ ಗುಟುಕಪ್ರಾಣಹೋಗುತ್ತೆ.

ಆದರೆ ಗಾಂಧಿಯದು ಅಂಥ ಜಾತಕವೇ ಅಲ್ಲ. ಆದಕ್ಕೇ ಅವರನ್ನು ಅವತಾರ ಪುರುಷರೆನ್ನುವುದು. ಅಂತೆಯೇ ಅವರ ಮರಣವೂ ಎಲ್ಲರ ಹಾಗಾಗಲಿಲ್ಲ. ಏಸುಕ್ರಿಸ್ತ, ಸಾಕ್ರೆಟೀಸ್ ಅಬ್ರಹಾಂಲಿಂಕನ್ ಇಂತಹರ ಸಾಲಿಗೆ ಸೇರಿದವರು ಗಾಂಧೀಜೀ- ಅದರಿಂದಲೇ ಅವರ ಮರಣ ಕೂಡಾ ಸಿಂತಲ್ಲೇ ಆಯಿತು. ನಾವೆಲ್ಲಾ ನೋವಾದ ಕೂಡಲೇ "ಅಯ್ಯೋ. ಅಮ್ಮಾ! ಅಪ್ಪಾ!" ಎಂದು ಉದ್ಗರಿಸುತ್ತೇವೆ. ಗಾಂಧಿಯಾದರೋ "ಹೇ ರಾಮ್" ಎಂದು ತನ್ನಿಷ್ಟ ದೈವವನ್ನು ಕರೆದುಕೊಂಡು ಕಣ್ಣು ಮುಚ್ಚಿದರು.

ಅವರು ಕೈಕೊಂಡ ಕಾರ್ಯವು ಮುಗಿಯಿತು. ಕೂಡಲೇ ಅವರ ರಾಮನು ಅವರನ್ನು ಕರೆದುಕೊಂಡನು.

ಒಂದು ವೇಳೆ ಅವರಿಲ್ಲದಿರುತ್ತಿದ್ದರೂ ಸ್ವಾತಂತ್ರ್ಯ ಚಳುವಳಿಯೇನೋ ಇರುತ್ತಿತ್ತು. ಬೇರೆ ಯಾರೋ ಅದನ್ನು ನಡೆಸಿಕೊಂಡು ಬರುತ್ತಿದ್ದರು.

ಆದರೆ ಗಾಂಧೀಜಿ ಬರುವ ವರೆಗೂ ಜಗತ್ತನ್ನೇ ಬೆರಗಾಗಿಸುವಂತಹ, ತಲೆದೂಗಿಸುವಂತಹ ವಿಶೇಷವೇನೂ ನಡೆದಿರಲಿಲ್ಲ. ಸ್ವಾತಂತ್ರ್ಯ ಪಿಪಾಸೆಯೆಂಬುದು ಸಾಧಾ ರೀತಿಯಲ್ಲೇ ಇತ್ತು. ಆಗಾಗ ಕಾಣಿಸುವ ವಿಜೃಂಭಣೆಯನ್ನು ಏನೋ ಒಂದು ರೀತಿಯಾಗಿ ಅಡಗಿಸಲಾಗುತಿತ್ತು. ಅದುವರೆಗೂ ಬಲಾತ್ಕಾರವೆಂಬ ಆಯುಧವನ್ನೇ ಉಭಯತ್ರರೂ ನಂಬಿದ್ದರು. ಅಂತೆಯೇ ನವೀನಾಯುಧಗಳಿಂದ ಹೆಚ್ಚು ಬಲಶಾಲಿಯಾಗಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ಕೈಯೇ ಮೇಲಾಗಿ ಹೋಗುತ್ತಿತ್ತು. ಮಾತ್ರವಲ್ಲ, ಪಾಶ್ಚಾತ್ಯರ ದೃಷ್ಟಿಯಲ್ಲಿ ಭಾರತೀಯರೆಲ್ಲಾ ಕೇವಲ ಹುಳುಗಳೆಂಬ ಭಾವನೆ ಮೂಡಿತ್ತು. ಒಮ್ಮೆ ಸುಭಾಸ್ ಚಂದ್ರ ಬೋಸರು ಹಿಟ್ಲರನ ಹತ್ತಿರ ಹೋಗಿ ತಾನು ೪೦ ಕೋಟಿ ಭಾರತೀಯರ ಪ್ರತಿನಿಧಿಯೆಂದು ಹೇಳಿಕೊಂಡಾಗ, ಹಿಟ್ಲರ್ ಅಲಕ್ಷ್ಯವಾಗಿ "೪೦ ಕೋಟಿ ನರಹುಳುಗಳ ಪ್ರತಿನಿಧಿಗಳೊ?" ಎಂದು ಗೇಲಿ ಮಾಡಿದನಂತೆ.

ಅಂತಿರುವ ದೃಷ್ಟಿಯುಳ್ಳವರಲ್ಲೆಲ್ಲಾ "ಭಾರತೀಯರು ಹುಳುಗಳಲ್ಲ, ಮನುಷ್ಯರು" ಎಂದು ಮುಂದಟ್ಟು ಮಾಡಿ ಕೊಟ್ಟವರು ಮಹಾತ್ಮಾ ಗಾಂಧಿ ಅದೇ ಅವರಿಂದಾದ ವಿಶೇಷ.

ಹೇಗೆಂದರೆ, ನವೀನ ವಿಜ್ಞಾನ ವಿಶೇಷಗಳಿಂದ ದೂರ ನಿಂತು ಗುಂಡು ಹಾರಿಸುವಂತಹ ನೂತನಾಯುಧಗಳಿಂದ ಸಂಸಿದ್ಧರಾದ ಶತ್ರುವಿನ ಮುಂದೆ ಕತ್ತಿ ಹಿಡಿದ ಕೈಗಳು ಎಷ್ಟು ಹೊತ್ತು ನಿಂತಾವು? ಟಿಪ್ಪು, ಝಾನ್ಸಿ, ನಾನಾ, ತಾಂತ್ಯಾ-ಮುಂತಾದವರೆಲ್ಲಾ ಭುಜಬಲ ಪರಾಕ್ರಮಗಳನ್ನೇ ನಂಬಿ ಸಾಹಸ ಮಾಡಿದವರು. ಅವರು ಎಷ್ಟೇ ಧೈರ್ಯಶಾಲೀ ವೀರ ಪ್ರವರರಾಗಿದ್ದರೂ ಸೋಲುಂಡೇ ಅಮರರಾಗ ಬೇಕಾಯಿತು.

ಭಾರತೀಯರಿಂದ ಬಿಡದೆ ಸಾಗುತ್ತಾ ಬರುವ ಸ್ವಾತಂತ್ರ್ಯ ಚಳವಳಿಯನ್ನು ನೋಡುತ್ತಾ, ಆದರಲ್ಲಿ ಲೋಕಮಾನ್ಯ ತಿಲಕ, ಗೋಪಾಲಕೃಷ್ಣ ಗೋಖಲೆ ಮುಂತಾದ ಬುದ್ಧಿ ಬಲವುಳ್ಳವರು ಬಂದಾಗ, ಬ್ರಿಟಿಷರು ಸ್ವಲ್ಪ ಮಟ್ಟಿಗಾದರೂ ತಲೆ ಬಾಗಲೇ ಬೇಕಾಯಿತು. ಅವರ ಸಂತೃಪ್ತಿಗಾಗಿ "ಕಾಂಗ್ರೆಸ್" ಎಂಬ ಸಂಸ್ಥೆಯನ್ನು ಬ್ರಿಟಿಷರೇ ಸ್ಥಾಪನೆ ಮಾಡಿಸಿದರು. ಅದೇ ಮುಂದೆ ತಮಗೆ ಮುಳ್ಳಾಗುವಂತೆ ಬೆಳೆಯುತ್ತದೆಂದು ಆಗ ಅವರು ಕನಸು ಕೂಡ ಕಂಡಿರಲಿಕ್ಕಿಲ್ಲ.

ಅನಂತರ ಬಂದ ಸಾಮಾನ್ಯ ಗಾಂಧಿ, ಸ್ವರಾಜ್ಯ ಸಾಧನೆಗೆ ಹೊಸ ದಾರಿಯೊಂದನ್ನು ಹಾಕಿಕೊಟ್ಟರು. ಅದು ಅವರು ಆತ್ಮ ಶೋಧನೆಯಿಂದ ಕಂಡು ಹಿಡಿದು, ಅನೇಕ ಪರೀಕ್ಷೆಗಳಿಗೊಳಪಡಿಸಿ ತೋರಿಸಿದ ಸತ್ಯಮಾರ್ಗ; ಸತ್ಯಾಗ್ರಹ.

ಹೌದು, ಆಧುನಿಕವಾದ ನವೀನಾಯುಧಗಳಿಂದ ಸುಸಜ್ಜಿತನಾದ ಶತ್ರುವಿನ ಮುಂದೆ, ಸತ್ಯಾಗ್ರಹವೇ ತಕ್ಕ ಆಯುಧವೆಂಬುದನ್ನು, ಸ್ವಂತ ಆಚರಣೆಯಿಂದ ದೇಶವೆಲ್ಲೆಲ್ಲಾ ನಂಬುಗೆ ಹುಟ್ಟಿಸಿದವರು ಮಹಾತ್ಮಾ ಗಾಂಧಿ. ಬಲವಂತದಿಂದ ಹೊಡೆದು ಗುದ್ದಿ ಹಣ್ಣು ಮಾಡಿದ ಹಣ್ಣಿಗಿಂತಲೂ, ಸಾವಕಾಶವಾಗಿ ಸ್ವಾಭಾವಿಕ ಉಷ್ಣತೆಯಿಂದಲೇ ಮಾಗುತ್ತಾ ಬಂದು ಕೊನೆಗೆ ಸ್ವಾತಂತ್ರ್ಯದ ಹಣ್ಣು ನಮಗೆ

ಸಿಕ್ಕಿತು. ಬ್ರಿಟಿಷ್ ಚಕ್ರಾಧಿಪತ್ಯವೇ ತನ್ನ ಕೈಯಿಂದ ಇಲ್ಲಿರುವ ಬ್ರಿಟಿಷ್ ಜಂಡಾವನ್ನಿಳಿಸಿ ನಮ್ಮ ಅಶೋಕ ಚಕ್ರ ಧ್ವಜಪಟವನ್ನು ಮೇಲಕ್ಕೇರಿಸಿ ಕೊಟ್ಟಿತು.

ನಮಗೆ ಸ್ವಾತಂತ್ರ್ಯ ಪ್ರಾಪ್ತಿಯಾದ ಮೇಲೆ ನಮ್ಮ ಹಿರಿಮೆ ಪ್ರಪಂಚದಲ್ಲೇ ದೊಡ್ಡದಾಗಿ "ಸೂರ್ಯನು ಅಸ್ತಮಿಸದಿರುವ" ಬ್ರಿಟಿಷ್ ಚಕ್ರಾಧಿಪತ್ಯವು ಬೇರೆ ಬೇರೆ ಅನೇಕ ನಾಡುಗಳಿಗೆ ಕೂಡ ಸ್ವಾತಂತ್ರ್ಯ ಕೊಡಬೇಕಾಗಿ ಬಂದಿತು. ಅದರಲ್ಲೆಲ್ಲಾ ಭಾರತೀಯರ ಪ್ರಭಾವವೂ ಅಡಗಿದೆ ಎಂಬುದು ನಮಗೊಂದು ಹೆಮ್ಮೆಯ ವಿಷಯವೂ ಹೌದು.

ಇಂತಹ ನೂತನ ರೀತಿಯ ವಿಜಯಕ್ಕೆ ಮೂಲ ಕಾರಣರಾದ ಮಹಾತ್ಮಾ ಗಾಂಧಿಯವರಲ್ಲಿರುವ, ಎಲ್ಲಕ್ಕೂ ಮೇಲಾದ ಗುಣವು ಯಾವುದೆಂದು ಸ್ವಲ್ಪ ನೋಡೋಣವೇ? ಸಾಮಾನ್ಯವಾಗಿ ಸದ್ಗುಣಗಳೆನಿಸುವ ನಿಸ್ವಾರ್ಥತೆ, ನಿರಾಡಂಬರತೆ, ನಿತ್ಯೋದ್ಯಮಶೀಲತೆ, ನಿಯಮನಿಷ್ಠರತೆ, ವ್ರತನಿಷ್ಠೆ ಮೊದಲಾದುವೆಲ್ಲಾ ಹಾಗಿರಲಿ; ಅವರು ತನ್ನ ತಪ್ಪನ್ನೊಪ್ಪಿಕೊಂಡು, ಪಶ್ಚಾತ್ತಾಪಪಡುವ ಗುಣ ವಿಶೇಷವಿದೆಯಲ್ಲಾ—ಅದೇ ಆತ್ಮ ಸಂಶೋಧನೆಯ ಸ್ವಭಾವ— ಇದನ್ನು ಪ್ರತಿಯೊಬ್ಬರೂ ಅಭ್ಯಾಸಕ್ಕೆ ತರಬಹುದು. ಇದರ ಹಿಂದೆಯೇ ಉಳಿದೆಲ್ಲ ಗುಣಗಳೂ ಬರುತ್ತವೆ. ಈ ತಪ್ಪೊಪ್ಪಿಕೊಳ್ಳುವ ಸ್ವಭಾವವಿಲ್ಲದವರು, ಉಳಿದೆಲ್ಲ ಗುಣಗಳೊಂದಿಗಿದ್ದರೂ ನಿಷ್ಫಲವೇ ಆಗುತ್ತದೆ. ಕೇವಲ ಗುಣಪ್ರದರ್ಶಕರಷ್ಟೇ ಆಗುತ್ತಾರೆ. ಇದನ್ನು ಈಗಿನ ಗಾಂಧಿವಾದಿಗಳೆಲ್ಲರೂ ಯೋಚನೆ ಮಾಡಿ ನೋಡಿದರೆ ಒಳ್ಳೆಯದು.

೦ ೦ ೦

ಗಾಂಧೀಜಿ ಅನೇಕ ತಪ್ಪುಗಳನ್ನು ಮಾಡಿದ್ದಾರೆಂದು ಅವರೇ ಹೇಳಿಕೊಂಡಿದ್ದುದರಿಂದಲೇ ಎಲ್ಲರಿಗೂ ಗೊತ್ತಾದುದು. ಅದೂ ಒಮ್ಮೆಯಂತೂ ಬಲು ದೊಡ್ಡ, ಹಿಮಾಲಯದಷ್ಟು ದೊಡ್ಡ ತಪ್ಪು ಮಾಡಿದರಂತೆ. ಪ್ರತಿಯೊಂದು ತಪ್ಪಿಗೂ ಉಪವಾಸ ವ್ರತ ಕೈಕೊಂಡು, ಪರಿಮಾರ್ಜನೆಯಿಂದ ಆತ್ಮಶುದ್ಧಿ ಮಾಡಿಕೊಳ್ಳುವುದು ಅವರ ಕ್ರಮ. ಈ ಕ್ರಮದಿಂದಲೇ ಅವರು ದೇಶದ ಪ್ರಜೆಗಳನ್ನೆಲ್ಲಾ ಸ್ವರಾಜ್ಯ ಸಾಧನೆಗೆ ಸುಮುಖರನ್ನಾಗಿ ಮಾರ್ಪಡಿಸಿದರು. ಅದೆಲ್ಲ ನಿಜ. ಆದರೆ ತನ್ನ ಸ್ವಂತ ಮಕ್ಕಳನ್ನು ಮಾತ್ರ ಸುಮುಖರನ್ನಾಗಿ ಮಾಡಲು ಅವರಿಂದ ಸಾಧ್ಯವಾಗಲಿಲ್ಲ. ಇದು ನಿಜಕ್ಕೂ ಸಖೇದಾಶ್ಚರ್ಯದ ವಿಷಯವಾಗಿದೆ

ಮಹಾತ್ಮರಾದುದರಿಂದ, ಸ್ವಂತ ಕುಟುಂಬದ ಹಿತವನ್ನು ಅಲಕ್ಷ್ಯ ಮಾಡಿ ದೇಶ ಸೇವೆಗೇ ತಮ್ಮ ಲಕ್ಷ್ಯವನ್ನು ಪೂರ್ಣ ತಿರುಗಿಸಿದರೆಂದು ನಾವು ಸಮಾಧಾನ ಹೇಳಿಕೊಂಡೇವು. ಆದರೆ ಗಾಂಧೀಜಿ ಅದನ್ನೊಪ್ಪಿ ಕೊಳ್ಳುವುದಿಲ್ಲ. ಏಕೆಂದರೆ ಅವರು ನಿಮ್ಮಂತೆಯೇ ಸಂಸಾರಿಗಳೂ ಆಗಿದ್ದರು. "ಉತ್ತಮರಾಗಿರುವವರ ಮಕ್ಕಳೂ ಉತ್ತಮರಾಗಿರುವರೆಂದು ಭ್ರಮೆ ಪಡಬಾರದು. ಸರಿಯಾದ ರೀತಿಯಲ್ಲಿ ನೋಡಿಕೊಳ್ಳದಿದ್ದರೆ ಮಕ್ಕಳು ಕೆಟ್ಟು ಹೋಗುತ್ತಾರೆ. ಅದರಲ್ಲಿ ತಂದೆಯ ಹೊಣೆಗಾರಿಕೆಯುಂಟು" ಎಂದು ಅಭಿಪ್ರಾಯ ಪಡುತ್ತಾರೆ ಗಾಂಧೀಜಿ.

೦ ೦ ೦

ಗಾಂಧೀಜಿಗಿರುವ ನಾಲ್ವರು ಮಕ್ಕಳಲ್ಲಿ ಹಿರಿಯವನಾದ ಹರಿಲಾಲ ಬಹಳ ಹೀನ ಬಾಳು ಬಾಳಿದ. ತಂದೆಯ ಮೇಲೆ ಹಗೆ ತೊಟ್ಟೇ ಅವನು ಬಾಳಿದಂತಿತ್ತು. ಕುಡಿದು, ಮಾಂಸಾಹಾರ ಮಾಡಿ, ಮತಾಂತರಗೊಂಡು ಮುಸ್ಲಿಮಳನ್ನು ಮದುವೆಯಾಗಿ ಬುದ್ಧಿಕೆಟ್ಟು, ತಿರುಗಿ ಆ ಮೇಲೆ ತೀರಿಹೋದ. ಇದನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಆದರೆ ಗಾಂಧೀಜಿಗೆ ಆಶ್ಚರ್ಯವಾಗುವುದಿಲ್ಲ, ಅವರು ತಮ್ಮಲ್ಲಿದ್ದ ಕೆಲವು ಕ್ಷುಲ್ಲಕತನಗಳಿಂದಲೇ ಆ ಮಗನ ಗುಣ ಹಾಗಾಯಿತೆಂದು ಪಶ್ಚಾತ್ತಾಪದಿಂದ ಹೇಳುತ್ತಾರೆ.

ಕೇವಲ ೧೩ನೆಯ ವಯಸ್ಸಿನಲ್ಲೇ ಮದುವೆಯಾದ ಗಾಂಧೀಜಿ, ಕಾಲೇಜಿನಲ್ಲಿ ಕಲಿಯುತ್ತಿರುವಾಗಲೇ ಹರಿಲಾಲ ಹುಟ್ಟಿದ್ದ. ಅನಂತರ ನಾಲ್ಕು ಮಕ್ಕಳಾದ ಮೇಲೆ ಗಾಂಧೀಜಿಯ ಮನಸ್ಸು ಬ್ರಹ್ಮಚರ್ಯವನ್ನು ಹಿಡಿಯ ಬಯಸಿತು ಮಕ್ಕಳು ಮರಿ ಅಂತ ಕುಟುಂಬ ಬೆಳೆಯುತ್ತಾ ಬರುವುದರಿಂದ ಜನ ಸೇವೆಗೆ ವಿಘ್ನ ಬರುತ್ತದೆಂದು ತಿಳಿದು, ೩೦ನೆಯ ವಯಸ್ಸಿನಲ್ಲಿ ಬ್ರಹ್ಮಚರ್ಯಕ್ಕೆ ತೊಡಗಿದರೆಂದೂ, ಎರಡು ಬಾರಿ ವ್ರತಭಂಗ ಹೊಂದಿದ್ದರೆಂದೂ ಅವರೇ ಬಹಿರಂಗ ಪಡಿಸುತ್ತಾರೆ. ಅನಂತರ ೩೭ನೆಯ ವಯಸ್ಸಿನಲ್ಲಿ ಪತ್ನಿ ಕಸ್ತೂರ್ಬಾರ ಅನುಮತಿ ಪಡೆದು ತೀವ್ರ ಬ್ರಹ್ಮಚರ್ಯ ನಿಷ್ಠರಾಗಿ, ಕಡೆವರೆಗೂ ಅಚಲರಾಗಿದ್ದರು.

ಮಕ್ಕಳಿಗೆ ಮನೆಯಲ್ಲೇ ಸದಾಚಾರಗಳನ್ನು ಕಲಿಸಲೆತ್ನಿಸಿದರು ಗಾಂಧೀಜಿ. ಮಕ್ಕಳ ಸ್ಕೂಲು ಮನೆಯಲ್ಲೇ ಎಂಬುದು ಗಾಂಧೀಜಿಯ ಮತವಾಗಿತ್ತು. ಆದರೂ ಗಾಂಧೀಜಿ ಹೇಳುವುದೇನೆಂದರೆ: "ನನ್ನಿಚ್ಛೆಯಂತೆ ಮಕ್ಕಳನ್ನು ತರಬೇತಿಗೊಳಿಸಲು ನನಗಾಗದೆ ಹೋಯಿತು. ಅನಿವಾರ್ಯವಾದ ಅನೇಕ ಕಾರಣಗಳಿಂದ ಮಕ್ಕಳಿಗೆ ತಕ್ಕಷ್ಟು ವಿದ್ಯೆ ಕಲಿಸಲು ನನಗಾಗಲಿಲ್ಲ. ಈ ವಿಷಯವಾಗಿ ನನ್ನ ಮಕ್ಕಳೇ ನನ್ನ ಮೇಲೆ ತಪ್ಪುಹಾಕುತ್ತಾರೆ."

ಮಕ್ಕಳನ್ನು ಹೊಡೆಯುವುದು ಸರಿಯಲ್ಲವೆಂಬ ಅಭಿಪ್ರಾಯವಿದ್ದ ಗಾಂಧೀಜಿ, "ಒಂದೇ ಬಾರಿ ಒಬ್ಬ ಮಗನನ್ನು ಹೊಡೆದ ನೆನಪಿದೆ" ಎಂದು ಹೇಳುತ್ತಾರೆ. ಇದ್ದೀತು ತಾಳ್ಮೆಯ ತವರು ಮನೆಯಂತಿದ್ದ ಗಾಂಧೀಜಿಯ ವಿಷಯ ಯಾರಿಗೆ ಗೊತ್ತಿಲ್ಲ? ತೋಟಿಕೆಲಸ, ತೋಟದಕೆಲಸ ಬಟ್ಟೆ ಒಗೆಯುವುದು, ಮುಂತಾದ ಮನೆಗೆಲಸಗಳನ್ನೆಲ್ಲಾ ಮಕ್ಕಳೇ ಮಾಡಬೇಕಾಗಿತ್ತು. ಇವನ್ನೆಲ್ಲಾ ಸಹಿಸಲಾರದ ಹರಿಲಾಲ ಆಫ್ರಿಕಾದಿಂದ ಭಾರತಕ್ಕೆ ಓಡಿಬಂದು, ಅಹಮದಾಬಾದಿನ ಕಾಲೇಜಿಗೆ ಸೇರಿ ಕಲಿತ. ಆದರೇನಾಯಿತು? ಅವಿಧೇಯತೆಯಿಂದ ಅಡ್ಡದಾರಿ ಹಿಡಿದ ಆತನ ಬಾಳು ಹೆಚ್ಚು ಹೆಚ್ಚು ಅಡ್ಡತಿಡ್ಡ ದಾರಿಗಳನ್ನೇ ಹಿಡಿದುಕೊಂಡು ಹೋಯಿತು.

೦ ೦ ೦

ಎರಡನೆಯ ಮಗ ಮಣಿಲಾಲನೂ ಅಷ್ಟೇ. ಈ ಎರಡು ಮಕ್ಕಳು ಮನೆ ಕೆಡಿಸುವ ಕೊಳ್ಳಿಗಳಾದುವೆಂದು ಗಾಂಧೀಜಿಯೇ ಉದ್ಗರಿಸಿದ್ದಾರೆ.

ಗಾಂಧೀಜಿ ಭಾರತಕ್ಕೆ ಬಂದು ಆಶ್ರಮ ಸ್ಥಾಪಿಸಿ ಅದರ ಜವಾಬ್ದಾರಿಯನ್ನು ಮಣಿಲಾಲನಿಗಿತ್ತರು. ಆದರೆ ಮಣಿಲಾಲ ಆಶ್ರಮದ ಹಣವನ್ನು ಕೊಳ್ಳೆ ಹೊಡೆದ. ಕೂಡಲೇ ಗಾಂಧೀಜಿ ನಿರ್ದಾಕ್ಷಿಣ್ಯದಿಂದ ಅವನನ್ನು ಆಶ್ರಮದಿಂದ ಹೊರಗೆ ಹಾಕಿ, "ಹೋಗು. ಸ್ವಂತ ಕಷ್ಟಪಟ್ಟು ಮುಂದಕ್ಕೆ ಬಾ. ನನ್ನ ಹೆಸರನ್ನು ಮಾತ್ರ ಉಪಯೋಗಿಸಿಕೊಳ್ಳಬೇಡ. ಇಂತಹ ಮಗ ನನಗೆ ಹುಟ್ಟಿಲ್ಲವೆಂದೇ ನಾನು ತಿಳಿಯುತ್ತೇನೆ." ಎಂದು ಸಿಟ್ಟಿನಿಂದ ನಮ್ಮ ನಿಮ್ಮ ಹಾಗೆಯೇ ಅಂದು ಬಿಟ್ಟರು. ಅನಂತರ ಅವನ ಕೈ ಖರ್ಚಿಗೆ ಸ್ವಲ್ಪ ಹಣ ಕೊಟ್ಟೇ ಕಳಿಸಿದರು. ಎಲ್ಲರ ಹಾಗೆ ಅವರಿಗೂ ಇತ್ತು ತಂದೆಯ ಹೃದಯ.

ಮಣಿಲಾಲ್ ಮದರಾಸಿನ ಒಬ್ಬರು ಪುಸ್ತಕ ಪ್ರಕಾಶಕರಲ್ಲಿ ಕೆಲಸಕ್ಕೆ ಸೇರಿಕೊಂಡಾಗ, ಅವರ ಒಡೆಯರಿಗೆ ಗಾಂಧೀಜಿ ಹೀಗೆ ಕಾಗದ ಬರೆದರು: "ಮಣಿಲಾಲನ ಮೇಲೆ ದಾಕ್ಷಿಣ್ಯ ತೋರಿಸಬೇಡಿ, ಖಂಡಿತವಾಗಿರಿ. ಅವನ ಅಡಿಗೆ ಊಟ ಎಲ್ಲ ಅವನೇ ನೋಡಿಕೊಳ್ಳಲಿ."

ಆದರೆ ಈ ಮಣಿಲಾಲನಿಗಿಂತಲೂ ಹಿರಿಯ ಮಗ ಹರಿಲಾಲನೇ ಹೆಚ್ಚು ಹಾಳಾದವನು. ಅವನ ಹೆಂಡತಿ ಸತ್ತ ಮೇಲೆ, ಪುನಃ ಅವನು ಮದುವೆಯಾಗಲು ಬಯಸಿದಾಗ ಗಾಂಧೀಜಿ ಬೇಡವೆಂದು ತಡೆದರು. ಆದರಿಂದ ತಂದೆಯ ಮೇಲೆ ಅವನಿಗೆ ಇನ್ನಷ್ಟು ಸಿಟ್ಟಿಗೆ ಕಾರಣವಾಯಿತು. ಹಗೆ ತೊಟ್ಟು ಸರಾಯಿ ಕುಡಿಯ ತೊಡಗಿದ. ಹೆಣ್ಣುಗಳ ಹಿಂದೆ ತಿರುಗಿದ. ಮುಸ್ಲಿಂ ಮತಕ್ಕೆ ಸೇರಿ ಮುಸ್ಲಿಂ ಸ್ತ್ರೀಯ ಗಂಡನಾಗಿ "ಅಬ್ದುಲ್ಲಾ" ಎಂದು ಹೆಸರುಪಡೆದ.

ಅಷ್ಟೇ ಅಲ್ಲ; ಅತ ಭಾರೀ ಭಾರೀ ಕೆಲಸ ಕೂಡ ಮಾಡಿದ್ದಾನೆ "ಅಖಿಲ ಭಾರತ ಸ್ಟೋರ್ಸ್ ಲಿಮಿಟೆಡ್" ಎಂಬ ಕಂಪೆನಿಯನ್ನು ಪ್ರಾರಂಭಿಸಿದ. ಗಾಂಧೀಜಿಯ ಮಗನೆಂಬ ವಿಶ್ವಾಸದಿಂದ ಹಲವರು ಸಾವಿರ ಸಾವಿರ ಲೆಕ್ಕದಲ್ಲಿ ಆ ಕಂಪೆನಿಯಲ್ಲಿ ಹಣ ಹಾಕಿದರು. ಅದನ್ನೆಲ್ಲಾ ಬಾಚಿಕೊಂಡು ಓಡಿಬಿಟ್ಟ ಹರಿಲಾಲ, ತಂದೆಯ ಮನಸ್ಸನ್ನು ನೋಯಿಸಬೇಕೆಂದೇ ಹೀಗೆಲ್ಲಾ ಮಾಡಿದ ಆ ಮೇಧಾವಿ.

ಆಗ ಹಲವರು ಗಾಂಧೀಜಿಗೆ ಪತ್ರ ಬರೆದು ಮೊರೆಯಿಟ್ಟುಕೊಂಡರು. ಗಾಂಧೀಜಿ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಹೀಗೊಂದು ವಿನಂತಿಯನ್ನು ಮಾಡಿಕೊಂಡರು. ಅದರ ಸಾರಾಂಶ:

"ಹರಿಲಾಲನಿಗೆ ತಂದೆಯಾದ ದುರ್ಭಾಗ್ಯ ನನಗುಂಟು. ಅವನು ನನ್ನ ಹಿರಿಯ ಮಗ. ೪೬ ವಯಸ್ಸಿನವ. ಅವನಿಗಿರುವ ನಾಲ್ಕು ಮಕ್ಕಳಲ್ಲಿ ಹಿರಿಯವನಿಗೆ ೧೯ ವಯಸ್ಸಾಗಿದೆ.

೧೫ ವರ್ಷಗಳ ಹಿಂದೆಯೇ ಅವನ ಹಾಗೂ ನನ್ನ ಅಭಿಪ್ರಾಯಗಳಿಗೆ ವ್ಯತ್ಯಾಸ ಬಂದುದರಿಂದ, ಅಂದಿನಿಂದ ಅವನೂ ನಾನೂ ಬೇರೆ ಬೇರೆಯೇ ಇದ್ದೇವೆ. ನಾನು ಅವನಿಗೆ ಒಂದು ಉಪಕಾರವನ್ನೂ ಮಾಡಿಲ್ಲ. ಅವನ ನಡತೆಗಳಿಗೆ ಅವನೇ ಹೊಣೆ. ಅವನಷ್ಟಕ್ಕೆ ಅವನಿಗೆ ಹೋಗಲು ಅವನಿಗೆ ಸ್ವಾತಂತ್ರ್ಯವಿದೆ. ತಡೆಯಲು ನನ್ನಿಂದಾಗದು.

ಮೊದಲಿನಿಂದಲೂ ಅವನಿಗೆ ಅತಿ ಜಾಸ್ತಿ ಬೇಗನೆ ಹಣಗಾರನಾಗಬೇಕೆಂಬುದು ಅವನ ಬಯಕೆ. ನನ್ನ ಮೇಲೆ ಕೋಪವೂ ಇದ್ದೀತು. ಕಾರಣ, ನನ್ನ ಮಕ್ಕಳಿಗೆ ಹಣವೂ ಹೊಗಳಿಕೆಯೂ ಬರುವ ಹಾಗೆ

(ಮೂವತ್ತನೇ ಪುಟ ನೋಡಿರಿ)

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು ಶಿ.ಹರಿದಾಸ ಭಟ್)	1=75
ಕಾಲನಿಲ್ಲದ ಹೆಣ್ಣು	(ಪಿ ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕಥೆಗಳು	(ಹನುಮಂತ ರಾವ್ ಮೂಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಜನೆ	(ನಚಿಕೇತ)	1=25
ಪಣ ಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಪಟ್ಟಿಗಾಗಿ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: **ನವಭಾರತ ಪುಸ್ತಕ ಭಂಡಾರ, ಉಡುಪಿ**

"ಹಾಗಾದರೆ ನಾನು ಹೋಗಿ ಬರುತ್ತೇನೆ"

ಬರೆದವರು
ಡಾ। ಯು. ಕೃಷ್ಣ, ಮುನಿಯಾಲು.

> ಪಂಡಿತ ತಾರಾನಾಥರ ಜೀವನದ ಮೇಲೆ ಪ್ರಭಾವ ಬೀರಿದ ಮಹಾ ವ್ಯಕ್ತಿ ಲಕ್ಷ್ಮಮ್ಮ. ಈಕೆಯ ಕೊನೆಗಾಲವನ್ನು ಕಂಡವರು ಭವಿಷ್ಯದಲ್ಲಿಯೂ ವಿಶ್ವಾಸವಿಟ್ಟುಕೊಂಡರೆ, ಆಶ್ಚರ್ಯವಿಲ್ಲ. "ಹೋಗಿ ಬರುತ್ತೇನೆ" ಎಂದ ಆಕೆ ಹೋಗುವುದನ್ನು ಕಂಡವರಿದ್ದಾರೆ, ಬರುವುದನ್ನೂ ಕಾಣುವವರಿರಬಹುದೆ?

"ದೊಡ್ಡ ಕೊಂಡ ನೀನ ದೊಡ್ಡ ಮನುಷ್ಯನಪ್ಪಾ, ಉದ್ಧಾರವಾಗು ಮಗನೇ" ಮುದಿ ಹೆಂಗಸೊಂದು ಎರಡೂ ಕೈಗಳನ್ನೆತ್ತಿ ಆಶೀರ್ವಾದ ಕೊಡುತ್ತಿದ್ದಳು. ಶುಭ್ರ ಖಾದಿಯ ಮೇಲಂಗಿ ಹಾಕಿಕೊಂಡು ಉದ್ದ ಚಲ್ಲಣ ಧರಿಸಿದ್ದ ಆಜಾನುಬಾಹು ವ್ಯಕ್ತಿಯೊಬ್ಬರು ಆ ಮುದುಕಿಯ ಪಾದ ಸ್ಪರ್ಶಮಾಡಿ ವಂದಿಸುತ್ತಿದ್ದರು. ಸಂಜೆಯ ಸಮಯ ರೈಲ್ವೇ ಆಫೀಸಿನ ಪಾರ್ಶ್ವದಲ್ಲಿರುವ ತನ್ನ ಚಿಕ್ಕ ಮಠದಿಂದ ....ದೇವಸ್ಥಾನದಿಂದ....ಬಿಡಾರದಿಂದ ಆ ಮುದುಕಿ ಹೊರಹೊರಡುತ್ತಿದ್ದಳು. ಆಗ ಲೇಸಂಜೆಯ ವಿಹಾರಕ್ಕೆಂದು ಬಂದಿದ್ದ ಪಂಡಿತ ತಾರಾನಾಥರು ಮುದುಕಿಯ ಪಾದಮುಟ್ಟಿ ನಮಸ್ಕಾರ ಮಾಡಿದರು.

ತುಂಗಭದ್ರೆಯ ರೈಲ್ವೇ ಸ್ಟೇಷನಿನ ಬಳಿ ಒಂದು ಚಿಕ್ಕ ಮನೆಯಿತ್ತು. ಮನೆ ಎನ್ನಲು ಆದರಲ್ಲಿ ಮನೆಯಲ್ಲಿರಬೇಕಾದ ಯಾವ ಸವಲತ್ತೂ ಇರಲಿಲ್ಲ. ಮಣ್ಣಿನ ಗೋಡೆಗಳ ಕೊನೆಗೆ ಬಿದಿರುಗಳನ್ನು ಹಾಸಿ ಮೇಲೆ ಸೊಪ್ಪುಗಳನ್ನು ಚದರಿ, ಅದರ ಮೇಲೆ ಮಣ್ಣಿನ ಲೇಪ ಹಚ್ಚಿತ್ತು. ಒಂದು ಚಿಕ್ಕ ಚಾವಡಿ, ಅದಕ್ಕೆತಾಗಿ ಒಂದು ದೇವರ ಕೋಣೆ! ಆ ದೇವರ ಕೋಣೆಯಲ್ಲಿ ಸದಾ ಉರಿಯುತ್ತಿದ್ದ ಒಂದು ದೀಪ. ಚಾವಡಿಗೆ ತಾಗಿ ಇನ್ನೊಂದು ಕೋಣೆ. ಅದು ಮಲಗುವ ಕೋಣೆ ಇರಬೇಕು. ಇದರಲ್ಲಿ ಆ ಮುದುಕಿ ಸಾಮಾನ್ಯ ಆರವತ್ತೆಂಟು-ಎಪ್ಪತ್ತು ವಯಸ್ಸಿನ ಲಕ್ಷ್ಮಮ್ಮ ವಾಸಿಸಿದ್ದರು. ಆ ದೇವ ಕೋಣೆಗಾಗಿಯೇ ಆ ಮನೆ ಇದ್ದಿತು! ಲಕ್ಷ್ಮಮ್ಮ ಆ ದೇವರ ಆರಾಧನೆಗಾಗಿ ಆ ಮನೆಯಲ್ಲಿದ್ದರು.

ಆಕೆಯ ಅಂಗಾಂಗಗಳಲ್ಲಿ ವೃದ್ಧಾಪ್ಯ ಮನೆ ಮಾಡಿತ್ತು. ಬಾಯಿಯಲ್ಲಿ ಎಂದೋ ಇದ್ದ ಹಲ್ಲುಗಳ ಸೂಚಕವಾಗಿ ಎರಡು-ಮೂರು ಹಲ್ಲುಗಳು ತಾವು ಹೊರಡುವ ತಯಾರಿಯಲ್ಲಿ ತುಟಿ ಮೀರಿ ಹೊರ ಬಂದಿದ್ದುವು. ಕುಸಿದು ಹೋದ ಮೈಕಟ್ಟು, ಗಿಡ್ಡ ಶರೀರ! ಇಳಿದು ಬಂದ ಹೊಟ್ಟೆ! ಸರಿಯಾಗಿ ನಡೆಯಲಾರದೆ ಒಂದು ಕಾಲನ್ನೋ...ಕಾಲಿನ ಗಂಟನ್ನೋ ಸದಾ ಆತಿಥ್ಯ ಮಾಡುವಂತೆ ತಿಕ್ಕಿಕೊಳ್ಳುತ್ತಾ ನಡೆಯುತ್ತಿದ್ದ ಮುದುಕಿಯಲ್ಲಿ ವಿಶೇಷತೆಯಿದೆ ಎಂಬುದು, ತಾರಾನಾಥರು ಪಾದ ಮುಟ್ಟಿ ನಮಸ್ಕರಿಸಿದಾಗಲೇ ನಮಗೆ ಗೊತ್ತು! ನಾವು ಆಶ್ರಮದ ವಿದ್ಯಾರ್ಥಿಗಳು ಗುರೂಜಿಯವರ ಹಿಂದೆ ಸಂಜೆಯ ವಿಹಾರಕ್ಕೆ ಹೊರಟಿದ್ದೆವು.

ಲಕ್ಷ್ಮಮ್ಮ ಗುರೂಜಿಯವರನ್ನು ಹರಸಿ ಮುಂದೆ ಹೊರಟರು. ನಾವು ಈ ವರ್ತನೆಯಿಂದ ನೊಂದು ಕೊಂಡವರಂತೆ ಅವರನ್ನೇ ನೋಡುತ್ತಿದ್ದೆವು. ಇಷ್ಟು ಅದ್ವಿತೀಯ ವ್ಯಕ್ತಿ, ಹದಿನಾಲ್ಕು ಭಾಷೆಗಳಲ್ಲಿ ಪಾಂಡಿತ್ಯವುಳ್ಳವರು, ದೇಶದಾದ್ಯಂತ್ಯದ ಮಹಾನ್ ವ್ಯಕ್ತಿಗಳು ಇವರನ್ನು ಗುರುಭಾವದಿಂದ ಕಂಡು ಇವರಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿರುವಾಗ, ಪರರಾಷ್ಟ್ರದ ವ್ಯಕ್ತಿಗಳು ಇವರ ಭೇಟಿಗೆಂದು ಕಾದು ದಿನಗಟ್ಟಲೆಯಲ್ಲಿ ಕುಳಿತಿರುವಾಗ, ರಾಜಾದಿ ರಾಜರುಗಳು ಇವರ ಭೇಟಿಗೆ ಬಯಸುತ್ತಿರುವಾಗ ಇವರು ಈ ಕುರೂಪಿ ಮುದುಕಿ, ವಿದ್ಯೆಯಿಲ್ಲದ, ರೂಪವಿಲ್ಲದ, ಮಾತನಾಡಲು ನುಡಿಬಾರದ ಈ ಮುದುಕಿಯ ಕಾಲಿಗೆರಗುವುದೆಂದರೆ-ಅದರಲ್ಲೂ ನಮ್ಮಂತಹ ನವತರುಣರ ಗುರು ಕಾಲೇಜಿನ ಪ್ರಿನ್ಸಿಪಾಲ್ — ಇದನ್ನು ಜೀರ್ಣಿಸಿಕೋಳ್ಳುವುದೇ ನಮ್ಮಿಂದಾಗಲಿಲ್ಲ! ನಮ್ಮನಮ್ಮೊಳಗೆನಾವುನಾವು ವಿವಿಧಛನ್ನೆಗಳಿಂದ ಈ ವರ್ತನೆಯಲ್ಲಿನಮಗಾದ ಬೇಸರವನ್ನು ಸೂಚಿಸಿ ಕೊಂಡೆವು. ಬಹುಶಃ ತಾರಾಜಿಗೆ ಆದು ತಿಳಿಯದೆ ಹೋಗಲಿಲ್ಲ. ಅವರು ಕೇಳಿದರು "ನೀವೆಲ್ಲ ಈ ದೇಹವೇ ನೀವೆಂದು ತಿಳಿದಿರುವಿರಿ, ನಿಮ್ಮ ಹಿರಿಯರು ನೀವು ಚಿಕ್ಕವರಿರುವಾಗಿನಿಂದ ಈ ದೇಹವೇ ನೀವೆಂಬ ಪಾಠಕಲಿಸಿರುತ್ತಾರೆ. ನಿಮ್ಮ ಜೀವನದ ಅನುಭವದಲ್ಲಿ ದೇಹ ನಿಮ್ಮ ಸಾಧನೆಗಾಗಿರುವ ಒಂದು ಸವಲತ್ತು ಎಂಬುದನ್ನು ಕೆಲವರಾದರೂ ನಿಮ್ಮ ಪೈಕಿ ಮನಗಂಡೇ ಕಾಣುವಿರಿ. ಆಗ ನಿಮಗೆ ಆತ್ಮದ ಅರಿವಾಗುತ್ತದೆ. ಆತ್ಮದ ಅರಿವಾದವರ ಪೈಕಿ ಈಕೆಯೊಬ್ಬಳು." ತಾರಾಜಿ ಇಷ್ಟುಹೇಳಿಮುಗಿಸಿಬಿಟ್ಟರು. ಅಂದಿನಿಂದ ಈ ಆತ್ಮದ ಅರಿವಾದ ಮುದುಕಿಯ ಜೀವನದ ಮೇಲೆ ನಾವು ಕಣ್ಣಿಟ್ಟೆವು.

ಈಕೆ ತಾರಾನಾಥರನ್ನು 'ದೊಡ್ಡ ಕೊಂಡ' ಎಂದೂ ಅವರ ತಮ್ಮ ಅಮೃತ ರಾಯರನ್ನು ಸಣ್ಣ ಕೊಂಡ ಎಂತಲೂ ಕರೆಯುತ್ತಿದ್ದರು ಇವರು ತೆಲುಗು ಮಾತನಾಡುವ ಹೆಂಗಸಾದರೂ ಕನ್ನಡ ಚೆನ್ನಾಗಿ ಬರುತ್ತಿತ್ತು. ಇವರು ಎಲ್ಲಿಯವರು, ಎಂದಿನಿಂದ ಅಲ್ಲಿದ್ದಾರೆ, ಮುಂಚೆ ಏನಾಗಿದ್ದರು ಈಗ ಹೀಗೆ ಹೇಗಾದರು, ಎಂಬುದನ್ನೆಲ್ಲಾ ತಿಳಿದುಕೊಳ್ಳಲು ನಾವು ಪ್ರಯತ್ನಿಸುತ್ತಿದ್ದೆವು ಆದರೆ ಪ್ರಯತ್ನ ಪ್ರಯತ್ನದಲ್ಲಿಯೇ ಉಳಿಯಿತು. ಯಾರೂ ಆ ಕುರಿತು ಸರಿಯಾಗಿ ಹೇಳುವವರಿರಲಿಲ್ಲ. ಎಲ್ಲಿಂದಲೋ ನಡು ಹರೆಯದ ಹೆಂಗಸೊಂದು ಬಂದು ಅಲ್ಲಿಯೇ ಬೇವಿನ ಮರದಡಿಯಲ್ಲಿ ಕೆಲಕಾಲದಿಂದ ವಾಸಿಸಿಕೊಂಡಿತ್ತೆಂದೂ ಜನರೆಲ್ಲಾ ಆಕೆಗೆ ತಲೆ ಬಿಸಿಯಾಗಿರಬೇಕೆಂದೂ, ಕೊನೆ ಕೊನೆಗೆ ಹಲವರು ವಿದ್ಯಾವಂತ ಜನರು ಈಕೆಯನ್ನು ಹುಡುಕಿಕೊಂಡು ಬಂದು ಈಕೆಯ ಮುಂದೆ ಕೈ ಮುಗಿದು ಗಂಟೆ ಗಂಟೆ ನಿಲ್ಲುತ್ತಿದ್ದರೆಂದೂ ಆಕೆ ಕೈ ಎತ್ತಿ ಹರಸಿದ ಮೇಲೆ ಪಾದ ಮುಟ್ಟಿ ನಮಸ್ಕಾರ ಮಾಡಿ ಹೋಗುತ್ತಿದ್ದರೆಂದೂ, ಹೇಳುತ್ತಿದ್ದರು. ಕೆಲವು ವರುಷಗಳ ನಂತರ ಕೆಲವು ದೂರದ ಹಳ್ಳಿಯೂರಿನ ಜನರು ಬಂದು ಚಿಕ್ಕ ಆ ಮಂದಿರ ಕಟ್ಟಿ ಕೊಟ್ಟರೆಂದೂ ಅಂದಿನಿಂದ ಆಕೆ ಅದರಲ್ಲಿ ವಾಸಿಸುತ್ತಿದ್ದರೆಂದೂ ತಮಗೆ ಗೊತ್ತಿದ್ದ ವಿಚಾರ ಹೇಳುವಾಗ ಒಟ್ಟಿಗೆ ಸೇರಿಸಿ ಪೋಣಿಸುವುದು ಮಾತ್ರ ಸಾಧ್ಯವಾಗಿತ್ತು.

ಲಕ್ಷ್ಮಮ್ಮನಿಗೆ ಊಟ ಉಪಚಾರದ ಗೊಡವೆಯಿಲ್ಲ. ಸ್ನಾನ ಪೂಜೆ ಮಡಿ ಮೈಲಿಗೆ ಒಂದರದೂ ವ್ಯವಸ್ಥೆಯಿಲ್ಲ. ಯಾವಾಗ ನಿದ್ರೆ, ಯಾವಾಗ ಜಾಗರ ತಿಳಿದವರಿಲ್ಲ ಮಧ್ಯರಾತ್ರಿಯಲ್ಲಿ ಒಂದು ಬೇವಿನ ಮುಂದಡಿ ಕುಳಿತಿರುವುದುಂಟು. ಹೊತ್ತು ಮುಳುಗ ಬೇಕಾದರೇನೇ ಮಲಗಿ ಬಿಡುವುದುಂಟು. ಈಕೆಯ ಜೀವನದ ಗೊತ್ತು ಗುರಿಯೇನು? ಗೀತೆಯಲ್ಲಿ ಹೇಳುವ ಸ್ಥಿತಪ್ರಜ್ಞೆ ಈಕೆ ಇರಬಹುದೆ? ತನ್ನೊಳಗಿರುವ ದೈವತ್ವವನ್ನು ಅರ್ಥ ಮಾಡಿಕೊಳ್ಳುವದಷ್ಟೇ ಆ ಜೀವನದ ಗುರಿಯೋ ಯಾರಿಗೆ ಗೊತ್ತು?

ನಮ್ಮ ಆಶ್ರಮಕ್ಕೆ ರಜಾ ಸಮಯಗಳನ್ನು ಕಳೆಯಲು ಬರುತ್ತಿದ್ದ ಕೆ. ಎಸ್. ಕೆ. ಐಯ್ಯಂಗಾರ್ (ರೆಂಗ್‌ಲರ್ ಇನ್ ಮೆತಮೆಟಿಕ್ಸ್) ಆಗ ಬೆಂಗಳೂರಿನ ಕಾಲೇಜೊಂದರ ಮೆತಮೆಟಿಕ್ಸ್ ಪ್ರೊಫೆಸರರು, ಆ ಮುದುಕಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದುದಲ್ಲದೆ ಆಕೆ ಮಹಾನ್ ವ್ಯಕ್ತಿಯೆಂದು ಹೇಳುತ್ತಿದ್ದರು. ಆಕೆಯ ಮೌನ ಭಾಷೆ ಅರ್ಥವಾಗುವವರಿಗೆ ಮಾತ್ರ ಆಕೆಯ ಜೀವನದ ತತ್ವ ಅರ್ಥವಾಗುವುದು, ಎಂದು ಐಯ್ಯಂಗಾರರು ಹೇಳುತ್ತಿದ್ದುದನ್ನು ಕೇಳಿ ನಾವೆಲ್ಲ ವಿದ್ಯಾರ್ಥಿಗಳು ನಗುತ್ತಿದ್ದೆವು. "ಮೌನ ಭಾಷೆ ಹೇಗಿದ್ದರೂ ಅರ್ಥಕ್ಕೆ ಕಷ್ಟ" ಎಂದು ನಾವು ಅನ್ನುತ್ತಿದ್ದೆವು. ಐಯ್ಯಂಗಾರರು ಆಕೆಯ ಜೀವನಕ್ಕೆ ಸಂಬಂಧಪಟ್ಟ ಒಂದು ಗ್ರಂಥವನ್ನೇ ಬರೆಯುವ ಆಲೋಚನೆಯಲ್ಲಿದ್ದುದು ನೆನಪು ನನಗೀಗಲೂ ಆಗುತ್ತಿದೆ.

ಲಕ್ಷ್ಮಮ್ಮನಿಗೆ ಮಕ್ಕಳೆಂದರೆ ಪ್ರಾಣ! ನಮ್ಮನ್ನೆಲ್ಲಾ ಸೇರಿಸಿಕೊಂಡು ತನ್ನ ಮಟ್ಟೆಯಲ್ಲಿ ಸೇರಿಸಿಕೊಂಡು ಬಂದ ಮುಂಡರಳನ್ನೋ ಹುರಿಗಡಲೆಯನ್ನೋ ಬೊಗಸೆ ತುಂಬಾ ಕೊಡುತ್ತಿದ್ದರು. ನಾವು ಕೇಳುವ ಪ್ರಶ್ನೆಗಳಿಗೆ ಕನ್ನಡದ ಆದ ಉತ್ತರಗಳನ್ನು ಕೊಡುತ್ತಿದ್ದರು. ಒಮ್ಮೆ ಗದಗಿನ ದೊಡ್ಡ ಸಾಹುಕಾರರ ಮಗ ಮೆಣಸಿನ ಕಾಯಿ ಎಂದೇನೋ ಅವನ ಹೆಸರು. ಆತ ತನ್ನ ಉಬ್ಬಸ ರೋಗಕ್ಕೆ ಚಿಕಿತ್ಸೆಗಾಗಿ ತುಂಗಭದ್ರೆಯಲ್ಲಿದ್ದವ, ನಮ್ಮೊಟ್ಟಿಗೆ ತಿರುಗಾಡಲು ಬಂದವ, ನಮ್ಮೊಟ್ಟಿಗೆನೇ ಲಕ್ಷ್ಮಮ್ಮನ ಮನೆಗೆ ಬಂದ. ಆತನ ರೋಗವೆಲ್ಲಾ ವಾಸಿಯಾಗಿತ್ತು. ತುಂಬಾ ಉಲ್ಲಾಸದಿಂದ ನಮ್ಮೊಡನೆ ಕಲೆತು, ನಗು ಹಾಸ್ಯಗಳಲ್ಲಿ ಬೆರೆತು ಆನಂದಿಸುತಿದ್ದ. ಆತ ಆರೆಂಟು ತಿಂಗಳುಗಳಿಂದ ಆಶ್ರಮವಾಸಿಯಾಗಿಯೇ ಇದ್ದು ಎಲ್ಲಾ ವಿದ್ಯಾರ್ಥಿಗಳಲ್ಲಿಯೂ ಸಲಿಗೆ ಸ್ನೇಹಗಳಸಿದ್ದನಲ್ಲದೆ, ಆತನ ದೊಡ್ಡಸ್ತಿಕೆಗಾಗುವ ಘನಸ್ಥಿಕೆಯ ಬುದ್ಧಿ ವ್ಯವಹಾರ ಆತನಲ್ಲಿದ್ದುದರಿಂದ ಆತ ಎಲ್ಲರ ಮೆಚ್ಚುಗೆಗಳಿಸಿದ್ದ. ಅಂದು ಮಾತನಾಡುತ್ತಿದ್ದಂತೆ ಲಕ್ಷ್ಮಮ್ಮ ಹೇಳಿದರು, "ಎಲ್ಲ ಮಾಯೆ, ಮಾಯೆಯನ್ನು ಅರ್ಥಮಾಡಿ ಕೊಳ್ಳುವುದರಲ್ಲೇ ಜೀವನದ ವೈಶಿಷ್ಟ್ಯವಿದೆ. ಮೆಣಸಿನ ಕಾಯಿ ಬರುವ ಮಂಗಳವಾರ ದಿನ ಮಾಯವಾಗುತ್ತಾನೆ" ಈ ಮಾತು ಬಾಣದಂತೆ ನಮಗರಿಯಿತು.! ಕೆಲವರಿಗೆ ಇದರ ಗೊಡವೆಯಾಗಲಿಲ್ಲ. ಮೆಣಸಿನಕಾಯಿಗೆ ತಿಳಿಯಿತೋ ತಿಳಿಯಲಿಲ್ಲವೋ, ಅವನ ಮುಖ ಕಂಡಾಗ ಆತ ಯಾವ ಭಾವವನ್ನೂ ತೋರಿಸಲಿಲ್ಲ. ಕೆಲವರಂತೂ ಈ ಮುದುಕಿಗೆ ಹುಚ್ಚು ಹತ್ತು ಕತವೆ. ಎನ್ನುತ್ತಿದ್ದರು. ಅವರು ಈ ಮಾತಿಗೆ ಬೆಲೆಕೊಡಲಿಲ್ಲ. ಆಕೆ ಕೊಡುವ ಮಂಡರಳಗಳು, ಹೆಗಡಲೆ ಅಷ್ಟೇ ಅವರಿಗೂ ಆಕೆಗೂ ಇರುವ ಸಂಬಂಧ. ನಮಗಂತೂ ಮೆಣಸಿನ ಕಾಯಿಯ ಮೇಲೆ ಆ ಮಾತು ಪರಿಣಾಮ ಮಾಡದಿದ್ದರೆ ಸಾಕಾಗಿತ್ತು. ಅಂದು ಬುಧವಾರವೆಂದು ನನ್ನ ನೆನಪು. ನಾವೆಲ್ಲ ಲಕ್ಷ್ಮಮ್ಮನಿಗೆ ಕೈ ಮುಗಿದು ಹೊರಟು ಬಂದೆವು. ಯಾರೂ ಆ ನುಡಿಯನ್ನು ಎತ್ತಲಿಲ್ಲವಲ್ಲದೆ, ಮತ್ತೆ ಆ ಕಡೆ ಹೋಗಲೂ ಇಲ್ಲ ಇಲ್ಲದ ಅಪಶಕುನದ ಮಾತುಗಳನ್ನು ಯಾಕೆ ಕೇಳಬೇಕೆಂದು ನನ್ನ ಗೆಳೆಯರೊಬ್ಬರು ಹೇಳಿದ್ದಕ್ಕೆ ಹೌದೆಂದು ನಾನು ಮರುದಿನವೇ ಒಪ್ಪಿಗೆ ಕೊಟ್ಟಿದ್ದೆ.

ಅಂದು ಅದೇ ಲಕ್ಷ್ಮಮ್ಮ ಸೂಚಿಸಿದ್ದ ಮಂಗಳವಾರ. ಮೆಣಸಿನ ಕಾಯಿ ಆರೋಗ್ಯದಿಂದಿದ್ದಾನೆ. ಎಂದಿಲ್ಲದ ಹುರುಪು ಅಂದು ಅವನಲ್ಲಿ ಎಂದಿಲ್ಲದ ಆನಂದ ನಮಗೆಲ್ಲ ಲಕ್ಷ್ಮಮ್ಮನ ಪಾದ ಮುಟ್ಟಿ ಕೈ ಮುಗಿಯುವವರ ವಿಚಾರಕ್ಕೆ ನಮಗೊಳಗೊಳಗೆ ನಗು. ಲೋಕದಲ್ಲಿ ಬಹಳ ತಿಳಿದವರೆನ್ನುವವರಿಗೆ ವ್ಯವಹಾರ ಜ್ಞಾನವಿಲ್ಲ. ಹಾಗಲ್ಲದಿದ್ದರೆ ಪಂಡಿತ ತಾರಾನಾಥರು, ಐಯ್ಯಂಗಾರರು, ಬಳ್ಳಾರಿ ರಾಘವ ಇವರೆಲ್ಲ ಈ ಮುದುಕಿಗೆ ಸಾಷ್ಟಾಂಗ ನಮಸ್ಕಾರ ಮಾಡುತಿದ್ದರೇ? ಈ ಪ್ರಶ್ನೆಗೆ ಅಂದು ಉತ್ತರ ಸಿಕ್ಕಿತು. ಇದ್ದಕ್ಕಿದ್ದ ಹಾಗೆ ಮೆಣಸಿನ ಕಾಯಿ "ನನಗೇನೋ ತಳಮಳವಾಗುತ್ತಿದೆ" ಎಂದ. ನಾ

ಯಂಕಾಲ ನಾಲ್ಕು-ಐದು ಆಗುವಾಗ ಆವನ ಹಳೆ ಉಬ್ಬಸದ ಎಲ್ಲಾ ಚಿಹ್ನೆಗಳೂ ಪ್ರಾರಂಭವಾದವು. ಕೂತುಕೊಳ್ಳಲು ಮಲಗಲೂ, ಏನು ಮಾಡಲೂ ಆಗಲಿಲ್ಲ ಎಲ್ಲಾ ವೈದ್ಯರುಗಳು ಒಟ್ಟು ಸೇರಿದರು ಆತನ ತ್ರಾಸ ಹೆಚ್ಚು ಹೆಚ್ಚಾಗುತ್ತಾ ಹೋಯಿತು. ಗಂಟೆ ಆರುವರೆ ಆಗುವಾಗ ಮೆಣಸಿನ ಕಾಯಿಯ ಇರುವಿಕೆಯು ಮಾಯೆ ನಮಗರ್ಥವಾಯಿತು! ಆತ ತೀರಿಕೊಂಡ! ನಮ್ಮ ಮೈಯು ರೋಮವೆಲ್ಲಾ ನಿಮಿರಿಕೊಂಡವು. ಈ ವಿಚಾರವನ್ನು ಬರೆಯುತ್ತಿರುವಾಗ ನನ್ನ ಮೈಯು ಕೂದಲೆಲ್ಲಾ ಅಂದಿನಂತೆ ಇಂದೂ ನಿಮಿರಿ ನಿಂತಿದೆ!

ಇಂತಹ ಹಲವಾರು ನಿದರ್ಶನಗಳನ್ನು ನಾವು ತಿಳಿದು ಹೋಗಿ ಮಹಾತಾಯಿಯ ಮಹಾ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡೆವಾದರೂ ಆಕೆ ಅರಣ್ಯ ಕುಸುಮದಂತೆ ಮಾಯವಾಗಿ ಹೋದಳು. ಐಯ್ಯಂಗಾರರು ಆಕೆಯ ಜೀವನದ ವಿಚಾರಕ್ಕೆ ಯಾವ ಗ್ರಂಥ ಬರೆದರೋ ನಾಕಾಣೆ ಆದರೆ ನನ್ನ ಮಿತ್ರರೊಬ್ಬರು ೧೯೪೩ರಲ್ಲಿ ಬರೆದ ಪತ್ರ ಒಂದು ಹೀಗಿದೆ .....

ತುಂಗಭದ್ರೆ,
26-12-43.

ಪ್ರಿಯ ಕೃಷ್ಣ,
"...... ನಿನಗೆ ಲಕ್ಷ್ಮಿಯಮ್ಮನ ವಿಚಾರದಲ್ಲಿ ತುಂಬಾ ಕುತೂಹಲವಿತ್ತಲ್ಲವೇ? ನೀನಿಟ್ಟು ಕೊಂಡಿದ್ದ ಆಕೆಯ ಬರವಾದ ಆ ಶ್ರದ್ಧೆ ಎಷ್ಟು ಸಹಜವಾದುದೆಂದು ನನಗೆ ಆಕೆ ದೇಹ ಬಿಟ್ಟಾಗಲೇ ತಿಳಿದದ್ದು. ಅದೊಂದು ರೋಮಾಂಚಕ ಸಂಘಟನೆ. ನಾನೇ ಕಂಡದಲ್ಲದಿದ್ದರೆ, ಯಾರು ಹೇಳಿದ್ದರೂ ನಾನು ನಂಬುತ್ತಿರಲಿಲ್ಲ ಆಕೆ ಎಲ್ಲಾ ತನ್ನ ಶಿಷ್ಯರುಗಳಿಗೂ, ಒಂದು ತಿಂಗಳ ಮುಂಚೆ ಪತ್ರ ಬರೆದಿದ್ದಳು. ಅಂದು ಎಲ್ಲರೂ ಬಂದು ಸೇರಿದ್ದರು. ಶುಭ್ರ ಬಿಳಿ ಬಟ್ಟೆಯುಟ್ಟು ಆ ದೇವರ ಕೋಣೆಯಿಂದ ಬಿಡಿಸಿಕೊಂಡ ತಲೆಗೂದಲಿಂದ ಹನಿ ನೀರು ಸುರಿಸುತ್ತಾ ಹೊರಬಂದು ಎಲ್ಲರನ್ನೂ ಎರಡೂ ಕೈಗಳಿಂದ ಹರಸಿ, ಕೈಜೋಡಿಸಿ, ಭಗವಂತನಿಗೆ ಕೈಮುಗಿದು ಮೊದಲೇ ತೋಡಿಟ್ಟಿದ್ದ, ಹೂಗಳಿಂದ ಶೃಂಗರಿಸಿದ್ದ ಗುಣಿಯಲ್ಲಿ ಇಳಿದು ಪದ್ಮಾಸನ ಹಾಕಿ ಕುಳಿತು. "ಹಾಗಾದರೆ ನಾನು ಹೋಗಿ ಬರುತ್ತೇನೆ", ಎನ್ನುತ್ತಾ ಕೈಮುಗಿದು ಕಣ್ಣು ಮುಚ್ಚಿಕೊಂಡರು. ಎಲ್ಲರೂ ಜೈಕಾರ ಹಾಕಿದರು. ಆ ಶಿಷ್ಯ ಕೂಟದಲ್ಲಿದ್ದ ಡಾಕ್ಟರೊಬ್ಬರು ಕೆಳಗಿಳಿದು ಹೃದಯ ಕ್ರಿಯೆ ನಿಂತಿದೆ ಎಂದು ಕೂಗಿದರು. ಆಶ್ಚರ್ಯ! ಈ ಕಲಿಯುಗದಲ್ಲಿ ಹೀಗಾಗುವುದೆಂದರೆ ಆಶ್ಚರ್ಯವೇ. ಬಹಳ ಹೊತ್ತು ಕಾದು ಪೂಜೆ ಪುರಸ್ಕಾರಗಳಾದ ಮೇಲೆ ಎಲ್ಲರೂ ಒಂದೊಂದು ಹಿಡಿ ಮಣ್ಣು ಹಾಕಿ ಆ ಮಹಾ ತಾಯಿಯ ದೇಹವನ್ನು ಮಣ್ಣುಗೂಡಿಸಿದರು! ಎಲ್ಲಕ್ಕಿಂತ ಆಶ್ಚರ್ಯವೆಂದರೆ ಅವರೆಲ್ಲಾ-ತಾರಾನಾಥರು, ಕೆ. ಎಸ್. ಕೆ. ಐಯ್ಯಂಗಾರರು, ಬಳ್ಳಾರಿ ರಾಘವ, ಡಿ. ವಿ. ಅಯ್ಯ, ವೈಸ್ ಚಾನ್ಸ್‌ಲರ್ ಸುಬ್ಬರಾಯರು, ಲಕ್ಷ್ಮಮ್ಮ ಇವರೆಲ್ಲಾ ಒಬ್ಬೊಬ್ಬರ ಹಿಂದೆ ಒಬ್ಬರು ಸ್ವಲ್ಪ ಸಮಯದೊಳಗೆ ಹೊರಟು ಹೋದರು! ಹಾಗಾದರೆ ಹೋಗಿ ಬರುತ್ತೇನೆಂದ ಲಕ್ಷ್ಮಮ್ಮನ ಮಾತು ಸತ್ಯವಾಗಿ ಅವರೆಲ್ಲಾ ಒಟ್ಟಾಗಿಯೇ ಹಿಂದೆ ಬಂದಾರೆಯೆ? ಅವರ ಬರುವಿಕೆಯಿಂದ ಇನ್ನೆಂದಾದರೂ ನಮ್ಮ ಕರ್ನಾಟಕ ಪುನೀತವಾದೀತೆ?.... ಇದನ್ನೆಲ್ಲಾ ಎಣಿಸುವಾಗ ಪುರಾಣಕಾಲದ ಗತವೈಭವವೇನು? ಈಗೇನು ಕಡಿಮೆ? ಕಾಣುವ ಕಣ್ಣು ನಮಗಿದ್ದರೆ ಇಂತಹ ಎಷ್ಟೋ ಮಹಾ ವ್ಯಕ್ತಿಗಳು ಹೋಗಿ ಬರುತ್ತಿದ್ದಾರೆಂದೇ ನನ್ನ ಭಾವನೆ.

ನಿನ್ನವ...
— — ರಾಘವ.

ಅಭಿನವ ವಿಧಾತ

೧ ನಿಂತಿಹನು ಮುಂದೊಬ್ಬ ಸೃಷ್ಟಿಕರ್ತ
ದಕ್ಷ ಪ್ರಜಾಪತಿಗೆ ಗೆಯ್ದಿರುವ ಗರ್ತ
ಬೊಮ್ಮನಿಗೆ ನೆರವಾದನವನೆ ದಕ್ಷ
ಹುಮ್ಮನದ ಇವಸಕಲ ಸೃಷ್ಟಿ ದಕ್ಷ ||

೨ ಸುರಪನಿಗೆ ಶಿರನಾಲ್ಕು ವೇಣ್ ಕರಗಳೆರಡು
ಕರಕಡಮೆಯುಂಕಲೀ ಅವನ ತಲೆಕಾಡು
ಇವನಿಗಿಹುದುಕರನೆರಡು ತಲೆಯೊಂದು ಮಾತ್ರ
ಅವನಿಂದ ಧಾತನಿಗೆ ಪದಚ್ಯುತಿಯು ಸೂತ್ರ ||

೩ ನೆಟ್ಟ ಕಂಬದಲಿಹುದು ಶಿರವೇಕ ಮತ್ತೆ
ಕಟ್ಟಿಹರು ಅವಕೆ ಹಲವಾರು ಹಿರಿಹಸ್ತ
ಹೊತ್ತಿಹುದು ಅದುನೂರು ತಂತಿಗಳ ನಾಲು
ಅತ್ತು ಕರೆದರು ಬಿಡರು ಗೋಳಿದರ ಬಾಳು ||

೪ ದೂರ ಲೇಖಿಕತಂತಿ ವಿದ್ಯುತ್ತು ಸರಿಗೆ
ದೂರ ಶ್ರಾವಕ ತಂತ್ರಿ ಶ್ರೇಣಿಗಳ ಬೆಸುಗೆ
ಮತ್ತಷ್ಟು ಕೈಗಳಲಿ ಬಹಳಷ್ಟು ಭಾರ
ವಿತ್ತರೂ ಹೊರಬೇಕು ಇಲ್ಲದಕೆ ಪಾರ ||

೫ ಬೇಡ ಬೇಡೆನ್ನುತಿದ್ದರು ಬೇಕು ಎಂದು
ಕಾಡಿ ಬೇಡಿಯೆ ಸುತ್ತುವರು ಜನರು ಬಂದು
ನೀನಿಂದ್ರ ಚಂದ್ರನೆಂದೊಡನೆ ಅದು ಹಿಗ್ಗಿ
ತಾನಿಂದ್ರನೆನ್ನುತಲೆ ಉಣ್ಣುವುದು ಸುಗ್ಗಿ ||

೬ ಐದು ತಲೆಗಳಲೊಂದ ಕಳೆದಿಹನು ಧಾತ
ಐದೆ ರಚಿಸಿಹರಂತೆ ಅಭಿನವ ವಿಧಾತ
ತಲೆ ನಾಲ್ಕಯಿದ್ದರೂ ಮರವಿಂದ ಸುರಪ
ನೆಲೆಯರಿಯ ಈ ನೂತ್ನ ಧರೆಯ ಅಧಿಪತಿಪ ||

೭ ನೂರು ಸಭೆ ನೂರು ಸಂಸ್ಥೆಗಳ ಯಜಮಾನ
ನೂರು ಸಾವಿರ ಜನರ ಭಾರಿ ಅಭಿಮಾನ ||
ಎಲ್ಲರೂ ಮಾಡುವರು ಇವಗೆ ಸನ್ಮಾನ
ಅದರಿಂದಲೇ ಇವಗೆ ಅತುಲ ದುಮ್ಮಾನ ||

೮ ಬಸವಂಗೆ ಗೊತ್ತು ತಾ ಹೊತ್ತಿರುವ ಭಾರ
ಕಂಬವರಿತಿಹುದು ತನ್ನಯ ಕಾರಭಾರ
ಹುಮ್ಮನದ ಇವರಿಗಿದೆಯೆ ಸ್ವಯಮಾತ್ಮ ಜ್ಞಾನ
ಹಮಾನದಲ್ಲವಗ ಬಂತೆ ಅಜ್ಞಾನ ?

೯ ಹಕ್ಕಿಗಳ ಗರಿಗಳಿಗೆ ನೇಲಲಾಧಾರ
ಪಕ್ಕ ಬಿದ್ದಿಹ ಗೆಲ್ಲಿಗದುವೆ ಆಧಾರ
ಸಿಕ್ಕಿಗೊಂಡಿದೆ ಗಾಳಿಪಟದ ಹಿರಿಬಾಲ
ಬಿಕ್ಕಳಿಕೆ ಬರುತಿಹುದು ಕಂಡಿದರ ಗೋಳ ||

೧೦ ಜನ ಮರುಳು ನೇಣು ಜಾತ್ರೆಯು ಮರುಳು ಎಂದು
ಅನುನಯದೆ ನುಡಿಯುವರು ಕೆಲರು ಎಂದೆಂದು
ಜನ ಮರುಳು ಆದರ ನಾಯಕನು ತಾ ಮರುಳು
ಅನ್ನುವರೆ ಎಂದಾದರೂ ಎಲ್ಲಿ ತಿರುಳು?

೧೧ ಅ ಜ್ಞಾನ ಪರಮ ಸುಖನೆಂದು ಹೇಳುವರು
ಅಜ್ಞಾನವೀತಗಿಪೆ ಅದರಿಂದ ನೊಡರು
ಎಲ್ಲೆಂದರಲ್ಲಿ ಹೆಚ್ಚುವನವನ ಹಿರಿನೆ.
ಇಲ್ಲೆನ್ನಲಾರನವನದುಮಪನ ಕಿರಿಮೆ||

ಗೋರಾ.

ಮಕ್ಕಳ ಮಮತೆಯ
"ಬಿಕ್ಕೊ" ರವರ

ಗ್ಲುಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು-ರುಚಿಕರ ಸೇವನೆಗೆ ಪ್ರಸಿದ್ಧಿಪಟ್ಟಿವೆ.

ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅನುಕೂಲ.

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್.,
ಕಾಪು, ದ. ಕ.

ಕನ್ನಡ ಸಾಹಿತ್ಯದಲ್ಲಿ ಶತಕಗಳು

ಬರೆದವರು

ಶ್ರೀ ಯು. ನಾ. ಉಡುಪ, ವಿದ್ವಾನ್.

ಸಂಸ್ಕೃತ ಶತಕಗಳಿಂದ ಪ್ರೇರಿತವಾಗಿ ಕನ್ನಡದಲ್ಲಿ ಶತಕ ಸಾಹಿತ್ಯ ಜನಿಸಿತು, ಬೆಳೆಯಿತು; ಪರಿಪುಷ್ಟವೂ ಆಯಿತು. ಅದು ಕನ್ನಡತನವನ್ನೂ ಉಳಿಸಿತು; ವಿಶ್ವಸಾಹಿತ್ಯದಲ್ಲೇ ಅಗ್ರಸ್ಥಾನ ಪಡೆಯುವ ಶಕ್ತಿಯನ್ನೂ ಪಡೆಯಿತು. ಈ ವಿಶಿಷ್ಟ ಸಾಹಿತ್ಯದ ಸ್ಥೂಲ ವಿವೇಚನೆಯನ್ನು ಮಾಡುವುದರ ಜೊತೆಗೆ ಉಪಲಬ್ಧವಿರುವ ಎಲ್ಲ ಶತಕಗಳನ್ನೂ ಅಚ್ಚು ಹಾಕಿಸಿ ಕನ್ನಡದ, ಕನ್ನಡಿಗರ ಗುಡಿಯುತ್ತುವಂತೆ ಮಾಡುವ ಅವಶ್ಯಕತೆಯನ್ನು ಲೇಖಕರು ಇಲ್ಲಿ ಎತ್ತಿ ಹೇಳಿದ್ದಾರೆ.

೧

ಕನ್ನಡ ಸಾಹಿತ್ಯದಲ್ಲಿ ಶತಕಗಳೇ ವೇದೋಪನಿಷತ್ತುಗಳು. ಇವೇ ಸನಾತನ ಧರ್ಮದೀಪಿಕೆಗಳು. ಇವುಗಳಲ್ಲಿ ಕೆಲವು ಭಾವಗೀತೆಗಳು, ಹಲವು ಖಂಡ ಕಾವ್ಯಗಳಾಗಿವೆ. ಇವುಗಳೆಲ್ಲಾ ಏಕವಿಷಯ ಪ್ರಧಾನವಾಗಿದ್ದು ಸ್ತೋತ್ರ, ದೃಶ್ಯ, ನೀತಿ, ಧರ್ಮ, ಶೃಂಗಾರ, ವೈರಾಗ್ಯಗಳ ಹೃದ್ಯ ವಿವರಣೆಗಳಲ್ಲಿ ಮುಗಿದಿವೆ. ಇವುಗಳಲ್ಲಿ 'ನೀತಿಯೆ ಸಾಧನಂ ಸಕಲ ಲೋಕಕ್ಕಾಗಬೇಕೆಂದು' ಶತಕಗಳನ್ನು ಕೆಲವರು ಬರೆದರು. ಇನ್ನು ಕೆಲವರು ತತ್ವವನ್ನು 'ಅತ್ರುಘೀಸ್ಮ ಶತ'ವೆಂಬ ನ್ಯಾಯವನ್ನು ತಿಳಿದು ಬರೆದವರೂ ಉಂಟು. ಆದರೆ ಹರಿಹರನು, ನವೀನ ಮಾರ್ಗದ ಸಾರಿಯಾದ ಕವಿ. ಇವನು ತನ್ನ ರಕ್ಷಾ ಶತಕ ಮತ್ತು ಪಂಪಾಶತಕಗಳಲ್ಲಿ ಭಕ್ತಿಯನ್ನೇ ಮುಖ್ಯವಾಗಿಟ್ಟುಕೊಂಡು, ಜ್ಞಾನ ವೈರಾಗ್ಯಗಳನ್ನು ಅದರ ಅಂಗವಾಗಿ ಪ್ರತಿಪಾದಿಸಿದುದು ಆತನ ಶತಕಗಳ ವೈಶಿಷ್ಟ್ಯ. ಆತನ ಶತಕಗಳು ಶಾಂತಿರಸ ಪ್ರಧಾನ ಕಾವ್ಯಗಳು. ಕನ್ನಡ ಸಾಹಿತ್ಯದಲ್ಲಿ ಸು. ಕ್ರಿ. ಶ. ೧೦೭೦ರಲ್ಲಿದ್ದ ನಾಗವರ್ಮಾಚಾರ್ಯನ ಚಂದ್ರಚೂಡಾಮಣಿ ಶತಕವು ಪ್ರಥಮ ಶತಕವೆಂದು ತಿಳಿದು ಬಂದಿದ್ದರೂ, ಭಕ್ತಿರಸವನ್ನೇ ಪ್ರತಿಪಾದಿಸುವ ಮೊತ್ತಮೊದಲಿನ ಶತಕಗಳೇ ಹರಿಹರನ (ಕ್ರಿ. ಶ. ೧೧೬೦—೧೧೯೦) ರಕ್ಷಾಶತಕ ಮತ್ತು ಪಂಪಾಶತಕಗಳೆನ್ನುವುದು ಖಾಡಿಕೆ. ಮಹಾಕವಿ ಷಡಕ್ಷರಿ ದೇವನೇ 'ಹರೀಂದ್ರಂಗೆ ಅತ್ಯಧಿಕ ಶಿವಕವೀಂದ್ರಂಗೆ ಮತ್ತದಾರ್ ಸಾಟಿಯುಪ್ಪರ್!" ಎಂದು ಇವನ ಪವಿತ್ರ ನಾಮೋಚ್ಚಾರಣೆಯಿಂದ ತನ್ನ ನಾಲಗೆಯನ್ನು ಸಾರ್ಥಕ ಮಾಡಿಕೊಂಡಿದ್ದಾನೆ. ಈತನ ಸಾಹಿತ್ಯಕ್ಕೆ ಹರಿಹರನೇ ಮಾರ್ಗದರ್ಶಕ! ರಕ್ಷಾಶತಕದಲ್ಲಿ ಹರಿಹರನ ಸಾಧಕಾವಸ್ಥೆಯ ಜೀವನ ಸೌಂದರ್ಯವು ಕಂಡು ಬಂದರೆ, ಪಂಪಾಶತಕವನ್ನು ಬರೆಯುವಾಗ ಇವನು ವಿರೂಪಾಕ್ಷನ ವರ ಪ್ರಸಾದದಿಂದ ಸಿದ್ಧಪುರುಷನಾಗಿದ್ದನು. ವಿಶ್ವಸಾಹಿತ್ಯದಲ್ಲೇ ಕಂಡು ಕೇಳದ ಪಂಪಾಶತಕದ 'ಕಂಡೆಂ ವಿರೂಪಾಕ್ಷನಂ' ಎಂಬ ಜಗನ್ಮಂಗಳಕರವಾದ ವಾಕ್ಯವು ಹರಿದೇವನಿಗೆ ಮಾತ್ರ ಹೊಳೆದುದು. ತನ್ನ ಭಕ್ತಿ ಸ್ತೋತ್ರಗಳಿಂದ—ಕೃತಿರತ್ನಗಳಿಂದ – ಕನ್ನಡ ಮಾತೆಯನ್ನು ಅಲಂಕರಿಸಿದ ಹರಿದೇವನ ಕೀರ್ತಿ ಸಾಹಸಗಳು ವರ್ಣನಾತೀತವಾದುವು. ವಿಶ್ವ ಸಾಹಿತ್ಯದಲ್ಲೇ ಹರಿಹರನೊಬ್ಬ ಪ್ರಾತಃ ಸ್ಮರಣೀಯನಾದ ಕವಿ!

ವಚನ ಸಾಹಿತ್ಯ ವಿಧಾತರಲ್ಲೊಬ್ಬನಾದ ಬಸವೇಶ್ವರನೂ ಸಾಹಿತ್ಯದ ದೃಷ್ಟಿಯಿಂದ ಹರಿಹರ ದೇವನಿಗೆ ಚಿರಋಣಿಯಾಗಿದ್ದಾನೆ. ಈತನ ಹಲವು ವಚನಗಳಲ್ಲಿ ಹರಿದೇವನ ಶತಕದ ಭಾವಬಿಂಬಗಳಿವೆ. ಈ ಮಹಾಕವಿಯಿಂದ ಕನ್ನಡ ಸಾಹಿತ್ಯವು ಭಾಗ್ಯಶಾಲಿಯೆನಿಸಿತು! ಈ ಕ್ರಾಂತಿಕವಿಯಿಂದ ಕನ್ನಡ ಸಾಹಿತ್ಯವು ಅವತಾರವಾಯಿತು! 'ದೇವಾ, ಮಾನವ ಜಾತಿಯಲ್ಲೇ ಏಕೆ ನಿನ್ನ ಅರಿವನ್ನೀಯುವುದಾದರೆ ಎನ್ನನು ಪಶುಪಕ್ಷಿ ಕ್ರಿಮಿಕೀಟ ಜಾತಿಗಳಲ್ಲಾದರೂ ಹುಟ್ಟಿಸು' ಎನ್ನುವ ಈತನ ಇಷ್ಟದೇವತೆಯ ಪ್ರಾರ್ಥನೆಯೊಂದೇ ಈತನ ಹೃದಯದ ಭಕ್ತಿಯ ಆಳವನ್ನು ಸೂಚಿಸುತ್ತದೆ. ವಿಶ್ವ ಸಾಹಿತ್ಯದಲ್ಲೇ ಇಂತಹ ದೇವ ಮಾನವ ಕವಿಗಳು ಎಷ್ಟು ಮಂದಿ ಸಿಕ್ಕಬಲ್ಲರು? ಈ ದೃಷ್ಟಿಯಿಂದ ಕನ್ನಡ ನಾಡನುಡಿಯ ಭಾಗ್ಯಕ್ಕೆ ಎಣೆಯೇ ಇಲ್ಲ.

ಶತಕಗಳು, ನೂರು ಅಥವಾ ಸ್ವಲ್ಪ ಹೆಚ್ಚು ಪದ್ಯಗಳಿರುವ ಖಂಡಕಾವ್ಯಗಳು. ಕನ್ನಡ ಸಾಹಿತ್ಯವು ನೀತಿಯನ್ನು ಸಾರುವ—ಪ್ರಾರ್ಥನೆಯನ್ನು ಸಲ್ಲಿಸುವ—ಈ ಶತಕಗಳ ಮಾರ್ಗವನ್ನು ಸಂಸ್ಕೃತ ವಾಙ್ಮಯದಿಂದಲೇ ಎರವಾಗಿ ಪಡೆಯಿತು. ಸಂಸ್ಕೃತ ಮತ್ತು ಪ್ರಾಕೃತ ಸಾಹಿತ್ಯಗಳಲ್ಲಿ ಶತಕಗಳು ಒಂದನೆಯ ಶತಮಾನದಿಂದಲೂ ರೂಢಿಯಲ್ಲಿದ್ದಂತೆ ತೋರುತ್ತದೆ. ಸು. ಮೊದಲನೆಯ ಶತಮಾನದಲ್ಲಿದ್ದ ಅಮರುಕ ಶತಕವು ಸಂಸ್ಕೃತ ಸಾಹಿತ್ಯದಲ್ಲಿ ಮೊದಲನೆಯ ಶತಕವಾಗಿದ್ದರೆ ಒಂದನೆಯ ಶತಮಾನದಲ್ಲಿದ್ದ ಹಾಲ ಸಾತವಾಹನ ಕವಿಯ ಗಾಥಾಸಪ್ತಶತಿಯೊಂದು ಏಳು ಶತಕಗಳು. ಪ್ರಾಕೃತಭಾಷೆಯ ಪ್ರಥಮ ಶತಕಗಳೆನ್ನುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಕ್ರಿ. ಶ. ೧೦೭೦ರ ಮೊದಲು ಹುಟ್ಟಿದ ಶತಕವೊಂದೂ ದೊರೆತಿಲ್ಲ. "ತನ್ನಂತೆ ತಾಂ ಪೆರರಂ ಭಾವಿಸೆ ಶಕ್ತಮಿಂತುಟೆ ಪಲಂ" ಎಂದ ಚಂದ್ರಚೂಡಾಮಣಿ ಶತಕವು ಕನ್ನಡ ಶತಕಗಳಲ್ಲೇ ಹಿರಿಯದೆನ್ನಿಸಿದೆ. ಇದರ ಕವಿಯಾದ ನಾಗವರ್ಮಾಚಾರ್ಯನು ಉದಯಾದಿತ್ಯ ರಾಜನ ಸಂಧಿ ವಿಗ್ರಹಿಯಾಗಿದ್ದನು. ಮತ್ತೇಭವಿಕ್ರೀಡಿತ ವೃತ್ತದಲ್ಲಿದ್ದ ಈ ಶತಕದ ವಿಷಯವು ವೈರಾಗ್ಯ.

೨

ಸುಭಾಷಿತಗಳ ತೌರುಮನೆಯೇ ಶತಕಗಳು. ಸಂಸ್ಕೃತ ಸಾಹಿತ್ಯದಲ್ಲಿ ನೂರ ಮೂವತ್ತು ಶತಕಗಳಿವೆಯೆಂದೂ, ಅವೆಲ್ಲಾ ಈಗ ಉಪಲಬ್ಧವಾಗಿಲ್ಲವೆಂದೂ ಹೇಳುತ್ತಾರೆ. ಕನ್ನಡದಲ್ಲಿ ಈಗ ಎಂಭತ್ತು ಶತಕಗಳು ಮಾತ್ರ ಉಪಲಬ್ಧವಾಗಿವೆ. ಇವುಗಳಲ್ಲಿ ಹೆಚ್ಚಿನವುಗಳಿಗೆಲ್ಲಾ ವೀರಶೈವ ಕವಿಗಳೇ ಜನಕರು. ಈ ಕವಿಗಳೂ ಹರಿದೇವನ ಅನುಯಾಯಿಗಳಾಗಿದ್ದಾರೆ.

ಹರಿದೇವನು ಶತಕಗಳನ್ನು ಬರೆಯಲು ಈತನ ಸಂಸಾರದ ಕರುಣಾಜನಕ ಸನ್ನಿವೇಶಗಳೇ ಮುಖ್ಯ ಕಾರಣ. ಈತನಿಗೆ ದಾರಿದ್ರ್ಯದೊಡನೆ ದ್ವಿತೀಯ ಪತ್ನಿಯೂ ದೊರಕಿದ್ದಳು. ಇದರಿಂದಲೇ ಈತನಿಗೆ ಸಂಸಾರದಲ್ಲಿ ವೈರಾಗ್ಯ ಬಂದು ಪಂಪಾ ವಿರೂಪಾಕ್ಷನ ಸುಪುತ್ರನಾಗುವ ಯೋಗ್ಯತೆ ಬಂತು. ಈತನ ಸಾಂಸಾರಿಕ ದೌರ್ಭಾಗ್ಯವೇ ಕನ್ನಡ ಸಾಹಿತ್ಯದ ಪರಮ ಸೌಭಾಗ್ಯವಾಗಿ ಪರಿಣಮಿಸಿತು. ಕನ್ನಡ ಸಾಹಿತ್ಯವು ಈ ಪರಶಿವಯಿಂದ ಅಜರಾಮರ ಕೀರ್ತಿ ಶಾಲಿಯಾಯಿತು!

ಹರಿಹರನು ನಾಟಕೀಯ ವ್ಯಕ್ತಿಯಾಗಿರಲಿಲ್ಲ; ಗಾಳಿ ಬಂದತ್ತ ಕೊಡೆ ಹಾರುವ ಚರುತ್ತಾರವನ್ನೇ ಈತನು ಅರಿತವನಲ್ಲ. 'ಪೊಗಳೆಂ ವಿಕ್ಕಿನ ಸರಸೀಜೋದ್ಭೂತ ಸಂಕ್ರಂದನಾದಿಗಳಂ ತ ನೆನೆಮರ್ತ್ಯಕೀಟಕರ ಮಾತಂತಿರ್ಕೆ' ಎನ್ನುವುದರಿಂದಲೇ ಈತನ ಸ್ವಭಾವ ವ್ಯಕ್ತವಾಗುತ್ತದೆ. 'ಘನವೈವಂ ನೀನೆ ಪಂಪಾಪುರದರಸ!' 'ಭರ್ತಾರನಾಗಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದು' ಎಂದು ಪ್ರಾರ್ಥಿಸುತ್ತಾ, ಈತನ ಅಂತರಂಗದಲ್ಲಿ ಭಕ್ತಿ ಪ್ರವಾಹವು ಉಕ್ಕಿ ಒತ್ತರಿಸಿ ಮೀರಿ ಮಡುಗಟ್ಟಿ ಸುಳಿಗೊಂಡು ತೆರೆ ತೆರೆಯಾಗಿ ಮೇಲ್ವರಿದಾಗ-

ವ್ಯ|| ಮದನ ವಿರೋಧಿಭಾರ, ದುರಿ
ತಾಂತಕಬಾರ, ಪುಂಡರೀಕಬಾರ, ಶಾ-|
ರದ ಶಶಿಮೌಳಿಬಾರ, ಫಣಿಕುಂಡಲ
ಬಾರ, ಮಹೇಶಬಾರ ಪು-||
ಣ್ಯದ ನೆಲೆನೆರ್ಚಬಾರ, ಸತತಂ ಪೊರೆ
ವಾಳ್ದನೆಬಾರ, ಮೀರಿದ |
ಪ್ಪಿದ ಕರುಣಾಬ್ಧಿ ಬಾರ, ಹಂಬಾರೆಲೆ
ಬಾರೆಲೆ ಹಂಪೆಯಾಳ್ದನೇ ||

ಕವಿಯ ಒಲವಿನ ಈ ಕೂಗು ಮಾಯೆಯ ಜವನಿಕೆಯನ್ನು ಹರಿದೊಗೆಯಲು ಶಿವನ ಪ್ರತ್ಯಕ್ಷನಾದನು. 'ಓ ಓ ಕಂದಾ, ಕರೆದಾ? ದಿಟಂ ಬಂದೆನೆನುತ್ತೆ ಆ ಪರಂಜ್ಯೋತಿ ಕೆಂಜೆಡೆ ಗಂಗೆ ಫಣಿಕುಂಡಲ ಭಾಳಾಕ್ಷ ಮಂಡಿತನಾಗಿ, ಉಮಾ ಸಹಿತನಾಗಿ ನಿಜರೂಪದೋರುತ್ತಲೇ, ಕೈಪಿಡಿದೆತ್ತಿ, ಮೈದಡವಿ ಮುಂಡಾಡಿ ಕೊಂಡಾಡಲು, ಮನವೆಲ್ಲ ಕಣ್ಣಾಗಿ ಆ ನಿಜರೂಪ ನೋಡಿ ಮನೋರಥ ಪೂರ್ಣನಾದ ಹರಿಹರನು 'ಶಿವಾ,ಗೆನ್ನಂ ಮಾಡುಗೊಟ್ಟೆಂ

(ಇಪ್ಪತ್ತಾರನೇ ಪುಟ ನೋಡಿರಿ)

ಅನಾಥ ಸೇವಾಶ್ರಮದ ಪ್ರಕಟಣೆಗಳು

"ತಿರುಕ" ಬರೆದುದು

ನಾಟಕಗಳು—

ಕರ್ಮಯೋಗಿ	೧-೫೦
ಉದ್ಧಾರ	೧-೫೦
ರಣಚಂಡಿ	೧-೫೦
ಮೂರು ನಾಟಕಗಳು	೨-೦೦
ಉಷಾ ಸ್ವಯಂವರ	೧-೫೦
ಮಹಾಕವಿ ಭಾರವಿ	೧-೬೦
ನ್ಯಾಯಮಂತ್ರಿ	೧-೫೦
ತಿರುನಾಮ	೦-೫೦
ವಣಮಹೋತ್ಸವ	೦-೭೫
ದಾರಿಯ ದೇವರು	೦-೭೫

ಕಾದಂಬರಿ—

ಕೊನೆಯ ಗುಟುಕು	೧-೨೫
ದೇವರ ಉಪವಾಸ	೧-೨೫
ಮೂಳೆಯ ಹಂದರ	೧-೨೫
ಚಿತೆಯೋ ಸಮಾಧಿಯೋ	೨-೬೦
ಉದಯಾಸ್ತ	೨-೦೦
ಸೂತ್ರದ ಬೊಂಬೆ	೧-೬೦
ಭಸಮುಸಿ	೧-೭೫
ಗುಡ್ಡದ ಸಿಂಗಾರಿ	೪-೦೦

ಕವನ ಸಂಗ್ರಹ—

ಹಣ್ಣು ಕಾಯಿ	೧-೦೦
ಪೂಜೆ	೧-೨೫

ಏಕಪಾತ್ರಾಭಿನಯಗಳು—

ಧ್ಯಾನಭಾರತಿ	೦-೨೫
ಜ್ವಾಲಾಮುಖಿ	೦-೨೫
೮ ಏಕಪಾತ್ರಾಭಿನಯಗಳು	೦-೫೦
ನನ್ನ ರಾಮ ರಾಜ್ಯ	೦-೨೫
My Rama Rajya	೦-೨೫
ಪಂಚಾಯ್ತಿ ರಾಜ್ಯ	೦-೭೫
ಧನಪಿಶಾಚಿ	೧-೦೦
ಪ್ರೇಮಪಾಷಾಣ	೦-೫೦

ಗೀತನಾಟಕ—

ಮಹಾಶಿಲ್ಪಿ	೧-೦೦
ಭಕ್ತ ಶಬರಿ	೦-೫೦

ವಚನ ಸಾಹಿತ್ಯ—

ಅಂತರ್ವಾಣಿ	೧-೦೦

ಕೀರ್ತನ ಸಾಹಿತ್ಯ—

ಕಿರಾತಾರ್ಜುನೀಯ	೦-೫೦
ಗಿರಿಜಾ ಕಲ್ಯಾಣ	೦-೫೦

ಬಾಳ ಬೆಳಕು ಸಾಹಿತ್ಯಮಾಲೆ

ಅನಾಥ ಸೇವಾಶ್ರಮ, ಮಲ್ಲಾಡಿ ಹಳ್ಳಿ, ಚಿತಲ್‌ದುರ್ಗ ಜಿಲ್ಲೆ.

ವೀರರೆಂತು ಜನ್ಮ ತಳೆದಾರು?

ಕೃತಜ್ಞ ದೇಶದಲ್ಲಿ ವೀರರು ಜನ್ಮ ತಡೆಯುತ್ತಾರೆ; ದೇಶಕ್ಕಾಗಿ ಪ್ರಾಣಾರ್ಪಣೆ ಗೈದ ಸಾವಿರಾರು ವೀರರನ್ನು ಮರೆತು ಬಿಟ್ಟ ಭಾರತೀಯರ ನಡುವೆ ವೀರರು ಜನಿಸಿಯಾರೆ?— ಈ ಪ್ರಶ್ನೆಗೆ ಸಮಾಧಾನದ ಉತ್ತರವನ್ನು ಜನತೆ ನೀಡಬೇಕು.



ಬರೆದವರು
ಶ್ರೀ ಶಿವಮುಂಜೆ ವರಾರಿ.

●

ಪ್ರಥಮ ಜಾಗತಿಕ ಮಹಾಯುದ್ಧದ ಸಮಯದಲ್ಲಿ ಭಾರತದಲ್ಲಿದ್ದ ಆಂಗ್ಲ ಸರಕಾರ ದೇಶದ ಜನತೆಯಿಂದ ಸಹಾಯ ಸಹಯೋಗಗಳನ್ನು ದೊರಕಿಸುವಂತೆ ದೇಶದ ಮುಂದಾಳುಗಳಲ್ಲಿ ಬೇಡಿಕೆ ಸಲ್ಲಿಸಿದಾಗ ಶ್ರೀ ಲೋಕಮಾನ್ಯ ಬಾಳ ಗಂಗಾಧರ ತಿಲಕರು ಈ ಬೇಡಿಕೆಯನ್ನು ಒಂದು ಶರ್ತದೊಡನೆ ಅಂಗೀಕರಿಸಿದರು. ಅಂದು ಅವರು—'ನಾವು ನಮ್ಮ ತನು, ಮನ, ಧನಗಳಿಂದ ತ್ರಿಕರಣ ಪೂರ್ವಕವಾಗಿ ನಿಮಗೆ ಸಹಾಯ ಮಾಡುತ್ತೇವೆ. ಆದರೆ ಒಂದು ಶರ್ತ, ಯುದ್ಧದಲ್ಲಿ ವಿಜಯ ಪ್ರಾಪ್ತಿಯಾದ ಬಳಿಕ ನಮ್ಮ ದೇಶಕ್ಕೆ ಸ್ವ-ಶಾಸನದ ಅಧಿಕಾರವನ್ನೀಯುವುದಾಗಿ ಆಂಗ್ಲ ಸರಕಾರ ಪ್ರತಿಜ್ಞೆ ಗೈಯಬೇಕು" ಎಂದರು. ಆಂಗ್ಲ ಸರಕಾರ ಇದಕ್ಕೆ ಉತ್ತರ ನೀಯುವ ಮೊದಲೇ ದೇಶದ ಇನ್ನು ಕೆಲವು ಮುಂದಾಳುಗಳು ತಮ್ಮ ಪರತ್ತುರರನ್ನು ಮುಂದು ಮಾಡಿ—"ಯಾವೊಂದೂ ಶರ್ತವಿಲ್ಲದೇನೇ ಈ ಸಂಕಟದ ಸಮಯದಲ್ಲಿ ನಾವು ಸರಕಾರಕ್ಕೆ ಸಹಾಯ ಮಾಡುತ್ತೇವೆ. ಸಶರ್ತ ಸಹಾಯವನ್ನೀಯುವುದು ಉಚಿತವಲ್ಲ." ಎಂದು ಪ್ರಕಟಗೊಳಿಸಿದರು. ತಿಲಕರನ್ನು ಉಪೇಕ್ಷಿಸಲಾಯಿತು!

ಯುದ್ಧದಲ್ಲಿ ವಿಜಯಿಯಾದ ಬಳಿಕ ಆಂಗ್ಲ ಸರಕಾರ ಆ ಸಹಾಯ, ಸಹಕಾರಗಳ ಋಣವನ್ನು ಹೇಗೆ ತೀರಿಸಿಕೊಂಡಿತೆಂಬುದು ಸರ್ವವಿದಿತವಿದೆ. ಭಯಂಕರ ಹತ್ಯಾಕಾಂಡಗಳನ್ನು ಅನೇಕ ಬಾರಿ ಜರುಗಿಸಿ ಜನ ಸಾಮಾನ್ಯರ ಹೃದಯದಲ್ಲಿ ಭಯೋತ್ಪಾದನೆ ಗೈಯಲು ಅದು ಪ್ರಯತ್ನಿಸಿತು. ಇದರ ಪ್ರತಿಕ್ರಿಯೆ ರೂಪವಾಗಿ ದೇಶಭಕ್ತ ತರುಣರು ಸಶಸ್ತ್ರ ಗುಪ್ತ ಸಂಘಟನೆಗಳನ್ನು ನಿರ್ಮಾಣ ಗೈದರು. ಇತ್ತ 'ಸತ್ಯ ಮತ್ತು ಅಹಿಂಸೆ'ಯ ಜಯಘೋಷ ಗೈದು ಇವರ ಗರ್ಹಣೆಯನ್ನು ಪ್ರತ್ಯಕ್ಷವಾಗಿಯೇ ಮಾಡಲಾಯಿತು. 'ಸರ್ ಫರೋಶೀ ಕೀ ತಮನ್ನಾ, ಅಬ್ ಹಮಾರೇ ದಿಲ್ ಮೇ ಹೈ' ಎಂಬ ಮಂತ್ರವನ್ನುಚ್ಚರಿಸಿದ ತರುಣರನ್ನು 'ಪಥಭ್ರಷ್ಟ'ರೆಂದು ಕರೆದದು ಮಾತ್ರವಲ್ಲ, ಈ ಕಲೆತಿರುಕರಿಂದಾಗಿಯೇ ನಮ್ಮ ಸ್ವಾತಂತ್ರ್ಯ ದೂರವಾಗುತ್ತಿದೆ ಎಂಬ ಅಪಾದನೆಯನ್ನೂ ತರುಣರ ಮೇಲೆ, ದೇಶದ ಈ ನಿಜವಾದ ಭಕ್ತರ ಮೇಲೆ ಹೇರಲಾಯಿತು. ಅಂದರೆ ಈ 'ಪಥಭ್ರಷ್ಟ' ಮಂದಿ ರಾಷ್ಟ್ರದ ಸ್ವಾತಂತ್ರ್ಯದ ವಿಘಾತಕರು! ಈ ಪಥಭ್ರಷ್ಟರ ಮಾತನ್ನು ಅಂದು ಕೇಳ್ಪುವವರಿರಲಿಲ್ಲ. ಅವರು ಹೇಳಲೂ ಸಮರ್ಥರಾಗಿರಲಿಲ್ಲ; ಕಾರ್ಯ ಮಾಡುತ್ತಲೇ ಇದ್ದರು. ಅವರನ್ನು ಕುತ್ಸಿತ ದೃಷ್ಟಿಯಿಂದ ಕಂಡು, ಅವರನ್ನು ಅಪಮಾನಗೊಳಿಸುವ, ನಿಂದಿಸುವ ಮಹಾ ಕಾರ್ಯವನ್ನೂ ಅಂದಿನ ಪತ್ರಿಕೆಗಳು ಕೈಗೊಂಡುವು. ಫಲತಃ ಜನತೆಯ ಸದ್ಭಾವವು ಅವರ ಮೇಲಿಂದ ಹೊರಟುಹೋಯಿತು; ಸಹಾಯ ಸಹಕಾರಗಳಂತೂ ದೂರದ ಮಾತಾಗಿ ಉಳಿದುವು. ಪ್ರತ್ಯಕ್ಷ ರೀತಿಯಿಂದ ಈ ಸತ್ಯ—ಅಹಿಂಸೆಗಳವರ ಗುಂಪಿನಲ್ಲಿದ್ದು, ಆಂತರಿಕವಾಗಿ ಈ ಕ್ರಾಂತಿಕಾರರಿಗೂ ಗುಪ್ತವಾಗಿ ಸಹಕರಿಸಿದ ಜನ ನಾಯಕರು ಬರೇ ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದರು. ಮಾತ್ರವಲ್ಲ ಆ ಸಮಯದಲ್ಲಿ ಈ ಸಹಕಾರಿಗಳು ಎರಡನೇ ಅಥವಾ ಮೂರನೇ ದರ್ಜೆಯ ಜನನಾಯಕರಷ್ಟೇ ಆಗಿದ್ದರು. ಬಲಿದಾನೀ ವೀರರು ಇಂತಹ ವಾತಾವರಣದಲ್ಲಿ ಯಾವ ರೂಪದ ರೀತಿಯ ಸಂಕಟಗಳನ್ನೆದುರಿಸ ಬೇಕಾಯಿತು ಎಂಬುದನ್ನು ಅಳಿದುಳಿದಿರುವ ಕೆಲವೇ ಮಂದಿ ಶ್ರೀ ಮನ್ಮಥನಾಥ ಗುಪ್ತ ಮುಂತಾದ ಪಥಭ್ರಷ್ಟರು! ತಮ್ಮ ಲೇಖನಿಗಳಿಂದ ಚಿತ್ರಿಸಿದ್ದಾರೆ.

ಯಾವ ಮಂದಿಯಲ್ಲಿ ದೇಶಭಕ್ತಿಯ ಭಾವವಿತ್ತೋ ಅವರು 'ಸತ್ಯ ಅಹಿಂಸೆ'ಗಳ ಶಪಥ ಸ್ವೀಕರಿಸಿ ತೆಪ್ಪಗಾಗಿದ್ದರು; ಈ ಪಥಭ್ರಷ್ಟ ಯುವಕರನ್ನು ತಿರಸ್ಕಾರದ ದೃ

(ಇಪ್ಪತ್ತೈದನೇ ಪುಟ ನೋಡಿರಿ)

HOTEL DĀSAPRAKASH :: MADRAS

An International Caravanserai

Phone: 61111 (8 lines) Grams DASPRAKASH

Over 150 Rooms : : Large Number Air-conditioned : : with Three Electric Lifts

Special Vegetarian Cuisine for Overseas Visitors.

Latest artistically designed PINK HALL and Sky Roof Garden --- special attraction of the Hotel ---

When Holidaying at the Queen of the Hill Stations, stay at

HOTEL DĀSAPRAKASH :: OOTY

Phone 434 \ 435 Grams: DASPRAKASH

Visitors to the Garden City of India, will enjoy their sojourn at

HOTEL DĀSAPRAKASH :: MYSORE

Phone. 742 Grams: DASPRAKASH

.... A HOME AWAY FROM HOME ....

DĀSAPRAKASH GROUP OF HOTELS

MADRAS........ ....MYSORE.................OOTY

"Linguistic unity may conduce to unity in other spheres of culture"
Paul Friedrich

x x x

ಒಂದು ಭಾಷೆ, ಒಂದು ಲಿಪಿ

ಭಾಷಾರಂಗದಲ್ಲಿ ಐಕ್ಯ ಸ್ಥಾಪಿಸುವುದು ಭಾವೈಕ್ಯಕ್ಕೆ ಹೇತುವೆಂಬುದು ಜಾಗತಿಕ ಅನುಭವ. ಭಾರತದ ಜನತೆಯಲ್ಲಿಯೂ ಭಾವೈಕ್ಯ ಮೂಡಿಸಲು ಒಂದು ಭಾಷೆ, ಒಂದು ಲಿಪಿಯು ಸಮರ್ಥವಾಗಬಹುದು. ಲೇಖಕರು ಈ ಬಗೆಯ ಪ್ರಯೋಗವು ಯಶಸ್ವಿಯಾಗಬಲ್ಲುದೆಂಬುದನ್ನು ಎತ್ತಿ ತೋರಿಸಿದ್ದಾರೆ

ಬರೆದವರು
ಕೃಷ್ಣಾನಂದ ಹೆಗ್ಡೆ

●

ನಮ್ಮ ದೇಶ ಇಂಗ್ಲೀಷಿನಿಂದ ಹಿಂದಿಗೆ ಒಡಲಾಯಿಸಬೇಕಾಗಿದ್ದ ದಿನ ಇಂದು. 1965ನೇ ಜನವರಿ 26ರಿಂದ ಹಿಂದಿ ಸರಕಾರದ ಹಾಗೂ ಶಾಲೆಗಳಲ್ಲಿ ಕಲಿಸಲ್ಪಡುವ ಭಾಷೆಯಾಗಬೇಕೆಂದು ಹದಿನೈದು ವರ್ಷಗಳ ಹಿಂದೆ ರೂಪಿತವಾದ ನಮ್ಮ ರಾಜ್ಯ ಘಟನೆಯಲ್ಲಿ ಹೇಳಿರಲಿಲ್ಲವೆ?

ಆದರೆ ಇಂದು ನಮ್ಮ ದೇಶ ಈ ಬದಲಾವಣೆಗೆ ಪೂರ್ಣವಾಗಿ ಸಿದ್ಧವಾಗಿಲ್ಲ ಕಾರಣ ಹಿಂದಿಯೇತರ ಭಾಷಾ ಭಾಷಿಗಳಲ್ಲಿ ಬಹ್ವಂಶ ಮಂದಿ ಇಂತಹ ಬದಲಾವಣೆಯನ್ನು ಮನಸಾ ಒಪ್ಪುವುದಿಲ್ಲ. ಹಿಂದಿಯು ಇಂಗ್ಲೀಷಿನ ಸ್ಥಾನವನ್ನಾಕ್ರಮಿಸುವಷ್ಟು ಪ್ರಬುದ್ಧಾವಸ್ಥೆಗೆ ಬಂದಿಲ್ಲವೆನ್ನುವವರಿದ್ದಾರೆ, ಇಂಗ್ಲೀಷನ್ನು ಕೈಬಿಟ್ಟರೆ ಕೆಡುತ್ತೇವೆ ಎನ್ನುವವರಿದ್ದಾರೆ

ಭಾರತದ ಭಾಷಾ ವೈವಿಧ್ಯ ಯಾರನ್ನಾದರೂ ದಂಗು ಬಡಿಸುವಂತಹದು. ನಮ್ಮಲ್ಲಿನ 43.5 ಕೋಟಿ ಜನರು 179 ಭಾಷೆಗಳನ್ನು ಆಡುತ್ತಾರೆ, ಇದರ ಹೊರತು ಇಲ್ಲಿ ಪ್ರಚಲಿತವಾಗಿರುವ ಬೇರೆ ಲಿಪಿರಹಿತ ಭಾಷೆಗಳ ಸಂಖ್ಯೆ 544!

ಇವುಗಳಲ್ಲಿ ಹದಿನಾಲ್ಕು ಭಾಷೆಗಳನ್ನು ರಾಷ್ಟ್ರ ಭಾಷೆಗಳೆಂಬುದಾಗಿ ಘೋಷಿಸಲಾಯಿತು. ಸಂಸ್ಕೃತ ಸಿಂಧಿ ಮತ್ತು ಕಾಶ್ಮೀರಿ ಭಾಷೆಗಳನ್ನು ಬಿಟ್ಟು ಉಳಿದ ಎಲ್ಲಾ ಭಾಷೆಗಳನ್ನು ಒಂದು ಕೋಟಿಗಿಂತಲೂ ಹೆಚ್ಚು ಜನ ಆಡುತ್ತಾರೆ. ತೆಲುಗು, ತಮಿಳು, ಬಂಗಾಳಿ ಮತ್ತು ಮರಾಠಿ ೩|| ಕೋಟಿಗಿಂತಲೂ ಹೆಚ್ಚು ಮಂದಿಯ ಮಾತೃಭಾಷೆಗಳು. ದೇಶದ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತಲೂ ಸ್ವಲ್ಪ ಕಡಿಮೆ ಜನರು ಹಿಂದಿ ಭಾಷೆಯನ್ನಾಡುತ್ತಾರೆ. ಇವುಗಳಲ್ಲದೆ ಸುಮಾರು ೩.೫ ಕೋಟಿ ಜನರು ಈ ಕೆಳಗಿನಂತೆ ನಾಲ್ಕು ವಿಭಿನ್ನ ಭಾಷಾ ಮೂಲಗಳಿಗೆ ಸಂಬಂಧಿಸಿದ ಭಾಷೆಗಳನ್ನಾಡುತ್ತಾರೆ: ಇಂಡೋ ಯುರೋಪಿಯನ್ (ಉದಾ. ನೇಪಾಳಿ), ದ್ರಾವಿಡ (ಉದಾ. ತುಳು); ಆಸ್ಟ್ರೋ ಏಶಿಯಾಟಿಕ್ (ಉದಾ: ಹೋ), ಅನ್ಯದೇಶೀಯ (ಉದಾ. ಇಂಗ್ಲಿಷ್, ಪರ್ಶಿಯನ್)

ಭಾರತದ ಜನಗಣತಿಯಲ್ಲಿ ೧೦ ಲಕ್ಷಕ್ಕಿಂತಲೂ ಹೆಚ್ಚು ಜನರಾಡುವ ೨೪ ಗಿರಿಜನರ ಭಾಷೆಗಳನ್ನು ಉಲ್ಲೇಖಿಸಲಾಗಿದೆ. ಹತ್ತು ಲಕ್ಷಕ್ಕಿಂತ ಕಡಿಮೆ ಜನರಾಡುವ ೭೭೦ ಕಿರಿಯ ಭಾಷೆಗಳಿವೆಯೆಂದೂ ಅದರಿಂದ ತಿಳಿದುಬರುತ್ತದೆ. ಅಭಾರತೀಯವಾದ ೬೩ ಭಾಷೆಗಳಲ್ಲಿ ಅತ್ಯಧಿಕ ಮಂದಿಯ ಮಾತೃಭಾಷೆ ಇಂಗ್ಲೀಷು (೧೭ ಲಕ್ಷ ಜನ).

ರಾಷ್ಟ್ರಭಾಷೆಯಾಗಿ ಪರಿಗಣಿಸದಿರುವ ಭಾಷೆಗಳಲ್ಲಿ ಕನಿಷ್ಠ ಆರನ್ನು ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನ ಆಡುತ್ತಾರೆ. ಇವುಗಳಲ್ಲಿ ಮಾರವಾಡಿ ಮತ್ತು ಸಿಂಧಿಭಾಷಾಭಾಷಿಗಳ ಸಂಖ್ಯೆಯು ರಾಷ್ಟ್ರಭಾಷೆಗಳಲ್ಲೊಂದಾದ ಅಸ್ಸಾಮಿಯಾ ಭಾಷಾಭಾಷಿಗಳ ಸಂಖ್ಯೆಗಿಂತ ತೀರ ಕಡಿಮೆಯಾಗಿಲ್ಲ. ಇತರ ಅಲ್ಪಸಂಖ್ಯಾತ ಭಾಷೆಗಳಲ್ಲಿ ಸಂತಾಲಿ (೩೨ ಲಕ್ಷ ಜನ), ಗೊಂಡಿ (೧೫ ಲಕ್ಷ), ಬಿಲಿ (೧೨ ಲಕ್ಷ), ವೇವಾರಿ (೨೦ ಲಕ್ಷ) ಮತ್ತು ಜೈಸಾರಿ (೧೫ ಲಕ್ಷ) ಪ್ರಮುಖವಾದವುಗಳು

ದೇಶವು ಸ್ವತಂತ್ರವಾದ ಮೊದಲಲ್ಲಿ ಸೇಕಡಾ ಮೂರಂಶ ಜನರು ಮಾತ್ರ ಇಂಗ್ಲೀಷ್ ಮಾತನಾಡಬಲ್ಲವರಾಗಿದ್ದರೂ ಆ ಭಾಷೆ ವಿದ್ಯಾವಂತ ವರ್ಗದ ಏಕಮಾತ್ರ ಭಾಷೆಯಾಗಿತ್ತಲ್ಲದೆ ವಿಶ್ವ ಸಂಪರ್ಕದ ಏಕೈಕ ಸಾಧನವಾಗಿತ್ತು. ಇಂದಿಗೂ ಈ ಪರಿಸ್ಥಿತಿಯಲ್ಲಿ ಹೇಳಿಕೊಳ್ಳುವಷ್ಟು ಬದಲಾವಣೆಯಾಗಲಿಲ್ಲ. ಆದರೆ ಇಂಗ್ಲೀಷು ಹಿಂದಿಗೆ ಎಡೆ ಮಾಡಿಕೊಟ್ಟು ಮೂರನೆಯ ಸ್ಥಾನಕ್ಕೆ ಇಳಿಯಬೇಕಾಗಿರುವುದು ಚಾರಿತ್ರಿಕ ಸತ್ಯ. ಈ ಸ್ಥಿತ್ಯಂತರದ ಕಾಲಾವಧಿ ಜನತೆಯ ಮನೋಭಾವವನ್ನು ಅನುಸರಿಸಿ ನಿರ್ಣಯವಾಗಲಿದೆ.

ಭಾರತೀಯ ಭಾಷೆಗಳಲ್ಲಿ ಅಡಕವಾ

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

WITH BEST COMPLIMENTS
FROM

PANKAJ MERCANTILE COMPANY

OFFICE: 194, NAGDEVI STREET,
BOMBAY-3

TEL CALL 326921 GRAM PANKAJRISE

FACTORY: ANDHERI KURLA ROAD, M & T STUDIO COMPOUND
ANDHERI EAST, **BOMBAY-58**

MANUFACTURERS — EXPORTERS
OF

COSTUME JEWELRY, HILUSTRE METALISED ARTICLES
LADIES HANDBAGS, AND ALLIED PLASTIC GOODS

ಹೃತ್ಪೂರ್ವಕ ಅಭಿನಂದನೆಗಳು!
ಅರ್ಪಿಸುವವರು

ಪಂಕಜ ಮರ್ಕಂಟೈಲ್ ಕಂಪೆನಿ

ಆಫೀಸು: 194, ನಾಗ್‌ದೇವಿ ಸ್ಟ್ರೀಟ್
ಬೊಂಬಾಯಿ - 3

ಟೆಲಿ ಕರೆ 326921 ತಂತಿ ಪಂಕಜ್‌ರೈಸ್
ಫ್ಯಾಕ್ಟರಿ ಅಂಧೇರಿ ಕುರ್ಲಾ ರೋಡು, ಎಂ ಎಂಡ್ ಟಿ ಸ್ಟುಡಿಯೊ ಕಂಪೌಂಡು, ಪೂರ್ವ ಅಂಧೇರಿ,
ಬೊಂಬಾಯಿ — 58

ಉಡುಗೆಯ ಆಭರಣ, ಶುದ್ಧೀಕರಿಸಿದ ಲೋಹದ ಹಿಲಸ್ಟರ್ ಸಾಹಿತ್ಯಗಳು,
ಸ್ತ್ರೀಯರ ಕೈಚೀಲಗಳು ಮತ್ತು ಅದಕ್ಕೆ ಸಂಬಂಧಿಸಿದ ಪ್ಲಾಸ್ಟಿಕ್ ಸಾಮಾನುಗಳನ್ನು
ತಯಾರಿಸುವವರು ಮತ್ತು ರಫ್ತು ಮಾಡುವವರು

'ಮೂಗುತಿ'ಯ ವಿಚಾರ

ಬರೆದವರು

ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್.

ಮುತ್ತೈದೆಯ ಅಲಂಕಾರ ವಸ್ತುಗಳಲ್ಲಿ ಮೂಗುತಿ ಒಂದು. ಇದರ ಬಳಕೆಯೆಂದು ಎಲ್ಲಿ ಪ್ರಾರಂಭವಾಯಿತು ಎಂಬ ವಿಚಾರದಲ್ಲಿ ಹೆಚ್ಚಿನ ವಿಮರ್ಶೆಗೆ ಅವಕಾಶವಾಗಲೆಂದು ಲೇಖಕರು ಆಶಿಸಿ, ತಮ್ಮ ಗಮನಕ್ಕೆ ಬಂದ ಸಂಗತಿಯನ್ನು ಬಹಿರಂಗ ಪಡಿಸಿದ್ದಾರೆ.

ಪ್ರತಿಯೊಬ್ಬ ಜೀವಿಯು ಆಭರಣಗಳನ್ನು ಧರಿಸಿ ಅಂದವಾಗಿ ಕಾಣಬೇಕೆಂದು ಬಯಸುತ್ತಾನೆ. ಅಂತೆ, ಹಲವಾರು ಸುಖ ಸಾಮಗ್ರಿಗಳಿಂದ ಮಾನಸಿಕ ದೈಹಿಕವಾದ ಆನಂದವನ್ನು ಪಡೆಯಲು ಆಶಿಸುತ್ತಾನೆ. ಪ್ರಕೃತ, ಮೂಗುತಿಯು ಹಿಂದೂ ಜನರ ಹೆಂಗಳ ಆಭರಣಗಳಲ್ಲಿ ಪ್ರಾಮುಖ್ಯವಾಗಿ ಪರಿಗಣಿಸಲಾಗಿದೆಯೆಂದು ತುಸ ತಿಳಿಯಬಯಸಿದೆ. ಮೂಗುತಿಯು ಹಿಂದೂ ಜನರ ಮೂಲಾಭರಣವಲ್ಲ, ಅದು ವಿದೇಶೀಯರಿಂದ ಅನುಕರಿಸಿಕೊಂಡುದಾಗಿದೆಯೆಂದು ಮೊದಲಾಗಿ 'ಕಸ್ತೂರಿ' ಮಾಸಪತ್ರಿಕೆಯಲ್ಲಿ ಒಂದು ವಿಶೇಷ ಲೇಖನವಿತ್ತು (1964 ಸಪ್ಟಂಬರ್). ಅದನ್ನೋದಿದಾಗಲೇ ಇಂತಹ ವಿಚಾರ ಇಷ್ಟು ತಿಳಿಯಬೇಕೆಂದು ಮನಗಂಡೆನು; ಈ ವಿಚಾರದ ಸತ್ಯಾಸತ್ಯತೆಯ ಬಗ್ಗೆ ಒಂದೆರಡು ಗ್ರಂಥಗಳನ್ನು ತಿರುವಿದೆನು. ಇದೇ ಸಮಯದಲ್ಲಿ ಬೆಂಗಳೂರು 'ವಿಶ್ವವ.' ವಾರ ಪತ್ರಿಕೆಯಲ್ಲಿ—ಮೂಗುತಿಯು ಹಿಂದೂ ಜನರ ಮೌಲಿಕ ಸೌಂದರ್ಯ ವಸ್ತು (ಸಾಧನ)ಗಳಲ್ಲೊಂದಾಗಿ ಉಲ್ಲೇಖಿಸಿದ ಹಳೆಯ ಕೃತಿಗಳ ವಿಚಾರಗಳನ್ನು ಓದಿದೆನು (ತಾ. 17—12—64ರ ಸಂಚಿಕೆ). ಆದರಿಂದಾಗಿ, ನಾನೂ ಈ ಮೊದಲು ಕಲೆ ಹಾಕಿದ ಒಂದೆರಡು ವಿಚಾರಗಳನ್ನು ವಾಚಕರ ಮುಂದಿಟ್ಟರೆ, ಈ ಬಗ್ಗೆ ಇನ್ನು ಹೆಚ್ಚು ತಿಳಿಯಲೆಡೆಯಾಗುತ್ತದೆಯೆಂದು ಪ್ರಾಂಜಲನಾಗಿ ಭಾವಿಸುವೆನು.

ಮೂಗುತಿ (ಮೂಗು ಬೊಟ್ಟು) ಬೌದ್ಧ ಕಾಲದ ಚಿತ್ರಗಳಲ್ಲಿಲ್ಲ, ಹಾಗೂ ಕಾಳಿದಾಸ ಕೃತಿಗಳಲ್ಲಿ ಹೇಳಿಲ್ಲವೆಂದು ಮುಂತಾಗಿ ಒಂದೆಡೆ ಹೇಳಿದುದು. ಅದರ ಪರಾಮರ್ಶೆಯಾಗಿ ಬರೆದವರು ಲಲಿತಾಸಹಸ್ರನಾಮ, ಕಾಮಾಕ್ಷೀಸ್ತೋತ್ರ, ಆಂಟ ಮಾನಸಪೂಜಾಸ್ತೋತ್ರ, ಲಲಿತಾ ಪಂಚಕ ಸ್ತೋತ್ರ, ಸೌಂದರ್ಯಲಹರೀ, ಶ್ಯಾಮಲಾದಂಡಕ, ಕಾದಂಬರೀ, ಚಂಪೂ ಭಾರತ, ಹಾಗೂ ಋಗ್ವೇದಗಳಿಂದ ಒಂದೊಂದು ಆಧಾರಗಳನ್ನು ಸಂಕಲಿಸಿ, ಮೂಗುತಿಯು ಪ್ರಾಚೀನದಿಂದಲೂ ಬಂದಿರುವ ಹಿಂದೂ ರೀತಿಯ ಆಭರಣವೆಂದು ಸಾರಿದ್ದಾರೆ. ಈ ಬರಹದಲ್ಲಿ ಕನ್ನಡ ಕೃತಿಗಳ ಉಲ್ಲೇಖವಿಲ್ಲದಿರುವುದರಿಂದ ಇಲ್ಲಿ ಒಂದೆರಡು ಕನ್ನಡ ಗ್ರಂಥಸ್ಥ ವಿಚಾರಗಳನ್ನು ತಿಳಿಸಲಾಶಿಸಿಯದೆ. ಈ ಮೊದಲಲ್ಲಿ ಡಾ. ಎಸ್. ಶ್ರೀಕಂಠ ಶಾಸ್ತ್ರಿಯವರು ಬರೆದು ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾದ 'ಭಾರತೀಯ ಸಂಸ್ಕೃತಿ' ಯೆಂಬ ಗ್ರಂಥದ ಎರಡು ಕಡೆಯ ಅನ್ಯಾನ್ಯ ವ್ಯಾಖ್ಯಾತಕರ ವಚನಗಳನ್ನು ಉದ್ಧರಿಸಿ ಬರೆಯಲಾಗಿದೆ:

ಒಂದನೆಯದು, "ಯಾವ ಧರ್ಮಸೂತ್ರದಲ್ಲಿಯೂ ಮಾಂಗಲ್ಯದ ಉಲ್ಲೇಖ ಕಂಡು ಬರುವುದಿಲ್ಲ. ನಾಸಿಕಾಭರಣವು ಕೂಡ ಕ್ರಿ. ಶ. ೧೧ನೆಯ ಶತಮಾನದ ನಂತರ ಆರ್ಯರಲ್ಲಿ ಪ್ರಚಾರಕ್ಕೆ ಬಂದಿತು" (ಪುಟ 184) ಎಂದಿದೆ. ಮಾಂಗಲ್ಯ ವಸ್ತು ಧಾರಣವಿಲ್ಲದೆ, ವಿವಾಹದ ಪೂರ್ಣಾಂಗತೆಯು ಯಾವದಾದರೂ ಧರ್ಮಸೂತ್ರದಲ್ಲಿದೆಯೆಂಬುದಿದರರ್ಥವಾಯಿತು. ಹಾಗಾದರೆ,'ಮಾಂಗಲ್ಯ ತಂತುನಾನೇನ-' ಮೊದಲಾದ ಶ್ಲೋಕವು ಆಶ್ವಲಾಯನ ಸ್ಮೃತಿಯಲ್ಲಿ ಹೇಳಿದ್ದು, ಗ್ರಂಥಕಾರರಿಗೆ ಗೋಚರಿಸಲಿಲ್ಲೆಂದು ತಿಳಿಯುತ್ತದೆ. ಅದು ಮಾತ್ರವಲ್ಲ, ನಾಸಿಕಾಭರಣವು ಕ್ರಿ. ಶ. ೧೧ನೆಯ ಶತಕಕ್ಕೆ ಮೊದಲು ಆರ್ಯರಲ್ಲಿ ಬಳಕೆಯಿತ್ತೆಂದು ಅರ್ಥವಾಗುತ್ತದೆ. ಇದೇ ಗ್ರಂಥದಲ್ಲಿ (ಪುಟ 200) ಮುಂದೊಮ್ಮೆ ಹೇಳಿರುವುದನ್ನು ಇಲ್ಲಿ ಸಂಯೋಜಿಸಬೇಕು. "ಮೂಗು ಬೊಟ್ಟು ಅನಾರ್ಯರಲ್ಲಿಯೂ ವಿದೇಶೀಯರಲ್ಲೂ ಹರಪ್ಪ ಸಂಸ್ಕೃತಿಯಲ್ಲೂ ಕಂಡುಬಂದರೂ, ಶಂಕರಾಚಾರ್ಯರ ಕೆಲವು ಸ್ತೋತ್ರಗಳಲ್ಲಿ ಮುಕುರದ ಉಲ್ಲೇಖವಿದ್ದರೂ ಹನ್ನೆರಡನೆಯ ಶತಮಾನದಿಂದೀಚೆಗೆ ಇದು ಸುಮಂಗಲಿಯ ಲಕ್ಷಣವೆಂದು ಗಣಿಸಲ್ಪಟ್ಟಿತು." ಎಂದು ಮೊದಲಾಗಿದೆ. ಆರ್ಯರ ಗ್ರಂಥಗಳಲ್ಲೊಂದಾಗ ಋಗ್ವೇದದಲ್ಲಿಯೂ ನಾಸಾಭರಣದ ಅರ್ಥ ನಮಗೆ ಕಾಣಬಹುದಾದರೆ, ಮೂಗುತಿಯು ಅನಾರ್ಯರದು, ವಿದೇಶೀಯರದು ಎಂದು ಹೇಳಲು ಬಾರದು. ಕ್ರಿ. ಪೂ. ಶತಕಗಳ ಸಂಸ್ಕೃತಿಯನ್ನು ಹೊಳೆಯಿಸುವ ಹರಪ್ಪ ಸಂಸ್ಕೃತಿಯಲ್ಲೂ ಮೂಗುತಿ (ನಾಸಾಭರಣ) ಕಾಣುವುದನ್ನೂ ವಿದೇಶೀಯರಿಂದಲೇ ಪಡೆದಿರಬೇಕೆನ್ನಲೂ ಎಂದೂ ಆಗದು! ಇನ್ನು ಕನ್ನಡದ ಮಹಾ ಕಾವ್ಯಗಳಲ್ಲಿ ಪ್ರಾಚೀನತಮವೆನಿಸಿದ 'ವಡ್ಡಾರಾಧನೆ'ಯಲ್ಲಿ ಒಂದೆಡೆ ಹೇಳಿದುದು ಹೀಗಿದೆ:

"ಕಟಕ ಕಟಿಸೂತ್ರ ಕುಂಡಲಾಭರಣಂ ಮೊದಲಾಗೊಡೆಯ" ಹದಿನಾರು ಆಭರಣಗಳೆಂದು. ಇಲ್ಲಿ ಎರಡು ಮೂರು ಹೆಸರುಗಳಿದ್ದರೂ ಈ ಹದಿನಾರು ಆಭರಣಗಳೇನಿರಬಹುದೆಂದು ತಿಳಿಯಲಾಶಿಸುವುದು ತಪ್ಪಲ್ಲ!

ರನ್ನ ಮಹಾಕವಿ ರಚಿತ 'ಗದಾಯುದ್ಧ' ಕಾವ್ಯದಲ್ಲಿರುವ ಒಂದು ಪದ್ಯಕ್ಕೆ ಕನ್ನಡದ ಆಚಾರ್ಯರಾದ ಶ್ರೀ ತೀ. ನಂ. ಶ್ರೀಕಂಠಯ್ಯನವರು ಬರೆದ ಟಿಪ್ಪಣಿಯಿದು: 'ಪದಿನಾರಲ್ಲವಲಂಕ್ರಿಯಾ ರಚನೆ ಮುವತ್ತ್ರುನೇಪಥ್ಯ' ಎಂಬುದರ ಬಗ್ಗೆ ಬರೆದ ಟಿಪ್ಪಣಿಯಿದು: ಸ್ತ್ರೀಯರ ಅಲಂಕಾರಗಳು ಹದಿನಾರು: ಸ್ನಾನ, ವಿಲೇಪನ, ವಸ್ತ್ರ, ಶಿರೋಭೂಷಣ, ತಿಲಕ, ಕಜ್ಜಲ (ಕಾಡಿಗೆ), ನಾಸಾಭೂಷಣ, ಮಕರ ಪತ್ರ (ಕೆನ್ನೆಗಳ ಮೇಲೆ ಚಿತ್ರಿಸಿಕೊಳ್ಳುವ ವರ್ಣ ವಿನ್ಯಾಸ), ಕುಂಡಲ, ಹಾರ, ಕೇಯೂರ (ಭುಜಗಳ ತೊಡಿಗೆ), ಮಣಿಭೂಷಣ, ಅಂಗುಲೀಯಕ, ಕಾಂಚೀದಾಮ (ಒಡ್ಯಾಣ), ನೂಪುರ, (ಕಾಲಂದುಗೆ), ಅಲಕ್ತಕ (ಅರಗಿನ ರಸದ ಲೇಪನ). ಕಾವ್ಯದಲ್ಲಿಯ ಅಲಂಕಾರಗಳು ಹದಿನಾರಲ್ಲ, ಮೂವತ್ತಾರು.. ಭರತನ ನಾಟ್ಯ ಶಾಸ್ತ್ರದಲ್ಲಿ ಮೂವತ್ತಾರು "ಲಕ್ಷಣ"ಗಳನ್ನು ಹೇಳಿದೆ; ಇವೇ ರನ್ನನ "ಅಲಂಕಾರ"ಗಳಾಗಿರಬಹುದೇ? (ದು. 91). ಇಲ್ಲಿ ಪ್ರಸ್ತುತ ವಿಚಾರವಾದ ನಾಸಾಭರಣವು ಸ್ತ್ರೀಯರ ಹದಿನಾರು ಆಭರಣಗಳಲ್ಲಿ ಒಂದಾಗಿ ಲೆಕ್ಕಿಸಲ್ಪಟ್ಟಿದೆಯೆಂದು ತಿಳಿಯುತ್ತದೆ. ಅಂದರೆ ರನ್ನನ ಕಾಲದಲ್ಲಿದು ಪ್ರಚುರವಾಗಿತ್ತೆಂದು ಸ್ಪಷ್ಟವಾಗಿದೆ. ಇಲ್ಲಿ ಕೊನೆಯದಾಗಿ, ಕನ್ನಡದ ಹರಿದಾಸಶ್ರೇಷ್ಠರಾದ ಪುರಂದರದಾಸರ ಕನ್ನಡ ಕೀರ್ತನೆಯೊಂದನ್ನು ಉಲ್ಲೇಖಿಸಬಹುದು:

"ಬಂಗಾರ ಬಿಡಬಾರೆ ನಿನಗೊಪ್ಪುವ|
ಬಂಗಾರ ಬಿಡಬಾರೆ||
ಮುತ್ತೈದೆ ತನವೆಂಬ ಮುಖದಲಿ
ಕುಂಕುವ ದ|
ಕಸ್ತೂರಿಯ ಬೊಟ್ಟನಿಡೆ|
ಭಕ್ತಿಯ ತಿಲಕ ಕುಂದು ಬಾರದೆ
ಹಾಗೆ|
ಮುತ್ತಿನ ಮೂಗುತಿಯನಿಡೆ||
ಕರ್ತೃ ಪತಿಯ ಮಾತ ಮೀರಬಾರದು ಎಂಬ|
ಮುತ್ತಿನೋಲೆ ಕೊಪ್ಪನಿಡೆ||
ಹತ್ತು ಮಂದಿಯ ಕೈಪಿ ಹಾದ್ದಾದಿನಿ
ಸಿಕೊಂಬ|
ವಸ್ತ್ರ ಮಕುಟವಿಡೆ ||೧||"

ಕೊನೆಮಾತು: ಪ್ರಾಚೀನ ಗ್ರಂಥರಾಶಿಯಲ್ಲಿ ಕೆಲವನ್ನು ಮಾತ್ರ ನೋಡಿ, ಅವೊಂದು ವಿಷಯದ ಸಿದ್ಧಾಂತಕ್ಕೆ ಬರುವುದು ತೀರಾ ಕೆಡುಕೆನಿಸುವುದು. ಅಂತಹ ಅಪಚಾರವು ಹಿಂದೂ ವಿಚಾರಗಳಿಗೆ ಮಾತ್ರ ಸಲ್ಲವೆಂದು ಆಸ್ತಿಕ ವಾಚಕರು ತಿಳಿಯಬೇಕಾಗಿದೆ. ಪ್ರಾಚೀನ ಸಂಸ್ಕೃತಿಯ ವಿಚಾರಾಂಶಗಳು ಸದಾಚಾರಣೆಯಾಗಬೇಕಾಗಿವೆಯೆಂದು ಪ್ರತ್ಯೇಕವಾಗಿ ವಿಜ್ಞಾಪಿಸುತ್ತಾ, ವಿಶೇಷತಃ ಈ ಬರೆಹಕ್ಕೆ ಓದುಗರು ಗಮನ ಹರಿಯಿಸಲೆಂದು ಹಾರೈಸುತ್ತೇನೆ.

WITH THE BEST COMPLIMENTS OF THE SEASON

From

JYOTHI TALKIES

MANGALORE

Coming

BERETHA JEEVA (Kannada)

ENGAL VEETU MAPILLE (Tamil) (Colour)



INDIA'S MOST DURABLE & ECONOMICAL

DIESEL TRUCK & BUS CHASSIS....

TATA - MERCEDES - BENZ

DIESEL TRUCKS & BUS CHASSIS

Rs. 250

GETS YOU A NEW 1964

himalux

By a HIMALUX the refrigerator— you can afford

HIMALUX is the registered trade mark of Himalux Private Limited

Manufactured by
VINAR LTD
Calcutta-16

ON HIRE-PURCHASE

Himalux, the quality refrigerator, can be yours now for a down payment of only Rs. 250 (plus local taxes). Pay the balance in 12 monthly instalments of Rs. 87 - 50 nP. Lose no time—check with your nearest Himalux dealer today.

Telephone 362 & 186 Telegrams 'ARVIND'

ARVIND MOTORS

BALMATTA ROAD : MANGALORE 1.

ಪ್ರಕೃತಿ ದೇವಿಯ ಮಡಿಲಿನ ಸುಂದರ ತಾಣ

ಅಭಿವೃದ್ಧಿ ಪಥದತ್ತ ಸಾಗುತ್ತಿರುವ ಈ ಕ್ಷೇತ್ರ

ನಿಸರ್ಗ ಸುಂದರ ಕ್ಷೇತ್ರ

ಪರಶುರಾಮ ಸೃಷ್ಟಿಯ ಏಳು ಪುಣ್ಯ ಕ್ಷೇತ್ರಗಳಲ್ಲಿ ಒಂದೆನಿಸಿರುವ ಶ್ರೀ ಸುಬ್ರಹ್ಮಣ್ಯ ಕ್ಷೇತ್ರವು ಭಕ್ತ ಜನರ ಆದರಕ್ಕೆ ಪಾತ್ರವಾದ ಒಂದು ಸುಂದರವಾದ ಕ್ಷೇತ್ರ. ಭಕ್ತ ಕೋಟಿಯ ಮನಸ್ಸಿನ ಕ್ಲೇಶಗಳನ್ನು ದೂರ ಮಾಡಿ, ಅವರ ಮನದ ಅಭೀಷ್ಟಗಳನ್ನು ನೆರವೇರಿಸುವ ಸ್ವಾಮಿ ಸುಬ್ರಹ್ಮಣ್ಯನು ನೆಲೆಸಿಂತಿರುವ ಈ ಪುಣ್ಯ ಭೂಮಿ ಭಕ್ತ ಜನರ ಕಣ್ಮನಗಳನ್ನು ತಣಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಪಟ್ಟಗಳ ಸಾಲಿನ ಬುಡದಲ್ಲಿರುವ ಈ ಕ್ಷೇತ್ರವು ನಿಸರ್ಗ ಸುಂದರವೆನಿಸಿದೆ. ಪ್ರಕೃತಿ ಮಾತೆಯು ವರದ ಹಸ್ತದಿಂದ ಹರಸಿರುವ ಮಲೆನಾಡಿನ ಸೆರಗಲ್ಲಿರುವ ಈ ಕ್ಷೇತ್ರದ ದರ್ಶನವು ನಿಸರ್ಗ ಪ್ರೇಮಿಗಳಿಗೆ ರಸದೌತಣವನ್ನಿತ್ತರೆ, ಭಕ್ತರ ಮನಸ್ಸಿಗೆ ಶಾಂತಿ ಹಾಗೂ ಸಮಾಧಾನವನ್ನೀಯುವುದು.

ಕಾರ್ತಿಕೇಯನ ಕೃಪಾಭೂಮಿ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಮೂಲ ಹೆಸರು ಕುಕ್ಕೆ ಪಟ್ಟಣ. ಈ ಸ್ಥಳಕ್ಕೆ ಸಂಬಂಧಿಸಿದ ಪುರಾಣ ಕಥೆಗಳು ಅತಿ ಮನೋಹರವಾಗಿವೆ. ಸ್ಥಳ ಪುರಾಣವು ಮನೋರಂಜಕವಾಗಿರುವಂತೆ ಭಕ್ತಿ ಭಾವವನ್ನು ಉದ್ರೇಕಿಸುವಂತಹುದೂ ಆಗಿವೆ. ಸರ್ಪರಾಜನಾದ ವಾಸುಕಿಯು ಗರುಡ ಬಾಧೆಯನ್ನು ತಡೆಯಲು ಇಲ್ಲಿಗೆ ಬಂದು ಶಿವನನ್ನು ಕುರಿತು ತಪಸ್ಸು ಮಾಡಿದನೆಂದೂ, ಇವನ ತಪಸ್ಸಿಗೆ ಮೆಚ್ಚಿದ ಶಿವನು ವಾಸುಕಿಗೆ ಪ್ರತ್ಯಕ್ಷನಾಗಿ, ತಾರಕಾಸುರನ ವಧೆಯ ಬಳಿಕ ಕುಮಾರ ಸ್ವಾಮಿಯು ಈ ಕ್ಷೇತ್ರಕ್ಕೆ ಆಗಮಿಸುವ ಸಂದರ್ಭ ಕುಮಾರ ಸ್ವಾಮಿಯ ಕಲಾಂಶಭೂತನಾಗಿ ವಾಸುಕಿಯು ಲೋಕಪೂಜ್ಯನಾಗುವನೆಂದು ಅನುಗ್ರಹಿಸಿದನೆಂದು ಹೇಳುತ್ತಾರೆ.



ಬ್ರಹ್ಮರಥ



ನಯನ ಮನೋಹರ ಹೂವಿನ ತೇರು.

ಶಿವನ ಹೇಳಿಕೆಯಂತೆ ಕುಮಾರ ಸ್ವಾಮಿಯು ಸಮೀಪದ ಕುಮಾರ ಪರ್ವತದಲ್ಲಿ ತಾರಕಾಸುರನನ್ನು ವಧಿಸಿದ ಬಳಿಕ ಕುಕ್ಕೆ ಪಟ್ಟಣಕ್ಕೆ ಆಗಮಿಸಿದಾಗ, ವಾಸುಕಿಯ ಆಪೇಕ್ಷೆಯಂತೆ ಒಂದಂಶದಿಂದ ದೇವ ಸೇನಾ ಸಮೇತನಾಗಿ ಆತನನ್ನು ನಿತ್ಯ ಸನ್ನಿಹಿತನಾಗಿ ಅಲ್ಲಿಯೇ ವಾಸ ಮಾಡಿಕೊಂಡಿರುವನೆಂಬ ಪ್ರತೀತಿ ಇದೆ.

ಮಹಿಮಾ ಪೂರ್ಣ ಪ್ರಸಾದ

ಈ ಕ್ಷೇತ್ರದಲ್ಲಿ ಹರಿಯುವ ಕುಮಾರಧಾರೆಯು ಪಾವನ ತೀರ್ಥವೆನಿಸಿದೆ. ಶ್ರೀ ಸುಬ್ರಹ್ಮಣ್ಯಕ್ಷೇತ್ರದ ಪ್ರಸಾದವು ಎಲ್ಲಾ ತರದ ಸರ್ಪದೋಷವಿಷಬಾಧೆ, ಅಪಸ್ಮಾರ, ಚರ್ಮವ್ಯಾಧಿ ಹಾಗೂ ಇತರ ವ್ಯಾಧಿಗಳಿಗೂ ದಿವ್ಯ ಹಾಗೂ ಸಿದ್ಧೌಷಧ ಎಂಬ ಭಾವನೆ ಇದೆ. ಪರಶುರಾಮನು ಇಲ್ಲಿನ ಧಾರಾತೀರ್ಥದಲ್ಲಿ ಮಿಂದು ತನ್ನ ಮಾತೃ ಹತ್ಯಾ ದೋಷದಿಂದ ವಿಮುಕ್ತನಾದನೆಂದೂ, ಅಸಿತ ಮಹಾ ಮುನಿಯ ಶಾಪದಿಂದಾಗಿ ರಾಕ್ಷಸಿಯಾಗಿ ಹುಟ್ಟಿದ ಅದಿತಿಯು ಕೂಡಾ ಧಾರಾತೀರ್ಥದಲ್ಲಿ ಸ್ನಾನ ಮಾಡಿ ಸುಬ್ರಹ್ಮಣ್ಯನ ದರ್ಶನ ಮಾಡಿದೊಡನೆ ರಾಕ್ಷಸ ರೂಪವನ್ನು ತೊರೆದು ಪತಿ ಕಶ್ಯಪರನ್ನು ಸೇರಿದಳೆಂದೂ ಐತಿಹ್ಯವಿದೆ. ಇಲ್ಲಿ ದೊರೆಯುವ ಅಮೂಲ್ಯವಾದ ಮೂಲ ಮೃತ್ತಿಕೆಯನ್ನು ಮೈಗೆ ಲೇಪಿಸಿ ತಮ್ಮ ರೋಗರುಜಿನಗಳಿಂದ ಮುಕ್ತರಾಗಿ, ಸುಖ ಪಡೆದ ಭಕ್ತ ಕೋಟಿ ಅಸಂಖ್ಯಾತ. ಇದೇ ನಂಬಿಕೆ ಇಂದಿಗೂ ಉಳಿದುಕೊಂಡು ಬಂದಿದೆ.

ಪಾಪ ವಿಮೋಚಕ 'ಮಡೆ ಸ್ನಾನ'

ಸುಬ್ರಹ್ಮಣ್ಯ ಕ್ಷೇತ್ರದ ಮಡೆಸ್ನಾನವು ಇಂದಿಗೂ ಭಕ್ತಾದಿಗಳು ಸಲ್ಲಿಸುವ ಅತ್ಯಪೂರ್ವದ ಸೇವೆ. ಇಲ್ಲಿಗೆ ಸಂದರ್ಶಿಸುವ ಎಲ್ಲಾ ಭಕ್ತರು ಧಾರಾ ತೀರ್ಥದಲ್ಲಿ ಮಿಂದು, ಆದಿ ಸುಬ್ರಹ್ಮಣ್ಯನ ದರ್ಶನ ಪಡೆದು, ಬಳಿಕ 'ಅನ್ನದಾನಿ ಶ್ರೀ ಸುಬ್ರಹ್ಮಣ್ಯೇಶ್ವರನ ಪಾದಕ್ಕೆ ಗೋವಿಂದಾ ...' ಎಂದು ದೇವರ ನಾಮದ ಪಾವನ ಸ್ಮರಣೆ

ಪಾಲಕಿ ಉತ್ಸವದ ಒಂದು ನೋಟ.



ಆದಿ ಸುಬ್ರಹ್ಮಣ್ಯ ಮತ್ತು ಅಲ್ಲಿಗೆ ಹೋಗುವ ದಾರಿ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ
ದರ್ಶನ ಭಕ್ತರೆಲ್ಲರಿಗೆ ಚೇತೋಹಾರಿಯಾಗಿದೆ

ಪೂರ್ವ ಶಾಸ್ತ್ರ ಮಡೆಸ್ನಾನ ಪೂರ್ವಶಾಸ್ತ್ರಿ. ದ್ವಾಪರ ಯುಗದಲ್ಲಿ ಮುನಿಯೊಬ್ಬನ ಶಾಪದಿಂದ ಕುಷ್ಠರೋಗದಿಂದ ಪೀಡಿತನಾದ ಕೃಷ್ಣ ಪುತ್ರನಾದ ಸಾಂಬನು ಇದೇ ತೀರ್ಥದಲ್ಲಿ ಮಿಂದು 'ಮಡೆಸ್ನಾನ'ವನ್ನು ಮಾಡಿ ಶಾಪ ವಿಮೋಚನೆ ಹೊಂದಿದನೆಂಬ ಕಥೆಯೂ ಪ್ರಚಾರದಲ್ಲಿದೆ ಇಂದಿಗೂ ಇತರ ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ಮಡೆಸ್ನಾನವನ್ನು ಮಾಡುವ ಸಂಪ್ರದಾಯ ನಡೆದುಕೊಂಡು ಬಂದಿದೆ ಅದೊಂದು ವಿಧದ ಹರಕೆಯಾಗಿಯೂ ಇಂದಿಗೂ ಆಚರಣೆಯಲ್ಲಿದೆ.

ನೋಡಿ ಮುಗಿಯದ ಪ್ರೇಕ್ಷಣೀಯ ಸ್ಥಳಗಳು

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಸುಬ್ರಹ್ಮಣ್ಯ ದೇವಾಲಯವೇ ನೋಡಬೇಕಾದುದು. ಆದರೆ, ಈ ಕ್ಷೇತ್ರದಲ್ಲಿ ನೋಡಿ ಮುಗಿಯದಷ್ಟು, ಸುಂದರವಾದ, ಕುತೂಹಲಕಾರಿಯಾದ ಐತಿಹ್ಯಗಳಿಂದ ಕೂಡಿದ ಇತರ ಪ್ರೇಕ್ಷಣೀಯ ಸ್ಥಳಗಳಿವೆ ಗರ್ಭಗೃಹದ ಪಶ್ಚಿಮದಲ್ಲಿರುವ 'ಶುಕ್ತಿ ಲಿಂಗ'ಗಳ; ಷಣ್ಮುಖನು ತಾರಕಾಸುರನನ್ನು ಸಂಹರಿಸಿದ ಉತ್ಸಾಹದಲ್ಲಿ ಸ್ಥಾಪಿಸಿದ ಕಪಾಲೇಶ್ವರ ಅಥವಾ ಭೈರವ ದೇವರ ಗುಡಿ, ಒಳ ಪ್ರಾಕಾರದ ಈಶಾನ್ಯ ಭಾಗದಲ್ಲಿರುವ ಉಮಾ ಮಹೇಶ್ವರ ವಿಗ್ರಹಗಳು; ಒಳ ಅಂಗಣದ ಆಗ್ನೇಯ ದಿಕ್ಕಿನಲ್ಲಿರುವ ಶ್ರೀ ಸಂಪುಟ ನರಸಿಂಹ ದೇವರ ಗುಡಿ, ಸುಬ್ರಹ್ಮಣ್ಯ ದೇವರ ಮುಂಭಾಗದ ಮಹಾದ್ವಾರದ ಬಳಿ ಇರುವ ಬಲ್ಲಾಳ ರಾಯನ ವಿಗ್ರಹ; ಶ್ರೀ ಸುಬ್ರಹ್ಮಣ್ಯ ಮಠ, ಶೃಂಗೇರಿ ಮಠ ಇವುಗಳೆಲ್ಲ ಯಾತ್ರಿಕರು ನೋಡಲೇ ಬೇಕಾದುವುಗಳು. ಇವುಗಳು ಮಾತ್ರವಲ್ಲದೆ ಇನ್ನೂ ಹಲವಾರು ನಿಸರ್ಗ ಸುಂದರ, ಪುರಾಣ ಪ್ರಸಿದ್ಧ ಸ್ಥಳಗಳೂ ಶ್ರೀ ಕ್ಷೇತ್ರದಲ್ಲಿ ಸುತ್ತಮುತ್ತಲೂ ಇವೆ

ಬಿಲದ್ವಾರ ಮತ್ತು ಕುಮಾರ ಪರ್ವತ

ಕುಮಾರಧಾರೆಗೆ ಹೋಗುವ ದಾರಿಯಲ್ಲಿ ಮಾರ್ಗದ ತೆಂಕು ದಿಕ್ಕಿನಲ್ಲಿ ಅರ್ಧ ಮೈಲಿ ದೂರದಲ್ಲಿ ಬಿಲ ದ್ವಾರವಿದೆ ಇಲ್ಲಿ ವಾಸುಕಿಯು ತಲೆಮರಸಿ ಕೊಂಡಿದ್ದನೆಂಬ ನಂಬಿಕೆ ಇದೆ ಗೋಗರ್ಭವೂ ಒಂದು ತೀರ್ಥವೂ ಇಲ್ಲಿವೆ ಇಲ್ಲಿನ ತೀರ್ಥ ಪ್ರಾಶನ ಮಾಡದೆ ಮರಳಬಾರದೆಂಬ ನಂಬಿಕೆ ಇಂದಿಗೂ ಇದೆ



ನೌಕಾ ವಿಹಾರ

ಸಾಹಸಿಗಳಿಗೊಂದು ಆಹ್ವಾನದಂತೆ ಇರುವುದು ಸುಬ್ರಹ್ಮಣ್ಯ ಕ್ಷೇತ್ರವನ್ನು ಆವರಿಸಿಕೊಂಡಿರುವ ೪೦೦೦ ಅಡಿ ಎತ್ತರದ ಕುಮಾರ ಪರ್ವತ ದೇವಸ್ಥಾನದಿಂದ ಇಲ್ಲಿಗೆ ಸುಮಾರು ಆರು ಮೈಲಿ ದೂರ ಇದೆ ಪರ್ವತವನ್ನು ಹತ್ತುವ ಸಾಹಸಿಗಳಿಗೆ ದಾರಿಯು ದುರ್ಗಮವಾಗಿದೆ ಈ ಪರ್ವತವು ನೋಟಕ್ಕೆ ಒಂದೇ ಶಿಖರದಂತೆ ಕಂಡರೂ ಇದರಲ್ಲಿ ಮೂರು ಶಿಖರಗಳಿವೆ ಏಳು ಹೆಡೆಗಳ ಸರ್ಪದಂತಿರುವ ಶೇಷ ಪರ್ವತವೊಂದು, ಸಿದ್ಧ ಪರ್ವತವಿನ್ನೊಂದು, ಕುಮಾರ ಪರ್ವತವು ಮತ್ತೊಂದು

ಸದಾಕಾಲ ಜರಗುತ್ತಿರುವ ಉತ್ಸವ, ಪೂಜೆಗಳು

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ವರ್ಷವಿಡೀ ಏನಾದರೂ ಒಂದು ಉತ್ಸವ ಜರಗುತ್ತಾ ಇರುತ್ತದೆ ಆಗರೆ ಚೈತ್ರಮಾಸದಿಂದ ಭಾದ್ರಪದ ಮಾಸದ ವರೆಗೆ ಉತ್ಸವಗಳು ನಡೆಯುವುದು ಕಡಿಮೆ. ಸುಬ್ರಹ್ಮಣ್ಯ ಷಷ್ಠಿಯು ಇಲ್ಲಿಯ ಪ್ರಸಿದ್ಧ ಉತ್ಸವ ಇದಲ್ಲದೆ ಇನ್ನು ಹತ್ತು ಹಲವಾರು ಉತ್ಸವಗಳು ಜರಗುತ್ತವೆ ಅಲಂಕರಿಸಿದ ರಥಗಳು ಮಾತ್ರವಲ್ಲದೆ, ಶೇಷವಾಹನ, ಅಶ್ವವಾಹನ, ಮಯೂರ ವಾಹನ, ಪುಷ್ಪ ರಥ, ಭಂಡಿ ಮತ್ತು ಪಾಲಕಿಗಳಲ್ಲಿಯೂ ವಿಜೃಂಭಣೆಯಿಂದ ಉತ್ಸವಗಳು ಜರಗುತ್ತವೆ ಸರ್ವಧರ್ಮ ಸಮ್ಮೇಳನವು ಕೂಡಾ ವರ್ಷಕ್ಕೊಮ್ಮೆ ಜರಗುತ್ತಿದೆ ದೇವಾಲಯದಲ್ಲಿ ಭಕ್ತರಿಗೆ ಅನುಕೂಲವಾಗುವಂತೆ ವಿವಿಧ ಸೇವೆಗಳನ್ನು ಮಾಡಿಸುವ ಅವಕಾಶವನ್ನು ಕೂಡಾ ಕಲ್ಪಿಸಿಕೊಡಲಾಗಿದೆ ಭಕ್ತ ಜನರು ತಮ್ಮ ಹರಕೆಯನ್ನು ಹಲವು ವಿಧದಲ್ಲಿ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾಗುತ್ತಿದ್ದಾರೆ

ಸುಧಾರಣಾ ಪಥದಲ್ಲಿ

ಹೊಯ್ಸಳ ಬಲ್ಲಾಳ ಅರಸರ ಆಡಳಿತೆಯ ಬಳಿಕ ಈ ದೇವಾಲಯದ ಆಡಳಿತೆ ಶಿಥಿಲವಾಗುತ್ತಾ ಬಂತು, ಅವ್ಯವಸ್ಥೆಯು ದೆಸೆಯಿಂದ ಜನವಸತಿ ಕಡಿಮೆಯಾಗಿ, ಮಲೇರಿಯಾ ರೋಗ ಹಬ್ಬಿದ ಕಾಡು ಒಂದಿತ್ತು ಶ್ರೀ ಕ್ಷೇತ್ರದ ಆಡಳಿತೆಯು ಕಡೆಗಣಿಸಲ್ಪಟ್ಟಿತ್ತು. ಭಕ್ತಾದಿಗಳಿಗೆ ಹೆಚ್ಚಿನ ಅನುಕೂಲತೆ ಇಲ್ಲದೆ, ಉತ್ತಮ ಸಂಚಾರದ ಸೌಕರ್ಯವಿಲ್ಲದೆ, ಈ ಕ್ಷೇತ್ರವು ಸಂದರ್ಶನಕ್ಕೆ ಕಷ್ಟಸಾಧ್ಯವೆನಿಸಿದ ಪರಿಸ್ಥಿತಿ ಇತ್ತು. ಆದರೆ ಇತ್ತೀಚಿನ ಮೂವತ್ತು ವರ್ಷಗಳಲ್ಲಿ ಧರ್ಮದರ್ಶಿಗಳ ಆಡಳಿತ ಆರಂಭವಾದಂದಿನಿಂದ ಈ ಕ್ಷೇತ್ರದ ಚಿತ್ರ ಬದಲಾಗುತ್ತಾ ಬಂದಿದೆ. ಸರ್ವವಿಧದಿಂದಲೂ ಈ ಕ್ಷೇತ್ರವನ್ನು ಒಂದು ಆಕರ್ಷಕ ಯಾತ್ರಾ ಸ್ಥಳವನ್ನಾಗಿ ಮಾಡುವ ಪ್ರಯತ್ನ ಅವಿರತವಾಗಿ ಸಾಗುತ್ತಾ ಬಂದಿದೆ ಯಾತ್ರಿಕರ ಹಿತಸೌಲಭ್ಯಗಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಧರ್ಮಛತ್ರಗಳ ರಚನೆ, ಸಂಚಾರಕ್ಕೆ ಅಡ್ಡಿಯನ್ನೊಡ್ಡುತ್ತಿದ್ದ ನದಿಗಳಿಗೆ ಸೇತುವೆಗಳ ನಿರ್ಮಾಣ, ಮುಖ್ಯವಾದ ಮಾರ್ಗಗಳ ಅಭಿವೃದ್ಧಿ, ಕ್ಷೇತ್ರದೊಳಗಣ ಸ್ಥಳಗಳಿಗೆ ಸರಿಯಾದ ಮಾರ್ಗ ರಚನೆ ಇತ್ಯಾದಿ ಅನೇಕ ಕಾರ್ಯಗಳು ಇತ್ತೀಚಿನ ವರುಷಗಳಲ್ಲಿ ಸರಕಾರದ ಸಹಾಯ, ಭಕ್ತ ಜನರ ಉದಾರತೆ ಹಾಗೂ ಧರ್ಮದರ್ಶಿಗಳ ಕರ್ತವ್ಯ ಪರಾಯಣತೆಯಿಂದ ಕೈಗೂಡಿವೆ. ಮಲೇರಿಯಾ ರೋಗದ ನಿರ್ಮೂಲನೆ ಬಹುಮಟ್ಟಿಗೆ ಆಗಿದ ಜನವಸತಿಯು ಇಲ್ಲಿ ಹೆಚ್ಚಾಗಿದೆ ಒಂದು ಹೈಸ್ಕೂಲು ಕೂಡಾ ಸ್ಥಾಪಿಸಲ್ಪಟ್ಟಿದೆ.

ಬಹು ವಿಧದ ಆಶೋತ್ತರಗಳು

ಶ್ರೀ ಕ್ಷೇತ್ರದ ಧರ್ಮದರ್ಶಿಗಳು ಇಷ್ಟರಿಂದಲೇ ತೃಪ್ತರಾಗಿಲ್ಲ ಅವರು ಇನ್ನೂ ಹತ್ತಾರು ಆಶೋತ್ತರಗಳನ್ನು ಇರಿಸಿಕೊಂಡು ಅವುಗಳು ಸಿದ್ಧಿಸುವುದಕ್ಕಾಗಿ ದುಡಿಯುತ್ತಿದ್ದಾರೆ ಈ ಕ್ಷೇತ್ರಕ್ಕೆ ಕಡಿಯುವ ನೀರಿನ ಪೂರೈಕೆಯ ಯೋಜನೆ ಅಂತಹ ಆಶೆಗಳಲ್ಲಿ ಒಂದು ತೇರು ಬೀದಿಯಿಂದ ದೇವಸ್ಥಾನವನ್ನು ಪ್ರವೇಶಿಸುವಲ್ಲಿ ಭವ್ಯತ ಗೋಪುರ ರಚನೆ ಮತ್ತು ಕುಮಾರ ಪರ್ವತಕ್ಕೆ ಹೋಗುವ ಮಾರ್ಗ ರಚನೆ ಇವುಗಳೂ ಆಗ ಬೇಕಾದ ಅನುಕೂಲತೆಗಳು ಅಧಿಕ ಸಂಖ್ಯೆಯ ಛತ್ರಗಳ ನಿರ್ಮಾಣ ಯಾತ್ರಿಕರಿಗೆ ಇನ್ನಿತರ ಅನುಕೂಲತೆಗಳನ್ನು ಒದ



ಬ್ರಹ್ಮೋತ್ಸವದ ಸಂದರ್ಭ ದೃಶ್ಯ

ಅವಭೃಥ ಸ್ನಾನ

ಆಡಳಿತ ಮಂಡಳಿಯ ಅಧ್ಯಕ್ಷ
ಕೆ. ಸುಬ್ರಹ್ಮಣ್ಯ ಗೌಡರು.

ಗಿಸುವ ಆಶಯನ್ನು ಅವರು ಇರಿಸಿ ಕೊಂಡಿದ್ದಾರೆ. ಭಕ್ತ ಜನರ ಸಹಾಯ ಹಾಗೂ ಪ್ರೋತ್ಸಾಹವಿದ್ದರೆ ಈ ಕಾರ್ಯಗ

ಟ್ರಸ್ಟಿಗಳಾದ ಬಿ. ನಾರಾಯಣ ಶೆಟ್ಟಿ.

ಕೇನೂ ಕೈಗೂಡದವುಗಳಲ್ಲ. ಕ್ಷೇತ್ರದ ಅಭಿವೃದ್ಧಿಗಾಗಿ ಮೆನೇಜರ್ ಶ್ರೀ ಎಸ್. ರಾಮಕೃಷ್ಣ ಭಟ್ಟರು ದಕ್ಷತೆಯಿಂದ ಶ್ರಮಿಸುತ್ತಿದ್ದಾರೆ.

ಜನಸೇವೆಯೇ ಜನಾರ್ಧನ ಸೇವೆ ಎಂಬ ಆದರ್ಶ

ಯಾತ್ರಿಕರಿಗೆ ಬೇಕುಬೇಕಾದ ಸೌಲಭ್ಯಗಳನ್ನು ಒದಗಿಸುವುದರ ಜತೆಗೆ, ಕ್ಷೇತ್ರವನ್ನು ಸುಧಾರಿಸುವುದಕ್ಕಾಗಿ ದೇವಾ

ಟ್ರಸ್ಟಿಗಳಾದ ಎಚ್. ಎನ್. ಎ. ಗೌಡ.

ಲಯಗಳ ಉತ್ಪನ್ನವನ್ನು ವಿನಿಯೋಗಿಸುವುದು ಒಂದು ಉತ್ತಮ ಆದರ್ಶ. ಅದರ ಜತೆಗೇ ವಿದ್ಯಾಲಯಗಳ ಸ್ಥಾಪನೆ, ವಿದ್ಯಾಪ್ರಸಾರ, ಕಲೆ ಸಾಹಿತ್ಯಗಳ ಅಭಿವೃದ್ಧಿ, ಅನಾಥಾಶ್ರಮಗಳ ಸ್ಥಾಪನೆ ಹಾಗೂ ಇನ್ನಿತರ ಹತ್ತು ಹಲವಾರು ಸಾರ್ವಜನಿಕ ಕಾರ್ಯಕ್ರಮಗಳನ್ನು ಹರಿಸಿಕೊಂಡು ಸುಸೂತ್ರವಾಗಿ ಕಾರ್ಯವೆಸಗುತ್ತಿರುವ ದೇವಾ

ಟ್ರಸ್ಟಿಗಳಾದ ಬಿ. ಬಾಲಕೃಷ್ಣ ಶೆಟ್ಟಿ.

ಲಯಗಳು ಆಧುನಿಕತೆಗೆ ಒಪ್ಪುವ ಬಾರಿಯನ್ನು ತುಳಿಯುತ್ತಿರುವುದು ಸಂತೋಷದ ಸಂಗತಿ.

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ದೇವಾಲಯದ ಆಡಳಿತಗಾರರು ಧರ್ಮಾಧಿಕಾರಿಗಳಾದರೂ ಆಧುನಿಕ ಕಾಲಕ್ಕೊಪ್ಪುವ, ದೇಶದ ಅಭಿವೃದ್ಧಿಗೆ ನೆರವಾಗುವ ಯೋಗ್ಯವಾದ ಉದ್ದೇಶ ಹಾಗೂ ಧ್ಯೇಯಗಳನ್ನಿರಿಸಿಕೊಂಡು ದುಡಿಯುತ್ತಿರುವುದು ಹೆಮ್ಮೆಯ ಸಂಗತಿ. ಈ ತರದ ಬದಲಾದ ಭಾವನೆ ನಮ್ಮ ಎಲ್ಲಾ ತೀರ್ಥಕ್ಷೇತ್ರದ ಆಡಳಿತದವರಲ್ಲೂ ಬಂದರೆ, ಆಗ ದೇಶಾಭಿವೃದ್ಧಿಯ ಕಾರ್ಯವು ಅಷ್ಟು ಕಷ್ಟಕರವಾಗಲಾರದು. ಪ್ರಜಾಪ್ರಭುತ್ವದ ಇಂದಿನ ದಿನಗಳಲ್ಲಿ ಜನಹಿತ ಸಾಧನೆಯನ್ನೇ ಜನಾರ್ಧನನ ಸೇವೆಯೆಂದು ಪರಿಗಣಿಸುವ ಇಂತಹ ಕ್ಷೇತ್ರಗಳ ಸಂಖ್ಯೆ ಹೆಚ್ಚಬೇಕು. ಅಂದರೆ ದೇಶಕಟ್ಟುವುದು, ಅಭಿವೃದ್ಧಿ ಸಾಧಿಸುವುದು ಸುಲಭವಾದೀತು.

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಮಹಿಮೆ ಅಪಾರವಾದುದು. ಪ್ರಕೃತಿ ಮಾತೆಯ ಮಡಿಲಲ್ಲಿ, ಮಲೆನಾಡಿನ ಸೆರಗಲ್ಲಿ, ಪರ್ವತದ ಬುಡದಲ್ಲಿರುವ ಈ ಕ್ಷೇತ್ರವು ಇನ್ನೂ ಹೆಚ್ಚಿನ ಜನಾದರಣೆಯನ್ನು ಗಳಿಸುವುದೆಂಬುದರಲ್ಲಿ ಅನುಮಾನವಿಲ್ಲ. ಶ್ರೀ ಕ್ಷೇತ್ರದ ಅಧಿದೇವತೆ ಕುಮಾರ ಸ್ವಾಮಿಯ ಅನುಗ್ರಹ ಎಲ್ಲರ ಮೇಲೂ ಆಗಿ, ಶ್ರೀ ಕ್ಷೇತ್ರ ಭಾರತದಲ್ಲೇ ಮಹತ್ವದ್ದಾಗಲೆಂದು ಹಾರೈಸುತ್ತೇವೆ.

ಟ್ರಸ್ಟಿಗಳಾದ ಡಿ. ಕೆ. ಹೆಬ್ಬಾರ್.

ಸುಬ್ರಹ್ಮಣ್ಯಕ್ಷೇತ್ರವನ್ನು ಸಂದರ್ಶಿಸಿ ಪುಣ್ಯಭಾಗಿಗಳಾಗಿರಿ

With best compliments from

M/s B. NARSAPPA & SONS

MANGALORE

Proprietors of:

1. MEHRU LUNCH HOME
2. B. N. S. MOTOR SERVICE
3. B. N. S TRANSPORT LORRY SERVICE
4. MEHRU COLD HOUSE

Also shortly opening the newest and most delightful restaurant in the town

'SUJATA'

(Opposite the Kodialbail Church, MANGALORE)

With Best Compliments from

CANARA JEWELLERS,

MANGALORE

&

PALKE INDUSTRIES,

G. H. School Road,

MANGALORE.

Telegrams: "Palkebros" *Phone*: 356, 356A & 855

Phone. 321.

For your requirements for

Wedding etc. functions

Please step in

TEXTILE CENTRE

Opposite Canara Jewellers,

Hampankatta, Mangalore-1.



FINOLEX

P.V.C. Cables at their best...

A superb blend of manufacturing skill, quality materials, rigorous testing...that is FINOLEX, the finest in P.V.C. Insulated Electric Cables.

For domestic, industrial and automobile uses choose from:

- House Wiring Cable
- Industrial Cable
- Automobile Cable
- Telecommunication Cable
- Radio & Transmitter Cable

Cables for India's light and power.

NOW ON RATE CONTRACT WITH D. G. S. & D.

INDIAN CABLE INDUSTRIES

Bombay-Poona Road, Pimpri (Dist. Poona)

WITH THE COMPLIMENTS

OF

BHARAT COATED FABRICS

FACTORY

POWAI POINT
AGRA ROAD, VIKHROLI,
BOMBAY-79
Ph: 581369

OFFICE

BOTAWALA BLDG., III FLOOR
8, HORNIMAN CIRCLE, FORT
BOMBAY-1
Ph. 253340

CABLE
TEXPLASTIC

MANUFACTURERS OF THE POPULAR

KESARI BRAND PVC LEATHER CLOTH

ಭಾರತ್ ಕೋಟೆಡ್ ಫೆಬ್ರಿಕ್ಸ್

ಇವರ

ಅಭಿನಂದನೆಗಳು

ಫೇಕ್ಟರಿ

ಪವಾಯಿ ಪ್ರಾಯಿಂಟ್
ಆಗ್ರಾ ರೋಡು, ವಿಖರೋಲಿ
ಬೊಂಬಾಯಿ — 79
ಫೋನ್ : 581369

ಆಫೀಸು

ಬೊಟಾವಾಲಾ ಬಿಲ್ಡಿಂಗ್, III ಫ್ಲೋರ್
8, ಹೊರ್ನಿಮೇನ್ ಸರ್ಕಲ್, ಫೋರ್ಟ್
ಬೊಂಬಾಯಿ — 1
ಫೋನ್ : 253340

ಕೇಬಲ್
ಟೆಕ್ಸ್‌ಪ್ಲಾಸ್ಟಿಕ್

ಜನಪ್ರಿಯವಾದ ಕೇಸರಿ ಬ್ರಾಂಡ್ ಪಿವಿಸಿ ಲೆದರ್ ಕ್ಲೋತ್

ತಯಾರಿಸುವವರು

ಒಂದು ಭಾಷೆ, ಒಂದು ಲಿಪಿ

(ಹದಿನೇಳನೇ ಪುಟದಿಂದ)

ಗಿರುವ ಮೂಲಭೂತ ಐಕ್ಯತೆಯನ್ನು ಪರೀಕ್ಷಿಸ ಬೇಕಾದರೆ ಸುಲಭವಾದ ಒಂದು ಪ್ರಯೋಗ ಮಾಡಿ ನೋಡಬೇಕು. ಕನ್ನಡದ ಪ್ರಕರಣವೊಂದನ್ನು ದೇವನಾಗರಿ ಲಿಪಿಯಲ್ಲಿ ಬರೆದು ಕನ್ನಡೇತರರಿಗೆ ಓದಲು ಕೊಡಲಾಯಿತು. ಅದನ್ನು ಈ ಕೆಳಗಿನ ಹನ್ನೊಂದು ಭಾಷೆಗಳ ಜನರು ಅರ್ಥ ಮಾಡಿಕೊಂಡಂತೆ ಅಂಕಗಳನ್ನು ಕೊಡಲಾಗಿದೆ:

ಭಾಷೆಗಳು		ಶೇಕಡಾ ಅಂಕ
ತೆಲುಗು	.. ...	60
ತಮಿಳು	....	55
ಮಲಯಾಳಿ	....	50
ಮರಾಠಿ	......	45
ಗುಜರಾಥಿ	....	35
ಹಿಂದಿ	....	25
ಬಂಗಾಳಿ	... .	20
ಅಸಾಮಿಯಾ	....	20
ಒರಿಯಾ	....	20
ಪಂಜಾಬಿ	....	15
ಉರ್ದು	......	10

ಇದನ್ನು ನೋಡುವಾಗ ಎಲ್ಲಾ ಭಾರತೀಯ ಭಾಷೆಗಳಿಗೂ ಒಂದೇ ಲಿಪಿಯಿದ್ದರೆ ಎಷ್ಟು ಉತ್ತಮ ಎನ್ನಿಸುತ್ತದೆ. ಸಮಾನ ಲಿಪಿಯಿಂದ ತಿಳಿವಳಿಕೆ ಹೆಚ್ಚುವದು ನಿಶ್ಚಯ. ದೇಶೀಯ ಭಾಷೆಗಳ ಮಟ್ಟಿಗೆ ಸಮಾನ ಲಿಪಿಯ ಕೊರತೆ ಇರುವುದರಿಂದ ಒಂದು ಭಾರತೀಯ ಭಾಷೆ ಇನ್ನೊಂದು ಭಾರತೀಯ ಭಾಷಾ ಭಾಷಿಗಳಿಗೆ ಗ್ರೀಕ್ ಅಥವಾ ಲ್ಯಾಟಿನ್ ಭಾಷೆಯಂತೆಯೇ ಆಗಿದೆ. ಭಾವೈಕ್ಯತೆಗೆ ಸಮಾನ ಲಿಪಿಯು ನಾಂದಿಯಾಗುವುದೆನ್ನುವುದರಲ್ಲಿ ಸಂದೇಹವಿಲ್ಲ.

ಭಾಷೆಯ ಐಕ್ಯತೆಯು ಇತರ ಎಲ್ಲಾ ಕ್ಷೇತ್ರಗಳಲ್ಲಿಯೂ ಐಕ್ಯತೆಯನ್ನುಂಟು ಮಾಡಲು ಸಹಾಯ ಮಾಡುತ್ತದೆ. ನೂರಾರು ಭಾಷೆಗಳಿಂದ ತುಂಬಿ ಹೋಗಿರುವ ನಮ್ಮ ದೇಶದಲ್ಲಿ ಭಾಷೆಯ ಐಕ್ಯತೆ ಸಾಧಿಸಬೇಕಾದರೆ:

1) ಎಲ್ಲಾ ಭಾಷೆಗಳಿಗೂ ಸಮಾನವಾದ ಒಂದೇ ಲಿಪಿ ಇರಬೇಕು.

2) ವಿದ್ಯಾವಂತರೆಲ್ಲರಿಗೂ ಲಿಖಿತ ಹಿಂದಿಯು ಸಂಪರ್ಕ ಭಾಷೆಯಾಗಬೇಕು.

ರಷ್ಯಾದಲ್ಲಿ ಆಡುವ ಭಾಷೆಗಳು ಹಲವಾರಿದ್ದರೂ ಲಿಪಿ ಒಂದೇ. ರಷ್ಯನ್ ಭಾಷೆ ಅಲ್ಲಿನ ಸಂಪರ್ಕ ಭಾಷೆ. ಚೀಣದ 70 ಕೋಟಿ ಜನರು ಪರಸ್ಪರ ಅರ್ಥವಾಗದ ಕನಿಷ್ಠ ಏಳು ಭಾಷೆಗಳನ್ನೂ (ಕೆಂಟನೀಸ್, ಪೈಕಿಂಗ್ ಇತ್ಯಾದಿ), ಹತ್ತಾರು ಚೀನೀ ಮತ್ತು ಚೀನೀಯೇತರ ಭಾಷೆಗಳನ್ನೂ ಆಡುತ್ತಾರೆ ಆದರೆ ಅಲ್ಲಿ ಕೂಡ ವಿದ್ಯಾವಂತರಿಗೆ ಲಿಖಿತ ಚೀನೀ ಭಾಷೆಯೇ ಮಾಧ್ಯಮ.

ಹಿಬ್ರ್ಯೂ ಭಾಷೆಯು ಎರಡು ಸಾವಿರ ವರ್ಷಗಳಿಂದಲೂ ಕೇವಲ ಪ್ರಾರ್ಥನಾ ವಿಧಿಗಳ ಭಾಷೆಯಾಗಿತ್ತು. ಇಸ್ರಾಯೆಲ್ ದೇಶವು ಈ ಭಾಷೆಯನ್ನು 1918ರಲ್ಲಿ ರಾಜ್ಯಕೀಯ ಭಾಷೆಯನ್ನಾಗಿ ಮಾಡಿತು. ಜನಸಾಮಾನ್ಯರಿಗೆ ಈ ಭಾಷೆಯನ್ನು ಸ್ವೀಕರಿಸಲು ಕಷ್ಟವಾಗಲಿಲ್ಲ. ಕಾರಣ; ಅಲ್ಲಿನ ಜನರಲ್ಲಿ ಬಹುಪಾಲು ಮಂದಿಯ ಮೂಲ ಭಾಷೆ ಹಿಬ್ರ್ಯೂ; ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಅಧಿಕವಾಗಿತ್ತು; ಮತ್ತು ಅಲ್ಲಿ ರಾಷ್ಟ್ರೀಯ ಆದರ್ಶಗಳ ಜನತಾ ಸ್ವೀಕೃತಿ ಉತ್ಸಾಹದಾಯಕವಾಗಿತ್ತು.

ನಮ್ಮ ದೇಶದಲ್ಲಿ ಜನರು ಇಂಗ್ಲೀಷಿಗಿಂತ ಹಿಂದಿಯನ್ನು ಬೇಗನೆ ಕಲಿಯುತ್ತಾರೆಂಬುದಕ್ಕೆ ಕಾರಣಗಳಿಲ್ಲದೆ ಇಲ್ಲ. ಹಿಂದಿಗೂ ಇತರ ಭಾರತೀಯ ಭಾಷೆಗಳಿಗೂ ಇರುವ ನಿಕಟ ಸಂಬಂಧ ಇದಕ್ಕೊಂದು ಕಾರಣ. ಹೆಚ್ಚಿನ ಭಾರತೀಯ ಭಾಷೆಗಳಲ್ಲಿ ಗಣ, ಧ್ವನಿ ಮತ್ತು ಕೆಲವು ವಿಭಕ್ತಿಗಳಲ್ಲಿ ಸಮಾನತೆಯಿದೆ. ಪದ ರಚನೆಯಲ್ಲೂ ವಾಕ್ಯ ರಚನೆಯಲ್ಲೂ ಸಾಮ್ಯವಿದೆ. ಈ ಗುಣಗಳು ಭಾರತೀಯ ಭಾಷೆಗಳನ್ನು ಸಹೋದರ ಭಾಷೆಗಳನ್ನಾಗಿ ಮಾಡಿವೆ. ಈ ಸಮಾನ ಗುಣ ಬಂಧಕ್ಕೆ ಇಂಗ್ಲಿಷ್ ಒಳಗಾಗುವುದಿಲ್ಲ. ಭಾಷಾ ಮೂಲ ಭೇದ ಹಾಗೂ ಜನಾಂಗ ಭೇದಗಳು ಇಂಗ್ಲೀಷನ್ನು ಪ್ರತ್ಯೇಕವಾಗಿರಿಸಿವೆ. ಭಾರತೀಯ ವಿದ್ಯಾರ್ಥಿಗಳು ಇಂಗ್ಲೀಷನ್ನು ಕಲಿಯುವುದಕ್ಕಿಂತ ಇಮ್ಮಡಿ ವೇಗದಲ್ಲಿ ಹಿಂದಿಯನ್ನು ಕಲಿಯುವರೆಂಬುದು ಕೆಲವು ಶಾಲೆಗಳಲ್ಲಿ ನಡೆಸಿದ ಪ್ರಯೋಗಗಳಿಂದ ತಿಳಿದು ಬಂದಿದೆ. ಅಧಿಕಾಂಶ ಭಾಷೆಗಳಲ್ಲಿ ಸಂಸ್ಕೃತ ಪದಗಳು ತತ್ಸಮ ಇಲ್ಲವೆ ತದ್ಭವ ರೂಪದಲ್ಲಿ ಪ್ರಚಲಿತವಾಗಿರುವುದು ಇದಕ್ಕೊಂದು ಕಾರಣವೆನ್ನಬಹುದು. ಭಾರತದಲ್ಲಿ ಸಾರ್ವತ್ರಿಕ ಸಂಪರ್ಕ ಭಾಷೆಯಾಗಲು ಹಿಂದಿಗಿಂತ ಉತ್ತಮ ಅರ್ಹತೆಯುಳ್ಳ ಭಾರತೀಯ ಭಾಷೆ ಇನ್ನೊಂದಿಲ್ಲ, ಭಾರತೀಯವಲ್ಲದ ಇಂಗ್ಲೀಷನ್ನು ಬಿಟ್ಟರೆ!

ವ್ಯಾಯಾಮವಿಲ್ಲದೆ ಸ್ನಾಯು ಬೆಳೆಯದು. ಕೆಲಸ ಮಾಡದೆ ಸಂಪತ್ತು ಹೆಚ್ಚದು. ಚಿಂತಿಸದೆ ಜ್ಞಾನ ಬೆಳೆಯದು. ಕೆಲಸ ಶಾಪವಲ್ಲ; ಅದು ರಚಿಸೆ ಮಾಡಬಲ್ಲ ವರ. ಜ್ಞಾನಕ್ಕೆ, ಮನುಷ್ಯತ್ವಕ್ಕೆ, ನಾಗರಿಕತೆ, ಸಂಸ್ಕೃತಿಗಳಿಗೆ ಕಾಯಕವೇ ಹೆದ್ದಾರಿ.

o o o

ಕೆಲಸದ ಅಭಿರುಚಿಗಾಗಿ ಕೆಲಸ ಮಾಡದೆ ಕೇವಲ ಹಣ ಯಾ ಲಾಭಕ್ಕಾಗಿ ಕೆಲಸವನ್ನು ಮಾಡುವವನು ಹಣವನ್ನೂ ಮಾಡಲಾರ, ಕೆಲಸದಿಂದ ಸುಖವನ್ನೂ ಪಡೆಯಲಾರ.

WITH BEST COMPLIMENTS
FROM

S. C. S. MOTOR SERVICE
MANGALORE

We also have an up-to-date extra Bus which is available for Special Tourists Trips.

For particulars apply:-

S. Chandrashekar
Proprietor: S. C. S. Motor Service
MANGALORE.

ವೀರರೆಂತು ಜನ್ಮ ತಳೆದಾರು?

(ಹದಿನಾರನೇ ಪುಟದಿಂದ)

ಷ್ಟಿಯಿಂದ ಕಾಣುತ್ತಿದ್ದರು. ಅಪ್ರಬುದ್ಧ ಜನತೆಗೆ ಯಾವುದರಲ್ಲೂ ಆಸಕ್ತಿಯಿರಲಿಲ್ಲ. ಆದರೆ ಅವರು ಕೂಡಾ ಅಹಿಂಸಾವಾದಿಗಳ ಭಾಷಣಗಳನ್ನು ಅವಶ್ಯವಾಗಿ ಕೇಳುತ್ತಿದ್ದರು. ಕ್ರಾಂತಿಕಾರಿಗಳನ್ನು ಜಡ ಮೂಲ ಸಮೇತ ಕಿತ್ತು ಹಾಕಲು ಸರಕಾರ ಏನೇನನ್ನೆಲ್ಲ ಮಾಡಲಿಲ್ಲ! ಈ ರೀತಿಯಲ್ಲಿ ನಮ್ಮ ಪ್ರಾತಃ ಸ್ಮರಣೀಯರಾದ ವೀರರು ಅಂದು ಆತತಾಯಿಯಲ್ಲಿ ಸಿಕ್ಕಿ ಹಾಕಿಕೊಂಡವರಂತಿದ್ದರು. ಜನ ಜಾಗರಣೆಯ ಮಹಾ ಉದ್ದೇಶದಿಂದ ಎಸೆಂಬ್ಲಿಯಲ್ಲಿ ಬಾಂಬನ್ನೆಸೆಯಲಾಯಿತು; ಸರ್ದಾರ್ ಭಗತ್ ಸಿಂಗರಿಗೆ ಫಾಸಿಯ ಸಜೆಯನ್ನೀಯಲಾಯಿತು. ಆದರ ಮರುದಿನವೇ ಕರಾಚಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಲಿತ್ತು- ಆಂಗ್ಲ ಸರಕಾರದೊಡನೆ ಮಾತುಕತೆಯಾಗಲಿಕ್ಕಾಗಿ! ಈ ಅಧಿವೇಶನದಲ್ಲೂ ಈ ಪ್ರಥಭ್ರಷ್ಟರನ್ನು ಸಾಕಷ್ಟು ನಿಂದಿಸಲಾಯಿತು. ಆದರೆ ಈ ಸಮಯದಲ್ಲಿ ರಾಜರ್ಷಿ ಟಂಡನ್ ಅವರೊಬ್ಬರು ಮಾತ್ರ—"ಸ್ವರಾಜ್ಯ ಪ್ರಾಪ್ತಿಯ ಉದ್ದೇಶದಲ್ಲಿ ಹಿಂಸೆ—ಅಹಿಂಸೆಯ ಪ್ರತಿಬಂಧ ವಿವೇಚನೆ ಸರಿಯಲ್ಲ" ಎಂದುದ್ಗರಿಸಿದ್ದರು.

ವಾತಾವರಣ ಅಹಿಂಸೆಯದ್ದಲ್ಲ ಹೇಡಿತನದ್ದಾಗಿತ್ತು! ಸತ್ಯ, ಅಹಿಂಸೆಗಳಿಂದ ನಿಸ್ಸಂದೇಹವಾಗಿ ಆಂಗ್ಲರಿಗೆ ಆಘಾತವಾಯಿತು 'ಆಂಗ್ಲೇಯರನ್ನು ಕೊಲ್ಲಬಾರದು.' ಎಂಬುದು ಅಂದಿನ ಅಹಿಂಸೆ. ಅರ್ಥವಾಗಿತ್ತು! ಕಾಂಗ್ರೆಸ್ ಅಧಿವೇಶನದಲ್ಲಿ ನಾಯಕರುಗಳಿಗಾಗಿ ವಿಶೇಷ ರೀತಿಯ ಭೋಜನ ಬಡಿಸಲ್ಪಡುತ್ತಿದ್ದ ಸಂದರ್ಭದಲ್ಲಿ [illegible] ಮರಣವಾಗುತ್ತಿತ್ತು. ಕ್ರಾಂತಿಕಾರಿಗಳನ್ನು ಆತ್ಮಸಮರ್ಪಣೆ ಗೈದ ಜನರನ್ನು ಫಾಸಿಯ ಉರುಳಿನ ತನಕ ಕೊಂಡೊಯ್ಯುವ ಸಮಯ ಪ್ರಯತ್ನ ನಡೆಯುತ್ತಿತ್ತು. ಅಂದರೆ ಆಂಗ್ಲ ಸರಕಾರ ಈ ಅಹಿಂಸಾವಾದೀ ಸಂಘಟನೆಗಳಿಂದ ಪ್ರತ್ಯಕ್ಷವಾಗಿ ಉಪಕೃತವಾಗಿತ್ತು.

ಈ ಕ್ರಾಂತಿಯ ಜ್ಯೋತಿಗಳನ್ನು ತಡೆಯುವ ಅನೇಕಾನೇಕ ಪ್ರಯತ್ನಗಳನ್ನು ಗೈಯಲಾಯಿತು. ಆದರ ಏನಾಯಿತು? ಬಹು ಶೀಘ್ರ ವೇಗದಲ್ಲಿ ಈ ಕ್ರಾಂತಿಯ ಅಲೆ ಸಿಡಿದಿದ್ದು 'ಆಜಾದ್ ಹಿಂದ್ ಫೌಜ್' ಸುಭಾಸ್ ಚಂದ್ರ ಭೋಸ್‌ರ [illegible] ರೂಪದಲ್ಲಿ ಪ್ರಕಟವಾಯಿತು. ಹೊರ ದೇಶಕ್ಕೆ ಹೋಗುವ ಮೊದಲು ಶ್ರೀ ಸುಭಾಸ್ ಚಂದ್ರ ಭೋಸ್ ಅವರು ಮುಂಬೈಗೆ ಹೋಗಿ 'ಕ್ರಾಂತಿ ಗುರು ಸಾವರ್ಕರ್'ರವರಿಂದ 'ಮಂತ್ರ—ತಂತ್ರದ' ದೀಕ್ಷೆ ಪಡೆದರು. ಅನಂತರ 'ಆಜಾದ್ ಹಿಂದ್ ಫೌಜ್' ಹೇಗೆ ನಿರ್ಮಾಣವಾಯಿತು? ಮುಂದೆ ನಡೆದ ಘಟನೆಗಳೆಲ್ಲಾ ಹೇಗೆ ಘಟಿಸಿದುವು ಎಂಬುದು ಬಹು ಪ್ರಸಿದ್ಧವೇ ಇದೆ.

ಗಾಂಧಿ ಅಹಿಂಸೆಯಿಂದಲೇ ಸ್ವತಂತ್ರ [illegible]

ಹಿಂಸೆ—ಅಹಿಂಸೆಗಳ ಉಚಿತಾನುಚಿತತೆಯ ಚರ್ಚೆ ಬೇರೆಯೇ ವಿಷಯ. ಸಂತನು ಮಾತ್ರ ಸದಾ ಅಹಿಂಸಕನಾಗಿರಬಲ್ಲನು—ಆದರೆ ಸಾಮಾನ್ಯನಲ್ಲ. ಶಸ್ತ್ರದ ವಿರುದ್ಧ ಹೋರಾಟ ಶಸ್ತ್ರದಿಂದಲೇ ಆಗಬೇಕು—ಆಗುತ್ತದೆ.

ಹಾಗಾದರೆ? ಈಗ ನಾವೇ ತುಸು ಯೋಚಿಸಿ, ಒಂದೊಮ್ಮೆ ಈ ಭಯಂಕರ ಬಿರುಗಾಳಿಯನ್ನು ತಡೆಯದೇ ಇರುತ್ತಿದ್ದಲ್ಲಿ, ನಮ್ಮ ಮುಂದಿಯೇ ಈ ಉದಾತ್ತ ಭಾವವನ್ನು ನಿಂದಿಸದಿರುತ್ತಿದ್ದಲ್ಲಿ—ಇದರ ವೇಗ ಇನ್ನಷ್ಟು ಹೆಚ್ಚಾಗದಿರುತ್ತಿತ್ತೇ? ದೇಶದಲ್ಲಿ ಉಂಟಾಗುವ ಈ [illegible] ಯುದ್ಧದಿಂದ ಒಬ್ಬನಾದರೂ ಆಂಗ್ಲ ಬದುಕಿ ಉಳಿಯಲು ಸಾಧ್ಯವಿತ್ತೇ? [illegible]

(ಮುಂದುವರಿದುದು [illegible] ಪುಟ ನೋಡಿರಿ)

In the tradition of the famous "CANARA" Springs

now another excellent product:

'CANARA' BRAKE DRUMS

for all popular vehicles:

They are made from quality material, modern machines and with rigid quality control under watchful eyes of a modern laboratory. These drums matching the best of the International makes are made to suit Indian Road Conditions incorporating experience gained by lengthy practical road tests.

THE CANARA WORKSHOPS LIMITED

MANGALORE—3.

ಕನ್ನಡ ಸಾಹಿತ್ಯದಲ್ಲಿ ಶತಕಗಳು

(ಹದಿನೈದನೇ ಪುಟದಿಂದ)

ಹರಹರ, ನಿಮಗೆನ್ನನ್ನೆತಾನೊತ್ತುಗೊಟ್ಟೆಂ, ನಿಮಗೆನ್ನಂ ಸೂರೆ ಕೊಟ್ಟೆಂ.....' ಎನ್ನುತ್ತಾ ಆತ್ಮಾರ್ಪಣಮಾಡಿ ದೇವ ದೇವನ ಪಾದಾರವಿಂದವನ್ನಪ್ಪಿಕೊಳ್ಳಲು ಶಂಕರನು 'ನಿನ್ನ ಇಷ್ಟಾರ್ಥ ಸಲುವುದಕ್ಕೇನೂ ಸಂಶಯ ಬೇಡ' ಎಂದು ಅದೃಶ್ಯನಾದನು. ಭೂತ ವರ್ತಮಾನ ಯುಗಗಳ ಯಾವ ಮಹಾ ಕವಿಯು ಹಂಹರನಂತೆ ಸಾಕ್ಷಾತ್ಕಾರದ ಭಾಗ್ಯವನ್ನು ಪಡೆದಿದ್ದಾನೆ? ಧನ್ಯ, ಹರಿದೇವ!

ಸಂಸ್ಕೃತದಲ್ಲೇ ಶತಸಂಖ್ಯೆಗೆ ಒಂದು ಗೌರವವಿದೆ 'ಶತ ಶ್ಲೋಕೇನ ಪಂಡಿತಃ', ಮಂತ್ರ ಜಪದ ಶತಾವರ್ತಿ, ಶತಾಯುಷ್ಯ, ಶತಕ್ರತು, ಭಗವಂತನ ಅಷ್ಟೋತ್ತರ ಶತನಾಮಗಳು— ಮೊದಲಾದ ಶತಸಂಖ್ಯೆಯ ಪ್ರಾಶಸ್ತ್ಯವು ಸಾಹಿತ್ಯದಲ್ಲೂ ಕಲೆದೋರಿದ ಮೇಲೆ ಶತಕಗಳು ಹುಟ್ಟಿರಬೇಕು, ಒಂದು ವಿಷಯ ಅಥವಾ ಭಾವದ ಸಂಪೂರ್ಣ ವಿವರಣೆಗೆ ಒಂದು ನೂರು ಪದ್ಯಗಳಾದರೂ ಬೇಕು—ಎಂಬ ಭಾವನೆಯೇ ಶತಕಗಳ ಜನ್ಮಕ್ಕೆ ಮೂಲವೆಂದು ತೋರುತ್ತದೆ ಇವುಗಳಲ್ಲಿ ನೀತಿ, ಶೃಂಗಾರ, ವೈರಾಗ್ಯ, ಸ್ತೋತ್ರ, ಅನ್ಯೋನ್ಯ ಮತ್ತು ಸಂಕೀರ್ಣ ಶತಕಗಳೆಂಬ ಆರು ವಿಧಗಳಿವೆ. ಸೋಮೇಶ್ವರ ಮತ್ತು ಚೆಲ್ವ ನಾರಾಯಣ ಶತಕಗಳೆಲ್ಲಾ ನೀತಿ ಶತಕಗಳು; ಇವುಗಳಲ್ಲಿ ಸಂಕೀರ್ಣ ವಿಭಾಗಗಳೂ ಇವೆ. ಕೆರೋಡಿ ಸುಬ್ಬರಾಯರು (೧೯೦೦) ಬರೆದ ಶೃಂಗಾರ ಶತಕವೂ, ಚಿಕ್ಕುಪಾಧ್ಯಾಯನಿಂದ (೧೬೭೨) ರಚಿತವಾದ ಶೃಂಗಾರ ಶತಕ ಸಾಂಗತ್ಯ ಮತ್ತು ದೇವಲಾಪುರದ ನಂಜುಂಡ ಕವಿಯ (ಸು ೧೪೪೧) ಕೃಷ್ಣರಾಜ ಶೃಂಗಾರ ಶತಕವೂ 'ಸ್ತ್ರೀರೂಪಮೆ ರೂಪಂ, ಶೃಂಗಾರವೆರಸ' ವೆನ್ನುತ್ತಿವೆ.

ಸಾಂ|| ವಿರಹದಿಂದಬಲೆಗೆ ಕಸ್ತೂರಿ
ದತ್ತೂರಿ| ವರಚಂದನ ವಿಂಧನವು ||
ವರವೀಣೆ ಯುದು ಸಾಣೆ, ಕರ್ಪೂರ
ಕಾಳ್ಪುರ| ದಿರವಾಂತಿದೆ ಕೃಷ್ಣ ಸಲಹೊ||

ಚಿಕ್ಕುಪಾಧ್ಯಾಯನು ವಿರಹದ ವೇದನೆಯನ್ನು ಇಲ್ಲಿ ವರ್ಣಿಸಿದ್ದಾನೆ. ಸಂಸ್ಕೃತ ಸಾಹಿತ್ಯದಂತೆ ಕನ್ನಡದಲ್ಲಿ ಶೃಂಗಾರ ಶತಕಗಳು ಸಾಕಷ್ಟಿಲ್ಲ. ಕನ್ನಡ ಸ್ತನ ಶತಕವು ಸಂಸ್ಕೃತದ ಕುಚ ಶತಕದ ಮಾದರಿಯ ಒಂದು ಶತಕ

ಹರಿಹರ, ಗುಮ್ಮಟಾರ್ಯ, ವೀರಭದ್ರ ರಾಜರ ಶತಕಗಳೆಲ್ಲಾ ವೈರಾಗ್ಯ ಮತ್ತು ಸ್ತೋತ್ರ ಶತಕಗಳಾಗಿವೆ. ದಾಸ ಸಾಹಿತ್ಯವನ್ನೂ ಸ್ತೋತ್ರ ಶತಕಗಳ ಸಾಲಿಗೆ ಸೇರಿಸಬಹುದು. ಅನ್ಯೋಕ್ತಿ ರೂಪವಾಗಿ ನೀತಿಯನ್ನೂ ವೇದಾಂತವನ್ನೂ ಅಪ್ರಸ್ತುತ ಪ್ರಶಂಸಾ ಶತಕವು ಬೋಧಿಸುವುದು. ಇದನ್ನು ಶಾಲ್ಯದ ಕೃಷ್ಣರಾಜನು (೧೭೪೮) ಬರೆದನು. ಇದಕ್ಕೆ ಪ್ರಾಣೇಶ್ವರ ಶತಕವೆಂಬ ಹೆಸರೂ ಇದೆ

ವೃ|| ಪುಲ್ಲಾಂಬೋರುಹ ಕೈರವ
ಪ್ರಕತಿಗಳ್ ಮಲ್ಲೀಮತಲ್ಲೀಕನ-
ದ್ವಲೀವಲ್ಲರಿಗಳ್ ಭ್ರಮದ್ಭ್ರಮರಿಗಳ್
ಸಂತಾಪಮಂ ಶೀತಮಂ||
ಎಲ್ಲಾ ಕಾಲದಿ ಸೈಸಿ ನಿನ್ನ ಬರವಂ
ಹಾರೈಸಿ ಸಪ್ರಾಣಮೂ—
ಗಿಲ್ಲಿರ್ದನ್ನೆಗಮೇಂ ವಸಂತ ತಡೆವೈ
ನೋಡೆನ್ನ ಪ್ರಾಣೇಶ್ವರಾ||

ಇಲ್ಲಿ ಭಕ್ತನೊಬ್ಬನ ದೈವ ಸಾಕ್ಷಾತ್ಕಾರದ ಕಾತರವಿದೆ. ಈ ಕವಿಯ ಪದ್ಯಗಳೆಲ್ಲಾ ವ್ಯಂಗ್ಯಾರ್ಥ ಪ್ರಧಾನಗಳಾಗಿವೆ.

೪

ಕನ್ನಡ ಶತಕಗಳಲ್ಲೇ ಸೋಮೇಶ್ವರ ಶತಕವು (೧೩೦೦) ಶೀರಾ ಸುಲಭವಾದುದು ಮತ್ತು ಜನಪ್ರಿಯವಾದದು. ಇದರಲ್ಲಿ ವಾಚಕರ ಮನಸ್ಸಿಗೆ ನಾಟುವಂತೆ ಬಳಕೆಯಲ್ಲಿರುವ ಮಾತುಗಳನ್ನುಪಯೋಗಿಸಿ, ಸುಲಭ ಶೈಲಿಯಲ್ಲಿ ಮನೋಹರವಾದ ಛಂದೋರಚನೆಯಿಂದ ಸಹಜವಾಗಿ ಹೇಳಿದುದೇ ಇದೊಂದು ಜನಪದ ಶತಕವಾಗಲು ಕಾರಣ. ಸೋಮೇಶ್ವರ ಶತಕವನ್ನರಿಯದ ಅಕ್ಷರಜ್ಞ ಕನ್ನಡಿಗನು ಇರಲಾರನು. ಇದರಲ್ಲಿ ಹಲವು ವ್ಯಾಕರಣ ದೋಷಗಳಿದ್ದರೂ ನೀತಿಬೋಧೆಯನ್ನೇ ಪ್ರಾಮುಖ್ಯವಾಗಿಟ್ಟುಕೊಂಡ ಕವಿಯ ಧ್ಯೇಯವು ಪ್ರಶಂಸಾರ್ಹವಾದದ್ದು. ಈ ಕವಿಯು ಧಾರವಾಡದ ಪುಲಿಗೆರೆಯವನಾಗಿದ್ದರೂ ಗೋದಾವರಿ ಜಿಲ್ಲೆಯ ಪಾಲ್ಕುರಿಕೆ ಸೋಮನೆಂದೇ ಕೆಲವರು ತಪ್ಪಾಗಿ ಭಾವಿಸಿದ್ದಾರೆ. ಸೋಮೇಶ್ವರನ ಮಾತುಗಳೆಲ್ಲಾ ಮುತ್ತಿನಂತೆ ಅಚ್ಚುಕಟ್ಟಾಗಿದ್ದು ಗಾದೆಯಂತಿವೆ 'ಫಲವುಂ ಪಳ್ಳ ಸಮುದ್ರವೈ' 'ಸತಿಗೆ ಪಾತಿವ್ರತ್ಯವೇ ಭೂಷಣಂ' "ಪಡೆದಷ್ಟಲ್ಲದೆ ಬರ್ಪುದೇ" 'ಬಡವಂ ಬಲ್ಲಿದನಾಗನೇ?" "ಗೆಣಕಂ ಹೆಗ್ಗಣಕಂ ಸಮಂ" "ಸನ್ನಿ ಸಾವಿರ ಕಾಲಾಳಿನ ಸತ್ವವೈ" "ಮಡಿಯೇ ನಿರ್ಮಲ ಚಿತ್ತವೈ" "ಇಡಬೇಕಿದ್ದುಣಬೇಕೆಲೈ" 'ಋಣ ಭಾರಕ್ಕೆಣೆಯಾವುದೈ?" "ಜನರಂ ಮೆಚ್ಚಿಸಲಾಗದೈ" "ವಚನ ಭ್ರಷ್ಟದೆ ಮುಕ್ತಿಯೆ?" ಇಂತಹ ಅಸಂಖ್ಯ ಒಕ್ಕಣೆಗಳೇ ಈ ಶತಕದ ಒಂದು ವೈಶಿಷ್ಟ್ಯ ಇದು ಬಾಲ ಸಾಹಿತ್ಯಕ್ಕೆ ಸಮ್ಮತವಾದ ಶತಕ.

ಸೋಮೇಶ್ವರ ಶತಕವು ಎಷ್ಟು ಸುಲಭವೋ, ರತ್ನಾಕರಾಧೀಶ್ವರ ಶತಕ ಮತ್ತು ಅಪರಾಜಿತೇಶ್ವರ ಶತಕಗಳೂ ಅಷ್ಟೇಬಿಗಿಯಾದವು. ಇದನ್ನು ರತ್ನಾಕರ ವರ್ಣಿ (ಸು. ೧೬೦೦) ಯು ಬರೆದನು 'ಶಾಸ್ತ್ರಂಬಂದೊಡೆ ಶಾಂತಿ ಸ್ವೈರಣೆ ನಿಗರ್ವಂ ನೀತಿ

ದಿ ಶಂಕರ್ ಟ್ರಾನ್ಸ್‌ಪೋರ್ಟ್ ಕಂ. (ಪ್ರೈ) ಲಿಮಿಟೆಡ್

ಕೊಪ್ಪ - ಕಡೂರು

(ಚಿಕ್ಕಮಗಳೂರು ಜಿಲ್ಲೆ)

ಹದಿನಾರನೆಯ ಗಣರಾಜ್ಯ ದಿನದಂದು

ನಾವು ನಮ್ಮೆಲ್ಲರ ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ,
ಪ್ರಯಾಣಿಕರಿಗೂ ಮತ್ತು ನಾಗರಿಕರಿಗೂ ಸಹ
ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನರ್ಪಿಸಲು
ಸಂತೋಷ ಪಡುತ್ತೇವೆ.

ಎ. ರಮೇಶ ರಾವ್
ಡೈರೆಕ್ಟರ್ ಇನ್-ಚಾರ್ಜ್.

ಮೆಲ್ಲನಿತು ಮುಕ್ತಿ ಸ್ತ್ರೀ ಚಿಂತೆ ನಿಜಾ ಕ್ಷ ಚಿಂತೆ ನಿಲವೇಳ್ಕುಂ' ಎನ್ನುವ ಕವಿಯ ಮಾತು ಶಿಲೆಯಲ್ಲಿ ಕೆತ್ತಿಸಿಡಲು ಯೋಗ್ಯವಾದುದು. ಈ ಕವಿಯ ಶತಕಗಳು ಪಂಡಿತರಿಗೆ ಪ್ರಿಯವಾಗಿವೆ. ಶಾಂತವೃಷಭೇಶನ (ಸು. ೧೭೦೦) ಅನುಭವ ಶತಕ, ಗುಮ್ಮಟಾರ್ಯನ (ಸು. ೧೫೦೦) ಅರ್ಥೇಂದು ಮೌಳಿ ಶತಕ, ವೀರಭದ್ರರಾಜನ (ಸು ೧೫೩೦) ಉಮಾಮಹೇಶ್ವರ ಶತಕ, ಮತ್ತು ಶ್ರೀಕಂಠ ಸೋಮೇಶ್ವರ ಶತಕ, ಮಗ್ಗೆಮಾಯಿದೇವನ (ಸು. ೧೪೩೦) ಏಕಾರೀಶ್ವರ ಶತಕ, ಚಂದ್ರಕವಿಯ (ಸು. ೧೪೩೦) ಗುರುಮೂರ್ತಿ ಶಂಕರ ಶತಕ, ಚೆನ್ನಮಲ್ಲಿಕಾರ್ಜುನನ (ಸು. ೧೫೬೦) ಚೆನ್ನಮಲ್ಲೇಶ್ವರ ಶತಕ, ರಾಮಚಂದ್ರ ಕವಿಯ (ಸು. ೧೭೦೦) ಮಲ್ಲಿಕಾರ್ಜುನ ಶತಕ, ಸಿರಿನಾಮಧೇಯನ (ಸು. ೧೫೩೦) ಮಲ್ಲೇಶ್ವರ ಶತಕ, ಶಂಕರದೇವನ (ಸು. ೧೬೨೦) ಶಂಕರ ಶತಕ, ಮಗ್ಗೆಮಾಯಿದೇವನ (ಸು. ೧೪೩೦) ಶಿವಾಧವ ಶತಕ ಮತ್ತು ಶಿವಾವಲ್ಲಭ ಶತಕ, ಕಾಡ ಸಿದ್ದೇಶನ (ಸು ೧೭೨೫) ಇಷ್ಟ ಲಿಂಗ ಶತಕ, ನಿರಂಜನಾರ್ಯನ (ಸು. ೧೭೫೦) ಮತ್ತು ಕಪ್ಪಿನಿಯ (ಸು ೧೮೦೦) ನಂಜುಂಡಶತಕ, ನಿಜಲಿಂಗಾರಾಧ್ಯನ (ಸು ೧೮೦೦) ನಿಜಲಿಂಗ ಶತಕ, ಗುರುವನ (ಸು. ೧೭೦೦) ಪ್ರಾಣಲಿಂಗ ಶತಕ, ಯೋಗಾನಂದನ (ಸು. ೧೭೫೦) ಬಸವ ಶತಕ ಮತ್ತು ವಿರೂಪಾಕ್ಷ ಶತಕ, ದೇವಚಂದ್ರನ (೧೭೭೦-೧೮೪೧) ಸುಮೇರು ಶತಕ ಮತ್ತು ಭಕ್ತಿಸಾರ ಶತಕ ಕ್ರಿಯ ಮೊದಲಾದ ಶತಕಗಳೆಲ್ಲಾ ನೀತಿ ಸ್ತೋತ್ರ ರೂಪಗಳಾಗಿ, ವೀರಶೈವ ಕವಿಗಳಿಂದ ಮತ್ತು ಸ್ಮಾರ್ತ ಕವಿಗಳಿಂದ ಬರೆಯಲ್ಪಟ್ಟವು. ಈ ಕವಿಗಳಲ್ಲಿ ಹೆಚ್ಚಿನವರೆಲ್ಲಾ ಹಂಪೆಯ ಹರಿಹರನ ಭಕ್ತರು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಅನುಯಾಯಿಗಳು.

ಲಕ್ಷ್ಮಯ್ಯ (ಸು ೧೭೦೦)ನ ಪಶ್ಚಿಮ ರಂಗ ಧಾಮ ಶತಕ, ವಿಶಿಷ್ಟಾದ್ವೈತವನ್ನು ಲಲಿತವಾಗಿ ಬೋಧಿಸುವ ತಿರುವೇಂಗಡಾಚಾರ್ಯ ಶತಕ (ಸು. ೧೭೫೦) ಚೆನ್ನರಾಜಪ್ಪನ (ಸು. ೧೭೫೦) ವೆಂಕಟೇಶ್ವರ ಶತಕ, ವಹಾಂತದೇಶಿಕನ (೧೯ನೆಯ ಶತಮಾನ) ವೇಣುಗೋಪಾಲ ಶತಕ, ವಿಷ್ಣುವಿನ ಅವತಾರಗಳ ವರ್ಣನೆ ಇದ್ದ ವೈಕುಂಠ ನಾರಾಯಣ ಶತಕ- (ಸು. ೧೭೫೦), ಅಳಸಿಂಗರಾಚಾರ್ಯರ (೧೮೭೭-೧೯೪೦) ಚೆಲ್ವನಾರಾಯಣ ಶತಕ ಮೊದಲಾದ ಶತಕಗಳು ವೈಷ್ಣವ ಕವಿಗಳಿಂದ ಬರೆಯಲ್ಪಟ್ಟು ನೀತಿ ಮತ್ತು ಭಕ್ತಿಯನ್ನು ಪ್ರಧಾನವಾಗಿ ಬೋಧಿಸುತ್ತಿವೆ. "ಸಿರಿ ಸೇರ್ಗುಂ ನಿಜ ಪೂರ್ವ ಪುಣ್ಯವಶದಿಂ' ನೆರೆಕಷ್ಟಂಬರೆ ಲಾಷ್ಟರುಂ ತೊರೆವರ್ಕೈ' 'ವಿಧಿಯುಂ ವಿಪರ್ಯನದಾವನ್ಯೆ?" "ಶೀಲಂಧನಂ ವಿದ್ಯೆಯಿಂ ಮಾರುಂ ಸೇವ್ರ್ಪದು ಪೂರ್ವ ಪುಣ್ಯವಶದ್ಯೆ" —ಇವೆಲ್ಲಾ ಈ ಶತಕಗಳು ಮಾಡುವ ಉಪದೇಶಗಳು.

ಚಿಕ್ಕುಪಾಧ್ಯಾಯನ (ಸು. ೧೬೭೨) ಚಿತ್ರ ಶತಕ ಸಾಂಗತ್ಯವು ಕನ್ನಡ ನುಡಿಯ ಚಮತ್ಕಾರದ ಕುರಿತು ಹೇಳುತ್ತದೆ.

ಸಾಂ|| ತೊಡರಾಭರಣವೆಂಬರ್ ಪಿ
ಡಿಕರಣೆಯಂ
ತಡೆಯೆಂಬರುರಗ ಮಂತ್ರವನು||
ನುಡಿಯೆಂಬರು ನಿಂದೆಯ
ಕನ್ನಡದೊಂದು
ಬೆಡಗಿದು ಬೇರೆ ರಂಗೇಶ||

ಸುಬೋಧ ರಾಮರಾಯರ ಮಹಿಳಾ ಸನೀತಿ ಶತಕವು (೧೯೩೫) ಸಂಚಿಕೆಯ ಹೊನ್ನಮ್ಮನ ಹದಿಬದೆಯ ಧರ್ಮವನಾಧರಿಸಿ ಸ್ತ್ರೀಯರಿಗಾಗಿ ಬರೆದಶತಕ. ಕುಂದೇಶ್ವರ ಶತಕವು (೧೯೫೯) ಕುಂದಾಪುರದ ಡಿ. ವಿ. ಹೊಳ್ಳರಿಂದ ಶಿವ—ಶಕ್ತಿ-ಜ್ಞಾನ ಸಂಬಂಧವಾಗಿ ಕಂದ ಪದ್ಯಗಳಲ್ಲಿ ರಚಿತವಾದ ಶತಕ.

ಕಂ|| ಹನಿಕೂಡಿ ಹಳ್ಳ, ಕಾಳ್ಕುಡಿ।
ಕಣ ಕೂಡಿಯೆ ಕಣಜ
ತುಂಬುವಂದದಿ ಜ್ಞಾನಂ||
ತಸಿತಿಸಿತು ಗಳಿಸಿಡಲ್ ಬಕು
ಘನ ವಿದ್ಯಾನಿಧಿಯನಿಪ್ಪನೈ!
ಕುಂದೇಶ||

ದಕ್ಷಿಣಾ ಮೂರ್ತಿಶಾಸ್ತ್ರಿಗಳ (೧೯೦೦) ಹರಿಹರ ತಾರತಮ್ಯ ಶತಕವೂ, ತಾತಾಚಾರ್ಯರ (೧೮೭೬-೧೯೩೭) ಗಿರಿಮಲ್ಲಿಕಾರ್ಜುನ ಶತಕ ಮತ್ತು ಮರುಸ್ನಂದನ ಶತಕವೂ ಪ್ರಾಚೀನರ ನಡೆಯನ್ನನುಸರಿಸಿದ ಶತಕಗಳು.

೫

ಶತಕಗಳ ಕಾರ್ಯವನ್ನೇ ಮಾಡಿದ ನೀತಿ ಬೋಧಕ ಗ್ರಂಥಗಳು ಕನ್ನಡದಲ್ಲಿ ಹಲವು ಇವೆ. ಇವುಗಳಲ್ಲಿ ಹಲವು ಗ್ರಂಥಗಳ ನಿರ್ಮಾತೃವಿನ ವಿಚಾರಗಳು ತಿಳಿಯದೆ, ಅವರ ಬಿರುದುಗಳೇ ಹೆಸರಿನಂತೆ ಬಳಕೆಯಲ್ಲಿವೆ. ಕನ್ನಡ ಜಾಣ, ಗುಣರತ್ನ, ಚೂಡಾರತ್ನ ಬಲ್ಲವರರಸ, ವಿದಗ್ಧಲಲಾಮ, ವಿವೇಕಚೂಡಾರತ್ನ ಮೊದಲಾದ ಹಲವು ಸಂಕೇತವುಳ್ಳ ವಿಪುಲ ಪದ್ಯಗಳು ಶತಕ ಸಾಹಿತ್ಯದ ಹೊಳಪನ್ನು ಹೆಚ್ಚಿಸಿವೆ. ಸರ್ವಜ್ಞನೂ ಈ ಶತಕಕಾರರ ಸಾಲಿಗೇ ಸೇರತಕ್ಕವನು. ನರಸಿಂಹಾಚಾರ್ಯರ ಮತ್ತು ಹೊಸಕೆರೆ ಚಿದಂಬರಯ್ಯನ ನೀತಿಸಾರಗಳೂ ಶತಕಗಳ ಗರಿಯನ್ನು ಸಾಧಿಸಿವೆ. ಕನಕದಾಸನ ಹರಿಭಕ್ತಿ ಸಾರ, ಶಿವರಾಮಯ್ಯನ ಶಿವಭಕ್ತಿಸಾರಗಳೂ ಶತಕಗಳ ಇನ್ನೊಂದು ರೂಪ

ಅನಾಮಧೇಯ ಕವಿಗಳ ನೀತಿಯ ಕಂದಗಳು ಅಸದೃಶವಾದವು—

— ೧ —

ಕಂ|| ಪೊಸಕಾಲದ ನವಿಲಾಟಂ|
ಶಿಶುಗಳ ಮುದ್ದಾಟ ಹರಿಣಹರಿಣಿಯ
ನೋಟಂ||
ರಸಕವಿಗಳ ಕರ್ನಾಟಂ। ಕಲಿಮುವಿ
ಯೊಡಗೂಟವಂತೆ ಕನ್ನಡ ಜಾಣಾ||

— ೨ —

ಎಡರದೆ ತಪೆಯದೆ ತಲೆಯಂ।
ಕೊಡಹದ ಕಡು ವಿಹಿಲಜಾಡ್ಯವೆನಿಸದೆ
ದಸಮಂ||
ಕೆಡಿಸದೆ ಸರ್ವರ ಚಿತ್ತ।
ಕ್ಕೊದಬಡಲೋದುವನೆ ಗಮಕಿ
ಕನ್ನಡ ಜಾಣಾ||

ಕಂ|| ಗುರುದೈವಂ ವಿದ್ಯಾರ್ಥಿಗೆ | ತ
ರುಣಿಗೆ ಪತಿದೈವ ಮಾದ
ಮನುಜರ್ಗೆಲ್ಲಂ ||
ಪೊರೆವನೆದೈವಂ ಧರೆಯೊಳು । ಗರೆ
ಸಂಗಂ ಪ್ರಜೆಯೆ ದೈವಮೆಲೆ ಗುಣ
ರತ್ನಾ || ೧ ||

೦ ೦ ೦

ಕಂ|| ಕ್ಷಿತಿಯೊಳ್ ಕರ್ನಾಟಂ ಸಂ |
ಸ್ಕೃತಕಧಿಕಮದೆಂತೆನಲ್ಕೆಯಪ್ಪನೆ
ಯಪ್ಪಾ ||
ಪತಿಯ ಸುರೂಪಂಜಾಣೆ | ನ್ನತಿರತಿ
ಯೇನಪ್ಪೆಗುಂಟೆ ಚೂಡಾರತ್ನಾ || ೧ ||

೦ ೦ ೦

ಕಂ||ನಡೆನಡೆಯೊಳ್ನುಡಿನಡೆಯೊಳ್|
ಕುಡುನಡೆಯೊಳ್ ತನಗೆ ನಿಂದೆಪೊರ್ದ
ದತೆರದಿಂ ||
ನಡೆವುದು ನುಡಿವುದು ಕುಡುವುದು |
ಪಡೆವುದು ಸತ್ಕೀರ್ತಿಯಂ
ವಿದಗ್ಧಲಲಾಮ ||

ಶತಕ ಸಾಹಿತ್ಯದಲ್ಲಿ ಅನೇಕವುಗಳಲ್ಲಿ ರಸಾಭಾಸ ಮತ್ತು ಭಾವ ದಾರಿದ್ರ್ಯಗಳನ್ನೂ ಕಾಣಲು ಸಾಧ್ಯವಿದೆ. ಆದರೆ ಅವುಗಳ ಜನ್ಮೋದ್ದೇಶ ಮತ್ತು ಧ್ಯೇಯಗಳನ್ನು ಸಾಧಿಸುವಷ್ಟು ಶಕ್ತಿ ಸಂಗ್ರಹ ಅವಕ್ಕಿದೆ ಎಂಬುದು ಸತ್ಯ.

ದುರ್ಮಾರ್ಗಕ್ಕಿಳಿದವನನ್ನು ಮೇಲಕ್ಕೆತ್ತುವುದು ಅಸಾಧ್ಯವೆನ್ನುತ್ತಾನೆ ಗುಮ್ಮಟಾರ್ಯ. 'ಮಸಿಯಂ ಪಾಲಿಂದೆ ಕರ್ಚಲ್ ಬಿಳಿದೆ ಸಿಕುಮೆ?......ದುರ್ಗುಣದೊಳನು ದಿನಂ ಮೆಚ್ಚುವಟ್ಟಿರ್ದನಂ ಮಾಣಿಸಲೆನ್ನಂ ಬರ್ಕುಮೇ ಸದ್ವಚನ ಶತದೊಳಂ?' ಮಗ್ಗೆಯಮಾಯಿದೇವನ ಪೂಜೆಯ ಕ್ರಮವನ್ನು ಇಂದಿನ ಭಾರತೀಯರು ಕಲಿಯುವುದುತ್ತಮ 'ಎಲ್ಲರುಂ ನಿನ್ನವರೆಂದು ನಿನ್ನೊಡವೆಯೆಂದು ನಿಜೇಶ್ವರ ಪೂಜೆಗೆಯ್ವನಂ ಧನ್ಯನದೀಗ ಪೂಜೆ' ವೀರಭದ್ರ ರಾಜನು ಅರ್ಧ ನಾರೀಶ್ವರನ ಪ್ರತೀಕವು ಆತನ ತ್ಯಾಗದ ಧ್ವಜಪಟವೆನ್ನುತ್ತಾನೆ. 'ಮುಡದಿಗೆ ಮೆಚ್ಚಿದವರ್ ಪೊಂದೊಡವಂ ರತ್ನಂಗಳಂ ನವೀನಾಂಬರನುಂ ಕೊಡುವರ್; ನಿನ್ನಂದದೊಳರೆಯೊಡಲಂ ಕೊಟ್ಟವರ ಕಾಣೆ ನಂಬಿಕೆಯರಸಾ' ನೀತಿ ಕಂದ ಶತಕವು ವಾಚನದ ಕ್ರಮವನ್ನು ಹೇಳಿದೆ

ಕಂ|| ಮಾಸಿತ ಪದಪಂ ಪದ ಪಂ |
ಧಾನಮನರ್ಥಪ್ರತೀತಿಯುಂ ಕವಿ
ಹೃದಯ ||
ಸ್ಥಾನ ಮನಂದೋದದೆ ಕ। ಣ್ಣೀನೆಯ
ಕರಡಿಯವೋಲರಚುವಂ ವಾಚಕನೆ?||

ತಾತಾಚಾರ್ಯರು ವಿಶಿಷ್ಟಾದ್ವೈತಿಗಳಾದರೂ ಶಿವನ ಪಕ್ಷಪಾತಿಗಳು! ಅಳಸಿಂಗಾಚಾರ್ಯರು ಮಾನವನು ಕಟ್ಟಕಡೆಗೆ ತನ್ನೊಡನೊಯ್ಯುವ ಬುತ್ತಿಯ ಕುರಿತು ವಾಚಕರಿಗೆ ಮನದಟ್ಟಾಗುವಂತೆ ಹೇಳಿದ್ದಾರೆ.

ವೃ|| ಸಿರಿಯಿರ್ದಲ್ಲಿಯೆ ನಿಲ್ವುದಂಗನೆಯರುಂ ನಿಲ್ವರ್ ಗೃಹದ್ವಾರದೊಳ್
ಗುರುಮಾನ್ಯರ್ ಪುರವೀಧಿಯೊಳ್ಪರಿ
ಜನಂಗಳ್ ಗ್ರಾಮಸೀಮಾಂತ
ದೊಳ್ ||
ತೊರೆವರ್ ಮತ್ತನಿಬರ್ ಶ್ಮಶಾನದೆ
ಡೆಯೊಳ್ ಮೇಣ್ ಪುಣ್ಯಪಾಪಂ
ಗಳಿಂ
ಬಿರಡೇ ತನ್ನೊಡನೆರ್ಪುವಲ್ತೆ ಕಡೆ
ಯೊಳ್ ಶ್ರೀ ಚೆಲ್ವನಾರಾಯಣಾ ||

ಕನ್ನಡ ಸಾಹಿತ್ಯದಲ್ಲಿ ಎಂಭತ್ತು ಶತಕಗಳು ಜನ್ಮವೆತ್ತಿದ್ದರೂ ರೂಢಿಯಲ್ಲಿ ಹತ್ತೆಂಟು ಶತಕಗಳು ಮಾತ್ರ ಕಾಟುಕಾ ಜೀವದಿಂದ ಸಾಹಿತ್ಯರಂಗದಲ್ಲಿ ಆಡಿಗಿ ಆಡಗಿ ಅಡ್ಡಾಡುತ್ತಿರುವುದು ಕನ್ನಡಿಗರ ಸಾಹಿತ್ಯ ಪ್ರೇಮ ಮತ್ತು ನೀತಿ ಧರ್ಮ ನಿಷ್ಠೆಯನ್ನು ಸಾರುತ್ತಿದೆ. ಇಂದಿನ ಕರ್ನಾಟಕದ ವಿಷಮ ವಾತಾವರಣವನ್ನು ಶುದ್ಧೀಕರಿಸುವುದು ಕನ್ನಡಿಗರ ಅವಶ್ಯ ಕರ್ತವ್ಯ. ಅದಕ್ಕಾಗಿ ಓಲೆಯ ಪುಸ್ತಕಗಳ ಭಂಡಾರದಲ್ಲಿ ಮೂಲೆ ಗುಂಪಾಗಿ ಬಿದ್ದು ಪುಸ್ತಕ ಕೀಟಗಳಿಗೆ ತುತ್ತಾಗುತ್ತಿರುವ ಅಮೂಲ್ಯ ಶತಕಗಳಲ್ಲಿ ಒಂದೊಂದನ್ನು ಕನ್ನಡ ನಾಡಿನ ಶ್ರೀಮಂತರು ಸಂಗ್ರಹಿಸಿ ವಿದ್ವಾಂಸರಿಂದ ಪರಿಷ್ಕರಿಸಿ ಸುಂದರವಾಗಿ ಮುದ್ರಿಸಿ ಪ್ರಕಟಿಸುವ ಭಾರ ಹೊತ್ತರೆ, 'ಹಾಹಾ' ಅನ್ನುವುದರೊಳಗೆ ಎಲ್ಲಾ ಶತಕಗಳೂ ಬೆಳಕು ಕಂಡು ಮಾರುಕಟ್ಟೆಗಳಲ್ಲಿ ಸುಲಭ ಬೆಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾದರೆ, ದೇಶ ಭಾಷಾ ಸೇವೆಗಳೆರಡೂ ಜೊತೆಜೊತೆಯಾಗಿ ಸಾಗಿ, ಕನ್ನಡಿಗರ ಹೃದಯ ಸಂಸ್ಕಾರವೂ ಆಗಿ ಪುಣ್ಯಕ್ಕೆ ಭಾಗಿಗಳಾಗುವರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ದೇಶ-ಭಾಷಾ ಸೇವೆಯೇ ಈಶ ಸೇವೆಯಲ್ಲವೆ? ಎಲ್ಲೆಲ್ಲೂ ಕನ್ನಡ ನುಡಿಯ ನಡಿಗೆ ತಡೆಬಾರದಿರಲಿ!

ಬಾಲಾಶ್ರಮದ ಹಾವಳಿಯ ಕತೆಯೇ?
ವೇಶ್ಯಾಪುತ್ರಿಯ ಮಾನಾಪಹಾರದ ಚಿತ್ರವೇ?
ಯಾವುದು?

ಸನ್ಯಾಸಿಯ ಸೋಗಿನಲ್ಲಿ!

ಸನ್ಯಾಸದ ಹೆಸರಿನಲ್ಲಿ ವಿನ್ಯಾಸವೇ?
ವೇಶ್ಯಾಪುತ್ರಿಯರಿಗೆ ನೀತಿಯ ಜೀವನ ನಡೆಸುವ ಹಕ್ಕಿಲ್ಲವೇ?
ಈ ಪ್ರಶ್ನೆಗಳಿಗೆ ತಕ್ಕ ಉತ್ತರ ಬೇಕೆಂದಿದ್ದರೆ
ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರ
ಈ ವಿಷಾದಾಂತ ಕಾದಂಬರಿಯನ್ನೋದಿರಿ.
ಬೆಲೆ: 0 - 75 ಪೈಸೆಮಾತ್ರ. ಟ. ಖ. ಪ್ರತ್ಯೇಕ.
ಸಿಗುವ ಸ್ಥಳಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಕಾವ್ಯರ್ಷಿಗಳ ಕೊನೆಯ ಭೇಟಿ

ಬರೆದವರು
ಶ್ರೀ ಕೆ. ಎನ್. ಭಟ್,
ಶಿರಾಡಿಪಾಲ್.

ರಾಷ್ಟ್ರಕವಿ ಗೋವಿಂದ ಪೈಯವರು ಕಾವ್ಯರ್ಷಿ. ಅವರು ಎಲ್ಲರಿಗೂ ಹಿಲುಕುವ ವರಕವಿ; ಸಂಶೋಧಕ, ವಿಮರ್ಶಕರಾಗಿದ್ದರೂ ಹಲವಾರು ನವ ಸಾಹಿತಿಗಳಿಗೆ ಮಾರ್ಗದರ್ಶಕರೂ ಆಗಿದ್ದರು. ಶ್ರೀ ಶಿರಾಡಿಪಾಲರು ತಮ್ಮ ಪ್ರಥಮ, ಅದರೆ ಕೊನೆಯ ಭೇಟಿಯ ಸಂಸ್ಮರಣೆಯನ್ನು ಇಲ್ಲಿ ನೀಡಿ ದಿ| ಪೈಯವರ ಸ್ನಿಗ್ಧ ಹೃದಯದ ಪರಿಚಯ ಮಾಡಿಕೊಟ್ಟಿದ್ದಾರೆ.

ಸನ್ 1956ನೇ ಇಸವಿ, ಜೂನ್ ತಿಂಗಳು. ಮಂಗಳೂರಿನ ರೈಲ್ವೇ ನಿಲ್ದಾಣದಲ್ಲಿ ಆಬಾಲವೃದ್ಧರನ್ನೊಳಗೊಂಡ ಯುವಕರ ಗುಂಪೊಂದು ಯಾರನ್ನೋ ಸುತ್ತುವರಿದು ನಿಂತಂತೆ ಕಾಣಿಸಿತು. ಕಾಸರಗೋಡಿಗೆ ಹೊರಟು ಅದೇ ನಿಲ್ದಾಣದಲ್ಲಿ ನಿಂತುಕೊಂಡಿದ್ದ ನನ್ನ ದೃಷ್ಟಿ ಆ ಕಡೆಗೆ ಹೊರಳಿತು. ದೂರದಿಂದಲೇ ತುದಿಗಾಲಿನಲ್ಲಿ ನಿಂತು ನೋಡಿದೆ! ಆಗ ಮಾನ್ಯ ಗೋವಿಂದ ಪೈಯವರು ಆ ಗುಂಪಿನ ಮಧ್ಯದಲ್ಲಿ ನಿಂತಿದ್ದುದನ್ನು ಕಂಡೆ. ಮಾನ್ಯ ಗೋವಿಂದ ಪೈಯವರನ್ನು ಆವರೆಗೆ ನಾನು ಪ್ರತ್ಯಕ್ಷವಾಗಿ ನೋಡಿರಲಿಲ್ಲ. ಆದರೆ ಅವರೊಡನೆ ಒಂದೆರಡು ವರ್ಷಗಳ ಮೊದಲಿನಿಂದಲೂ ಪತ್ರವ್ಯವಹಾರ ಮಾಡುತ್ತಿದ್ದು ಫೋಟೋದಲ್ಲಿ ಅವರನ್ನು ನೋಡಿದ ಪರಿಚಯವಿತ್ತು. ಮಾನ್ಯ ಪೈಯವರ ಸರಳತೆ, ಹಾಗೂ ಸಹೃದಯತೆಯ ಕುರಿತು ನನ್ನ ಮಿತ್ರರು ಹೇಳುವುದನ್ನು ಕೇಳಿದ್ದೆ. ಆದರೆ ಸತ್ಯವನ್ನು ಕಣ್ಣಾರೆ ಕಂಡಿರಲಿಲ್ಲ.

ಮಂಗಳೂರಿಗೆ ಆಗಮಿಸಿದ್ದ ಶ್ರೀ ಪೈಗಳು ಕೇವಲ ಒಂದು ಮುಂಡು, ಪಂಚೆ ಮತ್ತೊಂದು ಚಿಕ್ಕ ಅಂಗಿ (ಜುಬ್ಬ) ಇದಿಷ್ಟನ್ನು ಮಾತ್ರ ಧರಿಸಿದ್ದರು. ಇಷ್ಟು ಸಾದಾ ಉಡುಪಿನಲ್ಲಿದ್ದರೂ, ವಯೋವೃದ್ಧರೂ ಜ್ಞಾನಪೂರ್ಣರೂ ಆದ ಮಾನ್ಯ ಪೈಗಳ ವ್ಯಕ್ತಿತ್ವವೆಂದರೆ ಗಂಭೀರ ಹಾಗೂ ತೇಜಸ್ಸಿನಿಂದ ಕಳೆಗೂಡಿತ್ತು.

ನಾನು ಆ ಗುಂಪಿನ ಬಳಿ ಸಾರಿ ದ್ವಿತೀಯ ಮುದ್ರಣವನ್ನು ಕಂಡಿದ್ದ ನನ್ನ ಒಂದು ಪುಸ್ತಕವನ್ನು ಶ್ರೀ ಪೈಯವರಿಗೆ ಕೊಡುವುದಕ್ಕಾಗಿ ಕೈಯಲ್ಲೇ ಹಿಡಿದುಕೊಂಡು ಅವರ ಮುಂದೆ ಹೋಗಿ ನಿಂತೆ. ಶ್ರೀ ಗೋವಿಂದ ಪೈಯವರನ್ನು ಭೇಟಿ ಮಾಡಬೇಕೆಂದಿದ್ದ ನನ್ನ ಬಹು ದಿನಗಳ ಆಸೆ ಈಡೇರಿದುದನ್ನು ಕಂಡು ನಾನು ಸಂತೋಷದಿಂದ ಮೈಮರೆತಿದ್ದೆ! ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದೆ. ಆ ಬಳಿಕ ಅವರು ನನ್ನ ಕಡೆಗೆ ತಿರುಗಿ ನೋಡಿದಾಗ ನಮಸ್ಕಾರ ಮಾಡಿ, ನನ್ನ ಪುಸ್ತಕವನ್ನು ಅವರ ಕೈಗಿತ್ತೆ. ಆಗಿನ ಅವರ ಪ್ರೀತಿ ವಾತ್ಸಲ್ಯಗಳಿಂದೊಡಗೂಡಿದ ಮುಖಭಾವ ಈಗಲೂ ಚಿತ್ರದಂತೆ ನನ್ನ ಹೃದಯದಲ್ಲಿ ಅಚ್ಚೊತ್ತಿದೆ!

ನಾನು ಕೊಟ್ಟ ಪುಸ್ತಕದಲ್ಲಿದ್ದ ನನ್ನ ಹೆಸರನ್ನು ನೋಡಿದ ಶ್ರೀ ಪೈಗಳು-- "ನೀವೆಯೋ?" ಎಂದು ಕೇಳಿದರು "ಹೌದು"ಎಂದೆ, ನಾನು. "ಇತ್ತೀಚೆಗೆ ಉಡುಪಿಯ 'ನವಯುಗ'ದಲ್ಲಿ ನಿಮ್ಮ ಬರಹ ಅಚ್ಚಾಗುತ್ತಿರುವುದನ್ನೂ ಕಂಡಿದ್ದೇನೆ", ಎಂದರು ಪುನಃ ಶ್ರೀ ಪೈಗಳು. "ಆಗಾಗ ಏನಾದರೂ ಬರೆಯುತ್ತ ಇರುತ್ತೇನೆ. ಬರೆದುದನ್ನು ನಾಲ್ಕು ಜನ ನೋಡಲಿ, ಎಂದು ಪತ್ರಿಕೆಗಳಿಗೆ ಕೊಡುತ್ತಿದ್ದೇನೆ" ಎಂದೆ. ಅಷ್ಟರಲ್ಲಿ ರೈಲು ಹೊರಡಲು ಸಿದ್ಧವಾದುದರಿಂದ, ಗುಂಪು ಚದುರಿತು.

ನಾನು ಪ್ರಯತ್ನಪಟ್ಟು ಮಾನ್ಯ ಪೈಗಳ ಹತ್ತಿರದಲ್ಲೇ ಕುಳಿತುಕೊಂಡೆ. ರೈಲು ಹೊರಟಿತು. ಶ್ರೀ ಪೈಗಳು ಇತ್ತೀಚೆಗೆ ತಾವು ಬೀಡಾ ತಿನ್ನುವುದನ್ನು ಆರಂಭಿಸಿದ ರೀತಿಯನ್ನು ಹೇಳುತ್ತ ನನಗೂ ಒಂದು ಬೀಡಾವನ್ನು ಕೊಟ್ಟು ತಾವೂ ತಾಂಬೂಲ ಚರ್ವಣ ಮಾಡುತ್ತ ನನ್ನೊಡನೆ ಮಾತನಾಡ ತೊಡಗಿದರು.

"ನೀವು ಕನ್ನಡ ವಿದ್ವಾನ್ ಆಗಿದ್ದೀರೋ? ಹಿಂದಿಯಲ್ಲಿ ಯಾವ ಪರೀಕ್ಷೆ ಪಾಸು ಮಾಡಿದ್ದೀರಿ? ನಿಮ್ಮ ಮಾತೃಭಾಷೆ ಮರಾಠಿಯಲ್ಲವೆ? ಏನೆಲ್ಲಾ ಬರೆದಿದ್ದೀರಿ? ಮೊದಲಾದ ಪ್ರಶ್ನೆಗಳನ್ನು ಕೇಳಿ, ನನ್ನ ಉತ್ತರವನ್ನು ಆಲಿಸುತ್ತಿದ್ದ ಶ್ರೀ ಪೈಯವರು ಕೊನೆಗೆ— 'ಕನ್ನಡದ ಸೇವೆ ಮಾಡಿ' ಎಂದು ನನ್ನನ್ನು ಹರಸಿ ಬಳಿಕ ದೇಶದ ರಾಜಕೀಯದ ವಿಚಾರದಲ್ಲಿ ಮಾತನಾಡ ತೊಡಗಿದರು.

ಆ ದಿನಗಳಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಕುರಿತಾದ ಮಾತು ಎಲ್ಲೆಲ್ಲಿಯೂ ಕೇಳಿಸುತ್ತಿತ್ತು. ಈ ವಿಷಯವನ್ನೇ ವಿಮರ್ಶಿಸುತ್ತ ಕೊನೆಗೆ ಅವರು— 'ಕರ್ನಾಟಕ ಪ್ರಾಂತ್ಯಕ್ಕೆ ಮಹಾ ಕರ್ನಾಟಕ'ವೆಂದು ಹೆಸರಿಸದೆ, 'ಮಹಾ ಮೈಸೂರು' ಎಂದು ಹೆಸರಿಸುವ ವಿಚಾರದಲ್ಲಿ ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಕೊನೆಗೆ ಮಾನ್ಯ ಪೈಯವರು ತಮ್ಮ ವಿದ್ಯಾರ್ಥೀ ಜೀವನದ ಅಲ್ಪ ಪರಿಚಯವನ್ನೂ ಮಾಡಿಕೊಟ್ಟರು. ಈಗ ರಾಷ್ಟ್ರಪತಿಗಳಾಗಿರುವ (ಆಗ ಉಪರಾಷ್ಟ್ರಪತಿ) ಮಾನ್ಯ ಡಾ| ಎಸ್ ರಾಧಾಕೃಷ್ಣನ್‌ರವರು ತಮ್ಮ ಬಾಲ್ಯ ಸ್ನೇಹಿತರೆಂದೂ, ಮದ್ರಾಸಿನಲ್ಲಿ ತಮ್ಮ ಕಾಲೇಜು ಶಿಕ್ಷಣವನ್ನು ಅವರೀರ್ವರೂ ಒಟ್ಟೊಟ್ಟಿಗೇ ಪಡೆದುದಾಗಿಯೂ ಹೇಳಿ, ಡಾ| ಶ್ರೀ ಎಸ್. ರಾಧಾಕೃಷ್ಣನ್‌ರವರು ಆಗಿನಿಂದಲೂ ಮೇಧಾವಿಯಾಗಿದ್ದರೆಂದೂ ತಿಳಿಸಿದರು. ಅಷ್ಟರಲ್ಲಿ ರೈಲು ಮಂಜೇಶ್ವರಕ್ಕೆ ಸಮೀಪವಾಗುತ್ತಿರುವುದನ್ನು ಗಮನಿಸಿದ ನಾನು ಆಗ ವಿಶೇಷ ಚರ್ಚೆಗೊಳಪಟ್ಟಿದ್ದ ಪಾರ್ತಿ ಸುಬ್ಬನ ವಿಚಾರವಾಗಿ ಶ್ರೀ ಪೈಯವರನ್ನು ಪ್ರಶ್ನಿಸಿದೆ.

ಶ್ರೀ ಪೈಯವರು ಪಾರ್ತಿ ಸುಬ್ಬನ ವಿಚಾರದಲ್ಲಿ— 'ಈಗಿನ ಯುವಕರು ಸಂಶೋಧನೆಗೆ ಹೆಚ್ಚಿನ ಮಹತ್ವವನ್ನು ಕೊಡದೆ-ಚರ್ಚೆಗೇ ಹೆಚ್ಚು ಮಹತ್ವವನ್ನು ಕೊಡುತ್ತಿರುವುದು ಬೇಸರದ ವಿಚಾರವಾಗಿದೆ' ಎಂದರು. ಅವರು ಮತ್ತೂ ಮುಂದುವರಿಸಿ— 'ನಾನೀಗ ಮುದುಕನಾಗಿರುವುದರಿಂದ ಆ ಚರ್ಚೆಯಲ್ಲಿ ಭಾಗವಹಿಸುವುದು ಬೇಡವೆಂದು ನಿರ್ಧರಿಸಿದ್ದೇನೆ! ಚರ್ಚೆ ಮಾಡುವವರು ಎಷ್ಟು ಚರ್ಚೆ ಮಾಡಿಕೊಂಡರೂ, ಪಾರ್ತಿ ಸುಬ್ಬ ಪುನಃ ಹುಟ್ಟಿ ಬಂದು ತನ್ನ ನಿಜ ವೃತ್ತಾಂತವನ್ನು ಹೇಳಲಾರ! ಚರ್ಚೆ ಮಾಡುವವರು ಆ ಸಂಬಂಧದಲ್ಲಿ ಸಲಹೆ ಸೂಚನೆಗಳಿಗಾಗಿ ನನ್ನಲ್ಲಿಗೂ ಬಂದಿದ್ದಾರೆ. ಆದರೆ ನನ್ನ ಸಲಹೆ ಪಡೆದು, ಮತ್ತವರು ಬರೆಯುವುದು ಮತ್ತೊಂದು ವಿಧ! ಮಂಜೇಶ್ವರಕ್ಕೆ ನಮ್ಮ ಮನೆಗೆ ನೀವೂ ಒಮ್ಮೆ ಬನ್ನಿ!" ಎಂದು ಹೇಳಿ ಮಾತು ಮುಗಿಸಿದರು.

ಅಷ್ಟರಲ್ಲಿ ರೈಲು ಮಂಜೇಶ್ವರದ ನಿಲ್ದಾಣದಲ್ಲಿ ನಿಂತಿತ್ತು. "ನನಗೆ ತಮ್ಮ ಆಶೀರ್ವಾದವಿರಲಿ! ಖಂಡಿತ ಇನ್ನೊಂದು ಸಲ ತಮ್ಮ ಮನೆಗೆ ಬರುತ್ತೇನೆ ನಮಸ್ಕಾರ!" ಎಂದು ಹೇಳಿ ಕೈಜೋಡಿಸಿದೆ.ರೈಲು ಮುಂದೆ ಹೊರಟಿತು, ಮಾನ್ಯ ಗೋವಿಂದಪೈಯವರು ಕಣ್ಮರೆಯಾದರು!

ಈ ಪ್ರಥಮ ಭೇಟಿಯೇ ಕೊನೆಯ ಭೇಟಿಯಾಗಬಹುದೆಂದು ಆಗ ನಾನು ಕನಸಿನಲ್ಲಿಯೂ ಕಲ್ಪಿಸಿರಲಿಲ್ಲ!

ಮಾನ್ಯ ಪೈಯವರೊಡನೆ ನನ್ನ ಪತ್ರವ್ಯವಹಾರ ಬಹಳವಾಗಿತ್ತು. "ಕನ್ನಡದಲ್ಲಿ ಎಷ್ಟುಬಗೆ ಮರಾಮಾಯಣಗಳಿವೆ?" "ಕಾಶಿಕ ರಾಮಾಯಣ" ಎಂಬ ಕಾವ್ಯವೊಂದು ಇತ್ತೀಚೆಗೆ ದೊರೆತಿದೆ. ಅದರ ರಚಕರಾರು? ಕನ್ನಡದ ಪ್ರಾಚೀನ ಸಾಹಿತ್ಯ ಹಿಂದೀಗೆ ಭಾಷಾಂತರಪಟ್ಟಿದೆಯೇ? ಇವೇ ಮೊದಲಾದ ಅನೇಕ ಪ್ರಶ್ನೆಗಳ ಕುರಿತು ಮಾನ್ಯ ಪೈಯವರು ನನಗೆ ಮಾರ್ಗದರ್ಶನ ನೀಡಿದ್ದರು.

ನನ್ನ ಓರ್ವ ಮಿತ್ರರ ವಶ, ಅವರ ಹಿರಿಯರಿಗೆ ಸಂಬಂಧಿಸಿದ "ಈಸ್ಟ್ ಇಂಡಿಯಾ ಕಂಪೆನಿ"ಯ ಮುದ್ರೆಯುಳ್ಳ ಆ ಕಾಲದ ರೆಕಾರ್ಡ (ವೀಲ್ ನಾಮೆ) ಒಂದು ವಿಚಿತ್ರ ಲಿಪಿಯುಲ್ಲಿ ಬರೆಯಲ್ಪಟ್ಟುದು ಇದ್ದಕ್ಕಿದ್ದಂತೆಯೇ ಇತ್ತು. ಅದರ ಭಾಷೆ, ಲಿಪಿ, ಯಾವುದೂ ಕೂಡಾ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಅದರ ಒಂದು ಪ್ರತಿ (ನಾಲ್ಕು ಸಾಲು) ಪ್ರತಿಲಿಪಿ ಮಾಡಿ ನನ್ನ ಆ ಮಿತ್ರರ ಅಪೇಕ್ಷೆಯಂತೆ, ಸಂಶೋಧನಾರ್ಥವಾಗಿ ಮಾನ್ಯ ಪೈಯವರಿಗೆ— ಕಳುಹಿಸಿ ಕೊಟ್ಟಿದ್ದೆ. ಆದರೆ ಅವರ ಅನಾರೋಗ್ಯ ಹಾಗೂ ವೃದ್ಧಾಪ್ಯದ ದೆಸೆಯಿಂದಾಗಿ ಈ ಪ್ರತಿಯನ್ನು ಅವರಿಂದ ಪರಿಶೀಲಿಸಲಾಗಲಿಲ್ಲ. ಮತ್ತೆ ಒಂದೆರಡು ತಿಂಗಳಲ್ಲೇ ಮಾನ್ಯ ರಾಷ್ಟ್ರಕವಿ ಗೋವಿಂದ ಪೈಯವರ ನಿಧನದ ವಾರ್ತೆ ಕೇಳಿದಾಗ ನನ್ನ ಹೃದಯಕ್ಕೆ ನಮ್ಮ ಓರ್ವ ಬಂಧುವನ್ನು ಅಗಲಿದಂತೆ, ಆಘಾತವಾಯಿತು!

ಬಹು ಭಾಷಾ ಪಂಡಿತರೂ ಕಾವ್ಯರ್ಷಿಗಳೂ ಸಂಶೋಧಕರೂ ಆಗಿದ್ದ ರಾಷ್ಟ್ರಕವಿ ಗೋವಿಂದ ಪೈಯವರು, ಉತ್ತರದ ಮಹಾ ಪಂಡಿತರಾಗಿದ್ದ ಡಾ| ರಘುವೀರರಂತೆ, ದಕ್ಷಿಣದ ಮಹಾ ಪಂಡಿತರಾಗಿ, ದಕ್ಷಿಣೋತ್ತರದ ಸಂಶೋಧಕರಾಗಿದ್ದರು. ಅವರ ಜೀವಿತ ಕಾಲದಲ್ಲಿ ನಮ್ಮ ಪ್ರಾಂತೀಯ ಅಥವಾ ಕೇಂದ್ರ ಸರಕಾರ ಸಹ ಅವರನ್ನು ಗೌರವಿಸಿ ಪುರಸ್ಕರಿಸುವ ಯೋಗ ಒದಗಿ ಬರಲಿಲ್ಲ! ಇನ್ನಾದರೂ ನಮ್ಮ ಜನತೆ, ನಮ್ಮ ಸರಕಾರ ಮಾನ್ಯ ಗೋವಿಂದ ಪೈಯವರ ಅಮರ ಸ್ಮಾರಕವೊಂದನ್ನು ನಿರ್ಮಿಸಿ ಕರ್ನಾಟಕದ ಹಿರಿಮೆಯನ್ನು ಬೆಳಗಿಸಲಿ! ಎಂದು ಹಾರೈಸುತ್ತೇನೆ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಯುಗ ಪ್ರೆಸ್, ಉಡುಪಿ.

PLEASE PATRONIZE OUR ADVERTISERS

ಬರೆದವರು
ಪ್ರೊ। ಬಿ. ಎಚ್. ಶ್ರೀಧರ

ಸಮಾಜದ ಆರೋಗ್ಯಸಾಧನೆ

ನಮ್ಮಲ್ಲಿ ಇಂದು ಕಾಣುವ ನಿರುತ್ಸಾಹ, ಅಶಿಸ್ತು, ಅಮದ್ಯಾಚಾರ ಮೊದಲಾದುವುಗಳಿಗೆ ಸಮಾಜದ ಆರೋಗ್ಯವು ನೆಟ್ಟಗಿಲ್ಲದಿರುವುದೇ ಮೂಲ ಕಾರಣ. ಕಳೆದುಕೊಂಡ ಆರೋಗ್ಯವನ್ನು ಹೇಗೆ ಮರಳಿ ಸಾಧಿಸಬಹುದು ಎಂಬುದನ್ನು ಈ ವಿಚಾರಾತ್ಮಕ ಲೇಖನದಲ್ಲಿ ಪ್ರೊ। ಬಿ ಎಚ್. ಶ್ರೀಧರರು ಪರಿಣಾಮಕಾರಿಯಾಗಿ ವಿವೇಚಿಸಿದ್ದಾರೆ.

ಸಿನೆಮವೊಂದನ್ನುಳಿದರೆ ಈಗ ಜನರಿಗೆ ಸಾಮಾನ್ಯವಾಗಿ ಸಾಮೂಹಿಕ ಮನೋರಂಜನೆ ಇಲ್ಲವೆಂದೇ ಹೇಳಬಹುದು. ಪರಂಪರಾಗತವಾದ ಆಟ, ನಾಟಕ, ಸಂತೆ, ಜಾತ್ರೆಗಳ ಬಗ್ಗೆ ಪಟ್ಟಣಿಗರ ಹಾಗೂ ವಿದ್ಯಾವಂತರ ಆಸ್ಥೆ ಕಡಿಮೆಯಾಗುತ್ತ ಹೋಗುದರಿಂದ ಅವುಗಳ ಸಂಖ್ಯೆಯೂ ಉತ್ಸಾಹಜನಕ ವೈಭವವೂ ಮಾಸಿ ಹೋಗಲಾರಂಭಿಸಿವೆ. ಬಂದು, ಗದ್ದಲ, ಮೆರವಣಿಗೆ, ಆಂದೋಲನ, ಸತ್ಯಾಗ್ರಹ, ಉಪವಾಸ ಮುಂತಾದವುಗಳು ನಡೆದಾಗ ಹಿಂಸೆ, ನಾಶಗಳು ನಡೆಯಲಾರಂಭಿಸಿದ್ದು ಸಾಮಾಜಿಕ (Diversion) ವಿನೋದನದ ಅವಕಾಶಗಳ ವೈವಿಧ್ಯವೂ ಸಂಖ್ಯೆಯೂ ಕಡಿಮೆಯಾದುದರಿಂದಲೇ. ಎಷ್ಟೋ ಜನರಿಗೆ ಒಂದು ವಿಧದ (Wild joy) ಅರಣ್ಯಾನಂದೋದ್ರೇಕವನ್ನು ಅನುಭವಿಸುವ ಸಂಧಿಯು ಪುರಸ್ಕರದ ಮೆರವಣಿಗೆ ಮತ್ತು ಅದಕ್ಕೆ ಸಂಬಂಧಿಸಿದ ವಿನಾಶಕ ಚಟುವಟಿಕೆಗಳಲ್ಲಿ ದೊರಕುತ್ತದೆ.

ದಿವಂಗತ ಬಾಲ ಗಂಗಾಧರ ತಿಲಕರು ಧಾರ್ಮಿಕ ಹಬ್ಬಗಳನ್ನು ರಾಷ್ಟ್ರೀಯಗಳನ್ನಾಗಿ ಮಾಡಿ ಆ ಸಂದರ್ಭಗಳಲ್ಲಿ ಪರಂಪರಾಗತವಾದ ಹರಿಕಥೆ ಮುಂತಾದ ಸಾಂಸ್ಕೃತಿ ಕಾರ್ಯಕ್ರಮಗಳನ್ನು ಸಂಘಟಿಸಿ ಆ ಮೂಲಕ ಸ್ವಾತಂತ್ರ್ಯಾಂದೋಲನಕ್ಕೆ ಅಗತ್ಯವಾದ ಸಮಾಜ ಶಿಕ್ಷಣವನ್ನು ಜನತೆಗೆ ಒದಗಿಸಿ ಯಶಸ್ವಿಗಳಾದದ್ದು ಎಲ್ಲರಿಗೂ ತಿಳಿದ ಸಂಗತಿ. ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ರಾಜಕೀಯ ಪಕ್ಷಗಳಾವುವೂ ಇಂಥ ಯಾವ ಕ್ರಮವನ್ನು ಯೋಚಿಸಿಕೊಂಡು ಮನೋರಂಜನದ ಮೂಲಕ ಸಮಾಜ ಶಿಕ್ಷಣವನ್ನು ಜನರಿಗೆ ದೊರಕಿಸಿಕೊಡಲು ಉಪಕ್ರಮಿಸಲಿಲ್ಲ. ಶಿಥಿಲ ಹೊಂದಿದ ಜಾತಿ ಬದ್ಧ ಸಮಾಜದಲ್ಲಿ ಸ್ವಯಂ ಸ್ಫೂರ್ತಿಯಿಂದ ಇಂಥ ಸಾರ್ವಜನಿಕ ಜ್ಞಾನಸತ್ರಗಳನ್ನು ನಡೆಯಿಸಲು ಯಾರೂ ಮುಂದಾಗಲಿಲ್ಲ. ಈ ಕೊರತೆಯನ್ನು ತುಂಬದೆ ಹೀಗೇ ಕಾಲ ಕಳೆದರೆ ಒದಗಿದ ಚಿಕ್ಕ ಪುಟ್ಟ ಆಂದೋಲನವೆಲ್ಲವುಗಳಲ್ಲೂ "ಗುಂಡ ಸರ್ಕಸ್" ಹೆಚ್ಚುತ್ತ ಹೋಗಬಹುದು.

ಗುಂಡ ಚಟುವಟಿಕೆಯಿಂದ ಒಂದೊಂದು ಸಲ ಒಂದೊಂದು ಕಡೆ ಸಾವಿರದಿಂದ ಕೆಲ ಲಕ್ಷಗಳ ವರೆಗಿನ ಆಸ್ತಿ ಹಾನಿ ಸಂಭವಿಸಿದ್ದುಂಟು. ಸರಕಾರ ಅಥವಾ ಸಾರ್ವಜನಿಕ ಸಂಸ್ಥೆ ಈ ನಷ್ಟವನ್ನು ಸಹಿಸ ಬೇಕಾಗುತ್ತದೆ. ಸಮಾಜ ಪ್ರಧಾನ ನಾಗರಿಕತೆಯಲ್ಲಿ ಸಮಾಜದ ಆಸ್ತಿಯ ನಾಶವು ಖಾಸಗಿ ಆಸ್ತಿಯ ಹಾನಿಯಷ್ಟೇ ಅಥವಾ ಅದಕ್ಕೂ ಹೆಚ್ಚು ಜನರಿಗೆ ಹೆಚ್ಚು ಕಾಲ ನಷ್ಟಕರವಾಗಿ ಪರಿಣಮಿಸುತ್ತದೆ ಎಂಬ ಪ್ರಜ್ಞೆ ಜನರಲ್ಲಿ ಸಾಕಷ್ಟು ಜಾಗ್ರತವಾಗಿಲ್ಲ. ಆದುದರಿಂದ ಮುಖಂಡರುಕಳಕಳಿಯಿಂದ ಅಡ್ಡ ಬಂದು ನಾಶಕ್ಕಿಳಿದ ಪುಂಡರನ್ನು ನಿಲ್ಲಿಸಲು ಸಾಕಷ್ಟು ಪ್ರಯತ್ನವನ್ನು ಎಲ್ಲ ಸಂದರ್ಭಗಳಲ್ಲೂ ಮಾಡಿದ್ದಾರೆ ಎಂದು ಹೇಳಲು ಬರುವಂತಿಲ್ಲ; ಸಾಕಷ್ಟು ನೈತಿಕ ಬಲವುಳ್ಳ ಮುಖಂಡರೂ ಎಲ್ಲ ಊರುಗಳಲ್ಲಿ ಇದ್ದಾರೆ ಎಂದು ಹೇಳಲೂ ಸಾಧ್ಯವಿಲ್ಲ. ಜೊತೆಗೆ ೧೭ ವರ್ಷ ಕಾಲ ಕಾಂಗ್ರೆಸ್ಸಿನ ಅಖಂಡ ಪ್ರಭುತ್ವ ನಡೆದಿರುವಾಗ ಉಳಿದ ರಾಜಕೀಯ ಮುಖಂಡರುಸ ಮಾಜ ಸ್ವಾಸ್ಥ್ಯದ ಬಗ್ಗೆ ಸಾಕಷ್ಟು ಉದಾಸೀನರಾಗಿಯೂ, ಪಕ್ಷಪಾತ ಸಲಾರಂಭಿಸಿದ್ದಾರೆ. ಅವರ ಕಾಂಗ್ರೆಸ್ ತಿರಸ್ಕಾರವು ಸರ್ವ ಜನಹಿತ ತಿರಸ್ಕಾರದ ರೂಪವನ್ನು ತಾಳಿಸಲ್ಪಲ್ಲವಾದರೂ ಕಾರ್ಯದಲ್ಲಿ ಪ್ರಕಟವಾಗುತ್ತ ಹೋಗಿದೆ ಇದು ದೇಶದ ದುರ್ದೈವ

ಭಾರತದಲ್ಲಿ ಸಮಾಜವೆಂಬುದು (ದೃಢವಾಗಿ) ಇಲ್ಲವೆಂದರೂ ಎನ್ನಬಹುದು ಅಥವಾ ಅದೊಂದು ಅನಾಥ ಪ್ರೇತವಾಗಿದೆ ಎಂದರೂ ಸಲ್ಲುತ್ತದೆ. ಸಮಾಜ ಪ್ರಜ್ಞೆ ಜಾಗ್ರತವಾಗದುದು ಯೋಜನೆಗಳ ಪಾಕ್ಷಿಕ ಯಶಸ್ಸಿಗೂ ಕಾರಣ. ಸ್ವತಂತ್ರವಾಗಿ ಭಾರತ ಬದುಕಿ ಉಳಿಯಲು ರಾಷ್ಟ್ರೀಯ ಸಮಾಜ ಪ್ರಜ್ಞೆ ಅನಿವಾರ್ಯ ಎಂಬುದು ಕೆಲವರಿಗೆ ಗೊತ್ತಿದ್ದರೂ ಬಹು ಜನರಿಗೆ ಅಂಥ ಪ್ರಜ್ಞೆಹೊಳೆಯುವಂತೆ ಮಾಡಲು ಉಪಾಯ ಹೊಳೆಯದಾಗಿದೆ. ಈ ಸ್ಥಿತಿಯಲ್ಲಿ ವಿಚಾರವಂತರು ರಾಷ್ಟ್ರೀಯ ಹಬ್ಬಗಳನ್ನು ಜ್ಞಾನ ಪ್ರಸಾರಕ ಸಾಧನಗಳನ್ನಾಗಿ ಬಳಸಿಕೊಳ್ಳಲು ಉದ್ಯುಕ್ತರಾದರೆ ಫಲಕಾರಿಯಾದೀತೆಂದು ತೋರುತ್ತದೆ.

ನಾಗರ ಪಂಚಮಿ, ಗಣೇಶ ಚೌತಿ, ನವರಾತ್ರಿ, ದೀಪಾವಳಿ, ಶಿವರಾತ್ರಿ ಮುತ್ತು ಯುಗಾದಿಗಳನ್ನು ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ ಶಾಸ್ತ್ರೋಪನ್ಯಾಸ ಮುಂತಾದವುಗಳ ವಿವಿಧ ರೂಪಗಳನ್ನು ಅಳವಡಿಸಿಕೊಂಡು ಸಾರ್ವಜನಿಕವಾಗಿ ಪ್ರತಿ ಗ್ರಾಮ-ಪಟ್ಟಣಗಳಲ್ಲಿ ಆಚರಿಸುವುದು ನಗರಸಭೆ ಮತ್ತು ಗ್ರಾಮ ಪಂಚಾಯತಿಗಳ ಕರ್ತವ್ಯವೆಂದು ಘೋಷಿಸಬಹುದು. ವಿದ್ಯಾ ಸಂಸ್ಥೆಗಳ ನೆರವನ್ನು ಈ ಸಂದರ್ಭಗಳಲ್ಲಿ ಪಡೆಯಬಹುದು. ಪ್ರತಿ ಊರಿಗೊಂದು ಸಾರ್ವಜನಿಕ ವಾಚನಾಲಯ ಮತ್ತು ಪುಸ್ತಕ ಭಂಡಾರ ನಿಲಯವನ್ನೂ ನಾಟ್ಯ ಮಂದಿರವನ್ನೂ ಸ್ಥಾಪಿಸುವುದು ಸ್ಥಳೀಯ ಸ್ವರಾಜ್ಯ ಸಂಸ್ಥೆಯ ಅನಿವಾರ್ಯ ಕರ್ತವ್ಯಗಳೊಳಗೆ ಬರಬೇಕು. ಈ ಪ್ರಕಾರ ನಿಯಮಗಳನ್ನು ರಚಿಸಿಕೊಂಡು ಸಮಾಜ ಶಿಕ್ಷಣದ ಆಂದೋಲನವನ್ನು ದೇಶದಾದ್ಯಂತ ನಡೆಸುವುದು ಅತ್ಯಗತ್ಯ. ನಮ್ಮ ಆಕಾಶವಾಣಿಗಳೂ ಪ್ರಕಟನ ಶಾಖೆಗಳೂ ಈ ಕಾರ್ಯದಲ್ಲಿ ಜಯ ಹೊಂದಲಿಲ್ಲ; ಅಭಿವೃದ್ಧಿಯ ಕ್ಷೇತ್ರಪಾಲರೂ ಸಾಕಷ್ಟು ಯಶಸ್ವಿಗಳಾಗಲಿಲ್ಲ.

ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಯ ಅಥವಾ ಮಾಧ್ಯಮಿಕ ಶಾಲೆಯ ಕಟ್ಟಡವನ್ನು ಉಕ್ತ ಕಾರ್ಯಗಳನ್ನು ನಡೆಸಲ ಬೇಕಾದ ಸ್ಥಳಾವಕಾಶ ಸಿಗುವಂತೆ ಕಟ್ಟಲಾರಂಭಿಸಬಹುದು. ಪಟ್ಟಣಗಳಲ್ಲಿ ಪುರಭವನಗಳನ್ನು ಅವಕ್ಕಾಗಿ ಸಜ್ಜುಗೊಳಿಸಬಹುದು. ಕಾರ್ಯಕ್ರಮಗಳ ಅಂಗವಾಗಿ ಬಡಬಗ್ಗರಿಗೆ ಅನ್ನ ವಸ್ತ್ರಗಳನ್ನು ಹಂಚುವ ವ್ಯವಸ್ಥೆಗಳನ್ನು ಮಾಡಿ ಭಾರತೀಯತೆಯನ್ನು ಬೆಳಸಬಹುದು. ಇಂಥ ಕಾರ್ಯಗಳ ನಿರ್ವಹಣೆಗಾಗಿ ಊರಿಗೊಂದು ಖಾಯಂ ಉತ್ಸವ ಸಮಿತಿಯನ್ನು ಆಯ್ಕೆ ಮಾಡಿಟ್ಟುಕೊಳ್ಳಬಹುದು ಅದರಲ್ಲಿ ಕಲಾವಿದರಿಗೂ ಸಾಹಿತಿಗಳಿಗೂ ಶಾಸ್ತ್ರಜ್ಞರಿಗೂ ಸ್ವಯಂಸೇವಕರಿಗೂ ಅಗ್ರಸ್ಥಾನ ಕೊಡಬೇಕು.

ಸಮಾಜದ ಸ್ವಾಸ್ಥ್ಯವನ್ನು ಕಾಯುವುದು ತನ್ನ ಜವಾಬುದಾರಿ ಎಂದು ಪ್ರತಿಯೊಬ್ಬ ಪ್ರಜೆಯೂ ಅರಿತ ಹೊರತು ಸದೃಢ, ಸಂಯುಕ್ತ, ಸಂಯತ ಕಾರ್ಯಕರ ಸಮಾಜವು ರಚಿತವಾಗಲಾರದು ಆದಾಗುವ ವರೆಗೆ ದೇಶದ ಶಿಕ್ಷಣ ಸಂಸ್ಥೆಗಳ ಕಾರ್ಯವು ಪೂರ್ಣವಾಗದು, ಸಾಂಗೋಪಾಂಗವೆನ್ನಿಸದು. ಹೊಸತನದ ಹುಚ್ಚಿನಿಂದ ಹೂಡುವ ಸೆಮಿನಾರು, ಸಿಂಪೋಜಿಯಮ್ಮು, ಕ್ಯಾಂಪು, ಲೆಕ್ಚರು, ಉಪದೇಶ, ಶ್ರಮದಾನ, ತರಬೇತು ಕೇಂದ್ರಗಳ ಸ್ವರೂಪಗಳೂ, ಕಾರ್ಯ ವಿಧಾನಗಳೂ ಬಹುಜನ ಸಮಾಜದ ಅಭಿರುಚಿಗೆ ಒಗ್ಗುವಂಥವಾಗಿಲ್ಲ. ಆದುದರಿಂದ ಅವು ಉದ್ದಿಷ್ಟ ಪರಿಮಾಣದ ಸಿದ್ಧಿಯನ್ನು ಹೊಂದಲಿಲ್ಲ— ಮುಂದೆ ಹೊಂದುವ ಸಂಭವವೂ ಕಂಡು ಬರುವುದಿಲ್ಲ. ಏಕೆಂದರೆ ಅವುಗಳ ಸಂಘಟಕರಿಗೆ ದೇಶೀಯ ಪರಂಪರಾಗತ ಅಭಿರುಚಿಗೆ ಸಹಜವಾದ ವ್ಯವಹಾರ ವಿಧಾನವನ್ನು ರೂಢಿಸಿಕೊಳ್ಳಲು ಸಾಧ್ಯವಾಗಿಲ್ಲ ಅವರ ವೇಷ-ಭಾಷೆಗಳೇ ಬಹುಮಟ್ಟಿಗೆ ಭಾರತೀಯ ಸ್ವರೂಪವನ್ನು ಪೂರ್ಣವಾಗಿ ಹೊಂದಿರವುದಿಲ್ಲ. ಇದಕ್ಕೆ ಇಂಗ್ಲೀಷು ಆಡಳಿತ ಕ್ಷೇತ್ರವನ್ನು ಬಿಟ್ಟು ಹೋಗುವುದು ಅನಿವಾರ್ಯ ಆವಶ್ಯಕತೆ. ಸರಕಾರವು ಈ ಅಂಶವನ್ನು ತ್ವರಿತವಾಗಿ ಗಮನಿಸಬೇಕು.

ಗ್ರಾಮ ಭಾರತ ಪಟ್ಟಣಭಾರತಗಳು(ನಗರ ಭಾರತವನ್ನುಳಿದು)ಈಗಲೂ(Sophistication) ಆಧುನಿಕ ಬಾಹ್ಯ ಸೌಂದರ್ಯವರ್ಧನ ಪ್ರವೃತ್ತಿಯನ್ನು ಮೆಚ್ಚುವುದಿಲ್ಲ ಏಕೆಂದರೆ ಅದಿಲ್ಲಿಯ ಮಾನ ವ್ಯಕ್ತಿವನ್ನು ಕೆಳಗೆಡಿಸುವುದು; ಹೃದಯ ಹೀನತೆಯನ್ನು ಬೆಳೆಯಿಸುವುದು. ಆಧುನಿಕ ಎಂದರೆ ಯಾರೋಪ್ಯ ಎಂಬ ತಪ್ಪು ತಿಳುವಳಿಕೆ ಉಕ್ತ ದೃಷ್ಟಿಗೆ ಕಣ್ಣುಕಟ್ಟಿವಾಗಿದೆ. ದೇಶದ ಸಂಸ್ಕೃತಿ ವೇಷ, ಭಾಷೆ, ವ್ಯವಹಾರ ಪದ್ಧತಿ, ಉಪಚಾರ ವಿಧಾನ, ವರ್ತನಾ ಪ್ರಕಾರಗಳ ವೈಶಿಷ್ಟ್ಯದಿಂದ ಅವಚ್ಛಿನ್ನವಾಗಿದೆ. ಈ ಅವಚ್ಛೇದಕವನ್ನು ಪ್ರತಿಭಟಿಸಿ ಗೆಲ್ಲುವುದು ಹುಚ್ಚು ಸಾಹಸ, ಹಾನಿಕರ ಕುಚೇಷ್ಟೆ. ವಿದೇಶೀಯ ಅಭಿರುಚಿಗಳ ದಾಸರು ಎಂಥ ತಜ್ಞರಾದರೂ ಭಾರತೀಯ ಬಹುಜನ ಸಮಾಜದ ಹೃದಯವನ್ನು ತಣಿಸುವ ವ್ಯಕ್ತಿತ್ವದ ಬಲವನ್ನು ಪಡೆಯಲಾರರು; ಅವರ ಸಮಾಜಸುಧಾರಣಾ ಪ್ರಯತ್ನವು ಜಯ ಹೊಂದಲಾರದು. ಅವರ ಸಮಾಜ ಶಿಕ್ಷಣ ಯೋಜನೆ ಭಾರತೀಯ ಶೈಲಿಯನ್ನು ಅಳವಡಿಸಿಕೊಳ್ಳಲಾರದೆ ಅಪಯಶಸ್ಸಿಗೆ ಗುರಿಯಾಗುವುದು.

ಆಧುನಿಕ ನಾಯಕರ ಜಯಂತಿಗಳ ಆಚರಣೆಯು ಎಷ್ಟರ ಮಟ್ಟಿಗೆ ಸಾರ್ವಜನಿಕ ಅಥವಾ ಸಾಮಾಜಿಕ ಎನ್ನಿಸಿವೆ ಎಂಬುದಕ್ಕೆ ಹೊಸದಾಗಿ ವ್ಯಾಖ್ಯಾನ ಮಾಡಬೇಕಾಗಿಲ್ಲ. ಅದು ಸರಕಾರಿ ಪ್ರೇರಣೆಯ ಪ್ರಕಾರ "ಸರಕಾರ ದೇವರಿಗೆ ಮರದ ಜೇಗಟೆ" ಯಾಗಿರುವುದು ಸ್ಪಷ್ಟ. ಸರಕಾರವೇ ಎಲ್ಲವನ್ನು ಮಾಡಬಲ್ಲುದು,ಮಾಡಿಸ ಬಲ್ಲುದು. ಎಂಬ ಆವರಣ

ಸನ್ಯಾಸಿಯವರು ಕೈಕೊಂಡ ಪ್ರಯೋಗ

ಬಾಲವಿಷ್ಣು ತೈಲ

ಈ ತೈಲವು ಬಾಲಗ್ರಹ ಮತ್ತು ಶೂಲಗ್ರಹ ರೋಗದ
ಬೇರನ್ನೇ ಕಿತ್ತು ಮಕ್ಕಳ ಚಿಹ್ನೆಯನ್ನು ಸಂಪೂರ್ಣ ಗುಣಪಡಿಸಿ
ಶರೀರವನ್ನು ಪುಷ್ಟೀಕರಿಸುತ್ತದೆ.

ಕುಪ್ಪೆ ೧ರ ರೂ. 2-87 — ಬಾಟ್ಲಿ ಪ್ಯಾಕಿಂಗ್ ರೂ. 3-19

(ವಿ ಪಿ ಖರ್ಚು ಬೇರೆ – ಲಗ್ಗೇಜು ಖರ್ಚು ಬೇರೆ)

ತಯಾರಕರು:—

ಎ. ಸುಬ್ಬಯ್ಯ ಪಕ್ಕಳ, ಮುಗೇರು—
ಬಾಲವಿಷ್ಣು ತೈಲ ಔಷಧಾಲಯ, ಪುತ್ತೂರು, ದ. ಕ.

ವಿರುವುದು ರಶಿಯದಂಥ ಪ್ರಭುತ್ವವಿದ್ದ ದೇಶದಲ್ಲಿ ಮಾತ್ರ. ಅಷ್ಟು ವ್ಯಾಪಕವಾದ ಪ್ರಭುತ್ವವಿಲ್ಲದ ಭಾರತೀಯ ಸರಕಾರಗಳು ಮೇಲೆ ಹೇಳಿದಂಥ ಚಟುವಟಿಕೆಗಳ ಮುಂದಾಳುತನವನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮೂಲಕ ಮಾಡಿಸುವುದು ಹೆಚ್ಚು ಸಾರ್ಥಕವಾದೀತು. ಈ ನಡುವೆ ಸ್ಥಾನಿಕವಾದ ನಗರ ಸಭೆ (ಪುರ ಸಭೆ) ಮತ್ತು ಗ್ರಾಮ ಪಂಚಾಯತಿಗಳ ಆಡಳಿತ ಶುದ್ಧೀಕರಣವನ್ನು ಸಾಧಿಸಿಕೊಳ್ಳ ಬೇಕಾದುದೂ ಅಗತ್ಯ. **ಅಶುದ್ಧಾಚಾರವೇ ಅಸ್ಫೂರ್ತಿ- ನಿರುತ್ಸಾಹಗಳ ಮೂಲ ಕಾರಣ.** ಅಸ್ಫೂರ್ತಿ ನಿರುತ್ಸಾಹಗಳೂ ಹಾಗೇ ಸಾಮೂಹಿಕ ವಿಧ್ವಂಸಕ ಚಟುವಟಿಕೆಗಳ ಬೀಜ. "ವಿಶುದ್ಧಸ್ಯ ಹಿ ಮೇ ಮೃತ್ಯುಃ ಪುತ್ರ ಜನ್ಮ ಸಮೋ ಭವೇತ್" ಎಂದ ಚಾರುದತ್ತನ ನೀತಿ ವೀರತೆ ಭಾರತದಲ್ಲಿ ನಶಿಸಿ ಹೋಗಿರುವುದರಿಂದ ಅದರ ಪುನರುತ್ಥಾಪನೆಗಾಗಿ ಸಮಾಜ ಶಿಕ್ಷಣವನ್ನೀಗ ಮೊರೆ ಹೋಗ ಬೇಕಾಗಿದೆ.

ಓಡ್ಡಿಸ್ಸದ ವಿದ್ಯಾರ್ಥಿಗಳ ಅರಾಜಕ ವರ್ತನೆಯಂತೆ ಇತರ ವರ್ಗಗಳು ಕ್ರಮೇಣ ಅರಾಜಕ, ನಿರಂಕುಶ, ನಿರ್ಲಜ್ಜ ವರ್ತನೆಯನ್ನು ಹೆಚ್ಚು ವ್ಯಾಪಕವಾಗಿ ಪ್ರದರ್ಶಿಸುವ ಭಯವಿದೆ. ಸಾಮಾಜಿಕ ನ್ಯಾಯದ ಕೊರತೆಯ ಜೊತೆಗೆ ಸಾಮಾಜಿಕ ವ್ಯಕ್ತಿ ವಿಕಾಸಾವಕಾಶಗಳ ಕೊರತೆಯೂ ಇಂಥ(Highly inflamable) ಮುಟ್ಟಿದರೆ ಮುನಿಯುವ ಮನಃಸ್ಥಿತಿಯನ್ನು ಜನರಲ್ಲಿ ಬೆಳೆಯುವಂತೆ ಮಾಡುತ್ತದೆ. ರಾಷ್ಟ್ರೀಯ ಹಬ್ಬಗಳು ವ್ಯಕ್ತಿ ವಿಕಾಸದ ಸೋಪಾನಗಳಾಗಲು ಸಾಮಾಜಿಕ ಆಟ-ಪಾಠಗಳ, ಶಾರೀರಿಕ-ಬೌದ್ಧಿಕ ಸ್ಪರ್ಧೆಗಳ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಅಚರಣೆಯನ್ನು ಒಳಗೊಳ್ಳುವಂತಾಗಬೇಕು. ಶಿರಸಿಯ ಮಾರಿಕಾಂಬಾ ದೇವಾಲಯವು ನವರಾತ್ರಿಯನ್ನು ಹಾಗೆ ನಡೆಸುತ್ತಿರುವುದು ಅನುಕರಣೀಯ.

ರೂಪಾಯಿಯ ಕ್ರಯ ಶಕ್ತಿಯು ೧೭ ಪೈಸೆಗಳಿಗಿಳಿದಿರುವುದೂ ಸಾಮಾಜಿಕ ನಿರುತ್ಸಾಹಕ್ಕೆ ಬಲವಾದ ಒಂದು ಕಾರಣ. "ಆಲಸ್ಯ" ಅಥವಾ "ನಿರುತ್ಸಾಹ" ಎಂಬುದು ವಿಕಟವಾಗಿ ಪ್ರಕಟವಾಗುವುದು ವಿಧ್ವಂಸಕ ಕೃತಿಗಳಲ್ಲಿ (Frustration) ಆಶಾಭಂಗ, ನಿರೀಕ್ಷೆ ವಿಫಲತೆ ಮುಂತಾದ ನಿರುತ್ಸಾಹ ಜನಕಗಳ ಜೊತೆಗೆ ವಿನೋದನ ಸಾಧನಾಭಾವವೂ ಸೇರಿದರೆ ಬೀದಿಯ ಮೆರವಣಿಗೆ, ಕಲ್ಲುತೂರಾಟ ಮುಂತಾದವುಗಳ ಮೂಲಕ ಸ್ಥಗಿತ ಭಾವೋದ್ರೇಕಗಳನ್ನು ಪ್ರಕಟ ಪಡಿಸಿ ವಿಲಕ್ಷಣ, ವಿಕೃತ ಸಂತುಷ್ಟಿಯನ್ನು ಹೊಂದಲು ಕೆಲವರು ಸಮಯ ಸಾಧಿಸುವುದು ಸಹಜ.

ವಿವಿಧ ಆಡಳಿತ ವಿಭಾಗಗಳ ಸುಧಾರಣೆಯಾಗ ಬೇಕಾದುದೂ ಅಗತ್ಯ; ಅದರ ಜೊತೆಗೇ ಮೇಲ್ಮಟ್ಟದ ಬುದ್ಧಿ—ಭಾವನಾ ಸಂತರ್ಪಕವಾದ ಮನೋರಂಜನ ಸಾಧನೆಗಳು ನಿರ್ಮಿಸಲ್ಪಡಬೇಕಾದುದೂ ಅಷ್ಟೇ ಅಗತ್ಯ. ಜನರು (Sports-minded) ಕ್ರೀಡಾಪರರಾಗಬೇಕು ಎಂದು ಹೇಳಿದ ಕೂಡಲೇ ಹೇಗೆ ಆಗುವುದಿಲ್ಲವೋ ಕ್ರೀಡಾಂಗಣಗಳ ಅಭಾವ ಎಲ್ಲ ಪಟ್ಟಣಗಳಲ್ಲೂ ಹೇಗೆ ಆತಂಕವಾಗಿದೆಯೋ ಹಾಗೇ ವ್ಯಕ್ತಿಯ ಧನಶಕ್ತಿ—ಅಧಿಕಾರ ಶಕ್ತಿಗಳ ಗಡಿಯನ್ನು ಮೀರಿದ ಸಾಮೂಹಿಕ ಪ್ರಯತ್ನದ ಐತಿಹಾಸಿಕ ಚಕ್ರಮಗಳಿಂದಾದ ಪಟ್ಟಣ ರಚನೆ ಮುಂತಾದವುಗಳ ಹಾಗೂ ಧನಾಭಾವದ ವಿಘ್ನಗಳು ಸಾಂಸ್ಕೃತಿಕ ಚಟುವಟಿಕೆಗಳ ಸಾರ್ವಜನಿಕ ಸಂಘಟನೆಗೆ ಎಷ್ಟೋ ಕಡೆ ಅಡ್ಡನಿಂತಿವೆ. ಯಾರೂ ಬೇಕಾದರೂ ಎಲ್ಲಿಯೂ ಹೇಗಾದರೂ ಏನಾದರೂ ಮಾಡಿ ಮನೆ ಕಟ್ಟಿಕೊಳ್ಳಲು, ಅಂಗಡಿಗಳನ್ನಿಡಲು ಮತ್ತು ಉಪಾಹಾರಗೃಹಗಳನ್ನು ತೆರೆಯಲು ಮುಕ್ತ ದ್ವಾರವಿರುವ ಪಟ್ಟಣಗಳನೇಕ. ಆಸ್ಪತ್ರೆ—ಶಾಲೆಗಳು ಸಹ ಅಯುಕ್ತ ಸ್ಥಳಗಳಲ್ಲಿರುವುದಕ್ಕೆ ಹಲವು ನಿದರ್ಶನಗಳಿವೆ. ಆದ್ದರಿಂದ ಸಂಬಂಧಿಸಿದ ಮಂತ್ರಿಗಳು ಈ ಬಗೆಯ ತೊಡಕು—ತೊಂದರೆಗಳನ್ನು ನಿವಾರಿಸಿಕೊಳ್ಳಲು ಅಗತ್ಯವಾದ ಸೂತ್ರವನ್ನು ಕಂಡು ಹಿಡಿದು ಸಮಾಜ ಶಿಕ್ಷಣದ ರಂಜನಾತ್ಮಕ ಚಳವಳಿಗೆ ಅನುಕೂಲ ಮಾಡಿಕೊಡಬೇಕು.

ಸಮಾಜದ ಸದಸ್ಯರ ದೇಹಾರೋಗ್ಯದ ಸಂವರ್ಧನ, ಸಂರಕ್ಷಣಗಳಷ್ಟೇ ಮುಖ್ಯವಾದ ಮಾನಸಿಕ ಆರೋಗ್ಯದ ಪೋಷಣ ಪಾಲನೆಗಳನ್ನು ಲಕ್ಷಿಸದಿರುವುದು ದೇಶದಾದ್ಯಂತ ಹರಡುತ್ತಿರುವ ಅಶಿಸ್ತು, ಅವಿಧೇಯತೆ, ಅವ್ಯವಸ್ಥೆ, ಅಕ್ರಮಗಳ ಹಿನ್ನೆಲೆಯಾಗಿದೆ ಆದುದರಿಂದ ಹಬ್ಬಗಳನ್ನು ಪೂರ್ವೋಕ್ತ ರೀತಿಯಿಂದ ಸಂಘಟಿಸಿ ಸರ್ವಜನೀನ ಜ್ಞಾನಸಮಾಹಿತಿಗಳನ್ನಾಗಿ ರೂಪಿಸಿ ತೆರೆಯುವುದು ಒಂದು ಒಳ್ಳೆಯ ಉಪಾಯ ಎಂಬುದಿಲ್ಲಿ ಪ್ರತಿಪಾದ್ಯವಾಯಿತು. ಈ ದಿಶೆಯಲ್ಲಿ ಜನನಾಯಕರು ಕಾರ್ಯಪ್ರವೃತ್ತರಾಗಲೆಂದು ಹಾರಯಿಕೆ.

ಸ್ವಲ್ಪ ಜ್ಞಾಪಿಸಿಕೊಳ್ಳಬೇಕಾದ ದಿವ್ಯ ಸ್ಮರಣೆ

(ಹನ್ನೆರಡನೇ ಪುಟದಿಂದ)

ನಾನೇನೂ ಮಾಡಲಿಲ್ಲ. ಅವನ ಗುಣಗಳನ್ನು ನಾನು ಅಸಹ್ಯಿಸುತ್ತೇನೆಂದು ಅವನಿಗೂ ಗೊತ್ತಿದೆ. ನನಗೂ ಅವನಲ್ಲಿ ಪ್ರೀತಿಯಿದೆ. ಅವನನ್ನು ಮತ್ತೆ ಎತ್ತಿ ಕೊಳ್ಳಲು ನನ್ನ ಹೃದಯ ಸದಾ ಸಿದ್ಧ.

ಇದು ಎಲ್ಲರಿಗೂ ಒಂದು ಎಚ್ಚರಿಕೆಯಾಗಿರಲಿ ದೊಡ್ಡ ಹೆಸರುನೋಡಿ, ಮೋಸ ಹೋಗಬಾರದು. ಕೆಲವರು ಒಳ್ಳೆಯವರಿದ್ದರೂ ಅವರ ಮಕ್ಕಳೂ ಒಳ್ಳೆಯವರೆಂದೇ ಕುರುಡುತನದಿಂದ ನಂಬಿ ಬಿಡಬಾರದು"

ಈ ವಿನಂತಿಯಿಂದ ಆ ಮಗನ ವಿಷಯದಲ್ಲಿ ತಂದೆಯ ಹೃದಯ ಹೇಗೆ ಕಾತರಿಸುತ್ತಿತ್ತೆಂಬುದನ್ನು ಅರಿಯ ಬಹುದು.

೦ ೦ ೦

ಕಸ್ತೂರ್ಬಾ ಅವರಿಗೂ ಹಿರಿಯ ಮಗನ ಮೇಲೆ ಪ್ರತ್ಯೇಕ ಆಕ್ಷೆ ಇತ್ತು. ಅವನನ್ನು ಕುರಿತು ಆಗಾಗ ಗಾಂಧೀಜಿ ಕಸ್ತೂರ್ಬಾ ಅವರಿಗೆ ಬರೆದ ಪತ್ರದಲ್ಲಿ— "ನೀನು ಹರಿಲಾಲನನ್ನು ಕುರಿತು ವಿಚಾರಿಸಿದಿ. ಅವನು ಪಾಂಡಿಚೇರಿಯಲ್ಲಿ ಕಳ್ಳು ಸಾರಾಯಿಗಳನ್ನು ಕುಡಿಯುತ್ತ ತಿರುಗುತಿದ್ದಾನಂತೆ. ದೇವರೇ ಅವನಿಗೆ ಬುದ್ಧಿ ಕಲಿಸಬೇಕು. ಇದರಲ್ಲಿ ನಾವು ಮಾಡಿದ ಪಾಪ ಪುಣ್ಯಗಳಿಗೂ ಭಾಗವಿದೆ. ಹರಿಲಾಲ್ ನಿನ್ನ ಹೊಟ್ಟೆಯಲ್ಲಿದ್ದಾಗ ನಾನೆಷ್ಟು ಬುದ್ಧಿಹೀನನಾಗಿದ್ದೆ? ನಾನೂ ನೀನೂ ಮಾಡಿದುದರ ಫಲವನ್ನು ಈಗ ಕಾಣುತ್ತಿದ್ದೇನೆ..." ಎಂದು ಬಹಳಸೊಂದು ಬರೆದಿದ್ದಾರೆ.

ಮಕ್ಕಳು ಗರ್ಭದಲ್ಲಿರುವಾಗ ದೇಹ ರಚನೆಯಲ್ಲಿ ಮಾತ್ರವಲ್ಲದೆ, ಮನೋಭಾವನೆಯಲ್ಲಿಯೂ, ಗುಣಗಳಲ್ಲಿಯೂ, ತಾಯಿಯ ಅಂಶಗಳೆಲ್ಲ ಮಕ್ಕಳಲ್ಲಿ ಸೇರುತ್ತದೆಂದೂ, ಆಕೆಯ ಆಶಾಪಾಶಗಳೆಲ್ಲವೂ ಮಕ್ಕಳಲ್ಲಿ ಬರುತ್ತವೆಂದೂ ಗಾಂಧೀಜಿಯೇ ಹೇಳಿದ್ದಾರೆ.

"ಕ್ರಮಬದ್ಧವಿಲ್ಲದ ನನ್ನ ಬಾಲ್ಯ ಜೀವನದ ಪ್ರತಿಫಲವೇ ಈ ಮಗ—ಎಂದು ನಾನು ತಿಳಿಯುತ್ತೇನೆ. ಮಕ್ಕಳ ವಿಷಯದಲ್ಲಿ ತಂದೆಯಾದವನು ಹೇಗೆ ನಡೆದುಕೊಳ್ಳಬೇಕೋ ಹಾಗೆ ನಾನು ನನ್ನ ಮಕ್ಕಳ ವಿಷಯದಲ್ಲಿ ನಡೆದಿಲ್ಲ. ಇದೊಂದು ಪಶ್ಚಾತ್ತಾಪ ನನಗೆ ಸದಾ ಇದೆ. ಮಕ್ಕಳ ಕೊರತೆಗಳನ್ನು ಕಂಡಾಗಲೆಲ್ಲಾ ಅದಕ್ಕೆ ಕಾರಣ ಅವರ ತಂದೆತಾಯಿಗಳ ಕೊರತೆಗಳೇ ಎಂಬುದು ನನ್ನ ತೀರ್ಮಾನ. ತಂದೆ ತಾಯಿಗಳ ಮನಸ್ಸಿನ ಕೊರತೆಗಳು ಪರಂಪರೆಯಾಗಿಯೇ ಬರುತ್ತವೆ."

ಹೀಗೆಂದು ಹೇಳಿದ ಗಾಂಧೀಜಿ" ಅದಕ್ಕಾಗಿ ಯಾವಾಗಲೂ ನಾನೂ ಹಲುಬಿಕೊಂಡಿರುವದಿಲ್ಲ" ಎಂತಲೂ ಹೇಳುತ್ತಾರೆ.

ಹೌದು. ಅದಕ್ಕಾಗಿ ಯಾವಾಗಲೂ ಹಲುಬಿ ಕೊರಗಿ ಸೊರಗುತ್ತಾ ಹೋದರೆ ಇತರ ಕರ್ತವ್ಯಕರ್ಮಗಳು ಸಾಗುವ ಬಗೆ ಹೇಗೆ? ಬಾಹ್ಯದಲ್ಲಿ ಅವರು ಅದನ್ನೆಲ್ಲ ತೋರದೆ ಕರ್ಮವೀರರಾಗಿಯೇ ಬೆಳಗಿದರು. ಸಾರ್ವಜನಿಕ ರಂಗದಲ್ಲಿ ಅವರ ಕೆಲಸಗಳನ್ನು ಎಷ್ಟು ಬೇಕಾದರೂ ನೆನೆಯಬಹುದು; ಆದರ್ಶ ಪಾರವಾಗಿ ಹಿಡಿಯಬಹುದು. ಅವರನ್ನು ದೇವರಂತೆ ಬೇಕಾದರೂ ಪೂಜಿಸಬಹುದು.

ಆದರೆ ವೈಯಕ್ತಿಕವಾಗಿ, ಅವರು ತನ್ನ ಹೆಂಡತಿ ಮಕ್ಕಳ ವಿಷಯದಲ್ಲಿ ತೆಗೆದ ಉದ್ಗಾರಗಳು ಎಷ್ಟೊಂದು ಕೂಡಬಲ್ಲ ಉಪಾತವನ್ನು ಕಲಿಸುತ್ತವೆ! ಅವರೂ ನಮ್ಮಂತೆಯೇ ಹುಟ್ಟಿ ಬೆಳೆದವರೇ; ತಪ್ಪು ತಡೆಗಳನ್ನು ಮಾಡಿದವರೇ, ಆದರೆ ಸಾಧನೆಯಿಂದ ಸತ್ಯ ಪ್ರತಿಜ್ಞೆಯಿಂದ, ದೃಢ ಅಭ್ಯಾಸದಿಂದ, ಆತ್ಮ ಶೋಧನೆಯಿಂದ, ಕಾಲದ ಬೆಲೆಯನ್ನರಿತು ನಡೆದುಕೊಂಡು "ಮಹಾತ್ಮ"ರೆನಿಸಿದರು. ಸ್ವಾತಂತ್ರ್ಯ ಪ್ರಾಪ್ತಿಗೆ ಅವರು ಕಾರಣರಾದರೆಂಬುದು ಅವರ ಕಾರ್ಯರಂಗದ ಅಂಗವಾಗಿತ್ತು ಅಷ್ಟೇ. ರಾವಣ ಸಂಹಾರವೇ ರಾಮಾವತಾರದ ಉದ್ದೇಶವೆಂದು ಬೇಕಾದರೆ ಹೇಳಬಹುದು. ಆದರೆ ರಾಮನಿಂದಾದುದು ರಾವಣನ ವಧೆಯೊಂದೇ ಅಲ್ಲವಷ್ಟೆ? ಅಂತೆಯೇ ಗಾಂಧೀಜಿಯಿಂದ ಭಾರತ ದೇಶಕ್ಕೆ ಸ್ವಾತಂತ್ರ್ಯಪ್ರಾಪ್ತಿಯೊಂದೇ ಆದುದೇನಲ್ಲ.

(ಸಂಗ್ರಹಾಂಶಗಳನ್ನು ಬಳಸಿಕೊಂಡು ಬರೆದುದು)

ನಮ್ಮದಲ್ಲವೇ ಗಣರಾಜ್ಯ...?

— ಅ. ಗೌ. ಕಿನ್ನಿಗೋಳಿ

ಕೈಸೋತಾಗಲೆ ಶಿವನಾಗು !
ತಾಪಸಿ ಗೌರಿಯ ಧವನಾಗು.

ಚಂದಾಪಟ್ಟಿಯ ಬ್ರಹ್ಮಕಪಾಲದಿ
ಬಿಕ್ಕೆಯ ಬೇಡುತ ಬದುಕಿಕೊಳ್ಳ;
ಭುಜಂಗನಾಟಕೆ ಮನೆ ಮನೆ ತಿರುಗಿ
ಗಾರುಡಿ ವಿದ್ಯೆಯ ಕೆದಕಿಕೊಳ್ಳು.

ಬಾಲಬಡಕರನು ಪ್ರಮಥರಗೈದು
ದಕ್ಷನ ಕಾರ್ಯವ ಕೆಡಿಸಿಬಿಡು.
ಸಾಯದ ಮಾರ್ಕಂಡೆಯರನು ಹಿಡಿದು
ಚಿರಂಜೀವನದ ವರವ ಕೊಡು.

ನರಮುಷ್ಟಿಯ ಸಂಘಾತಕೆ ನೊಂದೂ
'ಶಕ್ತಿಪರೀಕ್ಷೆ'ಯ ಕತೆ ಹೇಳು!
ಪಾಶುಪತಾಸ್ತ್ರವ ದಾನವನಿತ್ತು
ಒಡ್ಡವನನ್ನೇ ಒಲಿಸಿಕೊಳ್ಳು.

'ತ್ರಿಪುರ ವಿಜಯ'ಉನ್ಘೋಷಣೆ ಮಾಡು!
ಲಕ್ಷ್ಮೀಪತಿ ರಥ ನಡೆಸುವನು.
ಸಾಹುಕಾರರ ಮೇಲದ್ರಿಯನೊತ್ತು,
ರಾವಣ ಸ್ತುತಿಸುವ ಮುಡಿಸುವನು.

ಅಂತರಂಗ ರತಿಲೀಲೆಯೊಳಿರಲಿ,
ಬಾಹ್ಯದಿ ಮನ್ಮಥನನು ಸುಟ್ಟು.
ತ್ಯಾಗ—ಯೋಗಗಳ ಮಾತೇ ಬರಲಿ,
ಗಂಗೆಯ ಪ್ರಣಯವು ಬಲುಗುಟ್ಟು.

ತಿಳಿಯದ ತಾಳದ ತಪ್ಪಿದ ಹೆಜ್ಜೆಗೆ
ಇರಿಸೈ ತಾಂಡವ-ಹೊಸ ಹೆಸರು.
ವಿಭೂತಿ ಮಹಿಮೆಗೆ ಮರುಳಾಗದೆ ಜನ?
ಮೆತ್ತಿಕೊ ಮಾಮೂರ್ಖದ ಕೆಸರು!

ಸುಪ್ಪತ್ತಿಗೆಯನು ಸುಡುಗಾಡೆಂದೊರೆ;
ಯಾರಿಗು ತೋರದೆ ಸುಧೆ ಹೀರಿ,
'ಸುಡುವುದು ಗಂಟಲ ವಿಷವೆ'ನ್ನುವ
ಮೊರೆ
ಕೇಳಲಿ ಸುರಲೋಕಕೆ ಸೇರಿ!

ಹೊಟ್ಟೆ ಬಿರಿಯೆ ಹುಳಿಯಮೃತವ
ಕುಡಿದು,
ಸುರ ಸಂದೋಹವೆ ಹೊಗಳುವುದು!
ದೂರುವವರು—ದೈತ್ಯರೆ ಸೈ; ಹೊಡೆದು
ಉಳಿಸಿಕೊ—ಲಯಕರ್ತನ ಬಿರುದು.

ಕಾಪಾಲಿಕರಿಗೆ ವರವೀಯಲಿ ಸತಿ —
ಆಕೆಯೆ ಲೋಕದ ಆದಿಶಕ್ತಿ
ಆವಳ ಬಂಟಕನ ವೀರ—ಭದ್ರಂಗೆ;
ಜನಗಣವಿರಿಸುವುದೈ ಭಕ್ತಿ.

ಮಕ್ಕಳೊಳೊಬ್ಬನು ಗಣ-ಪತಿಯಾಗಲಿ,
ನಮ್ಮದಲ್ಲವೇ ಗಣರಾಜ್ಯ?
ಮಿಕ್ಕುದನೆಲ್ಲವ ಷಣ್ಮುಖ ವಹಿಸಲಿ,
ನೀನಾಗುವ ಅಪ್ಪಟ ಪೂಜ್ಯ!

ವೀರರೆಂತು ಜನ್ಮ ತಳೆದಾರು?

(ಇಪ್ಪತ್ತೈದನೇ ಪುಟದಿಂದ)

ಕೆ ಉಳಿಯುವುದು ಸಾಧ್ಯವಿತ್ತೇ? ಸನ್ ೧೮೫೭ರ ವಿಷಯವೇ ಬೇರೆ. ಅಲ್ಲಿ ಖಡಾಖಡಿ ಯುದ್ಧ ಎದುರೆದುರಿಗೇ ನಡೆದಿತ್ತು. ಆದರೆ ವಿರೋಧವಾಗಿದ್ದವರೆಷ್ಟು ಮಂದಿ? ಬರೇ ಉತ್ತರ ಪ್ರದೇಶ ಮತ್ತು ಅದರ ಬದಿಗಿದ್ದ ಕೆಲವು ಪ್ರದೇಶಗಳು, ಅಷ್ಟೇ! ಪರಂತು ಈ ಕ್ರಾಂತಿಯುದ್ಧದಲ್ಲಿ ಎದುರು ಎದುರಿನ ಹೋರಾಟವಿರಲಿಲ್ಲ, ದೇಶದ ಎಲ್ಲಾ ಭಾಗಗಳಲ್ಲಿ ಕ್ರಾಂತಿಯ ಬೀಜ ಹರಡಿ ಬಿದ್ದಿತ್ತು. ಆದರೆ, ಸೀರ ಸಿಕ್ಕಿದಲ್ಲಿ ಅವು ಮೊಳಕೆಯೊಡೆದವು, ಉಳಿದೆಡೆಯಲ್ಲಿ ಅವು ಭಸ್ಮವಾದುವು. ಮೊಳಕೆಯೊಡೆದ ಸಸಿಗಳ ಮೇಲೆ ಬೆಂಕಿಯ ಮಳೆಗರೆಯಲಾಯಿತು. ಆದರೆ ಭಾವನೆ ಸಾಯಲಿಲ್ಲ. ಅದರ ಪರಿಣಾಮವಾಗಿಯೇ "ಆಜಾದ್ ಹಿಂದ್ ಫೌಜ್" ನಿರ್ಮಾಣವಾಯಿತು.

ಎಂತಹ ಕೃತಘ್ನ ದೇಶ ನಮ್ಮದ! ಸ್ವಾತಂತ್ರ್ಯ ಗಳಿಸಿಯೂ ನಾವು ಆ ವೀರರನ್ನು ಮರೆತಿರುವೆವು. ಅವರಿಗೆ ಮಾನ ಸನ್ಮಾನಗಳು ಯಾವುದೂ ಸಂದಿಲ್ಲ—ಸಲ್ಲುತ್ತಿಲ್ಲ. ಇಂತಹ ಕೃತಘ್ನ ದೇಶಕ್ಕೆ ಮುಂದೆ ಅಂತಹ ಬಲಿದಾನಿ ವೀರರು ಪ್ರಾಪ್ತವಾದಾರೇ ? ಮಾನವನಲ್ಲಿ ಭಾವನೆಯಿರುತ್ತದೆ, ಇದೇ ಕಾರಣದಿಂದಾಗಿ ಅವನು ಆತ್ಮ ಬಲಿಯನ್ನೀಯಲು ಸಿದ್ಧನಾಗುತ್ತಾನೆ, ಹಾಗೂ ಇದೇ ಭಾವನೆಯು ಒಂದಂಶ ಆತ್ಮ ಸಮಾನವೂ ಆಗಿದೆ. ಹೀಗೆ ಪೂಜೆಯು ನಷ್ಟವಾಗ-ಅಥವಾ ವೀರ ಪೂಜೆಯೇ ಇಲ್ಲವಾದಾಗ ವೀರರೆಂತು ಜನ್ಮ ತಳೆದಾರು?

[ಮೂಲ: ಆಚಾರ್ಯ ಕಿಶೋರಿದಾಸ್ ಬಾಜಪೇಯಿ — ಜಾ ಸಭಾಪತಿಯಿಂದ]

ಪ್ರಾರ್ಥನೆ

ಎನ್ನಯ ಪ್ರಾರ್ಥನೆ ಇದುವೆ—
ನಿನ್ನೊಳು ಎನ್ನಯ ಪ್ರಭುವೆ!—
ಪ್ರಭುವೆ!— || ಪಲ್ಲ ||
ದೃಢಿಸೆನ್ನಯ ಒಡಲೊಳು ಕೂಡಿಹ
ಕಡು ಬಡತನದಾ ಗಾಢವನೆ.... ...
ಕರುಣಿಸೈ ಬಲ, ಸುಖ-ದುಃಖಗಳ,
ಸೈರಿಸೆ ಸಮಂಸಂ ಎನಗೆ.... ...
ಒಲವಿನ ಊ ಬಲ ಸಲೆ ಸೇವೆಯೊಳೇ
ಫಲಿಸಲು ಒಲಿವೀಯೈ – ಪ್ರಭುವೇ!
....ಎನ್ನಯ....
ಪತಿತರ ಸಂಘ ತ್ಯಜಿಸದ ವರವ
ಉದ್ಧಟದ ಶ್ರಮದ ಪೋಷಕೆ ತಾ
ಮಣಿಯದೆ ದಿನದಿನ ಕ್ಷಣಕ್ಷಣದಿಂ —
ಉದ್ಧರಿಪಾ ಚಿತ್ತಶಕ್ತಿಯನೂ. ..
ಗಳಿಸಿಹ ಬಲ, ಫಲ, ಹೊಲ, ತನ
ಪಾಲಿಸೆ ಫಲವೀಯೈ – ಪ್ರಭುವೇ!....
ಎನ್ನಯ ಪ್ರಾರ್ಥನೆ - ಇದುವೆ—
ನಿನ್ನೊಳು ಎನ್ನಯ ಪ್ರಭುವೇ!
ಪ್ರಭುವೇ!

— ದಾಮೋದರ ಬಾಳಿಗ,
ಮಂಗಳೂರು.

ನನ್ನ ಕೈ ಹಿಡಿವವಳು!

(೧) ಕಣ್ಣಗನ್ನಡಿಯಲ್ಲಿ ನನ್ನ ಮುಖನೋಡುತಿರೆ
ನನ್ನ ಕೈ ಹಿಡಿವವಳ ಕನಸು ಕಾಂಬೆ!
ಬಾಳ ಬಟ್ಟೆಯಲೆನಗೆ ಜೀವನದ ಸಂಗಾತಿ-
ಎಂಥವಳು ದೊರೆವಳೊ ಎಂದುಕೊಂಬೆ!

(೨) ನನ್ನ ರೂಪಕೆ ಸರಿ ಮಿಗಿಲೆನಿಪ ರೂಪವತಿ-
ಯಾಗಿರುವಳೋ ಇಲ್ಲವೋ ಎಂಬ ಚಿಂತೆ,
ಸದ್ಗುಣಿಯೆ ಆಗಿರಲಿ ಎಂದುಕೊಳುವೆನು ಒಮ್ಮೆ
ರೂಪವತಿಯಲ್ಲದಿದ್ದರೂ ಏನಂತೆ!

(೩) ಬಾಳ ಹೂದೋಟದಲಿ ನಗೆಯ ಬೆಳಕನು ಬೀರಿ
ಅಮೃತ ಸುರಿಸುವಳು ಬೇಕು ನನಗೆ,
ಎನ್ನ ಹೃದ್ಗತವರಿತು ಬೇಸರದೆ ಪೂರಯಿಪ
ಸದ್ಗೃಹಿಣಿಯೇ ಆಗಬೇಕೆನಗೆ!

(೪) ಸುಖವೆ ಬಂದಿರಲಿ ಕಷ್ಟವೇ ನನಗಿರಲಿ,ನಗು-
ನಗುತ ನನ್ನೊಡನೆ ಅನುಭವಿಸಬೇಕು,
ಇಲ್ಲದುದ ಬೇಕೆಂದು ಹಟವಿಡದೆ ಮನೆಯಲ್ಲಿ
ಇದ್ದುದನೆ ರುಚಿಮಾಡಿ ಉಣ್ಣಬೇಕು!

(೫) ಪತಿವ್ರತೆಯು ತಾನಾಗಿ ಆದರ್ಶ ಸತಿಯಾಗಿ
ಸ್ತ್ರೀ ಕುಲಕೆ ಮಾದರಿಯಾಗಿ ಸೀತೆಯಂತೆ,
ಬಾಳಬೇಕೆನ್ನೊಡನೆ ಸಮರಸವಾಗಿ, ತನ್ನ
ಬಾಳ ಬಯಕೆಗಳೆಲ್ಲ ಈಡೇರುವಂತೆ!

(೬) ಇಂಥಿಂಥ ಕನಸುಗಳ ಕಾಣುತೆಚ್ಚೆತ್ತಾಗ
ದೇವರೊಳಗಿದನೆ ಬೇಡಿಕೊಂಡೆ,
ಸಿಕ್ಕರಿಂಥವಳೆ ಸಿಗಬೇಕು ಇಲ್ಲವಿರೆ ಬೇಡ-
ನಗ ಒಂಟಿ ಬಾಳನೆ ಸಾಗಿಸುವೆನೆಂಬೆ!

—ದಿಗಂಬರ ಜೋಶಿ, ಬೆಳಗಾವಿ.

They're here!

The '1210' Series
TATA MERCEDES-BENZ VEHICLES



Authorised Dealers:
ARVIND MOTORS
BALMATTA ROAD, MANGALORE.
Telephone: 362
Telegram: 'ARVIND'

ಪ್ರಜಾಪ್ರಭುತ್ವದ ಪ್ರಭುಗಳಿಗೊಂದು ಸವಾಲು

(ಒಂಭತ್ತನೇ ಪುಟದಿಂದ)

ಪ್ರಭುತ್ವವನ್ನು ಪಡೆದ ಪ್ರಭುಗಳು ಪ್ರಜೆಗಳನ್ನು ಮರೆತರು. ಪ್ರಜೆಗಳ ಸುಖ ದುಃಖವನ್ನು ಮಾತಿನ ಮೂಲಕ ಹೇಳಿಕೊಂಡು ಸುಮ್ಮನಾದರು. ನಮ್ಮ ಯೋಜನೆಗಳು ಯಶಸ್ವಿಯಾದಾಗ ಭಾರತವೂ ಸಂಪನ್ನ ದೇಶವಾಗುತ್ತದೆ, ಎಂದು ನಂಬಿಕೆ ಹುಟ್ಟಿಸಿದರು.

ಯಶಸ್ಸು ಮಾತ್ರ, ಪ್ರಭುಗಳ ಮಾತಿನಲ್ಲೇ ಉಳಿದು ಹೋಯಿತು. ಅದಕ್ಕಾಗಿ ಕಾದು ಕುಳಿತವರು ಕಾದೇ ಕುಳಿತರು ಆಶೆ ಹೊತ್ತವರು ಬಳಲಿದರು, ನರಳಿದರು.

ಬರಬೇಕಾದುದು, ಆಗಬೇಕಾದುದು ಮಾತ್ರ ಆಗಲಿಲ್ಲ ಆಗಲಿಲ್ಲ ಎಂದಾಗ ಏಕೆ ಎಂಬ ಪ್ರಶ್ನೆ ಎದ್ದು ನಿಂತಿತು. ಅದು ತಮ್ಮಿಂದಲೇ ಆದ ತಪ್ಪು ಎಂದು ಒಪ್ಪಿಕೊಳ್ಳುವ ಪ್ರಭುಗಳು ಒಬ್ಬರೂ ಇಲ್ಲ ಆದರೆ ತಪ್ಪಾಗಿದೆ. ಅದು ಸರಕಾರದಿಂದ ಆಗಿದೆ. ಇದಕ್ಕೆ ಸರಕಾರವೇ ಹೊಣೆ ಎಂದು ತಮ್ಮ ಅಜಾಗರೂಕತೆಗೆ ಸರಕಾರವನ್ನು ಮುಂದೆಮಾಡಿ ತೋರಿಸಿದವರೂ ಇಲ್ಲದಿಲ್ಲ.

ಸರಕಾರ ಹೊಣೆಯಾಗಿದ್ದರೆ, ಅದು ರಾಜಿನಾಮೆ ಕೊಡಲಿ ಎಂಬ ಮಾತು ಬಂತು. ಆ ಮಾತು ಬಂದಾಗ ಸುಭದ್ರ ರಾಷ್ಟ್ರವನ್ನು ನಾವು ನಿರ್ಮಿಸುವವರಿದ್ದೇವೆ. ನಾವಿನ್ನೂ ಅಂತಹ ರಾಷ್ಟ್ರ ನಿರ್ಮಾಣಕ್ಕೆ ಹೋರಾಡುತ್ತೇವೆ. ಅದಕ್ಕೆ ಬರುವ ಭ್ರಷ್ಟಾಚಾರಿಗಳನ್ನೆಲ್ಲ ಕಿತ್ತೆಸೆಯುತ್ತೇವೆ ಎಂಬ ಅಬ್ಬರದ ಮಾತು ಮತ್ತೆ ಕೇಳಬಂತು.

ಜನ ಒಪ್ಪಿಕೊಂಡರು. ಮತ್ತೆ ಭರವಸೆ ಇರಿಸಿದರು. ನಮ್ಮದೇ ಆದ ದಿನವೊಂದು ಬರುತ್ತದೆ ಎಂದು ನಂಬಿದರು. ನಂಬಿ ಕೆಟ್ಟರು. [ಜನರಿಗೆ ದೊರೆತ ಪ್ರತಿಫಲ ಅನ್ನಾಹಾರ, ಮತ್ತಿತರ ವಸ್ತುಗಳ ಬೆಲೆ ಏರಿಕೆ. ಅನ್ನಾಹಾರಗಳ ಅಭಾವ. ಬಡತನ. ಹಸಿವು. ಇಷ್ಟು ಸಾಲದೇ?]

ನಮ್ಮನ್ನು ಆಳುವವರು ನಾವೇ ಎಂದು ಹೇಗೆ ಹೇಳೋಣ? ದುಡ್ಡಿನ ಬಲದಿಂದ ಆರಿಸಿ ಬಂದವರು, ನಮ್ಮ ಪ್ರತಿನಿಧಿಗಳಾಗಿದ್ದುಕೊಂಡು ನಮ್ಮ ಶ್ರೇಯಕ್ಕಾಗಿ ಶ್ರಮಿಸುತ್ತಿರುವರೆಂದು ನಾವು ಈಗ ಹೇಗೆ ಹೇಳೋಣ? ಹಾಗೆ ಹೇಳಬಲ್ಲೆವೇ? ಅವರನ್ನು ನಮ್ಮ ಪ್ರತಿನಿಧಿಗಳೆಂದು ತುಂಬು ಮನಸ್ಸಿನಿಂದ ಒಪ್ಪಿಕೊಳ್ಳುವೆವೇ?

ಪ್ರಭುತ್ವದ ಆಸೆಯಿಂದ ಮುಂದೆ ಬಂದವರು, ಅದರ ಕಡೆಗೇನೇ ಲಕ್ಷ್ಯವಿರಿಸಿಕೊಂಡವರು, ಅದೇ ತಮ್ಮ ಗುರಿ ಎಂದು ತಿಳಿದವರು, ಪ್ರಜೆಗಳ ಸುಖಕ್ಕಾಗಿ ತಾವು ಶ್ರಮಿಸಬೇಕಾಗಿದೆ ಎಂಬಷ್ಟು ಪಾಪವನ್ನೆಂದೂ ಮಾಡಲಾರರು; ಮಾಡಿಲ್ಲ.

ದೇಶದಲ್ಲಿ ಎದ್ದಿರುವ ಬೆಲೆ ಏರಿಕೆಯ ಕಳವಳ ಇವತ್ತು ನಿನ್ನೆಯದೇ? ಇದರ ವಿರಾಟ ಸ್ವರೂಪದ ಕಲ್ಪನೆ ಉಳ್ಳವರು ಈ ಕುರಿತು ಎಂದಿನಿಂದಲೋ ಎಚ್ಚರಿಕೆ ನೀಡುತ್ತ ಬಂದಿದ್ದಾರೆ. (ಭಾರತವನ್ನು ಸರ್ವನಾಶ ಮಾಡಬೇಡಿ ಎಂದು ಪದೇ ಪದೇ ಎಚ್ಚರಿಕೆ ನೀಡಿದ್ದಾರೆ.)

ಆದರೆ ನಮ್ಮ ಪ್ರಭುಗಳಿಗೆ ಅದು ಬೇಕಾಗಿರಲಿಲ್ಲ. ಆ ವಿಚಾರಧಾರೆಯಲ್ಲಿ ಸ್ವಾರಸ್ಯವಿರಲಿಲ್ಲ. ಅಂತೆಯೇ ಪ್ರಭುಗಳು ದಯೆ ತೋರಲಿಲ್ಲ. ದೂರಾಲೋಚನೆ ಉಳ್ಳವರಾಗಲಿಲ್ಲ.

ಅಷ್ಟು ಸಾಲದೆನ್ನುವಂತೆ ಅವರು ಮತ್ತೆ ಪಟ್ಟು ಹಿಡಿದು ಹೇಳಿದರು:

ನಮ್ಮ ಯೋಜನೆಗಳು ಪ್ರಗತಿಪಥದಲ್ಲಿವೆ. ಭಾರತ ಭದ್ರ ರಾಷ್ಟ್ರವಾಗುವಲ್ಲಿದೆ.

ಪ್ರಭುಗಳ ಈ ಮಾತು ಜನರಿಗೆ ಅರ್ಥವಾಗಲಿಲ್ಲ. ಆದರೂ ಜನರು ಕೇಳಿದರು. ಹೌದೆಂದು ತಲೆಯಾಡಿಸಿದರು. ಕಾರಣ, ಜನರಿಗೆ ಇದಾವದೂ ಕೇಳಿಸುತ್ತಿರಲಿಲ್ಲ. ಇದಾವುದೂ ಕಣ್ಣಿಗೆ ಕಾಣಿಸುತ್ತಿರಲಿಲ್ಲ.

ಬಡತನ, ನರಳಾಟದಲ್ಲಿ ಜನರು ಕಂಗಾಲಾಗಿದ್ದರು; (ಆಗಿದ್ದಾರೆ.) ಪ್ರಭುಗಳ "ದೂರಾಲೋಚನೆ" ಜನರಿಗೆ ಅರ್ಥವಾಗಲೇ ಇಲ್ಲ.

ಹಾಗಿದ್ದರೆ ಜನರು ಹೌದೆಂದು ತಲೆಯಾಡಿಸುತ್ತಿದ್ದುದಾದರೂ ಏಕೆ?

ಅವರಲ್ಲಿ ಅದನ್ನು ಪ್ರತಿಭಟಿಸುವ ಶಕ್ತಿ ಇರಲಿಲ್ಲ. ಇದ್ದರೂ ಯೋಗ್ಯ ರೀತಿ ಸಂಘಟಿಸುವವರಿಲ್ಲ.

ಹೆಚ್ಚು ಬೆಳೆಯಿರಿ ಎಂಬ ಕೂಗು, ಒಂದಾಗಿ ದುಡಿಯೋಣ ಬನ್ನಿ ಎಂಬ ಕರೆ, ಕೇಳಿ ಬಂದದ್ದಿದೆ. (ಇದೆಲ್ಲಾ ರೈತರಿಗಾಗಿ, ಶ್ರಮಿಕರಿಗಾಗಿ, ಮಧ್ಯಮ ವರ್ಗಕ್ಕಾಗಿಯೇ ಪ್ರತ್ಯೇಕ)

ಈ ಕೂಗು ಕೇಳಿಸಿ ಬಂದ ಮಾತ್ರದಿಂದ ಎಲ್ಲೂ ಹೆಚ್ಚು ಬೆಳೆ ಬೆಳೆದಿಲ್ಲ. ಎಲ್ಲೂ ಒಂದಾಗಿ ದುಡಿಯಲು ಮುಂದೆ ಬಂದವರಿಲ್ಲ.

ಆದರೆ ಇಷ್ಟರಿಂದಲೇ ತಮ್ಮ ಕಾರ್ಯ ಸಮಾಪ್ತಿಯಾಯಿತು ಎಂದು ಪ್ರಭುಗಳು ತಿಳಿದುಕೊಂಡರು. ತಾವು ಹೆಚ್ಚು 'ಬೆಳೆ'ಸಿದ್ದೇವೆ ಎಂಬುದನ್ನು ಮಾತ್ರ ಪ್ರಭುಗಳು ತೋರಿಸಿಕೊಟ್ಟರು. (ಬಾಯಿ ಮಾತಿನಲ್ಲಿ?)

ಪ್ರಭುಗಳೇನೋ ಹೆಚ್ಚು ಬೆಳೆಸಿಕೊಂಡರು. ಇದಕ್ಕಾಗಿ ತಮ್ಮ ವಿಚಾರವಂತಿಕೆಯನ್ನು ವ್ಯಯ ಮಾಡಿದರು.

ಆದರೆ ಪ್ರಜೆಗಳಿಗೇನು ಬಂತು?

ಪ್ರಭುಗಳ ಹಿಂದಿನ ಮತ್ತು ಇಂದಿನ ಸ್ಥಿತಿಯಲ್ಲಿ ವ್ಯತ್ಯಾಸ ಕಂಡು ಬಂತು. ಪ್ರಜೆಗಳ ಸ್ಥಿತಿ ಮಾತ್ರ ಬದಲಾಯಿಸಲಿಲ್ಲ. ಅದು ಹೆಚ್ಚು ಅಳಕ್ಕಿಳಿಯಿತು. ಹೆಚ್ಚು ಅರ್ಥ ಹೀನವಾಯಿತು.

ಪ್ರಜೆಗಳಿಗೆ ಬೇಕಾದುದನ್ನು ಪೂರೈಸುವದು, 'ಪೂರೈಸುವಂಥದ್ದಲ್ಲ' ಎಂಬುದನ್ನು ಪ್ರಭುಗಳಾದವರು ಬಲ್ಲವರಾಗಿರಬಹುದೇ? ಬಹುದೇ?

ಪ್ರಜೆಗಳಿಗೂ, ಪ್ರಭುಗಳಿಗೂ, ನಡುವೆ, ವಿರೋಧಿ ಪಕ್ಷಗಳಿವೆ. ಆದರೆ ವಿರೋಧಿ ಪಕ್ಷಗಳು ತಮ್ಮಲ್ಲಿಂತೂ ಒಂದು ಸಂಘಟನೆಯನ್ನು ರೂಪಿಸಿಕೊಳ್ಳಲಿಲ್ಲ. ಅಲ್ಲದೆ ಪ್ರಜೆಗಳ ಸಮೀಪಕ್ಕೂ ಬರಲಿಲ್ಲ (ಕಾರಣ ಪಕ್ಷ ನೀತಿಯೇ?) ಪ್ರಭುಗಳ ಸಾಮಿಪ್ಯಕ್ಕೂ ಹೋಗಲಿಲ್ಲ. (ಕಾರಣ ಪಕ್ಷ ನೀತಿಯೇ?)

ತಮ್ಮ ತಮ್ಮಲ್ಲೇ ಹೊಡೆದಾಟ, ಬಡಿದಾಟ, ಮಾತಿನ ಮಲ್ಲಾಟದಲ್ಲೇ ಮಗ್ನವಾಗಿರುವ ವಿರೋಧೀ ಪಕ್ಷಗಳು ನಮ್ಮಲ್ಲಿ ಎಷ್ಟಿಲ್ಲ?

ಏನಿದ್ದರೂ ಸ್ವಾತಂತ್ರ್ಯಾನಂತರವೂ ಪ್ರಜೆಗೆ ಸುಖ ಪ್ರಾಪ್ತಿಯ ಯೋಗ ಕೂಡಿಬರಲಿಲ್ಲ. (ಈ ಪ್ರಭುಗಳ ಔದಾರ್ಯದಿಂದ ಬರುವದೂ ಇಲ್ಲ?)

ಸಮಸ್ಯೆ ಒಂದೆರಡಲ್ಲ ಸಮಸ್ಯೆಗಳ ಬಿಗಿತ ಹೆಚ್ಚುತ್ತಾ ನಡೆದಿದೆ. ಸುತ್ತುವರಿಯುತ್ತಲೇ ಇರುವ ಸಮಸ್ಯೆಗಳ ಸುತ್ತಿನಲ್ಲಿ ಪ್ರಜೆ ಸಿಲುಕಿಯಾಗಿದೆ. ಈ ಬಂಧನ ಸಹ್ಯವಲ್ಲ. ಇದರಿಂದ ಬಿಡುಗಡೆಯಾಗುವದಾದರೂ ಎಂದು? ಎಂದು ಇದರಿಂದ ಮುಕ್ತಿ?

ಭಗೀರಥ ಬರುವ; ಉದ್ಧರಿಸುವ; ಎಂಬ ಕಲ್ಪನೆ ಜನರಿಗಿದೆ. ತಮ್ಮ ಉದ್ಧಾರವಾದೀತೇ ಎಂದು ಜನ ಕಾದು ಕುಳಿತಿದ್ದಾರೆ. ಅದು ಭಂವಸೆ ಇಲ್ಲದ ಆಸೆ. ನಾಳೆ ಒಂದು ದಿನ ಬಂದೇ ಬರುವದೆಂಬ ನಂಬಿಕೆ ಇರದ ಆಸೆ.

ಆದರೂ, ಆನರೂ, ನಾಳೆ ನಮ್ಮದಾದೀತು, ಶೋಷಕರೊಬ್ಬರೂ ಉಳಿಯದ ನಾಳೆ ನಮ್ಮದಾದೀತು, ಎಂದು ಇಂದಿನ ಅಸಹ್ಯ ಸಿಂತಿತೆಯಲ್ಲೂ ನಾಳಿನ ಚಿಂತೆ ಮಾಡುವವರೆಷ್ಟು ಮಂದಿ ಇಲ್ಲ?

ಜನರು ಒಂದಾಗದಿದ್ದರೆ, ಆ 'ನಾಳೆ' ಬರುವದಿಲ್ಲ. ಜನರು ಆ ನಾಳೆಗಾಗಿ ಇವತ್ತು ದೀಕ್ಷೆ ತೊಡುತ್ತೇವೆ ಎಂದು ದೀಕ್ಷೆ ತೊಡುವ ಮಾತ್ರದಿಂದಲೂ ಆ ನಾಳೆ ಬರಲಾರದು.

ಆದಕ್ಕಾಗಿ— ಆ ನಾಳಿನದನ್ನು ಸಾಧಿಸುವದಕ್ಕಾಗಿ ಇಂದು ಹೋರಾಡಬೇಕು. ಈ ಬೇಸತ್ತ ಬದುಕಿನ, ಅರ್ಥವಿಲ್ಲದ ಶುಷ್ಕ ಬದುಕಿನ ಗತಿಯನ್ನು ಬೇರೆಡೆಗೆ ತಿರುಗಿಸಬೇಕು.

ಆದಕ್ಕಾಗಿ ಜನರು ಒಂದಾಗಬೇಕು. ಪ್ರಭುಗಳ ಕೃಪಾದೃಷ್ಟಿಯ ಹಿಂದೆ ಅಡಗಿರುವ ಹೇಯತನವನ್ನು ಕಿತ್ತೊಗೆಯಬೇಕು. ಜನಶೋಷಣೆಯ ಕಾರ್ಯ ಇನ್ನು ಮುಂದಾಗದಂತೆ, ಪ್ರಭುಗಳ 'ಅಧಿಕಾರ'ಕ್ಕೆ ಅಂಕುಶ ಹಾಕಬೇಕು.

ಎಲ್ಲರೂ—ಎಲ್ಲರೂ ದುಡಿದು ತಿನ್ನುವ ಆ ಕಾಲ ಬಂದೇ ಬರಬೇಕು ಎಂಬುದಕ್ಕಾಗಿಯಾದರೂ, ಜನರು ಎದ್ದು ನಿಲ್ಲಬೇಕು. ನಮ್ಮ ಸುಖವನ್ನು ನಮ್ಮಿಂದ ಕಸಿದುಕೊಂಡವರನ್ನು ಸದೆ ಬಡೆಯುತ್ತೇವೆಂದು ಸಜ್ಜುಗೊಳ್ಳುವ ಕಾಲ ಈಗ ಬಂದಿದೆ.

ಆದಕ್ಕಾಗಿ- ಅವಕ್ಕಾಗಿಯಾದರೂ ಜನರೆಲ್ಲಾ ಒಂದಾಗಬೇಕು. ಹಸಿದವರನ್ನು ಕೈಗಳು ಸುಪ್ಪತ್ತಿಗೆಯೇರಿ ಕುಳಿತಿದ್ದವರನ್ನು ಕೆಳಗೆ ತಳ್ಳಬೇಕು ಎಲ್ಲರಿಗೆ—ಎಲ್ಲರಿಗೆ ಅಧಿಕಾರವಿದೆ—ಸಮಾನಾಧಿಕಾರವಿದೆ ಎಂದು ಮನಗಾಣಿಸಿ ಕೊಡಬೇಕು.

ನಾವು ದೀನರಲ್ಲ — ಅನಾಥರಲ್ಲ — ನಮ್ಮನ್ನು ನಾವು ಆಳುವವರು. ನಮ್ಮ ಸುಖಕ್ಕಾಗಿ ನಾವೆಲ್ಲ ಒಂದಾಗಿ ಹೋರಾಡುತ್ತೇವೆ. ಈ ಹೋರಾಟಕ್ಕೆ ಆತಂಕ ತಂದೊಡ್ಡುವವರನ್ನು ಮುರಿದಿಕ್ಕಿ ನಾವು ಹೋರಾಡತ್ತೇವೆ. ಹೋರಾಟದಲ್ಲಿ ನಾವು ಜಯಗಳಿಸುತ್ತೇವೆ.

ನಾಳೆ ನಮ್ಮದು

ನಾಳಿನ ದಿನ ನಮ್ಮದು. ಅದಕ್ಕಾಗಿ ಇಂದು ಸತತ ಶ್ರಮಿಸುತ್ತೇವೆ. ಬೆವರಿಳಿಸಿ, ರಕ್ತ ಹರಿಸಿ ದುಡಿಯುತ್ತೇವೆ. ಇನ್ನು ನಮ್ಮನ್ನು ನೀವು ಮೋಸಗೊಳಿಸಲಾರಿರಿ. ಇನ್ನು ಜನಶಕ್ತಿಯನ್ನು ಯಾರೂ ತಡೆಗಟ್ಟಲಾರಿರಿ.

ಧನ ಮದದಿಂದ ಕೊಬ್ಬಿದವರನ್ನೆಲ್ಲಾ, ಕೊಬ್ಬಿ ಜನ ಶೋಷಣೆ ಮಾಡುವವರನ್ನೆಲ್ಲಾ ತಡೆಗಟ್ಟಿ, ನಾವು ಭವ್ಯತೆಯೆಡೆಗೆ ಸಾಗುತ್ತೇವೆ. ನಾವು ಜನರಿಗಾಗಿ ದುಡಿಯುತ್ತೇವೆ. ಹೋರಾಡುತ್ತೇವೆ.

—ಎಂದು ಪ್ರತಿಯೊಬ್ಬ ಈಗ ಎಚ್ಚರಗೊಳ್ಳಬೇಕು.

ಪ್ರಭುವಿನ ದಯೆ ಇನ್ನು ನಮಗೆ ಬೇಡ. ಸ್ವಾತಂತ್ರ್ಯಾನಂತರ, ಪ್ರಜಾಪ್ರಭುತ್ವಕ್ಕೆ ಮಾನ್ಯತೆ ಸಿಕ್ಕ ನಂತರ ಉರುಳಿದ ವರ್ಷಗಳಲ್ಲಿ, ಎಷ್ಟು ಸತ್ಯಾಗ್ರಹ ಹೂಡಬೇಕಾಯಿತೋ, ಪೋಲೀಸರ ದಬ್ಬಾಳಿಕೆಗೆ ಎಷ್ಟು ಜೀವಗಳು ಬಲಿಯಾಗಬೇಕಾಯಿತೋ, ಹಸಿದ ಹೊಟ್ಟೆಗಳೆಷ್ಟು ಬಾಳಿನಿಂದ ಮುಕ್ತಿ ಕಾಣಬೇಕಾಯಿತೋ, ದಾರಿದ್ರ್ಯಕ್ಕೆ ಎಷ್ಟು ಜೀವಗಳು ತುತ್ತಾದವೋ, ಅವೆಲ್ಲಕ್ಕೆ ನಾವೀಗ ಉತ್ತರ ಕೊಡಬೇಕಾಗಿದೆ.

ಸಮಾನ ಸುಖ ಸಮಭಾವ, ಸರಿಸಮಾನತೆಯ ನಿಟ್ಟಿನೆಡೆಗೆ ನಾವೀಗ ಸಾಗಬೇಕಾಗಿದೆ.

ಇದು ನಮ್ಮ ದೀಕ್ಷೆ ಮಾತ್ರವೇ ಅಲ್ಲ, ದೀಕ್ಷೆ ಹೊತ್ತ ಹೋರಾಟ ಕೂಡಾ.

ನಾವೀಗ ಸಜ್ಜುಗೊಳ್ಳೋಣ. ನಮ್ಮನ್ನು ಇಂದಿನ ಸ್ಥಿತಿಗೆ ತಂದಿರುವವರಿಗೆ ಪ್ರತಿ ಸವಾಲು ಹಾಕೋಣ. ನಮ್ಮನ್ನು ಕೆಣಕಿದವರಿಗಿಂತು ಹೇಳೋಣ:

ನೀವು ನಮ್ಮಲ್ಲೇನೂ ಶಕ್ತಿಯುಳಿಯದಂತೆ ಮಾಡಿದ್ದೀರಿ. ಅದಕ್ಕಾಗಿ ಸತತ ಶ್ರಮಿಸಿದ್ದೀರಿ. ಇದೋ! ನಿಮಗಿನ್ನು ವಿಶ್ರಾಂತಿ! ಚಿರವಿಶ್ರಾಂತಿ!

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಜಾಪ್ರಭುತ್ವವಾದಕ್ಕೊಂದು ಪ್ರಶ್ನೆ?

ಬರೆದವರು

ಶ್ರೀ ಶಿವಶಂಕರ

ಆಳುವ ಕಾಂಗ್ರೆಸ್ ಸರಕಾರ ಆಹಾರಧಾನ್ಯಗಳ ಮಾರಾಟ ಕಾರ್ಯದಲ್ಲಿ ತೊಡಗಿದೆ. ಇದರಲ್ಲಿ ಅದು ಯಶಸ್ವಿಯಾಗುತ್ತದೆಯೋ ಎಂಬುದಕ್ಕಿಂತಲೂ ಇದು ಪ್ರಜಾಪ್ರಭುತ್ವ ವಾದಕ್ಕೆ ಹೇಳಿಸಿದ್ದೇ ಎಂದು ಪ್ರಶ್ನಿಸುತ್ತಾರೆ ಲೇಖಕರು. ವ್ಯಾಪಾರಿ ವರ್ಗವನ್ನು ಸರಿದಾರಿಗೆ ತರುವ ಉಗ್ರೋಪಾಯವನ್ನು ಕ್ಷಾತ್ರತೇಜದಿಂದ ಆಳುವವರು ಕೈಗೊಳ್ಳಬೇಕೇ ಹೊರತು, ತಾವೇ ಪ್ರವೃತ್ತಿಗಿಳಿಯುವುದೆಂದರೆ ಅದು "ಕಮ್ಯೂನಿಸಂ"ನ ಅನುಕರಣೆ ಮಾತ್ರವಾದೀತು ಎಂದವರ ಅಭಿಪ್ರಾಯ ಚಿಂತನೀಯವಿದೆ.

ಪ್ರಜಾರಾಜ್ಯ ದಿನೋತ್ಸವದ ವಿಶೇಷ ಸಂಚಿಕೆಗೆ ಸಾಧ್ಯವಾದಷ್ಟು ಬೇಗನೆ ಲೇಖನ ಕಳುಹಿಸಿಕೊಡಬೇಕೆಂದು ಮಾನ್ಯ ಸಂಪಾದಕರು ಅಪೇಕ್ಷಿಸಿ ಕಳುಹಿಸಿದ್ದ ಪತ್ರ ಆದಾಗಲೇ ಕೈಸೇರಿತ್ತಾದರೂ ಒಡನೆ ಕಳುಹಿಸಿಕೊಡಲು ಮಾತ್ರ ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ ಇದ್ದೇ ಇದೆ. ಅದುವೇ ಕಳೆದ ವರ್ಷದ ಪ್ರಜಾರಾಜ್ಯ ದಿನೋತ್ಸವಕ್ಕೂ ಈ ವರ್ಷದ ಪ್ರಜಾರಾಜ್ಯ ದಿನೋತ್ಸವಕ್ಕೂ ಇರುವ ವ್ಯತ್ಯಾಸವಿದೆ. ಕಳೆದ ವರ್ಷ ಜವಾಹರಲಾಲ ನೆಹರೂಜೀ ಇದ್ದರು, ಈ ವರ್ಷ ಅವರಿಲ್ಲದಿರುವದಕ್ಕೂ ಲೇಖನ ಕಳುಹಿಸಿಕೊಡುವದಕ್ಕೂ ಏನು ಸಂಬಂಧವೆನ್ನುವ ಪ್ರಶ್ನೆ ಬರಬಹುದು. ಪ್ರಶ್ನೆ ಬರುವ ಮುಂಚೆಯೇ ಅದು ಕಾರಣವಲ್ಲವೆಂದು ತಿಳಿಸಿ ಬಿಟ್ಟರೆ ಆ ಪ್ರಶ್ನೆಗೆ ಎಡೆಯೇ ಇರುವದಿಲ್ಲ. ಮತ್ತೇನು ಕಾರಣ? ಅದುವೇ ಇಂದಿನ ಪ್ರಜಾಪ್ರಭುತ್ವ ವಾದವನ್ನು ಎದುರಿಸುತ್ತಿರುವ ಪ್ರಶ್ನೆ ಇದೆ.

ಆಳುವ ಪಕ್ಷ ಕಾಂಗ್ರೆಸ್ಸು ತನ್ನ ಧೋರಣೆ ಅದು, ಇದು ಎಂದೆಲ್ಲಾ ಹೇಳುತ್ತ ಬಂದಿದ್ದು, ಈಗ ಪ್ರಜಾಪ್ರಭುತ್ವವಾದಿ ಸಮಾಜವಾದ ಎನ್ನಲಾರಂಭಿಸುತ್ತದೆ. ಪ್ರಜಾಪ್ರಭುತ್ವವಾದಕ್ಕೂ ಸಮಾಜವಾದಕ್ಕೂ ಏನು ಸಂಬಂಧವೆನ್ನುವದನ್ನು ರಾಜಕೀಯ ಉಪನ್ಯಾಸಕರಿಗೇ ಬಿಟ್ಟು, ಶ್ರೀಸಾಮಾನ್ಯನಿಗೆ ಸಂಬಂಧಪಟ್ಟಿರುವ ವಿಷಯವನ್ನು ಮಾತ್ರ ಇಲ್ಲಿ ಕೊಡಲಾಗಿರುತ್ತದೆ. ಪ್ರಜಾಸತ್ತಾತ್ಮಕ ವಾದಕ್ಕೂ ಸಮಾಜವಾದಕ್ಕೂ ಉತ್ತರ–ದಕ್ಷಿಣಗಳ ಸಂಬಂಧವಿದ್ದರೂ ಒಂದು ವಿಷಯ ಮಾತ್ರ ಶ್ರೀ ಸಾಮಾನ್ಯನಿಗೂ ಅರ್ಥವಾಗುತ್ತದೆ—ಕಾಂಗ್ರೆಸ್ಸಿನೊಳಗೆ ಸಮಾಜವಾದಿಗಳು ಹಾಗೂ ಕಮ್ಯೂನಿಸ್ಟರು ಸೇರಿಕೊಂಡು ತಮ್ಮ ರೀತಿಯನ್ನು ಹಬ್ಬಿಸಲು ಪ್ರಯತ್ನಿಸುತ್ತಿದ್ದಾರೆ.

ಕಾಂಗ್ರೆಸ್ಸು ಪ್ರಜಾಸತ್ತಾತ್ಮಕ ಸಮಾಜವಾದದ ಘೋಷಣೆಯನ್ನು ಹಾಕಿದ ನಂತರ ಸರಕಾರವು ಹಲವಾರು ಕೈಗಾರಿಕಾ ರಂಗಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ ಇದೀಗ ಹಲವಾರು ರಂಗಗಳನ್ನು ಆಕ್ರಮಿಸಿಕೊಳ್ಳಲು ಹಾತೊರೆಯುತ್ತಿದೆ. ಈಗ ಅದು ಶ್ರೀಸಾಮಾನ್ಯನಿಗೂ ಅತೀ ಮುಖ್ಯವಾಗಿ ಬೇಕಾಗಿರುವ ಆಹಾರ ಅಂಗಣದಲ್ಲಿ ನರ್ತಿಸಲಾರಂಭಿಸುತ್ತದೆ. ಇದನ್ನು ಎದುರಿಸುವವರೂ ಪ್ರೋತ್ಸಾಹಿಸುವವರೂ ಇದ್ದೇ ಇದ್ದಾರೆ. ನಿಯಂತ್ರಣವನ್ನು ತೆಗೆದು ಹಾಕಿದುದರಿಂದಲೇ ಇಂದಿನ ಆಹಾರ ಸಮಸ್ಯೆ ಬಂದೊದಗಿರುತ್ತದೆಂದು ಕಮ್ಯೂನಿಸ್ಟ್ ಧುರೀಣರೊಬ್ಬರು ಹೇಳಿರುವರು. ಅವರ ಪಕ್ಷದ ಅಭಿಪ್ರಾಯವೂ ಅದೇ ಇದೆ. ರಷ್ಯಾದಲ್ಲಿ ಏನು ನಡೆಯುತ್ತೆಂಬುದನ್ನು ಅವರು ವಿಶ್ಲೇಷಿಸಿ ತಿಳಿದುಕೊಳ್ಳುವುದಿಲ್ಲ. ಆಹಾರ ವಿತರಣೆಯು ಅಲ್ಲಿ ಸರಕಾರದ ಕೈಯಲ್ಲಿದೆ. ಆ ಸಮಸ್ಯೆಯನ್ನು ಬಗೆಹರಿಸಲು ಅವರಿಂದ ಸಾಧ್ಯವಾಗದೆ, ಅವರು ಅಮೇರಿಕದಿಂದ ಗೋಧಿಯನ್ನು ತರಿಸಿಕೊಂಡು ಜನತೆಗೆ ಹಂಚಿರುವರು. ಹೀಗಿರುವಾಗ ಅದು ಭಾರತದಲ್ಲಿ ಜಯ ಹೊಂದುವದುಂಟೇ?

ಜಯ ಸಿಗುತ್ತದೋ ಇಲ್ಲವೋ, ಅಂತೂ ಅದಿಂದು ಆಹಾರ ವ್ಯಾಪಾರ ರಂಗದಲ್ಲಿಳಿದಿರುತ್ತದೆ. ಆರಂಭದಲ್ಲಿ ಅದು ವ್ಯಾಪಾರಿಗಳ ಮೇಲೆ ಕೆಲ ನಿರ್ಬಂಧಗಳನ್ನು ಹಾಕಿತು. ಚುನಾವಣಾ ಕಾಲದಲ್ಲಿ ತನ್ನ ಬಳಿ ಭಿಕ್ಷೆ ಬೇಡುವ ಕಾಂಗ್ರೆಸ್ಸು ಅಧಿಕಾರಿ ತನ್ನ ಮೇಲೆ ಚಲಾಯಿಸುವುದನ್ನು, ತನ್ನ ಮೇಲೆಯೇ ನಿರ್ಬಂಧ ಹೇರುವದನ್ನು ವ್ಯಾಪಾರೀ ಸಮೂಹ ಸಹಿಸದಾಯಿತು. ಸರಕಾರ ಅವರ ಕಣ್ಣೊರೆಸು ಪ್ರಯತ್ನಿಸುತ್ತ ನೀವೂ ವ್ಯಾಪಾರ ಮಾಡಿ, ನಾವೂ ವ್ಯಾಪಾರಮಾಡುತ್ತೇವೆ. ಕೂಡಿ ವ್ಯಾಪಾರಮಾಡೋಣ ಮುಂತಾದ ಸಿಹಿ ನುಡಿಗಳನ್ನಾಡಿ ಅವರ ಮನವೊಲಿಸಲು ಪ್ರಯತ್ನಿಸಿತು. ವ್ಯಾಪಾರೀ ಸಮೂಹ ಅದಕ್ಕೆ ಒಪ್ಪಲಿಲ್ಲ. ಅದು ಹೊಸ ಪಾಲುಗಾರನನ್ನು ಸೇರಿಸಿಕೊಳ್ಳಲು ಇಷ್ಟಪಡಲಿಲ್ಲ. ಅದು ಸರಕಾರವನ್ನು ಬೆದರಿಸಲು ಪ್ರಯತ್ನಿಸಿತು. ತನ್ನ ಸಮೂಹದ ಸಭೆ ಕರೆದು, ಇಂತಹ ತೇದಿಯಿಂದ ಆಹಾರ ಧಾನ್ಯದ ವ್ಯಾಪಾರ ಮಾಡಕೂಡದೆಂದು ತೀರ್ಮಾನಿಸಿತು. ಅಂತೆಯೇ ವ್ಯಾಪಾರಿಗಳು ತಮ್ಮ ಗಿರಾಕಿಗಳಿಗೂ ಸೂಚನೆಯನ್ನಿತ್ತು, ಆ ದಿನಾಂಕದೊಳಗೆ

(ಮುಂದಿನ ಪುಟಕ್ಕೆ)

WITH BEST COMPLIMENTS
FROM
NEELA
PLASTIC AND RUBBER PRODUCTS
Manufacturers and Exporters of Quality Bangles
SONAWALA ESTATE
GOREGAON (EAST)
BOMBAY–62
TELEPHONE: 84676

ಹಾರ್ದಿಕ ಅಭಿನಂದನೆಗಳು
ನೀಲಾ
ಪ್ಲಾಸ್ಟಿಕ್ ಎಂಡ್ ರಬ್ಬರ್ ಪ್ರೊಡಕ್ಟ್ಸ್
ಉತ್ಕೃಷ್ಟ ಬಳೆಗಳ ತಯಾರಕರು ಮತ್ತು ರಫ್ತು ಮಾಡುವವರು
ಸೊನವಾಲ ಎಸ್ಟೇಟ್
ಗೊರೇಗಾನ್ (ಪೂರ್ವ)
ಬೊಂಬಾಯಿ–62
ಟೆಲಿಫೋನ್: 84676

ಪ್ರಜಾಪ್ರಭುತ್ವವಾದಕ್ಕೊಂದು ಪ್ರಶ್ನೆ?

(ಹಿಂದಿನ ಪುಟದಿಂದ)

ಅಕ್ಕಿಯನ್ನು ಶೇಖರಿಸಿಟ್ಟುಕೊಳ್ಳಬೇಕೆಂದು ತಿಳಿಸಿತು. ಮದ್ರಾಸಿನಲ್ಲಿ ನಡೆದಷ್ಟು ಒಗ್ಗಟ್ಟಿನಲ್ಲಿ ಅವರ ಕಾರ್ಯ ಇನ್ನೆಲ್ಲಿಯೂ ನಡೆದಿಲ್ಲವೆನ್ನಬಹುದು. ಆದಾಗಲೇ ಹೊರಬಿಟ್ಟಿದ್ದ ಅಕ್ಕಿ ವ್ಯಾಪಾರಿಗಳ ಕೈಯೊಳಗೆ ಉಳಿಯಿತು. ಇದೀಗ ಬರುತ್ತಿರುವ ಅಕ್ಕಿಯನ್ನೆಲ್ಲಾ ಶೇಖರಿಸಲು ಸರಕಾರಕ್ಕೆ ಸಾಧ್ಯವಾಗಿರುವದಿಲ್ಲ. ಹೀಗಾಗಿ ಸರಕಾರ ಉಭಯಸಂಕಟದಲ್ಲಿ ಸಿಲುಕಿತು. ವ್ಯಾಪಾರಿಗಳನ್ನು ದಂಡಿಸಲು ಸರಕಾರಕ್ಕೆ ಸಾಧ್ಯವಿಲ್ಲ. ಚುನಾವಣಾ ನಿಧಿ ಸ್ವೀಕರಿಸಿರುವಾಗ ಅವರ ಮೇಲೆ ಕೈ ಇಡುವದೆಂತು? ಈ ರೀತಿ ಸಂಕಟದಲ್ಲಿ ಸಿಲುಕಿದ ಸರಕಾರ ಶ್ರೀ ಸಾಮಾನ್ಯನನ್ನು ದಿಗ್ಭ್ರಮೆಗೊಳಿಸಿ ಬಿಟ್ಟಿತು. ನಿಶ್ಚಿತ ದಿನದ ಸಾಯಂಕಾಲ ಶ್ರೀ ಸಾಮಾನ್ಯ ದಿನ ಕೂಲಿಯನ್ನು ಪಡೆದು ಅಂಗಡಿ ಬಾಗಿಲಿಗೆ ಹೋಗಿ ದೈನಂದಿನ ಅಭ್ಯಾಸದಂತೆ ಅಕ್ಕಿ ಕೇಳಿದ, ಪಾಪ ಆತ ಬೆಚ್ಚಿಬಿದ್ದ. ಹಾಹಾಕಾರಕ್ಕಾರಂಭವಾಯಿತು. ತನ್ನ ಸಾಮರ್ಥ್ಯವನ್ನೆಲ್ಲಾ ಸಂಗ್ರಹಿಸಿ, ಜನತೆ ತಾಳ್ಮೆಗೆಡದೆ ಸಮಾಧಾನದಿರಬೇಕೆಂದು, ಸರಕಾರ ಬಹಳ ಪ್ರಯತ್ನಿಸಿತು. ವ್ಯಾಪಾರಿಗಳನಿತೂ ಜಗ್ಗಲಿಲ್ಲ. ಉಪಾಯಗಾಣದ ಸರಕಾರ ತನ್ನ ದಾರಿಯಲ್ಲಿ ಮುನ್ನಡೆಯಲು ಹೆಜ್ಜೆ ಇಟ್ಟಿತು.

ಗೃಹರಕ್ಷಕ ಖಾತೆಯವರು ಮನೆಮನೆಗೆ ಹೋಗಿ ಜನಸಂಖ್ಯೆಯನ್ನು ಗುರುತಿಸಿಕೊಂಡರು. ಕುಚ್ಚಿಗೆ (ಕುದುಪಲು) ಉಪಯೋಗಿಸುತ್ತೀರಾ, ಬೆಳ್ತಿಗೆ ಉಪಯೋಗಿಸುತ್ತೀರಾ ಎಂದು ಕೇಳಿದರು. ಹತ್ತಿಪ್ಪತ್ತು ದಿನಗಳ ನಂತರ, ಅವರು ಸಂಗ್ರಹಿಸಿದ್ದ ಅಂಕೆಸಂಖ್ಯೆಗಳ ಸಮಾಚಾರದ ಮೇಲೆ ಅವರೇ ಕಾರ್ಡುಗಳನ್ನು ಹಂಚಿದರು. ನವಂಬರ ತಿಂಗಳ ಮಧ್ಯದಿಂದ ಅಕ್ಕಿ ವಿತರಣೆಗಾರಂಭವಾಯಿತು. ಅತ್ತ ಸಾಯಲೂ ಸಾಧ್ಯವಿಲ್ಲ. ಇತ್ತ ಬದುಕಲೂ ಸಾಧ್ಯವಿಲ್ಲದಂತಾಯಿತು ಶ್ರೀ ಸಾಮಾನ್ಯನ ಸ್ಥಿತಿ. ಕಾರ್ಡಿನಲ್ಲಿ ಸಿಗುವ ಅಕ್ಕಿ ಅವನಿಗೆ ಅರೆ ಹೊಟ್ಟೆಗೆ ಸಾಕಾಗುತ್ತದೆ, ಅಷ್ಟೆ. ಉಳಿದರ್ಧಕ್ಕೆ ಅವನು ಹೋಗುವುದೆಲ್ಲಿಗೆ? ಹೊರಗೆಲ್ಲೂ ಅಕ್ಕಿ ಸಿಗುವದಿಲ್ಲ. ಇನ್ನು ಸರಕಾರ ಹಂಚುತ್ತಿರುವ ಅಕ್ಕಿಯೋ, ಸಾಮಾನ್ಯ ವ್ಯಾಪಾರಿಗೆ ಅದನ್ನು ಮಾರಲು ಧೈರ್ಯ ಬರಲಿಕ್ಕಿಲ್ಲ. ಅಂತಹ ಅಕ್ಕಿ ಅದು. ಅದರ ಬೆಲೆಯಾದರೋ, ನಿಶ್ಚಿತ ದಿನಗಿಂತ ಮುಂಚೆ ಅದ್ಯಾವ ವ್ಯಾಪಾರಿಯೂ ಅಷ್ಟು ಬೆಲೆಗೆ ಮಾರುತ್ತಿರಲಿಲ್ಲ.

ಈ ಮಧ್ಯೆ ಕಾರ್ಡು ಸಿಗದೆ ಅವಸ್ಥೆಪಟ್ಟವರೂ ಬಹಳ ಮಂದಿ. ಅವರು ಪಟ್ಟ ಪಾಡು ಹೇಳತೀರದು. ಗೃಹರಕ್ಷಕರ ಬಳಿ ವಿಚಾರಿಸಿದಾಗ ಅವರು ಕುಟುಂಬ ಪತ್ರಿಕೆಗಳ ವಿಶೇಷಾಧಿಕಾರಿಯ ಕಾರ್ಯಾಲಯಕ್ಕೆ ಹೋಗಿ ದೂರು ಕೊಡಬೇಕೆಂದು ಹೇಳುವರು. ವಿಶೇಷಾಧಿಕಾರಿಯ ಕಾರ್ಯಾಲಯಕ್ಕೆ ಹೋದಾಗ ದೂರು ಬರೆದು ಕೊಟ್ಟು ಹೋಗಿ, ಗೃಹರಕ್ಷಕ ಬಂದು ಕಾರ್ಡು ಕೊಡುತ್ತಾನೆಂದು ಹೇಳಿ ಅಲ್ಲಿಂದ ಓಡಿಸಿಬಿಡುತ್ತಿದ್ದರು. ಹೀಗೆ ಅವರ ಪಾಡು ಕಾಲ್ಚೆಂಡಿನಂತಾಗಿತ್ತು. ಅವರಿಬ್ಬರು ಒದೆದತ್ತ ಹೋಗಬೇಕಾಗಿತ್ತು. ಇಂತಹ ಪರಿಸ್ಥಿತಿಯಲ್ಲಿರುವಾಗ ಒಡನೆ ಲೇಖನವನ್ನು ಕಳುಹಿಸಿ ಕೊಡುವುದಾದರೂ ಹೇಗೆ?

ಇಂತಹ ಪರಿಸ್ಥಿತಿಯನ್ನು ಸರಕಾರ ಏಕೆ ಉಂಟುಮಾಡಿಕೊಂಡಿತು? ಸಮತಾವಾದಿ ರಾಷ್ಟ್ರಗಳಲ್ಲಿರುವಂತೆ ಇಲ್ಲೂ ಪ್ರತಿಯೊಂದು ರಂಗವನ್ನೂ ಸರಕಾರ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಪ್ರಯತ್ನಿಸುತ್ತದೆ. ಪ್ರಜಾಸತ್ತಾತ್ಮಕ ರಾಷ್ಟ್ರಕ್ಕೆ ಇದು ಭೂಷಣಪ್ರಾಯವೆ? ಪ್ರಜಾಸತ್ತಾತ್ಮಕ ರಾಷ್ಟ್ರ ಎನ್ನುವದಕ್ಕೆ ಅರ್ಥವಾದರೂ ಏನು? ಅದಕ್ಕಿಂತಲೂ ಸ್ಪಷ್ಟವಾಗಿ, ನಿಸ್ಸಂಕೋಚದಿಂದ ಸಮಾಜವಾದಿ ರಾಷ್ಟ್ರ ಎಂದು ಘೋಷಿಸಿಬಿಡಬಹುದಲ್ಲ? ಅತ್ತ ಕೋಲು ಮುರಿಯಬಾರದು, ಇತ್ತ ಹಾವು ಸಾಯಬೇಕೆಂದರೆ ಅದು ಸಾಧ್ಯವೇ?

ಸರಕಾರ ಅಥವಾ ಕಾಂಗ್ರೆಸ್ ಮಂತ್ರಿಮಂಡಳ ಸಾಗುತ್ತಿರುವ ಈ ರೀತಿಯನ್ನು ಕಂಡು ಮಹಾನ್ ದೇಶಭಕ್ತರು ಎಚ್ಚರಿಕೆಯ ಮಾತುಗಳನ್ನಾಡಿರುವರು. ಸರಕಾರ ಇರುವದು ದೇಶದ ರಕ್ಷಣೆಗಾಗಿ, ಅದು ವ್ಯಾಪಾರ ಮಾಡಲಿಕ್ಕಾಗಿ ಇರುವದಿಲ್ಲ. ಆಡಳಿತ ಕಡಿವಾಣ ಕ್ಷತ್ರಿಯ ಹಿಡಿದುಕೊಳ್ಳುವಂತಹದ್ದು. ಅದು ವ್ಯಾಪಾರಿಗಳ ಕೈಯೊಳಗಿರಲಾರದು. ಅಂದರೆ ಸರಕಾರಕ್ಕೆ ಕ್ಷಾತ್ರ ತೇಜಸ್ಸು ಇರಬೇಕು, ವಿನಾ ವೈಶ್ಯ ವೃತ್ತಿ ಹೇಳಿಸಿದುದಲ್ಲ. ಅದನ್ನು ನಿರ್ಲಕ್ಷಿಸಿ ಸರಕಾರ ವೈಶ್ಯವೃತ್ತಿಗಿಳಿದಲ್ಲಿ ಅದು ತನ್ನ ಕಾಲಿಗೆ ತಾನೇ ಕಲ್ಲನ್ನು ಹಾಕಿಕೊಳ್ಳುತ್ತದೆಂದು ಸರಕಾರಕ್ಕೆ ಕೆಲವರು ಎಚ್ಚರಿಕೆ ಕೊಟ್ಟಿದ್ದರು. ಮಧ್ಯಪ್ರದೇಶದ ವಿಧಾನಸಭೆಯಲ್ಲಿ ಆ ಕುರಿತು ಭಾರೀ ವಾಗ್ಯುದ್ಧವೇ ನಡೆದುಹೋಯಿತು. ಆದರೂ ಸರಕಾರ ತನ್ನ ಧೋರಣೆಯನ್ನು ಬದಲಾಯಿಸಿರುವದಿಲ್ಲ.

ಭಾರೀ ಆಕ್ರಮಣ ನಡೆದಿರುವಾಗ ಅಕ್ಕಿ ವ್ಯಾಪಾರವನ್ನು ವ್ಯಾಪಾರಿಗಳಿಗೆ ಬಿಟ್ಟುಕೊಟ್ಟು ರಕ್ಷಣೆಯ ಕಾರ್ಯವನ್ನು ಉತ್ತಮ ರೀತಿಯಲ್ಲಿ ಸರಕಾರ ನೋಡಿಕೊಳ್ಳುವುದು ಸರಿಯಲ್ಲವೇ? ಸರಕಾರ ಅಕ್ಕಿ ವ್ಯಾಪಾರಕ್ಕಾರಂಭಿಸಿದಲ್ಲಿ ಚೈನಾ ಆಕ್ರಮಣವನ್ನು ಮುನ್ನಡೆಸದೆ ಇದ್ದೀತೇ? ಪಾಕಿಸ್ಥಾನ ಸುಮ್ಮಗುಳಿದೀತೇ? ಖಂಡಿತವಾಗಿ ಇಲ್ಲ. ಸರಕಾರದ ಲಕ್ಷ್ಯ ಅತ್ತ ಹೋಯಿತೆಂದರೆ ರಕ್ಷಣೆಯತ್ತ ಅಷ್ಟೇ ನಿರ್ಲಕ್ಷ್ಯವನ್ನು ತೋರಿಸಬೇಕಾಗಿ ಬರುತ್ತದೆ. ಆಗ ಶತ್ರುವಿಗೆ ಮತ್ತಷ್ಟು ಒಳ್ಳೆಯದಾಯಿತು. ಅದರಲ್ಲೂ, ದೇಶದೊಳಗೆ ಗೊಂದಲವೆಬ್ಬಿಸಿ ಗಡಿಯಲ್ಲಿ ಸಿದ್ಧವಾಗಿದ್ದು ಪಚ್ಚೆ ದೀಪಕ್ಕಾಗಿ ಕಾಯುತ್ತಿರುವ ಚೈನಿ ಕಮ್ಯೂನಿಸ್ಟರನ್ನು ಸ್ವಾಗತಿಸಲು ಇಲ್ಲಿಯ ಕಮ್ಯೂನಿಸ್ಟರು ಹೊಂಚು ಹಾಕುತ್ತಿರುವಾಗ, ಅವರ ಪಾಲಿಗೆ ಹೋಳಿಗೆ ಕೈ ತಪ್ಪಿ ತುಪ್ಪಕ್ಕೆ ಬಿದ್ದಂತಾಗಿರುತ್ತದೆ.

ಭಾರತದಲ್ಲಿ ಆಹಾರಧಾನ್ಯಗಳಿಗೆ "ಕೊರತೆ' ಬಂದಿದೆಯಾದರೂ ಗಡಿ ಪ್ರದೇಶದಲ್ಲಿ ಆಹಾರಧಾನ್ಯವು ಭಾರೀ ಪ್ರಮಾಣದಲ್ಲಿ ಚೈನಾಕ್ಕೆ ಹೋಗುತ್ತಿದೆ. ವ್ಯಾಪಾರಿಗಳು ಲಾಭದ-ಲೆಖ್ಖದಿಂದ ಹಾಗೆ ಮಾಡುತ್ತಿದ್ದರೆಂದು ಭಾವಿಸಿಕೊಂಡಲ್ಲಿ, ಈಗ? ಈಗಲೂ ಕರಾಗವಾಗಿ ಹೋಗುತ್ತಿದೆಯಲ್ಲಾ! ಚೈನಾಕ್ಕೆ ಹೋಗುವದನ್ನು ನಿಲ್ಲಿಸುವ ಬದಲು ಶ್ರೀ ಸಾಮಾನ್ಯನಿಗೆ ಸಿಗುತ್ತಿದ್ದುದನ್ನು ನಿಲ್ಲಿಸಿದಂತಾಯಿತು.

ಹೀಗೆಲ್ಲಾ ಇದ್ದರೂ ಮತ್ತೇಕೆ ಸರಕಾರ ಆ ರಂಗಕ್ಕಿಳಿಯುತ್ತದೆ? ಹಿಂದೆಯೇ ಸೂಚಿಸಿರುವಂತೆ ಎಲ್ಲಾ ರಂಗಗಳನ್ನು ಸರಕಾರೀಕರಣ ಗೊಳಿಸಬೇಕೆಂದು ಕಾಂಗ್ರೆಸ್ಸಿನಲ್ಲಿರುವ ಎಡವಾದಿಗಳು ಹೇಳುತ್ತ ಬರುತ್ತಿದ್ದು ಅದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ಸಿನೊಳಗೆ ಎಡ—ಬಲಗಳಿವೆಯೆಂದು ಹೇಳಲಾಗುತ್ತಿದೆ. ಅದನ್ನೇ ಬೇರೆ ಶಬ್ದಗಳಲ್ಲಿ ಹೇಳುವದಾದಲ್ಲಿ ಸಮಾಜವಾದಿಗಳು ಮತ್ತು ಪ್ರಜಾಸತ್ತಾತ್ಮಕವಾದಿಗಳೆನ್ನಬಹುದು. ಇಬ್ಬರನ್ನೂ ಸಂತೃಪ್ತಿಪಡಿಸಲಿಕ್ಕಾಗಿ ಸಿದ್ಧವಾಗಿರುವ ಶಬ್ದವೇ ಪ್ರಜಾಸತ್ತಾತ್ಮಕ ಸಮಾಜವಾದ ಅಥವಾ 'ಡೆಮೊಕ್ರೆಟಿಕ್ ಸೋಶಿಯಾಲಿಜಂ' ಇದೆ.

ಈ ಸೋಶಿಯಾಲಿಜಂ ನಮ್ಮ ದೇಶಕ್ಕೆ ಹೇಳಿಸಿದುದಲ್ಲ. "ಪ್ರತಿ ಮನುಷ್ಯನಿಗೂ ಒಂದು ಜೀವಿತೋದ್ದೇಶವಿರುತ್ತದೆ. ಮನುಷ್ಯನ ಹೊರಗಿನ ವ್ಯಕ್ತಿತ್ವ ಎಂದರೆ ಈ ಒಳಗಿರುವ ಜೀವಿತೋದ್ದೇಶವು ಪ್ರಕಟಗೊಳ್ಳುವ ಭಾಷೆ. ಅದರ ಬಾಹ್ಯ ಆವಿಷ್ಕಾರ ಮಾತ್ರ. ಇದೇ ರೀತಿ ಪ್ರತಿ ರಾಷ್ಟ್ರಕ್ಕೂ ಅದರದರ ರಾಷ್ಟ್ರೀಯ ಜೀವಿತೋದ್ದೇಶವಿದೆ. ಆ ಉದ್ದೇಶವು ಪರಜಗತ್ತಿನ ಸಂಚಾಲನೆಗಾಗಿ, ಧಾರಣೆಗಾಗಿ ಅವಶ್ಯಕವೇ. ಯಾವ ದಿನ ಈ ಅವಶ್ಯಕತೆಯು ಮುಗಿಯುತ್ತದೋ ಆ ದಿನವೇ ಆ ಉದ್ದೇಶವನ್ನು ಹೊತ್ತ ವ್ಯಕ್ತಿಯಾಗಲಿ ಅಥವಾ ರಾಷ್ಟ್ರವಾಗಲಿ ನಾಶ ಹೊಂದುವದು ನಿಶ್ಚಿತ. ಜಗತ್ತಿನ ಉಳಿವಿಗೆ ಇನ್ನೂ ಅಗತ್ಯವಿರುವ ರಾಷ್ಟ್ರೀಯ ಉದ್ದೇಶವೊಂದು ನಮ್ಮಲ್ಲಿ ಇದೆಯೆಂದೇ ಇಷ್ಟೆಲ್ಲ ದುಃಖ, ದೈನ್ಯ, ದಾರಿದ್ರ್ಯ ಹಾಗೂ ಒಳ ಹೊರಗಿನ ದಬ್ಬಾಳಿಕೆಗಳ ಗುರಿಯಾಗಿದ್ದೂ ಭಾರತೀಯರಾದ ನಾವು ಇನ್ನೂ ಬದುಕಿದ್ದೇವೆ......

"ವಿಶ್ವದ ಸಂಸ್ಕೃತಿಯ ಭಂಡಾರಕ್ಕೆ ಭಾರತವು ಇನ್ನೂ ತನ್ನ ಪಾಲಿನದನ್ನು ನೀಡಬೇಕಾದುದಿದೆ ಎಂಬೀ ಅರಿವು ಇಂದಿಗೂ ಬದುಕಿದೆ. ಈ ಸತ್ಯವನ್ನು ಚೆನ್ನಾಗಿ ಮನಗಾಣಿರಿ......

"ನಮ್ಮ ರಾಷ್ಟ್ರೀಯ ಧ್ಯೇಯವು ಕಪ್ಪಾಗಿದೆ ಎಂದು ಭಾವಿಸುವದು ಶುದ್ಧ [illegible], ಬುದ್ಧಿಹೀನತೆಯ ಲಕ್ಷಣ, ಅಷ್ಟೆ......

"ಪ್ರತಿ ರಾಷ್ಟ್ರಕ್ಕೂ ಅದರದೇ ಆದ ಒಂದು ವಿಶಿಷ್ಟ ಕಾರ್ಯ ವಿಧಾನ ಇರುತ್ತದೆ. ಕೆಲವು ರಾಷ್ಟ್ರಗಳು ರಾಜಕಾರಣದ

POPULAR IN INDIA
and
FOREIGN MARKETS

Extensively used in India and Abroad for Upholstery,

RAILWAY COACHES, MOTOR CARS, FURNITURE, Etc.

"CHEETA BRAND" is a luxury and utility Leather Cloth, Colourful, pliable and non-cracking. A durable and waterproof, all purpose, material, including Book-Binding requirements

"CHEETA BRAND"

Leather Cloth

Manufactured:

THE ELPHINSTONE SPG. & WVG. MILLS CO. LTD.

Kamani Chambers, 32, Nicol Road,
Ballard Estate, BOMBAY.

ಮೂಲಕ, ಕೆಲವು ಸಮಾಜ ಸುಧಾರಣೆಗಳ ಮೂಲಕ, ಇನ್ನು ಕೆಲವು ಅನ್ಯಾನ್ಯ ಮಾರ್ಗಗಳಲ್ಲಿ ಕೆಲಸ ಮಾಡುತ್ತವೆ…

"ಸರ್ವ ನಿಜವಾದ ಹಿಂದೂವಿನ ಗುಣವೆಂದರೆ, ಅವನು ತನ್ನೆಲ್ಲ ಜ್ಞಾನ, ವಿದ್ಯೆ, ತನ್ನ ಧನ, ಸ್ಥಾನಮಾನಗಳು ಎಲ್ಲವನ್ನೂ ತನ್ನ ಜನ್ಮಜಾತವಾದ ಹಿಂದೂಕುಲದ ಆಧ್ಯಾತ್ಮಿಕತೆ ಹಾಗೂ ಶುಚಿತೆಗಳಿಗೆ ಅಧೀನಗೊಳಿಸುತ್ತಾನೆ.

"ಈ ಮಾತು ಗಮನದಲ್ಲಿಡಿ: ಶೀಘ್ರ ಆಧ್ಯಾತ್ಮಿಕತೆಯನ್ನು ಬದಿಗೆ ಸರಿಸಿ ಪಾಶ್ಚಾತ್ಯರ ಭೌತಿಕ ನಾಗರಿಕತೆಯ ಬೆನ್ನು ಹತ್ತಿದಿರೆಂದರೆ ತನ್ನ ಮೂರೇ ಪೀಳಿಗೆಗಳಲ್ಲಿ ನಿಮ್ಮ ಜನಾಂಗವು ನಿರ್ನಾಮವಾಗುವುದು. ಏಕೆಂದರೆ, ಅದರಿಂದ ರಾಷ್ಟ್ರದ ಬೆನ್ನೆಲುಬೇ ಮುರಿಯುತ್ತದೆ, ನಮ್ಮ ರಾಷ್ಟ್ರ ಜೀವನ ಸೌಧದ ಪಾಯವೇ ಕುಸಿಯುತ್ತದೆ.

"ಕೇವಲ ಇನ್ನೊಬ್ಬರ ಮಾದರಿಯಾಗಿ, ಪಂಕ್ತಿಯ ಹೀನ ಅನುಕರಣೆಯಲ್ಲಿ ಪರಾವಲಂಬಿಯಾಗಿರುತ್ತಾ ಸಾಂಸ್ಕೃತಿಕ ಉನ್ನತಿಯ, ಜೀವನದ ಮಹೋನ್ನತ ಶಿಖರವನ್ನು ನೀವೇರಬಲ್ಲಿರಾ…

ಕುಟುಂಬ ಕಾರ್ಡಿಗಾಗಿ ಕಾಯುತ್ತ ಕುಳಿತಿದ್ದಾಗ ಮಾನ್ಯಶ್ರೀ ಏಕನಾಥ ರಾನಡೆಯವರು ಸಂಗ್ರಹಿಸಿರುವ 'ಏಳಿ! ಎದ್ದೇಳಿ!!' ವಿವೇಕಾನಂದರ ವಿವೇಕವಾಣಿ ಓದುತ್ತಿದ್ದಂತೆ ಸಮಯ ಕಳೆದದ್ದೇ ತಿಳಿಯದಾಯಿತು. ಅಂತೂ ಅಂದು ಕಾರ್ಡನ್ನು ಪಡೆದುಕೊಂಡೇ ಹಿಂತಿರುಗಿದೆ. ನಮ್ಮ ಸರಕಾರ ಎತ್ತ ಹೋಗುತ್ತಿದೆ? ಸಮಾಜವಾದದ ಅನುಕರಣೆ ಅಂದರೆ ನಮ್ಮ ಸರ್ವನಾಶದತ್ತ ನಮ್ಮನ್ನೊಯ್ಯುತ್ತಿದೆಯೇ? ಪ್ರಜಾಪ್ರಭುತ್ವಕ್ಕೆ ಅದೊಂದು ಪ್ರಮುಖ ಪ್ರಶ್ನೆಯಾಗಿ ನಿಂತಿದೆ.



To grow more food

Use

KIRLOSKAR

PUMPING SETS



ಅಧಿಕ ಆಹಾರ ಉತ್ಪಾದನೆಗಾಗಿ

ಕಿರ್ಲೋಸ್ಕರ

ಪಂಪಿಂಗ್ ಸೆಟ್‌ಗಳನ್ನು

ಉಪಯೋಗಿಸಿರಿ

Authorised Distributors.

ವಿತರಕರು:

KARKERA SONS & CO.
MAIDAN WEST ROAD
MANGALORE—1.

ಕರ್ಕೇರ ಸನ್ಸ್ & ಕೊ.
ಮೈದಾನ್ ವೆಸ್ಟ್ ರೋಡು,
ಮಂಗಳೂರು – 1.

WITH BEST COMPLIMENTS
FROM

ASHOK INDUSTRIES

Manufacturers of fast selling plastic bangles and bracelets.
PATLAS are our speciality.

Inquiries may be sent to the following address:

6th Lane, Carter Road, Borivli East,
BOMBAY - 66
Telephone: 661691

ಹಾರ್ದಿಕ ಅಭಿನಂದನೆಗಳು!
ಅರ್ಪಿಸುವವರು:

ಅಶೋಕ ಇಂಡಸ್ಟ್ರೀಸ್

ಅತಿ ತ್ವರಿತದಲ್ಲಿ ಮಾರಾಟವಾಗುವ ಪ್ಲಾಸ್ಟಿಕ್ ಬಳೆಗಳು ಮತ್ತು ಕಂಕಣಗಳನ್ನು ತಯಾರಿಸುವವರು.

'ಪಟ್ಲಾಸ್' ನಮ್ಮ ವಿಶಿಷ್ಟತೆ.

ಈ ವಿಳಾಸಕ್ಕೆ ವಿಚಾರಿಸಬಹುದು:

6ನೆ ಲೇನ್, ಕಾರ್ಟರ್ ರೋಡು, ಬೊರಿವಿಲಿ ಪೂರ್ವ
ಬೊಂಬಾಯಿ – 66
ಟೆಲಿಫೋನ್: 661691

ರೇಡಿಯೋ ಗುಳಿಗೆಗಳು

(ನಾಲ್ಕನೇ ಪುಟದಿಂದ)

ಲ್ಲಿಸಿ, ಶಾಖದಲ್ಲಿನ ವ್ಯತ್ಯಾಸ ಮತ್ತು ಇದರಿಂದ ಉಂಟಾಗುವ ತರಂಗವೊನಗಳ ಅಂತರ, ಇವೆಲ್ಲವುಗಳ ರೇಖಾಚಿತ್ರವೊಂದನ್ನು ಒದಗಿಸಿಕೊಂಡು, ಈ ಉಪಕರಣವನ್ನು ನುಂಗಿದಾಗ, ಅದು ದೇಹದೊಳಗಿಂದ ಕಳುಹುವ ತರಂಗಗಳ ಉದ್ದಕ್ಕನುಗುಣವಾಗಿ ಆ ಭಾಗವು ಎಷ್ಟರ ಶಾಖದಲ್ಲಿದೆ? ಅಲ್ಲಿನ ರಕ್ತ ಎಷ್ಟರ ಒತ್ತಡದಲ್ಲಿದೆ? ಎಂಬಿತ್ಯಾದಿ ವಿವರಗಳನ್ನು ಸೂಕ್ಷ್ಮವಾಗಿಯೂ ವಿವರವಾಗಿಯೂ ಸಂಗ್ರಹಿಸಬಹುದು. ನಿಕೆಲ್ ಮತ್ತು ಕಬ್ಬಿಣಗಳ ದಂಡವೊಂದರ ಸುತ್ತಲೂ ಸುತ್ತಲಾದ ಸುರುಳಿಯೊಂದು ಸುತ್ತಲಾಗಿದ್ದು, ಇದು ಕೇವಲ 0·1 ಸೆಂಟಿಗ್ರೇಡ್ ಶಾಖದಷ್ಟು ಸೂಕ್ಷ್ಮವಾಗಿ (ನಿಖರವಾಗಿ, accurately) ಶಾಖಗಳ ಅಂತರನ್ನು ಅಳೆಯಬಲ್ಲದು.

ಒತ್ತಡದಲ್ಲಿನ ಅಂತರವನ್ನು ಅಳೆಯಬೇಕಾದರೆ ಇನ್ನೊಂದು ಬಗೆಯ ಉಪಕರಣವು ಉಪಯುಕ್ತವಾಗುತ್ತಲಿದೆ. ಪ್ಲಾಸ್ಟಿಕ್‌ನ ಚಿಕ್ಕ ಆವರಣದಲ್ಲಿ ಚಲಿಸುವ ಒಂದು ಪಟ (diaphragm) ಇರುತ್ತದೆ. ಒತ್ತಡದ ಕಾರಣದಿಂದ ಪಟವು ಚಲಿಸುತ್ತದೆ, ಸ್ಥಾನಾಂತರಗೊಳ್ಳುತ್ತದೆ. ಇದರಿಂದಲಂತೂ ಆ ಚಿಕ್ಕ ಸೀಸೆಯೊಳಗೆ ಹುದುಗಿರುವ ಲೋಹದ ಚುಕ್ಕಾಣಿಯೊಂದು, ಮುಂದೆ ಹಿಂದೆ ಹೋಗುತ್ತಲೂ ಆ ಪ್ರೇಷಕದಿಂದ ಹೊರ ಹೊಮ್ಮುವ ತರಂಗಗಳ ಆವರ್ತನ ಸಂಖ್ಯೆ ವ್ಯತ್ಯಾಸ ಹೊಂದುತ್ತದೆ.

ಚಿಕ್ಕ ಕರುಳಿನಲ್ಲಿ ಇಂತಹ ಉಪಕರಣವೊಂದನ್ನು ಉಪಯೋಗಿಸಿದಾಗ ಅದು ತನ್ನ ಕಾರ್ಯವನ್ನು ಮಾಡುತ್ತಲೇ ಇದ್ದರೂ ಅದು ಇಂಥಲ್ಲೇ ಇದೆಯೆಂದು ತಿಳಿದುಕೊಳ್ಳುವುದು ಸ್ವಲ್ಪ ಕಷ್ಟವೇ ಸರಿ. ಬಹುಶಃ — X— ಕಿರಣಗಳ ಮೊನಚಾದ ಕಂಬಿಯೊಂದನ್ನು ಪ್ರಯೋಗಿಸಿ ಇದರ ಅಸ್ತಿತ್ವವನ್ನು ನಾವು ಹೊರಗಿನಿಂದ ಗುರುತಿಸಬೇಕು.

ಇನ್ನೂ ಹೀಗೆ ಉಪಯುಕ್ತವಾದ ತರಂಗಗಳಿಂದ ದೇಹದ ಯಾವ ಕಣವೂ ಹದಗೆಡಬಾರದು; ಅದು ಬಹಳ ಕಾಲ ಇಂಥ ತರಂಗಗಳನ್ನು ಪಡೆದು ಮರುಕಳಿಸಿದರೆ ಹಾನಿಯಾಗಲೂ ಬಹುದು. ಅಂತೂ ತನ್ನ ಕೆಲಸವಾದೊಡನೆ ಆ ಉಪಕರಣವನ್ನು ನಾವು ತೆಗೆಯಲು ಬರಬೇಕು. ಇಂಥ ಸುಲಭ ಜೋಡಣೆ ಮತ್ತು ಅವಶ್ಯವಿದ್ದಾಗ ಹೊರಗೆಳೆಯುವ ಕ್ರಮಗಳನ್ನು ನಾವು ಅವಶ್ಯವಾಗಿ ಉಪಯೋಗಿಸಲು ಕಲಿಯಬೇಕು.

ಅಲ್ಲದೆ, ಇನ್ನೂ ವಿಶಿಷ್ಟ ಸುಧಾರಣೆಗಳು ಇಂಥ ಉಪಕರಣಗಳಲ್ಲಿ ಸಾಧ್ಯವಿವೆ. ರಕ್ತನಾಳಗಳಲ್ಲಿ ಮುಖ್ಯವಾಗಿ ದೊಡ್ಡ ಗಾತ್ರದ ನಾಳಗಳಲ್ಲಿ ಈ ಚಿಕ್ಕ ಪುಟ್ಟ ಉಪಕರಣಗಳನ್ನು ತೇಲಗೊಟ್ಟು ವಿವರಗಳನ್ನು ದೇಹದೊಳಭಾಗದಲ್ಲಿ ವಿಷಾಕ್ತತೆ, ಮತ್ತು ಅಧಿಕ ಶಾಖ, ರಕ್ತದ ವೇಗತರ ಹರಿವು, ಮಂದತರ ಹರಿವು, ಮುಂತಾದ ವಿವರಗಳನ್ನು ಸುಲಭವಾಗಿ ಸಂಗ್ರಹಿಸಬಹುದು.

ಉಪಕರಣಗಳನ್ನು ರಚಿಸುವ ಲೋಹ, ಮಿಶ್ರಲೋಹಗಳೊಡನೆ ತುಸು ವಿನಾಶಕ ಗುಣವುಳ್ಳ ಆಯಾಯ ಲೋಹದ ಐಸೊಟೋಪುಗಳನ್ನು— (isotopes) ಸಮಸ್ಥಾನೀಯ ಧಾತುಗಳನ್ನೂ ಉಪಯೋಗಿಸಿಕೊಂಡರೆ (ಇಂಥ ಪ್ರಯೋಗಗಳು ಇಷ್ಟರತನಕ ನಡೆದಿಲ್ಲ ಆದರೆ ಹಂಚಿಕೆಯುಕ್ತವೆ) ಬಹಳ ಸುಲಭವಾಗಿ, ಮತ್ತು ಸುಸ್ಪಷ್ಟವಾಗಿ ಆ ಉಪಕರಣವು ಎಲ್ಲಿದೆ, ಯಾವ ಭಾಗದಲ್ಲಿದ್ದು ವಿದ್ಯುತ್ತರಂಗಗಳನ್ನು ಬದಲಿಸಿ ಹೊರಕ್ಕೆ ಕಳುಹುತ್ತಲಿದೆ ಎಂದು ಪರೀಕ್ಷಿಸುವುದು ಸುಲಭವಾಗಲಿದೆ.

ಇನ್ನೂ ಒಂದು ಸಾಧನೆಯು ಅಶಂಷ್ಟ ಹಾಗೂ ಮಹತ್ವಪೂರ್ಣವಾದುದು. ಊನವು ತೋರಿದ ಭಾಗದಲ್ಲಿ ಅದನ್ನು ಕೇವಲ ವಿದ್ಯುತ್ತರಂಗಗಳಿಂದಲೇ ಸರಿಪಡಿಸುವಂತಿದ್ದರೆ ಇದಕ್ಕೆ ಅವಶ್ಯವಿರುವ ತರಂಗಗಳನ್ನು ಸೃಜಿಸಿ, ಆ ಭಾಗಕ್ಕೆ ಹಾಯಿಸಿ ಊನವನ್ನು ಕಿತ್ತೊಗೆಯಬಹುದು. ಆದರೆ, ಇಂಥ ಸುಧಾರಣೆಗಳಿಗೆ ಇನ್ನೂ ೨—೩ ವರ್ಷಗಳು ಬೇಕಾದಾವು.

ಇತರ ಉದ್ಯಮಗಳಲ್ಲೂ ಮುಖ್ಯ ಹಣ್ಣುಗಳನ್ನು ಡಬ್ಬಿಯೊಳಗಿಟ್ಟು ಕಳುಹುವ ಕ್ರಮಗಳಲ್ಲಿ, ಆಹಾರ ಧಾನ್ಯಗಳ ಮತ್ತು ಕಣ್ಣುಹುಪಲುಗಳ ರಕ್ಷಣೆಯ ಕ್ರಮಗಳಲ್ಲಿಯೂ ಇಂಥ ರೇಡಿಯೋ ಗುಳಿಗೆಗಳು ಉಪಯೋಗಕ್ಕೆ ಬರುತ್ತಲಿವೆ. ಅಂತೂ ಪ್ರತ್ಯಕ್ಷವಾಗಿ, ಇವು ಊನವೊಂದನ್ನು ಹೋಗಲಾಡಿಸದಿದ್ದರೂ, ಇಂಥ ಊನದ ಸ್ಥಾನ ನಿರ್ದೇಶಕ್ಕೆ ಇವು ಅತ್ಯಂತ ಸಹಕಾರಿಯಾಗಬಲ್ಲವು ಎಂದುದರಿಂದಲೇ ಇವನ್ನೂ ಗುಳಿಗೆಗಳು ಎಂದೇ ವಿಜ್ಞಾನಿಗಳು, ಮುಖ್ಯರೋಗ ನಿದಾನ ಶಾಸ್ತ್ರಜ್ಞರು ಕರೆಯುತ್ತಲಿದ್ದಾರೆ. ಅಂತೂ ರೋಗ-ಊನ-ನಿದಾನ ಮಾರ್ಗದಲ್ಲಿ ಇದೂ ಒಂದು ಉತ್ತಮ, ಹಾಗೂ ನಿಖರ ಸಾಧನವಾಗಲಿದೆ ಎಂಬ ಭವಿಷ್ಯವನ್ನು ವಿಜ್ಞಾನಿ ಇಷ್ಟರಲ್ಲೇ ಹೇಳಿದ್ದಾನೆ.

Are You Planning to go in for

A Radio - ?
A Sewing Machine-?
A Sofa Cum Bed-?

Why not wait? You may get **them all as GIFTS**

AT

VITHALJI'S

Retail Branch

BUNDER ROAD, MANGALORE

Contact from 15-1-65 to 14-3-65

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ
● ಮೊಳ್ಳುದೃಷ್ಟಿಯ ನಿವಾರಣೆ— ಪರದೇಶವನ್ನು ನೋಡಬೇಕಾಗಿಲ್ಲ
ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು
● ವಿವಿಧ ಗಾಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು.



ಮೇಷಾದಿ ದ್ವಾದಶ ರಾಶಿಯವರ ವರ್ಷ ಭವಿಷ್ಯ

೧. ಮೇಷ

ಈ ವರ್ಷದಲ್ಲಿ ಹೆಚ್ಚಿನಂಶ ದೈವವು ನಿಮಗನುಕೂಲವಿರುವುದರಿಂದ ಯಾವೊಂದೂ ತೊಡಕು ತೊಂದರೆಗಳಿಗೂ ನೀವು ಒಳಗಾಗಲಾರಿರಿ. ಫೆಬ್ರುವರಿ ಮಾರ್ಚ ತಿಂಗಳುಗಳಲ್ಲಿ ಜನತೆಯಿಂದ ಮಾನಾದರಗಳೂ ರಾಜಕೀಯದಲ್ಲಿ ವಿಜಯವೂ ಲಭಿಸುವದು. ಎಪ್ರಿಲ್ ಮೇ ತಿಂಗಳುಗಳಲ್ಲಿ ನಿಮ್ಮ ಇಷ್ಟಸಿದ್ಧಿಯಾಗದಿದ್ದರೂ ಅನಿಷ್ಟವೊದಗದು. ಮುಂದಿನ ಜೂನ್ ಮತ್ತು ಜುಲಾಯಿ ತಿಂಗಳುಗಳಲ್ಲಿ ನಿಮ್ಮ ಸಂಕಲ್ಪಗಳು ಈಡೇರುವವು. ಆರ್ಥಿಕ ಮಟ್ಟವು ಮುಂಚಿಗಿಂತ ಉತ್ತಮವಾಗಲಿದೆ. ಆ ಮೇಲಿನ ಮೂರು ತಿಂಗಳುಗಳಲ್ಲಿ ಸ್ತ್ರೀ ವಿರೋಧ ಗೃಹಕಲಹ ಪಿತ್ಥದೋಷಗಳು ಕಾಣಿಸುವವು. ಹಣದ ಬಿಕ್ಕಟ್ಟಿಗೆ ಸಿಲುಕುವಿರಿ. ನವಂಬರ ದಶಂಬರಗಳಲ್ಲಿ ಈ ದೋಷಗಳಿಂದ ಮುಕ್ತರಾಗಿ ನೆಮ್ಮದಿಯಿಂದ ಕಾಲ ಕಳೆಯುವಿರಿ. ಕೊನೆಯದಾದ ಜನವರಿಯಲ್ಲಿ ವಾಕ್ಕಲಹ ಸ್ಥಾನಚಲನೆಗಳುಂಟಾಗುವ ಸಂಭವವಿದೆ.

೨ ವೃಷಭ

ನಿಮಗೀ ವತ್ಸರದಲ್ಲಿ ಇಷ್ಟಸಿದ್ಧಿಗಿಂತ ಅನಿಷ್ಟಗಳೇ ಕಿಂಚಿದಧಿಕಗಳಾಗಿ ಕಾಣಿಸಲಿವೆ. ಮೊದಲ ಮೂರು ಮಾಸಗಳಲ್ಲಿ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲವು ಲಭಿಸುವದು. ದುಡಿಮೆಯ ಹೆಚ್ಚಿನಂಶವನ್ನು ಸದ್ವಿನಿಯೋಗ ಮಾಡುವಿರಿ. ಪ್ರಿಯಜನರ ವಿಯೋಗ ಕುಜನರ ಸಹವಾಸದಿಂದ ಧನಹಾನಿ ಜನಾಪವಾದಗಳಿಗೂ ಸಿಲುಕುವ ಯೋಗವಿದೆ. ಮುಂದಿನ ಮೇ ಜೂನ್ ಜುಲಾಯಿ ತಿಂಗಳುಗಳಲ್ಲಿ ಸಾಂಸಾರಿಕ ತಾಪತ್ರಯಗಳು ಹೆಚ್ಚುವವು. ಹಣದ ಅಡಚಣೆಯಿಂದ ಮಾನವುಳಿಸಿಕೊಳ್ಳುವದು ಕಷ್ಟವಾಗಲಿದೆ. ಕಫ ದೋಷದಿಂದ ಪೀಡಿತರಾಗುವಿರಿ. ಆಗೋಸ್ತು ತಿಂಗಳಲ್ಲಿ ನಿಮ್ಮಲ್ಲಿ ತಾಪತ್ರಯಗಳೂ ಮಾಯವಾಗುವವಲ್ಲದೆ ಜನಾನುರಾಗಕ್ಕೆ ಪಾತ್ರರಾಗುವಿರಿ. ಸಾಂಪತ್ತಿಕ ಪರಿಸ್ಥಿತಿಯೂ ಸುಧಾರಿಸಲಿದೆ. ಆ ಮೇಲಿನ ೫ ತಿಂಗಳುಗಳಲ್ಲೂ ಆಯಕ್ಕಿಂತ ದ್ವಿಗುಣ ವ್ಯಯವಾದೀತು. ಶತ್ರುಜನರ ಕಾಟ ಗೃಹಕಲಹಗಳಿಂದ ಸದಾ ಪೀಡಿತರಾಗುವಿರಿ.

೩. ಮಿಥುನ

ದುರ್ದೈವವೇ ನಿಮ್ಮನ್ನಿಂದು ಮೂರ್ತಿವತ್ತಾಗಿ ಬಂದು ಕಾಡುತಿರುವದೆಂದರೂ ಅತಿಶಯೋಕ್ತಿಯಾಗದು. ವರ್ಷಾರಂಭದ ೪ ತಿಂಗಳುಗಳಲ್ಲಿ ಸುಖದುಃಖ ಲಾಭನಷ್ಟಗಳು ಸಮವೆನಿಸುವವಾದರೂ ಜೂನ್ ಜುಲಾಯಿ ಆಗೋಸ್ತು ತಿಂಗಳುಗಳಲ್ಲಿ ಸ್ವಜನ ವಿರೋಧ ಗೃಹಕಲಹ ಶತ್ರುಪೀಡೆಗಳಿಗೆ ಗುರಿಯಾಗುವಿರಿ. ಅನಿರೀಕ್ಷಿತ ಪ್ರವಾಸ ತೀರ್ಥಕ್ಷೇತ್ರಾದಿಗಳ ಸಂದರ್ಶನ ಯೋಗವೂ ಇದೆ. ಹಣದ ಬಿಕ್ಕಟ್ಟು ಅಧಿಕವಾಗುವದು. ಸಪ್ಟಂಬರದಲ್ಲಿ ಸ್ವಲ್ಪ ಆರ್ಥಿಕ ಭಾಗದಲ್ಲಿ ಸುಧಾರಣೆಯಾದರೂ ಮುಂದಿನ ನಾಲ್ಕು ಮಾಸಗಳೂ ತುಂಬ ಪ್ರತಿಕೂಲಗಳಾಗಿವೆ. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಸ್ತ್ರೀಜನರ ವಿರೋಧ ಅಪವಾದಗಳಿಗೆ ಸಿಲುಕುವಿರಿ. ಶತ್ರುಗಳ ಕಪಟ ಜಾಲಕ್ಕೆ ಸಿಲುಕಿದ ನಿಮಗೆ ಹಣದ ಬಿಕ್ಕಟ್ಟು ದೇಹಾಲಸ್ಯ ಮನೋರೋಗಗಳು ಹೆಚ್ಚಲಿವೆ. ದಿನಗಳು ಅತೀವ ಕಷ್ಟದಾಯಕಗಳಾಗಿ ಪರಿಣಮಿಸಲಿವೆ.

೪. ಕರ್ಕಟ

ಈ ವರ್ಷವು ನಿಮ್ಮ ಭಾಗಕ್ಕೆ ಹೆಚ್ಚಿನಂಶ ಒಳ್ಳೆಯದಿಲ್ಲವು. ಭಾಗ್ಯಪನಾದ ಬೃಹಸ್ಪತಿಯು ಆರಂಭದ ಆರು ತಿಂಗಳುಗಳಲ್ಲಿ ಅನುಕೂಲನಾಗಿದ್ದರೂ ಕೊನೆಯ ೬ ತಿಂಗಳುಗಳಲ್ಲಿ ಮನೋರೋಗ ಧನಹಾನಿಗಳಿಗೆ ಕಾರಣನಾಗುವನು. ಅಷ್ಟಮಸ್ಥನಾದ ಶನೈಶ್ಚರನು ಸದಾ ನಿಮ್ಮನ್ನು ಸಿಂಕಲ್ಲಿ ನಿಲ್ಲಲು ಬಿಡಲಾರನು. ವರ್ಷಾರಂಭದ ಮೂರು ಮಾಸಗಳಲ್ಲಿ ಆಯಕ್ಕಿಂತ ದ್ವಿಗುಣ ವ್ಯಯವಾದೀತು. ರಾಜಕೀಯರಂಗದಲ್ಲಿ ಮುಖಭಂಗವಾಗಲಿದೆ. ಸದಾ ಮನೋರೋಗದಿಂದ ಪೀಡಿತರಾಗುವಿರಿ. ಮುಂದಿನ ಮೇ ಜೂನ್ ಜುಲಾಯಿ ತಿಂಗಳುಗಳು ನಿಮಗೆ ತುಂಬ ಅನುಕೂಲಗಳಾಗಿರುವವು. ಹೆಚ್ಚಿನ ನಿಮ್ಮ ಸಂಕಲ್ಪಗಳು ಈಡೇರುವವು. ಜನತೆಯ ಸಹಕಾರದಿಂದ ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಆರ್ಥಿಕ ಪರಿಸ್ಥಿತಿಯು ಸುಧಾರಿಸಲಿದೆ. ಆಗೋಸ್ತು ತಿಂಗಳಲ್ಲಿ ಪ್ರವಾಸ ಕುಜನರ ಸಹವಾಸದಿಂದ ನಷ್ಟವುಂಟಾದೀತು. ಮೇಲಿನೆರಡು ತಿಂಗಳಲ್ಲಿ ಗೃಹ ತಾಪತ್ರಯ ಶತ್ರುಗಳ ಕಾಟ ಹೆಚ್ಚಲಿವೆ. ನವಂಬರಾದಿ ೩ ತಿಂಗಳಲ್ಲಿ ಜನಾಪವಾದ ಸ್ವಜನ ವಿರೋಧ ಗೃಹಕಲಹ ಹಣದ ತಗಾದೆಯಿಂದ ಮರ್ಯಾದೆ ಕೂಡ ಉಳಿಯಲಾರದು.

೫. ಸಿಂಹ

ಈ ವರ್ಷದ ಗ್ರಹಸ್ಥಿತಿಯು ನಿಮ್ಮ ಭಾಗಕ್ಕೆ ಸ್ವಲ್ಪ ಅನಿಷ್ಟಾಧಿಕವಾಗಿಯೇ ಪರಿಣಮಿಸೀತು. ವರ್ಷಾರಂಭದ ೪ ತಿಂಗಳುಗಳಲ್ಲಿ ಶತ್ರುಜನರ ಕಾಟ ಪಿತ್ಥದೋಷದಿಂದ ದೇಹಾಲಸ್ಯ ಮಾತನಾಡಿದವರ ಕೂಡೆ ಕಲಹ ಇತ್ಯಾದ್ಯನಿಷ್ಟಗಳು ಕಂಡುಬರಲಿವೆ. ಜೂನಿನಲ್ಲಿ ಹಣದ ಅಡಚಣೆ ಕಡಿಮೆಯಾದೀತು. ಜುಲಾಯಿ ತಿಂಗಳಲ್ಲಿ ಪುನಃ ದೇಹಾಲಸ್ಯ ವಾಕ್ಕಲಹ ಹಣದ ಬಿಕ್ಕಟ್ಟು ಕಾಣಲಿದೆ. ಆಗೋಸ್ತು ಸಪ್ಟಂಬರ ಈ ಎರಡು ತಿಂಗಳುಗಳು ಈ ವರ್ಷದಲ್ಲೇ ಉತ್ತಮವಾಗಿವೆ. ನಿಮ್ಮ ಬಯಕೆಗಳು ನಿರಾತಂಕವಾಗಿ ನೆರವೇರುವವು. ಒಕ್ಟೋಬರ ನವಂಬರ ತಿಂಗಳುಗಳಲ್ಲಿ ಗೃಹತಾಪತ್ರಯಗಳಿಗೆ ಸಿಲುಕುವಿರಿ. ವಿರೋಧಿಗಳ ಕಾಟವನ್ನೂ ಎದುರಿಸಬೇಕಾಗಿ ಬರಲಿದೆ. ದಶಂಬರ ಜನವರಿಗಳಲ್ಲಿ ಹಿಡಿದ ಕಾರ್ಯಗಳು ಯಶಸ್ವಿಯಾಗುವವು. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾದರೂ ಹೆಂಡತಿ ಮಕ್ಕಳ ಕೂಡೆ ಕಲಹವಾಗುವದು. ರಾಜಕೀಯರಂಗದಲ್ಲಿ ಒಳ್ಳೆಯ ಭವಿಷ್ಯವಿದೆ.

೬. ಕನ್ಯಾ

ಸುದಿನಗಳು ಸನ್ನಿಹಿತವಾಗಿವೆ. ಕರ್ತವ್ಯದಕ್ಷರೂ ಉದ್ಯಮಶೀಲರೂ ಆದ ನಿಮಗೆ ಈ ವರ್ಷವು ಸುಖಮಯವಾಗಿ ಪರಿಣಮಿಸೀತು. ನಿಮ್ಮ ಪರಿಶ್ರಮವು ಎಳ್ಳಷ್ಟೂ ವಿಫಲವಾಗಲಾರದು. ವರ್ಷಾದಿಯ ೩ ತಿಂಗಳುಗಳಲ್ಲಿ ಆಯವ್ಯಯ ಸುಖದುಃಖಗಳು ಸಮನಾಗಿದ್ದರೂ ಮುಂದಿನ ಮೂರು ಮಾಸಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗುವವು. ಜನಮನ್ನಣೆಯಂ ಗಳಿಸಿದ ನಿಮ್ಮ ಸಾಂಪತ್ತಿಕ ಪರಿಸ್ಥಿತಿಯು ಉನ್ನತ ಮಟ್ಟಕ್ಕೆ ಏರಲಿದೆ. ನಿಶ್ಚಿಂತೆಯಿಂದ ಕಾಲ ಕಳೆವ ನಿಮಗೆ ಆಗೋಸ್ತು ಸಪ್ಟಂಬರಗಳಲ್ಲಿ ನಿಷ್ಕಾರಣ ಕಲಹ ದೇಹಾಲಸ್ಯಗಳು ತಲೆದೋರುವವು. ಮನೆಯಲ್ಲಿ ಅವ್ಯವಸ್ಥೆಯುಂಟಾಗಲಿದೆ. ಒಕ್ಟೋಬರ ತಿಂಗಳಲ್ಲಿ ಹಿಡಿದ ಕಾರ್ಯಗಳು ಪೂರ್ಣವಾಗುವವು. ಮನಸ್ಸಿಗೆ ನೆಮ್ಮದಿ ದೊರೆತೀತು. ನಂತರದ ಮೂರು ಮಾಸಗಳಲ್ಲಿ ದುಡಿಮೆಗೆ ತಕ್ಕುದಾದ ಖರ್ಚುಗಳು ಪ್ರಾಪ್ತವಾಗಲಿವೆ. ಹೆಂಡತಿ ಮಕ್ಕಳ ಆರೋಗ್ಯ ಕೆಡುವದು. ಆಪ್ತ ಬಂಧುಗಳ ವಿಯೋಗವುಂಟಾಗಲಿದೆ.

೭. ತುಲಾ

ಇಷ್ಟಾನಿಷ್ಟ ಫಲಗಳಿಂದು ನಿಮಗೆ ಸಮಪ್ರಮಾಣದಲ್ಲಿ ಪ್ರಾಪ್ತವಾಗಲಿವೆ. ವರ್ಷಾದಿಯ ೪ ತಿಂಗಳುಗಳಲ್ಲಿ ಗೃಹತಾಪತ್ರಯಗಳು ಹೆಚ್ಚಿದ್ದರೂ ಹಣದ ಕೊರತೆಯಿರದು. ವ್ಯಾಪಾರಿಗಳಿಗೆ ಆಕಸ್ಮಿಕ ನಷ್ಟವಾದೀತು. ಶತ್ರುಪೀಡೆಯಿಂದ ಮುಕ್ತರಾಗಿದ್ದರೂ ಮನಸ್ಸಿಗೆ ನೆಮ್ಮದಿಯಿರದು. ಮುಂದಿನ ಮೇ ಜೂನ್ ತಿಂಗಳುಗಳು ನಿಮ್ಮನ್ನು ತೀರ ಅಧಃಪತನಗೊಳಿಸಲಿವೆ. ಎಲ್ಲಾ ವಿಭಾಗಗಳಲ್ಲೂ ಅವನತಿಯುಂಟಾದೀತು. ಮುಂದಿನೆರಡು ತಿಂಗಳಲ್ಲಿ ಆರೋಗ್ಯವು ಉತ್ತಮವಿರದಿದ್ದರೂ ಆರ್ಥಿಕ ಭಾಗವು ಸುಧಾರಿಸಲಿದೆ. ಹಿಡಿದ ಕಾರ್ಯಗಳು ಪೂರ್ಣವಾಗುವವು. ಸಪ್ಟಂಬರ ಒಕ್ಟೋಬರ ತಿಂಗಳಲ್ಲಿ ಗೃಹತಾಪತ್ರಯ ಅಧಿಕ ವ್ಯಯಗಳುಂಟಾದಾವು. ಆ ಮೇಲಿನ ೩ ಮಾಸಗಳೂ ಚೆನ್ನಾಗಿರುವವು. ಗುರ್ವನುಗ್ರಹಕ್ಕೆ ಪಾತ್ರರಾದ ನಿಮಗೆ ಯಾವ ಭಾಗದಲ್ಲೂ ಕೊರತೆಯುಂಟಾಗದು. ಕುಜನರ ಮಾಯಾಜಾಲಕ್ಕೆ ಸಿಲುಕುವ ಸಂಭವವಿದೆ. ಜಾಗ್ರತರಾಗಿರಿ.

೮ ವೃಶ್ಚಿಕ

ಈ ವರ್ಷವು ನಿಮ್ಮ ಭಾಗಕ್ಕೆ ಅನಿಷ್ಟದಾಯಕವಾಗಿಲ್ಲವಾದರೂ ಗಾಳಿಗೆದುರಿಟ್ಟ ದೀಪದಂತೆ ಅತೀವ ಚಪಲಚಿತ್ತರಾದ ನೀವು ಯಾವ ಕಾರ್ಯವನ್ನೂ ಆರಂಭದಿಂದ ಕೊನೆತನಕ ಸಾಧಿಸಲಾರಿರಿ. ವರ್ಷಾರಂಭದ ೬ ತಿಂಗಳುಗಳಲ್ಲಿ ನಿಮಗೆ ಹೆಚ್ಚಿನ ಅಪವನಿಷ್ಟಗಳಿಗೆ ಎಡೆಯಿಲ್ಲವು. ಆಯವ್ಯಯಗಳು ಸಮತೂಕದಲ್ಲಿ ಮುಂದುವರಿಯುವವು. ಜನತೆಯ ಸಹಕಾರ ಸಂಪನ್ನರಾದ ನಿಮಗೆ ಹೆಚ್ಚಿನ ಕಡೆಗಳಲ್ಲಿ ಮಾನಮನ್ನಣೆಗಳು ಲಭಿಸಲಿವೆ. ಆರೋಗ್ಯವೂ ಕೂಡ ಉತ್ತಮವಾಗಿದ್ದೀತು. ಆಗೋಸ್ತು ಸಪ್ಟಂಬರ ಒಕ್ಟೋಬರ ನವಂಬರ ತಿಂಗಳುಗಳಲ್ಲಿ ಆಯಾಧಿಕವ್ಯಯ ಮನೋರೋಗ ಗೃಹತಾಪತ್ರಯಗಳು ಕಾಣಿಸಲಿವೆ. ಕಫ ಪಿತ್ಥದೋಷದಿಂದ ಆರೋಗ್ಯವು ಕೆಡುವುದು. ವಿನಾಕಾರಣ ವಾಕ್ಕಲಹ ಶತ್ರುಜನರ ಪೀಡೆಗಳ ಸಿಲುಕುವಿರಿ. ದಶಂಬರ ಜನವರಿಗಳಲ್ಲಿ ಆರ್ಥಿಕ ಪರಿಸ್ಥಿತಿಯು ಸ್ವಲ್ಪ ಸುಧಾರಿಸುವುದು. ಗೃಹತಾಪತ್ರಯಗಳು ಕೊಂಚ ಕಡಿಮೆಯಾಗಲಿವೆ. ಉಳಿದ ಭಾಗಗಳು ಎಂದಿನಂತೆಯೇ ಉಳಿವವು.

JAI BHARATH MILLS PRIVATE LIMITED
Regd. Office: UPENDRA BAUG,
UDIPI, S. K.
Phone: 22. Telegram: 'PROTECTION'.
Manufacturers:
PURE AND FRESH
COCONUT OIL, GINGELLY OIL
&
OILCAKES
Distributors for:
Delicious KELAGUR TEA.
Depots at:
(1) "Chittaranjan Buildings", UDIPI.
Phone: 11
(2) "Syndicate Bank Buildings,"
MANGALORE-1.
MANAGING AGENTS:
The General Investment &
Commercial Corporation Private
Limited
UDIPI.

ಶ್ರೀ ಪಿ. ಎನ್. ಹೆಬ್ಬಾರ (ಸಿರಿಪತಿ
ಅವರ
ನವೀನ ಕೃತಿ ಇದೀಗ ಹೊರಬಂದಿದೆ.
'ದಾರಿ ದೀಪ'
(ನೀತಿ ಕಥೆಗಳು)
(ಶ್ರೀ ಟಿ. ಎ. ಪೈಯವರ ಮುನ್ನುಡಿ)
ಬೆಲೆ: 1=50.
ನಿಮ್ಮ ಪ್ರತಿಗಾಗಿ ಉಡುಪಿಯ ಪುಸ್ತಕ ವ್ಯಾಪಾರಿಗಳಿಗೆ ಯಾ ನೇರವಾಗಿ ಕೆಳ ವಿಳಾಸಕ್ಕೆ ಬರೆಯಿರಿ.
ಪಿ. ಎನ್. ಹೆಬ್ಬಾರ, ವೀಣಾ ಪ್ರಕಾಶನ
ಹೆಬ್ಬಾರ್ಸ ಕಂಪೌಂಡು
ಕುಂಜಿಬೆಟ್ಟು, ಉಡುಪಿ, (ದ. ಕ.)

೯. ಧನು

ನಿಮ್ಮ ಭಾಗ್ಯ ರಾಶಿಯಿಂದು ಉದ್ಯೋಗಾಧಿಪ ವನ್ನೇರುವನು. ಆದ ಕಾರಣ ನೀವಿಂದು ಅಲ್ಪ ಸಿಗದಂತಹ ಕಾರ್ಯಕ್ಷೇತ್ರದಲ್ಲಿ ಮುಂದರಿಯುವಿರಿ. ನಿಮ್ಮ ಅಭೀಷ್ಟಗಳೆಲ್ಲವೂ ನಿರಪಾಯದಿಂದ ನೆರವೇರುವವು. ವರ್ಷಾರಂಭದ 3 ತಿಂಗಳುಗಳು ನಿಮಗೆ ಅತೀವ ಉತ್ತಮವಾಗಿವೆ. ಯಾವೊಂದು ವಿಭಾಗದಲ್ಲೂ ಕುಂದುಕೊರತೆಗಳುಂಟಾಗವು. ಸಂಸಾರ ರಥವು ಸುಗಮವಾಗಿ ಸಾಗುವದು. ಮೇ ಜೂನ್ ತಿಂಗಳುಗಳಲ್ಲಿ ಸ್ವಜನ ವಿರೋಧ ಸಾಂಸಾರಿಕ ತಾಪತ್ರಯ ಹಣದ ತೊಡಕು ಕಾಣಿಸಲಿವೆ. ಜುಲಾಯಿ ಅಗೋಸ್ತು ತಿಂಗಳುಗಳಲ್ಲಿ ಇಷ್ಟಾರ್ಥಸಿದ್ಧಿಗಳು ಕನಸಾಗುವವು. ಆ ನಂತರದ 2 ತಿಂಗಳುಗಳು ಅತ್ಯುತ್ತಮವಾಗಿವೆ. ನಿಮ್ಮ ಎಲ್ಲಾ ಬಯಕೆಗಳೂ ಅನಾಯಾಸದಿಂದ ಪೂರ್ಣವಾಗುವವು. ನಾಟಕ ರಂಗಗಳೆರಡರಲ್ಲೂ ಕೀರ್ತಿ ಲಾಭಗಳಂ ಪಡೆವಿರಿ. ನವಂಬರಾದಿಯಾಗಿ 3 ತಿಂಗಳುಗಳಲ್ಲಿ ಆರಕ್ಕೆ ಹೆಚ್ಚದು ಮೂರಕ್ಕೆ ಕುಂದದು ಎಂಬಂತೆ ದಿನಗಳು ಸಾಗಲಿವೆ.

೧೦. ಮಕರ

ನಿಮ್ಮ ಧನಸ್ಥಾನದಲ್ಲಿ ನೆಲೆನಿಂತ ಶನಿಯೂ ಪರಿ ಶನಿಯು ಕಾಟದಿಂದಾಗಿ ನೀವೀ ವರ್ಷದಲ್ಲಿ ಹೆಚ್ಚಿನ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬರಲಿದೆ. ದುಡಿಮೆಗೆ ತಕ್ಕ ಫಲವಿಲ್ಲವು. ವರ್ಷಾರಂಭದ 5 ತಿಂಗಳುಗಳಲ್ಲಿ ಆಯಕ್ಕಿಂತ ದ್ವಿಗುಣ ವ್ಯಯವಾಗುವದು. ವಿರೋಧಿಗಳ ಪ್ರತಿಕ್ರಿಯೆಯಿಂದಾಗಿ ನಷ್ಟಕಷ್ಟಗಳಿಗೀಡಾಗುವಿರಿ. ಜನತೆಯ ಬೆಂಬಲವಿದ್ದರೂ ರಾಜಕೀಯ ರಂಗದಲ್ಲಿ ಪರಾಜಿತರಾಗುವಿರಿ. ಮುಂದಿನ ಜುಲಾಯಿ ಅಗೋಸ್ತು ತಿಂಗಳುಗಳಲ್ಲಿ ನಿಮ್ಮ ಕೆಲವೊಂದು ಬಯಕೆಯು ಕೈಗೂಡಲಿವೆ. ರಣದ ತಗಾದೆ ಕೊಂಚ ಕಡಿಮೆಯಾಗುವದು. ಸಪ್ಟಂಬರದಲ್ಲಿ ಗೃಹತಾಪತ್ರಯಗಳು ತಲೆದೋರುವವು. ಮಿತಭಾಷಿಯಾಗಿದ್ದರೂ ಕಲಹವಾದೀತು. ಆ ನಂತರದ 4 ತಿಂಗಳುಗಳು ತಕ್ಕಮಟ್ಟಿಗೆ ಉತ್ತಮವಾಗಿರುವವು. ಪರಿಶ್ರಮವು ಸಾರ್ಥಕವಾದೀತು. ಆತ ಏನ ಹಣದ ತಗಾದೆ ಕಾಣದು. ಸಂಸಾರವು ನಿರಾಮಯವಾಗಿದ್ದರೂ ನಿಮ್ಮ ಸ್ವಂತ ಆರೋಗ್ಯವು ಚೆನ್ನಾಗಿರದು.

೧೧. ಕುಂಭ

ಈ ವರ್ಷದ ಗ್ರಹಸ್ಥಿತಿಯು ಹೆಚ್ಚಿನಂಶ ನಿಮಗೆ ಪ್ರತಿಕೂಲವಾಗಿರುವುದರಿಂದ ನೀವೀ ವರ್ಷವನ್ನು ಸ್ವಲ್ಪ ಕಷ್ಟದಿಂದಲೇ ಕಳೆಯಬೇಕಾಗುತ್ತದೆ. ಹಲವಾರು ತೆರನಾದ ತಾಪತ್ರಯಕ್ಕೆ ಸಿಲುಕಿದ್ದ ನೀವು ವರ್ಷಾದಿಯ 4 ತಿಂಗಳುಗಳಲ್ಲಿ ಕ್ರಮವಾಗಿ ಸುಧಾರಿಸುತ್ತ ಹೋಗುವಿರಾದರೂ ಜೂನ್ ಜುಲಾಯಿ ತಿಂಗಳಲ್ಲಿ ಪುನ್ಹ ಒಮ್ಮೆ ಅಧೋಗತವಾಗಲಿದೆ. ಸ್ವಜನ ವಿರೋಧ ಶತ್ರುಜನರ ಪ್ರತೀಕಾರ ಮನೆಯ ಜನರ ಅಪಚಾರಗಳಿಗೆ ಸಿಲುಕಿ ಬೆಂಡು ಬೆಂಡಾಗುವಿರಿ. ಮುಂದಿನ ಮೂರು ಮಾಸಗಳಲ್ಲಿ ಕೊಂಚ ಚೇತರಿಸಿಕೊಳ್ಳುವಿರಿ. ನವಂಬರ ಡಿಸಂಬರ ಜನವರಿ ತಿಂಗಳುಗಳಲ್ಲಿ ನಿಮ್ಮ ಸಕಲ ಬಯಕೆಗಳು ನೆರವೇರುವವು. ನಿಶ್ಚಿಂತೆಯಿಂದ ಕಾಲ ಕಳೆವಿರಿ. ಯಾವೊಂದು ತರದ ತಾಪತ್ರಯವೂ ನಿಮಗೆ ಬರಲೊಲ್ಲದು. ವರ್ಷಾಂತ್ಯವನ್ನು ಸುಖದಿಂದ ಕಳೆವಿರಿ.

೧೨. ಮೀನ

ನಿಮ್ಮ ಧನಭಾಗ್ಯಪಸಾದ ಅಂಗಾರಕನು ಹೆಚ್ಚಿನ ಕಾಲ ಅನಿಷ್ಟಸ್ಥಾನಗತನಿರುವುದರಿಂದಲೂ ಲಾಭಪತಿಯಾದ ಶನೈಶ್ಚರನು ಸದಾ ವ್ಯಯದಲ್ಲಿರುವುದರಿಂದಲೂ ಈ ವರ್ಷವು ನಿಮಗೆ ಬಹಳ ಕಷ್ಟದಾಯಿಯಾಗಿ ಪರಿಣಮಿಸಲಿದೆ. ಆರಂಭದ 3 ತಿಂಗಳುಗಳಲ್ಲಿ ಆಯಾದಕ್ಕೆ ವ್ಯಯ ದೇಹಾಲಸ್ಯದಿಂದ ಬಳಲುವಿರಿ. ಮೇ ತಿಂಗಳೊಂದು ಸುಖಮಯವಾಗಿ ಕಾಣಿಸಿದರೂ ನಂತರ ಕ್ರಮಕ್ರಮವಾಗಿ ನಷ್ಟಕಷ್ಟಗಳನ್ನೇ ನೀವಿಂದು ಎದುರಿಸಬೇಕಾಗಿ ಬರಲಿದೆ. ಗೃಹಕಲಹ ಶತ್ರುಪೀಡೆಯಿಂದ ತುಂಬ ಸಂಕಟಕ್ಕೀಡಾಗುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಸೋಲು. ರಾಜಕೀಯದಲ್ಲಿ ಪ್ರತಿಪಕ್ಷಗಳಿಂದ ಪರಾಜಯ. ಸ್ವಜನ ವಿರೋಧ ವಿಯೋಗಗಳಿಗೆ ಸಿಲುಕುವಿರಿ. ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ ತೊಳಲುತ್ತಿದ್ದ ನಿಮಗೆ ಕೊನೆಯದಾದ ಜನವರಿಯು ಸುಖಶಾಂತಿಯನ್ನೀಯಲಿದೆ.

ಜ್ಯೋತಿಷಿ ಶ್ರೀ ಪಿ. ಎಲ್. ಅಡಿಗ,
ಜ್ಯೋತಿಷ್ಯ ಶಿರೋಮಣಿ,
ಸಾಲಿಗ್ರಾಮ.

— — —

ಬಟ್ಟೆ ಮೈ ಮುಚ್ಚಿದರೆ ಸಾಲದು—
ಮನ ಮೆಚ್ಚಬೇಕು.
ಹೊಸ ಸಂಗ್ರಹ
ನಿರಖು ಬೆಲೆಯ ಖಾತ್ರಿ ಬಟ್ಟೆಯಿಂದ ನಯ ವಿನಯ
ಸೇವಾ ಸೌಲಭ್ಯದಿಂದ ಗ್ರಾಹಕರಿಗೆ ಸಂಪೂರ್ಣ ತೃಪ್ತಿ.
ಎಲ್ಲಿ?
'ಅಲಂಕಾರ'ದ ನೂತನ ವ್ಯವಸ್ಥೆಯಿಂದ ರೂಪುಗೊಂಡಿದೆ
ಅಲಂಕಾರ್ ಫ್ಯಾಶನ್ ಹೌಸ್
'ಅಲಂಕಾರ್' ಸಿನಿಮಾ ಬಳಿ,
ಉಡುಪಿ

'ಪ್ರಜಾರಾಜ್ಯ' ದಿನದ ಶುಭಾಶಯಗಳು
ಗೋವಾ ಸ್ಟೋರ್ಸ್ & ಬೇಕರಿ
ಕೆಥೋಲಿಕ್ ಸೆಂಟರ್,
ಉಡುಪಿ
Phone: 223

Telegrams: 'SUNTILE' Phone: 79
A. ALBUQUERQUE & SONS
(ESTD. 1868)
Post Box No. 4 MANGALORE-1.
Pioneers in Tile Manufacture
Use Always - - -
SUN BRAND
TILES
That have stood the Test of Time
APPROVED BY THE P. W. D.—
Mysore, Madras and Bombay.
Branch: Mazagoan, BOMBAY-10

ಪ್ರಜಾರಾಜ್ಯ ದಿನದ ಶುಭಾಶಯಗಳು.
ಶೆಣೈಯವರ
ಮಂಗಳೂರು ನಶ್ಯ
ಸುದೀರ್ಘವಾದ ಬಾಳಿಕೆಯು ಇದರ ಗುಣ.
ಸ್ವರ್ಣ ವರ್ಣಯುಕ್ತ ಹಾಗೂ
ಶಕ್ತಿದಾಯಕವಾದುದು.
Well-known for:
LONG STANDING QUALITY,
GOLDEN COLOUR & STRENGTH
SHENOY'S
Mangalore Snuff
Trade enquiries to Manufacturers:—
M/s. H. VENKATRAYA SHENOY,
HALEANGADY, S. KANARA.

TILES THAT DEFY ANY TEST

— ESTD: 1875 —

B. PINTO & COMPANY

MANGALORE ROOFING TILES
THE ONLY THAT REACHED AUSTRALIA
WITHOUT ANY BREAKAGES

A. B. Pinto & Sons, Oriental Tile Works, Battery Tile Works, Mangalore Tile Co., Pompei Tile Works, Standard Tile Co., J. H. Morgan & Son

MANGALORE

MANGALORE ADDRESS

B. PINTO & COMPANY
Post Box No. 118
MANGALORE – 1

Tele : Phone: 81
Grams. EXCELSIOR

BOMBAY ADDRESS:

B. PINTO
Tile Merchant
Mazagon, BOMBAY - 10.

Tele: Phone: 41924
Grams: SHIPBRAND

ಪ್ರಜಾರಾಜ್ಯ ದಿನದ ಶುಭಾಶಯಗಳು

ಕಾಫಿ ಹುಡಿ ಉದ್ಯಮದಲ್ಲಿ ಹಲವು ವರುಷಗಳ
ಅಪಾರ ಅನುಭವದಿಂದ ತಯಾರಿಸಲ್ಪಡುವ

ಪೈಸನ್ಸ್ ಕಾಫಿ

ದಿನೇ ದಿನೇ ಹೆಚ್ಚು ಹೆಚ್ಚು ಜನರ
ದಿನನಿತ್ಯದ ಪಾನೀಯವಾಗಿದೆ

ತಯಾರಕರು:

ಪೈಸನ್ಸ್ ಕಾಫಿ ಮ್ಯಾನುಫ್ಯಾಕ್ಚರಿಂಗ್ ಕೊ.,
(ರಿಜಿಸ್ಟರ್ಡ್)
ಪೊ. ಬಾ. ನಂ. 13, ಚಿಕ್ಕಮಗಳೂರು (ಮೈಸೂರು ರಾಜ್ಯ)

Paison's Coffee Manufacturing Co.,
Manufacturers & Merchants,
Post Box No. 13, CHIKMAGALUR.

USE OUR

CHELSEA TONE

Vitalising Food Baverage.

CHELSEA CHEMICALS

can always be depended upon for their Quality and constant Uniformity.

★

CHELSEA

CHEMICAL LABORATORIES

HADAPSAR INDUSTRIAL ESTATE,
POONA - 1.

NEED OF THE HOUR..........

Security and Safety,
Savings for family and country,
Self-sufficiency in food
Service to community –

We assure our best service
in fulfilling the above

SOUTH CANARA CENTRAL COOPERATIVE BANK LTD.,

Kodiyalbail, MANGALORE-3.
(Mysore State)

Resources exceed
Rupees One and a half crores.

Established · 1914

Phone: 469 Grams CENCOBANK

B. Prabhakara Rao, M. A. B. L., President.
B. Narayana Nayak, Vice-President.

For **SWEETS AND SAVOURIES**
of every kind

Visit Komala Sweets Stall

Gram. **WESTRADE** Phone **707**
E A PAIS BUILDING, HAMPANKATTA
MANGALORE-1.

() WHEAT ALMOND HALVA
() BANANA HALVA
() TRAVELLING LADDUS
() BANANA WAFERS
() SPICED GREEN PEAS

AND AN ARRAY OF A VERY LARGE VARIETY FOR YOUR SELECTION

The Famous KWALITY'S
SUPER SMOOTH ICECREAM

Now available at.-

Komal's Cream Parlour

Opp. Town Hall, MANGALORE

With the Season's Greetings

To all our Patrons & Well-wishers

From --



K. VASUDEVA KINI
Proprietor

SHARADA INDUSTRIES

RICE, OIL, FLOUR & SAW MILLS
KATAPADI, S. KANARA.

Phone. 132.

ಪ್ರಜಾರಾಜ್ಯ ದಿನದ ಶುಭಾಶಯುಗಳು

•

ಶ್ರೀ ಮಂಜುನಾಥಾ ಹಾಲ್

ಜವುಳಿ ವ್ಯಾಪಾರಿಗಳು

ಕೊಪ್ಪ

(ಚಿಕ್ಕಮಗಳೂರು ಜಿಲ್ಲೆ)

ನಿಮ್ಮ ಆಯ್ಕೆಯ ಆಧುನಿಕ ಜವುಳಿ ಮಳಿಗೆ!

ಮದುವೆ, ಮುಂಜಿ, ಹಬ್ಬ ಮೊದಲಾದ ಶುಭ ಸಮಾರಂಭಗಳಿಗೂ
ದಿನನಿತ್ಯದ ಉಡುಗೆ ತೊಡಿಗೆಗಳಿಗೂ ಅಗತ್ಯವಿರುವ ವಿಧವಿಧದ
ನವನವೀನ ಸೀರೆಗಳು, ಮಿಲ್ಲಿನ ಮತ್ತು ಕೈ ಮಗ್ಗದ
ಖಾತ್ರಿ ಸೀರೆಗಳು, ಕೋಟಿಂಗ್, ಶರ್ಟಿಂಗ್
ಮೊದಲಾದ ಯಾವತ್ತೂ ಬಟ್ಟೆಗಳು ಹೊಸ
ಫೇಶನ್ನಿನಲ್ಲಿ ಯಾವಾಗಲೂ
ದೊರೆಯುತ್ತವೆ

ಪ್ರಾಮಾಣಿಕ ವ್ಯವಹಾರ
ವೈವಿಧ್ಯತೆಯು ನಮ್ಮ ವೈಶಿಷ್ಟ್ಯ

ವೈ. ವಾಸು ಶೆಟ್ಟಿ
ಪ್ರೊಪ್ರೈಟರ್

With best Compliments

from

Dhirajlal Vithalji

Banker

Mangalore

MODERN GARAGE

UDIPI

With

Service Station attached

Undertakes OVERHAULING & MAINTENANCE OF **BENZ VEHICLES**

By

Technically Qualified Benz Expert.

Phone } 65 / 234   Residence: 186



ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾ ಸೇವೆಯಲ್ಲಿ ತೊಡಗಿರುವ

ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್.)

Telegrams: "FOOD"   Telephone: 12

The South Kanara Central Co-operative Wholesale Stores Ltd.,

POST BOX NO. 124,

"SAHAKARI MAHAL", MANGALORE-1.

— *DEALERS IN* —

RICE, WHEAT & WHEAT PRODUCTS,
MILL CLOTH, HANDLOOM CLOTH,
GRAINS & PROVISIONS ETC.,
OIL AND OIL CAKES, CATTLE FEED, MANURES AND INSECTICIDES, CONSUMERS GOODS, KEROSINE, IRON & STEEL ETC.

Wholesale Cloth Depot at

MARUTHI VITHIKA, UDIPI.

Telepohne—172

We ensure supply of quality goods at reasonable price.

Sri K. B. Jinaraja Hegde, B. Sc. LL. B. *Vice-President*

Sri S. Narsapaya, B A., B L., M. L. C., *President.*

With Best Compliments from

B. Mithradas Hegde

The Satyanarayana Tile Works Ltd.,

MANUFACTURERS OF
T. N. HEGDE TILES
KUDROLI
MANGALORE-3.

Phone No. 400

ALWAYS GO FOR THE BEST

For
Quality, Durability & Perfeciton

B. M. TILES

&

MONAPPA'S
TAJ DOUBLE BAVTA TILES

Stand First

Telegrams: "TAJVALLA" Phone: Works: 134 & 700, Residence: 445.

★

INDIAN NATIONAL TILE WORKS

Branch: MAROLI, KULSHEKAR, — MANGALORE-5. H. O.: HOIGE BAZAAR, MANGALORE-1.

Proprietor: **B MONAPPA.**

Sri Shankarnarayana Construction CO.

CARGAL

ENGINEERS
and
P. W. D.
CONTRACTORS

H. O. COONDAPOOR, S. K.

SRI
SHAKTHI TILE WORKS
KAVRADY.

Manufacturers of:

SUN FLOWER BRAND

ROOFING TILES AND RIDGES

THE SHANKARNARAYANA CONSTRUCTION CO.
CARGAL.
H. O. COONDAPOOR, S. K.

THE GENERAL ENGINEERING CO.

Dealers in: Machinery & Engines,

Post Office Road UDIPI

Sri Manjunatha Motor Service

UDIPI, S. K.

Prefer our buses for comfortable travels.

★

SPECIAL SERVICES AT YOUR CALL.

PHONE: **82.**

ಪ್ರಜಾರಾಜ್ಯ ದಿನದ ಶುಭಾಶಯಗಳು!

ರೋಯಲ್ ಮಹಾಲ್

ಉಡುಪಿ

ಮೇಲ್ತರಗತಿಯ

ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್,
ಮ್ಯಾನೇಜರು

ROYAL MAHAL

Up-to date Boarding & Lodging

UDIPI, S. K.

ಅತ್ಯಾಧುನಿಕ 'ಬುಷ್' ಇಲೆಕ್ಟ್ರಿಕ್ ಮತ್ತು ಬ್ಯಾಟರಿಯಿಂದ ನಡೆಸುವ ಹಾಗೂ ನವೀನ ಟ್ರಾನ್ಸಿಸ್ಟರ್ ರೇಡಿಯೋ ಮತ್ತು ಬಿಡಿ ಭಾಗಗಳಿಗೆ ಅಲ್ಲದೆ ಫೇನ್, ಇಸ್ತ್ರಿ, ಟೋಸ್ಟರ್, 'ಟೀ' ಕೆಟ್ಲ್ ಇತ್ಯಾದಿ ಅನೇಕ ವಸ್ತುಗಳಿಗಾಗಿ ಸಂದರ್ಶಿಸಿರಿ.

ಹೆಗ್ಡೆ ರೇಡಿಯೋ ಹೌಸ್

"ಬುಷ್" ಅಧಿಕೃತ ಮಾರಾಟಗಾರರು

ಉಡುಪಿ

ವಿ. ಸೂ: ಎಲ್ಲಾ ತರದ ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳನ್ನು ತಜ್ಞ ರೀತಿಯಿಂದ ರಿಪೇರಿಮಾಡಿ ಕೊಡಲಾಗುತ್ತದೆ.

ಪ್ರೊ: ಯಂ. ತಾರನಾಥ ಹೆಗ್ಡೆ

Grams: "SHARADMART"

Phone: Office 353, Res. 793

ESTD: 1918.

SHRI SHARADA JEWELLERY MART

Ganapathi High School Road, MANGALORE-1.

BRANCH.

107, SUBEDAR CHATRAM ROAD,
Bangalore-9
Phone: 72076.

ನಿಮ್ಮ ಮನೆಯ ನಿತ್ಯದ ಉಪಯೋಗಕ್ಕೆ—
ವಿಶೇಷ ಸಮಾರಂಭಗಳಿಗೆ ಅತ್ಯಗತ್ಯವುಳ್ಳ

ಎಲ್ಲ ಪಾತ್ರೆಗಳಿಗೆ—

ಬೆಳ್ಳಿ, ತಾಮ್ರ, ಕಂಚು, ಸ್ಟೈನ್‌ಲೆಸ್ ಸ್ಟೀಲ್
ಎಲ್ಲ ಪಾತ್ರೆಗಳಿಗೆ— ನಮ್ಮಲ್ಲಿಗೆ ಬನ್ನಿ.

ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಿಗಳು

ರಥಬೀದಿ - - - ಉಡುಪಿ

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧.

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

CHAMPION

FOUNTAIN PENS
BALL POINT PENS
NIBS AND PARTS

REACH ALL OVER THE GLOBE
HOT FAVOURITE OF MILLIONS

DEPENDABLE
EXTRA ORDINARY
UNUSUAL
UNBEATABLE

FOR TRADE TERMS AND PARTICULARS CONTACT
EXCLUSIVE EXPORT AGENTS:

VADILAL R. SHAH

6, LOHAR CHAWL
BOMBAY-2

TELEPHONE: **20956** TELEGRAM: **CONNECTION**

ಚ್ಯಾಂಪಿಯನ್

ಫೌಂಟನ್ ಪೆನ್ನುಗಳು
ಬೋಲ್ ಪ್ಯೊಂಟ್ ಪೆನ್ನುಗಳು
ನಿಬ್ ಮತ್ತು ಬಿಡಿ ಭಾಗಗಳು

ಅಖಿಲ ಭೂಖಂಡಕ್ಕೆ ತಲಪುತ್ತವೆ
ಮಿಲಿಯಾಂತರ ಜನರ ಮೆಚ್ಚುಗೆಗೆ ಪಾತ್ರವಾಗಿವೆ

ನಂಬಿಕೆಯುದು
ವಿಶಿಷ್ಟತೆಯುದು
ಅಸಾಮಾನ್ಯವಾದುದು
ಅಜೇಯವಾದುದು

ವ್ಯಾಪಾರಿ ನಿಯಮಗಳಿಗೂ ವಿವರಗಳಿಗೂ
ಏಕಮಾತ್ರ ರಪ್ತು ಏಜಂಟರ ಸಂಪರ್ಕ ಬೆಳೆಸಿರಿ:

ವಾಡಿಲಾಲ್ ಆರ್. ಷಾಹ

6, ಲೋಹರ್ ಚೌಲ್
ಬೊಂಬಾಯಿ - 2

ಟೆಲಿಫೋನ್: 20956 ಟೆಲಿಗ್ರಾಂ: 'ಕನೆಕ್ಷನ್'

REGD. No. B. G. 176
LICENCE No. 31
Licensed to Post without Prepayment



....ಅವನ ಭವಿಷ್ಯದ ಕಡೆ ದೃಷ್ಟಿಯಿಡಿ

ಉಜ್ವಲ ಭವಿಷ್ಯದ ಬಗ್ಗೆ ಒಬ್ಬ ಹುಡುಗನ ಕಲ್ಪನೆಯು ಉಳಿತಾಯದ ಬಗ್ಗೆ ನಿಮ್ಮ ಮನೋಭಾವವನ್ನವಲಂಬಿಸಿದೆ. ಸಿಂಡಿಕೇಟ್ ಬ್ಯಾಂಕ್ ನಿರ್ದೇಶಿಸುವಂತೆ ಉಳಿತಾಯಕ್ಕೆ ಮಾರ್ಗವಿದೆ. ಸಕಾಲದಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯವನ್ನಿಡಲು ಆರಂಭಿಸಿ ಮತ್ತು ನಿಮ್ಮ ಮಗನ ವಿದ್ಯಾಭ್ಯಾಸಕ್ಕೆ ಸಹಾಯವೆಸಗಿ ಅವನು ಖ್ಯಾತನಾಗುವಂತೆ ಮಾಡಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು:
200ಕ್ಕೂ ಮಿಕ್ಕಿ.

ಚಲಾವಣಾ ನಿಧಿ
60 ಕೋಟಿಗೂ ಮಿಕ್ಕಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಫೆಬ್ರವರಿ, ೪, ೬೫ [ಸಂಚಿಕೆ ೨೩



Phone No.
ಫೋನ್ ಸಂಖ್ಯೆ: 226

NAVAYUGA

leading nationalist weekly

೨೦
ಪೈಸೆ

ಗೋರಿಯ ಮೇಲಣ ಹುಚ್ಚ

ಕತೆಗಾರರು
ಡಾ। ಕೆ. ಎಂ. ಬಲ್ಲಾಳ್, ಕುಂಜಾರ್‌ಗಿರಿ.

ಅಬ್ಬಾಸನಿಗಾಗಿ ದೇಹ ಸವೆಸುತಿದ್ದ ಕಾಸೀಮ್ ಬೆವರಿನ ಹಣ ಸುರಿಸಿದ. ದೇವರು ಪ್ರಸನ್ನನಾದನೆಂದೋ ಏನೋ ಅಬ್ಬಾಸ್ ಬದುಕಿದು ಕೊಟ್ಟ ದೇವರೇ ಕಿತ್ತುಕೊಂಡಾಗ ಕಾಸೀಮ್ ಹುಚ್ಚನಾಗದೆ ಮುಕ್ತನಾದಾನು?

ಹೊರ ಜಗಲಿಯಲ್ಲಿ ಅಬ್ಬಾಸ್ ದೀರ್ಘ ನಿದ್ರಾಪರವಶನಾಗಿದ್ದ; ಎಚ್ಚರವಾಗದ ನಿದ್ರೆಯಲ್ಲಿದ್ದ ಆತಗೆ ಪ್ರಪಂಚದ ಕಷ್ಟನಿಷ್ಠುರಗಳಿಲ್ಲ; ಮುಖದಲ್ಲಿ ದಿವ್ಯ ಕಳೆ ವಿರಾಜಿಸುತಿತ್ತು; ತುಟಿಯಂಚಿನಲ್ಲಿ ಎಂಜಲಿನ ನೊರೆ ಬುರುಗು ಕಟ್ಟಿತ್ತು; ಉನ್ಮೀಲಿತ ನೇತ್ರದಲ್ಲಿ ಉತ್ಕ್ರಮಣಾವಸ್ಥೆಯಲ್ಲಿನ ಉಗ್ರಯಾತನೆ; ವೇದನೆ ಸ್ಫುಟವಾಗಿ ಗೋಚರಿಸುತಿತ್ತು—ನೋಟಕರ ಕರುಳು ಕತ್ತರಿಸುವಂತೆ. ಹಸುಳೆಯ ಶವವು ಹೃದಯ ವಿದ್ರಾವಕ ದೃಶ್ಯವಾಗಿತ್ತು: —

ಶೋಕಭರಿತವಾದ ಲೋಕದಿಂದ ಪಾರಾಗಿ ಅಬ್ಬಾಸ್ ನಾಕವನ್ನು ಸೇರಿದ್ದ. ಹತ್ತರ ಹರಯದ ಬಾಲಕ ಅಮಾನುಷ ಜಗಕ್ಕೆ ಸಾಗಿದ್ದ—ಇನ್ನೆಂದೂ ಹಿಂದೆ ಬಾರದಂತೆ. ಅಬ್ಬಾಸ್‌ನ ಗುಣ; ಮುತ್ಸದ್ದಿತನಕ್ಕೆ ಊರೇ ಪ್ರಶಂಸೆಗೈಯುತಿತ್ತು; ಕುರಿಯ ಮರಿಯಂತೇ ಸಭಾ ಸರಳ ಸಾತ್ವಿಕನಾದ ಅಬ್ಬಾಸ್‌ನ ಅನಿರೀಕ್ಷಿತ ಅವಸಾನ ಎಲ್ಲರಿಗೂ ದುಃಖದಾಯಕವಾಗಿತ್ತು; 'ಚಿನ್ನದಂತಾ ಹುಡುಗ' ಪ್ರತಿಯೊಬ್ಬರೂ ಹೊಗಳುತ್ತಿದ್ದರು ಅವನನ್ನು—

ಪರೀಕ್ಷೆಯ ಹಾಲಿನಲ್ಲಿ ತನ್ನ ಜತೆಗಾರ ವಿದ್ಯಾರ್ಥಿಗಳೊಂದಿಗೆ ಪ್ರಶ್ನಾವಳಿಗೆ ಉತ್ತರ ಬರೆಯುತ್ತಿದ್ದ ಆತ ಒಮ್ಮಿಂದೊಮ್ಮೆಲೇ ಆರ್ತನಾಗಿ ಆಕ್ರಂದನ ಗೈದ. ಓರಗೆಯ ವಿದ್ಯಾರ್ಥಿಗಳೂ ಅಧ್ಯಾಪಕರೂ ಅಚ್ಚರಿ, ಗಾಬರಿಯಿಂದ ಅಬ್ಬಾಸ್‌ನ ಬಳಿ ಬಂದು ಗುಂಪುಗೂಡಿದರು. ಅಬ್ಬಾಸ್‌ನ ಕೈಯಲ್ಲಿದ್ದ ಲೇಖನಿ ಸಿಡಿದು ದೂರ ಬಿದ್ದಿತ್ತು. ಕಣ್ಣು ಅರೆ ಮುಚ್ಚಿತ್ತು; ಶಿರ ಹಿಂದೆವಾಲಿತ್ತು; ಬಾಯಲ್ಲಿ ಬುರುಗು ಕಾರುತಿತ್ತು; ಶಾಲಾ ಜವಾನ್ ಗೋಪಾಲ ನೀರು ತಂದು ಮುಖಕ್ಕೆರಚಿದ; ಕುಳುಹೊತ್ತಿನ ತರುವಾಯ ಅಬ್ಬಾಸ್ ಕಣ್ದೆರೆದ; ವಿದೀರ್ಣ ಧ್ವನಿಯಲ್ಲಿ ಒರಲಿದ. "ಏನಾಗ್ತದಪ್ಪಾ?......ಕನ್ನಡ ಪಂಡಿತರ ದಯೆಯೇ ದನಿಯಲ್ಲಿ ಆವಿರ್ಭವಿಸಿತ್ತು. "ಅಮ್ಮಾ......."—ನೋವಿನಿಂದ, ಬಾಣತಾಗಿದ ಹಕ್ಕಿಯಂತೇ ನರಳಿದ ಅಬ್ಬಾಸ್; ಕನ್ನಡ ಪಂಡಿತರು ಅಬ್ಬಾಸ್‌ನ ಮೇಲೆ ಅಸೀಮ ಪ್ರೇಮವನ್ನಿಟ್ಟಿದ್ದರು—ಅವನ ಉತ್ತಮ ನಡತೆಗೆ; ಒಳ್ಳೇ ಕಲಿಯುವಿಕೆಗೆ.

ಆತನ ಸೋದರಮಾವ ಬಾಪು ದಿನವಿಡೀ ಬೆವರಿಳಿಸಿ, ಸಂಪಾದಿಸಿ, ಅಬ್ಬಾಸನನ್ನು ತಮ್ಮನಂತೆ ಪೋಷಿಸುತ್ತಿದ್ದ: ಅಬ್ಬಾಸನೆಂದರೆ ಬಾಪುವಿಗೆ ಜೀವ; ಅಬ್ಬಾಸನನ್ನು ಒಂದು ದಿನವಾದ್ರೂ ಬಾಪು ಬೈಯ್ಯುತ್ತಿರಲಿಲ್ಲ; ಒಂದೇ ರಕ್ತದಲ್ಲಿ ಬೆಳೆದ ಅಣ್ಣತಮ್ಮಂದಿರಂತೆ ಬಾಪು—ಅಬ್ಬಾಸ್ ಅನ್ಯೋನ್ಯವಾಗಿದ್ದರು; ತಾಯಿಯ ಹೊಟ್ಟೆಯಿಂದ ಹೊರ ಜಗತ್ತಿಗೆ ಬಂದಾಗಲೇ ಅಬ್ಬಾಸನನ್ನು ಅಂಟಿಕೊಂಡಿತ್ತು ಬಾಲಗ್ರಹ ರೋಗ; ಮುಂಬಯ್ಯ ನಗರದ ಹೋಟೇಲೊಂದರಲ್ಲಿ ಕೆಲಸ ಮಾಡುತ್ತಿದ್ದ ಕಾಸೀಮ್—ಅಬ್ಬಾಸನ ತಂದೆ, ಮಗನಿಗಾಗಿ ಹಣ ಖರ್ಚು ಮಾಡಿದ; ಹಣ ಹಳ್ಳದ ನೀರಿನಂತೇ ಹರಿಯಿತೇ ವಿನಾ ವ್ಯಾಧಿ ಗುಣಮುಖವಾಗಲಿಲ್ಲ.

ಅದೇ ಹೊತ್ತಿಗೆ ನೆರೆ ಹಳ್ಳಿಯ ಡಾಕ್ಟರ್ ವೆಂಕಟ ಕೃಷ್ಣಯ್ಯನವರು ಅಬ್ಬಾಸನ ತಂದೆಗೆ ದೃಗ್ಗೋಚರರಾದರು; ಡಾಕ್ಟರ ನಾಲ್ಕು ತಿಂಗಳ ಸತತ ಪರಿಶ್ರಮದಿಂದ ಅಬ್ಬಾಸ್ ಬಾಲಗ್ರಹದಿಂದ ಬಿಡುಗಡೆ ಹೊಂದಿದ. ಕಾಸೀಮ್‌ಗೆ ಸಂತೋಷದಿಂದ ಹೃದಯ ತುಂಬಿ ಬಂದಿತ್ತು. ವಂಶೋದ್ಧಾರಕನಾದ ಅಬ್ಬಾಸ್ ದುರದೃಷ್ಟದಿಂದ ಏಕಮಾತ್ರ ಪುತ್ರನಾಗಿ ಹುಟ್ಟಿದ್ದ; ಕಾಸೀಮ್ ಡಾಕ್ಟರನ್ನು ಮನಸಾರೆ ಹೊಗಳಿದ; ಕೃತಜ್ಞತೆಯ ಕಣ್ಣೀರು ಡಾಕ್ಟರ ಹೃದಯಕ್ಕೆ ಆಪ್ಯಾಯನವಾಗಿತ್ತು;

ಆದರೆ, ಆರು ವರುಷಗಳ ಬಳಿಕ ಅದೇ ವ್ಯಾಧಿ ಮರುಕಳಿಸಿತು; ಅಬ್ಬಾಸ್‌ನ ಆ ಸಾವದ ಮಸ್ತಕದ ಗುಟ್ಟು ಕಂಪಿಸ ತೊಡಗಿತು. ಶಾಲೆಯ ಪ್ರಮುಖ ಬಂಧು ಬಲವೇ ಉಡುಗಿ ಹೋಯಿತು; ಹುಡುಗರ ಕೈ ಕಾಲು ನಡುಗಿ ಹೋಯಿತು; ಹೆಡ್ ಮಾಸ್ಟ್ರು ನಾಲ್ಕು ವಿದ್ಯಾರ್ಥಿಗಳ ನೆರವಿನಿಂದ ಅಬ್ಬಾಸ್‌ನನ್ನು ಮನೆಗೆ ಸಾಗಿಸಿದರು; ಶಕೀನಾಬಿಯ— ಅಬ್ಬಾಸ್‌ನ ತಾಯಿಯ ಹೃದಯ ಬಿರಿದು ಹೋಯಿತು— ಮಗನ ರುಗ್ಣ ಬಾಳನ್ನು ಕಂಡು; ಆತನ ಮ್ಲಾನ ವದನ; ನಿಸ್ತೇಜನಯನ— ಅವಳ ಅಲ್ಪ ಧೈರ್ಯವನ್ನೂ ನೀರಾಗಿಸಿತು:

ಬಾಪು ಸುದ್ದಿ ಕೇಳಿ ಓಡೋಡಿ ಬಂದ;— ಹೃದಯವನ್ನು ಕೈಯಲ್ಲಿ ಹಿಡಿದು ಕೊಂಡೇ: ಅಬ್ಬಾಸ್‌ನ ಅವಸ್ಥೆ ಕಂಡು ಬಾಪು ತಲ್ಲಣಿಸಿ ಹೋದ; ಶರ ವೇಗದಲ್ಲಿ ಡಾಕ್ಟರನ್ನು ಕರೆತರಲು ಓಡಿದ; ಡಾಕ್ಟರ್ ವೆಂಕಟಕೃಷ್ಣ ಅದೇ ತಾನೇ ಮನೆಯಿಂದ ಬಂದಿದ್ದರು; ಏದುತ್ತಾ ಬಂದ ಬಾಪುವಿನ ಸ್ಥಿತಿನೋಡಿ ಡಾಕ್ಟರು ಶೀಘ್ರಗತಿಯಲ್ಲಿ ಹೊರಟು ಬಂದರು; ಒಳಗೆ— ಕೋಣೆಯಲ್ಲಿ ಅಬ್ಬಾಸ್‌ನ ಚೀರಾಟ ಕೇಳುತ್ತಲೇ ಇತ್ತು; ಜತೆಯಲ್ಲಿ ಶಕೀನಾಭಿಯ ದುಃಖ ಧ್ವನಿ ಮಾರುದೂರಕ್ಕೆ ಕೇಳಿಸುತ್ತಿತ್ತು; "ಮೇರಾ ಬೇಟಾsss....ಅಬ್ಬಾಸ್....ಅಲ್ಲಾsss..."

ಡಾಕ್ಟರು ಬಂದು ಪರೀಕ್ಷಿಸತೊಡಗಿದರು; ಸ್ಟೆತೋಸ್ಕೋಪಿನಿಂದ ಹೃದಯ ಬಡಿತ ನೋಡುತ್ತಾ ನೋಡುತ್ತಾ ಡಾಕ್ಟರ ಮುಖ ಕಂದಿ ಕಪ್ಪಗಾಯಿತ; ನೀಲವಾದ ನಿಟ್ಟುಸಿರು ಸೂಸಿ ಹೊರಬಂದು ಹೊರಡಲುದ್ಯುಕ್ತರಾದ ಅವರು "ಪ್ರಯತ್ನ ನಿಷ್ಫಲ ಬಾಪೂ..."—ಡಾಕ್ಟರು ಕ್ಷೀಣ ಧ್ವನಿಯಲ್ಲಿ ಉಸುರಿದುದನ್ನು ಕೇಳಿ ಬಾಪುವಿನ ನೆಲದಡಿಯೇ ಕುಸಿದಂತಾಯ್ತು: "ಡಾಕ್ಟರ್s...." ಮುಂದವನಿಗೆ ಮಾತು ಹೊರಡದಾಯ್ತು; ಧ್ವನಿಗಟ್ಟಿ ಕಂಬನಿ ಕಾಣಿಸಿತು. ಮುಂಬಯ್ಯಿಯಲ್ಲಿ ಮಗನಿಗಾ ದೇಹ ತೇದುತ್ತಿದ್ದ ಕಾಸೀಮನಿಗೆ ತಾರು ಬಿಡಲು ಬಾಪು ಯೋಚಿಸಿದ. ತಂದೆ ಮಕ್ಕಳ ಎಣೆಯಿಲ್ಲದ, ಎಲ್ಲೆಯಿಲ್ಲದ ಅವ್ಯಾಹತವಾದ ಅವ್ಯಾಜ ಪ್ರೇಮ ನೆನೆಸಿದಂತೇ ಕಣ್ಣೀರು ಧಾರೆ ಧಾರೆಯಾಗಿ ಹರಿಯಿತು—

ಶಕೀನಾಬಿಯ ಅಳು ಅಬಾಧಿತವಾಗಿ ಸಾಗಿತ್ತು ಒಳಗೆ. ತಾರು ಕೊಟ್ಟು ಮಿಂಚಿನಾವೇಗದಲ್ಲಿ ಬಾಪು ಮನೆಗಭಿಮುಖನಾದ— ಕಿಂಕರ್ತವ್ಯತಾ ವಿಮೂಢನಾದ ಭ್ರಮಿತನಂತೆ...

ಮನೆಯ ಮುಂದೆ ಮಂದಿ ಸೇರಿತ್ತು; ಒಳಗೆ ಶಕಿನಾಭಿಯ ಅಳು ಹೃದಯ ವಿದ್ರಾವಕವಾಗಿತ್ತು; ಸೇರಿದ್ದ ಜನದ ನೋಟ ಹೊಗೆ ತಾಕಿದ ಕನ್ನಡಿಯಂತಾಗಿತ್ತು; ಬಾಪು ಒಂದೇ ಹಾರಿಕೆಗೆ ಒಳಗೆ ಓಡಿದ. "ಅಬ್ಬಾಸ್s....ಗಯಾsss...ಮೇರಾ...ಬೇಟಾs" ಕರುಳು ಕಿತ್ತು ಈಡಾಡುವಂತೇ ಶಕಿನಾಭಿ ತಲೆ ಬಿರಿಹುಯ್ದು, ನೆಲದಲ್ಲಿ ಬಿದ್ದು ಹೊರಳಾಡಿ ಕ್ರಂದಿಸುತ್ತಿದ್ದಳು. ಅಬ್ಬಾಸ್ ಮಲಗಿದ್ದ; ಸುಖ ನಿದ್ರೆಯಲ್ಲಿದ್ದ ಹಸುಳೆಯ ಮುಖದಂತೆ ಪ್ರಶಾಂತವಾಗಿತ್ತು ಆ ಮುದ್ದು ಮುಖ. ಊದುಬತ್ತಿಯ ಪರಿಮಳ; ರೋದನ ಧ್ವನಿ ಕರುಣಾಜನಕವಾಗಿದ್ದುವು.

ಜನ ಸೇರಿತು; ಅಂತಿಮ ಯಾತ್ರೆಗಾಗಿ ಸನ್ನಾಹ ನಡೆಸಲಣಿಯಾದರು. ಮಸೀದಿಯಿಂದ ಬಂದ ಪೆಟ್ಟಿಗೆಯೊಳಗೆ ಕಳೇವರವನ್ನು ಇರಿಸಿದರು; ಕೆಂಪು ಬಟ್ಟೆಯಿಂದಾಚ್ಛಾದಿತವಾದ ಪೆಟ್ಟಿಗೆಯ ಮೇಲ್ಗಡೆ ಪುಷ್ಪ ಮಾಲೆಯಿಂದ ಅಲಂಕರಿಸಲ್ಪಟ್ಟಿತು; ಶಕಿನಾಬಿ ಸತ್ತ ಹಾಗಾಗಿದ್ದಳು; ಶಾಲಾ ವಿದ್ಯಾರ್ಥಿಗಳು ಒಗ್ಗೂಡಿ, ಬಾಷ್ಪಾಂಜಲಿಯನ್ನು ಅರ್ಪಿಸಿದರು. ಅಂದು ಬೆಳಿಗ್ಗೆ ಪರೀಕ್ಷೆ ಹಾಲಿನಲ್ಲಿ ನಗುನಗುತ್ತಿದ್ದ ಅಬ್ಬಾಸ್ ಮಧ್ಯಾಹ್ನದೊಳಗೆ ಮೃತ್ಯುವಿನ ಕರಾಳ ಹಸ್ತಕ್ಕೆ ತಲೆಗೊಟ್ಟಿದ್ದ—

ಎಲ್ಲರ ಕಂಗಳಲ್ಲೂ ಅಶ್ರು ತರ್ಪಣ!

ಪ್ರಮತ್ತಾವಸ್ಥೆಯ ಶಕಿನಾಬಿ ಹುಚ್ಚಿಯಾಗಿದ್ದಳು ಕರ್ಪೂರ ಉರಿಯುತ್ತಲೇ ಇತ್ತು—ಅಳಲು ಸಾಗುತ್ತಲೇ ಇತ್ತು; ಅಬ್ಬಾಸ್ ಹೊರಟು ಹೋಗಿದ್ದ; ಗೆಳೆಯರನ್ನು; ತಂದೆತಾಯ್ಗಳನ್ನು, ಎಲ್ಲರನ್ನೂ ಬಿಟ್ಟು ಹೋದ.

ಸಂಜೆ ಬರಿ ಬಂಜೆಯಾಗಿತ್ತು!

ಶಕಿನಾಭಿ ಗರ ಬಡಿದಂತಾಗಿದ್ದಳು!!

ಅಬ್ಬಾಸ್ ಮಣ್ಣಿನಡಿಯಲ್ಲಿ ಮಲಗಿದ್ದ; ಮಣ್ಣಿಂದ ಹುಟ್ಟಿದ್ದ ದೇಹ ಮಣ್ಣಿಗೆ

(ಹದಿನೈದನೆ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p a.	7ರಿಂದ 11 ತಿಂಗಳು % p. a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು. % p. a.	36ರಿಂದ 47 ತಿಂಗಳು. % p. a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು % p. a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ.-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್] ಶ್ರೀ
ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ 2 00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ನೋಟೀಸ್, ಕೋರ್ಟ್ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರ ಊರಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ

ಈ ಮುಖಪತ್ರದಲ್ಲಿ:

ಶರಾವತಿ ಜಲವಿದ್ಯುದ್ಯೋಜನೆಯ ಪವರ್ ಹೌಸಿನ ಒಳಭಾಗದ ನೋಟ.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೨೩	೪—೨—೧೯೬೫	No 23

ಚಾಗ್ಲರ ಸೂಕ್ತ ಸಲಹೆ

ದೇಶದ ಗ್ರಾಮೀಣ ಜನತೆಗೂ ವಸ್ತು ಸಂಗ್ರಹಾಲಯಗಳ ಪ್ರಯೋಜನ ದೊರೆಯುವಂತೆ ಇವನ್ನು ಅಭಿವೃದ್ಧಿಗೊಳಿಸಬೇಕೆಂದು ಕೇಂದ್ರ ಶಿಕ್ಷಣ ಮಂತ್ರಿ ಚಾಗ್ಲರು ಹೇಳಿದ್ದಾರೆ ಈ ಹೇಳಿಕೆಯು ಸ್ವಾಗತಾರ್ಹವೆಂದು ಬೇರೆ ಹೇಳಬೇಕಾಗಿಲ್ಲ. ಚಾರಿತ್ರಿಕ ಹಾಗೂ ವೈಜ್ಞಾನಿಕ ಪರಿಚಯ, ಅವುಗಳ ಶೈಕ್ಷಣಿಕ ಮೌಲ್ಯಗಳ ಅಭ್ಯಾಸ ಹಾಗೂ ಸ್ಫೂರ್ತಿ ನೀಡುವ ಗುಣಗಳನ್ನ ಯಾರಾದರೂ ಮೆಚ್ಚಬೇಕು. ವಸ್ತು ಸಂಗ್ರಹಾಲಯಗಳು ರಾಷ್ಟ್ರದ ಸಂಸ್ಕೃತಿಯ ಪ್ರತೀಕ; ನಾಗರಿಕತೆಯ ವಿವಿಧ ಹಂತಗಳನ್ನು ಎತ್ತಿತೋರಿಸುವ ಸಾಧನ. ಚಾಗ್ಲಾರು ಗ್ರಾಮೀಣ ಜನತೆಗೂ ವಸ್ತು ಸಂಗ್ರಹಾಲಯಗಳ ಪ್ರಯೋಜನ ದೊರೆಯಬೇಕೆಂಬ ಇರಾದೆಯು ಬಹಳ ಮಹತ್ವಾಕಾಂಕ್ಷೆಯಿಂದ ಕೂಡಿದುದು. ಏಕೆಂದರೆ, ಇಂದು ನಮ್ಮ ದೇಶದಲ್ಲಿ ನಗರಗಳಲ್ಲಿಯೇ ಸಾಕಷ್ಟು ಇಂತಹ ಕೇಂದ್ರಗಳಿಲ್ಲವೆಂದರೂ ತಪ್ಪಾಗದು. ಹಾಗಿರುವಾಗ, ಹಳ್ಳಿಗಳಿಗೆ ಅದರ ಗಾಳಿ ಬೀಸುವುದಾದರೂ ಹೇಗೆ? ನಮ್ಮ ದೇಶದ ನಾಗರಿಕತೆಯು ಅತಿ ಪ್ರಾಚೀನವಾದುದು. ಐತಿಹಾಸಿಕ ದಾಖಲೆಗಳೇ ಕ್ರಿಸ್ತಪೂರ್ವಕ್ಕೆ ಕೆಲವು ಸಾವಿರ ವರ್ಷಗಳ ಹಿಂದೆಯೇ ಇದು ಸುಸಂಸ್ಕೃತವಾಗಿತ್ತೆಂದು ಸಾರುತ್ತವೆ. ನಮ್ಮ ನಾಡಿನ ಮೂಲೆ ಮೂಲೆಗಳಲ್ಲಿಯೂ ನಾಗರಿಕತೆಗೆ ಸಂಬಂಧಿಸಿದ ಹತ್ತಾರು ಅವಶೇಷಗಳು ಗೋಚರವಾಗುತ್ತವೆ. ಶಿಲ್ಪಕಲೆ, ಚಿತ್ರಕಲೆ, ಹಸ್ತ ಕೌಶಲ್ಯ ಕಲೆ, ಆಭರಣ ರಚನಾ ಕಲೆ, ಉಡುಗೆತೊಡುಗೆಗಳ ತಯಾರಿಯ ಕಲೆ - ಹೀಗೆ ಪ್ರತಿಯೊಂದರಲ್ಲಿಯೂ ನಮ್ಮ ದೇಶ ಮುಂದಿತ್ತು; ಇಂದಿಗೂ ಈ ಕಲೆಗಳು ಗೋಚರವಾಗುತ್ತಿವೆ. ಇವುಗಳ ಒಂದಲ್ಲ ಅನೇಕ ಮಾದರಿಗಳು ನಮ್ಮಲ್ಲಿ ದೊರೆತಿವೆ, ನಾಡಿನ ಬೇರೆ ಬೇರೆಡೆಯಲ್ಲಿ ಬೇರೆ ಬೇರೆ ತರದ ನಾಗರಿಕತೆಯ ಕುರುಹುಗಳು ದೊರೆಯುತ್ತಿವೆ. ಇಂದು ನಾವು ಮಾಡಬೇಕಾದ ಕಾರ್ಯವೆಂದರೆ, ಇವನ್ನೆಲ್ಲಾ ಒಂದುಗೂಡಿಸುವುದಾಗಿದೆ.

ದೊಡ್ಡ ನಗರಗಳಲ್ಲಿ ಇಂದು ನಾವು ವಸ್ತುಸಂಗ್ರಹಾಲಯಗಳನ್ನು ಕಾಣಬಹುದ. ಇವುಗಳ ಮಟ್ಟವು ಉನ್ನತವಾಗಿದೆಯೆಂದು ಹೇಳುವುದು ಸಾಧ್ಯವಿಲ್ಲವಾದರೂ ಅವುಗಳ ಸ್ಥಿತಿಗೆ ತಲೆತಗ್ಗಿಸುವ ಅಗತ್ಯವಿಲ್ಲವೆನ್ನಬಹುದು. ಜನತೆಯು ಮನಸ್ಸು ಮಾಡಿದರೆ ಇವುಗಳ ಉನ್ನತಿ ಮಾತ್ರವಲ್ಲ ಇತರ ಚಿಕ್ಕ ಪಟ್ಟಣಗಳಲ್ಲಿಯೂ ಆಯಾ ಪ್ರದೇಶದಲ್ಲಿ ಲಭ್ಯವಿರುವ ವಸ್ತುಗಳನ್ನು ಸಂಗ್ರಹಿಸುವುದು ಸಾಧ್ಯವಿದೆ. ಇದಕ್ಕೆ ಬರೇ ಸರಕಾರಿ ರಂಗದ ಕಾರ್ಯಕ್ರಮಗಳೇ ಪರ್ಯಾಪ್ತವಾಗಲಾರದು. ಜನ ಮುಂದೆ ಬಂದರೆ ಎಂತಹ ಕಾರ್ಯವನ್ನೂ ಸಾಧಿಸಬಹುದು. ಆದರೆ, ನಮ್ಮ ಶ್ರೀಮಂತ ವರ್ಗವು ಇದರಲ್ಲಿ ಹೆಚ್ಚಿನ ಆಸ್ಥೆ ತಳೆದಂತಿಲ್ಲ; ಅಥವಾ ಜನಸಹಾಯದಿಂದ ಈ ವಸ್ತುಸಂಗ್ರಹಾಲಯಗಳ ಆಂದೋಲನವನ್ನು ಬೆಳೆಸಬಹುದೆಂಬ ಕಲ್ಪನೆಯೂ ಅಧಿಕಾರಿ ವರ್ಗಕ್ಕೆ ಬಂದಂತಿಲ್ಲ. ಐತಿಹಾಸಿಕ ಏಳು—ಬೀಳುಗಳಿಗೆ ತವರುಮನೆಯಾಗಿದ್ದರೂ ಭಾರತದಲ್ಲಿ ನಾಗರಿಕತೆಯ ಬೀಳು ಅವಿಚ್ಛಿನ್ನವಾಗಿ ಇಳಿದು ಬಂದಿದೆಯೆಂಬುದನ್ನೂ ಇಂತಹ ನಾಗರಿಕತೆಯ ಅವಶೇಷಗಳು ನಮ್ಮಲ್ಲಿ ಧಾರಾಳವಾಗಿವೆಯೆಂಬುದನ್ನೂ ನಾವು ಗಮನಿಸಬೇಕು. ಪ್ರಜಾಪ್ರಭುತ್ವದಲ್ಲಿ ಇಂದಿನ ಜನತೆಯು ತನ್ನ ಪೂರ್ವಜರ ಇತಿಹಾಸದಿಂದ, ಅವರ ಸಾಹಸಗಳಿಂದ ಹೊಸ ಸ್ಫೂರ್ತಿ ಪಡೆಯಬೇಕು, ಅವರ ಸ್ಮಾರಕ, ಕೃತಿಗಳ ಬಗ್ಗೆ ನಮ್ಮಲ್ಲಿ ಅಭಿಮಾನ ಮೂಡಬೇಕ ; ನಮ್ಮ ಜೀವನಕ್ಕೆ ಇಂತಹ ಅಭಿಮಾನ—ಹುರುಪುಗಳು ದಾರಿದೀಪಗಳಾಗಬೇಕು; ಇವುಗಳ ಬೆಳಕಿನಲ್ಲಿ ನಾವು ಧೈರ್ಯ ಸಾಹಸಗಳಿಂದ ಮುಂದರಿದು ಯಶಗಳಿಸಬೇಕು; ಇದಕ್ಕಾಗಿ ವಸ್ತು ಸಂಗ್ರಹಾಲಯಗಳ ಬಗೆಗೆ ತಿಳುವಳಿಕೆ ನಮ್ಮಲ್ಲಿ ಹೆಚ್ಚಾಗಬೇಕು.

ತಮ್ಮ ಪೂರ್ವ ಪುರುಷರ ಬಗ್ಗೆ ನಗರವಾಸಿಗಳಿಗಿಂತಲೂ ಗ್ರಾಮೀಣರಲ್ಲಿ ಹೆಚ್ಚು ಗೌರವಾದರಗಳಿರುವುದು ಖಂಡಿತ. ತಮ್ಮ ಹಿಂದಿನ ತಲೆಮಾರುಗಳ ಕುರಿತು ಅವರು ಅಭಿಮಾನ ಪಡುತ್ತಿದ್ದಾರೆ. ಹೀಗಾಗಿ ವಸ್ತು ಸಂಗ್ರಹಾಲಯಗಳು ಅವರಲ್ಲಿ ಹೊಸ ಬಾಳನ್ನು ಬಾಳುವ ಪ್ರೇರಣೆ ನೀಡುವುದು ಕಷ್ಟವಲ್ಲ. ಚಾಗ್ಲರು ಹೇಳುವಂತೆ ಪ್ರತಿ ಜಿಲ್ಲಾ ರಾಜಧಾನಿಯಲ್ಲಿ ಪ್ರಾದೇಶಿಕ ವಸ್ತು ಸಂಗ್ರಹಾಲಯಗಳನ್ನು ಏರ್ಪಡಿಸಿ ಅವನ್ನು ಸಂಚಾರಿಯಾಗಿಸಿ ಹಳ್ಳಿ ಹಳ್ಳಿಗಳಿಗೂ ತೋರಿಸುವ ವ್ಯವಸ್ಥೆ ಮಾಡಿದರೆ, ತುಂಬ ಉಪಕಾರವಾಗುವುದು ಇದಕ್ಕಾಗಿ ತುಂಬ ವೆಚ್ಚವನ್ನು ಮಾಡಬೇಕಾಗುವುದು ಇದು ಸದ್ಯದಲ್ಲಿ ಕಷ್ಟಸಾಧ್ಯ. ಹಾಗಿದ್ದರೂ ಜನತೆಯ ಸಹಕಾರದಿಂದ ಈ ಬಗೆಯ ಪ್ರಾದೇಶಿಕ ಸಂಚಾರಿ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಿದರೆ, ಸಾರ್ವಜನಿಕರಿಗೆ ತುಂಬ ಲಾಭವಾಗುವುದು. ಯಾವ ದೇಶದಲ್ಲಿ ತಮ್ಮ ಪೂರ್ವಜರ ಘನತೆಯ ಬಗ್ಗೆ ಅಭಿಮಾನವಿರುವುದೋ ಅಲ್ಲಿನ ಪ್ರಜಾ ಜನರೂ ಅಭಿಮಾನಧನರಾಗುತ್ತಾರೆ. ಸ್ವತಂತ್ರ ಭಾರತೀಯರು ಈ ಬಗೆಯ ಜನರಾಗಿ ತಮ್ಮ ದೇಶವನ್ನು ಹಿಂದಿನಂತೆ ಜೇನು ಸುರಿವ ಹಾಲು ಹರಿವ ಕಾಮಧೇನುವಾಗಿ ರೂಪಿಸುವುದಕ್ಕೆ ಸಮರ್ಥರಾಗಬೇಕಾದರೆ, ಈ ಬಗೆಯ ಕಾರ್ಯಕ್ರಮ ಅತಿ ಅಗತ್ಯವಾಗಿದೆ. ಮಂತ್ರಿ ಚಾಗ್ಲರ ಸೂಚನೆಯನ್ನು ಕಾರ್ಯಗತಗೊಳಿಸಿದರೆ ಇದು ಅಸಾಧ್ಯವಲ್ಲ; ಸಶಕ್ತರು ಇದಕ್ಕಾಗಿ ಮುಂದೆ ಬಂದು ಸರಕಾರದೊಂದಿಗೆ ಸಹಕರಿಸಬೇಕು.

ವಚನ ಸುಧೆ

ಶೇರೇ ಹ ಸ್ಯ ಸರ್ವೇ ಪಾಪ್ಮಾನಃ
ಶ್ರಮೇಣ ಪ್ರಪಥೇ ಹತಾಃ ||

(ಐತರೇಯ ಬ್ರಾಹ್ಮಣ, ೭—೧೫)

O ಮಾನವನ ಪಾಪಗಳು ಪರಿಶ್ರಮ ಪಡುವುದರಿಂದ ಮಾರ್ಗದಲ್ಲೇ ನಾಶ ಹೊಂದುವುವು.

OO ಪ್ರಯತ್ನ ಶೀಲನಾದ ಮಾನವನ ಎಲ್ಲ ಪಾಪಗಳೂ ದೋಷಗಳೂ ಅಲ್ಪಾವಧಿಯಲ್ಲೇ ದೂರವಾಗುತ್ತವೆ. ಪುರುಷಾರ್ಥಿ ಮಾನವನ ಬಳಿ ಪಾಪ ಕಾಲಿರಿಸುವುದಿಲ್ಲ ಆಲಸಿಯ ಬಳಿ ಪಾಪದ ಕೊಡಗಳೇ ತುಂಬಿರುವುವು. ಆದುದರಿಂದ ಯಾರೂ ಆಲಸಿಯಾಗಬಾರದು.

ಕಣ್ಮರೆಯಾದ ಚರ್ಚಿಲ್

ಕೆಲವು ದಿನ ೧೪ ತೀವ್ರ ಅಸ್ವಾಸ್ಥ್ಯದಿಂದ ಚೇತರಿಸಿಕೊಳ್ಳಲಾಗದೆ ೯೦ ವರ್ಷದ ವಯೋವೃದ್ಧ ರಾಜಕಾರಣಿ ವಿನ್‌ಸ್ಟನ್ ಚರ್ಚಿಲ್ ತಮ್ಮ ಕೊನೆಯುಸಿರನ್ನೆಳೆದರು. ದ್ವಿತೀಯ ಜಾಗತಿಕ ಸಮರದ ವೇಳೆಯಲ್ಲಿ ಕೆಚ್ಚೆದೆಯಿಂದ ಬ್ರಿಟನ್ನಿನ ಪ್ರಧಾನಿ ಪಟ್ಟವನ್ನು ಸಂತೋಷದಿಂದ ಸ್ವೀಕರಿಸಿ ಶತ್ರುಗಳನ್ನು ಸೋಲಿಸಿ ಜಯ ವಧುವನ್ನು ತಂದುಕೊಟ್ಟ ಸಮರ ನಾಯಕ ಚರ್ಚಿಲ್ ಪ್ರಪಂಚದ ಅಗ್ರ ನಾಯಕ ಪಂಕ್ತಿಯಲ್ಲಿ ಸೇರುತ್ತಾರೆ. ಯುದ್ಧದ ವೇಳೆ ಅವರು ತೋರಿಸಿದ ಮಹಾ ಮುತ್ಸದ್ದಿತನವು ಅವರನ್ನು ಬ್ರಿಟನ್ನಿನ ಸಂರಕ್ಷಕನೆಂದು ಕರೆಯುವಂತೆ ಮಾಡಿದ. ಸುಮಾರು ಅರ್ಧಶತಮಾನಕ್ಕಿಂತಲೂ ಸುದೀರ್ಘ ಕಾಲ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರಾಗಿದ್ದ ಇವರ ಉತ್ತಮ ಪಾರ್ಲಿಮೆಂಟೇರಿಯನ್ ಆಗಿದ್ದರು. ಟೋರಿ ಪಕ್ಷಕ್ಕೆ ಸೇರಿದ ಇವರು ವಸಾಹತುವಾದವ ಕೊನೆಗೆ ಒಪ್ಪದೆ ಇದ್ದು, ಭಾರ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ಎಸ್ಸೆಸ್ಸೆಲ್ಸಿ ಪರೀಕ್ಷೆಗಳೆಲ್ಲಾ ಏರಿದ ತುಟ್ಟಿ ಭತ್ತೆಯನ್ನು ನಿಜಲಿಂಗಪ್ಪನವರಿಗೆ ಎಂ. ಓ. ಮಾಡುತ್ತಾರಂತಲ್ಲಾ! ಅದು, ಯಾವ ಲೆಕ್ಕಕ್ಕೆ ಜಮೆಯಾಗಬಹುದೆಂತ ....!'

ಬಿಮೂರಿ

ಗೇಹ ರಾಜ್ಯದಲ್ಲಿ

ಈ ಮಾತಂತೂ ಸತ್ಯವೇ ಸತ್ಯ

"ಹೌದೂಂದ್ರೆ...."

"ಹೌದು..."

"ಏನು...?...."

"ನೀನು ಏನಂತೀಯೊ ಅದು...."

'ನಾನು ಏನೂ ಅನ್ನೋದಿಲ್ಲಾಂತಂದ್ರೆ....?"

"ಅದನ್ನೂ ಹೌದು...."

'ಅಲ್ಲಾ, ಇದೇನಾಗಿದೆ ನಿಮಗೇಂತ?'

"ಹೌದು...."

"ಅಂದ್ರೆ....?"

"ಅದೇ ನೀನಂದೆಯಲ್ಲಾ, ಏನೋ ಆಗಿದೇಂತ ..."

"ಅಂದ್ರೆ, ನಿಮಗಿಂದೇನೋ ಗರ ಬಡಿದಿದೆ ಅನ್ನಿ...."

"ಅಲ್ವೆ? ನನಗೇನು ಗರ ಬಡಿಯೋದು?'

'ಮತ್ತೆ...?"

'ಮತ್ತೇನಿಲ್ಲ. ನೋಡಿದ್ರಾ ಇವತ್ತಿನ ಸುದ್ದಿ...."

'ಸುದ್ದಿಯನ್ನ ನೋಡೋದೇನ್ಬಂತು? ಓದೋ ಓದ್ಬೇಕು; ಇಲ್ವಾದ್ರೆ...."

"ಕೇಳ್ಬೇಕು ತಾನೆ? ಸರಿಯಪ್ಪ, ನಿನ್ನ ತಲೀಗೆ ಬಂದಿತೇಂತ?"

"ಓದೋದೆಲ್ಲಿ ಬಂತು ನೋಡಿ. ಗಂಟೆ ಎಂಟು ಆಗ್ಲಿ ಬಡಿದಿದ್ರೂನೂ ಇನ್ನೂ ಕನ್ನಡ ಪತ್ರಿಕೆ ಬಂದಿಲ್ಲ. ನೋಡಿ, ನಿನ್ನೆ ಬಂದವ ಒಂದು ವಾರದ ಪೇಪರ್ನೆಲ್ಲಾ ಸುರುವಿ ಹೋದ, ಅಲ್ಲಾ, ದಿನದದನ್ನ ದಿನಾ ಓದೋಕೆ ಬಿಡಿ, ನೋಡೋಕೂ ಬಿಡುವಿಲ್ದ ನಮ್ಮಂತವ್ರು ಈ ರಾಶಿಯನ್ನ ಮಾಡೋದಾದ್ರೂ ಏನೂಂತ?"

"ಮಾಡೋದೇನು? ಒಂದ್ನಾಲ್ಕು ದಿನ ರಾಶಿಯನ್ನ ನೋಡೋದು; ಮತ್ತೆ ಇದ್ದೇ ಇದೆಯಲ್ಲಾ, ಕಮ್ಮಿ ಅಂಗಡಿ...."

"ಸರಿಯಾಗೇ ಅಂದ್ರಿ ಬಿಡಿ. ನಮ್ಮಲ್ಲಿ ಈ ರಾಶಿಯನ್ನ ಒಮ್ಮೆ ಕೊಟ್ಟುಬಿಟ್ರೆ ನುಮಾರು ಹಗುರಾಗತ್ತೆ."

'ಹಗುರಾಗುತ್ತೆ ನಿಜ. ಆದ್ರೆ ನೋಡು, ನಾವೇನೂ ಅದನ್ನ ಹೊತ್ತುಕೊಂಡಿಲ್ಲ. ಆದ್ರಿಂದ ಇಲ್ಲಿ ಇನ್ನೂ ಕೆಲ ಸಮಯ ಅಲ್ಲೇ."

"ಅಯ್ತಪ್ಪ, ನೋಡಿ, ಅದೇನೋ ಸುದ್ದಿ ಅಂದರಲ್ಲಾ....'

'ಸುದ್ದಿ....ಹೌದು ಕಣೇ, ಒಂದು ಸುದ್ದಿ, ಭಾರೀ ಮುಖ್ಯವಾದ ಸುದ್ದಿಯದು..."

"ಅದು ನಂಗೆ ಗೊತ್ತಿಲ್ವೆ? ಅಂತಿಂಥ ಸುದ್ದಿಯಾದ್ರೆ ನಿಮ್ಮ ಗಮನಕ್ಕೇ ಬರೋದಿಲ್ಲಾಂತ?'

"ಹ್ಞಾಂ..."

"ಏನಪ್ಪಾ ಅಂಥ ಘನ ಸಮಾಚಾರ?"

"ಮತ್ತೇನೂ ಇಲ್ಲ...."

'ಮತ್ತೆ ಏನೂ ಇಲ್ಲಾಂತ ನನಗೂ ಗೊತ್ತು. ಈಗ ಏನಿದೆ ಹೇಳಿ ಮೊದ್ಲು...."

"ಅಲ್ಲ, ಒಳ್ಳೆ ಮರಾಣಿಯಾಂಗೆ ಆಜ್ಞೆ ಮಾಡ್ತೀಯಲ್ಲೆ ನೀನು?"

'ಮತ್ತೆ ಸುದ್ದಿಯನ್ನ ಸುಮ್ಮನೆ ಹೇಳ್ತೀನಿ ಹೇಳ್ತೀನಿ ಅಂತ ಹೇಳ್ತಲೇ ಇದ್ದೀರಲ್ಲ?"

"ಹೌದಪ್ಪ, ಅವ್ರು ಸುಮ್ನೆ ಹೇಳ್ಲಿಲ್ಲ..."

"ಯಾರವ್ರು ಏನೂಂತ ಹೇಳಿದ್ರು?"

"ಅವ್ರು ಯಾರೋ, ಆದ್ರೂ ಹೇಳಿದ್ದಂತೂ ನಿಜ."

"ಏನಂತೆ?"

'ಊರಿಗೆ ಒಡೆಯನಾದರೂ..'

"ಛಿ...ನಿಮ್ಮ...ಯಾರಾದ್ರೂ ಕೇಳಿದ್ರೆ ಏನಂದಾರು?"

"ಅನ್ನೋದೇನು ಬಂತೆ? ಮನೆ ಹೆಂಡ್ತಿಗೆ ಶಾಸ್ತ್ರರಾಂದಾರು ತಾನೆ?"

"ಅಯ್ಯೋ ನಿಮ್ಮ ಗ್ರಹಚಾರವೆ?"

"ಹೌದೂ, ಇದು ನನ್ನದೇ ಗ್ರಹಚಾರ ಇಲ್ವಾದ್ರೆ ಯಾಕಪ್ಪ ಈ ಗೃಹಚಾರನಾಗ್ತಿದ್ದೆ?"

'ಹೋಗ್ಲಿ ಬಿಡೀಂದ್ರೆ.... ಅಲ್ಲಾ, ಏನದು ಅಂತಹ ಮಹತ್ವದ ಸುದ್ದೀಂತ?"

"ಅಂದ್ರೆ. ಕೇಳೋಕೆ ಕಿವಿಗಳು ಕದಬುಗೊಂಡಿವೇಂತ ತೋರುತ್ತೆ..."

"ಹೇಳೀಂದ್ರೆ ಬೇಗ...."

"ಹೇಳ್ಲೇ ಬೇಕೇನು?"

"ಹೇಳ್ತೀನೇಂತ ನುಡಿದು ಈಗ...."

"ಇಲ್ಲಮ್ಮಣ್ಣಿ, ಹೇಳ್ತೀನೆ ಕೇಳು...."

"ಕೇಳುತ್ತಲೇ ಇದ್ದೇನೆ ರಾಜಾ ..."

"ನೋಡು ರಾಣಿ, ಮೊನ್ನೆ ಪ್ರಜಾಪ್ರಭುತ್ವ ದಿನದಿಂದ ಹಿಂದೀ ಭಾಷೆಯು ರಾಜಭಾಷೆಯ ಸ್ಥಾನವನ್ನು ಪಡೆಯಿತು"

"ಸರಿಯಾಯ್ತು ಬಿಡಿ. ಗಾಂಧೀ ಕಾಲದಲ್ಲಿ ಅದು ರಾಷ್ಟ್ರಭಾಷೆಯಾಗಿತ್ತು. ಈಗ ನಿಮ್ಮ ಈ ಕಲಿಗಳ ಕಾಲದಲ್ಲಿ ರಾಜಭಾಷೆಯಾಯ್ತು. ಇದ್ರಲ್ಲೇನು ವಿಶೇಷ?"

"ಹಾಗಲ್ವೆ, ಸ್ವತಂತ್ರ ಸಾರ್ವಭೌಮ ರಾಷ್ಟ್ರಕ್ಕೊಂದು ತನ್ನದೇ ಆದ ಭಾಷೆಯಿರಬೇಕು. ಗಾಂಧೀಜಿಯವರು ಹಿಂದಿಯೇ ಭಾರತದ ರಾಷ್ಟ್ರ ಭಾಷೆಯಾಗುವುದಕ್ಕೆ ತಕ್ಕ ಭಾಷೆಯೆಂದು ಅದರ ಪ್ರಚಾರಕ್ಕೆ ತೊಡಗಿದ್ದರು.'

'ಇವತ್ತಿಗೂ ಹಿಂದೀ ಪ್ರಚಾರ ಸಂಸ್ಥೆಗಳು ಈ ಕಾರ್ಯದಲ್ಲಿ ದುಡಿಯುತ್ತಿವೆಯಲ್ಲಾ?"

"ಹೌದು, ಆದರೂ ಹಿಂದಿಯ ವಿರುದ್ಧ ಹೋರಾಟ ಆರಂಭವಾಗಿದೆ."

"ಎಲ್ಲಿ? ನಮ್ಮೂರಲ್ಲಿ ಅಂತಾದ್ದೇನೂ ಇಲ್ಲ."

'ನಮ್ಮವರಲ್ಲಿ ಸತ್ವವಿದೆಯೆ? ನಮ್ಮ ನುಡಿ, ನಮ್ಮ ನಡೆ, ನಮ್ಮ ಸಂಘ ಸಂಸ್ಥೆಗಳು ನಮಗೆ ಬೇಡ. ಬೇರೆಯವರಲ್ಲಿರುವುದೇ ಸ್ವರ್ಗ ಸುಖವಿದೆಯೆಂದು ಭಾವಿಸುತ್ತೇವೆ.?

"ಹ್ಞಾಂ....ಮತ್ತೆಲ್ಲಿ?"

"ನೋಡು, ಮದ್ರಾಸದಲ್ಲಿ ಹಿಂದೀ ವಿರೋಧಿ ಚಳವಳಿ ಉಲ್ಬಣಾವಸ್ಥೆಗೇರಿದೆ. ಇಬ್ಬರು ಬಾಲಕರು ಮೈಗೆ ಚಿಮಿಣಿ ಎಣ್ಣೆ ಸುರುವಿಕೊಂಡು ಬೆಂಕಿ ಕೊಟ್ಟುಕೊಂಡು ಬಲಿದಾನವಿತ್ತರಂತೆ!"

"ಅಬ್ಬಾ.... ಕೇಳುವಾಗಲೇ ರೋಮಾಂಚನವಾಗುತ್ತಿದೆ!"

"ಮತ್ತೆ ನೋಡು, ಚಳವಳಗಾರರಲ್ಲಿ ನೂರಾರು ಮಂದಿ ಕೈದಾಗಿದ್ದಾರೆ; ಆದರೂ ಆಂದೋಲನ ಸಾಗುತ್ತಲೇ ಇದೆ..."

"ಅಲ್ರಿ, ಮದ್ರಾಸೂಂತಂದ್ರೆ ದಕ್ಷಿಣ ಭಾರತದಲ್ಲಿ ಹಿಂದೀ ಗಾಳಿ ಬೀಸಿದ ಗಂಡು ಸ್ಥಳ..."

"ಆದ್ದರಿಂದಲೇ ಅಲ್ಲಿ ಹಿಂದಿ ಬಿರುಗಾಳಿಗೆ ತುತ್ತಾಗಬೇಕಾಯಿತೋ ಏನೋ?"

"ನಮ್ಮ ಜನರ ಕತೆಯೇ ಹೀಗೆ. ನಮ್ಮ ಶಕ್ತಿಯನ್ನ ಬೇಡವಾದುದಕ್ಕೆ ವ್ಯಯಿಸುವುದು.

"ಅದೇಲ್ಲಾ, ಮದ್ರಾಸಿ ಜನಾಂತಂದ್ರೆ ಭಾರಿ ಬಿಗಿ."

"ಯಾಕೆ?"

"ನೋಡು, ಹಿಂದೆ ಸ್ವತಂತ್ರ ದ್ರವಿಡಸ್ಥಾನದ ಬೇಡಿಕೆ ಹುಟ್ಟಿದ್ದು ಎಲ್ಲಿ? ಸಂವಿಧಾನದ ಪ್ರತಿಗಳು, ಭಾರತದ ಭೂಪಟ, ರಾಮಗಣಪತಿಯರ ಚಿತ್ರಗಳು ಅಗ್ನಿ ನಾರಾಯಣನಿಗೆ ಆಹುತಿಯಾದುದು ಎಲ್ಲಿ? ಇದೀಗ ಕೆಲಸಮಯದಿಂದ ತುಸ ತಂಡಾ ಆಗಿದೆ ಅಷ್ಟೆ."

'ಮತ್ತೆ ಈಗ ಸುರುವಾಯಿತಲ್ಲಾ?'

"ಆಕಾಶವಾಣಿ— ಬಾನುಲಿಗಳ ಮೇಲೆ, ಮದ್ರಾಸು— ತಮಿಳು ನಾಡುಗಳ ಮೇಲೆ ಹೋರಾಡಿದವರು ಹಿಂದಿಯನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡುತಿದ್ದಾರೆ."

"ಅಂದ್ರೆ. ಅವರ ಅಭಿಪ್ರಾಯ ವೇನೂಂತ, ತಮಿಳನ್ನೇ ರಾಜ ಭಾಷೆ ಮಾಡಬೇಕೆಂದೆ?"

'ಛೆ ಛೆ.... ಅಂತಹ ಮಾತು ಬರಲಾರದು. ಹಿಂದೀ ಬೇಡ, ಇಂಗ್ಲೀಷೇ ಮುಂದುವರೀಲಿಯಂತ ..."

ಅದೂ ಹೌದೂನ್ನಿ. ನೋಡಿ, ನಮ್ಮ ಭೀಮು ಹೇಳ್ತಿದ್ದ. ಹೈಸ್ಕೂಲು ಕೊನೇ ವರ್ಷ ಅಲ್ವೆ? ಅವ್ರಿಗೆ ಹಿಂದಿ ಖಡ್ಡಾಯ ಖಡ್ಡಾಯೂಂತ ಖಡ್ಡದಲ್ಲಿ ಆನೆ ಮರಿಗಳನ್ನ ಹೆದರಿಸಿದ ಹಾಗೆ ಅನ್ನುತಿದ್ದರಂತೆ. ಈಗ ನೋಡಿ, ಸರ್ಕಾರವೇ ಹಿಂದೀ ಪಾಸಾಗೋ ಅಗತ್ಯವಿಲ್ಲಾಂತ ಹೇಳಿದೆಯಂತೆ..."

"ಹ್ಞಾಂ.... ಇದಕ್ಕೆ? ಅನ್ನೋದು ನಮ್ಮ ಗ್ರಹಚಾರಾಂತ."

"ಹಾಗಿರುವಾಗ ಇಂಗ್ಲಿಷೇ ಇರ್ಲೀಂತ ಮದ್ರಾಸಿನವ್ರು ಅಂದ್ರೆ ತಪ್ಪೇನಂತೆ?'

"ತಪ್ಪು ಇಲ್ಲಾನ್ನು. ಆದ್ರೂ ಸ್ವತಂತ್ರ ಸಾರ್ವಭೌಮ ದೇಶದಲ್ಲಿಯೂ ಪರರಾಷ್ಟ್ರೀಯ ಭಾಷೆಯೇ ಸಿಂಹಾಸನದಲ್ಲಿ ಉಳೀಬೇಕೇಂತ?"

"ಏಕೆ ಬಾರದು ಹೇಳಿ?"

"ಅದು ಅಷ್ಟು ಉಚಿತವಲ್ಲಾಂತ ಅಷ್ಟೆ. ನಮ್ಮ ಸಂವಿಧಾನದಲ್ಲಿ ೧೯೬೫ರಿಂದ ಹಿಂದಿಯನ್ನು ರಾಜಭಾಷೆಯಾಗಿ ಬಳಸುವ ಉದ್ದೇಶವಿತ್ತು. ಆದರೂ ಅಹಿಂದೀ ಪ್ರದೇಶಗಳಿಗೆ ಅಸಚಾರವಾಗದಂತೆ ಆದರೊಡನೆ ಇಂಗ್ಲಿಷನ್ನೂ ಮುಂದುವರಿಸುವ ಆಶಯವಿದೆ. ಅದನ್ನೇ ಈಗ ಜ್ಯಾರಿಗೆ ತಂದಿರೋದು."

(ಹದಿಮೂರನೇ ಪುಟ ನೋಡಿರಿ)

"VOLTAS" CRYSTAL AIR CONDITIONERS
"ALLWYN PRESTCOLD" REFRIGERATORS
"RACOLD" WATER HEATERS AND ELECTRICAL APPLIANCES
"SUNMICA" SHEETS FOR MODERN FURNITURE

Contact

GENERAL REFRIGERATION ENG. WORKS
WOODSIDE BLDG., K. S. RAO Rd.,
MANGALORE-1. Phone: 1209.

ಅಮೆರಿಕನರು ಕಂಡ ನೆಹರೂ

ವಿಶ್ವಿನನ್ನೇ ತನ್ನತ್ತ ಆಕರ್ಷಿಸಿದ ಪಂಡಿತ ನೆಹರೂ ಅಮೆರಿಕೆಯಲ್ಲಿ ಬಹಳಷ್ಟು ಜನಪ್ರಿಯರಾಗಿದ್ದರು. ಅಮೆರಿಕನ್ನರು ಅವರಲ್ಲಿ ತಮ್ಮ ಸ್ನೇಹಿತನನ್ನು, ಮಾನವತಾ ವಾದಿಯನ್ನು, ದೇವದೂತನನ್ನು ಕಂಡರು. ಈ ಬಗೆಯ ಗೌರವ ಅದೆಷ್ಟು ಮಂದಿಗೆ ದೊರೆಯಬಲ್ಲದು?

ಬರೆದವರು
ಶ್ರೀ ಬ. ನ. ಸುಂದರರಾಯರು.

ಪಂಡಿತ ನೆಹರೂರವರು ಅಮೇರಿಕದಲ್ಲಿ ಸಂಚರಿಸಿ ಅಪಾರ ಕೀರ್ತಿಯನ್ನು ಗಳಿಸಿದ್ದರಷ್ಟೆ! ಅಮೇರಿಕದಲ್ಲಿ ಎಲ್ಲೆಲ್ಲಿಯೂ ಅವರಿಗೆ ಅದ್ಭುತ; ಸ್ವಾಗತ ಹೋದೆಡೆಗಳಲ್ಲೆಲ್ಲ ಜಯಘೋಷಣ, ಜನಸಂದಣಿ. ಅಮೇರಿಕನ್ನರಿಗೆ ನೆಹರೂ ಎಂದರೆ ಪರಮ ಪ್ರೇಮ. ಇದೇಕೆ?

ಇದಕ್ಕುತ್ತರವಾಗಿ ನೆಹರೂರವರ ಪ್ರವಾಸ ಕೈಕೊಂಡ ಭಾರತೀಯ ಪತ್ರಿಕಾ ಲೇಖಕರಾದ ಶ್ರೀ ಪಿ. ಡಿ. ಶರ್ಮರು ಹೀಗೆ ಹೇಳುತ್ತಾರೆ:—

ನೆಹರೂ ಪ್ರವಾಸದ ಯಶಸ್ಸಿಗೆ ಮೂರು ಮುಖ್ಯ ಕಾರಣಗಳುಂಟು:—

(೧) ಅಮೇರಿಕನ್ನರಿಗೆ ಮಹಾತ್ಮಾ ಗಾಂಧಿಯವರ ಬಗ್ಗೆ ಅಪಾರ ಪ್ರೇಮ. ಅಂಥ ಗಾಂಧಿಯವರ ದೇಶದಿಂದ ನೆಹರೂ ಬಂದಿರುವರೆಂಬುದು.

(೨) ಅಮೇರಿಕನ್ನರಿಗೆ ನೆಹರೂ ಅವರು ಭಾರತದ ಪ್ರಧಾನಿಯೆಂಬುದು ಮುಖ್ಯವಾಗಿರಲಿಲ್ಲ. ಅವರು ಮಹಾತ್ಮಾ ಗಾಂಧಿಯವರ ಉತ್ತರಾಧಿಕಾರಿಗಳೆಂಬುದು ಬಹು ಮುಖ್ಯವಾಗಿತ್ತು.

(೩) ನೆಹರೂರವರು ಅಮೇರಿಕನ್ನರಿಗೆ ತಮ್ಮ ಬರಹಗಳಿಂದಾಗಿ ಬಹಳ ಕಾಲದಿಂದಲೂ ಪರಿಚಿತರಾಗಿದ್ದಾರೆಂಬುದು—ಇನ್ನೊಂದು.

ಈಗ ನಾವು ಈ ಮೂರೂ ಅಂಶಗಳನ್ನು ಸ್ವಲ್ಪ ಮಟ್ಟಿಗೆ ವಿಮರ್ಶಿಸಿ ನೋಡೋಣ.

ನೆಹರೂರವರನ್ನು ಮಹಾತ್ಮಾ ಗಾಂಧೀಜಿಯವರ ನಾಡಿನಿಂದ ಬಂದ ದೇವದೂತನೆಂದು ಅಮೇರಿಕನ್ನರು ಭಾವಿಸಿದ್ದಾರೆ. ಗಾಂಧೀಜಿಯವರ ಪ್ರಭಾವ ಅಲ್ಲಿ ಅಷ್ಟು ವ್ಯಾಪ್ತಿಯಾಗಿದೆ. ನೆಹರೂ ಎಂದೊಡನೆಯೇ ಅಲ್ಲಿನ ಜನರಿಗೆ ಏನೋ ಒಂದು ಗೌರವ, ಪ್ರೀತಿ ವಿಶ್ವಾಸ. ರೈತರಿಂದ ಹಿಡಿದು ಉನ್ನತ ಅಧಿಕಾರಿಗಳ ವರೆಗೆ, ಕೂಲಿಗಳಿಂದ ಹಿಡಿದು ಮಾಲೀಕರ ವರೆಗೆ ಎಲ್ಲರಿಗೂ ನೆಹರೂ ಎಂದರೆ ಒಂದ. ಪವಾಡ ವ್ಯಕ್ತಿ ಎಂಬ ಭಾವನೆ. ಗಾಂಧೀಜಿಯವರ ಆತ್ಮಚರಿತ್ರೆಯನ್ನೂ, ಅವರ ಎಲ್ಲ ಲೇಖನಗಳನ್ನೂ, ಅಮೇರಿಕನ್ನರಲ್ಲಿ ಬಹುಮಂದಿ ಓದಿಕೊಂಡಿದ್ದಾರೆ. ಅದಕ್ಕೇ ಅಷ್ಟು ಮಮತೆ. ಗಾಂಧೀ ಸಾಹಿತ್ಯವೆಂದರೆ ಬಹುಜನಪ್ರಿಯ. ಇಂತಹ ಗಾಂಧಿಯವರ ದೇಶದಿಂದ ನೆಹರೂ ಬಂದರೆಂದರೆ ಪೂಜ್ಯತೆ ಮೂಡದೆ ಇದ್ದೀತೇ? ಗಾಂಧೀಜಿಯವರನ್ನು ಕೊಲೆ ಮಾಡಿದಾಗ ಬಹುಮಂದಿ ಅಮೇರಿಕನ್ನರು ಕಂಬನಿಗರೆದರು. ನ್ಯೂಯೋರ್ಕಿನ ಈಸ್ಟರ್ ಪೆರೇಡಿನಲ್ಲಿ ದೊಡ್ಡ ದೊಡ್ಡ 'ಪೋಸ್ಟರ್' ಗಳನ್ನು ತೂಗಹಾಕಿ, ಅದರಲ್ಲಿ "ನಮಗೆ ಯುದ್ಧ ಬೇಡ: ಗಾಂಧೀಯವರ ಮಾರ್ಗವೇ ಸರ್ವಶ್ರೇಷ್ಠ. ಅದೇ ನಮಗೆ ಸರಿ" ಎಂದು ಬರೆದಿದ್ದರು. ಇದರಿಂದ ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಅವರು ಎಷ್ಟು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆಂಬುದು ವ್ಯಕ್ತವಾಗುತ್ತದೆ.

ಎರಡನೆಯದಾಗಿ ಮಹಾತ್ಮಾ ಗಾಂಧಿಯವರ ರಾಜಕೀಯ ಉತ್ತರಾಧಿಕಾರಿಯೆಂದೂ, ಅಹಿಂಸಾ ತತ್ವದ ಪ್ರತಿಪಾದಕರೆಂದೂ ಭಾವಿಸಿ ನೆಹರೂರವರಿಗೆ ಭವ್ಯ ಸ್ವಾಗತ ನೀಡಲಾಯಿತು. ಅಮೇರಿಕದಲ್ಲಿ ನಡೆದ ನೂರಾರು ಸಾರ್ವಜನಿಕ ಸಭೆಗಳಲ್ಲಿ ಮೇಯರ್‌ಗಳು, ಗೌರ್ನರ್‌ಗಳು, ವಿಶ್ವವಿದ್ಯಾನಿಲಯಗಳ ಕುಲಪತಿಗಳು ಮೊದಲಾಗಿ ಅನೇಕ ಗಣ್ಯ ವ್ಯಕ್ತಿಗಳು ಮಾಡಿದ ಭಾಷಣಗಳನ್ನು ಗಮನಿಸಿದರೆ ಈ ಅಂಶವು ಎದ್ದು ಕಾಣುವುದು. ಅಹಿಂಸಾ ತತ್ವದ ಜೀವಾಳವನ್ನು ತೋರಿಸಿದವರೇ ಗಾಂಧೀಜಿಯವರು. ಅದನ್ನೇ ನೆಹರೂರವರು ತಮ್ಮ ಭಾಷಣಗಳಲ್ಲಿ ಪ್ರತಿಪಾದಿಸಿ, ಸೊಗಸಾದ ರೀತಿಯಲ್ಲಿ ಅರ್ಥ ವಿವರಣೆ ನೀಡುತ್ತಿದ್ದರು. ಮಹಾತ್ಮರ ದಿವ್ಯ ಸಂದೇಶ, ಮಾನನೀಯತೆಯನ್ನು ಉದ್ಧಾರ, ಯುದ್ಧ ಭೀತಿಯ ತ್ಯಾಗ— ಮುಂತಾದ ವಿಷಯಗಳ ಮೇಲೆ ನೆಹರೂರವರು ಘಂಟೆಗಟ್ಟಲೆ ಸ್ವಾರಸ್ಯವಾಗಿಯೂ, ಸ್ಫೂರ್ತಿದಾಯಕವಾಗಿಯೂ ಮಾತನಾಡುತ್ತಿದ್ದರು. ನೆಹರೂರವರ ಭಾಷಣ ಕೇಳಿದ ಅಮೇರಿಕನ್ನರಲ್ಲಿ ಯಾವುದೋ ಒಂದು ನವ ಚೈತನ್ಯ ಮೂಡುತ್ತಿತ್ತು.



ಮೂರನೆಯದಾಗಿ ನೆಹರೂರವರ ಲೇಖನಗಳ ಪ್ರಭಾವ. ಪ್ರತಿಯೊಬ್ಬ ಅಮೇರಿಕನ್ನನೂ ನೆಹರೂರವರ ಬರವಣಿಗೆಗಳನ್ನು ಬಹು ಶ್ರದ್ಧೆಯಿಂದ ಓದುತ್ತಾನೆ; ಅರ್ಥಮಾಡಿಕೊಳ್ಳುತ್ತಾನೆ. ಹೀಗಾಗಿ ನೆಹರೂರವರ ಸಂಪರ್ಕ ಬಹಳ ವರ್ಷಗಳಿಂದಲೂ ಇದ್ದೇ ಇತ್ತು. ಅನೇಕರು ನೆಹರೂರವರನ್ನು ಖುದ್ದಾಗಿ ನೋಡದಿದ್ದರೂ, ಅವರ ಗ್ರಂಥಗಳನ್ನು ಓದಿ ತಲೆದೂಗಿದ್ದರು. ಅವರನ್ನು ಆಶ್ಚರ್ಯಗೊಳಿಸಿದ ಅದ್ಭುತ ಸಂಗತಿಯೆಂದರೆ ನೆಹರೂರವರನ್ನು ಬಹುಕಾಲ ಬ್ರಿಟಿಷರು ಬಂಧನದಲ್ಲಿಟ್ಟಿದ್ದು. 'ಇಂಥ ದೇವದೂತನನ್ನು ಬ್ರಿಟಿಷರು ಅನೇಕ ವರ್ಷಗಳ ಕಾಲ ಬಂಧನದಲ್ಲಿಟ್ಟಿದ್ದರಲ್ಲಾ!' ಎಂದು ಮರುಗುತ್ತಾರವರು. ನೆಹರೂರವರ ಆತ್ಮಕಥೆಯನ್ನೋದಿದ ಸಮಸ್ತ ಅಮೇರಿಕನ್ನರೂ ಆಶ್ಚರ್ಯಪಟ್ಟಿದ್ದಾರೆ. "ಇಂಥ ಲೋಕೈಕ ವೀರನಾದ, ತೇಜಸ್ವಿಯಾದ, ಮಹಾನಾಯಕನಾದ ನೆಹರೂರವರನ್ನು ಬ್ರಿಟಿಷ್ ಅಧಿಕಾರಿಗಳು ಅದೆಷ್ಟು ದರ್ಪದಿಂದ ಕಂಡಿದ್ದರು! ಎಷ್ಟು ಬಾರಿ ಜೈಲಿಗೆ ಕಳುಹಿಸಿದ್ದರು" ಎಂಬ ಉದ್ಗಾರಗಳು ಪ್ರತಿಯೊಬ್ಬನ ಬಾಯಿಂದಲೂ ಹೊರಡುತ್ತಿದ್ದವು. ಕೆಲವರು ನೆಹರೂರವರನ್ನು "His Excellency the Prime-minister" ಎಂದು ಕರೆದರೆ, ಮತ್ತೆ ಕೆಲವರು "Prince Nehru" ಎಂದು ಕರೆಯುತ್ತಿದ್ದರು. ಈ ಹೊಗಳಿಕೆಯ ಮಾತುಗಳನ್ನು ಕೇಳಿ ನೆಹರೂರಿಗೆ ತುಂಬಾ ವ್ಯಸನವಾಯಿತಂತೆ. ಅದರಲ್ಲಿಯೂ "ಹಿಸ್ ಎಕ್ಸೆಲೆನ್ಸಿ" ಎಂಬುದಂತೂ ಅವರಿಗೆ ಸ್ವಲ್ಪವೂ ಹಿಡಿಸಲಿಲ್ಲ.

ವಾಷಿಂಗ್‌ಟನ್ನಿನಲ್ಲಿ ನೆಹರೂ ನಾಲ್ಕೇ ದಿನಗಳು ತಂಗುವುದಾಗಿ ಏರ್ಪಾಡಾಯಿತು. ಅಂದಿನ ಅಧ್ಯಕ್ಷರಾಗಿದ್ದ ಪ್ರೆಸಿಡೆಂಟ್ ಟ್ರೂಮನ್‌ರವರ ಸ್ವಗೃಹ ಬ್ಲೇರ್‌ಹೌಸ್‌ನಲ್ಲಿಯೇ ಬಿಡಾರ. ಆ ನಾಲ್ಕು ದಿನಗಳಲ್ಲಿ ಬಿಡುವಿಲ್ಲದ ಕಾರ್ಯಕ್ರಮಗಳು. ಜಾರ್ಜ್ ವಾಷಿಂಗ್‌ಟನ್, ಅಬ್ರಹಾಂ ಲಿಂಕನ್ ಮುಂತಾದವರ ಸ್ಮಾರಕಗಳಿಗೆ ಭೇಟಿ, ರಾಷ್ಟ್ರೀಯ ಕಲಾಕೇಂದ್ರಕ್ಕೆ ಭೇಟಿ, ಪತ್ರಿಕಾ ಕರ್ತರ

(ಪುಟ ಹನ್ನೆರಡು ನೋಡಿರಿ)

ಕೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¼%ರ ವರೆಗಿನ ಬಡ್ಡಿ ನೀಡಲಾಗುವುದು.

5 ವರ್ಷ ವ ಅವುಗಳಿಗೆ ಮೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6¼%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
Principal Court.
O. S. 543/1964

ಬಾಳಪ್ಪ ರೈ — ವಾದಿ.
ಚನ್ನಮ್ಮ ಕೂಡಾ 16 ಜನರು
— ಪ್ರತಿವಾದಿರು.

15ನೆ ಪ್ರತಿವಾದಿ ವಾಸಪ್ಪ—11ನೇ ಪ್ರತಿವಾದಿ ಕಾವೇರಿ ಹೆಂಗಸಿನ ಮಗ—ಪುತ್ತೂರು ತಾಲ್ಲೂಕು ಬನ್ನೂರು ಗ್ರಾಮದ ಕೆಳಗಿನ ಮನೆ ಎಂಬಲ್ಲಿ Post ಬನ್ನೂರು ಇವರಿಗೆ—

ವಾದಿಯು ಪ್ರತಿವಾದಿರಿಂದ ಬಹ ಆ್ಯಪಜು ಗಳ ವಸೂಲಿಗೆ ಮಾಡಿದ ದಾವೆಯಲ್ಲಿ ಕೃಪೇತು ನೋಟೀಸಿನ ವ್ಯಾದೆ ತಾ. 11-3-65ಕ್ಕೆ ಇಟ್ಟಿರುತ್ತದೆ—ಆ ವ್ಯಾದೆಗೆ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ಈ ಕೋರ್ಟು ಮುಂದೆ ತಪ್ಪದೆ ಹಾಜರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಪ್ರತಿವಾದಿನ್ನು ಗೈರುವಾಯಿ ಎಂತ ಮಾಡಿ ಮುಂದಿನ ತಸ್ತಿಯಿಂದ ಈ ದಾವೆಯನ್ನು ತೀರ್ಮಾನಿಸಲಾಗುವದು ಎಂತ ಈ ಕೋರ್ಟು R. I. A. 131/65ನೇ ಅರ್ಜಿಯ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

B. Chidananda Rao,
Pleader for Plaintiff

ಪುತ್ತೂರು, ದ. ಕ. ತಾ. 28-1-1965.

ಸಮಯೋಚಿತ ಸಲಹೆ

ಆಹಾರ ಸಮಸ್ಯೆ—ಅದಕ್ಕೆ ಪರಿಹಾರ

ಲೇಖಕರು: ಶ್ರೀ ಎಂ. ವಿ. ಪಡಿಯಾರ್, ಸಿ.ಎ.ಐ.ಐ.ಬಿ; ಮಣಿಪಾಲ

ನಮ್ಮ ದೇಶದ ಆಹಾರ ಪರಿಸ್ಥಿತಿಯು ಸುಧಾರಿಸುವ ಚಿಹ್ನೆಗಳೇನೂ ಕಂಡು ಬರುವುದಿಲ್ಲ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಮ್ಮ ಸರ್ವಶಕ್ತಿ ಸಾಮರ್ಥ್ಯಗಳನ್ನು ಇದಕ್ಕಾಗಿ ವಿನಿಯೋಗಿಸಿ, ಉತ್ಪಾದಕರು, ವ್ಯಾಪಾರಿಗಳು, ಮಿಲ್ಲುಗಳ ಮಾಲಕರು ಹಾಗೂ ಬಳಕೆದಾರರಲ್ಲಿ ವಿಶ್ವಾಸವನ್ನು ಮೂಡಿಸಿ, ತಾವು ಈ ಭೀಕರ ಸಮಸ್ಯೆಯನ್ನು ಎದುರಿಸುವುದಕ್ಕೆ ಕಂಕಣ ಬದ್ಧರಾಗಿದ್ದೇವೆ ಎಂಬ ಭಾವನೆಯನ್ನುಂಟು ಮಾಡದಿದ್ದರೆ, ಆಹಾರ ಸಮಸ್ಯೆಯು ತೀರಾ ಬಿಗಡಾಯಿಸಿ, ಸರಕಾರದ ಹತೋಟಿ ತಪ್ಪಿ ದೇಶದಲ್ಲೆಲ್ಲ ಕೋಲಾಹಲವನ್ನೆಬ್ಬಿಸಬಹುದು. ಚೀನೀ ಆಕ್ರಮಣದ ಬೆದರಿಕೆ, ಗಗನ ಮುಟ್ಟುತ್ತಿರುವ ಬೆಲೆಗಳು, ಆಹಾರದ ಅಭಾವ, ಬೆಳೆಯುತ್ತಲೇ ಇರುವ ಜನಸಂಖ್ಯೆ ಇವೆಲ್ಲವುಗಳಿಗಿಂತ ಮೇಲಾಗಿ ಸರಕಾರದ ಧೋರಣೆಗಳು ಹಾಗೂ ಆಡಳಿತದಲ್ಲಿ ಜನತೆಗಿರುವ ಅತೃಪ್ತಿ ಮತ್ತು ಅಸಮಾಧಾನಗಳನ್ನು ಕೂಡಾ ದೇಶದ ಇಂದಿನ ಪರಿಸ್ಥಿತಿಯಲ್ಲಿ ಕಡೆಗಣಿಸಲು ಸಾಧ್ಯವಿಲ್ಲ.

ಆದುದರಿಂದ ಇಂದು ಇಡೀ ದೇಶಕ್ಕೆ ಅನ್ವಯವಾಗುವ ಒಂದು ರಾಷ್ಟ್ರೀಯ ಆಹಾರ ಧೋರಣೆಯನ್ನು ಕೇಂದ್ರ ಸರಕಾರವು ರೂಪಿಸಬೇಕು. ಈ ರಾಷ್ಟ್ರೀಯ ಆಹಾರ ಧೋರಣೆಗೆ ದೇಶದ ಎಲ್ಲಾ ಪ್ರಾಂತ್ಯಗಳೂ, ರಾಷ್ಟ್ರೀಯ ಹಿತ ದೃಷ್ಟಿಯಿಂದ ಹಾಗೂ ನಲ್ವತ್ತೈದು ಕೋಟಿ ಪ್ರಜೆಗಳ ಒಳಿತಿನ ದೃಷ್ಟಿಯಿಂದ ತಮ್ಮ ಸ್ವಾರ್ಥವನ್ನು ಮರೆತು ಬದ್ಧವಾಗಬೇಕು. ಪ್ರತಿಯೊಂದು ಪ್ರಾಂತ್ಯವೂ ತನಗೆ ಸರಿ ಕಂಡಂತೆ ಮತ್ತು ತನ್ನ ಪ್ರಾಂತ್ಯಕ್ಕೆ ಹಿತಕಾರಿಯಾಗುವಂತೆ ತನ್ನದೇ ಆದ ಆಹಾರ ಧೋರಣೆಯನ್ನು ರೂಪಿಸುವುದರಲ್ಲಿ ಅರ್ಥವಿಲ್ಲ. ಇದರಿಂದ ನರೆಯ ರಾಜ್ಯಗಳ ಮೇಲೆ ಆಗುವ ಪರಿಣಾಮವೆಂತಹುದು, ಕಷ್ಟಗಳೇನು ಎಂಬುದನ್ನು ಈ ಸಂದರ್ಭ ಮನವರಿಕೆ ಮಾಡಿಕೊಳ್ಳುವುದು ಅಗತ್ಯ. ಆಹಾರ ಸಮಸ್ಯೆಯನ್ನು ಎದುರಿಸಲು ಕೈಕೊಳ್ಳಬೇಕಾದ ಕಾರ್ಯಗಳೆಲ್ಲವೂ ಇಡೀ ರಾಷ್ಟ್ರವನ್ನು ಒಂದು ಘಟಕವಾಗಿಟ್ಟುಕೊಂಡು ಆಚರಣೆಗೆ ಬರಬೇಕು. ದೇಶದಲ್ಲಿ ಸಿಗುವ ಆಹಾರಧಾನ್ಯವನ್ನು ದೇಶದ ಎಲ್ಲಾ ಜನರಿಗೆ ಯೋಗ್ಯ ರೀತಿಯಲ್ಲಿ ವಿತರಣೆ ಮಾಡುವುದು ಸರಕಾರಗಳ ಕರ್ತವ್ಯ. ಈ ರೀತಿ ರಾಷ್ಟ್ರವನ್ನು ಒಂದು ಘಟಕವನ್ನಾಗಿಟ್ಟುಕೊಳ್ಳುವುದು ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದಲೂ ಹಿತಕಾರಿ.

ಇತ್ತೀಚೆಗೆ ಸ್ಥಾಪಿಸಲ್ಪಟ್ಟ 'ಫುಡ್ ಕಾರ್ಪೊರೇಶನ್ ಆಫ್ ಇಂಡಿಯಾ'ವು ಈ ಮೇಲಿನ ಧೋರಣೆಯಿಂದಲೇ ರೂಪುಗೊಂಡಂತೆ ಕಾಣುತ್ತದೆ. ಇದು ಒಂದು ಪರಿಣಾಮಕಾರಿ ಹೆಜ್ಜೆಯೂ ಹೌದು. ಇದರ ಸ್ಥಾಪನೆ ಜನ ಸಾಮಾನ್ಯರಲ್ಲಿ ಆಶೆಯನ್ನು ತುಂಬಿಸಿ, ಅವರು ಸ್ವಲ್ಪವಾದರೂ ಸಮಾಧಾನ ಪಡುವಂತೆ ಮಾಡಿದೆ. ಈ ಕಾರ್ಪೊರೇಶನಿನ ರಚನೆ ಈಗ ಆಗುವ ಬದಲು ಕ್ರೊಲಿಗೆ ಆರು ತಿಂಗಳ ಮೊದಲೇ ಆಗಿದ್ದರೆ, ನಾವು ಆಹಾರ ಪರಿಸ್ಥಿತಿಯಲ್ಲಿ ಗಣನೀಯವಾದ ಸುಧಾರಣೆಯನ್ನು ನಿರೀಕ್ಷಿಸಬಹುದಿತ್ತು. ಆಹಾರ ಧೋರಣೆಯ ಕುರಿತು ಇಂದು ಇರುವ ಗಲಿಬಿಲಿ, ಅನಿಶ್ಚಿತತೆ ಹಾಗೂ ತೊಂದರೆಗಳು ಸ್ವಲ್ಪವಾದರೂ ಕಡಿಮೆಯಾಗಬಹುದಿತ್ತು. ಆಹಾರ ಕಾರ್ಪೊರೇಶನಿಗೆ ವಿಶೇಷವಾದ ಅಧಿಕಾರವನ್ನು ಕೊಡುವಂತೆ ಮಾಡುವುದಗತ್ಯ. ಆಹಾರಧಾನ್ಯ ಸಂಗ್ರಹ, ದಾಸ್ತಾನು ಮಾಡುವಿಕೆ, ಸಮಾನವಾದ ವಿತರಣೆ ಮತ್ತು ವಿದೇಶಗಳಿಂದ ಆಹಾರ ಧಾನ್ಯಗಳ ಆಮದು ಮಾಡುವುದು ಇತ್ಯಾದಿ ಕಾರ್ಯಗಳನ್ನು ವಹಿಸಿಕೊಟ್ಟು, ಸರಕಾರೀ ಯಂತ್ರಗಳ ಮೂಲಕ ಈ ಕಾರ್ಯವಾಗುವಂತೆ ಮಾಡಿ ಇಂದಿನ ಆಹಾರ ಅಭಾವವನ್ನು ನೀಗಿಸುವ ಹೊಣೆಗಾರಿಕೆ ಅದರ ಮೇಲಿರಬೇಕು.

ದೇಶದಲ್ಲಿ ಸಂಗ್ರಹವಿರುವ ಸಮಸ್ತ ಆಹಾರಧಾನ್ಯವೂ ಕಾರ್ಪೊರೇಶನಿನ ವಶವಿದ್ದು, ಇದನ್ನು ಜನತೆಯ ಪರವಾಗಿ ಅದು ಇರಿಸಿಕೊಳ್ಳಬೇಕು. ಆಹಾರ ಕಾರ್ಪೊರೇಶನು ಯಾವ ಉದ್ದೇಶದಿಂದ ಸ್ಥಾಪಿತವಾಗಿದೆಯೋ, ಆ ಘನ ಉದ್ದೇಶವು ಕೈಗೂಡುವಂತೆ, ಎಲ್ಲಾ ರಾಜ್ಯ ಸರಕಾರಗಳ ಆಹಾರದ ಕುರಿತಾದ ಧೋರಣೆಯಲ್ಲಿ ಏಕರೂಪತೆಯಾಗುವಂತೆ ಕಾರ್ಪೊರೇಶನು ಮಾಡಬೇಕು. ಪ್ರತಿಪ್ರಾಂತ್ಯದ ಆಹಾರದ ಬೇಡಿಕೆ ಎಷ್ಟು, ಆಹಾರ ಸಂಗ್ರಹ ಕಾರ್ಯದ ಕುರಿತಾಗಿ ವಿವಿಧ ಪ್ರಾಂತ್ಯಗಳು ಹೊರಡಿಸಿರುವ ಆಜ್ಞೆ ಎಂತಹುದು, ಆಹಾರ ಧೋರಣೆಯನ್ನು ಯಾವ ರೀತಿಯಲ್ಲಿ ರೂಪಿಸಲಾಗುತ್ತಿದೆ, ಎಂಬುದನ್ನು ಕಾರ್ಪೊರೇಶನು ತಿಳಿದು ಏಕರೂಪತೆಯನ್ನು ಸಾಧಿಸಬೇಕು. ಈ ರೀತಿ ಏಕರೂಪದ ಧೋರಣೆಯನ್ನು ಹಾಗೂ ಕ್ರಮಗಳನ್ನು ರೂಪಿಸುವುದರಿಂದ ಇಂದು ಹಬ್ಬಿರುವ ಸಂಶಯದ ವಾತಾವರಣ ಹಾಗೂ ಗಲಿಬಿಲಿಗಳು ದೂರವಾಗುತ್ತವೆ. ಆಹಾರದ ಸಮಸ್ಯೆಯನ್ನು ಎದುರಿಸಲು ಪರಿಣಾಮಕಾರಿಯಾದ ಕಾರ್ಯವನ್ನು ಕೈಗೊಂಡಂತಾಗುತ್ತದೆ.

ರಾಷ್ಟ್ರೀಯ ಮಟ್ಟದ ಆಹಾರಧೋರಣೆಯ ಕುರಿತು ಜನರಿಗೆ ತಿಳುವಳಿಕೆ ಕೊಟ್ಟು ಅವರಲ್ಲಿದ್ದ ಸಂಶಯವನ್ನು ದೂರೀಕರಿಸ, ಬೇಕಲ್ಲದೆ, ಅವರಲ್ಲಿ ವಿಶ್ವಾಸ ಮೂಡಿಸಿ ಅವರ ಸಹಕಾರ ಹಾಗೂ ಬೆಂಬಲವನ್ನು ಪಡೆದು ಈ ಭೀಕರ ಸಮಸ್ಯೆಯನ್ನು ನಿವಾರಿಸಬೇಕು.

ಸೂಕ್ತ ಹಾಗೂ ಶಾಸ್ತ್ರೀಯವಾದ ರೀತಿಯಲ್ಲಿ ಪ್ರತಿ ಪ್ರಾಂತ್ಯದ ಆಹಾರ ಧಾನ್ಯಗಳ ಬೇಡಿಕೆ ಎಷ್ಟು ಎಂದು ತಿಳಿದು, ಅಧಿಕ ಆಹಾರ ಇರುವ ಪ್ರಾಂತ್ಯಗಳಿಂದ ಆಹಾರ ಧಾನ್ಯಗಳನ್ನು ಕೊರತೆ ಬೀಳುವ ಪ್ರಾಂತ್ಯಗಳಿಗೆ ಸಾಗಿಸಿ, ಮೊದಲೇ ದಾಸ್ತಾನು ಮಾಡಿ ಇಟ್ಟುಕೊಳ್ಳಬಹುದು.

ಸಾರ್ವಜನಿಕ ಹಾಗೂ ಖಾಸಗಿ ದಾಸ್ತಾನು ಮಳಿಗೆಗಳನ್ನು ವಶಪಡಿಸಿಕೊಂಡು, ಅವುಗಳಲ್ಲಿ ಶಾಸ್ತ್ರೀಯ ರೀತಿಯಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸಿಟ್ಟು, ಇಲಿ ಹೆಗ್ಗಣಗಳು ತಿಂದು ಹೋಗಿ, ಹುಳ-ಹುಪ್ಪಟೆಗಳು ಸೇರಿ ಆಗಬಹುದಾದ ನಷ್ಟವನ್ನು ಹೋಗಲಾಡಿಸಬಹುದು ಇದರಿಂದಾಗಿ ಅನವಶ್ಯವಾಗಿ ನಷ್ಟವಾಗುತ್ತಿರುವ ಆಹಾರ ಧಾನ್ಯ ಉಳಿದಂತಾಯಿತು

ಮೂರು ಎಕರೆಗಳಿಗಿಂತ ಅಧಿಕ ಸಾಗುವಳಿಯ ಭೂಮಿ ಇರುವ ಜಮೀನ್ದಾರರಿಂದ ಹಾಗೂ ವ್ಯವಸಾಯಗಾರರಿಂದ ಕಾರ್ಪೊರೇಶನು ಹತ್ತು, ಹದಿನೈದು ಅಥವಾ ಇಪ್ಪತ್ತು ಸೇಕಡಾದಷ್ಟು ಉತ್ಪನ್ನವನ್ನು ಖರೀದಿಸಬೇಕು. ಈ ಖರೀದಿಯನ್ನು ಆ ಜಿಲ್ಲೆಯು ಎಷ್ಟು ಅಧಿಕ ಉತ್ಪಾದನೆ ಮಾಡುತ್ತಿದೆ ಎಂಬುದನ್ನು ತಿಳಿದು, ಹೆಚ್ಚಳದ ಪ್ರದೇಶವಾಗಿದ್ದರೆ ಮಾತ್ರ ಮಾಡಬೇಕು. ಈ ಸಂಗ್ರಹವನ್ನು ಅದೇ ಜಿಲ್ಲೆಯಲ್ಲಿಟ್ಟು ಅವಶ್ಯ ಬಿದ್ದಾಗ ಉಪಯೋಗಿಸ ಬಹುದು. ಈ ರೀತಿ ಮಾಡುವುದರಿಂದ ಸರಕಾರವು ರೇಶನಿಂಗನು ಜ್ಯಾರಿ ಮಾಡದೇನೇ ಆಹಾರ ಧಾನ್ಯದ ಪೂರೈಕೆ ನೀಡಲು ಸಾಧ್ಯವಾಗುವುದು. ಈ ರೀತಿಯ ಖರೀದಿಯು ನಿಬವಾದ ಹೆಚ್ಚಳಕ್ಕಿಂತ ಹೆಚ್ಚಾಗಿದ್ದರೆ, ಆಗ ಆ ಜಿಲ್ಲೆಯಲ್ಲೇ ಅಭಾವ ಪರಿಸ್ಥಿತಿ ತಲೆದೋರುವುದು. ಆಗ ಕಾರ್ಪೊರೇಶನು ತಾನು ಸಂಗ್ರಹಿಸಿದುದನ್ನು ಪುನಃ ಹಂಚಬೇಕಾಗಿ ಬಂದು, ಅನವಶ್ಯಕವಾದ ಖರ್ಚು ಹಾಗೂ ಶಕ್ತಿಯ ಉಪಯೋಗವಾದಂತಾಗುವುದು. ಪ್ರಕೃತ ಮೈಸೂರು ರಾಜ್ಯವು ಮಿಲ್ಲಿನಲ್ಲಿರುವ ಐವತ್ತು ಸೇಕಡಾದಷ್ಟು ಅಕ್ಕಿಯ ಭತ್ತವನ್ನು ಸರಕಾರಕ್ಕೆ ಕೊಡಬೇಕೆಂದು ಹೊರಡಿಸಿರುವ ಆಜ್ಞೆಯು ದೋಷಗಳಿಂದ ಕೂಡಿದೆ. ಆದುದರಿಂದ ಅದನ್ನು ರದ್ದುಗೊಳಿಸುವುದು ಒಳ್ಳೆಯದು.

ಆಹಾರಧಾನ್ಯ ಖರೀದಿಯ ಸಲುವಾಗಿ ಕಾರ್ಪೊರೇಶನು ಉತ್ಪಾದಕರ, ಒಕ್ಕಲುಗಳ, ಕೃಷಿಕರ, ಜಮೀನ್ದಾರರ ವಶವಿರುವ ಭೂಮಿಯೆಷ್ಟೆಂಬುದನ್ನು ಪ್ಯಾನುಭಾಗರ ಮೂಲಕ ತಿಳಿದುಕೊಳ್ಳಬೇಕು. ಆಹಾರ ಧಾನ್ಯದ ಖರೀದಿಯೂ ಕೂಡಾ ಅನುಕ್ರಮವಾಗಿರಬೇಕು. ಅಂದರೆ ಮೊದಲ ಮೂರು ಎಕರೆಗೆ ವಿನಾಯತಿ; ನಂತರದ ೫೦ ಎಕರೆಗೆ ಉತ್ಪಾದನೆಯ ೧೦ ಸೇಕಡಾ; ನಂತರದ ೧೦೦ ಎಕರೆಗೆ ೧೫ ಸೇಕಡಾ; ೧೦೦ ಎಕರೆಗೂ ಮೇಲಿನವಕ್ಕೆ ೨೦ ಸೇಕಡಾ. ಈ ರೀತಿಯ ಏತ್ತುವರಿ ನಡೆಸುವುದರಿಂದ ದೋಷವನ್ನು ನಿವಾರಿಸಿದಂತಾ

(ಹನ್ನೊಂದನೇ ಪುಟ ನೋಡಿರಿ)



ಲೇಖಕರು

ಉಳಿಸುವವನ ಆಯ್ಕೆ

"ಸಿಂಡಿಕೇಟ್ ಬ್ಯಾಂಕ್"

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಠೇವಣಿಗಾರರು ಪ್ರತಿಯೊಂದು ವೃತ್ತಿಯವರೂ ಇರುತ್ತಾರೆ...... ಮತ್ತು ಪ್ರತಿಯೊಂದು ಉದ್ದೇಶಕ್ಕೂ ಉಳಿಸುತ್ತಾರೆ. ವ್ಯಕ್ತಿಗಳು ಮತ್ತು ಕುಟುಂಬಗಳು, ದೊಡ್ಡ ಮತ್ತು ಸಣ್ಣ ಠೇವಣಿಗಾರರು ಮುಂಚಿತವಾಗಿ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಅವರಿಗೆ ಅಗತ್ಯವಿರುವ ವಿಷಯಕ್ಕಾಗಿ ಉಳಿಸುತ್ತಾರೆ. ಒಂದು ಖಾತೆಯನ್ನು ತೆರೆಯುವುದರ ಮೂಲಕ ಇಲ್ಲವೆ ನಿಮ್ಮ ಲೆಕ್ಕಕ್ಕೆ ಕ್ರಮವಾಗಿ ಕೂಡಿಡುವುದರ ಮೂಲಕ ನಿಮ್ಮ ಉದ್ದೇಶಗಳನ್ನು ಸಾಧಿಸಬಹುದೆಂಬುದನ್ನು ನಿಶ್ಚಯ ಮಾಡಿಕೊಳ್ಳಿರಿ. ಏಕ ಪ್ರಕಾರವಾದ ಬಡ್ಡಿ ಪಾವತಿಯು ನಿಮ್ಮ ಲೆಕ್ಕಕ್ಕೆ ಕೂಡಿಸಲ್ಪಡುತ್ತದೆ ಮತ್ತು ನಿಮ್ಮ ತೀವ್ರ ಅಭಿವೃದ್ಧಿಗೆ ಸಹಾಯ ಮಾಡುತ್ತದೆ.

ಸಿಂಡಿಕೇಟ್ ಬ್ಯಾಂಕ್
ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ ಮಣಿಪಾಲ

........ಭಾರತದ ಬ್ಯಾಂಕಿಂಗಿನಲ್ಲಿ
ಒಂದು ಪರಿಚಯದ ಹೆಸರು

200ಕ್ಕೂ ಮಿಕ್ಕಿದ ಶಾಖೆಗಳು. 60 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ.

ಲಾಲಾಲಜಪತರಾಯ್ ಮತ್ತು ಅಣುಗುಂಡು

ಬರೆದವರು: ಶ್ರೀ ಶಿವಶಂಕರ

ಸಿಹಿ-ಕಹಿಗಳ ಸಮ್ಮಿಶ್ರಣದ ಪ್ರಜಾಪ್ರಭುತ್ವ ದಿನಾಚರಣೆಯ ಕಾರ್ಯಕ್ರಮಗಳು ಕೊನೆಗೊಂಡಾಗ ಹುತಾತ್ಮ ಲಾಲ ಲಜಪತರಾಯ್‌ಯವರ ಜನ್ಮ ಶತಮಾನೋತ್ಸವದ ತಯಾರಿಗೆ ಆರಂಭವಾಯಿತು. ರಾಷ್ಟ್ರಾಧ್ಯಕ್ಷ ಹಾಗೂ ಪ್ರಧಾನಿಯವರನ್ನೊಳಗೊಂಡಿರುವ ಮಹಾಸಮಿತಿಯು ಉತ್ಸವ ಹಾಗೂ ಸ್ಮಾರಕ ನಿರ್ಮಾಣಗಳಿಗೆ ಮುಂದಕ್ಕೆ ಬಂದಿರುವದು ಇದೊಂದು ಸಂತೋಷದ ಸಂಗತಿಯೇ ಇದೆ. ಇಂದು ಅವರ ಶತಮಾನೋತ್ಸವಕ್ಕೆ ವೈಶಿಷ್ಟ್ಯವಿದೆ. ಯಾಕೆಂದರೆ ಪ್ರಧಾನಿಯವರು ಅಣುಗುಂಡು ತಯಾರಿಸುವದಿಲ್ಲವೆಂದು ಹಟ ಹಿಡಿದಿರುವರು. ಇಂದು ಲಾಲಾಜೀಯವರಿರುತ್ತಿದ್ದಲ್ಲಿ ಅವರು ಏನು ಹೇಳುತ್ತಿದ್ದರೆಂಬುದನ್ನು ಶತಮಾನೋತ್ಸವದ ಸಮಯ ಆಲೋಚಿಸಬಹುದು. ಆಲೋಚನೆಯ ಕಟ್ಟಡವನ್ನು ಕಲ್ಪನಾ ಪಂಚಾಂಗದ ಮೇಲೆ ಕಟ್ಟಬೇಕಾಗಿಲ್ಲ. ಆದರೆ—ಹೋದರೆ ಕಂಬಗಳ ಆಧಾರ ಅದಕ್ಕೆ ಬೇಕಾಗಿಲ್ಲ. ಲಾಲಾಜೀಯವರ ಜೀವನ ಚರಿತ್ರೆಯತ್ತ ದೃಷ್ಟಿ ಹಾಯಿಸಿದಾಗ ಅದು ಗೊತ್ತಾಗುತ್ತದೆ.

ಮೋಹನದಾಸ ಕರಮಚಂದ ಗಾಂಧಿಯವರು ಆಗ ಮಹಾತ್ಮ ಗಾಂಧೀಜೀ ಆಗಿರಲಿಲ್ಲ. ಬಾಲ-ಪಾಲ-ಲಾಲ ತ್ರಿಮೂರ್ತಿಗಳ ಹೆಸರು ಆಗ ಭಾರತೀಯರಿಗೆ ಬಹು ಚಿರಪರಿಚಯದ್ದಾಗಿತ್ತು. ಅದೊಂದು ಪ್ರೇರಣಾದಾಯಿ ನಾಮೋಚ್ಚಾರಣೆಯಾಗಿತ್ತು. ಬಾಲ ಗಂಗಾಧರ ಟಿಳಕರು "ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು" ಎನ್ನುವದನ್ನು ಪ್ರತಿಯೊರ್ವ ಭಾರತೀಯನು ಉಚ್ಚರಿಸಿ, ಅದಕ್ಕನುಸಾರವಾಗಿ ವರ್ತಿಸಬೇಕೆಂದು ಕರೆ ಇತ್ತಿದ್ದರು. ಸ್ವಾತಂತ್ರ್ಯ ಹಾಗೂ ಸ್ವರಾಜ್ಯದ ಸ್ಪಷ್ಟ ಚಿತ್ರವನ್ನು ಆಗ ಲಾಲಾಜೀಯವರು ಭಾರತೀಯರ ಮುಂದಿಕ್ಕಿಟ್ಟರು. ಗಾಂಧೀಜೀಯವರಿಂದರೋ ಅದೇ ಸ್ವದೇಶೀ ಚಳುವಳಿಯನ್ನು ಮುಂದರಿಸಿದರು. ಸ್ವದೇಶೀ ಚಳುವಳಿ ಅಣುಗುಂಡಿಗೂ ಅನ್ವಯಿಸುವದರಲ್ಲಿನಿತೂ ಸಂದೇಹಕ್ಕೆಡೆಯೇ ಇಲ್ಲ.

ಪ್ರಧಾನಿಯವರು ಹಾಗೂ ರಕ್ಷಣಾ ಮಂತ್ರಿಯವರು ಹೇಳುತ್ತಿದ್ದಾರೇನೆಂದರೆ ಚೈನಾ ಅಣುಗುಂಡು ಪ್ರಯೋಗಿಸಿದಲ್ಲಿ ಅಣುಗುಂಡನ್ನಿಟ್ಟುಕೊಂಡಿರುವ ಇತರ ಪ್ರಬಲ ರಾಷ್ಟ್ರಗಳು ಸುಮ್ಮನಿರುವದಿಲ್ಲ; ಅವು ನಮ್ಮ ನೆರವಿಗೆ ನಿಧಾನಿಸದೆ ಧಾವಿಸಿ ಬರುತ್ತವೆಂದು. ಲಾಲಾಜೀಯವರಿಗೆ ಅಂತಹ ಮಾತುಗಳ ಮೇಲೆ ಒಂದಿನಿತೂ ಪ್ರಿಯವಿರುತ್ತಿದ್ದಿಲ್ಲ. ಅದನ್ನು ಅವರು ಆಮೂಲಾಗ್ರವಾಗಿ ಖಂಡಿಸುತ್ತಿದ್ದರು. ಅದಕ್ಕೆ ಉತ್ತಮ ಉದಾಹರಣೆಯೆಂತಿದೆ—ಖಿಲಾಫತ್ ಚಳುವಳಿ. ಬ್ರಿಟಿಷರು ಖಲೀಫನ ಅಧಿಕಾರವನ್ನು ಕಸಿದುಕೊಂಡು ಅವನನ್ನು ಮೂಲೆಗೆ ತಳ್ಳಿದಾಗ ಮಹಮ್ಮದೀಯರ ಮನಸ್ಸನ್ನೆಳೆದುಕೊಳ್ಳಲು ಸ್ವಾತಂತ್ರ್ಯ ಚಳುವಳಿಯ ಪ್ರಮುಖರು ಇನ್ನೊಂದು ಚಳುವಳಿಗೆ ಬೆಂಬಲ ನೀಡಿದ್ದರು. ಭಾರತದ ಹೊರಗೆ ನಡೆದ ಘಟನೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಡುತ್ತಿದ್ದ ಬೆಂಬಲ ಸೂಚಿಸಿದರು. ಅದನ್ನು ಲಾಲಾಜೀಯವರು ಖಂಡಿಸಿದರು. ಮತೀಯ ಮಂಟಪದ ಮೇಲೆ ಆಡುತ್ತಿರುವವರ ಮನಸ್ಸು ಅವರಿಗೆ ಚೆನ್ನಾಗಿ ಗೊತ್ತು. ಖಲೀಫನನ್ನು ಬ್ರಿಟಿಷರು ಗದ್ದುಗೆಯಲ್ಲಿ ಕುಳ್ಳಿರಿಸಿದರೆ ತಕ್ಷಣ ಮತೀಯ ಚಳುವಳಿಗಾರರು ಚಳುವಳಿಯನ್ನು ನಿಲ್ಲಿಸಿ ಬಿಡುತ್ತಾರೆ. ಅವರನ್ನು ನಂಬಲು ಸಾಧ್ಯವಿಲ್ಲ. ಆಗ ಅದು ಅನೇಕ ಕಾಂಗ್ರೆಸ್ಸಿಗರಿಗೇನೇ ಹಿತವಾಗಲಿಲ್ಲ. ಅವರು ಹಿಂದಿನಿಂದ ಲಾಲಾಜೀಯವರನ್ನು ಟೀಕಿಸುತ್ತಿದ್ದರು. ಆದರೆ, ಅನಂತರ ಅವರ ಮಾತಿನ ಸತ್ಯಾಸತ್ಯತೆ ಸ್ಪಷ್ಟವಾಗಿ ತೋರಿ ಬಂದಾಗ ಅವರು ಮುಖ ಕೆಳಗಿಡಬೇಕಾಯಿತು. ಖಲೀಫನಿಗೂ ಬ್ರಿಟಿಷ್ ಸಾಮ್ರಾಜ್ಯ ಶಾಹಿಗೂ ಒಪ್ಪಂದವಾದೊಡನೆ ಮಹಮ್ಮದೀಯರು ಭಾರತದ ಸ್ವಾತಂತ್ರ್ಯ ಚಳುವಳಿಯನ್ನು (ಹೆಚ್ಚಿನವರು) ಮರೆತು ಬಿಟ್ಟರು. ಹಿಂದೂಸ್ಥಾನದ ಸ್ವಾತಂತ್ರ್ಯದ ಬದಲು ಅವರು ಪಾಕಿಸ್ಥಾನ ನಿರ್ಮಾಣಕ್ಕೆ ಸೊಂಟ ಕಟ್ಟಿದರು. ಇಂತಹದ್ದೇ ಇನ್ನೊಂದು ಘಟನೆ ಆಗಲೇ ಕಮ್ಯೂನಿಸ್ಟರ ಚರಿತ್ರೆಯಲ್ಲೂ ನಡೆದಿರುತ್ತದೆ. ರಷ್ಯಾವು ಬ್ರಿಟನ್ನಿಗೆದುರಾಗಿ ಹೋರಾಡುತ್ತಿದ್ದಾಗ ಆಗಿನ ಯುದ್ಧವನ್ನು ಜನತಾ ಯುದ್ಧವೆನ್ನುತ್ತಿದ್ದ ಕಮ್ಯೂನಿಸ್ಟರು, ರಷ್ಯಾ—ಬ್ರಿಟನ್ ಒಪ್ಪಂದ ಮಾಡಿಕೊಂಡರೆ ತಮ್ಮ ಬಣ್ಣವನ್ನು ಬದಲಾಯಿಸಿದರು. ಈ ಎರಡು ದುಶ್ಶಕ್ತಿಗಳಲ್ಲೂ ರಾಷ್ಟ್ರೀಯ ಮನೋಭಾವನೆಯ ಬರಗಾಲವಿದ್ದುದರಿಂದ ಹಾಗೆ ನಡೆಯಿತು. ಅಪ್ರತಿಮ ರಾಷ್ಟ್ರಭಕ್ತ ಲಾಲಾಜೀಯವರಿಗೆ ಅದರ ಸುಳಿವು ಹತ್ತಿತು. ಮಿಕ್ಕವರು ಮೃಗ ಮರೀಚಿಕೆಯ ಹಿಂದುಗಡೆ ಓಡಿದರು. ಲಾಲಾಜೀಯವರ ಆ ಮಾತು ಇಂದೂ ಭಾರತೀಯರಿಗೆ ಎಚ್ಚರಿಕೆ ಕೊಡುತ್ತಿದೆ. ಖಲೀಫ ಸಹಾಯ ಮಾಡುತ್ತಾನೆ, ರಷ್ಯಾ ನೆರವು ನೀಡುತ್ತದೆ...ಎಲ್ಲಾ ಗಾಳಿ ಗೋಪುರವಿದೆ. ಭಾರತೀಯರು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕಾಗಿರುತ್ತದೆ. ಆಗ ನಮ್ಮ ಅಚಲ ವಿಶ್ವಾಸಪೂರ್ಣ ಧೈರ್ಯೋತ್ಸಾಹಗಳನ್ನು ಕಂಡು ಇತರರು ಸಹಾಯದ ಕೈಯನ್ನು ಮುಂದಕ್ಕೆ ನೀಡಿದಲ್ಲಿ ಅದನ್ನು ಸ್ವೀಕರಿಸಬಹುದು; ಅಷ್ಟೇ ಸಹಾಯದ ಕೈಗಾಗಿ ರಾಷ್ಟ್ರದಿಂದ ರಾಷ್ಟ್ರಕ್ಕೆ ಅಲೆಯುವದು ಅವಿವೇಕಿಗಳ ಲಕ್ಷಣವಿದೆ. ಲಾಲಾಜೀಯವರು ಇಂದು ಇರುತ್ತಿದ್ದಲ್ಲಿ ಅದೇ ಮಾತನ್ನು ಹೇಳುತ್ತಿದ್ದರು.

ಅವರ ಸ್ವದೇಶಿ ಚಳುವಳಿ ಶುದ್ಧ ರಾಜಕೀಯ ಚಳುವಳಿಯಾಗಿತ್ತು. ಕ್ರಿಶ್ಚಿಯನ್ ಮತಪ್ರಸಾರಕರ ಶಾಲೆ-ಕಲಾ

(ಹತ್ತನೇ ಪುಟ ನೋಡಿರಿ)

12

12 ವರ್ಷಗಳಲ್ಲಿ

12 ರಷ್ಟು ಹೆಚ್ಚು

ಡಿಪಾಜಿಟ್‌ಗಳ ಬೆಳವಣಿಗೆ—

ಕೆನರಾ ಬ್ಯಾಂಕಿನ ಡಿಪಾಸಿಟ್‌ಗಳು 12 ವರ್ಷಗಳಲ್ಲಿ 12 ರಷ್ಟು ಹೆಚ್ಚಿವೆ. 1952ರ ಅಂತ್ಯದಲ್ಲಿ ಡಿಪಾಸಿಟ್‌ಗಳು 7.32 ಕೋಟಿ ರೂ. ಗಳಷ್ಟಿದ್ದವು. 1964ರ ಅಂತ್ಯದಲ್ಲಿ ಡಿಪಾಸಿಟ್‌ಗಳು **88 ಕೋಟಿ ರೂ. ಗಳಿಗೂ ಮೀರಿವೆ.**

ದೇಶದಾದ್ಯಂತ ಬ್ಯಾಂಕಿನ ಲಕ್ಷಾಂತರ ಮಂದಿ ಠೇವಣಿದಾರರು ಮತ್ತು ಗ್ರಾಹಕರು ಈ ಬ್ಯಾಂಕಿನಲ್ಲೂ, ಅದರ ಆಡಳಿತವರ್ಗದವರ ಮತ್ತು ನೌಕರರ ಪ್ರಾಮಾಣಿಕತೆಯಲ್ಲೂ ಇಟ್ಟಿರುವ ಅಪಾರ ನಂಬಿಕೆಯೇ ಈ ಅಭಿವೃದ್ಧಿಗೆ ಕಾರಣ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ : 1906)

ರಿಜಿಸ್ಟರ್ಡ್ ಆಫೀಸ್ : ಮಂಗಳೂರು ● ಆಡಳಿತ ಕಛೇರಿ, ಬೆಂಗಳೂರು

ವೇಗ ಗತಿಯಲ್ಲಿ ಬೆಳೆಯುತ್ತಿರುವ ಭಾರತೀಯ ಬ್ಯಾಂಕು

ವಿಶ್ವದಾದ್ಯಂತ ಪ್ರತಿನಿಧಿಗಳು ● ಭಾರತದಲ್ಲಿ 235ಕ್ಕೂ ಹೆಚ್ಚಿನ ಶಾಖೆಗಳು

ಭಾರತದ ಬೃಹತ್ ಶಕ್ತಿ ಸ್ಥಾವರ ಶರಾವತಿ

ಔದ್ಯಮಿಕ ಪ್ರಗತಿಯತ್ತ ಮುನ್ನಡೆಯುತ್ತಿರುವ

ಜನವರಿ ೨೪ನೇ ರವಿವಾರದ ಶುಭದಿನದಂದು ಮೈಸೂರು ರಾಜ್ಯದ ಭಾಗ್ಯದ ಬಾಗಿಲು ತೆರೆದ ಪರ್ವದಿನ. ನಮ್ಮ ಪ್ರಧಾನ ಮಂತ್ರಿ ಶ್ರೀ|| ಲಾಲಬಹದೂರ ಶಾಸ್ತ್ರಿಗಳು ಶರಾವತಿ ವಿದ್ಯುತ್ ಯೋಜನೆಯ ಅಂಗವಾದ ೮೯,೧೦೦ ಕಿಲೋವಾಟ್ ಶಕ್ತಿಯನ್ನು ಉತ್ಪಾದಿಸುವ ಯಂತ್ರವನ್ನು ಉದ್ಘಾಟಿಸಿ ಮೈಸೂರು ರಾಜ್ಯದ ಭಾಗ್ಯದ ಬಾಗಿಲು ತೆರೆದರು. ಅಮೇರಿಕದ ಆರ್ಥಿಕ ನೆರವಿನಿಂದ ಕೈಗೊಳ್ಳಲಾಗಿರುವ ಈ ಬೃಹತ್ ಯೋಜನೆಯು ಭಾರತದಲ್ಲೇ ಅತಿದೊಡ್ಡದು. ಈಗ ಕಾರ್ಯಾರಂಭಿಸಿರುವ ಮೊದಲನೆಯ ವಿದ್ಯುದುತ್ಪಾದಕದ ಜತೆಗೆ ಇನ್ನೂ ಉಳಿದ ಇಂತಹ ಒಂಭತ್ತು ಉತ್ಪಾದಕಗಳು ಪ್ರತಿ ಆರು ತಿಂಗಳಿಗೆ ಒಂದರಂತೆ ಕಾರ್ಯಾರಂಭವನ್ನು ಮಾಡಲಿವೆ. ಆಗ ಈ ಯೋಜನೆ ಸ್ವತಂತ್ರ ಭಾರತದಲ್ಲಿ ಅತಿದೊಡ್ಡದೆನಿಸಿ, ದೇಶದ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುವುದು.

ನಯನ ಮನೋಹರವಾದ ಜೋಗದ ಜಲಪಾತವನ್ನುಂಟು ಮಾಡಿರುವ ೮೨ ಮೈಲಿಗಳ ಉದ್ದದ ಶರಾವತಿಯು ಪಶ್ಚಿಮ ಘಟ್ಟದಿಂದ ಹರಿದು ಅರಬಿ ಸಮುದ್ರವನ್ನು ಸೇರುವ ಪುಟ್ಟ ನದಿ. ಈ ನದಿಯಿಂದ ಇಂತಹ ಬೃಹತ್ ಪ್ರಮಾಣದ ಪ್ರಯೋಜನವನ್ನು ಪಡೆಯಬಹುದೆಂಬುದನ್ನು ಯಾರೂ ಊಹಿಸಿರಲಿಲ್ಲ. ಅದರೆ ೧೯೧೮ರಲ್ಲಿ ಈ ನದಿಯನ್ನು ಸರ್ವೆ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳು ಈ ಪ್ರದೇಶದಲ್ಲಿ ಅಪರೂಪವಾಗಿದ್ದ ಸಮತಟ್ಟಾದ ಬಯಲೊಂದನ್ನು ಪತ್ತೆ ಮಾಡುವ ವರೆಗೂ ಈ ಯೋಜನೆಯ ಪರಿಶೀಲನೆಯ ಕಡೆಗೆ ಯಾರ ಗಮನವೂ ಹರಿದಿರಲಿಲ್ಲ.

ಶರಾವತಿ ವಿದ್ಯುದ್ಯೋಜನೆಯ ಪ್ರಥಮ ವಿದ್ಯುದುತ್ಪಾದಕವನ್ನು ಉದ್ಘಾಟಿಸಿದ ಭಾರತದ ಪ್ರಧಾನ ಮಂತ್ರಿ
ಶ್ರೀ ಲಾಲಬಹದ್ದೂರ ಶಾಸ್ತ್ರಿ

ಈ ಸರ್ವೆಗಾರರಿಬ್ಬರ ಪರಿಶೀಲನೆಯ ಪರಿಣಾಮವಾಗಿ ಈಗ ರೂಪುಗೊಂಡಿತು ಭೀಮಾಕಾರದ ಶರಾವತಿ ಯೋಜನೆ. ದೇಶದ ಔದ್ಯಮಿಕ ಪ್ರಗತಿಯ ಮೈಲುಗಲ್ಲಾಗಿ, ಶಕ್ತಿಯ ಸ್ಥಾವರವಾಗಿ ಈಗ ಮೆರೆಯುತ್ತಿದೆ ಈ ವಿದ್ಯುದ್ಯೋಜನೆ. ಇದು ದೇಶದ ಸಂಪತ್ತು, ನಾಗರಿಕರ ನಿಧಿ.

ವರ್ಷಕ್ಕೆ ೩೨೦ ಅಂಗುಲಗಳಿಗಿಂತಲೂ ಹೆಚ್ಚು ಮಳೆ ಬೀಳುವ ಮಲೆನಾಡಿನಲ್ಲಿ ಸ್ಥಾಪಿತವಾಗಿರುವ ಈ ಯೋಜನೆಯು ಆ ಪ್ರದೇಶದಲ್ಲಿ ಹಲವಾರು ಸ್ಥಿತ್ಯಂತರಗಳನ್ನುಂಟು ಮಾಡಿದೆ. ನಾನಾ ತರದ ಕಾಡು ಮೃಗಗಳ ನಿವಾಸ ಸ್ಥಾನವಾಗಿದ್ದ ಈ ಪ್ರದೇಶದಲ್ಲಿ ಇಂದು ಬೃಹದಾಕಾರದ ಜಲ ವಿದ್ಯುದುತ್ಪಾದಕಗಳು ಎದ್ದು ನಿಂತು, ಅದೀಗ ಒಂದು ಪ್ರಗತಿಯತ್ತ ಸಾಗುತ್ತಿರುವ ಪ್ರದೇಶವಾಗಿ ಕಂಗೊಳಿಸುತ್ತಿದೆ.

ಈ ಪ್ರದೇಶದ ಅಭಿವೃದ್ಧಿಯು ತೀವ್ರವಾಗಿ ನಡೆಯುತ್ತಿದೆ. ಇದು ಜಗತ್ತಿನ ಎಲ್ಲಾ ದೇಶಗಳ ಪ್ರವಾಸಿಗರ ಚಿತ್ತಾಕರ್ಷಕ ತಾಣವಾಗುವಂತೆ ಎಲ್ಲಾ ತರದ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ದಟ್ಟಡವಿಯಿಂದ ತುಂಬಿರುವ ಮಲೆನಾಡು ಮೈಸೂರಿನ ಅತ್ಯಂತ ಸುಂದರವಾದ ಪ್ರದೇಶ. ಶರಾವತಿ ಕಣಿವೆಯು ಮಲೆನಾಡಿನ ಒಂದು ರಮಣೀಯ ಸ್ಥಳ. ಶರಾವತಿ ನದಿ ಜೋಗದ ಹತ್ತಿರ ಬೆಟ್ಟದ ಮೇಲಿಂದ ೮೨೩ ಅಡಿ ಕೆಳಗೆ ಆಳವಾದ ಕೊಳ್ಳಕ್ಕೆ ಧುಮ್ಮಿಕ್ಕಿ ಬೀಳುವ ದೃಶ್ಯವು ವರ್ಣನಾತೀತವಾದುದು. ಇಂತಹ ಪ್ರಕೃತಿ ಸೌಂದರ್ಯಕ್ಕೆ ಎಳ್ಳಷ್ಟೂ ಕೊರತೆ ಬಾರದ ರೀತಿಯಲ್ಲಿ ಶರಾವತಿ ಜಲ ವಿದ್ಯುತ್ ಯೋಜನೆಯನ್ನು ರೂಪಿಸಿರುವುದು ನಮ್ಮ ಇಂಜನಿಯರರ ಹಾಗೂ ತಂತ್ರಜ್ಞರ ಬುದ್ಧಿ ಮತ್ತೆಗೆ ಒಂದು ಜ್ವಲಂತ ನಿದರ್ಶನ.

ಶರಾವತಿ ಯೋಜನೆಯ ನಿರ್ಮಾಣ ಕಾರ್ಯವು ಒಂದು ಮಹಾ ಯಜ್ಞ. ಈ ಯಜ್ಞದಲ್ಲಿ ಪಾಲುಗೊಂಡು ಪುಣ್ಯಗಳಿಸಿದವರು ಪಂಜಾಬಿನಿಂದ ಹಿಡಿದು ಕೇರಳದ ವರೆಗಿನ ಎಲ್ಲಾ ಕಡೆಗಳ ಕುಶಲ ಹಾಗೂ ಅಕುಶಲ ಕಾರ್ಮಿಕರು. ಕಳೆದ ಆರು ವರ್ಷಗಳಿಂದ ಕಾಡಿನ ತೊಂದರೆಗಳನ್ನು ನೈಸರ್ಗಿಕ ವಿಕೋಪಗಳನ್ನು ಎದುರಿಸಿ ಅವರು ದುಡಿದಿದ್ದಾರೆ. ಯೋಜನೆಯ ಕಾರ್ಯ ಅತಿ ತ್ವರಿತ ಗತಿಯಲ್ಲಿ ಸಾಗಿದಾಗ

ಶರಾವತಿ ಯೋಜನೆಯು ಕಾರ್ಯಾರಂಭವಾದಂದಿನಿಂದ, ಬಂದ ಎಡರು ತೊಡರುಗಳನ್ನೂ, ಟೀಕೆ ಟಿಪ್ಪಣಿಗಳನ್ನೂ ದಿಟ್ಟತನದಿಂದ ಎದುರಿಸಿ ಯೋಜನೆಯು ಕಾರ್ಯಾರಂಭ ಮಾಡುವಂತೆ ಸಾಧಿಸಿದ ಮೈಸೂರು ಮುಖ್ಯಮಂತ್ರಿ
ಶ್ರೀ ನಿಜಲಿಂಗಪ್ಪನವರು

ಕೂಲಿಕಾರರ ಸಂಖ್ಯೆ ೪೦೦೦೦ದ ವರೆಗೂ ಏರಿತ್ತೆಂದರೆ ಈ ಯೋಜನೆಯ ಗಾತ್ರದ ಅರಿವಾದೀತು.

ಈ ಶರಾವತಿ ಯೋಜನೆಯು ಪೂರ್ಣಗೊಂಡಾಗ ರಾಜ್ಯದಲ್ಲಿ ವಿದ್ಯುತ್ತಿನ ಪೂರೈಕೆ ಬೇಕೆನಿಸುವಷ್ಟು ಆಗುವುದು. ಈಗಾಗಲೇ ಶರಾವತಿಯ ಶಕ್ತಿಯಿಂದ ಹಲವಾರು ಉದ್ದಿಮೆ ಹಾಗೂ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದಿಮೆದಾರರು ಮುಂದೆ ಬಂದಿದ್ದಾರೆ. ಹೆಚ್ಚಾದ ವಿದ್ಯುತ್ತನ್ನು ಬೇರೆ



ಶರಾವತಿ ಜಲವಿದ್ಯುದ್ಯೋಜನೆಯ ಪವರ್ ಹೌಸಿನ ಮುಂಭಾಗದದೃಶ್ಯ.



ಶರಾವತಿ ಯೋಜನೆಯ ಮೊದಲನೆ

ಜಲ ವಿದ್ಯುದ್ಯೋಜನೆ

ಭಾರತದ ಚರಿತ್ರೆಯಲ್ಲಿ ಒಂದು ಮೈಲಿಗಲ್ಲು!



ಲಿಂಗನಮಕ್ಕಿ ಜಲಾಶಯ.

ರಾಜ್ಯಗಳಿಗೆ ಪೂರೈಕೆ ಮಾಡುವ ಯೋಜನೆಯೂ ಇದೆ. ದೇಶದಲ್ಲೇ ಮೊತ್ತಮೊದಲು ಜಲ ವಿದ್ಯುದಾಗಾರವನ್ನ ನಿರ್ಮಿಸಿದ ಕೀರ್ತಿ ಮೈಸೂರಿಗೆ ಸಂದಿದೆ. ಅಂತೆಯೇ ದೇಶದಲ್ಲೇ ಅತಿ ಬೃಹತ್ ಪ್ರಮಾಣದ ವಿದ್ಯುದಾಗಾರವನ್ನು ಪಡೆದ ಭಾಗ್ಯವೂ ಮೈಸೂರಿನದ್ದೇ. ಇದಕ್ಕೆ ಕಾರಣ, ನಮ್ಮ ರಾಜ್ಯದ, ವಿಪುಲವಾದ ನೈಸರ್ಗಿಕ ಸಂಪತ್ತು. ಪ್ರಕೃತಿ ಮಾತೆಯು ಹರಸಿರುವ ಈ ಚೆಲುವಿನ ನಾಡು ಮೈಸೂರು ಶಕ್ತಿ ಸ್ಥಾವರಗಳಿಂದ ತುಂಬಿದ ಅಪೂರ್ವ ಪ್ರದೇಶವಾಗಿದೆ.

ಶರಾವತಿ ಯೋಜನೆಯ ನಿರ್ಮಾಣದ ಕತೆಯು ಬಹಳ ರೋಮಾಂಚನಕಾರಿಯಾದುದು. ಕಾರ್ಯಾರಂಭದಲ್ಲಿ ಎದುರಿಸಲಾದ ಅಡೆ ತಡೆಗಳು ಅನೇಕ. ಒದಗಿಬಂದ ಅಡ್ಡಿ ಆತಂಕಗಳು ವಿಪುಲ. ಕಡಿದಾದ ಗುಡ್ಡ ಬೆಟ್ಟಗಳ ಈ ಪ್ರದೇಶದಲ್ಲಿ ಸಂಪರ್ಕ ಸಾಧನದ ವ್ಯವಸ್ಥೆ ಅತಿ ಕಠಿಣತರವಾಗಿ ಪರಿಣಮಿಸಿತು. ಈ ಮಧ್ಯೆ ನಿರ್ಮಾಣಕ್ಕೆ ಅತಿ ಆವಶ್ಯವಾದ ಸಿಮೆಂಟು, ಉಕ್ಕು, ಆಸ್ಫೋಟಕಗಳ ಅಭಾವದಿಂದಲೂ ಕಾರ್ಯವು ಸ್ಥಗಿತಗೊಳ್ಳುವಂತಾಯಿತು. ಪ್ರಕೃತಿಯ ವಿಕೋಪದಿಂದ, ನೈಸರ್ಗಿಕವಾದ ತೊಂದರೆಗಳಿಂದ ಹಲವಾರು ಬಾರಿ ರಚನೆಗಳೇ ಬಿದ್ದು ಹೋದುದೂ ಉಂಟು. ಇವೆಲ್ಲ ಕಾರ್ಯಗಳ ಮಧ್ಯೆ ಲಿಂಗನಮಕ್ಕಿ ಅಣೆಕಟ್ಟಿನ ರಚನೆಯಲ್ಲೂ ಅತ್ಯಾವಶ್ಯಕವಾದ ಬದಲಾವಣೆ ಯನ್ನು ಮಾಡಬೇಕಾಯಿತು. ಹೀಗೆ, ಹಲವಾರು ಅಡ್ಡಿ ಆತಂಕಗಳನ್ನು ಎದುರಿಸಿ, ರೂಪ ತಾಳಿತು ಶರಾವತಿ ಯೋಜನೆ.

ಶರಾವತಿಯು ಮೈಸೂರಿನ ಭಾಗೀರಥಿ. ಶರಾವತಿಯ ಶಕ್ತಿ, ನಮ್ಮ ಪ್ರಾಂತದ ಮಾತ್ರವಲ್ಲ ದೇಶದ ಶಕ್ತಿ. ಈ ಶಕ್ತಿಯಿಂದ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಉದ್ದಿಮೆಗಳು ಬೆಳೆದು, ನಾವು ಔದ್ಯಮಿಕ ರಂಗದಲ್ಲಿ ಪ್ರಗತಿಯುತ್ತ ಸಾಗಬೇಕು. ಚಿಕ್ಕ ಹಾಗೂ ದೊಡ್ಡ ಉದ್ದಿಮೆಗಳು ಸ್ಥಾಪನೆಗೊಂಡರೆ, ಆಗ ಶರಾವತಿಯ ಶಕ್ತಿಯ ಸದುಪಯೋಗವಾದೀತು.

ಉದ್ಘಾಟನಾ ಸಂದರ್ಭ ಪ್ರಧಾನಿ ಶ್ರೀ ಶಾಸ್ತ್ರಿಯವರು ಹೇಳಿದಂತೆ ದೇಶದ ಅಭಿವೃದ್ಧಿಯಾಗಬೇಕಾದರೆ ಆರ್ಥಿಕ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಬೇಕಾಗಿದೆ. ಇದಕ್ಕೆ ಇಂಥಹ ಯೋಜನೆಗಳು ನೆರವಾಗುತ್ತವೆ. ಭಾರತವು ಪ್ರಗತಿಯ ಪಥದಲ್ಲಿ ಮುನ್ನಡೆಯಬೇಕಾದ ಈ ದಿನಗಳಲ್ಲಿ ನಮ್ಮ ಯೋಜನೆಗಳ ಫಲ ಜನತೆಗೆ ಲಭಿಸಿದಾಗಲೇ ಅವುಗಳ ಸಾರ್ಥಕ್ಯ. ಶರಾವತಿ ಈ ದಿಸೆಯಲ್ಲಿ ಒಂದು ಅಪೂರ್ವ ಮೈಲಿಗಲ್ಲು!



ಉತ್ಪಾದಕದ ಒಂದುನೋಟ.

ಭಾರತದ ಮೂರನೆಯ ಅಂತಾರಾಷ್ಟ್ರೀಯ ಚಲಚ್ಚಿತ್ರೋತ್ಸವವು ನವದೆಹಲಿಯಲ್ಲಿ ಜನವರಿ 8ರಿಂದ 21ರ ವರೆಗೆ ವೈಭವಯುತವಾಗಿ ನಡೆಯಿತು. ಇದರಲ್ಲಿ ಸ್ಪರ್ಧಾತೀತ ವಿಭಾಗದಲ್ಲಿ ಪ್ರದರ್ಶಿಸಲ್ಪಟ್ಟ 'ಅಮೆರಿಕಾ-ಅಮೆರಿಕಾ' ಚಿತ್ರದ ನೋಟ.

ಲಾಲಾಲಜಪತರಾಯ್ ಮತ್ತು ಅಣುಗುಂಡು

(ಏಳನೇ ಪುಟದಿಂದ)

ಶಾಲೆಗಳಿಗೆ ಹೋಗಿ ಭಾರತೀಯ ವಿದ್ಯಾರ್ಥಿಗಳು ಅಭಾರತೀಯರಾಗುತ್ತಿದ್ದು, ಭಾರತ ಮಾತೆಗೆ ದ್ರೋಹ ಬಗೆಯುತ್ತಿದ್ದುದನ್ನು ತಪ್ಪಿಸಲು ಅವರು ಅನೇಕ ಶಾಲೆ-ಕಲಾ ಶಾಲೆಗಳ ಸ್ಥಾಪನೆಗೆ ಕಾರಣಕರ್ತರಾಗಿದ್ದರು. ಅವರ ಮೇಲ್ವಿಚಾರಣೆಯೊಳಗೆ ಕೆಲವಾರು ಶಾಲೆ-ಕಲಾ ಶಾಲೆಗಳಿದ್ದುವು. ಅದೇ ರೀತಿ ಕಮ್ಯೂನಿಸ್ಟರ ಬಲೆಗೆ ಹಾಗೂ ಅಗ್ಗದ ಕ್ರಿಸ್ತೀಯ ಮತ ಪ್ರಸಾರಕರ ಬಲೆಯೊಳಗೆ ಸಿಕ್ಕಿ ಬೀಳುತ್ತಿದ್ದ ಶ್ರಮಿಕರನ್ನು ತಪ್ಪಿಸಲು ಅವರು ಶ್ರಮಿಕ ಸಂಘಕ್ಕಾಗಿ ಹೆಣಗಾಡಿರುವದನ್ನು ಶ್ರಮಿಕ ಬಂಧುಗಳು ಇಂದೂ ಮರೆತಿರುವದಿಲ್ಲ. ಇವೆಲ್ಲವುಗಳ ಪ್ರಚಾರಕ್ಕಾಗಿ ಹಾಗೂ ಬ್ರಿಟಿಷರ ಅಪಪ್ರಚಾರವನ್ನೆದುರಿಸಲು ಅವರೂ ಪತ್ರಿಕೆಗಳನ್ನು ನಡೆಸುತ್ತಿದ್ದರು. ತಮ್ಮ ಪತ್ರಿಕೆಯ ಮೂಲಕ ರಾಷ್ಟ್ರ ಜಾಗರಣೆಯ ಕಾರ್ಯವನ್ನೂ ಮಾಡುತ್ತಿದ್ದರು. ಅರ್ಥಿಕರಂಗದ ಮೇಲೂ ಅವರು ತಮ್ಮ ಕಾಲನ್ನಿಟ್ಟಿರುವರು. ಬೇಂಕ್ ಹಾಗೂ ವಿಮಾ ಸಂಸ್ಥೆಗಳನ್ನು ಅವರು ತೆರೆದಿರುವರು. ರಾಜಕೀಯ ರಂಗದಲ್ಲಿ ಅವರು ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿರುವರು. ಈ ರೀತಿ ಸರ್ವ ರಂಗಗಳಲ್ಲೂ ಭಾರತೀಯರು ಭಾರತೀಯರಾಗಿ ಎದೆ ಮುಂದಕ್ಕೆ ಮಾಡಿ, ತಲೆ ಎತ್ತಿ ನಿಲ್ಲಬೇಕೆಂದು ಅದಕ್ಕಾಗಿ ಪ್ರಯತ್ನಿಸಿದ್ದ ಲಾಲಾಜಿಯವರು, ಇಂದಿನ ನೇತಾ ವರ್ಗವು ಅಮೇರಿಕನರು ಅಥವಾ ರಷ್ಯನರು ನಮ್ಮನ್ನು ರಕ್ಷಿಸಿಯಾರೆಂದು ಹೇಳುವದನ್ನು ಕೇಳಿದರೆ ಏನೆಂದಾರು? ಲಾಲಾಜೀಯವರು ಇಂದು ಇರುತ್ತಿದ್ದಲ್ಲಿ ಬಹುಶಃ ಅಂತಹ ಹೇಡಿಗಳ ವಾಕ್ಯಗಳು ಕೇಳಿಬರುತ್ತಲಿಕ್ಕಿಲ್ಲ.

ಸ್ವದೇಶಿ ಹಾಗೂ ಸ್ವರಾಜ್ಯ ಚಳುವಳಿಯಲ್ಲಿ ಲಾಲಾಜೀಯವರು ಅಗ್ರೇಸರರಾಗಿದ್ದುದರಿಂದ ಶಸ್ತ್ರಾಸ್ತ್ರಗಳ ತಯಾರಿಯಲ್ಲೂ ಅಷ್ಟೆ. ನಮ್ಮ ದೇಶದ ರಕ್ಷಣೆಗೆ ಬೇಕಾಗಿರುವದನ್ನೆಲ್ಲಾ ಸ್ವದೇಶ ಅಥವಾ ಸ್ವರಾಜ್ಯದಲ್ಲೇ ಸಿದ್ಧಗೊಳಿಸಬೇಕೆಂಬುದು ಅವರ ಸ್ಪಷ್ಟ ಮತವಿದೆ. ಅದೇನೋ ನಿಜ. ಆದರೂ ಮಾರಕಾಸ್ತ್ರ ಅಣುಗುಂಡನ್ನು ತಯಾರಿಸಲು ಅವರು ಒಪ್ಪುತ್ತಿದ್ದರೆನ್ನುವದಕ್ಕೇನು ಆಧಾರ? ಹುತಾತ್ಮ ಲಾಲಾಜೀಯವರ ಮೇಲೆ ಮಹಾತ್ಮ ಗಾಂಧೀಜಿಯವರಿಗೆ ಗೌರವವಿತ್ತು. ಆದುದರಿಂದಲೇ ಅವರ ಸ್ವರ್ಗಸ್ಥರಾದ ಸಮಾಚಾರ ಸಿಕ್ಕಿದೊಡನೆ ಗಾಂಧೀಜಿಯವರು, "ಸ್ವಾತಂತ್ರ್ಯ ಚಳುವಳಿ ಆಕಾಶದಿಂದ ಭಾರೀ ಗ್ರಹವೊಂದು ಕೆಳಗೆ ಬಿತ್ತೆ"ಂದು ಹೇಳಿರುವರು. ಹಾಗೆಂದ ಮಾತ್ರಕ್ಕೆ ಗಾಂಧೀಜೀಯವರ ಹಾಗೆ ಲಾಲಾಜೀಯವರು ಅಹಿಂಸಾವಾದಿಗಳಾಗಿರಲಿಲ್ಲವೆನ್ನುವದು ಗಮನೀಯ ವಿಷಯವಿದೆ. ಹಾಗೆಯೇ ಅವರು ಕೇವಲ ಹಿಂಸಾವಾದಿಗಳಾಗಿಯೂ ಇರಲಿಲ್ಲ. ಅದೆಷ್ಟು ಬ್ರಿಟಿಷರ ಕೊಲೆಗಳನ್ನು ಅವರು ಮಾಡಿರುವರು? ಆದರೂ ಅವರಿಗೆ ಕ್ರಾಂತಿಕಾರಿಗಳೊಡನೆ ಸಂಪರ್ಕವಿತ್ತು. ವೀರ ಕ್ರಾಂತಿಕಾರ ಮಣಿಗಳಾದರೋ ಲಾಲಾಜಿಯವರ ಮೇಲೆ ಅಪಾರ ವಿಶ್ವಾಸ ಹಾಗೂ ಗೌರವ ಇತ್ತು. ಆದುದರಿಂದಲೇ ಅವರ ಮರಣದ ದುಃಖಪೂರಿತ ವಾರ್ತೆ ಕೇಳಿದೊಡನೆಯೇ ತರುಣ ಕ್ರಾಂತಿಕಾರರು ಒಂದೆಡೆ ಸೇರಿ, ಲಾಲಾಜಿಯವರ ಸಾವಿಗೆ ಕಾರಣನಾಗಿದ್ದ ನಗರ ರಕ್ಷಕರ ಉಪಮೇಲ್ವಿಚಾರಕ ಸ್ಯಾಂಡರ್ಸ್‌ನನ್ನು ನಡುಹಗಲಿನಲ್ಲೇ, ನಡುರಸ್ತೆಯಲ್ಲೇ ಗುಂಡಿಟ್ಟುಕೊಂದು ತಮ್ಮ ಗೌರವಾಂಜಲಿಯನ್ನು ಹುತಾತ್ಮರಿಗೆ ಅರ್ಪಿಸಿದರು, ಈ ರೀತಿ ಲಾಲಾಜೀಯವರು ಅಹಿಂಸಾ ವಾದಿಗಳಿಗೂ ಕ್ರಾಂತಿಕಾರರಿಗೂ ಬೇಕಾದವರಾಗಿದ್ದರು. ಅವರನ್ನೆಲ್ಲರೂ ಗೌರವಿಸುತ್ತಿದ್ದರು. ಭಿತ್ತಿ ಪತ್ರಿಕೆಗಳ ಮೂಲಕ ಅದನ್ನೇ ಸ್ಪಷ್ಟವಾಗಿ ಕ್ರಾಂತಿಕಾರರು ಜನತೆಗೆ ತಿಳಿಯಪಡಿಸಿರುವರು. ಅವರು ಮುಯ್ಯಿಗೆ ಮುಯ್ಯಿ ತೀರಿಸಿಕೊಂಡರು. ಭಾರತೀಯರ ರಕ್ತದ ಬೆಲೆ ಏನೆಂಬುದನ್ನು ಅವರು ಬ್ರಿಟಿಷರಿಗೆ ತಿಳಿಯಪಡಿಸಿದರು. ಅಹಿಂಸಾ ಮೂರ್ತಿಗಳಿಗೂ ರಣಮಲ್ಲರಿಗೂ ಲಾಲಾಜೀಯವರ ಮೇಲಿದ್ದ ಗೌರವ, ಅಭಿಮಾನ, ಪ್ರೀತಿ ಇತ್ಯಾದಿ ಇದರಿಂದ ಸ್ಪಷ್ಟವಾಗುತ್ತಿದೆ. ಲಾಲಾಜೀಯವರಿಗೆ ಕ್ರಾಂತಿಕಾರ ರತ್ನಗಳ ಮೇಲೆ ವಿಶ್ವಾಸ ಹಾಗೂ ಪ್ರೀತಿ ಇದ್ದರೂ ಅವರು ಅಹಿಂಸಾವಾದವನ್ನು ಹೇಡಿಗಳ ಅಸ್ತ್ರವೆಂದು ಹೀಗಳೆದಿರಲಿಲ್ಲ. ಸ್ವಾತಂತ್ರ್ಯ ಸಮರದ ಸಮಯ ಅವೆಲ್ಲವೂ ಸ್ವಾತಂತ್ರ್ಯ ಗುರಿಗೆ ಸಾಧನಗಳು ಅಷ್ಟೆ. ಸಮಯೋಚಿತ್ಯವನ್ನು ಸಾರವಾಗಿ ಅವನ್ನು ಪ್ರಯೋಗಿಸಲು ರಾಷ್ಟ್ರೀಯರಿಗೆ, ದೇಶ ಭಕ್ತರಿಗೆ ತಿಳಿದಿರಬೇಕು, ಅಷ್ಟೆ. ಮೇಲು ಕೀಳೆಂಬುದಕ್ಕೆ ಅಲ್ಲಿ ಆಸ್ಪದವೇ ಇಲ್ಲ. ಸ್ವರಾಜ್ಯ ಸಿದ್ಧಿಗಾಗಿ ಭಕ್ತಿಮಾರ್ಗವಾದರೂ ಸರಿ, ಶಕ್ತಿಮಾರ್ಗವಾದರೂ ಸರಿ. ಹಾಲು-ಜೇನು ಬೆರೆಯುವಂತೆ ಅವು ಇರಬೇಕು. ಆದರೆ ಎಲ್ಲರಿಂದಲೂ ಅದನ್ನು ಸರಿದೂಗಿಸಿಕೊಂಡು ಹೋಗಲು ಸಾಧ್ಯ ಇರುವದಿಲ್ಲವೆನ್ನುವದು ಮಹಾತ್ಮ ಗಾಂಧೀಜೀಯ ಪುಣ್ಯತಿಥಿಯ ಸಮಯ ಜ್ಞಾಪಕಕ್ಕೆ ಬರದಿರಲಾರದು. ಲಾಲಾಜಿಯವರ ಕುರಿತು ಗೌರವ ಮಾತುಗಳನ್ನಾಡಿರುವ ಗಾಂಧೀಜಿಯವರು, ಲಾಲಾಜಿಯವರ ಕೊನೆಯ ಸೇಡನ್ನು ತೀರಿಸಿಕೊಂಡ ವೀರ ಕುವರ ಭಗತ್‌ಸಿಂಘ್, ರಾಜಗುರು, ಸುಖದೇವ ಮುಂತಾದವರ ಬಿಡುಗಡೆಗಾಗಿ ಪ್ರಯತ್ನಿಸದೆ, ಅವರ ಕೈ ರಕ್ತ ರಂಜಿತವಾಗಿರುವದರಿಂದ ಅದಕ್ಕೆ ತಾನು ಪ್ರಯತ್ನಿಸಲಾರೆನೆಂದು ಅವರು ಹಟಹಿಡಿದಿದ್ದರು. ಅಂದರೆ ಅಹಿಂಸಾವಾದಿಗಳತ್ತ ಅವರಿಗಿದ್ದ ಸಂಬಂಧ ಕ್ರಾಂತಿಕಾರ ಮಣಿಗಳತ್ತವೂ ಇತ್ತೆನ್ನುವದು ಇದರಿಂದ ಸ್ಪಷ್ಟವಾಗುತ್ತದೆ. ಕ್ರಾಂತಿ-ಅಹಿಂಸೆಗಳ ಸಂಗಮವಾಗಿದ್ದರವರು. ಅವರ ಪಾಲಿಗೆ ಕ್ರಾಂತಿ-ಅಹಿಂಸೆ ಒಂದೇ ವಾಕ್ಯದ ಎರಡು ಮುಖಗಳು ಅಷ್ಟೆ.

ಇದರಿಂದ ಅವರು ಶೂರರಾಗಿದ್ದರೆಂದು ಧೈರ್ಯವಾಗಿ ಹೇಳಬಹುದು. ಇಲ್ಲದಿದ್ದಲ್ಲಿ ಅದ್ಯಾರು ಅವರನ್ನು ಕೇಸರಿ ಎಂದು ಕರೆಯುತ್ತಿದ್ದರು? ಅಂತಹ ಸಂವೀರ ಲಾಲಾಜೀ ಇರುತ್ತಿದ್ದರೆ ಇಂದು ಅಣ್ವಸ್ತ್ರ ತಯಾರಿಕೆಗೆ ಅಡ್ಡಿಯಾಗುತ್ತಿದ್ದರೇನ? ಖಂಡಿತವಾಗಿಯೂ ಇಲ್ಲವೆನ್ನುವ ಉತ್ತರ ಎಲ್ಲರ ಬಾಯಿಯಿಂದಲೂ ಬರದಿರಲಾರದು.

ಅಣ್ವಸ್ತ್ರ ತಯಾರಿಕೆಗೆ ಇರುವ ಕೆಲವಾರು ಅಡೆತಡೆಗಳನ್ನು ಕಳೆದ ಕೆಲ ವಾರಗಳಿಂದ ತಿಳಿದುಕೊಂಡು ಅದರ ಸಾಧ್ಯಾಸಾಧ್ಯತೆಯ ಕುರಿತು ನೋಡಿರುವೆವು. ಈಗ ಈ ಒಂದು ತಡೆಯ ಬಲವನ್ನು ನೋಡಿದೆವು. ಅವರು ಒಪ್ಪುತ್ತಿದ್ದಿಲ್ಲ. ಇವರು ಒಪ್ಪುತ್ತಿದ್ದಿಲ್ಲವೆನ್ನುವದೆಲ್ಲಾ ಗಾಳಿಯಲ್ಲಿ ಕೈಬೀಸಿದಂತೆ ಎಂಬುದಕ್ಕೆ ಲಾಲಾಜೀಯವರ ಜೀವನ ಒಂದು ಜೀವಂತ ನಿದರ್ಶನವಿದೆ. ನಮ್ಮ ರಾಷ್ಟ್ರದ ರಕ್ಷಣೆಗಾಗಿ ನಾವು ಅದೆಂತಹ ಕ್ರೂರ ಕಠಿಣ ದಾರಿಗಿಳಿಯಬೇಕಾದರೂ ಮನೋದೌರ್ಬಲ್ಯಕ್ಕೊಳಗಾಗಬಾರದು. ಇದೀಗ ಸ್ವಾಮಿ ವಿವೇಕಾನಂದ, ನೇತಾಜಿ ಸುಭಾಸ್ ಬಾಬುರವರ ಜನ್ಮ ದಿನಾಚರಣೆಯನ್ನು ಕೊಂಡಾಡಿರುವೆವು. ಇವರಾದರೋ ಶಕ್ತಿಯ ಆರಾಧಕರೇ ಇದ್ದರು. ಕಬ್ಬಿಣದ, ಉಕ್ಕಿನ ನರನಾಡಿ ಮಾಂಸಖಂಡಗಳ ಕುರಿತು, ರಕ್ತದಾನದ ಕುರಿತು ಮಾತಾಡಿದವರ ಜನ್ಮದಿನಾಚರಣೆಯದು ಅಂತೆಯೇ ಲಾಲಾಜೀಯವರ ಜನ್ಮದಿನಾಚರಣೆ ಇದೆ. ಅದು ಶತಮಾನೋತ್ಸವವಿದೆ. ನಮಗೆಲ್ಲ ಅವರೆಲ್ಲರ ಕೆಚ್ಚಿನ ಕೊಂಚಾಂಶವಾದರೂ ಬಂದು ಸೇರಿದಲ್ಲಿ ಅಣ್ವಸ್ತ್ರ ತಯಾರಿಕೆಗೆ ಅದೇನೊ ನೆವನಗಳನ್ನು ನಾವು ಹೇಳದೆ, ರಾಷ್ಟ್ರರಕ್ಷಣೆಯ ಆದ್ಯಾವ ಕಾರ್ಯದಲ್ಲೂ ಭಾಗವಹಿಸಲು ಹಿಂದೆ ಬೀಳೆವು. ನಮ್ಮ ನೇತಾರರಿಗೂ ಕೆಚ್ಚಿದೆಯ ಅರಿವಾದರೆ ಸಾಕು; ಮತ್ತೆ ಕುರಿಮಂದೆಯಲ್ಲಿರುವ ಸಿಂಹದ ಮರಿಗೆ ಅದ್ಯಾರೂ ಒಂದು ಅದು ಸಿಂಹದ ಮರಿಯೆಂಬ ಅರಿವನ್ನುಂಟು ಮಾಡಿಕೊಡಬೇಕಾಗಿರುವದಿಲ್ಲ.

ಕಾದಂಬರಿ ಸಾರ್ವಭೌಮ

ಅ.ನ.ಕೃ ಅವರ ದೃಷ್ಟಿಯಲ್ಲಿ

೧. **ಮನುಷ್ಯನ ಯೋಗ್ಯತೆಯನ್ನಳೆಯುವ ಮಾನದಂಡ:** — ಕಾಮಿನಿ ಕಾಂಚನ ಕಣ್ಣಿಗೆ ಬೀಳದ ಎಡೆಗೆ ಹೋಗಿ ಮೂಗು ಹಿಡಿದು ಕುಳಿತು ನಾನು ದೊಡ್ಡ ವಿರಾಗಿ ಎಂದು ಭಾವಿಸುವುದು ಮೌಢ್ಯದ ಗುರುತು. ಆ ಕೆಲಸವನ್ನು ಯಾರು ಬೇಕಾದರೂ ಮಾಡಬಹುದು. ಅದರಲ್ಲಿ ತ್ಯಾಗವೂ ಇಲ್ಲ, ವೈರಾಗ್ಯವೂ ಇಲ್ಲ. ಕೇವಲ ಅಭಾವ ವಿರಕ್ತಿ ತುಂಬಿರುತ್ತದೆ. ಪ್ರಿಯವಸ್ತು ಕಣ್ಣೆದುರಿಗಿದ್ದರೂ, ಕೈಗೆ ಹಿಡಿತಕ್ಕೆ ಸಿಕ್ಕುವುದಿದ್ದರೂ ಅದನ್ನು ಬಯಸದೆ ಇರುವುದು ತ್ಯಾಗ ವೈರಾಗ್ಯಗಳ ಲಕ್ಷಣ. ಲೋಕದಲ್ಲಿದ್ದೂ ಲೋಕಾತೀತನಾಗಿರಬೇಕು. ಕಾಮಿಗಳ ಜತೆಗಿದ್ದೂ ನಿಷ್ಕಾಮಿಯಾಗಿರಬೇಕು. ಸಂಪತ್ತಿನ ಸುಪ್ಪತಿಗೆಯ ಮೇಲಿದ್ದು ಬಡತನದ ಮಂದಲಿಗೆಯನ್ನು ಆಶ್ರಯಿಸಬೇಕು—ಇದೇ ಮನುಷ್ಯನ ಯೋಗ್ಯತೆಯನ್ನಳೆಯುವ ಮಾನದಂಡ.

೨. **ಹೆಣ್ಣಿನ ಬಯಕೆ:** — ಹೆಣ್ಣು ದೇವರನ್ನು - ತನ್ನ ಸಮಸ್ತ ಶಕ್ತಿ' ಸಾಮರ್ಥ್ಯ, ಸೌಂದರ್ಯವನ್ನು ಮನಃಪೂರ್ವಕವಾಗಿ ಗಂಡಿನ ಪಾದಕ್ಕೆ ಅರ್ಪಿಸಲು, ಮಾಡಬೇಕೆಂದು ಬಯಸುತ್ತದೆ. ಇದಕ್ಕೆ ಪ್ರತಿಯಾಗಿ ಗಂಡಸಿನಿಂದ ನಿರೀಕ್ಷಿಸುವುದು ಒಂದು ಒಳ್ಳೆಯ ಮಾತು- ಕಷ್ಟ ಬಂದಾಗ ಕನಿಕರಿಸುವ ಸ್ವಭಾವ ಒಡವೆ, ವಸ್ತ್ರಗಳನ್ನು ಹೆಣ್ಣು ಬಯಸುತ್ತದೆ ನಿಜ- ಅವುಗಳನ್ನು ಧರಿಸಿ ತನ್ನ ಗಂಡನ ಮನಸ್ಸಿಗೆ ಸಂತೋಷವನ್ನುಂಟು ಮಾಡಬೇಕೆಂಬ ಆಸೆಯೇ ಆ ಬಯಕೆಯ ಕಾರಣ.

(ಸಂಗ್ರಹ)

ಪಿ. ಕೆ. ಶೆಟ್ಟಿ, ಕರೋಪಾಡಿ

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ
ಗೀತೆಯ ಕೈಗನ್ನಡಿ
300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು
ನವಯುಗ ಪ್ರೆಸ್, ಉಡುಪಿ.



ನೆನಪಿಡಿರಿ

ಸಂಘಟನೆ ಮುರಿಯುವ ದ್ವಾದಶ ಸೂತ್ರಗಳು

ಒಂದು ಉದ್ದೇಶವನ್ನು ಕೈಗೂಡಿಸುವುದಕ್ಕಾಗಿ ಸಂಘ ಸಂಸ್ಥೆಗಳು ಉದಯವಾಗುತ್ತವೆ. ಇವು ವ್ಯಕ್ತಿಗತವಾಗಿರಬಹುದು ಇಲ್ಲವೇ ಸಾಮೂಹಿಕವಾಗಿಯೂ ಇರಬಹುದು. ವ್ಯಕ್ತಿಗತ ಸಂಸ್ಥೆಯ ಲಾಭಾಲಾಭಗಳಿಗೆ ವ್ಯಕ್ತಿಯೊಬ್ಬನೇ ಜೊಣೆಗಾರನಾಗುತ್ತಾನೆ. ಇವುಗಳ ಅಭಿಸಿಕ್ತ ದೊರೆಯೇ ಅತ; ತನ್ನ ಕಾರ್ಯಕಲಾಪಗಳಲ್ಲಿ ಇತರರ ಸಹಾಯವನ್ನಾತ ಪಡೆದುಕೊಂಡರೂ ನಿರಂಕುಶ ಪ್ರಭುತಾನೆಂಬುದನ್ನವನ್ನು ಮರೆಯಲಾರನು; ಮರೆತು ಬಿಡುವುದು ಸಾಧ್ಯವೂ ಇಲ್ಲ.

ಸಾರ್ವಜನಿಕ ಉಪಕಾರದ ದೃಷ್ಟಿಯಿಂದ ಸ್ಥಾಪಿತವಾಗುವ ಸಂಘ ಸಂಸ್ಥೆಗಳು ಸಾಮಾನ್ಯವಾಗಿ ಸಾರ್ವಜನಿಕವಾಗಿರುತ್ತವೆ. ಅವುಗಳಿಗೆ ಸದಸ್ಯರಿರುತ್ತಾರೆ; ಸದಸ್ಯರಿಂದಲೇ ಆಯ್ಕೆ ಹೊಂದಿದ ಕಾರ್ಯಕಾರಿಣಿಯೊಂದಿರುತ್ತದೆ. ಇದರ ಅಧ್ಯಕ್ಷನೋ ಕಾರ್ಯದರ್ಶಿಯೋ ಜೊಣೆಯರಿತು ದುಡಿಯುವುದರಿಂದ ಸಂಸ್ಥೆ ಬೆಳೆಯುತ್ತದೆ. ಬೆಳೆದು ಬಂದಂತೆ ಅಧಿಕಾರಕ್ಕಾಗಿ ಹೋರಾಟವೂ ಪ್ರಾರಂಭವಾಗುತ್ತದೆ. ಇದರ ಪರಿಣಾಮವಾಗಿಯೇ ಸಂಸ್ಥೆಯಲ್ಲಿ ಹೊಲಸು ಹರಿಯುವುದಕ್ಕೆ ಪ್ರಾರಂಭವಾಗುತ್ತದೆ. ಸದಸ್ಯರ ಅಸಹಕಾರದಿಂದಾಗಿ, ಅಧಿಕಾರದಿಂದಾಗಿ ಸಂಸ್ಥೆಯು ಅಧಃಪತನಗೊಳ್ಳುವುದೂ ಇದೆ.

ಹೀಗೆ ಸಂಸ್ಥೆಯನ್ನು ಸ್ಥಾಪಿಸುವುದು ತ್ರಾಸದಾಯಕ; ಅದನ್ನು ಬೆಳೆಸಿ ಪೋಷಿಸುವುದು ಬಹಳ ಕಷ್ಟ; ಆದರೆ ಕಟ್ಟಿದ ಸಂಸ್ಥೆಯನ್ನು ನೆಲಸಮ ಮಾಡುವುದಕ್ಕೆ ಬಹಳ ಸುಲಭ. ಸಂಘದ ಸದಸ್ಯರು ಈ ಕೆಳಗಿನ ಹನ್ನೆರಡು ಸೂತ್ರಗಳಲ್ಲಿ ಕೆಲವನ್ನಾದರೂ ತಪ್ಪದೆ ಪರಿಪಾಲಿಸಿಕೊಂಡು ಬಂದರೆ, ಸಂಘವನ್ನು ನಾಮಾವಶೇಷಗೊಳಿಸುವುದು ಸಾಧ್ಯ. ಇವುಗಳನ್ನು ಅನುಸರಿಸಿದ್ದರೆ; ಸಂಘಟನೆಯನ್ನು ಅಭ್ಯುತ್ಥಾನ ಪಥಕ್ಕೊಯ್ಯುವುದೂ ಕಷ್ಟವಲ್ಲ. ಈ ದ್ವಾದಶ ಸೂತ್ರಗಳು ಈ ರೀತಿಯಾಗಿವೆ.

೧. ಕಾರ್ಯಕಾರಿಣಿಯ ಸಭೆಗಳಿಗೆ ಹಾಜರಾಗಬೇಡಿ; ಒಂದು ವೇಳೆ ಹಾಜರಾಗುವುದಾದರೂ ಹೊತ್ತಿಗೆ ಸರಿಯಾಗಿ ಹೋಗಬೇಡಿ.

೨. ಯಾವುದೇ ಪದವನ್ನು ಕಾರ್ಯಕಾರಿಣಿಯಲ್ಲಿ ಸ್ವೀಕರಿಸಬೇಡಿ; ಹೊರಗಡೆ ಇದ್ದು ಪರರನ್ನು, ಅವರ ಕಾರ್ಯ ವಿಧಾನವನ್ನು ಟೀಕಿಸುವುದೇ ಬಹಳ ಸುಲಭ ಮತ್ತು ಮನೋರಂಜಕವೆಂಬುದನ್ನು ಮರೆಯಬೇಡಿ.

೩. ನಿಮ್ಮ ಮೇಲಾಧಿಕಾರಿಗಳು ಅಥವಾ ಸಮಿತಿಗಳು ಮುಂದಿಟ್ಟ ಯಾವ ಸೂಚನೆ ಸಲಹೆಗಳನ್ನಾದರೂ ಸ್ವೀಕರಿಸಬೇಡಿ. ವಾದ ವಿವಾದಕ್ಕೆ ಎಡೆಯಾಯದೆ ಹೋದರೆ, ಮನಸ್ತಾಪ ಹುಟ್ಟುವುದು ಸಾಧ್ಯವಿಲ್ಲ.

೪. ನೀವು ತೆರಬೇಕಾಗುವ ಚಂದಾ ಹಣವನ್ನು ತೆರುವ ಅಭ್ಯಾಸವಿಟ್ಟುಕೊಳ್ಳಬೇಡಿ; ನಿಮ್ಮ ಧ್ಯೇಯ ಸಾಧನೆಗೆ—ತೆರಲೇ ಬೇಕಾದ ಸಂದರ್ಭ ಬಂದರೆ ಮಾತ್ರ ತೆರದಿರಬೇಡಿ.

೫. ಹೊಸ ಸದಸ್ಯರನ್ನು ಸೇರಿಸಿಕೊಳ್ಳುವಲ್ಲಿ ಮುತುವರ್ಜಿ ವಹಿಸಬೇಡಿ. ಸಾಧ್ಯವಿದ್ದಲ್ಲೆಲ್ಲಾ ಹೊಸ ಸದಸ್ಯರಾಗದಂತೆ ಎಚ್ಚರ ವಹಿಸಿರಿ.

೬. ಪದಾಧಿಕಾರಿಗಳ ಬಗ್ಗೆ ಯಾವ ಕನಿಕರವನ್ನೂ ತೋರಿಸಬೇಡಿ; ಅವರೇ ನಿಮ್ಮ ಕಾಲಡಿ ಬಿದ್ದು ಕ್ಷಮಾಯಾಚನೆ ಮಾಡುವಂತೆ ಪ್ರಯತ್ನಿಸಿರಿ.

೭. ನಿಮಗೆ ಮೆಚ್ಚುಗೆಯಾಗದ ವಿಷಯ ಚರ್ಚೆಗೆ ಬಂದಾಗ ಅದನ್ನು ಬಲವಾಗಿ ಪ್ರತಿಭಟಿಸಿರಿ; ಆದರೆ, ಅದಕ್ಕೆ ಬದಲಾಗಿ ಯಾವ ರಚನಾತ್ಮಕ ಸಲಹೆಗಳನ್ನೂ ನೀಡಬೇಡಿ.

೮. ಎಲ್ಲಾ ಕೆಲಸಗಳಿಂದ ನೀವು ತಪ್ಪಿಸಿಕೊಳ್ಳಿ; ಇತರರ ತಲೆಗೇ ಅವನ್ನು ಹೊತ್ತು ಹಾಕಿರಿ.

೯. ಸಮಿತಿ, ಉಪಸಮಿತಿಗಳ ಪ್ರತಿನಿಧಿಯಾಗಿ ನೀವು ಆಯ್ಕೆಗೊಂಡರೆ, ಅವುಗಳ ಸಭೆಗಳಿಗೆ ಹೋಗಲೇ ಬೇಡಿ.

೧೦. ಇನ್ನೊಬ್ಬರ ನಡವಳಿಕೆ—ಉದ್ದೇಶಗಳನ್ನು ಅರಿತುಕೊಳ್ಳಿ. ನಿಮ್ಮ ಬುದ್ಧಿಯ ಉಪಯೋಗವನ್ನು ಇತರರು ಮಾಡಿಕೊಳ್ಳದಂತೆ ಸದಾ ಜಾಗ್ರತರಾಗಿರಿ.

೧೧. ಹಿರಿಯ ಅಧಿಕಾರಿಗಳೊಡನೆ ಸಮಿತಿಯ ಇತರ ಸದಸ್ಯರೊಡನೆ ಎಂದಿಗೂ ಸಹಕರಿಸಬೇಡಿ; ನಿಮ್ಮನ್ನೇ ಅವರು ಹೊಂದಿಕೊಂಡು ಸಹಕಾರ ಬಯಸುವಂತೆ ಮಾಡಿ.

೧೨. ಯಾವುದೇ ವಿಷಯದ ಬಗ್ಗೆ ಇತರರಿಗೆ ತಿಳಿದಿರುವುದಕ್ಕಿಂತ ಹೆಚ್ಚು ನಿಮಗೆ ತಿಳಿದಿದೆಯೆಂದು ಖಂಡಿತವಾಗಿ ಭಾವಿಸಿಕೊಳ್ಳಿ. ನಿಮ್ಮ ಅಭಿಪ್ರಾಯಕ್ಕೆ ಅವರು ತಲೆದೂಗದಿದ್ದರೆ ಅವರು ತಪ್ಪು ದಾರಿ ತುಳಿಯುತಿದ್ದಾರೆಂದು ತಿಳಿಯುವುದಕ್ಕೂ ಡಂಗುರ ಸಾರುವುದಕ್ಕೂ ಮರೆಯಬೇಡಿ.

ಈ ನಿಯಮಗಳನ್ನು ನೀವು ಬಿಡದೆ ಪರಿಪಾಲಿಸಿದರೆ, ನೀವು ಸದಸ್ಯರಾಗಿರುವ ಸಂಘವನ್ನುತಪ್ಪದೇ ಯಮ ಪುರಿಗಟ್ಟಿದ ಪುಣ್ಯ ನಿಮ್ಮ ಪಾಲಿಗಾಗುವುದು; ನೆನಪಿಡಿ.

ಆಹಾರ ಸಮಸ್ಯೆ—ಅದಕ್ಕೆ ಪರಿಹಾರ

(ಆರನೇ ಪುಟದಿಂದ)

ಗುತ್ತದೆ. ಇದು ಹೆಚ್ಚಿನ ಆಡಳಿತ ಮತ್ತು ಮೇಲ್ವಿಚಾರಣೆ ವೆಚ್ಚಕ್ಕೆ ದಾರಿಯಾಗುವುದಾದರೂ, ನ್ಯಾಯದ ದೃಷ್ಟಿಯಿಂದ, ಹಾಗೂ ಸಮಾನತೆಯ ದೃಷ್ಟಿಯಿಂದ ಈ ಕ್ರಮವನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಜನತೆಯ ಮನಸ್ಸಿನಲ್ಲೂ ಸಮಾಧಾನ ಮಾಡಿದಂತಾಗುವುದು.

ಆಹಾರ ಧಾನ್ಯಗಳ ಖರೀದಿ ಮತ್ತು ವಿತರಣೆಯ ಸಲುವಾಗಿ, ಇಡೀ ದೇಶವನ್ನು ದಕ್ಷಿಣ, ಉತ್ತರ, ಪಶ್ಚಿಮ, ಪೂರ್ವ ಮತ್ತು ಕೇಂದ್ರ ವಲಯಗಳನ್ನಾಗಿ ವಿಭಾಗಿಸಿ, ಪ್ರತೀ ವಲಯದ ಮುಖ್ಯ ಆಹಾರಧಾನ್ಯ ಯಾವುದೆಂದು ತಿಳಿದು, ಕೊರತೆ ಬೀಳುವ ಆಹಾರಧಾನ್ಯಗಳು ಯಾವುವೆಂಬುದನ್ನು ಅರಿತುಕೊಂಡು, ಹೆಚ್ಚುವರಿ ಪ್ರದೇಶಗಳಿಂದ ಕೊರತೆಯ ವಲಯಕ್ಕೆ ಆಹಾರ ಧಾನ್ಯ ಸರಬರಾಜು ಮಾಡಬೇಕು.

(ಸಶೇಷ)

ಡಾ| ರಾಮಣ್ಣ ಶೆಟ್ಟಿಯವರ ನಿಧನ

ಸುಪ್ರಸಿದ್ಧ ಸಾರ್ವಜನಿಕ ಕಾರ್ಯಕರ್ತರೂ, ಜನಾದರಣೆ ಗಳಿಸಿದ ಡಾಕ್ಟರರೂ, ಬಂಟ ಸಮಾಜದ ಆಧ್ಯ ವ್ಯಕ್ತಿಗಳಲ್ಲಿ ಒಬ್ಬರೂ ಆದ ಡಾ॥ ಮುಂಡ್ಕೂರು ರಾಮಣ್ಣ ಶೆಟ್ಟರು ಕಳೆದ ತಾ. ೨೧ರಂದು ಸಂಜೆ ಮಂಗಳೂರಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ. ದಿವಂಗತರು ಮರಣ ಹೊಂದುವ ವೇಳೆ ಮಂಗಳೂರು ತಾಲೂಕು ಬೋರ್ಡಿನ ಸದಸ್ಯರಾಗಿದ್ದು, ಅದರ ಹಲವಾರು ಸಮಿತಿಗಳ ಸದಸ್ಯರಾಗಿದ್ದರು. ಸ್ಥಳೀಯ ಸರಕಾರದ ವೈದ್ಯಕೀಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಶೆಟ್ಟರು ಬಂಟ್ವಾಳದ ಆಸ್ಪತ್ರೆಯ ಬಡಾವಣೆ ಹಾಗೂ ಅಭಿವೃದ್ಧಿಗೆ ಶ್ರಮಿಸಿದವರಲ್ಲಿ ಒಬ್ಬರು. ನಿವೃತ್ತಿ ಹೊಂದಿದ ಬಳಿಕ ಮೂಲ್ಕಿಯಲ್ಲಿ ಸ್ವಂತ ದವಾಖಾನೆಯನ್ನು ತೆರೆದು ಬಡಬಗ್ಗರಿಗೆ ವೈದ್ಯಕೀಯ ಸೇವೆಯನ್ನು ಸಲ್ಲಿಸುತ್ತಿದ್ದರು. ಬಂಟರ ಯಾನೆ ನಾಡವರ ಸಂಘದ ಸುವರ್ಣೋತ್ಸವದ ಸಂದರ್ಭ ಡಾ| ಎ. ಬಿ. ಶೆಟ್ಟಿಯವರೊಡನೆ ನಿಧಿಸಂಗ್ರಹಕ್ಕೆ ಇವರು ಕೂಡಾ ತೆರಳಿ ಸಹಕಾರವನ್ನಿತ್ತಿದ್ದರು. ಮೂಲ್ಕಿ ವಿಜಯಾ ಕಾಲೇಜ್ ಸಮಿತಿಯ ಸದಸ್ಯರಾಗಿ ನಿಧಿ ಸಂಗ್ರಹ ಕಾರ್ಯದಲ್ಲಿಯೂ ಶ್ರಮಿಸಿದ್ದರು. ಹಿಂದೂ ಕೋಡ್ ಬಿಲ್‌ನಲ್ಲಿ ಅಳಿಯ ಸಂತಾನ ಪದ್ಧತಿಯನ್ನು ಸಮಾವೇಶಗೊಳಿಸಬೇಕೆಂಬುದರ ಬಗ್ಗೆ ದಕ್ಷಿಣಕನ್ನಡ ಜಿಲ್ಲೆಯಿಂದ ದೆಹಲಿಗೆ ಹೋಗಿದ್ದ ನಿಯೋಗದಲ್ಲಿ ದಿವಂಗತರೂ ಒಬ್ಬ ಸದಸ್ಯರಾಗಿದ್ದರು.

ಕಾಂಗ್ರೆಸಿಗರಾದ ಶ್ರೀ| ಶೆಟ್ಟರ ನಿಧನದಿಂದ ಕಾಂಗ್ರೆಸಿಗೆ, ಅಲ್ಲದೆ ಬಂಟ ಸಮಾಜಕ್ಕೆ ತುಂಬಿ ಬಾರದ ನಷ್ಟವಾಗಿದೆ. ನವಯುಗದ ಅಭಿಮಾನಿಗಳಾಗಿದ್ದು, ಅದರ ಪರಿಷ್ಕರಣಕ್ಕಾಗಿ ಸಹಕಾರ ನೀಡಿದ ಶ್ರೀ| ಶೆಟ್ಟರ ನಿಧನದಿಂದ ನವಯುಗವೂ ತನ್ನ ಆತ್ಮೀಯ ಹಿತಚಿಂತಕರನ್ನು ಕಳೆದುಕೊಂಡಂತಾಗಿದೆ. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವುದಲ್ಲದೆ, ಅವರ ಬಂಧುಗಳ ದುಃಖದಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ.

ಮಳೆ ಬರಲಿ

ಮಳೆ ಬರಲಿ, ಮಳೆ ಬರಲಿ
ಬೆಳೆ ಬೆಳೆಸಲೆಲ್ಲ
ಮಳೆಯಿಲ್ಲ, ಮಳೆಯಿಲ್ಲ
ಕೇಳದಿರ ಸೊಲ್ಲ.

ಬೇಸಾಯಗಾರರಿಗೆ
ಮಳೆಯದ್ದೆ ಚಿಂತೆ
ಹೀಗೆಂದು ಕೂಗುವರು
ಮಳೆಯಿಲ್ಲವಂತೆ!

ಉತ್ತೊಮ್ಮೆ ನೋಡುವರು
ತಲೆಯೆತ್ತಿ ಮೇಲೆ
ಬಿಳಿ ಮೋಡ ಸುಳಿಯುತಿದೆ
ಮಳೆಯಿಲ್ಲ ಹೇಗೆ?

ಆಗೊಮ್ಮೆ ಈಗೊಮ್ಮೆ
ಹನಿ ಹನಿಸಿ ಮಳೆಯು
ನೀರೊರತೆ ಮಾಡುವದೆ
ಬೆಳೆ ಬೆಳೆಯೆ ಹೊಲವು.

ನೀರಿರುವ ಆಗಸದಿ
ನೂಲೇಣಿ ಬಿಗಿದು
ನೋಡುವರೆ ಬಿಡುವಿಲ್ಲ
ಯಾರಲ್ಲಿ ತಡೆದು.

ನೀರನ್ನು ನಿಲ್ಲಿಸಿಹ
ಮಾದೇವ ಹೌದೆ.
ದಯಮಾಡಿ ಬಿಡಬೇಕು
ನೀರಡಿಕೆ ನೀಗೆ.

—ಅಬ್ದುಲ್ ರಹಿಮಾನ್.

*READ &
ADVERTISE IN*
NAVAYUGA WEEKLY

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಮೆರಿಕನರು ಕಂಡ ನೆಹರೂ

(ಐದನೆ ಪುಟದಿಂದ)

ಸಂಘದಲ್ಲಿ ಉಪಾಹಾರ, ಅಧ್ಯಕ್ಷ ಟ್ರೂಮನ್‌ರ ಗೃಹದಲ್ಲಿ ಭೋಜನ ಕೂಟ, ಭಾರತದ ರಾಯಭಾರಿ ಕಚೇರಿಯಲ್ಲಿ ಸ್ವಾಗತ ಹಾಗೂ ಉಪನ್ಯಾಸ, ಇತ್ಯಾದಿ ಕಾರ್ಯಕ್ರಮಗಳು ಮೊದಲೇ ನಿಗದಿಯಾಗಿದ್ದವು. ಇಷ್ಟೆಲ್ಲಾ ಆಗುವಾಗ್ಗೆ ಭಾರತದ ಅನೇಕ ಸಮಸ್ಯೆಗಳನ್ನು ಕುರಿತು ಅಧ್ಯಕ್ಷರೊಡನೆ ಚರ್ಚೆ, ಕಾಂಗ್ರೆಸ್ ಹೌಸ್‌ನಲ್ಲಿ ಭಾಷಣ ಬೇರೆ. ಅಂದಿನ ಅಮೆರಿಕನ್ ರಾಯಭಾರಿಯಾಗಿದ್ದ ವಿ॥ ಲಾಯ್ ಹೆಂಡರ್‌ಸನ್‌ರವರು, ನೆಹರೂರವರು ಕಾಂಗ್ರೆಸ್ ಹೌಸಿನಲ್ಲಿ ಮಾಡಿದ ಭಾಷಣ ಕೇಳಿ, ಆನಂದಭರಿತರಾಗಿ 'ನೆಹರೂ ಹೇಳುವುದು ಸರಿಯಾಗಿದೆ' ಎಂದು ಕುಣಿದಾಡಿದರಂತೆ. ಅದೇನು ವೈಭವ! ಪತ್ರಿಕಾ ವರದಿಗಾರರಿಗೆ ಸುಗ್ಗಿ! ಶ್ರೋತೃಗಳಿಗೆ ಪರಮಾನಂದ! ಯಾವ ಪತ್ರಿಕೆಯಲ್ಲಿ ನೋಡಿದರೂ ನೆಹರೂರವರ ಚಿತ್ರವೇ!

ಒಂದು ಪತ್ರಿಕೆ ಹೊಗಳಿತು– "ನೆಹರೂ ಭಾಷಣ—ನೂತನ ಏಷ್ಯಾದ ಕರೆ"

ಮತ್ತೊಂದು ಪತ್ರಿಕೆ ಹೇಳಿತು – "ಜಗತ್ತಿನ ಪ್ರತಿಭಾನ್ವಿತ ವ್ಯಕ್ತಿಗಳಲ್ಲೊಬ್ಬ— ಈ ನೆಹ್ರು

- ಇನ್ನೊಂದು ಪತ್ರಿಕೆ ಹೇಳಿದೆ–"ಏಷ್ಯಾ ಖಂಡದ ಚಾರಿತ್ರಿಕ ವ್ಯಕ್ತಿ"

ಮತ್ತೊಬ್ಬ ಸಂಪಾದಕರು ಹೀಗೆಂದರು— "ನೆಹರೂ ಒಬ್ಬ ಮಹಾಯೋಗಿ"

ಇನ್ನೊಬ್ಬ ಸಂಪಾದಕರು ಹೀಗೆ ಬರೆದರು– "ಮಾನವನಿಗಿಂತ ದೇವರೇ ಆಗಿದ್ದಾನೆ."

ನ್ಯೂಯಾರ್ಕ್ ಟೈಂಸ್ ಎಂಬ ಪತ್ರಿಕೆಯಲ್ಲಿ ನೆಹರೂ ಬಗ್ಗೆ ಬರೆಯುತ್ತಾ "ಆತನನ್ನು ನಾವು ಭಾರತದ ಪ್ರಧಾನಿ ಎನ್ನುವುದಕ್ಕಿಂತ ಶ್ರೇಷ್ಠಮಾನವ ಎಂಬುದೇ ಸಮಂಜಸವಾಗಿದೆ" ಎಂದು ಕೊಂಡಾಡಲಾಗಿತ್ತು. ಆ ಪತ್ರಿಕೆಯ ಸಂಪಾದಕೀಯ ಬಹು ದೊಡ್ಡದಾಗಿದ್ದು ಅದರಲ್ಲಿ ನೆಹರೂರವರ ತತ್ವಗಳನ್ನು ಬಹುಮಟ್ಟಿಗೆ ವಿವರಿಸಲಾಗಿತ್ತು.

ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಎಂಬ ಪತ್ರಿಕೆಯಲ್ಲಿ ಭಾರತದ ಸ್ಥಾನಮಾನಗಳ ಬಗ್ಗೆ ಹೀಗೆ ಬರೆಯಲಾಗಿತ್ತು—"ಏಷ್ಯಾದ ಮಹಾ ರಾಜಕಾರಣಿ ಎನಿಸಿದ ನೆಹರೂರವರು ಇಲ್ಲಿಗೆ ಆಗಮಿಸಿರುವುದು ಒಂದು ಮಹತ್ವದ ಸಂಗತಿ. ಅವರ ಭೇಟಿಯಿಂದ ಅಗಾಧ ಪರಿಣಾಮವುಂಟು. ನೆಹರೂರವರು ತಮ್ಮ ಸ್ವಪ್ರಯತ್ನ ಮತ್ತು ಸಾಧನೆಗಳಿಂದ ಭಾರತಕ್ಕೆ ಉನ್ನತ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಈಗ ಇಡೀ ಏಷ್ಯಾದಲ್ಲಿ ಭಾರತ ಅಗ್ರಗಣ್ಯ ಸ್ಥಾನ ಪಡೆಯುವ ಸಂದರ್ಭ ಒದಗಿ ಬಂದಿದೆ. ಸಹಸ್ರಾರು ವರ್ಷಗಳ ಸಾಂಸ್ಕೃತಿಕ ಇತಿಹಾಸದ ಹಿನ್ನೆಲೆಯುಳ್ಳ ಭಾರತಕ್ಕೆ ಅಮೇರಿಕ ತನ್ನ ಗೌರವವನ್ನು ಸೂಚಿಸುತ್ತದೆ. ಅಮೆರಿಕನ್ನರು ಭಾರತೀಯರನ್ನು ಬಹುವಾಗಿ ಪ್ರೀತಿಸುತ್ತಾರೆ. ಹಾಗೂ ಗೌರವಿಸುತ್ತಾರೆ. ಅವರೀಗ ಗಣರಾಜ್ಯದ ಪ್ರಜೆಗಳಾಗಿದ್ದಾರೆ—ಹಿಂದಿನಂತೆ ಬ್ರಿಟಿಷರ ಅಧೀನರಲ್ಲ"

ನಿಜ. ಈ ಮಾತುಗಳೆಷ್ಟು ಸತ್ಯವಾಗಿವೆ!

'ಬಾಲ್ಟಿಮೋರ್ ಸನ್' ಎಂಬ ಪತ್ರಿಕೆಯಲ್ಲಿ ನೆಹರೂರವರನ್ನು ಅಮೇರಿಕದ ಮಿತ್ರ ಎಂದು ವರ್ಣಿಸಲಾಗಿತ್ತು.

'ವಾಶಿಂಗ್‌ಟನ್ ಸ್ಟಾರ್' ಎಂಬ ಪತ್ರಿಕೆಯ ಮಾತುಗಳನ್ನು ನೋಡಿ:—

"ವಾಶಿಂಗ್ಟನಿಗೆ ಸಂದರ್ಶನವಿತ್ತಿರುವ ವಿದೇಶೀ ಅತಿಥಿಗಳಲ್ಲಿ ಬರೇ ಕೆಲವರು ಮಾತ್ರಾ ಪಂಡಿತ ನೆಹರುಗಳಂತೆ ಗಹನವಾದ ಹಾಗೂ ಅತಿ ಪ್ರಾಮುಖ್ಯವಾದ ಉದ್ದೇಶ ಮತ್ತು ಸಂದೇಶಗಳನ್ನು ಹೊತ್ತು ಬಂದಿದ್ದಾರೆ. ನೆಹರೂಗಳ ಅಮೆರಿಕ ಪ್ರವಾಸ್ಯದ ಕಾಲ ತಕ್ಷಣವೇ ಪ್ರತಿಕ್ರಿಯೆಗಳು ಹಲವಾರು ಹುಟ್ಟಬಹುದು."

'ಹಾರ್ಟ್‌ಫೋರ್ಡ್ ಟೈಂಸ್' ಎಂಬ ಪತ್ರಿಕೆಯಲ್ಲಿ–"ನೆಹರೂ ಪ್ರಜಾಪ್ರಭುತ್ವದ ಆದರ್ಶ ಪುರುಷನಾಗಿದ್ದಾನೆ. ಮಾನವ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರನಷ್ಟೇ ಅಲ್ಲ. ಇಡೀ ಜಗತ್ತಿನಲ್ಲಿ ಅತ್ಯದ್ಭುತ ಪ್ರಭಾವವನ್ನು ಬೀರಬಲ್ಲ ವ್ಯಕ್ತಿಯಾಗಿದ್ದಾನೆ" ಎಂದು ಬರೆಯಲಾಗಿತ್ತು.

'ವಾಟರ್‌ಟೌನ್ ಟೈಂಸ್' ಎಂಬ ಪತ್ರಿಕೆಯ ಮಾತುಗಳನ್ನು ಗಮನಿಸಿ –

"ನೆಹರೂಗಳು ಅಸಾಧ್ಯದ ಪ್ರಭಾವೀ ವ್ಯಕ್ತಿಗಳು. ಏಷ್ಯಾಖಂಡದಲ್ಲಿ ಕಮ್ಯೂನಿಸಮ್ಮಿನ ಹಬ್ಬುವಿಕೆಯನ್ನು ತಡೆಗಟ್ಟಬಲ್ಲ ಹಾಗೂ ಕಮ್ಯೂನಿಸಮ್ಮಿನ ಪರಿಣಾಮಗಳನ್ನು ಮಿತಿಯಲ್ಲಿರಿಸಿಕೊಳ್ಳಬಲ್ಲ ಸಾಮರ್ಥ್ಯ ಹೊಂದಿದ ನಾಯಕನೆಂದರೆ ಅವರೊಬ್ಬರೇ. ಅವರನ್ನು ನಾವು ನಮ್ಮ ಬೆಂಬಲಕ್ಕೆ ಬಯಸುತ್ತೇವೆ. ಅವರು ಏಷ್ಯಾದಲ್ಲಿ ನಮ್ಮ ಆಶಾಕಿರಣವಾಗಿದ್ದಾರೆ".

ಈ ಮಾತುಗಳು ಅರ್ಥಗರ್ಭಿತವಾಗಿವೆ. ನಮ್ಮ ಈಗಿನ ಪ್ರಧಾನಿಯಾಗಿರುವ ಲಾಲ್‌ಬಹದ್ದೂರ್ ಶಾಸ್ತ್ರಿಗಳೂ ಸಹ ಈ ಮಟ್ಟಕ್ಕೇ ಬರಬೇಕು; ವಿದೇಶೀಯರ ಹೃದಯವನ್ನು ಸೂರೆಗೊಳ್ಳಬೇಕು—ಎಂಬುದೇ ನಮ್ಮ ಆಶಯ.

'ದಿ ಪ್ರಾವಿನ್ಶಿಯಲ್ ಜರ್ನಲ್' ಎಂಬ ಪತ್ರಿಕೆ ನೆಹರೂರವರನ್ನು "The keyman of Asia" ಎಂದು ಕರೆದಿದೆ. 'ಬಾಸ್ಟನ್ ಈವೆನಿಂಗ್ ಗ್ಲೋಬ್' ಎಂಬ ಪತ್ರಿಕೆಯಲ್ಲಂತೂ ನೆಹರೂ ಬಗ್ಗೆ ವಿಶೇಷ ಟೀಕೆ ಟಿಪ್ಪಣಿಗಳನ್ನು ಪ್ರಕಟಿಸಲಾಗಿತ್ತು.

ಲೂಯಿವಿಲ್ಲೆ ಎಂಬ ಸ್ಥಳದ 'ಕೊರಿಯರ್ ಜನರಲ್' ಎಂಬ ಪತ್ರಿಕೆ, "ನೆಹರೂರವರು ಭಾರತಕ್ಕೂ ಅಮೇರಿಕಕ್ಕೂ ಮಧ್ಯೆ ಸೇತುವೆಯಂತೆ ಇದ್ದಾರೆ" ಎಂದಿದೆ.

ಒಬ್ಬ ಪ್ರಸಿದ್ಧ ಲೇಖಕ ವಾಲ್ಟರ್ ಕೇರ್ನನ್ ಎಂಬಾತನು 'ಡೆನ್ವರ್ ಪೋಸ್ಟ್' ಎಂಬ ಪತ್ರಿಕೆಯಲ್ಲಿ "ನೆಹರೂರವರು ಭಾರತದಿಂದ ಇಲ್ಲಿಗೆ ಹತ್ತೊಂಭತ್ತು ಗಂಡುಗಳ ಗೌರವಕ್ಕಾಗಿ ಬರಲಿಲ್ಲ; ಬ್ಲೇರ್ ಹೌಸಿನ ರುಚಿಕರ ಊಟಕ್ಕಾಗಿ ಬರಲಿಲ್ಲ. 'ಸೌತ್ ಫೆಸಿಫಿಕ್' ನಾಟಕ ಮಂದಿರದಲ್ಲಿ ಟಿಕೆಟ್ ಪಡೆಯಲು ಬಂದಿಲ್ಲ. ಆದರೆ ಅವರು ನಮ್ಮನ್ನು ಅರ್ಥ ಮಾಡಿಕೊಳ್ಳಲು ಬಂದಿದ್ದಾರೆ. ನಾವೂ ಅವರನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು" ಎಂದು ಬರೆದಿದ್ದಾನೆ.

ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ನೆಹರೂ ಮಾಡಿದ ಭಾಷಣ ಬಹು ಶ್ರೇಷ್ಠಮಟ್ಟದ ಭಾಷಣವೆಂದೂ, ಅದು ವಿಚಾರಪೂರಿತವಾಗಿಯೂ, ಅರ್ಥಭರಿತವಾಗಿಯೂ, ರಸಭರಿತವಾಗಿಯೂ ಇದ್ದಿತೆಂದೂ ಎಲ್ಲ ಪತ್ರಿಕೆಗಳೂ ಸಾರಿವೆ; ನ್ಯೂಯಾರ್ಕ್ ಟೈಂಸ್ ಮತ್ತು ಹೆರಾಲ್ಡ್ ಟ್ರಿಬ್ಯೂನ್ ಎಂಬ ಪತ್ರಿಕೆಗಳು ಆ ಭಾಷಣವನ್ನು ಪೂರ್ಣವಾಗಿ ಪ್ರಕಟಿಸಿ, ತಮ್ಮ ಗೌರವವನ್ನು ವ್ಯಕ್ತಪಡಿಸಿವೆ.

ಅಮೇರಿಕದ ಪತ್ರಿಕಾ ವರದಿಗಾರರಿಗೆ ನೆಹರೂ ಎಂದರೆ ಏನೋ ಒಂದು ಆನಂದ.

ಒಬ್ಬ ಕಲಾವಿದ (ಚಾರ್ಲ್ಸ್ ಬಾಸ್ಕರ್‌ವಿಲ್) ನೆಹರೂರವರ ಭಾವ ಚಿತ್ರವನ್ನು ಚಿತ್ರಿಸಿ, 'ಡೆಸ್ ಮೊಯಿನ್ಸ್ ಬುಕ್' ಎಂಬುದರಲ್ಲಿ ಪ್ರಕಟಿಸಿದ. ಆತನು ತನ್ನ ಡೈರಿಯಲ್ಲಿ ಹೀಗೆ ಬರೆದಿದ್ದಾನೆ—

"ನೆಹರೂರವರದು ಅತಿ ಮುಗ್ಧವಾದ ಹಾಗೂ ಚಟುವಟಿಕೆಯಿಂದ ಕೂಡಿದ ಮುಖ. ಅವರ ಕಣ್ಣುಗಳು ಹಾಸ್ಯರಸದಿಂದ ಕುಣಿಯುವಾಗ ಅವರ ಸೀಳಿ ಬಣ್ಣದ ಹೊಳಪು ಎಲ್ಲೆಲ್ಲೂ ಪಸರಿಸುತ್ತದೆ; ಆದರೆ ಪ್ರಚಲಿತ ಸಮಸ್ಯೆಗಳ ಹೊರೆ ಹಾಗೂ ಬ್ರಿಟಿಷರ ಕಾಲದಲ್ಲಿ ಅನುಭವಿಸಿದ ಹನ್ನೊಂದು ವರ್ಷಗಳ ಕಾರಾಗೃಹವಾಸದ ಛಾಯೆಯು ಅವರ ವಿಚಾರಗಳಲ್ಲಿ ಮೂಡಿದಾಗ, ಅವರು ಹೃದಯಾಘಾತವನ್ನು ಮಾಡುವ ದುಃಖದಿಂದ ಶೋಕಾತುರರಾದಂತೆ ಕಾಣುತ್ತಾರೆ.

ಪಂಡಿತ್ ನೆಹರೂ ಚಿರಂಜೀವಿ: ಭಾರತೀಯರು ಅವರಿಗೆ ಚಿರಋಣಿಗಳು.

(ಆಧಾರ:'ಇಂಡಿಯನ್ ನ್ಯೂಸ್ ಕ್ರಾನಿಕಲ್')

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

O. S. 537/64

ದೇಜಪ್ಪ ಅರಿಗ. — ವಾದಿ.

ಕುಶಲವತಿ ಕೂಡಾ— ಪ್ರತಿವಾದಿರು.

4ನೇ ಪ್ರತಿವಾದಿಳು ಲಲಿತ, ಶಾಂತಿರಾಜ ಹೆಗ್ಡೆಯವರ ಮಗಳು ಪುತ್ತೂರು ತಾಲ್ಲೂಕ ಕಬಕಾ ಗ್ರಾಮದ ಕಾಯರ್ ಮಜ್ಲು ಮನೆಯಲ್ಲಿರುವವಳು.

ಸದ್ರಿ 4ನೇ ಪ್ರತಿವಾದಿಳಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:

ಮೇಲಿನ ದಾವೆಯು ವಾದಿಗೆ, ಮೃತ ಶಾಂತಿರಾಜ ಹೆಗ್ಡೆಯವರು ಬರೆ-ಕೊಟ್ಟ ಡಿ. ಪ್ರೋನೋಟಿನ ಅಸಲು ಬಡ್ಡಿ ಖರ್ಚುಗಳನ್ನು ಬರ ಮಾಡಿಕೊಳ್ಳುವರೆ, ವಾದಿಗು ದಾಖಲು ಮಾಡಿದ ಸದ್ರಿ ದಾವೆಯು ತಾ. 10—2—65ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

॥ಕೋರ್ಟು ಹ್ಕುಂ ಪ್ರಕಾರ॥

P. A. ARIGA.

Advocate for Plaintiff

ಮೊಕ್ಕಾಂ: ಪುತ್ತೂರು ತಾ. 20–1–1965

ಪೆಪ್ಪರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿ ಪಟ್ಟಿವೆ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

C. M. A. No. 7/1964.

ಗಿರಿಜಂಮ ಸೆಡ್ತಿ — ಅಪ್ಪೀಲಾಂಟಳು

ಮತ್ತು

ಗಿರಿಜಂಮ ಸೆಡ್ತಿ ಕೂಡಾ–ರೆಸ್ಪೋಡೆಂಟರು

ಇವರೊಳಗೆ

ಸದ್ರಿ ವ್ಯವಹರಣೆಯ 1ನೇ ರೆಸ್ಪೊಂಡೆಂಟಳು—ಗಿರಿಜಂಮ ಸೆಡ್ತಿ, ತಂದಂಮ ಸೆಡ್ತಿರ ಮಗಳು. ಕುಂದಾಪುರ ತಾಲ್ಕು ಹೊಸಂಗಡಿ ಗ್ರಾಮ ಮತ್ತು 1ನೇ ರೆಸ್ಪಾಂಡೆಂಟ್–ಸಂಕಯ್ಯ ಸೆಟ್ಟಿ– ತುಂಗಂಮ ಸೆಡ್ತಿರ ಮಗ— ಕುಂದಾಪುರ ತಾಲ್ಕು ಎಡಮೊಗೆ ಗ್ರಾಮದ ಸಾಲಿಗದ್ದೆಯಲ್ಲಿರುವವ. ಇವರಿಗೆ ಈ ಮೂಲಕ ತಿಳಿಯ ಪಡಿಸುವದೇನಂದ್ರೆ:—

ಕುಂದಾಪುರ ಮುನ್ಸಿಫ್ ಕೋರ್ಟು O. S. No. 79/61 ರಲ್ಲಿ R. I. A. No 626/63ನೇ ಅರ್ಜಿಯಲ್ಲಿ ತಾ. 15–4—1964 ರಲ್ಲಿ ಕೊಡೋಣಾದ ತೀರ್ಪಿನ ಮೇಲೆ ಅಪ್ಪೀಲಾಂಟಳು ದಾಖಲು ಮಾಡಿರುವ ಮೇಲ್ಕಂಡ ಅಪ್ಪೀಲು ತಾ ರೀಕು 23—2—1965ಕ್ಕೆ ನಿಮ್ಮ ಆಕ್ಷೇಪ ನೋಟೀಸು ಬಗ್ಗೆ ಇರೋಣಾಗಿಯದೆಂತ ಈ ಮೂಲಕ ತಿಳಿಸೋಣಾಗಿದೆ.

P. V. ACHARYA.

Vakil for appellant

ಉಡುಪಿ. ತಾ 23–1–1965

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಈ ಮಾತಂತೂ ಸತ್ಯವೇ ಸತ್ಯ

(ನಾಲ್ಕನೇ ಪುಟದಿಂದ)

"ಅದು ನಿಜಾನ್ನಿ. ನೀವು ಆಜ್ಞೆ ಹೊರಡಿಸಿದ ಮಾತ್ರಕ್ಕೆ ಹಿಂದಿ ಸರಕಾರಿ ಭಾಷೆಯಾಗೋದು ಸಾಧ್ಯವೇಂತ? ನಾಲ್ಕು ವಾಕ್ಯ ಬರಿಯೋಕೆಬಾರದವ್ರು ಏನು ತಾನೇ ವ್ಯವಹಾರ ಮಾಡ್ತಾರು?"

"ಅದಕ್ಕೇ ನೋಡು ಹಿಂದಿ – ಇಂಗ್ಲಿಷ್ ಎರಡೂ ಇರೋದು...."

"ಅದರಿಂದ ಪ್ರಯೋಜನ...."

"ನೋಡು, ಸರಿಯಾಗಿ ಹೇಳ್ತೀನೆ. ಒಬ್ಬ ನೌಕರ ಇದ್ದಾನೆಂದು ತಿಳಿ"

"ಹ್ಞಾಂ...."

"ಅಂವ ಬಿಟ್ಟು ಹೋಗೋ ಪರಿಸ್ಥಿತಿಗೆ ಬಂದ. ಆಗ ಇನ್ನೊಬ್ಬನನ್ನ ನೇಮಿಸಿ ಮೊದಲವನಿಂದ ಇವನಿಗೆ ತರಬೇತಿ ಕೊಡಿಸ್ತೇದಿಲ್ಲೋ ಹಾಗೆ...."

ಅಂದ್ರೆ ಸದ್ಯ ಇಂಗ್ಲಿಷ್ ಉಳಿದುಕೊಂಡು ಹಿಂದಿಗೆ ತರಬೇತಿ ಕೊಡುತ್ತೆ; ಮುಂದೊಂದುದಿನ ಓಡಿ ಹೋಗುತ್ತೆ...."

'ಹ್ಞಾ....'

'ಅದಿರ್ಲಿ, ನೀವನ್ನೋ ಮಾತನ್ನ ಕೇಳಿದ್ರೆ ತಪ್ಪಿಲ್ಲಾಂತ ತೋರುತ್ತೆ. ಮತ್ತೆ ಮದ್ರಾಸಿಗಳ್ಗೆ ಏನಂತೆ ಹೆದರಿಕೆ ?'

'ಮತ್ತೇನು, ಹಿಂದಿಯನ್ನ ತಮ್ಮ ಮೇಲೆ ಬಲಾತ್ಕಾರವಾಗಿ ಹೇರ್ತಾರೇಂತ...'

"ಇದಕ್ಕೆ ನಿಮ್ಮ ಟೋಪಿಯವ್ರು ಏನಂತಾರೆ?"

"ಅಯ್ಯೋ, ಅವ್ರು ಅನ್ನೋದೇನು ಬಂತೂಂತ? ಅಹಿಂದೀ ಭಾಷಾ ಪ್ರದೇಶದ ಜನತೆ ಹಿಂದಿಯನ್ನು ತಾವಾಗಿ ಸ್ವೀಕರಿಸದ ಹೊರತು ಅವರ ಮೇಲೆ ಅದನ್ನು ಹೇರಲಾಗುವುದಿಲ್ಲ ಎನ್ನುತ್ತಾರೆ."

"ಇದಕ್ಕೆ ಭರವಸೆ?'

'ಭರವಸೆ? ಅನಿರ್ದಿಷ್ಟಾವಧಿಯವರೆಗೆ ಇಂಗ್ಲಿಷೂ ಮುಂದುವರಿಯಲಿರುವ ಅವಕಾಶ ಸಾಲದೆ?'

"ಅದೇ ನೋಡಿ, ನಾಳೆ ಇಂಗ್ಲಿಷ್ ಹೊರಟು ಹೋಗಲೀಂತಂದ್ರೆ?

'ಯಾಕೆ ಹಾಗೆ ಅನ್ನುತ್ತಾರೆ..."

'ಅನ್ನೋದಿಲ್ಲಾನಿ. ಆದ್ರೂ ಗಾಳಿ ತುಂಬಿದ ಪುಟ ಚೆಂಡಿನಂತೆ-ಹಿಂದೀಪ್ರದೇಶಿಗಳು ಗಾರಿ ಇಂಗ್ಲಿಷನ್ನೇ ಕಿತ್ತುತೆಗೆದರೆ?...."

"....ಹ್ಞೊ....ನೀನೂ ಮದ್ರಾಸಿಗಳ ಪರ ಇದ್ದೀಂತಾಯ್ತು."

"ನಾನು ಮದ್ರಾಸೀನಂವೇನು, ಮದ್ರಾಸಿನಲ್ಲೇ ಇದ್ದವಳಲ್ವೆ? ಇವತ್ತಿಗೂ ಹಿಂದಿನ ಮದ್ರಾಸು ಕರ್ನಾಟಕಕ್ಕೆ ಸೇರಿದವಳು ನಾನು."

"ಮತ್ತೆ ನಾನು?"

"ನನಗೇನು ಗೊತ್ತು?"

"ಗೊತ್ತೇ ಇಲ್ವೆ?"

"ಇಲ್ಲ. ನೀವೇ ಅನ್ನಿ."

"ನಾನೆಂದೋ ನಿನಗೇ ಸೇರಿದವನು."

"ಹ್ಹ ಹ್ಹ....ಸರಿ ಹೋಯ್ತು ಹಾಗಾದ್ರೆ....ನನಗಂತೂ ಹಿಂದೀ ಬರೋಲ್ಲ. ನೀವು ಹಿಂದೀ ಬರುವವ್ರು. ಹೀಗಿನ್ನೇ ವಾಗ ಅದನ್ನ ಪೂರಾ ನಂಬೋದು ಹೇಗೇಂತೆ...."

'ಓಹೋ ಅದಕ್ಕೀಗ ಹೆದರಿಕೆಯೆ?"

'ಏನು ಮಾಡ್ತೀರ?'

'ಇಲ್ಲಿ ಬಾ... ಹ್ಞಾ ಇನ್ನೂ ತುಸು....

'ಎಂತದಪ್ಪಾ ನಿಮ್ಮದು... ಎಲ್ಲಾ ಬಿಟ್ಟ ಮಗ ಭಂಗಿ ಸೇದಿ ಬಂದ ಹಾಗೆ...'

'ನೋಡು.... ನಾಕ್ಷಿ ಈಗ ಈ ಮಾತಂತೂ ಸತ್ಯವೇ ಸತ್ಯ ತಿಳಿಯಿತೆ?"

"ಥೂ.... ಹೋಗೀಂದ್ರೆ.... ಯಾರಾದ್ರೂ ನೋಡಿದ್ರೆ ಕೇಳಿದ್ರೆ ...'

'ಹೊಟ್ಟೆ ಹುರಿಯುತ್ತೇನ್ನು ..'

ಈಗಾಗಲೇ ನೆನಪಾಯಿತಲ್ಲ; ಹೊರಡಿ ಇನ್ನಾದರೂ....'

'ಹ್ಞಾಂ....'

—ಗೋರಾ.

ನಮ್ಮ-ನಮ್ಮವರು

ಪದ್ಮಶ್ರೀ ಮಾಧವ ಪೈ

ದಕ್ಷಿಣ ಕನ್ನಡ ಜಿಲ್ಲೆಯು ಬ್ಯಾಂಕಿಂಗ್ ಮತ್ತು ಶೈಕ್ಷಣಿಕ ರಂಗಗಳಲ್ಲಿ ಭಾರತದಲ್ಲಿಯೇ ಹೆಸರು ಪಡೆದಿದೆ. ಬುದ್ಧಿವಂತರೂ ವ್ಯವಹಾರಕುಶಲಿಗಳೂ ಎಂದು ಇಲ್ಲಿನವರನ್ನು ಎಲ್ಲರೂ ಹೊಗಳುತ್ತಾರೆ. ಸಿಂಡಿಕೇಟ್ ಬ್ಯಾಂಕಿನ ಚೆಯರ್‌ಮನ್ ಹಾಗೂ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಡಾ| ಟಿ. ಮಾಧವ ಅನಂತ ಪೈಯವರ ವ್ಯಕ್ತಿತ್ವವು ಬುದ್ಧಿವಂತಿಕೆಯಿಂದಲೂ ವ್ಯವಹಾರ ಕುಶಲತೆಯಿಂದಲೂ ಕೂಡಿದೆ. ಅವರ ದುಡಿಮೆ – ಸಾಹಸ ಧೈರ್ಯ ಮತ್ತು ದಿಟ್ಟ ಹೆಜ್ಜೆಗಳಿಂದಲೇ ದಕ್ಷಿಣ ಕನ್ನಡ ಜಿಲ್ಲೆಯ ಹೆಸರು ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಲ್ಲಿಯೇ ಪ್ರಖ್ಯಾತವಾಗಿದೆ. ಭಾರತದ ತುಂಬ ಹರಡಿರುವ ಸಿಂಡಿಕೇಟ್ ಬ್ಯಾಂಕ್ ಮತ್ತು ಭಾರತದ ಮೂಲೆ ಮೂಲೆಯಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸುವ ಮಣಿಪಾಲ ವೃತ್ತಿಪರ ಕಾಲೇಜುಗಳು ಡಾ| ಪೈಯವರ ಕರ್ತೃತ್ವ ಶಕ್ತಿಯ ಪ್ರತೀಕಗಳು. ಅವರು ನಾಡಿಗೆ ಸಲ್ಲಿಸಿದ ಸೇವೆ ಅನಿರ್ವಚನೀಯ. ಸರಕಾರವೇ ಮಾಡಲು ಹಿಂಜರಿಯುವ ಒಂದಲ್ಲ ನೂರು ಕಾರ್ಯಗಳನ್ನು ಅವರೊಬ್ಬರೇ ಮಾಡಿತೋರಿಸಿದ್ದಾರೆ "ಇಂದು ಭಾರತಕ್ಕೆ ಆರ್ಥಿಕ ಸಹಾಯಕ್ಕಿಂತಲೂ ಡಾ| ಪೈಯವರಂತಹ ಕಾರ್ಯಶೀಲರು ಬೇಕಾಗಿದ್ದಾರೆ" ಎಂಬ ನುಡಿ ಅಕ್ಷರಶಃ ನಿಜ. ಡಾ| ಪೈ ನಾಡಿಗೆ ಸಲ್ಲಿಸಿದ ಸೇವೆಯನ್ನು ರಾಷ್ಟ್ರಪತಿಗಳು ಮನಗಂಡು ಈ ವರ್ಷದ ಪ್ರಜಾಪ್ರಭುತ್ವ ದಿನದಂದು 'ಪದ್ಮಶ್ರೀ' ಪ್ರಶಸ್ತಿಯಿತ್ತು ಗೌರವಿಸಿದ್ದಾರೆ. ಮಾಧವ ಪೈಯವರು ಇದೀಗ 'ಪದ್ಮಶ್ರೀ" ಆದರೂ ಅವರು ಭಾರತರತ್ನ ಎಂದೇ ಹೇಳಬೇಕು.



ಶ್ರೀ ಡಿ. ಕೆ. ಹೆಬ್ಬಾರ್

ಪುತ್ತೂರಿನ ಜನರು ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಶ್ರೀ ಡಿ. ಕೆ. ಹೆಬ್ಬಾರರನ್ನು ಮರೆಯುವುದಿಲ್ಲ. ಯಾವ ಕಾರ್ಯಕ್ರಮವೇ ಇರಲಿ, ತನ್ನ ಅವಶ್ಯಕತೆಯಿದೆಯೆಂದಾದರೆ ಶ್ರೀ ಹೆಬ್ಬಾರರು ಹಿಂಜರಿಯುವುದಿಲ್ಲ. ಟಿಂಬರ್ ಕಂಟ್ರಾಕ್ಟ್ ವ್ಯವಹಾರದಲ್ಲಿ ತೊಡಗಿದ ಶ್ರೀ ಹೆಬ್ಬಾರರು ತನ್ನ ವ್ಯವಹಾರದಲ್ಲಿ ಹೆಸರು ಪಡೆದವರು. ಆದರೂ ಸಾರ್ವಜನಿಕರಿಂದ ಬೇರೆಯಾಗಿ ನಿಂತಿಲ್ಲ. ಪುತ್ತೂರಿನ ಮಹಾಲಿಂಗೇಶ್ವರ ದೇವಾಲಯದ ಪ್ರಧಾನ ಧರ್ಮದರ್ಶಿಯಾಗಿ ಇವರು ದೇವಳದ ಬಹು ಮಟ್ಟಿನ ಸುಧಾರಣೆಗೆ ಕಾರಣರಾಗಿದ್ದಾರೆ. ಸುಬ್ರಹ್ಮಣ್ಯ ಕ್ಷೇತ್ರದ ಆಡಳಿತ ಸಮಿತಿಯ ಸದಸ್ಯರಾಗಿದ್ದುಕೊಂಡು ತನ್ನ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಧರ್ಮದಲ್ಲಿ ಆಸ್ಥೆಯಿರುವಂತೆಯೇ ಕಲೆಗಳಲ್ಲಿಯೂ ಇವರಿಗೆ ಆಸಕ್ತಿ ಇದೆ. ತಾರುಣ್ಯವನ್ನು ದಾಟಿದ್ದರೂ ಇವರಲ್ಲಿ ತರುಣೋತ್ಸಾಹ ತುಂಬಿ ಹರಿಯುತ್ತಿದೆ. ಉದಾರಿಗಳೂ, ಸೇವಾ ಕಾಂಕ್ಷಿಗಳೂ ಆದ ಹೆಬ್ಬಾರರು ನಿಗರ್ವಿಗಳು, ನಿರಹಂಕಾರಿಗಳು. ಇವರ ಸದ್ಭಾವನೆಯೇ ಅವರ ವ್ಯಕ್ತಿತ್ವವನ್ನು ನಿರ್ಮಿಸಿದೆ ಎಂದರೆ ತಪ್ಪಿಲ್ಲ. ಶ್ರೀಯುತರ ಉತ್ಸಾಹದ ಪ್ರಯೋಜನವನ್ನು ಜನತೆ ಸರಿಯಾಗಿ ಮಾಡಿಕೊಳ್ಳುತ್ತಿದೆ; ಮುಂದೆಯೂ ಮಾಡಿಕೊಳ್ಳಬೇಕು.

ಮಂಡಲ ಕಾಂಗ್ರೆಸ್ ಸಮ್ಮೇಳನ

ಮಂಗಳೂರು ಜಪ್ಪು ಮಂಡಲ ಕಾಂಗ್ರೆಸ್ ಸಮ್ಮೇಳನವು ಕಳೆದ 10ರಂದು ಆಹಾರ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಎ ಜಗನ್ನಿವಾಸ ಶೆಟ್ಟರು ಸ್ವಾಗತಿಸಿದರು.

ಶ್ರೀ ಪೈಗಳು ಮಾತನಾಡುತ್ತಾ ಇಂಥ ಸಂಸ್ಥೆ ಹೊರದೇಶಗಳಲ್ಲೂ ಇವೆ, ಇದಕ್ಕೆ ಜನತೆ ಚೆನ್ನಾದ ಬೆಂಬಲವನ್ನೀಯಬೇಕು. ಸಾರ್ವಜನಿಕ ಬೆಂಬಲವೇ ಮುಖ್ಯವಾದ್ದು ಎಂದರು.

ಈ ಸಮಾರಂಭದ ಅಂಗವಾಗಿ ಬೆಳಿಗ್ಗೆ 9 ಗಂಟೆಗೆ ಶ್ರೀ ಎಚ್. ಎಲ್. ಡಿ. ಪಿಂಟೋ ರವರು ಧ್ವಜಾರೋಹಣಗೈದರು. ಆ ಬಳಿಕ ಪ್ರತಿನಿಧಿಗಳ ಸಭೆಯು ಶ್ರೀ ಕೆ. ಎಸ್. ಎನ್. ಅಡಿಗರಿಂದ ಉದ್ಘಾಟಿಸಲ್ಪಟ್ಟಿತು.

ಪ್ರಕಟಣೆ

ಉಡುಪಿ ತಾಲೂಕು ಹೆರ್ಗ ಗ್ರಾಮದಲ್ಲಿರುವ ಪುತ್ತೂರು ಮನೆ ಅನಂತಯ್ಯ ಶ್ಯಾನುಭಾಗರ ಮಕ್ಕಳು ಪಾಂಡುರಂಗ ಶ್ಯಾನುಭಾಗ, ರಾಮಚಂದ್ರ ಶ್ಯಾನುಭಾಗ, ಸಂಜೀವ ಶ್ಯಾನುಭಾಗ, ಮೃತ ಮಂಜುನಾಥ ಶ್ಯಾನುಭಾಗರ ಹೆಂಡತಿ ಸುಂದರಿ, ಇವರ ಮಕ್ಕಳು ಅಪ್ಪುರಾಯ ಮತ್ತು ಪ್ರೈನರ್ ಪಾಂಡುರಂಗ ವಗ್ಗೈರರ ಗಾರ್ಡಿಯನ್ ಆಗಿರುವ ಮೃತ ಮುಕುಂದ ಶ್ಯಾನುಭಾಗರ ಹೆಂಡತಿ ಪಾರ್ವತಿ ಸ್ವತಃ ಮತ್ತು ತನ್ನ ಪ್ರೈನರ್ ಮಕ್ಕಳ ಗಾರ್ಡಿಯನಳಾಗಿ ಸಹ ಇವರು ಸರ್ವರಿಗೂ ಈ ಮೂಲಕ ತಿಳಿಸುವುದೇನೆಂದರೆ:— ನಮ್ಮ ಕುಟುಂಬದ ಪಿತ್ರಾರ್ಜಿತ ಪಕ್ಕಿನ ಮೂಲಗೇಣಿ ಆಸ್ತಿಗಳೂ ಚರ ಸೊತ್ತುಗಳೂ 10ರ 3ನೆ ವರೆಗಿನವರ ತಂದೆ ಮತ್ತು ಮನೆ ಅನಂತಯ್ಯ ಶ್ಯಾನಭಾಗರ ಇವರ ಮಗ ಶ್ರೀನಿವಾಸ ಶ್ಯಾನುಭಾಗನ ಒಟ್ಟಿಗಿದ್ದು ತಂದೆಯವರ ಸ್ವಾಧೀನವಿದ್ದು ಸಾಲವೇನೂ ಇಲ್ಲದೆ, ಸಾಲ ಮಾಡುವ ಅಗತ್ಯ ಕೂಡಾ ಇಲ್ಲದೆ; ಕೃತಕ ಸಾಲಗಳನ್ನು ಕಲ್ಪಿಸಿಕೊಂಡು ಅವರು ಆಸ್ತಿ ಪರಾಧೀನ ಮಾಡುವ ಅಭಿಪ್ರಾಯದಲ್ಲಿರುತ್ತಾರೆ. ಸದ್ರಿಯವರಿಗೆ ಯಾರೂ ಸಾಲ ಕೊಡಕೂಡದು ಮತ್ತು ಅವರಿಂದ ಆಸ್ತಿಯನ್ನು ಯಾವ ತರದಿಂದಲೂ ಸ್ವಾಧೀನ ಮಾಡಿಕೊಳ್ಳಕೂಡದು ಇದಕ್ಕೆ ವಿರೋಧವಾಗಿ ಸಾಲ ಕೊಟ್ಟರೆಯೂ ಸ್ವಾಧೀನ ಮಾಡಿಕೊಂಡರೆ ಅವುಗಳು ಸಿಂಧುವಾಗಲಿಕ್ಕಿಲ್ಲ ವ ನಮ್ಮನ್ನು ಬದ್ಧೀಕರಿಸಲಿಕ್ಕಿಲ್ಲ. ನಾವು ಸದ್ರಿ ಅನಂತಯ್ಯ ಶ್ಯಾನುಭಾಗರಿಗೆ ಕೂಡಾ ತಾ. 27-1-1965ನೆಗೆ ಕಳುಹಿಸಿದ ವಕಾಲತ್ ನೋಟೀಸು ಪ್ರಕಾರ ನಾವು ಕುಟುಂಬದಿಂದ ವಿಭಕ್ತರಾಗಿದ್ದೇವೆ. ತಿಳಿದಿರಲಿ.

1. M ಪಾಂಡುರಂಗ ಶ್ಯಾನುಭಾಗ.
2. M. ರಾಮಚಂದ್ರ ಶ್ಯಾನುಭಾಗ.
3. M. ಸಂಜೀವ ಶ್ಯಾನುಭಾಗ.
4. ಪಾರ್ವತಿ ಶ್ಯಾನುಭಾಗ್.
5. ಸುಂದರಿ ಶ್ಯಾನುಭಾಗ.
6. ಅಪ್ಪುರಾಯ ಶ್ಯಾನುಭಾಗ.

ಹೆರ್ಗ,
ತಾರೀಕು 28-1-1965.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ

ಕಥಾ ಕೌಮುದಿ

(ಪದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರ: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆ: ರೂ. ೧-೮-೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಎಲ್ಲೆಲ್ಲಿ ಏನೇನು?

ಯೂನಿಯನ್ ದಿನಾಚರಣೆ

ಉಡುಪಿ, ತಾ. 22–ಎಂ.ಜಿ.ಎಂ. ಕಾಲೇಜಿನ ವಿದ್ಯಾರ್ಥಿ ಯೂನಿಯನ್‌ನ ವಾರ್ಷಿಕೋತ್ಸವವು ಯಶಸ್ವಿಯಾಗಿ ನೆರವೇರಿತು. ಯೂನಿಯನ್‌ನ ಸಮಾರೋಪ ಭಾಷಣವನ್ನು ಮಾಡಲು ಮಂಗಳೂರಿನ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಎನ್. ರಾಮರಾವ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರಾರಂಭದಲ್ಲಿ ಉಪಾಹಾರವಾದ ಮೇಲೆ ಯೂನಿಯನ್‌ನ ಅಧ್ಯಕ್ಷ ಪ್ರಭಾಕರ ಶೆಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ವೇದವ್ಯಾಸ ಆಚಾರ್ಯರು ವರದಿಯನ್ನೊಪ್ಪಿಸಿದರು. ಪದವೀ ತರಗತಿಗಳ ಕೊನೆಯ ವರ್ಷದ ವಿದ್ಯಾರ್ಥಿಗಳಿಗೆ ಮೊದಲ ವರ್ಷದ ವಿದ್ಯಾರ್ಥಿ ಟೀ ಪಾರ್ಟಿ ಯೊಂದಿಗೆ ಶುಭಾಶಂಸನೆಯನ್ನು ನೀಡಿದರು. ಕೊನೆಯ ವರ್ಷದ ವಿದ್ಯಾರ್ಥಿಗಳ ಪರವಾಗಿ ರಮೇಶ್ ರಾವ್ ಉತ್ತರ ನೀಡಿದ ಬಳಿಕ ಮುಖ್ಯ ಅತಿಥಿಗಳು ವಿವಿಧ ಸ್ಪರ್ಧೆಗಳ ಬಹುಮಾನಗಳನ್ನು ವಿತರಣೆ ಮಾಡಿದರು. ಶ್ರೀ ರಾಮರಾವ್ ಅವರು ತಮ್ಮ ಸಮಾರೋಪ ಭಾಷಣದಲ್ಲಿ ವಿದ್ಯಾರ್ಥಿಗಳು ಭಾಷಣ ಕಲೆಯನ್ನು ಹೇಗೆ ಬೆಳೆಸಿಕೊಳ್ಳಬಹುದೆಂದು ಸರಸವಾಗಿ ವಿವರಿಸಿದರು. ಹರಿಜನರು ಸಮಾಜದಲ್ಲಿ ಇನ್ನೂ ಸಮಾನತೆ ಹೊಂದದಿರುವುದರ ಕುರಿತಾಗಿ ಅವರು ವಿಷಾದ ವ್ಯಕ್ತಪಡಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ರಾಮರಾಯರ ಅಭಿಪ್ರಾಯಗಳನ್ನು ಅನುಮೋದಿಸಿ ಮಾತನಾಡಿದರು.

ಕಾಲೇಜು ವಾರ್ಷಿಕೋತ್ಸವ

ತಾ. 23, ಎಂ.ಜಿ.ಎಂ. ಕಾಲೇಜಿನ ವಾರ್ಷಿಕೋತ್ಸವವು ಮಣಿಪಾಲದ ಇಂಜಿನಿಯರಿಂಗ್ ಕಾಲೇಜಿನಪ್ರಿನ್ಸಿಪಾಲ್ ಶ್ರೀ ಪಿ. ವೆಂಕಟ್ರಮಣ ಭಟ್‌ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರೊ|| ಟಿ. ಕೃಷ್ಣರಾವ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಕಾಲೇಜಿನ ಪ್ರಗತಿಪರ ವರದಿಯನ್ನೋದಿದರು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದ ಬಳಿಕ ಶ್ರೀ ವೆಂಕಟ್ರಮಣ ಭಟ್ಟರು ಅಧ್ಯಕ್ಷ ಭಾಷಣದಲ್ಲಿ ಎಂ.ಜಿ.ಎಂ. ಕಾಲೇಜಿನ ಅಭಿವೃದ್ಧಿಯ ಕುರಿತು ಮೆಚ್ಚಿಗೆಯನ್ನು ವ್ಯಕ್ತಪಡಿಸಿದರಲ್ಲದೆ ವಿದ್ಯಾರ್ಥಿಗಳಿಗೆ ಹಿತವಚನಗಳನ್ನಾಡಿದರು. ಕೊನೆಗೆ ಕಾರ್ಯದರ್ಶಿ ವೇದವ್ಯಾಸ ಆಚಾರ್ ಅವರಿಂದ ಧನ್ಯವಾದಾರ್ಪಣೆ ನಡೆಯಿತು. ಕಾಲೇಜಿನ ವಿದ್ಯಾರ್ಥಿಗಳು "ಷಾಹಜಹಾನ್" ಎಂಬ ಐತಿಹಾಸಿಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು

ಬಂಟರ ಯಾನೆ ನಾಡವರ ಸಂಘ

ಮುಂಬಯಿ, ಬಂಟರ ಯಾನೆ ನಾಡವರ ಸಂಘದ 1966ನೇ ಇಸವಿಯ ಕೆಲಂಡರುಗಳನ್ನು ಸಂಘದ ಸದಸ್ಯರು ಆಡಳಿತ ಸಮಿತಿಯ ಸದಸ್ಯರಿಂದ ಇಲ್ಲವೇ ಸಂಘದ ಆಫೀಸಿನಿಂದ ಧರ್ಮಾರ್ಥವಾಗಿ ಪಡೆಯಬಹುದೆಂದು ಸಂಘದ ಗೌರವ ಪ್ರಧಾನ ಕಾರ್ಯದರ್ಶಿಯವರು ಈ ಮೂಲಕ ತಿಳಿಸುತ್ತಾರೆ.

(ಮೂರನೇ ಪುಟದಿಂದ)

ತೀಯ ಸ್ವಾತಂತ್ರ್ಯವನ್ನು ಒಪ್ಪದೆ ಹೋದರೂ ಭಾರತೀಯರಿಗೆ ಅವರ ವ್ಯಕ್ತಿತ್ವದ ಬಗ್ಗೆ ಅಚಲ ವಿಶ್ವಾಸವಿತ್ತು. ಅವಿಶ್ರಾಂತರಾಗಿ ದುಡಿಯುವ ಮನೋವೃತ್ತಿ, ಕೆಚ್ಚೆದೆಯಿಂದ ಹಿಡಿದ ಕಾರ್ಯವನ್ನು ಸಾಧಿಸುವ ಆತ್ಮಶಕ್ತಿ ಮತ್ತು ಅಂತಹ ಪ್ರವೃತ್ತಿ, ಮಹತ್ವಾಕಾಂಕ್ಷೆಗಳು ಮುಪ್ಪರಿಗೊಂಡಂತಿದ್ದ ಚರ್ಚಿಲ್ ನೈಜ ರಾಜಕಾರಣಿಗಳು ಹೇಗಿರಬೇಕು ಎಂಬುದನ್ನು ಆಚರಿಸಿ ತೋರಿಸಿದ್ದಾರೆ. ಬ್ರಿಟನ್ನಿನ ಕೆಲವೇ ಮಂದಿ ರಾಷ್ಟ್ರೀಯ ನಾಯಕರಲ್ಲಿ ಚರ್ಚಿಲ್ಲರ ಸ್ಥಾನ ಸ್ಥಿರವಾಗಿದೆ. ಇಂತಹ ಮಹಾನಾಯಕನ ಸ್ಮೃತಿ ಎಂದಿಗೂ ಹಾರಿಹೋಗದು.

ಆಹಾರಾಭ್ಯಾಸದಲ್ಲಿ ಬದಲಾವಣೆ

ಮಣಿಪಾಲ, ಜ. 20—ಉಡುಪಿ ರೋಟರಿ ಕ್ಲಬ್, ಮಣಿಪಾಲ ಇಂಜಿನಿಯರಿಂಗ್ ಕಾಲೇಜ್, ಮತ್ತು ಶಿವಳ್ಳಿ ಪಂಚಾಯತ್ ಒಟ್ಟಿಗೆ ಸೇರಿ ಆಹಾರ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಯೋಗಿಗಲಾಡಿಸಿ ದೇಶದ ಇತರ ಭಾಗಗಳಿಗೆ ಮಾದರಿಯಾಗಬೇಕೆಂದು ಭಾರತದ ಆಹಾರ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈ ನಿನ್ನೆ ಇಲ್ಲಿ ಸೂಚಿಸಿದರು.

ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ವ್ಯರ್ಥಗೊಳಿಸದಿರುವುದು, ಆಹಾರಾಭ್ಯಾಸದಲ್ಲಿ ಬದಲಾವಣೆ ಹಾಗೂ ಹೆಚ್ಚು ಆಹಾರ ಬೆಳೆಯುವುದು ಅತ್ಯಗತ್ಯವೆಂದು ಅವರು ರೋಟರಿ ಕ್ಲಬ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು. ಕ್ಲಬ್ಬಿನ ಅಧ್ಯಕ್ಷ ಡಾ| ಎ. ಕೃಷ್ಣರಾವ್ ಅಧ್ಯಕ್ಷತೆ ವಹಿಸಿದ್ದರು.

ಪ್ರತಿ ಜಿಲ್ಲೆಯಲ್ಲೂ ಮಣ್ಣಿನ ಪರೀಕ್ಷೆ ಮಾಡುವ ಪ್ರಯೋಗಾಲಯಗಳಿರುವುದಗತ್ಯವೆಂದು ಶ್ರೀ ಪೈ ಒತ್ತಿ ನುಡಿದರು. ಈಗ ಇಡೀ ಮೈಸೂರ ರಾಜ್ಯಕ್ಕೆ ಹೆಬ್ಬಾಳದಲ್ಲಿ ಮಾತ್ರ ಒಂದು ಮಣ್ಣಿನ ಪರೀಕ್ಷೆಯ ಪ್ರಯೋಗಾಲಯವಿದೆ. ಕಸ್ತೂರ ಬಾ ಮೆಡಿಕಲ್ ಕಾಲೇಜಿನ ಉಪಕರಣಗಳು ಮಣ್ಣನ್ನು ಪರೀಕ್ಷಿಸುವುದಕ್ಕೆ ಉಪಯುಕ್ತವಾಗಿದ್ದು, ಅದಕ್ಕಾಗಿ ಸಿಂಡಿಕೇಟ್ ಬ್ಯಾಂಕ್ ರೂ. 15,000 ಕೊಟ್ಟಿದೆ ಎಂದರು. ಇತರ ಜಿಲ್ಲೆಗಳಲ್ಲಿ ಮಣ್ಣಿನ ಪರೀಕ್ಷಾಲಯಗಳನ್ನು ಸ್ಥಾಪಿಸುವುದಕ್ಕೆ ಫೋರ್ಡ್ ಫೌಂಡೇಶನ್ನಿನ ನೆರವು ಸಿಗುವ ಸಂಭವವಿದೆ ಎಂದರು. ಕಲ್ಯಾಣಪುರದ ಕೃಷಿ ಕೋವಿದ ಶ್ರೀ ಕೆ. ಕೆ. ಚಿಜೋದಿಯವರು ಭಾಷಣ ಮಾಡಿದರು.

ಕ್ರೀಡೋತ್ಸವ

ಪೆರ್ಡೂರು ಹೈಸ್ಕೂಲಿನ ಕ್ರೀಡೋತ್ಸವ ಮತ್ತು ಬಹುಮಾನ ವಿತರಣೋತ್ಸವವು ತಾ. 22ರಂದು ನಡೆಯಿತು. ಶ್ರೀ ಪಿ. ಬಾಲಕೃಷ್ಣ ಶೆಟ್ಟರು ಉತ್ಸವವನ್ನು ಉದ್ಘಾಟಿಸಿದರು. ಶ್ರೀ ಪಿ. ಹಿರಿಯಣ್ಣ ಶೆಟ್ಟಿಗಾರರು ಬಹುಮಾನ ವಿತರಣೆ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಕೆ. ಗೋಪಾಲಕೃಷ್ಣ ಉಪಾಧ್ಯಾಯರು ಸ್ವಾಗತಿಸುತ್ತ 1964ರಲ್ಲಿ ಶಾಲೆಯು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಮೊತ್ತಮೊದಲು ಕಳಿಸಿದ ವಿದ್ಯಾರ್ಥಿ ತಂಡವು ಸೇ. 100ರಷ್ಟು ಫಲಿತಾಂಶ ಪಡೆದುದನ್ನು ಸ್ಮರಿಸಿಕೊಂಡರು. ಕುಮಾರ ಎ. ಹರ್ಷವರ್ಧನ ಸೂಡರು ಶಾಲಾ ವಿದ್ಯಾರ್ಥಿ ಸಂಘದ ವರದಿಯೋದಿದರು. ಶ್ರೀ ಎಸ್. ಗೋಪೀಚಂದ ರಾಯರು ಸಂದೇಶವೋದಿದರು. ಶ್ರೀ ಕೃಷ್ಣಮೂರ್ತಿ ಹೆಬ್ಬಾರರು ಕೊನೆಯಲ್ಲಿ ಧನ್ಯವಾದ ಸಮರ್ಪಿಸಿದರು. ವಿದ್ಯಾರ್ಥಿಗಳ ಲಘು ಮನರಂಜನಾ ಕಾರ್ಯಕ್ರಮಗಳೂ ಏರ್ಪಟ್ಟಿದ್ದವು.

ಸಹಾಯಾರ್ಥ ನಾಟಕ

ಪೆರ್ಡೂರು ಹೈಸ್ಕೂಲಿನ ಸಹಾಯಾರ್ಥವಾಗಿ ಅಲ್ಲಿನ ಕಲಾಸೇವಾ ಮಂಡಳಿಯವರು ತಾ. 23ರಂದು "ಕನ್ನಡದ ಗಂಡುಗಲಿ" ಎಂಬ ಐತಿಹಾಸಿಕ ನಾಟಕವನ್ನು ಅಭಿನಯಿಸಿದರು. ಪ್ರಸಿದ್ಧ ಅರ್ಥಧಾರಿಗಳ ಕೂಡಿಕೆಯಿಂದ "ಶ್ರೀಕೃಷ್ಣ ಸಂಧಾನ"ವೆಂಬ ಯಕ್ಷಗಾನವೂ ಅಂದು ಏರ್ಪಟ್ಟಿತ್ತು. ವೆಚ್ಚ ಕಳೆದು ಸುಮಾರು ಎರಡು ಸಾವಿರ ರೂ. ಉಳಿಯಬಹುದೆಂದೂ ಇದನ್ನು ಹೈಸ್ಕೂಲಿನ ಅಧಿಕಾರಿಗಳಿಗೊಪ್ಪಿಸಲಾಗುವುದೆಂದೂ ತಿಳಿದುಬಂದಿದೆ.

ಪ್ರಜಾಪ್ರಭುತ್ವ ದಿನ

ಪೆರ್ಡೂರು ಹೈಸ್ಕೂಲಿನಲ್ಲಿ ಸ್ಫೂರ್ತಿ ಮಂದಿರದ ನೇತೃತ್ವದಲ್ಲಿ ಪ್ರಜಾಪ್ರಭುತ್ವ ದಿನವನ್ನು ಶ್ರೀ ಎಚ್. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಡಾ| ಕೆ. ದಾಸಪ್ಪ ರೈಯವರ ನಿಧನ

ಪುತ್ತೂರಿನ ಪ್ರಪ್ರಥಮ ಪದವೀಧರ ಡಾಕ್ಟರರೂ, ನೇತ್ರ ಹಾಗೂ ಹೆರಿಗೆಯ ಚಿಕಿತ್ಸೆಯಲ್ಲಿ ನಿಷ್ಣಾತರೂ ಆಗಿದ್ದ ಡಾ|| ಕೆ. ದಾಸಪ್ಪ ರೈಯವರು ಕಳೆದ ತಾ 30-1-1965ರಂದು ಪುತ್ತೂರಿನ ತನ್ನ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಪಡುತ್ತದೆ. ಶ್ರೀಯುತರು ಪುತ್ತೂರು ತಾಲೂಕಿನ ಬಂಟರ ಸಮಾಜದ ಒಂದು ಕುಲೀನ ಮನೆತನಕ್ಕೆ ಸೇರಿದವರಾಗಿದ್ದು, ಮದ್ರಾಸಿನಲ್ಲಿ ಅಭ್ಯಾಸ ನಡೆಸಿ ಎಲ್. ಎಂ. ಪಿ. ಪದವಿಯನ್ನು ಪಡೆದು 1930ರಿಂದ ಈ ತನಕ ಪುತ್ತೂರಿನಲ್ಲಿ ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿದ್ದರು. ದೀರ್ಘ ಕಾಲದ ಅನುಭವದಿಂದ ಜನಪ್ರಿಯರಾಗಿದ್ದ ಶ್ರೀ|| ರೈಯವರ ನಿಧನದಿಂದ ಖೇದಗೊಂಡಿರುವ ಅವರ ಬಂಧುಗಳ ದುಃಖದಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ.

ಭಡ್ತಿ ಹೊಂದಿ ನೇಮಕ

ಉಡುಪಿಯ ಶ್ರೀ ಮತ್ತು ಶ್ರೀಮತಿ ರೋಕಿ ಫೆರ್ನಾಂಡಿಸರ ಪುತ್ರ ಶ್ರೀ ಎಮ್. ಎಲ್. ಟಿ. ಫೆರ್ನಾಂಡಿಸ್, ಎಂ. ಎ. ಎಲ್ ಎಲ್. ಬಿ. ಸಿ. ಎ. ಐ. ಐ. ಬಿ. ಇವರು ಲಕ್ನೋದಲ್ಲಿ ರಿಜರ್ವ್ ಬೇಂಕಿನ ರೂರಲ್ ಕ್ರೆಡಿಟ್ ಆಫೀಸರರಾಗಿ ಭಡ್ತಿ ಹೊಂದಿ ನೇಮಕವಾಗಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ. ಶ್ರೀ ಫೆರ್ನಾಂಡಿಸರು ಮೊತ್ತಮೊದಲು ರಿಸರ್ವ್ ಬೇಂಕಿನ ಬೊಂಬಾಯಿಯ ಆಫೀಸಿನಲ್ಲಿ ಕೆಲಸಕ್ಕೆ ಸೇರಿ, ಬಳಿಕ ಭಡ್ತಿಯಾಗುವ ತನಕ ಹೈದರಾಬಾದು ಶಾಖೆಯಲ್ಲಿದ್ದರು. ಶ್ರೀಯುತರು ಎಂ. ಜಿ. ಎಂ. ಕಾಲೇಜಿನ ಆರಂಭದ ಪದವೀಧರರಿದ್ದು ಅವರ ವಿಧಾಯಕ ಮತ್ತು ಬಹು ವಿಧ ಚಟುವಟಿಕೆಗಳಿಗಾಗಿ ಖ್ಯಾತರಾಗಿ, ಮುಂಬಾಯಿಯಲ್ಲಿಯೂ ಅದನ್ನು ಮುಂದುವರಿಸಿಕೊಂಡು ಎಂ. ಜಿ. ಎಂ. ಹಳೆ ವಿದ್ಯಾರ್ಥಿಗಳ ಸಂಘ ಸ್ಥಾಪನೆಯಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದರು. ಶ್ರೀ ಮತ್ತು ಶ್ರೀಮತಿ ಫೆರ್ನಾಂಡಿಸರ ಮಕ್ಕಳೆಲ್ಲರೂ ತಮ್ಮ ತಮ್ಮ ಹುದ್ದೆಗಳಲ್ಲಿ ಪ್ರತಿಭಾಶಾಲಿಗಳೆನಿಸಿಕೊಂಡು ಗಣ್ಯರಾಗಿರುವುದಲ್ಲದೆ ಅವರ ಹೆತ್ತವರ ಪರಂಪರೆಯನ್ನೂ ಮುಂದುವರಿಸುತ್ತಿರುವುದು ಶ್ಲಾಘನೀಯ.

ಕಾಲೇಜ್ ದಿನಾಚರಣೆ

ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವವು ಕಳೆದ ತಾ. 23ರಂದು ಜಿಲ್ಲಾಧಿಕಾರಿ ಶ್ರೀ ವಿ. ಯಂ. ಮುಚಾಸುದ್ ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರರು ಸ್ವಾಗತಿಸಿ, ವರದಿಯನ್ನೋದಿದರು. ಶುಭಕೋರಿ ಬಂದ ಸಂದೇಶಗಳನ್ನು ಕಾಲೇಜು ಯೂನಿಯನ್‌ನ ಕಾರ್ಯದರ್ಶಿ ಶ್ರೀ ಅಪ್ಪು ಶೆಟ್ಟರು ಓದಿದರು. ಅಧ್ಯಕ್ಷರಿಂದ ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿದವರಿಗೆ ಬಹುಮಾನ ವಿತರಣೆಯಾಯಿತು. ಕೊನೆಯಲ್ಲಿ ಯೂನಿಯನ್ ಅಧ್ಯಕ್ಷ ಶ್ರೀ ದಾಮೋದರ ರಾಯರು ಧನ್ಯವಾದ ಸಮರ್ಪಿಸಿದರು. ರಾತ್ರಿ ವಿವಿಧ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದವು.

ಮರುದಿನ, ಕಾರ್ಕಳ ಭುವನೇಂದ್ರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ದಾಮೋದರ ಕಿಣಿಯವರ ಅಧ್ಯಕ್ಷತೆಯಲ್ಲಿ ಯೂನಿಯನ್‌ನ ವಾರ್ಷಿಕೋತ್ಸವವು ನೆರವೇರಿತು. ಶ್ರೀ ಇನಾಂದಾರರು ಸ್ವಾಗತಿಸಿದ ಬಳಿಕ ಕುಮಾರಿ ಪಿ. ಲಕ್ಷ್ಮಿಯವರು ಶುಭ ಕೋರಿ ಬಂದ ಸಂದೇಶಗಳನ್ನೋದಿದರು. ಶ್ರೀ ಅಪ್ಪು ಶೆಟ್ಟರು ಯೂನಿಯನ್‌ನ ವಾರ್ಷಿಕ ವರದಿಯನ್ನೋದಿ ಧನ್ಯವಾದ ಸಮರ್ಪಿಸಿದರು. ರಾತ್ರಿಯಲ್ಲಿ ಮನರಂಜನಾ ಕಾರ್ಯಕ್ರಮಗಳ ಏರ್ಪಾಡಾಗಿತ್ತು.

ತಾ. 25ರಂದು ಹಾಸ್ಟೆಲ್ ದಿನಾಚರಣೆಯು ಪ್ರಿನ್ಸಿಪಾಲ್ ಶ್ರೀ ಇನಾಂದಾರರ ಅಧ್ಯಕ್ಷತೆಯಲ್ಲಿ ನೆರವೇರಿತು.

ಶಾಲಾ ವಾರ್ಷಿಕೋತ್ಸವ

ಉಡುಪಿ, ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವವು ಕಳೆದ ತಾ. 26ರಂದು ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಎನ್. ಆಚಾರ್ಯರು ಸ್ವಾಗತ ಭಾಷಣ ಮಾಡಿದರು. ವರದಿವಾಚನವಾದ ಮೇಲೆ ಶ್ರೀ ಜಿ. ವಿ. ಸಿದ್ಧೇಶ್ವರ ಇವರು ಬಹುಮಾನ ವಿತರಣೆ ಮಾಡಿ ಹಿತವಚನಗಳನ್ನಾಡಿದರು. ಅಧ್ಯಕ್ಷರು ಮಾತನಾಡುತ್ತಾ ವಿದ್ಯಾರ್ಥಿಗಳು ಶಿಸ್ತಿನಿಂದಿದ್ದು ಗುರು ಹಿರಿಯರಿಗೆ ವಿಧೇಯರಾಗಿರಬೇಕೆಂದರು. ವಿದ್ಯಾರ್ಥಿ ಮುಖಂಡ ಉಮಾನಾಥ ಶೆಟ್ಟರು ಧನ್ಯವಾದ ಸಮರ್ಪಿಸಿದ ಬಳಿಕ ವಿವಿಧ ವಿನೋದಾವಳಿಗಳಾದವು.

ಬೆಳಿಗ್ಗೆ ಶ್ರೀ ಎ. ಕೊರಗಪ್ಪನವರಿಂದ ಧ್ವಜಾರೋಹಣವಾಗಿ ವಿದ್ಯಾರ್ಥಿಗಳಿಗೆ ಉಪಾಹಾರ ನಡೆದಿತ್ತು.

ಪ್ರಜಾಪ್ರಭುತ್ವ ದಿನಾಚರಣೆ

ಉಡುಪಿ, ಗಾಂಧಿ ಮೈದಾನಿನಲ್ಲಿ, ನಗರ ಸಭೆಯ ಆಶ್ರಯದಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು, ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರಿಂದ ಧ್ವಜಾರೋಹಣ ಕಾರ್ಯಕ್ರಮದೊಂದಿಗೆ ನೆರವೇರಿತು. ಸಂಜೆ ಸಾರ್ವಜನಿಕ ಸಭೆಯು ಶ್ರೀ ಜಿ. ಸಿ. ರೇಗೋರವರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಪಂದ್ಯಾಟಗಳಲ್ಲಿ ಜಯಗಳಿಸಿದವರಿಗೆ ಶ್ರೀಮತಿ ರೇಗೋರವರು ಬಹುಮಾನ ವಿತರಣೆಗೈದರು. ಡಾ| ಮೋಹನದಾಸ್ ಪೈ ಮತ್ತು ಶ್ರೀ [illegible] ಮಾತನಾಡಿದರು.

ಶ್ರೀ ಪಿ. [illegible] ಅಧ್ಯಕ್ಷತೆಯಲ್ಲಿ ವಿಶ್ವೇಶ್ವರಯ್ಯ ಜ್ಯುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಜರಗಿದ ಪ್ರಜಾಪ್ರಭುತ್ವ ದಿನಾಚರಣಾ ಸಮಾರಂಭದಲ್ಲಿ ಶ್ರೀ ಮೋಹನ್‌ದಾಸ್ ಬಾಳಿಗರವರು ಸ್ವಾಗತಿಸಿದರು. ಶ್ರೀ ಎ. ಜಿ. ಆಲ್ವಾಯವರು ಮಾತನಾಡಿದ ಬಳಿಕ ಶ್ರೀ— ಕೆ. ಕೆ. ಪೈಗಳು ಧನ್ಯವಾದ ಸಮರ್ಪಿಸಿದರು.



ಇದು ಗೂಢ ರಹಸ್ಯ

ಇದು ಬೊಜ್ಜು ಬೆಳೆದವರು ಮಾತ್ರ ಓದಿರಿ

ಬೆಳಿಗ್ಗೆ ಏಳುಗಂಟೆಗೆ ಸರಿಯಾಗಿ ಅಂಗಡಿಯ ಬಾಗಿಲು ತೆರೆಯುವುದು. ಲಕ್ಷ್ಮೀ ಪಟ, ಕಬ್ಬಿಣದ ಪೆಟ್ಟಿಗೆಗಳಿಗೆ ನಮಸ್ಕಾರ ಮಾಡುವುದು, ಬೋಡು ದಿಂಬಿಗೆ ಒರಗಿ ಕುಳಿತುಕೊಳ್ಳುವುದು ಆ ೯ಗಂಟೆಗೆ ತೇಗ ಬರುವವರೆಗೆ "ನಾಷ್ಟ", ಮಧ್ಯಾಹ್ನ ಒಂದು ಗಂಟೆಗೆ ಅಲ್ಲಿಗೇ ಬರುವ ಪುಷ್ಕಳವಾದ ಭೋಜನ, ಮತ್ತೆ ರಾತ್ರಿ ಹೊತ್ತು ಹತ್ತು ಗಂಟೆವರೆಗೆ ಲೆಖ್ಖ ಬರೆಯುತ್ತಾ, ದುಡ್ಡನ್ನೆಣಿಸುತ್ತಾ ಕಾಲ ತಳ್ಳುವುದು, ಹೀಗಾದರೆ ಬೊಜ್ಜು ಸೇರದೆ ಏನಾದೀತು? ಆದರೆ ಹಣ ಸೇರುತ್ತಿರುವ ಗಭಸದಲ್ಲಿ ಬೊಜ್ಜು ಸೇರುವುದು ತಿಳಿಯುವುದಿಲ್ಲ. ದೇಹ ಮಣಭಾರವಾದಾಗ ಅದರ ಘೋರ ತಿಳಿಯುತ್ತದೆ. ಆಗೇನು ಮಾಡುವುದು? ಅಂತವರಿಗೆ ಇದೋ ಇಲ್ಲಿದೆ ನವ ವಿಧಾನ!

ಬಂಗಲೆಯ ವಾಸ, ಬ್ಯಾಂಕಿನಲ್ಲಿ ಅಪಾರ ಸೊತ್ತು, ಬಾಯಿ ತೆರೆವೊಡನೆ ಓಡಿಬರುವ ಆಳು ಕಾಳುಗಳು, ಭರ‍್ರೆಂದು ಓಡುವ ಕಾರು ಎಲ್ಲಾ ಇದ್ದರೂ ದೇಹದ ಸುಸ್ಥಿತಿಯೊಂದಿಲ್ಲದೇ ಹೋದರೆ ಬಾಕಿ ಎಲ್ಲಾ ಇದ್ದೂ ವ್ಯರ್ಥವೇ! ಕಷ್ಟವನ್ನೇ ಅನುಭವಿಸದೆ ಸುಖದಲ್ಲಿಯೇ ಬೆಳೆದ ದೇಹ ಇಂಬೇಕಾದ ರೀತಿಯಲ್ಲಿರದೆ ಹುಚ್ಚು ಹುಚ್ಚಾಗಿ ಬೆಳೆದಾಗ ಆಗುವ ದುಃಖ ಸಂಪತ್ತಿನಿಂದ ಬರುವ ಸುಖವೆಲ್ಲವನ್ನೂ ಮರೆಸಿ ಬಿಡುತ್ತದೆ.

ಈ ವಿಷಯವು ಕೇವಲ ವ್ಯಾಪಾರಿಗಳಿಗೆ ಮಾತ್ರ ಸಂಬಂಧಿಸಿದುದಲ್ಲ. ಕುಳಿತು ಕೆಲಸ ಮಾಡುವವರೆಲ್ಲರ ಕಥೆಯಿದು. ಗುಮಾಸ್ತೆಗಳು, ವಕೀಲರು, ಭಾರೀ ಶ್ರೀಮಂತರು, ಕೈಗಾರಿಕಾ ಸಂಸ್ಥೆಗಳ ಮಾಲೀಕರು ಮುಂತಾದವರೆಲ್ಲರೂ ದೇಹಶ್ರಮವೇ ಇಲ್ಲದೇ, ಕೇವಲ ಬುದ್ಧಿಬಲದ ಕಾರ್ಯಗಳನ್ನು ಮಾಡುವುದರಿಂದ ಅವರೆಲ್ಲರಿಗೂ ಇದೇ ತೊಂದರೆ ಇರುತ್ತದೆ.

ಅಂತಹವರಲ್ಲಿ ಒಬ್ಬರು ಜರ್ಮನಿಯ ವಕೀಲರಾದ ಹೆಲ್ಮುಟ್ ಎಂಬುವವರು.. ಯಾವಾಗಲೂ ನ್ಯಾಯಶಾಸ್ತ್ರಗಳನ್ನು ಎದುರಿಗಿಟ್ಟುಕೊಂಡು ಓದಿ, ಓದಿ, ಅದರಲ್ಲಿಯೇ ಮುಳುಗಿ ಹೋಗಿ, ದೇಹದ ಸಮತೋಲನ ಕಳೆದುಕೊಂಡರು; ಮನಸ್ಸಿನ ನೆಮ್ಮದಿ ಕಳೆದುಕೊಂಡರು; ಪಟನ ಶಕ್ತಿ ಕಳೆದುಕೊಂಡರು! ಇಷ್ಟೆಲ್ಲಾ ಕಳೆದುಕೊಂಡರೂ, ಒಂದು ಮಾತ್ರ ಹೆಚ್ಚುತ್ತಾ ಬಂತು. ಅದೇ, ಬೊಜ್ಜು! ಡಾಕ್ಟರರ ಬಳಿ ಹೋದರು. ತಕ್ಷಣದಲ್ಲಿಯೇ ಬೊಜ್ಜು ಕರಗಿಸುವಂತಹ ಔಷಧ ಇಲ್ಲವೆಂದೂ, ದೇಹಶ್ರಮದ ಕೆಲಸಗಳನ್ನು ಕೈಗೊಂಡರೆ ಕ್ರಮೇಣ ಕರಗಿ ಹೋಗುವುದೆಂದೂ ಅವರು ಸಲಹೆ ನೀಡಿದರು. ಅದೇ ಊರಿನಲ್ಲಿ ನಾಲ್ಕು ಜನರೆದುರಿಗೆ ಹೊಸದಾಗಿ ವ್ಯಾಯಾಮ ಶಾಲೆಗಳಿಗೆ ಹೋಗಿ ದಂಡೆ ಒತ್ತುವುದಕ್ಕೆ ಅವರಿಗೆ ನಾಚಿಕೆ!

ತಕ್ಷಣವೇ ತಮ್ಮ ಬೆಲೆ ಬಾಳುವ ಕಾರನ್ನೇರಿ ಅವರು ಬಹುದೂರ ಸಾಗಿ ಹೋದರು. ಕಾಡೊಂದರ ಬಳಿ ಕಾರನ್ನು ನಿಲ್ಲಿಸಿ, ಅಲ್ಲಿದ್ದ ಫಾರೆಸ್ಟ್ ರೇಂಜರರ ಬಂಗಲೆಗೆ ಅವರು ಧಾವಿಸಿದರು. ಆ ರೇಂಜರರು ಅವರ ಸ್ನೇಹಿತರು. 'ಕೆಲ ದಿನಗಳ ವರೆಗೆ ನಿಮ್ಮ ಕಾಡಿನಲ್ಲಿ ಮರ ಕಡಿಯಲು ನನಗೆ ಅಪ್ಪಣೆ ಕೊಡಬೇಕು" ಎಂದು ಕೇಳಿದರು. ವಕೀಲರ ಅಂತಸ್ಥನ್ನು ತಿಳಿದಿದ್ದ ರೇಂಜರ್ ಮೊದಲೊಪ್ಪಲಿಲ್ಲ. ಕೊನೆಗೆ ವಕೀಲರ ಆಗ್ರಹ ಹೆಚ್ಚಿದಾಗ ಬೇರೆ ಮಾರ್ಗವಿಲ್ಲದೆ ಅವರಿಗೆ ಅನುಮತಿಯನ್ನು ಕೊಡಲಾಯಿತು. ಆದರೆ, ಅದೇ ಕಾಲದಲ್ಲಿ ರೇಂಜರರಿಗೆ ಹೊಸ ಉಪಾಯವು ಹೊಳೆಯಿತು. ಆ ಕಾಡಿನಲ್ಲಿ ಮರ ಕಡಿಯುವ ಕೆಲಸಗಾರರ ಅಭಾವ ವಿಪರೀತವಾಗಿತ್ತು. ವಕೀಲರು ಬಂದ ಕಾರಣವನ್ನು ಅರಿತೊಡನೆ, ಅವನು ಪ್ರಮುಖ ಪತ್ರಿಕೆಗಳಿಗೆ ಜಾಹೀರಾತೊಂದು ನೀಡಿದ

"ಕೂತು ಕೆಲಸ ಮಾಡಿ ಬೇಸರಾಗಿದೆಯೇನು? ಹಾಗಿದ್ದರೆ ನಮ್ಮ ಕಾಡಿಗೆ ಬಂದು ಮರ ಕಡಿಯುವುದರಿಂದ ಸಂಪಾದನೆಯೊಂದಿಗೆ, ಆರೋಗ್ಯವನ್ನೂ ಕೊಂಡು ಹೋಗಿರಿ! ಎಂಬುದೇ ಆ ಜಾಹೀರಾತು. ಒಡನೆಯೇ, ರೇಂಜರನು ಕನಸಿನಲ್ಲಿಯೂ ಕಾಣದ ಫಲ ದೊರಕಿಬಿಟ್ಟಿತು. ನೂರಾರು, ಅರ್ಜಿಗಳು ಧಾವಿಸಿ ಬರತೊಡಗಿದವು; ಅರ್ಜಿಗಳ ಹಿಂದೆಯೇ ಅಭ್ಯರ್ಥಿಗಳು ಲಿಮೋಸಿನ್, ಕ್ಯಾಡಿಲಾಕ್ ಕಾರುಗಳಲ್ಲಿ ಓಡಿ ಬಂದರು, ಏರೋಪ್ಲೇನ್‌ಗಳಲ್ಲಿ ಹಾರಿ ಬಂದವರೂ ಉಂಟು; ಕಾರಿಲ್ಲದೆ, ಬರಲು ಸಾಧ್ಯವಿಲ್ಲದವರು ರೈಲುಗಳಲ್ಲಿ ಕುಳಿತು ಬಂದರು; ತಂಡ ತಂಡವಾಗಿ ಬಂದವರನ್ನು ಕಂಡು ಅಲ್ಲಿದ್ದ ಕೆಲಸಗಾರರು ಬೆಂಗಾಗಿ ಹೋದರು, ರೇಂಜರನ ಯುಕ್ತಿ ಫಲಿಸಿತು; ಕೆಲಸಗಾರರ ಅಭಾವ ತೀರಿತು.

ಕಾರಿನಲ್ಲಿ ಬಂದೆವೆಂದು ಇವರು ಕಾರ್ಮಿಕರ ಮುಂದೆ ಜಂಭದ ಪ್ರದರ್ಶನವನ್ನು ಮಾಡುವುದಿಲ್ಲ. ಹೊಟ್ಟೆಪಾಡಿಗಾಗಿ ಮರ ಕಡಿಯುವ ಕೂಲಿಯಾಳುಗಳೊಂದಿಗೆ ಹೊಟ್ಟೆ ಕರಗಿಸುವ ಸಲುವಾಗಿ ಬಂದವರು ಸ್ನೇಹದಿಂದಿರುತ್ತಾರೆ. ಕೆಲಸಗಾರರು 'ಹೀಗಲ್ಲ, ಹಾಗೆ" ಎಂದು ಹೇಳಿದರೆ ಧನವಂತರು ಅದನ್ನು ಒಪ್ಪಿ ನಡೆದುಕೊಳ್ಳುತ್ತಾರೆ. ಪ್ರತಿ ಶನಿವಾರ, ಎಲ್ಲರಿಗೂ ಸಂಬಳ ಕೊಡುವ ದಿನ. ಆ ದಿನ, ಈ 'ಹಾಬಿ" ಕೆಲಸಗಾರರೂ ಉಳಿದ ಕೆಲಸಗಾರರೊಂದಿಗೆ ಕ್ಯೂನಲ್ಲಿ ನಿಂತು ಸಂಬಳ ಪಡೆಯುತ್ತಾರೆ. ಅವರಿಗೂ ಎಲ್ಲರಂತೆ ಗಂಟೆಗೆ ರೂ. ೨.೭೫ ದೊರೆಯುತ್ತದೆ. ಅಂಗಡಿಗಳಲ್ಲಿ ಕುಳಿತು ಸಾವಿರಗಟ್ಟಲೆ ಸಂಪಾದಿಸುವ ಅತ್ಯಂತ ಈ ಹಣ ಹೆಚ್ಚು ಸಂತೋಷವನ್ನು ನೀಡುವುದೆಂದು ಅವರೇ ಒಪ್ಪಿಕೊಂಡಿದ್ದಾರೆ.

ಆದರೆ, ಈ ಹೊಸ 'ಕೆಲಸಗಾರರ" ವಿಷಯದಲ್ಲಿ ರೇಂಜರನು ಬಹಳ ಹುಷಾರಾಗಿದ್ದಾನೆ. ಬೊಜ್ಜು ಕರಗಿಸಿಕೊಳ್ಳುವ ಧನವಂತರಲ್ಲಿ ಅವರು ನಿರ್ದಿಷ್ಟ ವೇಳೆಗಿಂತಲೂ ಹೆಚ್ಚಾಗಿ ದುಡಿದು ಮೈಕೆಡಿಸಿಕೊಂಡರೆ ಆತನಿಗೇ ಕಷ್ಟ. ಅಂತೆಯೇ ಈ ಎಚ್ಚರಿಕೆ! ಜರ್ಮನಿಯ ಈ ಹೊಸ ಪ್ರವೃತ್ತಿಯನ್ನು ಉಳಿದ ದೇಶಗಳಲ್ಲಿಯೂ ಅನುಸರಣೆಗೆ ತಂದರೆ ಹೇಗೆ?

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಶ್ರೀನಿವಾಸ್ ಬ್ರದರ್ಸ್ ಪುತ್ತೂರಲ್ಲಿ ಪ್ಯೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ

(ಎರಡನೇ ಪುಟದಿಂದ)

ಸೇರಿತ್ತು. ಮಂದಿ ನಿತ್ಯ ವ್ಯವಹಾರದಲ್ಲಿ ದುಃಖ ಮರೆತರು. ತಾಯಿಯ ದುಃಖ ಮಾತ್ರ ದುರ್ದಮನೀಯವಾಗಿ ಜೀವಂತ ಸುಡುತಿತ್ತು; ನಾಲ್ಕನೇ ದಿನ ಕಾಸಿಮ್ ಮುಂಬಯಿಯಿಂದ ಬಂದಿಳಿದ ಭಾರವಾದ ಹೃದಯದಿಂದ. ಬಾಪು ಒಂದೆಡೆ—ಶಕಿನಾಬಿ ಇನ್ನೊಂದೆಡೆ ಸಾಲಭಂಜಿಕೆಯಂತೆ ಕೂತುಕಲ್ಲಾಗಿದ್ದರು. ಆದರೆ, ಕುಲದೀಪಕನಾದ ಅಬ್ಬಾಸ್ ತಂದೆಯ ಸ್ವಾಗತಕ್ಕೆ ಸಿದ್ಧನಾಗಲಿಲ್ಲ.

ರಾತ್ರಿ ಭೀಕರವಾಗಿತ್ತು; ದೂರದಲ್ಲಿ ನಾಯಿಯೊಂದು ಅರಚುತಿತ್ತು; ತಂಬೆಲರು ಬೀಸುತಿತ್ತು; ಕಾರ್ಗತ್ತಲೆ ಭಯಾನಕವಾಗಿತ್ತು; ಅಬ್ಬಾಸನ ಗೋರಿಯ ಮೇಲೆ ಕಾಸೀಮ್ ಅಳುತ್ತಿದ್ದ ಮಗನನ್ನು ನೆನೆಸಿ; ಮತ್ತೊಮ್ಮೆ ನಗುತ್ತಿದ್ದ; ಮತ್ತೊಮ್ಮೆ ಗೊಣಗುಟ್ಟುತ್ತಿದ್ದ.

ಕಾಸೀಮನಿಗೆ ಹುಚ್ಚು ಹಿಡಿದಿತ್ತು; ಅನ್ನ ನೀರು ಕಾಣದ ಅವನ ಜೀವ ರೋದಿಸುತಿತ್ತು; ದಿನವಿಡೀ ಗೋರಿಯ--ಮಗನ ಸಮಾಧಿಯ ಮೇಲೆ ಕೂತು ಮನಸಾರೆ ಅಳುತ್ತಿದ್ದ; ನಗುತ್ತಿದ್ದ; ಯಾರೆಷ್ಟು ಹೇಳಿದರೂ ಅವನು ಸಾಂತ್ವನಗೊಳ್ಳುತ್ತಿರಲಿಲ್ಲ; ಬೆಳೆದ ಕುರುಚಲು ಗಡ್ಡ; ದೂಳು ತುಂಬಿದ ಹರುಕು ಅಂಗಿ; ದಗಲೆ ಪೈಜಾಮು; ಕಾಸೀಮನನ್ನು ವಿರೂಪಗೊಳಿಸಿದ್ದುವು.

ರಾತ್ರಿಯ ಗಂಭೀರತೆಯಲ್ಲಿ ಮಸೀದಿಯ ಮಧ್ಯೆ ಕ್ಷೀಣ ಧ್ವನಿ ಕೇಳಿಸುತ್ತಲೇ ಇತ್ತು "ಮೇರಾ......ಬೇಟಾ............ಅಬ್ಬಾಸ್."

ಮಗನ ಗೋರಿಯೇ ಅವನ ಪಲ್ಲಂಕವಾಗಿತ್ತು!

NAVAYUGA 4-2-1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೪-೨-೬೫ರಿಂದ ೧೦-೨-೬೫ರ ವರೆಗೆ

೧. ಮೇಷ

ಉದ್ಯಮಃಖಲು ಕರ್ತವ್ಯಃ ಫಲಂ ಮಾರ್ಜಾಲವದ್ಭವೇತ್|| ಕೆಲಸವನ್ನು ಮಾಡಿದರೆ ಬೆಕ್ಕಿನಂತೆ ಫಲವು ಲಭಿಸಿಯೇ ತೀರುವದೆಂಬು ಹಿಂದಿನವರ ಮಾತಿದೆ. ಅಂದರೆ ಬೆಕ್ಕು ಹಾಲನ್ನು ಕಣ್ಣಿನಲ್ಲಿ ಕೂಡ ನೋಡದಿದ್ದರೂ ತನ್ನ ಪ್ರಯತ್ನದಿಂದ ಅನುದಿನ ಹಾಲನ್ನು ಕುಡಿವದು. ಅಂತೆಯೇ ನೀವಿಂದು ಶ್ರಮಿಸಿದರೆ ನಿಮಗೆ ಅಶಕ್ಯವಾದುದಾವುದೂ ಇರಲಾರದು. ರಾಜಕೀಯದಲ್ಲಿ ಎಂತಹ ಪ್ರಬಲ ಇದಿರಾಳಿಯೇ ಇರಲಿ ನಿಮ್ಮಿಂದಾತನು ಪರಾಜಿತನಾಗುವನು. ನಿಮ್ಮೆಲ್ಲ ಅಭೀಷ್ಟಗಳೂ ಅನಾಯಾಸದಿಂದ ಪೂರ್ಣವಾಗಲಿವೆ. ತಾ. 4 7, 8, 9 ಈ ದಿನಗಳಲ್ಲಿ ಸುಖಭೋಗ ಲಾಭಗಳಂ ಪಡೆವಿರಿ.

೨ ವೃಷಭ

ಶುಕ್ರಾಚಾರ್ಯರೋರ್ವರನ್ನುಳಿದು ಇತರ ಗ್ರಹಮಂಡಳವೇ ನಿಮಗಿಂದು ಪ್ರತಿಕೂಲವಾಗಿರುವುದರಿಂದ ನಿಮ್ಮ ಎಲ್ಲಾ ಪ್ರಯತ್ನಗಳು ಗಾಳಿಯೊಡನೆ ಗುದ್ದಾಡಿದಂತೆ ವಿಫಲವಾಗಲಿವೆ. ದಿನದಿಂದ ದಿನಕ್ಕೆ ಏರುತ್ತಿರುವ ಖರ್ಚು ವೆಚ್ಚಗಳ ನಿರ್ವಹಣೆಗಾಗಿ ಪರರ ಕೊಡೆ ಸಾಲ ಮಾಡುವ ಪರಿಸ್ಥಿತಿ ಬರಲಿದೆ. ಶತ್ರುಜನರ ಕಾಟವಿಲ್ಲವಾದರೂ ಗೃಹತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರವು ಆತ್ಮೀಯರ ವಿರಹ ದುಃಖಕ್ಕೆ ರಾದ ನಿಮಗೆ ತಾ. 1, 5, 6, 10 ಈ ದಿನಗಳು ಸ್ವಲ್ಪ ಉತ್ತಮವಾಗಿ ಕಾಣಿಸಲಿವೆ.

೩. ಮಿಥುನ

ನಿಮ್ಮ ಪರಿಸ್ಥಿತಿಯಿಂದು ದಿನದಿಂದ ದಿನಕ್ಕೆ ಸುಧಾರಿಸುತ್ತಿರುವುದು, ಉದ್ಯೋಗದಲ್ಲಿ ನಿರೀಕ್ಷಿಸಿದಂತೆ ಫಲ ಲಭಿಸಲಿದೆ. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗುವಿರಿ. ಜನತೆಯ ಸಹಕಾರವು ಸಾಕಷ್ಟಿದ್ದರೂ ರಾಜಕೀಯದಲ್ಲಿ ವಿಪಕ್ಷೀಯರ ಕೈಯೇ ಮೇಲಾಗುವಂತಿದೆ. ಗೃಹತಾಪತ್ರಯದಿಂದ ಮುಕ್ತರಾದ ನಿಮಗೆ ಅನಿರೀಕ್ಷಿತ ಧನಪ್ರಾಪ್ತಿ ಯೋಗವಿದೆ. ಕುಜನರ ಕಪಟ ಜಾಲಕ್ಕೆ ಸಿಲುಕುವ ಸಂಭವವಿದೆ. ಜಾಗ್ರತರಾಗಿರಿ. ತಾ. ೫ರಿಂದ ೯ರ ವರೆಗಿನ ದಿನಗಳು ತುಂಬ ಅನುಕೂಲಗಳಾಗಿವೆ.

೪. ಕರ್ಕಟ

ಕೃಷ್ಣಪಕ್ಷದ ಚಂದ್ರನಂತೆ ದಿನೇ ದಿನೇ ಕ್ಷಯಿಸುತ್ತಿರುವ ನಿಮ್ಮ ಅದೃಷ್ಟವು ನಿಮ್ಮನ್ನು ನಾನಾ ತರದ ತಾಪತ್ರಯಗಳಿಗೆ ಸಿಲುಕಿಸಲಿದೆ. ವಿನಾ ಕಾರಣ ಜನಾಪವಾದಕ್ಕೆ ಗುರಿಯಾಗುವಿರಿ. ಮತ ಭೇದದಿಂದಾಗಿ ಮನೆಯ ಜನರೊಳು ಪರಸ್ಪರ ಮನಸ್ತಾಪವುಂಟಾಗುವದು ಅನವಶ್ಯಕ ಖರ್ಚುಗಳು ನಿಮ್ಮನ್ನು ಸುತ್ತುವರಿವದಾದರೂ ಕಷ್ಟ ಸಹಿಷ್ಣುಗಳಾದ ನೀವು ಎದೆಗುಂದದೆ ಧೈರ್ಯದಿಂದ ಕಾರ್ಯಕ್ಷೇತ್ರದಲ್ಲಿ ಮುಂದಡಿಯಿಡುವಿರಿ ವಾತ ದೋಷವು ಆಗಾಗ್ಗೆ ಕಾಣಿಸುವ ಸಂಭವವಿದೆ. ವಾರಾಂತ್ಯದ 4 ದಿನಗಳಲ್ಲಿ ಕೆಲವೊಂದು ಬಯಕೆಗಳು ನೆರವೇರುವವು

೫. ಸಿಂಹ

ಎಂತಹ ಕಷ್ಟಸಾಧ್ಯವಾದ ಕಾರ್ಯವಾದರೂ ನೀವಿಂದು ಉಪಾಯದಿಂದ ಸಾಧಿಸುವಿರಿ. ಸುಶಿಕ್ಷಿತರೂ ವಿವೇಕಶೀಲರೂ ಆದ ನಿಮಗೆ ಜೀವನ ನೌಕೆಯ ಮೊದಲಾದ ಕಾರ್ಯಗಳಲ್ಲಿ ಕೀರ್ತಿ ಧನಾದಿಗಳು ಲಭಿಸಲಿವೆ. ಮಿತ ಭಾಷಿಯಾಗಿದ್ದರೂ ವಾಕ್ಕಲಹವು ಅನಿವಾರ್ಯವೆನಿಸುವದು. ಬಂಧು ವರ್ಗದವರ ವಿಯೋಗವುಂಟಾಗಲಿದೆ. ವ್ಯಾಪಾರೀ ವರ್ಗಕ್ಕೀ ಕಾಲವು ತುಂಬ ಪ್ರತಿಕೂಲವಿಹುದು. ವಾರದ ಅಂತ್ಯದ ದಿನಗಳಲ್ಲಿ ನಿಮ್ಮ ಬಯಕೆಯು ಪೂರ್ಣವಾಗಲಿದೆ.

೬. ಕನ್ಯಾ

ಅಷ್ಟಮಾಧಿಪತಿಯಾದ ಕುಜನು ನಿಮ್ಮ ಜನ್ಮ ರಾಶಿಯಲ್ಲಿದ್ದು ಅಷ್ಟಮದಲ್ಲಿ ಬೃಹಸ್ಪತಿಯಾರೋಹಣದಿಂದ ಅನಿರೀಕ್ಷಿತ ಪ್ರವಾಸ ಧನ ವ್ಯಯಾದಿಗಳಿಗೆ ನೀವು ಸಿಲುಕಲಿರುವಿರಿ. ಗಂಡ ಹೆಂಡಿರೊಳಗೂ ತಂದೆ ಮಕ್ಕಳೊಳಗೂ ಪರಸ್ಪರ ಮನಸ್ತಾಪವುಂಟಾಗಲಿದೆ. ಎಷ್ಟೇ ವಿಘ್ನ ವಿದ್ರೋಹಗಳು ಬಂದರೂ ಹಿಡಿದ ಕಾರ್ಯವನ್ನು ನೀವು ಕೈಬಿಡಲಾರಿರಿ. ದೀರ್ಘಾವಧಿಯಿಂದ ನಿಮ್ಮ ಸಂಕಲ್ಪವು ಸಿದ್ಧಿಸಲಿದೆ. ವಾರಾದಿಯ 3 ದಿನಗಳಲ್ಲಿ ಮೃಷ್ಟಾನ್ನ ಭೋಜನ ಧನವಸನಗಳ ಲಾಭವಾಗುವದು.

೭. ತುಲಾ

ಖರ್ಚುಗಳನೇಕವಿದ್ದರೂ ಸಾಕಷ್ಟು ಆದಾಯವು ಇರುವ ಕಾರಣ ನಿಮಗಿಂದು ಹಣದ ತೊಂದರೆಯೆನಿಸದು ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ವ್ಯಾಪಾರ ವ್ಯವಹಾರಾದಿ ಉದ್ಯಮಗಳಲ್ಲಿ ಒಳ್ಳೆಯ ಭವಿತವ್ಯವಿದೆ. ನಿಮ್ಮ ದುಡಿಮೆಯ ಬಹ್ವಂಶವು ಕೋರ್ಟು ವ್ಯವಹಾರಾದಿಗಳ ಸಲುವಾಗಿ ವ್ಯಯವಾದೀತು. ಕೃಷ್ಯಾದಿಗಳಲ್ಲಿ ನಷ್ಟವಾಗುವ ಯೋಗವಿದೆ. ಪ್ರವಾಸಾದಿಗಳು ಸುಗಮವಾಗಿ ಸಾಗಲಿವೆ. ಜನಾನುರಾಗವಂಗಳಿಸಿದ ನಿಮಗೆ ತಾ. ೫ರಿಂದ೯ರ ವರೆಗಿನ ದಿನಗಳು ಸುಖಲಾಭಕಾರಿಗಳಾಗಿವೆ.

೮. ವೃಶ್ಚಿಕ

ಶ್ರಮವಹಿಸಿ ದುಡಿವ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವು ಲಭಿಸುವದು. ಮೇಲಾಧಿಕಾರಿಗಳ ವಕ್ರ ದೃಷ್ಟಿಯು ನಿಮ್ಮ ಮೇಲಿರುವ ಕಾರಣ ಬಹಳ ಜಾಗರೂಕತೆಯಿಂದ ವರ್ತಿಸಬೇಕಾಗಿದೆ. ಮನೋದೌರ್ಬಲ್ಯವು ನಿಮ್ಮ ಕಾರ್ಯ ಶಕ್ತಿಯನ್ನು ಕುಂಟಿತಗೊಳಿಸೀತು. ರಾಜಕೀಯ ರಂಗದಲ್ಲಿ ನಿಮ್ಮಂತೆ ಕಾರ್ಯವಾಗಲಿದೆ. ಬಂಧು ಮಿತ್ರ ವಿರಹ ದುಃಖಕ್ಕೊಳಗಾಗುವ ಸಂಭವವಿದೆ. ನಿರಾಮಯವಾದ ನಿಮ್ಮ ಸಂಸಾರ ರಥವು ಸುಗಮವಾಗಿ ಸಾಗುವದು. ವಾರಾಂತ್ಯದ ದಿನಗಳು ತುಂಬ ಅನುಕೂಲವಾಗಿವೆ.

೯. ಧನು

ಸುದೈವಿಗಳಾದ ನಿಮಗಿಂದು ದಿನಗಳೆದುದೇ ತಿಳಿಯಲೊಲ್ಲದು. ಬಂಧು ಮಿತ್ರಾದಿ ಪರಿವಾರ ವರ್ಗದವರಿಂದ ಕೂಡಿದ ನೀವು ಸುಖದಿಂದ ಕಾಲಕಳೆವಿರಿ. ಆಸಹಾಯ ಶೂರರೆನಿಸಿದ ನಿಮಗೆ ಸರ್ವತ್ರ ವಿಜಯ ಕೀರ್ತಿ ಲಾಭಗಳು ದೊರೆಯಲಿವೆ. ಯಾವ ವಿಭಾಗದಲ್ಲೂ ನಿಮಗಿಂದು ಕುಂದು ಕೊರತೆಗಳು ಕಾಣಿಸಲಾರವು. ನಿರೋಗಿಗಳೂ ನಿಶ್ಚಿಂತರೂ ಆದ ನಿಮಗೆ ವಾರದ ಅಂತ್ಯದ ದಿನಗಳಲ್ಲಿ ಧನ ಲಾಭ ವಿಜಯ ಮಾನ ಸನ್ಮಾನಗಳು ಲಭಿಸುವವು.

೧೦. ಮಕರ

ದೈವ ವಿಮುಖರಾದ ನಿಮ್ಮ ಪೌರುಷವಿಂದು ವ್ಯರ್ಥವೆನಿಸಲಿದೆ. ನಿಷ್ಕಾರಣವಾಗಿ ಬಂಧು ವರ್ಗದವರೊಡನೆ ಮನಸ್ತಾಪವುಂಟಾಗುವದು. ಕಂಡದ್ದು ಕಂಡಂತೆ ಹೇಳಿದರೆ ಕೆಂಡದಂತಹ ಕೋಪವೆಂಬ ಗಾದೆಯ ಮಾತು ನಿಮ್ಮ ವಿಷಯದಲ್ಲಿ ಸಾರ್ಥಕವೆನಿಸಲಿದೆ. ದೇಹದಲ್ಲಿ ನಿಶಕ್ತಿ ಪಿತ್ಥದೋಷಗಳು ಕಂಡು ಬರುವವು. ಆದ್ದಾದರೂ ನಿಮ್ಮ ಸ್ವಂತ ಉಪಭೋಗಕ್ಕೆ ಬೇಕಾದ ವಸ್ತುಗಳು ಅನಾಯಾಸದಿಂದ ಲಭಿಸಲಿವೆ. ತಾ. 5, 6, ಇತರ ದಿನಗಳಿಗಿಂತ ಉತ್ತಮ.

೧೧. ಕುಂಭ

ಅನಿಷ್ಟ ಸ್ಥಾನವಾದ ಅಷ್ಟಮದಲ್ಲಿಂದು ಅಂಗಾರಕನ ಪ್ರವೇಶವಾಗಿರುವುದರಿಂದ ಇಲ್ಲಸಲ್ಲದ ಅಪವಾದ ಅನಿಷ್ಟಗಳನ್ನು ನೀವಿಂದು ಎದುರಿಸಬೇಕಾಗಿ ಬರಲಿದೆ. ಶತ್ರು ಜನರ ಪೀಡೆಯು ಅಸಹನೀಯವೆನಿಸುವದು. ದೈನಂದಿನದ ಖರ್ಚು ವೆಚ್ಚಗಳ ನಿರ್ವಹಣೆಗಾಗಿ ಸಾಲ ಮಾಡುವ ಪರಿಸ್ಥಿತಿ ಬರಲಿದೆ. ಆತ್ಮೀಯರ ವಿರೋಧಕ್ಕೆ ಗುರಿಯಾದ ನೀವು ಜನತೆಯ ತಿರಸ್ಕಾರಕ್ಕೆ ಎರವಾಗುವಿರಿ. ಚರ್ಮ ರೋಗಗಳು ಕಾಣಿಸುವ ಸಂಭವವಿದೆ. ತಾ. 4, 7, 8, ಈ ದಿನಗಳು ಇತರ ದಿನಗಳಿಗಿಂತ ಲೇಸು.

೧೨. ಮೀನ

ಕೆಲಸಕ್ಕೆ ತಕ್ಕ ಫಲವು ಲಭಿಸಿಯೇ ತೀರುವದು. ನಿಮ್ಮ ಗೃಹ ತಾಪತ್ರಯಗಳೆಲ್ಲವೂ ದೂರವಾಗಿ ಸುಖ ನೆಮ್ಮದಿಯಿಂದ ಕಾಲ ಕಳೆವಿರಿ. ವ್ಯಾಪಾರ ವ್ಯವಹಾರ ಮೊದಲಾದ ಉದ್ದಿಮೆಗಳಲ್ಲಿ ನಿರೀಕ್ಷೆಗಿಂತಲೂ ಅಧಿಕವಾದ ಫಲ ಲಾಭವಿದೆ. ವ್ಯಯಗತನಾದ ಶನೈಶ್ಚರನು ಅನಿರೀಕ್ಷಿತ ಅನರ್ಥಗಳನ್ನು ತಂದೊಡ್ಡಲಿರುವನು. ಜಾಗ್ರತರಾಗಿರಿ ಆರ್ಧಾಂಗಿಯ ಕೂಡ ವಿರಸವುಂಟಾಗಲಿದೆ. ತಾ. 5, 6 ಈ ದಿನಗಳಲ್ಲಿ ಬೇಕು ಬೇಕಾದ ಸುಖಭೋಗಗಳಂ ಅನುಭವಿಸುವಿರಿ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೀವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು ಶಿ.ಹರಿದಾಸ ಭಟ್)	1=75
ಕಲಿಲ್ಲದ ಹೆಣ್ಣು	(ಪಿ ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮೊಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಜೀವ ಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	10=0

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction Madras.

Edited, Printed & Published by K. H. Shetty at the Navayuga Press' Udipi, S. India.

ನವಯುಗ

ಸಂಪುಟ ೪೪]   ಫೆಬ್ರವರಿ, ೧೧, ೬೫   [ಸಂಚಿಕೆ ೨೪

…one No. / …ೋನ್ ನಂಬ್ರ: 226

leading nationalist weekly

೨೦ ಪೈಸೆ

ಕಥಾ ಪ್ರಪಂಚ

ಕನಸಿನ ದಾರಿ

ಇಂಗ್ಲಿಷ್‌ಮೂಲ:—ಶ್ರೀ| ಪಿ. ಕೆ. ಮಹಾದೇವನ್

ಭಾವಾನುವಾದ:—ಶ್ರೀ|| ಕೆ. ಎಸ್. ಪುರಾಣಿಕ.

ಕಲಕತ್ತೆಯಲ್ಲಿ ಅದೊಂದು ಸಪ್ಟೆಂಬರದ ಸಂಜೆಯಾಗಿತ್ತು. ರಸ್ತೆಯು ಜನರಿಂದ ತುಂಬಿ ಹೋಗಿತ್ತು. ಟ್ರಾಮುಗಳು ರಸ್ತೆಯ ಮಧ್ಯದಲ್ಲಿ ಅತ್ತಿತ್ತ ಚಲಿಸುತ್ತಿದ್ದುವು. ಬಸ್ಸುಗಳಂತೂ ಕೇಳುವವರು ಇಲ್ಲದವರಂತೆ ಚಲಿಸುತ್ತಿದ್ದವು.

ರಸ್ತೆಯ ಬದಿಯಲ್ಲಿ ಹೆಂಗಸರು ಮತ್ತು ಮಕ್ಕಳು ನಡೆಯುತ್ತಿದ್ದರು. ಎಲ್ಲೆಲ್ಲಿಯೂ ಗಲಾಟೆ ತುಂಬಿ ಕೊಂಡಿದ್ದಿತ್ತು. ಇಡೀ ನಗರವು ಪುರುಸೊತ್ತು ಏನೆಂದರೆ ತಿಳಿಯದೋ ಎಂಬಂತೆ ತೋರುತ್ತಿತ್ತು.

ಒಬ್ಬ ಚಿಕ್ಕ ಹುಡುಗನು ಹರಕು ಬಟ್ಟೆಗಳನ್ನು ತೊಟ್ಟು ಇದ್ದವರ ಎದುರೆಲ್ಲ ತನ್ನ ಭಿಕ್ಷಾ ಪಾತ್ರೆಯನ್ನು ಹಿಡಿಯುತ್ತಿದ್ದನು. ಜನರು ನೋಡಿದರೂ ನೋಡದವರಂತೆ ಮಾಡಲು ಅವನು ಅದೇನನ್ನು ಗಣಿಸದೆ ಮುಂದೆ ಹೋದನು.

ಒಬ್ಬಳು ಹುಚ್ಚಿಯು ತನ್ನ ಕೆದರಿದ ತಲೆ ಕೂದಲನ್ನು ಹಿಂದೆ ಮುಂದೆ ಸರಿಸುತ್ತಾ ಏನೇನೋ ಗೊಣಗುತ್ತ ಒಂದು ದೀಪದ ಅಡಿಯಲ್ಲಿ ಕುಳಿತಿದ್ದಳು. ರಸ್ತೆಯಲ್ಲಿ ಹೋಗುವವರನ್ನು ನೋಡಿ ನೆಗಾಡುತ್ತ ತನ್ನದಾದ ವಸ್ತುಗಳನ್ನು— ಒಂದು ಸಿಗರೇಟು ಕರಡಿಗೆ, ಪಿಂಗಾಣಿಯ ಪಾತ್ರೆ ಮತ್ತು ಒಂದು ಚಿಂದಿಬಟ್ಟೆ ಗಂಟು— ಹಿಡಿದುಕೊಂಡು ಒಂದು ಸಿಗರೇಟಿನ ಅಂಗಡಿಗೆ ಬಂದು ಒಂದು ಸಿಗರೇಟನ್ನು ಯಾಚಿಸತೊಡಗಿದಳು.

ಹೆಚ್ಚಿನ ಅಂಗಡಿಯ ದೀಪಗಳೆಲ್ಲ ಆರಿದರೂ ಜನರು ರಸ್ತೆಯಲ್ಲಿ ತಿರುಗುವುದು ಕಡಿಮೆಯಾಗಿಲ್ಲ. ಅವರಿಗೆ ಮನೆಗೆ ಹೋಗುವ ಗೊಡವೆಯೇ ಇಲ್ಲವೇನೋ! ಅವರಿಗೆ ರಸ್ತೆಯಲ್ಲಿ ಬಹಳ ಆನಂದವಾಗುವಂತೆ ತೋರುವುದು.

ಬಿಜಯನೂ ಒಬ್ಬ ಭಿಕ್ಷುಕ. ಸಣ್ಣ ಹುಡುಗನಾದರೂ ಸಿಗರೇಟು ಸೇದಲು ಕಲಿತಿದ್ದಾನೆ. ಮರದಡಿಯಲ್ಲಿ ಕುಳಿತು ಸಿಗರೇಟು ಸೇದುತಿದ್ದಾನೆ. ಗಾಳಿ ಬೀಸುತ್ತಿದೆ.

ಅವನ ಮಿತ್ರ, ಅವನಿಗಿಂತ ನಾಲ್ಕು ವರ್ಷಗಳಿಗೆ ದೊಡ್ಡವನಾದ ಜ್ಯೋತಿಯು ಅಲ್ಲಿಗೆ ಬಂದನು. ಬಂದವನೇ "ಬಿಜಯ್. ನನಗೂ ಸ್ವಲ್ಪ ಎಳೆಯಲು ಕೊಡು" ಎನ್ನಲು ಬಿಜಯನು ಕೊಟ್ಟನು. ಇಬ್ಬರೂ ಚಿಂತಿಸುತ್ತ ಅಲ್ಲಿಯೇ ಕುಳಿತರು.

"ಬೋಲೊ ಹರಿ ಬೋಲೋ" ಎಂಬ ಕೂಗು ಕೇಳಿಸಲು ಇಬ್ಬರೂ ಎದ್ದು ರಸ್ತೆಯ ಅಂಚಿಗೆ ಬಂದರು. ಅಲ್ಲೊಂದು ಹೆಣವನ್ನು ಅಂತ್ಯ ಸಂಸ್ಕಾರಕ್ಕೆ ತೆಗೆದುಕೊಂಡು ಹೋಗುತ್ತಿದ್ದರು.

"ಅವರು ಇಷ್ಟು ಸಮಯ ಯಾಕೆ ತೆಗೆದುಕೊಳ್ಳುವಂತಾ ಒಂದು ಹೆಣವನ್ನು ತೆಗೆದುಕೊಂಡು ಹೋಗಲು ಇಷ್ಟು ಸಮಯ ಬೇಕೇ?" ಎಂದು ಬಿಜಯನು ಕೇಳಿದ.

"ಏನೋಪ್ಪ. ನನಗೂ ತಿಳಿಯದು" ಜ್ಯೋತಿಯ ಉತ್ತರ ತಡವಿಲ್ಲದೆ ಬಂದಿತು.

'ನಾನಿಲ್ಲಿ ಇಡೀ ದಿನ ನಿಂತರೂ ನನಗೆ ಏನೂ ದೊರೆಯಲಿಲ್ಲ".

"ಒಮ್ಮೊಮ್ಮೆ ಹಾಗೇ ಆಗುತ್ತದೆ?

'ಬೋಲೋ ಹರಿ ಬೋಲೋ' ಎಂಬ ಕೂಗೂ ಇನ್ನೂ ಹತ್ತಿರವಾಯಿತು. ಹುಡುಗರ ಮುಖವು ಸಂತೋಷದಿಂದ ಅರಳಿತು. ಶವದ ಮೆರವಣಿಗೆಯು ಹತ್ತಿರವಾದಂತೆ ಜ್ಯೋತಿಯು' ಈಗ ಒಳ್ಳೆಯ ದಿನಗಳಲ್ಲ. ಬಹುಶಃ ಸ್ವಲ್ಪವೇ ಮಂದಿ ಸಾಯುತ್ತಾರೆ" ಎಂದನು.

'ಮತ್ತು ಯಾರಾದರೊಬ್ಬ ಸಾಯಬೇಕೆಂದಿದ್ದರೆ ಚೀಲದಲ್ಲಿ ಒಂದು ಪೈಸಾ ಸಹ ಇಲ್ಲದೆ ಸಾಯುತ್ತಾನೆ. ಏನನ್ಯಾಯ!"

ಒಂದು ರಿಕ್ಷಾವು ಅತ್ತ ಕಡೆ ಹೋಯಿತು. ಅದರಲ್ಲಿ ಶ್ರೀಮಂತ ದಂಪತಿಗಳು ಕುಳಿತಿದ್ದರು. ಹುಡುಗರಿಬ್ಬರೂ ಅವರನ್ನು ನೋಡಿದರು.

"ಇಂತಹವರು ಸತ್ತರೆ ನಮಗೆ ಎಷ್ಟೋ ಹಣ ಸಿಗುತ್ತದೆ. ಅವರ ಹೆಣದ ಮೇಲೆ ತುಂಬಾ ಹಣವನ್ನಿಡುತ್ತಾರೆ. ನಾವು ಅವುಗಳನ್ನು ಹೆಕ್ಕಬಹುದು!"

ಶವವನ್ನು ಹೊತ್ತವರು ಗಟ್ಟಿಯಾಗಿ "ಬೋಲೋ ಹರಿ ಬೋಲೋ" ಎನ್ನುತ್ತಾ ಹೋಗಲು ಅವರ ಹಿಂದೆಯೇ ಹುಡುಗರೂ ಸಹ ಹೋದರು..

ಸ್ವಲ್ಪ ಸಮಯದ ನಂತರ ಅವರು ಹಿಂತಿರುಗಿದರು.

"ಬಹಳ ಕೆಟ್ಟ ದಿನ'.

ಜ್ಯೋತಿಯು ಓಡಿ ಹೋಗಿ ಎರಡು ಸಿಗರೇಟುಗಳನ್ನು ತಂದು ಹೊತ್ತಿಸಿದ. ಇಬ್ಬರೂ ಎಳೆಯಲಾರಂಭಿಸಿದರು.

"ನಿನ್ನೊಂದಿಗೆ ಇಂದು ಬಹಳ ಹಣ ವಿರಬೇಕು. ಅಲ್ಲವೇ!" ಎಂದು ಬಿಜಯನು ಕೇಳಿದನು.

"ಆರಾಣೆಯಿದೆ. ಚೌರಿಂಗೀ ಘಾಟಿನಲ್ಲಿ ಒಂದು ಹೆಣದ ಚೀಲದಲ್ಲಿತ್ತು. ಅವನಿಗೇಕೆ ಅದು? ಸತ್ತವನಿಗೆ!"

"ನಾನು ಸಾಯುವಾಗ ನನ್ನ ಚೀಲದಲ್ಲಿ ಸ್ವಲ್ಪ ಹಣವನ್ನಿಟ್ಟುಕೊಳ್ಳುತ್ತೇನೆ. ನಮ್ಮಂತಹ ಬಡ ಹುಡುಗರು ಅದನ್ನು ಹೆಕ್ಕುವರು."

'ನಾನು ಸಾಯಲಿಚ್ಛಿಸುವುದಿಲ್ಲ. ಏಕೆಂದರೆ ನಾಳೆ ನಾವು ಏನನ್ನಾದರೂ ಪಡೆದೇ ಪಡೆಯುತ್ತೇವೆ " ಜ್ಯೋತಿಯು ಹೇಳಿದನು.

ಎಲ್ಲಾ ಅಂಗಡಿಗಳೂ ಮುಚ್ಚಿದ್ದುವು. ರಿಕ್ಷಾವಾಲಾರು ವಿಶ್ರಾಂತಿ ಪಡೆಯುತ್ತಿದ್ದರು. ಕೆಲವರು ರಸ್ತೆಯಲ್ಲೂ, ಕೆಲವರು ರಿಕ್ಷಾದಲ್ಲೂ ನಿದ್ರಿಸುತ್ತಿದ್ದರು.

ಕೆಲವೇ ಜನರ ಹೊರತು ರಸ್ತೆಯಲ್ಲಿ ಯಾರೂ ಇಲ್ಲ. ಒಬ್ಬಳು ತರುಣಿಯು ದೀಪದ ನೆರಳಿನಲ್ಲಿ ನಿಂತಿರುತ್ತಾಳೆ. ಒಬ್ಬ ಮನುಷ್ಯನು ಅಲ್ಲಿಗೆ ಬರುತ್ತಾನೆ. ಸುತ್ತ ಮುತ್ತಲೂ ನೋಡಿ ಯಾರೂ ಅವರನ್ನು ನೋಡಲಿಲ್ಲವೆಂದು ಖಚಿತಪಡಿಸಿಕೊಂಡು ಅವಳೊಡನೆ ಮಾತನಾಡುತ್ತಾ ಹೊರಟು ಹೋಗುತ್ತಾನೆ.

ರಸ್ತೆಯಲ್ಲೇನೋ ಗಲಾಟೆ ಆದಂತಾಗಿ ಇಬ್ಬರು ಹುಡುಗರೂ ಎದ್ದರು. ಆದರೆ ಕೆಲವು ನಾಯಿಗಳು ಜಗಳವಾಡುತ್ತಿದ್ದುವು. ಹುಡುಗರು ಪುನಃ ಮಲಗಲು ಪಯತ್ನಿಸಿದರು.

ಹುಚ್ಚಿಯು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಕೂಡಿದ ಪದ್ಯವನ್ನು ಹೇಳುತ್ತಿದ್ದಳು.

ಒಬ್ಬ ಸ್ಥೂಲಕಾಯನು ಬಂದು ಅತ್ತಿತ್ತ ನೋಡಿದನು. ರಿಕ್ಷಾವಾಲನೊಬ್ಬನು ಅವನೊಡನೆ "ಏನು ಬಾಬೂ, ಎಲ್ಲಿ ಹೋಗಬೇಕು?" ಎನ್ನಲು ಆ ಮನುಷ್ಯನು ಅವನೊಡನೆ ಗುಟ್ಟಿನಲ್ಲಿ ಏನೇನೋ ಹೇಳಿದನು. ರಿಕ್ಷಾವಾಲಾನು "ಬನ್ನಿ ಬಾಬೂ. ನಿಮಗೆ ಬೇಕಾದಂತಹ ಸ್ಥಳಗಳಿಗೆ ನಾನು ಕರೆದುಕೊಂಡು ಹೋಗುತ್ತೇನೆ" ಎನ್ನಲು ಇಬ್ಬರೂ ಕುಳಿತರು. ರಿಕ್ಷಾ ಎಲ್ಲಿಗೋ ಹೋಯಿತು.

ಹುಚ್ಚಿಯು ಇನ್ನೂ ಪದ್ಯ ಹೇಳುತ್ತಲೇ ಇದ್ದಳು.

"ಎಂತಹ ಅವಾಚ್ಯ ಪದ್ಯವಿದು" ಬಿಜಯು ಹೇಳಿದನು.

"ಹೇಳಲಿ.ಎಷ್ಟೆಂದರೂ ಅವಳು ಹುಚ್ಚಿ'

"ನಾಳೆ ಯಾರಾದರೂ ಸಾಯುವರೆಂದು ನೀನು ಎಣಿಸುತ್ತೀಯಾ?"

"ನಾನು ಎಣಿಸುತ್ತೇನೆ"

"ನಿನ್ನೆ ನಾನು ತುಂಬಾ ಜನರು ಸತ್ತಂತೆಯೂ ನಮಗೆ ತುಂಬಾ ಹಣ ಸಿಕ್ಕಿದಂತೆಯೂ ಕನಸು ಕಂಡಿದ್ದೆ"

"ಒಂದು ವೇಳೆ ನಿನಗೆ ತುಂಬಾ ಹಣ ಸಿಕ್ಕಿದರೆ ಏನು ಮಾಡುವಿ ಬಿಜಯ್?"

"ನಾನು ಹೇಳುತ್ತೇನೆ. ತಡೆ. ಹಂ.... ನನಗೆ ತಿಳಿಯದು. ಹ್ಞಾಂ! ನಾನು ಒಂದು ಮದುವೆ ಮಾಡಿಕೊಳ್ಳುತ್ತೇನೆ. ಸುಂದರಿಯಾದ ಒಬ್ಬಳನ್ನು ಮದುವೆಯಾಗುತ್ತೇನೆ. ನಾವು ಚಂಪಾ ಎಂದು ಕರೆಯುವ ಹುಡುಗಿ ನಿನಗೆ ಗೊತ್ತಿದೆಯಲ್ಲ?"

"ಆದರೆ ಅವಳು ನಿನ್ನನ್ನು ಮದುವೆಯಾಗಲಿಕ್ಕಿಲ್ಲ" ಜ್ಯೋತಿಯು ಹೇಳಿದನು.

"ನನಗೆ ಗೊತ್ತು. ಅವಳೇ ಬೇಕೆಂದಿಲ್ಲ. ಅವಳಂತೆಯೇ ಚೆಂದವಿದ್ದರೆ ಸಾಕು"

"ಮತ್ತೆ?"

"ನಾನು ಒಂದು ಮನೆಯನ್ನು ಕಟ್ಟಿ ಅದರಲ್ಲಿ ಸಂತೋಷದಿಂದ ಇರುವೆನು"

"ಆಗ ನೀನು ನನ್ನನ್ನು ಮರೆಯುವಿ. ಅಲ್ಲವೇ ಬಿಜಯ್?"

(ಹದಿನೈದನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p a.	7ರಿಂದ 11 ತಿಂಗಳು % p a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು % p. a.	36ರಿಂದ 47 ತಿಂಗಳು. % p. a.	48ರಿಂದ 59 ತಿಂಗಳು. % p. a.	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು % p. a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ.-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್] ಶ್

ರಿಜಿಸ್ಟರ್ಡ್ ಆಫೀಸು:— ಕೋರ್ಟ್ ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವ್ರದರಿಂದ ವಾರ್ತೆ, ಲೇಖನ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ

ಮುಖಪತ್ರದಲ್ಲಿ:

ಮಾರ್ಚದಲ್ಲಿ ಅಂತಾರಾಷ್ಟ್ರೀಯ ಬ್ಯಾಲೆ ನೃತ್ಯ ಸ್ಪರ್ಧೆಯಲ್ಲಿ ವಿಜಯಿಗಳಾದ ಬಲ್ಗೇರಿಯಾ ನರ್ತನಪಟುಗಳು: ಕ್ರಾಸಿಮಿರಾ ಕೊಲ್ದನೊವ ಮತ್ತು ಇವ್‌ಕೊ ಲಜರೋವ್.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೨೪	೧೧—೨—೧೯೬೫	No. 24

ಆಲೋಚಿಸಬೇಕಾದ ವಿಷಯ

ಹಿಂದಿಯನ್ನು ಕೇಂದ್ರದ ಆಡಳಿತ ಭಾಷೆಯನ್ನಾಗಿ ಮಾಡುವ ಸಂಬಂಧವಾದ ಸಂವಿಧಾನದ ಹದಿನೇಳನೇ ಕಲಮಿನ ಜ್ಯಾರಿಯ ಕುರಿತು ದೇಶದ ದಕ್ಷಿಣದ ರಾಜ್ಯಗಳಲ್ಲಿ, ಮುಖ್ಯವಾಗಿ ಮದ್ರಾಸಿನಲ್ಲಿ ದೊಡ್ಡ ಗೊಂದಲವೇ ಉಂಟಾಯಿತು. ಪ್ರಜಾರಾಜ್ಯ ದಿನದಂದು ಮುಷ್ಕರ ಪ್ರದರ್ಶನ, ಮೆರವಣಿಗೆಗಳು ನಡೆದು, ಪೋಲೀಸರು ಗುಂಡು ಹಾರಿಸಬೇಕಾದ ದುರ್ಘಟನೆಯೂ ಜರಗಿತು. ಭಾವೋದ್ವೇಗದಿಂದ ಆತ್ಮ ಬಲಿದಾನಕ್ಕೂ ಒಬ್ಬಿಬ್ಬರು ಮುಂದಾದರು. ಹಿಂದಿಯ ಬಗ್ಗೆ ವಿರೋಧದ ಕುರಿತಾದ ಚಳವಳಿ ಮುಖ್ಯವಾಗಿ ತಮಿಳ ನಾಡಿನಲ್ಲಿ ಇನ್ನೂ ನಡೆಯುತ್ತಲೇ ಇದೆ.

ದೇಶಕ್ಕೊಂದು ರಾಷ್ಟ್ರ ಭಾಷೆ ಇರಬೇಕಾದುದೇನೋ ನ್ಯಾಯ. ಆ ಸ್ಥಾನವನ್ನು ತುಂಬಬಲ್ಲ ಭಾಷೆ ಹಿಂದಿಯೇ ಎಂಬುದಾಗಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರೂ ಹೇಳಿದ್ದರು. ಆದರೆ, ಈ ಕುರಿತು ದಕ್ಷಿಣದ ರಾಜ್ಯಗಳ ಜನರಲ್ಲಿ ತೀವ್ರ ಅಸಮಾಧಾನ ಹಾಗೂ ಅತೃಪ್ತಿ ಮೊದಲಿನಿಂದಲೂ ಇತ್ತು. ಈ ಪರಿಸ್ಥಿತಿಯನ್ನು ಮನಗಂಡೇ ದಿವಂಗತ ಪ್ರಧಾನಿ ನೆಹರೂರವರು ಹಿಂದಿಯನ್ನು ಯಾರ ಮೇಲೂ ಒತ್ತಾಯದಿಂದ ಹೇರಲಾಗುವುದಿಲ್ಲ ಎಂಬ ಭರವಸೆಯನ್ನು ನೀಡಿದ್ದರು.

ಸಂವಿಧಾನದ ಪ್ರಕಾರ ಈ ವರ್ಷ ಹಿಂದಿಯನ್ನು ಕೇಂದ್ರದ ಭಾಷೆಯನ್ನಾಗಿ ಸ್ವೀಕರಿಸಬೇಕಾಗಿದೆ. ಆದರೆ ಈ ಸಂದರ್ಭ ದೇಶದ ಪರಿಸ್ಥಿತಿಯ ಕುರಿತು ನಾವು ಗಮನ ಹರಿಸಬೇಕಾದುದು ಅಗತ್ಯವೆನಿಸಿದೆ. ಸಂವಿಧಾನವೇನೋ ಈ ಕುರಿತು ೧೯೫೦ರಲ್ಲಿ ಈ ನಿಲುವು ತಳೆದಿದ್ದರೂ ಇಂದು ಪರಿಸ್ಥಿತಿ ಬದಲಾಗಿದೆ. ದೇಶವು ಚೀನೀ ಆಕ್ರಮಣದ ಗಂಡಾಂತರ ಹಾಗೂ ಆಹಾರ ಸಮಸ್ಯೆ ಮೊದಲಾದ ಗಡುತರ ಪರಿಸ್ಥಿತಿಯಲ್ಲಿ ಸಿಲುಕಿದೆ. ಈ ಸಂದರ್ಭ ಸಮಗ್ರ ರಾಷ್ಟ್ರದ ಐಕ್ಯತೆ ಹಾಗೂ ರಕ್ಷಣೆಯ ಕಡೆಗೆ ನಮ್ಮ ಗಮನ ಹರಿಸಬೇಕಾದುದು ನ್ಯಾಯ. ಹಿಂದಿಯನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕಿಂತ ಪ್ರಾಮುಖ್ಯವಾದ ಹಾಗೂ ಗಹನವಾದ ಇತರ ಸಮಸ್ಯೆಗಳತ್ತ ನಮ್ಮ ದೃಷ್ಟಿ ಹರಿಸಿ, ಒಗ್ಗಟ್ಟಿನಿಂದ ದುಡಿಯ ಬೇಕಾದ ಕಾಲ ಈಗ ಬಂದಿದೆ.

ಹಾಗಾಗಿ ರಾಷ್ಟ್ರೀಯತೆಗೆ ಭಂಗತರುವ ರೀತಿಯಲ್ಲಿ ಹಿಂದಿಯನ್ನು ಜ್ಯಾರಿಗೆ ತರಬಾರದು. ಹಿಂದಿಯು ಹಿಂದಿಯೇತರ ಜನರ ಮನಸ್ಸನ್ನು ಗೆಲ್ಲಬೇಕಲ್ಲದೆ, ಒತ್ತಾಯಪೂರ್ವಕವಾಗಿ ಅದನ್ನು ಹೇರುವುದು ಪ್ರಜಾಪ್ರಭುತ್ವಕ್ಕೆ ಶ್ರೇಯಸ್ಕರವಲ್ಲ. ದೇಶದ ೪೪೦ ಮಿಲಿಯ ಜನರಲ್ಲಿ ಹಿಂದಿಯು ಮಾತೃ ಭಾಷೆಯಾಗಿರುವ ಜನ ಕೇವಲ ೧೩೩ ಮಿಲಿಯದಷ್ಟು. ಉಳಿದ ಬಹುಮಂದಿ ಬೇರೆ ಭಾಷೆ ಮಾತಾಡುವವರು. ಹಾಗಿರುವಾಗ ಬಹುಮತದ ದೃಷ್ಟಿಯಿಂದ ನೋಡಿದರೂ, ಸಂವಿಧಾನದ ೧೭ನೇ ಕಲಮನ್ನು ಸದ್ಯ ವಜಾಗೊಳಿಸುವುದು ಸೂಕ್ತ.

ಈ ಬಗ್ಗೆ ಕೇಂದ್ರವು ಸ್ವಲ್ಪ ವಿವಂಚನೆಗೀಡಾದಂತೆ ಕಾಣುತ್ತದೆ. ಹಿಂದಿಯನ್ನು ರಾಷ್ಟ್ರ ಭಾಷೆಯಾಗಿ ಸ್ವೀಕರಿಸಿದರೂ, ಹಿಂದಿಯೇತರ ಜನರ ಹಿತವನ್ನು ಕಡೆಗಣಿಸದೆ, ಇಂಗ್ಲಿಷನ್ನು ಬಹಕಾಲ ಹಿಂದಿಯ ಜತೆಗೇ ಮುಂದುವರಿಸಿಕೊಂಡು ಹೋಗಲಾಗುವುದೆಂಬ ಭರವಸೆಯನ್ನೇನ್ನೂ ಕೇಂದ್ರ ನಾಯಕರು ಇತ್ತಿದ್ದಾರೆ. ಆದರೆ ಈ ಭರವಸೆ ಮಾತ್ರ, ದಕ್ಷಿಣದ ಜನರಿಗೆ ಸಮಾಧಾನವುಂಟು ಮಾಡಿಲ್ಲ.

ಈ ಸಂದರ್ಭ ದಕ್ಷಿಣದ ರಾಜ್ಯಗಳ ನಾಯಕರ ಅಭಿಪ್ರಾಯವೂ ಕೇಂದ್ರಕ್ಕಿಂತ ತುಸು ಭಿನ್ನವಾಗಿರುವಂತೆ ಕಾಣುತ್ತದೆ. ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಕೇರಳದಲ್ಲಿ "ಕೇಂದ್ರ ಸರಕಾರದ ಯಾವುದೇ ಸೂಚನೆಯು ಹಿಂದೀ ಭಾಷೆಯಲ್ಲಿದ್ದರೆ ಅದನ್ನು ದೂರಕ್ಕೆಸೆಯಿರಿ ಅಥವಾ ಅಲಕ್ಷಿಸಿರಿ" ಎಂದು ಹೇಳಿದರೆಂದೂ ವರದಿಯಾಗಿದೆ. ಮದ್ರಾಸಿನ ಮುಖ್ಯ ಮಂತ್ರಿ ಭಕ್ತವತ್ಸಲಂ ಅವರು ಕೂಡಾ 'ಕೇಂದ್ರವು ಈ ಮೊದಲಿತ್ತ ಭರವಸೆಯನ್ನು ಮುರಿದರೆ ಅದನ್ನು ತೀವ್ರವಾಗಿ ಪ್ರತಿಭಟಿಸಲಾಗುವುದು' ಎಂದಿದ್ದಾರೆ. ಇಂಗ್ಲಿಷ್ ಅಧಿಕೃತ ಭಾಷೆಯಾಗಿ ಮುಂದುವರಿಯುವ ಸಂಬಂಧವಾಗಿ 'ಶಾಶ್ವತ ದ್ವಿಭಾಷಾ' ನೆಲೆಯಲ್ಲಿ ಅಧಿಕೃತ ಭಾಷಾ ಮಸೂದೆಯನ್ನು ತಿದ್ದುಪಡಿ ಮಾಡುವ ಸಲಹೆಯನ್ನು ಬೆಂಬಲಿಸಿದ್ದಾರೆ.

ಈ ಎಲ್ಲಾ ವಿಚಾರಗಳನ್ನು ಪರಿಶೀಲಿಸುವಾಗ ಹಿಂದಿಯ ಕುರಿತು ದಕ್ಷಿಣದಲ್ಲಿ ಇನ್ನೂ ಕೂಡಾ ಉತ್ತಮ ಅಭಿಪ್ರಾಯ ಮೂಡಿಲ್ಲ ಎನ್ನಬಹುದು. ಇದಕ್ಕೆ ಇನ್ನೂ ಬಹುಕಾಲ ಬೇಕಾಗಬಹುದು. ಹಾಗಾಗಿ ಒತ್ತಾಯದ ಶಾಸನವು ದೇಶದ ಬಿಕ್ಕಟ್ಟಿಗೆ ಕಾರಣವಾದೀತು. ರಾಷ್ಟ್ರದ ರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿಯಾಗಬೇಕಾದ ಇಂದಿನ ಈ ಸಂಕಷ್ಟ ಸಮಯದಲ್ಲಿ ಜನತೆ ಒಂದಾಗಿ ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸಬೇಕಾಗಿದೆ. ಆದುದರಿಂದ ಆಡಳಿತ ಭಾಷೆಯ ಪ್ರಶ್ನೆ ಈಗ ಅಷ್ಟು ಮಹತ್ವದ್ದೆನಿಸುವುದಿಲ್ಲ. ಕೇಂದ್ರ ಸರಕಾರ ಈ ಕುರಿತು ದಕ್ಷಿಣದ ಜನರ ಮನೋಸ್ಥಿತಿಯರಿತು, ಗಂಭೀರವಾಗಿ ಆಲೋಚಿಸಬೇಕಾದುದು ಅತಿ ಅಗತ್ಯ.

ವಚನ ಸುಧೆ

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ಪೂರ್ಣಮುದಚ್ಯತೇ।
(ಬೃಹದಾರಣ್ಯಕೋಪನಿಷತ್, ೫)

೦ ಆ ಪರಮಾತ್ಮನು ಪರಿಪೂರ್ಣನು; ಈ ವಿಶ್ವವೂ ಪರಿಪೂರ್ಣವು. ಆ ಪೂರ್ಣನಾದ ಪರಮೇಶ್ವರನಿಂದ ಈ ಜಗತ್ತು ಉದಯಿಸುತ್ತದೆ.

೦೦ ಸರ್ವ ಜಗತ್ಪ್ರಭುವಾದ ಪರಮಾತ್ಮನು ಪೂರ್ಣನು. ಆತನಲ್ಲಿ ಯಾವುದೇ ಕೊರತೆಯೂ ಇಲ್ಲ. ಆತನಿಂದ ನಿರ್ಮಿತವಾದ ಈ ಪ್ರಪಂಚ ಕೂಡ ಪರಿಪೂರ್ಣವಾಗಿದೆ. ಹೇಗಿರಬೇಕೋ ಹಾಗೆ ಇದರ ನಿರ್ಮಾಣವಾಗಿದೆ.

ಕೇರಳದಲ್ಲಿ ಚುನಾವಣೆ

ದೇಶದಲ್ಲಿ ಅತಿ ಹೆಚ್ಚು ವಿದ್ಯಾವಂತರಿರುವ ರಾಜ್ಯ ಕೇರಳ. ಸ್ವಾತಂತ್ರ್ಯದ ಬಳಿಕ ಅತಿ ಹೆಚ್ಚು ಸಂಖ್ಯೆಯ ಸರಕಾರಗಳನ್ನು ಕಂಡ ರಾಜ್ಯವೂ ಹೌದು. 'ಸಮಸ್ಯೆಯ ರಾಜ್ಯ ಕೇರಳ'ದಲ್ಲಿ ರಾಜಕೀಯ ಸ್ಥಿರತೆ ಇಲ್ಲದಿರುವುದು ಆ ರಾಜ್ಯದ ಪ್ರಗತಿಗೆ ಇರುವ ದೊಡ್ಡ ಅಡ್ಡಿಗಲ್ಲು. ವಿದ್ಯಾವಂತರಾದ ಪ್ರಜೆಗಳಿದ್ದರೂ, ಸ್ಥಿರ ಸರಕಾರ ರಚನೆಯಲ್ಲಿ ಅಲ್ಲಿನ ಜನ ಯಶಸ್ವಿಯಾಗಿಲ್ಲ. ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರ ಪರಾಭವ ಹೊಂದಿ ರಾಜೀನಾಮೆ ಇತ್ತಾಗ, ಅಧಿಕಾರ ನಿರ್ವಹಿಸಬಹುದಾದ ಪಕ್ಷ ಅಲ್ಲಿ ಯಾವುದೂ ಇರಲಿಲ್ಲ. ಹಾಗಾಗಿ ಅಲ್ಲಿ ಅಧ್ಯಕ್ಷರ ಆಡಳಿತೆ ಜ್ಯಾರಿಗೆ ಬಂತು. ಕಾಂಗ್ರೆಸಿಗರ ಒಳ ಜಗಳವೂ ಇದಕ್ಕೆ ಒಂದು ಕಾರಣ.

೧೩೩ ಸದಸ್ಯರಿರುವ ಕೇರಳ ಎಸೆಂಬ್ಲಿಯ ಸ್ಥಾನಗಳಿಗೆ ಸ್ಪರ್ಧಿಸಲು ೮೦೦ಕ್ಕೂ ಹೆಚ್ಚು ಅಭ್ಯರ್ಥಿಗಳು ನಾಮ ಪತ್ರ ಸಲ್ಲಿಸಿದ್ದಾರೆ. ಕಾಂಗ್ರೆಸ್ ಎಲ್ಲಾ ಸ್ಥಾನಗಳಿಗೂ ತನ್ನ ಉಮೇದ್ವಾರರನ್ನು ನಿಲ್ಲಿಸಿದೆ. ನಾಯರ್ ಸಮಾಜದ ಬೆಂಬಲ ಪಡೆದ ಕೇರಳ ಕಾಂಗ್ರೆಸ್ ೭೬ ಸದಸ್ಯರನ್ನು ಘೋಷಿಸಿದೆ. ಕಮ್ಯೂನಿಸ್ಟರಲ್ಲಿ ಎಡ ಬಲ ಗುಂಪುಗಳ ದೆಸೆಯಿಂದ, ಅವರು ಬಹುಮತ ಪಡೆಯುವ ಸೂಚನೆಯೇ ಇಲ್ಲ. ಭಾರೀ ಸಂಖ್ಯೆಯ ಬಹುಮುಖ ಸ್ಪರ್ಧೆಯು ಇರುವುದರಿಂದ, ಈ ಬಾರಿಯ ಚುನಾವಣೆ ವಿಶಿಷ್ಟವೆನಿಸಲಿದೆ. ಮಾರ್ಚ್ ೪ರಂದು ನಡೆಯುವ ಮತದಾನದ ಪರಿಣಾಮ ಕಾದು ನೋಡಬೇಕು!

ನರಸಣ್ಣನ ಸರಸ

'ಪಂಜಾಬದ ಹುಲಿಯು ಬೇಟೆಯಾಯಿತು; ಇನ್ನೆಲ್ಲಿಯ ಹುಲಿಯನ್ನು ಹೊಡೆಯುತ್ತಾರೆಯೋ ಏನೋ?'

'ಭಾರತವು ಹುಲಿಗಳಿಗೆ ಹೆಸರಾದ ದೇಶ ತಾನೆ!'

ಮುಂದರು

ಗೇಹ ರಾಜ್ಯದಲ್ಲಿ

ಒಂದುತನಗಿಲ್ಲದೆಯೆ ಉಂಟೊತನಗೆಲ್ಲಾ



"ಸ್ವಲ್ಪ ಇಲ್ಲಿ ನೋಡೀಂತ್ರೆ...."

"ಏನೇ ಅದು ನೋಡೋದ? ನಿನ್ನ ಸುಟ್ಟ ಮುಖ ನೋಡಿ ನೋಡಿ ಸಾಕಾಗಿ ಹೋಯ್ತು ಕಣೇ...."

ಅಲ್ಲ, ನನ್ನ ಮುಖಾನ ನೋಡಿ ಸಾಕಾಯ್ತೂಂತ ಮತ್ತೆ ಯಾರ್ಯಾರ ಮುಖ ನೋಡ್ಲಿಕ್ಕೆ ಹತ್ತೀರಾ....?"

"ಏನಾಗುತ್ತೆ?"

"ಆಗೋದೇನು? ನನ್ನದಂತೂ ಸುಟ್ಟ ಮುಖವಾಯ್ತಲ್ಲಾ.... ನಿಮ್ದು...."

"ಏನೇ ಅದು ಅರ್ಧದಲ್ಲೇ ನಿಲ್ಸಿ ಬಿಟ್ಟೆ..."

'ನಿಲ್ಸಿಗಿಲ್ಸಿ ಬಿಡ್ಲಿಲ್ಲಾ, ನೀವು ಕೇಳೊಂತಂದ್ರೆ ಅನ್ತೀನಿ..."

"ಪಾಪ, ಇದುವರೆಗೂ ನನ್ನ ಅನುಮತಿ ಪಡೆದೇ ಮಾತಿನ ಮುತ್ತು ಸುರಿದ ರುಚಿ ತಾನೆ?"

"ನೀವು ಅಷ್ಟೆಲ್ಲಾ ಉದ್ದ ದಪ್ಪ ಅನ್ನೋದು ಬೇಡ...."

"ಮತ್ಯಾಕೆ ಮಾತನ್ನ ನುಂಗಿ ಬಿಟ್ಟೆ?"

"ನುಂಗೋದೆಲ್ಲಿ ಬಂತು? ಅನ್ತೀನೆ, ಅನ್ತೀನೆ...."

"ಅನ್ತೀನೆ ಅನ್ತೀನೇಂತ ಅಸ್ತಾ ಇದ್ದೀಯಲ್ಲೇ? ಸುರಿಸೋ ಮುತ್ತಿನ ಮಳೆಯನ್ನ ಬೇಗ್ನೇ ಸುರೀಬಾರ್ದೇ?"

"ಒಳ್ಳೇ ಕತೆಯಾಯ್ತಲ್ಲಾ ಇದು!"

"ಏನೇ ಅದು ಅದೆಂತಹ ಒಳ್ಳೇ ಕತೆ..."

"ಏನಿಲ್ಲಾಂದೆ. ಬಿಟ್ಟು ಬಿಡಿ...."

"ಹಿಡಿದಿರೋದನ್ನ ಬಿಟ್ಟು ಬಿಡೋದಂದ್ರೆ ಅಷ್ಟು ಸಲೀಸೇನೆ? ಹೇಳ್ಬಿಡು...."

"ಮತ್ತೇನಿಲ್ಲಾ, ನೀವು ಹಾಗೆ ಮಾಡಿದೀರಂದ್ರೆ ನಿಮ್ಮ ಮುಖ ಕೆಂಪು ಕೆಂಡವಾಗಿ ಉರಿದೀತು..."

"ಉರಿದೀತು! ಕೆಂಡವಾಗಿ...!"

"ಹ್ಞಾಂ...."

"ಹ್ಞಾಂ...ಹಾಳದಷ್ಟು, ಅದಿರ್ಲಿ.... ನೀನನ್ನೋ ಮಾತಾದ್ರೂ ಏನೂಂತ?"

"ಅನ್ನೋ ಮಾತೇನೂಂತ ಕೇಳ್ತೀರಾದ್ರೆ ಇಷ್ಟು ಹೊತ್ತು ಬೇಕಾಗ್ತಿತ್ತು, ನಿಮ್ಮ ಹತ್ರ ತುರ್ತು ಸಂದರ್ಭಾಂತ ಬಂದ್ರೆ ಆಗೋ ಗತೀನೂ ಇಷ್ಟೆ...."

"ಯಾಕೋ ಸುಮ್ಸುಮ್ನೆ ಬೇಜಾರು ಮಾಡ್ತೀಯ? ಅಂತಹ ತುರ್ತು ಪರಿಸ್ಥಿತಿ ಬಂದಿರೋದು ಯಾರಿಗೆ? ಯಾಕೆ?"

"ಯಾರಿಗೇಂತಂದ್ರೆ? ಬಂದವ್ರಿಗೆ. ಯಾಕೇಂತಂದ್ರೆ, ಯಾರಿಗೆ ಗೊತ್ತು?"

'ಏನದ್ಯಾ ಸಮಾಚಾರ? ತುಸು ಬಿಡ್ಸಿ ಹೇಳ್ಬಾರ್ದೇ?"

"ಅಲ್ಲಾ ಹೇಳೋದಕ್ಕೆ ಮೊದ್ಲೇ ಆಯ್ತು ನನ್ನ ಮುಖಕ್ಕೆ ಮಂಗಳಾರ್ತಿ. ಇನ್ನು ಹೇಳಿದ್ಮೇಲೆ...."

'ನನ್ಮುಖಕ್ಕೆ ಮಂಗಳಾರ್ತಿ ಅನ್ನು.... ಅದಿರ್ಲಿ, ಸದ್ಯ ವಿಷಯವೇನೂಂತ...."

"ಮತ್ತೇನೂ ಇಲ್ಲ. ಕೆಲಸದಾಕೆ ನಾಳೆಯಿಂದ ಬರೋಲ್ಲಂತೆ..."

"ಅಯ್ಯೋ, ಏನಾಯ್ತಂತೆ?'

'ಆಗೋದೇನು? ನಿಮ್ಗೆಲ್ಲಾ ಐದು ರೂಪಾಯಿ ತುಟ್ಟಿಭತ್ತೆ ಏರಿತ್ತಂತೆ...."

"ಆಕೆಗೂ ಏರ್ಬೇಕೂಂತ ತಾನೇ ಅವಳನ್ನೋದು?"

"ಅದೇ ಈಗ ಬಂದದ್ದು...."

"ಅಲ್ವೆ, ನಾನು ಇನ್ನೂರು ರೂಪಾಯಿ ಪಡೆಯೋವನಿಗೆ ಐದು ರೂಪಾಯಿ ಏರುತ್ತೇನ್ನು. ಈಕೆಗ?"

"ಅದೇ ಅಂದಿದ್ದವ್ಳು. ಸಂಬಳದ ಪ್ರಮಾಣವನ್ನ ಲೆಕ್ಕಿಸದೆ ಎಲ್ರಿಗೂ ಐದೈದು ಏರ್ಬೇಕೊಂತ...."

"ಅಂದ್ರೆ ಆಕೆಗೆ ಇಪ್ಪತ್ತರ ಬದ್ಲು ಇಪ್ಪತ್ತೈದು..'

'ಅದೇ ಅವಳ ಅಭಿಪ್ರಾಯ...."

"ನೀನು ಏನಂದೆ?"

"ಅನ್ನೋದೇನು? ಅವೆಲ್ಲಾ ಆಗೋಲ್ಲ. ನಮ್ಮವ್ರಿಗೆ ಐದು ಏರಿದ್ದು ನಿನ್ನದನ್ನ ಏರ್ಸೋಕಲ್ಲಾಂದು ಬಿಟ್ಟೆ...'

"ಹ್ಞಾಂ....ಅದು ಸರಿಯೆನ್ನು. ಅಲ್ಲಾ ನೋಡು".

"ಅಲ್ಲಾನೂ ಇಲ್ಲ. ಮುಲ್ಲಾನೂ ಇಲ್ಲ...."

"ಹಾಗಲ್ವೆ, ಈ ಐದು ರೂಪಾಯಿ ಏರುತ್ತೇಂತ ತಿಳಿಯೋದೇ ತಡ ಎಲ್ಲವ್ರಿಗೂ ಅದ್ರ ಮೇಲೆ ಕಣ್ಣು...."

"ಹಣ ಕಂಡರೆ ಹೆಣವೂ ಬಾಯಿ ಬಿಡುತ್ತೆ ಅಲ್ವೆ...."

"ನೋಡು, ಈ ಐದು ರೂಪಾಯಿಯನ್ನ ಐನೂರು ಜನ ನೋಡ್ತಾ ಇದ್ದಾರೆ..."

'ಯಾರು ಯಾರು?"

'ನಿನ್ನೆ ಕಾಫಿ ಕುಡಿಯೋಕ್ಕೆ ಹೋದಾಗ ಅಲ್ಲಿ ಐದು ಪೈಸೆ ಏರಿದೆ...."

"ಹ್ಞಾಂ...."

"ಬೇಳೆ ತಗೊಳ್ಳೋಣಾಂತ ಬಂದ್ರೆ ಅಲ್ಲಿ ಚಕ್ರ ಏರಿತು...."

"ಹೌದು.."

"ಡೋಬಿಯವನ ಬಳಿ ಹೋದ್ರೆ ಅಲ್ಲಿನೂ ಪೈಸೆ ಹೆಚ್ಚು... ಮತ್ತೆಲ್ಲಾ ಬಿಡು, ಒಂದು ವೀಳ್ಯ ಹಾಕೋಣಾಂತ ಬೀಡ ತಗೊಂಡ್ರೆ ಅದ್ಕು ಒಂದು ಪೈಸೆ ತುಟ್ಟಿ ಭತ್ತೆ...."

"ಅದೆಲ್ಲಾ ಹೌದೂನ್ನಿ. ಅಂದ್ಮೇಲೆ ಅವ್ರು ಕೊಡೋ ಐದು ರೂಪಾಯಿಯಿಂದ ಐವತ್ತು ರೂಪಾಯಿ ಹೆಚ್ಚು ವೆಚ್ಚ ಮಾಡಬೇಕಾಗ್ತದೇಂತ ತಾನೇ ನೀವೆನ್ನೋದು...?"

'ವೆಚ್ಚ ಮಾಡೋಕೆ ನಿನ್ನಪ್ಪ ಗಂಟು ಕಟ್ಟಿದ್ದಾನೇನು?"

"ನೋಡಿ, ನಿಮ್ಗೆ ಆ ಆ ಅಂದೇ ಅಂದಿದ್ದೆ. ನನ್ನ ಅನ್ನಿ, ನನ್ನ ತಿನ್ನಿ, ಅದ್ರೆ ನನ್ನ ಅಪ್ಪ ಅಮ್ಮನ ಸುದ್ದಿ ಮಾತ್ರ ತೆಗೀಬ್ಯಾಡೀಂತ.. ಇಷ್ಟು ಬೇಗ ಮರ್‍ತು ಹೋಯ್ತೇನು?"

"ತಪ್ಪಾಯ್ತು ಮಹಾರಾಣಿ... ಈಗ ನೋಡು, ಆ ಐದು ರೂಪಾಯಿ ಇನ್ನೂ ಕನಸಿನ ಗಂಟಾಗಿಯೇ ಇದೆಯೆಂಬೋ ವಿಚಾರ ಮಾತ್ರ ಯಾರಿಗೂ ಗೊತ್ತಿಲ್ಲ...."

"ಯಾಕೆ?"

"ಯಾಕೇಂತಂದ್ರೆ? ನಮ್ಗೇನು ಈಗ ಸಿಗುತ್ತೆ?"

"ಅಲ್ಲಾ, ಸಿಕ್ಕಿದ್ರೂ ಪ್ರಯೋಜನವೇನೂಂತ?"

"ಯಾಕೆ?"

"ಅದೇನೋ ಮುಖ್ಯಮಂತ್ರಿಯವರಿಗೆ ಮನಿ ಆರ್ಡರ್ ಮಾಡ್ಬೇಕಂತೆ...."

"ಅದು ನಮ್ಗೇನಿಲ್ಲಾನ್ನು. ಅಲ್ಲ ಒಂದು ವೇಳೆ ಏದ್ರೂನೂ ಕೈಗೆ ಬಂದ ಮೇಲೆ ತಾನೆ? ಅದು ನಮ್ಮ ಕೈಸೇರೋದ್ರೊಳ್ಗೆ ಈಗೆಲ್ಲಾ ಕಳ್ಸಿದವ್ರ ಕತೆ ಗೊತ್ತಾಗುತ್ತೆ. ಅದ್ರೆ. ಈಗ ಏನು ಮಾಡ್ಲೀಂತ..."

'ಯಾಕೆ? ಏನಾಯ್ತೀಗ?'

'ಆಗೋದೇನು? ಆಗೋದೇ ಎನ್ನು. ಈ ಕೈಯಿಂದ ಸಾಲ ಮಾಡೋ ಸ್ಥಿತಿ ಬಂತಲ್ಲಾಂತ ಯೋಚ್ನೆ..."

"ಯಾಕೆ ಸುಮ್ನೆ ಯೋಚಿಸ್ತೀರಾ?"

"ಯೋಚಿಸದೇ, ದಿನಾ ಹೇಗೆ ಸಾಗುತ್ತೇಂತ....?"

"ಅಲ್ಲಾ, ಸಾಲ ಮಾಡೋ ಗತಿ ನಿಮ್ಗೆ ಬರೋದಿಲ್ಲಾರಿ...?"

"ಏನೇ ಅದು ಶಕ್ತಿ ಮುರಿದ್ಹಾಂಗೆ ಹೇಳ್ತೆ? ಮನೆಯಲ್ಲಿ ಕೂತು ಕೂತೇ ಭವಿಷ್ಯ ಹೇಳೋದನ್ನೂ ಕಲ್ತು ಕೊಂಡೆಯೇನು?"

"ಅಲ್ಲ ಅಂಗೈ ನೋಡೋಕೆ ಕನ್ನಡಿ ಬೇಕೆ?"

"ಹಾಗಂದ್ರೆ..."

ಅದ್ಕೇ ಹೇಳೋದು ನೋಡಿ, ನಿಮ್ಮ ಟೋಪಿಯವ್ರ ಬುದ್ಧಿಯೊಳ್ಗೇನೇ ಹೊರಗೆ ಹರಿಯೋದಿಲ್ಲಾಂತ..."

"ಅಲ್ವೆ? ನಿನ್ನ ಮಾತಿನ ರಹಸ್ಯ?"

"ಇದ್ರಲ್ಲಿ ರಹಸ್ಯವೆಲ್ಲಿ ಬಂತೂಂತ?"

"ಮತ್ತೇನೇ ಇರೋದು? ನನ್ಗೊಂದೂ ಗೊತ್ತಾಗೋದಿಲ್ಲಾ..."

"ಹೇಗೆ ಗೊತ್ತಾಗ ಬೇಕು? ನೀವೆಲ್ಲಾ ನಂಬಿದ ದೇವ್ರು ಕೈ ಬಿಟ್ಟಾಂತಾದ ಮೇಲೆ ಗೊತ್ತು ಮಾಡೋದಾದ್ರೂ ಯಾರೂಂತ?'

"ಯಾರು ಕೈ ಬಿಟ್ರೂ ನೀನಂತೂ ಬಿಡೋದಿಲ್ಲಾ ಖಾತ್ರಿ...."

"ಹೇಗೆ ನಂಬೋದು?'

"ನಂಬೋದು ಹೇಗೇಂತಂದ್ರೆ ನಂಬಿಗೆ ಇಟ್ಟೇ ನಂಬೋದು..."

"ಸದ್ಯ ಅಷ್ಟಾದ್ರೂ ಇದೆ ತಾನೆ?'

"ಮತ್ತೆ ಏನು ಇಲ್ಲಾ?"

"ಅದೇ ಅಂದೆನಲ್ಲಾ, ಬುದ್ಧಿ...."

'ಹೇಂಗೆಲ್ಲಾ ಅದ್ರೆ ನಡಿಯೋಲ್ಲ. ಸರಿಯಾಗಿ ಬಾಯ್ಬಿಟ್ಟು ಹೇಳು...

"ಸ್ವಲ್ಪ ಹತ್ರ ಬರ್‍ರಿ...."

'ಆಗತ್ಯವಿಲ್ಲಾ, ಅದೆಂತಹ ಗಾಯತ್ರಿಯಾದ್ರೂ...."

"ಗಾಯತ್ರಿ ಅಲ್ರಿ ಇದು ಸಾವಿತ್ರೀ ಮಂತ್ರ"

"ಅಯ್ಯೋ ನಿಮ್ಮ.... ಅಂತೂ ಬಾ

(ಹದಿಮೂರನೇ ಪುಟ ನೋಡಿ)

ಮಂಗಳೂರಿನಲ್ಲಿ ಈ ವರ್ಷದ ಕಡೇ ವಾರದ ಪ್ರದರ್ಶನ

ಕರ್ಣಾಟಕ ಯಕ್ಷಗಾನ ನಾಟಕ ಸಭಾ, ಮಂಗಳೂರು

ಇವರು

ನೆಹರು ಮೈದಾನಿನಲ್ಲಿ ಹಾಕಿರುವ ತಮ್ಮ ಭವ್ಯ

ಕರ್ಣಾಟಕ ರಂಗ ಭೂಮಿಯಲ್ಲಿ

ತಾ. 6-2-65 ರಿಂದ

ವಿಟ್ಲ ಬಾಬುರಾವ್ ಇವರ ಆಶ್ಚರ್ಯಕರವಾದ ಮತ್ತು ಭಯಾನಕ

ದೃಶ್ಯಗಳಿಂದ ಕೂಡಿದ

ಮಹಾ ಕವಿ ವಾಲ್ಮೀಕಿ

ಎಂಬ ಪೌರಾಣಿಕ ಕಥಾಭಾಗವನ್ನು ಅಭಿನಯಿಸುತ್ತಿದ್ದಾರೆ.

ಈ ನಾಟಕದಲ್ಲಿ ನಯನ ಮನೋಹರವಾದ ದೃಶ್ಯಗಳಿವೆ.

ಯಕ್ಷಗಾನ ನಾಟಕ ರಂಗದಲ್ಲೊಂದು ಕ್ರಾಂತಿ!

ನಿಮ್ಮ ನಿರೀಕ್ಷೆಗೂ ಮಿಕ್ಕಿದ ದೃಶ್ಯಗಳ ಉತ್ಕ್ರಾಂತಿ!

ಸಕಲ ಕಲಾಪ್ರಿಯರಿಗೆ ಸಂತೋಷದ ಸಂಕ್ರಾಂತಿ!

ವ್ಯವಸ್ಥಾಪಕ: ಕೆ. ವಿಠಲ ಶೆಟ್ಟಿ

ಇದೀಗ ಪ್ರಜಾಪ್ರಭುತ್ವ ಸಿದ್ಧತೆ

ಬರೆದವರು: ಶ್ರೀ 'ನಚಿಕೇತ' ಮಂಗಳೂರು.

ನಮ್ಮದು ಆದರ್ಶ ಪೇಟೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕೊಡನೆಯೇ, ಪ್ರಥಮ ಬಾರಿ ಎಂಬಂತೆ ಊರಿನ ಪ್ರತಿಯೊಬ್ಬನೂ ರಾಷ್ಟ್ರಧ್ವಜವನ್ನು ಕೈಗೆತ್ತಿಕೊಂಡು ಹಾರಿಸಿದ (?) ಊರು. ಪೇಟೆ ಸಣ್ಣದಾದರೂ ಇಲ್ಲಿಯ ಜನರ ಮನಸ್ಸು ವಿಶಾಲ; ತುಂಬಾ ವಿಶಾಲ. ಒಬ್ಬನನ್ನು ಕಂಡರೆ ಇನ್ನೊಬ್ಬನಿಗೆ ಕೌಟುಂಬಿಕ ಪ್ರೇಮ ಹುಟ್ಟುವಷ್ಟು ಅಂತಃಕರಣ ಉಳ್ಳವರು ನಮ್ಮ ಜನ. ಊರಿನ ಎಲ್ಲರ ಕಷ್ಟಸುಖಗಳನ್ನು ತಮ್ಮದೇ ಕಷ್ಟಸುಖಗಳೆಂದು ತಿಳಿದು, ತಾಸು ತಾಸು ಉದ್ದಗಿನ ಚರ್ಚೆ ಮಾಡುವ ಗುಣ— ನಮ್ಮೂರಿನ ಜನರ ಪರಸ್ಪರ ಪ್ರೀತಿ ಭಾವವನ್ನು ತೋರುತ್ತದೆ. ನಮ್ಮೂರಿನ ಮುಖಂಡರಾದರೂ ಅಂತೆಯೇ - ಪರಮ ದಯಾಳು. ಇಡಿಯ ದೇಶದಲ್ಲಿ ಪ್ರಜಾಪ್ರಭುತ್ವ ಹಬ್ಬಿಕೊಂಡಿರುವಾಗ(ಎಂದರೆ ಎಲ್ಲವನ್ನೂ ಮತಗಣನೆಯ ಮೂಲಕ ನಿಶ್ಚಯಿಸುವ ಹೊಸ ರೀತಿ ಬಂದಿರುವಾಗ)- ನಮ್ಮೂರು ಅದಕ್ಕೆ ಹೊರತಾಗಿ ನಿಲ್ಲುವುದು ಅಸಭ್ಯವಲ್ಲ- ಎಂಬ ದೃಷ್ಟಿ ಇಲ್ಲಿ ಎಲ್ಲರಲ್ಲೂ ಇದೆ. ಹಾಗಾಗಿ ಈ ಊರಲ್ಲಿ ಏನೇ ಆಗಲಿ, ಅದು ಮತಗಣನೆಯ ಮೂಲಕ ಕಾರ್ಯರೂಪ ತಾಳಬೇಕು. ನಲುವತ್ತೇಳರ ಬಳಿಕ ಇದೇ ರೂಢಿಯಾಗಿದೆ. ಸಾಮಾನ್ಯ ಜನರಿಗೂ ರಾಜಕೀಯದ ಅಂಶಗಳೆಲ್ಲ ತಿಳಿದಿರಬೇಕು— ಎಂಬ ಉದ್ದೇಶ ಇಂತಹ ಮತಗಣನಾ ಕ್ರಮದ ಹಿನ್ನೆಲೆಯಲ್ಲಿದ್ದ ಬಹುದೊಡ್ಡ ಕಾರಣಗಳಲ್ಲೊಂದು ಎಂದು ಎಲ್ಲರಿಗೂ ಗೊತ್ತು.

ಊರಿನ ಪ್ರಸಿದ್ಧ ಸ್ಥಳವೊಂದರಲ್ಲಿ ವಾರಕ್ಕೊಮ್ಮೆ ಊರ ಮುಂದಾಳುಗಳು ಕೂಡುತ್ತಾರೆ. ಊರಲ್ಲಿ ಏನು ಸಭಾರಣೆಗಳಾಗಬೇಕಾದರೂ ಇಲ್ಲಿಯೇ ಹುಟ್ಟಬೇಕು. ಇಂದೂ ಅಂತಹ ಒಂದು ಕೂಟ ಸೇರಿತ್ತು.

ರಾಮಯ್ಯ ಮಾಸ್ಟ್ರು—ನಮ್ಮೂರಿನ ಆಧಾರಸ್ತಂಭಗಳಲ್ಲಿ ಒಬ್ಬರು. ಎರಡನೆಯ ಮಹಾಯುದ್ಧದ ಅಂತ್ಯದೊಳಗೆ ತನ್ನ ಹೆಸರಲ್ಲಿದ್ದ ಪೂರ್ವಾರ್ಜಿತ ಆಸ್ತಿ ಮನೆಗಳನ್ನು ಮಾರಿಕೊಂಡು ಕಟ್ಟುಬದ ಹೊಟ್ಟೆ ತುಂಬಿಸಿದ್ದ ಉಪಾಧ್ಯಾಯರವರು. ಹಾಗಾಗಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕೊಡನೆಯೇ ಅವರು ಬಾಡಿಗೆ ಮನೆ ಹಿಡಿದಿದ್ದರು. ಇಂದಿನ ಸಭೆಯಲ್ಲಿ ಊರವರ ಮುಂದಿನ್ದ ಚರ್ಚಾಸ್ಪದ ಹಾಗೂ ನಿರ್ಣಯಾತ್ಮಕ ವಿಚಾರ ಅವರದೇ. ಊರಿನ ಪ್ರಮುಖರಿಗೆ ಅವರೊಂದು ಅರ್ಜಿ ಬರೆದಿದ್ದರು. "ಊರ ಪ್ರಮುಖರೆಲ್ಲರೂ ಸೇರಿಕೊಂಡು, ನನಗೆ ಆತ್ಮಹತ್ಯೆ ಮಾಡಿಕೊಳ್ಳಲು ಅನುಮತಿಯನ್ನು ಮತಗಣನೆಯ ಮೂಲಕ ಮಾಡಿಕೊಡಬೇಕು", ಎಂಬುದೇ ಅವರ ಅರ್ಜಿಯ ಮುಖ್ಯ ತಾತ್ಪರ್ಯ. ಅದರ ಅರ್ಜಿಯ ಕುರಿತು ಚರ್ಚೆ ನಡೆಸಲು ಜೀನಸಿನ ಅಂಗಡಿಯ ಮಲ್ಯರು, ಬಟ್ಟೆ ಅಂಗಡಿಯ ಶೆಟ್ಟರು, ತರಕಾರಿ ಮಾರುವ ಮೇರಿಬಾಯಿ, ಕಟ್ಟೆಗೆ ಡಿಪೋದ ಸಾಹೇಬರು, ಮನೆ ಮಾಲಿಕರಾದ ಭಟ್ಟರು, ಚಿಲ್ಲರೆ ಸಾಮಾನಿನ ಅಂಗಡಿಯ ಪೂಜಾರಿಗಳು, ಬೊಂಬೇ ಟೈಲರ್ ಶೀನಪ್ಪ—ಇವರೆಲ್ಲ ಕೂಡಿದ್ದರು. ಮಾತ್ರವಲ್ಲದೆ, ಊರ ಕೆಲವು ಬೇರೆ ಮುಂದಾಳುಗಳೂ ಕೈ ಎತ್ತಲೆಂದು ಬಂದಿದ್ದರು, ವಿಶೇಷವೇನೆಂದರೆ— ಇವರೆಲ್ಲರಿಗಿಂತ ಸ್ವಲ್ಪ ದೂರದಲ್ಲಿ, ತನ್ನ ಕುತ್ತಿಗೆ ಮತ್ತು ಕೈಯ ಬಳಿ ನೂಲು ಬಿಟ್ಟಿರುವ ಕೋಟನ್ನು ಹಾಕಿಕೊಂಡು, ಬಿಳಿ ತಲೆಯ. ರಾಮಯ್ಯ ಮಾಸ್ಟ್ರು ಕುಳಿತಿದ್ದರು.

ಸರಿ. ಸಭೆ ತನ್ನ ಕಾರ್ಯಕ್ಕೆ ತೊಡಗಿತು. ಮೇರಿಬಾಯಿ 'ವಂದೇ ಮಾತರಂ' ಹಾಡಿದರು. ಊರಿನ ಮುಂದಾಳುಗಳು ರಾಮಯ್ಯ ಮಾಸ್ಟ್ರು ಬರೆದಿದ್ದ ಅರ್ಜಿಯನ್ನು ಕೈಯಲ್ಲಿ ಹಿಡಿದುಕೊಂಡ, ಸಭೆಯನ್ನು ಉದ್ದೇಶಿಸಿ ಮಾತನಾಡ ತೊಡಗಿದರು.

"ಭಾರತದ ಪ್ರಜೆಗಳೇ, ಇಂದೀಗ ನಿಮ್ಮದುರಿಗೆ ವಿಶೇಷವಾದೊಂದು ಸಮಸ್ಯೆ ತೀರ್ಮಾನಕ್ಕಾಗಿ ಬಂದಿರುತ್ತದೆ. ನಮ್ಮ ಊರಲ್ಲಿಯೇ ಮೂವತ್ತು ವರ್ಷಗಳಿಗಿಂತ ಹೆಚ್ಚುಕಾಲ ಸೇವೆ ಸಲ್ಲಿಸಿರುವ ಶ್ರೀಯುತ ರಾಮಯ್ಯ ಮಾಸ್ಟ್ರು ಆತ್ಮಹತ್ಯೆ ಮಾಡಿಕೊಳ್ಳಲು ನಮ್ಮ ಅನುಮತಿ ಕೇಳಿರುತ್ತಾರೆ ಇದೊಂದು ಗಹನವಾದ, ಆಳವಾದ ವಿಚಾರ," ಎಂದು ಉಪಾಧ್ಯಾಯರನ್ನು ಕಂಡರು. ರಾಮಯ್ಯ ಮಾಸ್ಟ್ರು ಎಲ್ಲರನ್ನು ಕಂಡು ಹೌದೆಂಬ ಅರ್ಥದಲ್ಲಿ ತಲೆದೂಗಿದರು. "ನೀವೀಗ ಇವರ ಅನುಮತಿಯ ಕೇಳಿಕೆಯ ಕುರಿತಾಗಿ ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದು," ಎಂದರು ಮುಂದಾಳುಗಳು. ಕೂಡಿದ್ದವರು ಒಬ್ಬರ ಮೊಗವನ್ನೊಬ್ಬರು ನೋಡಿದರು. ಕೆಲವರು ಬೀಡಿ ಕಟ್ಟು ಬೆಂಕಿ ಪೆಟ್ಟಿಗೆಗಳನ್ನು ಹೊರತೆಗೆದರೆ, ಕೆಲವರು ಬೀಡಬಿಟ್ಟಲು ತೊಡಗಿದರು. ಮಾತನಾಡುವ ಸ್ಥಿತಿಗೆ ಯಾರೂ ಇನ್ನೂ ಮುಟ್ಟಿಲ್ಲ ಎಂದು ತಿಳಿದೊಡನೆಯೇ ಊರಮುಂದಾಳುಗಳು ಮೇರಿಬಾಯಿಯ ಕಡೆಗೆ ತಿರುಗಿ "ಹ್ಞಾಂ ಮೇರಿಬಾಯಿ, ನಿನ್ನದೇನಾದರೂ ಅಭಿಪ್ರಾಯವಿದ್ದರೆ ಹೇಳು; ಎಂದರು ಮೇರಿಬಾಯಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕೊಡನೆ ಊರ ಮುಂದಾಳುಗಳಲ್ಲಿ ಒಬ್ಬರಾಗಿದ್ದರು ಹಾಗಾಗಿ ಭಾಷಣ ಬಿಗಿಯಲು ಅವರಿಗೆ ಸಂಕೋಚವಿರಲಿಲ್ಲ. ಎದ್ದು ನಿಂತು, ಸೀರೆಯ ಸೆರಗು ಸರಿಮಾಡಿಕೊಳ್ಳುತ್ತಾ (ಆಗ ಕಟ್ಟಿಗೆ ಸಾಹೇಬರು ಟೈಲರ್ ಶೀನಪ್ಪನೊಡನೆ ಕಿವಿಯಲ್ಲಿ "ಈ ಮುದುಕಿಗೆ ಇನ್ನೂ ಫೇಷನ್ ಹೋಗಲಿಲ್ಲ", ಎಂದು ಆಡಿದನಿಯಲ್ಲಿ ಹೇಳಿದುದು ಸಮೀಪ ಕುಳಿತಿದ್ದವರಿಗೆ ಕೇಳಿಸಿತ) ಮೇರಿಬಾಯಿ ಮಾತಿಗೆ ತೊಡಗಿದರು.

"ನಮ್ಮ ಮಾಸ್ಟ್ರು ಒಳ್ಳೆಯ ಜನ. ಒಮ್ಮೆ ನಮ್ಮ ದನ ಅವರ ಹಿತ್ತಿಲಿನ ಒಳಗೆ ಹಾರಿ, ಅಲ್ಲಿ ಬೆಳೆಸಿದ್ದ ತರಕಾರಿ ಎಲ್ಲಾ ತಿಂದು ಬಿಟ್ಟಿದ್ದರೂ, ಇವರ ಚಕಾರ ಎತ್ತಲಿಲ್ಲ; ದನವನ್ನು ದೊಡ್ಡಿಗೆ ಕಟ್ಟಲಿಲ್ಲ; ದನಕ್ಕೆ ಒಂದು ಪೆಟ್ಟು ಕೊಡಲೂ ಇಲ್ಲ. ಕಳೆದ ಹತ್ತು ವರ್ಷಗಳಿಂದ ಒಟ್ಟಾಗಿ ಒಂದು ಐವತ್ತರ ಮೂರು ರೂಪಾಯಿ ನನಗೆ ಅವರಿಂದ ಬರಬೇಕು. ನನ್ನ ಯಾವ ಕಾಯಿ ಪಲ್ಯಗಳಿಗೂ ಇವರು ದೊಡ್ಡ ಗಿರಾಕಿ ಆಗಿದ್ದರು. ಹೆಚ್ಚಿನ ಸರ್ತಿ ಸಂಜೆಗೆ ಬೆಳೆದ ಕಾಯಿಪಲ್ಯಗಳು ಇವರ ಮನೆಗೆಯೇ ಹೋಗುತ್ತಿದ್ದುವು. ಇವರು ನನ್ನಲ್ಲಿ ಬಾಕಿ ಮಾಡಿರುವ ಐವತ್ತಮೂರು ರೂಪಾಯಿಗಳನ್ನು ಕೊಟ್ಟರೆ, ಇವರಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಬೇಡುವುದು ಬೇಡ", ಎಂದು ತನ್ನ ಅಭಿಪ್ರಾಯ ಸೂಚಿಸಿ, ಹಿಂಭಾಗದ ಸೀರೆಯ ನೆರಿಗೆಯನ್ನು ಅಡ್ಡ ಸರಿಸಿ, ಕುಳಿತು ಕೊಂಡಳು. ಬಳಿಕದ ಸರ್ತಿ ಜೀನಸಿನ ಅಂಗಡಿ ಮಲ್ಯರದ್ದು.

"ಮಾಸ್ಟ್ರ ಮೇಲೆ ದೇವರಾಣೆಗೂ ನನಗೆ ಬೇಜಾರಿಲ್ಲ. ಅವರು ದೇವರಂಥ ಮನುಷ್ಯ. ಆದರಿಂದ ನನಗೆ ಬರಲಿಕ್ಕಿರುವ ಹಣ ಸ್ವಲ್ಪ ಮಾತ್ರ—ಹೆಚ್ಚು ಕಡಿಮೆ ಇನ್ನೂರ ಎಂಭತ್ತು ರೂಪಾಯಿ. ಬಡ್ಡಿಗೆ ಹಣ ಹಾಕಿ ಅವರು ಅಷ್ಟು ರೂಪಾಯಿಗಳನ್ನು ಸಂಪಾದಿಸಬೇಕೆಂದು ಇದ್ದರಂತೆ. ಹಾಗಾಗಿ, ಬಡ್ಡಿಯಲ್ಲಿ ಅವರಿಗೆ ಹಣ ಬಂದು, ಅವರು ನನ್ನ ಇನ್ನೂರ ಎಂಭತ್ತು ರೂಪಾಯಿ ಹಿಂದೆ ಕೊಟ್ಟರೆ ನಾನು ನನ್ನ ಲೆಕ್ಕದಲ್ಲಿ ಎರಡು ಕಿಲೋ ಸಕ್ಕರೆ ಅವರಿಗೆ ಧರ್ಮಾರ್ಥ ಕೊಡುತ್ತೇನೆ" ಎಂದರು. ಬಳಿಕ ಎದ್ದವರು ಬಟ್ಟೆ ಅಂಗಡಿಯ ಶೆಟ್ಟರು. ಎದ್ದವರೇ ಕಿಟಕಿಯ ಬಳಿಗೆ ಹೋಗಿ, ಬಾಯಿಯಲ್ಲಿ ತುಂಬಿಕೊಂಡಿದ್ದ ವೀಳ್ಯದ ರಸವನ್ನು ಹೊರ ಚಿಮ್ಮಿಸಿ ಹಿಂದೆ ಬರುತ್ತಾ, ರಾಮಯ್ಯ ಮಾಸ್ಟ್ರ ಹತ್ತಿರ ಒಂದು ಗಳಿಗೆ ನಿಂತು "ನೀವೇನೂ ಹೆದರಬೇಡಿ ಮಾಸ್ಟ್ರೇ, ಒಟ್ಟು ನಿಮಗೆ ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಪರ್ಮಿಟು ಸಿಕ್ಕಿದರೆ ಸಾಕಲ್ಲ, ಅಷ್ಟನ್ನು ನಾನು ಕೊಡಿಸುತ್ತೇನೆ", ಎಂದರು. ಹಾಗೆಯೇ ಮುಂದೆ ಬಂದು ತನ್ನ ವ್ಯಾಕ್ಷಾನದ ಮುಕ್ತಿಸ್ಥಳ (?) ಸಭೆಯನ್ನು ಉದ್ದೇಶಿಸಿ ಹೇಳಿದರು— "ಹಿಂದೆ ಮಹಾಭಾರತ, ರಾಮಾಯಣ ಕಾಲದಲ್ಲಿಯೂ ಮನುಷ್ಯರು ಹೀಗೆಯೇ ಸಾಲದಲ್ಲಿ ಬೀಳುತ್ತಿದ್ದರು. ಆನೆ ಸಾಲಗಳು ರೂಪಾಯಿ ಆಣೆಯ ಸಾಲಗಳಲ್ಲ—ಪಾಪ ಪುಣ್ಯದ ಸಾಲಗಳು ಇರಲಿ, ನಮ್ಮ ಮಾಸ್ಟ್ರು ಬಹಳ ಯೋಗ್ಯರು. ನನಗೂ ಕಲಿಸಿದ್ದಾರೆ. ಅವರು ಕಲಿಸಿದ ಪಾಠದಲ್ಲಿ ಯಾವುದೂ ನನಗೆ ಮರೆತು ಹೋಗಿಲ್ಲ. ನನಗವರು ಸ್ವಲ್ಪ ರೂಪಾಯಿ ಕೊಡಬೇಕು, ನಿಜ. ಬಿಡಲಿಕ್ಕಿಲ್ಲ. ಒಂದು ಐವತ್ತು ರೂಪಾಯಿ, ಹೋದ ಕೂಡಲೇ ನನ್ನ ವ್ಯಾಪಾರ ಕಡಿಮೆ ಆಗಲಿಕ್ಕಿಲ್ಲ. ಮಹಾಭಾರತದಲ್ಲಿಯೂ ಹೀಗೆಯೇ ಆಗಿತ್ತು. ಆದರೆ ಬಂಧುಗಳೇ

(ಹದಿನೆರಡನೇ ಪುಟ ನೋಡಿರಿ)

ನನ್ನ ಬ್ಯಾಂಕಿಗೂ ನನ್ನ ವ್ಯಾಪಾರಕ್ಕೂ ಅನ್ಯೋನ್ಯ ಸಂಬಂಧ



ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕಿಂಗ್ ವಿಸ್ತರಿಸುವ ಸಿಂಡಿಕೇಟಿನ ಅಪ್ಪ ಪ್ರಯತ್ನಗಳು ಜನರ ಜೀವನ ಕ್ರಮಗಳನ್ನು ಬದಲಾಯಿಸುವಲ್ಲಿ ಸಹಕಾರಿಯಾಗಿವೆ

ದಿನನಿತ್ಯ ಗಳಿಸುವ ಮಂದಿಗೆ "ಪಿಗ್ಮಿ"ಗಿಂತ ಚೆನ್ನಾದ ಉಳಿತಾಯ ಯೋಜನೆ ಬೇರೊಂದಿಲ್ಲ'

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮಣಿಪಾಲ

ಪ್ರಚಲಿತ ಪ್ರಸಂಗ

ಅಣುಗುಂಡಲ್ಲದೆ ಉಳಿದಿರುವ ಏಕಮೇವ ಮಾರ್ಗ

ಬರೆದವರು: ಶ್ರೀ ಶಿವಶಂಕರ

ಕಡಲಲ್ಲಿ ತುಫಾನಿಗೊಳಗಾದ ಹಡಗಿಗೆ ಕರೆಯಲ್ಲಿದ್ದ ಮಧ್ವಾಚಾರ್ಯರು ತನ್ನ ಕಾವಿ ಬಟ್ಟೆಯನ್ನು ತೋರಿಸಿ, ಅದು ಸುರಕ್ಷಿತವಾಗಿ ಬದಿಗೆ ಬರುವಂತೆ ಸಹಾಯ ಮಾಡಿದರು. ಹೋದ ಜೀವ ಬಂದಂತಾಗಿ ಹಡಗಿನ ನಾಯಕನು ಹಡಗಿನಿಂದ ಬೇಕಾದ ವಸ್ತುಗಳನ್ನು ತೆಗೆದುಕೊಳ್ಳಬೇಕೆಂದು ಸ್ವಾಮೀಜೀಯವರನ್ನು ಪ್ರಾರ್ಥಿಸಿಕೊಂಡನು. ಶ್ರೀ ಮಧ್ವಾಚಾರ್ಯರು ಹಡಗಿನಲ್ಲಿದ್ದ ಎರಡು ಚಂದನದ ದುಂಡೆಗಳನ್ನು ತೆಗೆದುಕೊಂಡರು. ಅವುಗಳೊಳಗೆ ಶ್ರೀ ಕೃಷ್ಣ ಪರಮಾತ್ಮನ ಹಾಗೂ ಬಲರಾಮನ ವಿಗ್ರಹಗಳಿದ್ದು, ಅವರು ಶ್ರೀ ಕೃಷ್ಣನ ವಿಗ್ರಹವನ್ನು ಉಡುಪಿಗೆ ತಂದು ಪ್ರತಿಷ್ಠಾಪಿಸಿದರು; ಮತ್ತು ಬಲರಾಮನ ವಿಗ್ರಹವನ್ನು ವಡಬಾಂಡೇಶ್ವರದಲ್ಲಿ ಪ್ರತಿಷ್ಠಾಪಿಸಿದರು. ಉಡುಪಿ ನಿವಾಸಿಗಳಿಗೆ ಈ ಕಥೆ ಚೆನ್ನಾಗಿ ಗೊತ್ತು. ಅವರು ಮಧ್ವನವಮಿಯ ಸಮಯ ಅದನ್ನು ಜ್ಞಾಪಿಸಿಕೊಳ್ಳುವುದು ಸ್ವಾಭಾವಿಕವಿದೆ.

ಇಂದಿನ ಪರಿಸ್ಥಿತಿಯಲ್ಲಿ ಜ್ಞಾಪಕಕ್ಕೆ ಬಂದ ಆ ಕಥೆಯು, ಅಥವಾ ಅದಕ್ಕಿಂತಲೂ ಆ ಘಟನೆಯ ಕುರಿತು ಯೋಚಿಸಲಾರಂಭಿಸಿದರೆ ಒಂದು ವಿಷಯದತ್ತ ಅದು ನಮ್ಮನ್ನೊಯ್ಯುತ್ತದೆ. ಭಾರತ ದೇಶದಲ್ಲಿಂದು ಬಿರುಗಾಳಿ ಎದ್ದಿದೆ. ಹೌದು, ಅದು ಹಲವಾರು ರೂಪ ತಳೆದುಕೊಂಡಿದೆ ಪರಕೀಯ ಆಕ್ರಮಣ, ಭಾಷಾ ಸಮಸ್ಯೆ, ಪ್ರಾದೇಶಿಕ ಪಿಡುಗು, ಜಾತಿ ಜಂಜಡ, ಮತೀಯ ಮೇರೆದಾಟ, ನಾಸ್ತಿಕತೆಯ ನರ್ತನ, ಅಶಿಸ್ತಿನ ಆರ್ಭಟ, ವಿದ್ಯಾರ್ಥಿಗಳ ವಿಚಿತ್ರ ವರ್ತನೆ... ಹೀಗೇ ಒಂದೇ, ಎರಡೇ? ಬಹುರೂಪಗಳಿಂದ ಬಿರುಗಾಳಿ ಬೀಸುತ್ತಿದೆ. ಈಗ ಭಾರತವೆಂಬ ಹಡಗನ್ನು ರಕ್ಷಿಸುವ ಆಚಾರ್ಯ ಪುರುಷ ಅದೆಲ್ಲಿರುವನು? ಆ ಮಧ್ವಾಚಾರ್ಯ ಅಥವಾ ಅಂತಹಾ ಮಾಧವಾಚಾರ್ಯ ಅದೆಲ್ಲಿ? ರಾಜಕೀಯ ರೋಗಿಗಳಿಗೆ ಅದೆಂತು ಕಾಣಸಿಗುವರವರು? ಅದಕ್ಕಿಂತಲೂ, ರಾಜಕೀಯ ರೋಗಿಗಳು ಅದೆಂತು ಕಂಡುಕೊಳ್ಳುವರು? ಇಂದು ಅವರು ನಮ್ಮ ಮುಂದೆ ಎರಡು ಉಂಡೆಗಳನ್ನು ಅಥವಾ ಅಣುಗುಂಡನ್ನು ಇಡಬಹುದೇ? ಅಥವಾ ಅವರು ಬೇರೆ ಯಾವ ದಾರಿಯನ್ನಾದರೂ ಸೂಚಿಸಬಹುದೇ? ಅದಿಂದು ಸಾಧ್ಯವೇ? ಅದಕ್ಕಿಂತ ಬೇರೆ ಸುಲಭ ದಾರಿ ಇಲ್ಲವೇ?

ದುರ್ಗಾಪುರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಅಣುಗುಂಡು ತಯಾರಿಕೆಯ ಕುರಿತು ಭಾರಿ ಭಾರೀ ವಾದವಿವಾದ ನಡೆದಿತ್ತು. ಅನಂತರ ಇತ್ತೀಚೆಗೆ ವಿಜಯವಾಡದಲ್ಲಿ (ಕೃಷ್ಣದೇವರಾಯ ನಗರದಲ್ಲಿ) ಸೇರಿದ ಭಾರತೀಯ ಜನಸಂಘದ ಅಧಿವೇಶನವು ಒಮ್ಮತದಿಂದ ಅಣ್ವಸ್ತ್ರಗಳನ್ನು ತಯಾರಿಸಲೇ ಬೇಕೆಂದು ಠರಾಯಿಸಿರುತ್ತದೆ. ಇತರ ಪಕ್ಷಗಳ ಅಭಿಪ್ರಾಯಗಳನ್ನು, ಇತರ ಕೆಲ ವ್ಯಕ್ತಿಗಳ ಅಭಿಪ್ರಾಯಗಳನ್ನು, ತಯಾರಿಕೆಯ ಸಾಧ್ಯ ಅಸಾಧ್ಯತೆಯ ಕುರಿತು ಹಿಂದಿನ ಸಂಚಿಕೆಗಳು ವಾಚಕರಿಗೆ ತಿಳಿಸಿವೆ. ಈ ಅಣುಗುಂಡಲ್ಲದೆ ಇಂದು ಪರಕೀಯರ ಆಕ್ರಮಣವನ್ನೆದುರಿಸಲು ಬೇರಾವ ಮಾರ್ಗವಾದರೂ ಇದೆ ಏನು?

ಶ್ರೀ ಮಧ್ವಾಚಾರ್ಯರಾದರೋ ಭಗವಾನ್ ಶ್ರೀ ಕೃಷ್ಣನ ವಿಗ್ರಹವನ್ನು ಜನತೆಯ ಮುಂದಕ್ಕಿಟ್ಟಿದ್ದಾರೆ. ಶ್ರೀ ಕೃಷ್ಣನಾದರೋ ಕುರುಕ್ಷೇತ್ರದಲ್ಲಿ ಮಾಯೆಗೊಳಗಾದ, ಭ್ರಾಂತಿಗೊಳಗಾದ, ಚಿತ್ತವ್ಯಾಕುಲತೆಗೊಳಗಾದ ಅಥವಾ ಏಕಪಕ್ಷೀಯ ಶಾಂತಿ—ಅಹಿಂಸೆಗಳಿಗೆ ಶರಣು ಹೋದ, ಅರ್ಜುನನನ್ನು ತನ್ನ ವಿರಾಟ ರೂಪ ದರ್ಶನದಿಂದ ಕ್ರಿಯಾಪುರುಷನನ್ನಾಗಿ ಅಥವಾ ವೀರಪುರುಷನನ್ನಾಗಿ ಪರಿವರ್ತಿಸಿದ ಸೂತ್ರಧಾರಿ. ನಮ್ಮ ಸ್ಥಿತಿಯಾದರೋ ಅರ್ಜುನನ ಆಗಿನ ಅವಸ್ಥೆಗಿಂತ ಭಿನ್ನವಾಗಿದೆ ಏನು? ನಮ್ಮ ಸ್ಥಿತಿಯೂ ಹಾಗೆಯೇ ಇದೆ. ಆದರೆ ಇಂದು ಅದನ್ನೆಲ್ಲಾ ಬಗೆ ಹರಿಸುವ ಮಾರ್ಗದರ್ಶಕ ಅಥವಾ ಸಾರಥಿ ಅದೆಲ್ಲಿ? ಆ ಮಾಧವ ಅದೆಲ್ಲಿ? ಆ ಮಾಧವನಾದರೋ ಸಂಧಾನದಿಂದ ಬಗೆಹರಿಸಲು ಸಾಧ್ಯವಾಗದಿರುವಾಗ ಸಮರಕ್ಕೆನೇ ಸಿದ್ಧರಾಗಿರಲು, ಸ್ವಾಭಿಮಾನ ಶೂನ್ಯರಾಗದಿರಲು ಕಹಳೆಯೂದುತ್ತಿದ್ದಾನೆ. ಅಣ್ವಸ್ತ್ರ ತಯಾರಿಸಲೂ ಅಳುಕ ಕೂಡದೆಂದೇ ಅವನು ಅರುಹುತ್ತಿದ್ದಾನೆ. ಆ ಅಣ್ವಸ್ತ್ರವಲ್ಲದೆ ಭಾರತವನ್ನುಳಿಸಲಿಂದು ಬೇರೆ ದಾರಿ ಇಲ್ಲವೇನು?

ಇಂತಹ ಸಂಕಟ ಕಾಲದಲ್ಲಿ ಒಕ್ಕಟ್ಟಿನ ಕುರಿತು ಭಾಷಣ ಕೂಡಲಾಗುತ್ತಿದೆ. ಅಣ್ವಸ್ತ್ರಗಳಿಗಿಂತಲೂ ಒಕ್ಕಟ್ಟೇ ಭಾರತವನ್ನಿಂದು ರಕ್ಷಿಸಬಲ್ಲುದೆಂದು ಪ್ರಧಾನಿಯವರೂ ರಕ್ಷಣಾ ಮಂತ್ರಿಯವರೂ ಹೇಳುತ್ತಿದ್ದಾರೆ. ನಿಜ, ಒಕ್ಕಟ್ಟಿನಲ್ಲಿ ಬಲವಿದೆ. ಅದಕ್ಕಾಗಿಯೇ ತಮ್ಮ ಜೀವನವನ್ನು ಅರ್ಪಿಸಿಕೊಂಡಿರುವ ವಿವೇಕಾನಂದ ಪರಂಪರೆಯೂ ಇದೆ, ಅವರು ಆಶಾದೀಪವನ್ನು ತೋರಿಸುತ್ತಿದ್ದಾರೆ. ಆದರೆ ಅದು ಲಾಲಬಹದೂರಜೀಯವರ ಒಕ್ಕಟ್ಟಿಗಿಂತ ಅಥವಾ ಯಶವಂತ ಚವ್ಹಾಣರ ಒಕ್ಕಟ್ಟಿಗಿಂತ ಬಹುದೂರದ ಅಥವಾ ಬೇರೆ ರೀತಿಯ ಒಕ್ಕಟ್ಟಿದೆ; ಅದು ಯಶಸ್ಸಿನ ದಾರಿಯಲ್ಲಿ ಗಡಿಬಿಡಿ ಇಲ್ಲದೆ ಬಹು ಶಾಂತವಾಗಿ ಸಾಗುತ್ತಿದೆ. ಈ ರೀತಿ ಒಕ್ಕಟ್ಟಿಗಾಗಿ ಪಾಡುಪಡುತ್ತಿರುವವರು ಅಣ್ವಸ್ತ್ರ ತಯಾರಿಕೆಗೆ ವಿರೋಧವಾಗಿರುವದಿಲ್ಲ. ದೇಶರಕ್ಷಣೆಗಾಗಿ ದಧೀಚಿಯಾಗಲೂ ಅವರು ಸದಾ ಸಿದ್ಧ; ಅದಕ್ಕಾಗಿ ಅಂಜರು, ಅಳುಕರು. ಅವರು ತಾತ್ಕಾಲಿಕ ಒಕ್ಕಟ್ಟಿಗಾಗಿ, ಅಥವಾ ಮತ ಬೇಟೆಯ ಒಕ್ಕಟ್ಟಿಗಾಗಿ ಪರಿತಪಿಸದಿರುವದೇ ಅದಕ್ಕೆ ಕಾರಣವಿದೆ. ರಾಜಕೀಯ ಉದ್ಯೋಗಸ್ಥರ ಒಕ್ಕಟ್ಟಾದರೋ ತಾತ್ಕಾಲಿಕವಿದೆ. ಚೈನಿ ಕಮ್ಯೂನಿಷ್ಟರ, ಆಕ್ರಮಣದ ಗಾಳಿ ಬಂದತ್ತ ಕೊಡೆ ಹಿಡಿಯುವ ಚತುರೀಕರಣವು ಅದು, 'ತೋಳ್', 'ತೋಳ'ವೆನ್ನುತ್ತ ಅಪಾಯದ ಅಪಸ್ವರವೆತ್ತುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುವ ರಾಜಕೀಯ ತಂತ್ರವದು. ಚೈನೀ ಕಮ್ಯೂನಿಷ್ಟರ ಆಕ್ರಮಣ ಅಂತ್ಯವಾದ ಮೇಲೆ ಬಿಕ್ಕಟ್ಟೇನು? ಇಲ್ಲಿ ಇನ್ನೊಂದು ಘಟನೆ ಜ್ಞಾಪಕಕ್ಕೆ ಬರುತ್ತದೆ. ಆದರೆ ಅದೆಷ್ಟು ಸತ್ಯವೋ, ಆ ವಿಷಯ ಇಲ್ಲಿ ಚರ್ಚಿಸಿರುವದಿಲ್ಲ. ಬ್ರಾಹ್ಮಣರಿಗೆ ವಿರೋಧವಾಗಿ ಉಳಿದ ಜನತೆಯನ್ನು ಎತ್ತಿ ಕಟ್ಟಲು ಈ ಕಥೆಯನ್ನು ಕಟ್ಟಲಾಗಿರುತ್ತದೆಯೇ ಎಂಬುದನ್ನು ಇಲ್ಲಿ ಚರ್ಚಿಸಿರುವದಿಲ್ಲ. ಆ ಘಟನೆಯೇ ಸೋಮನಾಥವನ್ನು ಬೀಳಿಸಿರುವ ದಾರುಣ ಘಟನೆ. ಒಕ್ಕಟ್ಟಿನಿಂದ, ಏಕ ಸ್ವರದಲ್ಲಿ ಬ್ರಾಹ್ಮಣರೆಲ್ಲರೂ ಮಂತ್ರಗಳನ್ನು ಹೇಳುತ್ತಿದ್ದರಂತೆ ಸೋಮನಾಥನ ಎದುರು. ಅವರಲ್ಲಿ ಒಕ್ಕಟ್ಟಿರಲಿಲ್ಲವೇನು? ಕೈಕೈ ಬಿಗಿದು ಸಂಕೋಲೆ ಮಾಡಿ ಅವರು ಸೋಮನಾಥನ ಸುತ್ತ ನಿಂತು ಕೊಂಡಿದ್ದರಂತೆ. ಮಂತ್ರೋಚ್ಚಾರಣೆಯನ್ನಾದರೋ ಉಚ್ಚ ಸ್ವರದಿಂದ ಮಾಡುತ್ತಿದ್ದರಂತೆ. ನಾವೂ ಹಾಗೆಯೇ ಅಲ್ಲವೇನು? 'ಶಾಂತಿ-ಸಹನೆ" ವಗೈರೆಗಳ ಪಂಚಶೀಲದ ಮಂತ್ರವನ್ನು ಉಚ್ಚ ಸ್ವರದಿಂ ಹೇಳುತ್ತಿದ್ದೇವೆ. ಮೂರ್ತಿಯನ್ನು ಕೆಡವಡಿ ಅದೇನನ್ನು ಬೇಕಾದರೂ ಕೊಂಡೊಯ್ಯಬಹುದೆಂದು ಆ ಬ್ರಾಹ್ಮಣರು ಬಲು ಭಕ್ತಿಯಿಂದ ಬೇಡಿಕೊಂಡರಂತೆ. ಮೂರ್ತಿ ಭಂಜಕ ಮಹಮ್ಮದನಿಗೆ ಬೇಡಿಕೆಗಳ ಆವಶ್ಯಕತೆಯಾದರೂ ಏನು? ನಾವು ಹಾಗೆಯೇ, ದಿಲ್ಲಿ ಗದ್ದುಗೆಯನ್ನು ಬಿಟ್ಟು ಅದೇನು ಬೇಕಾದರೂ ಕೇಳು ಮಹಾರಾಯಾ, ಶಾಂತಿಯಿಂದ ನಿಮ್ಮ ತೊಟ್ಟು ರಕ್ತವೂ ಕೆಳಗೆ ಬೀಳದ ರೀತಿಯಲ್ಲಿ, ನಮ್ಮ ಖಾಲಿ ಜಬ್ಬುಗಳ ಇಸ್ತ್ರಿ ಕೂಡಾ ಹೋಗದ ರೀತಿಯಲ್ಲಿ ದಾನ ಮಾಡಿಬಿಟ್ಟು ಸಂತೋಷದಿಂದ ಸಂಧಾನಕ್ಕೆ ಸಿದ್ಧವೆಂದು ಸಾರುತ್ತಿದ್ದೇವೆ. ಚಂಗೀಸಖಾನನ ಸಂತತಿಯವರಿಗೆ ಅಂತಹ ಸಂಧಾನ ಬೇಕೇನು? ಭಾರತ ಭಾಸ್ಕರನನ್ನು ನುಂಗಲು ಬರುತ್ತಿರುವ ಚೈನಿ-ಪಾಕ್ ರಾಹು ಕೇತುಗಳಿಗೆ ಸಂಧಾನ ಮಂತ್ರಗಳು ಬೇಕೇನು? ಆ ಬ್ರಾಹ್ಮಣರೆಲ್ಲರೂ ಸೇರಿ ಆ ಮದಾಂಧ ಆಕ್ರಮಣಗಾರರನ್ನು ಬಡಿದು ಹೊರಗೋಡಿಸ ಬಹುದಿತ್ತು. ದುರಾದೃಷ್ಟವಶಾತ್ ಹಾಗಾಗಲಿಲ್ಲ.

(ಹನ್ನೊಂದನೇ ಪುಟ ನೋಡಿರಿ)

"VOLTAS" CRYSTAL AIR CONDITIONERS
"ALLWYN PRESTCOLD" REFRIGERATORS
"RACOLD" WATER HEATERS AND ELECTRICAL APPLIANCES
"SUNMICA" SHEETS FOR MODERN FURNITURE

Contact

GENERAL REFRIGERATION ENG. WORKS
WOODSIDE BLDG., K. S. RAO RD.,
MANGALORE-1. Phone: 1209.

ಸಮಯೋಚಿತ ಸಲಹೆ

ಆಹಾರ ಸಮಸ್ಯೆ-ಅದಕ್ಕೆ ಪರಿಹಾರ

ಶ್ರೀ ಎಂ. ವಿ ಹೆಡಿಯೂರ್, ಸಿ ಎ. ಐ ಐ ಬಿ, ಮಣಿಪಾಲ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಲೇಖಕರು

ದಕ್ಷಿಣದ ರಾಜ್ಯಗಳಲ್ಲಿ ಅಕ್ಕಿಯೇ ಅತಿ ಮುಖ್ಯ ಆಹಾರ ಧಾನ್ಯವಾಗಿದೆ ಇಡೀ ಜಗತ್ತೇ ಅಕ್ಕಿಯ ಅಭಾವವನ್ನು ಎದುರಿಸುತ್ತಿರುವಾಗ ಪರದೇಶಗಳಿಂದ ಅಕ್ಕಿಯನ್ನು ಆಮದು ಮಾಡಿಕೊಳ್ಳುವುದು ಸಾಧ್ಯವಿಲ್ಲ. ಒಂದು ವೇಳೆ ಅಕ್ಕಿಯನ್ನು ಆಮದು ಮಾಡಿಕೊಂಡರೂ ಆಮದಿನ ಪ್ರಮಾಣವು ಈಗ ದೇಶದಲ್ಲಿರುವ ಕೊರತೆಯನ್ನು ತುಂಬಿಸಲು ಸಾಧ್ಯವಿಲ್ಲ. ಆದ್ದರಿಂದ ಅಕ್ಕಿಯ ಬಳಕೆಯೇ ಅಧಿಕವಾಗಿ ಉಳ್ಳ ದಕ್ಷಿಣದ ರಾಜ್ಯಗಳ ಜನರು, ಗೋದಿ ಮತ್ತು ಅದರ ಉಪವಸ್ತುಗಳನ್ನು ಬಳಸುವಂತೆ ಮಾಡಿ ಅವರು ತಮ್ಮ ಆಹಾರ ಅಭ್ಯಾಸದಲ್ಲಿ ಕಾಲಕ್ರಮೇಣ ಬದಲಾವಣೆ ಮಾಡಿಕೊಳ್ಳುವಂತೆ ಮಾಡಬೇಕು. ಆಹಾರ ಕಾರ್ಪೊರೇಶನು ಗೋಧಿ ಹಾಗೂ ಗೋಧಿಯ ಹಿಟ್ಟನ್ನು ಅಕ್ಕಿಯ ಬೆಲೆಗಿಂತ ಕಡಿಮೆ ಬೆಲೆಗೆ ಸರಬರಾಜು ಮಾಡಿದರೆ, ಇದು ಒಂದು ಆಕರ್ಷಣೆ ಎನಿಸಿ, ದಕ್ಷಿಣದ ಜನರು ಅಕ್ಕಿಯತ್ತ ತಮ್ಮ ಒಲವನ್ನು ಕಡಿಮೆ ಮಾಡಿ, ಅಕ್ಕಿಯ ಬಳಕೆ ಕಡಿಮೆಯಾಗಬಹುದು. ನಾವು ಈಗ ವರ್ಷಂಪ್ರತಿ ಅಮೇರಿಕದಿಂದ ಪಿ. ಎಲ್. ೪೮೦ ಯೋಜನೆಯನ್ವಯ ಆರು ಮಿಲಿಯ ಟನ್ನುಗಳಷ್ಟು ಗೋದಿಯನ್ನು ಆಮದು ಮಾಡಿ ಕೊಳ್ಳುತ್ತಿದ್ದೇವೆ ಈ ಗೋಧಿಯ ಬೆಲೆ ನಮ್ಮ ದೇಶದ ಉಗ್ರಾಣವೆನಿಸಿಕೊಂಡಿರುವ ಪಂಜಾಬಿನಲ್ಲಿರುವ ಗೋಧಿಯ ಬೆಲೆಗಿಂತ ೫೦ ಸೇಕಡಾದಷ್ಟು ಕಡಿಮೆಯಾಗಿದೆ. ಅಮೇರಿಕ ಹಾಗೂ ಆಸ್ಟ್ರೇಲಿಯಾಗಳಿಂದ ಗೋಧಿಯನ್ನು ತರಿಸುವಲ್ಲಿ ಯಾವ ಕಷ್ಟವೂ ಇಲ್ಲ

ಸರಕಾರವು ಕೂಡಲೇ ದೇಶದಲ್ಲಿರುವ ನೀರಿನ ಪೂರೈಕೆ ಇರುವ ಫಲವತ್ತಾದ ಭೂಮಿಯ ಸರ್ವೇ ಮಾಡಿ, ತೀವ್ರ ಬೇಸಾಯದ ಕಡೆಗೆ ತಮ್ಮ ಹೆಚ್ಚಿನ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕು. ಸರಕಾರವು ಬೇಸಾಯಗಾರರಿಗೆ ಅಗತ್ಯವಿದ್ದ ಆರ್ಥಿಕ ಸಹಾಯ, ಗೊಬ್ಬರ, ಉತ್ತಮ ಬೀಜ, ಕ್ರಿಮಿನಾಶಕಗಳನ್ನು ಸರಬರಾಜು ಮಾಡಿ, ಅಧಿಕ ಉತ್ಪಾದನೆಗೆ ನೆರವಾಗಬೇಕು. ಕೃತಕ ಗೊಬ್ಬರಗಳ ಬಳಕೆ ಹೆಚ್ಚಿದರೆ ಕ್ರಿಮಿನಾಶಕಗಳ ಚಿಮುಕಿಸುವಿಕೆ ಸೂಕ್ತ ಕಾಲದಲ್ಲಾದರೆ ನೀರು ನೆಲೆಸಿಲ್ಲವುದನ್ನು ನಿಲ್ಲಿಸಿದರೆ, ಈಗ ಪಡೆಯುವ ಉತ್ಪನ್ನದ ಎರಡು ಪಾಲಷ್ಟು ಉತ್ಪನ್ನ ಪಡೆಯಬಹುದೆಂದು ಅಕ್ಷಿಸಲಾಗಿದೆ ಜಪಾನಿನ ಕೃಷಿ ತಂತ್ರಜ್ಞರ ಅಭಿಪ್ರಾಯದ ಮೇರೆಗೆ ಸೂಕ್ತ ಸಮಯದಲ್ಲಿ ಕ್ರಿಮಿನಾಶಕಗಳನ್ನು ಚಿಮುಕಿಸುವುದರಿಂದಲೇ ೨೫ ಸೇಕಡಾದಷ್ಟು ಉತ್ಪನ್ನ ಹೆಚ್ಚಾಗುತ್ತದೆ

ನೀರಾವರಿ ಸೌಕರ್ಯಗಳನ್ನು ಒದಗಿಸಿದರೆ, ನಮ್ಮ ಉತ್ಪನ್ನವನ್ನು ಎರಡು ಅಥವಾ ಮೂರು ಪಾಲಷ್ಟು ಹೆಚ್ಚಿಸಲು ಸಾಧ್ಯವಿದೆ. ಬಾವಿಗಳ ರಚನೆ, ಕೆರೆಗಳನ್ನು ಆಳ ಮಾಡುವುದು ಚಿಕ್ಕ ಪುಟ್ಟ ಅಣೆಕಟ್ಟುಗಳನ್ನು ರಚಿಸುವುದು ಮೊದಲಾದ ಕಡಿಮೆ ವೆಚ್ಚದ ಆದರೆ ತೀವ್ರ ಪ್ರತಿಫಲವನ್ನು ಕೊಡುವ ಕಾರ್ಯಕ್ರಮಗಳನ್ನು ಕೂಡಲೇ ಕೈಕೊಳ್ಳಬೇಕು.

ಆಹಾರದ ಅಪವ್ಯಯವನ್ನು ನಿಲ್ಲಿಸಬೇಕು. ಸಾಮೂಹಿಕ ಭೋಜನ ಕೂಟಗಳನ್ನು ಪ್ರತಿಬಂಧಿಸಬೇಕು ದಕ್ಷಿಣದ ರಾಜ್ಯಗಳಲ್ಲಿ ಮತ್ತು ದೊಡ್ಡ ನಗರಗಳಲ್ಲಿರುವ ಭೋಜನ ಗೃಹಗಳು ಅಕ್ಕಿಯ ಬದಲು ಕನಿಷ್ಠ ಪಕ್ಷ ೨೦ ಸೇಕಡಾದಷ್ಟಾದರೂ ಗೋಧಿಯನ್ನು ಬಳಸುವಂತೆ ನೋಡಿಕೊಳ್ಳಬೇಕು

ಇಂದು ನಮ್ಮಲ್ಲಿ ಜಾನುವಾರುಗಳಿಗೆ ಕಲವಡೆ ಅಕ್ಕಿ ಹಾಗೂ ಕುಡಿ ಅಕ್ಕಿಗಳನ್ನು ತಿನ್ನಲು ಹಾಕುತ್ತಾರೆ. ಪರದೇಶಗಳಿಂದ ಜಾನುವಾರುಗಳಿಗೆ ಮೇವನ್ನು ಆಮದು ಮಾಡಿಕೊಂಡರೆ, ಅವುಗಳನ್ನು ಸಕಲ ಉಪಯೋಗಿಸುವ ಆಹಾರಧಾನ್ಯ ಜನರ ಬಳಕೆಗೆ ದೊರೆತೀತು. ನಮ್ಮ ಆಹಾರ ಉತ್ಪನ್ನದ ೧೦ ಸೇಕಡಾದಷ್ಟು ಪ್ರಮಾಣವು ಜಾನುವಾರುಗಳಿಗಾಗಿ ವಿನಿಯೋಗಿಸಲ್ಪಡುತ್ತಿದೆ ಎಂದು ಅಂದಾಜು ಮಾಡಲಾಗಿದೆ ವಿಶೇಲಾಗಿ ಆಮದು ಮಾಡಿಕೊಂಡ ಮೇವಿನ ಬೆಲೆಯು ಆಹಾರ ಧಾನ್ಯದ ಬೆಲೆಗಿಂತ ಎಷ್ಟೋ ಕಡಿಮೆಯಾಗಿದೆ ಹೀಗಾಗಿ ಇದು ಉಪಯೋಗಕಾರಿ ಆಗಬಹುದ .

ಅಮೇರಿಕದಲ್ಲಿ ಮಾಡಿದ ಅಂದಾಜಿನ ಮೇರೆಗೆ ಇಲಿಗಳು ದಿನಂಪ್ರತಿ ತಮ್ಮ ಭಾರದಷ್ಟು ತೂಕದ ಆಹಾರವನ್ನು ತಿನ್ನುತ್ತವೆ ಮತ್ತು ಹತ್ತು ಇಲಿಗಳು ತಿನ್ನುವ ಆಹಾರವು ಒಬ್ಬ ಮನುಷ್ಯನ ಆಹಾರದ ಪ್ರಮಾಣದಷ್ಟು ಆಗುತ್ತದೆ. ಆದ್ದರಿಂದ ಈ ಅಪವ್ಯಯವನ್ನು ಹೋಗಲಾಡಿಸಲು ಆಹಾರ ಧಾನ್ಯವನ್ನು ಯೋಗ್ಯ ರೀತಿಯಲ್ಲಿ ದಾಸ್ತಾನು ಮಾಡುವಲ್ಲಿ ಜನತೆಗೆ ತಿಳುವಳಿಕೆ ಕೊಡಬೇಕು. ಒಟ್ಟು ಉತ್ಪನ್ನದ ೪ರಿಂದ ೫ ಸೇಕಡಾದಷ್ಟು ಆಹಾರವು ಇಲಿ, ಹೆಗ್ಗಣ ಹಾಗೂ ಹಕ್ಕಿಗಳಿಂದ ತಿಂದು ಹೋಗುತ್ತದೆಂದು ಅಭಿಪ್ರಾಯ ಮಾಡಲಾಗಿದೆ. ವಿಶೇಷವಾಗಿ ಆಹಾರ ಕಾರ್ಪೊರೇಶನಿನವರು ಮಿಲ್ಲುಗಳಲ್ಲಿ ಉತ್ಪಾದಿಸುವ ಅಕ್ಕಿಯು ಅತಿ ಉತ್ತಮ ದರ್ಜೆಯದ್ದಾಗಿರುವಂತೆ ನೋಡಿಕೊಳ್ಳಬೇಕು ಇದರಿಂದ ಆಹಾರಧಾನ್ಯವು ಹಾಳಾಗಿ ಹೋಗುವುದು ಕಡಿಮೆಯಾಗಿ, ಉಳಿತಾಯವಾದೀತು.

ಆಹಾರ ಉತ್ಪಾದಿಸುವ ರೈತರಿಗೆ ಯೋಗ್ಯ ದರವು ದೊರೆಯುವಂತೆ ಜತೆಗೇ ಬಳಕೆದಾರರಿಗೆ ನ್ಯಾಯ ದರದಲ್ಲಿ ಆಹಾರ ಧಾನ್ಯಗಳು ದೊರೆಯುವಂತ ಕ್ರಾಪ್ಯಲಿಗೆ ಬಹಳ ಸಮಯ ಮೊದಲೇ ಆಹಾರ ಧಾನ್ಯಗಳ ಬೆಲೆಯನ್ನು ನಿಗದಿಪಡಿಸಬೇಕು ಈ ಎರಡು ಬೆಲೆಗಳಲ್ಲಿನ ಹೆಚ್ಚಿನ ಅಂತರವನ್ನು ಹೋಗಲಾಡಿಸುವುದರ ಜೊತೆಗೆ ಮಧ್ಯವರ್ತಿಗಳಾದ ಮಿಲ್ಲಿನ ಮಾಲಕರು, ರಖಂ ವ್ಯಾಪಾರಿಗಳು ಹಾಗೂ ಚಿಲ್ಲರೆ ವ್ಯಾಪಾರಿಗಳು ಹೆಚ್ಚಿನ ಲಾಭವನ್ನು ಗಳಿಸದಂತೆ ನೋಡಬೇಕು. ಅಕ್ಕಿಯಲ್ಲಿ ಅತ್ಯುತ್ತಮ, ಉತ್ತಮ ಮತ್ತು ದಪ್ಪ ಎಂಬ ಮೂರು ವರ್ಗಗಳಿರಬೇಕು. ಈ ತರದ ವರ್ಗ ಮಾಡುವುದರಿಂದ ಉತ್ತಮ ದರ್ಜೆಯ ಅಕ್ಕಿಗೆ ಬೇಡಿಕೆ ಹೆಚ್ಚಾಗಿ, ಅದರ ದಾಸ್ತಾನು ಕರಗಬಹುದಾದರೂ, ದೀರ್ಘಾವಧಿಯಲ್ಲಿ ಇದೇ ಸಹಜವಾದ ಪರಿಹಾರವೆನಿಸುತ್ತದ ,

ಅಕ್ಕಿಯಲ್ಲಿ ಸುಮಾರು ೪೦೦ರಿಂದ ೫೦೦ ವರ್ಗಗಳಿರುವುದರಿಂದ ಪ್ರತಿಯೊಂದು ಜಾತಿಯ ಅಕ್ಕಿಗೆ ಬೆಲೆ ನಿಗದಿ ಮಾಡುವುದು ಅಸಾಧ್ಯ. ಬೆಲೆ ನಿಗದಿ ಮಾಡುವ ಸಮಿತಿಗಳನ್ನು ಪ್ರತಿ ಜಿಲ್ಲೆಗಳಲ್ಲೂ ರಚಿಸಬೇಕು. ಈ ಸಮಿತಿಯಲ್ಲಿ ವ್ಯಾಪಾರಿಗಳ, ಉತ್ಪಾದಕರು, ಬಳಕೆದಾರರು ಸದಸ್ಯರಾಗಿದ್ದು ಡೆಪ್ಯುಟಿ ಕಮಿಶನರು ಇದರ ಖಾಯಂ ಅಧ್ಯಕ್ಷರಾಗಿರಬೇಕು. ಈ ಸಮಿತಿಯು ವಿವಿಧ ಜಾತಿಯ ಅಕ್ಕಿಯ ಬೆಲೆ ನಿಗದಿಪಡಿಸಬೇಕು ಈ ಸಂದರ್ಭ ಅಖಿಲ ಭಾರತ ಬೆಲೆ ನಿಗದಿ ಕಮಿಶನಿನವರು ಸೂಚಿಸಿದ ಕ್ರಮಗಳನ್ನೇ ಅನುಸರಿಸಬೇಕು

ಆಹಾರಧಾನ್ಯ ಕಾರ್ಪೊರೇಶನಿನ ಬಳಿ ಇರುವ ದೊಡ್ಡ ಪ್ರಮಾಣದ ದಾಸ್ತಾನು ಆಹಾರದ ಅಭಾವ ಇರುವ ಸ್ಥಳಗಳಿಗೆ ಹಾಗೂ ಆಹಾರಧಾನ್ಯಗಳು ನಿಗದಿಪಡಿಸಿದ ಬೆಲೆಗೆ ದೊರಕದಿದ್ದ ಸಂದರ್ಭದಲ್ಲಿ ಬಳಸಲ್ಪಡುತ್ತದೆ. ಇದರಿಂದ ಬೆಲೆಯನ್ನು ಹತೋಟಿಯಲ್ಲಿರಿಸಿದಂತಾಗುವುದಲ್ಲದೆ ಜನತೆಗೆ ಹೆಚ್ಚಿನ ನೆರವು ದೊರೆತಂತಾಗುತ್ತದೆ ಈ ದಾಸ್ತಾನು ಜನರಲ್ಲಿ ವಿಶ್ವಾಸ ಹುಟ್ಟಿಸಿ, ಅವರು ಆಹಾರದ ಕುರಿತು ಕಳವಳಗೊಳ್ಳದಂತೆ ಮಾಡುವುದು. ಕಾರ್ಪೊರೇಶನಿನ ಬದಲು ಜನರು ಬರೇ ಮೂರು ತಿಂಗಳ ಆಹಾರಧಾನ್ಯವನ್ನು ದಾಸ್ತಾನು ಮಾಡಿಟ್ಟುಕೊಂಡರೂ, ಆಹಾರಧಾನ್ಯದ ಉತ್ಪಾದನೆ ಎಷ್ಟೇ ಹೆಚ್ಚಿರಲಿ ಅಭಾವವು ತಲೆದೋರುತ್ತದೆ. ಅದರ ಬದಲು ಕಾರ್ಪೊರೇಶನೇ ಆಹಾರಧಾನ್ಯ ದಾಸ್ತಾನು ಮಾಡುವುದರಿಂದ, ಜನರಿಗೆ ಭರವಸೆ ದೊರೆತ, ಅವರು ದಾಸ್ತಾನು ಮಾಡುವ ಹವ್ಯಾಸಕ್ಕೆ ಬೀಳುವುದಿಲ್ಲ.

ಕೊನೆಯದಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಂದಾಗಿ, ಆಹಾರ ಸಮಸ್ಯೆಯ ಪರಿಹಾರಕ್ಕೆ ದೀರ್ಘ ಹಾಗೂ ಅಲ್ಪ ಕಾಲದ ಕಾರ್ಯಗಳನ್ನು ಕೈಗೊಳ್ಳಬೇಕು ದೇಶಕ್ಕೆ ಏಕರೂಪವಾದ ಒಂದೇ ಆಹಾರ ಧೋರಣೆ ಇರಬೇಕು. ಈ ದಿಸೆಯಲ್ಲಿ ಜನರ ಸಹಕಾರ ಹಾಗೂ ಸಹಾಯವನ್ನು ಪಡೆಯಬೇಕು. ಅತಿವಿಶಾಲವಾದ, ಫಲವತ್ತಾದ, ಅಧಿಕ ಜನಸಂಪತ್ತಿನಿಂದ ಕೂಡಿದ ಈ ನಮ್ಮ ದೇಶದ ಜನತೆ ಸ್ವಲ್ಪವೇ ಅಧಿಕ ಶ್ರಮಪಟ್ಟರೆ, ದೇಶದ ನಾಯಕರ ತಲೆ ತಿನ್ನುತ್ತಿರುವ ಭೀಕರ ಹಾಗೂ ಭೀಮಾಕಾರದ ಈ ಆಹಾರ ಸಮಸ್ಯೆಯನ್ನು ಬರುವ ವರ್ಷವೇ ಪರಿಹರಿಸಿ ನಾವು ಅಧಿಕ ಉತ್ಪಾದನೆ ಮಾಡಬಹುದು. ಸಮಸ್ಯೆಯ ಗಂಭೀರತೆ ಎಷ್ಟೇ ಇರಲಿ, ಜನರ ಹಾಗೂ ಸರಕಾರದ ಸಂಯುಕ್ತ ಪ್ರಯತ್ನವು ಖಂಡಿತಲ್ಯೂ ಫಲಕಾರಿಯೆನಿಸುವುದು.

ಗಾಂಧೀಜಿ ಪುಣ್ಯದಿನ

ಉಡುಪಿ ಮೋಡರ್ನ್ ಶಾಲೆಯಲ್ಲಿ ಬೆಳಗ್ಗೆ ಧ್ವಜವಂದನೆ ಕುಚಿತ್ತ ಮುದು ಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಿಥಿ ಸೇರಿ ಬೈಬಲ್, ಖುರಾನ್, ಗೀತಾಪಾಚನ, ಗಾಂಧೀಜಿಯವರ ಕುರಿತು ಮುಕ್ಕಳಿಂದ ಭಾಷಣದ ಬಳಿಕ ಸಾಂಸ್ಕೃತಿಕ ಮಂತ್ರಿ ಧನ್ಯವಾದ ಅರ್ಪಿಸಿದರು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರ: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ,

ಬೆಲೆ. ರೂ ೧—೮—೦ (1 = 50)

ರೂ 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ
ನವಭಾರತ ಪುಸ್ತಕ ಭಂಡಾರ, ಉಡುಪಿ
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕೇರಳೀಯರಿಂದ ಭವಿಷ್ಯ ನಿರ್ಮಾಣ ಶಬರಿಗಿರಿ

ಶ್ರೀ

ಶಬರಿಗಿರಿ ಜಲ ವಿದ್ಯುದ್ಯೋಜನೆಯಿಂದ ಕೇರಳಕ್ಕೆ ಇಂದಿಗಿಂತ ಇಮ್ಮಡಿ ವಿದ್ಯುತ್ತು ದೊರೆಯುವುದು. ಇದರಿಂದ ರಾಜ್ಯದಲ್ಲಿ ಹೊಸ ಉದ್ದಿಮೆ ಗಳು ಪ್ರಾರಂಭವಾಗುವುವು, ಜನತೆಗೆ ಉದ್ಯೋಗಾವಕಾಶಗಳು ಹೆಚ್ಚುವುವು. ಮಲಬಾರದ ಸಮುದ್ರ ತೀರಕ್ಕೆ ಹೆಚ್ಚಿನ ಬೆಳಕು ಬೀಳುವುದು.

೧೯೬೨ರಲ್ಲಿ ಭಾರತದಲ್ಲಿ ಅಮೆರಿಕೆಯ ರಾಯಭಾರಿಯಾಗಿದ್ದ ಜಾನ್ ಕೆನ್ನೆಥ್ ಗಾಲ್‌ಬ್ರೈಥರು ಶಬರಗಿರಿ ಯೋಜನೆಗೆ ಅಮೆರಿಕೆಯ ಅರ್ಥಿಕ ನೆರವನ್ನು ಘೋಷಿಸುತ್ತ 'ವಿದ್ಯುತ್ ಯಾವ ಚಮತ್ಕಾರವನ್ನೂ ಮಾಡುವುದಿಲ್ಲ, ಆದರೆ, ಅದು ಮಾಡುವ ಕೆಲಸವು ಚಮತ್ಕಾರದಂತೆ ತೋರುತ್ತದೆ' ಅಂದಿದ್ದರು.

ಈ ಮಾತಿಂದು ಎರಡು ವರ್ಷ ಹಳೆಯದಾಯ್ತು. ಶಬರಗಿರಿಯೋಜನೆಗೆ ಹಲವು ಕೋಟಿ ರೂಪಾಯಿಗಳು ವೆಚ್ಚವಾಗಿವೆ. ಈ ಯೋಜನೆಯನ್ನು ದ್ರುತಗತಿಯಿಂದ ಕೊನೆಗೊಳಿಸಲಾಗುತ್ತಿದೆ. ಯೋಜನೆಯು ಕೊನೆಯ ಗಟ್ಟ ತಲಪಿದಾಗ ಕೇರಳದ ಅರ್ಥವ್ಯವಸ್ಥೆಯಲ್ಲಿ ಮಹತ್ವಪೂರ್ಣ ಪ್ರಭಾವ ಬೀರುವುದು ಖಂಡಿತ.

ರಾಜ್ಯದ ಕೃಷಿ ಪ್ರಧಾನ ಅರ್ಥವ್ಯವಸ್ಥೆಯನ್ನೀ ಯೋಜನೆಯು ಉದ್ಯೋಗ ಪ್ರಧಾನವಾಗಿ ಬದಲಾಯಿಸುತ್ತದೆ. ಇದರಿಂದ ಉದ್ದಿಮೆಯಲ್ಲಿ ಉನ್ನತಿಯಾಗಿ ಸುಮಾರು ೫೦ ಸಾವಿರ ಮಂದಿಗೆ ಹೊಸ ಕೆಲಸ ದೊರೆಯ ಬಹುದು. ವಿದ್ಯುತ್ತಿನ ಅಭಾವದಿಂದ ಮುಚ್ಚಿರುವ ಕಾರಖಾನೆಗಳು ಮರಳಿ ಕಾರ್ಯಾರಂಭ ತೊಡಗಬಹುದು. ಹಳೆಯ ಉದ್ದಿಮೆಗಳ ವಿಸ್ತರಣೆಗೂ ಹೊಸ ಉದ್ಯೋಗಗಳ ಸ್ಥಾಪನೆಗೂ ಈ ಯೋಜನೆಯು ಕಾರಣವಾಗಬಹುದು. ವಿದ್ಯುತ್ತು ದೊರೆತಾಗ ಅದರ ಉಪಯೋಗದ ದಾರಿಗಳೂ ತೆರೆಯುತ್ತವೆ.

ಕೇರಳಕ್ಕೆ ಇಂದು ವಿದ್ಯುಚ್ಛಕ್ತಿಯು ಅತ್ಯವಶ್ಯವಿರುವುದರಿಂದ ಶಬರಗಿರಿಯೋಜನೆಯ ಆರು ಜನರೇಟರುಗಳಲ್ಲಿ ಎರಡನ್ನು ಮೊದಲಿಗೇ ಚಾಲೂ ಮಾಡುವ ಇರಾದೆಯಿದೆ. ಇವುಗಳಲ್ಲಿ ಒಂದು ಕಾರ್ಯಾರಂಭವಾಗ ಬಾಗಲೇ ಇಂದು ರಾಜ್ಯಕ್ಕೆ ದೊರೆವ ಶಕ್ತಿಯಲ್ಲಿ ಸೇ. ೨೦ರಷ್ಟು ಹೆಚ್ಚಾಗುವುದು. ಪ್ರತಿಯೊಂದು ೫೦ ಸಾವಿರ ಕಿಲೋವಾಟ್ ಶಕ್ತಿಯ ಎರಡು ಜನರೇಟರು ಕೆಲಸತೊಡಗಿದರೆ, ಸೇ. ೪೦ರಷ್ಟು ಶಕ್ತಿಯು ಹೆಚ್ಚು ಸಿಗುವುದು ಇದು ರಾಜ್ಯದ ವಿದ್ಯುತ್ ವಿಕಾಸದಲ್ಲಿ ಪ್ರಗತಿಯ ಪ್ರತೀಕವಾಗುವುದು.

ಶಬರಗಿರಿಯ ವಿದ್ಯುತ್ತಿನಿಂದ ರಾಸಾಯನಿಕ ಪದಾರ್ಥ, ಹತ್ತಿಬಟ್ಟೆ, ಟಯರ್, ಸಿಮೆಂಟ್, ರೇಯೂನ್, ನ್ಯಾಲನ್, ಸಾಯಿಕಲ್, ಉಷ್ಣವಿರೋಧಿ ಇಟ್ಟಿಗೆ, ಗಾಜು, ವನಸ್ಪತಿ, ಸಾಬೂನು, ರಬ್ಬರ್ ಕಾಗದ ಮತ್ತು ಪ್ಲೈವುಡ್ ಮೊದಲಾದ ಹೊಸ ಉದ್ಧಿಮೆಗಳು ವಿಸ್ತಾರ ಹೊಂದುವುದು ಸಾಧ್ಯವಾಗುವುದು. ಈಯೆಲ್ಲಾ ಉದ್ದಿಮೆಗಳಿಗೆ ಬೇಕಾದ ಕಚ್ಚಾಮಾಲು ಕೇರಳದಲ್ಲಿಯೇ ದೊರೆಯುವುದ.

ಶಬರಗಿರಿಯ ಅರಣ್ಯ ಪ್ರದೇಶವನ್ನು ಹತೋಟಿಗೆ ತೆಗೆದುಕೊಳ್ಳಲು ಮಾನವ, ಯಂತ್ರಗಳೊಂದಿಗೆ ಆನೆಗಳೂ ನೆರವಾಗುತ್ತಿವೆ

ವಿದ್ಯುದುತ್ಪಾದನೆಯಿಂದ ರಾಸಾಯನಿಕ ಗೊಬ್ಬರ ಮತ್ತು ಅಮೋನಿಯಂ ಉದ್ದಿಮೆಯ ವಿಸ್ತಾರಕ್ಕೂ ನೆರವು ದೊರೆಯುವುದು. ಕೊಚ್ಚಿಯ ನೌಕಾಂಗಣಕ್ಕೂ ಶಬರಗಿರಿಯಿಂದ ೧೯೬೭ರ ಸುಮಾರಿಗೆ ವಿದ್ಯುತ್ ಪೂರೈಕೆಯಾಗುವುದು. ಉದ್ದಿಮೆಗಳ ಅಭಿವೃದ್ಧಿಗೆ ಅವಕಾಶ ದೊರೆತಂತೆಯೇ ರಾಜ್ಯದ ಅರಣ್ಯ ವಿಶಾಲ ಸಾಧನ ಸೋತ್ರಗಳ ಉಪಯೋಗದ ಮಾರ್ಗವೂ ದೊರೆಯುವುದು ಶತಮಾನಗಳಿಂದಲೂ ಪಶ್ಚಿಮ ಘಟ್ಟಗಳ ದಟ್ಟ ಕಾಡುಗಳನ್ನು ಹೊಗುವುದು ಕಷ್ಟವಿತ್ತು. ಆದರೆ ಇಂದು ಈ ಮಲೆಯಲ್ಲಿ ನೂರು ಮೈಲುದ್ದದ ಮಾರ್ಗ ರಚನೆಯಾದುದರಿಂದ, ಇದರ ಮೂಲಕ ಮರಗಳನ್ನು ಕಡಿದು ಸಾಗಿಸಿ ಪ್ಲೈವುಡ್ಡನ್ನು ತಯಾರಿಸುವುದು ಸಾಧ್ಯವಾಗಿದೆ

ಶಬರಗಿರಿಯ ವಿದ್ಯುತ್ತು ಅಗ್ಗವಾಗಿ ದೊರೆಯುವುದರಿಂದ ಯಂತ್ರ ಕಾರಖಾನೆಗಳಿಗೆ ಲಾಭವಾಗುವುದು. ಕೇರಳದ ಘ



ಕಕ್ಕಿ ಅಣೆಕಟ್ಟು ಕಾಂಕ್ರೀಟಿನ ಈ ಕಟ್ಟೆ ಪೂರ್ಣವಾದಾಗ ಇದು ನೆಲತಲದಿಂದ ೧೧೦ ಮೀಟರ್ ಎತ್ತರವಾಗುವುದು. ಯಂತ್ರಗಳಿಂದಲೇ ಇಲ್ಲಿ ಹೆಚ್ಚಾಗಿ ಕೆಲಸ ಸಾಗುತ್ತಿದೆ.

ವಿದ್ಯುದ್ಯೋಜನೆ

ಟ್ಟಗಳು ಉನ್ನತವಾಗಿವೆ, ಘಾಟಿಗಳೂ ಕಡಿದಾಗಿವೆ. ಇಲ್ಲಿ ಪ್ರತಿ ವರ್ಷ ೪೫೭ ಸೆಂಟಿಮೀಟರ್ ಮಳೆ ಸುರಿಯುತ್ತದೆ. ಆದುದರಿಂದ ಈ ಪ್ರದೇಶವು ಜಲವಿದ್ಯುತ್ ಉತ್ಪಾದನೆಗೆ ಉಪಯುಕ್ತವಾಗಿದೆ. ಕಡಿಮೆ ವೆಚ್ಚದ ದೊಡ್ಡ ಭಾರತೀಯ ವಿದ್ಯುದ್ಯೋಜನೆಗಳಲ್ಲಿ ಶಬರಗಿರಿಯೂ ಒಂದು. ಬರೀ ೧,೦೦೦ ರೂಪಾಯಿಗಳ ವೆಚ್ಚದಲ್ಲಿ ಒಂದು ಕಿಲೋವಾಟ್ ಶಕ್ತಿಯು ಇಲ್ಲಿ ಉತ್ಪಾದಿತವಾಗುವುದು.

ಶಬರಗಿರಿ ಯೋಜನೆಯಲ್ಲಿ ವಿದ್ಯುತ್ ತಯಾರಿಗೆ ಪಂಬಾ ಮತ್ತು ಕಕ್ಕೀ ನದಿಗಳ ನೀರನ್ನು ಉಪಯೋಗಿಸಲಾಗುವುದು. ಇವೆರಡು ಪಂಬಾಯಾರ್‌ನ ಉಪನದಿಗಳು ಇವು ಮಳೆಗಾಲದಲ್ಲಿ ತುಂಬಿ ಹರಿಯುವ ನದಿಗಳು. ಅರಬೀ ಸಮುದ್ರದಲ್ಲಿ ಇವುಗಳ ನೀರು ಇದುವರೆಗೂ ಬೀಳುತಿತ್ತು. ವರ್ಷಂಪ್ರತಿ ೬೦೫ ಸಾವಿರ ಎಕ್ರೆ ಅಡಿ ನೀರು ವ್ಯರ್ಥವಾಗುತಿತ್ತು. ಇದೀಗ ಈ ನೀರು ೫೦ ಸಾವಿರ ಕಿಲೋವಾಟ್ ಶಕ್ತಿ ಉತ್ಪಾದಿಸಬಲ್ಲ ೬ ಜನರೇಟರ್‌ಗಳನ್ನು ನಡೆಸಲು ಉಪಯೋಗವಾಗುವುದು.

ಪಂಬಾ ಕಕ್ಕಿ ಪ್ರದೇಶದಲ್ಲಿ ಹರಿಯುವ ನೀರನ್ನು ಉಪಯೋಗಿಸಲು ಎರಡು ಜಲಾಶಯಗಳನ್ನು ನಿರ್ಮಿಸಲಾಗುವುದು. ಒಂದು ಕಟ್ಟವನ್ನು ಪಂಬಾ ನದಿಗೂ ಇನ್ನೊಂದನ್ನು ಕಕ್ಕಿಗೂ ಹಾಕಲಾಗುವುದು. ಮೂರು ಕಿಲೋಮೀಟರ್ ಉದ್ದದ ಸುರಂಗದ ಮೂಲಕ ಪಂಬಾ ನದಿಯ ಜಲಾಶಯದ ನೀರನ್ನು ಕಕ್ಕೀ ಜಲಾಶಯಕ್ಕೆ ಹರಿಯಿಸಲಾಗುವುದು. ಇನ್ನೊಂದು ಸುರಂಗದಿಂದ ನೀರನ್ನು ೫½ ಕಿಲೋಮೀಟರ್ ದೂರದ ಮೂಜಿಯೂರಿನಲ್ಲಿರುವ ವಿದ್ಯುದಾಲಯಕ್ಕೆ ಮುಟ್ಟಿಸಲಾಗುವುದು.

ಅಲ್ಲಿ ಅಮೇರಿಕೆಯಲ್ಲಿ ವಿಶೇಷರೂಪದಲ್ಲಿ ತಯಾರಾದ ಟರ್ಬಾಯಿನ್ ಮೂಲಕ ಜನರೇಟರ್‌ಗಳನ್ನು ಚಲಾಯಿಸುವುದು; ೩ ಲಕ್ಷ ಕಿಲೋವಾಟ್ ಶಕ್ತಿಯನ್ನು ಹುಟ್ಟಿಸಲಾಗುವುದು. ೧೦೦ ಮೈಲು ಉದ್ದದ ಲೈನನ್ನು ಎಳೆದು ಶಬರಗಿರಿ ಯೋಜನೆಯನ್ನು ಕೇರಳರಾಜ್ಯದ ವಿದ್ಯುದ್ವ್ಯವಸ್ಥೆಗೆ ಜೋಡಿಸಲಾಗುವುದು. ಇದರಿಂದ ನೂರಾರು ಕಾರಖಾನೆಗಳಿಗೂ ಸಾವಿರಾರು ಮನೆಗಳಿಗೂ ವಿದ್ಯುಚ್ಛಕ್ತಿ ಲಭಿಸುವುದು. ಈ ಯೋಜನೆಯ ವಿದ್ಯುತ್ತನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ೧೦೦೦ ಹೊಸ ಹಳ್ಳಿಗಳಿಗೆ ಒದಗಿಸಲಾಗುವುದು.

ಪಂಬಾ ಕಕ್ಕಿ ಪ್ರದೇಶದ ಒಂದು ಹಳೆಯ ಮಂದಿರದ ಹೆಸರನ್ನೇ ಶಬರಗಿರಿ ಯೋಜನೆಗೆ ಇಟ್ಟಿದ್ದಾರೆ. ಈ ಯೋಜನೆಯು ೧೯೬೧ ರಲ್ಲೇ ಆರಂಭವಾಗಿದ್ದರೂ ದುರ್ಗಮ ಪ್ರದೇಶ, ಭಾರೀ ಮಳೆ, ಸಾಮಾನಿನ ಬಗ್ಗೆ ಅನಿಶ್ಚಿತತೆ, ಕಾಂಕ್ರೀಟಿಗಾಗಿ ಉತ್ತಮ ವರ್ಗದ ಹೊಯಿಗೆಯ ಅಭಾವಗಳಿಂದಾಗಿ ಪ್ರಗತಿಯು ಬಹಳ ಮಂದವಾಯಿತು. ೧೯೬೨ರಲ್ಲಿ ಅಮೇರಿಕೆಯ ಅಂತಾರಾಷ್ಟ್ರೀಯ ವಿಕಾಸ ಏಜನ್ಸಿಯು ಯೋಜನೆಗೆ ಬೇಕಾದ ವಿದೇಶ ವಿನಿಮಯವನ್ನು ನೀಡಲು ಸಿದ್ಧವಾದ ನಂತರ ಪ್ರಗತಿ ದ್ರುತಗತಿ ಪಡೆಯಿತು.

ಅಮೇರಿಕೆಯಿಂದ ಬಂಡೆ ಪುಡಿಗುಟ್ಟುವ ದೊಡ್ಡ ಯಂತ್ರಗಳನ್ನು ತರಿಸಿ ಹೊಯಿಗೆ ತಯಾರಿಸಲಾಯಿತು. ಸಿಮೆಂಟು ಸಾಗಿಸುವುದಕ್ಕೂ ದೊಡ್ಡ ಬಂಡೆಗಳನ್ನು ಒಯ್ಯುವುದಕ್ಕೂ, ಕಬ್ಬಿಣದ ಟ್ರಾಲಿಗಳು ಬಂದುವು. ಸುರಂಗ ತೋಡುವ ಸಾಧನಗಳನ್ನೂ ತರಿಸಲಾಯಿತು. ವಿಶೇಷ ಪ್ರಕಾರದ ಟ್ರಕ್ಕುಗಳೂ ಆಯಾತವಾದುವು. ೧೯೬೭ರಲ್ಲಿ ನಿಗದಿಸಿದಂತೆ ಯಂತ್ರಗಳೂ ಮಾನವರೂ ಒಂದಾಗಿ ದುಡಿಯತೊಡಗಿದರು. ಕೆಲವು ವರ್ಷಗಳಿಗೆ ಮೊದಲು ಇದು ಅಸಂಭವವಿತ್ತು. ೧೯೬೫ರ ಹೊತ್ತಿಗೆ ಯೋಜನೆಯ ಕಾರ್ಯವು ಅರ್ಧಾಂಶದಷ್ಟು ಮುಗಿದಿದೆ. ಈ ವರ್ಷದಲ್ಲಿ ಎರಡು ಜನರೇಟರುಗಳು ಕಾರ್ಯಾರಂಭವಾಗುವುವು; ಉಳಿದ ನಾಲ್ಕು ನಿಯೋಜಿತ ಕಾಲದಲ್ಲೇ ಕೆಲಸಕ್ಕೆ ತೊಡಗುವ ನಿರೀಕ್ಷೆಯಿದೆ.

ಜನರಿಗೆ ತಾವು ಮಾಡುವ ಕಾರ್ಯದಲ್ಲಿ ಗೌರವ ಮತ್ತು ಆಸಕ್ತಿಗಳಿರುವುದೇ ಯೋಜನೆಯ ಪ್ರಗತಿಗೆ ಕಾರಣ. ಕೇರಳದ ೩೩೦೦ ಸ್ತ್ರೀ ಪುರುಷರು ತಮ್ಮ ಕಾರ್ಯದಲ್ಲಿ ಉತ್ಸಾಹದಿಂದ ದುಡಿಯುತಿದ್ದಾರೆ.

ಗುಂಡಿನ ಆಘಾತಗಳಿಂದಲೂ ಉರುಳುತ್ತಿರುವ ಬಂಡೆಗಳ ಶಬ್ದದಿಂದಲೂ ಶಬರಗಿರಿ ಕೋಲಾಹಲಮಯವಾಗಿದೆ. ವಾಯುಮಂಡಲದಲ್ಲಿ ಧೂಳು ತುಂಬಿದೆ. ಆದರೂ ಮಜೂರರು ಕಲ್ಲು ಕಡಿಯುವುದರಲ್ಲಿ, ಬಂಡೆಯೊಳಿಯುವುದರಲ್ಲಿ, ಗಾಡಿಯೊಳಿಯುವುದರಲ್ಲಿ ಸುರಂಗ ತೋಡುವುದರಲ್ಲಿ ವ್ಯಸ್ತರಾಗಿದ್ದಾರೆ. ಒಂದೆಡೆ ಬಂಡೆಗಳಿಂದ ಹೊಯಿಗೆ ತಯಾರಾಗುತ್ತಿದೆ. ಇನ್ನೊಂದೆಡೆ ಟ್ರಾಲಿಗಳ ಮೂಲಕ ಕಾಂಕ್ರೀಟು ಬರುತ್ತಿದೆ. ಟ್ರಕ್‌ಗಳು ಸಂಚಾರಕ್ಕೆ ತೊಡಗಿವೆ. ನೌಕರರು ತಲೆಯಲ್ಲಿ ಕಾಂಕ್ರೀಟು ಹೊತ್ತು ಮೇಲೇರುತಿದ್ದಾರೆ. ಉಪ್ಪಾರರು ಶಬರಗಿರಿಯ ಪೂರಾ ಅಣೆಕಟ್ಟುಗಳನ್ನು ಕಟ್ಟುವವರಲ್ಲಿ ತೊಡಗಿದ್ದಾರೆ. ನಿರ್ಮಾಣದ ಈ ಕಾರ್ಯ ಮುಂಜಾವದಿಂದ ಬಹು ರಾತ್ರಿಯ ತನಕ ನಡೆಯುತ್ತಿದೆ.

ಇಂಜನಿಯರಿಂಗ್ ದೃಷ್ಟಿಯಲ್ಲಿ ಶಬರಗಿರಿಯೋಜನೆಯು ಸಾಹಸಮಯವಾದುದು. ಮನುಷ್ಯ ಮತ್ತು ಯಂತ್ರಗಳು ಒಂದಾಗಿ ರಾಜ್ಯಾಭಿವೃದ್ಧಿಗೆ ಹೇಗೆ ಶ್ರಮಿಸಬಹುದೆಂಬುದನ್ನಿದು ಸಾರುತ್ತಿದೆ.



ಅಮೇರಿಕೆಯಿಂದ ಬಂದ ೩.೭೫ ಮೀಟರ್ ವ್ಯಾಸವಿರುವ ಕೊಳವೆಯನ್ನು ಸುರಂಗ ದಾರಿಯೊಳಗೆ ಕೂರಿಸಲಾಗುತ್ತಿದೆ.

ಭಾರತೀಯ ಇಂಜಿನಿಯರರ ಮೂಲಕ ಭಾರತೀಯರಿಂದಲೇ ನಿರ್ಮಾಣವಾಗುತ್ತಿರುವ ಯೋಜನೆಯಿದು. ಯಂತ್ರ ಮತ್ತು ಆರ್ಥಿಕ ನೆರವು ಅಮೇರಿಕೆಯಿಂದ ಬಂದಿದೆ. ಅದು ಸುಮಾರು ೧೦ ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಇದು ಟರ್ಬಾಯಿನ್, ಜನರೇಟರ್, ಟ್ರಾನ್ಸ್‌ಫಾರ್ಮರ್ ಇತ್ಯಾದಿ ವಿಶಿಷ್ಟ ಸಾಮಗ್ರಿಗಳಿಗಾಗಿ ನೀಡಲಾದುದು.

ಒಂದು ದೇಶದ ಆರ್ಥಿಕ ಉನ್ನತಿಯಾಗಬೇಕಾದರೆ ವಿದ್ಯುತ್ತಿನ ವಿಕಾಸವಾಗಬೇಕು. ಈ ವಿಕಾಸ ಕಾರ್ಯದಲ್ಲಿ ಅಮೇರಿಕೆಯು ಭಾರತಕ್ಕೆ ನೆರವಾಗುತ್ತಿದೆ. ಇದಕ್ಕಾಗಿ ಭಾರತೀಯರು ಅಮೇರಿಕೆಗೆ ಸದಾ ಕೃತಜ್ಞರು.

ನಲ್ಲೆಯ ನೆನಪು

ಕೆ. ಆನಂದ, ನೇಣೂರು.

ನನ್ನ ನಲ್ಲೆ ನೀನು ಎಲ್ಲೆ
ಇದಿರು ಒಮ್ಮೆ ಬಾರೆಯಾ ।
ನಿನ್ನ ಹಾಲ ಗೆನ್ನೆಯೊಮ್ಮೆ
ಕಣ್ಣಿಯಿದಿರು ತೇಲಲಿ ॥ ೧ ॥

ನನ್ನ ಪ್ರಿಯೆ ಎಂದು ಬರುವೆ
ನೀನು ಎಲ್ಲಿ ಅವಿತಿಹೆ ।
ಆಳಲು ನಗಲು ಬರದೆ ನಾನು
ತೆವಳುತಿರುವೆ ಕಾಣೆಯಾ ॥ ೨ ॥

ನಮ್ಮ ವನದಿ ಅರಳಿ ನಿಂತ
ಪುಷ್ಪ ನಿನ್ನ ಕರೆವುದು ।
ಮುಡಿಗೆಯಿಡುವ ಚೆಲುವೆಯಿಲ್ಲ —
ವೆಂದು ಅಳುತಲಿರುವುದು ॥ ೩ ॥

ಬಾರೆ ಬಾರೆ ಬೇಗ ಬಾರೆ
ಓ ನನ್ನ ಧೀರೆಯೇ ।
ನೀರನಾಕ್ಷಿಯನ್ನು ಕುಣಿಸಿ
ಮುಂದೆ ಇಂದು ಬಾರೆಯೊ ॥ ೪ ॥

ಹಗಲು ಇರುಳು ಬೆಳಗು ಬೈಗು
ನಿನ್ನದೊಂದೆ ಯೋಚನೆ ।
ಕಾಡುತಿರುವುದೆನ್ನನಯ್ಯೊ,
ಎಂದು ಬರುವೆ ನೀನೆಲೊ ॥ ೫ ॥

ಹಲವು ಕಾಲ ಕಳೆದೆ ನಾನು
ಕಾದುಕೊಂಡೆ ನಿನ್ನನು ।
ಇಂದು ನಾಳೆ ಬರುವೆ ನೀನು
ಎಂಬ ಆಶೆಯೊಂದಲೆ ॥ ೬ ॥

ಇನ್ನು ನೀನು ಬಂದೆಯಲ್ಲ
ಎಂದು ಬರುವೆ ಹೇಳೆಯಾ ।
ಪತ್ರವೊಂದು ಬರೆದು ನೀನು
ಪ್ರೇಮವನ್ನು ಸಾರೆಯಾ ॥ ೭ ॥

ಆಶಾವಾದಿಯಂತೆ ನಾನು
ಎಷ್ಟು ಸಮಯ ಕಾಯಲಿ ।
ನೀನು ಬರದೆ ಎನ್ನ ಮನವು
ಅಂಳಿದೆಂತೆಂದಿಗೂ ॥ ೮ ॥

ನೀನೆ ನನ್ನ ಹೃದಯ ಸುಂದರಿ
ನಿನ್ನ ನಾನು ಮರೆಯೆನು ।
ಬಾಡುಗೊಳಿಸಬೇಡ ನೀನು
ಎನ್ನ ಹೃದಯ ಕಮಲವ ॥ ೯ ॥

ಲತೆಯ ತೆರದಿ ಬಳಸಿ ಬಾರೆ
ನನ್ನ ಪ್ರೇಮ ಮೂರುತಿ
ತಾರೆಯಂತೆ ಕಿರಣದೋರಿ
ನಡೆದು ಬಾರೆ ಕೀರುತಿ ॥ ೧೦ ॥

ಜನತಾ ಉವಾಚ

ಹೊಸ ಹೈಸ್ಕೂಲುಗಳಿಗೆ ಸಹಾಯ ಧನ ಕೊಡದಿರುವ ಅಸಮಂಜಸ ನೀತಿ

ಮೈಸೂರು ಸರಕಾರದ ಧೋರಣೆ ಪ್ರಕಾರ ಹೊಸತಾಗಿ ತೆರೆಯಲ್ಪಟ್ಟ ಖಾಸಗಿ ಹೈಸ್ಕೂಲುಗಳಿಗೆ ಮೂರು ವರ್ಷಗಳ ತನಕ ಯಾವುದೇ ರೀತಿಯ ಸಹಾಯಧನವನ್ನು ಕೊಡಲಾಗುವುದಿಲ್ಲ. ಮೂರು ವರ್ಷಗಳ ಬಳಿಕ ಆ ಶಾಲೆಗಳಿಗೆ ಸಹಾಯ ಧನ ಈಯಲಾಗುವುದು. ಹೀಗಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಹೈಸ್ಕೂಲು ರಚನೆಗಾಗಿ ಬಹಳ ಕಷ್ಟಪಟ್ಟು ಧನ ಸಂಗ್ರಹ ಇತ್ಯಾದಿ ಮಾಡಿದರೂ, ನಂತರ ಮೂರು ವರ್ಷಗಳ ತನಕ ಚಿಕ್ಕಾಸೂ ಧನ ಸಹಾಯವಿಲ್ಲವೆಂಬ ಕಾರಣದಿಂದ ಯೋಜನೆಯನ್ನು ಕೈಬಿಟ್ಟ ನಿದರ್ಶನಗಳು ಬೇಕಾದಷ್ಟಿವೆ. ಜನರು ಉತ್ಸಾಹದಿಂದ ಮುಂದೆ ಬಂದು ಹೈಸ್ಕೂಲು ಸ್ಥಾಪನೆಗೆ ಯತ್ನಿಸುವುದೇ ಒಂದು ಶುಭ ಲಕ್ಷಣ. ಈ ಉತ್ಸಾಹವನ್ನು ಪ್ರೋತ್ಸಾಹಿಸುವುದರ ಬದಲು ನಮ್ಮ ಶಿಕ್ಷಣ ಖಾತೆ ಅದಕ್ಕೆ ನೀರೆರಚಲು ಯತ್ನಿಸುತ್ತಿದೆ. ಮುಖ್ಯವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತದಂತೆ ಸಾರ್ವಜನಿಕರ ಯತ್ನವನ್ನು ಮೊಟಕುಗೊಳಿಸುವುದೇ ಅದರ ಉದ್ದೇಶವೇನೋ ಎಂಬಂತೆ ಭಾಸವಾಗುತ್ತಿದೆ.

ಹೊಸತಾಗಿ ತೆರೆಯಲ್ಪಟ್ಟ ಹೈಸ್ಕೂಲಿಗೆ ಧನ ಸಹಾಯ ಕೊಡುವುದು ಎಷ್ಟು ಅಗತ್ಯವೆಂಬುದನ್ನು ಸರಕಾರವು ಮನಗಂಡಂತೆ ಕಾಣುವುದಿಲ್ಲ. ಹುಟ್ಟಿದ ಮಗುವಿಗೆ ತಾಯಿಯ ಮೊಲೆ ಹಾಲಿನ ಅಗತ್ಯವೇ ಹೊರತು ಬೆಳೆದು ದೊಡ್ಡದಾದ ಮಗುವಿಗಲ್ಲ. ಈ ವಿಚಾರವನ್ನು ಶಿಕ್ಷಣ ಖಾತೆ ತಿಳಿಯಬೇಕು. ಬಾಲ್ಯಾವಸ್ಥೆಯಲ್ಲಿರುವ ಹೊಸ ಶಿಕ್ಷಣ ಸಂಸ್ಥೆಗಳಿಗೆ ತುಂಬು ಧನ ಸಹಾಯವನ್ನು ಈಯುವುದು ಅತಿ ಅಗತ್ಯ. ಹಾಗೆಂದು ಎಲ್ಲಾ ಹೊಸ ಹೈಸ್ಕೂಲುಗಳಿಗೆ ಸರಕಾರದ ಈ ಕಾಯಿದೆ ಅನ್ವಯವಾಗುವುದು ಎನ್ನೋಣವೇ? ಅದೂ ಇಲ್ಲ. ಈಗ ರಾಜ್ಯ ಸರಕಾರದ ಫಿಶರೀಸ್ ಇಲಾಖೆಯಿಂದ ಕರಾವಳಿಯ ಪ್ರದೇಶಗಳಲ್ಲಿ ಹಲವಾರು 'ಫಿಶರೀಸ್ ಹೈಸ್ಕೂಲ್'ಗಳು ತೆರೆಯಲ್ಪಟ್ಟಿವೆ. ಈ ಹೊಸ ಫಿಶರೀಸ್ ಹೈಸ್ಕೂಲುಗಳ ಎಲ್ಲಾ ವೆಚ್ಚವೂ ಸರಕಾರದ ಬೊಕ್ಕಸದಿಂದಲೇ ಮಾಡಲ್ಪಡುತ್ತದೆ. ವಿದ್ಯಾ ಇಲಾಖೆಯ ಬದಲು ಫಿಶರೀಸ್ ಇಲಾಖೆಯು ಈ ಶಾಲೆಗಳ ಆಡಳಿತ ನಡೆಸುತ್ತಿದೆ. ಆ ಶಾಲೆಗಳಿಗೆ ಬೇಕಾದ ಖರ್ಚು ವೆಚ್ಚವನ್ನು ಮೊದಲ ವರ್ಷದಿಂದಲೇ ಸರಕಾರ ವಹಿಸುತ್ತಿದೆಯಲ್ಲ? ಆಗ, ಯಾಕೆ ಈ ಮೂರು ವರ್ಷ ಸಹಾಯಧನ ಇಲ್ಲದ ಕಾಯಿದೆ ಇಲ್ಲಿಗೆ ಅನ್ವಯಿಸುವುದಿಲ್ಲ?

ಈಗ ನಾವು ಶಿಕ್ಷಣ ಸಂಸ್ಥೆಗಳಲ್ಲೇ ಹಲವಾರು ಭೇದಗಳನ್ನು ಕಾಣುತ್ತಿದ್ದೇವೆ. 'ಫಿಶರೀಸ್ ಶಾಲೆ' ಎಂಬ ಹೆಸರಿನಿಂದ ಕರೆಯಲ್ಪಡುವ ಶಾಲೆಗಳು, ವಿದ್ಯಾರ್ಥಿ ಉಳಿದ ಶಾಲೆಗಳಲ್ಲಿದ್ದಂತೆಯೇ ಇದೆ. ಅಲ್ಲಿಗೆ ವಿದ್ಯಾಭ್ಯಾಸಕ್ಕೆ ಬರುವ ಮಕ್ಕಳಲ್ಲಿ ಮೀನುಗಾರರ ಮಕ್ಕಳ ಸಂಖ್ಯೆ ಬಹಳ ಕಡಿಮೆ. ಉಳಿದ ವರ್ಗಗಳ ವಿದ್ಯಾರ್ಥಿಗಳೇ ಹೆಚ್ಚು. ಹಾಗಿರುವಾಗ ಅವುಗಳಿಗೆ 'ಫಿಶರೀಸ್ ಶಾಲೆ' ಎಂಬ ಅಡ್ಡ ನಾಮಕರಣ ಯಾಕೆ?

ಹೊಸ ಹೈಸ್ಕೂಲುಗಳಿಗೆ ಸಹಾಯ ಧನ ಕೊಡುವ ಸರಕಾರದ ನೀತಿಯಲ್ಲಿ ಬದಲಾವಣೆ ಆಗಬೇಕಾದುದು ಅತಿ ಅಗತ್ಯವೆನಿಸಿದೆ. ನಮ್ಮ ಶಿಕ್ಷಣ ಮಂತ್ರಿ ಖಾತೆ ಈ ಕುರಿತು ತನ್ನ ನೀತಿಯನ್ನು ಪುನರ್ವಿಮರ್ಶಿಸಬೇಕಾದ ಕಾಲ ಈಗ ಬಂದಿದೆ.

—ಓರ್ವ ವಿದ್ಯಾ ಪಕ್ಷಪಾತಿ.

ಪಂಚಾಯ್ತ್ ಶಾಲೆಗಳು.

ಗ್ರಾಮಗಳೇ ದೇಶದ ಬೆನ್ನೆಲುಬು, ಪಂಚಾಯತ್ ರಾಜ್ಯವೇ ರಾಮರಾಜ್ಯದ ತಳಹದಿಯೆನ್ನುತ್ತಾರೆ. ಆದರೆ ಕೆಲವೆಡೆಯ ಪಂಚಾಯಿತಿ ಶಾಲೆಗಳ ಆಡಳಿತೆಯವರ ಹಾಗೂ ಅಧ್ಯಾಪಕರ ಪಾಡು ಹೇಳ ತೀರದು, ಸಕಾಲಕ್ಕೆ ಸಂಬಳ ಕೊಡದಿರುವುದು, ಸಂಬಳದ ಬಗ್ಗೆ ಕೊಟ್ಟ ಚೆಕ್‌ಗಳು ಪಾವತಿಯಾಗದೆ ಮರಳಿಬರುವುದು. ಇವೆಲ್ಲಾ ಆಡಳಿತೆಯ ಸ್ವೇಚ್ಛಾಚಾರದ ಫಲಗಳಾಗಿ ಬಡ ಅಧ್ಯಾಪಕರಿಗೆ ತಗಲುತ್ತವೆ. ಇಂತಹ ಸಂಸ್ಥೆಗಳಿಂದಲೂ ದೇಶಕ್ಕೆ ಸುಖವಾದೀತೆ? ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ಕಾರ್ಯಕ್ರಮ ಕೈಕೊಳ್ಳದಿದ್ದರೆ ಬೇಲಿಯೇ ಹೊಲವನ್ನು ಮೇದು ಬೆಳೆಯು ಶೂನ್ಯವಾದಂತಾದೀತೆಂದು ವಿನಂತಿಸುವುದು ಸೂಕ್ತವಾಗದೇ?

ಸುರತ್ಕಲ್ಲು — 'ವಿದ್ಯಾರ್ಥಿಗಳಲ್ಲೊಬ್ಬ'

ಮೂಗುತಿಯ ವಿಚಾರ

'ನವಯುಗ'ದ 28-1 65ರ ಸಂಚಿಕೆಯ ಈ ಬರೆಹಕ್ಕೆ ಪ್ರಪೂರಕವಾಗಿ ಒಂದೆರಡು ವಿಚಾರವಿಲ್ಲಿದೆ: ಗಂಡಸರನ್ನು ಕುರಿತು ವರ್ಣಿಸುವಾಗಲೂ 'ಮೂಗುತಿ'ಯ ಬಳಕೆಯಿದೆ: ನಾಗ ವರ್ಮನ ಛಂದೋಂಬುಧಿಯಲ್ಲಿರುವ "ಗಂಡರ ಮೂಕುತಿಯೆನಿಸಿದ ಮಂಡಳಿಕರ ಮಂತ್ರಿ"ಯೆಂಬುದನ್ನು ನೋಡಿರಿ! ತುಳುವ ಭಾಷೆಯಲ್ಲಿ 'ಮುತ್ತೇಸ'ವೆಂದರೆ ಮುತ್ತೈದೆತನದ ಅಯ್ದು ಮೂಲಾಭರಣಗಳೆಂದು ಹೇಳುತ್ತಾ, ಕರಿಮಣಿ, ಕುಂಕುಮ ಬೊಟ್ಟು, ಮೂಗುತಿ, ಬಳೆ, ಕಾಲುಂಗುರಗಳನ್ನು ಉಲ್ಲೇಖಿಸಿಯದೆ (ತುಳು-ಇಂಗ್ಲ ಕೋಶ: ಎ. ಮೇನ್ನರ್, 1886). ಹಾಗಾಗಿ, ಈ ಮೂಗುತಿಯು ವಿದೇಶೀಯ - ಮಹಮ್ಮದೀಯ - ಆಭರಣವೆನ್ನುವುದು ಕೇವಲ ಹೆಡ್ಡತನದ ಮಾತು. ಹಾಗೂ 11—12ನೆಯ ಶತಕದ ಹಿಂದೆ ಮೂಗುತಿ ಬಳಕೆಯಿದ್ದಿಲ್ಲವೆಂಬುದೂ ಸುಳ್ಳು ಮಾತಾಗಿದೆ. ಇನ್ನೀಗಲೂ ಹಿಂದೂ ಜನರು ಪ್ರಾಚೀನ ಸಂಸ್ಕೃತಿಯತ್ತ ಹೆಚ್ಚು ಗಮನಿಸಿ, ಅದನ್ನು ತಮ್ಮ ನಿತ್ಯ ಜೀವನದಲ್ಲೂ ಅಳವಡಿಸುವಂತೆ ಪುನರಪಿ ಬಲು ಕಳಕಳಿಯಿಂದ ಬೇಡಿಕೊಳ್ಳಬೇಕಾಗಿದೆ. "ಜಯ್ ಹಿಂದ್!"

"ಜಯಂತ", ಸುರತ್ಕಲ್ಲು.

ರೂಪಕ ಕಥೆ

ಅಡಿಕೆ ರಾಜ

ಅಕ್ಕಿ!... ಅಕ್ಕಿ!!...... ಅಕ್ಕಿ!!!...

ಆ ಊರಲ್ಲೆಲ್ಲೂ ಅಕ್ಕಿಗಾಗಿ ಕೂಗು!

ಲಕ್ಷಾಧಿಪತಿಯ ಮನೆಯಲ್ಲೂ ಅಕ್ಕಿಯಿಲ್ಲ— ಭಿಕ್ಷಾಧಿಪನಂತೂ ಮೊದಲೇ ಉಪವಾಸ.

ಅವನು ಆ ಊರಿನ ಧನಿಕ ಜಮೀನ್ದಾರ. ನೂರಾರು ಮುಡಿ ಅಕ್ಕಿ ಬರುವ ಗದ್ದೆಯಿತ್ತವನಿಗೆ. ಫಲವತ್ತಾದ ಮಣ್ಣು. ಧಾರಾಳ ನೀರು ತಗ್ಗಿನ ಗದ್ದೆಗಳು. ಹುಲುಸಾದ ಪೂರು ಬೆಳೆ!

ಬೆಳೆ ಕೊಯ್ದು ಬಳಿಕ ಮನೆಯಲ್ಲಿ ಕಣಜ ತುಂಬಾ ಭತ್ತ. ಮಡದಿ-ಮಕ್ಕಳಿಗೆ, ಆಳು—ಕಾಳುಗಳಿಗೆ ಹೊಟ್ಟೆ ತುಂಬಾ ಊಟ.

ಬಂತು - ಅಡಿಕೆಗೆ ಬೆಲೆ. ಹುಟ್ಟಿತು— ಧನಿಕನಿಗೆ ಹಣದಾಸೆ. ನೆಡಿಸಿದ-ಗದ್ದೆಗಳಲ್ಲಿ ಅಡಿಕೆ ಗಿಡ. ಬಯಲು ತುಂಬಾ ಅಡಿಕೆ ತೋಟವೆದ್ದು ಫಸಲು ಬಿಟ್ಟಿತು. ಸಾಗಿತು ಪೇಟೆಗೆ ಗೋಣಿ-ಗೋಣಿ ಅಡಿಕೆ—ದೊರೆಯಿತು ಕಂತೆ ಕಂತೆ ನೋಟು! ಆದ ಧನಿಕ ಲಕ್ಷಾಧಿಪ. ಸಿಕ್ಕಿತು—ಮಣ ಅಡಿಕೆ ನೂರಲು ಅಕ್ಕಿ ಮುಡಿ ಮೂರು. ಬರುತ್ತಿತ್ತು ಅಂಗಳಕ್ಕೇ "ಅಂಬೆಡಸ್ವಾರು" ಕರೆದವನನು "ನಮ್ಮೂರ ಅಡಿಕೆ ರಾಜ"ನೆನುತ.

ಬಂತೇ ಬಂತು ಅಕ್ಕಿಗೆ ಮಹಾ "ಬರ" ಬರಿದಾಯ್ತು ಧನವೆಲ್ಲ ಕಾಳಸಂತೆಗೆ ತೆರುತ. ಯಾರಲ್ಲಿ ಕೇಳಿದರೂ ಅಕ್ಕಿಯಿಲ್ಲ. ಅರುವತ್ತು ಕೊಟ್ಟರೂ ಅಕ್ಕಿಯಿಲ್ಲ. ಬೆಳೆಸಬಹುದೆಂದರೆ ಗದ್ದೆಯಿಲ್ಲ!

ಅಡಿಕೆರಾಜ, ಚಿಂತಿಸುತ್ತಾ ಮಲಗಿದ್ದ ರಾತ್ರಿ. ಬಂದಿತ್ತು ಸುಖ (?) ನಿದ್ರೆ. ಆಗಲೇ ಬಿತ್ತೊಂದು ಸವಿಗನಸು (?) ಬಂದಿದ್ದ ಅವನೆಡೆಗೆ ಅನ್ನದೇವ! ತಂದಿದ್ದ ಬಳಿಯಲ್ಲಿ ರಾಶಿ ಅಕ್ಕಿ. ಅಷ್ಟರಲ್ಲಿ ಅಡಿಕೆ ರಾಜನಿಗೆ ಬಹಳ ಆತುರ. ಎರಡು ಕೈಗಳಲ್ಲೂ ರಾಶಿಯಿಂದ ಅಕ್ಕಿಯನ್ನು, ಬಾಚಾಚುತಿರೆ ನಿದ್ದೆ ತಿಳಿದಿತ್ತು; ಕಣ್ಣು ತೆರೆದಿತ್ತು. ಅದು ಅಕ್ಕಿ ರಾಶಿಯಲ್ಲ. ಅಡಿಕೆ ರಾಶಿ!

—ಪಿ. ಕೆ. ಶೆಟ್ಟಿ. ಕರೋಪಾಡಿ.

ಚುಟುಕ:

ಯಕ್ಷಗಾನ—ಕೋಲ

ಊರೆಲ್ಲ ಪ್ರಚಾರ ಬಯಲಾಟವೆಂದು,
ಸೇರಿದರು ಪ್ರೇಕ್ಷಕರು ರಸದೂಟಕೆಂದು!
ಯಕ್ಷಗಾನದ ಕಲೆಯನಾದರಿಸ ಬೇಕು,
ಆದಿ ತೋರಿಸಿತು ಭೂತ-ಪ್ರೇತಗಳ
ಕೋಲ!

ಅಮೃತ ಬಿಂದು

ನಾಳೆ ಮಹತ್ವಪೂರ್ಣವಾದುದೇನಾದುದನ್ನು ಸಾಧಿಸಬೇಕು, ಘನ ಪೂರ್ಣ ವ್ಯಕ್ತಿತ್ವಗಳಿಸಬೇಕೆಂಬವನು ಯೌವನವಿರುವಾಗಲೇ ಯತ್ನಿಸಬೇಕು.

○ ○ ○

ಹಿಡಿತವಿಲ್ಲದ ಯೌವನದ ಮತ್ತತೆಯ ತೆರಿಗೆಯನ್ನು ಮೂವತ್ತು ವರ್ಷಗಳ ನಂತರ ವೃದ್ಧಾಪ್ಯದಲ್ಲಿ ತೆರಬೇಕಾಗುವದು.

○ ○ ○

ತಾನು ತನಗೆಂದು ಯೌವನವಿದ್ದಾಗ ವರ್ತಿಸಿದ ಸ್ವಾರ್ಥಿಯ ಮನುಷತ್ವವು ಮುದಿಕೆಂಡು ವೃದ್ಧಾಪ್ಯವು ಸಹಾನುಭೂತಿ ಪಡೆಯದ ಕೃಪಣತ್ವದಲ್ಲಿ ಕೊನೆಗೊಳ್ಳುವದು.

○ ○ ○

ತತ್ವವಿಲ್ಲದ ಮನನ, ನಿಷ್ಠೆಯಿಲ್ಲದ ಜೀವನ, ಗುರಿಯಿಲ್ಲದ ಹಾರುವ, ಸೋಮಾರಿತನ ಮತ್ತು ಸುಖಾಪೇಕ್ಷೆಗಳಿಗೆ ತುತ್ತಾದ ಯುವಕನಿಗಿರುವ ಹೆಚ್ಚಿನ ವಿಶ್ವಾಸವನ್ನು ಓರ್ವ ಹುಚ್ಚನಲ್ಲಿಡಬಹುದು.

○ ○ ○

ಪ್ರಾರ್ಥನೆ, ಪೂಜೆಗಳು ದೇವರಿಗಾಗಿ ಅಲ್ಲ; ಮನುಷ್ಯನಿಗಾಗಿ ಅಗತ್ಯ. ಮನುಷ್ಯ ಉತ್ತಮನಾಗಬೇಕಾದರೆ ಮನಸ್ಸಿನ ಕೊಳೆಯನ್ನು ತೊಳೆಯಬಲ್ಲ ಸಾಧನಗಳಿವು.

○ ○ ○

ಜಗತ್ತಿನಿಂದ ಹೊರನಿಂತು ನೋಡಿ ಯೋಚಿಸುವವನಿಗೆ ಈ ಜಗತ್ತೊಂದು ನಗೆ ನಾಟಕ. ಜಗತ್ತಿನೊಳಗೆ ಸೇರಿ ಅನುಭವಿಸುವವನಿಗೆ ಇದೊಂದು ದುರಂತ ನಾಟಕ!

ಸನ್ಯಾಸಿಯವರು ಕೈಕೊಂಡ ಪ್ರಯೋಗ

ಬಾಲವಿಷ್ಣು ತೈಲ

ಈ ತೈಲವು ಬಾಲಗ್ರಹ ಮತ್ತು ಶೂಲಗ್ರಹ ರೋಗದ ಬೇರನ್ನೇ ಕಿತ್ತು ಮಕ್ಕಳ ಚಿಹ್ನೆಯನ್ನು ಸಂಪೂರ್ಣ ಗುಣಪಡಿಸಿ ಶರೀರವನ್ನು ಪುಷ್ಟೀಕರಿಸುತ್ತದೆ.

ಕ.ಡ್ಡೆ ಗರ ರೂ. 2-87 — ಬಾಟ್ಲಿ ಪ್ಯಾಕಿಂಗ್ ರೂ. 3-19

(ವಿ ಪಿ ಖರ್ಚು ಬೇರೆ — ಲಗ್ಗೇಜು ಖರ್ಚು ಬೇರೆ)

ತಯಾರಕರು:—

ಎ. ಸುಬ್ಬಯ ಪಕ್ಕಳ, ಮುಗೇರು—

ಬಾಲವಿಷ್ಣು ತೈಲ ಔಷಧಾಲಯ, ಪುತ್ತೂರು, ದ. ಕ.

ಅಣುಗುಂಡಲ್ಲದೆ ಉಳಿದಿರುವ ಏಕಮೇವ ಮಾರ್ಗ

(ಆರನೇ ಪುಟದಿಂದ)

ನಲಂದದಲ್ಲಿ ನಡೆದುದಾದರೂ ಏನು? ತಿಂಗಳುಗಟ್ಟಳೆ ನಲಂದ ಉರಿಯುತ್ತಿರಲು ಕಾರಣವೇನು? ಅಲ್ಲಿದ್ದ ಸಹಸ್ರೋಪಸಹಸ್ರ ಜನರು ಶಾಂತ್ಯೋಪಾಸಕರು ಹಿಡಿ ಆಕ್ರಮಣಗಾರರ ವಿರುದ್ಧ ಕೈ ಎತ್ತಲಿಲ್ಲ. ಒಕ್ಕಟ್ಟಿನಿಂದ, ಒಬ್ಬರನ್ನೊಬ್ಬರು ಹಿಡಿದುಕೊಂಡೇ ಆಕ್ರಮಣಗಾರರ ಅತ್ಯಾಚಾರಕ್ಕೊಳಗಾದರು. ಅದೇ ಕಾಸೀಮನ ವಂಶಜರಲ್ಲವೇ ಇಂದು ಪುನಃ ಆಕ್ರಮಣಕ್ಕೆ ಮುಂದಾಗಿರುವವರು?

ಅಂದರೆ, ಇಂದು ಆ ರೀತಿಯ ಮಂತ್ರಪಾಠನದ ಅಥವಾ ಗಿಳಿ ಪಾಠದ ಅಥವಾ ತುಟಿ ಸೇವೆಯ ಒಕ್ಕಟ್ಟು ಬೇಕಾಗಿರುವದಿಲ್ಲ. ಶಸ್ತ್ರ ಹಿಡಿಯಲೂ ಹಿಂಜರಿಯದ ರಾಷ್ಟ್ರೀಯ ವೀರರ ಒಕ್ಕಟ್ಟು ಆವಶ್ಯವಿದೆ. ಅದನ್ನೇ ಸ್ವಾಮಿ ವಿವೇಕಾನಂದರೂ ಅದೇ ದಾರಿಯಲ್ಲಿ ವಿಶ್ವಾಸವಿಟ್ಟಿರುವ ನೇತಾರರೂ ನುಡಿದಿರುವರು. ಆಗ ಪುನಃ ಬರುವ ಪ್ರಶ್ನೆ—ಅಣ್ವಸ್ತ್ರವನ್ನು ತಯಾರಿಸುವದೊಂದೇ ಇಂದು ರಾಮಬಾಣವೇನು? ಇದಕ್ಕೆ ಹೌದು—ಇಲ್ಲ ಎರಡೂ ಉತ್ತರ ಕೊಡಬಹುದು. ಆದರೆ ಇಲ್ಲಿ 'ಇಲ್ಲ'ವೆನ್ನುವದು ಕೈಲಾಗದವರ ವಾಣಿ ಅಥವಾ ದೇಶದ್ರೋಹಿ ಕಮ್ಯೂನಿಸ್ಟ್-ಮುಸ್ಲಿಂ ಲೀಗಿನ ಅಪಸ್ವರವಲ್ಲ. ಯುಕ್ತಿವಾದಿಗಳ ಯುಕ್ತಿವಾದ ಇದೆ. ಹೌದೆಂದು ಯಾವ ಬಸವಣ್ಣನೂ ತಲೆಯಲ್ಲಾಡಿಸಬಹುದು. ಕಾಂಗ್ರೆಸ್ಸಿನ ಒಂದು ಬಸವ 'ಬೇಕೆಂದೂ ಇನ್ನೊಂದು ಬಸವ ಬೇಡವೆಂದೂ ತಲೆಯಲ್ಲಾಡಿಸುತ್ತಿಲ್ಲವೇನು? ಇಂದಿನ ಪರಿಸ್ಥಿತಿಯಲ್ಲಿ ಅದೇ ಒಂದು ಉಪಾಯವೇನು?

ಹಿಂದಿನ ಸಂಚಿಕೆಗಳು ಆ 'ಬೇಕು' 'ಬೇಡ'ಗಳ ಮಂಥನ ನಡೆಸಿ ಇದೀಗ ಹಾಲಾಹಲವನ್ನಲ್ಲ ಅಮೃತವನ್ನೇ ಜನತೆಯ ಮುಂದಿಡುತ್ತದೆ. ಅಣ್ವಸ್ತ್ರಗಳಾದರೋ ಹಾಲಾಹಲ ಇರಬಹುದು. ಆದರೆ ಉಳಿದಿರುವ ಮಾರ್ಗ ಅಮೃತ ಮಾರ್ಗವೇ ಇದೆ.

ನಾವು ಶಾಂತಿಯ ಉಪಾಸಕರಿದ್ದೇವೆ. ಸರ್ವ ಜನರೂ ಸುಖಿಯಾಗಿ ಬಾಳಿ ಬದುಕ ಬೇಕೆಂಬ ಹಿರಿಯಾಸೆಯನ್ನಿಟ್ಟುಕೊಂಡಿರುವವರಿದ್ದೇವೆ. ಆದರೆ ಅದಕ್ಕಾಗಿ ರಾಷ್ಟ್ರದ ಗೌರವವನ್ನು ಗೋರಿ ಮಾಡುವ ಜಯಚಂದರು ನಾವಲ್ಲ. ಇದೆರಡೂ ಏಕಕಾಲದಲ್ಲಾಗಲು ಸಾಧ್ಯವೇನು? ಕನ್ಯಾಕುಮಾರಿಗೆ ಹೋಗಿರುವವರು ಸಾಧ್ಯವೆನ್ನದಿರಲಾರರು. ಉಡುಪಿಯವರೂ ಹೂಂಗುಟ್ಟದಿರಲಾರರು. ಅವರಿಗೆ ಅರಿವಿದೆ ಆ ರಹಸ್ಯದ ತಿರುಳು. ಅದಕ್ಕಾಗಿಯೇ ಅಲ್ಲವೇನು ಅಲ್ಲಿರುವದು ಶ್ರೀ ಕೃಷ್ಣ ಮಂದಿರ, ಮಧ್ವಾಚಾರ್ಯರ ಹಾತ್ಸದನ? ಅದುವೇ ಜ್ಞಾಪಕ ಚಿಹ್ನೆಯಾಗಿಯೂ ಇದೆ ಇಂದು.

ಸುದರ್ಶನಧಾರಿ ಶ್ರೀಕೃಷ್ಣನು ಪಾರ್ಥನಿಗೆ ಹೇಳಿದುದಾದರೂ ಏನು? ಅನೇಕಾನೇಕ ರೀತಿಯ ಅಗ್ನ್ಯಸ್ತ್ರ ಹಾಗೂ ಸ್ಫೋಟಕಾಸ್ತ್ರಗಳು ಉಭಯ ಪಡೆಯಲ್ಲೂ ಇದ್ದುವು. ಶ್ರೀ ಕೃಷ್ಣನ ಬಳಿ ಚಕ್ರವೇ ಇತ್ತು. ಆಗಲೂ ಆ ಕೇಶವನು ನೇಪಾಲದತ್ತ ಬೆರಳು ತೋರಿಸಿದನು. ಅರ್ಜುನನು ಅತ್ತ ಹೋದನು. ಪಶುಪತಿಯಿಂದ ಪಾಶುಪತಾಸ್ತ್ರವನ್ನೂ ಪಡೆದನು. (ನೇಪಾಲಕ್ಕೆ ಸಂಬಂಧಪಟ್ಟ ಲೇಖನವನ್ನು ಮುಂದಿನ ವಾರ ನೋಡಬಹುದು.) ಈ ಪಾಶುಪತಾಸ್ತ್ರದ ರಹಸ್ಯವಾದರೂ ಏನು?

ಹಿಂದೆ ಶಕ್ತಿಯನ್ನು ಶಕ್ತಿಯಿಂದಲೇ ಎದುರಿಸುತ್ತಿದ್ದರು. ಅನಂತರ ಶಕ್ತಿಯನ್ನು ತುಂಡು ಮಾಡುವ ಅಸ್ತ್ರವನ್ನು ಕಂಡ ಹಿಡಿದರು. ವಿಮಾನಗಳನ್ನು ಕೆಡವಲೂ ಅಸ್ತ್ರಗಳನ್ನು ಕಂಡುಹಿಡಿಯಲಾಯಿತು. ಈ ರೀತಿ ಪ್ರಗತಿಯಾಗುತ್ತಿರುತ್ತದೆ. ಇಂದು ಅಣುಗುಂಡಿನ ಅವಸ್ಥೆ ಹೋದರೂ ಅಷ್ಟೇ. ಅದೇ ಉಳಿದಿರುವ ಏಕಮೇವ ಮಾರ್ಗ. ಅದನ್ನು ರಾಮಾಯಣವೆಂದರೂ ಸರಿ. ಪಾಶುಪತಾಸ್ತ್ರವೆಂದರೂ ಸರಿ. ಅಣುಗುಂಡು ಸ್ಫೋಟಗೊಂಡಾಗ ಅದರ ಧೂಳು ಹಬ್ಬಿದಂತೆ ಅದನ್ನು ನಿಸ್ಸಾರಗೊಳಿಸಿ ಬಿಡುವ ಪಾಶುಪತಾಸ್ತ್ರವೇ ಉಳಿದಿರುವ ಏಕಮೇವ ಮಾರ್ಗ, ಓಹೋ! ಇದೆಯೋ ಪರ್ವತವನ್ನು ಕೆಡವಿ ಹಿಡಿದ ಇಲಿಯೆಂದು ಕೆಲವರು ಹೇಳಬಹುದು. ಇದು ಆಗುವ ಹೋಗುವ ಯೋಚನೆ ಅಲ್ಲವಯ್ಯಾ ಅನ್ನುವವರೂ ಇದ್ದಾರೆ ಬಡ ಭಾರತಕ್ಕೆ ಇದೆಲ್ಲಾ ಸಾಧ್ಯವೇನೆಂದು ಕೇಳುವವರೂ ಇದ್ದಾರೆ. ಪ್ರಯತ್ನಿಸಿದಲ್ಲಿ ಅದ್ಯಾವುದು ಅಸಾಧ್ಯ? ಅದರಲ್ಲೂ ಭಾರತೀಯರಿಗಂತೂ ಇದು ಅಸಾಧ್ಯ ಅಲ್ಲವೇ, ಅಲ್ಲ ಅದಕ್ಕೆ ಬೇಕಾಗಿರುವದು ಮನಸ್ಸು ಮಾತ್ರ. ತನ್ನ ಕಾಲಿನ ಮೇಲೆ ತಾನು ನಿಲ್ಲುವೆನೆಂಬ ಅಚಲ ವಿಶ್ವಾಸ ಹೊರತ ಹಂಗಿಗೆ ಹಾತೊರೆಯದೆ, ಅನ್ಯರ ಆಶ್ರಯಕ್ಕೆ ಆಶೆಪಡದೆ, ಸ್ವಾಭಿಮಾನ ಪೂರ್ಣ ಸಿಂಹಗಳಂತೆ ಇರುವ ಭಾರತೀಯ ವಿಜ್ಞಾನಿಗಳು ಅದಕ್ಕಾಗಿ ಮುಂದೆ ಬರಬೇಕು. ಸರಕಾರ ಅತ್ತ ಗಮನ ಕೊಟ್ಟೀತೇ? ಇಂದಿನ ಹೆಚ್ಚಿನ ಪಾಲು ವಿಜ್ಞಾನಿಗಳೂ, ಸರಕಾರೀ ಗದ್ದುಗೆಯನ್ನೇರಿರುವವರೂ ಸದ್ಯ ಗಮನ ಕೊಡಲಾರರು. ನಮ್ಮ ಅಭ್ಯಾಸ ಆ ರೀತಿ, ಪುರಾಣಗಳಲ್ಲಿ ವಿಮಾನ, ಅಗ್ನ್ಯಸ್ತ್ರಗಳ ಹೆಸರು ಕೇಳಿ ನಗಾಡಿದವರು, ಹೀಯಾಳಿಸಿದವರಿಲ್ಲವೇ? ಆದರೆ ಅನಂತರ ಅನ್ಯದೇಶೀಯರು ಅವುಗಳನ್ನು ಮಾಡಿ ತೋರಿಸಿದಾಗ ಅನ್ಯರ ಪ್ರಶಂಸೆಗೆ ಅವರಿನಿತೂ ಅಳುಕಲಿಲ್ಲ. ಹೆಚ್ಚಿನ ವಿಷಯ ಹಾಗೆಯೇ. ಹಿಂದೆ 'ವೇದ ವಾಕ್ಯ'ವೆಂದಿದ್ದಂತೆ, ಈಗ 'ಅನ್ಯರ ವಾಣಿ' ಇದೆ. ಭಾಷೆಯ ವಿಷಯ - ಇಂದು ದಳ್ಳುರಿ ಎಬ್ಬಿಸಿರುವ ನಾಲಗೆ ವಿಷಯ. ನಮ್ಮ ಭಾಷೆ ಚೆನ್ನಾಗಿಲ್ಲ, ಬೆಳೆದಿಲ್ಲ ಇತ್ಯಾದಿ. ಆಂಗ್ಲೇಯರ ಭಾಷೆ—ಅಹಾ! ಅದನ್ನು ಓದುವದಾದರೂ ಹೇಗೆ? ಅದೇ ರೀತಿ ಯಾವಾಗಲೂ ಅಜ್ಜವಾಕ್ಯ ಇದ್ದೇ ಇದೆಯಲ್ಲಾ-- ಹಿತ್ತಲ ಗಿಡ ಮದ್ದಲ್ಲಾಂತ. ಹೀಗೆ ನಮ್ಮಲ್ಲಿ ನಮಗೆಂದು ವಿಶ್ವಾಸ ಇಲ್ಲ ಧೈರ್ಯ ಇಲ್ಲ, ಮುಖ್ಯವಾಗಿ ಸ್ವಾಭಿಮಾನ ಇಲ್ಲ. ಅದು ಇದ್ದಲ್ಲಿ ದಿಲ್ಲಿ ಗದ್ದುಗೆಯ ಮೇಲಿರುವ ಮಹಾನ್ ವ್ಯಕ್ತಿಗಳಿಗೆ, ರಕ್ಷಣೆಯ ಭಾರ ಹೊತ್ತಿರುವವರಿಗೆ, ವಿಜ್ಞಾನದ ಬೀಗದ ಕೈ ಹಿಡಿದುಕೊಂಡಿರುವವರಿಗೆ ಈ ಯೋಚನೆ ಖಂಡಿತ ಬರುತ್ತಿತ್ತು. ಅವರಿಗೆ ಪ್ರತಿಯೊಂದಕ್ಕೂ ಪರರಾಶ್ರಯ ಬೇಕಾಗಿರುತ್ತದೆ ಅವರ ಪಾಲಿಗೆ ಭಾರತ ಒಂದು ಬಳ್ಳಿ ಇದೆ; ಅಮೇರಿಕ—ರಷ್ಯಗಳಂತಹ ಮರ ಅದಕ್ಕೆ ಬೇಕು! ಇಲ್ಲಿಯ ವಿದ್ಯಾಭ್ಯಾಸದ "ಸಮಸ್ಯೆ"ಗಳನ್ನು ಬಗೆಹರಿಸಲು ಅವರಿಗೆ ಅನ್ಯ ರಾಷ್ಟ್ರಗಳ ಪರಿಣಿತರು ಬೇಕು! ಹಾಗಲ್ಲದಾದಲ್ಲಿ ಅಣ್ವಸ್ತ್ರ ಮಾರಕಾಸ್ತ್ರವೆನ್ನುವವರ ಮುಂದೆಗೆ ಆಗಲೇ ಆ ವಿಷಯ ಹೊಳೆಯುತ್ತಿತ್ತು. ದುರಾದೃಷ್ಟವಶಾತ್ ಹಾಗಾಗಿರುವದಿಲ್ಲ. ಕಮ್ಯೂನಿಸ್ಟ್ ಕಾಳಿಂಗವನ್ನು ಕೊಲ್ಲುವ ಧೈರ್ಯವೂ ಅವರಲ್ಲಿಲ್ಲ. ಕಾಳಿಂಗ ಮರ್ದನದ ಧೈರ್ಯ ಹಾಗೂ ತಂತ್ರವೂ ಅವರಿಗೆ ಗೊತ್ತಿಲ್ಲ. ಅದೇ ಬಂದಿರುವ ಕಷ್ಟ. ಬ್ರಿಟಿಷರ ಬಳಿ ತಮಗೊಂದು ಸ್ತ್ರೀಯರಿಗೆರಡು, ಮುಸ್ಲಿಮರಿಗೆ ಮೂರು, ಕ್ರಿಸ್ತಿಯರಿಗೆ ನಾಲ್ಕು...ಹೀಗೆ ಸ್ಥಾನಗಳನ್ನು ಭಿಕ್ಷೆ ಬೇಡುತ್ತಿದ್ದ ಕಂಠಶೋಷ ಮಾಡಿ ವೇದಿಕೆಯ ಮೇಲೆ ಭಾಷಣ ಬಿಗಿಯುತ್ತಿದ್ದವರಿಗೆ ಅದೆಲ್ಲಾ ಹೇಗೆ ಗೊತ್ತಾದೀತು?

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಇಲ್ಲಿ ಬರುವ ಇನ್ನೊಂದು ಸಮಸ್ಯೆಯೆಂದರೆ ನಮ್ಮ ವಿಜ್ಞಾನಿಗಳದ್ದಿದೆ. ಆವರು ಅದೆಲ್ಲಾ ಅಣು ವಿರೋಧಾಸ್ತ್ರ ಅಥವಾ ಅಣ್ವಸ್ತ್ರಗಳ ಕುರಿತು ಕೇಳಿರುವದೇ ಇಲ್ಲ. ಅದ್ಯಾವ ಡಾಕ್ಟರನೂ ಆ ರೀತಿ ಹೇಳಿರುವದಿಲ್ಲ. ಹೇಳಿದ್ದಲ್ಲಿ ತಾನೇ ಕೇಳುವದು! ಈಗ ಅವರ ಪಾಲಿಗೆ ಅದು ಮಂತ್ರಜಾಲವೇ ಇದೆ. ಯಾರಾದರೂ ಒಬ್ಬ ಅನ್ಯ ದೇಶೀಯ ವಿಜ್ಞಾನಿ ಈ ವಿಷಯ ಹೇಳಿದರೆ ಸಾಕು. ಅನಂತರ ಆರಂಭವಾಗುತ್ತದೆ ಪಂದ್ಯಕ್ಕೆ. ಅದೂ ನಮ್ಮ ದೇಶದಲ್ಲಿ ನಾವು ಅವರ ಪೂಜೆಗೆ ಸಿದ್ಧತೆ ಮಾಡುತ್ತೇವೆ, ಪ್ರಸಾದ ಅನುಗ್ರಹಿಸೆಂದು ಕೇಳಿಕೊಳ್ಳುತ್ತೇವೆ, ಅಷ್ಟೇ.

ಅಧಿಕಾರ ಲಗಾಮನ್ನು ಹಿಡಿದುಕೊಂಡಿರುವವರೂ ವಿಜ್ಞಾನಿಗಳೂ ತಮ್ಮಲ್ಲಿರುವ ಮಿಥ್ಯ ಅಪನಂಬಿಕೆ ಹಾಗೂ ಮಿಥ್ಯ ಯೋಚನೆಗಳನ್ನು ಬದಿಗೆ ಸರಿಸಿ ಏಕ ಮನಸ್ಸಿನಿಂದ ಭುಜಕ್ಕೆ ಭುಜ ಕೊಟ್ಟು ಈ ಪವಿತ್ರ ಕಾರ್ಯದಲ್ಲಿ ಭಾಗಿಗಳಾದರೆ ಭಾರತವು ಪುನಃ ವಿಶ್ವದ ಗುರುಸ್ಥಾನವನ್ನು ಪಡೆದೀತು. ಇಲ್ಲಿ ಅವರು ಅಂಧಾನುಕರಣೆ ಅಥವಾ ಆಂಗ್ಲೋ-ಪ್ಲೋಬಿಯಾವನ್ನು ಬಿಟ್ಟುಬಿಟ್ಟು ನೈಜ ಸಂಸ್ಕೃತ ಪಂಡಿತರುಗಳ ಸಹಾಯದಿಂದ ತಮ್ಮ ಗುರಿಯನ್ನು ಮುಟ್ಟಬಹುದು. ಹಾಗೆ ಆದಲ್ಲಿ ಅಣ್ವಸ್ತ್ರ ತಯಾರಿಸಬೇಡಿರೆಂದು ಕಂಡಕಂಡವರ ಕಾಲು ಹಿಡಿಯುವ ಪ್ರಮೇಯ ನಮಗೆ ಬರಲಿಕ್ಕಿಲ್ಲ. ಅವರು ತಾನೇ ತಾನಾಗಿ ಅಣ್ವಸ್ತ್ರ ತಯಾರಿಸುವದನ್ನು ನಿಲ್ಲಿಸಿ ಬಿಡುತ್ತಾರೆ. ಜಗತ್ತನ್ನು ಆಗ ಮಾತ್ರ ಅಣು ಭಸ್ಮದ ಭಯದಿಂದ, ಅಂಜಿಕೆಯಿಂದ ಪಾರುಗೊಳಿಸಲು ಸಾಧ್ಯ. ಆದರಿಂದ ನಾವು ನಮ್ಮ ದೇಶವನ್ನು ಮಾತ್ರ ಆಕ್ರಮಣಗಾರರಿಂದ ರಕ್ಷಿಸುವದಲ್ಲದೆ ಪ್ರಪಾತದಿಂದ ಪ್ರಪಂಚವನ್ನೇ ಕಾಪಾಡಬಹುದು.

ಬೆಕ್ಕಿಗೆ ಗಂಟೆ ಕಟ್ಟುವವರ್ಯಾರು? ಹಾಗೆಯೇ ಈ ದಾರಿಯಲ್ಲಿ ಪ್ರಥಮ ಹೆಜ್ಜೆಯನ್ನಿಡುವವರ್ಯಾರು? ಮಹಾನ್ ಮಹಾನ್ ಪ್ರಬಲ ರಾಷ್ಟ್ರಗಳೇ ಆ ದಾರಿಯಲ್ಲಿ ಪಾದಾರ್ಪಣೆ ಮಾಡಿಲ್ಲವೆಂದ ಮೇಲೆ ನಮ್ಮಂತಹ 'ಹಿಂದುಳಿದಿರುವ' 'ಬಡ' ರಾಷ್ಟ್ರಗಳಿಗೆ ಅದೆಲ್ಲಾ ಸಾಧ್ಯವೇ?

ಇಂತಹ ಪ್ರಶ್ನೆಗಳಿಗೆ ಇದು ಸಮಯವಲ್ಲ. ನಮ್ಮ ಉಳಿವುಳಿವಿನ ಪ್ರಶ್ನೆ ಎದುರಿಗಿದೆ. ಒಂದೋ ನಾವೂ ಅಣು ಗುಂಡನ್ನು ತಯಾರಿಸಿ ಶತ್ರು ಕೊಡುತ್ತಿರುವ ಕರೆಗಳಿಗೆ ಬದಲೀಯಲೇ ಬೇಕು. ಅಂದರೆ ಅಣುಗುಂಡು ತಯಾರಿಸಲೇ ಬೇಕು. ಇದು ತಾಮಸಿಕ ಮಾರ್ಗವಿರಬಹುದು. ಅಥವಾ ಕ್ಷುದ್ರರ ದಾರಿ ಇರಬಹುದು, ಕಾಪಾಲಿಕರ ಪದ್ಧತಿ ಇರಬಹುದು. ಇದನ್ನು ಬಯಸದ ಸಜ್ಜನರು, ಸಾತ್ವಿಕರು, ಅಣ್ವಸ್ತ್ರ ಅಥವಾ ಅಣುವಿರೋಧಾಸ್ತ್ರ ತಯಾರಿಗೆ ಬೆಂಬಲ ಕೊಡಲೇ ಬೇಕಾಗುತ್ತದೆ. ಇದುವೇ ಅಣುಗುಂಡಲ್ಲದೆ ಉಳಿದಿರುವ ಏಕಮೇವ ಮಾರ್ಗ. ಈ ಮಾರ್ಗದಲ್ಲಿ ಮುನ್ನಡೆದರೇನೇ ಜಗತ್ತಿನ ಕಲ್ಯಾಣ; ಇಲ್ಲದಿದ್ದಲ್ಲಿ ನಾಶ ಎಲ್ಲರಿಗಾಗಿ ಕಾದು ನಿಂತಿರುತ್ತದೆ. ಈ ಏಕಮೇವ ಮಾರ್ಗದಲ್ಲಿ ಹೋಗಲು ದೀಪ ತೋರುವವರಾದರೂ ಯಾರು?

ಇದೀಗ ಪ್ರಜಾಪ್ರಭುತ್ವ ಸಿದ್ಧತೆ

(ಐದನೇ ಪುಟದಿಂದ)

ಮತ್ತು ಭಗಿನಿಯರೇ, ಇವರು ಜೀವನದ ಸಾಗರದಲ್ಲಿ ಬಹಳವಾಗಿ ಈಜಿ ಈಗ ಕೈಕಾಲಿನ ಬಲ ಕಳೆದುಕೊಂಡಿರುತ್ತಾರೆ. ನಮ್ಮ ಮುಂದೆ ಅವರ ಕೊನೆಯ ಕೋರಿಕೆ ಇಟ್ಟಿದ್ದಾರೆ. ಅವರ ಕೋರಿಕೆಗೆ ನಾವು ಮಾನ್ಯತೆ ಕೊಟ್ಟು, ಮುಂದಿನ ಜನ್ಮದಲ್ಲಿ ಅವರಿಗೆ ಸುಖ ಸಿಕ್ಕಲೆಂದು ಹಾರೈಸಬೇಕೆಂದು ನನ್ನ ಕೋರಿಕೆ" ಎಂದು ಮಾತು ಮುಗಿಸಿ, ತಿರುಗೊಮ್ಮೆ ರಾಮಯ್ಯ ಮಾಸ್ಟ್ರ ಒಳಗೆ ತಿರುಗಿ "ಹೇಗಿತ್ತು ನನ್ನ ಭಾಷಣ?" ಎಂದು ಕೇಳಿದರು.

"ನನಗೆ ಸಭೆಯಲ್ಲಿ ಮಾತನಾಡಲಿಕ್ಕೆ ಬರುವುದಿಲ್ಲ. ಆದರೂ ಇಂತಹ ಒಂದು ಕಾಲವನ್ನು ನನಗೆ ನೀವು ಕೊಟ್ಟಿದ್ದೀರಿ. ನಾನು ನಮ್ಮ ಮಾಸ್ಟ್ರ ವಿಚಾರ ಹೊಗಳಿಕೆಯ ಮಾತುಗಳನ್ನು ಆಡಲು ಬಯಸುತ್ತೇನೆ. ಇವರು ತುಂಬಾ ಬುದ್ಧಿವಂತರು. ಮಕ್ಕಳಿಗೆ ಪಾಠ ಹೇಳಿಕೊಡಲು ತಿಳಿದವರು. ಆದರೆ ದುಡ್ಡಿನ ಗರ್ಜ ಬಹಳ. ಹಾಗಾಗಿ ಪಾಠ ಎಷ್ಟು ಚೆನ್ನಾಗಿ ಹೇಳಿಕೊಡುತ್ತಾರೋ ಅಷ್ಟೇ ಚಂದವಾಗಿ ಸಾಲವನ್ನೂ ಮಾಡುತ್ತಾರೆ. ಅವರ ಈ ಅರ್ಜಿ ನೋಡಿ ನನಗೆ ಬಹಳ ಬೇಸರವಾಯಿತು. ಇಂಥವರು ಆತ್ಮಹತ್ಯೆ ಮಾಡಿಕೊಳ್ಳಬಾರದು. ಆದರೆ ದೇವರ ಇಚ್ಛೆ ಹಾಗುಂಟು. ಆದರೆ ಒಂದು ವಿಚಾರ ನಾನು ಇಲ್ಲಿಯೇ ಹೇಳಿಬಿಡುತ್ತೇನೆ. ಅವರು ನನ್ನೊಡನೆ ಮಾಡಿದ ಸಾಲ ಹೋಗಲಿ. ಅವರಿಗೆ ನೀವೆಲ್ಲರೂ ಆತ್ಮಹತ್ಯೆ ಮಾಡಿಕೊಳ್ಳಲು ಪರ್ಮಿಟು ಕೊಟ್ಟು, ಮತ್ತು ಧರ್ಮದ ಕಟ್ಟಿಗೆಗೆಂದು ನನ್ನ ಹತ್ತಿರ ಬರಬೇಡಿ", ಎಂದರು ಕಟ್ಟಿಗೆ ಡಿಪೋದ ಸಾಹೇಬರು. ರಾಮಯ್ಯ ಮಾಸ್ಟ್ರು ಸಂತೋಷದಿಂದ ಕಣ್ಣೀರು ಸುರಿಸುತ್ತಾ ಕುಳಿತಿದ್ದರು. ಬಳಿಕ ಅವರ ಮನೆಯ ಮಾಲೀಕರಾದ ಭಟ್ಟರು ಮೇಲೆದ್ದು, ಯಾರಿಗೂ ಅರ್ಥವಾಗದಂತೆ ನಾಲ್ಕು ಸಂಸ್ಕೃತ ಶ್ಲೋಕಗಳನ್ನು ಪಟಪಟ ಹೇಳಿ, ಅದ್ವೈತ ಸಿದ್ಧಾಂತಕ್ಕೆ ಒಂದಷ್ಟು ಬೈದು, ಈ ಆತ್ಮ ನಶ್ವರವಾದುದಲ್ಲ—ಎಂದು ದೃಢವಾಗಿ ಹೇಳಿ, ಆತ್ಮ ನಶ್ವರವಾದುದಲ್ಲವಾದುದರಿಂದ ಮಾಸ್ಟ್ರು ಸತ್ತರೆ ಏನೂ ತೊಂದರೆ ಇಲ್ಲವೆಂದು ಸಾಧಿಸಿ ಕುಳಿತರು. (ಮಳೆಗಾಲದಲ್ಲಿ ರಾಮಯ್ಯ ಮಾಸ್ಟ್ರು ಕತ್ತಲೆ ಕೂಡೊಡನೆಯೇ ತಮ್ಮ ಕುಟುಂಬದವರನ್ನೆಲ್ಲಾ ಕರೆದುಕೊಂಡು, ಶಾಲೆಯ ಜಗಲಿಯಲ್ಲಿ ಮಲಗಿಕೊಂಡಿದ್ದು, ಆ ಮನೆಯ ಮುದಿತನದಿಂದ, ಆತ್ಮದ ನಶ್ವರತೆ ಕಾದುಕೊಂಡಿದ್ದರು.)

ಚಿಲ್ಲರೆ ಸಾಮಾನಿನ ಅಂಗಡಿಯ ಪೂಜಾರಿಗಳು "ಕೆಲಸ ಮಾಡುವ ಜನವೇ" ಹೊರತು "ಮಾತನಾಡುವ ಮನುಷ್ಯ" ಅಲ್ಲ. ಆದರೂ ಅಂದು ಮಾತನಾಡಲು ಯತ್ನಿಸಿದರು. ಅವರು ಏನು ಹೇಳಿದರೆಂದು ಯಾರಿಗೂ ತಿಳಿಯಲಿಲ್ಲ. ತಿಳಿಯದೆ ಇದ್ದುದೇ ಉತ್ತಮವಾಯಿತು. ತಾನು ಇಂಥವರಿಗೂ ಪಾಠ ಹೇಳಿ ಕೊಟ್ಟಿರುವೆನಲ್ಲಾ—ಎಂಬ ದುಃಖ ಮಾಸ್ಟ್ರರಲ್ಲಿ ಆಗ ಉಂಟಾಗಿರಬೇಕು—ಟೈಲರು ಶೀನಪ್ಪನೆಂದರೆ ಪ್ರಚಂಡ ಮನುಷ್ಯ. ರಾಮಯ್ಯ ಮಾಸ್ಟ್ರು ಎರಡು ಗಜ ಬಟ್ಟೆ ಕೊಟ್ಟು ಉದ್ದ ಕೈಯ ಅಂಗಿ ಹೊಲಿಯಲಿಕ್ಕೆ ಹೇಳಿದರೂ, ಅದರಲ್ಲಿಯೂ ಸ್ವಲ್ಪ ಬಟ್ಟೆ ಉಳಿಸಿ, ಮಕ್ಕಳ ಚಡ್ಡಿಗೆ ತಿಸೆಯಿಡುತ್ತಿದ್ದ ಬ್ರಹ್ಮ. ಇಂಥ ಸಭೆಗಳಲ್ಲಿ ಆತನಿಗೆ ಮಾತನಾಡಿ ಅಭ್ಯಾಸ ಇಲ್ಲವಾಗಿದ್ದರೂ, ಮಾತನಾಡಿದ. "ಗುರುಗಳೇ ಮತ್ತು ಗಿರಾಕಿಗಳೇ, ಮಾಸ್ಟ್ರು ಇಷ್ಟು ಬೇಗ ಹೋಗಲು ಆಸೆಪಟ್ಟಿದ್ದರೆಂದು ನನಗೆ ತಿಳಿದಿರಲಿಲ್ಲ. ಒಂದು ವೇಳೆ ಇದು ನನಗೆ ಮೊದಲೇ ತಿಳಿದಿದ್ದರೆ, ನಾನು ಮೂರು ವರ್ಷಗಳಿಂದೀಚೆಗೆ ಅವರಿಗೆ ಬಟ್ಟೆ ಹೊಲಿದೇ ಕೊಡುತ್ತಿರಲಿಲ್ಲ. ಏನೇ ಇರಲಿ—ಅವರು ನನ್ನ ಗುರುಗಳು. ಸಣ್ಣದಿರುವಾಗ ನನ್ನ ಕಿವಿಯನ್ನು ಅವರು ಹಿಡಿದು ಎಳೆದಿದ್ದಾಗ ಹೋಗಿದ್ದ ನನ್ನ ಕೇಳುವ ಶಕ್ತಿ ಇವತ್ತಿಗೂ ಬಂದಿಲ್ಲ. ಹಾಗಾಗಿ ಗಿರಾಕಿಗಳಿಂದ ನಾನು ಬಚಾವಾಗಿದ್ದೇನೆ. ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಅವರು ಇಷ್ಟು ಒತ್ತಾಯ ಮಾಡುತ್ತಿರುವಾಗ, ಹಾಗೆ ಹೋಗುವ ಅವರಿಗೆ ಟೀಪಾರ್ಟಿ ಕೊಡಬೇಕಾದುದು ನಮ್ಮ ಕರ್ತವ್ಯ," ಎಂದು ಸುಮ್ಮಗೆ ಕುಳಿತ.

ಇನ್ನು ಚಿನ್ನದ ಅಂಗಡಿಯ ರಾಮಪ್ಪಾಚಾರಿ, ಹೋಟೇಲಿನ ವಾಸುದೇವ ಭಟ್ಟರು, ಮಲೆಯಾಳಿ ಪಂಡಿತ ಕುಂಜ್ಞಂಬು—ಇವರೆಲ್ಲ ಸಭೆಯಲ್ಲಿದ್ದರೂ ಮಾತನಾಡಲಿಲ್ಲ. ಕೊನೆಗೆ ರಾಮಯ್ಯ ಮಾಸ್ಟ್ರೇ ಎದ್ದು ನಿಂತು ಮಾತನಾಡ ತೊಡಗಿದರು.

"ನನ್ನ ಹಿರಿಯರೇ ಮತ್ತು ಕಿರಿಯರೇ, ನನ್ನ ಶಿಷ್ಯರು ನನ್ನ ಕುರಿತಾಗಿ ಇಷ್ಟು ಸಹಾನುಭೂತಿಯ ಮಾತುಗಳನ್ನಾಡುವುದು ಕೇಳಿ, ನನಗೆ ಹೊಟ್ಟೆ ತುಂಬಿದಂತಾಗಿದೆ. ನಾನು ಊರಿನವರಿಗೆಲ್ಲಾ ಹಣಕೊಡಬೇಕಾದುದು ನಿಜ. ನನ್ನದು ಆರು ವರ್ಷಗಳಿಂದ ಉಚಿತ ಇಂಕ್ರಿಮೆಂಟ್ ಇನ್ನೂ ಬಂದಿಲ್ಲ. ಅದು ನಾಳೆ, ನಾಡಿದ್ದಿನಲ್ಲಿ ಬರುತ್ತದಂತೆ. ಅದು ಬಂದೊಡನೆಯೇ ಅದನ್ನೆಲ್ಲಾ ನಿಮಗೆಯೇ ಹಂಚಿ, ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ. ಆದರೆ ಪ್ರಜಾಪ್ರಭುತ್ವ ಈಗ ಇರುವುದರಿಂದ, ನಾನು ಸಾಯಲು ನಿಮ್ಮ ಅನುಮತಿ ನನಗೆ ಬೇಕಾಗಿದೆ. ನಾನು ನಿಮಗೆ ಬಹಳ ಕಷ್ಟಕೊಟ್ಟಿರಬಹುದು. ಅದನ್ನೆಲ್ಲಾ ಮರೆತುಬಿಡಿ. ಊರಿನಲ್ಲಿರುವ ನಿಮಗೆ ಬಿಡಿ, ದಾರಿಯಲ್ಲಿರುವ ಪ್ರತಿಯೊಂದು ಲೈಟು ಕಂಬಕ್ಕೂ ನಮಸ್ಕಾರ ಮಾಡುವ ಕ್ರಮವನ್ನು ನಾನು ಇಟ್ಟುಕೊಂಡಿದ್ದೆ. ಹಾಗಿದ್ದುದರಿಂದಲೇ ಇದಿಷ್ಟು ದಿನ ನಿಮ್ಮೆಲ್ಲರ ದಯದಿಂದ ಬದುಕಿ ಉಳಿದಿದ್ದೇನೆ. ಇನ್ನು ನನಗೆ ಸಾಯಲು ಅನುಮತಿ ಕೊಡಬೇಕು—ದಯವಿಟ್ಟು. ನನ್ನ ಶಿಷ್ಯರಾದ ನಿಮ್ಮಿಂದ ನಾನು ಕಡೆಯ ಕಾಲಕ್ಕೆ ಕೇಳುವುದು, ಇಷ್ಟನ್ನೇ", ಎಂದು ಹೇಳುತ್ತಾ ಕುಳಿತರು.

ಊರಿನ ಮುಂದಾಳುಗಳು ರಾಮಯ್ಯ ಮಾಸ್ಟ್ರು ಆತ್ಮಹತ್ಯೆ ಮಾಡಿಕೊಳ್ಳಬೇಕೋ—ಬೇಡವೋ—ಎಂಬುದಾಗಿ ಸೂಚಿಸಿ, ವಿಷಯವನ್ನು ಮತಗಣನೆಗೆ ಹಾಕಿದರು. ಎಲ್ಲರಿಗೂ ಮಾಸ್ಟ್ರು ಕಷ್ಟ ಕಂಡು, ಅವರು ಹೋಗುವುದೇ ಉತ್ತಮವೆಂದು ಕಾಣಿಸಿದ್ದರಿಂದ ಏಕಾಭಿಪ್ರಾಯ ದೊರಕಿತು. ಸರಿ. ಊರಿನ ಮುಂದಾಳು ನೆರೆದ ಸಭಿಕರಿಗೆ ಮೊದಲಾಗಿ ಧನ್ಯವಾದ ಅರ್ಪಿಸಿ ಬಳಿಕ ಮಾಸ್ಟ್ರ ಒಡನೆ "ರಾಮಯ್ಯ ಮಾಸ್ಟ್ರೇ, ನಿಮಗೆ ಆತ್ಮಹತ್ಯೆ ಮಾಡಿಕೊಳ್ಳಲು ನಾವು ಅನುಮತಿ ಕೊಟ್ಟಿದ್ದೇವೆ", ಎಂದರು. ಸಭಿಕರು ಕೈಚಪ್ಪಾಳೆ ತಟ್ಟಿ ಸಂತೋಷ ಸೂಚಿಸಿದರು. ಮಾಸ್ಟ್ರು ಕೋಟಿನ ಕೈಯಿಂದ ಮೂಗನ್ನು ಒರಸಿಕೊಳ್ಳುತ್ತಾ, ಎರಡು ಕೈಗಳನ್ನು ಜೋಡಿಸಿ ಎಲ್ಲರಿಗೂ ವಂದಿಸಿದರು. ಅವರ ಶಿಷ್ಯರು ಕೆಲವರು ಅವರ ಕಾಲು ಹಿಡಿಯಲು ಬಂದಾಗ, ಅವರಿಗೆ ಕಣ್ಣು ಕತ್ತಲೆ ಬಂದಂತಾಗಿರಬೇಕು.

ಬೀಳ್ಕೊಡುವ ಸಮಾರಂಭದ ಅಂತ್ಯದಲ್ಲಿ ವಾಸುದೇವ ಭಟ್ಟರ ಹೋಟೇಲಿನ ಭರ್ಜರಿ ಟೀಪಾರ್ಟಿಯೂ ಸಭಿಕರೆಲ್ಲರಿಂದ ಅನೇಕ ಸ್ವರತಾಳಗಳಲ್ಲಿ ಹೊರಬಿದ್ದ ಜನಗಣಮನವೂ ಇದ್ದಿತು.

(ಪ್ರಜಾರಾಜ್ಯ ಸಂಚಿಕೆಗೆ ಬಂದ ಲೇಖ)

ಠೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¼%ರ ವರೆಗಿನ ಬಡ್ಡಿ ನೀಡಲಾಗುವುದು.

೫ ವರ್ಷದ ಅವಧಿಗಳಿಗೆ ನೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6¼%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-೧

ಅನ್ನ ಇಲ್ಲದೆ ಕಣ್ಣು ಕಟ್ಟಿದೆ

ಹುಟ್ಟುಗಾವಿನ ಪ್ರಶ್ನೆ ಈ ದಿನ
ಕಷ್ಟ, ಜೀವನ—ಜೀವನ
ಹೊಟ್ಟೆಗಿಲ್ಲದೆ ಬಟ್ಟೆಗಿಲ್ಲದೆ
ಬೆಟ್ಟದಂತಿದೆ ಏರಿನ ॥ ೧ ॥
ಅಶನವಿಲ್ಲದೆ ಕಸುಬು ನಡೆಯಲು
ಶಕ್ತಿ ಅಲ್ಲವೆ—ಅಲ್ಲವೆ?
ಅಶನವಿಲ್ಲದೆ ರೋಗರುಜೆಗಳು
ನಶ ಹೊಂದಲು ಸಾಧ್ಯವೆ? ॥ ೨ ॥
ಕೊಡುವ ಪೈಸೆಯು ಅಧಿಕ ಮಾತ್ರವು
ತಿಂಡಿ ಸಾಲದು—ಸಾಲದು
ನಡಿಯ ಮಿಂಚು ಸಿಡಿದ ಮಾತ್ರಕೆ
ಕೊಡುವ ತಿಂಡಿಯು ಸಿಕ್ಕದು ॥ ೩ ॥
ಅಕ್ಕಿ, ಬೆಲ್ಲವು ದವಸ ಇಲ್ಲವು
ಹಕ್ಕು ಮಾತ್ರವು—ಮಾತ್ರವು
ಲೋಕ ನಮ್ಮದು ಮನಸು ದೊಡ್ಡದು
ಬೆಕ್ಕು ಸಹ ಉಪವಾಸವು ॥ ೪ ॥
ಹಸಿವೆ ಸಹಿಸದೆ ಕಾಫಿ ಕುಡಿಯಲು
ಬಿಸಿಯು ತಿಳಿಯದು ತಿಳಿಯದು
ರಸಗ್ರಾಹಿನರಗಳು ರುಚಿಯ ತಿಳಿಯಲು
ಬಿಸಿ ಕಾಫಿ ಸಕ್ಕರೆ ಕಾಣದು ॥ ೫ ॥
ಚಮಚ ಸಕ್ಕರೆ ಕೇಳಲೆಂದರೆ
ಗಮನ ಅತ್ತವು - ಅತ್ತವು
ನಮ್ಮ ಊರಿನ ಪೇಟೆಯಲ್ಲಿಯೆ
ಚಮಚ ಸಕ್ಕರೆಯಿಲ್ಲವು ॥ ೬ ॥
ಹೋಟೆಲೆಲ್ಲವು ಬಂದು ಮಾಡಲು
ಊಟಯಿಲ್ಲವು—ಇಲ್ಲವು
ಹೊಟ್ಟೆಪಾಡಿಗೆ ದಾರಿ ನೋಡಲು
ಹಿಟ್ಟು, ಸಜ್ಜಿಗೆ ಸಿಕ್ಕವು ॥ ೭ ॥
ದೂರ ಊರಲಿ ನೂರು ಇಲ್ಲದೆ
ದಾರಿ ತೋರದು—ತೋರದು
ಬೇರೆ ಖರ್ಚಿಗೆ ದಾರಿಯರಿಯದೆ
ಉರುಳು ಕೊರಳನು ಕೊರೆವುದು ॥ ೮ ॥
ವರ್ಗವಾಗಲು—ಅರ್ಜಿ ಕಳುಹಲು
ವರ್ಗವಾಗದು ಆಗದು
ಬಗ್ಗಿ ನಡೆದರೆ ಅರ್ಥವಾಗದು
ಹಗ್ಗ ತೆಗೆಯದೆ ತೀರದು ॥ ೯ ॥
ದೊಡ್ಡ ದೊರೆಗಳ ವಕ್ರ ದೃಷ್ಟಿಗೆ
ಗಿಡ್ಡ ಎಲ್ಲವು—ಎಲ್ಲವು
ಬಡವ ನುಡಿಯಲು ಎಡೆಗೆ ಹೋಪುದು
ಒಡಲ ಪರಿಸ್ಥಿತಿ ಮರೆಯುವು ॥ ೧೦ ॥
ಮನೆಯ ಮಕ್ಕಳ ಹಸಿವೆ ನೀಗದೆ
ಕಣ್ಣು ಕಟ್ಟಿದೆ—ಕಟ್ಟಿದೆ
ದಿನಕೆ ಸಿಕ್ಕಿದ ಕಾರ್ಡಿನಕ್ಕಿಯು
ಗೇಣು ಹೊಟ್ಟೆಗೆ ಮುಟ್ಟದೆ ॥ ೧೧ ॥
ಸಹಿಸಲಾರೆವು ನೊಂದು ಹೋದೆವು
ದೇಹ ಬಳಲಿತು—ಬಳಲಿತು
ದಾಹ ಹೆಚ್ಚಿತು ತಾಪವೇರಿತು
ಕಹಿಯ—ಅನುಭವವಾಯಿತು ॥ ೧೨ ॥
ಸ್ವಾಮಿಗಳಿರಾ! ಅಧಿಕಾರಿಗಳಿರಾ!
ನಮ್ಮ ನೋಡಿರಿ—ನೋಡಿರಿ
ಸಾಮಾನ್ಯ ಜನತೆಯ ಹಸಿವು, ಬಸರೆ
ಮರ್ಮವೇದನೆ ಕಾಣಿರಿ ॥ ೧೩ ॥
ಅಕ್ಕಿ, ಸಕ್ಕರೆ, ದವಸಧಾನ್ಯವು
ಮಿಕ್ಕಿ ತುಂಬಲಿ—ತುಂಬಲಿ
ಚಿಕ್ಕ ಅಂಗಡಿಯೆಲ್ಲ ಮಾರಲಿ
ಮಿಕ್ಕ ಬೆಲೆಯದು ಇಳಿಯಲಿ ॥ ೧೪ ॥

"ವಾಣೀಸುತ" ಕೂಡ್ಲು,
ಕಾಸರಗೋಡು.

ನಮ್ಮ-ನಮ್ಮವರು

ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ

ಹಿಂದಿಯ ಕುರಿತಾದ ಗೊಂದಲವು ದಕ್ಷಿಣದ ರಾಜ್ಯಗಳಲ್ಲಿ ಹಬ್ಬಿರುವ ಈ ಸಂದರ್ಭ ಲಾಲಬಹದ್ದೂರ ಶಾಸ್ತ್ರಿಯವರು ಹಿಂದಿಯೇತರ ಜನರಿಗೆ ಭರವಸೆಯನ್ನಿತ್ತಿದ್ದಾರೆ. ಹಿಂದಿಯ ಜತೆಗೇ ಇಂಗ್ಲಿಷನ್ನೂ ಮುಂದುವರಿಸಿಕೊಂಡು ಹೋಗಲಾಗುವುದೆಂದೂ, ಯು. ಪಿ. ಎಸ್. ಸಿ. ಪರೀಕ್ಷೆಗಳಿಗೆ ಇಂಗ್ಲಿಷನ್ನೇ ಮಾಧ್ಯಮವನ್ನಾಗಿ ಮುಂದುವರಿಸಲಾಗುವುದೆಂದೂ ಅವರು ಹೇಳಿದ್ದಾರೆ. ಆದರೆ ಈ ಮಾತಿನ ಮೇಲೆ ದಕ್ಷಿಣದ ರಾಜ್ಯಗಳವರಿಗೆ ಹೆಚ್ಚಿನ ನಂಬಿಕೆ ಮೂಡಿದಂತೆ ಕಾಣುವುದಿಲ್ಲ.

ಸಂವಿಧಾನದ ೧೭ನೇ ಕಲಮಿನ ಪೂರ್ಣ ರದ್ದತಿಗೆ ಕೆಲವರು ಒತ್ತಾಯ ತಂದರೆ, ಇನ್ನು ಕೆಲವರು ದ್ವಿಭಾಷಾ ಸೂತ್ರವನ್ನು ಜ್ಯಾರಿಗೆ ತರಬೇಕೆನ್ನುತ್ತಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಕಾಮರಾಜರಿಂದ ಹಿಡಿದು ಮದ್ರಾಸು ಮುಖ್ಯ ಮಂತ್ರಿ ಶ್ರೀ ಭಕ್ತವತ್ಸಲಂ ಸಹಿತ ಎಲ್ಲರೂ ಈ ಕುರಿತು ತಮ್ಮ ಅಸಮ್ಮತಿ ವ್ಯಕ್ತಪಡಿಸಿರುವುದು ಕೇಂದ್ರಕ್ಕೆ ಸಂಗಲಾಂದ ತುತ್ತಾಗಿ ಪರಿಣಮಿಸಿದೆ. ಅತ್ತ ಹಿಂದೀ ಜನತೆಯನ್ನು ಸಮಾಧಾನ ಪಡಿಸುವುದರ ಜತೆಗೆ ಇತ್ತ ಹಿಂದಿಯೇತರ ಜನರ ಪ್ರತಿಭಟನೆಯನ್ನು ಅವರು ಎದುರಿಸಬೇಕು. ಶಾಸ್ತ್ರಿಯವರು ಈ ಸಂದರ್ಭ ಯಾವ ಧೋರಣೆ ತಳೆಯುರೆಂಬುದನ್ನು ಕಾದ ನೋಡಬೇಕು. ಕಾಂಗ್ರೆಸಿನಲ್ಲಿ ಈ ಕುರಿತು ಭಿನ್ನಾಭಿಪ್ರಾಯ ಮೇಳುವುದು ಸಹಜ. ದಕ್ಷಿಣದ ರಾಜ್ಯಗಳ ಒತ್ತಾಯವೂ ಹೆಚ್ಚಿನದ್ದು. ಹಾಗಾಗಿ ಶಾಸ್ತ್ರಿಯವರು ಈ ಸಂದರ್ಭ ಜಾಗರೂಕತೆಯಿಂದ ಕಾರ್ಯವೆಸಗಬೇಕಾದುದು ಅಗತ್ಯ.

ದೇಶದ ಸಮಗ್ರತೆಯ ರಕ್ಷಣೆಯೇ ಪರಮ ಉದ್ದೇಶವಾಗಿರಬೇಕಾದ ಇಂದಿನ ದಿನಗಳಲ್ಲಿ ದೇಶದೊಳಗೇ ಈ ರೀತಿಯ ಭಾಷಾಗೊಂದಲ ಏಳುವುದು ಶುಭ ಸೂಚನೆಯಲ್ಲ. ಹಿಂದಿಯು ಹಿಂದಿಯೇತರರ ಮನ ಒಲಿಸಿಕೊಳ್ಳಬೇಕೇ ಹೊರತು ಸವಾರಿ ಮಾಡುವುದಲ್ಲ. ಶಾಸ್ತ್ರಿಯವರು ಈ ವಿಚಾರವನ್ನು ಅರಿತವರೇ ಆಗಿರುತ್ತಾರೆ. ಅವರು ಈ ಹಿಂದೆ ಬಿಕ್ಕಟ್ಟಿನ ಸಮಸ್ಯೆಗಳನ್ನು ಎದುರಿಸಿದ ರೀತಿಯಿಂದ ಅವರು ಈ ಭಾಷಾ ಸಮಸ್ಯೆಯನ್ನು ಯಶಸ್ವಿಯಾಗಿ ಪರಿಹರಿಸದೆ ಉಳಿಯಲಾರರು.



ಶ್ರೀ ಎಸ್. ನಿಜಲಿಂಗಪ್ಪ

ಮೈಸೂರು ಮುಖ್ಯಮಂತ್ರಿ ಶ್ರೀ|| ಸಿದ್ಧವನ ಹಳ್ಳಿ ನಿಜಲಿಂಗಪ್ಪನವರು ಅಖಿಲ ಭಾರತ ಮಟ್ಟದಲ್ಲಿ ಶ್ರೇಷ್ಠ ನಾಯಕರು ಹಾಗೂ ರಾಜಕಾರಣಿಗಳು. ಕರ್ನಾಟಕ ಏಕೀಕರಣ ರಚನೆಯಲ್ಲಿ ಅವರು ಆಡಿದ ಪಾತ್ರ ಗಹನವಾದುದು. ಇದು ದೆಸೆಯಿಂದಲೇ ಅನತಿ ಹಿಂದೆ ಕೇಂದ್ರದ ನಾಯಕರ ಅಪೇಕ್ಷೆಗೆ ಪಾತ್ರರಾಗಿದ್ದರೆಂದೂ ಹೇಳುತ್ತಾರೆ. ಏನೇ ಇರಲಿ, ಅವರ ವ್ಯಕ್ತಿತ್ವವು ಮಾತ್ರ ಸರಳವಾದುದು. ಹಾಗೂ ಆಕರ್ಷಣೀಯವಾದದು.

ವಿಶಾಲ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ ಶ್ರೀ|| ನಿಜಲಿಂಗಪ್ಪನವರು ಸ್ಥಳೀಯ ರಾಜಕೀಯದ ಬಿರುಗಾಳಿಗೆ ಸಿಲುಕಿ ಮುಖ್ಯಮಂತ್ರಿ ಪದತ್ಯಜಿಸಬೇಕಾದ ಕಾಲ ಒದಗಿದರೂ, ಇದೀಗ ಪುನಃ ಅವರು ಈ ಸ್ಥಾನವನ್ನಲಂಕರಿಸಿದ್ದಾರೆ. ಕೇಂದ್ರದಲ್ಲಿ ಮೈಸೂರಿನ ವರ್ಚಸ್ಸು ಬೀರಬಲ್ಲ ಕೆಲವೇ ಶ್ರೇಷ್ಠ ನಾಯಕರಲ್ಲಿ ನಿಜಲಿಂಗಪ್ಪನವರೂ ಒಬ್ಬರು. ಇದು ಮೈಸೂರಿನ ಭಾಗ್ಯ.

ಅವರ ಅರುವತ್ತೆರಡನೇ ಹುಟ್ಟುಹಬ್ಬವನ್ನು ಕಳೆದ ವಾರ ಬೆಂಗಳೂರಿನಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಕಾಂಗ್ರೆಸ್ ಅಧ್ಯಕ್ಷ ಕಾಮರಾಜ, ಕೇಂದ್ರ ಮಂತ್ರಿ ನೀಲಂ ಸಂಜೀವ ರೆಡ್ಡಿ ಮೊದಲಾದ ನಾಯಕರು ಈ ಸಂದರ್ಭ ಹಾಜರಿದ್ದು ನಿಜಲಿಂಗಪ್ಪನವರಿಗೆ ಶುಭ ಕೋರಿದರು. ರಾಜ್ಯದಲ್ಲಿ ನಿಜಲಿಂಗಪ್ಪನವರ ಕುರಿತು ಉತ್ತಮ ಅಭಿಪ್ರಾಯವಿರುವ ಜನದ ಜತೆಗೇ ಅವರ ಕುರಿತು ಆರೋಪ ಹೊರಿಸುವವರೂ ಇಲ್ಲದಿಲ್ಲ.

ಶರಾವತಿಯ ಜಲವಿದ್ಯುತ್ಯೋಜನೆಯು ನಿಜಲಿಂಗಪ್ಪನವರ ಕರ್ತೃತ್ವ ಶಕ್ತಿಯ ಪ್ರತೀಕವಾಗಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ, ಮಾಡಿರುವ ಹಲವಾರು ಉಪಯುಕ್ತ ಕಾರ್ಯಗಳ ಕುರಿತು ಟೀಕೆ ಟಿಪ್ಪಣಿಗಳಿರುವುದಾದರೂ, ಆ ಕಾರ್ಯಗಳ ಮಹತ್ವತೆಯನ್ನು ನಾವು ಕಡೆಗಣಿಸಲಾರೆವು.

ನಿಜಲಿಂಗಪ್ಪನವರಂತಹ ಅಖಿಲ ಭಾರತ ವ್ಯಾಪ್ತಿಯ ನಾಯಕರು ಇನ್ನೂ ಹೆಚ್ಚಾದರೆ ಮೈಸೂರಿನ ಮಾತಿಗೆ ದೆಹಲಿಯಲ್ಲಿ ಇನ್ನೂ ಹೆಚ್ಚಿನ ಬೆಲೆ ದೊರಕೀತು. ಅವರು ಕಾಂಗ್ರೆಸ್ ಸಂಸ್ಥೆಗೆ ಭೂಷಣಪ್ರಾಯರಾಗಿದ್ದಂತೆ, ಕರ್ನಾಟಕದ ಮೆಚ್ಚಿನವರಾಗಿದ್ದಾರೆ. ಅವರು ಬಹುಕಾಲ ಬಾಳಲೆಂದು ಈ ಸಂದರ್ಭ ಹಾರೈಸುವುದು ಅತೀ ಅಗತ್ಯ.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44ನೆ ಹೊಸ ವರ್ಷ ಆರಂಭವಾಗಿದೆಯಷ್ಟೆ! ಈ ಅವಧಿಗೆ ಯಾ ಅನಂತರ ಚಂದಾ ಅವಧಿ ಮುಗಿಯುವವರೂ ಚಂದಾ ಹಣಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯವಿಟ್ಟು ಆದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇವೆ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡ ಬಹುದು. ಇಲ್ಲವೆ ಮನಿಯಾರ್ಡರು ಮಾಡಬಹುದು ವಿ.ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕ್ರಮಶಃ ವಿ.ಪಿ. ಮಾಡಬೇಕಾದೀತು. ಅದನ್ನು ದಯಮಾಡಿ ಸ್ವೀಕರಿಸುವಂತೆ ಕೇಳಿಕೊಳ್ಳುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ—ಸಂಪಾದಕ

ಒಂಟಿತನವಿಲ್ಲದೆಯೆ ಉಂಟೊತನಗೆಲ್ಲಾ

(ನಾಲ್ಕನೇ ಪುಟದಿಂದ)

ಯ್ಬಿಡದೆ ತಿಳಿಯೋಲ್ಲ....ಹ್ಞಾಂ ಕೇಳಿ, ದೇಹಿ ಅನ್ನೋವ್ರಿಗೆ ಸಾಲಾಪ್ರು ಯಾರು ಕೊಡ್ತಾರೇಂತ...."

"ಓ.. ಅದೂ ಹಾವರನ್ನು, ಬಡಿದ್ರೂ ಚಿಕಾಸು ಹುಟ್ಟೋ ಕಾಲಲ್ಲವಿದು...."

'ತಿಳೀತಾ ಈಗ್ಲಾದ್ರೂ...'

'ಹಾಗಾಪ್ರೆ...'

'ಹಗಾದ್ರು ಹಾಗೇ ಹೀಗಾದ್ರೂ ಹಾಗೇ. ಕನ್ನಡಿಯ ಗಂಟನ್ನ ಕಂಡೇ ತೃಪ್ತಿ ಪಡೋದು...'

'ಅದರಿಂದ ತೃಪ್ತಿ ಸಿಗ್ತೈ?'

'ಸಿಗದಿದ್ರೂ ಸಿಗುತ್ತೇಂತ ತೃಪ್ತಿ...'

"ಇದೀಗ ಸರಿಯಾಯ್ತು.."

"ಏನು?"

'ಅಲ್ಲಾ, ಎಲ್ಲೋ ಓದಿದ ನೆನಪ್ಪು...'

"ಏನಪ್ಪಾ ಅದು?"

'ನನ್ನ ಅಪ್ಪಂತೀಯ ಮಾತ್ತೆ? ಮಗುವಿಗೇ ಅಪ್ಪನಾಗ್ಲಿಲ್ಲ, ಹಾಗಿದ್ಮಾಗ ನನ್ಗೆ...'

'ಇಲ್ಲಾರಿ, ಇಲ್ಲ ಆಯ್ತಲ್ಲಾ. ಇನ್ನಾದ್ರೂ ಹೇಳಿ'

'ಮತ್ತೇನೂ ಇಲ್ಲ....ಒಂದು ತನಗಿಲ್ಲದೆಯೆ ಉಂಟು ತನಗೆಲ್ಲಾ ಎಂದ ತಿಳಿದ್ರೆ ಸುಖ ದೊರೆಯುತ್ತಂತೆ..'

"ಅದ ಸರೀನ್ನಿ..."

'ಹೇಗೆ?'

"ನೋಡಿ ನಿಮ್ಮ ಹತ್ರ ಒಂದಿಲ್ಲ ಮತ್ತೆಲ್ಲಾ ಇದೆ ತಾನೆ?"

"ಇಲ್ಲದಿರೋದಾದ್ರೂ ಏನೂಂತ?"

"ಅಗ್ಲೆ ಅಂದೆನಲ್ಲಾ..."

"ಬುದ್ಧಿ...?"

"ಹ್ಞಾಂ..."

"ಅಂತೂ ನನ್ನ ಲಜ್ಜೆಯನ್ನೇ ತೆಗೆದು ಬಿಟ್ಟಿ ರಣೆ...."

"ಅದ್ಕೇ ಅಂದಿರೋದು...."

"ಏನೂಂತ?"

"ಏಕಾಂ ಲಜ್ಜಾಂ ಪರಿತ್ಯಜ್ಯ...."

"ಸರ್ವತ್ರ ವಿಜಯೀಭವೇತ್ ಅಂತ ತಾನೆ?"

"ಸರೀನ್ನಿ...."

"ಸದ್ಯ ದನಯಾಪನೆಗೆ ಅದೇ ದಾರೀನ್ನಿ.."

"ಮತ್ತೆ?..."

"ಹ್ಞಾಂ ಇಲ್ಲದೆ ಉಂಟೆ? ಬೇಗ ಇರೋದನ್ನ ಬಚ್ಚಿ ಬಿಡು...ಬಂದೆ..."

"ಹ್ಞಾಂ..."

—ಗೋರಾ.

ಪ್ರಗತಿಪಥದಲ್ಲಿ ಸಿಂಡಿಕೇಟ್ ಬೇಂಕ್

ಸಿಂಡಿಕೇಟ್ ಬೇಂಕ್ ೧೯೬೪ನೇ ವರ್ಷದಲ್ಲಿ ಉತ್ತಮ ರೀತಿಯಲ್ಲಿ ಹಿಂದಿನಂತೆ ಪ್ರಗತಿಯನ್ನು ಹೊಂದಿದೆ ಎಂದು ತಿಳಿಸಲು ಆನಂದವಾಗುತ್ತಿದೆ. ೧೯೬೪ನೇ ವರ್ಷದಲ್ಲಿ ಅದು ರೂ. ೪೮.೩೭ ಲಕ್ಷ ರೂಪಾಯಿಗಳಷ್ಟು ಲಾಭ ಗಳಿಸಿತು. (ಈ ಸಂಖ್ಯೆಯು ಆಡಿಟ್ ಆಗಲಿಕ್ಕಿರುವ ಸಂಖ್ಯೆ.) ೧೯೬೩ರಲ್ಲಿ ಅದು ೩೯.೯೩ ಲಕ್ಷ ರೂಪಾಯಿಗಳ ಲಾಭ ಗಳಿಸಿತ್ತು. ೧೯೬೩ನೇವರ್ಷದಲ್ಲಿ ಪ್ರತ್ಯೇಕಿರಿಸಿದ ೧೭೦೪೦ ರೂಪಾಯಿ ಲಾಭವನ್ನು ಈ ವರ್ಷದ ಲಾಭಕ್ಕೆ ಸೇರಿಸಿದಾಗ ಒಟ್ಟು ಲಾಭವು ೪೮.೫೪ ಲಕ್ಷಗೂ ಆಗುತ್ತದೆ. ೧೯೬೩ರಲ್ಲಿ ಒಟ್ಟು ಲಾಭವು ರೂ ೪೦.೭ ಲಕ್ಷವಾಗಿತ್ತು. ರಾಖಿಟ್ಟ ನಿಧಿಗೆ ರೂ. ೯.೭೫ ಲಕ್ಷವನ್ನು ವರ್ಗಾಯಿಸಿದ ಮೇಲೆ (ರೂ. ೯.೦೮ ಲಕ್ಷ ೧೯೬೩ರಲ್ಲಿ ವರ್ಗಾಯಿಸಲಾಗಿತ್ತು), ಡೈರೆಕ್ಟರರು ಕಳೆದ ವರ್ಷದ ದರದಲ್ಲೇ ಡಿವಿಡೆಂಟನ್ನು ಈ ವರ್ಷವೂ ಹಂಚುವ ನಿರ್ಧಾರ ಮಾಡಿರುತ್ತಾರೆ. ರೂ. ೧೦೦ರ ಕುಮ್ಯುಲೇಟಿವ್ ಪ್ರಿಫೆರೆನ್ಸ್ ಶೇರುಗಳಿಗೆ ೮.೫೭% ರೂ. ೧೦೦ರ ಕುಮ್ಯುಲೇಟಿವ್ ಪ್ರಿಫೆರೆನ್ಸ್ ಶೇರುಗಳಿಗೆ ೭.೧೫% (ಟೇಕ್ಸಿನ ಕಡಿತಕ್ಕೆ ಒಳಪಟ್ಟು) ಮತ್ತು ಎ, ಬಿ ಮತ್ತು ಸಿ ತರಗತಿಯ ಈಕ್ವಿಟಿ ಶೇರುಗಳಿಗೆ ೨೦% (ಟೇಕ್ಸಿನ ಕಡಿತಕ್ಕೆ ಒಳಪಟ್ಟು) ಲಾಭ ಹಂಚುವ ನಿರ್ಧಾರ ಮಾಡಿದ್ದಾರೆ. ಈ ರೀತಿ ಡಿವಿಡೆಂಟುಗಳ ಹಂಚುವಿಕೆಗೆ ರೂ. ೧೩,೬೦,೦೦೦ (ರೂ. ೧೧.೬೬ ಲಕ್ಷ ೧೯೬೩ರ ಸಂಖ್ಯೆ) ಮೀಸಲಾಗಿರಿಸಲಾಗಿದೆ. ರೂ. ೫ ಲಕ್ಷವನ್ನು ಡಾಕ್ಟರರಿಗೆ ಬೋನಸು ಹಂಚಲು ಪ್ರತ್ಯೇಕಿಸಿಡಲಾಗಿದೆ. ತೆರಿಗೆಗಾಗಿ ರೂ. ೨೦ ಲಕ್ಷ ಮೀಸಲಾಗಿರಿಸಿದೆ. (೧೯೬೩ರ ಸಂಖ್ಯೆ ೧೪.೭ ಲಕ್ಷ ರೂಪಾಯಿ) ೧೯೬೪, ದಸೆಂಬರ ಅಂತ್ಯಕ್ಕೆ ಬೇಂಕಿನ ತೆತ್ತ ಭಂಡವಾಳವು ಎಡ್ವಾನ್ಸ್ ಕರೆಗಳ ಸಹಿತ) ರೂ. ೧೩,೫೩,೯೦೦ (ರೂ. ೮೦.೫೫ ಲಕ್ಷ ೧೯೬೩ರಲ್ಲಿ) ಠೇವು ನಿಧಿಯು ರೂ. ೬೫ ಲಕ್ಷ ಆಗುತ್ತದೆ. (೧೯೬೩ರಲ್ಲಿ ೭೫.೨೫ ಲಕ್ಷ).

೧೯೬೩ರಲ್ಲಿ ೬೫.೪೪ ಕೋಟಿ ಇದ್ದ ಬೇಂಕಿನ ಠೇವಣಾತಿಯು ಈ ವರ್ಷ ರೂ. ೫೦.೪೬ ಕೋಟಿಗಳಿಗೇರಿದೆ. ಹಾಗೆಯೇ ರೂ. ೨೭ ೬೩ ಕೋಟಿಯಿದ್ದ ಸಾಲ ಕೊಟ್ಟ ಸಂಖ್ಯೆ ಈ ಬಾರಿ ೩೩.೪೮ ಕೋಟಿಗಳಿಗೇರಿದೆ.

ನಿರಂತರಗತಿಯ ಅಭಿವೃದ್ಧಿ ಹೊಂದುತ್ತಿರುವ ಸಿಂಡಿಕೇಟ್ ಬೇಂಕ್ ಜನತೆಯ ಬ್ಯಾಂಕಾಗಿ ಮುಂದುವರಿಯುತ್ತಿರುವುದೆಂಬುದಕ್ಕೆ ಮೇಲಿನ ಅಂಕೆಸಂಖ್ಯೆಗಳೇ ಸಾಕ್ಷಿ.

ಎಲ್ಲೆಲ್ಲಿ ಏನೇನು?

ಸತ್ಕಾರ

ಮುಂಬಯಿಯ "ಬಂಟರ ಯೂನಿ ನಾಡವರ ಸಂಘದ ಆಡಳಿತ ಸಮಿತಿಯವರು ತಾ. ೧-೨-೬೫ರಂದು ವಿಜಯಾ ಬೇಂಕಿನ ಡೈರೆಕ್ಟರರನ್ನು ಸಂಘದ ಕಛೇರಿಯ ಪರಾರದಲ್ಲಿ ಸತ್ಕರಿಸಿ ಗೌರವಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಎಚ್. ಬಾಲಕೃಷ್ಣ ಶೆಟ್ಟಿ ಡೈರೆಕ್ಟರರನ್ನು ಸ್ವಾಗತಿಸಿ ಭಾಷಣ ಮಾಡಿದರು. ಡೈರೆಕ್ಟರರಾದ ಶ್ರೀ ಬಿ. ಮಂಜಯ್ಯ ಹೆಗ್ಡೆ ಮತ್ತು ಶ್ರೀ ಕೆ. ಸುಂದರರಾಮ ಶೆಟ್ಟಿ ಸಮಯೋಚಿತವಾಗಿ ಭಾಷಣ ಮಾಡಿದರು. ಸಂಘದ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣದಾಸ್ ಶೆಟ್ಟಿ ಸಭಿಕರ ಪರಿಚಯ ಮಾಡಿಸಿಕೊಟ್ಟರು. ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರು ಸಂಘದ ಶಾಲಾ ಕಟ್ಟಡ ನಿಧಿಗೆ ರೂ. ೧೦೨೫/- ನ್ನು ದಾನವಾಗಿ ಕೊಟ್ಟರು. ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪಾಲ ಶೆಟ್ಟಿ ಧನ್ಯವಾದವನ್ನು ಕೊಡಲು ಲಘೂಪಹಾರದೊಂದಿಗೆ ಅಂದಿನ ಕಾರ್ಯಕ್ರಮವು ಮುಕ್ತಾಯವಾಯಿತು.

ಮೇಲಿನ ಸಂಘದವರು ಮುಂಬಯಿಯ ಕಿಂಗ್ಸ್ ಸರ್ಕಲಿನಲ್ಲಿರುವ ಶ್ರೀ ಷಣ್ಮುಖಾನಂದ ಸಭಾ-ಗೃಹದಲ್ಲಿ ಇದೇ ಬರುವ ತಾರೀಖು ೨೧-೨-೬೫ನೇ ರವಿವಾರ ಸಂಜೆ ಗಂಟೆ ಏಳಕ್ಕೆ ನಿಯೋಜಿತ ಶಾಲಾ ಕಟ್ಟಡದ ಸಹಾಯಾರ್ಥವಾಗಿ ಸುಪ್ರಸಿದ್ಧ ಚಲಚಿತ್ರ ನೃತ್ಯಗಾರ ಶ್ರೀ ಗೋಪಿಕೃಷ್ಣ ಮತ್ತು ಬಳಗದವರಿಂದ ನಾಟ್ಯ ಪ್ರದರ್ಶನವನ್ನು ಏರ್ಪಡಿಸಲಿರುವರು. ಅಂದಿನ ಸಭಾಧ್ಯಕ್ಷ ಸ್ಥಾನವನ್ನು ಉತ್ತರ ಪ್ರದೇಶದ ಮಾಜಿ ರಾಜ್ಯಪಾಲರಾದ ಸರ್ ಹೋಮಿ ಮೋದಿಯವರು ಅಲಂಕರಿಸಲಿರುವರು. ಮಹಾರಾಷ್ಟ್ರದ ರಾಜ್ಯಪಾಲರಾದ ಡಾ| ಪಿ. ವಿ. ಚೆರಿಯನ್ ಅಂದಿನ ಮುಖ್ಯ ಅತಿಥಿಗಳು. ಸಂಘದ ಎಲ್ಲಾ ಸದಸ್ಯರು ಈ ಕಾರ್ಯಕ್ರಮಕ್ಕೆ ಸಹಾನುಭೂತಿ ಸಹಕಾರಗಳನ್ನು ಕೊಟ್ಟು ಭಾಗವಹಿಸಬೇಕಾಗಿ ಸಂಘದ ಕಾರ್ಯದರ್ಶಿಗಳು ವಿನಂತಿಸಿಕೊಳ್ಳುತ್ತಾರೆ.

ಸಂತಾಪಸೂಚಕ ಸಭೆ

ಪಣಂಬೂರು, ತಾ. 30-1-65ರಂದು ಸಮಾಜ ಸೇವಕರೂ, ಜನಪ್ರಿಯ ಮುಖಂಡರೂ, ನಿವೃತ್ತ ಅಧ್ಯಾಪಕರೂ ಆದ ಜನಾಬ್ ಪಿ. ಖಾದರ್ ಸಾಹೇಬರು ಆಕಸ್ಮಿಕ ಮರಣಕ್ಕೀಡಾದುದರ ಸಂತಾಪ ಸೂಚಕ ಸಭೆಯು ತಾ. 4-2-65ರಂದು ಸಂಜೆ ಪಣಂಬೂರು ಪಂಚಾಯತ್ ಪರಾರದಲ್ಲಿ ಶ್ರೀ ಪಿ. ವಿ. ಐತಾಳ್, ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ಸೇರಿತು. ಮೃತರ ಗುಣಗಾನವನ್ನು ಮಾಡುತ್ತಾ ಮತ್ತು ಮೃತರ ಆತ್ಮಶಾಂತಿಯನ್ನು ಕೋರುತ್ತಾ ಸಭೆಯಲ್ಲಿ ಸರ್ವಶ್ರೀ ಕೆ. ಚಂದ್ರಶೇಖರ ಸೆಟ್ಟಿ, ಬಿ. ಎ. ಖಾದರ್, ಎಡ್ವೊಕೇಟ್, ಪಿ. ನಾರಾಯಣ ನಾವಡ, ಗ್ರಾಮಸೇವಕ ಎ. ಪುಂಡಲೀಕಪ್ಪ, ಮತ್ತು ಪಿ. ವಿ. ಉಪಾಧ್ಯಾಯ ಇವರು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮೃತರ ವ್ಯಕ್ತಿತ್ವದ ಪರಿಚಯ ಮಾಡಿದ್ದರು.

ತಾ. 3-2-1965ರಂದು ಬೈಕಂಪಾಡಿ ಬದ್ರಿಯಾ ಮಸೀದಿಯಲ್ಲಿಯೂ, ಸಂತಾಪ ಸೂಚಕ ಸಭೆಯು ಜನಾಬ್ ಮಹಮ್ಮದ್ ಮೌಲ್ವಿಯವರ ನೇತೃತ್ವದಲ್ಲಿ ಜರಗಿತು. ಪರಗೂತ್ಮನು ದಿವಂಗತರ ಆತ್ಮಕ್ಕೆ ಶಾಂತಿಯನ್ನು ನೀಡುವರೆ ಸುಮಾರು 400 ಜನ ಮುಸ್ಲಿಂ ಬಾಂಧವರು ಸದರಿ ಮಸೀದಿಯಲ್ಲಿ ಪ್ರಾರ್ಥಿಸಿದರು.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O·P 1/1965

In the matter of Debts due to A. Rukmini Rao—deceased

H. ಸಚ್ಚಿದಾನಂದ ರಾವ್ ಕೂಡಾ 8 ಜನರು ... . ಅರ್ಜಿದಾರರು.

ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಅರ್ಜಿದಾರರು ಮೃತ A. ರುಕ್ಮಿಣಿರಾವ್‌ರ ಹೆಸರಲ್ಲಿ ಇರತಕ್ಕ ಅರ್ಜಿಯಲ್ಲಿ ಕಾಣಿಸಿದ ಕಂಪೆನಿಗಳಿಂದ ಸಿಗುವ ಶ್ಯಾರುಗಳು ಮತ್ತು ಡಿವಿಡೆಂಡ್‌ಗಳ ಬಗ್ಗೆ ಮೃತರ ವಾರೀಸುದಾರರಾದ 1ರಿಂದ 7ನೇಯವರ ಹೆಸರಲ್ಲಿ ಅವರ ಗಾರ್ಡಿಯನ್ ವ Next friend ಆದ 9ನೇ ಅರ್ಜಿದಾರ H. ನರಸಿಂಹರಾಯರ ಹೆಸರಲ್ಲಿ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ವಗೈರೆ ಅರ್ಜಿದಾರರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 20-2-1965ಕ್ಕೆ ಇಟ್ಟಿದೆ. ಏನಾದರೂ ಆಕ್ಷೇಪಣೆ ಇದ್ದಲ್ಲಿ ಈ ಕೋರ್ಟು ಮುಂದೆ ಹಗಲು 11 ಗಂಟೆಗೆ ಸರಿಯಾಗಿ ಹಾಜರ್ರಾಗಿ ಜ್ಯಾರಿಪಡಿಸಿಕೊಳ್ಳತಕ್ಕದ್ದು.

(By order of the court)

Sri M. Damodar Kamath

Advocate for Petitioners

Udipi S. K. 6—2—1964.

ಪ್ರಜಾಪ್ರಭುತ್ವ ದಿನಾಚರಣೆ ಮತ್ತು ವಾರ್ಷಿಕೋತ್ಸವ

ಸುರತ್ಕಲ್, ತಾ. 29—ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ಪ್ರಜಾಪ್ರಭುತ್ವ ದಿನಾಚರಣೆ ಮತ್ತು ಆಟ ಪಂದ್ಯಾಟಗಳ ವಾರ್ಷಿಕೋತ್ಸವವು ತಾ. 26-1-65ರಂದು ಶ್ರೀ ಕೆ. ವಿಶ್ವನಾಥ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು.

ಬೆಳಗ್ಗೆ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಯಂ. ವಾಸುದೇವರಾಯರು ಧ್ವಜವನ್ನೇರಿಸಲು ಮಕ್ಕಳ ಸಾಮೂಹಿಕ ಕವಾಯತು ಜರಗಿತು. ಬಳಿಕ ಸಂಜೆಯ ವರೆಗೆ ಮಕ್ಕಳ ಆಟ ಪಂದ್ಯಾಟಗಳು ಜರಗಿದವು. ಸಂಜೆ ವಿದ್ಯಾದಾಯಿನೀ ಕಲಾಮಂದಿರದಲ್ಲಿ ಸಭೆ ಜರಗಿತು. ಶಾಲಾ ವಿದ್ಯಾರ್ಥಿ ನಾಯಕನು ಸ್ವಾಗತಿಸಿದ ಬಳಿಕ ಶಾರೀರಿಕ ಶಿಕ್ಷಣಾಧ್ಯಾಪಕರಾದ ಶ್ರೀ ಇ. ಸೂರ್ಯನಾರಾಯಣರಾಯರು ವಾರ್ಷಿಕ ವರದಿಯನ್ನು ಓದಿ ಈ ವರ್ಷ ಶಾಲೆಯು ಪಂದ್ಯಾಟಗಳಲ್ಲಿ ಗಳಿಸಿದ ವಿಜಯವನ್ನು ಪ್ರಸ್ತಾಪಿಸಿದರು. ಅಧ್ಯಕ್ಷರಿಂದ ವಿದ್ಯಾದಾಯಿನೀ ಹೈಸ್ಕೂಲ್, ವಿದ್ಯಾದಾಯಿನೀ ಹಾಯರ್ ಎಲಿಮೆಂಟರೀ ಶಾಲೆ ಮತ್ತು ಶ್ರೀ ವೆಂಕಟರಮಣ ಹಾಯರ್ ಎಲಿಮೆಂಟರೀ ಶಾಲಾ ಮಕ್ಕಳಲ್ಲಿ ಆಟೋಟಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯೂಯಿತು. ಅಧ್ಯಕ್ಷರು ಪ್ರಜಾಪ್ರಭುತ್ವದ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸಿ ಸುರಸವಾಗಿ ಭಾಷಣ ಮಾಡಿದರು. ಶಾಲಾ ವಿದ್ಯಾರ್ಥಿ ಉಪನಾಯಕನು ಧನ್ಯವಾದಾರ್ಪಣೆ ಮಾಡಿದನು. ಕೊನೆಗೆ ವಿದ್ಯಾದಾಯಿನೀ ಹಯರ್ ಎಲಿಮೆಂಟರೀ ಶಾಲಾ ಮಕ್ಕಳ ನಾಟಕ ನೃತ್ಯ ಇತ್ಯಾದಿ ವಿವಿಧ ಮನರಂಜನಾ ಕಾರ್ಯಕ್ರಮಗಳು ಜರಗಿದುವು.

ಪ್ರಜಾಪ್ರಭುತ್ವ ದಿನಾಚರಣೆ

ಉಡುಪಿ ಮೋಡರ್ನ್ ಹಾ. ಎ. ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಲಕ್ಷ್ಮೀನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಗೆ ಧ್ವಜಾರೋಹಣವಾಗಿ ಸಭೆ ಜರಗಿ ಮಕ್ಕಳಲ್ಲಿ ಕೆಲವರು ಪ್ರಜಾಪ್ರಭುತ್ವದ ಮಹತ್ವವನ್ನು ವಿವರಿಸಿದರು. ಮುಂದೆ ಅಧ್ಯಕ್ಷರ ಭಾಷಣ ವಿವಿಧ ವಿನೋದಾವಳಿಗಳು ನಡೆದು ಶಾಲಾ ಸಾಂಸ್ಕೃತಿಕ ಮಂತ್ರಿ ಧನ್ಯವಾದ ಅರ್ಪಿಸಿದರ.

ಶ್ರೀ ರಾಮ ಕ್ಲಿನಿಕ್

ಕುಂದಾಪುರ, ಡಾ| ಎಚ್. ಬಿ. ಬಿ ವಿಶ್ವನಾಥ ಶೆಟ್ಟರು ಇದೇ ತಾ. 6 ನೇ ಬೆಳಗ್ಗೆ ಶಿವಪ್ರಸಾದ ಮುಂಭಾಗದಲ್ಲಿ ಶ್ರೀ ರಾಮ ಕ್ಲಿನಿಕ್ ಎಂಬ ದವಾಖಾನೆಯನ್ನು ಆರಂಭಿಸಿರುವರು. ಇದರ ಆರಂಭೋತ್ಸವವನ್ನು ವಕೀಲ್ ಶ್ರೀ ಕೆ. ವೆಂಕಪ್ಪಸೆಟ್ಟರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಟೌನ್ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಯು ವಿಫ್ರೆಡ್ ಫೆರ್ನಾಂಡಿಸರು ವಹಿಸಿದ್ದರು.

ಪ್ರದರ್ಶನ

ಕಳೆದ ವರ್ಷದಂತೆ ಈ ಬಾರಿಯೂ ದೇಶ ಭಕ್ತ ಕಾರ್ನಾಡು ಸದಾಶಿವ ರಾಯರ ಸ್ಮಾರಕ ನಿಧಿಯ ಸಹಾಯಾರ್ಥವಾಗಿ ತಾ. 19-2-65ರಿಂದ 28-3-65ರ ತನಕ ಮಂಗಳೂರು ನೆಹರೂ ಮೈದಾನದಲ್ಲಿ ಅಖಿಲ ಭಾರತ ಕೈಗಾರಿಕಾ ಮತ್ತು ಕೃಷಿ ಪ್ರದರ್ಶನವು ಜರಗಲಿದೆ. ಈ ಸಂದರ್ಭದಲ್ಲಿ ವಿವಿಧ ವಿನೋದಾವಳಿಗಳಲ್ಲಿ, ನಾಟಕ, ಜನಪದ ನೃತ್ಯ, ಯಕ್ಷಗಾನ ಬಯಲಾಟಗಳೇ ಮೊದಲಾದ ಕಲಾ ಕಾರ್ಯಕ್ರಮಗಳನ್ನು ನಡೆಸಲಿಚ್ಛಿಸುವವರು ಕನ್ವೀನರ್, ಅಖಿಲ ಭಾರತ ಕೈಗಾರಿಕಾ ಮತ್ತು ಕೃಷಿಪ್ರದರ್ಶನ, ಕಾಂಗ್ರೆಸ್ ಕಚೇರಿ, ಮಂಗಳೂರು- ಇವರಿಗೆ ಕೂಡಲೇ ಬರೆದು ಕೊಳ್ಳಬಹುದು.

ಗಣರಾಜ್ಯ ದಿನಾಚರಣೆ

ಕೊಳ್ತಿಗೆ, ಜ. 26—ಪೆರ್ಲಂಪಾಡಿ ಶಾಲಾ ಪರವಾಗಿ ಪಾಲ್ತಾಡಿ ಗ್ರಾಮದ ಖಂಡಿಗೆ ಮಾಸ್ಟರ್ ಪಿ. ಕುಂಞಪ್ಪ ಗೌಡ ಮತ್ತು ಅವರ ಪತ್ನಿ ಟೀಚರ್ ಕೆ. ಸೋಮಕ್ಕೆಯವರು ದಿ| ಕುಂಟಿಕಾನ ಕೂಸಪ್ಪ ಮತ್ತು ಅವರ ಪತ್ನಿ ದಿ| ಗೌರಮ್ಮನವರ ಸ್ಮರಣಾರ್ಥವಾಗಿ ಒಂದು 'ಧ್ವಜಸ್ತಂಭ'ವನ್ನು ಉದಾರದಾನವಾಗಿ ಕಟ್ಟಿಸಿಕೊಟ್ಟಿರುತ್ತಾರೆ. ಇದರ ಉದ್ಘಾಟನಾ ಸಮಾರಂಭವನ್ನು ಶ್ರೀ ಸುಬ್ರಹ್ಮಣ್ಯ ಗೌಡ, ತಾಲೂಕು ಬೋರ್ಡ್ ಪ್ರೆಸಿಡೆಂಟ್ ಅವರೂ, ಅಧ್ಯಕ್ಷರಾಗಿ ತಾಲೂಕು ಬೋರ್ಡ್ ಸದಸ್ಯ ಶ್ರೀ ರಾಮಣ್ಣಗೌಡರೂ ವಹಿಸಿಕೊಂಡ ಈ ಸಂದರ್ಭದಲ್ಲಿ, ವಿದ್ಯಾಧಿಕಾರಿ ಶ್ರೀ ಶಿವರಾಮಗೌಡ, ಪಂಚಾಯತ್ ಚೆಯರ್ಮೆನರಾದ ಕೆ. ಬಾಲಕೃಷ್ಣ ಗೌಡ, ಶಾಲಾ ಮುಖ್ಯೋಪಾಧ್ಯಾಯ ಶ್ರೀ ಸೋಮಪ್ಪ ಗೌಡ ಅತಿಥಿಗಳಾದ ಶ್ರೀ ಕೆ. ಮಂಜುನಾಥ ರೈ ಕೆಯ್ಯೂರು, ಕೆ. ಸುಬ್ಬಯ್ಯ ಗೌಡ, ಕುಮಾರಿ ಪಿ. ಕೆ. ಅನುಸೂಯ ಮತ್ತು ಶ್ರೀಮತಿ ಸೋಮಕ್ಕ, ಕುಮಾರಿ ಪಿ. ಕೆ. ಗಿರಿಜರವರ ಭಾಷಣದೊಂದಿಗೆ ಲಘೂಪಾಹಾರದೊಂದಿಗೆ ಗಣರಾಜ್ಯ ದಿನವನ್ನು ಆಚರಿಸಲಾಯಿತು.

ಸೈಂಟ್ ಆಗ್ನೀಸ್ ಕಾಲೇಜಿನಲ್ಲಿ ಶ್ರೀ ಟಿ. ಎ. ಪೈ

ಮಂಗಳೂರಿನ ಸೈಂಟ್ ಆಗ್ನೀಸ್ ಕಾಲೇಜಿನ ವಾರ್ಷಿಕ ಬಹುಮಾನ ವಿತರಣಾ ಸಮಾರಂಭದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಾ ಆಹಾರ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು, ದೇಶದಲ್ಲಿ ಉದ್ಭವವಾಗಿರುವ ಆಹಾರ ಸಮಸ್ಯೆಯ ಪರಿಹಾರದಲ್ಲಿ ತಮ್ಮದೂ ಪಾತ್ರವಿದೆಯೆಂಬ ಜನತೆ ಅರಿಯುವ ವರೆಗೆ ಅದರ ಪರಿಹಾರದ ಪ್ರಯತ್ನಗಳು ಪೂರ್ಣ ಫಲ ನೀಡಲಾರವು. ಜನತೆಯ ಇರಾಶಕ್ತಿಯೇ ಸಮಸ್ಯೆಗೆ ಮೂಲಕಾರಣ ಎಂದು ನುಡಿದರು. ಅಂತ್ಯದಲ್ಲಿ ಸುಮಾರು 3,000 ರೂ.ಗಳ ವೆಚ್ಚ ಬರುವ ಪುಸ್ತಕಗಳಿಂದ ಕೂಡಿದ ಕಪಾಟೊಂದನ್ನು ಕಾಲೇಜಿಗೆ ನೀಡುವ ಸಿಂಡಿಕೇಟ್ ಬ್ಯಾಂಕಿನ ನಿರ್ಧಾರವನ್ನು ಸಾರಿದರು.

ಪಂದ್ಯಾಟಗಳ ಉದ್ಘಾಟನೆ

ಉಡುಪಿ, ಸಿಂಡಿಕೇಟ್ ಬ್ಯಾಂಕಿನ ಆಶ್ರಯದಲ್ಲಿ ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನವರು ವ್ಯವಸ್ಥಾಪಿಸಿದ ಮತ್ತು ತಾ. 6ರಿಂದ 14ರ ವರೆಗೆ ನಡೆಯಲಿರುವ ಸಿಂಡಿಕೇಟ್ ಪಂದ್ಯಾಟಗಳ ಉದ್ಘಾಟನಾ ಸಮಾರಂಭವು ತಾ. 6ರಂದು ವಿ. ಜೆ. ಯು. ಕ್ಲಬ್ಬಿನಲ್ಲಿ ನೆರವೇರಿತು. ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ಸ್ವಾಗತ ಭಾಷಣಮಾಡುತ್ತ ಪಂದ್ಯಾಟಗಳ ವಿವರಗಳನ್ನಿತ್ತರು. ಉತ್ತಮ ಕ್ರಿಕೆಟ್ ಆಟಗಾರರೂ ಎಕ್ಸಿಕ್ಯೂಟಿವ್ ಇಂಜನಿಯರೂ ಆದ ಶ್ರೀ. ಬಿ. ಸಿ. ಆಳ್ವರು ಉದ್ಘಾಟನಾ ಭಾಷಣಮಾಡುತ್ತ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಆಟ ಪಂದ್ಯಾಟಗಳು ಆವಶ್ಯವೆಂದರು. ಶ್ರೀ. ಯು. ದಾಮೋದರ ಅವರು ಸಂದೇಶಗಳನ್ನೋದಿದರು.

ಅಸಿ| ಪೋಲೀಸ್ ಸುಪರಿಂಡೆಂಟ್ ಶ್ರೀ. ಪಿ. ಎಸ್. ಮುಲುರುಕರರು ಅಧ್ಯಕ್ಷ ಭಾಷಣ ಮಾಡುತ್ತ ಸಿಂಡಿಕೇಟ್ ಬ್ಯಾಂಕಿನ ವಿವಿಧ ಜನಹಿತ ಉಪಕ್ರಮಗಳನ್ನು ಕೊಂಡಾಡಿ ಪಂದ್ಯಾಟಗಳ ಪ್ರಯೋಜನವನ್ನು ವಿವರಿಸಿದರು. ಶ್ರೀ ಮೋಹನದಾಸ ಬಾಳಿಗರು ವಂದನೆಗಳನ್ನರ್ಪಿಸಿದ ಬಳಿಕ ಶ್ರೀ. ಬಿ. ಸಿ. ಆಳ್ವರು ಧ್ವಜಾರೋಹಣ ಮಾಡಿದರು ಅನಂತರ ಪಂದ್ಯಾಟಗಳು ಪ್ರಾರಂಭವಾದವು.

ಕುಂದಾಪುರದಲ್ಲಿ ಅಪೂರ್ವ ಗೃಹಪ್ರವೇಶ ಸಮಾರಂಭ

ಕುಂದಾಪುರ ಮಾತ್ರವಲ್ಲ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ನೂತನ ಮಾದರಿಯಲ್ಲಿ ರಚಿತವಾದ ಶ್ರೀ ಚಾರ್‌ಮಕ್ಕಿ ನಾರಾಯಣ ಶೆಟ್ಟಿಯವರ 'ಶ್ರೀ ಶಂಕರ ನಾರಾಯಣ ನಿಲಯ' ಎಂಬ ಹೊಸ ಮನೆಯ ಗೃಹ ಪ್ರವೇಶ ಸಮಾರಂಭವು ಇದೇ ಕಳೆದ ತಾ. ೫ರಂದು ಮುಂಜಾನೆ ೧೦-೧೫ರ ಸುಮುಹೂರ್ತದಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು. ಈ ಮಂಗಳ ಕಾರ್ಯಕ್ಕೆ ಜಿಲ್ಲೆಯ ಮತ್ತು ಹೊರಜಿಲ್ಲೆಗಳ ಅನೇಕ ಸುಪ್ರತಿಷ್ಠಿತ ನಾಗರಿಕರು ಆಗಮಿಸಿದ್ದು, ಇದು ಚರಿತ್ರಾರ್ಹವಾದ ಸಮಾರಂಭವೆನ್ನಲಾಗಿದೆ.

ಸಮಾರಂಭದ ಮುಂಚಿನ ದಿನ ಶ್ರೀ ಎಡ್ತರೆ ಮಂಜಯ್ಯ ಶೆಟ್ಟಿ ಇವರ ಹಿರಿತನದಲ್ಲಿ ಶ್ರೀ ನಾರಾಯಣ ಶೆಟ್ಟರು ಈ ಸುಂದರಸೌಧದ ನಿರ್ಮಾಣಕ್ಕಾಗಿ ದುಡಿದ ಕೆಲಸಗಾರರಿಗೆ ಪಾರಿತೋಷಕವನ್ನಿತ್ತು ಗೌರವಿಸಿದರು. ಈ ಪಾರಿತೋಷಕ ಪಡೆದ ಕೆಲಸಗಾರರ ಸಂಖ್ಯೆ ೩೦೦ ಕ್ಕೂ ಮಿಕ್ಕಿತ್ತು.

ಇದೇ ಮಂಗಳಕರ ಸಮಾರಂಭದಲ್ಲಿ ಶ್ರೀಮತಿ ಮತ್ತು ಶ್ರೀ ನಾರಾಯಣ ಶೆಟ್ಟರ ಸುಪ್ರಿಯರಾದ ಕುಮಾರಿ ಸಾವಿತ್ರಾ ಮತ್ತು ಹೇಮಾ ಹಾಗೂ ಶೆಟ್ಟರ ಸಹೋದರ ಶ್ರೀ ಸಂಜೀವ ಶೆಟ್ಟರ ಪುತ್ರಿಯರಾದ ಕುಮಾರಿ ಸುಗುಣ ಮತ್ತು ಸುಶೀಲಾ ಅಲ್ಲದೆ ಬೆಳ್ವೆ ಆನಂದ ಶೆಟ್ಟರ ಪುತ್ರಿ ಕುಮಾರಿ ಯಶೋದಾ ಇವರಿಗೆ ಕರ್ಣವೇಧವೂ ಶಾಸ್ತ್ರೋಕ್ತವಾಗಿ ನಡೆಯಿತು. ಮಧ್ಯಾಹ್ನ ಸುಮಾರು ೪000 ಕ್ಕೂ ಮಿಕ್ಕಿ ಜನರಿಗೆ ಸುಗ್ರಾಸ ಭೋಜನದ ಏರ್ಪಾಟೂ ಮಾಡಲಾಗಿತ್ತು.

ಪ್ರಾಂತ್ಯದಲ್ಲಿನ 'ಎ' ತರಗತಿಯ ಕಂಟ್ರಾಕ್ಟುದಾರರಲ್ಲೊಬ್ಬರಾದ ಶ್ರೀ ನಾರಾಯಣ ಶೆಟ್ಟರ ಈ ವಿನೂತನ ಮಾದರಿಯ ಮನೆಯು ಪ್ರೇಕ್ಷಣೀಯವಾಗಿದೆ. ನಾಜೂಕಾದ ಕುಶಲ ಕೆಲಸ, ಅಚ್ಚುಕಟ್ಟಾದ ಮಾದರಿ ಹಾಗೂ ಸಕಲ ಸೌಲಭ್ಯಗಳಿಂದ ಕೂಡಿದ ಇಂತಹ ನಿವಾಸವು ಜಿಲ್ಲೆಯಲ್ಲೇ ಬೇರೊಂದಿಲ್ಲ. ಅತ್ಯಲ್ಪ ಕಾಲದಲ್ಲಿ ಇಂತಹ ಸುಂದರ ಸೌಧದ ನಿರ್ಮಾಣ ಮಾಡಿರುವುದು ಇನ್ನೊಂದು ವೈಶಿಷ್ಟ್ಯ.

ಸಾರ್ವಜನಿಕ ಸೇವಾನಿರತರೂ, ಉಪಕಾರಿಗಳೂ, ಕೊಡುಗೈ ಶೂರರೂ ಆಗಿರುವ ಶ್ರೀ ಶೆಟ್ಟರು ಕಂಟ್ರಾಕ್ಟುದಾರರಾಗಿದ್ದಂತೆ ಜಿಲ್ಲೆಯಲ್ಲಿ ಹಲವಾರು ಉದ್ದಿಮೆಗಳ ಅಭಿವೃದ್ಧಿಗೂ ನೆರವಾಗಿದ್ದಾರೆ. ಅವರ ಈ ನೂತನ ಗೃಹ ಕುಂದಾಪುರಕ್ಕೆ ಮಾತ್ರವಲ್ಲ ಜಿಲ್ಲೆಗೇ ಒಂದು ಭೂಷಣ.

ನಿಧಿ ಮತ್ತು ಗೌರವಾರ್ಪಣೆ

ಕಳೆದ ತಾ. 10ರಂದು ಕೋಟ ಶ್ರೀ ಅಮೃತೇಶ್ವರೀ ಮೇಳದವರ ಕೂಡುವಿಕೆಯಿಂದ ಶ್ರೀ ಎ. ಜಿ. ಅಶ್ವಿಯವರ ಅಧ್ಯಕ್ಷತೆಯಲ್ಲಿಯೂ ತಾ. 13ರಂದು ಶ್ರೀ ಕೂಸ ತಾಂಡೇಲರ ಮಣೂರು ಹೊಸಬಪ್ಪಯಪಟು ಶ್ರೀ ಎಂ.ಎಂ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿಯೂ, ತಾ. 15ರಂದು ಸಾಲಿಗ್ರಾಮದಲ್ಲಿ ಹಂದಟ್ಟು ಶ್ರೀ ಬಲರಾಮ ಹಂದೆಯವರು ಶ್ರೀ ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿಯೂ ರಾಷ್ಟ್ರಪ್ರಶಸ್ತಿ ವಿಜೇತ ಶ್ರೀ ಹಾರಾಡಿ ರಾಮನವರಿಗೆ ನಿಧಿಗಳನ್ನಿತ್ತು ಗೌರವಿಸಿದರು.

ಸತ್ಕಾರ ಕೂಟ

ಉಡುಪಿ- ಶ್ರೀಮತಿ ಮತ್ತು ಶ್ರೀಯುತ ಮೂಸಂಜೆ ಶೇಷಗಿರಿರಾವ್ ಇವರು ತಮ್ಮ ಪುತ್ರ, ಡಾ|| ಎಂ. ಮೋಹನರಾವ್ ಎಂ. ಎಸ್., ಇವರಿಗೆ ಮದರಾಸಿನ ಶ್ರೀಮತಿ ಮತ್ತು ಡಾ|| ಯು. ಮೋಹನ ರಾಯರ ಪುತ್ರಿ ಸೌ| ಯು. ಉಮ, ಬಿ. ಎಸ್. ಸಿ. ಇವರೊಂದಿಗೆ ಜನವರಿ 25ರಂದು ಮದರಾಸಿನಲ್ಲಿ ವಿವಾಹವಾದ ಸಂಬಂಧ ಕುಂಜಿಬೆಟ್ಟಿನ ಮಾರ್ಗನಿವಾಸದಲ್ಲಿ ತಾ. 31ನೇ ಸಂಜೆ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು.

ಆತ್ಮ ಸಮರ್ಥನೆ

ನಾವು ಶಿಕ್ಷಕರೆ?

ಲೇಖಕರು: ಶ್ರೀ ರಾ. ಶೀ. ಪಾಟೀಲ (ಒಕ್ಕುಂದ)

ನೈತಿಕ ಕಳಕಳಿಯ ಮೇಲೆ ನಿಂತ ಪ್ರತಿಯೊಂದು ರಾಷ್ಟ್ರವು ಬೌದ್ಧಿಕ, ಸಾಮಾಜಿಕ, ಆರ್ಥಿಕ ವಿಧಗಳಿಂದ ಪ್ರಗತಿ ಸಾಧಿಸಬೇಕಾದರೆ ಶಿಕ್ಷಣವು ಅತ್ಯಗತ್ಯ. ನೀತಿಯ ನೆಲೆಗಟ್ಟು ಲೋಕದ ವ್ಯವಹಾರಜ್ಞಾನ ತಿಳಿಯಬೇಕಾದರೆ ಶಿಕ್ಷಣ ಬೇಕು. ಆ ಶಿಕ್ಷಣವನ್ನೀಯಲು ಸರ್ವಗುಣ ಶೀಲಗಳಿಂದ ಕೂಡಿದ ಯೋಗ್ಯ ಶಿಕ್ಷಕರು ಬೇಕು. ಹೊಟ್ಟೆ ಬಟ್ಟೆಗೆ ಕೊರತೆಯಿಲ್ಲದ ತಮ್ಮ ಪ್ರಪಂಚಕ್ಕೆ ಚಿಂತೆ ಪಡದ ಉದಾರ ಮನಸ್ಸಿನ ನಿಸ್ಪೃಹ ಬುದ್ಧಿಯ ವಿದ್ಯಾವಂತ ಶಿಕ್ಷಕರು ಬೇಕು. ಹೀಗಿದ್ದರೆ ದೇಶ ಕುಸ್ಪಂಸದೇ ಉಳಿದೀತು— ಬಾಳೀತು - ಬೆಳಗೀತು.!

ಪರರಿಗೆ ಅನ್ಯಾಯವಾಗದಂತೆ ಹಿತವಿತನಾಗಿ ತನ್ನನ್ನು ನೋಡಿಕೊಂಡು, ರಾಷ್ಟ್ರೀಯ ಶೀಲರಾಗಿ ತನ್ನ ವಿದ್ಯಾರ್ಥಿಗಳ ಉನ್ನತಿಯನ್ನು ಅರ್ಥಾತ್ ವಿದ್ಯಾಬುದ್ಧಿಗಳನ್ನು ಕೊಟ್ಟು ನಡೆಸುವದು ಶಿಕ್ಷಕರ ಕರ್ತವ್ಯ. ಇಲ್ಲದೆ ಜನನಿಯೂ ಜನ್ಮಭೂಮಿಯೂ ಸ್ವರ್ಗಕ್ಕೂ ಮಿಗಿಲು ಎಂದಿರುವಾಗ ತಾಯಿಯನ್ನು ತಾಯಿನಾಡನ್ನು ನರಕವಾಗಿ ಪರಿವರ್ತಿಸುವುದು ನಮ್ಮ ಧ್ಯೇಯವಿರಬಾರದು. ಸ್ವರ್ಗಪ್ರಾಯವಾದ ನಮ್ಮ ನಾಡಿನ ಭವಿಷ್ಯವನ್ನು ಬರೆಯುವ ಮಹಾ ಜವಾಬ್ದಾರಿಯು ಶಿಕ್ಷಕರ ಮೇಲಿದೆ. ಯೋಗ್ಯ ನಾಗರಿಕರನ್ನು ತಯಾರಿಸಿ ದೇಶದ ಹಿರಿತನವನ್ನೆತ್ತುವದು ನಮ್ಮ ಕರ್ತವ್ಯದಲ್ಲಿದೆ.

ಆದರೆ, ಆದರೆ ತನ್ನ ಹೊಣೆಗಾರಿಕೆಯ ಕರ್ತವ್ಯಬಾಹಿರ ಶಿಕ್ಷಕರು ತಮ್ಮನ್ನೂ ನಾಡನ್ನೂ ತಿಳಿಯದಿರುವ ಈ ಕಾಲದಲ್ಲಿ ನಿಜವನ್ನು ನುಡಿದು ಎಚ್ಚರಿಸಬೇಕಾಗಿದೆ. ಮೊದಲಿನ ಮುದ್ದೆಯಿಂದ ದೊಡ್ಡಗೂಡಿನ ಮಕ್ಕಳನ್ನು ಅವರ ಮಾತಾಪಿತರು ಶಿಕ್ಷಕರ ಕೈಯಲ್ಲಿ ಕೊಟ್ಟಾಗ "ನಾನು ಏನು ಮಾಡುತ್ತಿರುವೆನು? ಏನು ಮಾಡಬೇಕಾಗಿದೆ?" ಎಂಬುದನ್ನು ನೂರಾರುಸಲ ನಾವು ಯೋಚಿಸಬೇಕಾಗಿದೆ. ಆತ್ಮವಂಚನೆಯು ಮಹಾಪಾಪವೆಂಬುದು ನಮಗೆ ಗೊತ್ತಿಲ್ಲವೇ? ಕೇವಲದ ಸಂಬಳದ ಸಲುವಾಗಿ ಕೆಲಸ ಮಾಡುವವರು ನಾವು ಎಂದು ತಿಳಿದರೆ ಹಸುಗೂಸುಗಳ ಕೊಲೆಪಾತಕವು ನಮ್ಮನ್ನು ಬಿಟ್ಟೀತೆ? ನಮ್ಮನ್ನೂ ನಮ್ಮ ವಂಶವನ್ನೂ ನಾಶಮಾಡದೆ ಬಿಟ್ಟೀತೆ?

ಭಾರತಕ್ಕೆ ಬೇಕಾದುದು ನರಕಾರಿಗಳಲ್ಲ. ಯೋಗ್ಯ ನಾಗರಿಕ ನರಸಿಂಹರು.! ನಮ್ಮಿಂದ ಇಂದು ತಯಾರಾಗುತ್ತಿರುವ ನಾಗರಿಕರೆಂದರೆ ಸುಶಿಕ್ಷಿತ ಅವಿಚಾರಿಗಳು. ಎಂಟೆ ತಾಸು ಶಾಲೆ ಕಳೆದರೆ ನಮ್ಮ ಕೈಯ್ಯಲ್ಲಿದ್ದ ಹದವಾದ ಮಣ್ಣು ಪಾತ್ರೆಯಾಗುವದೆಂದು? ತಡ ಮಾಡಿದರೆ ಒಣಗೀತ ! ಒಣಗಿದರೆ ಕಿತ್ತೀತು.!! ಎಚ್ಚರ!! ಗುಡಿಕಾರರು "ರತ್ನಗಳನ್ನು ತೊಂದೆಗೆಯಿರಿ" ಎಂದು ಮಾನ್ಯ ನೆಹರು ರವರು ಕೂಗಿಕೊಳ್ಳುತ್ತಿರುವರು. ಅವರೆ ತೆಗೆಯಬೇಕು ಯಾರು? ಬರಬೇಕು ಯಾರು ಭಾರತದ ಜನತೆಯಲ್ಲಿ ಸ್ವಾಭಿಮಾನವುಳ್ಳ ರಾಷ್ಟ್ರೀಯ ನಾಗರಿಕರೆಷ್ಟು? ಇದ್ದರೂ ಬಹಳ ಕಡಿಮೆ! "ನೂರಾರು ವರುಷಗಳ ಬುದ್ಧಿ ನೂರು ವರುಷಗಳವರೆಗೆ" ಎಂಬಂತೆ ನಮ್ಮ ವಿದ್ಯಾಮಂದಿರದ ಮುದ್ರಣಾಲಯದಲ್ಲಿ ಸುಂದರ ಮೂರ್ತಿಗಳಾಗುವಂತೆ ಅಚ್ಚು ಹಾಕೋಣ. ಆಗ ಜನ್ಮಕೊಟ್ಟವರನ್ನು ತಿದ್ದಿ ಬರೆದ ನಮ್ಮನ್ನು ಅವು ಹೊಗಳದಿರಲಾರವು. ಕೃತಜ್ಞತೆಯನ್ನು ಮುಟ್ಟಿಸದಿರಲಾರವು.

ವಿಚಾರಿಸೋಣ! ರಾಷ್ಟ್ರೀಯ ಭಾವನೆ ಬರುವಂತೆ ನಾವು ವಿದ್ಯಾರ್ಥಿಗಳಿಗೆ ಬೋಧಿಸುತ್ತೇವೆಯೆ? ಅವರು ಸದ್ಗುಣಶಾಲಿಗಳಾಗುವಂತೆ ಆಟಪಾಟ ಮಾಡಿಸುತ್ತೇವೆಯೆ? ದೇಶ ರಕ್ಷಣೆಯ ಮಹತ್ವ ತಿಳಿಸಿ, ಸಿಪಾಯಿಯಂತೆ ಸೈನಿಕರಾಗುವಂತೆ ರಾಷ್ಟ್ರೀಯ ಶಿಕ್ಷಣ ಕೊಡುತ್ತೇವೆಯೆ?? ಇಲ್ಲಾ! ಇಂದಿನ ನಮ್ಮ ನರಕುರಿಗಳು "ವಿಲ್ಲಿ" ಎಂದರೆ ಅಡಗಿಕೊಳ್ಳುವ ಸೇರುವವು. ಕೂಕು ಮಾಡುವ ಕೆಲಸ ಮಾಡದೆ ಕೂಡಲಿಗೊಬ್ಬ ಸಿದ್ಧ! ನಮ್ಮ ಕಾರ್ಯ ಕಾಣದದಿಂದ ಕೃತಿಗಿಳಿಯಲಿ; ಕೃತಿಯಿಂದ ಫಲ ಬರಲಿ; ನಾವು ಫಲದಾಶೆ ಬಿಟ್ಟು ಕರ್ಮ ಮಾಡುವಾ. ನಮ್ಮ ಕೈಯಲ್ಲೇ ಕಲಿತು ದಾಟಿ ಬರುವ ವಿದ್ಯಾರ್ಥಿಗಳು ಮುಂದೆ ನಮಗೇ ಗೌರವವನ್ನೇಕೆ ಕೊಡುವದಿಲ್ಲ? ನಾವು ಯೋಗ್ಯ ಗುರುಗಳಲ್ಲವೆಂಬುದಕ್ಕೆ ಇದೇ ದೆಗ್ಗುರುತು. ಈಗಲಾದರೂ ಜೊತೆ ಅರಿತು ಹೆಜ್ಜೆ ಇಟ್ಟರೆ ಇಂದಿನ ಮಕ್ಕಳೇ ನಾಳಿನ ನಾಡ ನಂದಾದೀಪವಾದಾಗ ನಮ್ಮ ನೇಲಾ ಬೆಳಕು ಹರಿಸಿಯಾರು. ಆದುದರಿಂದ ನಮ್ಮ ಮುಂದಿನ ಸುಖಶಾಂತಿಯ ಬುತ್ತೀ ಗಂಟನ್ನು ಈಗಾಗಲೇ ಕಟ್ಟಿ ಸಜ್ಜುಗೊಳಿಸೋಣ. ಅದು ಮುಂದೆ ನಮಗೆ ಉಣ್ಣಲು ಒದಗೀತು.

ನಮ್ಮ ಇನ್ನೊಂದು ದೊಡ್ಡ ಕೊರತೆಯೆಂದರೆ, ನಾವು ಬಳಲುವ ಕಾರಣವೆಂದರೆ ಅದು ಸಂಬಳ. ಇದನ್ನು ನಮಗಾರು ಕೊಡಬೇಕು? ಯಾರು ಪಡೆಯಬೇಕು? ಕೊಡುವವನೇ ಪಡೆಯಲು ಅರ್ಹನು. ಎಂಬೀ ಮಾತನ್ನು ನೆನಸಿನಲ್ಲಿಡೋಣ. ನಮ್ಮ ವಿದ್ಯಾರ್ಥಿಗಳಿಗೆ ನಾವು ಒಳ್ಳೆಯದನ್ನೇ ಕೊಟ್ಟರೆ ಅವರೆ ಮುಂದೆ ಜವಾಬ್ದಾರೀ ದೊಡ್ಡ ಸ್ಥಾನಗಳಿಗೆ ಏರಿದಾಗ ತಮ್ಮ ಗುರುವೃಂದಕ್ಕೆ ಸುಖಿತೊಟ್ಟಾರು: ಅವರು ಆ ಸ್ಥಾನಗಳಿಗೆ ಹೋಗುವವರೆಗೆ ಅವರ ಹೃತ್ಕಮಲದಲ್ಲಿ ಸ್ಪಂದಿಸುತ್ತುಂಬಿಯಾಗಿ ಬಾಳೋಣ. ಒಮ್ಮೆಲೇ ಬಹಳಷ್ಟು ಸಂಬಳ ಕೊಡುವದು ಹೇಗೆ ಸಾಧ್ಯ? ಕರೆಯು ಹೊಲ ಬಲಿಯ ಮನೆ, ಇದೀಗ ನಮ್ಮ ಕೈಗೆ ಬಂದಿದೆ. ಹೊಲ ಆಗಿಯಬೇಕು; ಮನೆಮುತ್ತಬೇಕು; ಫಲ ಉಣ್ಣಬೇಕು! ಅಶಿಕ್ಷಿತನದ ಅಂಧಕಾರದಲ್ಲಿ ಬಳಲುತ್ತಿರುವ ರಾಜ್ಯದಲ್ಲಿ ಇವೆಲ್ಲವನ್ನು ಸಾಧಿಸುವದು ಸದ್ಯ ಬಹು ಕಷ್ಟದ ಕೆಲಸ. ಸಹನೆಯಿಂದ ಮನಸಾಕ್ಷಿಗೆ ಸರಿಯಾಗಿ ದುಡಿಯೋಣ; ಅನಂತರ ಪಡೆಯೋಣ. ರಾಷ್ಟ್ರಶಿಲ್ಪಿ, ರಾಷ್ಟ್ರದ ಅಡಿಗಲ್ಲು, ದೇಶದ ಗುರುಗಳು ಎಂಬ ಹೊಗಳಿಕೆಗೆ ನಾವು ಮರುಳಾಗಬಾರದು. ಮುಂದೆ ನಮ್ಮ ಕೀರ್ತಿಯ ಕಾಲವು ಬಂದೇ ಬರುವದು. ಅದು ನಮ್ಮ ಪ್ರಿಯ ವಿದ್ಯಾರ್ಥಿಗಳಿಂದಲೇ! ನಾವೆಲ್ಲರೊಂದಾಗಿ ಪವಿತ್ರ ಬುದ್ಧಿಯಿಂದ ಕ್ಷೇತ್ರ ಸಮೃದ್ಧಿಗಾಗಿ ದುಡಿಯೋಣ; ಗೀತೆ ಹಾಡೋಣ; ರಾಷ್ಟ್ರ ಉಳಿಸೋಣ; ನಮ್ಮ ಶಿಕ್ಷಕ ಬಂಧುಗಳಲ್ಲಿ ನನ್ನ ಇನ್ನೊಂದು ಬಿನ್ನಹ — ನಿಮ್ಮಿಂದ ಅನ್ಯಾಯವಾಗುತ್ತಿದೆಯೆಂದು ತಿಳಿದೊಡನೆ ದಯಮಾಡಿ ದೂರ ಸರಿಯಿರಿ. ಏಕೆಂದರೆ ಇಹಪರಗಳ ಸಾಧಕರಾದ ಬೋಧಕರಾದ ನಮಗೆ ಹೆಚ್ಚಿನ ಉಪದ್ವ್ಯಾಪಿಗಳಿಂದ ಪುರುಷಾರ್ಥಗಳಿಲ್ಲ. ನಮ್ಮ ಯೋಗ್ಯ ನಡಾವಳಿಯು ಸಮಾಜಕ್ಕೆ ಪೂರಕವಾಗಿರಬೇಕೇ ವಿನಃ ಮಾರಕವಾಗಿ ಪರಿಣಮಿಸಬಾರದು.

ಪ್ರಿಯ ಸಹೋದ್ಯೋಗಿಗಳೇ, ನಾವೆಲ್ಲರೂ ನಮ್ಮ ಶಿಷ್ಯರಾದ ಮುದ್ದುಮಕ್ಕಳನ್ನು ತಿದ್ದಿ ತೀಡೋಣ. ನರರತ್ನಗಳನ್ನು ಬಡವ ಧನಿಕನೆಂಬ ಭೇದವಿಲ್ಲದೇ ಕೆತ್ತಿ ತಯಾರಿಸೋಣ! ತಾಯಿಗೆ ಸರಮಾಡಿ ಹಾಕೋಣ!! ಭಾರತಿಗೆ ಮುಡುಪಾಗಿ ನೀಡೋಣ.

(ಪ್ರಜಾರಾಜ್ಯ ಸಂಚಿಕೆಗೆ ಬಂದುದು)

In the Court of the Munsif of Coondapoor.

S.C. 638/1964.

Guruva .. ... *Plaintiff.*

Vs.

Narayana ... ... *Defendant.*

To

The Defendant Narayana,
son of Putti,
C/o Ananthashram,
Proctor Road,
Grant Road, Bombay-7.

Whereas the plaintiff has instituted the above suit against you for recovery of the amount of money mentioned in the plaint, you are hereby summoned to appear before this Court on 17—2—1965 at 11 a. m. and be heard in answer to the plaintiff's claim. Your failure to appear before the Court on the said date will result in your being set ex parte and the suit will be heard and disposed of in your absence.

By order of the Court.

G. Ramakrishna Rao,
B. A., LL. B.,
Advocate, Coondapoor.

ಕನ್ನಡಿಗರ ವ್ಯಾಪಾರದಲ್ಲಿ ೩೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವವು

ಕನಸಿನ ದಾರಿ

(ಎರಡನೇ ಪುಟದಿಂದ)

"ಇಲ್ಲಪ್ಪ. ಖಂಡಿತ ಇಲ್ಲ. ನಾನು ನಿನ್ನನ್ನು ಯಾವಾಗಲೂ ನಮ್ಮಲ್ಲಿಗೆ ಬರುವಂತೆ ಹೇಳುತ್ತೇನೆ. ಮತ್ತು ಎಲ್ಲರೊಡನೆ ನೀನು ನನ್ನ ಒಬ್ಬ ಉತ್ತಮ ಮಿತ್ರನಾದ ಜ್ಯೋತಿ ಎಂದು ಹೇಳುತ್ತೇನೆ. ಆಗ ನಿನಗೆ ಸಂತೋಷವಾಗುತ್ತದೆ. ಇಲ್ಲ ನಾನು ನಿನ್ನನ್ನು ಮರೆಯುವುದಿಲ್ಲ"

"ಆ ಮೇಲೆ?"

"ನನಗೆ ಮಕ್ಕಳಾಗುವುವು. ಆ ಮೇಲೆ ಅವರನ್ನು ಶಾಲೆಗೆ ಕಳುಹಿಸುತ್ತೇನೆ. ನಮ್ಮಂತೆ ಹೆಣದೊಡನಿರುವ ನಾಣ್ಯಗಳನ್ನು ಹೆಕ್ಕಲು ಅವರನ್ನು ಬಿಡುವುದಿಲ್ಲ."

ಜ್ಯೋತಿಯು ಸಂತೋಷದಿಂದ ನೆಗಾಡಿದನು.

ಮಧ್ಯ ರಾತ್ರಿಯಾಗಿತ್ತು. "ಬೋ! ಬೋ! ಹರಿ ಬೋಲ್ ಬೋ" ಎಂಬ ಸ್ವರವು ದೂರದಿಂದ ಕೇಳಲು ಇಬ್ಬರೂ ಎದ್ದರು. ಊರಿನ ಒಬ್ಬ ಶ್ರೀಮಂತನ ಹೆಣವಾಗಿತ್ತು.

ಹಿಂತಿರುಗಿ ಬಂದು ಹಣ ಎಣಿಸತೊಡಗಿದರು.

"ಜ್ಯೋತಿ, ಕನಸುಗಳು ನಿಜವಾಗು

NAVAYUGA 11-2-1965
Registered with the Registrar
of News Papers for India
under No K N 3546/'57

REGD No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ ಎಲ್ ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೧-೨-೬೫ರಿಂದ ೧೭-೨-೬೫ರ ವರೆಗೆ

೧ ಮೇಷ

ಉಪಚಯ ಸ್ಥಾನಗತರಾದ ರವಿ ಕುಜ ಬುಧ ಶನಿಗಳು ಇಂದು ನಿಮ್ಮ ಹಿರಿಮೆಗೆ ಕಾರಣೀಭೂತರಾಗಿರುವುದರಿಂದ ಯಾವಗೂ ನಿಮ್ಮ ಸಂಕಲ್ಪಗಳು ನಿವಿಘ್ನದಿಂದ ಕಾರ್ಯರೂಪಕ್ಕೆ ಬರಲಿವೆ ಜನತೆಯ ಬೆಂಬಲವು ವಿಶೇಷವಾಗಿ ಲಭಿಸದಿದ್ದರೂ ಆತ್ಮಬಲ ಸಂಪನ್ನರಾದ ನೀವು ಪ್ರಬಲರಾದ ಪ್ರತಿಪಕ್ಷಿಗಳನ್ನೂ ಪರಾಭವಗೊಳಿಸುವಿರಿ. ಯಾವುದೊಂದು ವಿಭಾಗದಲ್ಲೂ ನಿಮಗಿಂದು ಕುಂದುಕೊರತೆಗಳು ಕಾಣಲಾರವು ತಾ. 13, 13 ಈ ದಿನಗಳು ಅತೀವ ಪ್ರಶಸ್ತವಿವೆ.

೨ ವೃಷಭ

ದೈವಬಲದಿಂದ ವಂಚಿತರಾದ ನೀವಿಂದು ಶ್ರಮವಹಿಸಿ ದುಡಿಯುತ್ತಿದ್ದರೂ ಕೆಲಸಕ್ಕೆ ತಕ್ಕದಾದ ಫಲ ಕಾಣಲಾರಿರಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಖರ್ಚುವೆಚ್ಚಗಳನ್ನು ನೀಗಿಸಲು ಹೆರವರ ಕೂಡೆ ಸಾಲ ಮಾಡುವ ಪ್ರಸಂಗ ಬರಲಿದೆ ಆತ್ಮೀಯರ ವಿಯೋಗ ವಿರೋಧಿಗಳಿಗಿಂದು ಜಾತ್ರೆ ರಾಗದ ಸಂಭವವಿದೆ ದುಡಿಮೆಯ ಬಹುವಂಶವನ್ನು ಮಂಗಲ ಕಾರ್ಯಗಳಿಗಾಗಿ ವಿನಿಯೋಗಿಸುವಿರಿ. ತಾ 11, 14, 15 ಇದ್ದುದರಲ್ಲಿ ಅನುಕೂಲವಾಗಿವೆ.

೩ ಮಿಥುನ

ನಿಮ್ಮ ಸಂಕಲ್ಪಗಳು ಬಹ್ವಂಶ ಸಿದ್ಧಿಸಲಿವೆ ಉದ್ಯೋಗ ವ್ಯಾಪಾರ ವ್ಯವಹಾರಾದಿಗಳಲ್ಲಿ ನಿರೀಕ್ಷೆಗಿಂತಲೂ ಅಧಿಕವಾದ ಫಲ ಲಭಿಸುವುದು. ಸಾಂಸರ್ಗಿಕ ದೋಷದಿಂದಾಗಿ ಕೆಲವೊಂದು ನಷ್ಟ ಅಪವಾದಗಳಿಗೆ ಗುರಿಯಾಗುವ ಸಂಭವವಿದೆ ಮನೆಯಲ್ಲಿ ಶುಭಶೋಭನಾದಿ ಸತ್ಕರ್ಮಗಳು ಜರಗುವವು ವಿದ್ಯೋಪಜೀವೀ ನೌಕರವರ್ಗದವರಿಗೆ ಭಡತಿಯ ಯೋಗವಿದೆ. ತಾ. 12, 13, 16, 17 ಈ ದಿನಗಳಲ್ಲಿ ಗೃಹ ಸುಖ ಧನಲಾಭಗಳು ಪಡೆವಿರಿ

೪ ಕರ್ಕಟ

ಕರ್ತವ್ಯದಕ್ಷರೆಂದೆನಿಸಿದ ನಿಮ್ಮ ಪರಿಶ್ರಮವಿಂದು ನೀರಲ್ಲಿ ಗೈದ ಹೋಮದಂತೆ ವಿಫಲವಾದೀತು ಸೋದರರು ಮತ್ತು ಬಂಧುವರ್ಗದವರೊಳಗೆ ಮನಸ್ತಾಪವುದಿಸುವುದಲ್ಲದೆ ಹೆಚ್ಚಿನ ನಷ್ಟ ಅಪವಾದಗಳಿಗೂ ಗುರಿಯಾಗುವಿರಿ ವ್ಯಾಪಾರ ನೌಕರಿ ಮುಂತಾದ ವಿಭಾಗದಲ್ಲಿ ಅಯೋಗ್ಯ ವ್ಯಯವಾಗುವುದು ತಾ. 11, 14 15 ಈ ದಿನಗಳು ಇತರ ದಿನಗಳಿಗಿಂತ ಲೇಸು.

೫. ಸಿಂಹ

ಆರ್ಥಿಕ ಮತ್ತು ಆರೋಗ್ಯ ದೃಷ್ಟಿಯಿಂದ ನಿಮಗೀವಾರವು ಉತ್ತಮವಿರುವುದು. ಪ್ರತಿಪಕ್ಷಿಗಳ ಪ್ರತಿಕ್ರಿಯೆಯು ವಿಶೇಷವಾಗಿರುವುದರಿಂದ ನಿಮ್ಮ ಬಯಕೆಗಳು ಸಂಕಲ್ಪದಲ್ಲೇ ಉಳಿಯಲಿವೆ. ವಿಶೇಷತಃ ಶ್ರಮಜೀವಿಗಳಿಗೀ ಸಮಯವು ತುಂಬ ಕಷ್ಟದಾಯಿಯಾಗಲಿದೆ. ಪಶುಭೃತ್ಯಾದಿ ಗೃಹೋಪಕರಣಗಳಿಂದ ಪರಿಪೂರ್ಣವಾಗಿರತಕ್ಕ ನಿಮ್ಮ ಸಂಸಾರ ರಥವು ನಿರಾತಂಕವಾಗಿ ಸಾಗಲಿದೆ ತಾ. 14, 15ಗಳಲ್ಲಿ ಅನಿರೀಕ್ಷಿತ ಪ್ರವಾಸ ಖರ್ಚುಗಳುಂಟಾಗುವವು

೬ ಕನ್ಯಾ

ಜನ್ಮಸ್ಥ ಅಂಗಾರಕನೂ ಅಷ್ಟಮಸ್ಥ ಬೃಹಸ್ಪತಿಯೂ ನಿಮ್ಮನ್ನು ಕ್ಷಣಕಾಲ ಸಿಂತಲ್ಲಿ ನಿಲ್ಲಲು ಬಿಡಲೊಲ್ಲರು ಸ್ವಜನ ವಿಯೋಗ ದುಃಖದಿಂದಾವೃತರಾದ ನಿಮಗೆ ಗೃಹಕಲಹದ ಅವ್ಯವಸ್ಥೆಯೂ ಮನೋನೆಮ್ಮದಿಗೆ ಭಂಗ ತರುವುದು ಕಷ್ಟವಾಗಲಿ ನಷ್ಟವಾಗಲಿ ಮುಂದಿಟ್ಟ ಹೆಜ್ಜೆಯನ್ನು ನೀವಿಂದು ಹಿಂದಿಡಲಾರಿರಿ ಧನಭಾಗ್ಯಪನ ಅನುಗ್ರಹದಿಂದಾಗಿ ತಾ 14ರಿಂದ 15ರ ವರೆಗಿನ ದಿನಗಳು ಸುಗಮವಾಗಿ ಸಾಗಲಿವೆ.

೭ ತುಲಾ

ಶುಭಗ್ರಹರ ಪೂರ್ಣಾನುಗ್ರಹಕ್ಕೆ ಪಾತ್ರರಾದ ನಿಮಗೆ ಸಮಾಜದಲ್ಲಿ ಒಳ್ಳೆಯ ಗೌರವ ಸ್ಥಾನಮಾನಗಳು ಲಭಿಸುವವು ಗೃಹತಾಪತ್ರಯಗಳಿಂದ ಮುಕ್ತರಾಗಿದ್ದರೂ ಆರೋಗ್ಯವು ಅಷ್ಟೊಂದು ಉತ್ತಮವಾಗಿರದು ದುಡಿಮೆಯಲ್ಲಿನ ಬಿಡಿಕಾಸೂ ನಿಮ್ಮಲ್ಲಿಂದು ಉಳಿಯಲೊಲ್ಲದು ಕೋರ್ಟುಕಚೇರಿಗಳ ವ್ಯವಹಾರದಲ್ಲಿ ನಷ್ಟ ಪರಾಜಯಗಳುಂಟಾದಾವು. ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಇಷ್ಟಾರ್ಥಗಳು ನಿರಾತಂಕವಾಗಿ ನೆರವೇರುವವು

೮ ವೃಶ್ಚಿಕ

ಹೆರವರ ನೆರವಿಲ್ಲವಾದರೂ ಎಂತಹ ದುಃಸಾಧ್ಯವಾದ ಕಾರ್ಯವನ್ನೂ ನೀವಿಂದು ಸಾಧಿಸಲು ಶಕ್ತರಿರುವಿರಿ. ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಫಲವು ಅನಾಯಾಸದಿಂದ ಲಭಿಸಲಿದೆ ಆದರೆ ಮನೋರೋಗದಿಂದ ಬಳಲುತ್ತಿರುವ ನಿಮಗೆ ಆತ್ಮೀಯರ ಮತ್ತು ಗುರುಹಿರಿಯರ ಕೂಡೆ ವಿರೋಧವುಂಟಾದೀತು ಸ್ತ್ರೀರೋಗಿಗಳಾದ ನಿಮಗೆ ತಾ 11, 16, 17ರ ದಿನಗಳು ಸಾಕಷ್ಟು ಅನುಕೂಲಿಸಿರುವವು

೯. ಧನು

ಇದೀಗ ಗ್ರಹಮಂಡಲವೇ ನಿಮಗಿಂದು ಅನುಕೂಲವಾಗಿ ನಿಂತಿರುವ ಕಾರಣ ಯಾವ ಕಾರ್ಯವನ್ನೇ ಕೈಗೊಳ್ಳಿರಿ ಅದು ಸಂಪೂರ್ಣ ಯಶಸ್ವಿಯಾಗುವುದಲ್ಲದೆ ನಿಮ್ಮ ಬಯಕೆಯನ್ನು ಪೂರ್ಣ ಮಾಡಲಿದೆ ಸ್ವಯಂಶಕ್ತರೂ ಸಾಹಸಿಗಳೂ ಆದ ನಿಮ್ಮ ವಿರೋಧಿವರ್ಗವಿಂದು ಸ್ಮಶಾನವೈರಾಗ್ಯದಂತೆ ಮಾಯವಾದ ಒಂದು ಚಿತ್ರಾದಿಗಳ ನೆರವು ಪರಿಪೂರ್ಣವಾಗಿರುವ ನಿಮಗೆ ಸರ್ವತ್ರ ವಿಜಯ ಸ್ಥಾನಮಾನಗಳು ಲಭಿಸಲಿವೆ ವಾರಾದಿಯ 3 ದಿನಗಳು ಅತೀವ ಪ್ರಶಸ್ತವಿರುವವು

೧೦ ಮಕರ

ನಿಮ್ಮ ಸುಖಲಾಭಸ್ಥಿತನಾದ ಅಂಗಾರಕನು ಶತ್ರುಕ್ಷೇತ್ರದಲ್ಲಿ ನಿಂತ ಕಾರಣ ಆರ್ಥಿಕ ಬಿಕ್ಕಟ್ಟು ಅಧಿಕವಾಗಲಿದೆ ಮನಸ್ಸಿಗೂ ನೆಮ್ಮದಿಯಿರದು ನಿರಾಶೆ ಜನತೆಯೊಡನೆ ಕಲಹವಾದೀತು ಬಂಧುವರ್ಗದವರಿಂದಾದ ಅಸಕ್ತತೆಯಿಂದಾಗಿ ವಿಶೇಷ ನೊಂದುಕೊಳ್ಳುವಿರಿ ರಾಜಕೀಯ ಕ್ಷೇತ್ರದಲ್ಲಿ ಪ್ರತಿಪಕ್ಷಿಗಳಿಂದ ಪರಾಜಿತರಾಗುವ ಸಂಭವವಿದೆ. ಪಿತ್ಥದೋಷವು ಆಗಾಗ ಕಾಡುಬಂದೀತು. ತಾ 13ರಿಂದ 16ರ ವರೆಗಿನ ದಿನಗಳು ಸ್ವಲ್ಪ ಉತ್ತಮವಾಗಿ ಕಾಣಲಿವೆ

೧೧ ಕುಂಭ

ಧನಸ್ಥಾನವು ಶೂನ್ಯವಾಗಿದ್ದರೂ ವ್ಯಯಸ್ಥಾನವು ಗ್ರಹತ್ರಯರಿಂದಾವೃತವಾಗಿರುವುದರಿಂದ ಅಯೋಗ್ಯ ವ್ಯಯವೇ ಇಂದು ಕಾಣಿಸಲಿದೆ ಆಪತ್ತಿಗಾಗಿ ಸಂಗ್ರಹಿಸಿಟ್ಟ ಧನವೂ ಇಂದು ಉಳಿಯಲಾರದು ಶತ್ರುವರ್ಗದವರು ಶಕ್ತಿಮೀರಿ ಉಪದ್ರವಿಸಲಿರುವರು ವಿಘ್ನಗಳ ಮೇಲೆಗೆ ಗುರಿಯಾಗುವ ಸಂಭವವಿದೆ ಸಾಂಸಾರಿಕ ತಾಪತ್ರಯಗಳಿಗೆ ಸಿಲುಕಿದ ನಿಮಗೆ ವಾರಾಂತ್ಯದ 4 ದಿನಗಳು ಹೆಚ್ಚಿನ ಶೋಚನೀಯಗಳಾಗಲಾರವು.

೧೨. ಮೀನ

ನಿಮ್ಮ ದುರ್ವಿಧಿಯಿಂದು ಬಹುಮಟ್ಟಿಗೆ ದೂರವಾಗುತ್ತಿದ್ದಂತೆ ಹೆಚ್ಚಿನ ನಿಮ್ಮ ಬಯಕೆಗಳು ಇಂದು ಕಾರ್ಯರೂಪಕ್ಕೆ ಬರಲಿವೆ ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾದ ನಿಮಗೆ ಸಮಾಜದಲ್ಲಿ ಒಳ್ಳೇ ಗೌರವಾದರಗಳು ಲಭಿಸುವವು ವಿಳಂಬವಾದರೆ ಶನಿಯು ಅನಿರೀಕ್ಷಿತ ಅನರ್ಥಗಳನ್ನು ತಂದೊಡ್ಡಲಿರುವನು. ಆಧಾರಿಗಳ ಕೂಡೆ ಅನುದಿನ ಕಲಹವಾದೀತು. ತಾ. 11, 16, 17 ಈ ದಿನಗಳಲ್ಲಿ ಮಿತ್ರ ಸಜ್ಜನರ ಬಂಧು ದರ್ಶನಾದಿಗಳ ಯೋಗವಿದೆ.

ಮಲ್ಲಿ?" ಫೋಟೊಪತ್‌ನಲ್ಲಿ ಮುಳುಗಿದ್ದಲ್ಲಿಂದಲೇ ಬಿಜಯನು ಕೇಳಿದನು.

'ಕಲವರು ನಿಜವಾಗ ಹೇಳುತ್ತಾರೆಂದು ಹೇಳ್ತಾರೆ ನಾಳೆ ಆ ಮೂಲೆಯಲ್ಲಿರುವ ಜ್ಯೋತಿಷ್ಯನೊಡನೆ ಕೇಳುವ"

"ನಾನು ಒಂದು ದಿನ ದೊಡ್ಡ ಮನುಷ್ಯನಾಗಲಿರುವನೆಂದು ನಾನು ಎಣಿಸುತ್ತೇನೆ ಯಾಕೆಂದರೆ ನನಗೆ ನಿನ್ನೆ ಕನಸು ಬಿದ್ದಿದೆ ನಾನು ಮದುವೆಯಾಗಿ ಮಕ್ಕಳೊಡನೆ ಸುಖಿಸಿಂದಿರುತ್ತೇನೇ. ಒಂದು ಸುಂದರ ಮನೆಯೂ ಸಹ ಇರುತ್ತದೆ. ನೀನು ನನ್ನ ಮಿತ್ರನಾದ ಜ್ಯೋತಿಯೆಂದು ಎಲ್ಲರಿಗೂ ಹೇಳ್ತೇನೆ ಆಗಬಹುದಲ್ಲಾ ಮೇ?'

"ಅದು ಬಹಳ ಒಳ್ಳೆಯದು ಬಿಜಯ್"

"ಜ್ಯೋತಿ, ನೀನು ಯಾಕೆ ನಮ್ಮಲ್ಲಿಯೇ ನಿಲ್ಲಬಾರದು? ನಾನು ನಿನಗೆ ಸಹಾಯ ಮಾಡುವೆನ ಮತ್ತು ಈಗ ನಾವು ಮಾಡುತ್ತಿರುವಂತೆ ನಾಣ್ಯಗಳನ್ನು ಹೆಕ್ಕಲು ಬಿಡುವುದಿಲ್ಲ ತಿಳಿಯಿತೆ?"

"ಆಯಿತು ಬಿಜಯ್. ನೀನು ನಿನ್ನ ಮಿತ್ರನಾದ ಜ್ಯೋತಿಯ ನ್ನು ಮರೆಯುವುದಿಲ್ಲವೆಂದು ನನಗೆ ಖಾಡಿತ ಗೊತ್ತಿದೆ.

"ಮತ್ತು ಜ್ಯೋತಿ. ನೀನು ನನ್ನ ಮಕ್ಕಳೊಡನೆ ನಾನು ನಾಣ್ಯಗಳನ್ನು ಹೆಕ್ಕುತ್ತಿದ್ದೆನೆಂದು ಹೇಳಕೂಡದು ತಾನ್!"

"ಆಯಿತು ಬಿಜಯ್ ನೀನು ಹೇಳಬಾರದೆಂದು ಹೇಳಿದರೆ ನಾನು ಹೇಳುವುದಿಲ್ಲ. ಆಯಿತೇ"

"ನಾನು ಒಂದು ದಿನ ಹಾಗೆ ಆಗಬಲ್ಲೆನೆಂದು ನನಗೆ ಖಂಡಿತವಿದೆ.'

"ಹೌದು ಬಿಜಯ್".

ಬಿಜಯನು ನಿದ್ರೆಯನ್ನು ಆಗಲೇ ಅಪ್ಪಿಯಾಗಿತ್ತು ಜ್ಯೋತಿಯು ಅವನ ಹತ್ತಿರವೇ ಕುಳಿತು ಅವನ ತಲೆಗೂದಲನ್ನು ಸವರುತ್ತಿದ್ದ. ಅವನಿಗೂ ಒಂದು ಬಗೆಯ ಆಕಾಂಕ್ಷೆ ಇದ್ದಿತು

ಹುಚ್ಚಿಯು ದೂರದಲ್ಲಿ ಕುಳಿತು ತನ್ನ ಷ್ಟಕ್ಕೆ ಹಾಡುತ್ತಿದ್ದಳು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ ಎರಡು ಉತ್ತಮ ಪ್ರತಿ.ರೂ ಎರಡೂವರೆ(ಟ ಖ ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ: ರೂ 1-25 (ಟ ಖ ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಪಥ್ಯ ವಿಧಾನ ಸವಿಸ್ತಾರವಾಗಿದೆ. ಬೆಲೆ. ರೂ ಎರಡು (ಟ.ಖ ಪ್ರತ್ಯೇಕ)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಫೆಬ್ರವರಿ, ೧೮, ೬೫ [ಸಂಚಿಕೆ ೨೫

Phone No. 22
ಫೋನ್ ನಂಬ್ರ: 22

NAVAYUGA

leading nationalist weekly

೨೦ ಪೈಸೆ

ವಾರದ ಕಥೆ

ಸಂಗೀತ ಪ್ರಿಯೆ

ಬರೆದವರು: ಶ್ರೀಮತಿ ಆನಂದಿ ಸದಾಶಿವರಾವ್.

ಗೇಟಿನ ಚಿಲಕ ತೆಗೆದ ಸದ್ದಾಯಿತು. ಕಿಟಕಿಯಿಂದಲೇ ಇಣಿಕಿ ಹೊರ ನೋಡಿದಾಗ, ಮಕ್ಕಳಿಗೆ ಸಂಗೀತ ಪಾಠ ಹೇಳಿಕೊಡುವ ಉಪಾಧ್ಯಾಯಿನಿ ಒಳ ಬಂದರು. ಬಾಗಿಲನ್ನು ತೆರೆಯಲು ನಾನೇ ಹೋದೆ. ಮಕ್ಕಳು ಶಾಲೆಯಿಂದ ಮರಳಿರಲಿಲ್ಲ. ಸಂಜೆ ಐದೂವರೆ ತಾಸಾಗಿತ್ತು. ಒಮ್ಮೊಮ್ಮೆ ಶಾಲೆಯಲ್ಲಿ ಇತರ ಚಟುವಟಿಕೆಗಳಿಗಾಗಿ ಹೆಚ್ಚು ಹೊತ್ತು ಇರಬೇಕಾಗುತಿತ್ತು. ತೋಟಗಾರಿಕೆ, ಆಟ, ಭಾಷಣ ಅಥವಾ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ಕ್ರಮಬದ್ಧವಾಗಿ ಅಲ್ಲಿ ನಡೆಯುತಿದ್ದುವು. ಅದರಿಂದ ಮಕ್ಕಳು ಮನೆಗೆ ಮರಳಲು ತಡವಾಗುತಿತ್ತು.

ಸಂಗೀತ ಉಪಾಧ್ಯಾಯಿನಿಗೆ, "ಕುಳಿತುಕೊಳ್ಳಿ" ಎಂದು ಕುರ್ಚಿ ತೋರಿಸಿದೆ ಡ್ರಾಯಿಂಗ್ ರೂಮಿನಲ್ಲಿ.

"ಮಕ್ಕಳು ಬರಲಿಲ್ಲವೆ?

"ಇಲ್ಲ. ಈಗ ಬರುವ ಸಮಯವಾಯಿತು."

"ಹೂಂ. ಹೌದು ಬಂದಾರು. ವೇಳೆಯಾಯಿತು" ಎಂದು ತಮ್ಮ ಕೈಗಡಿಯಾರ ನೋಡಿಕೊಳ್ಳುತ್ತಾ ಕುಳಿತುಕೊಂಡರು.

ಒಂದು ತಿಂಗಳಿನಿಂದ ತಪ್ಪದೆ ದಿನ ಬಿಟ್ಟು ದಿನ ಆಕೆ ಬರುತಿದ್ದರು. ಬಹಳ ಮುತುವರ್ಜಿಯಿಂದ ಪಾಠ ಹೇಳಿ ಕೊಡುತಿದ್ದರು.

ಅವರೀರ್ವರು ಗಂಡ ಮತ್ತು ಹೆಂಡತಿ ಪರ ಊರಿನಿಂದ ನಮ್ಮ ಊರಿಗೆ ಬಂದವರು.

ಕುಟುಂಬದ ಆದಾಯಕ್ಕೆ ಸಹಾಯವಾಗುವಂತೆ ಆಕೆ ತಾನು ಚಿಕ್ಕಂದಿನಲ್ಲಿ ಕಲಿತ ಸಂಗೀತ ಪಾಠ ಹೇಳಿಕೊಡುತಿದ್ದರು. ಹೀಗೆ ಪತಿ-ಪತ್ನಿಯರು ದುಡಿಯುತಿದ್ದರು. ಗಂಡನಿಗೆ ಹೆಚ್ಚಿನ ವರಮಾನ ಬರುವ ಕೆಲಸವಿರಲಿಲ್ಲ. ಬ್ಯಾಂಕಿನಲ್ಲಿ ಗುಮಾಸ್ತೆಯಾಗಿದ್ದರು.

ವಾರಪತ್ರಿಕೆಯನ್ನು ಅವರ ಮುಂದೆ ಇಟ್ಟೆ.

"ಓದಿ ಕೊಳ್ಳಿ. ಇಂದು ಎಂದಿಗಿಂತ ಕೊಂಚ ಬೇಗನೆ ಬಂದಿರಿ" ಎಂದೆ.

"ಬಸ್ಸು ಸಿಕ್ಕಿತು."

"ಹಾಗಾದರೆ ಇಂದು ಒಳ್ಳೆ ಅದೃಷ್ಟವಿದ್ದಂತಿದೆ."

"ನೀವು ಹೀಗೆನ್ನುವಾಗ ಒಂದು ವಿಷಯ ಹೇಳ ಬೇಕಾಗಿದೆ. ಇಂದು ಬೆಳಗಿನ ಅಂಚೆಯಲ್ಲಿ ನಾನು ಉದ್ಯೋಗಕ್ಕೆ ಸಲ್ಲಿಸಿದ ಅರ್ಜಿಯ ಉತ್ತರವೆಂಬಂತೆ ಇಂಟರ್‌ವ್ಯೂವ್‌ಗೆ ಕರೆ ಬಂದಿದೆ."

"ನನ್ನ ಹೃತ್ಪೂರ್ವಕ ಶುಭಾಶಯಗಳು"

"ಥ್ಯಾಂಕ್ಸ್."

"ಉದ್ಯೋಗ ದೊರಕಿದರೂ ಸಂಗೀತ ಪಾಠ ಹೇಳುವುದು ಬಿಡುವುದಿಲ್ಲ ತಾನೆ?"

"ಇಲ್ಲ. ನಿಮ್ಮಲ್ಲಿಗಂತೂ ಖಂಡಿತಾ ಬರ್ತೇನಮ್ಮಾ. ಸಂಗೀತ ಶಾಲೆಯಲ್ಲಿ ವಾರಕ್ಕೆ ನೂರು ದಿವಸ ಕ್ಲಾಸು ತೆಗೆದುಕೊಳ್ಳ ಬೇಕಾಗ ಬಹುದು ಅಷ್ಟೆ"

"ಹೂಂ" ಎಂದೆ ಮತ್ತು

"ಒಳ್ಳೆಯದಾಗಲಿ ನಿಮಗೆ" ಎಂದೆನು.

"ಏನು ಒಳ್ಳೆಯದೋ ಏನು ಕೆಟ್ಟದೋ. ಅದೃಷ್ಟ ಒಂದು ಚಕ್ರದಂತೆ ಇದೆ. ಅದರಲ್ಲಿ ಏಳಿತ ಇದೆ. ನನ್ನ ಗತವೈಭವ ಎಣಿಸಿದರೆ." ಎಂದು ಶುಷ್ಕ ನಗು ನಕ್ಕರು.

ನಗುವಿನ ಹಿಂದೆ ಅನುಭವಪೂರ್ಣವಾದ ಭಾರ ಹೃದಯ ಅಡಕವಾಗಿದೆ ಎಂದು ಕಾಣಬರುತಿತ್ತು.

ಸ್ವಭಾವತ ಆಕೆ ಮೌನಿ ಇಂದು ಇಷ್ಟು ಮಾತನಾಡಿದ್ದರು.

ಅಷ್ಟರಲ್ಲಿ ಆಳು ಕಾಫಿ ತಿಂಡಿ ಹಿಡಿದುಕೊಂಡು ಕೋಣೆಯೊಳಗೆ ಬಂದನು.

ನಾನು ಟೀ ಪಾಯ್ ಮೇಲೆ ಟ್ರೇ ಇರಿಸಲು ಹೇಳಿದೆ. ತಿಂಡಿಯ ತಾಟನ್ನು ಅವರ ಕೈಗೆ ಕೊಡುತ್ತಾ 'ತೆಗೆದುಕೊಳ್ಳಿ' ಎಂದೆ.

"ಥ್ಯಾಂಕ್ಸ್" ಎಂದು ತೆಗೆದುಕೊಂಡರು.

ತಿನ್ನುತ್ತಾ 'ಚೆನ್ನಾಗಿದೆ' ಎಂದರು

ಕೊಂಚಕಾಲ ಮೌನ ನೆಲಸಿತು.

ಸಂಗೀತ ಉಪಾಧ್ಯಾಯಿನಿ, ಅವನ್ನು ಬೇಧಿಸುತ್ತಾ ನುಡಿದರು.

"ಈಗಿನ ಪರಿಸ್ಥಿತಿಯಲ್ಲಿ ನಾನು ಕೂಡಾ ಇತರರ ಮನೆಯಲ್ಲಿ ಆಳಾಗಿ ದುಡಿಯಬೇಕಾಗಿತ್ತು. ಸಂಗೀತ ಕಲಿತುದರಿಂದ, ಈಗ ಕಷ್ಟ ನಷ್ಟಗಳನ್ನು ಇದರಿಂದ ಬಾಳುತಿದ್ದೇನೆ"

ಅವರ ದಾಂಪತ್ಯವು ವಿರಸದಲ್ಲಿ ಸಿಲುಕಿದೆ ಎಂದು ಯಾರೋ ನುಡಿದ ನೆನಪು.

"ಹೆಂಗಸರಿಗೆ ವಿದ್ಯೆ ಇದ್ದರೆ ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಅವರು ಕಂಗಡುವುದಿಲ್ಲ" ಎಂದೆ ನಾನು.

"ಹೌದು ಅದೊಂದು ಮಾತ್ರ ನಮ್ಮಿಂದ ಕಳೆದು ಹೋಗಬಾರದು. ಸಿರಿತನ, ಸ್ಥಾನ, ಎಲ್ಲಾ ಹೊರಟುಹೋಗಿ ಬಹುದು. ವಿದ್ಯೆಯನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ" ಎಂದರಾಕೆ.

"ನಿಮ್ಮ ಮಾತಾಪಿತರು ಸಂಗೀತ ವಿದ್ಯೆಯನ್ನು ಕಲಿಸಿದರಲ್ಲವೆ? ಒಳ್ಳೆಯ ದೂರದರ್ಶಿತ್ವವಿರಬೇಕು"

"ನಮ್ಮಲ್ಲಿ ಸಂಗೀತ ಅಭ್ಯಾಸ ಮಾಡದವರು ವಿರಳ. ಅದೂ ನಾನು ಚಿಕ್ಕಂದಿನಲ್ಲಿ ಉತ್ತಮ ಸ್ಥಿತಿಯಲ್ಲಿ ಬಳೆದವಳು. ನನ್ನ ತಂದೆಗೆ ಸಂಗೀತವೆಂದರೆ ತುಂಬಾ ಪ್ರೇಮ. ಮನೆಯಲ್ಲಿಯೇ ಸಂಗೀತ ಉಪಾಧ್ಯಾಯರುಗಳನ್ನು ಇರಿಸಿಕೊಂಡು, ಎಲ್ಲಾ ಮಕ್ಕಳಿಗೆ ಶಿಕ್ಷಣ ದೊರಕಿಸಿಕೊಟ್ಟಿರುವರು."

"ಹೂಂ"

"ಆಗ ಹೆಣ್ಣು ಹುಡುಗಿಯರಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅವಕಾಶವಿರಲಿಲ್ಲ"

"ಅವಕಾಶವಿಲ್ಲದಿದ್ದರೆ ಸರಿ ಅವಕಾಶವಿದ್ದೂ ಒಬ್ಬೊಬ್ಬರು ವಿದ್ಯಾಭ್ಯಾಸಕ್ಕೆ ಗಮನ ವೀಯುವುದಿಲ್ಲ."

"ಅದು ಅವರವರ ಅದೃಷ್ಟ. ಎಷ್ಟೋ ವಿದ್ಯಾರ್ಥಿನಿಯರಿಗೆ ಧರ್ಮಾರ್ಥವಾಗಿ ಸಂಗೀತ ಹೇಳಿಕೊಡುವೆನೆಂದರೆ ಅವರು ಮುಂದೆಬರುವುದಿಲ್ಲ. ಹಿಂದೆ ನಾನು ಇದ್ದ ಊರಿನಲ್ಲಿ ಒಂದು ತರಗತಿಯನ್ನು ತೆರೆದಿದ್ದೆನು. ಇಲ್ಲಿಯೂ ತೆರೆಯಬೇಕೆಂದಿರುವೆನು."

"ಶಾಲೆಯಲ್ಲಿ ಉದ್ಯೋಗ ದೊರೆತರೆ ಅಲ್ಲಿಯೇ ಅದಕ್ಕೆ ಅವಕಾಶವಿರ ಬಹುದು"

"ಹೌದು, ಸಾಧ್ಯವಾದಷ್ಟು ಪ್ರಯತ್ನಮಾಡಿ ಮಕ್ಕಳಿಗೆ ಸಂಗೀತ ಕಲಿಸುವ ಆಸೆ."

"ಸಂಗೀತ ಕಲಿತರೂ ಅದು ಕೆಲವರಿಗೆ ಮಾತ್ರ ಸಿದ್ಧಿಸುವುದು, ಅಲ್ಲವೆ?"

"ಸಾಧನೆ ಮತ್ತು ಶ್ರದ್ಧೆ ಇದ್ದರೆ ಸಂಗೀತ ಪಾಠ ಬರುವುದು." ಟೀಚರು ನುಡಿಯುವಾಗ ಮಕ್ಕಳಿಬ್ಬರೂ ಬಂದರು.

ಸಂಗೀತ ಟೀಚರನ್ನು ನೋಡಿ "ನಮಸ್ತೆ ನಮಸ್ತೆ" ಎಂದರು.

'ಬೇಗನೆ ಕಾಫಿ ಕುಡಿದು ಬನ್ನಿ' ಎಂದು ನಾನು ಅವರನ್ನು ಒಳಗೆ ಕಳುಹಿದೆ.

ಬಳಿಕ ಒಂದು ಒಂದೂವರೆ ತಾಸು ಸಂಗೀತ ಪಾಠವಾದ ಬಳಿಕ ಟೀಚರು ಹೊರಟು ಹೋದರು.

ನೀಟಾಗಿ ಧರಿಸಿದ್ದ ಪ್ರಿಂಟ್ ಸೀರೆ. ನಯವಾಗಿ ಬಾಚಿದ್ದ ತಲೆ ಕೂದಲು. ಸಾದಾಮ ಖವಾದರೂ ಹೊಳೆಯುವ ಕಣ್ಣುಗಳು, ಜೀವನದ ಏರು ತಗ್ಗುಗಳಿಂದ ಬೆದರದೆ ಸಮಸ್ಯೆಗಳೊಡನೆ ಹೋರಾಡುವ ಎದೆಗಾರಿಕೆ, ಸಂಗೀತದ ಮೇಲೆ ಇರುವ ಅಪಾರ ಪ್ರೇಮದಿಂದ ಬಂದ ಸಹಜ ಕಲಾವಂತಿಕೆ. ಇದರಿಂದ ಸಂಗೀತ ಉಪಾಧ್ಯಾಯಿನಿಗೆ ಒಂದು ವ್ಯಕ್ತಿತ್ವವಿದ್ದು, ನೋಡುವವರ ಗಮನ ಸೆಳೆಯು ವಂತಿದ್ದರು.

ದಿವಸಗಳು ಉರುಳಿದುವು. ತಿಂಗಳುಗಳು ಕಳೆದುವು. ಸಂಗೀತ ಟೀಚರು ಭಾರೀ ಪ್ರೇಮದಿಂದ ಸಂಗೀತ ಹೇಳಿಕೊಡುತಿದ್ದರು ಮಕ್ಕಳಲ್ಲಿ ಸುಪ್ತವಾದ ಅಭಿರುಚಿ ಚಿಗುರಿತು. ಬೆಳೆಯತೊಡಗಿತು.

ಅಭ್ಯಾಸ ತೊಡಗಲು, ಹಿಂದೆ ಒತ್ತಾಯ ಮಾಡಬೇಕಾಗುತಿತ್ತು. ಕ್ರಮೇಣ ಮಕ್ಕಳು, ತಾವಾಗಿಯೇ ಹಾಡತೊಡಗುತಿದ್ದರು.

"ಬೆಳಿಗ್ಗೆ ಬೇಗನೆ ಏಳಲು ಒಂದು ಕಾರಣ ಸಂಗೀತ"

ಎಂದು ಮಕ್ಕಳ ತಂದೆ ಹಾಸ್ಯ ಮಾಡುತಿದ್ದರು. ಸ್ವರ, ವರ್ಣಗಳ ಪಾಠ ಮುಗಿದು ಕೀರ್ತನೆಯನ್ನು ಕಲಿಸ ತೊಡಗಿದರು.

ಒಮ್ಮೊಮ್ಮೆ ಸಂಗೀತ ಟೀಚರು ತಾವೇ ಒಂದರ್ಧ ತಾಸು ಸುಶ್ರಾವ್ಯವಾಗಿ ಮನಸ್ಸಿಗೆ ಲವಲವಿಕೆ ಇದ್ದಾಗ ಹಾಡುತಿದ್ದರು. ಬಳಿಕ, 'ಮನಸ್ಸಿಗೆ ಏನು ಬೇಸರವಿದ್ದರೂ, ಹಾಡಿದೊಡನೆ ಅದು ಮಾಯವಾಗಿ ಹೋಗುತ್ತದೆ' ಎನ್ನುತಿದ್ದರು.

"ಎಲ್ಲರಿಗೂ ಅಂತಹ ಸಮಾಧಾನ ದೊರಕುವುದಿಲ್ಲ" ನಾನು ಎಂದರೆ,

ನನಗೆ ಸಂಗೀತವೇ ಸಮಾಧಾನ ನೀಡುವುದು" ಎನ್ನುವರಾಕೆ.

(ಹದಿನೈದನೇ ಪುಟ ನೋಡಿರಿ)





Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ

ಮುಖಪತ್ರದಲ್ಲಿ:

ನವದೆಹಲಿ ಭಾರತೀಯ—ಅಮೆರಿಕೆಯ ಶಿಕ್ಷಕರ ಸಮ್ಮೇಳನದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಭಾಷಣವೀಯಲು ಬಂದೊಡನೆ ಶ್ರೀಮತಿ ವೇರಾ ರಿಚರ್ಡ್ಸ್ ಮತ್ತು ಡಾ| (ಶ್ರೀಮತಿ) ಮಾಧುರಿ ಆರ್ ಷಾ ಅವರು ಸ್ವಾಗತಿಸುತ್ತಿರುವುದು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೨೫	೧೮—೨—೧೯೬೫	No. 25

ಕೈರಾನರ ಕೊನೆ

ಪಂಜಾಬದ ಹುಲಿಯೆಂದ ಹೆಸರಾದ ಪ್ರತಾಪಸಿಂಹ ಕೈರಾನರು ಕಗ್ಗೊಲೆಗೆ ಗುರಿಯಾದುದು ವಿಸ್ಮಯಜನಕ ಮಾತ್ರವಲ್ಲ, ಕುತೂಹಲಕಾರಕವೂ ಹೌದು. ದೆಹಲಿಯಲ್ಲಿ ಕೇಂದ್ರ ನಾಯಕರೊಡನೆ ಮಾತನಾಡಿಕೊಂಡು ಪಂಜಾಬದತ್ತ ನಡೆಯುತ್ತಿರುವಾಗಲೇ ದೆಹಲಿ—ಪಂಜಾಬದ ಗಡಿಯ ಆಯಕಟ್ಟಿನ ಎಡೆಯಲ್ಲೇ ಕೈರಾನರೂ ಅವರೊಂದಿಗಿದ್ದ ಇತರರೂ ಗುಂಡಿಗಾಹುತಿಯಾದ ಸಂಗತಿ ವಿಲಕ್ಷಣವೇ ಸರಿ. ಕೊಲೆಗಾರರ ಶೋಧವಿನ್ನೂ ಆಗಿಲ್ಲ; ಅನುಮಾನದಿಂದಾಗಿ ಒಬ್ಬಿಬ್ಬರನ್ನು ಬಂಧಿಸಲಾಗಿದೆಯಾದರೂ ಕೊಲೆಗೆ ಕಾರಣ ಮತ್ತು ಅದನ್ನು ಮಾಡಿದ ವ್ಯಕ್ತಿ ಇನ್ನೂ ಪತ್ತೆಯಾಗಿಲ್ಲ—ಪೋಲೀಸರ ಸತತ ಪ್ರಯತ್ನ ಮಾತ್ರ ನಡೆಯುತ್ತಿದೆ. ಹೀಗಾಗಿ ಕೈರಾನರ ಕೊಲೆಯೊಂದು ನಿಗೂಢ ರಹಸ್ಯವಾಗಿಯೇ ಉಳಿದಿದೆ.

ಪಂಜಾಬದ ಮುಖ್ಯ ಮಂತ್ರಿಯಾಗಿದ್ದಾಗ ಅಧಿಕಾರದ ದುರುಪಯೋಗ ಮಾಡಿಕೊಂಡು ಭ್ರಷ್ಟಾಚಾರಕ್ಕೆ ಉತ್ತೇಜನವಿತ್ತವರು ಎಂಬ ಆರೋಪವನ್ನು ಇವರು ಹೊತ್ತಿದ್ದರು. ಈ ಆರೋಪಗಳು ಒಂದಲ್ಲ ಹಲವು ಬಾರಿ ಆಗ ಪ್ರಧಾನಿಯಾಗಿದ್ದ ನೆಹರೂರವರ ಬಳಿ ಹೋದುವು. ಆದರೆ, ಕೈರಾನರನ್ನು ನೆಹರು ಸರಿಯಾಗಿ ತಿಳಿದುಕೊಂಡಿದ್ದ ಕಾರಣದಿಂದ ಇದ್ದರೂ ಇರಬಹುದು, ಅಥವಾ ಪಂಜಾಬದಂತಹ ಗಡಿರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆಯನ್ನುಳಿಸಿಕೊಳ್ಳುವುದಕ್ಕಾಗಿ ಇದ್ದಿರಬಹುದು, ಅವನ್ನು ಕಿವಿಗಿನಿಗೇಳದರು. ಮುಂದೆ ಅನಿವಾರ್ಯವಾಗಿ ದಾಸ್ ಸಮಿತಿಯನ್ನು ವಿಚಾರಣೆಗಾಗಿ ಏರ್ಪಡಿಸಲೇಬೇಕಾಯಿತು. ಈ ಸಮಿತಿಯ ವರುಷದಲ್ಲಿ ತಾನು ಅಪವಿತ್ರನೆಂದು ಸಿದ್ಧವಾದೊಡನೆಯೇ ರಾಜೀನಾಮೆಯಿತ್ತು ಸತ್‌ಸಂಪ್ರದಾಯವನ್ನು ಹಾಕಿಕೊಟ್ಟ ಮಹಾ ವ್ಯಕ್ತಿ ಕೈರಾನ್—ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅಂದಿನಿಂದಲೂ ಇವರು ರಾಜಕೀಯದಲ್ಲಿ ಪ್ರತ್ಯಕ್ಷವಾಗಿಯೆ ಭಾಗವಹಿಸುತ್ತಿದ್ದರು. ಪಂಜಾಬಿನ ಜನರಲ್ಲಿ ಕೈರಾನರ ಪ್ರಶಂಸಕರು ಬಹುಸಂಖ್ಯೆಯಲ್ಲಿದ್ದಾರೆ.

ಪಂಜಾಬ—ಬಂಗಾಳಗಳ ಜನರು ಸ್ವಾಭಾವಿಕವಾಗಿ ಧೈರ್ಯಶಾಲಿಗಳು. ಕೆಚ್ಚು ಅವರಲ್ಲಿ ತುಂಬಿರುವುದು. ದುರದೃಷ್ಟದಿಂದ ಭಾರತ ವಿಭಜನೆಯಾದಾಗ ಈ ಎರಡೂ ರಾಜ್ಯಗಳೂ ವಿಭಜನೆಗೊಂಡುವು. ಪಾಕಿಸ್ತಾನದ ಗಡಿಯಲ್ಲಿರುವುದರಿಂದ ಈ ಎರಡೂ ರಾಜ್ಯಗಳ ಮಹತ್ವ ಭಾರತದ ಪ್ರತಿಷ್ಠೆಯಲ್ಲಿ ಅಡಗಿದೆ. ನಿರಾಶ್ರಿತರು ಓಡಿ ಬರುವುದಿರಲಿ, ಗಡಿದುರ್ಘಟನೆಗಳಿರಲಿ, ಅಕ್ರಮ ಸಂಚಾರವಿರಲಿ ಎಲ್ಲವೂ ಇಲ್ಲಿ ನಡೆಯುತ್ತಿರುತ್ತವೆ. ಆದುದರಿಂದಲೇ ಇವುಗಳಲ್ಲಿ ಭದ್ರ ಸರಕಾರಗಳಿರುವುದು, ನೆಮ್ಮದಿ-ಸುರಕ್ಷೆಗಳಿರುವುದು, ಎಂದೆಂದಿಗೂ ಅತ್ಯಗತ್ಯ. ಬಂಗಾಳದಲ್ಲಿ ಬಿ. ಸಿ. ರಾಯ್ ಮತ್ತು ಪಂಜಾಬದಲ್ಲಿ ಕೈರಾನರು ಇವುಗಳಿಗೆ ತಕ್ಕವರಾಗಿದ್ದರು; ಎಂತಲೆ ನೆಹರೂರವರು ಸಮಾಧಾನ ತಾಳಿದ್ದರು. ಚೀನೀಯ ಆಕ್ರಮಣದ ವೇಳೆಯಲ್ಲಿ ಕೈರಾನರು ತೋರಿದ ಉತ್ಸಾಹ, ವಹಿಸಿದ ದಿಟ್ಟತನ ಎಲ್ಲರನ್ನೂ ದಂಗುಗೊಳಿಸಬಲ್ಲುದು—ಆದರೆ, ಇವೆಲ್ಲವೂ ಅವರ ವ್ಯಕ್ತಿನಿಷ್ಠ ಮೌಲ್ಯಗಳು. ಪ್ರಜಾಪ್ರಭುತ್ವದಲ್ಲಿ ಇದಕ್ಕೆ ಬೆಲೆಯಿದೆಯೇ ಎಂದು ಜನ ಕೇಳಿದರು. ಜನಮತದ ಮುಂದೆ ಯಾರಾದರೂ ತಲೆ ತಗ್ಗಿಸಲೇಬೇಕು; ನೆಹರೂ ತಗ್ಗಿಸಿದರು, ಶಾಸ್ತ್ರಿ ತಗ್ಗಿಸಿದರು; ಕೈರಾನರೂ ಸಹಜವಾಗಿಯೇ ತಗ್ಗಿಸಿದರು. ಅಧಿಕಾರದಿಂದ ಹೊರಬಿದ್ದ ಕೈರಾನರು ತಾನಿನ್ನೂ ರಾಜಕೀಯದಲ್ಲಿ ರಚನಾತ್ಮಕವಾಗಿ ಭಾಗವಹಿಸುವ ಇರಾದೆಯನ್ನಿಟ್ಟುಕೊಂಡಿದ್ದರು. ಆದರೆ, ವಿಧಿಯಿದನ್ನು ಒಡಂಬಡಲಿಲ್ಲ.

ಪ್ರತಾಪಸಿಂಹರ ವ್ಯಕ್ತಿತ್ವ ಮಹಾನ್ ಆಗಿತ್ತು, ಅವರ ಕಾರ್ಯತತ್ಪರತೆಯೂ ಅಷ್ಟೆ ದೊಡ್ಡದು. ಅಕಾಲಿಗಳ ಚಳವಳಿ, ಪಂಜಾಬಿ ಸುಬಾದ ಬೇಡಿಕೆಯ ಆಂದೋಲನ, ಹಿಂದೀ ಭಾಷಾ ವಿರೋಧಿ ಘೋಷಣೆ—ಹೀಗೆ ಒಂದಲ್ಲ ಹಲವು ಅಡೆತಡೆಗಳನ್ನು ಕೆಚ್ಚೆದೆಯಿಂದ ಎದುರಿಸಿದ ಮಹಾ ವ್ಯಕ್ತಿ; ಅಲ್ಲಕಲ್ಲೋಲವಾಗಿದ್ದ ಪಂಜಾಬದಲ್ಲಿ ಸ್ಥಿರ ಆಡಳಿತೆಯೊಂದನ್ನು ಸ್ಥಾಪಿಸಿಕೊಂಡು ಬಂದ ಧೀರ. ಅವರ ಮೇಲಿನ ಆರೋಪಗಳು ಏನೇ ಇರಲಿ, ಅವಿನ್ನೂ ನ್ಯಾಯಾಂಗ ವಿಚಾರಣೆಯಲ್ಲಿ ಸಿದ್ಧವಾಗಬೇಕು, ಅವರೊಬ್ಬ ಆದರ್ಶವಾದಿ. ಮತ್ತೆ ಅವರ ಕೊಲೆಯ ರಹಸ್ಯ ಭೇದವಾಗದಿರುವುದೂ ರಹಸ್ಯವೆನಿಸಿದೆ. ಇದರಲ್ಲಿ ರಾಜಕೀಯ ಕಾರಣಗಳಿಲ್ಲವೆಂದು ಹೇಳಲಾಗುತ್ತಿದೆ; ಕೊಲೆಯ ಸುಳಿವು ಮೊದಲೇ ಅಪ್ರತ್ಯಕ್ಷವಾಗಿ ಜನತೆಯ ಗಮನಕ್ಕೆ ಬಂದಿತ್ತು ಎನ್ನಲಾಗಿದೆ. ಪ್ರಜಾಶಕ್ತಿಯಲ್ಲಿ ಮಹಾನ್ ಅಪವಾದಕ್ಕೆ ಒಳಗಾಗಿದ್ದ ವ್ಯಕ್ತಿ ಮತ್ತಾತನ ಸಂಗಡಿಗರ ಏಕಕಾಲಿಕ ಕೊಲೆಯೆಂದರೆ, ಅದರಲ್ಲಿ ನಿಗೂಢ ಉದ್ದೇಶವಿದ್ದೇ ತೀರಬೇಕು ಎಂದು ಜನ ನಂಬಿದರೆ ತಪ್ಪಲ್ಲ. ಕೊಲೆಗಾರರನ್ನೂ ಕೊಲೆಯ ಉದ್ದೇಶವನ್ನೂ ಶೋಧಿಸುವಲ್ಲಿ ಯಶ ಲಭಿಸೀತೆ? ಅಥವಾ ಕೊಲೆಯ ಆರೋಪ ಹೊರಲು ಯಾರನ್ನಾದರೂ ಹುಡುಕಿ ತರಬೇಕಾದೀತೆ? ಸಂಬಂಧಪಟ್ಟವರ ದಕ್ಷ ಕಾರ್ಯಕ್ರಮಗಳಿಂದ ಮಾತ್ರ ಸತ್ಯ ಹೊರಪಟ್ಟೀತು.

ವಚನ ಸುಧೆ

ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ
(ಶ್ವೇತಾಶ್ವತರೋಪನಿಷತ್ತು, ೬-೧೧)

O ಒಬ್ಬನೇ ಪರಮಾತ್ಮನು ಎಲ್ಲ ಭೂತಗಳಲ್ಲಿಯೂ ಅಡಗಿದ್ದಾನೆ, ಅವನು ಸರ್ವವ್ಯಾಪಿಯೂ, ಸರ್ವ ಭೂತಗಳೊಳಗಿರುವ ಆತ್ಮನೂ ಆಗಿದ್ದಾನೆ.

OO ಜಗತ್ತಿನ ಎಲ್ಲ ವಸ್ತುಗಳಲ್ಲಿಯೂ ಹರಡಿರುವ ಪರಮಾತ್ಮನೊಬ್ಬನೇ. ಅವನೆಲ್ಲೆಲ್ಲಿಯೂ ಇರುವನಾದರೂ ಗುಪ್ತವಾಗಿದ್ದಾನೆ. ಎಲ್ಲ ಭೂತಗಳಲ್ಲಿಯೂ ಅಂತರ್ಯಾಮಿಯಾಗಿದ್ದಾನೆ. ಅವನಿಲ್ಲದ ಎಡೆಯಿಲ್ಲ.

ಉಣಲಿಲ್ಲ, ಕಾರುವುದೇನು?

'ಸುಗ್ಗಿಯಲ್ಲುಂಡುದನ್ನು ಕಾರಿನಲ್ಲಿ ಕಾರು' ಎಂಬುದು ಸಾಮಾನ್ಯ ವರ್ಗದವರ ಅನುಭವದ ಮಾತು. ಕಳೆದ ಕಾರಿನಲ್ಲಿ ಇದು ಸಹಜವಾಯಿತು. ಈ ಸುಗ್ಗಿಯ ಪರಿಸ್ಥಿತಿಯನ್ನವಲೋಕಿಸುವಾಗ ಮುಂದಿನ ಕಾರಿನಲ್ಲಿ ಕಾರುವುದು ಬರಿಯ ಪ್ರಾಣವನ್ನು ಮಾತ್ರವೆಂದು ತೋರುತ್ತದೆ. ಸ್ವಾತಂತ್ರ್ಯಾನಂತರದ ಈ ಶಾಂತಿ—ಸುಭಿಕ್ಷೆಯ ಯುಗದಲ್ಲೂ ಈ ಬಗೆಯ ಸನ್ನಿವೇಶವೊದಗಿದುದು ತೀರ ದುರ್ದೈವ. ಜನ ಸುಖಜೀವನವನ್ನು ತೊರೆಯಬಹುದು. ಉಣ್ಣುವುದಕ್ಕೆ ಅನ್ನವೇ ಇಲ್ಲವಾದ ಪಕ್ಷದಲ್ಲಿ ಮೊದಲಾವುದಾದರೂ ಏನು? ಬದುಕುವುದಾದರೂ ಎಂತು? ಆಹಾರದ ಸಮಸ್ಯೆ ತಿಳಿಯಾಗುತ್ತ ಬರುತ್ತಿದೆಯೆಂಬ ಜನನಾಯಕರ ಆಶ್ವಾಸನೆ ಬರಿಯ ಬಡಾಯಿಯೆಂದು ಜನವೀಗ ಅರಿತಿದೆ. ಸರಕಾರದ ಅಸಮರ್ಪಕ ನೀತಿ,ನಿಯಮಗಳಿಂದಾಗಿಯೇ ಈ ಸಮಯದಲ್ಲಿ ಆಹಾರ ಧಾನ್ಯಗಳ ಬೆಲೆ ಗಗನವನ್ನಲ್ಲ, ಸ್ವರ್ಗವನ್ನೇ ಮುಟ್ಟಿದೆ. ಅದರೊಂದಿಗೆ ಜನರೂ ಸ್ವರ್ಗಾರೋಹಣ ಗೆಯ್ಯುವುದೊಂದೇ ಬಾಕಿ. ಏಕೆಂದರೆ, ಕೇಳಿದ ಬೆಲೆ ತೆರುವುದಕ್ಕೆ ಸಿದ್ಧನಾದರೂ ಶ್ರೀಸಾಮಾನ್ಯನು ಉಪವಾಸ ಬೀಳುವ ಪರಿಸ್ಥಿತಿಯೊಂದು ನಿರ್ಮಾಣವಾಗಿದೆ, ನಗರ—ಹಳ್ಳಿಗಳೆಲ್ಲವುಗಳ ಕಥೆಯಿಂದು

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

"ಒತ್ತಾಯದಿಂದ ವಿದ್ಯಾರ್ಥಿಗಳ ಮೇಲೆ ಹಿಂದಿ ಹೇರಲು ನಾವು ಬಿಡುವುದಿಲ್ಲಾಂತ ಭರವಸೆಯಿತ್ತಿದ್ದಾರೆ ಮುಖ್ಯಮಂತ್ರಿಗಳು ಅದ್ದರಿಂದ ನನ್ನ ಹಿಂದೀ ಮೇಸ್ಟ್ರನ್ನ ಮನೆಗೆಳಿಸಿದರೆ, ಬೇಗಾದೀತೂಂತ...."

ಗೇಹ ರಾಜ್ಯದಲ್ಲಿ

ಅಹಿಂದೀಯರು ಹಿಂದೀಯರಾದಾರೆ?

"ಹೌದ್ರಿ, ಒಂದು ಮಾತನ್ನ ನಿಮ್ಮ ಕೇಳ್ಬೇಕೂಂತ..."

"ಒಂದೂಂತೇನು ನೂರು ಕೇಳ್ಬಿಡು.."

"ಅಷ್ಟಕ್ಕ್ಯಾ ಹೇಳ್ತೀರಾ ನೀವು...."

"ಅಲ್ಲಾ, ನೀನು ಕೇಳ್ತೀಯುಂತೆ, ನಾನು ಹೇಳೋದು ದೊಡ್ಡದೇ?'

"ದೊಡ್ಡ ಗಿಡ್ಡ ಏನೂ ಇಲ್ಲಾಂತನ್ನಿ. ಸದ್ಯ ಅಷ್ಟೆಲ್ಲಾ ಕೇಳೋಕೆ ನಂಗೇನು ಗೊತ್ತಿದೇಂತ?"

"ಆದ್ರೂ ಒಂದು ಗೊತ್ತಿದೆ ತಾನೆ?"

"ಒಂದೂ ಅಲ್ಲ, ಎರಡೂ ಅಲ್ಲ."

"ಮನಸ್ಸು ಮಾಡಿದ್ರೆ ನೂರೂ ಕೇಳೋವಳು ನೀನೂಂತ...."

"ನಿಮ್ಗೆ ಗೊತ್ತು ಅಲ್ವೆ?"

"ಹ್ಞೂಂ... ನೂರು ಆಡೋವಳು ನೂರು ಕೇಳೋದ್ರಲ್ಲಿ ತಪ್ಪೇನಿದೇಂತ?"

"ಸಾಕು ಸುಮ್ನಿರೀಂದ್ರೆ....ನಾನಂತೂ ನೂರು ಆಡೋವಳೂಂತ ಅಂದ್ರಿ. ಮತ್ತೆ ನೀವು?"

"ಹ್ಹ ಹ್ಹ.. ನಾನು ನಿನ್ನ ಬಿಟ್ಟು ಇರೋದು ಸಾಧ್ಯವೇನು?"

"ಸದ್ಯ ಅಷ್ಟಾದ್ರೂ ಭರವಸೆಯಿತ್ತಿರಲ್ಲ! ಸಾಕು. ನೋಡಿ, ಅದೇ...."

"ಅದೇಂತ ನನ್ಗೂ ಗೊತ್ತು...ಆದ್ರೆ...'

"ಆದ್ರೆ ಏನು?...

"ಮತ್ತೇನೂ ಇಲ್ಲ ಅದು ಏನೂಂತ?"

"ಅಷ್ಟೇನೆಯೆ? ಮತ್ತೇನೂ ಇಲ್ಲ. ನೋಡಿ...."

'ಎಂತದಷ್ಟು ನೋಡೋದ? ನೋಡ್ಲಿಕ್ಕೆ ಏನಿದೆ ಇಲ್ಲಿ ಅಂಥ ವಿಷಯ...?"

"ಪಾಪ, ಏನೂ ಇಲ್ಲ ಅಲ್ವೆ?"

'ನೀನ್ನ, ಕುಸು ಯೋಚನೆ ಮಾಡ್ತೀನಿ ...ಹೂಂ...ನೀನಂತೂ ಇದೀಯೆನ್ನು...."

'ಬದುಕಿಸೆ, ಸದ್ಯ ಅದೂ ಇಲ್ಲಾಂತ ಅಂತೀರೋಂತಿದ್ದೆ....''

"ಕಣ್ಣಿದ್ದೂ ಕುರುಡಾಂತ ತಿಳ್ಕೊಂಡೆಯೇನೆ?"

'ಅಷ್ಟು ತಿಳುವಳಿಕೆ ಮೊದ್ಲೇ ಇರುತ್ತಿದ್ರೆ ಯಾಕೆ ನಿಮ್ಮ ಕೈ....'

'ಸಾಕು ಸಾಕು ನಿಲ್ಲಿಸು ನಿನ್ನ ಇಂತಹ ಲಾಪವನ್ನು, ಮತ್ತೆ ಸೊಲ್ಲಿಸುನಿನ್ನ....'

'ಕೇಳಿಕೆಯನ್ನು ಅಲ್ವೆ? ಹ್ಞೂ.... ನೋಡಿ....'

"........."

'ಅಲ್ಲಾ, ಮತ್ತೇನೂ ಇಲ್ಲ. ದಿವಂಗತ ನೆಹರು ಏನೂಂತ ಆಶ್ವಾಸನೆ ನೀಡಿದ್ದಾರೆ?'

'ಒಳ್ಳೆಯ ಪ್ರಶ್ನೆಯೂ ಗ್ತಾಲ್ಲ ಇದು....'

"ಯಾಕೆ?"

"ಯಾಕೇಂತಂದ್ರೆ ದಿ। ನೆಹರು ಒಂದಲ್ಲ ನೂರು ಜನರಿಗೆ ನೂರು ಬಗೆಯ ಆಶ್ವಾಸನವಿತ್ತಿದ್ದಾರೆ..."

"ಇದಿಲ್ಲ ಹಾಗೇ. ನಮ್ಮ ದೇಶದ ಜನರಿಗೆ?"

"ಅದೂ ಅಷ್ಟೇನೇ...."

"ಅಲ್ರಿ..."

"ಏನು?"

"ಏನೂಂದ್ರೆ, ಅದೇ ಹಿಂದೀ ವಿಚಾರದಲ್ಲಿ..."

"ಓ....ಹಾಗೆ ಹೇಳು ಮತ್ತೆ...ಹಿಂದೀ ಭಾಷೆಯ ವಿಚಾರದಲ್ಲಿ ಭಾರತದ ಅಹಿಂದೀ ರಾಜ್ಯಗಳಿಗೆ ಏನು ಆಶ್ವಾಸನ ನೀಡಿದ್ದರು ಅಂತ ತಾನೇ ನೀನು ಕೇಳೋದು?"

"ಹ್ಞೂಂ....ಅದನ್ನೇ .."

"ನೋಡು ಹಿಂದಿ ಅಂದ್ರೆ ನಾಲ್ಕಾರು ವರ್ಷ ಮೊದ್ಲು ಹಿಂದಿಯನ್ನ ಅಧಿಕೃತ ಭಾಷೆಯಾಗಿಸುವುದರೊಂದಿಗೆ ಅನಿರ್ದಿಷ್ಟಾವಧಿಯವರೆಗೆ ಇಂಗ್ಲಿಷ ಭಾಷೆಯೂ ಅದೇ ಸ್ಥಾನದಲ್ಲಿ ಮುಂದುವರಿಯುವ ಬಗ್ಗೆ ನಿರ್ಣಯವಾಯ್ತು. ಅದರಂತೆ ಇದೇ ಜನವರಿ ೨೬ರಿಂದ ಹಿಂದಿಯ ಸ್ಥಾನಮಾನಪೇರಿತೂನ್ನು...."

"ಅದು ನನಗೂ ಗೊತ್ತು. ಆಗ ನೆಕ್ರು...'

"ತಾಳು ಸ್ವಲ್ಪ ಹೇಳ್ತೇನೆ ಮುಂದೆ...."

'ಆಯ್ತಪ್ಪ ನಿಮ್ಮ ಜೊಂಬ್ಡಿ ಜಾರ್ಸಿ.."

"ಅಲ್ವೆ, ನಿನ್ನ ಸವಾಲಿಗೆ ನಾನು ಜವಾಬು ಕೊಡೋದಕ್ಕೆ ಹೊರಟಿರೋನು, ಅದು ನಿನ್ಗೆ ಬೊಂಬ್ಡಿಯನ್ನಿದ್ರೆ ಬೇಡ... ನನ್ಗೇನಂತೆ?"

"ಇಲ್ಲಪ್ಪ, ಇಲ್ಲಾ. ಜಾರ್ಸಿ ನಿಮ್ಮ ನಗಾರಿ."

'ಸಾಕುಮಾಡೇ.... ನಾನೇನೂ ಅನ್ನೊಲ್ಲ... ಸುಂಸುಮ್ನೆ...."

"ಅನ್ನಿ ಅನ್ನಿ. ಅನ್ನೋದನ್ನಾ ಚಿಕ್ಕದ್ರಲ್ಲಿ ಅನ್ನೀರಿ..."

"ಅಲ್ಲಾ, ಚಿಕ್ಕದ್ರಲ್ಲಿ ಅಂದ್ರೆ ಮತ್ತೆ ನಿನ್ನ...."

"ಏನು?...."

"ನೋಡು ಎಸೆಂಬ್ಲೀಲಿ ಸದಸ್ಯರು ಸವಾಲು ಹಾಕ್ತಾರೆ. ಆ ಮೇಲೆ ಇದ್ಕೆ ನೂರು ಉಪ ಸವಾಲು ಮುಂದೆ ಬರುತ್ತೆ. ಹಾಗೆಲ್ಲಾ ನಿನ್ನ ಬಾಯಲ್ಲಿ ಬರೋಕೆ ಮುಂಚೇನೇ..."

"ಸರಿಯಪ್ಪ, ಆಡದೇ ನುಡಿಯುವನು ರೂಢಿಯೊಳಗುತ್ತಮನು ಅಂತಾರಲ್ಲಾ? ಅನ್ನಿ.ಅನ್ನಿ ನಾನೇನು ತಡೆಮಾಡೋಲ್ಲ.."

"ಅಷ್ಟು ಭರವಸೆ ಬಂತಲ್ಲ, ಸಾಕು. ನೋಡು, ಏನಂದೆ ನಾನು?"

"ಭರವಸೆ ಬಂತೂಂದ್ರಿ..."

"ಅದಲ್ವೆ, ಮತ್ತೆ ನೀನೊಬ್ಳು..."

"ಅಲ್ಲಾ, ನಾನೊಬ್ಳೇಂತ ಇವತ್ತೇ ನಿಮ್ಗೆ ಗೊತ್ತಾಗೋದು; ಮತ್ತೆ ನಾನೊಬ್ಳಿರುವಾಗ ಯಾರು ನಿಮ್ಮ ಹತ್ರ..."

"ಛೆ ಛೆ....ಎಂತಹ ಮಾತಿದು?..."

'ಮತ್ತೆ ನೀವು ಏನೇನೋ ಅಂದ್ರೆ....?

'ಇಲ್ಲಮ್ಮ ಇಲ್ಲ...ಯಾಕೆ ಮುಖ ಅಡಿಗೆ ಹಾಕಿದೆ?'

'ಅಡಿಗೆ ಹಾಕಿಲ್ಲಲ್ಲ, ಮಾಡಿದ್ದು..."

"ಅಬ್ಬಾ, ನೋಡೋಣ, ಅಡಿಗೆ ಮಾಡಿದ ಮುಖ ಇಂದು ಹೇಗಿದೇಂತ... ಹ್ಞೂಂ...ಪಾಪ ಕಣ್ಣುಗಳು ಇನ್ನೂ ಊದಿ ಹೋಗಿವೆ....'

"ಅದೆಲ್ಲಾ ಬಿಡೀಂದ್ರೆ....ಮನಸ್ಸು ಇದ್ರೆ ನಾನಂದದ್ದಕ್ಕೆ ಉತ್ರ ಹೇಳಿ...ಇಲ್ಲಾದ್ರೆ..'

'ಅಯ್ಯೋ, ಹೀಗೆಲ್ಲಾ ಕೋಪಿಸ್ಕೊಂಡ್ರೆ ಹೇಗಂತೆ? ಹೇಳ್ತೀನೆ ಕೇಳು....ಏನಂದೆ....ಹ್ಞಾ ತಿಳೀತು ಬಿಡು...ಹೌದು, ೧೯೬೫ರ ಜನವರಿ ೨೬ರಿಂದ ಹಿಂದಿಯು ನಮ್ಮ ಅಧಿಕೃತ ಭಾಷೆಯಾಗೋದು, ಅದರೊಂದಿಗೆ ಇಂಗ್ಲಿಷೂ ಅನಿರ್ದಿಷ್ಟಾವಧಿಯವರೆಗೆ ಮುಂದುವರಿಯೋದೂಂತ ನೇರಿಸಲಾಯ್ತು ...ಆಗ, ದಕ್ಷಿಣದ ರಾಜ್ಯಗಳಲ್ಲಿ ಮುಖ್ಯವಾಗಿ..."

"ಮದ್ರಾಸದಲ್ಲಿ..."

"ಹೌದು, ಮದ್ರಾಸದಲ್ಲಿ ಗದ್ದಲವಾಯ್ತು. ಒಂದು ಬಗೆಯ ಆಂದೋಲನವೇ ನಡೆಯಿತು. ಆಗ ಪಂಡಿತ ನೆಹರು ಮದ್ರಾಸಿನಲ್ಲೇ ಬಂದವರು ಅಹಿಂದೀ ಪ್ರದೇಶದ ಜನರು ತಾವಾಗಿಯೇ ಹಿಂದಿಯನ್ನು ಸ್ವೀಕರಿಸಿ ಇಂಗ್ಲಿಷ್ ಬೇಡ ಎನ್ನುವವರೆಗೆ ಹೇರುವುದಿಲ್ಲವೆಂಬ ಭರವಸೆಯಿತ್ತಿದ್ದರು..."

'ಹ್ಞಾಂ__ಈಗ ಸರಿಯಾಯ್ತೂನ್ನಿ.'

"ಏನು?"

"ಹಿಂದಿಯನ್ನ ತಮ್ಮ ಮೇಲೆ ಹೇರುತ್ತಾರೆ ಎಂಬ ಭೀತಿಯಿಂದ ಗೊಂದಲ ಸುರುವಾಯ್ತು."

"ಅಯ್ಯೋ, ಹೇರಿದ್ದೆಲ್ಲಿ ಬಂತೆ? ಇಂಗ್ಲಿಷೂ ಇದೆಯಲ್ಲಾ ಜತೆಗೆ?'

'ಅದು ನಿಜಾನ್ನಿ. ನೀನೇ ಅಂದಿದ್ರಿ ನೋಡಿ ಎಲ್ಲಾದರೂ ಇಂಗ್ಲಿಷನ್ನು ಕಿತ್ತು ಬಿಡುತ್ತಾರೋ ಎಂದು...."

"ಅದೆಲ್ಲಾ ಅಷ್ಟು ಸುಲಭವಲ್ಲ ನೋಡು.'

"ಯಾಕೇಂತ?"

'ಯಾಕೆಂತಂದ್ರೆ? ಪಾರ್ಲಿಮೆಂಟಿನಲ್ಲಿ ನಿರ್ಣಯವಾಗಬೇಕು ನೋಡು."

"ಮತ್ಯಾಕೆ ಮದ್ರಾಸಿಗಳು ರೊಚ್ಚಿಗೆದ್ದದ್ದೂಂತ ..'

"ಎಲ್ಲದ್ರ ಹಿಂದೂ ರಾಜಕೀಯ ಕಾರಣಗಳಿರುತ್ತವೆ. ತಮ್ಮ ಬೇಳೆ ಬೇಯ್ಸಿಕೊಳ್ಳೋದಕ್ಕೆ ಏನೇನೆಲ್ಲಾ ಮಾಡ್ತಾರೆ....'

"ಅಷ್ಟೇ ಅಂತೀರಾ ನೀವು? ಮತ್ತೆ ನೋಡಿ. ಅನ್ನ ಕೊಡಲಾರದ ಮಂತ್ರಿ ಸುಬ್ರಹ್ಮಣ್ಯಂ ಇದೇ ಪ್ರಶ್ನೆಯಿಂದ ರಾಜಿನಾಮೆ ಕೂಡ ಕೊಟ್ರಂತೆ..."

"ಹ್ಹ ಹ್ಹ... ಅದು ಎರಡಕ್ಕೂ ಆಯ್ತೂನ್ನು."

"ಏನು?"

"ಅನ್ನದ ಸಮಸ್ಯೆಗೆ ಉತ್ತರ ಹೇಳಲಾಗದೆ ರೆಕ್ಕೆ ಬಡಿಯುತ್ತಿರೋವಾಗ...."

"ನೀವೂ ಹಾಗನ್ನೋದೆ?"

"ಮತ್ತೆ ನಿನ್ಗೆ ಸಮಾಧಾನವಾಗ ಬೇಕಲ್ಲಾ?"

"ಅಲ್ರಿ, ನಿಮ್ಮ ಟೋಪಿಯುದ್ದ ಕಥೇನೇ ಹೀಗೆ..."

"ಹೇಗೆ?"

"ನೋಡಿ, ಹಿಂದಿಯನ್ನ ಸ್ವೀಕರಿಸೋ ವಿಚಾರದಲ್ಲಿ ರಾಜ್ಯದ ಮುಖ್ಯಮಂತ್ರಿಗಳೆಲ್ಲರ ಅಭಿಪ್ರಾಯ ಕೇಳಲಾಗಿದೆಯಂತೆ... ...."

"ಹೌದು....'

"ಆಗ ಯಾರೂ ಮಾತನಾಡದೆ ಈಗ..."

"ಆಗ ಹತ್ತು ಕಲೆಗಳ ಜತೆಗೆ ತಮ್ಮದನ್ನೂ ತೂಗಿದ್ರು. ಈಗ ತಾವು ತೂಗಿದ್ದು ತಮ್ಮ ಜನರಿಗೆ ಸಂದೇರಿಲ್ಲಾಂತ ತಿಳಿದು ತಲೆಯತ್ತೋಕೆ ತೊಡಗಿದ್ದಾರೆ..."

"ಹೀಗೆ ಮಾಡಬಹುದೇಂತ?'

"ಮತ್ತೆ ಮುಂದಿನ ಸಾರಿ ಓಟು ಸಿಗೋದು ಬೇಡವೇನೆ?"

'ಅಂದ್ರೆ ಇದೆಲ್ಲಾ ಬರೀ ನಾಟಕ ಅನ್ನಿ'

"ಇದ್ದರೂ ಇರಬಹುದು. ಅಲ್ಲವಾದ್ರೆ ಯಾಕೆ ಹೀಗೆಲ್ಲಾ ಆಗುತ್ತೆ? ಹಿಂದೀಯೊಂದೇ ಅಧಿಕೃತ ಭಾಷೆ ಸಾಗ್ಲಿಲ್ಲ. ತಮಗೆ ಇಂಗ್ಲಿಷೂ ಬೇಕೂಂತಿದ್ರೆ ನ್ಯಾಯವಾದ ರೀತಿಯಲ್ಲೇ ಅನ್ನಬಹುದಿತ್ತಲ್ಲಾ?

(ಹದಿಮೂರನೆ ಪುಟ ನೋಡಿರಿ)

ಮಂಗಳೂರು ದ. ಕ. ಡಿಸ್ಟ್ರಿಕ್ಟ ಎಂಡ್ ಸೆಶ್ಯನ್ಸ ಜಡ್ಜರ ಕೋರ್ಟಿನಲ್ಲಿ

C.M.P. No 2/65.

ತಿಮ್ಮ ... ಅರ್ಜಿದಾರ.

ಮಂಜ ಕೂಡಾ .... ಎದ್ರಿದ್ದು.

ಸದ್ರಿ ವ್ಯವಹರಣೆಯ ಕೆಳಕಿ ಮಕ್ಕಳು 1ನೇ ಎದ್ರಿ ಮಂಜ 1, 2ನೇ ಎದ್ರಿ ನಾರಾಯಣ 1, ಮಂಜನ ಅಳಿಯ 3ನೇ ಎದ್ರಿ ರಾಮ 1, 5ನೇ ಎದ್ರಿ ಶೀನ 1, ಮಂಜು ಅಳಿಯ 6ನೇ ಎದ್ರಿ ಯಡಕಂಟದ ಶೇಷ 1, 7ನೇ ಎದ್ರಿ ಯಡಕಂಟದ ಮಂಜು 1, ಮಂಜನ ಮಗ 9ನೇ ಎದ್ರಿ ಅಂಣಪ್ಪ 1, ದುರ್ಗ ಮಗ 11ನೇ ಎದ್ರಿ ಉಳ್ಳಾಲು ಸೋಮನ ಮನೆ ಸುಬ್ಬ 1, ಸುಬ್ಬಯ್ಯನ ಮಗ 14ನೇ ಎದ್ರಿ ಮೊಳೆಬೈಲು ಶೇಷ 1, ತಮ್ಮು ರಾಮನ ಮಗ 16ನೇ ಎದ್ರಿ ಕೊಡ್ಯೇರಿ ಕುಷ್ಟ 1, ವೆಂಕಟನ ಅಳಿಯ 24ನೇ ಎದ್ರಿ ಹರಿಜನ ಮಾಸ್ತ 1, ಕೂಡಾ 11ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:

ಅರ್ಜಿದಾರನು ನಿಮ್ಮ ವಗೈರೆಯರ ಮೇಲೆ ಕುಂದಾಪುರ ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಕಂ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ C.C. ನಂಬ್ರ 66/64ನೇ ಫಿರ್ಯಾದಿಯನ್ನು ಬೇರೆ ಕೋರ್ಟಿಗೆ ವರ್ಗಾಯಿಸಬೇಕಾಗಿ ಪ್ರಾರ್ಥಿಸಿ ಮೇಲಿನ ಕೋರ್ಟಿಗೆ ಮಾಡಿದ ಅರ್ಜಿಯು ತಾ. 6-3-65ನೇ ದಿವಸ 11 ಗಂಟೆಗೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ. ಆ ಬಗ್ಗೆ ನಿಮಗೆ ಏನಾದರೂ ಆಕ್ಷೇಪವಿದ್ದರೆ ಸದ್ರಿ ಕೋರ್ಟಿನ ಮುಂದೆ ನೀವು ಸ್ವತಃ ಯಾ ವಕೀಲರ ಮೂಲಕ ಜಾಹೀರು ಮಾಡಿಕೊಳ್ಳಬಹುದು. ಇದಕ್ಕೆ ತಪ್ಪಿದರೆ ನಿಮ್ಮ ಪರೋಕ್ಷದಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾದೀತು.

(By ord. ,

M. Ananthayya &
M. Madhava Rao
Advocates for Petitioner

ಕುಂದಾಪುರ, 11-2-1965.

ಹಬ್ಬ ಹುಣ್ಣಿಮೆಗಳು! ಅಂದವಾದ ಸಿದ್ಧ ಉಡುಪುಗಳು!!

ಸಂಭ್ರಮದ ಸಮಾರಂಭಗಳು!!!

ನಯನಾನಂದವೆನಿಸಲು, ನಿಮಗಾಗಿ ಮತ್ತು ನಿಮ್ಮ ಮಕ್ಕಳಿಗಾಗಿ;

ತರಹೇವಾರಿ ನಾನಾ ವಿಧದ ನವೀನ ಫೇಶನಿನ "ರೆಡಿಮೇಡ್" ಉಡುಪುಗಳನ್ನು

ಕೊಳ್ಳುವರೇ ಸಂದರ್ಶಿಸಿರಿ—

ಐ. ಸಿ. ಐ. ಟೆರಿಲೀನ್ ವಿಶಿಷ್ಟ ಉಡುಪುಗಳು, ನಗರದ ಪ್ರಮುಖ ಸಿದ್ಧ ವಸ್ತ್ರ ಭಂಡಾರ.

ಡ್ರೆಸ್ಸ್ ಲೇಂಡ್

ಪೂರ್ಣಪ್ರಜ್ಞ ಕಾಲೇಜಿನ ಸರಿ ಎದುರು, **ಉಡುಪಿ, ದ. ಕ.**

ಭಾರತದ ಕೋಗಿಲೆ

ಸರೋಜಿನೀ ನಾಯ್ಡು

ಅನು: ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್, ಕಣ್ವತೀರ್ಥ.

ಅಸಾಮಾನ್ಯ ಕವಯಿತ್ರಿ, ನಿಷ್ಠಾವಂತ ಗೃಹಿಣಿ, ವಾತ್ಸಲ್ಯಭರಿತ ಮಾತೆ, ಉತ್ತೇಜಕ ಭಾಷಣಗಾರ್ತಿ ಸಾಂಸ್ಕೃತಿಕರಾಯಭಾರಿಣಿ, ನಿರ್ಭಯ ಸ್ವಾತಂತ್ರ್ಯಯೋಧೆ ಮತ್ತು ರಾಷ್ಟ್ರೀಯ ಮಹಾ ಧುರೀಣೆ ಹೀಗಿದ್ದರು ಸರೋಜಿನಿ ನಾಯ್ಡು. ಅವರು ದೇಶದಲ್ಲೆಲ್ಲಾ ಇದ್ದ ತನ್ನ ದೊಡ್ಡ ಮಿತ್ರ ವೃಂದದಲ್ಲಿ ಹೆಚ್ಚಿನ ಮಟ್ಟಿಗೆ ಪ್ರತಿಯೊಬ್ಬರಿಗೂ ಅಕ್ಕಂದಿರಾಗುವಷ್ಟು ಉದಾರ ಹೃದಯರಾಗಿದ್ದರು.

ಡಾಕ್ಟರ್ ಅಘೋರನಾಥ ಚಟ್ಟೋಪಾಧ್ಯಾಯರು ಮತ್ತು ವರದ ಸುಂದರೀ ದೇವಿಯವರ ಜ್ಯೇಷ್ಠ ಸಂತಾನವಾದ ಸರೋಜಿನೀ ದೇವಿಯವರು ೧೮೭೯ನೇ ಇಸವಿ ಫೆಬ್ರವರಿ ತಾರೀಕು ೧೩ರಲ್ಲಿ ಹೈದರಾಬಾದಿನಲ್ಲಿ ಜನ್ಮವೆತ್ತಿದರು. ಡಾಕ್ಟರ್ ಚಟ್ಟೋಪಾಧ್ಯಾಯರು ವಿದ್ಯಾವಂತರು. ಎಡಿನ್‌ಬರೋ ಮತ್ತು ಬೋನ್ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನದಲ್ಲಿ ಡಾಕ್ಟರ್ ಪದವಿಯನ್ನು ಪಡೆದಿದ್ದರು. ಅತ್ಯಂತ ಪವಿತ್ರ ಜೀವನದ ಮತ್ತು ವಿಶಾಲ ಭೂತಿಪರ ಜ್ಞಾನ ಸಂಪನ್ನರಾದ ಅವರ ತಾಯಿಯವರು ಸ್ವಯಂ ಕವಯಿತ್ರಿಯಾಗಿದ್ದು ಬಂಗಾಳಿ ಭಾಷೆಯಲ್ಲಿ ಚೆಂದವಾದ ಪದ್ಯಗಳನ್ನು ಬರೆದಿದ್ದರು. ಅವರು ಚೆನ್ನಾಗಿ ಹಾಡಬಲ್ಲವರು ಕೂಡ ಆಗಿದ್ದರು. ಡಾಕ್ಟರ್ ಚಟ್ಟೋಪಾಧ್ಯಾಯ ಸರೋಜಿನಿಯವರ ವಿದ್ಯಾಭ್ಯಾಸದಲ್ಲಿ ವಿಶೇಷವಾದ ಆಸಕ್ತಿಯನ್ನು ವಹಿಸಿದ್ದರು. "ನನ್ನ ತಂದೆಯವರಿಗೆ ದೊಡ್ಡ ಗಡ್ಡವೂ ಹೋಮರನ ರೂಪರೇಖೆಯೂ ಇತ್ತು. ಮತ್ತು ಮನೆಯ ಮಾಡನ್ನೇ ಕೆಳಗೆ ಉರುಳಿಸಬಲ್ಲ ನಗೆಯನ್ನು ಬೀರುತ್ತಿದರು. ಎಲ್ಲಾ ಧರ್ಮಗಳ ಲಕ್ಷ್ಮ ಸುರಿತ ವಿದ್ವಾಂಸರ ಕೂಟವನ್ನು ತನ್ನ ತೋಟದಲ್ಲಿ ಪ್ರತಿ ದಿನವೂ ನಡೆಸುತ್ತಿದ್ದರು." ಎಂದು ಸರೋಜಿನಿಯವರು ಬಣ್ಣಿಸಿ ಹೇಳುತ್ತಾರೆ. ಹೀಗೆ ಅವರು ಎಲ್ಲಾ ವಿಧದ ಮನುಷ್ಯರನ್ನು ಎದುರುಗೊಂಡು ನಾನಾ ರೀತಿಯ ಈ ಪ್ರಪಂಚದ ಜ್ಞಾನವನ್ನು ಪಡೆದರು.

ಸರೋಜಿನಿಯವರು ಬಹು ಬೇಗನೆ ಶಾಲೆಗೆ ಸೇರಿಸಲ್ಪಟ್ಟರು. ಬೇಗನೆ ಅವರು ಇಂಗ್ಲಿಷಿನಲ್ಲಿ ಮಾತನಾಡಲೂ ಬರೆಯಲೂ ಬಲ್ಲವರಾದರು. ಒಂದು ದಿನ, ಅವರಿಗೆ ಒಂಭತ್ತು ವರ್ಷ ಪ್ರಾಯವಾಗಿದ್ದಾಗ, ಇಂಗ್ಲೀಷು ಪಾಠಗಳನ್ನು ಕಲಿಯಲಿಲ್ಲವೆಂದು ತಂದೆಯವರು ಅವರನ್ನು ಒಂದು ಕೋಣೆಯಲ್ಲಿ ಹಾಕಿ ಮುಚ್ಚಿದರು. ಆ ಕೋಣೆಯಿಂದ ಹೊರಗೆ ತಾನು ಸಂಪೂರ್ಣ ವಿಕಾಸಗೊಂಡ ಭಾಷಾಜ್ಞಾನಿಯಾಗಿಯೂ, ಇಂಗ್ಲೀಷು ಮತ್ತು ಇತರ ಭಾಷೆಗಳಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿನಿಯಾಗಿಯೂ ಬಂದೆನೆಂದು ಅವರೇ ಹೇಳುತ್ತಾರೆ

ಜನ್ಮತಃ ಬ್ರಾಹ್ಮಣ ಜಾತಿಯವರಾಗಿದ್ದರೂ, ಅವರು ಅನೇಕ ವರ್ಷ ಮಹಮ್ಮದೀಯ ಸಂಸ್ಕೃತಿಯು ಮೆರೆಯುತ್ತಿದ್ದ ಪಟ್ಟಣದಲ್ಲಿ ಬೆಳೆದರು. ಮಗುವಾಗಿದ್ದಾಗ ಅವರಿಗೆ ಮಹಮ್ಮದೀಯರಾದ ಆಟದ ಸಂಗಾತಿಗಳಿದ್ದರು. ಅವರ ಮೊದಲಿನ ಸಹವಾಸ ಸಂಬಂಧಗಳು ಹೈದರಾಬಾದಿನ ಮಹಮ್ಮದೀಯ ಸ್ತ್ರೀ ಪುರುಷರೊಂದಿಗೆ ಉಂಟಾಗಿದ್ದವು. ಇವೆಲ್ಲಾ ಅವರಿಗೆ ಹಿಂದು ಮುಸ್ಲಿಮರೊಳಗೆ ನಿಜವಾದ ವಿರೋಧವಿಲ್ಲವೆಂಬ ನಂಬಿಗೆಯನ್ನು ಹುಟ್ಟಿಸಿದ್ದವು. "ನಾನು ಅರ್ಧ ಹಿಂದು, ಅರ್ಧ ಮುಸ್ಲಿಮಳು. ನನ್ನ ಮನಸ್ಸಿನಲ್ಲಿ ಆಗಾಧ ಗಂಟೆನಾದ ಬೀರಿದ ಮೊದಲಿನ ಧ್ವನಿಗಳು ಪ್ರಾರ್ಥನೆಗೆ ಜನರನ್ನು ಕರೆಯುವ ಮಸೀದಿಯಿಂದ ಬಂದ "ಮ್ಯೂಸ್ಸಿನ್" ಧ್ವನಿಗಳು. ಅವರು ಅನಂತರ ಹೇಳುತ್ತಿದ್ದರು. ಇವೆಲ್ಲವೂ ಅವರನ್ನು ಇಂಡಿಯದಲ್ಲಿ ಹಿಂದೂ ಮುಸ್ಲಿಮರ ಐಕ್ಯಕ್ಕೆ ಕೆಲಸ ಮಾಡುವವರಲ್ಲಿ ಬಲವಾದ ಪ್ರಭಾವವುಳ್ಳವರನ್ನಾಗಿ ಮಾಡಿದವು.

ಅವರಿಗೆ ೧೧ ವರ್ಷ ವಯಸ್ಸಾಗಿದ್ದಾಗ ಒಂದು ದಿನ ಬೀಜಗಣಿತದ ಒಂದು ಲೆಕ್ಕದ ವಿಷಯದಲ್ಲಿ ಅವರು ನಿಟ್ಟುಸಿರು ಬಿಡುತ್ತಿದ್ದರು. ಉತ್ತರವು ಬರಲಿಲ್ಲ. ಆದರೆ ಬದಲಿಗೆ ಒಂದು ಇಡೀ ಪದ್ಯ ಬಂತು. ಅವರು ಅದನ್ನು ಬರೆದಿಟ್ಟರು. "ಅಂದಿನಿಂದ ನನ್ನ ಕವಿತಾ ಜೀವನವು ಪ್ರಾರಂಭವಾಯಿತು." ಎಂದು ಅವರು ಹೇಳುತ್ತಾರೆ. ಅವರಿಗೆ ೧೨ ವರ್ಷ ವಯಸ್ಸಾಗಿದ್ದಾಗ ಮದ್ರಾಸು ಯೂನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಯ ಉತ್ತೀರ್ಣರಾದವರ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಗಳಿಸಿ ಇಡೀ ಇಂಡಿಯಾವನ್ನು ದಂಗುಬಡಿಸಿದರು. ಹಾಗಿದ್ದರೂ ಅವರು 'ಕವಿತೆಯನ್ನು ಬರೆಯುವುದು ತನ್ನ ನಿಜವಾದ ಕೆಲಸ. ಪರೀಕ್ಷೆ ಪಾಸಾಗುವುದಲ್ಲ'ವೆಂದು ನಂಬಿದ್ದರು. ೧೩ನೇ ವರ್ಷದ ವಯಸ್ಸಿನಲ್ಲಿ ೧೩೦೦ ಚರಣಗಳ 'ಲೇಡೀ ಆಫ್ ದಿ ಲೇಕ್' ಎಂಬ ದೀರ್ಘವಾದ ಒಂದು ಪದ್ಯವನ್ನು ಆರು ದಿನಗಳಲ್ಲಿ ಬರೆದರು. ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೇಲೆ ನಾಲ್ಕು ವರ್ಷಗಳನ್ನು ಬಹುಮಟ್ಟಿಗೆ ಓದುವುದರಲ್ಲಿ ಕಳೆದರು. ವಿಶೇಷವಾಗಿ ಸಾಹಿತ್ಯ, ಚರಿತ್ರೆ ಮತ್ತು ತತ್ವ ಶಾಸ್ತ್ರಗಳನ್ನು ಓದಿದರು.

ಹದಿನಾರು ವರ್ಷಗಳ ವಯಸ್ಸಿನಲ್ಲಿ ಅವರು ಅರಮನೆಯ ವೈದ್ಯರಾದ ಡಾಕ್ಟರ್ ಗೋವಿಂದರಾಜು ನಾಯ್ಡು ಎಂಬವರಲ್ಲಿ ಅನುರಕ್ತೆಯಾದರು ಅವರೂ ಇದಕ್ಕೆ ಪ್ರತಿ ಅನುರಾಗವನ್ನು ತೋರಿಸಿದರು. ಆದರೆ ಉಚ್ಚವರ್ಗದ ಬ್ರಾಹ್ಮಣ ಜಾತಿಗೆ ಸೇರಿದ ಅವರು, ಒಳ್ಳೆಯ ಸಂಬಂಧವಿದ್ದು ಸುಸಂಸ್ಕೃತರಾಗಿದ್ದರೂ ಅಬ್ರಾಹ್ಮಣರೊಡನೆ ವಿವಾಹವಾಗುವುದು ಹೇಗೆ? ಅವರ ತಂದೆಯವರು ಉಚ್ಚ ಶಿಕ್ಷಣಕ್ಕಾಗಿ ಅವರನ್ನು ಇಂಗ್ಲೇಂಡಿಗೆ ಕಳುಹಿಸಿ ಈ ಪ್ರಣಯ ಪ್ರಸಂಗವನ್ನು ಅಂತ್ಯಗೊಳಿಸಲು ಯತ್ನಿಸಿದರು.

ಅನಂತರ ಮೂರು ವರ್ಷಗಳಲ್ಲಿ ಅವರು, ಮೊದಲು ಲಂಡನಿನ ಕಿಂಗ್ಸ್ ಕಾಲೇಜಿನಲ್ಲೂ ಆ ಮೇಲೆ ಕೇಂಬ್ರಿಜ್ಜಿನ ಗಿರ್ಟನ್ ಕಾಲೇಜಿನಲ್ಲೂ ಕಲಿಯುತ್ತಾ ಇಂಗ್ಲೇಂಡಿನಲ್ಲಿ ಇದ್ದರು. ಎಡಿನ್ ಬರೋ ವಿಶ್ವವಿದ್ಯಾಲಯವು ಅವರಿಗೆ ಡಾಕ್ಟರ್ ಪದವಿಯನ್ನು ಕೊಟ್ಟಿತು. ಇತರ ವಿಶ್ವವಿದ್ಯಾಲಯಗಳು ಕೂಡ ಅವರನ್ನು ಗೌರವಿಸಿದವು.

ಸರ್. ಎಡ್ಮಂಡ್ ಗೋಸ್ಸ್ ಮತ್ತು ಆರ್ಥರ್ ಸೈಮನ್ಸ್‌ರಂತಹ ಪ್ರಸಿದ್ಧ ವಿದ್ವಾಂಸರ ಸ್ನೇಹವನ್ನು ಕೂಡ ಅವರು ಪಡೆದರು.

ಡಾಕ್ಟರ್ ನಾಯ್ಡುರವರೊಡನೆ ವಿವಾಹವಾಗುವುದಕ್ಕೆ ತನ್ನ ತಂದೆಯ ವಿರೋಧವಿದ್ದರು ಕೂಡ ಅವರು ತನ್ನ ಸ್ವಯಂವರಣಕ್ಕೆ ತಪ್ಪದೆ ನಡೆಯುವದರಲ್ಲಿ ದೃಢ ನಿರ್ಧಾರವನ್ನೂ ಧೈರ್ಯವನ್ನೂ ತೋರಿಸಿದರು. ೧೮೯೮ರಲ್ಲಿ ಅವರು ಇಂಗ್ಲೇಂಡಿನಿಂದ ತಿರುಗಿ ಬಂದ ಮೇಲೆ ಮದುವೆಯು ನೆರವೇರಿಸಲ್ಪಟ್ಟಿತು. ಈ ರೀತಿ ಅವರು ಅಂತರ್ಜಾತೀಯ ವಿವಾಹಕ್ಕೆ ಅಗ್ರಗಾಮಿನಿಯಾದರು. ಅನಂತರ ಅವರು ಮಹಾತ್ಮ ಗಾಂಧಿಯವರ ಧುರೀಣತೆಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಅಥವಾ ಹಿಂದೂ ಮುಸ್ಲಿಮರ ಐಕ್ಯತೆಗಾಗಿ ಇಲ್ಲವೆ ಪ್ರತಿ ಬಂಧಕ ಪ್ರಭಾವಗಳಿಂದ ಸ್ತ್ರೀಯರನ್ನು ವಿಮೋಚನೆಗೊಳಿಸುವುದಕ್ಕಾಗಿ, ಹೀಗೆ ರಾಜಕೀಯ ಮತ್ತು ಸಾಮಾಜಿಕ ಉದ್ದೇಶಗಳಿಗೆ ಹೋರಾಡುವುದರಲ್ಲಿ ಕೂಡ ಅದೇ ಧೈರ್ಯ ಮತ್ತು ದೃಢ ನಿರ್ಧಾರವನ್ನು ತೋರಿಸಿದರು. ಮಹಾತ್ಮಾ ಗಾಂಧಿಯವರು ಒಮ್ಮೆ ಅವರನ್ನು "ಆಧುನಿಕ ಮೀರಾಬಾಯಿ" ಎಂದು ವರ್ಣಿಸಿದುದು ಅತ್ಯಂತ ಉಚಿತವಾಗಿದೆ. ಮೀರಾಬಾಯಿಯಂತೆ ಅವರು ಧೈರ್ಯದಿಂದ ಲೋಕರೂಢಿಯ ಗೋಡೆಗಳನ್ನು

(ಹನ್ನೆರಡನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p a.	7ರಿಂದ 11 ತಿಂಗಳು % p. a.	12ರಿಂದ 23 ತಿಂಗಳು % p a.	24ರಿಂದ 35 ತಿಂಗಳು % p. a.	36ರಿಂದ 47 ತಿಂಗಳು. % p a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p a	84ರಿಂದ 120 ತಿಂಗಳು % p. a
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ.	5-25	5-50	5-75	6-00	6-25	6 50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್]

ರಿಜಿಸ್ಟರ್ಡ್ ಆಫೀಸು:— ಕೋರ್ಟ್ ರಸ್ತೆ, ಉಡುಪಿ, ದ ಕ. (ಮೈಸೂರು ರಾಜ್ಯ) ಸ್ಥಾಪನೆ.— 1920

ನಮಗೇನು ಬೇಕು?

ಅಣು ಬಂಬಡ ಬಾರಿಸುವ ಅಗತ್ಯವಿಲ್ಲ

ಬರೆದವರು: ಶ್ರೀ ಶಿವಶಂಕರ.

ಪ್ರಧಾನಿ ಶ್ರೀ ಲಾಲಬಹದೂರ ಶಾಸ್ತ್ರೀ ಜೀಯವರನ್ನ "ಸಂಡೇ ಸ್ಟೆಂಡಾರ್ಡ್"ನ ಪ್ರತಿನಿಧಿ ಭದ್ರ ದೇಸಾಯಿಯವರು ಭೇಟಿ ಮಾಡಿದಾಗ ಅಣ್ವಸ್ತ್ರದ ಕುರಿತು ಪ್ರಶ್ನೆ ಕೇಳಿದ್ದರ. ಅದಕ್ಕೆ ಶ್ರೀ ಲಾಲಬಹದೂರ ಜೀಯವರು ತನ್ನ ಅದೇ ಹಳೇ ಉತ್ತರವನ್ನೇ ಕೊಟ್ಟಿರುವರು. ಚೈನಾವು ಅಣು ಗುಂಡು ಪ್ರಯೋಗ ನಡೆಸಿರುವದರಿಂದ ಅಗ್ನೇಷ್ಯಾದಲ್ಲಿ ಪ್ರತಿಧ್ವನಿ ಕೇಳಿ ಬರುತ್ತಿದ್ದು, ಆ ರಾಷ್ಟ್ರಗಳಲ್ಲಿ ಪರಿಣಾಮ ಬೀರುತ್ತದೆನ್ನುವದನ್ನು ಅವರು ಒಪ್ಪಿಕೊಂಡಿರುರು. ಆದಾಗ್ಯೂ, ಭಾರತವು ತನ್ನದೇ ಅಣ್ವಸ್ತ್ರಗಳನ್ನು ಹೊಂದಿರಬೇಕೆಂಬುದಕ್ಕೆ ಅದ್ಯಾವ ರೀತಿಯಲ್ಲೂ ಸಹಾಯ ಮಾಡುತ್ತದೆನ್ನುವದನ್ನು ಅವರು ನಂಬುವದಿಲ್ಲ. ಅದು ಮಾರಕಾಸ್ತ್ರವಿದೆ. ಅದಕ್ಕೆ ವಿರುದ್ಧವಾಗಿ, ಅಣುಪ್ರಯೋಗದ ತಡೆ ಹಾಗೂ ಅಣ್ವಸ್ತ್ರಗಳ ನಾಶಮಾಡುವಂತೆ ಪ್ರಪಂಚದಲ್ಲಿ ವಾತಾವರಣ ನಿರ್ಮಾಣ ಮಾಡಬೇಕೆನ್ನುವದರಲ್ಲಿ ಅವರಿಗೆ ನಂಬಿಕೆ ಇದೆ.

'ನವಯುಗ' ಆದಾಗಲೇ ಇಂತಹ ಹಲವಾರು ವಾದಗಳಿಗೆ ಉತ್ತರ ಕೊಟ್ಟಿರುತ್ತದೆ. ಶಾಂತ ಮೂರ್ತಿ ಶಾಸ್ತ್ರೀಜೀಯವರ ಬಾಯಿಯಿಂದ ಅಂತಹ ಮಾತುಗಳು ಹೊರ ಬರುವದರಲ್ಲಿ 'ನವಯುಗ'ಕ್ಕೇನೂ ಆಶ್ಚರ್ಯವಿಲ್ಲ. ಅದ್ಯಾವ ಭೀಕರ ಪ್ರಯೋಗದಿಂದಲೂ ವಾತಾವರಣದ ಹದಗೆಡಿಸಿಕೊಳ್ಳಲು ಭಾರತ ಇಚ್ಛಿಸುವದಿಲ್ಲ. ಅದಕ್ಕೆಂದೇ ಕಳೆದ ವಾರ 'ನವಯುಗ' ತನ್ನ ಅಭಿಪ್ರಾಯವನ್ನು ಸ್ಪಷ್ಟ ಪಡಿಸಿರುತ್ತದೆ. ಅಣ್ವಸ್ತ್ರ ಪ್ರಯೋಗಕ್ಕೆದುರಾಗಿ ಇರುವ ಏಕಮೇವ ನೈಜ ದಾರಿಯನ್ನು ಅದು ತಿಳಿಸಿರುತ್ತದೆ. ಆ ದಾರಿಯತ್ತ ಸರಕಾರ ಗಮನ ಕೊಟ್ಟಲ್ಲಿ ವಿಜಯ ವೈಜಯಂತಿಯನ್ನು ಹಾರಿಸುವದರಲ್ಲಿ ಸಂದೇಹವಿಲ್ಲ. ಆಗ ಭಾರತವು ನೈಜ ಶಾಂತಿದೂತ ರಾಷ್ಟ್ರವಾಗುತ್ತದೆ, ಪುನಃ ಜಗದ್ಗುರು ರಾಷ್ಟ್ರವಾಗುತ್ತದೆ. ಬದನ್ನು ಬಿಟ್ಟು ಸಿಕ್ಕ ಸಿಕ್ಕ ರಾಷ್ಟ್ರಗಳ ಬಳಿ 'ತಯ್ಯಾ' 'ಅವ್ವಾ' ಅನ್ನುವದು ಅದೇನೂ ಪುರುಷಾರ್ಥವಿರುವದಿಲ್ಲ. ಅದು ನರಿಯು ದ್ರಾಕ್ಷೆಯನ್ನು ಹುಳಿ ಎಂದಿರುವ ಕಥೆಯಂತಾಗುತ್ತದೆ. ಅದಕ್ಕೆ ಪುಷ್ಟಿ ಕೊಡಲಿಕ್ಕಾಗಿಯೇ ಎಂಬಂತೆ ಭಾರತದಲ್ಲಿ ಕೆಲ ಘಟನೆಗಳು ನಡೆಯುತ್ತವೆ.

ಮಕರ ಸಂಕ್ರಾಂತಿ ಅಥವಾ ಪೊಂಗಲ್ ಭಾರತದಲ್ಲಿ ರಾಷ್ಟ್ರೀಯ ಹಬ್ಬವಿದೆ. ಭಾರತವಿಡೀ ಆ ಹಬ್ಬವನ್ನು ಕೊಂಡಾಡುತ್ತದೆ. ಅಂತೆಯೇ ರಾಷ್ಟ್ರೀಯ ಸ್ವಯಂ-ಸೇವಕ ಸಂಘದ ಸ್ವಯಂ-ಸೇವಕರೂ ಆ ಹಬ್ಬವನ್ನು ಆಚರಿಸುತ್ತಾರೆ. ಆ ಉತ್ಸವದಲ್ಲಿ ಭಾಗ ವಹಿಸಲು ರಾಷ್ಟ್ರೀಯ ಸ್ವಯಂ-ಸೇವಕ ಸಂಘದ ಸರ-ಸಂಘ ಚಾಲಕ ಪರಮ ಪೂಜನೀಯ ಮಾಧವ ಸದಾಶಿವ ರಾವ್ ಗೋಳ್ವಲ್ಕರ್‌ರವರು ನೇಪಾಳದ ನರೇಶ ವಿಕ್ರಮರನ್ನು ಆಮಂತ್ರಿಸಿದ್ದರು. ನೇಪಾಳದ ರಾಜರೂ ಅದಕ್ಕೆ ಸಮ್ಮತಿ ಸೂಚಿಸಿದ್ದರು. ಭಾರತ ಸರಕಾರವೂ ಒಪ್ಪಿಗೆಯನ್ನು ಕೊಟ್ಟಿತು. ನಾಗಪುರದ ನಗರಸಭೆ ಹಾಗೂ ಇತರ ಹಲವಾರು ಸಂಸ್ಥೆಗಳು ರಾಜರನ್ನು ಮರ್ಯಾದಿಸಲು ನಾಮುಂದು ನಾಮುಂದೆಂದು ಸ್ಪರ್ಧೆ ಹೂಡಿದ್ದವು. ಆದರೆ ಅಷ್ಟರಲ್ಲಿ ನೇಪಾಳದ ನರೇಶರು ಇತ್ತ ಬರುವುದಕ್ಕೆ ನಕಾರ ಸೂಚಿಸಿರುವದಾಗಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದಕ್ಕೆ ಅವರು ಬರುವದಿಲ್ಲವೆಂದು ಭಾರತ ಸರಕಾರದ ಅಂತರಾಷ್ಟ್ರೀಯ ಸಂಪರ್ಕ ಶಾಖೆಯು ತಿಳಿಯಪಡಿಸಿತು. ಇದೇ ಸಂಪರ್ಕ ವಿಭಾಗವು ಅವರು ಬರುವದು ಸತ್ಯವೆಂಬುದನ್ನು ಹಿಂದೆ ಪ್ರಕಟಿಸಿತ್ತು! ಹೀಗಾಗಲು ಕಾರಣವೇನು? ಮಹಾರಾಜರಿಗೆ ಮನಸ್ಸಿಲ್ಲದ ಕಾರಣ ಹಾಗೂ ಕೆಲ ವಿಶೇಷ ವೈಯಕ್ತಿಕ ಕಾರಣಗಳಿಂದಾಗಿ ಅವರು ಆಗಮಿಸುವದಿಲ್ಲವೆಂದು ಭಾರತ ಸರಕಾರ ತಿಳಿಯಪಡಿಸಿತು.

ನೇಪಾಳ ನರೇಶರ ನಕಾರ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘ ಚಾಲಕರಿಗೆ ನೇಪಾಳದಿಂದ ಅದೇನೂ ಸುದ್ದಿ ಬಂದಿರಲಿಲ್ಲ. ಅವರು ಧ್ವನಿವಾಹಕದ ಮೂಲಕ ನೇಪಾಳ ಸರಕಾರದೊಂದಿಗೆ ಸಂಪರ್ಕ ನಡೆಸಿದಾಗ ಅದು ಹಾಗೆನ್ನುವ ಉತ್ತರ ಬಂತು. 'ಅದ್ಯಾವ ಕಾರಣದಿಂದಾಗಿ ಹಾಗಾಯ್ತೆನ್ನುವದಕ್ಕೆ ಸ್ಪಷ್ಟ ಉತ್ತರ ಅವರು ಕೊಟ್ಟಿರುವದಿಲ್ಲ.

ನೇಪಾಳ ನರೇಶರು ನಾಗಪುರಕ್ಕೆ ಸ್ವತಃ ಬರದಿದ್ದರೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘ ಚಾಲಕರ ಬಳಿ ಪ್ರಮಾಣಕ್ಕೆ ಕ್ಷಮೆಯಾಚಿಸಿ ತಾನು ಮಾಡಬೇಕೆಂದಿದ್ದುದನ್ನು ಬರೆದು ಕಳುಹಿಸಿ ಕೊಟ್ಟಿದ್ದರು. ಅದನ್ನು ಉತ್ಸವದಲ್ಲಿ ಸ್ವತಃ ಸರಸಂಘಚಾಲಕರೇ ಓದಿದರು.

ಹೀಗೇಕಾಯಿತು? ಹೀಗೇಕಾಯಿತು? ಚೈನೀ ಕಮ್ಯೂನಿಸ್ಟ ಕಪಿಯು ಪ್ರಪಂಚದ ಅದೆಲ್ಲಾ ವನಗಳನ್ನು ಹಾಳುಗೆಡವಲು ಪ್ರಯತ್ನಿಸುತ್ತಿರುವ ಇಂತಹ ದುರ್ದಿನಗಳಲ್ಲಿ ಇದೇಕೆ ಹಾಗಾಯಿತು? ನೇಪಾಳವನ್ನು ನುಂಗಲು ಚೈನಾ ಚೆನ್ನಾಗಿ ಪ್ರಯತ್ನಿಸುತ್ತಿದ್ದು, ಚಲನ-ವಲನದ ಸೌಕರ್ಯಗಳನ್ನು ಮುಷ್ಟಿಯೊಳಗಿಟ್ಟುಕೊಳ್ಳುತ್ತಿದೆ. ತ್ರಿವಿಷ್ಟಪವನ್ನು ತಿಂದು ತೇಗಿರುವ ಡ್ರೇಗನ್ ನೇಪಾಳದತ್ತ ನೋಟ ಬೀರಿರುತ್ತದೆ. ಮಾತ್ರ ಕುಡಿಗಣ್ಣೋಟದಿಂದ ಕೆಲವರನ್ನು ಮರುಳುಗೊಳಿಸಿಕೊಂಡಿರುತ್ತದೆ. ಆ ರೀತಿ ಮರುಳಾಗಿರುವವರು ತಾವು ಚೈನೀ ಬುಡಕಟ್ಟಿನವರೆಂದು ಹೇಳಲಾರಂಭಿಸಿರುವರು. ಆ ಅಭ್ಯಾಸವನ್ನು ಆರಂಭದಲ್ಲೇ ಅದುಮಿಬಿಡಲು ಅರಸು ವಿಕ್ರಮ ಭಾರತಕ್ಕೆ ಬರಲು ಆಶಿಸಿದ್ದರು. ನೇಪಾಳ ಭಾರತದ ಕಾವಲು ಠಾಣ್ಯವಿದೆ. ಹಿಮಾಲಯದಲ್ಲೇ ಆಕ್ರಮಣಗಾರರಿಗೆ ಅವಸಾನ ಕಾಣಿಸಲಿಕ್ಕಾಗಿ ವೀರರ ಪರಂಪರೆ ಅಲ್ಲಿ ವಾಸಿಸಲು ಮುಂದಾಗಿರುವದನ್ನು 'ನವಯುಗ' ತನ್ನ ಹಿಂದಿನ ಸಂಚಿಕೆಯೊಂದರಲ್ಲಿ ಸ್ಪಷ್ಟವಾಗಿ ಸೂಚಿಸಿರುತ್ತದೆ. ಇಂದೂ, ರಾಜಕೀಯ ದೃಷ್ಟಿಯಲ್ಲಿ ನೇಪಾಳ ನಮಗೆ ಪರ ರಾಷ್ಟ್ರದಂತಿದೆಯಾದರೂ ಸಾಂಸ್ಕೃತಿಕ ದೃಷ್ಟಿಯಿಂದ ನಮ್ಮ ಅಂಗವೇ ಇದೆ. ಪೂರಿ, ರಾಮೇಶ್ವರಗಳಲ್ಲಿ ನೇಪಾಳದ ನರೇಶರಿಗೆ ವಿಶಿಷ್ಟ ಹಕ್ಕಿದೆ. ಪ್ರಚಲಿತ ಪರಿಸ್ಥಿತಿ ಹೀಗಿರುವಾಗ ಭಾರತ ಸರಕಾರವೇಕೆ ಈ ರೀತಿ ಲಾಗ ಹಾಕಿತು?

ಭಾರತದ ಪ್ರಧಾನಿಯವರಾದರೋ, ನೇಪಾಳ ನರೇಶ ಬರಲು ಒಪ್ಪಿರುವ ಹಾಗೂ ಬರಲಾಗದಿರುವ ಕುರಿತು ತಿಳಿಸಿರುವ ವಿಷಯ ತನಗೇನೂ ಗೊತ್ತಿಲ್ಲವೆಂದಿರುವರು. ರಾಷ್ಟ್ರೀಯ ಸ್ವಯಂ—ಸೇವಕ ಸಂಘದ ಸರಸಂಘಚಾಲಕರು ನೇಪಾಳ ನರೇಶ ಒಪ್ಪಿರುವ ವಿಷಯ, ಅವರು ರಾಷ್ಟ್ರಾಧ್ಯಕ್ಷ ಹಾಗೂ ಪ್ರಧಾನಿಯವರನ್ನು ಸ್ವಂತಃ ಕಾಣಲು ಪ್ರಯತ್ನಿಸಿ ರಾಷ್ಟ್ರಾಧ್ಯಕ್ಷರ ಸಮ್ಮುಖದಲ್ಲಿ ಸಂಗತಿ ಸೂಚಿಸಿರುವ ಹಾಗೂ ಪ್ರಧಾನಿಯವರನ್ನು ಪ್ರತ್ಯಕ್ಷ ಕಾಣಲಾಗದಿದ್ದುದರಿಂದ ಪತ್ರ ಮುಖೇನ ತಿಳಿಸಿರುವ ವಿಷಯ, ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಸ್ವಾಗತಕ್ಕೆ ಸಿದ್ಧವಿರುವದಾಗಿ ಸೂಚಿಸಿರುವ ವಿಷಯವನ್ನು ಪತ್ರಿಕೆಗಳಿಗೆ ತಿಳಿಸಿರುವರು. ಇದರಲ್ಲಿ ಭಾರತ ಸರಕಾರದ ಕೈವಾಡವಿರುವುದರಿಂದ ನೇಪಾಳ ನರೇಶ ನಕಾರ ಸೂಚಿಸಬೇಕಾಯಿತೆಂದು ಪರಮ ಪೂಜನೀಯ ಗೋಳ್ವಲ್ಕರ್‌ರವರು ಹೇಳಿದಾಗ, ಹಾಗೇನೂ ಇಲ್ಲವೆಂದು ಭಾರತ ಸರಕಾರದ ವಕ್ತಾರ ತಿಳಿಸಿದರು. ಪತ್ರಿಕೋದ್ಯಮಿಗಳು ಸುಮ್ಮಗಿರಬೇಕಲ್ಲಾ? ಅವರು ಈ ಎರಡೂ ಮಾತುಗಳನ್ನು ನೇಪಾಳ ಸರಕಾರದ ಗಮನಕ್ಕೆ ತಂದರು. ಆಗ ನೇಪಾಳ ಸರಕಾರವು ಪರಮ ಪೂಜನೀಯ ಗುರೂಜೀಯವರು ಹೇಳಿರುವದು ಸತ್ಯವೆಂದು ಹೇಳಿದರು. ವಿಷಯ ಅಷ್ಟಕ್ಕೇ ಮುಗಿಯುತ್ತಿದ್ದಲ್ಲಿ ಬಹಳ ಒಳ್ಳೆಯದಿತ್ತು. ದುರ್ದೈವವಶಾತ್ ಹಾಗಾಗಲಿಲ್ಲ. ಭಾರತ ಸರಕಾರದ ಮಾತು "ಅಪ್ಪಟ ಅಸತ್ಯ" [Blatant lie]ವೆಂದು ನೇಪಾಳ ಸರಕಾರ ನುಡಿಯಿತು. ಘಟನೆಗೆ ತಕ್ಕ ಬದಲು ಆದಾಗಿರಬಹುದು. ಆದರೆ ಅದರ ಪ್ರತಿಧ್ವನಿ ಹೇಗಿರಬಹುದೆಂಬುದನ್ನು ನೇಪಾಳ ಸರಕಾರ ಭಾವಿಸಿಕೊಂಡೂ ಇರಲಿಲ್ಲ. ಸತ್ಯವನ್ನು ಹೊರಗೆಡಹುವ ಆವೇಶದಲ್ಲಿ ಅವರು ಬಹಳ ಎತ್ತರಕ್ಕೆ ಹಾರಿದ್ದಾರೆ. ಅಂತಹ ಉತ್ತರವನ್ನು ಖಂಡಿತವಾಗಿ ಸರಸಂಘ ಚಾಲಕರು ಭಾವಿಸಿಯೂ ಇರಲಿಲ್ಲ. ಎಲ್ಲದಕ್ಕಿಂತಲೂ ರಾಷ್ಟ್ರದ ಸ್ವಾಭಿಮಾನ ಹಾಗೂ ಗೌರವವೇ ಅವರಿಗೆ ಮುಖ್ಯವಿದೆ.

ನೇಪಾಳ ನಮ್ಮ ನೆರೆಕರೆಯ ನೇಹಿಗನಾಡು. ಅದೇ ನಮ್ಮನ್ನು 'ಅಪ್ಪಟ ಅಸತ್ಯ'ವನ್ನಾಡುವವರೆಂದು ಮೂದಲಿಸುವಾಗ, ಭಾರತವನ್ನು ಕಾಡಲಿಕ್ಕಾಗಿಯೇ ಇರುವ ಪ್ರೇತ ಪಾಕಿಸ್ಥಾನವು ಮತ್ತು ಭಾರತವನ್ನು ಬಡಿಯಲಿಕ್ಕಾಗಿಯೇ ಹೊಂಚು ಹಾಕುತ್ತಿರುವ ಚೈನಾ ಹೇಗೆ ವರ್ತಿಸಬಹುದು? ಶಿಷ್ಟರ ಪರಿಪಾಲನೆಗಾಗಿ, ದುಷ್ಟರ ನಿರ್ದಲನಕ್ಕಾಗಿ ಪಾಶುಪತಾಸ್ತ್ರವನ್ನಿತ್ತಿದ್ದ ನೇಪಾಳ ಇಂದು ನಮಗೆ—ಆಕ್ರಮಣಗಾರರು ಮುತ್ತಿರುವ ದುರ್ದಿನದಲ್ಲಿ—ಸುಳ್ಳುಗಾರನೆಂಬ ಪ್ರಶಸ್ತಿಯನ್ನಿತ್ತಿರುತ್ತದೆ! ನಾವೇನೋ ಸತ್ಯಸಂಧರೇ ಇರಬಹುದು: ರಾಜಾ ಹರಿಶ್ಚಂದ್ರನ ವಂಶಜರೇ ಇರಬಹುದು. ಹರಿಶ್ಚಂದ್ರನಂತೇ ನಾವೂ ಹಿಂಬಾಗಳೇ ಅಥವಾ ಭಾರತೇಯರೇ ಇರಬಹುದು. ರಾಜಕೀಯ ರಂಗಿಗೆ ಅದರ ಅರಿವೇ ಇರುವುದಿಲ್ಲ. ಹತ್ತ

(ಹನ್ನೊಂದನೇ ಪುಟ ನೋಡಿರಿ)

ಒಮ್ಮೆ ವಿಚಾರಿಸಿರಿ!

"ಬ್ಲೂ ರಿಬ್ಬನ್" ಮಳಿಗೆ

ಇಲ್ಲಿ ಎಲ್ಲಾ ತರದ 'ಸಂಗೀತ ಸೆಟ್ಟು'ಗಳ ತಯಾರಿ ಹಾಗೂ ವಿತರಣೆ ಮಾಡುವುದಲ್ಲದೆ ರಿಪೇರಿಯನ್ನು ಯೋಗ್ಯ ರೀತಿಯಲ್ಲಿ ಮಾಡಲಾಗುತ್ತದೆ.

ಮದುವೆ ಮುಂತಾದ ಸಮಾರಂಭಗಳಿಗೆ ಸಂಗೀತ ಸಲಕರಣೆಗಳನ್ನು ಒದಗಿಸಲಾಗುತ್ತದೆ. ನಯವಾದ ಪೈಂಟಿಂಗ್ ಮತ್ತು ಕಬ್ಬಿಣದ ಕೆಲಸಗಳು ಸಹಾ ಇಲ್ಲಿ ಉತ್ತಮವಾಗಿ ಮಾಡಲ್ಪಡುತ್ತವೆ.

ಪ್ರೊಪ್ರೈಟರ್: ಜೇಮ್ಸ್ ಡಿ'ಸಿಲ್ವ.

For Attractive Photographs,

Please Contact:

STUDIO ASHA

Santhekatte, UDIPI.

All kinds of work in Photography, In door Out door groups Photos, and amateur work also will be undertaken

ಮಕ್ಕಳ ಮನಮೆಚ್ಚಿಗೆಯ

ಕ್ರೀಡಾಂಗಣ - ನಂದನವನ

ದಿನವೂ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರತಾಪ ಅವರ ಶಾಲೆಗಳಿಗೆ ರಜೆ ಬಂದಂದು ಎಲ್ಲರಿಗೂ ತಿಳಿಯುವಂತಾಗುತ್ತದೆ. 'ಹಾಳು ಮೇಷ್ಟ್ರು, ಮೇಡಮ್ಮಂದಿರು ಹೋಗುತ್ತ, ಬರುತ್ತ ರಜೆ ಕೊಟ್ಟು ನಮ್ಮ ಪ್ರಾಣ ತಿನ್ನುತ್ತಾರೆ!' ಎಂದು ಸಾಧಾರಣವಾಗಿ ರಜಾದಿನಗಳಂದು ಎಲ್ಲರ ಮನೆಯಲ್ಲಿಯೂ ತಾಯಂದಿರು ತಮ್ಮ ಮಕ್ಕಳ ಉರವಣಿಗೆಯನ್ನು ಸಹಿಸದೆ ಮೊರೆಯುವುದನ್ನು ಕೇಳಬಹುದು. ಅಂತಹ ಉಪಟಳ ನೀಡುವ ಮಕ್ಕಳ ಮನೋಲ್ಲಾಸಕ್ಕೆ ಏನಾದರೂ ವ್ಯವಸ್ಥೆಯಿದ್ದಿದ್ದರೆ....?

ಪರೀಕ್ಷೆ ಮುಗಿಯಿತು; ಶಾಲೆ ಮುಚ್ಚಿತು; ರಜೆ ಆರಂಭವಾಯಿತು! ರಜೆ ಮುಗಿದು ಶಾಲೆ ಮತ್ತೆ ಆರಂಭವಾಗುವ ವರೆಗೆ ಪಠ್ಯ ಪುಸ್ತಕಗಳು ಯಾರೋ, ನಾವ್ಯಾರೋ ಎಂದು ಕುಣಿದು, ಕುಪ್ಪಳಿಸುವ ಹುಡುಗರಿಂದ ಮನೆಗಳಲ್ಲಿ ತಂದೆ ತಾಯಿಯರಿಗೆ ದಿಗ್ಭ್ರಮೆ ಹಿಡಿದಂತಾಗುತ್ತದೆ ಮತ್ತೆ ಶಾಲೆ ತೆರೆಯುವವರೆ ಇವರ ಆಟಪಾಟಗಳನ್ನು ಸಹಿಸುವುದು ಹೇಗೆ ಎಂಬುದೇ ಅವರೆಲ್ಲರ ಯೋಚನೆಯಾಗುತ್ತದೆ. ಮನೆಯಲ್ಲಿ ಆಡಿದರೆ ಇರುವ ಸಾಮಾನೆಲ್ಲಾ ಧ್ವಂಸ; ಬೀದಿಯಲ್ಲಿ ಆಡಿದರೆ ಊರ ಜಗಳವೆಲ್ಲಾ ಮನೆಯೊಳಗೆ—ಇದು ಶಿಶುದೈತ್ಯರ ಲೀಲಾವಿನೋದ!

ಇಂತಹ ಪಿಡುಗೂ ಇದ್ದ, ಎಂದರೆ 'ಚಿನ್ನ ಲಿಕ್ಕಿಲ್ಲ, ಅನುಭವಿಸಲಿಕ್ಕಿಲ್ಲ' ಎನ್ನುವ ತೆರದ ತೊಂದರೆಯು ಯಾವ ಮನೆಯಲ್ಲಿಲ್ಲ? ಯಾವ ದೇಶದಲ್ಲಿಲ್ಲ? ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಹಾಲೆಂಡಿನಲ್ಲಿ ಹೊಸ ಮಾರ್ಗವನ್ನು ಅನುಸರಿಸಿದ್ದಾರೆ. ಅಲ್ಲಿ ಮಕ್ಕಳಿಗಾಗಿ ನಂದನವನಗಳನ್ನು ನಿರ್ಮಿಸಲಾಗಿದ್ದು ಅವುಗಳನ್ನು ರಜಾಕಾಲದಲ್ಲಿ ತೆರೆಯಲಾಗುವುದು.

ಸಣ್ಣ ವಯಸ್ಸಿನ ಬಾಲಕ, ಬಾಲಕಿಯರು ತಮ್ಮ ರಜೆಯ ದಿನಗಳನ್ನು ತಂದೆ ತಾಯಿಯರಿಗೆ ತೊಂದರೆ ಕೊಡದೆ ನೆಮ್ಮದಿಯಿಂದ ಕಳೆಯಲೋಸುಗ ನಿರ್ಮಿಸಲಾಗಿರುವ ಈ ನಂದನವನಗಳು ಹಾಲೆಂಡಿನ ಎಲ್ಲಾ ಪ್ರಧಾನ ನಗರಗಳಲ್ಲಿಯೂ ಇವೆ. ಮಕ್ಕಳು ಯಾವಾಗಲೂ ಸ್ವೇಚ್ಛಾ ವಿಹಾರ ಪ್ರಿಯರು. ಅವರ ಸ್ವೇಚ್ಛಾವಿಹಾರ ಮನೆಯಲ್ಲಿ ಎಲ್ಲರಿಗೂ ತಲೆನೋವು! ತಂದೆಯು ಕೆಂಗಣ್ಣುಗಳಿಂದ ನೋಡುತ್ತಾನೆ ... ತಾಯಿ 'ಬಂದ ಇರು' ಅಂತ ಅಬ್ಬರಿಸುತ್ತಾರೆ ... ಕೊಂಚ ಸಹನೆ ಕಡಿಮೆಯಾದ ಅಣ್ಣ, ಅಕ್ಕಂದಿರು ತಮ್ಮ ಕೋಪವನ್ನು ತೀರಿಸಿಕೊಳ್ಳಲು ಕಿವಿ ಹಿಂಡಿ ಜಂಗಿಸುವರು. 'ಪಾಪ' ಎನ್ನಿಸಿದರೂ ಹೀಗೆಲ್ಲಾ ಮಾಡದಿದ್ದರೆ, ವಿಧಿಯೇ ಇಲ್ಲ. ಬಚ್ಚಲು ಮನೆ ನೀರನ್ನೆಲ್ಲಾ ಚೆಲ್ಲಿ, ಹಾಕಿದ ಬಟ್ಟೆಗಳನ್ನೆಲ್ಲಾ ಕೊಳಕು, ಒದ್ದೆಮಾಡಿಕೊಂಡು, ಬೀದಿಯಲ್ಲಿರೋ ಮಣ್ಣನ್ನೆಲ್ಲಾ ಒಳಗೆ ತಂದುಹಾಕಿ, ಕಡ್ಡಿಪೆಟ್ಟಿಗೆ ಕಡ್ಡಿಗಳನ್ನೆಲ್ಲಾ ಗೀಚಿ, ದೊಡ್ಡವರ ಕಾಲೇಜು ಪುಸ್ತಕಗಳಲ್ಲೆಲ್ಲಾ ಸಿಕ್ಕಾಪಟ್ಟೆ ಗೀಚಿ....ಒಂದೇ,ಎರಡೇ?ಸಾಮಾನ್ಯವಾಗಿ ಇದನ್ನೆಲ್ಲಾ ಮಾಡದ ಹುಡುಗರೇ ಅಪರೂಪ. ಇವುಗಳಿಗೆಲ್ಲಾ ಎಚ್ಚರಿಕೆ ವಹಿಸಿದರೆ ಹೊಸತನ್ನು ಹುಡುಕಿ ಮಾಡುವ ಸಾಮರ್ಥ್ಯವೂ ಅವರಿಗಿದೆ, ಖಂಡಿಸಿದರೆ ಮಕ್ಕಳ ಮನಸ್ಸು ಮುದುಡಿ ಹೋಗುತ್ತದೆ. ಇದನ್ನೆಲ್ಲಾ ಕಂಡು, ದೊಡ್ಡವರಿಗೆ ಬೇಸರವಾಗದಂತೆಯೂ, ಮಕ್ಕಳ ಆನಂದಕ್ಕೆ ಕುಂದು ಬರದೇ ಇರುವಂತೆಯೂ ಇರುವ ಸಲುವಾಗಿ ಹಾಲೆಂಡಿನ ಮಕ್ಕಳ ತಜ್ಞರಾದ ಜೇಕಬ್ ಲಿಯೋನಾರ್ಡ್ ಎಂಬುವರು 'ಮಕ್ಕಳ ನಂದನವನ'ಗಳನ್ನು ಆರಂಭಿಸಿದರು.

ರಜಾ ಕಾಲದಲ್ಲಿ ಹೆತ್ತವರು ತಮ್ಮ ಮಕ್ಕಳನ್ನು ಈ 'ನಂದನವನ'ಗಳಿಗೆ ತಂದು ಬಿಡುವರು. ಮಕ್ಕಳನ್ನು ಇಲ್ಲಿ ಒಂದು ದಿನದಿಂದ ಹಿಡಿದು, ರಜಾ ಕಳೆಯುವವರೆಗೆ ಬೇಕಾದರೂ ಬಿಟ್ಟಿರಬಹುದು. ಸಾಮಾನ್ಯವಾಗಿ, ಬೇಸಿಗೆ ರಜೆಯಲ್ಲಿ ಇಲ್ಲಿ ಅತಿ ಹೆಚ್ಚಿನ ಮಕ್ಕಳನ್ನು ಕಾಣಬಹುದು. ಇಲ್ಲಿ ಮಕ್ಕಳದ್ದೇ ರಾಜ್ಯ! ಅವರ ಸ್ವೇಚ್ಛಾ ವಿಹಾರಕ್ಕೆ ಯಾರ ಅಡ್ಡಿಯೂ ಇಲ್ಲ. ಅವರು ಕುಣಿಯಬಹುದು! ಕುಪ್ಪಳಿಸಬಹುದು! ಅಳಬಹುದು, ನಗಬಹುದು. ಇರುವ ವಸ್ತುಗಳನ್ನು ಆಕಸ್ಮಾತ್ತಾಗಿ ಒಡೆದರೂ ದಂಡಿಸುವವರಿಲ್ಲ, ಎಂದರೆ, ಇಲ್ಲಿ ದೊಡ್ಡವರು ಯಾರೂ ಇಲ್ಲವೆಂತಲ್ಲ; ಇದ್ದಾರೆ. ಆದರೆ, ಅವರು ಮಕ್ಕಳ ಸಂತೋಷಕ್ಕೆ, ವಿಹಾರಕ್ಕೆ ಅಡ್ಡಿ ಬರುವುದಿಲ್ಲ. ಒಟ್ಟಿನಲ್ಲಿ ಈ ವಿಹಾರ ಸ್ಥಳಗಳಲ್ಲಿ ಓದುವುದೊಂದರ ವಿನಾ ಎಲ್ಲಾ ವಸತಿಗಳೂ ಇವೆ

ಮಕ್ಕಳ ಜ್ಞಾನ ವಿಕಾಸನಕ್ಕೆ ಆಟದ ಸಾಮಾನುಗಳು ಅತಿ ಮುಖ್ಯ. ಆದ್ದರಿಂದ, ಇಲ್ಲಿ ಅವರ ಬುದ್ಧಿ ಶಕ್ತಿ, ದೇಹ ಶಕ್ತಿಯನ್ನು ವೃದ್ಧಿಗೊಳಿಸುವಂತಹ ಆಟದ ವಸ್ತುಗಳನ್ನೆಲ್ಲಾ ಇಡಲಾಗಿದೆ. ಜೋಡಿಮಣ್ಣಿನಿಂದ ಅವರು ನಿಷ್ಣಾತ ಕುಂಬಾರನಂತೆ ಕುಳಿತು ತಮಗೆ ತೋರಿದಂತೆ ಕುಡಿಕೆ, ಮಡಿಕೆಗಳನ್ನು ಮಾಡುವುದನ್ನು ನೋಡುವುದೇ ಒಂದು ಅತಿಶಯದ ವಿಷಯ, ಅವರ ವಯಸ್ಸಿಗೆ ತಕ್ಕಂತಹ ತೂಕದ ಬಡಗಿಯ ಸಲಕರಣೆಗಳೂ ಅಲ್ಲಿರುತ್ತವೆ. ಕೆಲವು 'ಮರಿ ಬಡಗಿಗಳು' ಏನೇನನ್ನೋ ಸಾಧಿಸುತ್ತಿರುತ್ತಾರೆ. ಆಡುತ್ತಾ, ಆಡುತ್ತಲೇ ಅವರು ಅನೇಕ ಕಾರ್ಯಗಳನ್ನು ಕಲಿತುಕೊಳ್ಳುತ್ತಾರೆ.

ಸಣ್ಣ ಸಣ್ಣ ಹುಡುಗಿಯರಿಗೆ ಅಡಿಗೆ ಮಾಡುವುದರಲ್ಲಿ ಆಸಕ್ತಿ; ನರ್ಸ್ ಕೆಲಸ ಮಾಡುವುದರಲ್ಲಿ ಇಚ್ಛೆ! ಹಿಟ್ಟನ್ನು ಕಲಸಿ ಚಪಾತಿ ಮಾಡಿ, 'ನಾನಾ ತಾಯಿ, ಉಳಿದವರೆಲ್ಲಾ ಮಕ್ಕಳು' ಎನ್ನುವಂತೆ ಉಳಿದ ಹುಡುಗರನ್ನು ಕೂಡಿಸಿ ಊಟ ಬಡಿಸುವುದನ್ನು ನೋಡುವುದೇ ಒಂದು ಆನಂದ, ತೊಟ್ಟಿಲಿನಲ್ಲಿ ಗೊಂಬೆ — ಅದೇ ಮಗು — ಮಲಗಿರುತ್ತದೆ. ಮೂರು, ನಾಲ್ಕು ಹುಡುಗಿಯರು ತೊಟ್ಟಿಲಿನ ಸುತ್ತಾ ಚಿಂತೆಯಿಂದ ಕೂಡಿದ ಮುಖಮುದ್ರೆಯಿಂದ ನಿಂತಿರುತ್ತಾರೆ. ಅವರಲ್ಲೊಬ್ಬ ಹುಡುಗಿ 'ನರ್ಸ್'ನಂತೆ ಬಂದು ಶುಶ್ರೂಷೆ ಮಾಡುತ್ತಾಳೆ. ಮಗು ಹುಷಾರಾಗುತ್ತದೆ. ಇವೆಲ್ಲಾ ನೋಡಲು ಬಲು ವಿನೋದವಾಗಿರುತ್ತದೆ. ಕೊನೆಯಲ್ಲಿ ಆ ನರ್ಸ್ 'ಮಗು'ವಿನ 'ತಾಯಿ'ಯೊಂದಿಗೆ ಯಾವಾಗಲೂ ಮಗುವನ್ನು ತಣ್ಣೀರಿನಲ್ಲಿ ಇಡಿಯಬಾರದೆಂದು ಎಚ್ಚರಿಕೆ ನೀಡಿ ಹೋಗುತ್ತಾಳೆ. ಹೀಗೆ ಗೊಂಬೆಯಾಟ ಆಡುವುದರ ಮೂಲಕವೇ ಅವರು ಮಕ್ಕಳ ಪಾಲನೆಯನ್ನು ತಿಳಿದುಕೊಳ್ಳುತ್ತಾರೆ.

ಇವೆಲ್ಲಾ ಸಾಲದೆಂಬಂತೆ ಇಲ್ಲೊಂದು ಮುದ್ರಣಾಲಯವೂ ಇದೆ. ಇಲ್ಲಿ ಬರುವ ಹುಡುಗರೇ ಈ ಮುದ್ರಣಾಲಯದಲ್ಲಿ ಅಚ್ಚಾಗುವ ದಿನಪತ್ರಿಕೆಯ ಸಂಪಾದಕ, ವರದಿಗಾರ, ಮುದ್ರಕರಾಗುತ್ತಾರೆ. ಅವರಿಗೆ ಕೋರಿದ ಸುದ್ದಿಗಳನ್ನು ಅದರಲ್ಲಿ ಪ್ರಕಟಿಸುತ್ತಾರೆ. ಈ ಪತ್ರಿಕೆಗಿಂತ ಸ್ವಾರಸ್ಯವಾದ ಪತ್ರಿಕೆ, "ಬಿಸಿಬಿಸಿ" ಸುದ್ದಿ (ಅವನೂ ಇವನೂ ಹೊಡೆದಾಡಿದರು; ಎರಡು ತಂಡದ ಹುಡುಗರಲ್ಲಿ ಮಾರಾಮಾರಿ ನಡೆಯಿತು!) ಯಿರುವ ಪತ್ರಿಕೆ ಇ

(ಹತ್ತನೇ ಪುಟ ನೋಡಿರಿ)

39 ವರ್ಷಗಳ ಸೇವೆ

ಮತ್ತು ಪ್ರಗತಿ.....

ಪ್ರಗತಿ

ಪಾವತಿಯಾದ ಬಂಡವಾಳ ಮತ್ತು ಕಾದಿಟ್ಟ ನಿಧಿ ... ರೂ. 1.75 ಕೋಟಿಗೂ ಮಿಕ್ಕಿದೆ.

ಠೇವಣಾತಿಗಳು .... ರೂ. 51 ಕೋಟಿಗೂ ಮಿಕ್ಕಿದೆ.

ಚಲಾವಣಾ ನಿಧಿ .... ರೂ. 70 ಕೋಟಿಗೂ ಮಿಕ್ಕಿದೆ.

ಶಾಖೆಗಳು .... 200ಕ್ಕೂ ಮಿಕ್ಕಿ.

ಗ್ರಾಹಕರು ... 8 ಲಕ್ಷಕ್ಕೂ ಮಿಕ್ಕಿ.

ನಮ್ಮ ಸೇವೆಗಳು ·

- ಎಕ್ಸಿಕ್ಯೂಟರ್ ಮತ್ತು ಟ್ರಸ್ಟಿ
- ಕೈಗಾರಿಕೆಗಳಿಗೆ ಆರ್ಥಿಕ ಸಹಕಾರ.
- ಸೇಫ್ ಡಿಪಾಜಿಟ್ ಲಾಕರ್ಸ್.
- ಆರ್ಥಿಕ ವಿಚಾರಗಳಲ್ಲಿ ಸಮಾಚಾರ ಸಮೀಕ್ಷೆ.
- ವಿದೇಶ ವ್ಯಾಸಂಗಕ್ಕೆ ಮತ್ತು ಚಿಕ್ಕ ಪ್ರಮಾಣದಲ್ಲಿ ವ್ಯಾಪಾರ ಉದ್ಯೋಗಗಳನ್ನು ಪ್ರಾರಂಭಿಸಲು ಉದ್ಯಮಿಗಳಿಗೆ ಸಾಲ.
- ವಿದ್ಯಾರ್ಥಿಗಳಿಗೂ, ಧರ್ಮ ಸಂಸ್ಥೆಗಳಿಗೂ ವಿಶೇಷ ಸವಲತ್ತುಗಳು.
- ವ್ಯವಹಾರ ಮತ್ತು ನಿರ್ದೇಶನ.
- ಕೃಷಿಗೆ ಆರ್ಥಿಕ ನೆರವು.
- ಹೊಸ ಶೇರು ನೀಡಿಕೆಗಳಲ್ಲಿ ಮೇಲ್ವಿಚಾರಣೆ ಮತ್ತು ಇತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ

......................ವಿಶ್ವವ್ಯಾಪಿ ಬ್ಯಾಂಕಿಂಗ್ ಬಗ್ಗೆ

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction Madras.

ಭಾರತದಲ್ಲಿ ತೈಲಸಮೃದ್ಧಿ

ಆಧುನಿಕ ಕೈಗಾರಿಕೆ ವಿಕಾಸಕ್ಕೆ ಎಣ್ಣೆಯ ಮಹತ್ವ ಎಷ್ಟೆಂದು ಹೇಳಿದರೂ ಅತಿಶಯೋಕ್ತಿಯೆನಿಸುವುದಿಲ್ಲ. ನಿಸರ್ಗವು ಕೊಡಮಾಡಿದ ಅನೇಕ ಕಾಣಿಕೆಗಳೊಂದಿಗೆ ಭಾರತದಲ್ಲಿ ಒಹು ಮಹತ್ವದ್ದಾದ ಈ ಇಂಧನ ವಸ್ತುವೂ ಸಮೃದ್ಧವಾಗಿದೆ. ರಾಷ್ಟ್ರದ ಆರ್ಥಿಕ ವಿಕಾಸಕ್ಕೂ ಇವು ಅತ್ಯಂತ ಮಹತ್ವದ್ದಾಗಿವೆ. ಕೆಲವು ವಿದೇಶೀ ತೈಲ ಹಿತಾಸಕ್ತಿಗಳು ಭಾರತದ ಮಣ್ಣಿನಿಂದ ಎಣ್ಣೆ ತೋಡುವ ಪ್ರಯತ್ನ ಮಾಡಿದವಾದರೂ ಭಾರತದ ತೈಲೋದ್ಯಮಕ್ಕೆ ಇದು ಬುನಾದಿ ಕೂಡ ಆಗುವಂತಿರಲಿಲ್ಲ. ಭಾರತವು ಸ್ವತಂತ್ರಗೊಂಡ ಬಳಿಕ, ಈ ದಿಶೆಯಲ್ಲಿ ಯೋಜನೆಗಳನ್ನು ಕೈಕೊಂಡು ಹುದುಗಿದ ಅಗಣಿತ ಸಂಪತ್ತನ್ನು ಅಗೆಯಲು ನಿರ್ಧರಿಸಿತು. ಅಂಥವುಗಳಲ್ಲಿ "ಪ್ರವಾಹಿ ಬಂಗಾರ"ವಾದ ತೈಲವೂ ಒಂದಾಗಿತ್ತು.

ಭಾರತದಲ್ಲಿ ಸಂಪನ್ಮೂಲಗಳೇನೊ ಸಮೃದ್ಧವಾಗಿವೆ. ಇವುಗಳ ಸಂಶೋಧನೆಗೆ ವಿದೇಶೀಯರ ಸಹಾಯವನ್ನು ರಾಜಕೀಯ, ಆರ್ಥಿಕ ಅಥವಾ ಇನ್ನಾವುದೇ ಬಗೆಯ ಸ್ವಂತ ಪ್ರಯೋಜನಗಳನ್ನೇ ನೋಡಿಕೊಳ್ಳದ ವಲಯದಿಂದ ಮಾತ್ರ ಪಡೆಯುವುದು ಸಾಧ್ಯ. ಸೋವಿಯತ್ ತಜ್ಞರು ಭಾರತಕ್ಕೆ ಬಂದು ಅತ್ಯಂತ ಪರಿಶ್ರಮದಿಂದ ಸಂಶೋಧನಾ ಕಾರ್ಯವನ್ನು ನಡೆಸಿ ಭಾರತ ಸರ್ಕಾರಕ್ಕೊಂದು ವರದಿಯನ್ನು ೧೯೫೬ರಲ್ಲಿ ಅರ್ಪಿಸಿದರು. ಭಾರತದಲ್ಲಿ ಎಣ್ಣೆಯನ್ನು ಕಂಡುಹಿಡಿದು ಅದನ್ನು ತೋಡುವ ಹಾಗೂ ಅದನ್ನು ಅಭಿವೃದ್ಧಿಗೊಳಿಸುವುದರ ಕುರಿತು ಐದು ವರುಷಗಳ ಕರಡು ಯೋಜನೆ ಇದಾಗಿತ್ತು. ಇಂಥ ಘನವಾದ ಕಾರ್ಯದಲ್ಲಿ ಸೋವಿಯತ್ ನಾಡಿನೊಂದಿಗೆ ಇನ್ನೊಂದು ಸಮಾಜವಾದೀ ರಾಷ್ಟ್ರ, ರುಮಾನಿಯಾ ಸೇರಿಕೊಂಡಿತು.

ಭಾರತದ ಸ್ವತಂತ್ರ ತೈಲ ಕೈಗಾರಿಕೆ ನಿರ್ಮಾಣದ ಕಾರ್ಯವು ಆರಂಭವಾದಂತೆ ಭಾರತದ ಮಣ್ಣಿನಲ್ಲಿ ಎಣ್ಣೆ ಇದೆಯೆ ಎಂದು ಅನುಮಾನಿಸಲೂ ಕಾರಣ ಉಳಿಯಲಿಲ್ಲ, ತೈಲಶಕ್ತಿಯಿರುವುದನ್ನು ಅಲ್ಲಗಳೆಯುವುದನ್ನೂ ನಿಲ್ಲಿಸಬೇಕಾಯಿತು. ಪಾಹತು ಪಟ್ಟ—ಭದ್ರ ಹಿತಗಳು ಬಹಳ ದಿನಗಳಿಂದ ಇಂಥ ಹಾಡನ್ನು ಹಾಡುತ್ತಲೇ ಇದ್ದುವು. ಆದರೆ ಈಗ ಸೋವಿಯತ್ ಭೂಶಾಸ್ತ್ರ ಸಚಿವರಾದ ಎ. ವಿ. ಸಿದೊರೆಂಕೊ ಅವರು ಪ್ರಕಟಪಡಿಸಿರುವಂತೆ, ಭಾರತದಲ್ಲಿ ಈಗಾಗಲೇ ತಿಳಿದಿರುವಂತೆ ೧೦೦ರಿಂದ ೧೨೦ ಮಿಲಿಯ ಟನ್ನುಗಳ ವರೆಗೆ ತೈಲ ಸಂಪತ್ತಿಯಿದೆ, ೧೩ ಮಿಲಿಯ ಘನ ಮೀಟರುಗಳಷ್ಟು ನೈಸರ್ಗಿಕ ಅನಿಲವಿದೆ ಮತ್ತು ಈಗಿನ ವೇಗದಲ್ಲಿ ಇವುಗಳನ್ನು ಮುಗಿಸಲು ಕನಿಷ್ಠ ನಾಲ್ಕು ದಶಕಗಳಾದರೂ ಬೇಕು.

ಭಾರತದ ಆರ್ಥಿಕ ರಂಗದಲ್ಲಿ ತೈಲೋತ್ಪಾದನೆಯ ಕೈಗಾರಿಕೆಯನ್ನು ಪ್ರಭುತ್ವ ಕ್ಷೇತ್ರದಲ್ಲಿ ಸ್ಥಾಪಿಸಲಾಯಿತು. ತೈಲ ಮತ್ತು ಅನಿಲಗಳನ್ನು ಹೊಂದಿರುವ ಎಂಟು ಪ್ರದೇಶಗಳು ಪತ್ತೆಯಾಗಿವೆ. ಕ್ಯಾಂಬೆ, ಅಂಕಲೇಶ್ವರ, ಕಲೋಲ್, ರುದ್ರ ಸಾಗರ (ಗುಜರಾತ್ ಮತ್ತು ಅಸ್ಸಾಮ ಈ ಸ್ಥಳಗಳಲ್ಲಿಯೂ ಮತ್ತು ಕಳೆದ ವರುಷದ ಡಿಸೆಂಬರ್ ತಿಂಗಳಲ್ಲಿ ಮದರಾಸು ರಾಜ್ಯದ ಕಾರೈಕಲ್ ಪ್ರದೇಶದಲ್ಲೂ ತೈಲವು ಹೊರ ಚಿಮ್ಮಿದೆ.

ದೇಶದ ಪೂರ್ವ ಹಾಗೂ ಪಶ್ಚಿಮ ಭಾಗಗಳಲ್ಲಿ ತೈಲವಿದೆಯೆಂಬುದನ್ನು ಖಚಿತಪಡಿಸಿದ ಬಳಿಕ ಈ "ಹೋರಾಟ"ವನ್ನು ದಕ್ಷಿಣ ಭಾರತಕ್ಕೂ ವಿಸ್ತರಿಸಲಾಯಿತು. ೧೯೬೪ ಜೂನ್ ೧೫ನೇ ತಾರೀಖು ಭಾರತ ಮತ್ತು ಸೋವಿಯತ್ ಒಕ್ಕೂಟಗಳಲ್ಲಿ ಒಂದು ಒಪ್ಪಂದವಾಯಿತು. ಈ ಒಪ್ಪಂದದ ಪ್ರಕಾರ "ಅಕಾಡೆಮಿಕ್ ಅರ್ಖಾಂಗೆಲಸ್ಕಿ" ಎಂಬ ಸೋವಿಯತ್ ನೌಕೆಯು ಕಚ್ ಉಪಸಾಗರ ಹಾಗೂ ಮದರಾಸು ತೀರದಲ್ಲಿ ತೈಲವಿರುವುದನ್ನು ಕಂಡುಹಿಡಿಯಿತು. ಕಾರೈಕಲ್ ಯೋಜನೆ—೧"ಎಂಬಲ್ಲಿ ಕೇವಲ ಆರೇ ತಿಂಗಳಲ್ಲಿ ಸೋವಿಯತ್ ಯಂತ್ರ ತಾಂತ್ರಿಕತೆಯು ಮೊದಲನೇ ಎಣ್ಣೆ ಕಾಲುವೆಗಳನ್ನು ಪಡೆದಿರುವುದು ಸಂಬಂಧಿಸಿದ ಎಲ್ಲರಿಗೂ ಸಂತೋಷದ ಹಾಗೂ ಹೆಮ್ಮೆಯ ಸಂಗತಿಯಾಗಿದೆ. ದಕ್ಷಿಣ ಭಾರತದಲ್ಲಿ ತೈಲವಿದೆಯೆಂದು ಹಿಂದೆದೂ ಕನಸು ಮನಸಿನಲ್ಲಿ ಕೂಡ ಕಂಡಿರಲಿಲ್ಲ. ಮೊದಲ ಪ್ರಯತ್ನವೇ ಯಶಸ್ವಿಯಾಗಿ ಅದನ್ನು ಪರೀಕ್ಷೆಗೂ ಒಳಿಸಿಕೊಡಲಾಯಿತು.

'ಕಾರೈಕಲ್ ಯೋಜನೆ—೨' ಎಂಬ ಹೊಸ ಪ್ರದೇಶದಲ್ಲಿ ತೈಲವನ್ನು ತೋಡಲು ಈಗ ಸಿದ್ಧತೆಗಳಾಗಿವೆ.

ಕಾವೇರಿ ನದಿಯ ಮುಖಜ ಭೂಮಿಯು ತೈಲ ನಿಕ್ಷೇಪಗಳಿಂದ ಸಮೃದ್ಧವಾಗಿದೆಯೆಂಬುದು ಈಗ ನಿರ್ಣಾಯಕವಾಗಿ, ನಿಸ್ಸಂದೇಹವಾಗಿ ಸಿದ್ಧವಾಗಿದೆ. "ಅಕೆಡೆಮಿಕ್ ಅರ್ಖಾಂಗೆಲಸ್ಕಿ"- ಭೂಕಂಪನ ವಿಜ್ಞಾನದ ಹಡಗಾಗಿದ್ದು ಅದು ನಡೆಸಿದ ಸಮೀಕ್ಷೆ ಹಾಗೂ ಪರಿಶೀಲನೆಗಳಿಂದ ಕಾರೈಕಲ್ಲು ಶಿಲಾರಚನೆಯಲ್ಲಿ— ಬಂಗಾಳ ಕೊಲ್ಲಿಯ ಒಳಗಡೆ ೧೯ ಮೈಲಿಗಳ ಪ್ರದೇಶದಲ್ಲೂ ಭೂಮಿಯಲ್ಲಿ ೭ ಮೈಲಿಗಳ ಪ್ರದೇಶದಲ್ಲೂ — ತೈಲವಿರುವುದು ದೃಢಪಟ್ಟಿದೆ. ಇನ್ನೂ ದಕ್ಷಿಣಕ್ಕೆ ಪುದುಕೋಟೆ ಪ್ರದೇಶದಲ್ಲೂ ಪರೀಕ್ಷಾರ್ಥ ತೋಡುವ ಕೆಲಸವನ್ನಾರಂಭಿಸಲು ಸಿದ್ಧತೆಗಳಾಗುತ್ತಿವೆ.

ಕಾರೈಕಲ್ಲಿನಲ್ಲಿ ತೋಡುವ ಕಾರ್ಯವು ಹಗಲು ರಾತ್ರಿಯೆನ್ನದೆ ನಾಲ್ಕು ಪಾಳಿಗಳಲ್ಲಿ ನಡೆಯುತ್ತಿದೆ. ಪ್ರತಿಯೊಂದು ಪಾಳಿಯಲ್ಲೂ ಹಲವಾರು ಭಾರತೀಯ ಇಂಜನೀಯರುಗಳ ಸಹಾಯದಿಂದ ಸೋವಿಯತ್ ತಜ್ಞರು ಕೆಲಸ ಮಾಡುತ್ತಿರುತ್ತಾರೆ.

ಭಾರತದ ರಾಷ್ಟ್ರೀಯ ಆರ್ಥಿಕತೆಯ ಬಹು ಜೀವಾಳದ ಈ ರಂಗದಲ್ಲಿ ದೊರೆತಿರುವ ಸೋವಿಯತ್ ತಾಂತ್ರಿಕ ಸಹಾಯವು ತೈಲ ಹೊಂದಿರಬಹುದಾದ ಪ್ರದೇಶಗಳ ಪರಿಶೀಲನೆಗೆ ಮಾತ್ರವೇ ಸಹಕಾರಿಯಾಗಿಲ್ಲ, ತೈಲವಿದೆಯೆಂಬುದನ್ನೂ ಅದು ದೃಢಪಡಿಸಿದೆ. ಈ ಕೈಗಾರಿಕಾ ಶಾಖೆಯಲ್ಲಿ ಈಗೊಂದು ಹೊಸ ಹಂತವನ್ನು ತಲುಪಲಾಗಿದೆ. ಅದೆಂದರೆ ಸ್ವಾವಲಂಬನೆಯನ್ನು ಇನ್ನಷ್ಟು ದೃಢಗೊಳಿಸುವ ಪ್ರಯತ್ನದ ಅಂಗವಾಗಿ, ಪ್ರಭುತ್ವ ಕ್ಷೇತ್ರದಲ್ಲಿ ತೈಲ ಸಂಸ್ಕರಣಾಗಾರಗಳನ್ನು ಕಟ್ಟುವುದಾಗಿದೆ. ಬರೌನಿ ತೈಲ ತಯಾರಿಕಾ ಯಂತ್ರ ಸ್ಥಾವರದ ಮೊದಲ ಘಟ್ಟವು ಈಗಾಗಲೇ ಕಾರ್ಯವನ್ನಾರಂಭಿಸಿದೆ. ಕೊಯಾಲಿನಲ್ಲಿ ಈಗ ನಿರ್ಮಾಣ ಕಾರ್ಯವು ಅತ್ಯಂತ ಭರದಿಂದ ಸಾಗುತ್ತಿದೆ.

ಸೋವಿಯತ್ ಭೂವಿಜ್ಞಾನ ಸಚಿವರಾದ ಎ. ವಿ. ಸಿದೊರೆಂಕೊ ಅವರು ಇತ್ತೀಚೆಗೆ ಇನ್ನೂ ಕೆಲವರು ಸೋವಿಯತ್ ಭೂಗೋಲಿಕ ತಜ್ಞರೊಡನೆ ಆಗಮಿಸಿ ಭಾರತದ ಪೆಟ್ರೋಲಿಯಂ ಮತ್ತು ಕೈಗಾರಿಕಾ ಶಾಖೆಯ ಸಚಿವರಾದ ಶ್ರೀ ಹ. ಮಾಯೂನ್ ಕಬೀರರೊಂದಿಗೆ ಚರ್ಚೆ ನಡೆಸಿರುವುದು ಈ ಕೈಗಾರಿಕಾ ವಿಸ್ತರಣದ ಶುಭಲಕ್ಷಣವಾಗಿದೆ. ವರದಿಯಾಗಿರುವಂತೆ ಸೋವಿಯತ್ ಸಚಿವರು ಭೂಗೋಲಿಕ ಹಾಗೂ ಸಂಶೋಧನಾ ಕಾರ್ಯ ಚಟುವಟಿಕೆಗಳ ವಿಸ್ತರಣೆಗೆ ಹಾಗೂ ಭಾರತದಲ್ಲಿ ತೈಲ ಸಂಸ್ಕರಣ ಸಾಮರ್ಥ್ಯಕ್ಕೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಸೋವಿಯತ್ ಒಕ್ಕೂಟವು ಪರಿಶೀಲಿಸಲು ಸಿದ್ಧವಾಗಿದೆಯೆಂದು ತಿಳಿಸಿದ್ದಾರೆ.

— —



ಚಿತ್ರ: ಗುಜರಾತದ ಕ್ಯಾಂಬೇಯಲ್ಲಿ ಅಗೆಯಲಾದ ತೈಲಕೂಪದಿಂದ ಎತ್ತಿದ ಎಣ್ಣೆಯನ್ನು ಕೊಳ್ಳದಲ್ಲಿ ಸಂಗ್ರಹಿಸಲಾಗಿದೆ.

ಚುಟುಕ

ಸಿ. ರಾಜಗೋಪಾಲಾಚಾರಿ

'ಚಕ್ರವರ್ತಿ'ಯೆಂಬ ಬಿರುದ!
ಮುಕುಟರಹಿತ 'ರಾಜ'ರು!
ಪ್ರಜೆಗಳ ಹಿತವಿಸ್ಮೃತ ಇರದು—
ಗೊಂದಲಪಲಿ ಹಾಜರ!

— ಶಾಂತಾ ಕುಮಾರಿ,
ಮಂಗಳೂರು

— — —

ಮೂರನೆಯ ಅಂತಾರಾಷ್ಟ್ರೀಯ ಚಲಚ್ಚಿತ್ರೋತ್ಸವ

ಮೂರನೆಯ ಅಂತಾರಾಷ್ಟ್ರೀಯ ಚಲಚ್ಚಿತ್ರೋತ್ಸವವು ನವದೆಹಲಿಯಲ್ಲಿ ಇದೇ ವರ್ಷದ ಜನವರಿ ೮ರಿಂದ ೨೧ರ ವರೆಗೆ ವೈಭವಯುತವಾಗಿ ನಡೆಯಿತು. ದೇಶದಲ್ಲಿ ಸ್ಪರ್ಧಾತ್ಮಕವಾಗಿದ್ದ ಅಂತಾರಾಷ್ಟ್ರೀಯ ಚಲಚ್ಚಿತ್ರೋತ್ಸವ ನಡೆಯುತ್ತಿರುವುದು ಇದೇ ಮೊದಲ ಬಾರಿ. ಈ ಮೊದಲೇ ೧೯೫೨ ಮತ್ತು ೧೯೬೧ರಲ್ಲಿ ನಡೆದ ಚಲಚ್ಚಿತ್ರೋತ್ಸವಗಳಲ್ಲಿ ಸ್ಪರ್ಧೆಯಿರಲಿಲ್ಲ.

ಭಾರತವೂ ಸೇರಿ ೩೦ ರಾಷ್ಟ್ರಗಳ ೧೯ ಕಥಾ ಚಿತ್ರಗಳು ಮತ್ತು ೩೦ ಲಘು ಚಿತ್ರಗಳು ಈ ಉತ್ಸವದಲ್ಲಿ ಸ್ಪರ್ಧೆಗಾಗಿ ಪ್ರದರ್ಶಿಸಲ್ಪಟ್ಟವು. ಸ್ಪರ್ಧಾತೀತ ವಿಭಾಗದಲ್ಲಿ ೧೭ ರಾಷ್ಟ್ರಗಳು ಮತ್ತು ವಿಶ್ವಸಂಸ್ಥೆ ಸುಮಾರು ೧೫ ಕಥಾಚಿತ್ರಗಳನ್ನೂ ೯ ಲಘುಚಿತ್ರಗಳನ್ನೂ ಪ್ರದರ್ಶಿಸಿದವು.

ವಿಶ್ವದ ವಿವಿಧ ಭಾಗಗಳಿಂದ ಸುಮಾರು ೧೦೦ ಮಂದಿ ಚಲಚಿತ್ರ ನಟನಟಿಯರು, ನಿರ್ಮಾಪಕರು ನಿರ್ದೇಶಕರು ಕಥಾ ಚಿತ್ರ ಲೇಖಕರು, ವಿಮರ್ಶಕರು, ತಂತ್ರಜ್ಞರು ಈ ಸಮ್ಮೇಳನದಲ್ಲಿ ಭಾಗವಹಿಸಲು ನವದೆಹಲಿಗೆ ಆಗಮಿಸಿದ್ದರು. ಚಲಚ್ಚಿತ್ರರಂಗವು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗೆಗೆ ಕ್ಷಕಿರಣ ಬೀರುವ ವಿಚಾರಗೋಷ್ಠಿಗಳು ಉತ್ಸವದ ಅಂಗವಾಗಿ ನಡೆದವು. ಚಲಚ್ಚಿತ್ರರಂಗದ ಖ್ಯಾತ ವ್ಯಕ್ತಿಗಳು ವಿಶ್ವ ನಾಗರೀಕತೆಯ ಬೆಳವಣಿಗೆಯ ಸಾಧನಗಳಲ್ಲೊಂದಾದ ಚಲಚ್ಚಿತ್ರರಂಗದ ಅಭಿವೃದ್ಧಿ ಮಕ್ಕಳ ಚಿತ್ರಗಳು ಶೈಕ್ಷಣಿಕ ಚಿತ್ರಗಳು— ಇವೇ ಮೊದಲಾದ ವಿಷಯಗಳ ಬಗ್ಗೆ ವಿಚಾರ ವಿನಿಮಯ ನಡೆಸಿದರು.

ಸ್ಪರ್ಧೆಯಲ್ಲಿ ಗೆದ್ದ ಚಲಚ್ಚಿತ್ರಗಳಿಗೆ ಭಾರತದ ರಾಷ್ಟ್ರೀಯ ಪಕ್ಷಿಯಾದ "ಮಯೂರ"ದ ಪ್ರತಿಮೆಗಳನ್ನು ಬಹುಮಾನಗಳನ್ನಾಗಿ ಕೊಡಲಾಯಿತು. ಕಥಾ ಚಿತ್ರಗಳು ಮತ್ತು ಲಘು ಚಿತ್ರಗಳನ್ನು ಬಹುಮಾನಕ್ಕೆ ಆರಿಸುವುದಕ್ಕಾಗಿ ಎರಡು ತೀರ್ಪುಗಾರರ ಮಂಡಲಿಗಳು ರಚಿತವಾಗಿದ್ದುವು.

ಕಥಾಚಿತ್ರಗಳ ತೀರ್ಪುಗಾರರ ಸಮಿತಿಗೆ ಭಾರತದ ಖ್ಯಾತ ನಿರ್ದೇಶಕರಾದ ಶ್ರೀ ಸತ್ಯಜಿತ್‌ರೇಯವರು ಅಧ್ಯಕ್ಷರಾಗಿದ್ದರು. ಪ್ರೊ. ಎ ಎಮ್ ಬ್ರೌಸಿಲ್, (ಜೆಕೋಸ್ಲೊವಾಕಿಯಾ) ಶ್ರೀಮತಿ ಮಾಗ್ದಾ (ಸಂಯುಕ್ತ ಅರಬ್ ಗಣರಾಜ್ಯ), ಪ್ರೊ ಜಾರ್ಜಸ್ ಸದೌಲ್ (ಫ್ರಾನ್ಸ್), ಶ್ರೀ ಕೆ. ಎ. ಅಬ್ಬಾಸ್ (ಭಾರತ), ಶ್ರೀಮತಿ ಕೆ ಕವಾಕಿತ (ಜಪಾನ್) ಮಿ. ಆಂಡ್ರೆಜ್ ವಾಜ್ದಾ (ಪೋಲೆಂಡ್), ಮೈಕೇಲ್ ಕಲಾಟೊಜೋವ್ (ರಷ್ಯಾ) ಮತ್ತು ಆಂಡ್ರೆ ಆಂಡ್ರೆಸ್‌ನ (ಬ್ರಿಟನ್) ಇವರು ತೀರ್ಪುಗಾರರ ಸಮಿತಿಯ ಇನ್ನುಳಿದ ಸದಸ್ಯರಾಗಿದ್ದರು.

ಲಘುಚಿತ್ರಗಳ ತೀರ್ಪುಗಾರರ ಸಮಿತಿಗೆ ಭಾರತದ ಪ್ರೊ. ಜೆ. ಎಸ್. ಬಾನಗಿರಿಯವರು ಅಧ್ಯಕ್ಷರಾಗಿದ್ದರು. ಮಿ ಲೋಡಿಸ್ಲಾವ್ ಡ್ರಿಟೆಲ್ (ಜೆಕೋಸ್ಲೋವಾಕಿಯಾ) ಗ್ರಾಂಟ್ ಮೆಕ್‌ಲಾರನ್ (ಕೆನಡಾ), ಬೊಲೆಸ್ಲಾ ಮಿಜಾಲಿಕ್ (ಪೋಲೆಂಡ್) ಮತ್ತು ಗೆರಾಲ್ಡ್ ಆಲ್ಮನ್ (ಅಮೇರಿಕ), ಇವರು ಲಘುಚಿತ್ರಗಳ ತೀರ್ಪುಗಾರರ ಸಮಿತಿಯ ಉಳಿದ ಸದಸ್ಯರಾಗಿದ್ದರು.

'ಡು ನೋಟ್ ಕ್ರೈ, ಪೀಟರ್' ಯುಗೋಸ್ಲಾವಿಯನ್ ಚಿತ್ರದ ಒಂದು ದೃಶ್ಯ

ತೃತೀಯ ಅಂತಾರಾಷ್ಟ್ರೀಯ ಚಲಚ್ಚಿತ್ರೋತ್ಸವದಲ್ಲಿ ಪ್ರದರ್ಶಿತವಾದ ಚಿತ್ರಗಳ ಪೈಕಿ ಸಿಂಹಳದ ಚಿತ್ರವಾದ "ಗ್ರಾಂಬ್ರಾಲಿಯಾ" ಅತ್ಯುತ್ತಮ ಚಿತ್ರವೆಂದು ಪರಿಗಣಿಸಲ್ಪಟ್ಟು ಸುವರ್ಣ ಮಯೂರವನ್ನು (ಗ್ರಾಂಡ್ ಪ್ರಿಕ್ಸ್) ಬಹುಮಾನವಾಗಿ ಗಳಿಸಿತು. ಸತ್ಯಜಿತ್ ರೇಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿದ್ದ ತೀರ್ಪುಗಾರರ ಮಂಡಲಿಯು ಒಟ್ಟು ೬ ಚಿತ್ರಗಳನ್ನು ಬಹುಮಾನ ನೀಡಿಕೆಗ ಆರಿಸಿತು. ವಿಶೇಷ ಬಹುಮಾನಕ್ಕಾಗಿ ಮತ್ತು ವಿಶೇಷ ಮೆಚ್ಚುಗೆಗಾಗಿ ಇನ್ನೆರಡು ಚಿತ್ರಗಳನ್ನು ಆರಿಸಲಾಯಿತು.

ರಷ್ಯಾದಿಂದ ಬಂದಿದ್ದ "ಸ್ಕೈಕ್ರೋನ್" ಅತ್ಯುತ್ತಮ ಲಘುಚಿತ್ರವೆಂದು ಪರಿಗಣಿಸಲ್ಪಟ್ಟಿದೆ. ಮಾನವೀಯ ಧೈರ್ಯದ ಹಸಗಳನ್ನು ಕರುಣೆ ಮತ್ತು ಸಹಕಾರ ಮನೋಧರ್ಮ ಇವೇ ಮೊದಲಾದ ಸದ್ಭಾವನೆಗಳನ್ನು ಈ ಚಿತ್ರ ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ೨೩ ದೇಶಗಳಿಂದ ಒಟ್ಟು ೩೮ ಲಘು ಚಿತ್ರಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದುವು. ಈ ಪೈಕಿ ಅತ್ಯುತ್ತಮವಾದವುಗಳನ್ನು ಆರಿಸಲೆಂದೇ ಶ್ರೀ ಜೆ ಎಸ್ ಬಾನಗಿರಿಯವರ ಅಧ್ಯಕ್ಷತೆಯಲ್ಲಿ ಪ್ರತ್ಯೇಕ ತೀರ್ಪುಗಾರರ ಮಂಡಳಿ ರಚಿತವಾಗಿತ್ತು.

"ನಿರ್ಜನ್ ಸ ಯ್ ಕತ್" ಎಂಬ ಬಂಗಾಳಿ ಚಿತ್ರದಲ್ಲಿ ಅಭಿನಯಿಸಿರುವ ಇವರು ಪ್ರಮುಖ ನಟಿಯರಾದ ಶರ್ಮಿಲಾ ಟಾಗೋರ್, ರಾಮಾ ಗುಹಾ ಠಾಕೂರ್, ಛಾಯಾದೇವಿ, ಭಾರತೀದೇವಿ ಮತ್ತು ರೇಣುಕಾ ರಾಯ್ ಇವರೆಲ್ಲರಿಗೆ ಅತ್ಯುತ್ತಮ ನಟಿಗೆ ಕೊಡುವ ಚಿನ್ನದ ನವಿಲು ಬಹುಮಾನವನ್ನು ಒಟ್ಟಿಗೆ ಅನ್ವಯಿಸುವಂತೆ ಕೊಡಲಾಗಿದೆ.

ಅತ್ಯುತ್ತಮ ನಟರಿಗೆ ಕೊಡಲಾಗುವ ಬಹುಮಾನವನ್ನು ಸೋವಿಯತ್ ರಷ್ಯಾದ 'ಎ ಟೇಲ್ ಆಫ್ ದಿ ಡಾನ್' ಎಂಬ ಚಿತ್ರದಲ್ಲಿ ಅಭಿನಯಿಸಿರ ಪ ಲಿಯೋನೋವ್‌ರವರಿಗೆ ನೀಡಲಾಗಿದೆ. ಇವರ ಅಭಿನಯ ಉನ್ನತ ಮಟ್ಟದ್ದಾಗಿದೆ.

ಇಟಲಿಯ "ದಿ ಯಂಗ್ ನನ್" ತೀರ್ಪುಗಾರರ ವಿಶೇಷ ಬಹುಮಾನವನ್ನು ಗಳಿಸಿದೆ. ಈ ಚಿತ್ರದಲ್ಲಿ ಪ್ರಥಮ ಬಾರಿಗೆ ಅಭಿನಯಿಸಿರುವ ಲೌರಾ "ಎಫ್ರಿಕೆಯಾನ್" ಉತ್ತಮ ನಟಿಯೆಂದು ತೀರ್ಪುಗಾರರು ಅಭಿಪ್ರಾಯ ಪಟ್ಟಿದ್ದಾರೆ.

ಜೆಕೋಸ್ಲೋವಾಕಿಯಾದ 'ಜನೋಸಿಕ್' ಉತ್ತಮ ಛಾಯಾ ಚಿತ್ರಣಕ್ಕೆ ಮೆಚ್ಚುಗೆ ಪಡೆದಿದೆ. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಕಥಾ ಚಿತ್ರಗಳ ಪೈಕಿ 'ಕಿಡ್ ಏಬಟ್ ಲಿವ್' ಎಂಬ ಜಪಾನಿ ಚಿತ್ರದ ಕಥಾವಸ್ತು ಬಗ್ಗೆ ತೀರ್ಪುಗಾರರು ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಅಂಡ್ ಮೈಲ್ಸ್ ಟು ಗೋ" ಎಂಬ ಲಘುಚಿತ್ರದಲ್ಲಿ ಪ್ರತಿಬಿಂಬಿತವಾಗಿರುವ ಮಾನವೀಯ ಮೌಲ್ಯಗಳನ್ನು ಮೆಚ್ಚಿಕೊಂಡು ಅದರ ನಿರ್ಮಾಪಕರಾದ ಎಸ್ ಸುಖದೇವ್ ಅವರಿಗೆ 'ದಿ ಬೆಂಗಾಲ್ ಟೈಗರ್' ವಿಶೇಷ ಬಹುಮಾನವನ್ನು ಕೊಡಲಾಗಿದೆ. 'ಕ್ಲಬ್ ಆಫ್ ಕಲ್ಕತ್ತಾ' ಈ ಬಹುಮಾನವನ್ನು ನೀಡಿದೆ.

ಪೋಲೆಂಡಿನ ಲಘುಚಿತ್ರ 'ದಿ ಪ್ಯಾಟರ್' ತಾಮ್ರದ ನವಿಲಿನ ತೃತೀಯ ಬಹುಮಾನ ಗಳಿಸಿದೆ. ಸರಳ ಸಾಧನಗಳನ್ನು ಬಳಸಿ ಉತ್ತಮ ತಂತ್ರಜ್ಞತೆಯಿಂದ ಕೂಡಿದ ಮನೋಜ್ಞ ಚಿತ್ರವನ್ನು ಸಿದ್ಧಗೊಳಿಸುವಲ್ಲಿ ಈ ಚಿತ್ರದ ನಿರ್ದೇಶಕರು ಯಶಸ್ವಿಯಾಗಿರುವರೆಂದು ತೀರ್ಪುಗಾರರ ಒಪ್ಪಿದ್ದಾರೆ. ಕೆನಡಾದ 'ಕ್ಯಾನನ್' ಮೂರನೆಯ ಬಹುಮಾನ ಗಳಿಸಿದೆ. ಈ ಚಿತ್ರದಲ್ಲಿ ಅಳವಡಿಸಿರುವ ಹೊಸ ತಂತ್ರಗಳು ಉನ್ನತ ಮಟ್ಟದ್ದಾಗಿವೆ.

ಭಾರತದ ನೆರವಿನಿಂದ ಕಟ್ಟಿದ ನೇಪಾಳದ ತ್ರಿಶೂಲ್ ಅಣೆಕಟ್ಟು

ನಿಸರ್ಗ ಸತ್ಯ

ಸಸ್ಯಗಳೂ ವಲಸೆ ಬರುತ್ತವೆ

ಮಾನವ ವಿಜ್ಞಾನವು ಅಲ್ಲಾವುದ್ದೀನನ ಮಾಯಾ ದೀಪದಂತೆ ಅತಿ ವಿಸ್ಮಯಕಾರಕ ಮತ್ತು ಸ್ಫೂರ್ತಿದಾಯಕ ವಿಷಯಗಳನ್ನು ಹೊರಗೆಡಹುತ್ತದೆ. ಜ್ಞಾನವೇ ಗುರಿಯಾಗುಳ್ಳ ಬುದ್ಧಿ ಜೀವಿಗಂತೂ ಮಾನವ ವಿಜ್ಞಾನವೇ ಆದಿ ಅಂತ್ಯವರೆಡೂ; ಇದೇ ಆವನ ಬದುಕು. ಮಾನವನ ಇತಿಹಾಸವನ್ನು ಅತ್ಯಂತ ಪ್ರಾಚೀನ ಕಾಲನಿಂದ ಶೋಧಿಸಿ ತಿಳಿಯ ಬಯಸುವವರಿಗೆ ಈ ವಿಜ್ಞಾನ ನೆಚ್ಚಿನ ಕೈದೀವಿಗೆಯಂತೆ. ಇಂದು ಪ್ರಪಂಚದಲ್ಲಿ ನಾವು ಕಾಣುವ ವಿವಿಧ ವರ್ಣಗಳ, ವಿವಿಧ ಜಾತಿಗಳ ಸಂಗಡಗಳನ್ನೂ ಬುಡಕಟ್ಟುಗಳನ್ನೂ ನೋಡಿ ಇವುಗಳ ಆದಿ ಸ್ವರೂಪ ಮತ್ತು ಮೂಲದ ರೂಪರೇಷೆಗಳನ್ನು ವಿಧಿವತ್ತಾಗಿ ಅರಿತುಕೊಳ್ಳಬೇಕಾದರೆ, ಮಾನವ ವಿಜ್ಞಾನವನ್ನು ಅಧ್ಯಯನ ಮಾಡಬೇಕು. ಈ ವಿಜ್ಞಾನವು ಹೊರಗೆಡಹುವ ಚರಿತ್ರೆಯು ಕೌತುಕಕಾರಿಯಿರುವಂತೆ ನಿಜವೂ ಹೌದು. ಇದರ ಅಧ್ಯಯನದಿಂದ ಮನುಷ್ಯನ ಬುದ್ಧಿಶಕ್ತಿಯು ವಿಕಾಸಗೊಳ್ಳುವುದು ತನ್ನ ಪೂರ್ವೇತಿಹಾಸದ ಬಗ್ಗೆ ಹೆಮ್ಮೆಪಟ್ಟುಕೊಳ್ಳುವ ಅನೇಕ ಬುಡಕಟ್ಟಿನವರಿಗೆ ಕೋಪವೂ ಇದರಿಂದ ಬರಬಹುದು.

ಕೃಷಿ ವಿಕಾಸದ ಇತಿಹಾಸವು ಇಷ್ಟೇ ವಿಸ್ಮಯಕಾರವಾಗಿದೆ. ಹಿಂದಿನ ಕಾಲದಿಂದಲೂ ನಮ್ಮ ದೇಶದಲ್ಲಿ ಆಚರಣೆಯಲ್ಲಿರುವ ಕೃಷಿ ವಿಜ್ಞಾನದ ಬಗ್ಗೆ ನಾವು ಗಮನಿಸಿದರೆ, ಇದೂ ಮಾನವ ವಿಜ್ಞಾನದಷ್ಟೇ ಅಗಾಧವಾಗಿರುವುದು. ಸಸ್ಯವರ್ಗ ಸೃಷ್ಟಿಗೊಂಡು ವಿಕಾಸಹೊಂದಿದ ಬಗೆ ಹೇಗೆ, ನಾನಾ ಬಗೆಯ ಧಾನ್ಯಗಳು, ನಾರುಗಳು ಮತ್ತು ಹಣ್ಣುಗಳು ಹೇಗೆ ಉತ್ಪತ್ತಿಗೊಂಡುವು ಎಂಬ ಸಂಗತಿ ಅತಿ ಗಹನವಾದುದು. ಇದರ ಅಧ್ಯಯನ ಕಷ್ಟಕರವಾದುದು. ಇಷ್ಟು ಗಹನ ವಿಚಾರಕ್ಕೆ ಕೈಹಾಕದೆ ಈ ವಿವಿಧ ಧಾನ್ಯಗಳು, ನಾರುಗಳು, ಫಲಪುಷ್ಪಗಳು ಸ್ನೇಹ ಸಂದೇಶಗಳನ್ನು ಕೊಂಡೊಯ್ಯುವ ದೂತರಂತೆ ದೇಶದಿಂದ ದೇಶಕ್ಕೆ ದ್ವೀಪದಿಂದ ದ್ವೀಪಕ್ಕೆ ಹತ್ತಾರು ಸಾವಿರ ಮೈಲುಗಳ ಪ್ರಯಾಣ ಮಾಡಿದ ಬಗೆ ಹೇಗೆ ಎಂಬುದನ್ನು ತಿಳಿಯಲು ಪ್ರಯತ್ನಿಸಿದರೆ ಎಷ್ಟೋ ಜ್ಞಾನ ಸಂಪಾದನೆಯಾಗುತ್ತದೆ.

ಗೋದಿ, ಜವೆಗೋದಿ, ನವಣೆ, ಸಜ್ಜೆ ಮೊದಲಾದ ಧಾನ್ಯಗಳು ಅಬಿಸೀನಿಯಾ ದೇಶದಿಂದ ಬಂದವೆಂಬುದನ್ನೂ ಕಾಫಿಯನ್ನು ಪ್ರಥಮವಾಗಿ ಬೆಳೆದ ದೇಶ ಅಬಿಸೀನಿಯಾ ಎಂಬುದನ್ನೂ ಎಷ್ಟು ಜನರು ಅರಿತಿದ್ದಾರೆ? ನಮ್ಮ ದೇಶದ ಈಶಾನ್ಯದ ಪರ್ವತ ಶ್ರೇಣಿಗಳಿಂದ ಹಿಡಿದ ದಕ್ಷಿಣ ಅಥವಾ ಮಧ್ಯ ಚೀನಾದ ವರೆಗಿರುವ ಭೂಭಾಗವು ಚಕ್ಕೋತ ಮತ್ತು ನಿಂಬೆ ಕಿತ್ತಳೆ ಮೊದಲಾದ ಜಂಬೀರ ಜಾತಿಯ ಹಣ್ಣುಗಳ ಉಗಮ ಸ್ಥಾನವೆಂಬುದು ಎಷ್ಟೋ ವಿದ್ಯಾವಂತರಿಗೆ ಗೊತ್ತಿರುವುದಿಲ್ಲ. ಇದೇ ರೀತಿ ಬಾಳೆ ಹಣ್ಣು, ತೆಂಗು, ಕಬ್ಬು, ಮಾವು ಮತ್ತು ಅನೇಕ ಉಷ್ಣವಲಯದ ಹಣ್ಣಿನ ಗಿಡಗಳು ಭಾರತಕ್ಕೆ ಇಂಡೋ-ಮಲಯಾ ಪ್ರದೇಶದಿಂದ ಬಂದವುಗಳೆಂದರೆ ಯಾರಿಗೆ ಆಶ್ಚರ್ಯವಾಗುವುದಿಲ್ಲ? ಅಕ್ಕಿ ಕೂಡ ಇದೇ ಪ್ರದೇಶದಿಂದ ಬಂದದ್ದೆಂದು ಕೃಷಿ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ನಾವು ದಿನಂಪ್ರತಿ ತೆಗೆದುಕೊಳ್ಳುವ ಆಹಾರದಲ್ಲಿ ಎಷ್ಟು ಪದಾರ್ಥಗಳು ನಮ್ಮ ಭಾರತದಲ್ಲಿಯೇ ಹುಟ್ಟಿದವೆಂಬುದನ್ನು ಪರಿಶೀಲಿಸಿ ನೋಡಿದರೆ ಅವೆಲ್ಲವುಗಳ ಬಹಂಶವು ಹೊರದೇಶಗಳಿಂದಲೇ ಬಂದಿವೆ—ಆದೂ ಇತ್ತೀಚಿಗೆ ಎಂದು ಗೋಚರವಾಗುವುದು. ಯಾವ ಶಾಖಾಹಾರಿ ಆಲೂಗಡ್ಡೆಯನ್ನು ಬಯಸುವುದಿಲ್ಲ? ಇದಾತನ ನಿತ್ಯಾಹಾರದಲ್ಲೊಂದು ಒಂದಾಗಿದೆ. ಆದರೆ ನಾಲ್ಕು ಶತಮಾನಗಳ ಹಿಂದೆ ನಮ್ಮ ದೇಶದ ಶಾಖಾಹಾರಿಗಳು ಇದನ್ನು ಕನಸಿನಲ್ಲೂ ಕಂಡಿರಲಾರರು. ನಮ್ಮಲ್ಲಿ ಶಾಖಹಾರಿಯಿರಲಿ ಮಾಂಸಾಹಾರಿಯಿರಲಿ ತಿನ್ನುವ ಪದಾರ್ಥಗಳಲ್ಲಿ ಮೆಣಸಿನ ಕಾಯಿ ಇಲ್ಲದಿದ್ದರೆ ಹೇಗೆತಾನೇ ಸುಮ್ಮನಿದ್ದಾನು? ಆದರೆ ಇದು ಲ್ಯಾಟಿನ್ ಅಮೆರಿಕೆಯಿಂದ ಬರೇ ಮೂರು—ನಾಲ್ಕು ಶತಮಾನಗಳ ಹಿಂದೆ ಬಂದುದೆಂದು ಎಷ್ಟು ಜನರಿಗೆ ಗೊತ್ತಿದೆ? ಮುಸುಕಿನ ಜೋಳ, ಓಟ್ಸ್ ಮೊದಲಾದುವುಗಳ ಕಥೆಯೂ ಇದೇ.

ಸಮುದ್ರಗಳನ್ನೂ ಪರ್ವತಗಳನ್ನೂ ಮರುಭೂಮಿಗಳನ್ನೂ ದಾಟಿ ವಲಸೆ ಬಂದ ವಿವಿಧ ಬುಡಕಟ್ಟಿನ ಜನರಂತೆ ಈ ಧಾನ್ಯಗಳೂ ಫಲಪುಷ್ಪಗಳೂ ನಾನಾ ತಡೆಗಳನ್ನು ದಾಟಿ ಹತ್ತಾರು ಸಾವಿರ ಮೈಲು ಯಾತ್ರೆ ಮಾಡಿ ಭಾರತಕ್ಕೆ ಬಂದಿವೆ. ಇತಿಹಾಸದ ಸಹಾಯದಿಂದ ಮತ್ತು ಉಳಿದು ಬಂದಿರುವ ಸಾಮಾಜಿಕ ಹಾಗೂ ಮತೀಯ ಸಂಪ್ರದಾಯಗಳ ಸಹಾಯದಿಂದ ವಿಶ್ವದ ಜನಾಂಗದಲ್ಲಿ ಅಡಗಿಕೊಂಡಿರುವ ವರ್ಣ ಮತ್ತು ವರ್ಗ ಭೇದಾಂಶಗಳು ತಿಳಿದು ಬರುತ್ತವೆ. ಆದರೆ ರಾಷ್ಟ್ರಗಳ ಬೆಳವಣಿಗೆಯಲ್ಲಿ ಹೊಸ ಹೊಸ ಸಸ್ಯಗಳು ವಹಿಸಿರುವ ಪಾತ್ರವನ್ನು ನಾವು ಅರ್ಥ ಮಾಡಿಕೊಳ್ಳಲಾರದಾಗಿದ್ದೇವೆ. ಕೆಲವು ವಿದ್ಯಾವಂತರು ಅತಿ ಹೆಚ್ಚೆಂದರೆ ಯಾವ ಫಲ ಪುಷ್ಪಗಳು ಹೊರ ದೇಶದಿಂದ ಬಂದುವೆಂಬುದನ್ನು ಅರಿತುಕೊಂಡಿರಬಹುದು. ಅಂತಹ ಫಲ ಪುಷ್ಪಗಳಿರುವ ವಿದೇಶೀ ಹೆಸರುಗಳೇ—ಅವು ನಮ್ಮ ದೇಶದವುಗಳಲ್ಲವೆಂಬುದಕ್ಕೆ ಸೂಚನೆ ನೀಡುತ್ತವೆ. ಆದರೆ ಚಳಿಗಾಲದಲ್ಲಿ ಸಾಮಾನ್ಯವಾಗಿ ಪ್ರತಿದಿನವೂ ಸೇವಿಸುವ ಒಂದು ತರಕಾರಿ ಕೇವಲ ೩೦೦ ವರ್ಷಗಳ ಕೆಳಗೆ ನಮ್ಮ ದೇಶಕ್ಕೆ ಮೊತ್ತಮೊದಲು ಪಾದಾರ್ಪಣ ಮಾಡಿತು ಎಂಬ ಅಂಶ ಅದನ್ನು ಸೇವಿಸುವವರಲ್ಲಿ ಹೆಚ್ಚಿನವರಿಗೆ ತಿಳಿದಿಲ್ಲ. ಎಲೆಕೋಸು ಯುರೋಪಿನಿಂದ ಹೇಗೆ ನಮ್ಮಲ್ಲಿಗೆ ಬಂದಿದೆ.

ಇನ್ನೊಂದು ವಸ್ತುವನ್ನು ನಾವು ಮರೆಯುವುದಿಲ್ಲ. ಹೊಗೆಸೊಪ್ಪು ನಮ್ಮ ದೇಶದ ಹಣದ ಬೆಳೆ. ಎಷ್ಟು ಕಡಿಮೆಯೆಂದರೂ ವರ್ಷಕ್ಕೆ ೧೮-೨೦ ಕೋಟಿ ರೂಪಾಯಿ ವರಮಾನ ತರುವ ವಸ್ತುವಿದು. ಈ ಕುಬೇರ ಸಸ್ಯವು ನಮ್ಮ ದೇಶದ ಮಣ್ಣು ಕಂಡದ್ದು ಕೇವಲ ೩೦೦ ವರ್ಷಗಳಿಗೆ ಮೊದಲು. ಇದನ್ನು ಪೋರ್ಚುಗೀಸರು ಇಲ್ಲಿಗೆ ತಂದರು. ಆಲೂಗೆಡ್ಡೆ, ನೆಲಗಡಲೆ, ಅನಾನಸು, ಪರಂಗಿ ಹಣ್ಣು, ಗೋಡಂಬಿ ಮೊದಲಾದುವು ಪೋರ್ಚುಗೀಸರು ನಮಗಿತ್ತ ಇತರ ಉಡುಗೊರೆಗಳು.

ಯಾವ ಯಾವ ಫಲಪುಷ್ಪಗಳು ಯಾವ ಯಾವ ಕಾಲದಲ್ಲಿ ಮತ್ತು ಹೇಗೆ ನಮ್ಮ ದೇಶಕ್ಕೆ ಬಂದುವೆಂಬುದು ವಿಚಾರಕ್ಕೆ ತಕ್ಕ ವಿಷಯ. ಮಾನವ ಜನಾಂಗಗಳಿಗಿರುವಂತೆ ಸಸ್ಯಗಳಿಗೂ ಕಾಲುಗಳು ಉಂಟು; ಅವು ಕೂಡಾ ಮಾನವರಂತೆ ಎಲ್ಲೆಂದರಲ್ಲಿಗೆ ಸಂಚರಿಸಬಲ್ಲುವು. ಅವೂ ನಾಗರಿಕತೆಯ ಸಂದೇಶವನ್ನು ಹೊತ್ತು ಅನೇಕ ಶತಮಾನಗಳಿಂದ ಸಂಚರಿಸುತ್ತಿವೆ. ಒಂದು ದೇಶದ ಹಿರಿತನವನ್ನು ಆ ದೇಶದ ಉದ್ಯಮಗಳಾಗಲಿ ಸಾಮಾಜಿಕ ನಿಯಮ ನಿಯಮಗಳಾಗಲೀ ತೋರಿಸಿಕೊಡುವುದಿಲ್ಲ. ತನ್ನ ವರಗಳನ್ನು ಹಂಚುವಲ್ಲಿ ನಿಸರ್ಗವು ಬಹಳ ಉದಾರಿಯಾಗಿದೆ; ಕಾರ್ಯಪಟುವೂ ಆಗಿದೆ.

ಕೃಷಿವಿಕಾಸದ ಈ ವಿಚಿತ್ರ ಇತಿಹಾಸದಿಂದ ಒಂದು ನೀತಿಯು ನಮಗೆ ಎದ್ದು ಕಾಣುತ್ತದೆ. ಮಾನವ ವಿಜ್ಞಾನದ ಅಧ್ಯಯನದಿಂದ ಇದು ತಿಳಿಯುತ್ತದೆ. ಮಾನವ ವರ್ಗ ಒಂದು. ಇಡಿಯ ಮಾನವ ವರ್ಗ ಒಂದೇ ಕುಟುಂಬಕ್ಕೆ ಸೇರಿದುದು. ಸಸ್ಯಗಳು ವಿವಿಧ ಕಾರಣಗಳಿಂದ ಹಂಚಿ ಹೋಗಿರುವಂತೆ ಮಾನವ ಕುಟುಂಬವೂ ವಿಶ್ವದ ನಾನಾ ಭಾಗಗಳಲ್ಲಿ ಹಂಚಿ ಹೋಗಿದೆ. ಆದರೆ, ಮೂಲತಃ ಎಲ್ಲಾ ವರ್ಗಗಳೂ ಒಂದೇ ಬುಡಕಟ್ಟಿಗೆ ಸೇರಿದವಾಗಿವೆ.

ಕ್ರೀಡಾಂಗಣ–ನಂದನವನ

(ಏಳನೇ ಪುಟದಿಂದ)

ಗಳಿಸಲ್ಲೀ ಇನ್ನೊಂದಿರ ಬಾರದು. ಅವರು ಬರೆದಿರುವ ಚಿತ್ರಗಳೆಲ್ಲಾ ಕಟ್ಟೂನ್‌ಗಳಂತಿದ್ದು ಅದರಲ್ಲಿ ಅಜ್ಞಾಗಿರುತ್ತವೆ.

ಈ ನಂದನವನವನ್ನು ಮೊದಲು ಹಾಲೆಂಡಿನ ರಾಟರ್‌ಡ್ಯಾಂನ ನಗರದಲ್ಲಿ ಮಾತ್ರ ತೆರೆಯಲಾಗಿತ್ತು. ಇದಕ್ಕೆ ಸಿಕ್ಕಿದ ಅತಿ ಹೆಚ್ಚಿನ ಪ್ರೋತ್ಸಾಹವನ್ನು ಕಂಡುಕೊಂಡ ಮೇಲೆ ಬೇರೆ ಆರು ಪ್ರಮುಖ ನಗರಗಳಲ್ಲಿ ತೆರೆಯಲಾಯಿತು, ಇವುಗಳನ್ನೂ ನಡೆಸಲು ಸರ್ಕಾರದ ಸಹಾಯವು ದೊರೆಯುತ್ತಿದೆ, ಅಲ್ಲದೆ, ಚಂದಾದ ಮೂಲಿಯಿಂದಲೂ ಹಣವನ್ನು ಸಂಗ್ರಹಿಸಲಾಗುವುದು. ಇಲ್ಲಿ ಒಂದು ಮಗುವಿಗೆ ಒಂದು ದಿನಕ್ಕೆ ಷಿಲ್ಲಿಂಗ್‌ನಂತೆ ವಸೂಲುಮಾಡಲಾಗುವುದು. ಆದರೆ, ಯಾವ ತಂದೆ ತಾಯಿಗಳೂ ಇದನ್ನು ಕೊಡಲು ಹಿಂತೆಗೆಯುವುದಿಲ್ಲ! ಆದರೆ, ನಮ್ಮ ದೇಶದಲ್ಲಿ?

ಘೋಷಣೆ—ಶೋಷಣೆ

ಏನಿದೀ ವಿಪ್ಲವಂ ದೈವಿಕವೊ ಕೃತಕವೊ
ಅರಿದಂ ಬಲ್ಲವರ್ ತಿಳಿಯೆ ನಾನು
ಎಲ್ಲೆಲ್ಲು ನೋಡಲಾಹಾರವಿಲ್ಲೆಂದೆಂಬ
ಕೂಗು ಕೇಳುತಿದೆ ಪರಿಹಾರವೇನು?

ಒಂದೆ ಸೊಲ್ಲೆಲ್ಲಿರದು ಕಳ್ಳ ಸಂತೆಯದೆಲ್ಲ-
ದಿಲ್ಲವಿನ್ನೇನು ಜೀವನಕೆ ಮಾರ್ಗಂ?
ಮಂತ್ರಿಗಳು ಘೋಷಿಸರು ಆಹಾರ ಕೊರತೆಯಿರ
ದೆಂದೊಡಂ ಬವಣಿಪುದು ದಲಿತ ವರ್ಗಂ.

ದಿನಕೊಂದು ಶಾಸನಂ ಕಷ್ಟದ ತಿ ಜೀವನಂ
ಇದರ್ಲ್ಲಿವಿಲ್ಲೆಂದಕ್ಕಿ ಪಡಿವಿತರಣಂ
ಬೆಲೆಯೇರಿಕೆಯ ತಡೆಯೆ ಗೃಹೀ ನಿಯಂತ್ರಣಂ
ಬರಗಾಲ ಬರಕಿತ್ತಿ ಆಮಂತ್ರಣಂ.

ಉರಿವ ಬಿಸಿಲೊಳು ಹಸುಗೆಗಾಗಿ ಹಸುಬೆಯ ಹಿಡಿದು
ನಿಂತಲ್ಲೆ ಬಿದ್ದ ಕತೆ ಕೇಳದವರಾರು?
ಮಂತ್ರಿಗಳು ಮಾಗವರೆಗಂ ತಿಂದು ತೇಗುತಿರೆ
ಕೇಳಿಸದು ಸಾಮಾನ್ಯ ಜನರ ದೂರು.

ಜನರ ಮತವಂ ಪಡೆದು ಪದವಿಗಳಿಸಿಹ ಮಂತ್ರಿ
ಗಳೇ ಪೇಟೆಯಾ ಹಳ್ಳಿಗಳಿಗೆ ಬನ್ನಿ!
ಆಹಾರಕಾಗಿ ಜನ ಪಡುವ ಕಷ್ಟವ ಕಂಡು
ದಹಿಸದೇತಕೆ ನಿಮ್ಮ ಜಠರವಹ್ನಿ?

ಜನತೆ ಕೇಳುತಿದೆ ಪ್ರಜಾಪ್ರಭುತ್ವದ ರಾಷ್ಟ್ರ
ವಿದುವೆ? ಎಂಬೀ ಪ್ರಶ್ನೆಗುತ್ತರ ವದೇನು?
ನುಡಿದಂತೆ ನಡೆಯುವುದೆ ಪರಿಹಾರ ವಿದಕೆಲ್ಲ
ಬರಿಯ ಘೋಷಣೆ ಶೋಷಣೆಗೆ ಹೇತು ತಾನು.

ಘೋಷಿಸುವುದೊಂದು ಮಾಳ್ಪುದು ಬೇರೆಯೇ ಒಂದು
ನುಡಿದಂತೆ ನಡೆಯದಧಿಕಾರಿ ವರ್ಗಂ
ಜನರ ಕಷ್ಟಗಳನ್ನು ಪರಿಹರಿಸಲುದ್ಯುಗಿಸೆ
ಭಾರತಂ ತಾನಹುದು ಭವ್ಯ ಸ್ವರ್ಗಂ

ಬರಿಯ ಘೋಷಣೆ ನಿಲ್ಲಲೀ ಮಂತ್ರಿ ಪಾಂಗಧರ
ಜನರ ಶೋಷಣೆ ಸಾಗದಿರಲಿ ಮಿಂತ!
ಘೋಷಣೆಯ ಬಯಸುತಿರೆ ಬನ್ನಬಡುತಿಹ ಜನತೆ
ಈ ತರದ ಶೋಷಣೆಗೆ ಇರದೆ ಅಂತ?

—ಎಸ್. ತಿರುಮಲೇಶ್ವರ ಭಟ್ಟ,
ಮಂಗಳೂರು.

ಶ್ರೀ ಪಿ. ಎಸ್. ಹೆಬ್ಬಾರ (ಸಿರಿಪತಿ) ಅವರ
ನವೀನ ಕೃತಿ ಇದೀಗ ಹೊರಬಂದಿದೆ
"ದಾರಿ ದೀಪ"
(ನೀತಿ ಕಥೆಗಳು)
(ಶ್ರೀ ಟಿ. ಎ. ಪೈಯವರ ಮುನ್ನುಡಿ)
ಬೆಲೆ: 1=50.
ನಿಮ್ಮ ಪ್ರತಿಗಾಗಿ ಉಡುಪಿಯ ಪುಸ್ತಕ ವ್ಯಾಪಾರಿಗಳಿಗೆ ಯಾ ನೇರವಾಗಿ
ಕೆಳ ವಿಳಾಸಕ್ಕೆ ಬರೆಯಿರಿ.
ಪಿ. ಎಸ್. ಹೆಬ್ಬಾರ, ದೀಪಾ ಪ್ರಕಾಶನ
ಹೆಬ್ಬಾರ್ಸ್ ಕಂಪೌಂಡು
ಕುಂಜಿಬೆಟ್ಟು, ಉಡುಪಿ, (ದ. ಕ.)

ವಿವಿಧ ಭಾರತಿರವರ

ಚಿತ್ರ ಪ್ರಪಂಚ

‘ಬೆರೆತ ಜೀವ’

ಹಾಲು-ಹಣ್ಣು ಇವು ಬೆರೆತಾಗ ಆ ರಸಮಿಲನದ ಸವಿಗೆ ಸಾಟಿಯಾದುದು ಮತ್ತೊಂದಿಲ್ಲ. ಅಂತಹ ಜೀವಗಳೆರಡರ ಮಿಲನವೂ ಆ ಹಾಲು—ಹಣ್ಣುಗಳಂತೆ ಸವಿಭರಿತ. ಆ ಸವಿಯನ್ನು ಕಾಣುವ ಮುನ್ನ ಆ ಜೀವಗಳೆರಡೂ ಬದುಕಿನ ಪರೀಕ್ಷಾ ಮೂಸೆಯಲ್ಲಿ ಪರಿಪಕ್ವಗೊಳ್ಳಲೇಬೇಕು; ಬದುಕಿನ ವಿವಿಧ ತಿರುವುಗಳಲ್ಲಿ, ಸುಳಿಗಳಲ್ಲಿ ಸುತ್ತಿ ಅನುಭವ ಪಡೆಯಬೇಕು, ಇದು ವಿಧಿ ನಿಯಮ.

ಮನುಷ್ಯ ಮನುಷ್ಯನಾಗಬೇಕಾದರೆ ನಿದ್ರೆ, ಹಸಿವು (ತೃಷೆ), ಕಾಮಗಳಷ್ಟೇ ಸಾಕಷಗಳಾದರೆ ಸಾಲದು. ಉದಾತ್ತ ಧ್ಯೇಯದ ಸಾಧನೆಯು ಗುರಿಯು ಅವನದಾಗಬೇಕು. ಅಂತಹ ಧ್ಯೇಯವಾದಿಯು ಬಾಳಿನಲ್ಲಿ ಕಾವು ಕೂಡಿಟ್ಟಂದರೆ ಗರಿಸಾದ ನೆಗದು ಪ್ರೇರಕ ಶಕ್ತಿಯಾಗಬಲ್ಲುದು; ಆದರೆ ಅದು ಹದಗೆಟ್ಟರೆ ಮಾರಕ ಶಕ್ತಿಯೇ ಆಗಬಲ್ಲುದು. ಅಂತಹ ಒಬ್ಬ ಧ್ಯೇಯವಾದಿ, ತಬ್ಬಲಿಯಾಗಿ ಬೆಳೆದು, ಸ್ವಪ್ರತಿಭೆಯಿಂದ ಸುಪ್ರಸಿದ್ಧ ವೈದ್ಯನೆನಿಸಿದ ಯುವಕ. ಭಯಂಕರವಾದ ಕ್ಯಾನ್ಸರ್ ರೋಗದ ನಿವಾರಣೆಗೆ ತನ್ನ ಜೀವನವನ್ನೇ ಮುಡುಪಿಟ್ಟು ಸಂಶೋಧನೆಯಲ್ಲಿ ತೊಡಗಿದ್ದ ಉದಾತ್ತಜೀವಿ.

ಆ ಧ್ಯೇಯವಾದಿಯ ಬಾಳಿಗೆ ಬೆಳಕು ನೀಡಲೆತ್ನಿಸಿದ ಇನ್ನೊಂದು ಜೀವ. ಅವನ ಸಂಶೋಧನೆ—ಗುಣಗಳ ಬಗ್ಗೆ ಅಕ್ಕರೆ ತಾಳಿ, ಶ್ರದ್ಧಾಶಕ್ತಿಗಳ ಪ್ರತಿಬಿಂಬವಾಗಿ ಅವನ ನೆರಳಾಗಿ, ಅವನ ಮಡದಿಯಾಗಿ, ಕಾವ್ಯದ ತಾಪದಲ್ಲಿ ಆತ ದಾರಿತಪ್ಪಿದಾಗ ಎಚ್ಚರಿಸಿ, ಕ್ಷಯರೋಗಕ್ಕೀಡಾದ ತನಗಾಗಿ ಆತ ತನ್ನ ಗುರಿ ಮರೆತಾಗ ಅವನಿಂದ ದೂರ ನಡೆದು, ಅವನು ಕಣ್ಣು ಕಳೆದುಕೊಂಡಾಗ ಅವನ ಸೇವೆ ಸಲ್ಲಿಸಿದ ತ್ಯಾಗಜೀವಿ ನರ್ಸಳಾದ ಯುವತಿ.

ಈ ಎರಡು ಬೆರೆತ ಜೀವಿಗಳ ಕಥೆಯೇ ವಿವಿಧಭಾರತಿ ಅವರು ಕನ್ನಡಿಗರ ಮಡಿಲಿಗಿರುವ “ಬೆರೆತಜೀವ” ಕನ್ನಡ ಚಿತ್ರ.

ಕನ್ನಡದಲ್ಲಿ ಉತ್ತಮ ಹೃದಯಸ್ಪರ್ಶಿ ಕಥಾಚಿತ್ರಗಳನ್ನು ನಿರ್ಮಿಸುವ ಹೆಬ್ಬಯಕೆಯಿಂದ ವಿವಿಧ ಭಾರತಿ ಸಂಸ್ಥೆಯವರು ತಯಾರಿಸುವ ಜೊಚ್ಚಲ ಕೃತಿ ಈ “ಬೆರೆತಜೀವ” ಫೆಬ್ರುವರಿ ಹದಿನಂದು ತೆರೆ ಕಾಣಲಿದೆ.

ಹೃದಯಸ್ಪರ್ಶಿಯಾದ ಜೀವನದ ಸಹಜ ಘಟನೆಗಳ ಚಿತ್ರಣವಾದ “ಬೆರೆತಜೀವ” ಕನ್ನಡದಲ್ಲಿ ಒಂದು ವಿಶಿಷ್ಟತಮ ಚಿತ್ರವೆನಿಸಬಲ್ಲುದು ಎಂದಲ್ಲಿ ಅತಿಶಯವೇನಿಲ್ಲ. ಉದಾತ್ತ ಧ್ಯೇಯವಾದಿ ವೈದ್ಯನ ಪಾತ್ರದಲ್ಲಿ ಕನ್ನಡದ ‘ಕಲಾರತ್ನ’ ಕಲ್ಯಾಣ್‌ಕುಮಾರ್ ಮತ್ತು ಅವನ ಗುರಿಸಾಧನೆಯ ಪ್ರೇರಕ ಶಕ್ತಿಯಾದ ನರ್ಸಳ ಪಾತ್ರದಲ್ಲಿ ಕನ್ನಡದ ‘ಅಭಿನಯ ಸರಸ್ವತಿ’ ಬಿ. ಸರೋಜಾದೇವಿ ಇವರ ಅಭಿನಯ ಶ್ರೇಷ್ಠತೆಗೆ “ಬೆರೆತಜೀವ” ಒಂದು ದಾಖಲೆಯಾಗಲಿದೆ ಎಂಬುದನ್ನು ಚಿತ್ರದ ರಶಸ್ ವೀಕ್ಷಕರೆಲ್ಲರ ಒಕ್ಕೊರಲಿನ ಅಭಿಪ್ರಾಯ.

ಕೆ. ಎಸ್ ಅಶ್ವಥ್, ರಾಮಚಂದ್ರ ಶಾಸ್ತ್ರಿ, ರಾಘವೇಂದ್ರರಾವ್, ಬಾಲಕೃಷ್ಣ, ನರಸಿಂಹರಾಜು, ಜಿ. ವಿ. ಶಿವರಾಜ್, ಎಸ್. ಶಿವರಾಂ, ಲಕ್ಷ್ಮೀದೇವಿ, ಜಯಂತಿ, ಜಯಶ್ರೀ, ಜಯಾ, ಮುಂತಾದವರೂ ತಾರಾಗಣದ ಪ್ರಮುಖರಾಗಿದ್ದು ಚಿತ್ರದ ಅಭಿನಯ ಕೌಶಲ್ಯದ ಮೌಲ್ಯಗಳನ್ನು ಹೆಚ್ಚಿಸಿದ್ದಾರೆ.

ಕನ್ನಡದ ಪ್ರತಿಭಾವಂತ ಚಿತ್ರಬ್ರಹ್ಮರೆನಿಸಿದ ಕು. ರ. ಸೀತಾರಾಮ ಶಾಸ್ತ್ರಿ ಅವರು ಈ ಹೃದಯಸ್ಪರ್ಶಿ ಕಥೆಗೆ ಒಪ್ಪವಾದ ಸಂಭಾಷಣೆ ಹಾಗೂ ಗೀತೆಗಳನ್ನು ಒದಗಿಸಿದ್ದಾರೆ ಸರಳ—ಸುಂದರ ಸಾಹಿತ್ಯರಚನೆಗೆ ಅವರ ಹೆಸರು ಎಂದೂ ಮುಂದೆ. ಜೊತೆಗೆ ನಿರ್ದೇಶನದ ಹೊಣೆಯನ್ನು ಅವರೇ ಹೊತ್ತು ಚಿತ್ರಕತೆಗೆ ಯೋಗ್ಯವಾದ ದಿಗ್ದರ್ಶನ ನೀಡಿ ಕಥೆಯನ್ನು ಮನಮುಟ್ಟುವಂತೆ ಚಿತ್ರಿಸಿ ಕೊಟ್ಟಿದ್ದಾರೆ. ೧೯೬೪ರ ಸಾಲಿನ ಕನ್ನಡ ಚಿತ್ರ ರಂಗದ ಶ್ರೇಷ್ಠ ಸಂಗೀತ ನಿರ್ದೇಶಕರಾಗಿ ಕನ್ನಡಚಿತ್ರ ಪ್ರೇಮಿಗಳಿಂದ ಪುರಸ್ಕಾರ

ಸಲ್ಪಟ್ಟ ‘ಸಂತ ತುಕಾರಾಂ’, ‘ಮಾನವೆಚ್ಚಿದ ಮಡದಿ’ ಮುಂತಾದ ಚಿತ್ರಗಳ ಖ್ಯಾತಿಯ ಸಂಗೀತ ಬ್ರಹ್ಮ ವಿಜಯ ಭಾಸ್ಕರ್ ಅವರ ಸಂಗೀತ ನಿರ್ದೇಶನದ—‘ಬೆರೆತ ಜೀವ’ದ ಸಂಗೀತ ಶ್ರೀಮಂತಿಕೆಯ ಮೌಲ್ಯ ಅಧಿಕವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಕ್ಯಾಮರಾ: ಜಾನಕೀರಾಮ್, ಕಲೆ: ಸಿ. ಹೆಚ್. ಇ. ಪ್ರಸಾದ್ ರಾವ್, ಸ್ಟುಡಿಯೋ: ಫಿಲಂ ಸೆಂಟರ್.

ವಿವಿಧ ಭಾರತೀಯವರ ಕನ್ನಡದ ನೈವಿಧ್ಯವೆಲ್ಲವನ್ನೂ ಬೆರಸಿ ನೀಡಲಿರುವ “ಬೆರತ ಜೀವ” ಕನ್ನಡದ ಕಲಾವಿದರೆಲ್ಲರೂ ಬೆರತು ದುಡಿದು ಸೃಜಿಸಿದ ‘ಕನ್ನಡದ ಜೀವ ಮಿಡಿತದ’ ಎಂಬಲ್ಲಿ ಒಂದೇ ಮಾತಿನಲ್ಲಿ ಎಲ್ಲವನ್ನೂ ಹೇಳಿದಂತಾಗುವುದು.

ಕನ್ನಡ ಚಿತ್ರಗಳ ಪ್ರಮುಖ ಹಂಚಿಕೆದ ದರಾದ ಕನ್ನಡ ನಾಡಿನ ಪ್ರಮುಖ ಸಂಸ್ಥೆ ಕರ್ನಾಟಕ ಫಿಲಂಸ್ ಅವರ ಹಂಚಿಕೆಯಲ್ಲಿ ಇದೇ ೧೯ರಂದು ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲಿ ಪ್ರದರ್ಶನವಾಗುತ್ತಲಿದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 675/64.

ವಾದಿ: ಶಂಕರ ಸೇರಿಗಾರ, ಬಿಜೂರು ಬಾಲಯ್ಯ ಸೇರಿಗಾರನ ಮಗ, ಮಯ್ಯಾಡಿ, P. O. ಬೈಂದೂರು.

ಪ್ರತಿವಾದಿರು: 1. ಲಿಂಗು, ಶೇಡಕಳಿ ಮಂಜಯ್ಯ ಕೋಟಾರಿ ಅಳಿಯ. 2. ದಾರು, 1ನೇ ಪ್ರತಿವಾದಿಯ ಅಳಿಯ.

ಕುಂದಾಪುರ ತಾಲೂಕು ನಂ. ೮ನೇ ಶಗ್ಗೆರ ಗ್ರಾಮದ ಶೇಡಕುಳಿಯಲ್ಲಿರುವವರು.

ಮೇಲ್ಕಂಡ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ:

ನೀವು ತಾ. 5-8-1962ರಲ್ಲಿ ವಾದಿಗೆ ರೂ. 210-00ಕ್ಕೆ ಬರಕೊಟ್ಟ ದಿಮಾಂಡು ನೋಟಿನ ಅಸಲು ಬಡ್ಡಿ ಬಾಕಿ ಹಣಗಳ ಬಗ್ಗೆ ವಾದಿಯು ನಿಮ್ಮ ಮೇಲೆ ಮೇಲ್ಕಂಡ ದಾವಾ ಮಾಡಿರುತ್ತಾನೆ. ಸದ್ರಿ ದಾವೆಯನ್ನು ತನಿಖೆ ಬಗ್ಗೆ ತಾ. 22-2-1965ಕ್ಕೆ ಇಟ್ಟಿರುತ್ತಾರೆ. ನೀವು ಸದ್ರಿ ದಾವೆಯಲ್ಲಿ ಆಕ್ಷೇಪಣೆಗಳನ್ನೇನಾದರೂ ಹೇಳುವುದಿದ್ದರೆ ಆ ದಿವಸ ಹಗಲು 11 ಗಂಟೆಗೆ ಕೋರ್ಟಿನ ಮುಂದೆ ಹಾಜರಿದ್ದು ಕೋರ್ಟಿನವರು ಕರೆದಾಗ ಹೇಳಿಕೊಳ್ಳತಕ್ಕದ್ದು. ಇಲ್ಲವಾದರೆ ದಾವೆಯು ನಿಮ್ಮ ಗೈರುಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲ್ಪಡುವುದು ತಿಳಿದಿರಲಿ.

(By order of the Court)

(Sd) A. S. N. HEBBAR,

Advocate for plaintiff.

ಕುಂದಾಪುರ, ತಾ 3-2-1965.

ಅಣು ಬಾಂಬಡ ಬಾರಿಸುವ ಅಗತ್ಯವಿಲ್ಲ

(ಆರನೇ ಪುಟದಿಂದ)

ಕ್ಕೆಗಳು ಮೇಲೇರಿದುವೆಂದರೆ ಸರಿ, ಮುಗಿಯಿತು ಕಥೆ, ಮತ್ತೆ ಅಧ್ಯಾಯ ಸಂಕ್ರಾಂತಿಯಿಂದಲೂ ಆದೇನನ್ನೂ ಮಾಡಲೂ ಸಾಧ್ಯವಾಗುವದಿಲ್ಲ.

ಬಾಹ್ಯ ಬಿಸಿ ಸಾಲದುದಕ್ಕೆಂಬಂತೆ ಒಳಗೂ ಬಿಸಿ ಅಧಿಕವಾಗುತ್ತಿದೆ. ಭಾಷಾ ಬಡಬಾಗ್ನಿ ಭಗ್ಗನೆ ಬಾನೆತ್ತರಕ್ಕೆ ಭುಗಿಲೆದ್ದಿರುತ್ತದೆ. ದೀಪ ನಂದಿ ಹೋಗುವ ಮುಂಚೆ ಒಮ್ಮೆ ಕೊನೆಯದಾಗಿ ಪ್ರಜ್ವಲಿಸುವಂತೆ ಭಾಷಾ ಬಡಿದಾಟವೂ ಆ ಸ್ವರೂಪವನ್ನೀಗ ತಾಳಿರಬಹುದು. ಆ ಬಡಬಾಗ್ನಿಯನ್ನು ಕಂಡು ಬಹದೂರಜೀಯವರು ಬೆದರಿದರೆಂದು ಕಾಣುತ್ತದೆ. ದಿನಕ್ಕೊಂದು ವಿಧದ ಹೇಳಿಕೆಗಳನ್ನು ಅವರು ಪತ್ರಿಕೆಗಳಿಗೆ ಇತ್ತರು. ಹಿಂದಿಯನ್ನು ಹಿಂದಕ್ಕೆ ತರುವದಿಲ್ಲವೆಂದೂ, ವೇಗವನ್ನು ಕಡಿಮೆಗೊಳಿಸುವದಾಗಿ ಹೇಳಿದರು. ಪ್ರಾಂತ್ಯಗಳ ಮುಖ್ಯಮಂತ್ರಿಯವರ ಸಲಹೆಯಂತೆ ಅದನ್ನು ವ್ಯವಹಾರಿಕ ಭಾಷೆಯನ್ನಾಗಿ ಬಳಕೆಗೆ ತರಲಾಗುವದೆಂದರು. ಮದರಾಸಿನ ಮುಖ್ಯಮಂತ್ರಿ ಶ್ರೀ ಭಕ್ತವತ್ಸಲಂ ಆ ಕುರಿತೂ ಆದೇನನ್ನೂ ಹೇಳಲಿಲ್ಲ. ಒಡನೆ, ಪ್ರಧಾನಿಯವರು ಮಾತುಕೊಟ್ಟಿಲ್ಲವೆಂದು ಮದ್ರಾಸಿನ ಮಾಜಿ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಪತ್ರಿಕೆಗಳವರಿಗೆ ಹೇಳಿದರು. ಪತ್ರಿಕೆಗಳು ಅದನ್ನೂ ಪ್ರಕಟಿಸಿದುವು. ಅದಕ್ಕೂ ‘ಹೌದು’ ‘ಅಲ್ಲ’ವೆಂದು ಯಾರೂ ಹೇಳಲಿಲ್ಲ. ಪ್ರಧಾನಿಯವರು ತಿರುವನಂತಪುರಕ್ಕೆ ಬಂದಿದ್ದಾಗ ಅಲ್ಲಿಯ ನ್ಯಾಯವಾದಿಗಳು ಅವರನ್ನು ಭೇಟಿ ಮಾಡಿದಾಗ ಹಿಂದಿಯನ್ನು ಮೂವತ್ತು ವರ್ಷದ ವರೆಗೆ ಬಳಕೆಗೆ ತರುವದಿಲ್ಲವೆಂದು ಹೇಳಿದರೆಂಬುದಾಗಿ ನ್ಯಾಯವಾದಿಗಳ ಸಂಘ ಹೇಳಿತು. ಆ ರೀತಿ ನಾನೇನೂ ಹೇಳಿಲ್ಲವೆಂದು ಪ್ರಧಾನಿಯವರು ನಂತರ ಹೇಳಿದರು. ಈ ರೀತಿ ನಮ್ಮನ್ನು ನಾವೇ ಸುಳ್ಳುಗಾರರೆಂದು ಕರೆದುಕೊಳ್ಳುತ್ತಿದ್ದೇವೆ!

ಇಂತಹ ಬೀಕರ ಹಾಗೂ ವಿಷಾದನೀಯ ಪರಿಸ್ಥಿತಿಯಲ್ಲಿ ನಾವು ಪ್ರಪಂಚದ ಇತರ ರಾಷ್ಟ್ರಗಳ ಬಳಿ ನಿಶ್ಯಸ್ತ್ರೀಕರಣದ ಮಾತೆತ್ತಿದರೆ ನಮ್ಮನ್ನಾರು ನಂಬುವರು? ನಮ್ಮ ನುಡಿಗೆ ಅದ್ಯಾರು ಕಿವಿಗೊಡುವರು? ಪ್ರಬಲ ರಾಷ್ಟ್ರಗಳೇ ಅಣ್ವಸ್ತ್ರ ವಿರೋಧ ಮಾತುಗಳನ್ನಾಡುತ್ತ ಆ ಪಥದಲ್ಲಿ ಮುನ್ನಡೆಯುತ್ತಿರುವಾಗ ನಾವು ಗಾಂಧೀಯ ಹಿಂದಕ್ಕೆ ನಿಂತ ಕೊಂಡು ನಮ್ಮೊಂದಿಗೆ ಸೇರಲು ಅವರನ್ನು ಕರೆದಲ್ಲಿ ಅವರು ಬಂದಾರೇ? ಈಗ ಉಳಿದಿರುವ ಏಕ ಮೇವ ಮಾರ್ಗ ಅಣ್ವಸ್ತ್ರಗಳ ಪ್ರತಿಕ್ರಿಯೆಯನ್ನು ಹಾಗೂ ಪರಿಣಾಮವನ್ನು ತಡೆಯುವ ತಟಸ್ಥಾಸ್ತ್ರಗಳನ್ನು ಕಂಡುಹಿಡಿಯುವದೇ ಇದೆ. ಅದನ್ನು ಬಿಟ್ಟು ಕೋಗಿಲೆ ಸ್ವರದಲ್ಲೇ ಆಗಲಿ ನಾವು ಪರಪುಟ್ಟರೆಂದು ಹೇಳಿದಲ್ಲಿ ಅದ್ಯಾವನೂ ಸಕಾಲದಲ್ಲಿ ನಮ್ಮನ್ನು ರಕ್ಷಿಸಲಾರನು. ನಮ್ಮ ಕಾಲಿನ ಮೇಲೆಯೇ ನಾವು ನಿಂತುಕೊಳ್ಳಬೇಕಾಗಿರುತ್ತದೆ. ನಾವು ಒಂದು ರಾಷ್ಟ್ರಕ್ಕೆ ಸೇರಿದವರೆಂಬುದು ಇಲ್ಲಿ ಬಲು ಮುಖ್ಯ.

ಚೈನಿ ಕಮ್ಯೂನಿಸ್ಟರಾದರೋ ಗಡಿಗಳಲ್ಲಿ ಬಹಳ ಮುಂಜಾಗ್ರತೆಯಲ್ಲಿದ್ದು ಪಚ್ಚೆ ಗುರುತಿಗಾಗಿ ಕಾದುಕೊಂಡಿದ್ದಾರೆ. ಇಲ್ಲಿಯ ಕಮ್ಯೂನಿಸ್ಟರನ್ನು ಬಂಧಿಸಿರುವದರಿಂದ ಸದ್ಯ ಆಕ್ರಮಣದ ಯೋಚನೆಯನ್ನು ಅವರು ತಡೆಹಿಡಿದಿರಬಹುದು. ಆದರ ಬದಲು ಇತರೆಡೆಗಳಲ್ಲಿ ಅವರು ಆಕ್ರಮಿಸುತ್ತಾರೆ. ಉತ್ತರದಲ್ಲಿ ಭೂತಾನದಲ್ಲಿ ಭೂತ ಚೇಷ್ಟೆಗೆ ಆರಂಭಿಸಿದಲ್ಲಿ, ದಕ್ಷಿಣದಲ್ಲಿ ಸಿಂಹಳದಲ್ಲಿ ನಿಡಿಮಿಡಿಗಾರಂಭಿಸಿದ್ದಾರೆ. ಅಲ್ಲಿ ಅದನ್ನು ತಡೆಯಲಿಕ್ಕಾಗಿ ಅವರನ್ನು ‘ಬಸ್ತು’ ಮಾಡಲಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ನಮಗೆ ಬೇಕಾಗಿರುವದು ಮಾತಿನ ಬಂಬಡಾಸ್ತ್ರವೇನು? ಸದ್ಯ ನಮ್ಮ ಬಳಿ ಇರುವದು ಅದೇ ಒಂದೆರಡು ಕಾಣುತ್ತದೆ. ದೇಶದ ಅಭಿವೃದ್ಧಿಗಾಗಿ ಕಾಗದದ ಯೋಜನೆಗಳು, ದೇಶದ ರಕ್ಷಣೆಗಾಗಿ ಮಾತಿನ ಬಂಬಡಾಸ್ತ್ರ! ಸಾರ್ಥಕವಾಯಿತು, ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಸರ್ವಸ್ವ ಅರ್ಪಣೆಗೈದಿರುವವರ ಬಲಿದಾನ!!

ಸರೋಜಿನೀ ನಾಯ್ಡು

(೨ನೇ ಪುಟದಿಂದ)

ಒಡೆದರು. ವೀರಾದೇವಿಯು ಸ್ವಾಮಿ ಕೃಷ್ಣನ ಪಾದಗಳಲ್ಲಿ ಜೀವಿತವನ್ನು ಅರ್ಪಿಸಿದಂತೆ ಅವರೂ ಮಾತೃಭೂಮಿಯ ಸೇವೆಗೆ ತನ್ನ ಜೀವಿತವನ್ನು ಅರ್ಪಿಸಿದರು. ಮದುವೆಯಾದನಂತರ ತಾನೇ ಹೇಳಿಕೊಳ್ಳುವಂತೆ ಅವರಿಗೆ ಜೀವನದಲ್ಲಿ ಅತ್ಯಂತ ಸುಖಮಯವಾದ ಕಾಲವು ಬಂದಿತ್ತು. ಅವರು ತನ್ನ ಮನೆಯನ್ನು ಆನಂದ ಸಾರದ ನಿಲಯವೆಂದು ಹೇಳುತ್ತಿದ್ದರು. ನಾಯ್ಡುರವರಿಗೆ ನಾಲ್ಕು ಮಕ್ಕಳು. ಇಬ್ಬರು ಹುಡುಗರು, ಇಬ್ಬರು ಹುಡುಗಿಯರು. ಅವರಲ್ಲೊಬ್ಬರು ಪಶ್ಚಿಮ ಬಂಗಾಳದ ಗವರ್ನರರಾದ ಶ್ರೀಮತಿ ಪದ್ಮಜಾ ನಾಯ್ಡು. ರವರು "ಗೋಲ್ಡನ್ ತ್ರೆಷ್‌ಹೋಲ್ಡ್" "ದಿ ಬರ್ಡ್ ಆಫ್ ಟೈಮ್" ಮತ್ತು "ಬ್ರೋಕನ್ ವಿಂಗ್" ಎಂಬೀ ಮೂರು ಪದ್ಯ ಪುಸ್ತಕಗಳನ್ನು ಅವರು ಬರೆದಿದ್ದಾರೆ. ಇವುಗಳಲ್ಲಿ ಮೊದಲನೆಯದ್ದರ ಮುನ್ನುಡಿಯಲ್ಲಿ ಮಾಡಿದ ಈ ತರುಣ ಕವಯಿತ್ರಿಯ ಪ್ರಶಸ್ತವಾದ ವ್ಯಕ್ತಿ ಚಿತ್ರಣದಲ್ಲಿ ಆರ್ಥರ್ ಸೈಮನ್ಸರು ಯಾವಾಗಲೂ ಸೌಂದರ್ಯವನ್ನೇ ಶೋಧಿಸುವಂತಿರುವ ಅವರ ಅಗಾಧ ಮತ್ತು ಭಾವಸೂಚಕ ದೃಷ್ಟಿಗಳನ್ನೂ, ಪ್ರಶಾಂತ ಮಧುರ ಸಂಗೀತದಂತಿರುವ ಅವರ ಆಹ್ಲಾದಕರವಾದ ಧ್ವನಿಯನ್ನೂ, ಉದಾರ ಮತ್ತು ಶಾಂತವಾದ ಅವರ ಮನಸ್ಸನ್ನೂ ಅವರ ತೀಕ್ಷ್ಣವಾದ ವಿನೋದದ ಸಂಜ್ಞಾನವನ್ನೂ ವಿವರಿಸಿದ್ದಾರೆ. ಮರೆಯಲಾರದ ಭಾರತದ ದೃಶ್ಯಗಳನ್ನು ತೋರಿಸುವ ಅವರ ಪದ್ಯಗಳಲ್ಲಿರುವ ವ್ಯಕ್ತವಾದ ಚಿತ್ರಗಳು 'ಬೆಲ್ಸ್' ಎಂಬ ಸಣ್ಣ ಪದ್ಯದಲ್ಲಿ ಕಂಡು ಬರುವಂತೆ ದೇಶದ ಆತ್ಮಸ್ವರೂಪವನ್ನೇ ರೂಪಿಸುವವುಗಳಾಗಿ, ಆ ಪದ್ಯಗಳ ತಾಳಲಯಗಳಂತೆಯೇ ಮನೋಹರವಾಗಿವೆ. 'ಬೇಂಗಲ್ ಸೆಲ್ಲರ್ಸ್', 'ಕೋರೋಮಂಡಲ್ ಫಿಶ್ಶರ್ಸ್', 'ದಿ ಪೇಲೆಂಕ್ವಿನ್ ಬೇರರ್ಸ್' 'ಗ್ಲೇಡನ್ಸ್', 'ದಿ ಡೇನ್ಸ್ ಆಫ್ ಲವ್' ಇವೆಲ್ಲಕ್ಕಿಂತಲೂ ಹೆಚ್ಚಾಗಿ ಅವರ ಸ್ತುತಿ ರೂಪವಾದ 'ಟು ಎ ಬುದ್ಧ ಸೀಟೆಡ್ ಆನ್ ಎ ಲೋಟಸ್' ಇವೇ ಮೊದಲಾದ ಅವರ ಇತರ ಸ್ಮರಣೀಯವಾದ ಪದ್ಯಗಳು ಅವರು ಎಂತಹ ಮಧುರ ಕವಯಿತ್ರಿ ಎಂಬುದನ್ನು ತೋರಿಸುತ್ತವೆ.

ಅವರು ಯಾವಾಗಲೂ ಜೀವನದಲ್ಲಿ ವಿನೋದಾಂಶಗಳನ್ನು ನೋಡುವುದರಲ್ಲಿ ಚುರುಕಾಗಿದ್ದರು. ಮತ್ತು ಕಷ್ಟವಿದ್ದರೆ ಅವುಗಳಿಂದ ನಗಾಡುತ್ತಿದ್ದರು. ಅವರು ಒಂದು ಸಮ್ಮೇಳನದ ಅಥವಾ ಕಮಿಟಿಯ ಸ್ಥಾನದಲ್ಲಿ, ಮಿತ್ರಮಂಡಲಿಯಲ್ಲಿ ಅಥವಾ ಜೈಲಿನಲ್ಲೇ ಆಗಲಿ ಎಲ್ಲಿದ್ದರೂ, ಉಕ್ಕಿ ಬರುವ ವಿನೋದದ ಬುಗ್ಗೆಯಾಗಿದ್ದರು. "ಜೀವನವು ಅಥವಾ ಒಂದು ವೇಳೆ ನನ್ನ ಮನೋಭಾವವು ನನಗೆ ಕೊಟ್ಟಿರುವ ಎಲ್ಲಾ ವಿಷಯಗಳಲ್ಲಿ ನಗಾಡುವ ಭಾಗ್ಯವನ್ನು ನಾನು ಅಮೂಲ್ಯವಾದುದನ್ನಾಗಿ ಭಾವಿಸುತ್ತೇನೆ" ಎಂದು ಅವರು ಹೇಳುತ್ತಾರೆ. ಮಹಾತ್ಮಾ ಗಾಂಧಿಯವರು ಚಿಯಾಂಗ್ ಕೈಶೇಕರನ್ನು ಭೇಟಿಯಾದಾಗ ಅವರ ಸಮಾಗಮವನ್ನು ಮಿಕ್ಕಿ ಎಂಬ ಚಿಕ್ಕಿಲಿಯೂ ಡೊನಾಲ್ಡ್ ಎಂಬ ಬಾತೂ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವಂತೆ ಎಂದು ಹೋಲಿಸಿದರು.

೧೯೧೪—೧೮ರಲ್ಲಿ ದೇಶದೊಳಗೆ ಎಲ್ಲೆಲ್ಲಿಯೂ ಸ್ವಾತಂತ್ರ್ಯದ ಹೋರಾಟವಾದಾಗ, ಅವರು ಸ್ವರಾಜ್ಯದ ಧ್ವಜದಡಿಯಲ್ಲಿ ಹೃತ್ಪೂರ್ವಕ ಸೇವೆ ಮಾಡಲು ಪದ್ಯಗಳ ಹರ್ಷಾವೇಶವನ್ನು ಬಿಟ್ಟು ಬಿಟ್ಟರು. ಈ ಮೊದಲು ಡಾ॥ ರಾಜೇಂದ್ರಪ್ರಸಾದರು ಪಾರ್ಲಿಮೆಂಟಿನ ಕೇಂದ್ರ ಭವನದಲ್ಲಿ ಅವರ ಭಾವಚಿತ್ರವನ್ನು ಅನಾವರಣ ಮಾಡುತ್ತಾ ೧೯೦೬ರಲ್ಲಿ ಕಲ್ಕತ್ತಾ ನಗರದಲ್ಲಿ ತಾನು ಕೇಳಿದ ಅವರ ಭಾಷಣವು ತನ್ನ ಮನಸ್ಸಿನಲ್ಲಿ ಎಂದೂ ಮಾಡಿದ ಪ್ರಭಾವವನ್ನು ಬೀರಿದೆಯೆಂದು ಹೇಳಿದರು. ಡಾ॥ ನೆಹರು ಕೂಡ ಆ ಸಂದರ್ಭದಲ್ಲಿ ಅವರ ಭಾಷಣವನ್ನು ಮೊದಲಾಗಿ ಕೇಳಿದಾಗ ತಾನು ತಕ್ಷಣನಾಗಿ ಹೋದೆನು ಮತ್ತು ಅದು ತನ್ನ ಮನಸ್ಸಿನಲ್ಲಿ ಚಿರಕಾಲ ನಿಲ್ಲುವ ಅಗಾಧವಾದ ಪ್ರಭಾವವನ್ನು ಬೀರಿದ ಕೆಲವೇ ಭಾಷಣಗಳಲ್ಲಿ ಒಂದಾಗಿತ್ತು ಎಂದು ಹೇಳಿದರು. ದೇಶದಲ್ಲೆಲ್ಲಾ ಸ್ವಾತಂತ್ರ್ಯದ ಹೋರಾಟ ನಡೆದಾಗ, ಶ್ರೋತೃವೃಂದವು ಅವರ ಭಾಷಣವನ್ನು ಮಂತ್ರಮುಗ್ಧವಾಗಿ ಕೇಳುತ್ತಿತ್ತು. ಅವರು ಮಹಾತ್ಮಾ ಗಾಂಧಿಯವರ ಪಕ್ಷದಲ್ಲಿ ಹೋರಾಡುತ್ತಾ ಎಲ್ಲಾ ಅಸಹಕಾರ ಆಂದೋಲನಗಳಲ್ಲಿ ಮತ್ತು ಸತ್ಯಾಗ್ರಹ ಚಳವಳಗಳಲ್ಲಿ ಭಾಗವಹಿಸಿ ಅನೇಕ ಸಲ ಜೈಲಿಗೆ ಹೋದರು. ೧೯೧೯ರ ಜಲಿಯನ್ ವಾಲಾ ಬಾಗಿನ ಗೋಳೀಬಾರಿನ ನಂತರ ಹೃದಯದ ತೊಂದರೆಯಿದ್ದುದರಿಂದ ಬೇಗನೆ ಅವರಿಗೆ ಹವಾ ಬದಲಾವಣೆಗಾಗಿ ಇಂಗ್ಲೆಂಡಿಗೆ ಹೋಗಬೇಕಾಯಿತು. ಹಾಗಿದ್ದರೂ ಅವರು ಜನರಲ್ ಡಯ್ಯರಿನ ಅಪರಾಧದ ಮಹತ್ವವನ್ನು ಪರಿಣಾಮಕಾರಿಯಾಗಿ ಹೊರಗೆಡಹುವ ಸುಸಂದರ್ಭವನ್ನು ಕಳೆದುಕೊಳ್ಳಲಿಲ್ಲ. ೧೯೨೪ರಲ್ಲಿ ಅವರು ಪೂರ್ವ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ಅಲ್ಲಿರುವ ಸ್ವದೇಶೀಯರ ಅವಸ್ಥೆಯನ್ನು ಪರಿಚಯ ಮಾಡಿಕೊಂಡು, ಸಾಧ್ಯವಾದರೆ ಅದನ್ನು ಶಮನಗೊಳಿಸಬೇಕೆಂದು ಅಲ್ಲಿ ಸಂಚರಿಸಿದರು. ೧೯೨೫ರಲ್ಲಿ ಕಾನ್ಪುರದಲ್ಲಿ ನಡೆದ ಕಾಂಗ್ರೆಸ್ಸಿಗೆ ಅವರು ಮೊದಲನೆಯ ಹಿಂದೂ ಮಹಿಳೆಯಾದ ಅಧ್ಯಕ್ಷೆಯಾದರು. "ಕಾಂಗ್ರೆಸ್ಸಿನ ಚರಿತ್ರೆ" ಎಂಬ ಪುಸ್ತಕದಲ್ಲಿ ಶ್ರೀ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಇಷ್ಟರವರೆಗಿನ ಭಾಷಣಗಳಿಗಿಂತ ಅವರ ಅಧ್ಯಕ್ಷ ಭಾಷಣವು ಅತ್ಯಂತ ಗಿಡ್ಡವೂ ಮತ್ತು ಅತ್ಯಂತ ಮಧುರವೂ ಆಗಿತ್ತೆಂದು ಹೇಳುತ್ತಾರೆ. ಅನೇಕ ವರ್ಷಗಳ ತನಕ ಅವರು ಕಾಂಗ್ರೆಸ್ಸ್ ವರ್ಕಿಂಗ್ ಕಮಿಟಿಯ ಮುಖ್ಯ ಮೆಂಬರರಾಗಿದ್ದರು. ಮಿಸ್ ಮೇಯೋ ಎಂಬಾಕೆಯು ಬರೆದ "ಮದರ್ ಇಂಡಿಯಾ" ಎಂಬ ಪುಸ್ತಕದಿಂದ ಉಂಟಾದ ತಪ್ಪಭಿಪ್ರಾಯವನ್ನು ತಿದ್ದಿ ಹೋಗಲಾಡಿಸಲು, ೧೯೨೮ರಲ್ಲಿ ನಮ್ಮ ದೇಶವು ಅವರನ್ನು ಅಮೇರಿಕದ ಸಂದರ್ಶನಕ್ಕಾಗಿ ಆರಿಸಿ ಕಳುಹಿಸಿತು. ಅವರು ತಮ್ಮ ನಡವಳಿಕೆಯ ಸೊಗಸಿನಿಂದಲೂ, ಅತಿಶಯಿತವಾದ ವಾಗ್ಮಿತೆಯಿಂದಲೂ ಮಿಸ್. ಮೇಯೋ ಮಾಡಿದ ಅನರ್ಥವನ್ನು ಪೂರ್ಣವಾಗಿ ಹೋಗಲಾಡಿಸಿದರು. ಅಮೇರಿಕದ ಜನರು ನಮ್ಮ ವಿಷಯದಲ್ಲಿ ನಿಜಸ್ಥಿತಿಯನ್ನೂ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡುವುದನ್ನೂ ತಿಳಿದುಕೊಂಡರು. ೧೯೩೦ರಲ್ಲಿ ಗಾಂಧೀಜಿಯವರ ದಸ್ತಗಿರಿಯಾದ ನಂತರ ಅವರು ಧರಸಾನಾ ಉಪ್ಪಿನ ಕಾರ್ಖಾನೆಯತ್ತ ಇಪ್ಪತ್ತೈದು ಸಾವಿರ ಸ್ವಯಂ ಸೇವಕರನ್ನು ಕರೆದುಕೊಂಡು ಹೋದರು. ಅವರು, ನಿರ್ದಾಕ್ಷಿಣ್ಯವಾದ ಪೋಲೀಸ್ ಆಫೀಸರರ ತುಪಾಕಿಗಳ ಗುರಿ ಮತ್ತು ಲಾಠಿಗಳ ಆಕ್ರಮಣವಿದ್ದರೂ ತಂಡ ತಂಡವಾಗಿ ಮಾಡಿದ—ಧೈರ್ಯವೂ ಜಾಗ್ರತೆಯೂ ಉಳ್ಳ—ಅಹಿಂಸಾತ್ಮಕವಾದ ಧಾಳಿಯಿಂದ ಪ್ರಪಂಚವನ್ನೇ ಚಕಿತಗೊಳಿಸಿದರು. ಅವರನ್ನು ಜೈಲಿಗೆ ಹಾಕಿದರು. ಸಿಜ. ೧೯೩೧ರಲ್ಲಿ ಇಂಡಿಯನ ಸ್ತ್ರೀಯರ ಪರವಾಗಿ ಲಂಡನಿಗೆ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಪ್ರತಿನಿಧಿಯಾಗಿ ಹೋದರು. ೧೯೪೨ನೇ ಇಸ್ವಿಯ 'ಕ್ವಿಟ್ ಇಂಡಿಯಾ' ಚಳವಳದ ಪ್ರಾರಂಭಕಾಲದಲ್ಲಿ ತಿರುಗಿ ಅವರನ್ನು ಬಂಧಿಸಿ ಯೆರವಾಡಾದಲ್ಲಿ ಮಹಾತ್ಮಾ ಗಾಂಧಿಯವರೊಂದಿಗೆ ಆಗಾಖಾನ್ ಅರಮನೆಯಲ್ಲಿ ಹಾಕಿದರು.

೧೯೪೭ನೇ ಆಗೋಸ್ತು ೧೫ನೇ ತಾರೀಕಿನಲ್ಲಿ ಇಂಡಿಯವು ಸ್ವತಂತ್ರವಾದಾಗ ಸಂಯುಕ್ತ ಸಂಸ್ಥಾನದ ಗವರ್ನರರಾಗಿ ಅವರು ನೇಮಿಸಲ್ಪಟ್ಟರು. ಅದರ ಕಾರ್ಯಕ್ಕೆ ಅವರು ಪೂರ್ಣ ತೃಪ್ತಿ ಪಡೆಯದಿದ್ದರೂ ಅತ್ಯಂತ ಜನಪ್ರಿಯರಾದ ಗವರ್ನರರಲ್ಲಿ ಅವರೊಬ್ಬರಾಗಿದ್ದರು. ೧೯೪೯ನೇ ಫೆಬ್ರವರಿಯಲ್ಲಿ ಅವರಿಗೆ ಕಾಯಿಲೆಯಾಯಿತು. ಮಾರ್ಚಿ ತಾ. ೨ರಂದು ಅವರು ದಿವಂಗತರಾದರು. ಇಡೀ ರಾಷ್ಟ್ರವು ಅತ್ಯಂತವಾಗಿ ಮರುಗಿತು.

ಅವರ ನಿಧನದಿಂದ ಭಾರತಮಾತೆಯು ಹೃತ್ಪೂರ್ವಕವಾಗಿ ತನ್ನ ಸೇವೆಯನ್ನು ಚೆನ್ನಾಗಿ ಮಾಡಿದ, ಅನೇಕ ಕ್ಷೇತ್ರಗಳಲ್ಲಿ ಅಪೂರ್ವವಾದ ವೈಶಿಷ್ಟ್ಯವನ್ನು ಗಳಿಸಿದ ತನ್ನ ಒಂದು ದೊಡ್ಡ ಮಗಳನ್ನು ಕಳಕೊಂಡಿತು.

(ಭವನ್ಸ್ ಜರ್ನಲ್ ಪತ್ರಿಕೆಯಿಂದ)

ಅಮ್ಮ

ಹೃದಯದಲಿ ಹುದುಗಿರಲು
ತಾಯೆಂಬ ಭಕ್ತಿ,
ಅದು ನಮಗೆ ನೀಡುವದು
ನೈತಿಕವೆಂಬ ಶಕ್ತಿ.
ಬಡ ಜನರ ಪೋಷಣೆಗೆ
ಬೇಕಾದ ಶಕ್ತಿ,
ತುಂಬುವಳು ಮನದಲ್ಲಿ
ಬೀಜವನು ಬಿತ್ತಿ.

ಕುರುಡನಿಗೆ ನೇರಾದ
ದಾರಿಯನು ತೋರಿ,
ಹೃದಯದಲಿ ಬೆಳಗುವಳು
ದೀಪ, ಕೃಪೆತೋರಿ.
ಜ್ಞಾನಸುಧೆ ತಾ ಕುಡಿಸಿ,
ತೋರುವಳು ದಾರಿ,
ಸತ್ಯತೆಯು ಕಡೆಗದುವೆ
ಬಲುದೊಡ್ಡ ದಾರಿ.

ಭಾರತದ ದುರ್ಗತಿಯ
ಕಣ್ಣಾರೆ ನೋಡಿ,
ತ್ಯಾಗಮಯ ಜೀವನವ
ತಾನಾಗಿ ಬೇಡಿ;
ರಕ್ಷಿಸಿಳು ತಾಯಿಯೇ
ಪ್ರಜೆಗಳನು ನೀಡಿ,
ಭಾರತದ ಕೀರ್ತಿಯನು
ಮನತುಂಬ ಹಾಡಿ.

ಭಾರತದ ವೀರಕಥೆ ತಾಯಿಯಿಂದ ಕೇಳಿ
ಛತ್ರಪತಿ ಯಾಗುವೆನು ತಾನೆಂದು ಹೇಳಿ;
ಶಿವಾಜಿ ತಾ ವೈರಿಗಳ ಎದೆಯನ್ನು ಸೀಳಿ,
ಆಳಿದನು ಸಾಮ್ರಾಜ್ಯ ಚಿರಕಾಲ ಬಾಳಿ.

ಮೊದಲನೆಯ ಬಂಧುವೇ
ಆಗಿಹಳು ಅಮ್ಮ,
ಬೆಳೆವೆವು ನಾವವಳ
ಕೃಪೆಯಿಂದ ತಮ್ಮ;
ಬಾಲ್ಯದಲಿ ಕಲಿತಿರುವ
ಮೊದಲನುಡಿ 'ಅಮ್ಮ',
ಮೊದಲ ಗುರು ತಾಯಿಯೇ
ಆಗಿಹಳು ನಮ್ಮ.

ಕೆ. ವಿ. ಹೆಬ್ಬಾರ ಮುಧೂರು

ಠೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¼%ರ ವರೆಗಿನ ಬಡ್ಡಿ ನೀಡಲಾಗುವುದು.

೫ ವರ್ಷದ ಅವುಗಳಿಗೆ ಮೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6½%ಗೆ ಮೀರದಂತೆ ½% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು:— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಅಹಿಂದೀಯರು ಹಿಂದೀಯರಾದಾರೆ?

(ನಾಲ್ಕನೇ ಪುಟದಿಂದ)

ಈ ಹಿಂಸಾಚಾರವೆಲ್ಲಾ ಏಕೆ? ದಿ|ನೆಹರೂ ಆಶ್ವಾಸನ ನೀಡಿದಂತೆ ನಾವು ಇಂಗ್ಲಿಷ್ ಸಾಕೂಂತ ಅನ್ನೋವರೆಗೂ ಅದು ಇರಬೇಕೂಂತ ಮನವಿ ಅರ್ಪಿಸಬಹುದು ಕೇಂದ್ರವನ್ನು ಶಾಂತವಿಧಾನಗಳಿಂದಲೇ ಒತ್ತಾಯಿಸಬಹುದು...."

'ಹೌದಪ್ಪ ಶಾಂತ ವಿಧಾನಗಳಿಂದ ನಿಮ್ಮ ಕೋರಿಕೆಗಳನ್ನು ಸರಿದಾರಿಗೆ ತರ್ರುವುದು ಇದುವರೆಗೆ ಸಾಧ್ಯವಾಗಿಲ್ಲ. ಇನ್ನು ಮುಂದಕ್ಕೂ ಆಗೋದಿಲ್ಲ ಬಸಿಯೂದರೆ ಮಾತ್ರ ನಿಮ್ಮ ಬೆಣ್ಣೆ ಕರಗೋದು"

"ಅದು ನಿನ್ನ ಅಭಿಪ್ರಾಯ..."

ಮತ್ತು ನಿಮ್ದು."

'ನನ್ನದನ್ನ ಕಟ್ಟಿಕೊಂಡು ನಿನಗೇನಾಗಬೇಕು?

"ಏನೂ ಆಗಬೇಕಿಲ್ಲವೆ?"

"ಅಯ್ಯೋ ಮಹರಾಯ್ತಿ? ಬೇಜಾರು ಮಾಡ್ಕೋಬೇಡ. ಕೆಲವೊಮ್ಮೆ ನಿನ್ನೂ ಸರಿ. ವ ತ್ತೆ ಕೆಲವೊಮ್ಮೆ ಅದಕ್ಕೆ ವಿಪರೀತ"

"ಹ್ಞೂ.... ಮುಂದೆ?"

"ಮುಂದೇನು? ಒಂದು ಕೋಟಿ ರೂಪಾಯಿ ನೂರು ಜೀವಗಳ ಆಹುತಿಯೂ ಯ್ತಲ್ಲಾ.. ಇನ್ನು ಪ್ರಯತ್ನ ಬಿಟ್ಟು ಅನಿರ್ದಿಷ್ಟಾವಧಿಯವರೆಗೆ' ಎಂಬ ದನ್ನು ಕತ್ತೋ ಇಪ್ಪತ್ತೋ ವರ್ಷಗಳ ವರೆಗೆ ಎಂದು ಸಂವಿಧಾನದಲ್ಲಿಯೇ ಬರೆಯೋದ."

"ಅಲ್ಲ, ಅದಕ್ಕಿಂತಲೂ ಒಂದು ಉಪಾಯವಿದೆ...."

"ಏನು?"

"ಅಹಿಂದೀಯರು ಹಿಂದೀಯರಾಗಲು ಒಪ್ಪುವವರೆಗೇಂತ"

"ಸರಿಯಾಗಿ ನುಡಿದೆ ಕಣೇ. ನಿನ್ನ ತಲೇಂತಂದ್ರೆ ತಲೆ. ಇದ್ದರೆ ಇರಬೇಕ್ಕು ಇಂತದ್ದು..."

"ಓಯ್. ಸ್ವಲ್ಪ ಮೆಲ್ಲ ಮತ್ತೆ ಹಿಡಿದಿರೋ ಬ್ಯಾಟ್ರೀಲಿ ತಲೆಗೆ ಕುಟ್ಟಿ ಬಿಟ್ಟೇಡಿ. ಕಾಲೊಂದೇ ಉರಿಯುತ್ತಿರೋದು ಸಾಕು."

"ಓ ಮರ್ತೋಹೋಯ್ತು ಕಣೆ .. ಹೇಗಿದೆ ನಿನ್ನ ಕಾಲು"

"ಕಾಲದೊಡನೆ ಅದೂ ಕೆಟ್ಟು ಹೋಯ್ತು. ಉರೀಂತಂದ್ರೆ ಉರಿ."

"ನನ್ನಗ್ಗ ಹಾಗೇನೆ?"

"ಏನು ಏನಾಯಿತು"

"ಆಗೋದೇನು? ಗಂಟೆ ಆಗ್ಲೇ ಒಂಬತ್ತು ಹೊಡೀತ. ಹೊಟ್ಟೇಲಿ ಉರಿ ಎಲ್ಲಾ ಇದೆ.."

"ಓ, ಹೌದೂಪ್ಪಿ. ಇವತ್ತು ಆ ಉರಿ ಆರ್ಸೋಕೆ ತಿಳಿಸೀರೇ ಗತಿ..."

".. ನಂಕೂಂದೆ ನಿಮ್ಮ ಚೇಷ್ಟೇ"

"ಇಲ್ಲ ಇಲ್ಲ ಚೇಷ್ಟೆ ಯೇನು ಬಂತೆ?"

'ಬನ್ನಿ ಬೇಗ'

'ಹ್ಞಂ...'

— ಗೋರಾ

ನಮ್ಮ-ನಮ್ಮವರು

ಶ್ರೀ ಸಿ ಸುಬ್ರಹ್ಮಣ್ಯಂ

ಆಹಾರದ ವಿಷಯದಲ್ಲಿ ಪರತಂತ್ರವಾದ ಭಾರತವು ಸ್ವಾತಂತ್ರ್ಯ ನಂತರ ಹಲವಾರು ಆಹಾರ ಮಂತ್ರಿಗಳನ್ನು ಕಂಡಿತು. ಯಾವ ಮಂತ್ರಿಯೂ ಈ ಶಾಖೆಯಲ್ಲಿದ್ದು ಯಶಸ್ವಿಯೆನಿಸಿ ಹೊರ ಬಂದಿಲ್ಲ. ನೆಹರೂರವರ ನಿಧನಾನಂತರದ ಶಾಸ್ತ್ರಿ ಸಂಪುಟದಲ್ಲಿ ಶ್ರೀ ಸುಬ್ರಹ್ಮಣ್ಯಂ ಈ ಶಾಖೆಯನ್ನು ವಹಿಸಬೇಕಾಯಿತು. ಮದ್ರಾಸ್ ರಾಜ್ಯದಲ್ಲಿ ತನ್ನ ಇತರ ಶಾಖೆಗಳೊಡನೆ ಆಹಾರ ಖಾತೆಯನ್ನೂ ಯಶಸ್ವಿಯಾಗಿಯೇ ನಿರ್ವಹಿಸಿದ್ದ ಇವರು ಈ ಹೊಸ ಹೊಣೆಗಾರಿಕೆಯನ್ನು ಉಚಿತ ರೀತಿಯಲ್ಲೇ ನಿರ್ವಹಿಸುವರೆಂದು ಅಂದು ಜನ ನಂಬಿತ್ತು, ಅವರಲ್ಲಿ ವಿಶ್ವಾಸವನ್ನೂ ಇಟ್ಟಿತ್ತು. ಆದರೆ ಅವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ತಡ, ಆಹಾರದ ಅಭಾವ ತಾಂಡವವಾಡಿತು, ಸಾಗಿಸುವಿಕೆಯ ಒಂದರೂ ಅಭಾವ ನೀಗಲಿಲ್ಲ, ಬೆಲೆಯುತ್ತಲೇ ಇದೆ ಇವರ ಹೇಳಿಕೆ ವ್ಯಾಖ್ಯಾನಗಳನ್ನು, ವರ್ತನೆಗಳನ್ನೂ ಇವರು ಕೆಣಕಿ ಪರ ಉಪಕೃತಿಗಳನ್ನು ಪಡೆದರು ಆಹಾರ ಧಾನ್ಯಗಳ ಕಾರ್ಪೊರೇಶನ್ ಸ್ಥಾಪಿತವಾದರೂ ಅದರ ಕಾರ್ಯಕ್ರಮಗಳು ನಿರ್ದಿಷ್ಟವಾಗಿ ಸಾಗುವಂತಾಗಬೇಕಾದರೆ ಇನ್ನೂ ಕೆಲಕಾಲ ಬೇಕಾಗುತ್ತದೆ— ಹೀಗೆ ಅವರು ಪರಿಸ್ಥಿತಿಯನ್ನೆದುರಿಸುವಲ್ಲಿ ಅಯಶಸ್ವಿಯೇ ಆದರೆನ್ನುವವರು ಬಹಳ ಮಂದಿ.

ಭಾಷಾ ವಿವಾದದ ಜಂಜಾಟದಲ್ಲಿಯೂ ಇವರು ಪ್ರವೇಶ ಮಾಡಿ ಸಚಿವ ಪದಕ್ಕೆ ರಾಜೀನಾಮೆಯಿತ್ತುದು, ಇದರ ಬಗ್ಗೆ ಕಾಂಗ್ರೆಸಿಗರಿಂದ ತೀವ್ರ ಪ್ರತಿಕ್ರಿಯೆ ಹುಟ್ಟಿದುದ, ರಾಜೀನಾಮೆಯನ್ನು ಸ್ವೀಕರಿಸಬೇಕೆಂದ ಹಚ್ಚಿನವರ ಅಭಿಪ್ರಾಯಪಟ್ಟುದು—ಇವೆಲ್ಲವುಗಳ ಹಿಂದೆ ಇರುವ ರಾಜಕೀಯ ದಕ್ಷತೆಯಿದೆಯೋ ಈಗಲೇ ಹೇಳುವಂತಿಲ್ಲ. ಆದರೆ, ಇನ್ನೂ ಕಿರಿವಯಸ್ಸಿನ ಭವ್ಯ ಭವಿಷ್ಯವಿದ್ದ, ಉತ್ಸಾಹಶಾಲಿ ರಾಜಕಾರಣಿ ಸುಬ್ರಹ್ಮಣ್ಯಂ ರಾಜೀನಾಮೆಯಿತ್ತು ನಾವು ಗಳಿಸಿದ್ದ ಕೀರ್ತಿಗೆ ತುಸು ಕಲಂಕ ತಂದುಕೊಂಡರೆಂದೇ ಹೇಳಬಹುದು. ದಕ್ಷಿಣ ಭಾರತದ ಹಿತವನ್ನು ಕೇಂದ್ರದಲ್ಲಿ ಪ್ರತಿಬಿಂಬಿಸುವ ಶಕ್ತಿ ಇವರಲ್ಲಿದೆಯೆಂದು ಜನ ನಂಬಿತ್ತು ಅವರು ಈಗ ದುಡುಕದೆ ಮೆಲ್ಲಗೆನೇ ತುಸು ಎಚ್ಚರಿಕೆ ವಹಿಸುತ್ತಿದ್ದರೆ, ಮದ್ರಾಸದಲ್ಲಿ ಯಾವ ಗೊಂದಲವೂ ಆಗುತ್ತಿರಲಿಲ್ಲವೇನೋ ಎನ್ನುವವರೂ ಇದ್ದಾರೆ. ಏನೇ ಇದ್ದರೂ ಸುಬ್ರಹ್ಮಣ್ಯಂರಂತಹ ನಿಸ್ಪೃಹ ಸೇವಕರ ಸೇವೆ ಭಾರತಕ್ಕೆ ಆಗತ್ಯವಿದೆಯೆಂಬುದನ್ನು ಮಾತ್ರ ಯಾರೂ ಅಲ್ಲಗಳೆಯುವುದಿಲ್ಲ.



ಡಾ|| ಎಂ ವಸಂತ ಕುಮಾರ ಶೆಟ್ಟಿ

ನಡು ಹರೆಯವನ್ನು ಈಗ ತಾನೇ ಸಮೀಪಿಸುತ್ತಿರುವ ಡಾ|| ಎಂ ವಸಂತ ಕುಮಾರ ಶೆಟ್ಟರು ರೇಡಿಯೋಲಜಿಯಲ್ಲಿ ಪದವಿಗಳಿಸಿ ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಟ್ಯೂಟರರಾಗಿಯೂ ಸರಕಾರಿ ಆಸ್ಪತ್ರೆಯ ರೇಡಿಯೋಲೊಜಿಸ್ಟ್ ಆಗಿಯೂ ಕೆಲಸದಲ್ಲಿ ಸೇರಿಕೊಂಡರು ಅಮೇರಿಕೆಯ ಓಟ್ಸ್ ಬರ್ಗನ ಚಿಲ್ಡ್ರನ್ಸ್ ಹಾಸ್ಪಿಟಲಿನಲ್ಲಿ ಪೇಡಿಯೋಟ್ರಿಕ್ ರೇಡಿಯೋಲಾಜಿಯ ಜನಕರೆಂದು ಹೆಸರಾದ ಡಾ|| ಜಾನ್ ಕಾಫಿ ಮತ್ತು ಡಾ|| ಬೆರ್ಟ್ರಾಮ್ ಗಿಡ್ಡಿಯ ಪರ ಮಾರ್ಗದರ್ಶನದಲ್ಲಿ ಪೇಡಿಯೋಟ್ರಿಕ್ ರೇಡಿಯೋಲಜಿಯಲ್ಲಿ ತರಬೇತಿ ಪಡೆಯಲು ತೆರಳಿ ಯಶಸ್ವಿಯಾಗಿ ತರಬೇತಿ ಹೊಂದಿದರು. ಭಾರತದಂತಹ ಬಡ ದೇಶದಲ್ಲಿ ಈ ಬಗೆಯ ಅತ್ಯುಚ್ಚ ತಜ್ಞತೆಯು ಅನಗತ್ಯವೆಂಬ ಭಾವನೆಯಿರಬಹುದು. ಆದರೂ ಜ್ಞಾನವೆಂಬುದು ಅಸೀಮವಾಗಿದ್ದು, ಅದನ್ನು ಗಳಿಸುವುದು ಪ್ರತಿಯೊಬ್ಬನ ಕರ್ತವ್ಯ. ಕಳೆದ ಮೂರು ವರ್ಷಗಳಲ್ಲಿ ಇಡಿಯ ಏಶ್ಯಾ ಖಂಡದಲ್ಲಿಯೇ ಡಾ|| ಶೆಟ್ಟರಂತೆ ಉನ್ನತ ಪದವಿ ಪಡೆದವರು ಯಾರೂ ಇಲ್ಲವೆನ್ನಬಹುದು. ಭಾರತದಲ್ಲಂತೂ ಇಲ್ಲವೇ ಇಲ್ಲ ಆಗಿಲ್ಲದಲ್ಲಿ ಅಮೇರಿಕನ್ ರೇಡಿಯೋಲಜಿ ಬೋರ್ಡಿನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮದ್ರಾಸ ರಾಜ್ಯದಲ್ಲಿರುವ ಈ ಬೋರ್ಡಿನ ಪದವಿ ಪಡೆದ ಏಕಮೇವ ಡಾಕ್ಟರರೆನಿಸಿದರು. ಭಾರತದಲ್ಲಿಯೂ ಇವರಂತೆ ಅಮೇರಿಕನ್ ಬೋರ್ಡಿನ ಪದವೀಧರರು ಅತಿ ವಿರಳ. ಮದ್ರಾಸಿನ ಜನರಲ್ ಆಸ್ಪತ್ರೆಯ ಪೇಡಿಯೋಟ್ರಿಕ ರೇಡಿಯೋಲೊಜಿಕಲ್ ಕಾರ್ಯದಲ್ಲಿ ಬಹು ಭಾಗವನ್ನೂ ಸ್ನಾತಕೋತ್ತರ ವಿಭಾಗದಲ್ಲಿ ಪೇಡಿಯೊಟ್ರಿಕ್ಸ್ ಮತ್ತು ರೇಡಿಯೋಲಜಿಗಳ ಅಧ್ಯಾಪನದ ಕಾರ್ಯವನ್ನೂ ಇವರೀಗ ಮಾಡುತ್ತಿದ್ದಾರೆ. ಸದ್ಯದಲ್ಲೇ ಮದ್ರಾಸದಲ್ಲಿ ೪೦೦ ಹಾಸಿಗೆಗಳಿರುವ ಮಕ್ಕಳ ಆಸ್ಪತ್ರೆಯು ತೆರೆಯಲಿದ್ದು ಇದರಲ್ಲಿ ಡಾ|| ಶೆಟ್ಟರ ನೈಪುಣ್ಯವು ತುಂಬ ಪ್ರಯೋಜನಕ್ಕೆ ಬೀಳಲಿದೆ.

ಅಮೇರಿಕೆಯಲ್ಲಿ ತರಬೇತಿಯ ಅವಧಿಯಲ್ಲಿ ಅವರು ಗತವರ್ಷ ಮೆಕ್ಸಿಕೋಸಿಟಿಯಲ್ಲಿ ನಡೆದ ಅಂತಾರಾಷ್ಟ್ರೀಯ ರೇಡಿಯೋಲಜಿ ಕಾಂಗ್ರೆಸ್ಸಿನಲ್ಲಿ ಭಾಗವಹಿಸಿದ್ದರು. ಇಂಗ್ಲೆಂಡ, ಫ್ರಾನ್ಸ್, ಜಪಾನ್ ಮತ್ತು ಥ್ಯಾಯ್ಲ್ಯಾಂಡ್‌ಗಳ ರೇಡಿಯೋಲಜಿಕಲ್ ಕೇಂದ್ರಗಳನ್ನೂ ಸಂದರ್ಶಿಸಿದ್ದರು.

ಅಮೇರಿಕನ್ ಪೇಡಿಯೊಟ್ರಿಕ್ ರೇಡಿಯೋಲಜಿಕಲ್ ಸೊಸೈಟಿಯ ಏಕಮೇವ ಏಶ್ಯನ್ ಸದಸ್ಯರಾದ ಇವರು ಮದ್ರಾಸದ ಪ್ರಸಿದ್ಧ ಡಾಕ್ಟರರಾದ ಕೆ. ಮಂಜುನಾಥ ರೈಯವರ ಅಳಿಯ. ಉತ್ಸಾಹಿಯೂ ಕಾರ್ಯನಿರತರೂ ಆದ ಡಾ|| ಶೆಟ್ಟರು ಅನಾವಶ್ಯಕ ಕರ್ತೃತ್ವ ದ ಲಿಗಳು ಅವರಿಂದ ಮದ್ರಾಸು ರಾಜ್ಯ ಮಾತ್ರವಲ್ಲ ಇಡಿಯ ಭಾರತವೇ ಉಪಕೃತವಾಗುವುದೆಂದು ನಂಬಬಹುದ.

— —

ಡಾ|| ವಿ ಕೆ ಬಲ್ಲಾಳ, ಮಲ್ಪೆ ಇವರ ಪುತ್ರ ಡಾ|| ಕೆ ಎಂ ಬಲ್ಲಾಳ ಇವರು ಶಾಪು ಶ್ರೀ ಕೃಷ್ಣಾಚಾರ್ಯ, ಉಳಿಯಾರಗೋಳಿ ಇವರ ಪುತ್ರಿ ಸೌ|| ಜಾನಕಿಯನ್ನು ತಾ. ೨೨-೧-೬೫ರಂದು ತಿರುಪತಿಯಲ್ಲಿ ವಿವಾಹವಾದರು. ನೂತನ ವಧೂವರರಿಗೆ ಶುಭಾಶಯಗಳು

ಎಲ್ಲೆಲ್ಲಿ ಏನೇನು?

ಮಧ್ವನವಮೀ ಉತ್ಸವದ ರಜತ ಮಹೋತ್ಸವ

ಮದ್ರಾಸು— ಶ್ರೀ ಮನ್ಮಧ್ವಸಿದ್ಧಾಂತ ಸಂವರ್ಧಿನೀ ಸಭಾ, ಭಂಡಾರ ಕೇರಿ ಮಠ ಮತ್ತು ಮದ್ರಾಸ್ ಮಾಧ್ವ ಸಂಘ ಇವುಗಳ ಸಂಯುಕ್ತ ಆಶ್ರಯದಲ್ಲಿ ಮಧ್ವನವಮೀ ಉತ್ಸವದ ರಜತ ಮಹೋತ್ಸವವು ಇದೇ ತಾ. ೮, ೯, ೧೦, ೧೧ ಈ ನಾಲ್ಕು ದಿನಗಳಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ತಾ. ೮ರಂದು ಈ ಉತ್ಸವವನ್ನು ಅಖಿಲ ಭಾರತ ಮಾಧ್ವ ಮಹಾ ಮಂಡಳದ ಅಧ್ಯಕ್ಷರಾದ ಉಡುಪಿ ಶ್ರೀ ಪೇಜಾವರ ಮಠದ ವಿಶ್ವೇಶ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ, ಶ್ರೀ ಮನ್ಮಧ್ವಸಿದ್ಧಾಂತ ಸಂವರ್ಧಿನೀ ಸಭೆಯ ಸ್ಥಾಪಕರೂ ಅಧ್ಯಕ್ಷರೂ ಆದ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀ ಪಾದಂಗಳವರು ನೆರವೇರಿಸಿದರು.

ಈ ಉತ್ಸವದ ನಾಲ್ಕು ದಿನಗಳಲ್ಲಿ ಶ್ರೀ ವೇದವ್ಯಾಸ ದೇವರ ಪೂಜೆ, ನ್ಯಾಯ ಸುಧಾ ಸ್ಪರ್ಧೆ, ಸಚ್ಛಾಸ್ತ್ರ ಪಾರಾಯಣ, ಬ್ರಾಹ್ಮಣ ಸುವಾಸಿನಿಯರ ಸಂತರ್ಪಣೆ, ಹರಿಕಥೆ, ಸ್ಮಾರಕ ಗ್ರಂಥದ ಉದ್ಘಾಟನೆ, ಮತತ್ರಯ ವಿದ್ವಾಂಸರಿಂದ ಸ್ವಮತ ವೈಶಿಷ್ಟ್ಯ ವಿಷಯದಲ್ಲಿ ಭಾಷಣ, ನಾಟಕ, ಮಧ್ವ ಚರಿತ್ರೆಯ ಉಪನ್ಯಾಸ, ವಿವಿಧ ಸ್ಪರ್ಧೆಗಳು, ಭಜನೆ, ಗೀತಾ ವಾಚನ, ಇತ್ಯಾದಿ ಹಲವಾರು ಕಾರ್ಯಕ್ರಮಗಳು ಇದ್ದು ಸಮಾರಂಭವು ಯಶಸ್ವಿಯಾಗಿ ಜರಗಿತು.

ರೋಟರಿ ಸಭೆ

ಉಡುಪಿ ರೋಟರಿ ಕ್ಲಬ್ಬಿನ ಸಭೆಯು ಕಳೆದ ತಾ. 11ರಂದು ಡಾ॥ ವಿ. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಶ್ರೀ ಎ. ಜೆ. ಅಲ್ಸೆಯವರು ಮುಖ್ಯ ಅತಿಥಿಗಳಾಗಿ ಬಂದಿರುವ ಮಂಗಳೂರಿನ ಶ್ರೀ ಕೆ. ವಿಶ್ವನಾಥ ಕಾಮತ್, ಸ್ವಾಮಿ ಭಾಸ್ಕರಾನಂದ ಪರಮಹಂಸ ಹಾಗೂ ಡಾ॥ ಪ್ರೇಮಲತಾರವರ ಪರಿಚಯ ಮಾಡಿತ್ತರು.

ಶ್ರೀ ಕೆ. ವಿಶ್ವನಾಥ ಕಾಮತರು ವ್ಯಾಪಾರೋದ್ಯಮದ ಕುರಿತು ಮಾತನಾಡಿದರು. ಸ್ವಾಮಿ ಭಾಸ್ಕರಾನಂದಜಿ ಪರಮಹಂಸರು ನಾಗರಿಕ ಧರ್ಮದ ಕುರಿತು ಪ್ರಸ್ತಾಪಿಸುತ್ತಾ, ಧರ್ಮ ಅರ್ಥ, ಕಾಮ, ಮೋಕ್ಷ ಎನ್ನುವ ತತ್ವವನ್ನು ವೈಯಕ್ತಿಕವಾಗಿ ಬೆಳೆಸಿಕೊಂಡು ತರುವಾಯ ದೇಶದ ಅಭಿವೃದ್ಧಿಗಾಗಿ ಸಾಧಿಸಬೇಕೆಂದರು. ಡಾ॥ ಪ್ರೇಮಲತಾರವರು ಮಾತನಾಡುತ್ತಾ ಮೈಸೂರು ರಾಜ್ಯ ಒಕೇಶನಲ್ ಗೈಡನ್ಸಿನ ಉದ್ದೇಶಗಳನ್ನು ವಿವರಿಸಿದರು.

(ಮೂರನೇ ಪುಟದಿಂದ)

ಒಂದೇ. ಇದು ತಿಳಿಯಾಗದೆ ಹೋದಲ್ಲಿ ಭಾಷಾ ವಿವಾದದ ದುರಂತವನ್ನೂ ಮೀರಿದ ಗೊಂದಲವೇಳುತ್ತದೆ. ಹಸಿದ ಜನತೆಯ ಹೃದಯದಲ್ಲಿ ಪಾಪ – ಪುಣ್ಯ ವಿವೇಚನೆಗೆ ಅಸ್ಪದವಿರುವುದಾದರೂ ಅದು ಬಹು ಕಾಲವುಳಿಯುವುದಿಲ್ಲ. ಸರಕಾರವೂ ಅದರ ಅಧಿಕಾರಿಗಳೂ ಈ ಬಗ್ಗೆ ತೀವ್ರ ಕಣ್ಣು ತೆರೆಯಬೇಕು; ಜನರ ಕಂಗಾಲ ಸ್ಥಿತಿಯನ್ನು ಮನಗಾಣಬೇಕು; ಹಸಿವಿನಿಂದ ಜನರನ್ನು ಮುಕ್ತಗೊಳಿಸಬೇಕು; ಎಂದಿನವರೆಗೆ ಜನರು ಅರೆ ಹೊಟ್ಟೆಯೂ ಉಣ್ಣುವುದಿಲ್ಲವೋ ಅಂದಿನ ವರೆಗೆ ನಮ್ಮ ಯಾವ ಯೋಜನೆಯಿಂದಲಿ ಸುಖೀರಾಜ್ಯ ಸ್ಥಾಪನೆಯ ದಿವ್ಯ ಯೋಜನೆಯಿಂದಲಿ ಖಂಡಿತ ಕೂಡ ಯಶಸ್ವಿಯಾಗುವುದಿಲ್ಲ. ಆದುದರಿಂದ ನಮ್ಮ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕಣ್ಣುಮುಚ್ಚಾಲೆ ಮಾಡದೆ ಎಲ್ಲ ಯೋಜನೆಗಳನ್ನೂ ಒಮ್ಮೆಗೆ ಬದಿಗೆ ಸರಿಸಿ, ಜನರಿಗೆ ಆಹಾರವೊದಗಿಸುವತ್ತ ಸಂಪೂರ್ಣ ದೃಷ್ಟಿ ಬೀರಬೇಕು.

ಪದ್ಮಶ್ರೀ ಪೈಗಳಿಗೆ ಅಭಿನಂದನೆ

ಉಡುಪಿ ನಗರ ಸಭೆ ಮತ್ತು ತಾಲೂಕು ಡೆವಲಪ್‌ಮೆಂಟ್ ಬೋರ್ಡ್‌ನವರು ಪದ್ಮಶ್ರೀ ಪ್ರಶಸ್ತಿ ಪಡೆದ ಡಾ| ಟಿ. ಎಂ. ಎ. ಪೈಯವರನ್ನು ಬೋರ್ಡು ಹೈಸ್ಕೂಲಿನ ಜನತಾ ಭವನದಲ್ಲಿ ತಾ. 12ನೇ ಸಂಜೆ ಮಾನಪತ್ರವಿತ್ತು ಗೌರವಿಸಿದರು. ನಗರ ಸಭೆಯ ಪರವಾಗಿ ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರೂ ತಾಲೂಕು ಅಭಿವೃದ್ಧಿ ಮಂಡಳಿಯ ಪರವಾಗಿ ಅಧ್ಯಕ್ಷ ಶ್ರೀ ಎಂ. ಮಧ್ವರಾಜರೂ ಸನ್ಮಾನ ಪತ್ರವನ್ನು ಓದಿ ಸಮರ್ಪಿಸಿದರು. ಶ್ರೀಗಳಾದ ಎಸ್. ಸೀತಾರಾಮ ಕಾಮತ್ ಎಡ್ವಕೇಟ್, ಯು. ಶಿವಾಜಿ ಶೆಟ್ಟಿ, ಗೋಪಾಲಕೃಷ್ಣ, ಬಿ. ಶ್ಯಾಮರಾಯ ಶೆಟ್ಟಿ, ಕೇಶವ ಕುಡುವ ಇವರು ಡಾ| ಪೈಗಳ ಸಾಧನೆಗಳನ್ನು ವಿವರಿಸಿ ಅಭಿನಂದನೆ ಸಲ್ಲಿಸಿದರು. ಡಾ| ಪೈಗಳು ಮಾತನಾಡುತ್ತ ತನ್ನ ಸಾಧನೆಗಳ ಜಯಶೀಲತೆಗೆ ಜನತಾ ಸಹಕಾರವೇ ಮೂಲವೆಂದು ತನ್ನನ್ನು ಗೌರವಿಸಿದ ಬಗ್ಗೆ ವಂದನೆಗಳನ್ನರ್ಪಿಸಿದರು. ಶ್ರೀ ಕೆ. ಎಂ. ಮಧ್ಯಸ್ಥರು ಧನ್ಯವಾದವನ್ನು ಅರ್ಪಿಸಿದರು.

ಪದವಿಯೋತ್ತರ ಶಿಕ್ಷಣಕ್ಕಾಗಿ ಎಂ.ಜಿ.ಎಂ. ಕಾಲೇಜಿನ ಪರಿಶೀಲನೆ

ಬರುವ ಶಿಕ್ಷಣ ವರ್ಷದಿಂದ ಪದವಿಯೋತ್ತರ ತರಗತಿಗಳನ್ನು ಆರಂಭಿಸುವುದಕ್ಕೆ ಅನುಮತಿ ಕೊಡಬೇಕೆಂದು ಉಡುಪಿಯ ಎಂ. ಜಿ. ಎಂ. ಕಾಲೇಜು ಮನವಿ ಮಾಡಿಕೊಂಡ ಬಗ್ಗೆ ಪರಿಶೀಲನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯ ನೇಮಿಸಿದ ಪರಿಶೀಲನಾ ಮಂಡಳಿಯ ಸದಸ್ಯರು ತಾ. 9ರಂದು ಭೇಟಿಯಿತ್ತರು.

ಪ್ರಿನ್ಸಿಪಾಲ ಪ್ರೊ॥ ಕು. ಶಿ. ಹರಿದಾಸ ಭಟ್ಟರು ದಕ್ಷಿಣ ಕನ್ನಡದಲ್ಲಿ ಪದವಿಯೋತ್ತರ ಶಿಕ್ಷಣವನ್ನು ಆರಂಭಿಸಬೇಕಾಗಿರುವ ಅಗತ್ಯವನ್ನು ಒತ್ತಿ ಹೇಳಿ ವಿಶ್ವವಿದ್ಯಾನಿಲಯವು ಇದನ್ನು ಸಹಾನುಭೂತಿಯಿಂದ ಪರಿಶೀಲಿಸುವುದೆಂಬ ಆಶಂಸವನ್ನು ವ್ಯಕ್ತಪಡಿಸಿದರು. ಮಂಡಳಿಯ ಪರವಾಗಿ ಮೈಸೂರು ವಿಶ್ವವಿದ್ಯಾನಿಲಯದ ಡಾ| ಎಂ. ವೆಂಕಟಾಚಲ ಅಯ್ಯಂಗಾರ್‌ರವರು ಮಾತನಾಡಿ ಕಾಲಕ್ರಮೇಣವಾಗಿ ಪದವಿಯೋತ್ತರ ಶಿಕ್ಷಣಕ್ಕೆ ನಿರ್ದಿಷ್ಟ ಕ್ರಮ ಇರುವಂತಾಗಬೇಕೆಂದರು. ನಾನಾ ವಿಭಾಗಗಳನ್ನು ನಡೆಸುವುದಕ್ಕೆ ತಕ್ಕ ತಜ್ಞರು ಸಿಗುವಂತಿರಬೇಕೆಂದು ಅವರು ನುಡಿದರು.

ಐಸ್ ಕ್ರೀಮ್ ಪಾರ್ಲರ್

ಇದೇ ತಾ. 10ರಂದು ಉಡುಪಿಯ ಬಸ್ ಸ್ಟೇಂಡಿನ ಬಳಿ ಹೆಗ್ಡೆ ಏಜನ್ಸೀಸ್ ಇವರ ಐಸ್ ಕ್ರೀಮ್ ಪಾರ್ಲರ್ ಎಂಬ ಅತ್ಯಾಧುನಿಕ ನೂತನ ಥಂಡಾ ಪಾನೀಯ ಗೃಹವೊಂದು ಪ್ರಾರಂಭಿಸಲ್ಪಟ್ಟಿರುವುದು.

ಪದ್ಮಶ್ರೀ ಡಾ| ಪೈಯವರಿಗೆ ಸನ್ಮಾನ

ತಾ, 13ರಂದು ಮಂಗಳೂರಿನ ಪುರಭವನದಲ್ಲಿ, ರಾಷ್ಟ್ರದ ಪದ್ಮಶ್ರೀ ಗೌರವ ವಿಜೇತ ಡಾ| ಟಿ. ಎಂ. ಎ. ಪೈ ಅವರನ್ನು ಸನ್ಮಾನಿಸುವ ಸಲುವಾಗಿ ಏರ್ಪಡಿಸಿದ ಸಭೆಯು ನಗರ ಸಭಾಪತಿ ಶ್ರೀ ಜಿ. ಸೋಮಶೇಖರ ರಾವ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಮತಿ ಲೀಲಾಬಾಯಿ ಬಾಳಿಗಾರವರಿಂದ ಪ್ರಾರ್ಥನೆಯಾದ ಬಳಿಕ ಶ್ರೀ ಅಲೂರು ಶ್ರೀಪತಿ ರಾಯರು ಸ್ವಾಗತಿಸಿದರು. ಡಾ| ಜಿ. ಡಿ. ಮೇಲ್ಯತ್, ಶ್ರೀ ನರಸಿಂಹ ಮೂರ್ತಿ ಮತ್ತು ಶ್ರೀ ಎಸ್. ರಾಮ ರಾವ್ ಅವರುಗಳು ಡಾ| ಪೈಗಳ ನಾನಾ ಸಾಧನೆಗಳನ್ನು ವಿವರಿಸಿದರು. ಡಾ| ಪೈಗಳು ಮಾತಾಡುತ್ತಾ, ಜನತೆಯ ಸಹಕಾರವೇ ತನ್ನ ಸಾಧನೆಗಳಿಗೆ ಕಾರಣವೆಂದರು. ಅಂತ್ಯದಲ್ಲಿ ಶ್ರೀ ಎಚ್. ಡಿ. ಎಸ್. ಪೈಗಳು ಧನ್ಯವಾದ ಸಮರ್ಪಿಸಿದರು. ರಾತ್ರಿ ಡಾ| ಪೈಗಳ ಗೌರವಾರ್ಥ ಭೋಜನಕೂಟದ ಏರ್ಪಾಡಾಗಿತ್ತು.

ಶಾಲಾ ವಾರ್ಷಿಕೋತ್ಸವ

ಮಣಿಪಾಲ ಪ್ರೌಢ ಶಾಲೆಯ ವಾರ್ಷಿಕೋತ್ಸವವು ತಾ. 9ರಂದು ನಡೆದ ಸಂದರ್ಭದಲ್ಲಿ ಡಾ| ಟಿ. ಎಂ. ಎ. ಪೈಯವರಿಗೆ 'ಪದ್ಮಶ್ರೀ' ಪ್ರಶಸ್ತಿ ದೊರೆತುದಕ್ಕಾಗಿ ಅಭಿನಂದನಾ ಪತ್ರವನ್ನು ಅರ್ಪಿಸಲಾಯಿತು. ಶ್ರೀ ಪಿ. ವೆಂಕಟರಮಣ ಭಟ್ಟರು ಅಧ್ಯಕ್ಷತೆ ವಹಿಸಿದ್ದರು.

ಶಾಲೆಯ ವ್ಯವಸ್ಥಾಪಕರಾದ ಶ್ರೀ ಟಿ. ರಮೇಶ ಪೈಯವರು ಸ್ವಾಗತಿಸಿದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಕಲ್ಮಾಡಿ ರಾಮರಾವ್‌ರವರು ವರದಿಯನ್ನೋದಿದರು. ಶ್ರೀ ಪಿ. ಎಂ. ಕೆ. ಹೆಬ್ಬಾರ್‌ಸ್ವಸ್ತಿವಾಚನ ಮಾಡಿದರು.

ಡಾ॥ ಪೈಗಳಿಗೆ ಅಭಿನಂದನೆ

ಮಣಿಪಾಲ ಫೆ. 10-ರಾಷ್ಟ್ರಾಧ್ಯಕ್ಷರು ತಮಗೆ ಪ್ರಶಸ್ತಿ ಪತ್ರವನ್ನು ಇತ್ತಿರುವುದನ್ನು ಎಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆ ಆರಂಭಿಸಿರುವ ಎಲ್ಲಾ ಕಾಲೇಜುಗಳಿಗೆ ಮನ್ನಣೆ ಕೊಟ್ಟಂತೆ ಭಾವಿಸುವುದಾಗಿ ಎಕಾಡೆಮಿಯ ಅಧ್ಯಕ್ಷರೂ, ರಿಜಿಸ್ಟ್ರಾರರೂ ಆದ ಡಾ| ಟಿ. ಎಂ. ಎ. ಪೈಯವರು ಇಂದಿಲ್ಲಿ ನುಡಿದರು. "ಪದ್ಮಶ್ರೀ" ಪ್ರಶಸ್ತಿಯನ್ನು ಪಡೆದುದಕ್ಕಾಗಿ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಲಲಿತಕಲಾ ಹಾಗೂ ಸಂಗೀತ ಸಂಘದ ಪರವಾಗಿ ಪ್ರೊ| ಬಿ. ಸಿ. ಕೃಷ್ಣಮೂರ್ತಿಯವರು ಅರ್ಪಿಸಿದ ಅಭಿನಂದನಾಪತ್ರಕ್ಕೆ ಅವರು ಉತ್ತರ ಕೊಡುತ್ತಿದ್ದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಪಿ. ವೆಂಕಟರಮಣ ಭಟ್‌ರವರು ಮಾತನಾಡಿ ಡಾ| ಪೈಯವರಂಥ ಕುಶಲ ವ್ಯಕ್ತಿಗಳು ಅಪರೂಪವೆಂದೇ ಅವರು ವಿದ್ಯಾಭ್ಯಾಸ ಮತ್ತು ಬ್ಯಾಂಕ್ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಮೂಡಿಸಿದ್ದಾರೆಂದೂ ಹೇಳಿದರು.

ವರ್ಧಂತ್ಯುತ್ಸವ

ಉಡುಪಿ —ಗುಂಡಿಬೈಲು ಕಿರಿಯ ಬುನಾದಿ ಶಾಲೆಯ ವರ್ಧಂತ್ಯುತ್ಸವವು ತಾ 30-1 65ರಲ್ಲು ನಗರಸಭಾಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಾದಿರಾಜ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಪಿ. ನರಸಿಂಹ ಉಪಾಧ್ಯ ಇವರು ಸ್ವಾಗತ ಭಾಷಣ ಹಾಗೂ ವರದಿ ವಾಚನ ಗೈದರು. ಶ್ರೀ ಪಿ. ಪ್ರೇಮಾನಂದ ಸೆಟ್ಟಿ ಇವರು ಸ್ವಸ್ತಿವಾಚನ ಗೈದರು. ಸಭಿಕರಲ್ಲಿ ಶ್ರೀ ಕೆ. ಸದಾಶಿವ ರಾಯರು ಭಾಷಣಗೈದರು. ಬಹುಮಾನ ವಿತರಣೆಯ ಬಳಿಕ, ಅಧ್ಯಕ್ಷರ ಭಾಷಣವಾಯಿತು. ಬಳಿಕ ವಿವಿಧ ವಿನೋದಾವಳಿಗಳಾದುವು. ಅಂದು ಪೂರ್ವಾಹ್ನ, ಸರಾಫ್, ಶ್ರೀ ಯು. ಶ್ರೀನಿವಾಸ ರಾಯರು ಧ್ವಜಾರೋಹಣಗೈದರು. ಶ್ರೀ ಬಿ. ದಾಮೋದರ ಭಕ್ತರು ಮಕ್ಕಳಿಗೆ ಸಿಹಿ ತಿಂಡಿ ಹಂಚಿದರು.

ವಾರ್ಷಿಕೋತ್ಸವ

'ಉಡುಪಿ—ಗುಂಡಿಬೈಲು ಕಿರಿಯ ಬುನಾದಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು, ತಾ. 31-1-65ರಲ್ಲು, ಶ್ರೀ ಎಲ್. ವಿ. ಆಚಾರ್ಯ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಬಿ. ಜಯಂತ ರಾಯರು ಸ್ವಾಗತ ಭಾಷಣಗೈದರು. ಶ್ರೀ ಜಿ. ವಾಮನ ನಾಯಕ್ ಅತಿಥಿಗಳನ್ನು ಸ್ವಾಗತಿಸಿ ವರದಿವಾಚನಗೈದರು. ಬಹುಮಾನ ವಿತರಣೆಯ ಬಳಿಕ, ಅಧ್ಯಕ್ಷರ ಭಾಷಣವಾಗಿ ವಿವಿಧ ವಿನೋದಾವಳಿಗಳಾದವು. ಪೂರ್ವಾಹ್ನ, ಶ್ರೀ ಎನ್. ಆರ್. ಎಸ್. ಮಧ್ಯಸ್ಥ ಇವರು ಧ್ವಜಾರೋಹಣಗೈದರು.

ವೃತ್ತಿಪರ ಶಿಕ್ಷಣ ಸಭೆ

ಉಡುಪಿ, ತಾ. 9-2-65 – ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ವೃತ್ತಿಪರ ಶಿಕ್ಷಣ ಸಭೆಯು ಕಾರ್ಕಳ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಸ್. ಆರ್. ಆಚಾರ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿ ಡಾ| ಪ್ರೇಮಲತ ಕೌನ್ಸಲರ್ ಸ್ಟೇಟ್ ಬ್ಯುರೊ ಆಫ್ ಎಜ್ಯುಕೇಶನ್ ಎಂಡ್ ವಕೇಶನಲ್ ಗೈಡೆನ್ಸ್, ಬೆಂಗಳೂರು ಇವರ ಸುತ್ತು ಅಧ್ಯಕ್ಷರ ಪರಿಚಯವನ್ನು ಮುಖ್ಯೋಪಾಧ್ಯಾಯ ಶ್ರೀ ಬಿ. ಎಸ್. ಆಚಾರ್ ಅವರು ಮಾಡಿಕೊಟ್ಟರು. ಡಾ| ಪ್ರೇಮಲತ ಇವರ ವೃತ್ತಿಪರ ಶಿಕ್ಷಣದ ಕುರಿತು ಭಾಷಣ ಮಾಡುತ್ತಾ ಬೇರೆ ಬೇರೆ ಐಚ್ಛಿಕ ವಿಷಯಗಳನ್ನು ಆರಿಸಿಕೊಂಡ ವಿದ್ಯಾರ್ಥಿಗಳಿಗೆ ಸಿಗಬಹುದಾದ ವಿವಿಧ ಉದ್ಯೋಗಗಳ ಕುರಿತು ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ತಮ್ಮ ಅಭಿರುಚಿಗೆ ತಕ್ಕಂತೆ ಐಚ್ಛಿಕ ವಿಷಯವನ್ನು ಆರಿಸಬೇಕೆಂದೂ, ಈ ವಿಷಯವು ಜೀವನ ಸಂಗಾತಿಯನ್ನು ಆರಿಸುವಷ್ಟೇ ಪ್ರಾಮುಖ್ಯವೆಂದೂ ತಿಳಿಸಿದರು. ಶಾಲಾ ವಿದ್ಯಾರ್ಥಿಗಳ ಉತ್ತಮ ಶಿಸ್ತನ್ನು ಅಭಿನಂದಿಸಿದರು. ಸಭೆಯಲ್ಲಿ ಬೇರೆ ಬೇರೆ ಶಾಲೆಗಳ ಮುಖ್ಯೋಪಾಧ್ಯಾಯರು ಭಾಗವಹಿಸಿದ್ದರು. ಅಧ್ಯಕ್ಷರ ಭಾಷಣದ ಬಳಿಕ ಅಧ್ಯಾಪಕ ಶ್ರೀ ಜರ್ನಣ್ಣ ಶೆಟ್ಟರು ಧನ್ಯವಾದ ಅರ್ಪಿಸಿದರು.

ಸಿಂಡಿಕೇಟ್ ಟೋರ್ನಮೆಂಟಿನ ಸಮಾರೋಪ ಮತ್ತು ಡಾ| ಪೈಗಳಿಗೆ ಅಭಿನಂದನಾ ಸಮಾರಂಭ

ಉಡುಪಿಯಲ್ಲಿ ಕೆಲವು ದಿನಗಳಿಂದ ನಡೆಯುತ್ತಿದ್ದ ಸಿಂಡಿಕೇಟ್ ಟೋರ್ನಮೆಂಟಿನ ಸಮಾರೋಪ ಸಮಾರಂಭವು ತಾ. 14ರಂದು ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್‌ನ ವಠಾರದಲ್ಲಿ, ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಇದೇ ಸಂದರ್ಭದಲ್ಲಿ ಪದ್ಮಶ್ರೀ ಡಾ| ಟಿ. ಎಂ. ಎ. ಪೈಗಳನ್ನು ಅಭಿನಂದಿಸಲಾಯಿತು.

ಪ್ರಾರಂಭದಲ್ಲಿ ಶ್ರೀ ಟಿ. ಎ ಪೈಗಳು ಸ್ವಾಗತಿಸಿದರು. ಶ್ರೀಮಾನ್ ಡಾ, ಟಿ. ಎಂ ಎ ಪೈಯವರು ಪಂದ್ಯಾಟಗಳಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣೆಗೈದರು. ಪದ್ಮಶ್ರೀ ಡಾ| ಟಿ ಎಂ. ಎ. ಪೈಯವರಿಗೆ ಹಲವಾರು ಸಂಘ ಸಂಸ್ಥೆಗಳ ವತಿಯಿಂದ ಹಾರಾರ್ಪಣೆ ನಡೆದ ಬಳಿಕ ಶ್ರೀ ಕೆ. ಎಸ್. ಕಾಮತರು ಮಾನ ಪತ್ರವನ್ನೋದಿ ಡಾ| ಪೈಗಳಿಗೆ ಅರ್ಪಿಸಿದರು. ಡಾ| ಪೈಗಳು ಮಾತನಾಡುತ್ತಾ ರಾಷ್ಟ್ರಪ್ರಶಸ್ತಿ ದೊರೆತುದರಿಂದ ಎಕೆಡೆಮಿ ಸಂಸ್ಥೆಗಳಿಗೆ ಸರಕಾರವು ಮನ್ನಣೆಯ ಮುದ್ರೆಯೊತ್ತಿದಂತಾಯಿತೆಂದೂ ಸಂಸ್ಥೆಗಳ ಬೆಳವಣಿಗೆಗೆ–ಕೀರ್ತಿಗೆ ತಮ್ಮೆಲ್ಲರ ಸಹಕಾರವೇ ಕಾರಣವೆಂದು ಹೇಳಿದರು. ಶ್ರೀ ಕುಡ್ವಾರವರು ಮಾತನಾಡುತ್ತಾ ಡಾ॥ ಪೈಗಳ ಅರ್ಹತೆಯನ್ನು ವಿವರಿಸಿದರು.

ಅಂತ್ಯದಲ್ಲಿ ಶ್ರೀ ಕೆ. ಕೆ. ಪೈಯವರು ಧನ್ಯವಾದ ಅರ್ಪಿಸಿದರು.

ದುಃಖಸೂಚಕ ಸಭೆ

ಸುರತ್ಕಲ್ಲಿನ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕೋಲೇಜಿನ ರಿಜಿಸ್ಟ್ರಾರಾದ ಶ್ರೀ ಎಸ್. ಯು. ಪರಶುರಾಮ ನಾಯಕರ ಪತ್ನಿ ಶ್ರೀಮತಿ ಸೀತಾ ಬಾಯಿ ಇವರು ತಾ. 12ನೇ ರಾತ್ರಿ, ನಿಧನರಾದ ಪ್ರಯುಕ್ತ ತಾ. 13ನೇ ಬೆಳಿಗ್ಗೆ ಕೋಲೇಜಿನ ಸಿಬಂದಿ ಮತ್ತು ವಿದ್ಯಾರ್ಥಿಗಳು ಸಭೆ ಸೇರಿ ಸಂತಾಪ ಸೂಚಿಸಿದರು. ಡಾ॥ ಪ್ರಿನ್ಸಿಪಾಲ್ ಎ. ಎಸ್ ಅಡ್ಕೆಯವರು ದುಃಖ ಸೂಚಕ ಠರಾವನ್ನು ಓದಿ ಹೇಳಿದ ಬಳಿಕ ಸಭೆ ಎರಡು ನಿಮಿಷ ಮೌನವಾಚರಿಸಿತು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 9/65.

ಯಚ್. ಲಾಲಚಂದ್ರ ಹೆಗ್ಡೆ ... ವಾದಿ.

ರಾಮ ಭಂಡಾರಿ, ಬೆಳ್ತಂಗಡಿ ತಾಲ್ಲೂಕು, ಬೆಳ್ತಂಗಡಿ ಕಸಬಾದಲ್ಲಿರುವವ ...ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಕೋರ್ಟು ಸಮ್ಮಂಧದ ಮೇರೆಗೆ ತಿಳಿಸುವುದೇನೆಂದರೆ—

ವಾದಿ ನಿಮ್ಮ ಮೇಲೆ ಮಾಡಿದ ವ್ಯಾಜ್ಯವು ತಾ. 26-2-1965ನೇ ದಿವ್ಸ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿಯದೆ. ಆ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ನೀವು ಸ್ವತಹಾ ಯಾ ವಕೀಲರ ಮುಖಾಂತರವಾಗಲೀ ಹಾಜರಾಗಿ ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ತಿಳಿಸುವುದು. ಇಲ್ಲವಾದಲ್ಲಿ ನಿಮ್ಮನ್ನು ಏಕಪಕ್ಷ ಎಂತ ಮಾಡಿ ಮುಂದಿನ ತನಿಖೆಯಿಂದ ತೀರ್ಮಾನಿಸಲಾಗುವುದು.

N. J. Kadamba,
Advocate for Pliff,

ಬೆಳ್ತಂಗಡಿ, 11—2—1965.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

READ & ADVERTISE IN

NAVAYUGA WEEKLY

ಅವರೂ ಕನ್ನಡಬಲ್ಲರು

ಭಾರತವಿದ್ಯಾವಿದ—ಮೆರ್ವಾರ್ತ್

೭

೧೭೨೪ರಲ್ಲಿ ರಶಿಯನ್ ವಿಜ್ಞಾನ ಅಕಾಡೆಮಿಯನ್ನು ಸ್ಥಾಪಿಸಿದ ತರುವಾಯ ಪ್ರಾಚ್ಯವಿದ್ಯೆಯ ಅಧ್ಯಯನ ಕಾರ್ಯಗಳು ವಿಕಾಸಗೊಳ್ಳತೊಡಗಿದುವು. ಅಕಾಡೆಮಿಯ ಪುಸ್ತಕಾಲಯದಲ್ಲಿ ಆಗ ಅಪೂರ್ವ ತಮಿಳು ಪಾಂಡುಲಿಪಿಗಳ ಸಂಗ್ರಹವಾಗ ಲಾರಂಭವಾಯಿತು. ಪ್ರಥಮ ರಶಿಯನ್ ಭಾರತ ವಿದ್ಯಾವಿದರು ಈ ಪಾಂಡುಲಿಪಿಗಳನ್ನು ಪರಿಪೂರ್ಣವಾಗಿ ಜಾಗರೂಕತೆಯಿಂದ ಪರಿಶೀಲಿಸುತ್ತಿದ್ದರೆಂದು ಟಿಪ್ಪಣಿಗಳಿಂದ ವ್ಯಕ್ತಪಡುತ್ತದೆ.

ಸೋವಿಯತ್ ಕಾಲಾವಧಿಯಲ್ಲಿ ಭಾರತದ ವಿದ್ಯೆಯು ಕ್ರಿಯಾಶೀಲ, ತೀವ್ರ ವಿಕಾಸ ಕ್ರಮದಲ್ಲಿ ಈ ಪ್ರಾಚ್ಯದೇಶೀಯ ಅಧ್ಯಯನಗಳನ್ನು ಕೂಡ ವ್ಯವಸ್ಥೆಗೊಳಿಸಿ, ಗಣನೀಯ ಪ್ರಮಾಣದಲ್ಲಿ ವಿಸ್ತರಿಸಿದ್ದಾರೆ. ಯುವ ಮಾನವ ಕುಲ ವಿವರಣ ಶಾಸ್ತ್ರಜ್ಞರೂ, ಸಾಹಿತ್ಯವಿದರೂ, ಭಾಷಾವಿದರೂ ಆದ ಆ ಮೆರ್ವಾರ್ತರವರು ದ್ರಾವಿಡ — ವಿಜ್ಞಾನ ಶಾಖೆಯ ಸ್ಥಾಪಕರೂ, ಅತ್ಯಂತ ಪ್ರಮುಖ ತಜ್ಞರೂ ಆಗಿದ್ದರೂ. ೧೯೧೪—೧೯೧೮ ಮೆರ್ವಾರ್ತ್ ಪತಿಪತ್ನಿಯರು ದಕ್ಷಿಣ ಏಶಿಯಕ್ಕೆ ಭೇಟಿಕೊಟ್ಟಾಗ, ದಕ್ಷಿಣ ಭಾರತದಲ್ಲಿಯೂ, ಸಿಂಹಳ ದ್ವೀಪದಲ್ಲಿಯೂ ಅವರು ಬಹು ಕಾಲ ಇದ್ದು ಜನ ಜೀವನವನ್ನೂ ರಾಷ್ಟ್ರೀಯ ವಿಶೇಷತೆಗಳನ್ನೂ, ನಡೆನುಡಿಗಳನ್ನೂ, ಸಾಹಿತ್ಯವನ್ನೂ ಅಭ್ಯಸಿಸಿದರು. ಭಾರತದ ಇತಿಹಾಸ, ಸಂಸ್ಕೃತಿ ಕುರಿತು ಅವರು ಆಧಾರಾಂಶಗಳನ್ನು ಸಂಗ್ರಹಿಸಿದರು. ಸ್ಥಳೀಯ ವಸ್ತುಸಂಗ್ರಹಾಲಯಗಳ ಪರಿಶೀಲನೆಗೂ, ಪ್ರದರ್ಶನಗಳ ಸಂದರ್ಶನಕ್ಕೂ ಅವರು ವಿಶೇಷ ಸಮಯವನ್ನು ವಿನಿಯೋಗಿಸಲಿಟ್ಟರು. ೧೯೨೭ರಲ್ಲಿ "೧೯೧೪—೧೮ರಲ್ಲಿ ಭಾರತಕ್ಕೆ ನೀಡಿದ ಸಂಶೋಧನ ಯಾತ್ರೆ ಕುರಿತು ವರದಿ" ಎಂಬ ಕೃತಿಯನ್ನು ಅವರು ಪ್ರಕಟಿಸಿದರು. ಅದೇ ಅವಧಿಯಲ್ಲಿ ಮೆರ್ವಾರ್ತರು ತಮ್ಮ ಭಾರತ ಸಂದರ್ಶನಾಧಾರದ ಮೇಲೆ ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿದರು. 'ಭಾರತೀಯ ಜನ ಕುಶಲಕಸ್ತ್ರದ ನಾದನ ಸಮಸ್ಯೆಗಳು; ಭಾರತೀಯ ಸಂಸ್ಕೃತಿಯ ಕೈಪಿಡಿ'—ಇವು ಉಲ್ಲೇಖನೀಯವಾಗಿವೆ. ಇದಲ್ಲದೆ ಭಾರತೀಯ ಸಂಸ್ಕೃತಿಯಲ್ಲಿ ವಸ್ತು ಸಂಸ್ಕೃತಿಯಲ್ಲಿ ವಸ್ತುಸಂಗ್ರಹಾಲಯಗಳ ಪಾತ್ರ ಭಾರತದಲ್ಲಿ ವಸ್ತು ಸಂಗ್ರಹಾಲಯಗಳ ಸಂಘಟನೆ— ಈ ಸಮಸ್ಯೆಗಳಿಗೆ ಅವರು ವಿಶೇಷ ಮಹತ್ವವನ್ನು ನೀಡಿದರು.

ಶಾಸ್ತ್ರೀಯ ಮತ್ತು ಜಾನಪದ ನಾಟಕ ರಂಗದಲ್ಲಿಯೂ ಅವರು ವಿಶೇಷಾಸಕ್ತಿ ವಹಿಸಿದರು. ೧೯೨೭ರಲ್ಲಿ ಅವರು 'ಪ್ರಾಚೀನ ಭಾರತದ ಶಾಸ್ತ್ರೀಯ ನಾಟಕದಲ್ಲಿ ಜಾನಪದ ಅಂಶಗಳು' ಎಂಬ ಶೀರ್ಷಿಕೆಯ ಸ್ವಾರಸ್ಯಕರ ಲೇಖನವನ್ನು ಬರೆದರು. ಆ ತರುವಾಯ ಅವರು 'ಮಲಬಾರಿನ ಜಾನಪದ ನಾಟಕಗಳಲ್ಲಿ ಶಾಕುಂತಲ ಕಥಾವಸ್ತು' ಎಂಬ ಇನ್ನೊಂದು ಲೇಖನವನ್ನು ಬರೆದರು.

ತರುವಾಯ ಮೆರ್ವಾರ್ತ್‌ರ ಭಾರತೀಯ ಮತ್ತು ದ್ರಾವಿಡ ನಾಟಕ ರಂಗದ ಸಮಸ್ಯೆಗಳನ್ನು ಪರಿಶೀಲಿಸಿದರು. ೧೯೩೬ರಲ್ಲಿ ಪ್ರಕಟವಾದ 'ಪ್ರಾಚ್ಯ ನಾಟಕ ರಂಗ' ಎಂಬ ಕೃತಿಯಲ್ಲಿ 'ಭಾರತೀಯ ಜಾನಪದ ನಾಟ್ಯ ರಂಗ' ಎಂಬ ಇಡೀ ವಿಭಾಗವು ಇದಕ್ಕೆ ಮೀಸಲಾಗಿದೆ ಇದು ಅಮೂಲ್ಯ ಕೃತಿಯಾಗಿದೆ.

ಮೆರ್ವಾರ್ತ್‌ರು ವಿವಿಧ ಪ್ರತಿಭೆಯ ಅಸಾಧಾರಣ ವಿದ್ವಾಂಸರು ಈಗಿನ ಅನೇಕ ಜನ ಸೋವಿಯತ್ ದ್ರಾವಿಡ ಶಾಸ್ತ್ರಜ್ಞರಿಗೆ ಅವರ ಕೃತಿಗಳು ಅಮೂಲ್ಯ ಆಧಾರಗಳಾಗಿವೆ. ಅವರು ದ್ರಾವಿಡ ಭಾಷಾ—ಸಾಹಿತ್ಯಾಧ್ಯಯನದ ತರುವಾಯ ದಕ್ಷಿಣ ಭಾರತದ ನಾಟ್ಯ ರಂಗವನ್ನೂ ಇತರ ಸಂಸ್ಕೃತಿ ಸಮಸ್ಯೆಗಳನ್ನೂ ಪರಿಶೀಲಿಸತೊಡಗಿದರು. ತರುವಾಯ ಅವರು ತಮಿಳು, ಮಲೆಯಾಳಂ, ತೆಲಗು ಮತ್ತು ಕನ್ನಡ ಭಾಷೆಗಳ ಗಾಢ ವ್ಯಾಸಂಗವನ್ನು ಮುಂದುವರಿಸಿದರು. 'ದ್ರಾವಿಡ ಭಾಷೆಗಳಲ್ಲಿ ಅಂಕಿರಿಕ ಶಬ್ದ ಸ್ಥಾಯಿಗಳ ಇತಿಹಾಸ' ಎಂಬ ಹೆಸರಿನಲ್ಲಿ ಅವರು ಬರೆದ ಕೃತಿಗೆ ದ್ರಾವಿಡ ವಿಜ್ಞಾನ ಸಂಶೋಧನೆಯ ಕೃತಿಗಳಲ್ಲಿ ಪ್ರಮುಖ ಸ್ಥಾನವಿದೆ. ಅದನ್ನು ಮೊದಲು ಪ್ರಕಟಿಸಲಾಯಿತು. ದ್ರಾವಿಡ ಭಾಷೆಗಳ ವ್ಯಾಕರಣ, ಶಬ್ದ ಸಂಗ್ರಹಗಳಿಗೆ ಸಂಬಂಧಿಸಿದ ವಿಭಿನ್ನ ವಿಷಯಗಳನ್ನು ಅವರು ಅಭ್ಯಸಿಸಿದರು. ಅವರ ಸಂಶೋಧನೆಯ ಕೃತಿಗಳು ತುಂಬ ಸ್ವಾರಸ್ಯಕರವಾಗಿವೆ. "ಏಕೆಂದರೆ, ಅವು ಹೊಸ ವಿಷಯಗಳನ್ನು ಸದಾ ಆಧರಿಸಿಕೊಂಡಿರುತ್ತವೆ. ವಿವಾದಾತ್ಮಕ ಸಮಸ್ಯೆಗಳ ಬಗ್ಗೆ ಅವರು ದಿಟ್ಟತನದ ದೃಷ್ಟಿಥವನ್ನು ವಹಿಸುತ್ತಾರೆ 'ತಮಿಳು ಮಾತಾಡಲಾಪದ ಭಾಷೆಯ ವ್ಯಾಕರಣ" ಎಂಬ ಕೃತಿಯನ್ನು ೧೯೩೪ರಲ್ಲಿ ಲೆನಿನ್‌ಗ್ರಾಡಿನ ಪ್ರಾಚ್ಯ ವಿದ್ಯಾ ಸಂಸ್ಥೆಯು ಪ್ರಕಟಿಸಿತು. ಇದು ಇಂತಹ ಕೃತಿಗಳ ಬಗ್ಗೆ ಅತ್ಯುತ್ತಮ ಉದಾಹರಣೆಯಾಗಿವೆ.

ದ್ರಾವಿಡ ಭಾಷೆಗಳ ಮಾತೆಯನ್ನು ಮೊದಲು ರಶಿಯನ್ ಭಾಷೆಗೆ ಅನುವಾದಿಸಿದವರು ಅಮೆರ್ವಾರ್ತವರೇ. ೧೯೩೮ರಲ್ಲಿ ಅವರು ಅನುವಾದಿಸಿದ್ದ 'ಪರಮಾರ್ಥ ಗುರು ಮತ್ತು ಅವರ ಐವರು ಶಿಷ್ಯಂದಿರು ಎಂಬ ತಮಿಳು ಕೃತಿಯನ್ನು ವಿದೇಶ ಸಾಹಿತ್ಯ ಮಾರ್ಪಿಕದಲ್ಲಿ ಪ್ರಕಟಿಸಲಾಯಿತು.

ಮೆರ್ವಾರ್ತರ ಕೃತಿಗಳು ಸೋವಿಯತ್ ದ್ರಾವಿಡೀಯ ವ್ಯಾಸಂಗಗಳಿಗೆ ಮುಖ್ಯ ಗಣಿಕೆಯಾಗಿದೆ. ಸೋವಿಯತ್ ಭಾರತ ವಿದ್ಯಾವಿದರ ಸಂಖ್ಯೆ ಈಗ ದಿನೇ ದಿನೇ ಹೆಚ್ಚುತ್ತಿದೆ. ಭಾರತ ವಿದ್ಯಾವಿದರ ಭಾವೀ ಪರಂಪರೆಗಳಿಗೆ ಈ ಕೃತಿಗಳು ಅತ್ಯಂತ ಉಪಯುಕ್ತವಾಗಿರುವುವು;

ಹನಿಗತೆ

ನಾಯಿಯೂ ಅದರ ಯಜಮಾನನೂ

ನಾಯಿಯು ಒದ್ದಾಡುತ್ತಾ ಅಸಹ್ಯ ವೇದನೆಯಿಂದ ಕೂಗುತಿತ್ತು. ಅದರ ಯಜಮಾನನು ಹತ್ತಿರ ನಿಂತು ಅಳುತ್ತಿದ್ದನು. ಕಂಬನಿ ಧಾರಾಕಾರವಾಗಿ ಹರಿಯುತ್ತಿತ್ತು.

"ಏಕೆ ಹೀಗೆ ಅಳುತ್ತಿರುವಿರಿ?" ದಾರಿಹೋಕನೊಬ್ಬನು ಯಜಮಾನನನ್ನು ಪ್ರಶ್ನಿಸಿದನು.

"ಇದು ನನ್ನ ಅತಿ ಬುದ್ಧಿವಂತ ನಾಯಿ. ಅದು ಈಗ ಸಾಯಲು ಬಿದ್ದಿದೆ. ಹಗಲು ನನ್ನ ಬೇಟೆಯ ಸಂಗಾತಿಯಾಗಿದ್ದರೆ ರಾತ್ರೆ ಅದು ಪ್ರಾಮಾಣಿಕತೆಯಿಂದ ನನ್ನ ಮನೆ ಕಾಯುತ್ತಿತ್ತು. ಹಾ! ನನ್ನ ಪ್ರಾಮಾಣಿಕ ನಾಯಿ ಸಾಯುತ್ತಿದೆ" ಎಂದು ಆತನು ಇನ್ನಷ್ಟು ಕಣ್ಣೀರು ಸುರಿಸಿದನು.

"ನಾಯಿಗೆ ಏನು ಕಾಯಿಲೆ? ಏನಾದರೂ ಗಾಯವಾಗಿದೆಯೇ?"

"ಇಲ್ಲ; ಹೊಟ್ಟೆಗಿಲ್ಲದೆ ಉಪವಾಸದಿಂದ ನರಳುತ್ತಿದೆ" ಯಜಮಾನನು ಕಣ್ಣೀರು ಸುರಿಸುತ್ತಾ ಹೇಳಿದ.

"ಹಾಗಾದರೆ ಸಹನೆಯಿಂದಿರಿ ಅದರ ಹೊಟ್ಟೆಗೆ ಹಾಕಲಾರದಷ್ಟು ಬಡತನವು ನಿಮ್ಮ ಪಾಲಿಗಿರುವಾಗ ನೀವೇನು ಮಾಡಬಲ್ಲಿರಿ? ಪಾಪ! ಎಂಥಾ ಕರುಣಾಮಯ ಚಿತ್ರ! ಅದೇ ನಿಮ್ಮ ಕೈಯಲ್ಲಿರುವ ಗಂಟೇನು?'' ಪ್ರಯಾಣಿಕ ಪ್ರಶ್ನಿಸಿದ.

"ಇದು ರೊಟ್ಟಿ. ಕಳೆದ ರಾತ್ರಿಯ ಭೋಜನದ ನಂತರ ಉಳಿಸಿಕೊಂಡ ರೊಟ್ಟಿಯ ಚೂರುಗಳವು. ನನ್ನ ಶರೀರ ರಕ್ಷಣೆಗಾಗಿ ಇದನ್ನು ನನ್ನೊಡನೆ ತೆಗೆದುಕೊಂಡಿದ್ದೇನೆ' ಯಜಮಾನನು ನುಡಿದ.

"ಆ ರೊಟ್ಟಿಯಿಂದ ಕೆಲವು ಚೂರುಗಳನ್ನು ನಿಮ್ಮ ಪ್ರಾಮಾಣಿಕ ನಾಯಿಗೆ ಕೊಡಬಾರದೇಕೆ? ಅದು ಹಂಗಾಲಾಗಿ ಚಡಪಡಿಸುತ್ತಿದೆ. ಸ್ವಲ್ಪ ಕೊಡಲಾಗದೇ?' ಪ್ರಯಾಣಿಕ ಪ್ರಶ್ನಿಸಿದ

"ನಾಯಿಯ ಮೇಲಿನ ನನ್ನ ಪ್ರೀತಿ ಮತ್ತು ಧಾರಾಳತನವು ಆ ಮಟ್ಟಕ್ಕೆ ಮುಟ್ಟಿಲ್ಲ. ಹಣವಿಲ್ಲದೆ ರೊಟ್ಟಿಯ ತುಂಡು ಎಲ್ಲಿಯೂ ದೊರೆಯದು. ಆದರೆ ಕಣ್ಣೀರನ್ನು ಪರಮಾತ್ಮ ದರ್ಯಾಫ್ತು ಒದಗಿಸಿದ್ದಾನೆ. ಆ ಕಣ್ಣೀರಿನ ಕಾಣಿಕೆಯನ್ನು ನಾನು ನನ್ನ ನಂಬಿಗಸ್ಥ ನಾಯಿಗೆ ಅರ್ಪಿಸುತ್ತಿದ್ದೇನೆ.''

"ಹೃದಯದ ಹಿನ್ನೆಲೆಯ ವಿಚಿತವಿಲ್ಲದ ಸಾಧ್ಯಯ, ಕಂಣಿಯಿಲ್ಲದ ಕಂಬನಿ ಒರೇ ನೀರು!"

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ ಜೈ ಹಿಂದ್ ಹಂಚುಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ಸಂಗೀತ ಪ್ರಿಯೆ

(ಎರಡನೇ ಪುಟದಿಂದ)

"ನಿಮ್ಮ ಹಾಡುಗಾರಿಕೆ ಇಂದು ಚೆನ್ನಾಗಿತ್ತು" ಎಂದು ಪ್ರಶಂಸಿಸಿದರೆ.

"ಒಮ್ಮೊಮ್ಮೆ ಮನಸ್ಸು ಬಂದಾಗ ಚೆನ್ನಾಗಿ ಹಾಡಲಾಗುತ್ತದೆ. ಇಲ್ಲವಾದರೆ ಸಾಧ್ಯವಾಗುವುದಿಲ್ಲ" ಎನ್ನುವರು.

ಸಂಗೀತ ಟೀಚರು, ತಮ್ಮ ವೈಯುಕ್ತಿಕ ವಿಷಯ ಹೇಳುತ್ತಿರಲೇ ಇಲ್ಲ. ಅವರಿಗೆ ಮಕ್ಕಳಿಲ್ಲ ಎಂದು ಮಾತ್ರ ತಿಳಿದಿತ್ತು.

ತಪ್ಪದೆ ಬರುತಿದ್ದ ಟೀಚರು ಒಂದು ವಾರ ಎರಡು ವಾರ, ಮೂರು ವಾರಗಳ ತನಕ ಬಾರದೆ ಇದ್ದಾಗ ನಮಗೆಲ್ಲಾ ಕಳವಳವಾಯಿತು. ಆಕಸ್ಮಿಕವಾಗಿ ಅಸೌಖ್ಯವಾಯಿತೆ? ಎಂಬ ಸಂದೇಹ ಬಂತು.

ಮೂರು ವಾರಗಳ ಬಳಿಕ ಅವರು ಒಂದು ಸಂಜೆ ಬಂದರು, ಮಕ್ಕಳ ಸಂಗೀತ ಟೀಚರ್ ಬಂದರು ಎಂದು ಸಂತೋಷದಿಂದ ನನಗೆ ಸುದ್ದಿ ಮುಟ್ಟಿಸಿದರು.

ನಾನು ಹೊರ ಬಂದು, 'ಏನು ಟೀಚರ್, ಇಷ್ಟು ದಿವಸ ಬರಲಿಲ್ಲ?' ಎಂದು ವಿಚಾರಿಸಿದೆ.

ಹಿರಿಯ ಮಗಳು ಮಾಲಿನಿ, "ನಮಗೆ ನೀವು ಬಾರದೆ ಇದ್ದಾಗ ತುಂಬಾ ಬೇಸರವಾಯಿತು" ಎಂದಳು.

ಸಂಗೀತ ಟೀಚರು, "ನಿಮಗೆ ಹೇಳಿ ಹೋಗಲು ಸಾಧ್ಯವಾಗಲಿಲ್ಲ. ನನ್ನ ತಂದೆಯವರಿಗೆ ಅಸ್ವಸ್ಥ ಎಂದು ತಾರು ಬಂತು. ತಕ್ಷಣ ಹೋದರೂ ಅವರನ್ನು ನೋಡಲಾಗಲಿಲ್ಲ." ಎಂದು ಕಂಬನಿ ತುಂಬಿ ಹೇಳಿದರು.

ಆ ದಿನ ಹೆಚ್ಚು ಹೊತ್ತು ಪಾಠ ನಡೆಯಲಿಲ್ಲ. ಮಕ್ಕಳೇ ಒಂದೆರಡು ಗೀತೆ ವರ್ಣ ಹಾಡಿದರು, ಮೌನವಾಗಿ ಅವರು ಸಂಗೀತ ಆಲಿಸುತಿದ್ದರು.

ತಂದೆಯ ಮರಣ, ಅವರಿಗೆ ಇದ್ದ ಒಂದು ಆಸರೆಯನ್ನು ಕಡಿದು ಹಾಕಿತ್ತು. ಮಕ್ಕಳಿಲ್ಲದ ಬಾಳ್ವೆ. ಬಡತನದ ಸಮಸ್ಯೆ. ಹಿಂದೆ ಶ್ರೀಮಂತಿಕೆಯಲ್ಲಿ ಇದ್ದ ನೆನಪು, ಪತಿ ಉದ್ಯೋಗದಲ್ಲಿದ್ದರೂ, ದಾಂಪತ್ಯ ಅನ್ಯೋನ್ಯವಾಗಿಲ್ಲದ ಪರಿಣಾಮ ಜೀವನಕ್ಕಾಗಿ ದುಡಿಯಬೇಕಾದ ಸನ್ನಿವೇಶ. ಮುಖ ತೀರಾ ನಿರ್ವಿಣ್ಣವಾಗಿತ್ತು.

ಸಂಗೀತ ಆಲಿಸಿ ತನ್ನ ದುಃಖವನ್ನು ಮರೆಯುತಿದ್ದರು.

'ಬರ್‍ತೀ ನಮ್ಮ ಬರ್‍ತೀನೆ ಮಕ್ಕಳೇ' ಎಂದು ಹೊರಟು ಹೋದರು.

ಸಂಗೀತ ಟೀಚರು, ಹೋದ ಬಳಿಕ,

'ಪಾಪ. ಎಂದು ಮಕ್ಕಳು ಉದ್ಗಾರ ಸೂಸಿದರು.

ಮಕ್ಕಳು ಪಾರ ಮುಗಿದ ಬಳಿಕ ಅಭ್ಯಾಸ ಮಾಡುತ್ತಿರಲಿಲ್ಲ. ಅವರೆ ಅಂದು, ಶ್ರುತಿ ಪೆಟ್ಟಿಗೆ ಬಳಿ ಕುಳಿತು, ಕೀರ್ತನೆಯೊಂದನ್ನು ಹಾಡತೊಡಗಿದರು.

ಸಂಗೀತ ಟೀಚರು ಸಂಗೀತದಿಂದ ಸಮಾಧಾನ ತಂದುಕೊಳ್ಳುವುದು ಮಕ್ಕಳಿಗೆ ಯಾರೂ ಹೇಳದೆ ಅರಿವಾಗಿತ್ತು. ಮನ ಮುಟ್ಟಿ ಹೋಗಿತ್ತು.

NAVAYUGA 18–2–1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೮–೨–೧೯೬೫ರಿಂದ ೨೪–೨–೧೯೬೫ರ ವರೆಗೆ

೧. ಮೇಷ

ಜನ್ಮಸ್ಥ ಬೃಹಸ್ಪತಿಯೋರ್ವನನ್ನು ಬಿಡು ಇತರ ಎಲ್ಲಾ ಗ್ರಹರೂ ನಿಮಗಿಂದು ಅನುಕೂಲವಾಗಿರುವುದರಿಂದ ನಿಮ್ಮ ಎಲ್ಲಾ ಬಯಕೆಗಳೂ ನಿರ್ವಿಘ್ನದಿಂದ ನೆರವೇರಲಿವೆ. ಎಂತಹ ದುಃಸಾಧ್ಯವಾದ ಕಾರ್ಯವೂ ನಿಮಗಿಂದು ತೃಣಸಮವೆನಿಸೀತು. ಪರಿಶ್ರಮಕ್ಕಿಂತ ದ್ವಿಗುಣವಾದ ಫಲವನ್ನಿಂದು ಪಡೆವಿರಿ. ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ರಾಜಕೀಯದಲ್ಲಿ ಕೀರ್ತಿ ವಿಷಯಗಳು ಲಭಿಸುವವು. ವಾರಾದಿಯ 5 ದಿನಗಳು ತುಂಬ ಅನುಕೂಲವಾಗಿವೆ

೨ ವೃಷಭ

ಆರಕ್ಕೆ ಏಣ್ಣದು ಮೂರಕ್ಕೆ ಕುಂದೆಂಬಂತೆ ನಿಮ್ಮ ಪರಿಸ್ಥಿತಿಯಲ್ಲೇನೂ ಬದಲಾವಣೆ ಕಾಣಿಸುವದಿಲ್ಲವು. ಪ್ರಯತ್ನಕ್ಕೆ ತಕ್ಕ ಫಲ ಸಿಕ್ಕಿದರೂ ವಾರಾಂತ್ಯದಲ್ಲಿ ಕೈ ಬರಿದಾಗಿಯೇ ಉಳಿವದು. ಮಕ್ಕಳ ಆರೋಗ್ಯಕ್ಕೆ ಧಕ್ಕೆ ತಗಲಲಿದೆ. ಆಪ್ತಬಂಧುಗಳ ವಿಯೋಗವುಂಟಾದೀತು. ಎಷ್ಟೇ ಮಿತಭಾಷಿಯಾಗಿದ್ದರೂ ವಾಕ್ಕಲಹವು ತಪ್ಪಲಾರದು. ಪಿತ್ಥ ದೋಷದಿಂದ ಆರೋಗ್ಯಕ್ಕೂ ಹಾನಿಯಿದೆ. ವಾರಾಂತ್ಯದ 5 ದಿನಗಳು ಸ್ವಲ್ಪ ಉತ್ತಮವಿವೆ.

೩. ಮಿಥುನ

ನಿಮ್ಮ ಭಾಗ್ಯಸ್ಥಾನದಲ್ಲಿ ನಾಲ್ವರು ಗ್ರಹರು ಸೇರಿದ್ದರೂ ಲಾಭದಲ್ಲಿ ಬೃಹಸ್ಪತಿಯಿದ್ದರೂ ನಿಮಗಿಂದು ಹಣದ ತಗಾದೆ ತಪ್ಪಿದ್ದಲ್ಲ. ಆದಾಯವೆಷ್ಟು ಅಧಿಕವಾಗಿರುವದೋ ಅಂತೆಯೇ ವ್ಯಯವೂ ಕೂಡ ಹೆಚ್ಚಲಿದೆ. ಕುಟುಂಬ ವರಿಷ್ಠರ ಪ್ರಯೋಜನಕ್ಕೆ ಸಿಲುಕಿ ನಷ್ಟ ಕಷ್ಟಗಳಿಗೆರವಾಗುವಿರಿ. ಆದರೂ ಸನ್ಮಿತ್ರರೂ ಬಂಧುಗಳೂ ನಿಮ್ಮನ್ನು ಆದರಿಸಲಿರುವುದರಿಂದ ದಿನಯಾಪನೆಯು ಸುಗಮವಾಗುವದು. ತಾ. 23, 24ರಲ್ಲಿ ಒಳ್ಳೆಯ ಲಾಭವಿದೆ.

೪. ಕರ್ಕಟ

ಹಿಚ್ಚಿನ ನಿಮ್ಮ ತಾಪತ್ರಯಗಳಿಂದು ದೂರವಾಗಲಿವೆ. ನಿಮ್ಮ ಪ್ರಯತ್ನವು ಸಫಲವಾಗುವುದರಿಂದ ಹಣದ ತೊಂದರೆಯಿಂದ ಮುಕ್ತರಾಗುವಿರಿ. ವ್ಯಾಪಾರಿಗಳಿಗೂ ನೌಕರಿ ಜನರಿಗೂ ನಿರೀಕ್ಷಿಸಿದ ಫಲವು ಲಭಿಸಲಿದೆ. ಎಷ್ಟೇ ವಿಘ್ನ ವಿದ್ರೋಹಗಳು ಬಂದರೂ ಹಿಡಿದ ಕಾರ್ಯವನ್ನು ಕೊನೆಗಾಣಿಸಿಯೇ ತೀರುವಿರಿ. ವಾತಪಿತ್ಥ ದೋಷದಿಂದ ಆರೋಗ್ಯಕ್ಕೆ ಹಾನಿಯುಂಟಾದೀತು. ವಾರಾದಿಯ 2 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಸಿದ್ಧಿಸಲಿವೆ.

೫. ಸಿಂಹ

ದುರ್ವಿಧಿಯು ನಿಮ್ಮನ್ನು ವಿಶೇಷವಾಗಿ ಕಾಡಲಿದೆ ಬೃಹಸ್ಪತಿಯೋರ್ವನನ್ನು ಬಿಡು ಇತರ ಎಲ್ಲಾ ಗ್ರಹರ ಮುನಿಸಿಗೆ ಗುರಿಯಾದ ನಿಮಗೆ ಸಿಕ್ಕಸಿಕ್ಕವರ ಕೂಡೆ ವಾಕ್ಕಲಹವಾದೀತು. ತಂದೆಮಕ್ಕಳೊಳು ಗಂಡಹೆಂಡಿರೊಳು ಪರಸ್ಪರ ವೈಮನಸ್ಸುಂಟಾಗಲಿದೆ. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟವಾಗುವದು. ಅಧಿಕಾರಿ ವರ್ಗದವರ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನಚ್ಯುತಿಯು ಸಂಭವವು ಶಕ್ಯವಿದೆ. ತಾ. 20, 21, 22 ಈ ದಿನಗಳು ಉಳಿದ ದಿನಗಳಿಗಿಂತ ಲೇಸು.

೬. ಕನ್ಯಾ

ಸಾಂಸಾರಿಕ ತಾಪತ್ರಯಗಳಿಂದ ನೀವಿಂದು ಮುಕ್ತರಾಗಲಿರುವಿರಿ. ಶ್ರಮಸಹಿಷ್ಣುಗಳಾದ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವು ಲಭಿಸುವುದರಿಂದ ದಿನಯಾಪನೆಯು ಸುಗಮವಾದೀತು. ಆರ್ಥಿಕ ಬಿಕ್ಕಟ್ಟು ಕಾಣಿಸಲೊಲ್ಲದು. ಆದರೆ ಕಫ ಪಿತ್ಥ ದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆ ತಗಲಲಿದೆ. ವಾಹನಾದಿಗಳಲ್ಲಿನ ಪ್ರವಾಸಗಳನ್ನು ಸಧ್ಯ ಬಹಿಷ್ಕರಿಸಿರಿ. ಮನೋರೋಗಕ್ಕೆ ಗುರಿಯಾದ ನಿಮಗೆ ತಾ. 18, 19, 23, 24 ಈ ದಿನಗಳು ಸ್ವಲ್ಪ ಉತ್ತಮವಾಗಿ ಕಾಣಲಿವೆ.

೭. ತುಲಾ

ಆರ್ಥಿಕ ದುರವಸ್ಥೆ ಗೃಹತಾಪತ್ರಯಗಳಿಂದ ಪೀಡಿತರಾದ ನಿಮಗೆ ಇಂದಿನ ದಿನಗಳು ಹಿಂದಿಗಿಂತಲೂ ಕಷ್ಟವೆನಿಸುವವು. ಜನತೆಯ ಬೆಂಬಲವು ಚೆನ್ನಾಗಿದ್ದರೂ ಗೃಹಕೃತ್ಯದಲ್ಲಿನ ಅವ್ಯವಸ್ಥೆಯು ನಿಮ್ಮ ಮನಸ್ಸಿಗೆ ನೆಮ್ಮದಿಯನ್ನೀಯಲಾರದು. ಅನಿರೀಕ್ಷಿತ ಪ್ರವಾಸದ ಯೋಗವಿದೆ. ಹೆಂಡತಿ ಮಕ್ಕಳ ಆರೋಗ್ಯದತ್ತ ಹೆಚ್ಚಿನ ಗಮನ ಕೊಡಿರಿ. ರಾಜಕೀಯ ರಂಗಕ್ಕಿಂದು ಪ್ರವೇಶಿಸುವುದುಚಿತವಲ್ಲ. ತಾ. 20, 21, 22 ಈ ದಿನಗಳು ಇದ್ದುದರಲ್ಲುತ್ತಮವೆನಿಸುವವು.

೮. ವೃಶ್ಚಿಕ

ಬಹ್ವಂಶ ನಿಮ್ಮ ತಾಪತ್ರಯಗಳಿಂದು ದೂರವಾಗಲಿವೆ. ಜನತೆಯ ಸಹಕಾರವಿಲ್ಲವಾದರೂ ಸ್ವಯಂಶಕ್ತರಾದ ನೀವು ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಕೈಬಿಡಲಾರಿರಿ. ನಿರೀಕ್ಷಿಸಿದ ಗುರಿಯನ್ನು ಸೇರುವಿರಿ. ಖರ್ಚಿಗೆ ತಕ್ಕ ಆಯವೂ ಇರುವುದರಿಂದ ಹಣದ ಅಡಚಣೆಯುಂಟಾಗದು. ಗೃಹತಾಪತ್ರಯದಿಂದ ಮುಕ್ತರಾದ ನಿಮಗೆ ನೌಕರಿ ವ್ಯಾಪಾರಾದಿಗಳಲ್ಲಿ ಒಳ್ಳೆಯ ಫಲ ಲಭಿಸಿದೆ. ತಾ. 18, 19, 23, 24 ಈ ದಿನಗಳಲ್ಲಿ ಧನಲಾಭ, ಗೃಹಸುಖ, ಮೃಷ್ಟಾನ್ನ ಭೋಜನಗಳು ಲಭಿಸಲಿವೆ.

೯. ಧನು

ದೈವಬಲ ಸಂಪನ್ನರಾದ ನಿಮ್ಮ ಪೌರುಷಕ್ಕಿಂದು ಸುಸಂದರ್ಭಯಿರುವದು. ಯಾವ ಕಾರ್ಯವೂ ಇಂದು ನಿಮಗೆ ಅಶಕ್ಯವೆನಿಸದು. ಪ್ರತಿಯೊಂದು ಉದ್ಯಮದಲ್ಲೂ ನಿರೀಕ್ಷೆಗಿಂತಲೂ ಅಧಿಕವಾದ ಫಲವು ನಿರ್ವಿಘ್ನ ಅನಾಯಾಸದಿಂದ ಲಭಿಸಲಿದೆ. ಯಾವ ಭಾಗದಲ್ಲೂ ಕುಂದುಕೊರತೆಗಳಿಲ್ಲದ ನಿಮಗೆ ದಿನಗಳೆದುದೇ ತಿಳಿಯಲೊಲ್ಲದು. ವಾರಾದಿಯ 6 ದಿನಗಳಲ್ಲಿ ನಿಮ್ಮ ಸಕಲ ಅಭೀಷ್ಟಗಳೂ ಪರಿಪೂರ್ಣವಾಗಲಿವೆ.

೧೦. ಮಕರ

ಕಳೆದ ವಾರಕ್ಕಿಂತ ಈ ದಿನಗಳು ಸ್ವಲ್ಪ ಉತ್ತಮವೆನಿಸುವವು. ಪರಿಶ್ರಮಕ್ಕೆ ತಕ್ಕುದಾದ ಫಲವನ್ನು ಪಡೆವಿರಾದರೂ ಅಧಿಕವಾದ ಖರ್ಚುಗಳು ನಿಮ್ಮನ್ನು ರಿಕ್ತಹಸ್ತರನ್ನಾಗಿ ಮಾಡಲಿವೆ. ಪಿತ್ಥದೋಷದಿಂದ ದೇಹದಲ್ಲಿ ಅಶಕ್ತಿ ನಿರುತ್ಸಾಹಗಳು ತಲೆದೋರಲಿವೆ. ಆತ್ಮೀಯರಲ್ಲೂ ಕೂಡ ಅವಿಶ್ವಾಸಗಳುದಿಸುವಂತಹ ಪ್ರಕರಣಗಳು ಜರಗಲಿವೆ. ವಾರಾಂತ್ಯದ 6 ದಿನಗಳಲ್ಲಿ ಹೆಚ್ಚಿನ ದೋಷಗಳು ಕಾಣಲಾರವು.

೧೧. ಕುಂಭ

ಮೇಲಿಂದ ಮೇಲೆ ಬರತಕ್ಕ ವಿಪತ್ಪರಂಪರೆಗಳು ನಿಮ್ಮನ್ನು ಇತಿ ಕರ್ತವ್ಯತಾ ಮೂಢರನ್ನಾಗಿ ಮಾಡಲಿವೆ. ಪ್ರತಿಪಕ್ಷಗಳ ಕಾಟದಿಂದಾಗಿ ಹೊಸ ಕಾರ್ಯಾರಂಭಿಸುವುದಿರಲಿ, ಆರಂಭಿಸಿದ ಕಾರ್ಯಗಳನ್ನು ಅರ್ಧದಲ್ಲಿ ಕೈಬಿಡಬೇಕಾಗಿ ಬರುವುದು. ಕಾಸಿಲ್ಲದ ನರ ಕಲ್ಲಿಗೆ ಸಮನೆಂಬ ಗಾದೆಯ ಮಾತನ್ನು ನೀವಿಂದು ನೆನೆಯುವಂತಹ ಪರಿಸ್ಥಿತಿಯೂ ಒದಗಲಿದೆ ಎಂದರೆ ತಪ್ಪಾಗಲಾರದು. ವಾರಾಂತ್ಯದ 2 ದಿನಗಳು ಇದ್ದುದರಲ್ಲುತ್ತಮವಾಗಿವೆ.

೧೨. ಮೀನ

ನಿಮ್ಮ ಆರ್ಥಿಕ ಪರಿಸ್ಥಿತಿಯಿಂದು ಎಷ್ಟೇ ಉತ್ತಮವಾಗಿದ್ದರೂ ನಿಮ್ಮ ವ್ಯಯಸ್ಥಾನದಲ್ಲಿ ಕುಳಿತ ಗ್ರಹ ಚತುಷ್ಟಯರು ಎಲ್ಲಿಲ್ಲದ ಖರ್ಚುವೆಚ್ಚಗಳನ್ನು ನಿಮಗಿಂದು ತಂದೊಡ್ಡಲಿರುವರು. ಸಾಲದುದಕ್ಕೆ ಮನೆಯೊಳೆಯೂ ಕೂಡ ಶಕ್ತಿಮೀರಿ ಪ್ರತಿರೋಧಿಸುವಳು. ಆದರೂ ಮಹಾತ್ಮರ ಸಹಾಯ ಸಂಪತ್ತುಳ್ಳ ನಿಮಗಿಂದೂ ಮಾನಹಾನಿಯ ಪ್ರಸಂಗ ಬರಲಾರದು. ದೈವವ ನಂಬಿದ ನಿಮಗೆ ವಾರಾದಿಯ 2 ದಿನಗಳು ಅಷ್ಟೊಂದು ಕೆಡುಕೆನಿಸಲಾರವು.

ಶೈಕ್ಷಣಿಕ ಪ್ರವಾಸ

ಬಸಂತಾಡಿ ಜ. 30—ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ ತಂಡವೊಂದು ಇದೇ ತಾರೀಕು 29ರಂದು ಮೂಡಬಿದ್ರೆ, ಬಜಪೆ ವಿಮಾನ ನಿಲ್ದಾಣ ಮತ್ತು ಮಂಗಳೂರಿನ ವಿವಿಧ ಶೈಕ್ಷಣಿಕ ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿ ಮರಳಿತು. ಇದೇ ಸಂದರ್ಭದಲ್ಲಿ ಸುಮಾರು 60ಕ್ಕೂ ಹೆಚ್ಚಿನ ಸದಸ್ಯ ಸಂಖ್ಯೆಯುಳ್ಳ ಸದ್ರಿ ತಂಡಕ್ಕೆ ಮಂಗಳೂರಲ್ಲಿ ಎರಡು ಹೊತ್ತಿನ ಊಟದ ವ್ಯವಸ್ಥೆಯನ್ನು ಶ್ರೀ ಸಾಹುಕಾರ್ ಯಂ. ಬಾಬಾಪ್ಪಯ್ಯನವರು ಉದಾರವಾಗಿ ಒದಗಿಸಿದ್ದರು.

ಯಕ್ಷಗಾನ

ನೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಕಳೆದ ತಾ. 30ರಂದು "ಸಂಜಯ ಸಂಧಾನ" ಯಕ್ಷಗಾನ ಕೂಟವು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಶ್ರೀ ಕಲ್ಲರ್ಪೆ ಅಪ್ಪು ಪಾಟಾಳಿಯವರು ಸಮಾರಂಭವನ್ನು ವ್ಯವಸ್ಥೆಗೊಳಿಸಿದ್ದು ಸರ್ವಶ್ರೀ ಕೀ. ವ. ಕೇಶವ, ಬಾಬು ರೈ, ಬಿ. ವಿ. ವಿನೋದ, ಪರಮೇಶ್ವರ ಭಟ್, ಶೀನಪ್ಪ ಗೌಡ, ಮಾಸ್ತರ್ ಸಾಂತಪ್ಪ ಮೊದಲಾದವರು ಭಾಗವಹಿಸಿದ್ದರು. ಕೊನೆಯಲ್ಲಿ ಶ್ರೀ ಕೆ. ಬಿ. ರೈಗಳು ಸಂಘದ ಪರಿಯಿಂದ ಧನ್ಯವಾದವಿತ್ತರು.

ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು
ಹಸುರು ಹಂಸ
ಬೆಲೆ: ರೂ. ಎರಡು.
ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.
ಭಾವಾರ್ಜನೆ
ಬೆಲೆ ರೂ. 2-00
ಪ್ರತಿಗಳು ಸಿಗುವ ಸ್ಥಳ:
ನವಯುಗಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
LETTER WRITING MADE EASY
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಪಥ್ಯ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ. ಖ. ಪ್ರತ್ಯೇಕ)

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪]   ಫೆಬ್ರವರಿ, ೨೫, ೬೫   [ಸಂಚಿಕೆ ೨೬



Phone No. 226
ಫೋನ್ ಸಂಖ್ಯೆ:

leading nationalist weekly

೨೦ ಪೈಸೆ

ವಾರದ ಕಥೆ

ಬುದ್ಧಿ ಬಂತು

ಕತೆಗಾರ: ಮುಚಿಬೈಲು ಭಾಸ್ಕರ ಭಂಡಾರಿ, ಪಿ. ಮತ್ತು ಟಿ., ಬೆಂಗಳೂರು.

"ಮೂಂಕಣ್ಣಾ, ಈಗ ಸಾಕು; ಸಂಜೆ ಬರುತ್ತೇನೆ, ಆಗದೆ?" ಎಂದು ಲಿಂಗಪ್ಪನು ತನ್ನ ಶರೀರದ ಹಿಡಿತ ತನ್ನಲ್ಲಿ ಇಲ್ಲವಾದರೂ ಎದ್ದು ನಿಂತನು.

"ಇದೇನು ಇಷ್ಟು ಬೇಗ? ಒಳಗೆ ಉತ್ತಮ ಸಾಮಾನು ತಯಾರಾಗುತ್ತಿದೆ. ಬಿಸಿ ಬಿಸಿ ಸ್ವಲ್ಪ ತರಲೇ??" ಮೂಂಕಣ್ಣ ಕುತೂಹಲ ಪೂರ್ವಕ ಕೇಳಿದ.

"ಉತ್ತಮವಾದುದೇ? ಹಾಗಾದರೆ ಸ್ವಲ್ಪ ತಾ. ಹೋಗು, ಬೇಗ, ಬೇಗ" ಎಂದು ಲಿಂಗಪ್ಪನು ಅಲ್ಲಿಯೇ ಜಗಲಿಯ ಮೇಲೆ ಕುಳಿತುಕೊಂಡನು.

ಮೂಂಕಣ್ಣನು ಸರಸರನೆ ಒಳಹೋದನು. ಹೋದವನೇ ಒಂದು ಬಾಟ್ಲಿಯಲ್ಲಿ ತುಂಬಾ ಮದ್ಯವನ್ನು ತುಂಬಿಕೊಂಡು ಬಂದು ಆ ಸೀಸೆಯನ್ನು ಲಿಂಗಪ್ಪನ ಕೈಗಿತ್ತನು. ಬಾಟ್ಲಿ ಕೈಗೆ ಬಂದುದೇ ಸರಿ! ಒಂದೇ ಸವನೆ ಎಲ್ಲಾ ಮದ್ಯವನ್ನು ಬಾಯಿಗೆ ಸುರಿದು ಸೀಸೆಯನ್ನು ಬರಿದು ಮಾಡಿ ಕೆಳಗಿರಿಸಿ "ಆಹಾ! ಬಹಳ ಒಳ್ಳೆಯ ಮಾಲು" ಎಂದುಬಿಟ್ಟನು. ಕೂಡಲೇ ಎದ್ದು ನಿಂತು "ಮೂಂಕಣ್ಣಾ ಇನ್ನು ನಾನು ಬರಲೇ?"

"ಅದೇತು ಸಂಜೆ ಬರುವುದಿಲ್ಲವೇ? ಏನಾದರೂ ಸ್ವಲ್ಪ......"

"ಅದು ನೀನು ಹೇಳಬೇಕೆ?" ಎಂದು ಲಿಂಗಪ್ಪನು ತನ್ನ ಕಡೆ ನೋಡುತ್ತಾ ವೀಳ್ಯವನ್ನು ಜಗಿದು ಜಗಿದು ರಕ್ತದಂತೆ ಕೆಂಪಾದ ಹಲ್ಲುಗಳನ್ನು ಬಿಟ್ಟು ನಗುತ್ತಿರುವ ಮೂಂಕಣ್ಣನನ್ನು ಒಡಂಬಡಿಸಿ ಮುಂದೆ ಹೋದನು.

ಕುಡಿದುದು ತುಸು ಜಾಸ್ತಿಯಾದುದರಿಂದ ಲಿಂಗಪ್ಪನಿಗೆ ಸರಿಯಾಗಿ ನಡೆಯಲಾಗುತ್ತಿರಲಿಲ್ಲ. ಆದರೂ ಗರ್ವದಿಂದ ಅತ್ತಿತ್ತ ಉಯ್ಯಾಲೆಯಂತೆ ತೂಗಿದಂತಾಗಿ ನಡೆಯುತ್ತಿದ್ದಾಗ, ಬೀಳುತ್ತಾ ಏಳುತ್ತಾ ಮುಂದುವರಿಯುತ್ತಿದ್ದನು.

ಬುದ್ಧಿಯು ನೆಟ್ಟ ಸ್ಥಿರತೆಗೆ ಬಂದಾಗ "ಎಲ್ಲಿಯಾದರೂ ಪೋಲೀಸರು ಕಂಡರೇ?" ಎಂಬ ಶಂಕೆಯೂ ಅವನ ಮನಸ್ಸಿನಲ್ಲಿ ಉದ್ಭವಿಸುತ್ತಿತ್ತು. ಆದರೆ ಮೆದುಳಿನ ಪರಿವರ್ತನೆಯಾದುದರಿಂದ ಆ ಪ್ರಶ್ನೆಯಾಗಿ ಅಷ್ಟರಲ್ಲೇ ಅಡಗಿ ಹೋಗುತ್ತಿತ್ತು. ಸಮಯ ಮೀರಿದಂತೆ ಲಿಂಗಪ್ಪನು ಕೇವಲ ಹುಚ್ಚರಂತೆ ಏಳುತ್ತಾ ಬೀಳುತ್ತಾ "ಓಹ್ಯೋ! ಏಂಟೇ ಅಪ್ಪಾ..." ಎಂದು ಸಿಕ್ಕಿದವರನ್ನೆಲ್ಲಾ ಮನಬಂದಂತೆ ಬೈಯುತ್ತಾ ನಡೆಯುತ್ತಿದ್ದನು. ಅವನ ಸ್ಥಿತಿ ಗೊತ್ತಿದ್ದ ಜನರಾರೂ ಅವನನ್ನು ಮಾತನಾಡಿಸುವ ಗೋಜಿಗೆ ಹೋಗಲಿಲ್ಲ! ಅನೇಕ ಸಲ ಕಲ್ಲೂ ಮುಳ್ಳುಗಳ ಮೇಲೆನ್ನದೆ, ಚರಂಡಿ ತೋಡುಗಳೆನ್ನದೆ ಬಿದ್ದುದರ ಪರಿಣಾಮವಾಗಿ ಮುಳ್ಳಿನ ಬೇಲಿಯನ್ನು ಹೊಕ್ಕ ದನಕರುಗಳಂತೆ ಮೈಮೇಲೆ ನಾವಿರಾರು ಗಾಯಗಳಾಗಿದ್ದುವು. ಯುದ್ಧದಿಂದ ಮರಳಿ ಬಂದ ಸೈನಿಕನಂತೆ ರಕ್ತದಿಂದ ಮೈಯು ತೊಯ್ದಿತ್ತು! ಬಟ್ಟೆಬರೆಗಳಂತೂ ಹರಿದು ಚೂರು ಚೂರಾಗಿದ್ದುವು. ಆದರೂ ಅವನು ನಡೆಯುತ್ತಿದ್ದನು! ಅಲ್ಲಾ... ಮದ್ಯವು ಅವನನ್ನು ನಡೆಸುತ್ತಿತ್ತು! ಎಲ್ಲಿಗೆ? ಎಲ್ಲಿಗೋ.... ಅವನರಿಯನು!

ಲಿಂಗಪ್ಪನ ಮನೆಗೆ ಹೋಗುವ ದಾರಿಯಲ್ಲಿ ಗುಡ್ಡ. ಗುಡ್ಡದ ಒದಿಯಲ್ಲಿ ಒಂದು ದೊಡ್ಡ ಝರಿ. ಸಾಧಾರಣ ಮೂವತ್ತು ಮೂವತ್ತೆರಡು ಅಡಿಗಳಷ್ಟು ಎತ್ತರವಾಗಬಹುದು. ಅಮಲಿನ ಮತ್ತದಲ್ಲಿ ಸರಿದಾರಿಯನ್ನು ಬಿಟ್ಟು ಬಂದ ಲಿಂಗಪ್ಪನು ಝರಿಯ ಅಂಚಿಗೆ ಬಂದಾಗ ಅದೊಂದು ಸಣ್ಣ ಮೆಟ್ಟಲಿನಂತೆಯೇ ಅವನಿಗೆ ತೋರಿತು. ಪಾಪ! ಇಳಿಯುವೆನೆಂದು ಕಾಲಿರಿಸಿದುದೇ ತಡ! ದಡ ದಡನೆ ಕೆಳಗುರುಳಿಬಿಟ್ಟನು! ಏನೋ ಅದೃಷ್ಟ ಚೆನ್ನಾಗಿದ್ದುದರಿಂದ ಪ್ರಾಣ ಒಂದು ಉಳಿಯಿತು.

ನಂಜೂರಿನಲ್ಲಿ ಸಂಕಣ್ಣನೆಂದರೆ ಬಲು ದೊಡ್ಡ ಕೃಷಿಕ. ಆರು ಜೋಡಿ ಎತ್ತುಗಳಿಂದ ಅವರು ಗದ್ದೆ ಹೂಡುವುದನ್ನಾಗಲೀ ವಿಂಧ್ಯ ಪರ್ವತದಂತೆ ರಾಶಿ ಬಿದ್ದಿರುವ ಹುಲ್ಲಿನ ಅವರಂಗಳದ ರಾಶಿಯನ್ನಾಗಲೀ ಕಂಡರೆ ಅವರ ಬೇಸಾಯ ಅದೆಷ್ಟು ದೊಡ್ಡದು ಎಂದು ಯಾರೂ ಊಹಿಸಬಹುದಾಗಿತ್ತು! ಸಂಕಣ್ಣನವರಿಗೆ ಒಬ್ಬನೇ ಮಗ. ಅವನೇ ನಮ್ಮ ಲಿಂಗಪ್ಪ. ಏಕಮಾತ್ರ ಪುತ್ರನಾದುದರಿಂದ ಪ್ರೀತಿ ಸಲುಗೆಗಳಿಂದ ಬೆಳೆಸಿದರು ಸಂಕಣ್ಣ. ಲಿಂಗಪ್ಪನಿಗೆ ಹದಿನೆಂಟು ತುಂಬುತ್ತಲೇ ಸಂಕಣ್ಣನವರಿಗೆ ಅವನ ವಿವಾಹದ ಯೋಚನೆ ಹತ್ತಿತ್ತು. ಗಂಡು ಹುಡುಗರಿಗೆ ಚಿಕ್ಕಂದಿನಲ್ಲಿಯೇ ಮದುವೆ ಮಾಡುವುದು ಉಚಿತವಲ್ಲವೆಂದು ಅವರ ಸ್ನೇಹಿತರಂದರೂ ತಾನು ಸಾಯುವ ಮೊದಲೇ ಎರಡು ಅಕ್ಕಿ ಕಾಳು ಅವನ ತಲೆಗಿಕ್ಕಬೇಕೆಂಬುದು ಅವರ ಆಶೆ. ಇನ್ನೇನು. ನೆರೆಯೂರಿನ ಸುಬ್ಬಯ್ಯ ತಕ್ಕಮಟ್ಟಿನ ಅನುಕೂಲಸ್ಥರು. ಅವರ ಮಗಳನ್ನೇ ತರುವುದೆಂದು ನಿಶ್ಚಯವಾಯಿತು. ಹುಡುಗಿಯೋ ಮುತ್ತಿನಂತಹದ! ಊರಿಗೆ ಊರೇ ಆ ಹುಡುಗಿಯ ಗುಣಗಳನ್ನು ಕೊಂಡಾಡುತ್ತಿತ್ತು! ಕೆಲವೇ ದಿನಗಳಲ್ಲಿಯೇ ವಿವಾಹವೂ ಮುಗಿದು ಹೋಯಿತು.

ಲಿಂಗಪ್ಪನ ದುರದೃಷ್ಟ, ಮದುವೆ ಕಳೆದ ಕೆಲವೇ ದಿನಗಳಲ್ಲಿಯೇ ಸಂಕಣ್ಣ ಹೃದಯ ಸ್ತಂಭನದಿಂದ ತೀರಿಕೊಂಡರು. "ಮಗನ ತಲೆಗೆರಡು ಅಕ್ಕಿ ಕಾಳು ಹಾಕಬೇಕು ಮತ್ತೆ ನಾನು ಸಾಯಬೇಕು" ಎಂಬ ಅವರ ಮಾತು ಸತ್ಯವಾಯಿತು, ಎಂದು ಜನ ಆಡಿಕೊಳ್ಳುತ್ತಿದ್ದರು. ಲಿಂಗಪ್ಪನಿಗೆ ಒಮ್ಮೆ ಆಕಾಶವೇ ತಲೆಗೆ ಕಳಚಿ ಬಿದ್ದಂತಾದರೂ ತಂದೆ ದುಡಿದು ಕೂಡಿಟ್ಟ ತುಂಬು ಖಜಾನೆಯಿಂದ ಕೂಡಿದ ಮನೆಯ ಯಜಮಾನಿಕೆಯು ಪಟ್ಟ ಕೈಗೆ ಬಂತಲ್ಲಾ ಎಂಬ ಸಂತೋಷವೂ ಆಯಿತು. ಅಷ್ಟರಲ್ಲಿಯೇ ಅವನ ಗೆಳೆಯರ ಸಂಖ್ಯೆಯೂ ಹೆಚ್ಚಿತು. ಯಾವಾಗ ಎಲ್ಲಿ ನೋಡಿದರೂ ಅವನ ಸುತ್ತುಮುತ್ತು ಹಿಂದೆ ಮುಂದು ಜನರೇ ಜನರು! ಲಿಂಗಪ್ಪನೆಂದರೆ ಊರಿಗೇ ಚಿಕ್ಕ ಪಟ್ಟದ ರಾಜ. ಹೋಟೇಲು ಹೊಕ್ಕರೆ ಎಲ್ಲರ ಬಿಲ್ಲೂ ಅವನೇ ಕೊಡುವವ. ಆದರೆ ಈ ಎಲ್ಲಾ ಮಿತ್ರರೂ ಹದ್ದು ಕಾಗೆಗಳಂತೆ ಅವನನ್ನು ಸುಲಿಯುವವರೇ ಹೊರತು ಅವನ ಸಂಕಷ್ಟಕ್ಕೆ ಒದಗುವವರಲ್ಲವೆಂದು ಬೇರೆ ಹೇಳಬೇಕೆ? ಲಿಂಗಪ್ಪನ ಮಿತ್ರತ್ವ ವರ್ಧಿಸಿದಂತೆ ಅವರ ಕೆಟ್ಟ ಚಟಗಳೂ ಅವನಿಗಂಟಿದುವು. ಅವರೊಂದಿಗೆ ಕುಡಿಯುವುದು ಜೂಜಾಡುವುದು ಮೊದಲಾದ ದುಷ್ಟ ಚಟಗಳಿಗೆ ಬಲಿಯಾಗಿ ತನ್ನ ಮೇಲಿನ ನಿಯಂತ್ರಣವನ್ನೇ ಕಳೆದುಕೊಂಡನವನು. ಮಹಾರಾಜ ನಳ, ಪಾಂಡವ ಂತಹ ರಾಜಾಧಿರಾಜರೇ ಈ ದುಶ್ಚಟಗಳಿಂದ ಕಾಡಾಡಿಗಳಾಗಿರುವಾಗ ಲಿಂಗಪ್ಪನ ಪಾಡೇನು? ಕೆಲವೇ ಸಮಯದಲ್ಲಿ ಬೀದಿ ಬಿಕಾರಿಯಂತಾದನವ. ರಾತ್ರಿ ಹನ್ನೆರಡು ಗಂಟೆಯಾದರೂ ಬಂದರೆ ಬಂದ, ಇಲ್ಲವಾದರೆ ಮರುದಿನವೇ ಆತನ ಮುಖದರ್ಶನವಾಗುತ್ತಿತ್ತು.

ಲಿಂಗಪ್ಪನ ತಾಯಿಗೆ ಇದನ್ನೆಲ್ಲಾ ಕಂಡರೆ ಅತಿಯಾದ ದುಃಖವಾಗುತ್ತಿತ್ತು. ಆದರಿಂದಲೇ ಅವಳು ಗಂಧದ ಕೊರಡಿನಂತೆ ದಿನದಿಂದ ದಿನಕ್ಕೆ ಕೊರಗುತ್ತಿದ್ದಳು. ಕಡೆಗೊಂದು ದಿನ ಯಾರ ಗೊಡವೆಯೂ ಬೇಡವೆಂಬಂತೆ ಅವಳೂ ಕಣ್ಮುಚ್ಚಿದಳು. ಲಿಂಗಪ್ಪನಿಗಾದರೋ ತಾಯಿ ಮಡಿದುದರಿಂದ ಚಿಂತೆಯ ಬದಲು ಸಂತೋಷವೇ ಆಯಿತು. ನಿತ್ಯದ 'ಚಿರಿ ಚಿರಿ' ಯಾದರೂ ತಪ್ಪಿತಲ್ಲವೇ ಎಂಬುದೇ ಅದಕ್ಕೆ ಕಾರಣವಾಗಿತ್ತು.

ಲಿಂಗಪ್ಪನ ಮಡದಿ ಲಕ್ಷ್ಮಿ ಬಹಳ ಸಾಧು ಸ್ವಭಾವದ ಹೆಂಗುಸು. ಆಧುನಿಕ ಯುಗದ ಫೇಶನುಗಳಾವುವೂ ಅವಳನ್ನು ಪೀಡಿಸಿರಲಿಲ್ಲ. 'ಪತಿಯೇ ಪರದೈವ"ವೆಂಬ ಮುಗ್ಧೆಯಾಗಿದ್ದಳು.

ತಾಯಿ ಮರಣಾ ನಂತರ ಲಿಂಗಪ್ಪನ ಸ್ಥಿತಿ ತೀರಾ ಶೋಚನೀಯವಾಯಿತು. ಗೂಟದಿಂದ ಬಿಚ್ಚಿದ ಕರು ಕಿವಿಗೆ ಗಾಳಿ ಹೊಕ್ಕಾಗ ಓಡಾಡುವಂತೆ ಅವನ ಅವಸ್ಥೆಯಾಗಿತ್ತು! ತನ್ನ, ತನ್ನ ಮನೆಯ, ಎಲ್ಲಾ ಸೊತ್ತುಗಳನ್ನು ಕಳೆಕೊಂಡು ನಿರ್ಗತಿಕನಾದುದಲ್ಲದೆ ಕೈಹಿಡಿದ ಹೆಂಡತಿಯ ಒಡವೆ ಆಭರಣಗಳನ್ನು ಮುಗಿಸಿ ಬಿಟ್ಟನು! ಆದರೂ ಸಹನ ಶೀಲೆಯಾದ ಅವನ ಮಡದಿ ಎಲ್ಲವನ್ನೂ ಸಹಿಸಿಕೊಂಡು ಒಂದಲ್ಲ ಒಂದು ದಿನ ತನ್ನ ಗಂಡನಿಗೆ ಬುದ್ಧಿ ಬರಬಹುದು. ನಾವಿಬ್ಬರೂ ಸುಖಪಡಬಹು

(ಹದಿನೈದನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p a.	7ರಿಂದ 11 ತಿಂಗಳು % p. a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು. % p. a.	36ರಿಂದ 47 ತಿಂಗಳು. % p. a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು % p a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ.-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್] ಶ್ರೀ
ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

Phone No. 226

Estd: 1921
NAVAYUGA
Leading Kannada Weekly
UDIPI, S Kanara
(Mysore State)
ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ: ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2 00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ನೋಟೀಸು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

[illegible] ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಕಮಿಶನ್ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಕೊಡುವ ಸೌಕರ್ಯವಿರುವುದು. ಚಂದಾದಾರರು ಹಣ ರವಾನೆ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ

ಮುಖಪತ್ರದಲ್ಲಿ:

ಮೇಲಿನ ಸಾಲು: ಎಡ— ಜಮ್‌ಶೆಡ್‌ಪುರದ ಉಕ್ಕಿನ ಕಾರಖಾನೆಯ ನೌಕರಿಯಲ್ಲಿರುವ ಉಕ್ಕಿನ ಪುರುಷ.

ಬಲ— ರೂರ್ಕೆಲಾ ಉಕ್ಕಿನ ಕಾರಖಾನೆಯ ಒಂದು ನೋಟ.

ಕೆಳಗಿನ ಸಾಲು: ಎಡ— ಭಿಲ್ಲೈ ಉಕ್ಕಿನ ಕಾರಖಾನೆಯಲ್ಲಿ ಉಕ್ಕು ದ್ರವರೂಪದಲ್ಲಿ ಸುರಿಯುತ್ತಿದೆ

ಬಲ— ದುರ್ಗಾಪುರ ಉಕ್ಕಿನ ಕಾರಖಾನೆಯ ಬೃಹದ್ಯಂತ್ರವೊಂದು.

ನವಯುಗ

ಸಂಪುಟ ೪೪ | ಉಡುಪಿ | Vol. 44
ಸಂಚಿಕೆ ೨೬ | ೨೫—೨—೧೯೬೫ | No. 26

ವಚನ ಸುಧೆ

ಇಂದ್ರೋ ಯತೋಽವಸಿತಸ್ಯ ರಾಜಾ॥
(ಋಗ್ವೇದ, ೧-೩೨-೧೫)

೦ ಚಲಿಸುವ ಮತ್ತು ಚಲಿಸದಿರುವ ಪದಾರ್ಥಗಳಿಗೆ ಪರಮಾತ್ಮನೊಬ್ಬನೇ ಒಡೆಯನು.

೦೦ ಪ್ರಪಂಚದಲ್ಲಿನ ಪದಾರ್ಥಗಳು ಎರಡು ಬಗೆಯವು. ಜಂಗಮವಾದ ಪ್ರಾಣಿಗಳು ಮತ್ತು ಸ್ಥಾವರವಾದ ಮರ ಕಲ್ಲು ಇತ್ಯಾದಿ. ಇವೆಲ್ಲವುಗಳ ಯಜಮಾನನೇ ಪರಮಾತ್ಮನು. ಆ ಮುದದಿಂದ ಪರಮಾತ್ಮನನ್ನು ಎಲ್ಲರೂ ಪೂಜಿಸಬೇಕು. ಕಲ್ಯಾಣ ಪ್ರಾಪ್ತಿಯ ಮಾರ್ಗವಿದೊಂದೇ.

ಮಧ್ಯವರ್ತಿ ಮಾರ್ಗವೆ?

ಅಧಿಕೃತ ಭಾಷಾ ವಿಧೇಯಕದಂತೆ ಹಿಂದಿಯನ್ನು ಭಾರತದ ವ್ಯಾವಹಾರಿಕ ಭಾಷೆಯಾಗಿ ತಂದುದರ ಬಗ್ಗೆ ಅಹಿಂದೀ ಪ್ರದೇಶದಲ್ಲಿ ಪ್ರಾರಂಭವಾದ ಗದ್ದಲವೀಗ ಕಡಿಮೆಯಾಗಿದೆ. ಮದ್ರಾಸದಲ್ಲಿ ಅದು ಸದ್ಯಕ್ಕೆ ನಿಂತಿದೆ; ಎಂದರೆ ಮುಂದೆ ಒಂದು ದಿನ ಅದು [illegible] ಸ್ಫೋಟವಾಗಬಹುದು. ಈ ಪ್ರಶ್ನೆಯ ಮೇಲೆ ಮಂತ್ರಿ ಪದವಿಗೆ ರಾಜೀನಾಮೆಯಿತ್ತ (ಮದ್ರಾಸ) ಸುಬ್ರಹ್ಮಣ್ಯಂ ಮತ್ತು ಅಳಗೇಶನ್ ತಮ್ಮ ರಾಜೀನಾಮೆಯನ್ನು ಹಿಂತೆಗೆದುಕೊಂಡಿದ್ದಾರೆ. ಇವರ ಅಭಿಪ್ರಾಯದಲ್ಲಿ ಪಂಡಿತ ನೆಹರೂರವರು "ಅಹಿಂದೀಯ"ರಿಗೆ ನೀಡಿದ ಭರವಸೆಯನ್ನು ಸದ್ಯದ ಪ್ರಧಾನಿ ಲಾಲಬಹದ್ದೂರ ಶಾಸ್ತ್ರಿಯವರು ಈಡೇರಿಸಬಹುದಾದರೂ ಅವರ ಉತ್ತರಾಧಿಕಾರಿಗಳು ಹೀಗೆ ನಡೆಯುವರು. ಇದು ನ್ಯಾಯವೆನ್ನುವುದಕ್ಕಿಂತ ನಂಬದಿರುವುದಕ್ಕೆ ಆಧಾರದಿಂದ, ಈ ಸಂಬಂಧದಲ್ಲಿ ಸಂವಿಧಾನದಲ್ಲಿ ಅಥವಾ ಅಧಿಕೃತ ಭಾಷಾ ವಿಧೇಯಕದಲ್ಲಿ ತಿದ್ದುಪಡಿಯಾದರೆ, ಅದು ಸಮ್ಮತವೆನ್ನುವರು. ಇದು ಅಹಿಂದೀ ಪ್ರದೇಶದ ಜನರ ದೃಷ್ಟಿಯಲ್ಲಿ ನ್ಯಾಯೋಚಿತವೇ ಎಂದು ಹೇಳಬೇಕು.

ಆದರೆ, ಅಹಿಂದೀ ಪ್ರದೇಶದಲ್ಲಿ ಹಿಂದಿಯ ವಿರುದ್ಧ ಅಸಮಾಧಾನವೆದ್ದಿರುವಂತೆಯೇ ಹಿಂದೀ ಪ್ರದೇಶದಲ್ಲಿ ಇಂಗ್ಲಿಷಿನ ಬಗ್ಗೆಯೇ ಆಂದೋಲನವೇಳುವಂತಿದೆ. ಜನಸಂಘವಂತೂ ಈ ಸಂಬಂಧ ತೀವ್ರವಾದ ಆಂದೋಲನವನ್ನು ಕೈಗೊಳ್ಳಲು ನಿರ್ಧರಿಸಿದೆ. ಹಿಂದಿ ಅಭಿಮಾನಿಗಳು ಕೂಡ ಇದರಿಗೆ ಬೆಂಬಲ ನೀಡಲಿರುವರು. ರಾಜಸ್ಥಾನ ಸರಕಾರವು ಆಜ್ಞೆಯೊಂದನ್ನು ವಿಧಿಸಿ ರಾಜ್ಯದ ವ್ಯವಹಾರಿಕ ಭಾಷೆ ಹಿಂದಿಯೆಂದು ಘೋಷಿಸಿದೆ. ಈ ಮೊದಲು ಹಿಂದಿಗೆ ಪ್ರತಿಭಟನೆ ಮಾಡಿದವರಿಂದ ಒಂದೆರಡು ಕೋಟಿ ರೂಪಾಯಿಗಳು ನಷ್ಟವಾಗಿಯಾದಂತೆ ನಿಯೋಜಿತ ಹಿಂದೀಪರ ಆಂದೋಲನವೂ ಹಿಂಸಾರೂಪವನ್ನು ತಾಳಿ, ಪರಿಸ್ಥಿತಿ ಕೈ ತಪ್ಪಲಾರದೆಂಬ ಭಯವಿದೆಯಲ್ಲ. ಸಮಾಜವಾದಿ ನಾಯಕ ಡಾ| ಲೋಹಿಯಾ ಅವರು ಹಿಂದಿಯನ್ನು ಒತ್ತಾಯದಿಂದ ಹೇರಬಾರದು, ಇಂಗ್ಲಿಷನ್ನು ಹಾಗೆಯೇ ಎಂದೂ ಮುಂದುವರಿಸಬಾರದು [illegible] ಆರಂಭಿಸಿದ್ದನ್ನು [illegible] ಅವನ್ನು ನಿಲ್ಲಿಸಿದ್ದನ್ನೂ ನಾವು ನೆನಪಿಸಬೇಕು. ಆದರೆ, ಹಿಂದೀ ವಿರುದ್ಧ ಆಂದೋಲನದಲ್ಲಿ ಹೋರಾಟ್ಲಿಸಿದ ಪಾತ್ರ ವಹಿಸಲು ದೃಢ ಮನಸ್ಸು ಮಾಡಿದ ರಾಜಾಜಿಯವರು ವಿನೋಬಾರ ವಾದವನ್ನು ಒಪ್ಪುವುದಿಲ್ಲ; ರಾಜಾಜಿಯವರ ವಾದವೂ [illegible] ಅವರ ಗೊಂಬೆಯನ್ನೇ ಸುಡುವುದಕ್ಕೆ ತೊಡಗಿದ್ದಾರೆ. ಈ ಬಗೆಯ ವಾದ—ಪ್ರತಿವಾದಗಳಿಂದ ಸಾಮಾಜಿಕ ಶಾಂತಿಯು ಎಂದಿಗೂ ಸಾಧಿತವಾಗದು ಎಂಬುದನ್ನು ನಾವು ಗಮನಿಸಬೇಕು.

ಸ್ವತಂತ್ರವಾದ ಭಾರತಕ್ಕೆ ಒಂದು ರಾಷ್ಟ್ರಭಾಷೆ ಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆ ಸ್ಥಾನವನ್ನು ಹಿಂದಿಯೇ ಪಡೆಯಬೇಕು — ಇದು ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ಚಳವಳಿಯ ಸರ್ವತ್ರ ಧಾರಾಳವಾಗಲೇ ಸ್ವೀಕೃತವಾದ ನೀತಿ. ಅಂದು ಗಾಂಧೀಜಿಯವರ ಕರೆಗೆ ಓಗೊಟ್ಟು ಹಿಂದೀ ಭಾಷಾಧ್ಯಯನ ಇಡಿಯ ಭಾರತದಲ್ಲೇ ಆರಂಭವಾಗಿತ್ತು; ಇಂದಿಗೂ ಅದು ನಡೆಯುತ್ತಲೇ ಇದೆ. ಹಾಗಿರುವಾಗ ಹಿಂದಿಯ ಬಗ್ಗೆ ವಿರೋಧವೆಬ್ಬಿಸುವವರಲ್ಲಿ ಅರ್ಥವಿಲ್ಲವೆನ್ನುವುದು ಹಿಂದೀಪರರ ಮಾತು. ಪ್ರಜಾಪ್ರಭುತ್ವದಲ್ಲಿ ಯಾರ ಮೇಲೂ ಒತ್ತಾಯ ಹೇರಬಾರದು. ಆದುದರಿಂದ ಅಹಿಂದೀಯರು ಹಿಂದಿಯನ್ನು ತಾವಾಗಿಯೇ ಬೇಕೆನ್ನುವ ತನಕ ಇಂಗ್ಲಿಷನ್ನೇ ಮುಂದುವರಿಸಬೇಕು — ಇದು ಮಧ್ಯವರ್ತಿಯರ ವಾದ. ಇಂಗ್ಲಿಷೇ ಭಾರತದ ಅಧಿಕೃತ ಭಾಷೆಯಾಗಿ ಉಳಿಯಬೇಕೆನ್ನುವವರೂ ನಮ್ಮಲ್ಲಿ ಇದ್ದಾರೆ. ಈ ಮೂರೂ ಬಗೆಯ ಜನರನ್ನು ಸಮಾನವಾಗಿ ನೋಡಿ ಅವರ ಮನಸ್ಸಿಗೂ ಆಘಾತವಾಗದಂತೆ ಎಚ್ಚರಿಕೆ ವಹಿಸಿ ಮುನ್ನಡೆಯುವುದು ಸರಕಾರದ ಕೆಲಸ. ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರು ಹೇಳುವಂತೆ ಯಾವ ಶಾಸನವನ್ನು ಜಾರಿಗೊಳಿಸಿದರೆ ಏನಾದೀತೆಂದು ಊಹಿಸಿ ತಿಳಿಯುವ ಮುಂದಾಲೋಚನೆಯು ಸರಕಾರಕ್ಕಿರಬೇಕು. ಸದ್ಯದ ಕೇಂದ್ರ ಸರಕಾರದಲ್ಲಿ ಇಂತಹ ಮುಂದಾಲೋಚನೆ ಇಲ್ಲ; ಎಂತಲೇ ಅನಪೇಕ್ಷಣೀಯವಾದ ಗೊಂದಲಕ್ಕೆ ಎಡೆ ದೊರಕಿತು — ಎಂಬ ಟೀಕಾಸ್ತ್ರವೂ ಅದೃಷ್ಟ ನುಡಿಯಲ್ಪಟ್ಟಿದೆ. ಆದ್ದರಿಂದಲೇ ಇರಬೇಕು, ರಾಷ್ಟ್ರಪತಿಗಳ ಈ ಮಾತು ಕೇಳಿದ ಪ್ರಧಾನಿ ತಮ್ಮ ಮುಖವನ್ನು ಎತ್ತಿ ಮನಃ ತಗ್ಗಿಸಿದರು.

ಭಾರತದಲ್ಲಿ ಬ್ರಿಟಿಷರ ಆಳಿಕೆಗೆ ಮೊದಲು ಇಂಡಿಯ ದೇಶಕ್ಕೆ ಒಂದು ಸಾಮಾನ್ಯ ಭಾಷೆಯ ಬೇಕಾದ ಅಗತ್ಯವಿದ್ದಿರಲಿಲ್ಲ. ಹರಿದುಹಂಚಿ ಹೋಗಿ ಬೇರೆಬೇರೆ ರಾಜ ಮಹಾರಾಜರು, ಪಾಳೆಯಗಾರರ ಕೈಗಳಲ್ಲಿದು ಇದ್ದಿತ್ತು. ಬ್ರಿಟಿಷ ಪ್ರಭುತ್ವದೊಡನೆ ಇಂಗ್ಲಿಷೂ ಪ್ರಭುಭಾಷೆಯಾಗಿ ಬಂದಿತು. ಆಳುವವನಾಗಿ ಮನೆಗೆ ಬಂದವನೇ ಯಜಮಾನನಾದಂತೆ ನೆಂಟನಾಗಿ ಬಂದವಳೇ ಯಜಮಾನಿಯಾದಳು. ಸ್ವಾತಂತ್ರ್ಯದ ಬಳಿಕ ಹೀಗೆ ಉಳಿಯುವುದು ಸಾಧ್ಯವಿಲ್ಲ. ಹಿಂದೀ [illegible] ಭಾಷೆಗಳು ಅರ್ಹವಾಗಿವೆ ನಿಜ. ಆದರೂ, ಪ್ರಜೆಗಳ ಒಪ್ಪಿಗೆಯಿಂದ ಇದು ಆ ಸ್ಥಾನವೇರಬೇಕೆಂದು ಅದರ ವಿರೋಧಿಗಳ ಅಭಿಮತ. ಆದುದರಿಂದ, ರಾಜ್ಯಗಳ ಶಾಸಕರೂ ಕೇಂದ್ರದವರೂ ಒಂದಾಗಿ ಜನಾಭಿಪ್ರಾಯವನ್ನು ಹಿಂದಿಗೆ ಅನುಕೂಲವಾಗುವಂತೆ ರೂಪಿಸುವ ಕೆಲಸವನ್ನು ಮಾಡಬೇಕು. ಯಾರ ಮೆಚ್ಚುಗೆಗಾಗಲೀ ಅನುಗ್ರಹಕ್ಕಾಗಲೀ ಅಧಿಕಾರದ ಮೋಹಕ್ಕಾಗಿ ಆಗಲೀ ರಾಜ್ಯದ ಜನತೆಯ ಅಭಿಪ್ರಾಯವನ್ನು ತಿಳಿಯದೆ ರಾಜ್ಯದ ಮುಖ್ಯಮಂತ್ರಿಗಳು ಹಿಂದೆ ಹೇಳಿದಂತೆ ಇನ್ನು ಮುಂದಕ್ಕೆ ಮಾಡಬಾರದು. ಮನೆಗೆ ಬಂದಲ್ಲ ಒಂದು ದಿನ ಹಿಂದಿಯನ್ನು ಎಲ್ಲರೂ ಸ್ವಾಗತಿಸುವ ದಿನ ಬರುತ್ತದೆ. ಅದು ಇಂದೇ ಆಗಬೇಕು ಎಂದು ಹಟ್ಟ ಹಿಡಿಯಬಾರದು; ಏಕೆಂದರೆ, ಇದರ ಪರಿಣಾಮ ಶಾಸನ ರೀತ್ಯಾ ಅನುಕೂಲವಾದರೂ ವ್ಯಾವಹಾರಿಕವಾಗಿ ಅನನುಕೂಲವೇ ಆಗುವುದು. ಇದನ್ನೇ ಪುನರಾಲೋಚನೆ ಅಥವಾ ದೂರಾಲೋಚನೆ ಯೆನ್ನಬಹುದು. ಯಾವುದೇ ಶಾಸನ ನಿರ್ಮಾಣದಲ್ಲಿ ಇದು ಅತ್ಯಗತ್ಯ. ಇದೀಗ "ಹಾವು ಸಾಯಬಾರದು; ಕೋಲು ಮುರಿಯಬಾರದು." ಎಂಬಂತೆ ಹಿಂದಿಯ ಸ್ಥಾನವನ್ನು ಗೊತ್ತು ಮಾಡಬೇಕಿದೆ. ಈ ಸಂದರ್ಭದಲ್ಲೂ ಮೇಲಿನ ಮತವನ್ನು ಹೊಂದಿದ ಅನುಭವದೊಡನೆ ಮರೆಯದೆ ಯುಕ್ತೋಚಿತವಾದ ನಿರ್ಧಾರವನ್ನು ನಮ್ಮ ನಾಯಕರು ಮಾಡಬೇಕು. ಈ ಗಾಂಭೀರ್ಯ ಮಾತ್ರ ನೆಹರೂ ನಂತರವೂ ದೇಶದಲ್ಲಿ ಸಮರ್ಥ ನಾಯಕತ್ವವಿದೆ, ಐಕ್ಯ ಭಾವನೆಯಿದೆ— ಎಂಬುದಕ್ಕೆ ಪುಷ್ಟಿ ದೊರೆಯುವುದು.

ನರಸಣ್ಣನ ಸರಸ



"ಅಹಿಂದೀ ಪ್ರದೇಶದವರನ್ನು ಸಮಾಧಾನ ಮಾಡುವುದು ಹೇಗೆ ಎಂತ ಹಿಂದೀ ಪ್ರದೇಶದವರಿಗೆ ಯೋಚನೆಯಂತೆ ಕಣಯ್ಯಾ...."

"ಅಯ್ಯೋ! ಅದಕ್ಯಾಕೆ ಚಿಂತೆ? ತಮ್ಮ ಆತ್ಮವನ್ನು ಮೊದಲಿಗೆ ಅವರು ಸಮಾಧಾನಪಡಿಸಿಕೊಳ್ಳಲಿ. ಆಗ ತಾನಾಗಿಯೇ ಮತ್ತೊಂದೂ ಆಗದೆ ಇರುತ್ತೆ?"

ಕಗ್ಗತ್ತಲಲ್ಲೊಂದು ಆಶಾಜ್ಯೋತಿ

ಭಾರತದ ಆಹಾರ ಕಾರ್ಪೊರೇಶನ್

ಅದರ ಧ್ಯೇಯಗಳು ಹಾಗೂ ಕಾರ್ಯವಿಧಾನಗಳು

(ಕಳೆದ ಜನವರಿ ೧೪ರಂದು ಪೊಂಗಲ್ ಹಬ್ಬದ ಶುಭ ಅವಸರದಲ್ಲಿ ಮದ್ರಾಸಿನಲ್ಲಿ ಭಾರತದ ಆಹಾರ ಕಾರ್ಪೊರೇಶನಿನ ಉದ್ಘಾಟನೆ ನಡೆದ ಸಂದರ್ಭ, ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ ಎ ಪೈ ಇವರು ಮಾಡಿದ ಸ್ವಾಗತ ಭಾಷಣ)

ಮದ್ರಾಸು ರಾಜ್ಯದಲ್ಲಿ ಸುಗ್ಗಿಯ ಸಂತಸವನ್ನು ಕೊಡುತ್ತಿರುವ ಪೊಂಗಲ್ ಹಬ್ಬದ ಈ ಶುಭ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬರುತ್ತಿರುವ ಭಾರತದ ಆಹಾರ ಕಾರ್ಪೊರೇಶನಿನ ಉದ್ಘಾಟನಾ ಸಮಯದಲ್ಲಿ ನಿಮಗೆಲ್ಲರಿಗೂ ಹಾರ್ದಿಕ ಸ್ವಾಗತವನ್ನು ಬಯಸುತ್ತೇನೆ. ಈ ಆಹಾರ ಕಾರ್ಪೊರೇಶನು, ಭಾರತದ ಮಿಲಿಯಗಟ್ಟಲೆ ಜನರಿಗೆ ದಾರಾಳ ಹಾಗೂ ಉತ್ತಮ ಆಹಾರಧಾನ್ಯವನ್ನು ಸುಲಭ ಬೆಲೆಗ ಒದಗಿಸುವ ಸಾಧನವಾಗಲೆಂದು ಹಾರೈಸುತ್ತೇನೆ. ಭಾರತವು ಇತ್ತೀಚೆಗಿನ ಹಲವಾರು ಸಮಯದಿಂದ ಇದಿರಿಸುತ್ತಿರುವ ಭೀಕರ ಸಮಸ್ಯೆಯೊಂದರ ಪರಿಹಾರಕ್ಕಾಗಿ ಈ ಸಂಸ್ಥೆ ಜನ್ಮ ತಾಳಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿದಂದಿನಿಂದ ಪ್ರತಿ ವರ್ಷವೂ ಕೊರತೆ ಬೀಳುತ್ತಿರುವ ಆಹಾರ ಧಾನ್ಯವನ್ನು ನಾವು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ೧೯೬೩ನೇ ವರ್ಷದ ವರೆಗೆ ನಾವು ಆಮದು ಮಾಡಿದ ಆಹಾರದ ಬೆಲೆಯು ೨೫೦೦ ಕೋಟಿ ರೂಪಾಯಿಗಳಷ್ಟು. ಇದೇ ರೀತಿಯ ಆಮದಿನ ಕಾರ್ಯ ಇನ್ನೂ ನಡೆಯಬೇಕಾಗಿದೆ. ವಿದೇಶೀ ಮಿತ್ರ ರಾಷ್ಟ್ರಗಳಿಂದ ಇಷ್ಟು ಪ್ರಮಾಣದ ಆಹಾರಧಾನ್ಯವನ್ನು ಆಮದು ಮಾಡಿದರೂ ಸಹ, ದೇಶದಲ್ಲಿ ಆಹಾರದ ಸಮಸ್ಯೆಯು ಎಲ್ಲರ ಗಮನ ಸೆಳೆಯುವ ಬೃಹತ್ ರೂಪವನ್ನು ತಾಳಿ ನಿಂತಿದೆ.

ದೇಶವು ಗಂಡಾಂತರ ಪರಿಸ್ಥಿತಿಯಲ್ಲಿರುವಾಗ ಅಥವಾ ಪ್ರಕೃತಿಯ ವಿಕೋಪದ ದೆಸೆಯಿಂದ ಬೆಳೆಯು ಹಾಳಾದಾಗ ಇಲ್ಲವೆ ಬೆಳೆ ಬೆಳೆಯದಿದ್ದಾಗ ನಾವು ಆಹಾರಕ್ಕಾಗಿ ವಿದೇಶಗಳನ್ನು ಅವಲಂಬಿಸದೆ ಗತ್ಯಂತರವಿಲ್ಲ ಆದರೆ ಇಂದಿನ ಪರಿಸ್ಥಿತಿಯಲ್ಲಿ, ವಿದೇಶೀ ವಿನಿಮಯದ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ನಾವು ಆಹಾರಧಾನ್ಯಗಳನ್ನು ಆಮದು ಮಾಡಿಕೊಂಡು, ವಿದೇಶೀ ವಿನಿಮಯವನ್ನು ಹಾಳು ಮಾಡುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಈ ರೀತಿಯ ವಿದೇಶೀ ವಿನಿಮಯದ ನಷ್ಟವು ದೇಶವನ್ನು ದುರ್ಬಲಗೊಳಿಸುವುದು. ಹೆಚ್ಚು ಆಹಾರ ಬೆಳೆಯುವ ಉಪಾಯಗಳು ಹಾಗೂ ಮಾರ್ಗಗಳನ್ನು ಮನನ ಮಾಡಿಕೊಳ್ಳದಿರುವುದರಿಂದ ಮತ್ತು ಈ ದಿಸೆಯಲ್ಲಿ ಪ್ರಯತ್ನ ನಡೆಯದಿರುವುದರಿಂದ, ನಮ್ಮ ಉತ್ಪಾದನೆಯು ಜಗತ್ತಿನಲ್ಲೇ ಕೆಳ ಮಟ್ಟದ್ದಾಗಿದೆ.

ದೇಶದಲ್ಲಿ ಆಹಾರಧಾನ್ಯದ ಉತ್ಪಾದನೆಯನ್ನು ಹೆಚ್ಚಿಸುವುದೊಂದೇ ಈಗ ಉಳಿದಿರುವ ದಾರಿ. ಇದಕ್ಕಾಗಿ ದೀರ್ಘಾವಧಿಯ ಒಂದು ಯೋಜನೆಯನ್ನು ಸಿದ್ಧಗೊಳಿಸಬೇಕಲ್ಲದೆ ಅದನ್ನು ಅತಿ ತ್ವರಿತದಲ್ಲಿ ಜಾರಿಗೆ ತರಬೇಕು. ದೇಶದ ಆಂತರಿಕ ಆಹಾರ ಉತ್ಪಾದನೆ ಹೆಚ್ಚಿಸುವುದರಿಂದ ಮಾತ್ರವೇ ಈಗ ಇರುವ ಉತ್ಪಾದನೆ ಹಾಗೂ ಬೇಡಿಕೆಗಳ ನಡುವಣ ಅಂತರವನ್ನು ಹೋಗಲಾಡಿಸಬಹುದು. ಇದು ದೀರ್ಘಾವಧಿಯ ಕಾರ್ಯಕ್ರಮವಾದರೆ, ದೇಶದಲ್ಲಿ ಈಗ ಉತ್ಪಾದಿಸುತ್ತಿರುವ ಆಹಾರ ಧಾನ್ಯ ಮತ್ತು ವಿದೇಶಗಳಿಂದ ಆಮದು ಮಾಡಿದ ಆಹಾರ ಧಾನ್ಯಗಳ ವಿತರಣೆಯು ದೇಶದಾದ್ಯಂತ ಸೂಕ್ತ ರೀತಿಯಲ್ಲಿ ನಡೆದು, ಲಾಭಬಡುಕತನಕ್ಕೆ ಅವಕಾಶ ಕೊಡದಂತೆ ಮಾಡುವುದು ಅತಿ ಜರೂರಾಗಿ ಮಾಡಬೇಕಾದ ಕಾರ್ಯವಾಗಿದೆ. ಇದರಿಂದ ಮಿತ ಹಾಗೂ ಯೋಗ್ಯ ದರದಲ್ಲಿ ಧಾನ್ಯ ವಿತರಣೆಯಾಗಿ, ದಾಸ್ತಾನುಗಾರರ ಹಾಗೂ ಲಾಭಬಡುಕ ವ್ಯಕ್ತಿಗಳಿಗೆ ಅವಕಾಶ ದೊರೆಯದಂತಾಗುವುದು. ಕೃತಕ ಅಭಾವ ತಲೆದೋರಲಾರದು.

ಆಹಾರ ಧಾನ್ಯಗಳ ಬೆಲೆಯಲ್ಲಾಗುವ ವಿಪರೀತ ಸ್ಥಿತ್ಯಂತರಗಳನ್ನು ಹೋಗಲಾಡಿಸಲು ಆಹಾರ ಧಾನ್ಯಗಳನ್ನು ಹೆಚ್ಚು ಪ್ರಮಾಣದಲ್ಲಿ ಸಂಗ್ರಹಿಸುವುದೊಂದೇ ಮಾರ್ಗ. ಆಹಾರ ಧಾನ್ಯಗಳ ಬೆಲೆಯು ಏರಿದಾಗ, ಈ ದಾಸ್ತಾನಿದ್ದ ಧಾನ್ಯವನ್ನು ವಿತರಣೆ ಮಾಡಬೇಕು. ಇದರಿಂದ ಬೆಲೆಯ ಅನಿಶ್ಚಿತತೆ ಹಾಗೂ ವಿಶೇಷ ಸ್ಥಿತ್ಯಂತರವು ತೊಲಗಿ ಉತ್ತಮ ಆಹಾರ ಧಾನ್ಯವು ಯೋಗ್ಯ ಬೆಲೆಗೆ ದೊರೆಯುವಂತಾಗುವುದು.

ನಮ್ಮ ಆಹಾರ ಮಂತ್ರಿಗಳಾದ ಶ್ರೀ ಸಿ. ಸುಬ್ರಹ್ಮಣ್ಯಂರು, ನಾನು ನನ್ನ ಮೊದಲಿನ ಹುದ್ದೆಯನ್ನು ಬಿಟ್ಟು ಆಹಾರ ಧಾನ್ಯ ಕಾರ್ಪೊರೇಶನಿನ ಅಧ್ಯಕ್ಷನಾಗಬೇಕೆಂದು ಕೇಳಿಕೊಂಡಾಗ ನಾನು ಸಂತೋಷದಿಂದ ಅದನ್ನೊಂದು ಸುಂದರಾಹ್ವಾನವನ್ನಾಗಿ ಹಾಗೂ ಸೇವೆಗೆ ಸದಾವಕಾಶವನ್ನಾಗಿ ತಿಳಿದುಕೊಂಡು ಸ್ವೀಕರಿಸಿದೆ. ನಾನು ನಿರ್ವಹಿಸಬೇಕಾದ ಕಾರ್ಯವು ನಿಜವಾಗಿಯೂ ಅತಿ ಮಹತ್ವದ್ದೆನಿಸಿದೆ. ಈ ಕಾರ್ಯದಲ್ಲಿ ಉದ್ದೇಶ ಸಾಧನೆ ಮಾಡಲು ಹಾಗೂ ಗುರಿ ಮುಟ್ಟಲು ಭಾರತದ ಎಲ್ಲಾ ವರ್ಗದ ಜನತೆಯ ಸಹಕಾರವೇ ಅತಿ ಮುಖ್ಯವಾದದ್ದು ಎಂದು ನಾನು ನಂಬಿದ್ದೇನೆ. ದೇಶದ ಉತ್ಪಾದಕರು, ವ್ಯಾಪಾರಿಗಳು, ಸಹಕಾರಿ ಸಂಸ್ಥೆಗಳು, ಸರಕಾರಿ ಅಧಿಕಾರಿಗಳು ಹಾಗೂ ಬಳಕೆದಾರರು ಎಲ್ಲರೂ ಈ ಹೋರಾಟದಲ್ಲಿ ಗೆಲ್ಲಲು ಸಹಕಾರ ಈಯುವರೆಂಬ ಭರವಸೆ ನನಗಿದೆ. ದೇಶದ ಜನತೆಯು ರಾಷ್ಟ್ರೀಯ ಶಿಸ್ತನ್ನು ಉಳಿಸಿ ಸರಿ ದಾರಿಯಲ್ಲಿ ನಡೆಯುವಂತೆ ಮಾಡಲು ಸಮರ್ಥರಿದ್ದ ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಮಾತುಗಳನ್ನು ನಾವು ಇಂದು ಕೇಳುವಂತಿಲ್ಲ! ಕೇವಲ ದೇಶದ ಸಂಪನ್ಮೂಲಗಳೇ ಈ ಸಮಸ್ಯೆಯ ಪರಿಹಾರವನ್ನು ಮಾಡಲಾರವು. ಒದಲು ಈ ಭೀಕರ ಸಮಸ್ಯೆಯನ್ನು ಎದುರಿಸಿಯೇ ತೀರುವೆವು ಎಂಬ ಜನತೆಯ ಆತ್ಮವಿಶ್ವಾಸ ಹಾಗೂ ದೃಢ ಪ್ರತಿಜ್ಞೆಗಳೇ ಈ ಸಮಸ್ಯೆಯ ಪರಿಹಾರಕ್ಕೆ ಹೇತುವಾಗಬಹುದು.

ಈ ಸಂದರ್ಭ ಅಮೆರಿಕದ ಅಧ್ಯಕ್ಷರಾಗಿದ್ದ ದಿವಂಗತ ಕೆನೆಡಿಯವರು ಜಾಗತಿಕ ಆಹಾರ ಕಾಂಗ್ರೆಸನ್ನು ಉದ್ದೇಶಿಸಿ ಮಾತನಾಡುತ್ತ ಆಡಿದ ಕೆಲವೇ ಮಾತುಗಳನ್ನು ಪುನಃ ಸ್ಮರಣೆಗೆ ತಂದುಕೊಳ್ಳಲು ಬಯಸುತ್ತೇನೆ. ಅವರು ಅಂದರು. "ಇಂದಿನ ಪೀಳಿಗೆಯು ಇಡೀ ಜಗತ್ತಿನ ಲಕ್ಷ್ಯವು ಹಸಿವಿನಿಂದ ವಿಮೋಚನೆ ಮಾಡುವುದರ ಸಲುವಾಗಿ ಕೇಂದ್ರೀಕರಿಸಲ್ಪಡಬೇಕು. ನಮ್ಮಲ್ಲಿ ಶಕ್ತಿ ಇದೆ ಸಾಧನವಿದೆ. ಸಾಮರ್ಥ್ಯವಿದೆ ಇಂದು ಬೇಕಾಗಿರುವುದು ಈ ಕುರಿತಾದ ದೃಢನಿರ್ಧಾರ ಮಾತ್ರ'. ಪರಮಾತ್ಮನ ವರದಾನವಾಗಿ ಬಂದ ಫಲವತ್ತಾದ ಭೂಮಿ, ವಿಪುಲವಾದ ನೀರಿನ ಆಸರೆ, ಅಸಂಖ್ಯ ಮಾನವ ಶಕ್ತಿಗಳಿಂದೊಡಗೂಡಿದ ನಮ್ಮ ದೇಶದ ಮಟ್ಟಿಗೆ ಈ ಮಾತು ಎಷ್ಟು ಸತ್ಯವಾಗಿದೆ!

ನಮ್ಮ ರಾಷ್ಟ್ರೀಯ ಆಹಾರ ಧೋರಣೆಯ ಗುರಿಯು ಆಹಾರದಲ್ಲಿ ಸ್ವಾವಲಂಬನೆಯ ಸಾಧನೆಯೇ ಆಗಿರಬೇಕು ಈ ಗುರಿಯ ಸಾಧನೆಗಾಗಿ ನಮ್ಮ ಆಹಾರ ಧೋರಣೆ ಮುಡಿಪಾಗಿರಬೇಕು ಸ್ವಾವಲಂಬನೆಯ ಹೊರತು ಬೇರೆ ಮಾರ್ಗವಿಲ್ಲ. ಈ ಸಮಸ್ಯೆಯು ಹಲವಾರು ವರುಷಗಳಿಂದ ನೆಲೆನಿಂತಿರುವುದಾದರೂ ಇದರ ಪರಿಹಾರಕ್ಕಾಗಿ ನಾವು ಪೀಳಿಗೆಗಳು ಉರುಳುವಷ್ಟು ಕಾಲ ತೆಗೆದುಕೊಳ್ಳುದಲ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಇನ್ನಷ್ಟು ಬಿಕ್ಕಟ್ಟಿನ ಪರಿಸ್ಥಿತಿಗೆ ಸಿಲುಕಿ, ಅವಸರದ ಕಾರ್ಯಕ್ರಮಗಳನ್ನು ಮಾಡಿ, ಸಮಸ್ಯೆಯು ಕಡೆಗೆ ನಿರ್ಲಕ್ಷ್ಯವೇ ಅದರ ಪರಿಹಾರಕ್ಕೆ ದಾರಿ ಎಂದು ನಾವು ಭಾವಿಸಿದರೆ ಅದು ತಪ್ಪೆನಿಸುವುದು. ಇಂದು

ಶ್ರೀ ಟಿ ಎ ಪೈ

ಬೇಕಾಗಿರುವುದು ನಮ್ಮ ಮನೋವೃತ್ತಿಯಲ್ಲಿ ಬದಲಾವಣೆ ಹಾಗೂ ದೇಶದ ಕೃಷಿ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ಮಾಡುವ ಸಾಮೂಹಿಕವಾದ ಪ್ರಯತ್ನ. ಭಾರತದ ಚರಿತ್ರೆಯಲ್ಲಿ ಈ ೧೯೬೫ನೇ ವರುಷವು, ಭಾರತದ ಜನತೆ ಆಹಾರ ಸಮಸ್ಯೆಯನ್ನು ಧೈರ್ಯದಿಂದ ಎದುರಿಸಿದ ಹಾಗೂ ಅದರಿಂದ ಪಾರಾಗಲು ಒಂದಾಗಿ ನಿರ್ಧರಿಸಿದ ಚರಿತ್ರೆ ವರುಷವೆಂದು ಭಾರತದ ಚರಿತ್ರೆಗಾರರು ಬರೆಯುವಂತಾಗಬೇಕು. ನಾವೆಲ್ಲರೂ ನಮ್ಮ ಮನಸ್ಸಿನಲ್ಲಿರುವ ಅಪ್ರಾಮಾಣಿಕ ಯೋಚನೆ ಹಾಗೂ ಪ್ರವೃತ್ತಿಗಳನ್ನು ತೊಡೆದು ಹಾಕಿ, ಒಂದಾಗಿ ದಿಟ್ಟವಾದ ನಿರ್ಧಾರ ಮಾಡಬೇಕು. ಬೇಸಾಯಗಾರರ ಯಶಸ್ಸು, ಬೇಸಾಯಗಾರರಲ್ಲದವರ ಸಹಾಯಕ ಪ್ರವೃತ್ತಿ ಸುಯೋಜಿತ ನಡವಳಿಕೆ ಹಾಗೂ ಸಹಕಾರಗಳನ್ನು ಹೊಂದಿಕೊಂಡಿದೆ.

ಮೂಲಭೂತ ಆಹಾರ ಧೋರಣೆ

ವಿದೇಶಗಳಿಂದ ಆಮದು ಮಾಡಲಿ ಅಥವಾ ದೇಶದಲ್ಲೇ ಸಾಕಷ್ಟು ಆಹಾರ ಧಾನ್ಯ ಬೆಳೆಯಲಿ, ಅಂತೂ ರಾಷ್ಟ್ರಕ್ಕೊಂದು ಮೂಲಭೂತ ಆಹಾರ ಧೋರಣೆ ಇರಬೇಕಾದುದು ಅತಿ ಅಗತ್ಯ. ನಮ್ಮ ದೇಶದ ಆಹಾರ ಕೊರತೆ ೧೯೫೦ರಲ್ಲಿ ೫% ರಷ್ಟು ಇದ್ದುದ, ಹನ್ನೆರಡು ವರುಷದ ಬಳಿಕ ಇಂದು ಕೂಡಾ ೫% ಷ್ಟೇ ಇದೆ ಎಂದು ಊಹಿಸಲಾಗಿದೆ. ಆದರೆ ಆಹಾರ ಧಾನ್ಯಗಳ ಲೆಕ್ಕದಲ್ಲಿ ಕೊರತೆಯು ಇಷ್ಟೇ ಪ್ರಮಾಣದಲ್ಲಿದೆ ಎಂದು ಹೇಳಲು ಬರುವುದಿಲ್ಲ. ಕೊರತೆಯು ೨ ಮಿಲಿಯ ಟನ್ನುಗಳಿದ್ದುದು ೪ ಮಿಲಿಯ ಟನ್ನು ಆಗಬಹುದು. ಈ ಅಂತರವು ಜನಸಂಖ್ಯೆ ಹೆಚ್ಚಾದಷ್ಟು ಇನ್ನಷ್ಟು ಅಧಿಕವಾಗುತ್ತದೆ. ನಾವು ನಮ್ಮ ಆಹಾರದ ಅವಶ್ಯಕತೆಗಳನ್ನು ಇಂದಿನ ಪರಿಸ್ಥಿತಿ ಮಾತ್ರವಲ್ಲ, ಇನ್ನು ಮುಂದಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು, ಅಂದಾಜು ಮಾಡಬೇಕಾಗಿದೆ. ಸ್ವಾತಂತ್ರ್ಯ ದೊರೆತ ಈ ೧೭ ವರ್ಷಗಳಲ್ಲಿ ನಮ್ಮ ಜನಸಂಖ್ಯೆ ೩೬ ಕೋಟಿಯಿಂದ ೪೮ ಕೋಟಿಗಳಿಗೇರಿದೆ. ೧೯೭೦ರ ಅಂತ್ಯಕ್ಕೆ ಈ ಜನಸಂಖ್ಯೆ ಇನ್ನೂ ಏಳುವರೆ ಕೋಟಿಗಳಷ್ಟು ಏರಬಹುದು. ಅಂದರೆ ನಮ್ಮ ರಾಷ್ಟ್ರಕ್ಕೆ

(ಹದಿಮೂರನೇ ಪುಟ ನೋಡಿರಿ)

In the Court of the Civil Judge Udipi

S I A 96/64 in S C 20/64

Kalyani Shettigarthi—Plaintiff

vs

Muddanna Shetty & others —

Defts.

Notice is hereby given that the 3rd defendant Sita Shedthi wife of Sanjiva Shetty of Heggunje village, will be appointed as guardian of minor defendants 9 to 11 Sridhara, Sumathi and Sudhakara. If the said Sita Shedthi has any objections, she must appear in Court either in person or by lawyer on 26—2—65 at 11 a m , failing which, it will be taken that she consents to the appointment as guardian of minor defendants 9 to 11

B O.

K. L. Aithal,

Vakil,

Udipi, 19 2-65

ಪರಿಚಯ

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರು

ಅನು: ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್. ಕಣ್ವತೀರ್ಥ

ಒಬ್ಬ ಲಾಯರು ಅಥವಾ ಬೇರೆ ಯಾರಾದರೂ ಒಂದು ಕಾನೂನು ಸಂಬಂಧದಲ್ಲಿ "ಈ ವಿಷಯದಲ್ಲಿ ಇದೇ ಕೊನೆಯ ಮಾತು" ಎಂದು ಶಪಥ ಮಾಡಿ ಹೇಳಿದರೆ ಆಗ ಅವರನ್ನು ಟೀಕಿಸುವ ಜನರು "ನೀವೇ ಸ್ವತಃ ಅಲ್ಲಾಡಿಯವರು ಎನ್ನುವಂತೆ ಅಹಂಕಾರ ಪಡುತ್ತೀರಿ" ಎಂದು ಹೇಳುತ್ತಾರೆ. ಹಾಗೆಯೇ ಕೋರ್ಟಿನ ಸಂಬಂಧದ ಕಾನೂನಿನ ವಿಷಯದಲ್ಲಿ ವಾಗ್ಮಿತೆಯನ್ನು ಪ್ರದರ್ಶಿಸುವಾಗ "ಅವರು 'ನೋರ್ಟನ್ನ'ನಂತೆ ವಾದಿಸುತ್ತಾರೆ" ಎಂದು ಟೀಕೆಯು ಹೊರಡುತ್ತದೆ. ಅಲ್ಲಾಡಿ ಮತ್ತು ನೋರ್ಟನ್ ಎಂಬ ಹೆಸರುಗಳು ಗಣನೀಯ ನ್ಯಾಯಾಭಿಜ್ಞರು ಎಂಬ ಅರ್ಥದಲ್ಲಿ ಮನೆಮಾತುಗಳಾಗಿವೆ. ಅವರ ಹೆಸರುಗಳಲ್ಲಿ ಒಂದು ಮಹತ್ವವಿದೆ. ಜನತೆಯು ಅದನ್ನು ಪೂರ್ಣವಾಗಿ ಒಪ್ಪಿಕೊಂಡು ಗೌರವ ಭಾವನೆಯಿಂದ ಕಾಣುತ್ತಿದೆ.

ಮಹತ್ವವನ್ನುಂಟು ಮಾಡಲು ಗಣನೆಗೆ ಬರುವಂಥಾದ್ದು ದೇಹಸೌಷ್ಟವವಲ್ಲ. ಮೇಧಾ ಶಕ್ತಿಯೇ ಮುಖ್ಯವಾದುದು. ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರು ದೇಹದಲ್ಲಿ ಗಿಡ್ಡ, ಕೃಶ ಮತ್ತು ಸೌಂದರ್ಯವಿಲ್ಲದವರು. ಅವರ ಮೇಲೆ ಅಗೌರವ ಭಾವನೆಯನ್ನಿಡದಿದ್ದರೂ 'ಅಂತಹ ಒಂದು ಅನಾಕರ್ಷಕವಾದ ಆಕಾರಕ್ಕೆ ಚಲೋದಾದ ಒಂದು ಮೆದುಳನ್ನು ದೇವರು ಹೇಗೆ ಕೊಟ್ಟನು?' ಎಂದು ಯಾರಾದರೂ ಹೇಳಬಹುದು. ನಿಜವಾಗಿ ಗಣನೆಗೆ ಬರುವಂಥಾದ್ದು ದೇಹ ಮತ್ತು ಮಾಂಸಖಂಡದ ಸೌಂದರ್ಯವಲ್ಲ; ಮಾತಿನಲ್ಲಿ ವಿಚಾರದಲ್ಲಿ ಮತ್ತು ಕಾರ್ಯದಲ್ಲಿರುವ ರಮಣೀಯತೆಯೇ. ಅವರು ಅದ್ಭುತ ನ್ಯಾಯವೇದಿಗಳಾದುದರಿಂದಲೇ, ವಕೀಲ ವರ್ಗದಲ್ಲಿ ತನ್ನ ಎಲ್ಲಾ ಸಂಗಾತಿಗಳನ್ನು ಗೆದ್ದಿದ್ದರು.

ಆದರೆ ಒಂದು ಕೌತುಕದ ಘಟನೆ. ಒಂದು ಸಬೋರ್ಡಿನೇಟ್ ಕೋರ್ಟಿನಲ್ಲಿ ಅಲ್ಲಾಡಿಯವರು ಒಂದು ಸಮಯ ಕಷ್ಟಪಟ್ಟರು. ಆದರೆ ಕೊನೆಗೆ ಗೆದ್ದುಕೊಂಡರು. ಇಬ್ಬರು ಕಕ್ಷಿಗಾರರು ಅಲ್ಲಾಡಿ ಮತ್ತು ಕೆ. ವಿ. ಕೃಷ್ಣಸ್ವಾಮಿ ಅಯ್ಯರರನ್ನು ತಮ್ಮ ವಕೀಲರನ್ನಾಗಿ ಮಾಡಿಕೊಂಡಿದ್ದರು. ಕೆ. ವಿ. ಕೃಷ್ಣಸ್ವಾಮಿ ಅಯ್ಯರರು ಸುಭಗ ಸುಂದರ ರೂಪಿಗಳಾಗಿದ್ದರು. ಜರೀ ರುಮಾಲು ಮತ್ತು ಮಿರುಗುವ ವಜ್ರದ ಒಂಟಿಗಳನ್ನು ಧರಿಸಿದ್ದರು. ತುಲನೆ ಮಾಡುವಾಗ ಅಲ್ಲಾಡಿಯವರು ಗಿಡ್ಡವಾಗಿಯೂ, ಸೌಂದರ್ಯವಿಲ್ಲದವರಾಗಿಯೂ ಇದ್ದರು. ಒಳ್ಳೆಯ ರುಮಾಲನ್ನಾಗಲಿ ವಜ್ರದ ಒಂಟಿಗಳನ್ನಾಗಲೀ ಧರಿಸಿರಲಿಲ್ಲ. ಸಬೋರ್ಡಿನೇಟ್ ಜಡ್ಜರು ಯಾರನ್ನೂ ಸರಿಯಾಗಿ ತಿಳಿದಿರಲಿಲ್ಲ. ಯಾರೂ ಅವರಿಗೆ ಅವರ ಹೆಸರುಗಳನ್ನು ತಿಳಿಸಿರಲಿಲ್ಲ. ಆದ್ದರಿಂದ ಜಡ್ಜರು ಆ ಸುರೂಪಿಯಾದ ಕೆ. ವಿ. ಕೃಷ್ಣಸ್ವಾಮಿ ಅಯ್ಯರರನ್ನು ಅಲ್ಲಾಡಿಯವರೆಂದು ತಿಳಿದರು. ಒಳ್ಳೆಯ ಮೆದುಳಿಗೆ ಒಳ್ಳೆಯ ವ್ಯಕ್ತಿತ್ವವೂ ಇರಬೇಕೆಂದು ಅವರ ಅಭಿಪ್ರಾಯವಿತ್ತು. ಆದ್ದರಿಂದ ಅಲ್ಲಾಡಿಯವರು ತಮ್ಮ ವಾದವನ್ನು ಪ್ರಾರಂಭಿಸಿದಾಗ, ಕೆ. ವಿ. ಕೆ.ಯವರು ಮಧ್ಯೆ ಬಾಯಿ ಹಾಕುವುದನ್ನು ಜಡ್ಜರು ಅನುಮೋದಿಸಿದರು.

ಅಲ್ಲಾಡಿಯವರು ಮಾಡಿದ ಚಲೋದಾದ ಕಾನೂನಿನ ವಿವರಣೆಯನ್ನು ಕೇಳಿ ಕೋರ್ಟಿನಲ್ಲಿ ನೆರೆದ ವಕೀಲ ಮಂಡಳಿಯ ಎಲ್ಲಾ ಮೆಂಬರರೂ ಸಂತೋಷಪಟ್ಟರು. ಆದರೆ ಅದು ಜಡ್ಜರ ಲಕ್ಷ್ಯವನ್ನು ಸೆಳೆಯಲಿಲ್ಲ. ವಕೀಲ ಮಂಡಳಿ, ಬೆಂಚ್ ಕ್ಲಾರ್ಕ ಇವರೆಲ್ಲರೂ ಜಡ್ಜರಿಗೆ ಏನಾಗಿದೆಯೆಂದು ಆಶ್ಚರ್ಯಪಡುತ್ತಿದ್ದರು. ಲಂಚಿನ ಬಿಡುವಿನ ಸಮಯ ಕೋಣೆಯೊಳಗೆ ಬೆಂಚ್ ಕ್ಲಾರ್ಕನು ಜಡ್ಜರ ಕಿವಿಯಲ್ಲಿ ಮೆಲ್ಲಗೆ "ಆ ಕುರೂಪಿಯಾದವರೇ ನಿಜವಾದ ಅಲ್ಲಾಡಿಯವರು" ಎಂದು ಹೇಳಿದನು. ಜಡ್ಜರಿಗೆ ಆಘಾತವಾಯಿತು. ದುಃಖವಾಯಿತು. ಪಶ್ಚಾತ್ತಾಪಪಟ್ಟರು. ಆದಕ್ಕೆ ಅವರು ಪರಿಹಾರವನ್ನೂ ಮಾಡಿದರು. ಕ್ಷಣಾರ್ಧದಲ್ಲಿ ಪರಿಸ್ಥಿತಿಯೇ ಬದಲಾಯಿತು. ಕೆ. ವಿ. ಕೆ. ಯವರ ವಾದವು ಅದು ಚೆನ್ನಾಗಿ ಮಾಡಲ್ಪಟ್ಟಿದ್ದರೂ ಜಡ್ಜರಿಗೆ ಅಸಂಬದ್ಧವಾಯಿತು. ಅಲ್ಲಾಡಿಯವರ ಉತ್ತರವು ಜಡ್ಜರ ಪ್ರಕಟವಾದ ಪ್ರಶಂಸೆಗೆ ಪಾತ್ರವಾಯಿತು. ಆದ್ದರಿಂದ 'ಹೆಸರಿನಲ್ಲಿ ಏನಿದೆ? ಗುಲಾಬಿಯನ್ನು ಬೇರೆ ಹೆಸರಿನಿಂದ ಕರೆದರೂ ಅದು ಸುವಾಸನೆಯನ್ನೇ ಕೊಡುತ್ತದೆ." ಎಂಬ ಮಾತು ಪರೀಕ್ಷೆಗೆ ಒಳಗಾದಂತೆ ಕಂಡುಬಂತು. ಅವರು ನಿಜವಾದ ಅಲ್ಲಾಡಿಯವರೆಂದು ತಿಳಿದು ಬರುವ ತನಕ, ಸಹಜ ಗುಲಾಬಿಯಾದ ಅಲ್ಲಾಡಿಯವರು ಜಡ್ಜರಿಗೆ ಪರಿಮಳಿಸಲಿಲ್ಲ.

ದೇಹ ಸೌಷ್ಟವದ ಕೊರತೆ ಮತ್ತು ಅನಾರೋಗ್ಯದ ತಡೆಗಳು ಇವುಗಳಿಂದ ಮಾತ್ರವಲ್ಲದೆ, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರ ತಮ್ಮ ತಾರುಣ್ಯ ವಯಸ್ಸಿನಲ್ಲಿ ಬಡತನದ ಚಿಂತೆಗಳಿಂದಲೂ ಕಷ್ಟ ಪಡುತ್ತಿದ್ದರು. ಕೇವಲ ಹಟಸಾಧನೆ, ಅತ್ಯಂತ ಪರಿಶ್ರಮ ಮತ್ತು ಬಲವಾದ ಅಧ್ಯಯನ ಇವುಗಳು ಅವರನ್ನು ಒಬ್ಬ ಪ್ರಸಿದ್ಧ ಲಾಯರ ಜೀವನಕ್ಕೆ ತಂದವು. ಕೆಲವು ಉದಾರಿಗಳಾದ ಸ್ನೇಹಿತರು ಅವರಿಗೆ ಸಹಾಯ ಮಾಡಿದರು. ಅವರು ಅನಂತರ ತಮ್ಮ ಮುಂದೆ ಭಾಗ್ಯದೇವತೆಯು ಹಸನ್ಮುಖಿಯಾದಾಗ ಅವರೆಲ್ಲರಿಗೂ ನಾನಾ ವಿಧದಲ್ಲಿ ಕೃತಜ್ಞತೆಯನ್ನು ತೋರಿಸಿದರು. ಅವರು ಬಡತನದ ಕಷ್ಟಗಳನ್ನು ತಿಳಿದಿದ್ದರು ಆದ್ದರಿಂದ ಆಶೆಪಡುವ ಬಡ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಲು ಅನುಕೂಲವಾಗುವಂತೆ ಅವರು ಮಾಡಿದ ಉಪಕಾರಗಳು ಅಸಂಖ್ಯವಾಗಿದ್ದವು.

ಅಲ್ಲಾಡಿಯವರು ಯಾವಾಗಲೂ ಒಂದು ಕಷ್ಟದ ಬಹುಮಾನಕ್ಕೆ ಸ್ಪರ್ಧಿಸುವ, ಮಹತ್ವಾಕಾಂಕ್ಷಿಯಾದ ಒಬ್ಬ ಶಾಲಾ ವಿದ್ಯಾರ್ಥಿಯ ಪರಿಶ್ರಮವನ್ನು ಇಟ್ಟುಕೊಂಡಿದ್ದರು. ತಮ್ಮ ಶಾಲಾ ಕಾಲೇಜು ದಿವಸಗಳಲ್ಲಿದ್ದ ಅವರ ಈ ಲಕ್ಷಣವು ಆದರ್ಶ ರೂಪದ ಉಜ್ವಲವಾದ ತಮ್ಮ ವಕೀಲ ಜೀವನದಲ್ಲಿಯೂ ಉಳಿಸಿಕೊಳ್ಳಲ್ಪಟ್ಟಿತ್ತು. ಅವರಲ್ಲಿ ಅತ್ಯಾಶೆಯ ಜ್ಞಾನಪಿಪಾಸೆಯಿತ್ತು. ಅವರು ಆತುರದ ಪುಸ್ತಕಪ್ರಿಯರಾಗಿ, ಕಾನೂನು, ರಾಜನೀತಿ ಮತ್ತು ರಾಜಕೀಯ ತತ್ವ ಶಾಸ್ತ್ರಗಳಲ್ಲಿ ಚಲೋದಾದ ಪುಸ್ತಕ ಭಂಡಾರವನ್ನು ರಚಿಸಿಕೊಂಡಿದ್ದರು.

ತಮ್ಮ ವಕೀಲ ವೃತ್ತಿಯನ್ನು ಅತ್ಯಂತ ದೀನವಾದ ರೀತಿಯಲ್ಲಿ ಏನೊಂದೂ ಅನುಷಂಗಿಕ ಸಹಾಯವಿಲ್ಲದೆ ಪ್ರಾರಂಭಿಸಿದರು. ದಿವಂಗತ ಪಿ. ಆರ್. ಸುಂದರ ಅಯ್ಯರರ ಕೈಕೆಳಗೆ ಅವರು ತರಬೇತಿ ಪಡೆದರು. ಮೈಲಾಪುರದಲ್ಲಿದ್ದ ಅವರ ಮನೆಗೆ, ಜಾರ್ಜ್‌ಟೌನಿನ ಕೃಷ್ಣಪ್ಪ ನಾಯ್ಕನ್ ಅಗ್ರಹಾರದ ತಮ್ಮ ಮನೆಯಿಂದ ಟ್ರಾಮಿನಲ್ಲಿ ಪ್ರತಿ ದಿನವೂ ಯಾತ್ರೆ ಮಾಡುತ್ತಿದ್ದರು. ಟ್ರಾಮಿನಲ್ಲಿ ಕೂಡ ಲಾಯರರ ಇಂಡಿಯನ್ ಅಪೀಲುಗಳನ್ನು ಓದುತ್ತಾ ಅವರು ಚುರುಕಾಗಿರುತ್ತಿದ್ದರು. ಕೆಲವೇ ವರ್ಷಗಳಲ್ಲಿ ತಮ್ಮ ಉದ್ಯೋಗದಲ್ಲಿ ಔನ್ನತ್ಯಕ್ಕೆ ಏರಿದರು. ಅವರ ಜ್ಞಾನವು ಎಲ್ಲಾ ಶಾಖೆಗಳಲ್ಲೂ ವಿಸ್ತರಿಸಿದ್ದುದರಿಂದ ಅವರ ಪ್ರಗತಿಯು ವಿದ್ಯುದ್ವೇಗದಿಂದ ನಡೆಯಿತು. ಇಂಗ್ಲಿಷ್ ಮತ್ತು ಇಂಡಿಯನ್ ಕೋರ್ಟುಗಳ ತೀರ್ಮಾನಗಳು ಅವರಿಗೆ ಕರತಲಾಮಲಕವಾಗಿದ್ದವು. ಅವರ ಸ್ಮರಣ ಶಕ್ತಿಯು ಅದ್ಭುತವಾಗಿತ್ತು. ಕೋರ್ಟಿನ ಮುಂದೆ ಅವರು ತಾನು ಅಪೇಕ್ಷಿಸುವ ತೀರ್ಮಾನಕ್ಕಾಗಿ ಪಂಕ್ತಿ ಪಂಕ್ತಿಯಾಗಿ ಕಾನೂನು ವಾಕ್ಯಗಳನ್ನು ಎತ್ತಿ ಹೇಳುತ್ತಿದ್ದರು. ತಮ್ಮ ಮೆದುಳಿನಲ್ಲಿ ಮುಖ್ಯ ಮತ್ತು ಆವಶ್ಯಕವಾದ ವಿಷಯಗಳನ್ನು ಜೋಪಾಸನೆಯಾಗಿಟ್ಟುಕೊಳ್ಳುವುದಕ್ಕೆ ಅವರಿಗೆ ಒಮ್ಮೆ ಓದಿದರೆ ಸಾಕಾಗುತ್ತಿತ್ತು. ಬೇಕಾದುವನ್ನು ಆರಿಸಿಕೊಳ್ಳುವ ವಿಶೇಷ ಗುಣವೂ ಅವರಲ್ಲಿತ್ತು. ಮತ್ತು ಎತ್ತಿ ಹೇಳತಕ್ಕ ಮಾತುಗಳಿಗೆ ತಾನು ಅಧೋರೇಖೆ ಹಾಕಿಕೊಳ್ಳುವುದೂ, ಮಾರ್ಜಿನಿನಲ್ಲಿ ಸಾರಾಂಶ ಬರೆದುಕೊಳ್ಳುವುದೂ, ಅವರಿಗೆ ವಿಶ್ವಾಸಾರ್ಹವಾದ ಸಹಾಯಕಗಳಾಗಿದ್ದವು. ಒಂದು ವಿಶೇಷ ವಿಷಯದಲ್ಲಿ ನಡೆದ ಎಲ್ಲಾ ಕೇಸುಗಳನ್ನೂ ತನ್ನ ಜೂನಿಯರ್ ವಕೀಲರಿಂದ ಆರಿಸಿ ತೆಗೆಯಿಸಿ, ಆ ಕುರಿತು ಅವರೊಡನೆ ಸರಸವಾಗಿ ಚರ್ಚಿಸುತ್ತಿದ್ದರು. ಆದರಿಂದ ಅಲ್ಲಾಡಿಯವರ ವಾದವನ್ನು ಕೇಳಿದ ಜೂನಿಯರ್ ವಕೀಲರಿಗೂ ಜಡ್ಜರಿಗೂ ಪ್ರಯೋಜನವಾಗುತ್ತಿತ್ತು. ಕೇಸಿನ ಕಾನೂನಿನ ಪರಿಜ್ಞಾನವು ಅವರ ಚಾರಿತ್ರಿಕ ಬೆಳವಣಿಗೆಯನ್ನು

(ಹನ್ನೆರಡನೇ ಪುಟ ನೋಡಿರಿ)



ಠೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¾%ರಿಂದ 6¾%ರ ವರೆಗಿನ ಬಡ್ಡಿ ನೀಡಲಾಗುವುದು.

5 ವರ್ಷದ ಅವಧಿಗಳಿಗೆ ಮೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ನಚಿಕೇತ'ರ

ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ. 2-00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ದೇಶದ್ರೋಹಿಗಳಿಗೆ

ಪುರಂದರದಾಸರ ಹಿತೋಪದೇಶ

ಬರೆದವರು: ಶ್ರೀ ಶಿವಶಂಕರ.

ಸುಸಂಸ್ಕೃತ ಭಾರತ ಶಾಂತಿಪ್ರಿಯ ರಾಷ್ಟ್ರವಿದೆ. ಅದರ ಕಲಾಚಾರ ಅಥವಾ ಸಂಪ್ರದಾಯಕ್ಕನುಸಾರವಾಗಿ ಭಾರತದ ಪ್ರಧಾನಿಯವರು ಶಾಂತಿ ಶಂಖ ಊದುತ್ತಿದ್ದಾರೆ. ಅವರೇನೋ ಊದುವ ಶಂಖ ಊದುತ್ತಿದ್ದಾರೆ, ಆದರೆ ಅದನ್ನಿಂದು ಕೇಳುವವರ್‍ಯಾರು? ಇತರರು ಅದನ್ನು ಕೇಳುವಂತಾಗಬೇಕಾದಲ್ಲಿ ನಾವೇನು ಮಾಡಬೇಕು? ಪ್ರಪಂಚವಿಂದು ಅಣುಗುಂಡಿನ ಗುಂಗಿನಲ್ಲಿರುವಾಗ ನಮ್ಮ ಕ್ಷೀಣ ಸ್ವರವನ್ನು ಗುರುತಿಸುವವರ್‍ಯಾರು? ಅದೂ ನಾವು ನಿಮಿಷ ನಿಮಿಷಕ್ಕೆ ನುಡಿಗಳನ್ನು ನೂತನ ಗೊಳಿಸುತ್ತಿರುವಾಗ; ಕ್ಷಣಕ್ಕೆ ತಕ್ಕಂತೆ ವಡವರಿಸುತ್ತಿರುವಾಗ! ಹಾಗಿರುವಾಗ ಮಾತಿನ ಬಂಬಡದ ಆವಶ್ಯಕತೆ ಇಲ್ಲವೆಂಬುದನ್ನು ಹಿಂದಿನ ಸಂಚಿಕೆ ಸ್ಪಷ್ಟಪಡಿಸಿರುತ್ತದೆ.

ಮಾತಿನ ಮದಿರೆಯನ್ನುಳಿದು, ಆಯುವಂತ ಪುರುಷನೆದುರು ಇರುವದು ಎರಡೇ ಎರಡು ಉಪಾಯ. ಒಂದೋ, ಆಕ್ರಮಣ ರಾಷ್ಟ್ರಗಳ ಸವಾಲಿಗೆ ಉತ್ತರವೆಂಬಂತೆ, ಅವರನ್ನು ಬೆದರಿಸಲಿಕ್ಕಾಗಿ ನಾವೂ "ಮಾರಕಾಸ್ತ್ರ" ಅಣುಗುಂಡನ್ನು ತಯಾರಿಸುವುದು. ಅದು ಬೇಡವಾದಲ್ಲಿ ಸಂಜೀವಿನಿಯ ಸಿಂಚನ; ನಾವು ಅಣು ಪ್ರತಿರೋಧ ಅಸ್ತ್ರವನ್ನು ತಯಾರಿಸುವುದು ಅದರ ಕುರಿತೇ ಘನ ಸರಕಾರ ಯೋಚಿಸದಿರುವಾಗ ಇನ್ನು ಸಾಧ್ಯ—ಅಸಾಧ್ಯತೆಯ ಕುರಿತು ಮಾತು ತೆಗೆಯುವ ಸಂಭವವಾದರೂ ಎಲ್ಲಿದೆ? ಏನಿದ್ದರೂ "ನವಯುಗ"ವು ತನ್ನ ಅಭಿಪ್ರಾಯವನ್ನು ಸರಕಾರದ ಹಾಗೂ ಇತರ ಜನತೆಯ ಮುಂದಿಟ್ಟಿರುತ್ತದೆ. ಕುದುರೆಯನ್ನು ನೀರಿನ ಬಳಿ ಒಯ್ಯಬಹುದು. ಆದರೆ ಅದಕ್ಕೆ ನೀರನ್ನು ಕುಡಿಸಲು ಸಾಧ್ಯವೇನು? ಹಾಗೆಯೇ 'ನವಯುಗ' ತನ್ನ ಅಭಿಪ್ರಾಯವನ್ನು ಸುಜನತೆಯ ಅಥವಾ ಸ್ವದೇಶ ಬಾಂಧವರ ಮುಂದೆ ಇಡಬಹುದು, ಅಷ್ಟೇ. ವಿನಃ ಪ್ರತಿರೋಧ ಅಸ್ತ್ರಗಳನ್ನು ತಯಾರಿಸಲು ಅದಕ್ಕೆ ಸಾಧ್ಯ ಇರುವದಿಲ್ಲ.

'ನವಯುಗ'ಕ್ಕೆ ಮಾತ್ರ ಅದು ಸಾಧ್ಯವಾಗದೆ ಇರುವದಲ್ಲ. ಸರಕಾರವೂ ಸಂಕಷ್ಟಗಳನ್ನು ಸಹಿಸಿಕೊಳ್ಳಬೇಕಾಗಿರುವುದೆಂಬುದನ್ನು ಸಂಕೋಚಪಡದೆ 'ನವಯುಗ" ತಿಳಿಸಿರುತ್ತದೆ. ಅಣ್ವಸ್ತ್ರ ತಯಾರಿಗೆ ಇರುವ ಅಡೆತಡೆಗಳೇನೆನ್ನುವದನ್ನು ಆಲೋಚಿಸುವಾಗ ಆ ವಿಷಯವನ್ನು ವಿಷದ ಪಡಿಸಲಾಗಿರುತ್ತದೆ. ಭಾರತ ಸಹಿಸಿಕೊಳ್ಳಬೇಕಾಗಿರುವ ಹಲವಾರು ಸಂಕಷ್ಟಗಳಲ್ಲಿ ದೇಶ ದ್ರೋಹಿಗಳ ಹೆಸರೂ ಇದೆ. ದೇಶ ದ್ರೋಹಿಗಳೆನ್ನುವಾಗ ಕಮ್ಯೂನಿಸ್ಟರು, ಮುಸ್ಲಿಂ ಲೀಗಿನವರ ಅಲ್ಲದೆ ದ್ರಾವಿಡ ಮುನ್ನೇಟ್ರ ಕಳಗಂ ಮುಂತಾದವರ ಹೆಸರು ಜ್ಞಾಪಕಕ್ಕೆ ಬರುತ್ತದೆ. ಈ ಮುವ್ವರೂ ಒಂದು ರೀತಿಯಿಂದ ಇಷ್ಟಿದ್ದಲ್ಲಿ ಇನ್ನೊಂದು ರೀತಿಯಲ್ಲಿ ಭವ್ಯ ಭಾರತದ ಚಿತ್ರವನ್ನು ಚಿನ್ನ ಭಿನ್ನಗೊಳಿಸಲು ಸಮಯ ಕಾಯುತ್ತಿದ್ದಾರೆಂಬ ದು 'ನವಯುಗ' ವಾಚಕರಿಗೆ ಚೆನ್ನಾಗಿ ಗೊತ್ತು. ಹೇಗಾದರೂ ಮಾಡಿ ಕಾಂಗ್ರೆಸ್ಸನ್ನು ಕಾಲಡಿಗೆ ಹಾಕಿಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವ ಸ್ವತಂತ್ರ ಪಾರ್ಟಿಯೂ ಅವರೊಡನೆ ಕೈಕುಲುಕಿಸಿಕೊಳ್ಳುತ್ತಿದೆ. ಅದರ ನಗ್ನ ಚಿತ್ರವನ್ನು ಭಾರತೀಯ ಜನತೆ ಇದೀಗ ಕಂಡಿತು.

ಈಶಾನ್ಯ ಸರಹದ್ದಿನಲ್ಲಿ ಇತ್ತೀಚಿಗೆ, ಒಂದು ಸಾರ್ವಜನಿಕ ಸಭೆಯಲ್ಲಿ ಭಾರತದ ರಕ್ಷಣ ಮಂತ್ರಿ ಶ್ರೀ ಯಶವಂತ ಚವ್ಹಾಣರು ಭಾಷಣ ಕೊಡುತ್ತ, ಚೈನಾವು ಪುನಃ ಆಕ್ರಮಣ ನಡೆಸಿದಲ್ಲಿ (ನಮ್ಮ ಪ್ರದೇಶದಲ್ಲಿ ಅದರ ಪಾದವನ್ನಿಟ್ಟಲ್ಲಿ) ಅದಕ್ಕೆ ನಾವು ಬಿಡುವದಿಲ್ಲವೆಂದು ಗಡಿ ಪ್ರದೇಶದ ಜನತೆಗೆ ಧೈರ್ಯವೀಯುವ ಮಾತುಗಳನ್ನಾಡಿದ್ದಾರೆ. ಆದರೆ ಅನಾಗಲೇ ಆಕ್ರಮಣಗಾರರ ಅಂಗೈಯಲ್ಲಿರುವ ಅಂಗದ ಅವಸ್ಥೆ ಅದೇನೆಂಬುದನ್ನು ಅವರು ಅರುಹಿರುವದಿಲ್ಲ. ಹೋದದ್ದು ಹೋಯಿತೇ ಏನು? ನಮ್ಮ ಗಡಿ ಪ್ರದೇಶ ಆರಂಭವಾಗುವದಾದರೂ ಎಲ್ಲಿಂದ? ನಮ್ಮ ರಕ್ಷಣಾ ಮಂತ್ರಿಗಳು ಆ ರೀತಿ ಗಡಿ ಪ್ರದೇಶದ ಪ್ರಜೆಗಳಿಗೆ ಹೇಳ ಬೇಕಾದರೆ ಕಮ್ಯೂನಿಸ್ಟ್ ಚೈನಿ ಸೇನೆಯ ಚಲನವಲನದ ಅರಿವು ಅವರಿಗಾಗಿರಲೇಬೇಕು.

ಗ್ಯಾಂಗ್ಟೋಕಿನಲ್ಲಿ ಭಾರತದ ಉಪ-ರಕ್ಷಣಾ ಮಂತ್ರಿ ಶ್ರೀ ರಾಜುರವರು ಪತ್ರಿಕೋದ್ಯಮಿಗಳ ಬಳಿ ಮಾತಾಡುತ್ತಿರುವಾಗ, ಚೈನೀಯರು ಚುಂಬಿ ಕಣಿಯಲ್ಲಿವೆ ಕ್ರಮಶಃ ಅವರ ಸೇನಾ ಬಲವನ್ನು ಹೆಚ್ಚಿಸುತ್ತಿದ್ದಾರೆಂದು, ಅವರ ಬಲವನ್ನು ಇಂದು ನಾವು ಅಲಕ್ಷಿಸಲು ಸಾಧ್ಯವಿಲ್ಲವೆಂದೂ ಅವನ್ನೆದುರಿಸಲು ಭಾರತ ಸಿದ್ಧವಾಗಿದೆಯೆಂದೂ ಹೇಳಿರುವರು.

ಜವಾಬ್ದಾರಿಯುತ ಈ ಎರಡು ವ್ಯಕ್ತಿಗಳ ಮಾತುಗಳಿಂದ ಹಾಗೂ ಭೂತಾನ-ಸಿಕ್ಕಿಂ ಪ್ರದೇಶದತ್ತ ಚೈನಿ ಸೇನೆ ಮುಂದಕ್ಕೆ ಬಂದಿರುವ ಸುದ್ದಿ ಮತ್ತು ಸಿಂಹಳವನ್ನು ಸಂಕಷ್ಟದಲ್ಲಿ ಸಿಲುಕಿಸಲು ಹಲವಾರು ರೂಪಗಳಿಂದ ಚೈನಿ ಕಮ್ಯೂನಿಸ್ಟರು ಪ್ರಯತ್ನಿಸುತ್ತಿರುವ ವರ್ತಮಾನಗಳು ಪತ್ರಿಕೆಗಳಲ್ಲಿ ಬರುತ್ತಿರುವಾಗ ನಾವು ಒಂದು ನಿರ್ಣಯಕ್ಕೆ ಬರಲು ಸಾಧ್ಯವಿದೆ—ಗಡಿ ಪ್ರದೇಶದಲ್ಲಿ ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿರುವ ಚೈನಿ ಕಮ್ಯೂನಿಸ್ಟರು ಭಾರತದೊಳಗಿನ ದೇಶದ್ರೋಹಿಗಳಿಂದ ಪಚ್ಚೆ ಗುರುತಿಗಾಗಿ ಕಾಯುತ್ತಿದ್ದಾರೆ. ಇಲ್ಲಿರುವ ದೇಶದ್ರೋಹಿಗಳಾದರೋ ಪಚ್ಚೆ ಗುರುತಿಗಾಗಿ ಕಾಯುತ್ತಿದ್ದಾರೆ. ಇಲ್ಲಿರುವ ದೇಶದ್ರೋಹಿಗಳಾದರೋ ಪಚ್ಚೆ ಗುರುತು ತೋರಿಸಲು ಚಡಪಡಿಸುತ್ತಿದ್ದಾರೆ.

ಭಕ್ತದ ಸಿಪ್ಪೆ ಅಥವಾ ಉಮಿಯ ರಾಶಿಯಲ್ಲಿರುವ ಬೆಂಕಿಯಂತೆ ಇತ್ತ ತಮಿಳು ನಾಡಿನ ಪರಿಸ್ಥಿತಿ ಇದೇ ಜನವರಿ ಇಪ್ಪತ್ತಾರರಿಂದ ಕ್ರಮಶಃ ಅದು ಹೆಚ್ಚಾಗುತ್ತ ಹೋಗಿ ಸಾಧಾರಣ ಒಂದು ವಾರ ಇಡೀ ತಮಿಳುನಾಡು ಧಗಧಗಿಸಿತು. ಆ ಬೆಂಕಿಯನ್ನು ನೊಂದಿಸಲಿಕ್ಕಾಗಿಯೋ ಎಂಬಂತೆ ಫೆಬ್ರವರಿ ದಿನಾಂಕ ಹನ್ನೆರಡರಂದು ರಾತ್ರಿ ಮಳೆ ಬಂದು ಬಿಟ್ಟಿತು. ಈ ರೀತಿ ಬೆಂಕಿ ಕೊಟ್ಟವರ್‍ಯಾರು? ಚೈನೀ ಕಮ್ಯೂನಿಸ್ಟರೇ? ಅಲ್ಲವೇ ಅಲ್ಲ. ತಮಿಳುನಾಡಿನ ಕೆಲ ದುರ್ಜನರೇ ಇದ್ದಾರೆ. ಜನವರಿ ಇಪ್ಪತ್ತಾರರಿಂದ ಹಿಂದಿ ವ್ಯವಹಾರಿಕ ಭಾಷೆಯಾಗಿರುವದನ್ನು ತಡೆಯಲಿಕ್ಕಾಗಿ ಅವರು ತಮಿಳುನಾಡನ್ನೇ ಸುಡಲೂ ಹೇಸಲಿಲ್ಲ! ಅದರಲ್ಲಿ ರಾಜಗೋಪಾಲಾಚಾರಿಯವರು ಪುರೋಹಿತನ ಸ್ಥಾನದಲ್ಲಿದ್ದರು. ಅಣ್ಣಾದೊರೈ, ಕಾಮರಾಜರವರು ಬಲಿಕೊಡುವವರ (ಮಾದಿಗರ) ಸ್ಥಾನದಲ್ಲಿದ್ದರು. ಈ ದೊಡ್ಡ ಜನರು ನೂರಾರು ಮುಗ್ಧ ಜನರನ್ನು ಬಲಿಕೊಟ್ಟರು. ಇನ್ನೂ ಅವರಿಗೆ ತೃಪ್ತಿಯಾಗಿರುವದಿಲ್ಲ. ಆ ಕೊಳ್ಳಿ ತಮ್ಮನ್ನು ಸುಡುವ ಮುಂಚೆ ತಪ್ಪಿಸಿಕೊಳ್ಳಲಿಕ್ಕಾಗಿ ಸುಬ್ರಹ್ಮಣ್ಯಂ ಮತ್ತು ಅಲಗೇಶನ್‌ರವರು ಪ್ರಧಾನಿಯವರನ್ನು ನಡುನೀರಿನಲ್ಲಿ ಕೈಬಿಟ್ಟು ಬಿಟ್ಟರು. ಮುಖಂಡರೆನಿಸಿಕೊಳ್ಳುವವರು ಜನತೆಯನ್ನು ಹಾದಿ ತಪ್ಪಿಸಿದರು. ಭಾಷಾ ಬಡಬಾಗ್ನಿಗೆ ಬೀದಿ ಬಾಲಕರನ್ನು ಬಲಿ ಇತ್ತರು. ಆ ಮುಖಂಡರಾದರೋ ಮುಖ ತಪ್ಪಿಸಿಕೊಂಡು ಕಂಸಕಾಲಿಕಾತಲ್ಪದ ಮೇಲೆ ಬಿದ್ದುಕೊಂಡು ಆಂಗ್ಲ ಭಾಷಾ ಪತ್ರಿಕೆಗಳ ಹಾಗೂ ನಮ್ಮ ಬಾಲ ಬಡುಕರ ಸಹಾಯದಿಂದ ಬಡಬಾಗ್ನಿಗೆ ಆಹುತಿಗಳನ್ನೊದಗಿಸಿ ಕೊಟ್ಟರು. ಈ ರೀತಿ ಪ್ರಪಂಚದಲ್ಲಿ ಭಾರತದ ಮುಖಕ್ಕೆ, ಭಾರತದಲ್ಲಿ ತಮಿಳು ನಾಡಿನ ಮುಖಕ್ಕೆ ಅವರು ಅಂಜದೆ, ಅಳುಕದೆ, ಅಹಸ್ಯ ಪಡದೆ, ಮಸಿ ಬಳೆದು ಬಿಟ್ಟರು. ಹಿಂದೆ ಆಂಗ್ಲೇಯರ ಆಳ್ವಿಕೆಯನ್ನು ಎದುರಿಸಿದ್ದ ಕಟ್ಟಬೊಮ್ಮನ್, ಭಾರತೀ, ಚಿದಂಬರ ಪಿಳ್ಳೈ, ಸುಬ್ರಹ್ಮಣ್ಯಂ, ಶಿವ, ಕುಮಾರನ್ ಮುಂತಾದ ದೇಶಾಭಿಮಾನಿಗಳನ್ನು ಅವರ ಸ್ವದೇಶ ಬಾಂಧವರೇ ಹಿಂಸಿಸಿದಂತೆ, ಇಂದು ಆಂಗ್ಲ ಭಾಷೆಯ ಆಳ್ವಿಕೆಯನ್ನು ಎದುರಿಸಿದ ದೇಶಾಭಿಮಾನಿಗಳನ್ನು ಹಿಂಸಿಸಲಾಯಿತು. ನಗರ ರಕ್ಷಕ ಪಡೆಗೂ ಹಿಂಸಾ ಕೃತ್ಯಗಳನ್ನು ನಿಲ್ಲಿಸಲಾಗಲಿಲ್ಲ. ಸೇನೆಯೇ ಬರಬೇಕಾಯಿತು. ಆಗ ಬುಸುಗುಟ್ಟುತ್ತಿದ್ದ ಸೊಕ್ಕಿನ ವಿಷಸರ್ಪ ಬಿಲದೊಳಗೆ ನುಸುಳಿಕೊಂಡಿತು.

ಕಮ್ಯೂನಿಸ್ಟರ ರಕ್ತದ ಕಣಕಣದಲ್ಲೂ ದೇಶ ದ್ರೋಹದ ಗುಣವೇ ಬೆರೆತುಕೊಂಡಿರುವದೆಂಬುದನ್ನು ಅವರು ಆ ಸಂದರ್ಭದಲ್ಲೂ ಪ್ರಕಟಪಡಿಸಿದರು. ದೇಶದೊಳಗೆ ಭಾಷಾ ಬಡಬಾಗ್ನಿ ಭಗಭಗನೆ ಜ್ವಲಿಸುವಂತಾಗಬೇಕೆಂದು ಅವರು ಪ್ರಯತ್ನಿಸಿದರು. ಇದಕ್ಕಾಗಿ ಹೀನ ಕೃತ್ಯಕ್ಕೆ ಹಿಂಜರಿಯಲೂ ಅವರು ಹೇಸಲಿಲ್ಲ. ಉದ್ರಿಕ್ತ ಜನತೆಯೊಂದಿಗೆ ತಾವೂ ಒಟ್ಟಿಗಿದ್ದೇವೆಂದು ನಾಟಕವಾಡಿದರು. ಉಗಿ ಬಂಬಂಡಿ, ಇತರ ವಾಹನ ಸೌಕರ್ಯ, ಅಂಚೆ ಕಾರ್ಯಾಲಯ ಹಾಗೂ ಇತರ ಕಾರ್ಯಾಲಯಗಳಿಗೆ ಹಿಂದಿಯನ್ನೆದುರಿಸುವ ಮುಖವಾಡ ಹಾಕಿಕೊಂಡು ಬೆಂಕಿ ಕೊಡಲಾಯಿತು.

ದೇಶದ ಇತರೆಡೆಗಳಲ್ಲೂ ದಳ್ಳುರಿ ಎಬ್ಬಿಸಲು ಅವರು ಪ್ರಯತ್ನಿಸಿದರು. ಬಂಗಾಲವನ್ನು ಬಡಿದೆಬ್ಬಿಸಲು ಬಹಳ ಪ್ರಯತ್ನಪಟ್ಟರು. ಅವರ ಮುಖಂಡ ಜ್ಯೋತಿ ಬಸು ಭಾರೀ ಭಾರಿ ನಾಟಕವಾಡಿದರು. ಪುಣ್ಯವಶಾತ್, ಅಲ್ಲಿ ಅವರ ಬೇಳೆ ಬೇಯಲಿಲ್ಲ.

ಮದ್ರಾಸಿನ ಮಹಾ ಖ್ಯಾತಿಗೆ ಮಸಿ ಬಳೆದವರು ದ್ರಾವಿಡ ಮುನ್ನೇಟ್ರ ಕಳಗಮಿನವರಾದರೂ ಕಮ್ಯೂನಿಸ್ಟರತ್ತ ಕೈ ಮಾಡಿ ತೋರಿಸಲು ಕಾರಣವೇನೆಂದು ಕೆಲವರು ಕೇಳಬಹುದು. ಹೌದು, ಮಸಿ ಬಳೆದವರು ದ್ರಾವಿಡ ಮುನ್ನೇಟ್ರ ಕಳಗಮಿನವರು. ಅವರಿಗೆ ಪಕ್ಕ ಬಲವಾಗಿದ್ದವರು ಸ್ವತಂತ್ರ ಪಾರ್ಟಿ ಹಾಗೂ ಮುಸ್ಲಿಂ ಲೀಗಿನವರು. ಕಾಂಗ್ರೆಸ್ಸಿನ ಕಾಲೆಳೆಯಲು ಈ ಮುವ್ವರೂ ಒಂದಾಗಿದ್ದಾರೆ. ಊರಿಗೆ ಬೆಂಕಿ ಕೊಟ್ಟವರು, ತಮಗೆ ತಾವೇ ಬೆಂಕಿ ಹಚ್ಚಿಕೊಂಡವರು, ಮನೆ ಭಾಷೆಯಾಗಿ ಹಿಂದಿ ಉಪಯೋಗಿಸುವವರನ್ನು ಕೊಳ್ಳಿ ಹೊಡೆದವರು, ದಾರಿ ಹೋಕರನ್ನು ಬಲಾತ್ಕರಿಸಿ ದೋಚಿದವರು, ಎದುರು ಮಾತಾಡಿದವರಿಗೆ ಪೆಟ್ಟು ಕೊಟ್ಟವರು, ನಗರ ರಕ್ಷಕರ ಕೈಯಲ್ಲಿ ಪೆಟ್ಟು ತಿಂದವರು, ಜೀವ ಬಿಟ್ಟವರು....ದ್ರಾವಿಡ ಮುನ್ನೇಟ್ರ ಕಳಗಮಿನ ಸದಸ್ಯರು ಹಾಗೂ ಸಹಾನುಭೂತಿ ತೋರಿಸುವವರೇ ಇದ್ದಾರೆ. ಅವರಿಗೆ ಪ್ರೋತ್ಸಾಹವಿತ್ತು, ತೆರೆಯ ಮರೆಯಲ್ಲಿ ದೇಶದ್ರೋಹಿ ಕುಕೃತ್ಯ ನಡೆಸಿದವರು ಮುಸ್ಲಿಂ ಲೀಗಿನವರಾದಲ್ಲಿ, ಧನವಂತ ಹಾಗೂ ಆಂಗ್ಲ ಭಾಷಾ ವಿದ್ಯಾಭ್ಯಾಸದ ಗಾಳಿ ಸೋಂಕಿರುವವರ ಮೂಲಕ ದ್ರಾವಿಡ ಮುನ್ನೇಟ್ರ ಕಳಗಮಿನವರು ಉರಿಸಿದ ಬೆಂಕಿಗೆ ತುಪ್ಪ ಸುರಿದವರು ಸ್ವತಂತ್ರ ಪಾರ್ಟಿಯವರು. ಹಿಂದಿ-ವಿರೋಧಿ ವಿದ್ಯಾರ್ಥಿಗಳ ವೇಷದ ಹಿಂದಿನಿಂದ ಹೇಯ ಕುಕೃತ್ಯ ನಡೆಸಲು ಹೇಗೆ ಸಾಧ್ಯವೆಂಬುದನ್ನು ತಿಳಿಸಿದವರು ಸ್ವತಂತ್ರ ಪಾರ್ಟಿಯವರು. ಜನತೆಯನ್ನು ರೊಚ್ಚಿಗೇಳಿಸಲು ಸುಲಭೋಪಾಯವೇನೆಂಬುದನ್ನು ತಿಳಿಸಿದವರು ಸ್ವತಂತ್ರ ಪಾರ್ಟಿಯ ಆಚಾರ್ಯ ರಾಜಗೋಪಾಲಾಚಾರಿಯವರು. ಅದಕ್ಕಾಗಿ ಅವರು ಬೀದಿ ಬಾಲಕರನ್ನುಪಯೋಗಿಸಿಕೊಂಡರು; ಗೂಂಡಾ ರಾಜ್ಯದ ತನ್ನ ಪ್ರದರ್ಶನವನ್ನು ಮಾಡಿಸಿದರು. ಇಲ್ಲಿ ಕಮ್ಯೂನಿಸ್ಟರು ಮಾಡಿದ್ದೇನು?

ದ್ರಾವಿಡ ಮುನ್ನೇಟ್ರ ಕಳಗಂ, ಸ್ವತಂತ್ರ ಪಾರ್ಟಿ ಹಾಗೂ ಮುಸ್ಲಿಂ ಲೀಗು ಹಿಂದಿಯನ್ನೆದುರಿಸುವ ಪಕ್ಷಗಳೇ ಇವೆ. ಆಗೀಗ 'ತಮಿಳು' 'ತಮಿಳೆಂ'ದು ತಡವರಿಸುತ್ತ ಉತ್ತರದ ಭಾಷೆ ಹಿಂದಿಯನ್ನೆದುರಿಸಿ ಆಂಗ್ಲೇಯ ಭಾಷೆಗೆ ಆಗ್ರಾಸನವೀಯುವದೇ ದ್ರಾ. ಮು. ಕ. ದ ಕಾರ್ಯಾಚರಣೆಗಳಲ್ಲಿ ಒಂದು. ಸ್ವತಂತ್ರ ಪಾರ್ಟಿಯಲ್ಲಿ ಎಲ್ಲರಿಗೂ ಎಲ್ಲಾ ವಿಧದಲ್ಲಿ ಸರ್ವ ಸ್ವಾತಂತ್ರ್ಯವಿದ್ದರೂ ಈಗ ಆಚಾರ್ಯ ಸ್ಥಾನದಲ್ಲಿರುವವರು ರಾಜಗೋಪಾಲಾಚಾರಿಯವರು. ಇವರಿಗೆ ಈಗ ಇಂಗ್ಲೀಷೂ ಬೇಡ, ಹಿಂದಿಯೂ ಬೇಡ. ತನ್ನನ್ನು ಬದಿಗೆ ಸರಿಸುವ ಕಾಂಗ್ರೆಸ್ಸಿನ ಇತಿಶ್ರೀಯಾಗಬೇಕು, ಕಾಂಗ್ರೆಸ್ ಕಳೇಬ

(ಹನ್ನೊಂದನೇ ಪುಟ ನೋಡಿರಿ)

ಗೇಹ ರಾಜ್ಯದಲ್ಲಿ

ಸಮಾಧಿಯಿಂದ ಎದ್ದು ಬರಬೇಕೆ?

"ಕೇಳಿದಿಯೇನೇ ಒಂದು ಸುದ್ದಿಯನ್ನ...?"

"ಒಂದಲ್ಲ ನೂರು ಕೇಳಿದ್ದೇನೆ..."

"ಏನದೂಂತ?'

"ಅಯ್ಯೋ, ಅವೆಲ್ಲಾ ಎಲ್ಲಿನೆನ್ಪಿರುತ್ತೇಂದ್ರೆ...'

"ಮತ್ತೆ ಕೇಳಿದ್ದೀಂತ ಸಾಧಿಸೋದು ಹೇಗೇಂತ....'

'ಅಲ್ಲಾ, ಸಾಧಿಸಿ ಆಗಬೇಕಾದ್ದಾದ್ರು ಏನೂಂತ.. ?"

'ಒಳ್ಳೆ ಕಥೆಯಾಯ್ತಲ್ಲ ಇದು...?"

'ಯಾವುದು?'

"ಅದೇ ಸೀನನ್ನೋದು, ಓದೋದು, ಮತ್ತೆ ಮರ್ತು ಬಿಡೋದು..."

"ಅಲ್ರಿ, ನೀವೇ ಅಂದಿದ್ರಲ್ಲ, ಓದಿದ್ದನ ಕೇಳಿದ್ದನ್ನೆಲ್ಲಾ ನೆನ್ಪಿನಲ್ಲಿಡೋಕೆ ಈ ಚಿಕ ತಲೆ ಇರುಟು ಸಾಕಾಗದೂಂತ..."

"ಹ್ಞೂಂ...."

"ಮತ್ತೆ ನೋಡಿ, ದೇವ್ರು ಕೊಟ್ಟಿರೋ ಎರಡು ಕಿವಿಗಳಲ್ಲ ಒಂದು ಕೇಳೋಕೆ ಮತ್ತೊಂದು ಹೋಗೆ ಬಿಡೋಕೇಂತ...."

'ಅಲ್ವೇ, ನಾನು ಎಂದೋ ಏನೋ ಹೇಳಿದ್ದೆ. ಅದನ್ನೆಲ್ಲಾ ನೆನಪಿನಲ್ಲಿಡೋಕೆ ಸಾಧ್ಯವಿದೆಯಂತೆ, ಮತ್ತೆ ಓದಿದ್ದನ್ನ..."

"ಅಲ್ರಿ, ಹೇಳಿದೋರು ನೀವು. ಅದನ್ನ ನೀವೇ ಮರ್ತು ಬಿಟ್ಟಿದ್ದೀರೀಂತ..."

'ನಾನು ಅಂದದ್ದನ್ನ ನನಗೆ ಮರ್ತು ಬಿಡೋಕೆ ಒಂದು ನ್ಯಾಯವಿದೆ...'

'ಏನದೂಂತ ಕೇಳಬಹುದೆ?'

'ಅದನ್ನ ನೀನು ಕೇಳಿ ಮಾಡೋದಾದ್ರೂ ಏನ ?

'ಏನೂಂತಂದ್ರೆ? ನಿಮಗೆ ಸಹಾಯಕವಾಗೋ ನ್ಯಾಯ ನನ್ಗೂ ಏಕಾಗ್ಬಾರದೂಂತ?'

"ಅಯ್ಯೋ, ಅದೆಲ್ಲಿ ಆಗುತ್ತೆ?'

'ಯಾಕೆ ಆಗೊಲ್ಲಾ..."

'ಯಾಕೇಂತಂದ್ರೆ.... ಯಾಕೇಂತಂದ್ರೆ...'

'ಯಾಕೆ ತಡವರ್ಸ್ತೀರಾ?"

'ಮತ್ತೇನೂ ಇಲ್ಲ- ನೋಡು, ಲೋಕದಲ್ಲಿ ಗಂಡಸ್ರಿಗೇನೇ ಒಂದು ನ್ಯಾಯವಿರುತ್ತೆ... ಹೆಂಗಸ್ರಿಗೇನೇ ಇನ್ನೊಂದು...."

'ಅದೇ ನಾನೂ ಕೇಳ್ತಿರೋದು ಏನೊಂತ...'

"ನೋಡು, ಗಂಡಸ್ರಿಗೆ ಮರೆವೆ ಗಡ್ಡ ಬರೋದು ನ್ಯಾಯ. ಆದ್ರೆ ಹೆಂಗಸ್ರಿಗೆ...'

'ಅಯ್ಯೋ ಸಾಕು ಮಾಡೀಂದ್ರೆ.... ಹೇಳೋದಿದ್ರೆ ಹೇಳಿ..."

"ಸದ್ಯ ಬದುಕಿದೇನ್ನ...."

"ಮತ್ತೆ ಈ ಮೊದ್ಲು ಸತ್ತಿದ್ದಿರಾಂತ..'

"ರಾಮ ರಾವ, ಅಶುಭಗಳು ದೂರ ಸರಿಯಲಿ, ಅಶುಭಗಳು ದೂರ ಸರಿಯಲಿ...."

"ಏನಿದು ನಿಮ್ಮ ನಾಟಕಾಂತ...?"

"ನಾಟಕವೆಲ್ಲಿ ಬಂತೆ?"

"ಮತ್ತೆ ಹೀಗೆಲ್ಲಾ ನಾಟಕದ ಮಾತಾಡ್ತಾ ಇದ್ದೀರಲ್ಲಾ...?"

"ಮತ್ತೆ ನಿನ್ಗೆ ನಾನು ಸತ್ತೇನೇ ಚೆನ್ನಾಂತಿದ್ರೂ ನಾನು ಸಾಯಲು ತಯಾರಿಲ್ಲ ನೋಡು..."

"ಅಯ್ಯೋ ನಿಮ್ಗೊಂದು ಯಾವಾಗ್ಲೂ ಹೀಗೇನೆ"

"ಮತ್ತೆ ಸತ್ತಿದ್ದಿರಾಂತಂದೆಯಲ್ಲಾ...'

"ಏನೋ ಮಾತಾಡೋ ಭರದಲ್ಲಿ ಅಂದೇಂತ ಇಟ್ಕೊಳ್ಳಿ...."

"ಅಂದ್ರೆ ಈಗ ನೀನಂದದ್ನ ಈಗ್ಲೇ ಮರ್ತು ಬಿಟೇಂತಾಯ್ತು....'

'ಪರ್ವಾಗಿಲ್ಲಾ ಕಂಡ್ರಿ ನೀವು..."

'ನಾನೇನೂ ಕಾಣ್ಲಿಲ್ಲ...."

"ನನ್ನನ್ನೂ....'

'ಓ, ಹಾಗೆ... ಹ್ಞಂ.... ಈಗ ಕಾಣ್ತಾ ಇದ್ದೇನೆ..."

'ಅಲ್ಲಾ, ನೀವು ಬದುಕಿದ್ದೇಂತಂದ್ರಲ್ಲಾ....'

'ಹೌದು .."

'ಯಾಕೇಂತ...'

"ಸಾಕು ಬಿಡೇ ನೀನು. ತಿಳೀತು ನಿನ್ನ ನಾಟಕ. ಅಂತೂ ನಾನು ಬದುಕಿರ್ಬಾರದೂಂತೆ.... ..."

'ಛೆ, ಛೆ - ತಪ್ಪು ತಿಳ್ಕೋ ಬೇಡಿ.... ಯಾವ ಕಾರಣದಿಂದ ಹಾಗಂದ್ರೀಂತಂದ್ರೆ...'

'ಓ... ಸರಿ ಸರಿ. ಈಗ ಅರ್ಥವಾಯಿತು. ಕೇಳು. ನೀನ ಅನ್ಯಾಯವನ್ನ ಹೇಳೋದಿದ್ರೆ ಹೇಳೀಂತಂದಿಯಲ್ಲಾ..."

"ಹ್ಞಂ...'

'ಹೇಳೋದಿಲ್ಲಾಂತಿದ್ರೆ...'

"ಊಹ್ಞೂಂ. ನೀವು ಹೇಳ್ಲೇಬೇಕು."

"ಅಂದ್ರೆ ಇದು ಆಜ್ಞೆ..."

"ಹೌದು...."

'ಗಂಡನಾದೋನಿಗೆ ಆಜ್ಞೆ ಕೊಡೋ ಹಕ್ಕೂ ಮುಂದ್ವರಿದೆಯಲ್ವೆ?"

'ಮತ್ತೆ, ನೀವೇ ಹೇಳಿದ್ರಿ ಗಂಡ ಹೆಂಡ್ತಿಗೆ ಆಜ್ಞೆಯಾಯೋದು, ಹೆಂಡ್ತಿ ಅತನೊನೆ ವಿನಯದಿಂದ ಕೇಳೋದೂಂತ...."

"ಅಂದ್ರೆ ನೀನೀಗ ವಿನಯದಿಂದ ಕೇಳ್ತೀದೇಂತಾಯ್ತು ..."

'ಹ್ಞೂಂ....'

"ಅಲ್ವೆ.... ವಿನಯ ಎಲ್ಲಿದ್ದನೇಂತ...'

'ಈಗ ತಾನೇ ಬಂದೀ ಪರೀಕ್ಷೆ ಮುಗ್ಸಿ ಬಂದಿದ್ದ. ಒಳ್ಳೆ ಇರಬಹುದು...."

'ಹೌದೇ, ಹೇಗಾಡಿದೆಯಂತೆ?'

'ಏನ?'

'ಅವನ ಪರೀಕ್ಷೆ..."

'ಲೆಖದಲ್ಲಿ ಪರ್ವಾಗಿಲ್ಲಾಂತಾನೆ,

'ಮತ್ತೆ...'

'ಮತ್ತೆ ಮೌಖಿಕದಲ್ಲಿ ಮೂರಾಬಟ್ಟೆಯಂತೆ .."

'ಏನಂತೆ?'

'ಮತ್ತೇನೂ ಇಲ್ಲ. ಯಾವುದೋ ಒಂದು ಹೆಸರು ಕೊಟ್ರಂತೆ. ಓದೂಂತ್ರಂದ್ರಂತೆ. ಇವ ಒಂದು ನಿಮಿಷಾನೂ ಓದ್ಲಿಲ್ಲ, ಹಿಂದೆ ತಕ್ಕೊಂಡ್ರಂತೆ...'

'ಮತ್ಯಾಕಂತೆ ಓದೂಂತಂದದ್ದು....'

'ಹೇಳ್ತೀನೆ, ಕೇಳಿ.... ನೀನೀಗ ಓದಿದ್ದ ವಿಷಯವೇನೂಂತಂದ್ರಂತೆ ..."

'ಹ್ಞಂ...'

'ಅದ್ಕೆ ಇವ ಮುಖ ಮುಖ ನೋಡಿ ನೆನ್ಪಿಲ್ಲಾಂತಂದ್ನಂತೆ...'

"ಅದಕ್ಕೆ...."

'ಮತ್ತೆ ನೀನು ಓದೋದು ಏನು? ಈಗ ಓದಿದ್ದು ಈಗ ನೆನ್ಪಿಲ್ಲಾಂತಂದವ ಪರೀಕ್ಷೆಯ ಪ್ರಶ್ನೆಗಳಿಗೇನು ಉತ್ರ ಬರ್ದಿದ್ದಿರಾಂತ ಹೀಯಾಳಿಸಿ ಮಾತಾಡಿದ್ರಂತೆ.... ..."

"ಕೇಳ್ಬೇಕಿತ್ತು ಇವ ನೀವು ಏನನ್ನ ಓದ್ಲಿಕ್ಕೆ ಹೇಳಿದ್ದೀರೀಂತ..."

"ಅಲ್ರಿ, ಅಪ್ಪ ಇವನ್ನ ಪ್ರಶ್ನಿಸೋದ್ರಲ್ವೆ"

"ಅಲ್ವೆ ಮತ್ತೆ?"

'ಕೊನೆಗೆ ಅಂದ್ರಂತೆ, ಓದೋವಾಗ ವಿಷಯವನ್ನ ಮೆದುಳಿಗೆ ತಂದ್ಕೊಬೇಕೂಂತ....'

"ಹ್ಞೂಂ... ಅಂತೂ ಅದೂ ಒಂದು ನಾಟಕವಾಯ್ತನ್ನು...'

'ನಾಟಕವಾಯ್ತೋ ನಷ್ಟದ ಖಾತೆಯೋ ಯೋಚ್ನೆ ಮಾಡುನೋಡ್ಬೇಕು ಇನ್ನು ಎರಡು ತಿಂಗ್ಳು....'

'ಅಂತೂ ಏನೋ ಒಂದು. ಆಯ್ತಲ್ಲ...'

"ಅಲ್ಲಾ, ನಾನು ಕೇಳಿದ್ದು..."

ಏನೇ ನೀನು ಕೇಳಿದ್ದು...'

"ಸರಿಯಾಯ್ತು ಬಿಡಿ. ಅಣ್ಣನ ಬುದ್ಧಿಯೇ ತಮ್ಮನಿಗೂ ಬಂದಿದೇಂತಾಯ್ತು. ."

"ಯಾಕೆ? ಏನು?'

'ಅಲ್ರಿ, ನಿಮ್ಮ ನ್ಯಾಯ...'

'...ಓ, ಅದೇನೇ? ಅದೇನೂಂತಿ? ಮತ್ತೇನೂ ಇಲ್ಲ...'

"ಹಾಗಾದ್ರೆ ತಿಳ್ಸಿ ಬಿಡಿ....'

"ತಿಳ್ಸಿದ್ರೂ ಅಷ್ಟೇ, ಬಿಟ್ರೂ ಅಷ್ಟೇ...."

"ಹಾಗ ದ್ರೆ ಅನ್ನಹುದೂಂತಾಯ್ತು..'

"ಹ್ಞಂ.... ನೀನಷ್ಟು ಆಸೆ ಪಡುವುದಾದ್ರೆ...."

"ಹೇಳಿ ಮತ್ತೆ..."

"ಇನ್ನು ಅದ್ಕೂ ಮತ್ತೆ ಯಾಕೆ? ಈಗ್ಲೇ ಉಸ್ರುಬಿಡ್ತೀನಿ...."

'ಬೇಡ ಕಂಡ್ರಿ...ಅಯ್ಯೋ ನಿಮ್ಮ ನಾಲಗೆಯೇ! ಒಂದಕ್ಕೂ ಎರಡಕ್ಕೂ ಯಾಕೆ ಹಾಗಂತೀರಾ?'

'ಅಯ್ಯೋ, ಏನಂದ್ನೆ ನಾನು!...'

'ಉಸ್ರು ಬಿಡ್ತೀನೀಂತಂದ್ರಲ್ಲಾ..'

'ಅಯ್ಯೋ ಪೆದ್ದೇ... ಉಸ್ರು ಬಿಡ್ತೇನೆ ಅಂದ್ರೆ ಹೇಳ್ಬಿಡ್ತೇನೇಂತ....'

'ಓ...ಅಷ್ಟೇನೆ?-..ಹೇಳಿ..ಹೇಳಿ..'

'ನಿನಗೆ ಮನಸ್ಸು ಇಲ್ಲಿದ್ರೆ ಬೇಡ...'

'ಮನಸ್ಸೂ ಇಲ್ಲವೆ ಇರೋದುಂಟೆ?"

'ಹಾಗಾದ್ರೆ ಹೇಳು....'

"ಹ್ಞೂಂ.... ಅದೇ ನೋಡು....'

'ಯಾವುದು?'

'ನಾವು ಹೇಳೋ ಮಾತು...."

'ಹ್ಞೂಂ... ಸೂಚನೆ ಮಾಡಿ...,

'ಹೇಳೋವ್ರಿಗೂ ಕೇಳೋವ್ರಿಗೂ ಬಿಟ್ಟು..."

'ಅಂದ್ರೆ ಇಲ್ಲಿದ್ದವರಿಗೆ ತಪ್ಪಂತ...

ಹ್ಞೂಂ....

'ಇದ್ರಲ್ಲಿ ದೊಡ್ಡಸ್ತಿಕೆಯೇನೂಂತ?,

'ಏನೂ ಇಲ್ಲ. ಅದ್ಕೇ ನಾನಂದದ್ದು ಮೊದ್ಲು ಹೇಳೋಲ್ಲಂತ....,

'ನೀವೆಲ್ಲಿ ಮೊದ್ಲು ಹೇಳಿದ್ರಿ?'

'ಆಯ್ತು ಮಹಾರಾಯ್ತಿ ಆಯ್ತು. ಮುಗೀತಲ್ಲ....'

'ಏನು?'

"ನಿನ್ನ ಮಾತು..."

'ಸುರುವಾಗ್ಲಿ ನಿಮ್ಮ ಮಾತು...'

"ನನ್ದೇನು?"

"ಏನೋ ಕೇಳಿದ್ದಾ ಅಂದ್ರಲ್ಲಾ..."

'ಓ ಹೌದು ಕಣೇ....'

'ಅದನ್ನೇ ...'

'ಕೇಳು, ನಮ್ಮ ರಾಜ್ಯದಲ್ಲಿ ತ್ರಿಭಾಷಾ ಸೂತ್ರದ ಬದಲು ಚತುರ್ಭಾಷಾ ಸೂತ್ರ ತಳೆಯೋ ಆಲೋಚನೆ ಮಾಡ್ತಿದೆಯಂತೆ....'

'ಅಂದ್ರೆ?'

'ಅಂದ್ರೆ ನೋಡು, ಇವತ್ತು ಒಂದು ಮಗು ಪ್ರಾದೇಶಿಕ ಭಾಷೆ ಕನ್ನಡ, ರಾಷ್ಟ್ರ ಭಾಷೆ....'

"ಇನ್ನೆಲ್ಲಿಯ ರಾಷ್ಟ್ರ ಭಾಷೇರಿ?"

"ಮತ್ತೆ!"

"ಭಾವಿ ರಾಷ್ಟ್ರಭಾಷೆ..."

"ನಿನ್ನೊಂದಿಗೆ ನಾವ ವಾದ ಪ್ರಯೋಜನವಿಲ್ಲ....ಹ್ಞೂಂ ಅದೇ ಭಾಷೆ ಹಿಂದಿ ಮತ್ತು ಇಂಗ್ಲಿಷನ್ನು ಕಲಿಯ ಬೇಕಲ್ಲಾ ....ಅದ್ರ ಜತೆಗೆ ಇನ್ನು ಮುಂದೆ ಸಂಸ್ಕೃತ

(ಹತ್ತನೇ ಪುಟ ನೋಡಿರಿ)

1964 - ಕೆನರಾ ಬ್ಯಾಂಕಿನ ಪಾಲಿಗೆ ಉಲ್ಲೇಖನೀಯ ಪ್ರಗತಿ ಸಾಧಿಸಿದ ವರ್ಷ

1964ನೇ ವರ್ಷದಲ್ಲಿ ಕೆನರಾ ಬ್ಯಾಂಕು ಗಣನೀಯವಾದ ಪ್ರಗತಿಯನ್ನು ಸಾಧಿಸಿ ಒಂದು ಹೊಸ ದಾಖಲೆಯನ್ನೇ ನಿರ್ಮಿಸಿದೆ. ತೆರಿಗೆ ಹಾಗೂ ಪ್ರತ್ಯೇಕಿಸಿಡಬೇಕಾದ ಅಂಶವನ್ನು ಕಳೆದು ಬ್ಯಾಂಕು ಈ ವರ್ಷದಲ್ಲಿ ರೂ 34.68 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ. 1963 ರಲ್ಲಿ ನಿವ್ವಳ ಲಾಭವು ರೂ. 24.12 ಲಕ್ಷವಾಗಿತ್ತು. ಡೈರೆಕ್ಟರರು ರೂ. 13.55 ಲಕ್ಷವನ್ನು ಸ್ಪೆಶಲ್ ರಿಸರ್ವಿಗೆ ವರ್ಗಾಯಿಸಿ ಪ್ರಿಫರೆನ್ಸ್ ಮತ್ತು ಈಕ್ವಿಟಿ ಶೇರುಗಳಿಗೆ ಕ್ರಮವಾಗಿ 5.50% ಮತ್ತು 15% ಡಿವಿಡೆಂಡು ಕೊಡುವ ಸೂಚನೆ ಮಾಡಿರುವರು. ಇದರಲ್ಲಿ ಕಳೆದ ವರ್ಷ ಉಪಯೋಗಿಸದೆ ಉಳಿದ ರೂ. 0.42 ಲಕ್ಷ ರೂಪಾಯಿಗಳೂ ಸೇರಿವೆ. ಡಿವಿಡೆಂಡಿನ ದರವು ಕಳೆದ ವರ್ಷದ್ದೇ ಇದ್ದು ಇದು ಟೇಕ್ಸಿನ ಕಡಿತಕ್ಕೆ ಒಳಪಟ್ಟಿದೆ. ಬ್ಯಾಂಕಿನ ನೌಕರರಿಗೆ 19.40 ಬೋನಸ್ ರೂಪದಲ್ಲಿ ರೂ. 14.10 ಲಕ್ಷವನ್ನು ವಿತರಣೆ ಮಾಡುವ ನಿರ್ಧಾರ ಮಾಡಲಾಗಿದೆ. ಉಳಿದ ಏಳು ಲಕ್ಷ ರೂಪಾಯಿಗಳಿಗೆ ಕಂಟಿಜೆನ್ಸಿಯಿಂದ ರೂ. 1.5 ಲಕ್ಷ ಸೇರಿಸಿ, ಈ 8.5 ಲಕ್ಷ ರೂ.ಗಳನ್ನು ಕಾದಿರಿಸಲ್ಪಟ್ಟ ನಿಧಿಗೆ (ರಿಸರ್ವ್ ಫಂಡ್) ವರ್ಗಾಯಿಸುವ ಸೂಚನೆಯನ್ನು ಡೈರೆಕ್ಟರರು ಮಾಡಿರುವರು. ಈ 8.5 ಲಕ್ಷ ರೂಪಾಯಿಗಳ ಸೇರ್ಪಡೆಯಾದಾಗ ಬ್ಯಾಂಕಿನ ರಿಸರ್ವ್ ಫಂಡು ರೂ. 108.50 ಲಕ್ಷಗಳಿಗೇರುವುದು. ಕಳೆದ ವರ್ಷಾಂತ್ಯದಲ್ಲಿ ಈ ರಿಸರ್ವ್ ಫಂಡು ರೂ. 100 ಲಕ್ಷವಾಗಿತ್ತು.

1963ರಲ್ಲಿ ರೂ. 72.48 ಕೋಟಿ ಇದ್ದ ಠೇವಣಾತಿಯು 1964ರಲ್ಲಿ ರೂ. 88.24 ಕೋಟಿಗಳಿಗೇರಿದೆ. ಈ ಹೆಚ್ಚಳವು 21.7% ಆಗಿದೆ. ಅಂತೆಯೇ 1963ರಲ್ಲಿ ರೂ. 42.27 ಕೋಟಿ ಸಾಲ ರೂಪದಲ್ಲಿ ಕೊಟ್ಟಿದ್ದರೆ, 1964ರಲ್ಲಿ ಈ ಸಂಖ್ಯೆ ರೂ. 53.59 ಕೋಟಿಗಳಿಗೇರಿದೆ. ಠೇವಣಾತಿಯಲ್ಲಿ 33.5% ದಷ್ಟು ಅಂಶವು ಕೈಯಲ್ಲಿರುವ ನಗದು ಹಣ, ಬ್ಯಾಂಕುಗಳಲ್ಲಿ ಉಳಿದಿರುವ ಹಣ ಹಾಗೂ ಸರಕಾರಿ ಮತ್ತು ಇತರ ಟ್ರಸ್ಟಿ ಭದ್ರತೆಗಳ ರೂಪದಲ್ಲಿದೆ. ಬ್ಯಾಂಕ್ ಇನ್‌ವೆಸ್ಟ್ ಮಾಡಿದ ಹಣವು ರೂ. 20.63 ಕೋಟಿಗಳಿಂದ ರೂ. 22.48 ಕೋಟಿಗಳಿಗೇರಿದೆ.

1964ರಲ್ಲಿ ಅತ್ಯಪೂರ್ವ ಪ್ರಗತಿ ಸಾಧಿಸಿ ದಾಖಲೆಯನ್ನು ನಿರ್ಮಿಸಿದ ಕೆನರಾ ಬ್ಯಾಂಕ್ ನಿಜಕ್ಕೂ ಅಭಿನಂದನೀಯ ಯಶಸ್ಸು ಪಡೆದಿದೆ ಎನ್ನಬಹುದು.

ಭಾರತ ದರ್ಶನ

ಶಕ್ತಿಯ ಮೂಲ -

ರಾಷ್ಟ್ರ ಪುನಾರಚನೆಯ ಮಹಾ ಕಾರ್ಯದಲ್ಲಿ ಭಾರತವು ತೊಡಗಿದೆ. ಇದು ಸಾಧನೆಗೊಂಡರೆ ಮಾತ್ರ ರಾಜಕೀಯ ಸ್ವಾತಂತ್ರ್ಯಕ್ಕೊಂದು ಅರ್ಥ ಬರುವುದು. ಆರ್ಥಿಕ ಸ್ವಾತಂತ್ರ್ಯವಿಲ್ಲದ ಬರೇ ರಾಜಕೀಯ ಸ್ವಾತಂತ್ರ್ಯವು ಸ್ವಾತಂತ್ರ್ಯವೇ ಅಲ್ಲವೆನ್ನುತ್ತಾರೆ, ಅರ್ಥ ಶಾಸ್ತ್ರಜ್ಞರು. ಇದಕ್ಕಾಗಿ ಕೈಗೊಂಡ ಬಹುಮುಖ ಯೋಜನೆಗಳು ಕಾರ್ಯಗತವಾದಾಗ, ಅವು ಫಲಪ್ರದವೆನಿಸಿದಾಗ, ದೇಶದ ಅರ್ಥ ವ್ಯವಸ್ಥೆಯೂ ಸುಧಾರಣೆ ಹೊಂದುವುದು. ಇದರಲ್ಲಿ ಉದ್ದಿಮೆಗಳ ಅಭಿವೃದ್ಧಿಯು ಮಹತ್ವದ ಪಾತ್ರ ವಹಿಸುತ್ತದೆ.

ಭಾರತವು ಸ್ವತಂತ್ರವಾದ ವೇಳೆ ವ್ಯವಸಾಯ ಮತ್ತು ನೀರಾವರಿಯ ರಂಗದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಯಿತು. ನೀರಿನಲ್ಲಿ ಅಡಗಿರುವ ಭೀಮ ಶಕ್ತಿಯನ್ನು ಅರಿತುಕೊಂಡು ಅದರಿಂದ ವಿದ್ಯುತ್ತನ್ನು ತಯಾರಿಸುವ ಹಲವಾರು ಮಹಾ ಯೋಜನೆಗಳನ್ನು ಸ್ವೀಕರಿಸಲಾಯಿತು. ಇವುಗಳ ಕೆಲವನ್ನು ಈಗಾಗಲೇ ಪೂರ್ಣಗೊಳಿಸಲಾಗುತ್ತಿದೆ. ಈ ಶಕ್ತಿಯಿಂದ ಉದ್ದಿಮೆಗಳಿಗೆ ಬೇಡಿಕೆಗಳನ್ನು ಸಾಧಿಸುವುದು ಸಾಧ್ಯವಾಗಿದೆ.

ಆದರೂ ವಿದ್ಯುತ್ತನ್ನು ಶಕ್ತಿಯಾಗಿ ಸರ್ವತ್ರ ಬಳಸಿಕೊಳ್ಳುವಂತಾಗಲು ಇನ್ನೂ ಕೆಲವು ದಶಕಗಳು ಬೇಕಾದೀತು. ವಿದೇಶಗಳಲ್ಲಿ ಅಣುಶಕ್ತಿಯಿಂದ ವಿದ್ಯುತ್ತನ್ನು ತಯಾರಿಸಿ ಕಾರಖಾನೆ ಮೊದಲಾದುವನ್ನು ನಡೆಸಲಾಗುತ್ತಿದೆ. ಅಂತಹ ದಿನ ನಮ್ಮಲ್ಲೂ ಬರುವ ದಿನವೊಂದಿದೆ. ಆದರೆ, ಯಂತ್ರಾದಿಗಳಿಗೆ ಬೇಕಾದಷ್ಟು ವಿದ್ಯುತ್ತನ್ನು ನಾವಿಂದು ಒದಗಿಸುವುದು ಸಾಧ್ಯವಾಗಿಲ್ಲ. ಹಾಗಿರುವಾಗ ರೇಲ್ವೆಗಳನ್ನು ನಡೆಸಲು ಅದು ದೊರೆಯುವುದು ಸಾಧ್ಯವಿಲ್ಲ. ಜಲಶಕ್ತಿಯ ಅಭಾವವಿರುವೆಡೆಯಲ್ಲಿ ಯಂತ್ರ ಚಾಲನೆಗೂ ಇತರ ಶಕ್ತಿ ಮೂಲವೇ ಗತಿ. ಇದಕ್ಕಾಗಿ ನಾವು ಕಲ್ಲಿದ್ದಲನ್ನೇ ಶರಣು ಹೋಗಬೇಕು.

ರೇಲ್ವೆ ಮತ್ತು ಇತರ ಯಂತ್ರ ಚಾಲನೆಗೆ ಕಲ್ಲಿದ್ದಲಿನ ಉತ್ಪತ್ತಿಯು ಅಗತ್ಯ. ನಮ್ಮ ದೇಶದಲ್ಲಿಯೂ ಹೇರಳವೆಂಬಂತಿಲ್ಲವಾದರೂ ತಕ್ಕಷ್ಟು ಇದ್ದಲಿನ ನಿಧಿಯು ಭೂಮಿಯಡಿಯಲ್ಲಿದೆ. ಬಹು ಕಾಲದಿಂದಲೂ ವಿದೇಶೀಯರ ಒಡೆತನದಲ್ಲಿದ್ದ ಕಲ್ಲಿದ್ದಲು ಗಣಿಗಳು ಈಗ ನಮ್ಮವಾಗಿವೆ. ೧೯೫೬ರಲ್ಲಿ ನ್ಯಾಶನಲ್ ಕೋಲ್ ಡೆವಲಪ್‌ಮೆಂಟ್ ಕಾರ್ಪೋರೇಶನ್ ಸ್ಥಾಪಿತವಾಯಿತು. ಸರಕಾರದ ಸುಮಾರು ೧೧ ಕಲ್ಲಿದ್ದಲು ಕಾರಖಾನೆಗಳಲ್ಲಿ ೭ ಲಕ್ಷ ಟನ್ ಅಧಿಕ ಉತ್ಪಾದನೆಗೆ ಈ ಸಂಸ್ಥೆ ಕಾರಣವಾಗಿದೆ. ರೂರ್ಕೆಲಾ, ಭಿಲೈ ಮತ್ತು ದುರ್ಗಾಪುರಗಳ ಉಕ್ಕಿನ ಕಾರಖಾನೆಗಳಿಗೆ ಸಂಬಂಧಿಸಿದಂತೆ ಸುಮಾರು ೧೦ ಕೋಟಿ ರೂಪಾಯಿ ವೆಚ್ಚದಲ್ಲಿ ಹೊಗೆ ಸೌದೆಯ ನಿರ್ಮಾಣವಾಗುತ್ತಿದೆ. ಖಾಸಗಿ ವಲಯದವರಿಗೂ ನೆರವು ನೀಡಲಾಗುತ್ತಿದೆ. ದಕ್ಷಿಣ ಅರ್ಕಾಟಿನ ನೈವೇಲಿ ಲಿಗ್ನೈಟ್ ಯೋಜನೆಯು ಸುಮಾರು ೬೯ ಕೋಟಿ ರೂಪಾಯಿ ಬಂಡವಾಳದಲ್ಲಿ ಏರ್ಪಟ್ಟಿದೆ. ಇದರ ಜೊತೆಯಲ್ಲಿಯೇ ಕಲ್ಲಿದ್ದಲನ್ನುಳಿದು ಇತರ ಅನೇಕ ನಿರ್ಜಲಕ ದ್ರವ್ಯಗಳೂ ಇಂಗಾಲದ ದ್ರವ್ಯಗಳೂ ಉತ್ಪತ್ತಿಯಾಗುವುವು.

ರೇಲ್ವೆಗಳನ್ನು ವಿದ್ಯುಚ್ಛಕ್ತಿಯಿಂದ ನಡೆಸುವ ಕಾಲ ಭಾರತದಲ್ಲಿ ಇನ್ನೂ ದೂರದಲ್ಲಿದೆ. ಈಗಂತೂ ಇದ್ದಲನ್ನೇ ಅವಲಂಬಿಸಿವೆ. ಆದ್ದರಿಂದ ರೇಲ್ವೆ ಚಾಲನೆಗೆ ಕಲ್ಲಿದ್ದಲು ಮುಖ್ಯ ಇಂಧನ ಸಾಮಗ್ರಿ. ಈ ಇಂಧನವು ಅಗ್ಗವಾಗಿ ಹೇರಳವಾಗಿ ದೊರೆಯಬೇಕು. ಮೂರನೆಯ ಯೋಜನೆ ಮುಗಿಯುವ ಹೊತ್ತಿಗೆ ಸುಮಾರು ೧೦ ಕೋಟಿ ಟನ್ನು ಕಲ್ಲಿದ್ದಲು ಉತ್ಪತ್ತಿಯಾಗಲಿದೆ. ಕಲ್ಲಿದ್ದಲಿನ ಜಾತಿಗೆ ಹೊಗೆ ಇದ್ದಲು, ಉತ್ತಮ ದರ್ಜೆಯ ಹೊಗೆಯಿಲ್ಲದ ಇದ್ದಲು ಇವುಗಳ ಉತ್ಪಾದನೆಯನ್ನು ಬೆಳೆಸುವುದು ಉದ್ದೇಶ. ಈ ಬಗ್ಗೆ ಸರಕಾರದ ಭೂಗರ್ಭ ಶಾಖೆಯವರೂ ವಿದೇಶೀ ತಜ್ಞರೂ ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಕಲ್ಲಿದ್ದಲಿಗೆ ಇನ್ನೂ ಸ್ವಲ್ಪ ಹೆಚ್ಚಿನ ಬೆಲೆ ದೊರೆಯುವುದಾದರೆ, ಖಾಸಗಿ ಉತ್ಪತ್ತಿ ಮಂಡಲಿಗಳೂ ಅದನ್ನು ಮತ್ತಷ್ಟು ಹೆಚ್ಚಾಗಿ ಉತ್ಪನ್ನ ಮಾಡಬಹುದೆನ್ನುತ್ತಾರೆ. ಉತ್ಪಾದಿತ ಇದ್ದಲನ್ನು ರೇಲ್ವೆಗಳಿಗೂ ಕಾರ್ಖಾನೆಗಳಿಗೂ ಸುಲಭವಾಗಿ ಬೇಗ ಸಾಗಿಸುವ ಕೆಲಸ ಉತ್ಪತ್ತಿಯ ಜತೆಗೇ ನಡೆಯಬೇಕಾದುದು. ಪಶ್ಚಿಮ ಬಂಗಾಳದಿಂದ ಬೊಂಬಾಯಿ, ಅಹಮ್ಮದಾಬಾದಗಳಿಗೆ ೧೦೦೦—೧೨೦೦ ಮೈಲಿ ದೂರವಿರುವುದರಿಂದ ಸಾಗಣೆಯ ಸಮಸ್ಯೆ ಒಡನೆಯೇ ಬೆಳೆಯುತ್ತದೆ. ರೇಲ್ವೆಗಳ ಮೂಲಕ ನಡೆವ ಸಾಗಣೆಯ ಜೊತೆಗೆ ಸಮುದ್ರದ ಮೇಲೆ ಹಡಗುಗಳಲ್ಲಿ ರಸ್ತೆಯ ಮೂಲಕ ಕೂಡ ಈ ಸಾಗಾಣಿಕೆಯನ್ನು ನಿರ್ವಹಿಸಬೇಕಾದುದರಿಂದ ಆ ಬಗ್ಗೆಯೂ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರೈಲ್ವೆ ಇಲಾಖೆಯವರೂ ವ್ಯಾಗನ್ ತಯಾರಕರೂ ಕಲ್ಲಿದ್ದಲು ಉತ್ಪತ್ತಿ ಮಂಡಳಿಯವರೂ ಸಮುದಾಯವಾಗಿ ತಮ್ಮ ಭಾಗದ ಕೆಲಸಗಳನ್ನು ಹೊಂದಿಸಿಕೊಳ್ಳುವಂತೆ ಮಾಡಿದರೆ, ಈ ಸಂಬಂಧದ ಪ್ರಯೋಜನವು ಅತಿಶಯವಾಗುವುದು.

ಭಾರತದಲ್ಲಿ ಕಲ್ಲಿದ್ದಲು ಗಣಿಗಳು ಎಲ್ಲೆಂದರಲ್ಲಿರುವುದಿಲ್ಲ. ಈ ಗಣಿಗಳು ಹೆಚ್ಚಾಗಿ ಬಿಹಾರ ಮತ್ತು ಮಧ್ಯ ಪ್ರದೇಶಗಳಲ್ಲಿ ಹರಡಿಕೊಂಡಿವೆ. ಭೂಸಂಶೋಧನೆಯು ಇನ್ನಷ್ಟು ಭರದಲ್ಲಿ ನಡೆದರೆ ಉಳಿದೆಡೆಗಳಲ್ಲೂ ಕಲ್ಲಿದ್ದಲಿನ ಶೋಧನೆಯು ನಡೆಯಬಹುದು.

ಮಣ್ಣಿನಡಿಯಲ್ಲಿ ಹುದುಗಿರುವ ಈ ಇಂಧನವನ್ನು ಎತ್ತಿ ತೆಗೆಯುವುದು ಮತ್ತು ಬೇಕಾದೆಡೆಗೆ ಸಾಗಿಸುವುದು ಹೇಳುವಷ್ಟು ಸುಲಭವಲ್ಲ. ಆಳವಾದ ಗಣಿಗಳಲ್ಲಿ ಇದ್ದಲು ತೋಡುವುದು ಪಾತಾಳದೊಡನಾಡುವ ಸೆಣಸಾಟ. ಅಗೆದ ಇದ್ದಲನ್ನು ಮೇಲೆ ತರುವುದು, ಅದನ್ನು ಶುದ್ಧೀಕರಿಸುವುದು ಮತ್ತು ರೇಲ್ವೆಗಳಿಗೆ ಪೂರೈಸುವುದು ಅಥವಾ ಕಾರಖಾನೆಗಳಿಗೆ ಸಾಗಿಸುವುದೂ ಪ್ರಯಾಸದ ಕೆಲಸ. ಸಾರಿಗೆ ಸಂಪರ್ಕದ ವ್ಯವಸ್ಥೆಯೂ ಇಲ್ಲಿ ಮಹತ್ವದ್ದಾಗಿದೆ.

ಭಾರತೀಯ ರೇಲ್ವೆಗಳಿಗೆ ಮುಖ್ಯ



ಕಲ್ಲಿದ್ದಲು

ಆಧಾರವಾದ ಇದ್ದಲಿನ ಪೂರೈಕೆಯು ಕಡಿಮೆಯಾಗದಂತೆ ನಾವು ಎಚ್ಚರಿಕೆ ವಹಿಸಬೇಕು. ರಾಷ್ಟ್ರ ನಾಗರಿಕ ಅಭಿವೃದ್ಧಿಗೊಳಿಸುವ ಅಗತ್ಯ ಅಧಿಕವಿರುವುದರಿಂದ, ಇದಕ್ಕೆ ಬೇಕಾದ ಇದ್ದಲಿನ ಪೂರೈಕೆ ಸಮರ್ಪಕವಾಗಿ ಶೀಘ್ರಗತಿಯಿಂದ ನಡೆಯಬೇಕಾಗಿದೆ. ಬಂಗಾಳದ ರಾಷ್ಟ್ರೀಯ ಇಂಧನದ ಕಾರ್ಪೊರೇಶನ್ ಈ ದಿಸೆಯಲ್ಲಿ ಕಳಕಳಿಯಿಂದ ಕಾರ್ಯತತ್ಪರವಾಗಿದೆ.

ಜಲವಿದ್ಯುತ್ ಅಥವಾ ಅಣು ವಿದ್ಯುಚ್ಛಕ್ತಿ ಸಾರ್ವತ್ರಿಕವಾಗಿ ದೊರೆಯುವ ತನಕ ಇದ್ದಲಿನ ಪೂರೈಕೆ ಹೆಚ್ಚುತ್ತಲೇ ಇರಬೇಕಾಗುತ್ತದೆ. ಅಂದರೆ ಇನ್ನೂ ಕೆಲವು ದಶಕಗಳವರೆಗೆ ಇದ್ದಲಿನ ಉತ್ಪಾದನೆಯನ್ನು ನಾವು ಶೀಘ್ರಗತಿಯಿಂದ ಹೆಚ್ಚಿಸುತ್ತಲೇ ಬರಬೇಕು. ಈಗ ಕಂಡು ಹಿಡಿದ ಗಣಿಗಳಲ್ಲಿದ ಇದ್ದಲನ್ನು ಎತ್ತುವುದರ ಜತೆ ಹೊಸ ಹೊಸ ನಿಧಿಗಳನ್ನೂ ಹುಡುಕುತ್ತಲೇ ಇರಬೇಕಾಗುತ್ತದೆ. ಭೂಗರ್ಭಶೋಧಕರು ಭೂಮಿಯ ಒಡಲಲ್ಲಿ ಅಡಗಿರುವ ಈ ಅಪಾರ ಶಕ್ತಿ ಮೂಲವನ್ನು ಕಂಡುಹಿಡಿಯುವರೆಂದು ಆಶಿಸಬಹುದು.

ಚಿತ್ರಗಳು

೧ ಮಧ್ಯ ಪ್ರದೇಶದ ಕುರೇಸಿಯಾ ಇದ್ದಲು ಗಣಿಗಳಿಂದ ಇದ್ದಲನ್ನೆತ್ತುವ ಕಾರ್ಯವು ಯಾಂತ್ರಿಕ ಪ್ರಕಾರವಾಗಿ ನಡೆಯುತ್ತಿದೆ.

೨ ಬಿಹಾರದ ಕದಾಪಿಥಿ ಗಣಿಗಳಲ್ಲಿ ದುಡಿಯುತ್ತಿರುವ ಒಬ್ಬ ತರಬೇತಿದಾರ ಗಣಿ ಕೆಲಸಗಾರನೊಂದಿಗೆ ವೈದ್ಯ ಪರಿಚಾರಕನೊಬ್ಬನು ಮಾತನಾಡುತ್ತಿದ್ದಾನೆ. ಗಣಿಯೊಳಗೆ ಕೂಲಿಗಾರರ ಜೀವನಗಳನ್ನು ಅರಿತುಕೊಂಡು ಆತನಿಗೆ ಸೂಕ್ತ ಸಲಹೆ ನೀಡುತ್ತಿದ್ದಾನೆ.

೩ ಬಿಹಾರ ರಾಜ್ಯದ ಬೊಕಾರೋ ಇದ್ದಲು ಗಣಿಗಳಲ್ಲಿ ನಿಷ್ಠೆಯಿಂದ ಕಾರ್ಮಿಕರು ತಮ್ಮ ಕರ್ತವ್ಯನಿರತರಾಗಿದ್ದಾರೆ.

೪ ಬಿಹಾರದಲ್ಲಿರುವ ನ್ಯಾಶನಲ್ ಕೋಲ್ ಡವೆಲಪ್‌ಮೆಂಟ್ ಕಾರ್ಪೋರೇಶನ್‌ನ ಸಧಾರಿ ಗಣಿಗಳಿಂದ ಇದ್ದಲು ಎತ್ತಲು ಕಟ್ಟಿರುವ ೪೫೦ ಅಡಿ ಎತ್ತರದ ಗೋಪುರ.



೪

೩

MEMBERS VOLUNTARY WINDING-UP

Name of the Company Homes & Estates (Private) Ltd.

Notice Convening Final Meeting

Notice is hereby given in persuance of Section 497 that a General Meeting of the members of the above named company will be held at Udipi, on Friday the 19th Day of March 1965 at 3 30, in the afternoon for the purpose of having an account laid before them showing the manner in which the winding up has been conducted and the property of the company disposed off and of hearing any explanation that may be given by the Liquidator and also of determining by a special resolution of the company the manner in which the books accounts and documents of the company and of the liquidator shall be disposed.

Dated this the 21st day of January 1965

M G Bhat.

Signature of the Liquidator.

ನಮ್ಮ ಹೊಲ....

ಅತಿ ಪ್ರಾಚೀನ ಕಾಲದಿಂದಲೂ "ಓ ಬೇಲೆ " ಕೇಳಿದ ನಮ್ಮ ಭತ್ತದ ಗದ್ದೆಗಳಲ್ಲಿ ಇಂದು ಆಧುನಿಕತೆಯು ಸ್ವರವು ಹೊರಹೊಮ್ಮುತ್ತಿದೆ. ಜಾಪಾನೀ ಪದ್ಧತಿ, ಸಿಂಧ್ರಿ ಗೊಬ್ಬರ, ಪಂಚವಾರ್ಷಿಕ ಯೋಜನೆ - ಇವುಗಳ ಹಿನ್ನೆಲೆಯಲ್ಲಿ ಹೊಸ ಆರ್ಥಿಕ ಕಲ್ಪನೆಯೂ ಸೇರಿಕೊಂಡಿದೆ. ಕಷ್ಟದ ಹೊರೆಯನ್ನು ಹಗುರಗೊಳಿಸಿ, ಗ್ರಾಮ ಜೀವನದ ಸವಿಯನ್ನು ಹೆಚ್ಚಿಸಲು "ಸಿಂಡಿಕೇಟ್" ತನ್ನ ಬ್ಯಾಂಕಿಂಗ್ ಸೇವೆಯನ್ನು ನೀಡುವುದು; ಜೀವನ ಮಟ್ಟವನ್ನು ಉತ್ತಮಗೊಳಿಸಲು ಯತ್ನಿಸುವುದು ರೈತರ ದಿನನಿತ್ಯದ ಸಮಸ್ಯೆಗಳಲ್ಲಿ ಪಾಲುಗೊಂಡು, ಅವರ ಅಭ್ಯುದ್ಧಿಗೆ ಸಾಲ ಮತ್ತು ಇನ್ನಿತರ ವೈಜ್ಞಾನಿಕ ಸಲಹೆಗಳ ಮೂಲಕ ಸಿಂಡಿಕೇಟ್ ಬ್ಯಾಂಕಿನ ಕೃಷಿ ಆರ್ಥಿಕ ನೆರವಿನ ವಿಭಾಗವು ನೆರವೇರಿಸುತ್ತದೆ.

ಹೆಚ್ಚಿನ ಮಾಹಿತಿಗೆ, ದಕ್ಷಿಣ ಕನ್ನಡ ಜಿಲ್ಲೆಯ ನಿಮ್ಮ ಹತ್ತಿರದ ಶಾಖೆಯನ್ನು ಸಂದರ್ಶಿಸಿರಿ

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ

ಶಾಖೆಗಳು	ಠೇವಣಾನಿಧಿ
200ಕ್ಕೂ ಮಿಕ್ಕಿ	70 ಕೋಟಿಗೂ ಮಿಕ್ಕಿ.

ಸಮಾಧಿಯಿಂದ ಎದ್ದು ಬರಬೇಕೆ?

(೨ನೇ ಪುಟದಿಂದ)

ವನ್ನೂ ಕಲಿಯುವ ಏರ್ಪಾಡು ಮಾಡುವ ಯೋಚನೆ ..."

"ಅಲ್ರಿ, ಆ ಸಂಸ್ಕೃತ ಮೃತ ಭಾಷೆಯಲ್ವೆ?"

"ಸತ್ತವರೂ ಸಮಾಧಿಯಿಂದ ಎದ್ದು ಬರುವ ಕಾಲದಲ್ಲಿ ಸತ್ತ ಭಾಷೆ ಎದ್ದು ಬರಬಾರದೆ? ಮತ್ತೆ ನೋಡು, ಅದು ಸತ್ತ ಭಾಷೆಯಲ್ಲ, ಅದನ್ನ ಬಿಟ್ಟು ನಾವೇ ಸತ್ತಿದ್ದೇವೆ ಅಂತಾರೆ...."

"ನಾವು ಸಾಯದಿದ್ರೂ ಸತ್ತವರಂತೆ ಆಗಿದ್ದೇವೆ ಇದು ಖಂಡಿತ."

"ಅಂದ್ರೆ ನೀನೂ ಅಪ್ರ ಪಾರ್ಟಿಯೆನ್ನು...."

"ಮತ್ತೆ ನೀವು?"

"ನಾನಲ್ಲ ..."

"ಮತ್ತೆ ನನ್ಗೆ ಸಂಸ್ಕೃತ ಕಲೀಬೇಕೂಂತ ಪಾಠಶಾಲೆ ತಂದು ಕೊಟ್ರಲ್ಲ...."

"ಹೌದು...,,

"ಈಗ ಯಾಕೆ ಬೇಡ ಅನ್ನೋದು ನೀವು?,,

"ಅದ್ಕೆ ಒಂದು ಬಲವಾದ ಕಾರಣ ಇದೆ,,

"ಏನದು?"

"ನೋಡು, ಕನ್ನಡ ಬಾರದವ್ರು ಕನ್ನಡ ಕಲ್ತಿದ್ದಾರೆ, ಇಂಗ್ಲಿಷ್ ಬಾರದವ್ರು ಇಂಗ್ಲಿಷನ್ನು. ಮತ್ತೆ ಹಿಂದೀಯ ಕತೆ ಗೊತ್ತೇ ಇದೆಯಲ್ಲಾ ನಿನ್ಗೆ....ದಶಂಬರದ ತನ್ಕ ಬಿಡ್ತಾರೆ, ಆನಂತರ ಐಚ್ಛಿಕ. ಕಲ್ಲೋದಕ್ಕಂತೂ ದಿಕ್ಕಿಲ್ಲ. ಹಾಗಿರುವಾಗ, ಈ ಮೂರನ್ನ ಜೀವನ್ಮೃತಾವಸ್ಥೆಗೆ ತಂದಿರೋದು ಸಾಲ್ದೆ ಮತ್ತಾ ಸಂಸ್ಕೃತವನ್ನ ಮೃತ ಜೀವನಾವಸ್ಥೆಗೆ ಯಾಕೆ ತರಬೇಕೂಂತ....?"

"ಏನೋಪ್ಪ, ಇದು ಗಂಭೀರ ಪರ್ಯಾಲೋಚನೆಗೆ ತಕ್ಕ ವಿಷಯ...'

"ಅಂದ್ರೆ ಸರಿಯಾಗಿ ನೋಡು, ಇವತ್ತು, ಕಾಲೇಜಿಂದ ಹೊರ ಬಂದವ್ರು ಪಾಠ ಹೇಳೋಕೆ ಹೋಗ್ತಾರೆ ಬೇರೆಡೆ ಹೋಗೋ ತನ್ಕ...."

"ಅಂದ್ರೆ ಅಧ್ಯಾಪಕರ ಅಭಾವ....'

ಉಡುಪಿ ಮುಂ. ಕೋರ್ಟಿನಲ್ಲಿ

S.C. 125/62, R.E.P. ನಂಬ್ರ 131/64.

ವೆಂಕಟ್ರಮಣ ಹೊಳ್ಳ —ಅರ್ಜಿದಾರ.

ಮತ್ತು

ಪುಟ್ಟಣ್ಣ ಕೂಡಾ 7 ಜನರು —ಎದುರ್ರು.

ಇವರೊಳಗೆ

ಉಡುಪಿ ತಾಲೂಕು ಕಾರ್ಕಡ ಗ್ರಾಮದ ಸುಬ್ರಾಯ ಅಡಿಗರ ಮಗ 2ನೆ ಎದುರ್ರು ವೆಂಕಟ್ರಮಣ ಅಡಿಗರಿಗೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ಅರ್ಜಿದಾರರು ನಿಮ್ಮ ವಗೈರೆರ ಪಕ್ಕಿನ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಜಾಕ್ಲು ಮಾಡಿರುವ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ನಿಮಗೆ ನೋಟೀಸಿಗೆ ತಾ. 16-3-65ಕ್ಕೆ ಇಟ್ಟಿರುವದರಿಂದ ಆ ದಿನ ನೀವು ಕೋರ್ಟಿನ ಮುಂದೆ ಬೆಳಗ್ಗೆ 10 ಗಂಟೆಗೆ ಹಾಜರಾಗಿ ಆಕ್ಷೇಪಣೆ ಇದ್ದಲ್ಲಿ ಕೊಡಬೇಕು. ತಪ್ಪಿದರೆ ಆಸ್ತಿ ಏಲಮಿಗಿಡಲಾಗುವದು. (By order)

Narayana Rao, K.

Camp. Udipi, 20-2-65.

ಎಲ್ಲೆಲ್ಲಿ ಏನೇನು?

ಲೋಕಸೇವಾ ವಿದ್ಯಾಸಂಸ್ಥೆಗಳ ವರ್ಧಂತಿ

ಅಳಿಕೆ ಲೋಕಸೇವಾ ಹೈಸ್ಕೂಲ್ ಮತ್ತು ಹಾ। ಎಲಿಮೆಂಟರಿ ಶಾಲೆಗಳ ವರ್ಧಂತ್ಯುತ್ಸವವು ಉಡುಪಿಯ ಶೀರೂರು ಮಠಾಧೀಶರಾದ ಶ್ರೀ ಶ್ರೀ ಲಕ್ಷ್ಮೀಮನೋಜ್ಞತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಎಸ್. ಕೃಷ್ಣಭಟ್ಟರಿಂದ ಸ್ವಾಗತ, ಶ್ರೀಮತಿ ಕೆ. ಸುಗಂಧಿ ದೇವಿಯವರಿಂದ ಸಂದೇಶ ವಾಚನ, ಶ್ರೀ ಎಂ. ನಾರಾಯಣ ಭಟ್ಟರಿಂದ ಹೈಸ್ಕೂಲ್ ವರದಿ ಮತ್ತು ದಾನಿಗಳ ಪಟ್ಟಿವಾಚನ ಶ್ರೀ ಬಿ. ನಾರಾಯಣರಾಯರಿಂದ ಹಾ. ಎ. ಶಾಲೆಯ ವರದಿವಾಚನಗಳಾದ ಮೇಲೆ ಹೈಸ್ಕೂಲಿಗೆ ರೂ. 1125ಕ್ಕಿಂತ ಹೆಚ್ಚಿಗೆ ಧನಸಹಾಯ ಮಾಡಿದ 9 ಜನರ ತೈಲ ಚಿತ್ರಗಳನ್ನು ವಿಟ್ಲದ ಅರಸರಾದ ಶ್ರೀ ರವಿವರ್ಮ ಕೃಷ್ಣರಾಜರು ಅನಾವರಣ ಮಾಡಿ ದಾನಿಗಳನ್ನು ಅಭಿನಂದಿಸಿದರು. ಬಹುಮಾನ ವಿತರಣೆಯಾದ ನಂತರ ಅಧ್ಯಕ್ಷರು ಮಾತಾಡುತ್ತಾ ಶಿಕ್ಷಣದಲ್ಲಿ ಆಧ್ಯಾತ್ಮಿಕ ಹಿನ್ನೆಲೆ ಬೇಕು. ಅದರ ಆಧಾರದಲ್ಲಿ ವಿದ್ಯಾರ್ಥಿಗಳು ನಿಷ್ಕಾಮ ಕರ್ಮವನ್ನೆಸಗುವಂತಾಗಬೇಕು. ಇಲ್ಲಿಯ ವಿದ್ಯಾಸಂಸ್ಥೆಗಳ ತ್ಯಾಗಮಯ ವಾತಾವರಣವು ನನಗೆ ತುಂಬಾ ಆನಂದವನ್ನುಂಟುಮಾಡಿದೆ ಎಂಬಿತ್ಯಾದಿಯಾಗಿ ಹೇಳಿದರು. ಕೊನೆಗೆ ಮನೋರಂಜನಾ ಕಾರ್ಯಕ್ರಮಗಳಾದುವು.

'ಅಧ್ಯಾಪಕರಿಗೆ ಜೀವಸ್ಥಿತಿ ಅಭಾವ; ಅಂತ್ಲೇ ಅವ್ರಿಗೂ ಅಭಾವ...."

"ಅದ್ಕೇ ನೋಡಿ, ನಿಮ್ಮ ಭಾಗ್ದಾ ಅಖಿಲ ಭಾರತ ಶಿಕ್ಷಣ ಸೇವೆ ಮಾಡ್ನ ಏರ್ಪಡಿಸ್ತಾರಂತೆ...."

'ಅಂತೆಯ ಕಂತೆ ಬಿಲ್ಲಿಡು, ಹೊತ್ತು ಹೋಗೋದಕ್ಕೆ ಕತೆ ಹೇಳುವಂತೆ ಬೇರೆ ಉದ್ಯೋಗ ದೊರೀವರ್ಗೆ ಪಾಠಹೇಳೋದ. ಇರೂವರ್ಗೆ ಯಾವ ಸೂತ್ರಾನೂ ಪ್ರಯೋಜನವಿಲ್ಲ.'

'ಒಂದು ವೇಳೆ ಅವೆಲ್ಲಾ ಸರಿಯಾದ್ರೆ...'

"ಸರಿಯಾದ್ರೂ ನೀರಿಳಿಯುದ ಗಂಟಲಲ್ಲಿ ಈಗ್ಲೇ ದೋಸೆ ತುರುಕಿಯಾಗಿದೆ. ಮತ್ತೆ ಕಡಬನ್ನೂ ತುರುಕಿದ್ರೆ...."

'ಓ, ಕಡುಬು ಅನ್ನುತ್ಲೂ ನೆನಪ್ಪಾಯ್ತೂಂದ್ರೆ....'

'ಏನು?'

'ನಮ್ಮ ಪದ್ದಕ್ಕ ಎರಡು ಕಡುಬು ಕಳಿಸಿದ್ದಾಳೆ....'

'ಓ, ಪದ್ದಕ್ಕನ ಕಡುಬೂಂತಂದ್ರೆ ಭಾರಿ ರುಚಿಯಿರ್ಬೇಕು. ಬಾಯಿಂದ ನೀರೊಳರುತ್ತೆ ...'

'ಅವಸ್ರ ಮಾಡ್ಬೇಡಿ. ಕಾಲಿಗೆ ಕೈಗೆ ಒಳ್ಳೇ ನೀರು ಹಾಕೊಂಡು ಬನ್ನಿ. ಇಲ್ಲೇ ಸರೆಯಾಗಿಡ್ತೇನೆ.'

"ಭಾರೀ ಚಲೋದಾಯ್ತು ಬಿಡು .."

'ತಿನ್ನೊ ಪ್ರಿಗೆ ಹಾಗೇನೇ...,,

'ನೀನೂ ತುಸ ತಿನ್ನವಿಯಂತೆ .,,

'ಸಾಕು ಸುಮ್ಮನಿರೀಂತಂಪ್ರೆ....,,

'ಇಶ್ಶಿ ಮತ್ತೇನು ಮಾಡ್ಬೇನಾ?,,

'ಮಾಡೋದೂ ಬೇಡ, ಆಡೋದೂ ಬೇಡ. ಮೊದ್ಲು ಕೈಕಾಲು ತೊಳ್ಕೊಳ್ಳಿ..

'ಮಹಾರಾಣಿ ಯವರ ಆಜ್ಞೆ..."

"ಶಿರಸಾ ವಹಿಸು ಮಹಾರಾಜ...."

'ಹ್ಞಾಂ....'

'ಹ್ಞ....ಹ್ಞ....ಹ್ಞ ..'

—ಗೋರಾ.

ವಾರ್ಷಿಕ ಮಹಾಸಭೆ

ಶಿರ್ವ, ಸ್ಥಳೀಯ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ವಾರ್ಷಿಕ ಮಹಾಸಭೆಯು ಡಾ। ವೈ. ಆರ್. ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಡಾ। ಕೆ. ಆರ್. ವೆಂಕಟಕೃಷ್ಣನವರು ವಾರ್ಷಿಕ ವರದಿಯನ್ನೋದಿದರು. ಆರ್ಥಿಕ ಕಾರ್ಯದರ್ಶಿ ಡಾ। ಎಂ. ರಾಜಶೇಖರ ಹೆಗ್ಡೆಯವರು ಪರಿಶೋಧಿತ ಲೆಕ್ಕಪತ್ರಗಳನ್ನಿತ್ತರು. ಹೊಸದಾಗಿ ಕಟ್ಟಿಸಿದ ಟಿ. ಬಿ. ವಾರ್ಡಿಗೆ, ಪ್ರಶಂಸಾರ್ಹ ಸೇವೆ ಸಹಾಯ ಗೈದ ಶ್ರೀ ಎಸ್. ಜಿ. ಕೆ. ಶೆಟ್ರ ಹೆಸರಿಡುವುದಾಗಿ ಸರ್ವಾನುಮತದಿಂದ ನಿಶ್ಚೈಸಲಾಯಿತು. ಮುಂದಿನ ವರ್ಷಕ್ಕೂ ಡಾ। ವೈ. ಆರ್. ಶೆಟ್ಟಿ, ಡಾ। ಯು. ಕೆ. ಆಚಾರ್, ವೆ। ರೆ। ಫಾ। ಎಚ್. ಗೊನ್ಸಾಲ್ವಿಸ್, ಡಾ। ಕೆ. ಆರ್. ವೆಂಕಟಕೃಷ್ಣ, ಶ್ರೀ ಕೆ. ವಾಸುದೇವ ಶೆಟ್ಟಿ, ಡಾ। ಎಂ. ರಾಜಶೇಖರ ಹೆಗ್ಡೆ, ಡಾ। ಎ. ಪದ್ಮ ರಾವ್, ಡಾ। ಕೆ. ಮೋಹನದಾಸ ಪೈ, ಶ್ರೀ ಎಲ್. ಮೆಂಡೋನ್ಸ, ಶ್ರೀ ಬಿ. ಜಯರಾಮ ಶೆಟ್ಟಿ ಮತ್ತು ಶ್ರೀ ಕೆ. ಎಮ್. ಹೊಳ್ಳರನ್ನೊಳಗೊಂಡ ಆಡಳಿತ ಮಂಡಳಿಯೇ ಮುಂದುವರಿಯಬೇಕೆಂದಾಯಿತು. ಶ್ರೀ ಎಂ. ಮೆಂಡೋನ್ಸರು ಧನ್ಯವಾದವಿತ್ತರು.

ಶರೀರ ಪರೀಕ್ಷಾ ಕಾರ್ಯಕ್ರಮ

ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಶನ್ ಅವರು ಏರ್ಪಡಿಸಿದ ಶರೀರ ಪರೀಕ್ಷಾ ಕಾರ್ಯಕ್ರಮವು ತಾ. 7ನೇ ಬೆಳಿಗ್ಗೆ ಡಾ। ವೈ. ಆರ್. ಶೆಟ್ಟರ ಅಧ್ಯಕ್ಷತೆಯಲ್ಲಿ ಡಾ। ಶಿವರಾಮನ್ ಅವರಿಂದ ಉದ್ಘಾಟಿಸಲ್ಪಟ್ಟಿತು. ಆರಂಭದಲ್ಲಿ ಡಾ। ಯು. ಕೆ. ಆಚಾರ್ಯರು ಮಂಗಳೂರು ಮತ್ತು ಮಣಿಪಾಲದಿಂದ ಆಗಮಿಸಿದ ವೈದ್ಯರುಗಳನ್ನು ಸ್ವಾಗತಿಸಿದರು. ಡಾ॥ ಶಿವರಾಮನ್ ಶರೀರ ಪರೀಕ್ಷಾ ಕಾರ್ಯಕ್ರಮದ ಅಗತ್ಯ ಮತ್ತು ಪರೀಕ್ಷಾರ್ಥಿಗಳು ಮುಂದೆ ಕೈಗೊಳ್ಳಬಹುದಾದ ಚಿಕಿತ್ಸಾಕ್ರಮವನ್ನು ವಿವರಿಸಿದರು. ಎಸೋಸಿಯೇಶನಿನ ಪರವಾಗಿ ಶ್ರೀ ಕೆ. ಎಮ್. ಹೊಳ್ಳರು ಧನ್ಯವಾದಗಳನ್ನಿತ್ತರು. ಶರೀರ ಪರೀಕ್ಷಾ ಕಾರ್ಯಕ್ರಮದಲ್ಲಿ ಮಂಗಳೂರಿನ ತಜ್ಞ ವೈದ್ಯರುಗಳಾದ ಡಾ। ಎಂ. ವಿ. ಚಾರಿ, ಡಾ। ಎಂ. ವಿ. ಶೆಟ್ಟಿ, ಡಾ। ಬಿ. ಆರ್. ರಾಮರಾವ್, ಡಾ। ಯು. ಎನ್. ಕೃಷ್ಣಮೂರ್ತಿ, ಡಾ। ಕುಮಾರಿ ಲಿಡಿಯೋ ಕೊಲಾಸೊ ಅವರೂ ಮಣಿಪಾಲದಿಂದ ಡಾ। ಶಿವರಾಮನ್, ಡಾ। ಶ್ರೀಮತಿ ಪದ್ಮಾ ರಾವ್. ಡಾ। ಸುಲೋಚನಾ ರಾವ್, ಡಾ। ಭಾಸ್ಕರ ಪಾಂಡೆ ಮೊದಲಾದವರೂ ಆಗಮಿಸಿ ಪರೀಕ್ಷಾರ್ಥಿಗಳನ್ನು ಪರೀಕ್ಷಿಸಿದರು. ಆರೋಗ್ಯ ಪರೀಕ್ಷೆಗೆ ಸಹಾಯಕವಾಗಿ ಕ್ಷ-ಕಿರಣ ಸ್ಕ್ರೀನಿಂಗ್ ಸೌಕರ್ಯಗಳೂ ಇದ್ದುವು.

ಸತ್ಕಾರ ಸಮಾರಂಭ

ಶಿರ್ವ, ತಾ. 9-ಸಿಂಡಿಕೇಟ್ ಬೇಂಕಿನ ಶಿರ್ವ ಶಾಖೆಯವರು ಪದ್ಮಶ್ರೀ ಡಾ। ಟಿ. ಎಂ. ಎ. ಪೈಯವರನ್ನು ಗೌರವಿಸುವುದಕ್ಕಾಗಿ ಮೂಡಬಿದ್ರಿಯ ಬಿಷಪರಾದ ರೈಟ್ ರೆವರೆಂಡ್ ಡಾ॥ ಬೇಸಿಲ್ ಸ್ಟೀಸ್ ಮುದಾರ್ತರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟವನ್ನು ಏರ್ಪಡಿಸಿದರು. ಮೆನೇಜರರಾದ ಶ್ರೀ ಇಗ್ನೇಶಿಸ್ ಡೆಮೆಲ್ಲೋ ಅವರು ಸ್ವಾಗತಿಸಿದರು. ಸಭಿಕರಲ್ಲಿ ಡಾ। ಯು. ಕೆ. ಆಚಾರ್, ಶ್ರೀ ಎಲ್. ಮೆಂಡೋನ್ಸ, ಶ್ರೀ ಬಿ. ಜಯರಾಮ ಶೆಟ್ಟಿ, ಶ್ರೀ ಕೆ. ಎಂ. ಹೊಳ್ಳ, ಡಾ। ಕಿಣಿ ಮೊದಲಾದವರು ಪದ್ಮಶ್ರೀ ಡಾ। ಪೈಗಳ ವಿವಿಧ ಮುಖ ಸಮಾಜ ಸೇವಾ ಕಾರ್ಯಗಳನ್ನು ವಿವರಿಸಿದರು.

ಪದ್ಮಶ್ರೀ ಡಾ। ಪೈಯವರು ನೂತನವಾದುತ್ತ ತಾನು ಸ್ಥಾಪಿಸಿದ ಬೇಂಕು ಉದ್ಯಮ ಜನತೆಯಲ್ಲಿ ಉಳಿತಾಯ ಮನೋವೃತ್ತಿಯನ್ನು ಬೆಳೆಸುವುದಕ್ಕೆ ಸಹಕಾರಿಯಾಯಿತೆಂದೂ ಇನ್ನೂ ಹೆಚ್ಚಿನ ಸಹಕಾರವನ್ನು ಜನತೆಯಿಂದ ಸಿಗುವಂತಾಗಲೆಂದೂ ಆಶಿಸಿದರು.

ಅಧ್ಯಕ್ಷರು ಡಾ। ಪೈಯವರಿಗೆ ಸತ್ಕಾರ ಸಮಾರಂಭದಲ್ಲಿ ತನ್ನನ್ನು ಅಧ್ಯಕ್ಷ ಸ್ಥಾನಕ್ಕೆ ಆರಿಸಿದ ವ್ಯವಸ್ಥಾಪಕರಿಗೆ ಕೃತಜ್ಞತೆಯನ್ನು ಸಲ್ಲಿಸಿ ಡಾ। ಪೈಯವರಿಗೆ ಪದ್ಮಶ್ರೀ ಬಿರುದು ದೊರೆತುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಬೇಂಕಿನ ಎಕೌಂಟಂಟರಾದ ಶ್ರೀ ರಮೇಶ್‌ಚಂದ್ರರು ಧನ್ಯವಾದವಿತ್ತರು.

ಪುರಂದರದಾಸರ ಪುಣ್ಯ ದಿನಾಚರಣೆ

ಮಂಜೇಶ್ವರ, ತಾ. 7-2-65, ಆಯುಸಾವರಂ ಕನ್ನಡ ಸಂಘದಲ್ಲಿ "ಪುರಂದರದಾಸರ ಪುಣ್ಯದಿನ"ವನ್ನು ವಿವೇಕಾನಂದ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ವೈ. ಜನಾರ್ದನರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೀಮತಿ ಉಷಾದೇವಿಯವರು "ದಾಸ ಸಾಹಿತ್ಯದಲ್ಲಿ ಪುರಂದರದಾಸರ ಸ್ಥಾನ"ದ ಬಗ್ಗೆ ಭಾಷಣ ಮಾಡಿದರು. ಅಧ್ಯಕ್ಷ ಶ್ರೀ ಜನಾರ್ದನರವರು ಮಾತನಾಡಿ ಭಾರತದ ಭೂಮಿ ಮತ್ತು ಮಣ್ಣಿನ ಪವಿತ್ರತೆಯ ಬಗ್ಗೆ ಸೂಚಿಸುತ್ತಾ ಉತ್ತರದ ಭಾರತದ ನದಿಯಾದ ಪವಿತ್ರ ಗಂಗಾ ನದಿಯಂತೆ ದಕ್ಷಿಣದಿಂದ ಭಕ್ತಿಯ ಪವಿತ್ರ ಗಾನಗಂಗೆಯು ಉತ್ತರದ ಕಡೆಗೆ ಹೇಗೆ ಹರಿದುಹೋಯಿತು ಎಂಬುದನ್ನು ಮನವರಿಕೆಯಾಗಿ ತಿಳಿಸಿದರು. ಕುಮಾರಿ ಕೆ. ತುಳಸಿ, ಶ್ರೀಮತಿ ಉಷಾದೇವಿ ಮತ್ತು ಸಂಘದ ಸದಸ್ಯರು ದಾಸರ ಕೃತಿಗಳನ್ನು ಸುಶ್ರಾವ್ಯವಾಗಿ ಹಾಡಿದರು. ಆರಂಭದಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿರಾಯರು ಸ್ವಾಗತಿಸಿದರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಡಿ. ವಿ. ರಘುನಾಥರಾಯರು ವಂದನಾರ್ಪಣೆ ಮಾಡಿದರು.

ಕೊಬ್ಬಿಕಾರ್ ಪದ್ಮನಾಭ ಪೈ ಸ್ಮಾರಕ ಬಹುಮಾನ ವಿತರಣೆ

ಮಣಿಪಾಲ, ಫೆ. 17 — ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಗೆದ್ದವರಿಗೆ ರೋಟೇರಿಯನ್ ಡಾ। ಮೋಹನದಾಸ ಪೈಯವರು ತಮ್ಮ ತಂದೆ ದಿವಂಗತ ಶ್ರೀ ಕೆ. ಪದ್ಮನಾಭ ಪೈಯವರ ಜ್ಞಾಪಕಾರ್ಥವಾಗಿ ಒದಗಿಸಿದ ಬಹುಮಾನಗಳನ್ನು ಸ್ಥಳೀಯ ರೋಟರಿ ಕ್ಲಬ್ಬಿನ ಹಿಂದಿನ ಅಧ್ಯಕ್ಷ ಶ್ರೀ ರಮೇಶ ಪೈಯವರು ನಿನ್ನೆ ಇಲ್ಲಿ ಸೇರಿದ್ದ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ವಿತರಣೆ ಮಾಡಿದರು.

ಪ್ರೌಢಶಾಲಾ ಬಾಲಕರ ಪೈಕಿ ವೈಯಕ್ತಿಕ ಚಾಂಪಿಯನ್‌ಶಿಪ್, ಕಟಪಾಡಿ ಎಸ್. ವಿ. ಎಸ್. ಪ್ರೌಢ ಶಾಲೆಯ ಶ್ರೀ ವಿಜಯ ಶೆಟ್ಟಿ, ಬಾಲಕಿಯರ ಪೈಕಿ ಮಲ್ಪೆಯ ಸರಕಾರಿ ಫಿಶರೀಸ್ ಪ್ರೌಢ ಶಾಲೆಯ ಕುಮಾರಿ ಸರಸ್ವತಿ ಮತ್ತು ಉಡುಪಿಯ ಕ್ರಿಶ್ಚಿಯನ್ ಪ್ರೌಢ ಶಾಲೆಯ ಕುಮಾರಿ ಶಾಂತಿ ಪ್ರೇಮಾ, ಸಾರ್ವತ್ರಿಕ ವಿಭಾಗದಲ್ಲಿ ಪುರುಷರ ಪೈಕಿ ಸಿಂಡಿಕೇಟ್ ರಿಕ್ರಿಯೇಶನ್ ಕ್ಲಬ್ಬಿನ ಶ್ರೀ ಪಿ. ಜಯಾನಂದ ಶೆಟ್ಟಿ, ಮಹಿಳೆಯರ ಪೈಕಿ ಪೂರ್ಣಪ್ರಜ್ಞ ಕಾಲೇಜಿನ ಕುಮಾರಿ ಕುಸುಮಾವತಿ ಶೆಟ್ಟಿ, ಈಜುವ ಸ್ಪರ್ಧೆಗಳಲ್ಲಿ ಪಟುತೆಗಾಗಿ ಶ್ರೀ ರಮಾನಂದ ಪೈ ಇವರಿಗೆ ಬಹುಮಾನ ಕೊಡಲಾಯಿತು.

ಕ್ಲಬ್ಬಿನ ಅಧ್ಯಕ್ಷ ಡಾ। ಎ. ಕೃಷ್ಣರಾವ್ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ರೋಟೇರಿಯನ್ ಡಾ। ವಿ. ಎಸ್. ಶೆಟ್ಟಿಯವರು ಚೀನೀ ದೈತ್ಯವನ್ನು ಕುರಿತು ಭಾಷಣ ಮಾಡಿ ಭಾರತದ ಮೇಲೆ ಚೀನದ ಆಕ್ರಮಣದ ಹಿನ್ನೆಲೆ ಹಾಗೂ ಅದರಿಂದಾದ ಪರಿಣಾಮಗಳನ್ನು ವಿವರಿಸಿದರು.

ಶಿ. ಆ. ಸದಸ್ಯರ ಭೇಟಿ

ಮಣಿಪಾಲ, ಫೆ ೧೬— ಮಂಗಳೂರಿಗೆ ಬಂದಿರುವ ಶಿಕ್ಷಣ ಆಯೋಗದ ಸದಸ್ಯರಾದ ಡಾ॥ ಟಿ. ಸೇನ್, ಪ್ರೊ॥ ಸದತ್ಯೋತಿ ಇನಾರ್ ಮತ್ತು ಶ್ರೀ ಆರ್. ದಾಪೂರ್ದರವರು ನಿನ್ನೆ ಇಲ್ಲಿಯ ಶಿಕ್ಷಣ ಸಂಸ್ಥೆಗಳಿಗೆ ಭೇಟಿಯಿತ್ತರು.

ತಿದ್ದುಪಡಿ

ತಾ. 11-2-65ರ ನವಯುಗ ಸಂಚಿಕೆಯ ಹದಿಮೂರನೆ ಪುಟದಲ್ಲಿ ಪ್ರಕಟವಾದ "ಪ್ರಗತಿಪಥದಲ್ಲಿ ಸಿಂಡಿಕೇಟ್ ಬೇಂಕ್" ಎಂಬ ಶೀರ್ಷಿಕೆಯ ವರದಿಯಲ್ಲಿ (ಪಂಕ್ತಿ 29-29) ರೂ. ೫ ಲಕ್ಷವನ್ನು ಡಾಕ್ಟರರಿಗೆ ಬೋನಸು ಹಂಚಲು ಪ್ರತ್ಯೇಕಿಸಿಡಲಾಗಿದೆ ಎಂದು ತಪ್ಪಾಗಿ ಅಚ್ಚಾಗಿದೆ. ಅದು ರೂ. ೫ ಲಕ್ಷವನ್ನು ನೌಕರರಿಗೆ ಬೋನಸು ಹಂಚಲು ಪ್ರತ್ಯೇಕಿಸಿಡಲಾಗಿದೆ ಎಂದಾಗಬೇಕು. ಈ ಮುದ್ರಣ ದೋಷಕ್ಕಾಗಿ ವಿಷಾದಿಸುತ್ತೇವೆ.

(ಸಂ. ಸ.)

ಪುರಂದರದಾಸರ ಹಿತೋಪದೇಶ

(ಆರನೇ ಪುಟದಿಂದ)

ರವನ್ನು ಸಡಬೇಕು. ಅದಕ್ಕಾಗಿ ಜಯಚಂದನಾಗಲೂ ಅವರಿಗೆ ಅತೀವ ಆನಂದ! ಹಿಂದಿನಿಂದಲೂ ಹಿಂದಿಗೆ ವಿರುದ್ಧವಾಗಿ ಇದೆ ಮುಸ್ಲಿಂಲೀಗು ಉರ್ದು ರಾಷ್ಟ್ರ ಭಾಷೆಯಾಗಬೇಕೆಂಬುದೇ ಅವರ ಹಟ. ಆದರೆ ಕಮ್ಯೂನಿಸ್ಟರ ಸ್ಥಿತಿ ಹಾಗಿರವದಿಲ್ಲ.

ಭಾಷಾ ಬಡಬಾಗ್ನಿ ಭುಗಿಲೇಳುವ ಮುಂಚೆ ಅವರು ಹಿಂದಿ ಭಾರತದ ವ್ಯವಹಾರಿಕ ಭಾಷೆಯಾಗಿರಬೇಕೆಂದು ಢಣಾಢಂಗುರ ಬಡೆದಿದ್ದರು. ಇದು ಅವರ ಮೂಲ ಧೋರಣೆಗೆ – ಒಡೆದು ಕೆಡಹುವ ತಂತ್ರಕ್ಕೆ – ವಿರೋಧವಾಗಿ ಇದೆ. ಆದರೂ, ಹೆಚ್ಚಿನವರು ವ್ಯಾವಹಾರಿಕ ಭಾಷೆ ಹಿಂದಿಯಾಗಬೇಕೆಂದಾಗ ಅವರೂ ಕೈ ಎತ್ತಿದ್ದರು. ಅಲ್ಲದೆ ದ್ರಾವಿಡ ಮುನ್ನೇಟ್ರ ಕಳಗಂ ತನ್ನೊಂದಿಗಿಟ್ಟುಕೊಂಡಿದ್ದ ಸಂಬಂಧವನ್ನು ಸ್ವತಂತ್ರ ಪಾರ್ಟಿಯತ್ತ ಒದಲಾಯಿಸಿದಾಗ ಅವರು ಶಾವೆತ್ತಿದ್ದ ಕೈಯನ್ನು ಅಲುಗಾಡಿಸ ತೊಡಗಿದರು. ಆದರೆ ಎತ್ತಿ ಅಲುಗಾಡಿಸುತ್ತಿದ್ದ ಕೈಗಳನ್ನವರು ಮುಷ್ಟಿಗಳನ್ನಾಗಿ ಮಾಡಿಬಿಟ್ಟರು. ಅದಕ್ಕೆ ಕಾರಣ ಮುಗ್ಧ ಜನತೆ ರಾಜಾಜಿ ಅಣ್ಣಾದೊರೈಯವರ ಮಾತಿನ ಗುಂಗಿಗೊಳಗಾಗಿ ಕೊಳ್ಳಿ ಹೊಡೆಯಲಾರಂಭಿಸಿದಾಗ ಅವರೂ ಹತ್ತಕ್ಕೆ ಇನ್ನೊಂದು ಸೇರಿಸಿ ಹನ್ನೊಂದಾದರು. ಬಂಗಾಲದಲ್ಲಿ ಅವರ ನಾಯಕ ಬಾರಿ ಬಂಡಾಯವೆಬ್ಬಿಸಲು ಬಹಳ ಪ್ರಯತ್ನಿಸಿದರು. ಕೇರಳದಲ್ಲೂ ಹಾಗೆಯೇ. ಆದರೆ ಅಲ್ಲೆಲ್ಲೂ ಅವರ ಬೇಳೆ ಬೇಯಲಿಲ್ಲ. ತಮಿಳುನಾಡಿನಲ್ಲಿ ಕಾಂಗ್ರೆಸ್ಸಿಗರು ಅಡ್ಡಗಾಲು ಹಾಕಿದುದರಿಂದ ಭಾಷಾ ಬಡಬಾಗ್ನಿ ಬಾರೀ ಪ್ರಮಾಣದಲ್ಲಿ ಬಲಿತೆಗೆದುಕೊಂಡಿತು ಅದನ್ನು ಮತ್ತಷ್ಟು ಹಬ್ಬಿಸಲು ಕಮ್ಯೂನಿಸ್ಟರು ಪ್ರಯತ್ನಿಸಿದರು ಅವರು ಆರಂಭಕ್ಕೆ ದೇಶದ್ರೋಹಿಗಳೇ ಇದ್ದಾರೆ. ಈ ತಂತ್ರ ಅವರಿಗೇನೂ ಹೊಸತಾಗಿರುವದಿಲ್ಲ.

ಅವರು ನಡೆಸಿದ ಈ ಕುಕೃತ್ಯವನ್ನು ನೆನೆಸಿಕೊಂಡಾಗ ಪುರಂದರ ದಾಸರ ಕೆಲ ಹಾಡುಗಳು ಜ್ಞಾಪಕಕ್ಕೆ ಬರುತ್ತವೆ

ಬೇವು ಬೆಲ್ಲದೊಳಿಡಲೇನು ಫಲ!
ಹಾವಿಗೆ ಹಾಲೆರೆದರೇನು ಫಲ!! (ಪಲ್ಲವಿ)
ಕುಟಿಲವ ಬಿಡದಿಹ ಕುಜನರು ಮಂತ್ರವ। ಪಠನೆಗಳ ಮಾಡಿದರೇನು ಫಲ॥
ಕಟಿಪ ನ್ನಾಡುವ ಮನುಜರು ಮನದಲಿ। ವಿಠಲನ ನೆನೆದರೇನು ಫಲ॥ ಕಪಟತನದಿ ವಂಚಿಸುವ ಮನುಜರು। ಒಪಗಳ ಮಾಡಿದರೇನು ಫಲ॥ ....

ಈ ಹಾಡು ಇಂದಿನ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟರಿಗೆ ಮುಖ್ಯವಾಗಿ ಹಾಗೂ ಇತರ ದೇಶದ್ರೋಹಿಗಳಿಗಾಗಿಯೇ ಇದೆ. ಕಮ್ಯೂನಿಸ್ಟರನ್ನು ಎಲ್ಲಿಟ್ಟುಕೊಂಡರೇನು ಫಲ? ಅವರೇನೂ ತಮ್ಮ ದೇಶದ್ರೋಹಿ ವರ್ತನೆಯನ್ನು ಬಿಡುವುದಿಲ್ಲ. ಅವರಿಗೆ ಎತಗಳ ಹಾಲೆರೆದರೇನು ಫಲ! ಅವರು ದೇಶ ಭಕ್ತಿ ಮಂತ್ರದ ಪಠನೆಮಾಡಿದರೂ ಭಾರತಮಾತೆಯ ಹೆಸರನ್ನುಚ್ಚರಿಸಿದರೂ, ಹಿಂದಿಯನ್ನು ವ್ಯಾವಹಾರಿಕ ಭಾಷೆ ಎಂದು ಒಪ್ಪಿಕೊಂಡರೂ ಅದೇನು ಫಲ? ಅವರ ಮನಸ್ಸಿನೊಳಗಿರುವದಾದರೂ ಏನು? ಸುಳ್ಳನ್ನಾಡಿದರೂ ಚಿಂತಿಲ್ಲ, ಕಪಟತನದಿಂದಲಾದರೂ, ಕುಕೃತ್ಯಗಳಿಂದ ಪರೂ ಭಾರತೀಯರ ತಲೆಯ ಮೇಲೆ ಸುತ್ತಿಗೆಯಿಂದ ಹೊಡೆಯಲೇ ಬೇಕು!

ಅದಕ್ಕೂ ಅವರಿಗಾಗಿ ಒಂದು ಬುದ್ಧಿವಾದದ ಮಾತನ್ನು ದಾಸರು ಹೇಳಿರುವರು ಮಾನವ ಜನ್ಮ ದೊಡ್ಡದು। ಇದ ಹಾನಿಮಾಡಲು ಬೇಡ ಹುಚ್ಚಪ್ಪಗಳಿರಾ (ಪಲ್ಲವಿ) ಕಣ್ಣು ಕೈಕಾಲ್ಕಿವಿ ನಾಲಿಗೆ ಇರಲಿಕ್ಕೆ। ಮಣ್ಣುಮುಕ್ಕಿ ಹುಚ್ಚರಾಗುವರೇ!!.... ..

ಓ ಹುಚ್ಚಪ್ಪಗಳಿರಾ, ದೇಶ ದ್ರೋಹಿ ಕುಕೃತ್ಯಗಳಿಗಾಗಿ ಈ ದೊಡ್ಡ ಮಾನವ ಜನ್ಮವನ್ನು ಹಾಳುಮಾಡಿಕೊಳ್ಳಬೇಡಿ. ಭಾರತ ಮಾತೆಯ ಸೇವೆಗಾಗಿ ಅದನ್ನು ಸದುಪಯೋಗಪಡಿಸಿಕೊಳ್ಳಿರಿ.

ದೇಶದ್ರೋಹಿಗಳ ಕಿವಿಗೆ ದಾಸಶ್ರೇಷ್ಠ ಪುರಂದರ ದಾಸರ ಹಿತೋಪದೇಶ ಕೇಳುತ್ತದೆಯೇ? ಜಿಸುಹಾಗ್ರೇಸರನು ದಾಸಶ್ರೇಷ್ಠರಾಗುವಾಗ ಅದಂತಹ ದೇಶದ್ರೋಹಿಗಳೂ ದೇಶಭಕ್ತರಾಗಲು ಸಾಧ್ಯವಿಲ್ಲವೇನು? ಇದ್ದೇ ಇದೆ. ಅದಕ್ಕನೇ ಅವರೆಂದಿರುವದು— ಮಾನವ ಜನ್ಮ ಬಲು ದೊಡ್ಡದೆಂದು.

ಕೃಷಿಕ ರಂಗ

ಅಧಿಕ ಗೊಬ್ಬರವನ್ನು ಬಳಸಿಕೊಳ್ಳಿರಿ

ಭಾರತದಲ್ಲಿ ಮಾತ್ರವಲ್ಲ ಇಡಿಯ ಜಗತ್ತಿನಲ್ಲೇ ಇಂದು ಆಹಾರದ ಅಭಾವವಿದೆ. ಆಹಾರಾಭಾವವು ಕಾಣಿಸದಿರಬೇಕಾದರೆ ಉತ್ಪನ್ನದಲ್ಲಿ ಸಾಕಷ್ಟು ಏರಿಕೆಯಾಗಬೇಕಾದುದು ಅಗತ್ಯ. ಇಂದು ಜಗತ್ತಿನ ಜನಸಂಖ್ಯೆಯು ೩೩೦ ಕೋಟಿ. ಇವರಲ್ಲಿ ಸುಮಾರು ೫೦ ಕೋಟಿ ಜನರು, ಅಂದರೆ, ಐವರಿಗೊಬ್ಬನಂತೆ, ಸಾಕಷ್ಟು ಆಹಾರದಿಂದ ವಂಚಿತರಾಗಿದ್ದಾರೆ. ಇಷ್ಟಕ್ಕೂ ಹೆಚ್ಚು ಜನರು ಜೀವಾತುಗಳು, ಖನಿಜಲವಣಗಳು ಮತ್ತು ಸಸಾರ ಜನಕದ ಅಭಾವದಿಂದ ನರಳುತ್ತಿದ್ದಾರೆ.

೧೯೮೦ರ ಹೊತ್ತಿಗೆ ಪ್ರಪಂಚದ ಜನಸಂಖ್ಯೆ ಸೇ. ೫೦ರಷ್ಟು ಹೆಚ್ಚಬಹುದು. ಇಂದಿನಂತಹ ಪರಿಸ್ಥಿತಿಯನ್ನಾದರೂ ನಾವು ಅಂದು ಉಳಿಸಿಕೊಳ್ಳಬೇಕಾದರೆ, ಆಹಾರೋತ್ಪಾದನೆಯೂ ಅದೇ ಪ್ರಮಾಣದಲ್ಲಿ ಹೆಚ್ಚಬೇಕು. ಆಹಾರದಲ್ಲಿರುವ ಪೋಷಕಾಂಶಗಳ ಅಭಾವವನ್ನು ಸರಿಗೊಳಿಸುವ ಇರಾದೆ ನಮಗಿರುವುದಾದರೆ, ವ್ಯವಸಾಯೋತ್ಪನ್ನದಲ್ಲಿ ಗಣನೀಯ ಹೆಚ್ಚಳವನ್ನು ನಾವು ಸಾಧಿಸಲೇ ಬೇಕಾಗುತ್ತದೆ.

ಜನರು ಹೊಟ್ಟೆ ತುಂಬ ಆಹಾರವನ್ನು ಬಯಸುತ್ತಾರೆ. ಅದು ಉತ್ತಮವಿರಬೇಕೆಂದೂ ಆಶಿಸುತ್ತಾರೆ. ಬೆಳೆಯುತ್ತಿರುವ ದೇಶದಲ್ಲಿ ಜನತೆಯ ಆದಾಯವು ಹೆಚ್ಚುತ್ತ ಬಂದಂತೆ ಆಹಾರದ ಬೇಡಿಕೆಯೂ ಏರುತ್ತ ಬರುವುದು ಸಹಜ. ಇದನ್ನು ಗಮನಿಸುವಾಗ ಮುಂದಿನ ೧೫ ವರ್ಷಗಳೊಳಗೆ ಪ್ರಪಂಚದಲ್ಲಿ ಇಂದಿನ ಆಹಾರೋತ್ಪಾದನೆಯು ನೂರಕ್ಕೆ ಎಪ್ಪತ್ತೈದರಷ್ಟು ಹೆಚ್ಚಬೇಕಾಗುತ್ತದೆ. ಈ ಹೆಚ್ಚಳವನ್ನು ಹೇಗೆ ಸಾಧಿಸಬಹುದು?

ಕೃಷಿಗಾಗಿ ಇನ್ನೂ ಹೆಚ್ಚಿನ ಭೂಮಿಯನ್ನು ಉಪಯೋಗಿಸುವುದು ಮತ್ತು ಉತ್ಪನ್ನ ಸಾಮರ್ಥ್ಯವನ್ನು ಹೆಚ್ಚಿಸುವುದು— ಈ ಎರಡೇ ಮಾರ್ಗಗಳು ನಮ್ಮ ಮುಂದಿರುವ ಉಪಾಯಗಳು.

ಅನೇಕ ದೇಶಗಳಲ್ಲಿ ನೆಲದ ಅಭಾವವಿದೆ. ಹೆಚ್ಚಿನ ನೆಲವನ್ನು ಕೃಷಿಗೆ ಉಪಯುಕ್ತಗೊಳಿಸಲು ಹೆಚ್ಚಿನೆಡೆ ಅಧಿಕ ವೆಚ್ಚ ತಗಲುವುದು. ಹಾಗಾಗಿ ಅಧಿಕ ಭೂಮಿಯನ್ನು ಆಹಾರೋತ್ಪಾದನೆಗೆ ಒದಗಿಸುವುದು ಹೇಳುವಷ್ಟು ಸರಳ ವಿಷಯವಲ್ಲ ಆದುದರಿಂದ ಈ ಮಹಾ ಸಮಸ್ಯೆಯನ್ನು ಎದುರಿಸುವುದಕ್ಕಿರುವ ಏಕಮೇವ ಉಪಾಯವೆಂದರೆ ಭೂಮಿಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು. ಇದಕ್ಕೆ ಹೆಚ್ಚು ವೆಚ್ಚವೂ ತಗಲಲಾರದು.

ಗೊಬ್ಬರದ ಅಧಿಕ ಉಪಯೋಗದಿಂದ, ಉತ್ತಮ ವರ್ಗದ ತಳಿಗಳಿಂದ, ಸುಧಾರಿತ ವ್ಯವಸಾಯ ವಿಧಾನಗಳಿಂದ, ಸಾಕಷ್ಟು ಪ್ರಮಾಣದ ನೀರಾವರಿಯಿಂದ, ಕೀಟ ಹಾಗೂ ರೋಗಗಳ ಹತೋಟಿಯ ಕ್ರಮಗಳಿಂದ ಬೆಳೆಗಳನ್ನು ಶೀಘ್ರಗತಿಯಿಂದ ಹೆಚ್ಚಿಸಬಹುದು. ೧೯೪೦—೫೦ರ ಮಧ್ಯಾವಧಿಯಲ್ಲಿ ಉತ್ತಮ ಗೊಬ್ಬರಗಳ ಬಳಕೆಯಿಂದಲೇ ಅಮೆರಿಕೆಯು ಆಹಾರೋತ್ಪಾದನೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದೆಯೆಂದು ತಿಳಿಯುತ್ತದೆ.

ಇತ್ತೀಚೆಗಿನ ವರ್ಷಗಳಲ್ಲಿ ವ್ಯವಸಾಯ ರಂಗದಲ್ಲಿ ಗೊಬ್ಬರಗಳ ಬಳಕೆಯ ಪ್ರಮಾಣ ಹೆಚ್ಚಿದೆ. ಈ ಹೆಚ್ಚಳದ ಪ್ರಮಾಣವು ಎಲ್ಲ ದೇಶಗಳಲ್ಲೂ ಏಕಸಮವಾಗಿದೆಯೆನ್ನುವಂತಿಲ್ಲ. ಪ್ರಪಂಚದ ಒಟ್ಟು ಕೃಷಿ ನೆಲದ ಅರ್ಧಾಂಶದಷ್ಟು ಅಲ್ಪಾಭಿವೃದ್ಧಿ ಪ್ರದೇಶಗಳಲ್ಲಿ ಇದೆ. ಇಲ್ಲಿ ಪ್ರಪಂಚದ ಒಟ್ಟು ಗೊಬ್ಬರ ಬಳಕೆಯ ಹತ್ತನೆ ಒಂದಂಶದಷ್ಟನ್ನು ಮಾತ್ರವೇ ಉಪಯೋಗಿಸಲಾಗುತ್ತಿದೆ.

೧೯೬೦-೬೧ರಲ್ಲಿ ಜಪಾನಿನಲ್ಲಿ ಎಕ್ರೆಯೊಂದಕ್ಕೆ ೨೭೧ ರಾತಲು, ಅಮೆರಿಕೆಯಲ್ಲಿ ೩೪ ರಾತಲು ಗೊಬ್ಬರದ ಬಳಕೆಯಾಗಿದ್ದರೆ, ಭಾರತದ ಸರಾಸರಿ ಬಳಕೆ ಬರೇ ಎರಡು ರಾತಲುಗಳು! ಅನಭಿವೃದ್ಧ ದೇಶಗಳಲ್ಲಿ ಗೊಬ್ಬರದ ಬಳಕೆ ಯಾವ ಗತಿಯಲ್ಲಿದೆಯೆಂಬುದಕ್ಕೆ ಇದೊಂದೇ ನಿದರ್ಶನ ಸಾಕು.

ತನ್ನ ಜನಸಂಖ್ಯೆಗನುವಾದ ಆಹಾರೋತ್ಪಾದನೆಯು ಇಲ್ಲದಿರುವ ಪ್ರಶ್ನೆ ಹೆಚ್ಚಿನ ಹಿಂದುಳಿದ ದೇಶಗಳಲ್ಲಿವೆ. ಭಾರತದಲ್ಲಿ ತಲೆದೋರಿರುವ ಸಮಸ್ಯೆಯೂದರೂ ಇದೇ. ಪ್ರಚಲಿತ ಅಲ್ಪ ಪೋಷಣೆಯ ಆಹಾರದ ಮಟ್ಟವನ್ನು ಉಳಿಸಿಕೊಳ್ಳುವುದಕ್ಕೂ ಭಾರತದಂತಹ ಅನೇಕ ರಾಷ್ಟ್ರಗಳು ಇತ್ತೀಚೆಗಿನ ವರ್ಷಗಳಲ್ಲಿ ಆಹಾರ ಧಾನ್ಯಗಳನ್ನು ಆಯಾತ ಮಾಡಿಕೊಳ್ಳಬೇಕಾಯಿತು; ಅದೂ ಸಾಲದಾಯಿತು.

ಈ ಬಗೆಯ ದೇಶಗಳಲ್ಲಿ ಆಹಾರೋತ್ಪನ್ನವು ಹೆಚ್ಚದೆ ಹೋದರೆ ಗಂಡಾಂತರ ಸಮೀಪಿಸಿತೆಂದು ತಿಳಿಯಬೇಕು. ಅಧಿಕೋತ್ಪನ್ನವು ಸಾಧಿತವಾಗಿ ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಬೇಕಾದರೆ, ಈ ದೇಶಗಳು ಗೊಬ್ಬರವನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕಾಗುತ್ತದೆ.

ಪ್ರವರ್ಧಮಾನ ರಾಷ್ಟ್ರಗಳಲ್ಲಿ ಗೊಬ್ಬರದ ಬಳಕೆ ಹೆಚ್ಚದಿರಲು ದೊಡ್ಡ ಆತಂಕಗಳಿವೆ. ಅನೇಕ ರಾಷ್ಟ್ರಗಳಲ್ಲಿ ಈ ಕಾಲ್ತೊಡಕನ್ನು ದೂರ ಮಾಡುವ ಪ್ರಯತ್ನ ನಡೆಯುತ್ತಿದೆ. ಇತ್ತೀಚೆಗಿನ ವರ್ಷಗಳಲ್ಲಿ ವಿಸ್ತರಣೆ ಮತ್ತು ಪ್ರದರ್ಶನ ಕಾರ್ಯ, ಸಂಶೋಧನಾ ಪ್ರಯತ್ನಗಳ ಪ್ರಸಾರ, ಸಕಾಲದಲ್ಲಿ ಸಾಕಷ್ಟು ಅಲ್ಪ ಬಡ್ಡಿಯಲ್ಲಿ ಸಾಲ ದೊರೆವ ಸೌಲಭ್ಯ ಇವುಗಳಿಂದ ಸುಧಾರಣೆಯಾಗುತ್ತಿದೆ. ಧಾರಣೆ ಮತ್ತು ವೆಚ್ಚಗಳಲ್ಲೂ ಹೊಂದಾಣಿಕೆಯನ್ನು ಸಾಧಿಸುವ ಪ್ರಯತ್ನ ಸಾಗುತ್ತಿದೆ. ಹೀಗೆ ರೈತರಿಗೆ ಆಧುನಿಕ ವ್ಯವಸಾಯದ ವಿಧಾನಗಳ ಪರಿಚಯ ಮಾಡಿಕೊಟ್ಟು, ಗೊಬ್ಬರ ಹಾಗೂ ಮತ್ತಿತರ ವ್ಯವಸಾಯ ಸಹಾಯಕಗಳ ಉಪಯೋಗ ಹೆಚ್ಚಲು ಅವಶ್ಯಕವಾದ ಆರ್ಥಿಕ ಪ್ರೇರೇಪಕಗಳನ್ನು ಒದಗಿಸುವ ಕೆಲಸ ಒಂದೇ ಸಮನೆ ಸಾಗುತ್ತಿದೆ.

ಈ ಯೆಲ್ಲ ಅಂಶಗಳನ್ನು ನಾವು ಅವಲೋಕಿಸುವಾಗ ಮುಂದಿನ ೨೦ ವರ್ಷಗಳಲ್ಲಿ ಗೊಬ್ಬರದ ಬಳಕೆಯು ತೀವ್ರಗತಿಯಲ್ಲಿ ಹೆಚ್ಚುವ ನಿರೀಕ್ಷೆಯಿದೆ. ೧೯೬೦-೭೫ರ ಅವಧಿಯಲ್ಲಿ ಈ ಏರಿಕೆಯು ವರ್ಷವೊಂದರ ಸೇ. ೧೨ರಂತೆ ಏರುತ್ತ ಹೋಗುವ ಆಶಯವಿದೆ.

ಈ ಆಶಯವು ಈಡೇರಿತೆಂದರೆ, ೧೯೭೦ರ ಹೊತ್ತಿಗೆ ೫೨೦ ಲಕ್ಷ ಟನ್ನುಗಳಷ್ಟೂ, ೧೯೮೦ರ ಹೊತ್ತಿಗೆ ೯೦೦ ಲಕ್ಷ ಟನ್ನುಗಳಷ್ಟೂ ಪ್ರಪಂಚದಲ್ಲಿ ಗೊಬ್ಬರದ ಬಳಕೆಯಾಗುವುದೆಂದು ನಂಬಬಹುದು. ಈ ಗುರಿಯು ಸಾಧಿತವಾದರೆ, ಆಹಾರದ ಪರಿಸ್ಥಿತಿಯೂ ತುಸು ಸುಧಾರಿಸುವುದು ಆದರೆ, ಈ ಹೆಚ್ಚಳವು ಇಡಿಯ ಪ್ರಪಂಚದ ಜನರ ಹಾಗೂ ದೇಶೀಯ ಸರಕಾರಗಳ ದೃಢ ನಿರ್ಧಾರವನ್ನೂ ಕ್ರಮಗಳನ್ನೂ ಅವಲಂಬಿಸಿದೆ. ಈ ಮಟ್ಟವು ಸಾಧಿತವಾದರೆ, ತಾಂತ್ರಿಕ ವಿಧಾನಗಳು ಉತ್ತಮಗೊಂಡರೆ ಪ್ರಪಂಚದ ಜನಸಂಖ್ಯೆಯಲ್ಲಿ ತೀವ್ರಗತಿಯ ಏರಿಕೆಯಾದರೂ ಪ್ರಪಂಚದ ಆಹಾರದ ಪರಿಸ್ಥಿತಿಯು ಉತ್ತಮಗೊಂಡು, ಪ್ರಪಂಚದ ಜನ ಇತಿಹಾಸದ ಮತ್ತಾವುದೇ ಕಾಲಕ್ಕಿಂತಲೂ ಉತ್ತಮವಾದ ಆಹಾರಾನುಕೂಲವನ್ನು ಪಡೆಯುವರು. ಭಾರತವೂ ಇದರಿಂದ ಹೊರತಾಗಲಾರದು.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Directer of Public Instruction Madras.

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರು

(ಐದನೇ ಪುಟದಿಂದ)

ಕಂಡು ಹಿಡಿಯಲು ಅವರಿಗೆ ಸಹಾಯಕವಾಯಿತು. ಅವರ ಉದಾಹರಣೆಗಳು ಅತ್ಯಂತ ಉಚಿತವಾಗಿದ್ದವು.

ಆದರೆ ಅವರ ವಕಾಲತ್ತು ಒಂದು ಕಡೆಯಿಂದ ಕಷ್ಟಕ್ಕೊಳಗಾಗಿತ್ತು. ಅವರ ಧ್ವನಿಯು ಗಟ್ಟಿಯಾಗಿತ್ತು. ಆಗಾಗ್ಯೆ ಅವರ ಆಲೋಚನೆಗಳು ತಮ್ಮ ಮಾತುಗಳಿಗಿಂತ ವೇಗವಾಗಿ ಮುಂದಕ್ಕೆ ಓಡುತ್ತಿದ್ದವು. ಆದ್ದರಿಂದ ಅವರು ಒಂದು ವಿಷಯವನ್ನು (Point) ಬಿಟ್ಟು ಮತ್ತೊಂದು ವಿಷಯಕ್ಕೆ ಹೋಗುವಾಗ ಕೆಲವು ವಾಕ್ಯಗಳು ಅಪೂರ್ಣವಾಗಿ ಉಳಿಯುತ್ತಿದ್ದವು. ಯಾವಾಗಲೂ ತಮ್ಮ ಕೇಸುಗಳಲ್ಲಿ ಒಳ್ಳೆಯ ಫಲಿತಾಂಶಗಳಿಗಾಗಿ ಹೋರಾಡುತ್ತಿದ್ದರು. ತಮಗೆ ಸೋಲು ಬಂದಾಗ ಅವರು ಅತ್ಯಂತ ಅಸಮಾಧಾನ ಪಡುತ್ತಿದ್ದರು. ಅವರಿಗೆ ಸೋಲು ಬರುವುದು ಬಹು ಕಮ್ಮಿ. ಹಾಗೆ ಸೋಲು ಬಂದಾಗ ಆ ಕುರಿತು ಅವರು ಅತ್ಯಂತ ಯೋಚನೆ ಮಾಡುತ್ತಿದ್ದರು. ಜಯವು ಯಾವಾಗಲೂ ಅವರನ್ನು ಹರ್ಷೋದ್ರಿಕ್ತರನ್ನಾಗಿ ಮಾಡುತ್ತಿತ್ತು.

ಹಿಂದೂ ಲಾ, ಭೂಮಿಯ ಗೇಣಿ, ನೀರಿನ ಹಕ್ಕು, ಅವಿಭಾಜ್ಯ ಆಸ್ತಿಗಳು, ಘಟನಾ ಸಂಬಂಧಿ ಕೇಸುಗಳು, ಟ್ಯಾಕ್ಸ್ ಕೇಸು ಮುಂತಾದ ನಾನಾ ವಿಧದ ತನ್ನ ಕಾಲದಲ್ಲಿ ನಡೆದ ಮುಖ್ಯವಾದ ಎಲ್ಲಾ ಕೇಸುಗಳಲ್ಲಿ ಅವರು ಮುಂದೆ ಬರುತ್ತಿದ್ದರು. ಅಪಾರವಾದ ಸಂಪತ್ತನ್ನು ಶೇಖರಿಸಿದರು. ಆದರೂ ಇತರರ ಮೇಲೆ ತಿರಸ್ಕಾರ ಮಾಡುತ್ತಿರಲಿಲ್ಲ. ಯಾವಾಗಲೂ ಅವರು ನಿರಾಡಂಬರರಾಗಿದ್ದರು. ತಮ್ಮ ಜೂನಿಯರರ ಮೇಲೆ ದಯಾಳುಗಳೂ ಸೌಜನ್ಯವುಳ್ಳವರೂ ಆಗಿದ್ದರು.

ಹದಿನೇಳು ವರ್ಷಗಳ ಮೇಲ್ಪಟ್ಟು ಮದ್ರಾಸಿನ ಎಡ್ವೋಕೇಟ್ ಜನರಲ್ಲರಾಗಿ ಅವರು ಪೂರ್ಣ ಯಶಸ್ಸು ಗಳಿಸಿದರು. ಅವರು ಹೈಕೋರ್ಟಿನ ಜಡ್ಜ್ ಪದವಿಯನ್ನು ನಿರಾಕರಿಸಿದರು. ಆದರೆ ಫೆಡರಲ್ ಕೋರ್ಟಿನ ಜಡ್ಜರಾಗುವುದಕ್ಕೆ ಅವರು ವಿರೋಧವಿರಲಿಲ್ಲವೆಂದು ಹೇಳುತ್ತಾರೆ. ಆದರೆ ಅಂತಹ ಒಂದು ಕೊಡುಗೆಯು ಅವರಿಗೆ ಮಾಡಲ್ಪಡಲಿಲ್ಲ. ಆದ್ದರಿಂದ ವಕೀಲ ಮಂಡಳಿಯು ಈ ಮಹಾದ್ಭುತ ನ್ಯಾಯವೇದಿಗಳನ್ನು ತಮ್ಮ ಸಂಗಡದಿಂದ ಕಳೆದುಕೊಳ್ಳಲಿಲ್ಲ.

ಫೆಡರಲ್ ಕೋರ್ಟಿನ ನಿರ್ಮಾಣವಾದಾಗ, ಅವರು ಘಟನಾ ಸಂಬಂಧಿ ಕಾನೂನಿನಲ್ಲಿ ಹೆಚ್ಚಿನ ಪ್ರಾವೀಣ್ಯವನ್ನು ಪಡೆಯಲು ಬಹು ಶ್ರಮಪಟ್ಟರು. ಹಾಗೆ ಆ ಕ್ಷೇತ್ರದಲ್ಲಿ ಅವರು ಅತ್ಯಂತ ನಿಪುಣರಾದರು. ಯು. ಎಸ್. ಎ. ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳ ಘಟನೆಗಳನ್ನ ತುಲನಾತ್ಮಕವಾಗಿ ಅವರು ಮಾಡಿದ ಅಭ್ಯಾಸವು ಅಗಾಧವೂ ಸರ್ವ ವ್ಯಾಪಿಯೂ ಆಗಿತ್ತು. ಆದ್ದರಿಂದ ಕಾನ್ಸ್ಟಿಟ್ಯೂಎಂಟ್ ಎಸೆಂಬ್ಲಿಯ ಡ್ರಾಫ್ಟಿಂಗ್ ಸಬ್ ಕಮಿಟಿಗೆ ಅವರನ್ನೊಬ್ಬ ಮೆಂಬರರನ್ನಾಗಿ ಆರಿಸಿದುದು ಆಶ್ಚರ್ಯಕರವಲ್ಲ. ಅವರು ಕಾಂಗ್ರೆಸ್ಸಿಗೆ ಸೇರಿಕೊಂಡಿರಲಿಲ್ಲ. ಆದರೂ ಕಾಂಗ್ರೆಸ್ಸು ಜನರು ಅವರ ಕಾನೂನಿನ ತೀಕ್ಷ್ಣ ಬುದ್ಧಿಗಾಗಿ ಅವರ ಮೇಲೆ ಹೆಚ್ಚು ಗೌರವವಿಟ್ಟಿದ್ದರು. ದೇಶದ ಘಟನಾರಚನೆ ಬಲ್ಲಿ ಅಲ್ಲಾಡಿಯವರು ರೂಪಿಸಿದ ರೀತಿಯ ಕುರಿತು ಭಿನ್ನಾಭಿಪ್ರಾಯಗಳಿರುತ್ತವೆ. "ಘಟನೆಯು ರೂಪಿಸುವಲ್ಲಿ ಅವರು ಮಾಡಿದ ಕಾರ್ಯವು ಬಹು ಸಾರವತ್ತು ಮತ್ತು ಉಪಯೋಗಕರವಾಗಿದ್ದರೂ ಅದರಲ್ಲಿ ಒಂದು ಉದ್ದೇಶಕ್ಕಾಗಿ ವಾದಿಸುವ ಒಬ್ಬ ಲಾಯರಿನ ಲಕ್ಷಣಗಳಿವೆಯೆಂದು ಕೆಲವು ವಿಮರ್ಶಕರು ಅಭಿಪ್ರಾಯ ಪಡುತ್ತಿದ್ದರು. ಇನ್ನು ಕೆಲವು ವಿಮರ್ಶಕರು "ಘಟನಾ ಸಂಬಂಧಿ ಕಾನೂನಿನ ವಿಷಯದಲ್ಲಿ ಒಂದು ವಿಶ್ವಕೋಶಾತ್ಮಕವಾದ ಕೃತಿಯನ್ನು ರಾಷ್ಟ್ರಕ್ಕೆ ಅಲ್ಲಾಡಿಯವರು ಕೊಟ್ಟು ಹೋಗಬೇಕಿತ್ತು" ಎಂದು ಹೇಳುತ್ತಿದ್ದರು. ಬಹುಮಂದಿ ಜೂನಿಯರುಗಳ ಸಹಾಯದಿಂದ ಅವರು ಅದನ್ನು ಸಾಧಿಸಬಲ್ಲವರಾಗಿದ್ದರು. ಆದರೆ ಅದು ಅವರ ದಾರಿಗೆ ಬರಲಿಲ್ಲ. ಬರವಣಿಗೆಯ ಮಾತುಗಳ ರೂಪದಲ್ಲಿರುವವುಗಳು ಕಾನ್ಸ್ಟಿಟ್ಯೂಎಂಟ್ ಎಸೆಂಬ್ಲಿಯಲ್ಲಿ ಅವರು ಕೊಟ್ಟ ಅಭಿಪ್ರಾಯಗಳು, ಮತ್ತು ೧೯೫೫ರಲ್ಲಿ ಅವರು "ಘಟನೆ ಮತ್ತು ಮೂಲಭೂತ ಹಕ್ಕುಗಳು" ಎಂಬ ವಿಷಯದ ಮೇಲೆ ಮಾಡಿದ ರೈಟ್ ಆನರೇಬಲ್ ಶ್ರೀನಿವಾಸ ಶಾಸ್ತ್ರಿ ಮೆಮೋರಿಯಲ್ ಲೆಕ್ಚರುಗಳು ಮಾತ್ರ.

ಆದರೆ ಇಷ್ಟು ಹೇಳಿದರೆ ಸಾಕು. "ಯಾವ ಮನುಷ್ಯನೂ ಪರಿಪೂರ್ಣನಾಗಿರುವುದಿಲ್ಲ. ಅಲ್ಲಾಡಿಯವರು ಕಾನೂನಿನ ಜ್ಞಾನದಲ್ಲಿ ದೊಡ್ಡವರು. ಜೀವನದಲ್ಲಿ ನಿರಾಡಂಬರ ಮತ್ತು ವರ್ತನೆಯಲ್ಲಿ ಪರೋಪಕಾರಿಗಳಾಗಿದ್ದರು. ೧೯೫೩ರಲ್ಲಿ ಬಹು ಸಮಯದ ಕಾಯಿಲೆಯು, ಇಂಡಿಯದ ಅತ್ಯುತ್ತಮ ಕಾನೂನಿನ ಪ್ರತಿಭಾಶಾಲಿಯಾದ ಈ ವ್ಯಕ್ತಿಯೊಂದನ್ನು ಅಪಹರಿಸಿ ಅಪಾರ ನಷ್ಟವನ್ನುಂಟುಮಾಡಿತು."

(ಕಹಾನಿಯಮಾಪತ್ರಿಕೆಯಿಂದ)

ಜನತಾ ಉವಾಚ

ಅಧ್ಯಾಪಕರ ನಿವೃತ್ತ ವಯಸ್ಸಿನಲ್ಲಿ ಏಕರೂಪತೆ

ವಿಶಾಲ ಮೈಸೂರು ರಾಜ್ಯದ ನಿರ್ಮಾಣವಾಗಿ ವರ್ಷಗಳು ಎಂಟು ಉರುಳಿದರೂ ಇನ್ನು ಕೂಡಾ ರಾಜ್ಯಕ್ಕೊಂದು ಏಕರೂಪದ ಶಿಕ್ಷಣ ಪದ್ಧತಿ ಹಾಗೂ ನಿಯಮಗಳನ್ನು ಜ್ಯಾರಿಗೆ ತರುವುದು ನಮ್ಮ ರಾಜ್ಯ ಸರಕಾರಕ್ಕೆ ಸಾಧ್ಯವಾಗಿಲ್ಲ. ಇನ್ನು ಕೂಡಾ ರಾಜ್ಯದಲ್ಲಿ ಹಲವೆಡೆ ಹಳೆಯ ಕ್ರಮಗಳೂ ಹಾಗೂ ನಿಯಮ ನಿಬಂಧನೆಗಳೂ ಜ್ಯಾರಿಯಲ್ಲಿವೆ. ಐದು ಬಗೆಯ ಆಡಳಿತಕ್ಕೊಳಪಟ್ಟ ಪ್ರದೇಶಗಳು ಒಂದುಗೂಡಿದಾಗ ಅವುಗಳಲ್ಲಿ ಏಕರೂಪತೆಯನ್ನು ತರುವುದು ತುಸು ಪ್ರಯಾಸದ ಕೆಲಸವೇನೋ ಹೌದು. ಆದರೆ ಎಂಟು ವರ್ಷ ಕಳೆದರೂ, ಇನ್ನೂ ಈ ಕಾರ್ಯ ಸಾಧಿಸಿಲ್ಲವೆಂದರೆ ಇದನ್ನು ಏನನ್ನಬೇಕೋ ತಿಳಿದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿದ್ಯಾಸಂಸ್ಥೆಗಳಲ್ಲಿ ಖಾಸಗಿ ಸಂಸ್ಥೆಗಳು, ಜಿಲ್ಲಾ ಬೋರ್ಡು ಹಾಗೂ ಪಂಚಾಯತ್ ಬೋರ್ಡ್ ಶಾಲೆಗಳೇ ಹೆಚ್ಚು. ಸರಕಾರೀ ಶಾಲೆಗಳು ಬೆರಳೆಣಿಕೆಯಷ್ಟು. ಹಿಂದಿನ ಮದ್ರಾಸ್ ಸರಕಾರದ ನಿಬಂಧನೆ ಪ್ರಕಾರ ಸ್ಥಳೀಯ ಸಂಸ್ಥೆಗಳ ಶಾಲೆಗಳಲ್ಲಿ ಹಾಗೂ ಸರಕಾರೀ ಶಾಲೆಗಳಲ್ಲಿ ದುಡಿಯುವ ಅಧ್ಯಾಪಕರ ನಿವೃತ್ತಿಯ ವಯಸ್ಸು ೫೫ ಎಂದಿತ್ತು. ಖಾಸಗಿ ಶಾಲೆಗಳಲ್ಲಿ ಈ ಮಿತಿ ೬೦ ಆದಿತ್ತು. ಇದೇ ಪದ್ಧತಿ ಇಂದು ಕೂಡಾ ಮುಂದುವರಿದು ಬರುತ್ತದೆ. ಈ ಅಸಮತೆಯನ್ನು ಹೋಗಲಾಡಿಸಬೇಕಾದುದು ಇಂದು ತೀರಾ ಅಗತ್ಯವೆನಿಸಿದೆ.

ಈ ನಿಯಮದ ಪರಿಣಾಮವೆಂದರೆ, ಸ್ಥಳೀಯ ಸಂಸ್ಥೆ ಹಾಗೂ ಸರಕಾರೀ ಶಾಲೆಗಳಿಂದ ನಿವೃತ್ತಿ ಹೊಂದಿದ ಸಮರ್ಥ ಹಾಗೂ ಅನುಭವೀ ಉಪಾಧ್ಯಾಯರುಗಳು, ಬಳಿಕ ಯಾವುದಾದರೂ ಖಾಸಗೀ ಶಾಲೆಗಳಲ್ಲಿ ದುಡಿಯುತ್ತಾರೆ. ಈ ರೀತಿ, ಅವರ ಸಮರ್ಥ ಹಾಗೂ ಪರಿಪಕ್ವವಾದ ಅನುಭವದ ಲಾಭ ಸರಕಾರೀ ಶಾಲೆಗಳಿಗಾಗದೆ ಖಾಸಗೀ ಶಾಲೆಗಳಿಗಾಗುತ್ತದೆ. ಇದರ ಪರಿಣಾಮವೆಂದರೆ ಸರಕಾರೀ ಹಾಗೂ ಸ್ಥಳೀಯ ಸಂಸ್ಥೆಗಳ ಆಡಳಿತಗಳ ಶಾಲೆಗೆ ಸೇರಲು ಯಾರೂ ಮುಂದೆ ಬರುವುದಿಲ್ಲ. ಹೀಗಾಗಿ ತರಬೇತಾಗದವರನ್ನೋ ಅಥವಾ ಅನನುಭವಿಗಳನ್ನೋ ಈ ಶಾಲೆಗಳಲ್ಲಿ ನೇಮಿಸಿ, ಅಲ್ಲಿಯ ಶಿಕ್ಷಣ ಮಟ್ಟ ಇಳಿಯುತ್ತದೆ.

ನಿವೃತ್ತಿ ಹೊಂದಿದ ಅಧ್ಯಾಪಕರು ಖಾಸಗಿ ಶಾಲೆಗಳಲ್ಲಿ ದುಡಿಯಬಲ್ಲರಾದರೆ ಸರಕಾರ ಈ ಕ್ರಮಕ್ಕೆ ಆಸ್ತು ಎನ್ನುವುದಾದರೆ, ಅದೇ ನಿಯಮವನ್ನು ಸರಕಾರೀ ಹಾಗೂ ಸ್ಥಳೀಯ ಸರಕಾರಗಳ ರಂಗಕ್ಕೂ ಯಾಕೆ ವಿಸ್ತರಿಸಬಾರದು? ಇದರಿಂದ ಅಧ್ಯಾಪಕರು ಸರಕಾರೀ ಹಾಗೂ ಸ್ಥಳೀಯ ಸಂಸ್ಥೆಗಳ ಶಾಲೆಗಳ ಕಡೆಗೆ ಆಕರ್ಷಿಸಲ್ಪಡುತ್ತಾರೆ. ಹೀಗಾಗಿ ಅವುಗಳ ಅಭಿವೃದ್ಧಿಗೆ ಸಹಾಯವಾಗುತ್ತದೆ. ಇದರ ಬದಲು, ಈಗಿನ ಕ್ರಮವನ್ನೇ ಮುಂದುವರಿಸಿಕೊಂಡು ಹೋದರೆ, ಸಮರ್ಥ ಅಧ್ಯಾಪಕರ ದಕ್ಷ ಸೇವೆಯು ಖಾಸಗಿ ಶಿಕ್ಷಣ ಸಂಸ್ಥೆಗಳಿಗೇ ಹೆಚ್ಚು ಲಭಿಸುತ್ತದೆ. ಶಿಕ್ಷಣ ಖಾತೆ, ಈ ಅಸಮತೆಯನ್ನು ಹೋಗಲಾಡಿಸಿ ನಿವೃತ್ತಿ ವಯಸ್ಸನ್ನು ಒಂತ್ತೊಂದು ಎಲ್ಲರಿಗೂ ಅನ್ವಯಿಸಬೇಕು.

— ಓರ್ವ ಹಿತೈಷಿ.

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳಗಣ್ಣಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು ● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಯುಗ ಪ್ರೆಸ್, ಉಡುಪಿ.

ಭಾರತದ ಆಹಾರ ಕಾರ್ಪೊರೇಶನ್

(ನಾಲ್ಕನೇ ಪುಟದಿಂದ)

ನಮ್ಮ ಮಕ್ಕಳು ಹಾಗೂ ಮರಿಮಕ್ಕಳು ಆಕ್ರಮಣ ಮಾಡಿದ ಪರಿಸ್ಥಿತಿ ಒದಗಿದಂತಾಗಬಹುದು.

ಜನಸಂಖ್ಯೆಯು ಹೆಚ್ಚಳದ ಪ್ರಮಾಣಕ್ಕನುಸಾರವಾಗಿ, ನಮ್ಮ ಆಹಾರದ ಉತ್ಪಾದನೆಯಲ್ಲೂ ಗಣನೀಯವಾದ ಹೆಚ್ಚಳವಾಗದ್ದರೆ ನಾವು ಮಂದಕ್ಕೆ ವಿಶೇಷ ಆಮದುಗಳನ್ನೇ ಹೊಂದಿಕೊಂಡಿರಬೇಕಾಗುವುದು. ದೇಶಕ್ಕೊಂದು ನಿರ್ದಿಷ್ಟ ಆಹಾರ ಧೋರಣೆಯನ್ನು ರೂಪಿಸಿಕೊಳ್ಳದೆ, ನಾವು ಈ ಹಿಂದೆ "ಹೆಚ್ಚು ಆಹಾರ ಬೆಳೆಯಿರಿ" ಚಳವಳಿ ಹಾಗೂ ಇನ್ನಿತರ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು, ಅವುಗಳು ಕಾರ್ಯಾಚರಣೆಯಲ್ಲಿ ಫಲಕೇಡಪುದನ್ನು ಕಂಡಿದ್ದೇವೆ. ಇಂದಿನ ಅವಶ್ಯಕತೆಯು ಜನರಿಗೆ ಹೆಚ್ಚು ಆಹಾರ ಧಾನ್ಯವನ್ನು ಒದಗಿಸುವುದಾಗಿದೆ ಹೊರತು ಬರೀ ಅವರ ಆದಾಯವನ್ನು ಹೆಚ್ಚಿಸುವುದಲ್ಲ. ಆದ್ದರಿಂದ ಹಸಿವಿನ ವಿರುದ್ಧ ಹೋರಾಟವು ಎರಡು ಬಗೆಯದ್ದಾಗಿರಬೇಕು. ನಮ್ಮ ಜನರು ಉತ್ತಮ ಆಹಾರ ಸೇವನೆಯನ್ನು ಮಾಡುವಂತೆ ನಮ್ಮ ಯೋಜನೆಗಳನ್ನು ರೂಪಿಸಬೇಕಾದುದು ಅಗತ್ಯ. ವಿಪುಲವಾದ ಹಾಗೂ ಅಗ್ಗದರದ ಆಹಾರ ಧಾನ್ಯದ ಸರಬರಾಜೇ ನಮ್ಮ ರಾಷ್ಟ್ರೀಯ ಆಹಾರ ಧೋರಣೆಯ ಗುರಿಯಾಗಿದ್ದು ಇದರ ಸಾಧನೆಗೆ ದೀರ್ಘಾವಧಿಯ ಯೋಜನೆಗಳನ್ನು ಕೈಕೊಳ್ಳಬೇಕು. ಅಧಿಕ ಆಹಾರ ಉತ್ಪಾದಿಸುವುದರತ್ತ ನಾವು ಗಮನ ಹರಿಸಬೇಕು. ಇದೀಗ ನಮ್ಮ ಬೇಸಾಯದ ವಿಧಾನಗಳಲ್ಲಿ ಬದಲಾವಣೆಗಳನ್ನು ಮಾಡಿ, ಉತ್ತಮ ಗೊಬ್ಬರ ಹಾಗೂ ಬೀಜಗಳನ್ನು ಬಳಸಿ, ನೀರಾವರಿ ಪೂರೈಕೆ ಮಾಡಿದಲ್ಲಿ ನಮ್ಮ ಉತ್ಪಾದನೆಯು ಈಗಲೇ ೩೦% ರಷ್ಟು ಹೆಚ್ಚಾಗಲು ಸಾಧ್ಯವಿದೆ. ಇದೊಂದೇ ಈಗ ಉಳಿದಿರುವ ಹಾಗೂ ಸುಲಭದ ಹಾಗೂ ಕೂಡಲೇ ಫಲ ಕೊಡುವ ಉಪಾಯ. ಆದುದರಿಂದ ಉತ್ಪಾದನೆಯಲ್ಲಿ ಪ್ರಗತಿ ಹಾಗೂ ವಿತರಣೆಯಲ್ಲಿ ಸುಧಾರಣೆ—ಇವುಗಳನ್ನು ಗಮನದಲ್ಲಿರಿಸಿ ನಾವು ಈ ಸಮಸ್ಯೆಯನ್ನು ವಿಶ್ಲೇಷಿಸಬೇಕು.

ಉತ್ಪಾದನೆಯ ಕಾರ್ಯಕ್ರಮ

ಭಾರತದ ಪ್ರಾಚೀನ ಪದ್ಧತಿಯ ಪ್ರಕಾರ ಭೂಮಿಯು ರಾಷ್ಟ್ರದ ಸೊತ್ತು



ಎಲ್ಲರಿಗೂ ಅನುಕೂಲವಾಗುವಂತಹ

ಆಕರ್ಷಕ ಉಳಿತಾಯ ಯೋಜನೆಗಳು

- ಕ್ಯಾಷ್ ಸರ್ಟಿಫಿಕೇಟ್ಸ್
- ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ಸ್
- ರಿಕರಿಂಗ್ ಡಿಪಾಸಿಟ್ಸ್
- ಆನ್ಯುಟಿ ಸರ್ಟಿಫಿಕೇಟ್ಸ್

ಹಾಗೂ

ನಿಮ್ಮ ಫಿಕ್ಸೆಡ್ ಡಿಪಾಸಿಟ್‌ಗಳ ಮೇಲೆ ವರ್ಷಕ್ಕೆ ಶೇ. 6½ಯ ವರೆಗೂ ಬಡ್ಡಿ

ವಿವರಗಳಿಗೆ ನಿಮ್ಮ ಸಮೀಪದಲ್ಲಿನ ನಮ್ಮ ಬ್ರಾಂಚ್ ಮೆನೇಜರರೊಡನೆ ವ್ಯವಹರಿಸಿರಿ

ಕೆನರಾ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ: **ಬೆಂಗಳೂರು** (ಸ್ಥಾಪನೆ: 1906) ರಿಜಿಸ್ಟರ್ಡ್ ಆಫೀಸ್: **ಮಂಗಳೂರು**

ವಿಶ್ವದಾದ್ಯಂತ ಪ್ರತಿನಿಧಿಗಳು • ಭಾರತದಲ್ಲಿ **235**ಕ್ಕೂ ಹೆಚ್ಚು ಶಾಖೆಗಳು

ಹಾಗೂ ರೈತನು ದೇಶಕ್ಕಾಗಿ ಅದನ್ನು ತನ್ನ ಸ್ವಾಧೀನವಿರಿಸಿಕೊಳ್ಳುವವನು. ರೈತನಿಗೆ ತನ್ನ ದುಡಿತದ ಫಲವನ್ನು ಉಣ್ಣುವ ಹಕ್ಕು ಆತನು ಸಮಾಜಕ್ಕೆ ತನ್ನ ಕರ್ತವ್ಯವನ್ನು ಸಲ್ಲಿಸುವ ವರೆಗೆ ಇದೆ. ಹೀಗಿರುವಾಗ ಸಮಾಜದ ಜನತೆ ಉತ್ಪಾದಕನಿಗೆ ಎಲ್ಲಿಯ ವರೆಗೆ ನೆರವೀಯುವುದೋ ಅಲ್ಲಿಯ ವರೆಗೆ, ಈ ಭೂಮಿಯಲ್ಲಿ ಜನತೆಗೆ ಸ್ವಲ್ಪ ಮಟ್ಟಿನ ಹಕ್ಕು ಇದೆ. ಗೈರುಹಾಜರಾಗಿರುವ ಭೂಮಾಲಕನಂತೆ ಸಮಾಜ ಈ ವರೆಗೆ ವರ್ತಿಸುತಿತ್ತು. ಜನತೆಗೆ ಹೆಚ್ಚು ಆಹಾರ ಧಾನ್ಯ ಬೇಕಾದರೆ, ಹೆಚ್ಚು ಉತ್ಪಾದಿಸಲು ರೈತನಿಗೆ ನೆರವಾಗಬೇಕಲ್ಲದೆ, ಅವನ ಉತ್ಪಾದನೆಯ ಬಹ್ವಂಶವನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವುದಲ್ಲ.

ಉತ್ಪಾದಕರಿಗೆ ಸಾಲ ಹಾಗೂ ಬೆಳೆಯ ವಿಮಾ ಯೋಜನೆಯ ಸೌಲಭ್ಯ ಮತ್ತು ಬಳಕೆದಾರಂಗೆ ಯೋಗ್ಯ ಬೆಲೆಯೇ ಮೊದಲಾದ ಆರ್ಥಿಕ ಧೋರಣೆಗಳು ಮೇಲೆ ತಿಳಿಸಿದ ನೀತಿಯ ಚೌಕಟ್ಟಿಗೆ ಒಳಗಾಗಿ ಬೇಕು. ರೈತನ ವೆಚ್ಚ ಹಾಗೂ ಗಂಡಾಂತರದಲ್ಲಿ ನಾವು ಪಾಲುಗೊಂಡರೆ ಆಗ ಅವನು ತನ್ನ ಉತ್ಪಾದನೆಯಲ್ಲಿ ನಮಗೆ ಪಾಲು ಕೊಡುತ್ತಾನೆ. ನಾವು ಅವನ ಉತ್ಪಾದನೆ ಹೆಚ್ಚಿಸಿದರೆ ನಾವು ಹೆಚ್ಚು ಆಹಾರಧಾನ್ಯ ಹಾಗೂ ಕಡಿಮೆ ಬೆಲೆಯ ಆಹಾರಧಾನ್ಯವನ್ನು ಅವನಿಂದ ನಿರೀಕ್ಷಿಸಬಹುದು. ಆಹಾರಧಾನ್ಯದ ಹೆಚ್ಚಳವೇ ಇರಲಿ ಕೊರತೆಯೇ ಇರಲಿ, ಅವುಗಳ ವಿತರಣೆಯು ಭೌಗೋಳಿಕ ಸ್ಥಿತಿಗನುಗುಣವಾಗಿ ಮತ್ತು ಸಮಾಜದ ಎಲ್ಲಾ ವರ್ಗದವರಿಗೂ ಸಮಾನ ರೀತಿಯಲ್ಲಿ ವಿತರಿಸಲ್ಪಡಬೇಕು. ಈ ಸಂದರ್ಭ ಶ್ರೀಮಂತ, ಬಡವ ಎಂಬ ಭೇದಭಾವ ಸಲ್ಲದು.

ಆಹಾರಧಾನ್ಯ ಕಾರ್ಪರೇಶನು ಮುಖ್ಯವಾಗಿ ಉತ್ಪಾದಕರ ಹಾಗೂ ಬಳಕೆದಾರರ ಮಿತ್ರನಂತೆ ವರ್ತಿಸುವುದು. ಸರಕಾರವು, ರೈತನ ಉತ್ಪಾದನೆಗಳಿಗೆ ಕನಿಷ್ಟ ಮಿತಿಯ ಬೆಲೆಯನ್ನು ಶಾಸನ ಬದ್ಧವಾಗಿ ನಿರ್ಧರಿಸಲು ಒಪ್ಪಿಕೊಂಡಿರುವುದು, ನಿಜಕ್ಕೂ ಒಂದು ಸ್ವಾಗತಾರ್ಹ ವಿಷಯ. ಈ ಸಂದರ್ಭ, ಆಹಾರಧಾನ್ಯದ ಬೆಲೆಯಲ್ಲಿ ಆದ ಹೆಚ್ಚಳದ ಲಾಭ, ರೈತನಿಗೇನೇ ದೊರೆಯುವಂತೆ ನೋಡಬೇಕಾದುದು ಸರಕಾರದ ಕರ್ತವ್ಯ. ಮಧ್ಯವರ್ತಿಗಳು ಈ ಸಂದರ್ಭದ ಲಾಭ ಪಡೆಯದಂತೆ ನೋಡಬೇಕಾಗಿದೆ. ಆಹಾರ ಧಾನ್ಯಗಳ ಬೆಲೆಯಲ್ಲಿನ ಹೆಚ್ಚಳವು ರೈತನಿಗೆ ಹೆಚ್ಚು ಉತ್ಪಾದಿಸಲು ಉತ್ತೇಜನವೀಯುವುದು. ಬೆಲೆ ಹೆಚ್ಚಿದರೆ, ಅವನಿಗೆ ಹಿಂದಿನ ಉತ್ಪಾದನೆಗೇ ಹೆಚ್ಚು ಬೆಲೆ ದೊರೆತು ಲಾಭವಾಗುವುದೇನೋ ನಿಜ. ಇಷ್ಟು ಮಾತ್ರವಲ್ಲ ಬೆಲೆ ಏರಿಕೆಯ ಪರಿಣಾಮವಾಗಿ, ರೈತನು ತನ್ನ ಉತ್ಪಾದನೆಯನ್ನು ಇನ್ನಷ್ಟು ಹೆಚ್ಚಿಸಲು ಯತ್ನಿಸಿ, ತನ್ನ ಬೇಸಾಯದ ಕ್ರಮದಲ್ಲಿ ನವೀನತೆಯನ್ನು ಬಳಸುವನು. ಕೇವಲ ಬೆಲೆಯು ಮಾತ್ರ ಹೆಚ್ಚಾಗಿ ಉತ್ಪಾದನೆಯು ಹೆಚ್ಚಾಗದಿದ್ದರೆ, ಇದರ ಪರಿಣಾಮವು ಹಾನಿಕಾರಕ. ದೇಶವು ಇದರಿಂದ ಯಾವ ಪ್ರಯೋಜನವನ್ನೂ ಪಡೆಯಲಾರದು. ಬೆಲೆ ಹೆಚ್ಚಿದಂತೆ ಉತ್ಪಾದನೆ ಹೆಚ್ಚಬೇಕಾದುದು ಅತಿ ಅಗತ್ಯ. ಕಡಿಮೆ ಉತ್ಪಾದನೆಯ ಈ ಸಮಸ್ಯೆಯು ಪರಿಹಾರವಾಗಬೇಕಾದರೆ, ಸ್ವತಂತ್ರವಾದ ಕೃಷಿ ಧೋರಣೆಯು ರೂಪಿತವಾಗಬೇಕಾದರೆ, ಸರಕಾರದ ಆಡಳಿತ ವರ್ಗದವರ ಮತ್ತು ರೈತರಿಗೆ ನೆರವೀಯಲು ನೇಮಕಗೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಮನೋಪ್ರವೃತ್ತಿಯಲ್ಲಿ ತೀವ್ರ ಬದಲಾವಣೆ ಆಗ ಬೇಕಾದುದು ಅತೀ ಅಗತ್ಯ. ರೈತರು ಈ ವರೆಗೆ ಅಧಿಕ ಉತ್ಪಾದನೆಯಲ್ಲಿ ಜಯಶೀಲರಾಗಿರದಿದ್ದರೆ, ಅದರ ತಪ್ಪು ಅವರದು ಮಾತ್ರವಲ್ಲ. ಆರ್ಥಿಕ ಮುಗ್ಗಟ್ಟು, ನಿರಕ್ಷರತೆ, ಹೊಸ ಬೇಸಾಯದ ವಿಧಾನಗಳನ್ನು ಬಳಸುವಲ್ಲಿ ಅಸಾಮರ್ಥ್ಯ ಇವುಗಳ ದೆಸೆಯಿಂದ ರೈತರು ಈ ಸೌಲಭ್ಯಗಳನ್ನು ಉಪಯೋಗಿಸುವಲ್ಲಿ ಹಿಂದುಳಿದರು. ಆದರೆ ಕೃಷಿಯ ಸುಧಾರಣೆಗಾಗಿ ಮೀಸಲಾಗಿರಿಸಿದ ವಿವಿಧ ಖಾತೆಗಳು ಹಾಗೂ ಸಂಘಗಳು ಈ ಸಂದರ್ಭ ಇದನ್ನೊಂದು ಸಂಘಾಹ್ವಾನವನ್ನಾಗಿ ಸ್ವೀಕರಿಸಿ ಕಾರ್ಯಮಾಡದಿದ್ದುದರಿಂದ ಪರಿಸ್ಥಿತಿ ಈ ಮಟ್ಟಕ್ಕೆ ಮುಟ್ಟಿತು.

(ಮುಂದುವರಿಯುವುದು)

ಶಾಲಾ ವಾರ್ಷಿಕೋತ್ಸವ

ಹಿರಿಯಡ್ಕ, ಫೆ. 12—ಸ್ಥಳೀಯ ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವವು ಕಾರ್ಕಳ ಬೋರ್ಡ್ ಹೈಸ್ಕೂಲಿನ ಹೆ|ಮಾ| ಶ್ರೀ ಎಸ್. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ವಾರ್ಷಿಕೋತ್ಸವ ಸಮಿತಿಯ ಅಧ್ಯಕ್ಷ ಡಾ| ಬಿ. ಚಂದಯ್ಯ ಹೆಗ್ಡೆಯವರು ಸ್ವಾಗತಿಸಿದ ಬಳಿಕ ಹೆ| ಮಾ| ಶ್ರೀ ಕೆ. ಎಂ. ಭಂಡಾರಿಯವರು ವರದಿಯನ್ನೋದಿದರು. ಬಳಿಕ ವಿದ್ಯಾರ್ಥಿ ಸಂಘದ ವರದಿಯನ್ನು ಶ್ರೀ ಯಚ್. ಧರ್ಮಪಾಲರಾಯರೂ ಸಂದೇಶಗಳನ್ನೂ ಶ್ರೀ ಪಿ. ಶ್ರೀನಿವಾಸರಾಯರೂ ಓದಿದ ಬಳಿಕ ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಗಳಾದುವು. ಶ್ರೀ ಶಂಕರ ಭಟ್ಟರು ವಂದನೆಗಳನ್ನರ್ಪಿಸಿದರು. ವಿವಿಧ ಮನರಂಜನಾ ಕಾರ್ಯಕ್ರಮಗಳಾದ ಮೇಲೆ ಶ್ರೀ ಬಿ. ನಾರಾಯಣಾಚಾರ್ಯರು ಧನ್ಯವಾದವಿತ್ತರು. ಬೆಳಿಗ್ಗೆ ಪೋಲಿಸ್ ಸಬ್ ಇನ್‌ಸ್ಪೆಕ್ಟರ್ ಶ್ರೀ ಕೆ. ಗೋವಿಂದ ನಾಯ್ಕರು ಧ್ವಜಾರೋಹಣ ಮಾಡಿದ ಬಳಿಕ ಉಪಾಹಾರ ಪಂದ್ಯಾಟಗಳಾದುವು

ಶಾಲಾ ವರ್ಧಂತ್ಯುತ್ಸವ

ಹೆಜಮಾಡಿ, ಫೆ. 12—ಸ್ಥಳೀಯ ಬೋರ್ಡ್ ವಿವಿಧೋದ್ದೇಶ ಹೈಸ್ಕೂಲಿನ ವರ್ಧಂತ್ಯುತ್ಸವವು ಜಿಲ್ಲಾಧಿಕಾರಿ ಶ್ರೀ ಪಿ. ಎಂ ಮುಜಾಹಿದರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಧಾನಾಧ್ಯಾಪಕ ಶ್ರೀ ಜಿ. ಮಹಾಬಲ ಶೆಟ್ಟರು ಸ್ವಾಗತಿಸುತ್ತ ಈ ಹೈಸ್ಕೂಲನ್ನು ಹಾಯರ್ ಸೆಕೆಂಡರಿ ಸ್ಕೂಲಾಗಿ ಪರಿವರ್ತಿಸಿದರೆ ಈ ಭಾಗದ ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನವಾದೀತೆಂದರು. ಶ್ರೀ ರಾಜೀವ ಶೆಟ್ಟರು ಸಂದೇಶ ವಾಚನ ಮಾಡಿದ ಬಳಿಕ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ ಅವರು ಈ ಶಾಲೆಗೆ ದೊರೆತ ಪೂಜ ಸ್ಮಾರಕ ಶೀಲ್ಡನ್ನು ಕೊಡುತ್ತಾ ಶಾಲೆಯ ಪ್ರಗತಿಯನ್ನು ಕೊಂಡಾಡಿದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಶಿಸ್ತಿನ ಪ್ರಾಧಾನ್ಯತೆಯನ್ನು ಹೇಳಿ ಶಾಲೆಯ ಉನ್ನತಿಗಾಗಿ ಮೆಚ್ಚಿಗೆ ವ್ಯಕ್ತಪಡಿಸಿದರು. ಶ್ರೀ ಕಾಳಪ್ಪ ಶೆಟ್ಟರು ವಂದನೆ ಸಲ್ಲಿದರು. ಬಳಿಕ ವಿವಿಧ ವಿನೋದಾವಳಿಗಳಾದುವು.

ಹೈಸ್ಕೂಲ್ ವರ್ಧಂತಿ

ಕಡಿಯಾಳಿ, ಫೆ. 15—ಸ್ಥಳೀಯ ಯು. ಕಮಲಾ ಬಾಯಿ ಹೈಸ್ಕೂಲಿನ ವರ್ಧಂತಿಯು ಶ್ರೀ ಕಾಣಿಯೂರು ಮಠದ ಶ್ರೀ ಮದ್ ವಿದ್ಯಾವಾರಿನಿಧಿ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲೆಯ ಕರೆಸ್ಪಾಂಡೆಂಟ್ ಶ್ರೀ ಕೆ. ಕೆ. ಪೈಯವರು ಸ್ವಾಗತ ಭಾಷಣ ಮಾಡಿದ ಬಳಿಕ ಹೆ| ಮಾ| ಶ್ರೀ ಎಚ್. ಅನಂತಯ್ಯ ಪಂದೆಯವರು ಶಾಲಾ ವರದಿ ವಾಚನ ಮಾಡಿದರು. ವಿದ್ಯಾರ್ಥಿ ಮುಖಂಡ ಎ. ಸದಾನಂದ ನಾಯ್ಕರು ಶಾಲಾ ಚಟುವಟಿಕೆಗಳನ್ನು ನಿವೇದಿಸಿದರು. ಅಧ್ಯಕ್ಷರ ಭಾಷಣವಾದ ಬಳಿಕ ವಿವಿಧವಿನೋದಾವಳಿಗಳಾದುವು. ಮುಖ್ಯ ಅತಿಥಿ ಶ್ರೀ ಅಣ್ಣಸ್ವಾಮಿಯವರು ಬಹುಮಾನ ವಿತರಣೆ ಮಾಡಿದ ಮೇಲೆ ಶ್ರೀ ಎಂ. ರಾಮಚಂದ್ರ ರಾಯರು ಉಪಕಾರ ಸ್ಮರಣೆ ಮಾಡಿದರು.

ಶಿರ್ವ ಹಿಂದೂ ಹೈಸ್ಕೂಲಿನ ವರ್ಧಂತ್ಯುತ್ಸವ

ಶಿರ್ವ ಹಿಂದೂ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 18–2–1965ರಂದು ಪದ್ಮಶ್ರೀ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು.

ಶಾಲಾ ಕರೆಸ್ಪಾಂಡೆಂಟ್ ಶ್ರೀ ಪಿ. ಶಿವಾಜಿ ಶೆಟ್ಟಿ ಸ್ವಾಗತಭಾಷಣ ಮಾಡಿದ ಅನಂತರ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಜಯರಾಮ ಶೆಟ್ಟಿ ಶಾಲೆಯ ಪ್ರಗತಿಪರ ವರದಿಯನ್ನೋದಿದರು. ಶ್ರೀ ಕೆ ವಾಸುದೇವ ಶೆಟ್ಟಿ ಸಂದೇಶವಾಚನ ಗೈದರು. ಡಾ| ಎಮ್. ಶೇಖರ ಹೆಗ್ಡೆಯವರು ಮಾಡಿದ ಸ್ವಸ್ತಿವಾಚನಕ್ಕೆ ಶಾಲಾ ವಿದ್ಯಾರ್ಥಿ ನಾಯಕ ಕೆ. ಪ್ರಭಾಕರ ಹೆಗ್ಡೆಯವರು ಉತ್ತರವಿತ್ತರು. ಮೈಸೂರು ವಿಜಯ ಸಂಪಾದಕ ಶ್ರೀ ಎ ರಾಮಣ್ಣನವರು ಬಹುಮಾನ ವಿತರಣೆ ಗೈದರು. ಮನೋರಂಜನಾ ಕಾರ್ಯಕ್ರಮಗಳಾದ ಮೇಲೆ ಡಾ| ಯು. ಕೆ. ಆಚಾರ್ಯರವರು ಧ್ವಜಾರೋಹಣ ಗೈದರು. ಶ್ರೀ ಬಿ. ಚಂದ್ರಹಾಸ ಹೆಗ್ಡೆಯವರು ಸುಕ್ಕಳಿಗೆ ಸಿಹಿತಿಂಡಿ ಹಂಚಿದ್ದರು. ಶ್ರೀ ಬಿ. ಜಯರಾಮ ಶೆಟ್ಟಿ ಧನ್ಯವಾದವಿತ್ತರು

ವಾರ್ಷಿಕೋತ್ಸವ

ಎಲ್ಲೂರು ಯುವಕ ಮಂಡಲದ ತೃತೀಯ ವಾರ್ಷಿಕೋತ್ಸವವು ತಾ 30 1 65ರಂದು ಜರಗಿತು. ಬೆಳಗ್ಗೆ ಬೆಳಪು ಪಂಚಾಯತ್ ಸಭಾಪತಿಗಳಾದ ಶ್ರೀ| ಬಿ. ಶಂಕರನಾರಾಯಣರಾಯರು ಧ್ವಜ ಅರಳಿಸಿದರು. ಪೂಜ್ಯ ಬಾಪೂಜಿಯವರ ಪುಣ್ಯ ಸ್ಮೃತಿಗಾಗಿ ಗ್ರಾಮ ಸೇವಕರಾದ ಶ್ರೀ ಬಿ. ಕೆ. ಜಂಬಗಿಯವರ ನೇತೃತ್ವದಲ್ಲಿ ಗ್ರಾಮ ನೈರ್ಮಲ್ಯ ಕಾರ್ಯಕ್ರಮವು ನಡೆಯಿತು. ಸಾಯಂಕಾಲ ಸ್ಥಳೀಯ ಸಮಾಜ ಮಂದಿರದ ಮುಂಭಾಗದಲ್ಲಿ ಉಡುಪಿ ತಾಲೂಕು ಡೆವಲಪ್‌ಮೆಂಟ್ ಬೋರ್ಡ್ ಉಪಾಧ್ಯಕ್ಷರಾದ ಡಾ| ಯು. ಕೆ. ಆಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಗ್ರಾಮ ಪಂಚಾಯತ್ ಸಭಾಪತಿಗಳಾದ ಕುಂಜೂರು ಕೃಷ್ಣಮೂರ್ತಿ ರಾಯರು ಭಾಷಣ ಮಾಡಿದರು. ಶ್ರೀ ಬಿ. ಕೆ. ಜಂಬಗಿಯವರು ಸಂದೇಶಗಳನ್ನೂ ಕಾರ್ಯದರ್ಶಿ ಶ್ರೀ ವೈ ವಿ. ಸುಬ್ಬರಾಯರು ವರದಿಯನ್ನೂ ವಾಚಿಸಿ ಮಾಡಿದರು. ಶ್ರೀ ಕೆ. ಮರಿಯಪ್ಪ ಪೊಳ್ಳರು ಮಂಡಲದ ವಾರ್ಷಿಕ ಹಸ್ತಪತ್ರಿಕೆಯಾದ "ತರುಣ ದೀಪಿಕೆ ಯನ್ನು ಉದ್ಘಾಟಿಸಿದರು. ಸಭಿಕರಲ್ಲಿ ಶ್ರೀ ವೈ. ಲಕ್ಷ್ಮೀನಾರಾಯಣ ರಾವ್, ಶ್ರೀ ಎಚ್. ಕೆ. ಗೋಳಣ್ಣವರ್ ಮತ್ತು ಶ್ರೀ ಮಹಾಬಲ ಶೆಟ್ಟರು ಸಮಯೋಚಿತ ಭಾಷಣ ಮಾಡಿದರು. ಅಧ್ಯಕ್ಷರು ಮಂಡಲದ ಚಟುವಟಿಕೆಗಳನ್ನು ಶ್ಲಾಘಿಸಿದರು. ಶ್ರೀ ವೈ ಶ್ರೀಪತಿ ಭಟ್ಟರು ಧನ್ಯವಾದ ಸಮರ್ಪಿಸಿದರು.

ಜೀವ ವಿಮಾ ಪಾಲಿಸಿದಾರರಿಗೆ	ನೀವು ನಿಮ್ಮ ವಾರಸುದಾರ
	ನನ್ನು ನೇಮಿಸಿರುವಿರಾ?

ನಿಮ್ಮ ವಾರಸುದಾರನ ಹೆಸರನ್ನು ಪಾಲಿಸಿಯಲ್ಲಿಯೇ ಸೂಚಿಸಿರಬೇಕು. ಇಲ್ಲದಿದ್ದಲ್ಲಿ ಹಕ್ಕುದಾರಿಕೆಯನ್ನು ಸ್ಥಾಪಿಸುವವರೆಗೆ ನಿಮ್ಮ ವಿಮಾ ಕ್ಲೈಮನ್ನು ಸಲ್ಲಿಸಲಾಗುವುದಿಲ್ಲ. ನಿಮ್ಮ ಜೀವ ವಿಮಾ ಪಾಲಿಸಿಯ ತಪಾಸಣೆಮಾಡಿರಿ, ಅದರಲ್ಲಿ ನಿಮ್ಮ ವಾರಸುದಾರನ ಹೆಸರು ಇರದಿದ್ದಲ್ಲಿ ಒಂದು ನೋಮಿನೇಶನ್ ಅಥವಾ ಎಸೈನ್‌ಮೆಂಟ್ ಫಾರ್ಮನ್ನು ನಿಮಗೆ ಕಳುಹಿಸಲು ಲೈಫ್ ಇನ್‌ಷೂರನ್ಸ್ ಕಾರ್ಪೊರೇಶನ್‌ಗೆ ಕೂಡಲೆ ಬರೆಯಿರಿ. ಮತ್ತು ಯಾವಾಗಲೂ ನಿಯಮಿತ ಸಮಯದಲ್ಲಿ ನಿಮ್ಮ ಪ್ರೀಮಿಯಮ್‌ಗಳನ್ನು ಪಾವತಿ ಮಾಡಲು ಮರೆಯಬೇಡಿ.

ವಾರಸುದಾರರನ್ನು ನೇಮಿಸದಿದ್ದ ಕಾರಣ 31 ಮಾರ್ಚ್ 1964ರಂದು ಕೊನೆಗೊಂಡ ವರ್ಷದಲ್ಲಿ 4,400 ಇಂತಹ ಬಾಕಿಉಳಿದ ಮರಣ ಕ್ಲೈಮ್‌ಗಳಲ್ಲಿ ಸೇಕಡ 18ರಷ್ಟು ಕ್ಲೈಮ್‌ಗಳನ್ನು ಸಲ್ಲಿಸಲಾಗಲಿಲ್ಲ.

ಲೈಫ್ ಇನ್‌ಷೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ASP-LIC-AS 17

ಬುದ್ಧಿ ಬಂತು

(ಎರಡನೇ ಪುಟದಿಂದ)

ದು! ಎಂದು ಅಳಿಸಿಕೊಂಡಿದ್ದಳು. ಲಿಂಗಪ್ಪನಿಗಾದರೋ ಹೊತ್ತಿಗೆ ಸರಿಯಾಗಿ ಊಟವಿಲ್ಲ. ಸ್ನಾನ ನಿದ್ರೆಗಳಿಲ್ಲ. ಉಂಡಾಡಿಯಂತೆ ತಿರುಗಾಡುವ ತನ್ನ ಪತಿಯ ಅವಸ್ಥೆಯನ್ನು ನೋಡಿ ಆಕೆ ಮರುಗುವಳು. ರಾತ್ರಿ ಎಷ್ಟು ಹೊತ್ತಾದರೂ ಅತನು ಬಾರದೆ ತಾನು ಉಣ್ಣುತ್ತಿರಲಿಲ್ಲ. ಅತ್ತ ಇರುವಷ್ಟು ಕಾಲ ಮಗುವನ್ನು ಮಾಯಿ ತೊಟ್ಟಿಲಡಿ ಮಲಗಿಸಿ ತಾನೂ ಮಲಗುತ್ತಿದ್ದಳು ಪುಟಮಕಿ ಪಾಪ! ಮಗುವ ದಾರಿ ಕಾಯೇ ಕುಳಿರುತ್ತಿತ್ತು. ಆದರೆ ಈಗ ಹಾಗಲ್ಲ; ಅಬಲೆಯಾದರೂ ಲಕ್ಷ್ಮಿಯೇ ಕಾದು ಕುಳ್ಳಿರಬೇಕಾಗುತ್ತಿತ್ತು!

ಈ ದಿನ ಲಿಂಗಪ್ಪನಿಗೆ ಮಾಂಕಣ್ಣನಲ್ಲಿಗೆ ಹೋಗಬೇಕಾಗಿತ್ತು. ಮಂಕಣ್ಣನ ಮಾದಕ ಪದಾರ್ಥವಾದರೋ ಗಿರಾಕಿಗಳ ಮೋಹವನ್ನು ಮರುಳು ಮಾಡಿತ್ತು. ಲಿಂಗಪ್ಪನ ಮನಸ್ಸೆಲ್ಲಾ ಅಲ್ಲೇ ಕೇಂದ್ರೀಕೃತವಾಗಿತ್ತು. ಆದರೆ "ಮಾಂಕಣ್ಣನ ಮೂರುತಿಯ ದರ್ಶನಕ್ಕೆ ರಿಕ್ತ ಹಸ್ತನಾಗಿ ಹೋಗುವುದೇ? ಛೆ! ಪದೇ ಪದೇ ಸಾಲಮಾಡುವುದೇ? ಅವನು ನನ್ನನ್ನು ಇಷ್ಟು ಆದರದಿಂದ ನೋಡುತ್ತಿರುವಾಗ ಅವನ ವಿಶ್ವಾಸವನ್ನು ಹಾಳು ಮಾಡುವುದೇ? ಅಲ್ಲ ನನ್ನಂತವನಿಗೆ ಇದು ಯೋಗ್ಯವಲ್ಲ" ಎಂದು ಲಿಂಗಪ್ಪನು ಯೋಚಿಸಹತ್ತಿದನು

"ಕೈಯಲ್ಲಿ ಕಾಸೊಂದಿಲ್ಲ. ಬೇರೆ ಹಣ ಸಂಪಾದಿಸುವ ದಾರಿಯೂ ಇಲ್ಲ. ಇರುವುದೆಂದರೆ ಲಕ್ಷ್ಮಿಯ ಒಂದು ಜೊತೆ ಬಳೆ ಮಾತ್ರ! ಅದನ್ನಾದರೂ ಮಾಂಕಣ್ಣನಿಗೆ ಕೊಟ್ಟು ಸಾಲ ತೀರಿಸಿಬಿಡಲೇ? ಅಯ್ಯೋ! ಲಕ್ಷ್ಮಿಯೊಡನೆ ಕೇಳುವುದಾದರೂ ಹೇಗೆ? ಕೇಳಿದರೆ ಕೊಡುವಷ್ಟು ಉದಾರಿಯಾಗಿರಬಹುದೇ ಅವಳು? ಈಗಾಗಲೇ ಎಲ್ಲವನ್ನೂ ಮಾರಿಸಿದ ನಾನೇ ತಿರುಗಿ ಇವುಗಳನ್ನೂ ಹೇಗೆ ಕೇಳಲಿ? ಆದರೂ ಕೈ ಹಿಡಿದ ಮಡದಿಯಲ್ಲವೇ? ಕೇಳಿ ನೋಡುವ" ಎಂದು ಲಿಂಗಪ್ಪನ ಯೋಜನೆಯು ನಿರ್ಧಾರವಾಗಿ ಸಾಗುತ್ತಾ ಲಕ್ಷ್ಮಿಯನ್ನು ಕಾಣಲು ನಿಶ್ಚೈಸಿತು.

ಲಕ್ಷ್ಮೀ, ಲಕ್ಷ್ಮೀ ಇಗೋ, ಇಲ್ಲಿ ಬಾ..." ಲಿಂಗಪ್ಪ ಹೊರ ಜಗಲಿಯಲ್ಲಿ ಕುಳಿತಲ್ಲಿಂದಲೇ ಕೂಗಿದ. "ಕರೆದಿರೇನು? ... ಏಕೆ?" ಲಕ್ಷ್ಮಿ ಒಳಗೆ ಮನೆಯಿಂದ ಬರುತ್ತಲೇ ಕೇಳಿದಳು.

"ಲಕ್ಷ್ಮೀ ನನ್ನ ಮೇಲೆ ನಿನಗೆ ನಿಜವಾಗಿಯೂ ಪ್ರೀತಿಯಿದೆಯೇ?"

"ಅಯ್ಯೋ! ನಿಮಗೇನಂತೆ? ಪ್ರೀತಿಯಿಲ್ಲವೆಂದಾರು ಹೇಳಿದರೀಗ?"

"ಹಾಗಾದರೆ ನೀನಿಂದು ನನ್ನ ಮಾನ ಉಳಿಸಬೇಕು.'

"ಏನು ಏನಾಯಿತು ...?' ನಿಷ್ಕಪಟಿಯಾದ ಲಕ್ಷ್ಮಿ ಗಾಬರಿಗೊಂಡು ಪ್ರಶ್ನಿಸಿದಳು.

"ಏನು ಹೇಳಲಿ ಲಕ್ಷ್ಮೀ? ನೋಡು ನಮ್ಮ ಹಿರಿಯಂಗಡಿ ಸಾಹುಕಾರರಿದ್ದಾರಲ್ಲ, ಅವರಿಗೂ ನಮ್ಮ ತಂದೆಯವರಿಗೂ ಏನೋ ಲೇವಾದೇವಿಯಿತ್ತು. ತಂದೆ ತೀರಿಕೊಂಡ ಬಳಿಕ ನೆನ್ನೆಯೇ ನಾನು ಆ ದಾರಿಯಿಂದ ಹೋಗಿದ್ದೆ. ಆಗ ಸಾಹುಕಾರು "ನಿಮ್ಮ ತಂದೆಯವರಿಂದ ನಮಗೆ ಸ್ವಲ್ಪ ಹಣ ಬರುವುದಿದೆ. ಅದನ್ನ ನೀವು ಇಂದಿಸಲೇ ಬೇಕು! ಅಲ್ಲವಾದರೆ ನಮ್ಮೊಳಗೆ ತೊಂದರೆಯಾದೀತು" ಎಂದು ಹೇಳಿ ನನ್ನ ಮುಖಭಂಗ ಮಾಡಿದರು ಲಕ್ಷ್ಮಿ. ಅಂಗಡಿಯಲ್ಲಿ ತುಂಬು ಜನರಿದ್ದರು. ನನಗೆ ಸತ್ತಂತಾಯಿತು."

"ಅದಕ್ಕೇನು ಸಾಹುಕಾರ್ರೆ ಇಷ್ಟು ಜೋರು? ಈಗಲ್ಲ ಸಂಜೆಯೊಳಗೆ ನಿಮ್ಮ ಹಣ" ಎಂದು ಜೋರಾಗಿಯೇ ಉತ್ತರಿಸಿದೆ. ಅದರಂತೆ ಈಗ ಸಂಜೆಯೊಳಗೆ ಸಾಲ ತೀರಿಸದಿದ್ದರೆ ಮರ್ಯಾದೆ ಹೋಗುತ್ತದೆ" ಎಂದು ಎಲ್ಲಿಲ್ಲದ ಸುಳ್ಳಿನ ಮುಳ್ಳು ಪೊದೆಯಲ್ಲಿ ಲಕ್ಷ್ಮಿಯನ್ನು ಸಿಕ್ಕಿಸಿ ಕಪಟ ನಾಟಕವಾಡಿದನು ಲಿಂಗಪ್ಪ.

"ಹಾಗಾದರೆ ಈಗೇನು ಮಾಡುವಿರಿ?"

"ಮಾಡುವುದೇನು? ನುಡಿದಂತೆ ನಡೆಯದಿದ್ದರೆ ಮಡಿಯುವುದೇ ಲೇಸು!"

"ಛೆ, ಹಾಗೂ ಇದ್ದರೆ ನನ್ನ ಕೈ ಬಳೆಗಳೆರಡಿವೆ. ಅವುಗಳನ್ನು ಮಾರಿಯಾದರೂ ಮಾನವುಳಿಸಿರಿ! ಮಾನಕ್ಕಿಂತಲೂ ಒಡವೆ ಮೇಲೇ?" ಎಂದು ಕಪಟರಿಯದ ಆ ಬಾಲೆಯು ತನ್ನ ಬಳೆಗಳೆರಡನ್ನು ತಂದು ಲಿಂಗಪ್ಪನ ಕೈಗಿತ್ತಳು.

"ದೇವರು ದೊಡ್ಡವನು" ಎನ್ನುತ್ತಲೇ ಲಿಂಗಪ್ಪನು ತಾನು ನಂಬುವ ನಂಬದ ಎಲ್ಲಾ ದೈವಗಳಿಗೂ ಮನಸ್ಸಿನಲ್ಲಿಯೇ ಕೃತಜ್ಞತೆಯನ್ನು ಸಮರ್ಪಿಸಿ ಮಾಂಕಣ್ಣನನ್ನು ನೋಡುವ ಲವಲವಿಕೆಯಿಂದ ಹೊರಟನು. ನಗದು ಗಿರಾಕಿಯಾದುದರಿಂದ ಇಂದು ಲಿಂಗಪ್ಪನ ನಡೆಯೇ ಠೀವಿಯಿಂದ ಕೂಡಿಕೊಂಡಿತ್ತು. ಹೋದೊಡನೆಯೇ ಮಾಂಕಣ್ಣನನ್ನು ಕರೆದು ಹೆಮ್ಮೆಯಿಂದ ಹೊನ್ನ ಬಳೆಗಳನ್ನು ಅತನಿಗಿತ್ತು ಅಲ್ಲೇ ಕುಳಿತನು. ಮಾಂಕಣ್ಣನ ಸಂತೋಷಕ್ಕಾದರೂ ಎಡೆಯಿದೆಯೇ?

"ಒಳ್ಳೇದು! ಅತ್ಯುತ್ತಮ" ಎಂದು ಹೇಳುತ್ತಾ ಎರಡು ಮೂರು ಸೀಸೆಗಳನ್ನು ಲಿಂಗಪ್ಪನಿಗೆ ಕುಡಿಸಿ ಬಳೆಯ ಮೌಲ್ಯವನ್ನು ತೀರಿಸಿ ಬಿಟ್ಟನು. ಆ ಬಳಿಕ ಲಿಂಗಪ್ಪನು ಹೊರಟು ನಿಂತಾಗ "ನಾಳೆ ಬರುವಾಗ" ಎಂಬ ತನ್ನ ಆಶಾಪೂರಿತ ಎಚ್ಚರಿಕೆಯ ಮಾತನ್ನು ಅವನ ಕಿವಿಗಳಲ್ಲಿ ತೂರಿಸಿದ್ದನು.

ಹೀಗೆ ಪೂರ್ಣ ಕುಡಿದು ಬಂದ ಲಿಂಗಪ್ಪನೇ ದ್ವಾರದಲ್ಲಿ ಬಿದ್ದು ಮೂರ್ಛೆ ಹೋಗಿದ್ದನು.

ಸಂಜೆಯಾಗುತ್ತಾ ಬಂತು. ಲೋಕದ ದಣಿವಿನ ದುಃಖವನ್ನು ಕಾಣಲಾರೆನು ಎಂಬಂತೆ ರವಿಯು ಪಡುಗಡಲನ್ನು ಹೊಕ್ಕನು. ಇತ್ತ ಲಕ್ಷ್ಮಿಯು ಪತಿಯ ದಾರಿ ನೋಡುತ್ತಾ ಕುಳಿತಿದ್ದಳು. ಅಷ್ಟರಲ್ಲಿ ದನ ಮೇಯಿಸುವ ಹುಡುಗರು ಓಡುತ್ತಾ ಬಂದು ಲಿಂಗಪ್ಪನ ಅವಸ್ಥೆಯನ್ನು ತಿಳಿಸಿದರು. ಲಕ್ಷ್ಮಿಗಿನ್ನು ಏನಾದರೂ ಬೇಕಾಗಿರಲಿಲ್ಲ. ಅವಳ ಪ್ರಾಣವೇ ಹಾರಿ ಹೋದಂತಾಯಿತು! ಕೈಯಲ್ಲಿರುವ ಮಗುವನ್ನೂ ಅಲ್ಲೇ ಕೆಳಗಿರಿಸಿ ನೆರೆಮನೆಯ ಶಾಂತಪ್ಪನನ್ನು ಕರೆದು, ಕೂಗುತ್ತಾ ಎದೆ ಎದೆ ಬಡಿದುಕೊಳ್ಳುತ್ತಾ ಗುಡ್ಡದತ್ತ ಓಡಿದಳು.

ಮನೆಯ ಸುತ್ತು ಮುತ್ತಲಿನ ಗಲಭೆಯಿಂದ ಮಗು ಎಚ್ಚತ್ತು ಕೂಗಿತು. ಆದರೆ ಉತ್ತರ ವಿಲ್ಲ. ಅವ್ವಾ.... ಎಂದಿತು ....ನಿರುತ್ತರ! ಅಳುತ್ತಾ ಹರಿದಾಡುತ್ತಾ ಅಡಿಗೆ ಮನೆ ಸೇರಿತು! ಲಿಂಗಪ್ಪನಿಗಾಗಿ ಲಕ್ಷ್ಮಿ ಬಿಸಿನೀರಿಟ್ಟಿದ್ದಳು. ಬೆಂಕಿ ಉರಿಯುತ್ತಿತ್ತು. ಮಗುವಿಗೆ ಬೆಂಕಿಯನ್ನು ಕಂಡು ಅಳು ಮಾಯವಾಯಿತು! ಮೆಲ್ಲನೆ ಕೊಳ್ಳಿಯನ್ನು ಕೈಗೆತ್ತಿಕೊಂಡು ಆಟವಾಡಲು ಯತ್ನಿಸಿದಾಗಲೇ ಬೆಂಕಿಯು ಅಂಗಿಯನ್ನು ಹತ್ತಿ ಮಗು ಬೇಯ ತೊಡಗಿತು! ಅಳುತ್ತಾ ಓಡಿ ಮಗು ಅಲ್ಲೇ ತುಸು ದೂರದಲ್ಲಿ ನಿಶ್ಚೇಷ್ಟಿತ ಸ್ಥಿತಿಯಲ್ಲಿ ಬಿದ್ದಿತು.

ಅಷ್ಟರಲ್ಲಿ ಲಕ್ಷ್ಮಿಯು ಶಾಂತಪ್ಪನ ಸಹಾಯದಿಂದ ಲಿಂಗಪ್ಪನನ್ನು ಹೊತ್ತುಕೊಂಡು ಬಂದಳು. ನೋಡಿದಾಗ ಮಗು ವಿಲ್ಲ. ಗಾಬರಿಯಿಂದ ನೋಡಿದಾಗ ಅರೆ ಬೆಂದ ಮಗು ಅಲ್ಲೇ ಬಿದ್ದಿತ್ತು. ಲಕ್ಷ್ಮಿಯ ಅವಸ್ಥೆಯನ್ನು ಇನ್ನು ಹೇಳಬೇಕೆ? ಕಣ್ಣೀರ ಕಡಲಲ್ಲೇ ಪತಿ ಪುತ್ರರ ಆರೈಕೆ ಮಾಡಿದಳು.

ದಿನಗಳೆದಂತೆ ಲಿಂಗಪ್ಪನು ಸಂಪೂರ್ಣ ಗುಣಮುಖಿಯಾದನು. ಮಗುವೂ ಆರೋಗ್ಯ ಪಡೆಯಿತು. ಆದರೆ ಬೆಂಕಿಯಲ್ಲಿ ಬೆಂದ ಆದರ ಕೈಗಳೆರಡು ಮಾತ್ರ ಮೊಂಡಾಗಿಯೇ ಉಳಿದುವು. ಲಕ್ಷ್ಮಿಗದನ್ನು ಕಂಡಾಗ ಕರುಳನ್ನು ಕತ್ತರಿಸಿದಂತಾಗುತ್ತಿತ್ತು! ಒಂದು ದಿನ ತನ್ನ ಪತಿಯನ್ನು ಸಮೀಪಕ್ಕೆ ಕರೆದು ಆ ಮುಗ್ಧ ಮಗುವಿನ ಮೊಂಡು ಕೈಗಳನ್ನು ಕಾಣಿಸಿ ಗೋಳೋ ಎಂದು ಅತ್ತು ಬಿಟ್ಟಳು. ಬೆಳೆದು ಬಾಳಿ ಬೆಳಗಬೇಕಾಗಿದ್ದ ಆ ಚಿಗುರಿನ ಈ ಅವಸ್ಥೆಗೆ ನಿಮ್ಮ ಬುದ್ಧಿಯಲ್ಲವೇ ಕಾರಣ?" ಎಂದು ಮರುಗಿದಳು.

"ಹೌದು ನಾನೇ ಕಾರಣ! ನಾನು ಪಾಪಿ" ಎಂದಿತ ಲಿಂಗಪ್ಪನ ಅಂತರಾತ್ಮ. "ಬಂಗಾರದಂತಹ ಸಹಧರ್ಮಿಣಿ ಮುತ್ತಿನಂತಹ ಮಗುವನ್ನು ಈ ಅವಸ್ಥೆಗೆ ತಂದ ನಾನು ನಿಜವಾಗಿಯೂ ಅನ್ಯಾಯಗಾರ" ಎಂದಿತವನ ಹೃದಯ! "ಇಲ್ಲ ಇನ್ನೆಂದೂ ಹೀಗೆ ಮಾಡುವುದಿಲ್ಲ" ಮನಸ್ಸು ದೃಢವಾಗಿಯೇ ನುಡಿಯಿತು!

"ಲಕ್ಷ್ಮೀ', ಲಿಂಗಪ್ಪ ಮಡದಿಯನ್ನು ಕರೆದ."ಇಗೋ ಇಂದಿನಿಂದ ನಾನೀದುಷ್ಟ ಚಟಗಳನ್ನು ಬೆಳೆಸಿಕೊಂಡರೆ ಅಥವಾ ಕೆಟ್ಟ ದಾರಿಯಲ್ಲಿ ಮುಂದುವರಿದರೆ ನನ್ನ ತಂದೆ-ತಾಯಿಗಳನ್ನು ಕೊಂದ ದೋಷ" ಎಂದ ಭಾವ ಪರವಶನಾಗಿ.

ಹೌದು ಲಿಂಗಪ್ಪನಿಗೆ ಬುದ್ಧಿ ಬಂದಿತ್ತು. ಈಗವನು ಒಬ್ಬ ಸಭ್ಯಗೃಹಸ್ಥ. ಈಗಲೂ ಆಗಾಗ್ಗೆ ಹಳ್ಳಿಯಲ್ಲಿ ಕೆಟ್ಟವರು ಏಕೆ ಒಳ್ಳೆಯವರಾಗುವುದಿಲ್ಲ? ಎಂಬುದಕ್ಕೆ ಉದಾಹರಣೆಯಾಗಿ ಅವನ ಕಥೆಯನ್ನೇ ಎತ್ತಿಕೊಳ್ಳುವುದುಂಟು.

[ಈ ಕಥೆ ಲೇಖಕರು ತನ್ನ ಹದಿನಾರನೇ ವಯಸ್ಸಿನಲ್ಲಿ ಬರೆದುದು. ಇದು 1959 ರಲ್ಲಿ ಕಾರ್ಕಳ ತಾಲೂಕು ಸ್ವತಂತ್ರ ವಿದ್ಯಾರ್ಥಿ ಸಂಘದಿಂದ ಬಹುಮಾನ ಪಡೆಯಿತು]

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಪ್ರಸನ್ನರಿಗೆ ಪರಿಮಳ ಸೂಸುವ

ಬಿರಿದ ಮೊಗ್ಗುಗಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರು
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷನಷ್ಟ	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುರಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

NAVAYUGA 25-2-1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೫-೨-೬೫ರಿಂದ ೩-೩-೬೫ರ ವರೆಗೆ

೧. ಮೇಷ

ನಿಮ್ಮ ಆದಾಯವು ಎಂದಿನಂತೆ ಚೆನ್ನಾಗಿದ್ದರೂ ಇಂದು ಸ್ವಲ್ಪ ಖರ್ಚಿನ ಭಾಗಗಳು ಹೆಚ್ಚಲಿವೆ. ರಾಜಕೀಯ ಕ್ಷೇತ್ರದಲ್ಲಿ ಪ್ರತಿಪಕ್ಷಿಗಳಿಂದ ವಿರೋಧವುಂಟಾಗಲಿರುವದು. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ಲಾಭದ ಯೋಗವಿದೆ. ಸ್ವಂತ ಆರೋಗ್ಯದ ವಿಷಯದಲ್ಲಿ ಸ್ವಲ್ಪ ನಿಗಾವಹಿಸಿರಿ. ದುಡಿಮೆಯಲ್ಲಿನ ಕೆಲವೊಂದಂಶವು ದುರ್ವ್ಯಯವಾಗುವಂತಿದೆ. ತಾ. 28ರಿಂದ 3ರ ವರೆಗಿನ ದಿನಗಳು ಅನುಕೂಲವಾಗಿರುವವು.

೨. ವೃಷಭ

ನಿಮ್ಮ ಮನಸ್ಸಿಂದು ನಿಮ್ಮ ಹಿಡಿತದಲ್ಲಿರಲಾರದು. ಕೆಲವೊಂದು ದುರ್ವ್ಯವಹಾರಗಳತ್ತ ನಿಮ್ಮನ್ನು ಸೆಳೆಯಲಿದೆ. ನಿಷ್ಕಾರಣವಾಗಿ ವಾಕ್ಕಲಹವುಂಟಾಗುವದು. ಆತ್ಮೀಯರ ವಿರಹ ವಿಯೋಗಗಳುಂಟಾಗಲಿವೆ. ಕಫವಾತ ದೋಷದಿಂದ ಆರೋಗ್ಯವು ಕೆಡುವಂತಿದೆ. ನೌಕರ ವರ್ಗದವರಿಗೂ ವೈದ್ಯ ವಕೀಲರುಗಳಿಗೂ ಈ ವಾರ ನಿರೀಕ್ಷಿಸಿದ ಫಲವನ್ನೀಯುವದು. ವಾರಾಂತ್ಯದ ಎರಡು ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

೩. ಮಿಥುನ

ನಿರುದ್ಯೋಗದಿಂದ ಮುಕ್ತರಾದ ನಿಮ್ಮ ಪರಿಶ್ರಮವಿಂದು ಸಾರ್ಥಕವಾಗಲಿದೆ. ಜನತೆಯ ನೆರವುಳ್ಳ ನಿಮಗೆ ಸಾಮಾಜಿಕ ಕಾರ್ಯಗಳಲ್ಲೂ ರಾಜಕೀಯರಂಗದಲ್ಲೂ ಯಶೋಲಾಭವಿದೆ. ನಿರೀಕ್ಷೆಗೂ ಅಧಿಕವಾದ ಫಲವನ್ನಿಂದು ಅನಾಯಾಸದಿಂದ ಪಡೆವಿರಿ. ಸಾಂಸಾರಿಕ ತಾಪತ್ರಯಗಳು ಕೆಲವೊಂದು ಪೀಡಿಸುವವಾದರೂ ದಿನಗಳು ಸುಖಮಯವಾಗಿ ಸಾಗಲಿವೆ. ವಾರಾದಿಯ 2 ದಿನಗಳಲ್ಲಿ ನಿಮ್ಮ ಬಯಕೆಯು ಕೈಗೂಡಲಿರುವುದು.

೪. ಕರ್ಕಟ

ಇಂದಿನ ವಾರವು ಕಳೆದ ದಿನಗಳಷ್ಟು ಸುಗಮವಾಗಿ ಸಾಗಲಾರದು. ಆರ್ಥಿಕ ಬಿಕ್ಕಟ್ಟಿನಿಂದಾಗಿ ಬಹಳ ಪೇಚಾಟಕ್ಕೆ ಸಿಲುಕುವಿರಿ. ಮಾತ್ರವಲ್ಲ ಶತ್ರುವರ್ಗದವರು ಶಕ್ತಿ ಮೀರಿ ಉಪದ್ರವ ಕೊಡಲಿರುವರು. ಹೆಂಡತಿ ಮಕ್ಕಳ ಆರೋಗ್ಯವು ಸರಿಯಿರಲೊಲ್ಲದು. ವ್ಯಾಪಾರೀ ಜನತೆಗೂ ದ್ಯೂತಪ್ರೇಮಿಗಳಿಗೂ ಈ ಕಾಲವು ಅನುಕೂಲವಾಗಿ ಪರಿಣಮಿಸಲಿದೆ. ಕೋರ್ಟುಕಚೇರಿ ವ್ಯವಹಾರವನ್ನು ಸದ್ಯ ಕೈಬಿಡುವುದೊಳ್ಳಿತು. ವಾರಾದಿಯ 5 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

೫. ಸಿಂಹ

ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲೆಂಬ ಮಂತ್ರವನ್ನು ನೀವಿಂದು ಜಪಿಸಬೇಕಾಗಿದೆ. ಸುರಗುರುಗಳೊರ್ವರನ್ನುಳಿದು ಇತರ ಎಲ್ಲಾ ಗ್ರಹರೂ ನಿಮ್ಮ ಮೇಲಿಂದು ಮುನಿದಿರುವುದರಿಂದ ನಿಮ್ಮಿಚ್ಛೆಯಂತೆ ಯಾವ ಕಾರ್ಯಗಳೂ ಜರಗಲೊಲ್ಲವು. ವಿಶೇಷತಃ ಸೋದರರೊಳು ಕಲಹ ಗೃಹಕೃತ್ಯದ ಅವ್ಯವಸ್ಥೆಗಳು ನಿಮ್ಮನ್ನು ಇತಿ ಕರ್ತವ್ಯತಾಮೂಢರನ್ನಾಗಿ ಮಾಡಲಿದೆ. ವಾರಾಂತ್ಯದ 4 ದಿನಗಳು ಇದ್ದುದರಲ್ಲಿ ಉತ್ತಮವಾಗಿ ಕಾಣಿಸುವವು.

೬. ಕನ್ಯಾ

ಪರಿಶ್ರಮಕ್ಕೆ ತಕ್ಕ ಫಲವನ್ನು ನೀವಿಂದು ಪಡೆವಿರಿ. ಆದರೆ ಎಷ್ಟೇ ದುಡಿದರೂ ದಿನಾಂತ್ಯದಲ್ಲಿ ರಿಕ್ತಹಸ್ತರಾಗಲಿರುವಿರಿ. ಗುರುಹಿರಿಯರೊಳು ವಿರೋಧ ಬಂಧುಬಾಂಧವರೊಳು ಮನಸ್ತಾಪವು ಕೂಡ ಉಂಟಾಗಲಿದೆ. ಪ್ರವಾಸವು ನಾನಾತರದ ಕಷ್ಟನಷ್ಟಗಳಿಗೀಡು ಮಾಡೀತು. ಎಷ್ಟೇ ವಿಘ್ನವಿಡಂಬನೆಗಳು ಬಂದರೂ ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಕೈಬಿಡಲಾರದ ನಿಮಗೆ ವಾರದ ಕೊನೆಯ 2 ದಿನಗಳು ಅನುಕೂಲವಾಗಿ ಪರಿಣಮಿಸಲಿದೆ.

೭. ತುಲಾ

ನಿಮ್ಮ ಧನಪತಿಯಿಂದು ಲಾಭಸ್ಥಾನವನ್ನು ಪ್ರವೇಶಿಸಿರುವ ಕಾರಣ ನಿಮ್ಮ ಆರ್ಥಿಕ ಪರಿಸ್ಥಿತಿಯು ಗಣನೀಯ ಪ್ರಮಾಣದಲ್ಲಿ ಅಭಿವೃದ್ಧಿಯನ್ನೈದಲಿದೆ. ಮಾತ್ರವಲ್ಲ ಜನತೆಯ ನೆರವಿನಿಂದಾಗಿ ರಾಜಕಾರಣದಲ್ಲೂ ಸಮಾಜ ಸೇವೆಯಲ್ಲೂ ಗಣ್ಯಸ್ಥಾನವನ್ನು ಪಡೆವಿರಿ. ಆದರೂ ಗೃಹತಾಪತ್ರಯದಿಂದಾಗಿ ನಿಮ್ಮ ಮನಸ್ಸಿಗೆ ನೆಮ್ಮದಿಯು ಸ್ವಲ್ಪ ದುರ್ಲಭವಾದೀತು. ಶತ್ರುಜನರ ಕಾಟದಿಂದ ಮುಕ್ತರಾದ ನಿಮಗೆ ಅಧಿಕಾರಿ ವರ್ಗದವರಿಂದ ಕೆಲವೊಂದು ತಂಟೆ ತಕರಾರುಗಳುದ್ಭವಿಸಲಿವೆ. ವಾರಾದಿಯ 3 ದಿನಗಳಲ್ಲಿ ಕಾರ್ಯಸಿದ್ಧಿ ಧನಲಾಭಗಳನ್ನು ಪಡೆವಿರಿ.

೮. ವೃಶ್ಚಿಕ

ನಿಮ್ಮ ಶ್ರಮವು ಸಫಲವಾಗುವದಾದರೂ ಮನಸ್ಸಿಗೆ ನೆಮ್ಮದಿಯಿರದು. ಆತ್ಮೀಯರ ವಿರಹ ಬಂಧುಜನರೊಳಗಿನ ಮನಸ್ತಾಪದಿಂದಾಗಿ ಸದಾ ಮನೋರೋಗಕ್ಕೆರವಾಗುವಿರಿ. ಉದ್ಯೋಗ ವ್ಯಾಪಾರಾದಿಗಳಲ್ಲಿ ಪ್ರಗತಿಯ ಚಿಹ್ನೆಗಳು ಕಂಡುಬರಲಿವೆ. ಮುಖತಃ ಭೆಟ್ಟಿಗಿಂತಲೂ ಪತ್ರವ್ಯವಹಾರವು ಒಳ್ಳೆ ಪರಿಣಾಮಕಾರಿಯಾಗಲಿದೆ. ನಿರೋಗಿಗಳಾದ ನಿಮಗೆ ತಾ. 27, 28 ಮತ್ತು 1 ಈ ದಿನಗಳು ಸುಖ ನೆಮ್ಮದಿಯನ್ನೀಯುವವು.

೯. ಧನು

ಕಳೆದ ದಿನಗಳಂತೆ ಇಂದಿನ ದಿನಗಳು ಅಷ್ಟೊಂದು ಸುಖಮಯವಾಗಿ ಕಾಣಲಾರವು. ಕಾರಣ ಪಿತ್ತೋಷ್ಣ ದೋಷದಿಂದ ಸ್ವದೇಹದ ಆರೋಗ್ಯವು ಕೆಡುವ ಸಂಭವವಿದೆ. ಮಾತ್ರವಲ್ಲ ನಿರೀಕ್ಷೆಗೆ ಸರಿಯಾದ ಫಲವೂ ಕೆಲವೊಮ್ಮೆ ಲಭಿಸಲೊಲ್ಲದು. ಸ್ವಯಂಶಕ್ತರೂ ಚತುರರೂ ಆದ ನಿಮಗೆ ರಾಜಕಾರಣದಲ್ಲಿ ಕೆಲವೊಂದು ತೊಡಕು ತೊಂದರೆಗಳುಂಟಾದಾವು. ಗೃಹತಾಪತ್ರಯಗಳಿಂದ ಮುಕ್ತರಾದ ನೀವು ತಾ. 25, 26, 2, 3ರಲ್ಲಿ ಬೇಕು ಬೇಕಾದ ಸುಖಭೋಗಗಳನ್ನು ಪಡೆವಿರಿ.

೧೦. ಮಕರ

ಹಿಂದಿನ ಧೈರ್ಯ ಉತ್ಸಾಹಗಳು ಇಂದು ನಿಮ್ಮಲ್ಲಿರಲಾರವು. ಶತ್ರುಪಿ ಶತ್ರು ಜನರ ಕಾಟವೂ ಕೂಡ ಹಿಂದಿಗಿಂತ ಅಧಿಕವಾಗಲಿದೆ. ಖರ್ಚಿಗೆ ತಕ್ಕಷ್ಟು ಆದಾಯವಿಲ್ಲದ ಕಾರಣ ದಿನಯಾಪನೆಯು ದುಸ್ತರವಾಗಲಿದೆ. ಕೋರ್ಟುಕಛೇರಿಗಳ ವ್ಯವಹಾರಗಳಲ್ಲಿ ಪ್ರತಿಪಕ್ಷಿಗಳಿಂದ ಪರಾಭವ ಹೊಂದುವಂತಿದೆ. ಪ್ರವಾಸಾದಿಗಳಲ್ಲಿ ಕಷ್ಟನಷ್ಟಗಳುಂಟಾಗುವವು. ನಿರೋಗಿಗಳಾಗಿದ್ದರೂ ಮನೋರೋಗದಿಂದ ಪೀಡಿತರಾಗುವಿರಿ. ತಾ. 28, 1 ಈ 2 ದಿನಗಳು ಇದ್ದುದರಲ್ಲುತ್ತಮವಾಗಿವೆ.

೧೧. ಕುಂಭ

ಶುಕ್ರನೋರ್ವನನ್ನುಳಿದು ಇತರ ಗ್ರಹಸಮುದಾಯವೇ ನಿಮ್ಮ ಮೇಲೆ ಮುನಿದಿಹ ಕಾರಣ ನಿಮ್ಮ ಯಾವತ್ತೂ ಆಕಾಂಕ್ಷೆಗಳು ತಿರುಕನ ಕನಸಿನಂತಾದಾವು. ಜನತೆಯ ದೃಷ್ಟಿಯಲ್ಲಿ ನೀವು ನಿಶ್ಚಿಂತರೆಂದು ಕಂಡುಬಂದರೂ ಒಳಗಿನ ಗುಟ್ಟು ಶಿವನೇ ಬಲ್ಲ ಎಂದಂತೆ ಸದಾ ಆದಿವ್ಯಾಧಿಗಳಿಂದ ಪೀಡಿತರಾಗಿರುವಿರಿ. ಸಾಂಸಾರಿಕ ತಾಪತ್ರಯ ಆರ್ಥಿಕ ದುರವಸ್ಥೆಗೀಡಾದ ನಿಮಗೆ ತಾ. 27, 28, 1ರಲ್ಲಿ ಇಲ್ಲಸಲ್ಲದ ಖರ್ಚುವೆಚ್ಚಗಳು ಪ್ರಾಪ್ತವಾಗಲಿವೆ.

೧೨. ಮೀನ

ಕೆಲವೊಂದು ನಿಮ್ಮ ಬಯಕೆಗಳು ಇಂದು ಕಾರ್ಯರೂಪಕ್ಕೆ ಬರಲಿವೆ. ಮಾತ್ರವಲ್ಲ ಜನತೆಯ ಸಹಕಾರ ಸೌಕರ್ಯಗಳೂ ನಿಮಗಿಂದು ಪ್ರಾಪ್ತವಾಗುವುದರಿಂದ ರಾಜಕೀಯದಲ್ಲೂ ವಿಶೇಷತಃ ಸಮಾಜದಲ್ಲೂ ಒಳ್ಳೆಯ ಸ್ಥಾನಮಾನಗಳು ಲಭಿಸುವವು. ವ್ಯವಹಾರ ಚತುರರಾದ ನಿಮಗೆ ಅನಿರೀಕ್ಷಿತ ಅನರ್ಥಗಳುಂಟಾಗುವಂತಿವೆ. ಅರ್ಧಾಂಗಿಯ ಆರೋಗ್ಯದತ್ತ ಗಮನವಿರಲಿ. ವಾರಾದಿಯ 6 ದಿನಗಳೂ ನಿಮ್ಮ ಇಷ್ಟಾರ್ಥಗಳನ್ನು ಪೂರೈಸಲು ಶಕ್ತವಾಗಿವೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 383/58 REP 112/64

ಕಲ್ಯಾಣಮ್ಮ— ಅರ್ಜಿದಾರಳು

ಮತ್ತು

ಕೊಲ್ಲು ಶೆಟ್ಟಿ ಕೂಡಾ—ಎದುರು

1ನೇ ಎದುರು ಕೊಲ್ಲುಶೆಟ್ಟಿ, ಚಣಿಕಿ ಶೆಟ್ಟಿ ಮಗಳು 2ನೇ ಎದುರು ಶೇಷ ಶೆಟ್ಟಿ, ರಾಮಣ್ಣ ಶೆಟ್ಟಿ ಅಳಿಯ ಉಡುಪಿ ತಾಲೂಕು ಆರೂರು ಗ್ರಾಮದ ಕುರ್ಡುಂಜೆಯಲ್ಲಿರುವವರು—

ಅರ್ಜಿದಾರಳು ಎದುರರ ಮೇಲೆ ಪಡೆದ ಮೇಲ್ಕಾಣಿಸಿದ ಡಿಕ್ರಿ ಮೇಲೆ ನಡೆಸಿದ ಅಮಲ್ದಾರಿಯಲ್ಲಿ ಎದುರರ ಮೂಲಗೇಣಿ ಆಸ್ತಿಯನ್ನು ತಾ. 31-3-65ಕ್ಕೆ ಬಹಿರಂಗವಾಗಿ ಕೋರ್ಟಿನಲ್ಲಿ ಏಲಂ ಮಾಡುತ್ತದೆಂಬ ಸಂಗತಿಯನ್ನು ಈ ಮೂಲಕ ತಿಳಿಸಲಾಗಿಯದೆ.

ಪಿ. ರಾಮಚಂದ್ರ ರಾವ್
ಎಡ್ವಕೇಟ್ B. A., B.L.,

ಉಡುಪಿ, ತಾ. 16-2-65

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ 1-25 (ಟ. ಖ. ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ. ಖ. ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು
ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ಸಂಪುಟ ೪೪] ಮಾರ್ಚ್ ೯, ೪ ೬೫, [ಸಂಚಿಕೆ ೨೭

Phone No. 226
ಫೋನ್ ನಂಬ್ರ: 226

NAVAYUGA

leading nationalist weekly

೨೦ ಪೈಸೆ

ವಾರದ ಕಥೆ

ಒಡಹುಟ್ಟಿದವಳು

ಬರೆದವರು

ಶ್ರೀ ಸ. ನಾರಾಯಣ, ಚಿತ್ರದುರ್ಗ.

ಮಂಗಳ ಯಾವ ಮಾತಿಗೂ ಜಗ್ಗುವಂತಿರಲಿಲ್ಲ.

ರಮೇಶನ ಚತುರೋಪಾಯಗಳೂ ಪತ್ನಿಯ ಮುಂದೆ ನಿರರ್ಥಕವಾದವು. ಪತಿಯ ಒಲುಮೆ-ಮುನಿಸುಗಳಾವುದಕ್ಕೂ ಮಂಗಳೆಯ ಮನೋನಿರ್ಧಾರ ಬದಲಾಗಲಿಲ್ಲ.

ಮಂಗಳ ರಮೇಶನ ಪತ್ನಿ. ಪ್ರೀತಿಸಿ ಮದುವೆಯಾದ ಮಡದಿ. ತಂದೆ-ತಾಯಿ ಎಲ್ಲರನ್ನೂ ವಿರೋಧಿಸಿ ರಮೇಶ ಮಂಗಳನ ಕೈಹಿಡಿದಿದ್ದ. ಮಂಗಳ ಸೌಂದರ್ಯವತಿ ಎನ್ನುವುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಹತ್ತು ಜನರ ಗಮನವನ್ನು ತನ್ನೆಡೆಗೆ ಸೆಳೆಯುವಂತಹ ಆಕರ್ಷಣೀಯ ರೂಪ ಅವಳದು.

ರಮೇಶ ಮಂಗಳೆಯ ರೂಪಕ್ಕೆ ಮರುಳಾಗಿ ಮದುವೆಯಾದ.

ಮಂಗಳೆಗೆ ರೂಪವಿತ್ತಷ್ಟು ರೂಪಕ್ಕೆ ತಕ್ಕ ಗುಣವಿರಲಿಲ್ಲ.

ಮಂಗಳೆಯ ರೂಪ ಮಧುವಿನಿಂದ ಮತ್ತನಾಗಿದ್ದ ರಮೇಶನಿಗೆ ಪ್ರಪಂಚವೇ ತೃಣ ಸಮಾನವಾಗಿತ್ತು. ರಮೇಶ ತನ್ನ ಕೈಗೊಂಬೆ ಎಂಬುದನ್ನು ಮನಗಂಡ ಮಂಗಳ ಗಂಡನನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಸಲಾರಂಭಿಸಿದಳು.

ರಮೇಶನಿಗೆ ಪತ್ನಿಯ ವಾಕ್ಯ ವೇದವಾಕ್ಯವಾಯಿತು.

ಮಗನ ವಿದ್ಯಾಭ್ಯಾಸಕ್ಕಾಗಿ ತಂದೆ ಶ್ರೀಕಂಠಯ್ಯನವರು ಸಾಕಷ್ಟು ಸಾಲ ಮಾಡಿದುದಲ್ಲದೆ; ಇದ್ದ ಅಲ್ಪ ಆಸ್ತಿಯನ್ನೂ ಮಾರಾಟ ಮಾಡಿದ್ದರು; ಮಗ ದುಡಿದು ಋಣ ತೀರಿಸುವನೆಂಬ ನಂಬಿಕೆಯಿಂದ. ಅವರ ಆಶಾಸೌಧ ಉರುಳಿ ಬಿದ್ದಿತ್ತು.

ಮಗನ ಮನೋನಿರ್ಧಾರವನ್ನು ಬದಲಿಸಲು ತಂದೆ-ತಾಯಿ ನಡೆಸಿದ ಪ್ರಯತ್ನ ವಿಫಲವಾಯಿತು.

ರಮೇಶ ತನ್ನಿಚ್ಛೆಯಂತೆ ಮಂಗಳೆಯನ್ನು ಕಾನೂನಿನ ಪ್ರಕಾರ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಸಮಕ್ಷಮದಲ್ಲಿ ವಿವಾಹವಾದ. ರಿಜಿಸ್ಟರ್ ಮದುವೆ ಮುಗಿಯಿತು.

ಮಗನ ವಿಚಿತ್ರ ವರ್ತನೆ ತಾಯಿಯ ಮನ ನೋಯಿಸಿತು. ಜಾನಕಮ್ಮ ಅದೇ ಕೊರಗಿನಲ್ಲೇ ಕಣ್ಮುಚ್ಚಿದರು. ಸಮಾಜದಲ್ಲಿ ಮಗನ ಸ್ವೇಚ್ಛಾವರ್ತನೆಯಿಂದ ತಮ್ಮ ಘನತೆ ಗೌರವಗಳಿಗೆ ಕುಂದು ಬಂದುದನ್ನು ಕಂಡು ಶ್ರೀ ಕಂಠಯ್ಯನವರು ಮನೆ ಬಿಟ್ಟು ತೆರಳಿದರು.

ಅಣ್ಣನ ವಿಚಿತ್ರ ನಡವಳಿಕೆ, ತಾಯಿಯ ಮರಣ, ತಂದೆಯ ದೇಶಾಂತರ ಪ್ರಯಾಣ ಕಲ್ಯಾಣಿಯನ್ನು ಅಧೀರಳನ್ನಾಗಿ ಮಾಡಿತು. ಕಲ್ಯಾಣಿಯ ಮೃದು ಹೃದಯ ಬಹುವಾಗಿ ನೊಂದಿತ್ತು.

೨

ಮಂಗಳೆಯ ಬೇಡಿಕೆ ದಿನಕ್ಕೊಂದು ಬಗೆಯಲ್ಲಿ ಇದ್ದೇ ಇರುತ್ತಿತ್ತು. ಹಳ್ಳಿಯಲ್ಲಿದ್ದ ಮನೆಯನ್ನು ಮಾರಾಟಮಾಡಿ ರಮೇಶ ಬೆಂಗಳೂರು ಸೇರಿ ಕಂಪೆನಿ ಒಂದರಲ್ಲಿ ಮ್ಯಾನೇಜರಾದ.

ಮಂಗಳೆಗೆ ಸ್ವರ್ಗವೇ ಭುವಿಗಿಳಿದು ಬಂದಂತಾಗಿತ್ತು.

ಮಂಗಳೆಯ ಆಸೆ ದಿನಕ್ಕೊಂದು ಬಗೆಯಲ್ಲಿ ಬೆಳೆಯುತ್ತಿತ್ತು.

—"ಒಂದು ನೂರು ರೂಪಾಯಿ ಈಗ ಬೇಕಿತ್ತು ರಾಜಾ..."

—"ಮೂರ್ತಿ ಅಂಗಡಿಗೆ ಒಳ್ಳೆ ನೆಕ್ಲೆಸ್ ಬಂದಿದೆಯಂತೆ..."

—"ಒಂದೂಲಾಟ್ ಅಂಗಡಿಯಲ್ಲಿ ಹೊಸ ನಮೂನೆ ಸೀರೆ ಬಂದಿದೆಯಂತೆ...."

—"ಇವತ್ತು ನನ್ನ ಗೆಳತಿ ಮನೆಗೆ ಹೋಗಬೇಕು.... ಮಗುವಿಗೆ ಪ್ರಜೆಂಟ್ ಮಾಡುವುದಕ್ಕೆ ದುಡ್ಡು ಬೇಕು."

—"ನಾಳೆ ಬೃಂದಾವನಕ್ಕೆ ಹೋಗಿ ಬರೋಣ.... ಬೇಜಾರಾಗಿದೆ...."

—"ನಮ್ಮ ಕ್ಲಬ್ಬಿನವರೆಲ್ಲ ಮದ್ರಾಸಿಗೆ ಟ್ರಿಪ್ ಹೋಗಿ ಬರುತ್ತೇವೆ...." ಎಂದು ನಿತ್ಯವೂ ಒಂದೊಂದು ಕಾರ್ಯಕ್ರಮವನ್ನು ಸಿದ್ಧಪಡಿಸುತ್ತಿದ್ದಳು ಮಂಗಳ.

ರಮೇಶ ಪತ್ನಿಯ ಮಾತಿಗೆ ಪ್ರತಿ ಹೇಳುತ್ತಿರಲಿಲ್ಲ. ಮಂಗಳೆಯ ಕೀಲುಗೊಂಬೆ ರಮೇಶ.

ತನ್ನ ತಪ್ಪನ್ನು ತಾನು ತಿಳಿದುಕೊಳ್ಳುವ ವೇಳೆಗೆ ಅಪಾಯದ ಗಡಿ ಮುಟ್ಟಿದ್ದ ರಮೇಶ.

೩

ಅಣ್ಣನನ್ನು ನೋಡಿ ಹೋಗಲು ಬೆಂಗಳೂರಿಗೆ ಬಂದಿದ್ದ ಕಲ್ಯಾಣಿ ಮನೆಯ ದುಂದುತನ, ವಿಚಿತ್ರ ವ್ಯವಹಾರವನ್ನು ಕಂಡು ತಬ್ಬಿಬ್ಬಾಗಿ, ಅಣ್ಣನಿಗೆ "ಇದು ಸಂಸಾರ ಮಾಡುವ ಲಕ್ಷಣ ಅಲ್ಲಣ್ಣ" ಎಂದಳು.

ರಮೇಶ ತಂಗಿಯನ್ನು ದುರುಗುಟ್ಟಿಕೊಂಡು ನೋಡಿ "ನಿನ್ನ ಉಪದೇಶ ನನಗೇನು ಬೇಕಿಲ್ಲ. ನಿಮ್ಮ ಅಲ್ಪ ಬುದ್ಧಿಯನ್ನು ನೀವು ಎಲ್ಲಿ ಬಿಡುತ್ತೀರಿ.... ನೀನು ಇಲ್ಲಿಗೆ ಬರಲೂ ಯೋಗ್ಯಳಲ್ಲ" ಎಂದ.

ಕಲ್ಯಾಣಿಯ ಮನಸ್ಸಿಗೆ ಖೇದವಾಯಿತು.

"ನಿನ್ನ ಕಣ್ಣಿಗೆ ಹಾಲು ನೀರಿನ ವ್ಯತ್ಯಾಸ ತಿಳಿಯುತ್ತಿಲ್ಲ. ಅತ್ತಿಗೆ ಒಂದಲ್ಲ ಒಂದು ದಿನ ನಿನ್ನ ಕೈಗೆ ಭಿಕ್ಷಾ ಪಾತ್ರೆ ಕೊಡಿಸುತ್ತಾಳೆ. ಇದಂತೂ ನಿಶ್ಚಯ" ಎಂದಳು ಕಲ್ಯಾಣಿ.

ತಂಗಿಯ ಕೆನ್ನೆಗೆ ಹೊಡೆದು ಅಂದೇ ಅವಳನ್ನು ಮನೆಯಿಂದ ಹೊರ ದೂಡಿದ ರಮೇಶ. ಕಲ್ಯಾಣಿ ಕಣ್ಣೀರುಗರೆಯುತ್ತಾ ಗಂಡನ ಮನೆಗೆ ಹಿಂದಿರುಗಿದಳು.

೪

ರಮೇಶ ಕಂಪೆನಿಯವರು ತನಗೆ ಕೊಡುವ ಸಂಬಳವನ್ನು ಮಾತ್ರವಲ್ಲದೆ ಕಂಪೆನಿ ಹಣವನ್ನು ತನ್ನ ಸ್ವಂತ ಉಪಯೋಗಕ್ಕೆ ಬಳಸಿಕೊಂಡ.

ಕಂಪೆನಿ ಹಣದ ದುರುಪಯೋಗವಾಗತೊಡಗಿತು. ವ್ಯವಹಾರ ಎಷ್ಟೇ ಗುಟ್ಟಾಗಿ ನಡೆಯುತ್ತಿದ್ದರೂ ಡೈರೆಕ್ಟರ ಕಣ್ಣಿಗೆ ಬಿತ್ತು. ರಮೇಶ ತಪ್ಪು ಮಾಡಿ ಸಿಕ್ಕಿ ಹಾಕಿಕೊಂಡಿದ್ದ.

ಸುಮಾರು ಐದು ಸಾವಿರ ರೂಪಾಯಿಗಳಷ್ಟು ಹಣವನ್ನು ಅವನು ಒಪ್ಪಿಸಬೇಕಿತ್ತು. ಇಲ್ಲವಾದಲ್ಲಿ ಸೆರೆಮನೆ ಸೇರಬೇಕಿತ್ತು.

ಸ್ಥಿತಿಯನ್ನು ಅರಿತು ರಮೇಶ ತತ್ತರಿಸಿದ.

ಮಂಗಳ ಸಾಕಷ್ಟು ಹಣವನ್ನು ತನ್ನ ಹೆಸರಿನಲ್ಲಿ ಬ್ಯಾಂಕಿನಲ್ಲಿಟ್ಟುಕೊಂಡಿದ್ದಳು, ಹಣದಿಂದ ಸಾಕಷ್ಟು ಒಡವೆ, ಬಟ್ಟೆ ಇತರ ವಸ್ತುಗಳನ್ನು ಕೊಂಡು ಶೇಖರಿಸಿಟ್ಟಿದ್ದಳು.

ಮಂಗಳೆಯ ಪಾಲಿಗೆ ಹಣವೇ ಸರ್ವಸ್ವ.

ರಮೇಶ ಪತ್ನಿಗೆ ಎಲ್ಲ ಸಂಗತಿಯನ್ನು ವಿವರಿಸಿ —"ಈಗ ನೀನೇ ನನ್ನನ್ನು ಕಾಪಾಡಬೇಕು ಮಂಗಳ. ಇನ್ನು ಹದಿನೈದು ದಿನಗಳೊಳಗಾಗಿ ಹಣವನ್ನು ತಲುಪಿಸದಿದ್ದರೆ ಜೈಲು ಸೇರಬೇಕು. ಇಲ್ಲವೇ ವಿಷ ಕುಡಿಯಬೇಕು" ಎಂದ.

"ನನ್ನ ಬಳಿ ಅಷ್ಟು ಹಣವೆಲ್ಲಿದೆ?"

"ಬ್ಯಾಂಕಿನಲ್ಲಿರುವ ಎರಡು ಸಾವಿರ ರೂಪಾಯಿ, ನಿನ್ನ ಬಳಿ ಇರುವ ಬೆಳ್ಳಿ ಬಂಗಾರ ಮಾರಿದರೆ ಎರಡು ಸಾವಿರ ಬರುತ್ತದೆ. ಇನ್ನು ಯಾರಾದರನ್ನು ಕೈಕಾಲು ಕಟ್ಟಿ ಒಂದು ಸಾವಿರ ತರಬೇಕು."

"ನೀವು ಹೇಳುವುದೂ ಚೆನ್ನಾಗಿದೆ. ಕಂಪೆನಿ ಹಣ ಹಾಳು ಮಾಡಿ ಎಂದು ಹೇಳಿದ್ದೆನೆ?"

"ಪರೀಕ್ಷೆ ಮಾಡುತ್ತೀಯಾ ಮಂಗಳ?"

"ನನ್ನ ಒಂದು ಪೈಸೆ ಕೊಡಲೂ ಸಿದ್ಧಳಿಲ್ಲ"

"ನನಗಿಂತಲೂ ನಿನಗೆ ಹಣವೇ ಹೆಚ್ಚಾಯಿತೆ?"

"ನೀವೂ ಬೇಕು. ಹಣವೂ ಬೇಕು. ಹಣಕ್ಕೆ ಮೊದಲು ಬೇರೆ ಯೋಚನೆ ಮಾಡಿ"

"ಹಣ ಕೊಡಲು ಸಾಧ್ಯವಿಲ್ಲವೇ ಮಂಗಳ? ನೀನು ನನ್ನ ಕೈ ಹಿಡಿದ ಹೆಂಡತಿ"

"ನನಗಿಂತಲೂ ನಿಮ್ಮ ತಂಗಿಯ ಬಳಿ ಹೆಚ್ಚು ಹಣ ಇದೆ"

"ಯಾವ ಮುಖ ಇಟ್ಟುಕೊಂಡು ಅವಳ ಹತ್ತಿರ ಹೋಗಲಿ?"

"ಯಾವ ಮುಖ ಇಟ್ಟುಕೊಂಡು ಹಣ ದುರುಪಯೋಗ ಮಾಡಿದಿರಿ?"

"ನಿನ್ನನ್ನು ನಂಬಿ. ನಿನ್ನ ಮಾತಿಗೆ ಮರುಳಾಗಿ ತಂದೆ, ತಾಯಿ, ತಂಗಿ ಎಲ್ಲರನ್ನೂ ದೂರ ಮಾಡಿದೆ ಮಂಗಳ. ಅವರ ಇಷ್ಟಕ್ಕೆ ವಿರುದ್ಧವಾಗಿ ವರ್ತಿಸಿದೆ. ನಿನಗೆ ಎಂದಾದರೂ ಎರಡು ಎಣಿಸಿದ್ದೇನೆಯೇ

(ಹದಿನೈದನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p. a.	7ರಿಂದ 11 ತಿಂಗಳು % p. a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು % p. a.	36ರಿಂದ 47 ತಿಂಗಳು. % p. a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು % p. a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್]
ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

Phone No 226

Estd 1921

NAVAYUGA

Leading Kannada Weekly

UDIPI, S Kanara

(Mysore State)

ದಿ। ಎ ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ

ಸಂಚಾಲಕ—ಸಂಪಾದಕ:

ಕೆ ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ 2 00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ

ಮುಖಪತ್ರದಲ್ಲಿ.

ರಾಷ್ಟ್ರಪತಿಗಳಾಗಿದ್ದ ದಿ। ಬಾಬೂ ರಾಜೇಂದ್ರ ಪ್ರಸಾದರು ಸೈನ್ಯಾಧಿಕಾರಿಯೊಬ್ಬನಿಗೆ ದೇಶದ ರಕ್ಷಣಾದಳದ ಸಂಕೇತವಾದ ಧ್ವಜವನ್ನು ಕೊಡುತ್ತಿರುವುದು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೨೭	೪—೩—೧೯೬೫	No. 27

ಆಶಾದಾಯಕ ಬಜೆಟ್

ಒಂದಲ್ಲ ಅನೇಕ ವರ್ಷಗಳಿಂದಲೂ ಹೊಸ ಹೊಸ ಕರಭಾರವನ್ನು ಹೊತ್ತುಕೊಂಡೇ ಮುಂದೆ ಬರುತ್ತಿದ್ದ ಮುಂಗಡ ಪತ್ರಗಳನ್ನು ಕಂಡ ಭಾರತೀಯನು ಈ ವರ್ಷದ ಬಜೆಟ್ ಅಧಿವೇಶನದ ಪ್ರಾರಂಭದಲ್ಲೇ ತಲೆಗೆ ಕೈಯ ಹೊತ್ತಿದ್ದನು. ಆದರೆ, ಅರ್ಥ ಮಂತ್ರಿ ಟಿಟಿಕೆಯವರು ಈ ಬಾರಿ ಕರಾಕರಣೆಯ ಪ್ರಮಾಣವನ್ನು ಏರಿಸಿಲ್ಲ ಮಾತ್ರವಲ್ಲ, ಕೆಲವೊಂದು ಸಾರ್ವತ್ರಿಕೋಪಯೋಗಿ ವಸ್ತುಗಳ ಮೇಲಿನ ತೆರಿಗೆಯನ್ನೂ ವೈಯಕ್ತಿಕ ಆದಾಯ ತೆರಿಗೆಯನ್ನೂ ಇಳಿಸಿ ಮಾಡಿದ್ದಾರೆ. ತಾಮ್ರ, ಸ್ಟೈನ್‌ಲೆಸ್ ಸ್ಟೀಲ್ ಮೊದಲಾದ ಹಲವು ಪದಾರ್ಥಗಳ ಮೇಲಿನ ಅಬಕಾರಿ ತೆರಿಗೆಯ ಸುಮಾರು ಇಮ್ಮಡಿಯನ್ನು ಅಧಿಕವಾದರೂ, ಇದರ ಉಪಯೋಗವನ್ನು ಜನಸಾಮಾನ್ಯರು ಮಾಡಿಕೊಳ್ಳುವುದು ವಿರಳವಾದುದರಿಂದ, ಈ ಮುಂಗಡ ಪತ್ರವು ಸಮಾಜವಾದ ಮಾದರಿಯ ಸಮಾಜ ರಚನೆಯ ದಾರಿಯಲ್ಲೊಂದು ಮೈಲುಗಲ್ಲೆಂದು ಹೇಳಬಹುದು; ಎಂತಲೇ ಇದನ್ನು ಎಲ್ಲ ವರ್ಗಗಳೂ ಸ್ವಾಗತಿಸುವುವೆಂಬುದರಲ್ಲಿ ಸಂದೇಹವಿಲ್ಲ.

ಮುಂಗಡ ಪತ್ರದಲ್ಲಿ ಕರಾಕರಣೆಯ ಹೊಸ ಭಾರವಿಲ್ಲ ಮಾತ್ರವಲ್ಲದೆ ಅದು ಉಳಿತಾಯದ್ದೂ ಆಗಿದೆ. ಎಲ್ಲ ಕಳೆದು ಒಟ್ಟು ೧೦ ಕೋಟಿ ರೂಪಾಯಿಗಳ ಉಳಿತಾಯವನ್ನಿದು ತೋರಿಸುವುದು. ಕೆಲವು ಕರಗಳನ್ನು ಕಡಿತ ಮಾಡಿಯೂ ಹೊಸ ಕರಗಳನ್ನು ಹೇರದೆಯೂ ಬಂಡವಾಳ ವೆಚ್ಚದಲ್ಲಿ ಇಳುವರಿ ಮಾಡದೆಯೂ ಟಿಟಿಕೆಯವರು ಉಳಿತಾಯದ ಮುಂಗಡ ಪತ್ರವನ್ನು ಮಂಡಿಸುವಂತೆ ಮಾಡಿದುದು ಸುದೈವ. ಸಂರಕ್ಷಣೆ, ಆಹಾರ ಮೊದಲಾದ ಪ್ರಮುಖ ವೆಚ್ಚದ ಬಾಬುಗಳಿಗೆ ಸಾಕಷ್ಟು ಹಣವನ್ನು ಪ್ರತ್ಯೇಕಿಸಿಟ್ಟಿದ್ದಾರೆ ಅವರು. ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ಯೋಜನೆಯ ಪ್ರಮಾಣವನ್ನು ಕಡಿಮೆ ಮಾಡದೆ ಒಂದಿಷ್ಟು ವೆಚ್ಚಕ್ಕೂ ಸಾಕಷ್ಟು ಧನವನ್ನು ತೆಗೆದಿಡಲು ಅವರು ಸಮರ್ಥರಾಗಿದ್ದಾರೆ. ಇದು ಶುಭ ಚಿಹ್ನೆ ಎಂದು ಬೇರೆ ಹೇಳಬೇಕಾಗಿಲ್ಲ.

ಪಾದರಕ್ಷೆ, ಸೈಕಲಿನ ವಿವಿಧ ಭಾಗಗಳು, ಚಿಕ್ಕಿನ ಮತ್ತು ಬರೆಯುವ ಕೆಲವು ಬಗೆಯ ಕಾಗದಗಳು, ಮಧ್ಯಮ ವರ್ಗದ ಬಟ್ಟೆಬರೆಗಳು ಇಂದಿನ ತಮ್ಮ ಬೆಲೆಯನ್ನು ಕಳೆದುಕೊಳ್ಳುವುವು. ಆದಾಯ ತೆರಿಗೆಯಲ್ಲಿ ಒದಗಿಸಿದ ಸೌಲಭ್ಯದಿಂದ ಮಧ್ಯಮ ವರ್ಗದವರು ತುಸು ಉಸಿರು ಬಿಡುವಂತಾಗುವುದು. ಸರ್ವಜನ ಬಳಕೆಯ ಕೆರೊಸಿನ್ ಎಣ್ಣೆಯ ಮೇಲಿನ ಅಬಕಾರಿ ಕರದಲ್ಲಿ ಕಡಿತ ಮಾಡುವ ಆಶಯ ಅರ್ಥಮಂತ್ರಿಯವರಿಗಿದ್ದರೂ, ಆಮದು ಮಾಡುವ ಪ್ರಧಾನ ವಸ್ತುವಾದುದರಿಂದ ಅದು ಅಸಾಧ್ಯವಾಗಿದೆಯೆಂಬ ಅವರ ಮಾತಿನಿಂದಲೇ ಸದ್ಯಕ್ಕೆ ಸಮಾಧಾನ ಪಡಬೇಕಾಗಿದೆ. ಕತ್ತಲೆಯ ಹಣವನ್ನು ಬೆಳಕಿಗೆ ತರುವುದರಲ್ಲಿ ಟಿಟಿಕೆಯವರು ಉತ್ಸಾಹವನ್ನು ತೋರುತ್ತಿದ್ದಾರೆ. ಅಂತಹ ಹಣದ ಪತ್ತೆ ಇತ್ತೀಚೆಗೆ ಬೃಹತ್ಪ್ರಮಾಣದಲ್ಲಿ ನಡೆಯುತ್ತಿರುವುದನ್ನು ನಾವು ನೋಡುತ್ತೇವೆ. ಮುಂಗಡ ಪತ್ರ ಮಂಡಿಸುವ ವೇಳೆ ಟಿಟಿಕೆಯವರು ಈ ಬಗೆಯ ಲೆಕ್ಕಕ್ಕೆ ದೊರೆಯದ ಹಣವಿರುವವರಿಗೊಂದು ಸದವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆ. ನಿಶ್ಚಿತ ಅವಧಿಯೊಳಗೆ ತನ್ನ ಸಂಪತ್ತನ್ನು ಘೋಷಿಸಿ, ನಿಯಮದಂತೆ ನಡೆಕೊಂಡರೆ, ಅವರ ಆದಾಯ ತೆರಿಗೆಯು ಸರ್ವಸಾಮಾನ್ಯನ ಶೇ. ೫೭ ರಷ್ಟಾಗುವಂತೆ ಅವರು ಸೂಚನೆಯಿತ್ತಿದ್ದಾರೆ, ಮತ್ತು ಆದಾಯದಾರರ ಹೆಸರು ವಿಳಾಸಗಳನ್ನು ಬೆಳಕಿಗೆ ತರುವುದಿಲ್ಲವೆಂದೂ ಭರವಸೆ ನೀಡಿದ್ದಾರೆ. ಇತ್ತೀಚೆಗೆ ಕೆಲವೊಂದು ಉದ್ದಿಮೆದಾರರು ಕರವಂಚನೆಯ ಪ್ರಮಾಣವು ಸಾವಿರಕ್ಕೊಂದರಂತಿರುವುದಾದರೆ, ಸುಮಾರು ೧,೫೦೦ ಕೋಟಿಯಷ್ಟು ಲೆಕ್ಕಕ್ಕೆ ದೊರೆಯದ ಹಣವು ಬೆಳಕಿಗೆ ಬರುವ ನಿರೀಕ್ಷೆ ಇದೆ ಎಂದು ಅಂದಿದ್ದುದನ್ನು ನಾವು ಮರೆಯುವಂತಿಲ್ಲ. ಆದರೆ ಟಿಟಿಕೆ ಅಷ್ಟು ಮುಂದಕ್ಕೆ ಹೋಗಿರುವುದಿಲ್ಲ. ಆದುದರಿಂದ ಸದ್ಯ ಒದಗಿಸಿದ ಅವಕಾಶವನ್ನು 'ಹಣಗಾರ'ರು ಸದುಪಯೋಗ ಪಡಿಸಿಕೊಳ್ಳದಿದ್ದರೆ ಅಂತಹರನ್ನು ಬಯಲಿಗೆಳೆಯಲು ಸೂಕ್ತ ಉಗ್ರಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗುವುದು.

ಕಳೆದ ವರ್ಷ ಮಂಡಿಸಲಾದ ಮುಂಗಡಪತ್ರದಲ್ಲಿ ಬೇಕೆಂಬಷ್ಟು ಕರಗಳನ್ನು ಹೆಚ್ಚಿಸಲಾಗಿತ್ತು. 'ಸಂರಕ್ಷಣೆಯ ಮಾನದಂಡ' ಎಂದು ಮಂತ್ರಿಗಳ ಕೈಯಲ್ಲಿತ್ತು. ದೇಶವಾದರೂ ಸ್ವರಕ್ಷಣೆಗಾಗಿ ಅಷ್ಟು ದೊಡ್ಡ ತ್ಯಾಗವನ್ನು ಮಾಡುವುದಕ್ಕೆ ಸಿದ್ಧವಾಯಿತು. ಆ ಬಾಬುಗಳು ಮುಂದೆಯೂ ಆದಾಯವನ್ನು ತರುತ್ತವೆ. 'ಆಹಾರದ ಅಭಾವ'ದಿಂದ ನೊಂದಿರುವ ಜನಸಾಮಾನ್ಯರು ಇಂದಿನ ದಿನಗಳಲ್ಲಿ ಹೊಸ ಕರಗಳನ್ನು ಹೊರುವ ಸ್ಥಿತಿಯಲ್ಲಿಲ್ಲ. ಈ ಗುಟ್ಟನ್ನರಿತುಕೊಂಡೇ ಸದ್ಯದ ಮುಂಗಡ ಪತ್ರವು ಮುಂದೆ ಬಂದಿದೆ. ಮುಂಗಡ ಪತ್ರದಲ್ಲಿನ ದೊಡ್ಡ ಮೊತ್ತದ ವಿದೇಶೀ ನೆರವಿನ ನಿರೀಕ್ಷೆಯು ಯಶಸ್ವಿಯಾಗದೆ ಹೋದರೆ, ಈಗಿರುವುದರೊಂದಿಗೆ ಹೆಚ್ಚಿನ ಕೊರತೆ ಧನವನ್ನು ವಿನಿಯೋಗಿಸಬೇಕಾಗುವುದು. ಈ ಲೇ[illegible] ಪ್ರಕರಣಕ್ಕೆ ಕಾರಣವಾದ ಇದರ ಪರಿಣಾಮ ಬೆಲೆ ನಿಯಂತ್ರಣಕ್ಕೆ ಹೇಗೆ ಸಹಕಾರಿಯಾಗುತ್ತದೋ! ಜನಸಾಮಾನ್ಯರ ಮುಂಗಡ ಪತ್ರವಿದೆಂದು ಕರೆದರೆ ಮಾತ್ರ ಸಾಲದು, ಇದು ಸತ್ಯವಾಗುವಂತೆ "ಬೆಲೆ ನಿಯಂತ್ರಣ"ದ ಕಡೆಗೆ ಅರ್ಥಮಂತ್ರಿಯವರು ಗಮನಹರಿಸಬೇಕು.

ವಚನ ಸುಧೆ

ಸಹ ನಾವವತು ಸಹ ನೌ ಭುನಕ್ತು
ಸಹವೀರ್ಯಂ ಕರವಾವಹೈ। ತೇಜಸ್ವಿ
ನಾವಧೀತಮಸ್ತು ಮಾ ವಿದ್ವಿಷಾವಹೈ॥
—ಶಾಂತಿ ಮಂತ್ರ

O ನಾವು ಅಧ್ಯಯನ ಮಾಡಿದ ಜ್ಞಾನವು ತೇಜಸ್ವಿಯಾಗಲಿ, ಒಂದೇ ಕಾಲಕ್ಕೆ ನಮ್ಮೆಲ್ಲರ ರಕ್ಷಣೆಯಾಗಲಿ, ನಮಗೆ ಒಂದೇ ಸಮಯದಲ್ಲಿ ಆಹಾರ ನೀಡಲಿ ನಾವೆಲ್ಲರೂ ಸೇರಿಕೊಂಡು ಪರಾಕ್ರಮವನ್ನು ಮಾಡುವೆವು ನಮ್ಮೊಳಗೆ ಎಂದಿಗೂ ಜಗಳಾಡದಿರುವೆವು.

OO ನಾವು ತೇಜಸ್ವಿಗಳೂ ಪರಾಕ್ರಮಿಗಳೂ ಪರಸ್ಪರ ಪ್ರೀತಿ ಸೌಹಾರ್ದಪೂರ್ಣರೂ ಆಗುವಂತೆ, ನಮ್ಮ ಸುಖವನ್ನು ನಾವು ಪಡೆಯುವಂತೆ ಮತ್ತು ನಮ್ಮ ರಕ್ಷಣೆಯನ್ನು ನಾವು ಮಾಡಿಕೊಳ್ಳುವಂತೆ ನಮ್ಮ ಅಧ್ಯಯನ ಜ್ಞಾನವು ಕರುಣಿಸಲಿ.

ಇದಾವ ಶಕ್ತಿ?

ಆಹಾರಾಭಾವಕ್ಕೆ ಕಾರಣವೇನು ಎಂದು ಪ್ರಶ್ನಿಸಿದರೆ, ಅದಕ್ಕೆ ಒಬ್ಬೊಬ್ಬರು ಒಂದೊಂದು ಉತ್ತರವನ್ನು ಹೇಳಬಲ್ಲರು, ಒಕ್ಕಲಿಗ ಒಡೆಯನಿಂದ ತೊಡಗಿ ಭೂಸುಧಾರಣೆಯ ವರೆಗೂ ಇದು ನಿಲ್ಲಬಲ್ಲುದು. ಒಂದು ಕಾರ್ಯಕ್ಕೆ ಹಲವಾರು ಜನರು ಹಲವಾರು ಕಾರಣಗಳನ್ನು ಸಂದರ್ಭಕ್ಕೆ ತಕ್ಕಂತೆ ಮುಂದೆ ಮಾಡುವ ಪಾಠ ಮಂತ್ರಿವರ್ಯರಿಂದ ನಮಗೆ ಬಂದಿರಬೇಕು. ಇದೀಗ ವಿಧಾನ ಸಭೆಯಲ್ಲಿ ಭೂಸುಧಾರಣೆ ಮಾಡದಿರುವುದೇ ಇದಕ್ಕೆ ಕಾರಣವೆನ್ನ ತೊಡಗಿದ್ದಾರೆ, ವಿರೋಧಿ ಪಕ್ಷದ ಸದಸ್ಯರು. ಇದರಲ್ಲಿ ತಪ್ಪಿಲ್ಲ. ಸರಕಾರವು ಭೂಸುಧಾರಣೆಯ ಪ್ರಸ್ತಾಪ ಮಾಡಿದಾಗ ವಿರೋಧಿಗಳಿಗೆ ಅದು ನೆನಪಾಯಿತು. ಇದನ್ನು ಪ್ರತ್ಯುತ್ಪನ್ನ ಶಕ್ತಿಯನ್ನಬೇಕೆ?

ನರಸಣ್ಣನ ಸರಸ



"ನೋಡಪ್ಪಾ, ನಾವು ಹೇಳಿದಂತೆ ಕೇಳುತ್ತಿದ್ದರೆ, ಸರಕಾರಕ್ಕೆ ಸುಮಾರು ೫೦೦ ಕೋಟಿ ರೂಪಾಯಿ ಆದಾಯ ತೆರಿಗೆ ಹೆಚ್ಚು ಬರುತ್ತಿತ್ತು ಕಣೋ, ಅದಲ್ಲಾ, ೬೫ ಕೋಟಿ ಬೇಕೆಂತ ಟಿಟಿಕೆ ಸರ ಹಿಡಿದಿದ್ದಾರೆ ನೋಡು, ಅವರ ಸರದಿಂದ ಯಾರಿಗೆ ಸುಖ? ನೀನಾದ್ರೂ ತಿಳಿಸು. . . ."

ಗೇಹ ರಾಜ್ಯದಲ್ಲಿ

ಶ್ರೀ ಹಿಂದಿಯೇ ಅಧಿಕೃತ ಭಾಷೆ

'ನೋಡೀಂದ್ರೆ...."

"ಏನನ್ನ?"

"ಅಲ್ಲಾ, ಹಿಂದಿಯು ಎಲ್ಲಿ ವರೆಗೆ ಮುಂದೆ ಬಂತೂಂತ?"

"ಯಾಕೆ?"

"ಮತ್ತೇನೂ ಇಲ್ಲ, ಅದರ ಗತಿಯೇ ನ್ಲೀಂತ!'

'ಗತಿಯೇನು ಬಂತೆ? ಅದು ಯಾವಾಗ್ಲೂ ಸದ್ಗತಿಯಲ್ಲೇ ಇರುತ್ತೆ......"

"ಹೇಗೆ ಹಾಗಂತೀರಾ?'

'ಹೇಗೇಂದ್ರೆ, ಇದುವರೆಗೂ ಅದು ಸದ್ಗತಿಯನ್ನೇ ಪಡೆದಿತ್ತು; ಮುಂದೆಯೂ ಹಾಗೇನೇ ಅನ್ನು...."

"ಅಂದ್ರೆ?"

'ಅಂದ್ರೆ ಏನು? ಹಿಂದೆ ಇದ್ದು ಸದ್ಗತಿ ಪಡೆದಿದ್ರೆ ಮುಂದೆ ಸತ್ತು ಸದ್ಗತಿ ಪಡೆಯೋದು.. ಒಟ್ಟಾರೆ ಇದ್ರೂ ಗತಿ ಸತ್ರೂ ಗತಿ ."

"ಅಲ್ಲಿ ಜೋರಾಗಿ ಬೀಸ್ತಿದ್ದ ಹಿಂದೀ ಗಾಳಿ ಹೀಗೆ ಒಮ್ಮೆಲೇ ನಿಂತು ಬಿಡೋದಂದ್ರೆ ಏನೂಂತ?'

"ಗಾಳಿ ಎಲ್ಲಿ ನಿಂತಿದೆ? ಹರಿಯುತ್ತಾ ಇದೆಯೆನ್ನು. ಅದು ಬೀಸೋಕ್ಕೆ ಯಾರೂ ಅಡ್ಡಿ ಮಾಡೊಲ್ಲ, ಆದ್ರೆ ಅದನ್ನ ಕಲೀಬೇಕು; ಓದಬೇಕು; ಆಡಬಾರ್ದು, ಬರೀಬರ್ದು...'

"ಯಾಕೆ?'

'ಅದು ಅಸ್ಪೃಶ್ಯ ಭಾಷೆ .."

'ಯಾಕೆ?'

"ಯಾಕೇಂದ್ರೆ ಅದೇ ನಮ್ಮನ್ನ ಮುಟ್ಟೆ ಬರುತ್ತೆ, ನುಂಗೋಕೇಂತ ಭೀತಿ."

'ಅಲ್ಲಾ, ಒರೇ ಭೀತಿಯಿಂದ ಯಾರಿಂದ್ರೂ ಹೀಗೆಲ್ಲಾ ಮಾಡೋದುಂಟೆ?"

'ಉಂಟೇ ಅಂದ್ರೆ; ಅಲ್ಲಾ, ಒಂದ್ವೇಳೆ ಇಲ್ಲಾನ್ನು. ಇನ್ನು ಮುಂದಾದ್ರೂ ಇರ್ಬಾರ್ದೇ?"

"ಇದು ವರೆಗೆ ಇಲ್ಲಾದ್ದು ಇನ್ನು ಮುಂದೆಯೂ ಇರೋದಿಲ್ಲ?"

'ಯಾವ ಆಧಾರದಿಂದ ಹಾಗಂತೀಯ?"

'ನೀವೇ ಹೇಳಿ ಯಾಕೆ ಇರಬೇಕೂಂತ...."

"ಹೇಳ್ಲೇ ಬೇಕೇನು?"

"ಹ್ಞಾಂ..."

"ಅಲ್ಲ ಮತ್ತೆ ನೊಂದ್ಕೊಳ್ಳೋ ಬೇಡ"

"ಏನ್ರಿ ಅದು, ನಾನು ನೊಂದ್ಕೊಳೋ ಸುದ್ದಿ?"

"ಸುದ್ದಿಯೇನಲ್ವೆ....ಹೀಗೆ ಒಂದು..."

"ಹ್ಞಾಂ.."

"ನೋಡು ಒಬ್ಬ ಇದುವರೆಗೆ ಸಾಯ್ಲಿಲ್ಲ ನೋಡು ."

"ಯಾರು? ಯಾಕೆ ಸಾಯ್ಬೇಕು?"

"ಅಲ್ವೆ, ಇದುವರೆಗೆ ಸಾಯದವ ಎಂದೊಂದು ದಿನ ಸಾಯ್ಲೇ ಬೇಕು ತಾನೆ?"

"ಅಯ್ಯೋ, ಇದ್ರಲ್ಲಿ ಏನಿದೇಂತ ಸಂಗ್ತಿ...."

"ಯಾಕೆ?"

"ಅಲ್ಲಾ, ಜಾತಸ್ಯ ಮರಣಂ ಧ್ರುವಂ"

"ಹೌದೇ, ಹಾಗೆಯೇ ನೋಡು; ಏರಿದವ ಇಳಿಯಲೇ ಬೇಕು, ತಾಳಿದವ ಬಾಳಿಯಾನು"

"ಅಂದ್ರೆ ನಿಮ್ಮ ಮಾತಿನ ಅರ್ಥ..?"

'ನೀನೇನು ಮಾಡಿಕೊಂಡೆ?'

'ಅಂದ್ರೆ ಹಿಂದಿಯನ್ನ ಬೇಗನೇ ಏರ್ಸಿದ್ರೆ ಅದು ಇಳಿಯುತ್ತೆ, ಅಂದ್ರೆ ಬಿಕ್ಕಟ್ಟು ತಲೆದೋರುತ್ತೆ...'

"ಹ್ಞಾಂ...ಮುಂದೆ..."

"ನಿಧಾನವಾಗಿ ಆ ಕೆಲ್ಸ ಮಾಡಿದ್ರೆ ತಾಳುತ್ತೆ."

"ಹ್ಞಾಂ...."

"ಏನ. ಸರಿಯೇ ಇದು?"

"ಅಲ್ಲಾಂತ ಹೇಗೆ ಹೇಳ್ಲಿ?"

"ಅಂದ್ರೆ, ಹೌದೂನ್ನೋಕೆ ಸಂಕೋಚ?"

"ಅದೇನಿಲ್ಲಾ.... ಏನೋ ಒಂದು ಅರ್ಥ ನಿನಗಾಯ್ತು...."

"ಮತ್ಯಾವ ಗೂಢಾರ್ಥವಿದೆಯಪ್ಪ ಸೂತ್ರಕಾರರ ಭಾಷ್ಯದಲ್ಲಿ?"

"ನೋಡು, ಸೂತ್ರಕಾರ ಸೂತ್ರವನ್ನಷ್ಟೆ ಬರೆಯುತ್ತಾನೆ.."

'ಮತ್ತೆ ಅದರ ಅರ್ಥ ಹೇಗಾಗಬೇಕು?'

"ಹುಟ್ಟುತ್ತಾರಲ್ಲಾ ಭಾಷ್ಯಕಾರರ.?"

'ಅದು ಸರಿಯೇ, ಆದ್ರೆ ಸೂತ್ರಕಾರನ ನಿಜವಾದ ಅಭಿಪ್ರಾಯವೇನೂಂತ ಅವನಿಗೆ ಹೇಗೆ ಗೊತ್ತಾಗಬೇಕು?"

"ಗೊತ್ತಾಗಿ ಆಗ ಬೇಕಾದ್ದೂ ಏನು?'

"ಯಾಕೆ?'

"ಅಲ್ವೆ, ಸೂತ್ರಕ್ಕೆ ಯಾವ ಅರ್ಥಾಂತ ಸೂತ್ರಕಾರ ಯೋಚಿಸೋದೇ ಇಲ್ಲ. ಪರಮಾತ್ಮನ ಮುಖದಿಂದ ವೇದಗಳು ಪುಂಖಾನು ಪುಂಖ ವಾಕ್‌ಪುಂಜನಾಗಿ ಹೊರ ಬಂದಂತೆ ಸೂತ್ರಗಳು ಒಂದರ ಹಿಂದೊಂದು ಸೂತ್ರಿಸುತ್ತ ಬರುತ್ತಿವೆ...."

"ಹ್ಞಾಂ ಮುಂದುವರಿಯಲಿ...'

"ಅವುಗಳನ್ನು ಹೆಕ್ಕಿ ಯಾವುದಕ್ಕೆ ಯಾವ ಅರ್ಥ ಹೇಗೆ ಎಂದು ಮುಂತಾಗಿ ಮಥಿಸಿ, ವೇದಗಳಿಗೆ ಅರ್ಥ ಬರೆದಂತೆ ಬರೆಯುತ್ತಾನೆ ಭಾಷ್ಯಕಾರ..."

"ಹ್ಞಾಂ...'

"ಭಾಷ್ಯಕಾರರು ತಂತಮ್ಮ ಧೀಶಕ್ತಿಗೆ ಸಿಲುಕುವ ವಿಚಾರಗಳನ್ನು ಹೊರಗೆಡಹುತ್ತಾರೆ. ಅವನ್ನು ಜನ ತಂತಮ್ಮ ಮೆದುಳಿಗೆ ತೋಚಿದಷ್ಟು ಅರ್ಥ ಮಾಡುತ್ತಾರೆ.

"ಮುಗಿಯಿತೇ ನಿಮ್ಮ ಪ್ರವಚನ?"

"ಏನೇ, ನಾನು ಇಷ್ಟೊಂದು ಗಂಭೀರವಾಗಿ ಅಂದುದು ನಿನಗೆ ಪ್ರವಚನವಾಯ್ತು ಅಲ್ವೆ?"

"ಅಯ್ಯೋ, ಯಾಕೆ ರೇಗ್ತೀರಿ?"

"ರೇಗದೆ ಮತ್ತೇನು ಮಾಡ್ಬೇಕೂಂತ...."

"ಗಂಭೀರ ವಿಚಾರವಾದ್ರೂ ಏನೂಂತ?'

"ಮತ್ತೆ ಪ್ರವಚನಾಂತಂದೆಯಲ್ಲ?"

"ಅಯ್ಯೋ, ಪ್ರವಚನಾಂದ್ರೆ ಏನೂಂತ ತಿಳ್ಕೊಂಡಿದ್ದೀರಿ?"

"ಆಹಾ ಯಾಸು ಮತ್ತೆ ನಿನ್ನಿಂದ ನಾನು ತಿಳಿಯೋ ಬೇಕು ಅಲ್ವೆ? ಭಾರೀ ಮುಂದುವರ್ದಿ ಕಣೇ...."

"ಅಲ್ಲಾ, ಪ್ರ ಅಂದ್ರ ಪ್ರಗಲ್ಭ ಅಂತ ಅಂದಿರಲ್ಲಾ ನೀವು...."

'ಹ್ಞಾಂ..."

"ಪ್ರಗಲ್ಭವಚನಾಂತ ಅಂದೆ ನಾನು.'

"ಓ, ಸೂತ್ರಕಾರರ ಅಭಿಪ್ರಾಯ ಅದು...."

"ಹೌದು, ಭಾಷ್ಯಕಾರರದ್ದು ಬೇರೊಂದಾಯ್ತು..'

"ಹ್ಹ ಹ್ಹ....ಹ್ಹ. "

"ಇಷ್ಟೇ ಅನ್ನೋದು ನೋಡಿ, ಸೂತ್ರಕಾರರೇ ಭಾಷ್ಯ ಬರೀಬೇಕೂಂತ....'

"ಮತ್ತೆ ಅವ್ರೇ ಅರ್ಥ ಮಾಡಿಕೋಬೇಕು. "

'ಹಾಗಾದ್ರೆ ಯಾವ ಸಮಸ್ಯೇನೂ ಇರೋಲ್ಲಾ....'

"ಅದ್ಕೇ ಅಂದಿದ್ದಾರೆ ನೋಡು, ಯಾವ ಕೆಲಸವೇ ಇರಲಿ, ಸ್ವಾಂತ ಸುಖಾಯ ಇರಬೇಕೂಂತ. "

'ಅಂದ್ರೆ..."

"ಮತ್ತೆ ಸಂಸ್ಕೃತ ಕಲ್ತಿದ್ದೇನೇಂತ ನೀನು ಕೊಚ್ಚುತ್ತೀಯ!"

"ಹ್ಞಾಂ. ಅಂದ್ರೆ ಸದ್ಯ ಹಿಂದೀ ಬಗ್ಗೆ ಅವಸರ ಸಲ್ಲದೂಂತ ಅನ್ನೋವ್ರಲ್ಲಿ ನೀವೂ ಒಬ್ರು."

"ಹೌದೂನ್ನು..."

"ಆರಂಭ ಶೂರಾಃ ಖಲು ದಾಕ್ಷಿಣಾತ್ಯಾಃ ಎಂಬುದು ನಿಜವಾಯ್ತು ಅನ್ನಿ...."

"ಯಾಕೆ?'

"ಒಂದು ಕಾಲದಲ್ಲಿ ಹಿಂದೀ ಭಾಷೆಯನ್ನು ಕಲಿಯಿರೀಂತನ್ನೋವ್ರು ಈಗ ಅದನ್ನ ಹಿಂದೆ ತಳ್ಳೋಕೆ ಸಿದ್ಧರಾಗಿದ್ದಾರೇಂದ್ರೆ..'

"ಅದೆಲ್ಲಾ ನಮ್ಗೇಕೆ ಹೇಳು. ಅಂತೂ ಒಂದು ಮಾತು ಸಿದ್ಧವಾಯ್ತು..."

"ಏನು?'

'ಮತ್ತೇನೂ ಇಲ್ಲ. ಸೂತ್ರಕಾರ, ಭಾಷ್ಯಕಾರ ಮತ್ತು ಅಧ್ಯಯನಕಾರರ ಅಭಿಪ್ರಾಯಗಳಲ್ಲಿ ತಳಮೇಳವಿರೋದಿಲ್ಲಾಂತ. "

'ಅಲ್ಲಿ, ಒಬ್ಬೊಬ್ಬ ಭಾಷ್ಯಕಾರ ಒಂದೊಂದು ರೀತಿ ಅಭಿಪ್ರಾಯ ಪಡುವಾಗ ಅಧ್ಯಯನಕಾರರೇನು ಮಾಡಬೇಕು? ತನ್ಗೇ ಸರಿ, ತನ್ಮೂದಲೇ ಗಟ್ಟಿ ಅಂತ ಬಂದಿದ್ದಾಡ್ಬೇಕು."

"ಸರೀನ್ನು, ತಿಂದ ಅನ್ನ ಮೈಗೆ ಹಿಡೀಬೇಕೂಂತಾದ್ರೆ ಏನಾದ್ರೂ ಮಾಡ್ಬೇಕು......"

'ನಿಮ್ಮ ಮುಖ್ಯಮಂತ್ರಿಗಳೆಲ್ಲಾ ಸಭೆ ಸೇರಿ ಹಿಂದಿಯನ್ನು ಬಹುಕಾಲವಲ್ಲವಾದ್ರೂ ಸ್ವಲ್ಪಕಾಲ ಹಿಂದೂಡಬೇಕೂಂತ ಒಪ್ಪಿಕೊಂಡ್ರಂತಲ್ಲಾ ."

"ತಾತ್ವಿಕವಾಗಿ ಒಪ್ಪಿಕೊಂಡ್ರು.."

"ಅಂದ್ರೆ ."

"ಸಾತ್ವಿಕವಾಗಿ ಅಲ್ಲಾಂತ.. "

'ಹಾಗಂದ್ರೆ...'

"ನೋಡ, ಕೆಲವ್ರು ಈಗ್ಲೇ ಹಿಂದಿ ಮುಂದೆ ಸಾಗ್ಬೇಕೂ ಅನ್ನೋರು, ಮತ್ತೆ ಕೆಲವರು ಹಿಂದಿ ಮುಂದೆ ಬರೋದೇ

(ಹದಿನಾರನೇ ಪುಟ ನೋಡಿ)

ತಾ. 18—2—1965ರಿಂದ ಖಾಯಂ ಠೇವಣಾತಿ ಮತ್ತು ಸೇವಿಂಗ್ಸ್ ಖಾತೆಗಳ ಮೇಲಣ ಬಡ್ಡಿ ದರಗಳನ್ನು ಸೇಕಡಾ 1ರಷ್ಟು ಏರಿಸಲಾಗಿದೆಯೆಂದು ತಿಳಿಸಲು ನಾವು ಸಂತೋಷ ಪಡುತ್ತೇವೆ.

ಈಗ ಚಾಲ್ತಿಯಲ್ಲಿರುವ ಬಡ್ಡಿ ದರಗಳು

ಕೆಳಗೆ ಕಾಣಿಸಿದ ಅವಧಿಗೆ ಅಥವಾ ಹೆಚ್ಚಿಗೆ	ಕೆಳಗೆ ಕಾಣಿಸಿದ ಅವಧಿಗಿಂತ ಕಡಿಮೆ	ಬಡ್ಡಿ ದರ
91 ದಿವಸಗಳು	6 ತಿಂಗಳು	5 1/8 %
6 ತಿಂಗಳು	1 ವರ್ಷ	5 3/8 %
1 ವರ್ಷ	2 ವರ್ಷ	6 1/8 %
2 ವರ್ಷ	3 ವರ್ಷ	6 3/8 %
3 ವರ್ಷ	5 ವರ್ಷ	6 5/8 %
5 ವರ್ಷ	7 ವರ್ಷ	7 1/8 %
7 ವರ್ಷ	9 ವರ್ಷ	7 3/8 %
9 ವರ್ಷ	ಮತ್ತು ಹೆಚ್ಚಿಗೆ	7 5/8 %

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟಿನ ಮೇಲೆ ಸೇಕಡಾ 4 ಬಡ್ಡಿ ಕೊಡಲಾಗುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : **ಮಣಿಪಾಲ**

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ ರೂ. 70 ಕೋಟಿಗೂ ಮಿಕ್ಕಿದೆ.

ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ......... ...

ಕಗ್ಗತ್ತಲಲ್ಲೊಂದು ಆಶಾಜ್ಯೋತಿ

ಭಾರತದ ಆಹಾರ ಕಾರ್ಪರೇಶನ್

ಅದರ ಧ್ಯೇಯಗಳು ಹಾಗೂ ಕಾರ್ಯವಿಧಾನಗಳು

(ಕಳೆದ ಜನವರಿ ೧೪ರಂದು ಪೊಂಗಲ್ ಹಬ್ಬದ ಶುಭ ಅವಸರದಲ್ಲಿ ಮದ್ರಾಸಿನಲ್ಲಿ ಭಾರತದ ಆಹಾರ ಕಾರ್ಪರೇಶನಿನ ಉದ್ಘಾಟನೆ ನಡೆದ ಸಂದರ್ಭ, ಕಾರ್ಪರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈ ಇವರು ಮಾಡಿದ ಸ್ವಾಗತ ಭಾಷಣ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಅಡಿಕೆ, ಹತ್ತಿ, ಹೊಗೆಸೊಪ್ಪು ಮೊದಲಾದ ವಾಣಿಜ್ಯ ಬೆಳೆಗಳಿಗೆ ಉತ್ತಮ ಬೇಡಿಕೆ ಹಾಗೂ ಬೆಲೆ ಇರುವುದರಿಂದ, ಆಹಾರ ಧಾನ್ಯಗಳು ಬೆಳೆಯುವಂತಹ ಫಲವತ್ತಾದ ಭೂಮಿಯಲ್ಲಿ ರೈತರು ಈ ವಾಣಿಜ್ಯ ಬೆಳೆಗಳನ್ನು ಬೆಳೆಸುತ್ತಿದ್ದಾರೆ. ಇದು ಆಹಾರದ ಅಭಾವಕ್ಕೆ ಒಂದು ಕಾರಣ. ಹಾಗೆಂದು ವಾಣಿಜ್ಯ ಬೆಳೆಗಳಿಂದ ದೊರೆಯುವಂತಹ ಆದಾಯ, ಆಹಾರ ಧಾನ್ಯಗಳಿಂದ ದೊರೆಯ ಬೇಕಾದರೆ, ಎಕರೆಗೆ ಆಹಾರ ಧಾನ್ಯಗಳ ಉತ್ಪಾದನೆಯ ಪ್ರಮಾಣ ನಾಲ್ಕೈದು ಪಾಲಿನಷ್ಟಾದರೂ ಹೆಚ್ಚಾಗಬೇಕು. ಆದುದರಿಂದ ಆಹಾರ ಬೆಳೆಯುವ ಭೂಮಿಯಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಸುವುದು ಹಾಗೂ ಕಟ್ಟಡಗಳನ್ನು ರಚಿಸುವುದೇ ಮೊದಲಾದ ಕಾರ್ಯಗಳಿಗೆ ಸರಕಾರವೇ ಮಿತಿ ಹಾಕಬೇಕು. ಒಂದೆಡೆಯಿಂದ ನಾವು ಕೃಷಿ ಭೂಮಿಯ ಹೆಚ್ಚಳಕ್ಕಾಗಿ ತೀವ್ರ ಯತ್ನ ಮಾಡುತ್ತಿರುವ ವೇಳೆ ಇನ್ನೊಂದೆಡೆ ಕೃಷಿಯಾಗುವ ಫಲವತ್ತಾದ ಭೂಮಿಯನ್ನು ಇತರ ಉದ್ದೇಶಗಳಿಗಾಗಿ ಉಪಯೋಗಿಸಿದರೆ, ಆಗ ಕೃಷಿಗೊಳಪಟ್ಟ ಭೂಮಿಯ ವಿಸ್ತಾರವು ಕಡಿಮೆಯಾಗದೆ ಉಳಿಯಲಾರದು.

ಕೃಷಿ ಕ್ಷೇತ್ರವನ್ನು ಇನ್ನಷ್ಟು ವಿಸ್ತಾರಗೊಳಿಸುವ ಮತ್ತು ಇರುವ ಭೂಮಿಯಲ್ಲೇ ನೀರಾವರಿ ಹಾಗೂ ಇನ್ನಿತರ ಸೌಲಭ್ಯಗಳನ್ನೊದಗಿಸಿ ಒಂದಕ್ಕಿಂತ ಹೆಚ್ಚು ಬೆಳೆ ತೆಗೆಯುವ ಯತ್ನಗಳನ್ನು ನಾವು ಮಾಡುತ್ತಿರುವಂತೆಯೇ, ಆಹಾರ ಧಾನ್ಯಗಳ ಬೆಳೆಯ ಪ್ರಮಾಣ ಮತ್ತು ವಾಣಿಜ್ಯದ ಬೆಳೆಗಳ ಪ್ರಮಾಣವು ಯೋಗ್ಯ ಪ್ರಮಾಣದಲ್ಲಿರುವಂತೆ ನೋಡಬೇಕು. ವಾಣಿಜ್ಯ ಬೆಳೆಗಳ ಪ್ರಮಾಣ ಹೆಚ್ಚಬೇಕಾದರೆ ಇದ್ದ ಭೂಮಿಯಲ್ಲೇ ಹೊಸ ವಿಧಾನವನ್ನನುಸರಿಸಿ ಉತ್ಪಾದನೆ ಹೆಚ್ಚಿಸಬೇಕಲ್ಲದೆ, ಆಹಾರ ಬೆಳೆಯುವ ಭೂಮಿಯನ್ನು ಅದಕ್ಕಾಗಿ ಉಪಯೋಗಿಸುವುದಲ್ಲ. 'ಕೃಷಿ ಉತ್ಪಾದನೆಗಳ ಬೆಲೆಯ ಸಮಿತಿ'ಯ ರಚನೆಯು, ಕೃಷಿ ಉತ್ಪಾದನೆಗಳ ಬೆಲೆಯನ್ನು ನಿಗದಿಪಡಿಸುವಲ್ಲಿ ಸರಕಾರಕ್ಕೆ ಅಮೂಲ್ಯವಾದ ಸಲಹೆ ಕೊಡಬಲ್ಲುದು. ಈ ಸಮಿತಿಯ ರಚನೆಯು ದೇಶದ ಕೃಷಿರಂಗದಲ್ಲೊಂದು ನೂತನ ಮೈಲುಗಲ್ಲು! ಈ ಸಮಿತಿಯ ರಚನೆಯಿಂದ ಭಾರತದ ಕೃಷಿ ಕ್ಷೇತ್ರವು ಯೋಗ್ಯ ದಾರಿಯಲ್ಲಿ ಪ್ರಗತಿ ಹೊಂದುವಂತಾಗುತ್ತದೆ.

ಸುಧಾರಿತ ಗೊಬ್ಬರಗಳ ಹಾಗೂ ಬೀಜಗಳ ಬಳಕೆ, ನೀರಾವರಿ ಸೌಲಭ್ಯ, ಹೆಚ್ಚು ಭೂಮಿಯನ್ನು ಕೃಷಿಗೆ ಒಳಪಡಿಸುವುದೇ ಮೊದಲಾದ ಕಾರ್ಯಕ್ರಮಗಳಿಂದ ನಾವು ಅಧಿಕ ಆಹಾರ ಉತ್ಪಾದನೆಯನ್ನು ಮಾಡಲು ಯತ್ನಿಸಿದಂತೆ, ಬೆಳೆ ಬೆಳೆಯುವ ಸಂದರ್ಭದಲ್ಲಿ ಹಾಗೂ ಧಾನ್ಯಗಳನ್ನು ಸಂಗ್ರಹಿಸುವಲ್ಲಿ ಅವುಗಳು ಹಾಳಾಗದಂತೆ ಹಾಗೂ ಅನಾವಶ್ಯವಾಗದಂತೆ ನೋಡಬೇಕಾದುದೂ ಅತಿ ಆಗತ್ಯದ ಕಾರ್ಯ. ಗಣನೀಯವಾದ ಆಹಾರದ ಅಂಶವು ಪ್ರಾಣಿಗಳಿಂದ ಹಾಗೂ ಬೆಳೆಗಳಿಗೆ ತಗಲುವ ರೋಗಗಳಿಂದ ಹಾಳಾಗಿ ಹೋಗುತ್ತಿದೆ. ಹೊಲಗಳನ್ನು ಉಪದ್ರಕಾರಿ ಪ್ರಾಣಿಗಳಿಂದ ರಕ್ಷಿಸುವುದು ಹಾಗೂ ಸಕಾಲದಲ್ಲಿ ಕ್ರಿಮಿನಾಶಕಗಳನ್ನು ಹೊಲಗಳಿಗೆ ಚಿಮುಕಿಸುವುದು ಈಗ ಸರಕಾರದ ರಾಷ್ಟ್ರೀಯ ಮಟ್ಟದಲ್ಲಿ ನೆರವೇರಿಸಬೇಕಾದ ಅತಿ ಜರೂರಾದ ಕಾರ್ಯವಾಗಿದೆ. ಬೇಸಾಯಗಾರರೇ ಈ ಕಾರ್ಯವನ್ನು ಮಾಡಬೇಕೆಂದು ಬಯಸುವುದು ತರವಲ್ಲ. ಆರ್ಥಿಕ ಮುಗ್ಗಟ್ಟಿನಿಂದ ನರಳುತ್ತಿರುವ ಅವರು ಈ ಕಾರ್ಯ ನಿರ್ವಹಿಸುವುದು ಕಷ್ಟಸಾಧ್ಯ. ಅಲ್ಲದೇ ಭಾರತದ ಮಿಲಿಯಗಟ್ಟಲೆ ಬೇಸಾಯಗಾರರು ತಮ್ಮ ಸ್ವಪ್ರಯತ್ನದಲ್ಲೇ ಇದನ್ನು ಸಾಧಿಸುವುದೂ ಆಗದ ಮಾತು. ಆದುದರಿಂದ ಈ ಕಾರ್ಯವು ಸರಕಾರಿ ಮಟ್ಟದಲ್ಲಿ ಜರಗಬೇಕಾಗಿದೆ. ಈ ಕಾರ್ಯವು ಅಧಿಕ ಪರಿಶ್ರಮ ಹಾಗೂ ತ್ವರಿತಗತಿಯಿಂದ ಮಾಡಬೇಕಾದುದಾಗಿದೆ. ಈ ದಿಸೆಯಲ್ಲಿ ಜಾಗತಿಕ ಸಂಸ್ಥೆಗಳು ಹಾಗೂ ವಿದೇಶೀ ಮಿತ್ರರಾಷ್ಟ್ರಗಳು ಈಯುವ ನೆರವನ್ನೂ ನಾವು ಪಡೆಯುವಲ್ಲಿ ಹಿಂದುಳಿಯಬಾರದು.

ಮಲೇರಿಯಾ ನಿರ್ಮೂಲನೆಗಾಗಿ ನಾವು ಒಂದು ಯೋಜನೆಯನ್ನು ಸಿದ್ಧಗೊಳಿಸಿದ್ದೇವೆ. ಈ ಯೋಜನೆ ಬಹುಮಟ್ಟಿಗೆ ಯಶಸ್ವಿಯೂ ಆಗಿದೆ. ಇದೇ ರೀತಿಯಲ್ಲಿ ಉಪದ್ರಕಾರಿ ಪ್ರಾಣಿ ಹಾಗೂ ಕೀಟಗಳ ನಾಶಕ್ಕೆ ನಾವು ಒಂದು ಯೋಜನೆಯನ್ನು ಸಿದ್ಧಪಡಿಸಿದರೆ, ಆಗ ಅದು ಖಂಡಿತಕ್ಕೂ ಉತ್ತಮ ಫಲವನ್ನಿತ್ತು ನಮ್ಮ ಆಹಾರ ಉತ್ಪಾದನೆಯ ಹೆಚ್ಚಳಕ್ಕೆ ನೆರವೀಯದೆ ಉಳಿಯಲಾರದು. ನೀರಾವರಿಯ ಸೌಲಭ್ಯ ಹಾಗೂ ಹೊಸ ನೀರಾವರಿ ಯೋಜನೆಗಳನ್ನು ರೂಪಿಸುವಲ್ಲಿ ಒಂದು ಸುವ್ಯವಸ್ಥಿತ ಘಟನೆ ಇರಬೇಕು. ಮಾತ್ರವಲ್ಲ ಮಣ್ಣಿನ ಗುಣವನ್ನರಿತು ಅದಕ್ಕೆ ತಕ್ಕ ಗೊಬ್ಬರವನ್ನು ಉಪಯೋಗಿಸುವುದೇ ಮೊದಲಾದವುಗಳ ವ್ಯವಸ್ಥೆಗೆ ಒಂದು ಯೋಗ್ಯ ಹಾಗೂ ದಕ್ಷ ವ್ಯವಸ್ಥಾಪಕ ಮಂಡಳಿ ಇರಬೇಕು. ಇದನ್ನು ಸ್ಥಾಪಿಸುವುದರಿಂದ, ನಮ್ಮ ಆಹಾರದ ಉತ್ಪಾದನೆ ಅಲ್ಪ ಕಾಲದಲ್ಲೇ ಹೆಚ್ಚಾಗದೆ ಉಳಿಯಲಾರದು. ಕೃತಕ ಗೊಬ್ಬರಗಳು, ಆಧುನಿಕ ಉಪಕರಣಗಳು ಹಾಗೂ ಸುಧಾರಿತ ಬೀಜಗಳ ಖರೀದಿಗೆ ರೈತನಿಗೆ ಆರ್ಥಿಕ ಸಹಾಯವನ್ನು ಒದಗಿಸಬೇಕಾದುದೂ ಅತಿ ಆಗತ್ಯ. ಈ ಆರ್ಥಿಕ ಸಹಾಯವು ಸಕಾಲಕ್ಕೆ ದೊರೆಯಬೇಕಲ್ಲದೆ, ಅವನು ಖರೀದಿಸುವ ವಸ್ತುಗಳ ಬೆಲೆಯೂ ಯೋಗ್ಯವಾಗಿರಬೇಕು. ಈಗಿನ ಅನುಭವದ ಮೇಲಿಂದ ಹೇಳುವುದಾದರೆ ರೈತನು ಬೆಳೆ ತೆರಲು ಸಿದ್ಧನಿರುವಾಗಲೂ, ಬೇಕಾದ ಸಲಕರಣೆ, ಗೊಬ್ಬರ ಹಾಗೂ ಬೀಜಗಳು ಅವನಿಗೆ ಸಕಾಲದಲ್ಲಿ ದೊರೆಯುತ್ತಿಲ್ಲ.

ಕೃಷಿ ಸಂಶೋಧನೆ

ಕೃಷಿಯೇ ರಾಷ್ಟ್ರದ ಜೀವಾಳವಾಗಿರುವ ನಮ್ಮ ದೇಶದಲ್ಲಿ ಕೃಷಿ ಸಂಶೋಧನೆಗಳ ಮಹತ್ತಿಕೆಯ ಕುರಿತು ಹೆಚ್ಚು ಹೇಳುವ ಅಗತ್ಯವಿಲ್ಲ. ತನಗೆ ಬೇಕಾದುದಕ್ಕಿಂತ ಹೆಚ್ಚು ಆಹಾರ ಧಾನ್ಯ ಬೆಳೆಯುತ್ತಿರುವ ಅಮೇರಿಕೆಯಂತಹ ದೇಶವೇ ಕೃಷಿ ಸಂಶೋಧನೆಗೆ ಅತಿ ಮಹತ್ವವನ್ನೀಯುತ್ತಿದೆ ಎಂದ ಮೇಲೆ ನಮ್ಮ ದೇಶಕ್ಕೆ ಅದರ ಆವಶ್ಯಕತೆ ಎಷ್ಟೆಂಬುದರ ಅರಿವಾದೀತು. ಅಂತರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆಯು ಮನಿಲಾದಲ್ಲಿ ತನ್ನ ಕಾರ್ಯವೆಸಗುತ್ತಿದ್ದು, ಭತ್ತದ ಕೃಷಿಯಲ್ಲಿ ಅದು ಅನೇಕ ಸಂಶೋಧನೆಗಳನ್ನು ಮಾಡಿದೆ. ಅದರ ಅನುಭವವು ಅತಿ ಅಮೂಲ್ಯವಾದುದು. ಹಾಗಾಗಿ ನಮಗೆ ಉಪಯುಕ್ತವಾದುದು. ಭಾರತವು ಕೂಡಾ ತನ್ನದೇ ಆದ ಸಂಶೋಧನೆ ಮಾಡುವಲ್ಲಿ ಹಿಂದುಳಿಯಬಾರದು. ಸೂಕ್ತ ಉದ್ದೇಶಗಳನ್ನಿಟ್ಟುಕೊಂಡು, ವಿಶೇಷ ಸಹಾಯವನ್ನು ಬೇಕಿದ್ದರೆ ಪಡೆದು, ಅಲ್ಲಲ್ಲಿ ಕೃಷಿ ಸಂಶೋಧನಾ ಕೇಂದ್ರಗಳನ್ನು ತೆರೆಯಬೇಕು. ಈ ಸಂಶೋಧನಾ ಕೇಂದ್ರಗಳು, ಇತರ ಸಂಶೋಧನಾ ಕೇಂದ್ರಗಳ ಮಾಡಿದ ಸಂಶೋಧನೆಗಳನ್ನೇ ಮಾಡದೆ, ಅದಕ್ಕೆ ಪೂರಕವಾಗುವ ಹೊಸ ಸಂಶೋಧನೆ ಮಾಡುವುದರಿಂದ ನಮ್ಮ ಯತ್ನವು ಸಾರ್ಥಕವಾದಂತಾಗುವುದು. ಅಧಿಕ ಫಲವತ್ತಾದ ಭೂಮಿ ಇರದ ಜಪಾನಿನಂತಹ ಚಿಕ್ಕ ರಾಷ್ಟ್ರವು, ಎಂಟು ವರ್ಷಗಳಲ್ಲಿ ಕೊರತೆ ಬೀಳುತ್ತಿದ್ದ 40% ದಷ್ಟು ಆಹಾರವನ್ನು ತುಂಬಿಕೊಂಡು, ಆಹಾರದ ಮಟ್ಟಿಗೆ ಸ್ವಾವಲಂಬಿಯಾಗಿದೆ ಎನ್ನುವಾಗ, ಅತಿ ಫಲವತ್ತಾದ ಹಾಗೂ ಹೊನ್ನಿನಂತಹ ಭೂಮಿ ಇರುವ ಪ್ರಕೃತಿಯ ವರದಾನವಿರುವ, ನಮ್ಮ ದೇಶಕ್ಕೆ ಈ ಬೇಡಿಕೆ ಹಾಗೂ ಉತ್ಪಾದನೆಗಳ ನಡುವಣ ಅಂತರವನ್ನು ಹೋಗಲಾಡಿಸಲು ಕಷ್ಟವಾಗದು. ಜಾಗತಿಕ ಆಹಾರ ಸಂಸ್ಥೆಯೇ ಮೊದಲಾದುವುಗಳ ನೆರವಿನಿಂದ, ಈ ವರ್ಷ ನಾವು ಉತ್ತಮ ಬೀಜಗಳ ಸರಬರಾಜು, ಹಾನಿಕಾರಕ ಕೀಟಗಳ ಹಾಗೂ ಇಲಿಗಳ ನಾಶವೇ ಮೊದಲಾದ ಕಾರ್ಯಕ್ರಮಗಳನ್ನು ಆರಿಸಿಕೊಳ್ಳಬೇಕೆಂದು ಸರಕಾರಕ್ಕೆ ನಾನು ಸೂಚಿಸ ಬಯಸುತ್ತೇನೆ.

ವಿತರಣಾ ಪದ್ಧತಿ

ಉತ್ಪಾದನೆಯು ಹೆಚ್ಚಿದಂತೆ ವಿತರಣಾ ಪದ್ಧತಿಯಲ್ಲಿನ ದೋಷಗಳನ್ನು ಹೋಗಲಾಡಿಸಬೇಕಾದುದೂ ಅಷ್ಟೇ ಮಹತ್ವದ ಕಾರ್ಯವೆನಿಸಿದೆ. ನ್ಯಾಯವಾದ ಬೆಲೆಗೆ, ಯೋಗ್ಯ ಹಾಗೂ ಉತ್ತಮವಾದ, ಸರಿ ತೂಕದ ಆಹಾರಧಾನ್ಯವು ಬಳಕೆದಾರರಿಗೆ ಸಿಗುವಂತೆ ಮಾಡುವ ಒಂದು ವಿತರಣಾ ಸಂಸ್ಥೆಯು ಸ್ಥಾಪನೆಯಾಗಬೇಕಾದುದು ಅಗತ್ಯ. ರೈತನ ಉತ್ಪಾದನೆಗಳಿಗೆ ಯೋಗ್ಯ ಬೆಲೆ ದೊರೆತು, ಅವನ ಆರ್ಥಿಕ ಸ್ಥಿತಿ ಉತ್ತಮಗೊಳ್ಳಬೇಕಾದುದು ಅತಿ ಅಗತ್ಯವೆನಿಸಿದಂತೆ, ಬಳಕೆದಾರರಿಗೂ ಯೋಗ್ಯ ಬೆಲೆಯಲ್ಲಿ ಅತಿ ಕಡಿಮೆ ಬೆಲೆಗೆ ಆಹಾರ ಧಾನ್ಯ ದೊರೆಯಬೇಕಾದುದೂ ಅಷ್ಟೇ ಮಹತ್ವದ ವಿಷಯವಾಗಿದೆ. ಕಾರಣ, ನಮ್ಮ ಜನರ ವೆಚ್ಚದಲ್ಲಿ ಅತಿ ದೊಡ್ಡ ಅಂಶವು ಈ ಆಹಾರ ಧಾನ್ಯಗಳಿಗೇ ಮೀಸಲಾಗಿರಿಸಲ್ಪಡುತ್ತದೆ. ಜನರ ಆಹಾರವೆಂದರೆ ಬರೀ ದವಸ ಧಾನ್ಯಗಳು. 75% ದಷ್ಟು ಅಂಶ ಜನರು ದವಸ ಧಾನ್ಯಗಳನ್ನು ಬಳಸುತ್ತಿದ್ದಾರೆ. ಭಾರತೀಯ ಕುಟುಂಬದ ಆದಾಯದ 75%ದಷ್ಟು ಅಂಶವು ಬರೀ ಆಹಾರಕ್ಕಾಗಿಯೇ ವಿನಿಯೋಗಿ

(ಹನ್ನೆರಡನೇ ಪುಟ ನೋಡಿರಿ)

ಠೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¾%ರ ವರೆಗಿನ ಬಡ್ಡಿ ನೀಡಲಾಗುವುದು.

5 ವರ್ಷದ ಅವಧಿಗಳಿಗೆ ಮೇಲ್ಪಟ್ಟ ಧಾವಿರ್ಕ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ವಿವೇಚನೆ

ನಮ್ಮ ರಾಜ್ಯ ರಾಮ ರಾಜ್ಯವಾದೀತೇ?

ಬರೆದವರು: ಹಳನಾಡು ಸುಬ್ರಾಯ ಭಟ್ಟ, ಚೋನಾಳಿ.

ನೆಹರೂ ಇನ್ನಿಲ್ಲವಾದರು. ಅವರ ಆದರ್ಶ ಕೆಲಜನರ ಬಾಯಲ್ಲಿ ಮಾತ್ರ ಉಳಿಯಿತು. ಗಾಂಧೀಜಿಯವರಾದರೂ ಸ್ವಾತಂತ್ರ್ಯ ಸಿಕ್ಕಿ ವರ್ಷ ಕಳೆಯುವ ಮೊದಲೇ ಘಾತಕನ ಗುಂಡಿಗೆ ಬಲಿಯಾಗ ಬೇಕಾಯಿತು.

ಈಗ ಯೋಚಿಸಬೇಕಾದ ವಿಚಾರ ಮಾತ್ರ ಉಳಿದಿವೆ. ಅದೇ ಗಾಂಧೀಜಿ ಬಯಸಿದ ರಾಮರಾಜ್ಯ ನಾವು ಪಡೆದಿದ್ದೇವೆಯೇ? ಇಲ್ಲವೇ ಪಡೆಯುತ್ತೇವೆಯೇ? ಎಂಬುದಿನ್ನೂ ಸಮಸ್ಯೆಯಾಗಿಯೇ ಉಳಿದಿದೆ.

ಮೊದ ಮೊದಲು ನಾವು ಪಡೆಯುತ್ತೇವೆಂಬ ಆಸೆ ತಳೆದಿದ್ದರೂ ಚೀನೀ ಆಕ್ರಮಣ ಆರಂಭವಾದಾಗಲೇ ಅದು ಕುಸಿಯ ಹತ್ತಿತು. ಮೊದಲು ಆರ್ಥಿಕ ಸಮಸ್ಯೆ ಬಂದಿದ್ದರೆ ಅದರ ಜೊತೆಗೆ ಆಕ್ರಮಣ ಸಮಸ್ಯೆಯೂ ಸೇರಿತು.

ಆಗಲೂ ನಾವು ಭಯಪಡಬೇಕಾದ ಅಗತ್ಯವಿರಲಿಲ್ಲ. ಕಾರಣ ದೇಶದ ಬೆನ್ನೆಲುಬಾಗಿ ನೆಹರೂ ದೃಢವಾಗಿ ನಿಂತಿದ್ದರು. ಅವರು ನಿಧನರಾದಾಗ ಭಾರತ ದುಃಖ ಸಾಗರದಲ್ಲಿ ಮುಳುಗಿ ಒಮ್ಮೆ ಭಯ ಭೀತರಾದರೂ; ಮುಂದೆ ಒಮ್ಮತದಿಂದ ಯೋಗ್ಯ ಮುಂದಾಳನ್ನೇ ಪಡೆಯಿತು.

ಆಗಲೇ ಆಹಾರ ಸಮಸ್ಯೆಯ ಭಯಾನಕ ರೂಪ ಬಾಯ್ದೆರೆದು ನಿಲ್ಲಬೇಕೆ? ಆ ಕರಾಳ ರೂಪವನ್ನು ಹತ್ತಿಕ್ಕಲು ಸರಕಾರಕ್ಕಿನ್ನೂ ಸಾಧ್ಯವಾಗಿಲ್ಲವೆನ್ನುವಾಗ ಜನತೆ ಹೌಹಾರುವುದೇನೂ ಆಶ್ಚರ್ಯವಲ್ಲ.

ಈಗಲೂ ಸರಕಾರ ಭರವಸೆ ನೀಡುತ್ತಿದೆ. ಭರವಸೆಯಿಂದಲೇ ಭಯ ನಿವಾರಣೆಯಾಗುವಂತಿದ್ದರೆ ಅದಕ್ಕೆನ್ನೂ ಯೋಚಿಸ ಬೇಕಾಗಿರಲಿಲ್ಲ. ಆದರೆ ಸರಕಾರದ ಭರವಸೆ ಕಾರ್ಯರೂಪಕ್ಕಿಳಿಯ ಬೇಕು. ನೇರವಾಗಿ ಬಡವನು ಜೀವಿಸುವಂತಾಗಬೇಕು.

ಎಲ್ಲವೂ ಆಗ ಬೇಕೆಂದಾಗಲೇ ಸರಿಗೊಳಿಸಲು ಸರಕಾರವೇನೂ ಮಂತ್ರವಾದಿಯಲ್ಲ. ಆದರೆ ಅದಕ್ಕೆ ಬೆಂಬಲಿಗರಾಗಿ ಅಧಿಕಾರಿ ವರ್ಗ ಹಾಗೂ ಜನತೆ ಇಬ್ಬರೂ ಒಮ್ಮತದ ಸಹಕಾರ ನೀಡಬೇಕು.

ಇದಕ್ಕೂ ಮೊದಲು ಯೋಚಿಸ ಬೇಕಾದ ವಿಚಾರವೊಂದಿದೆ. ಕೇವಲ ಆರೇ ಆರು ತಿಂಗಳಲ್ಲಿ ಒಮ್ಮೆಯೇ ಈ ಸಮಸ್ಯೆಯು ಗಗನಕ್ಕೇರಲು ಕಾರಣವೇನು? ಅದರ ಇತಿಹಾಸ ಎಲ್ಲಿ ಅಡಗಿದೆ? ಎಂಬುದು ಪ್ರಾಮುಖ್ಯವಾಗಿದೆ.

ಒಮ್ಮೆಯೇ ಜನಸಂಖ್ಯೆ ಏರಿತೆ? ಇಲ್ಲವೇ ಬೆಳೆಯೆಲ್ಲಾ ನಾಶವಾಯಿತೆ? ಇದಾವುದಕ್ಕೂ ಸರಿಯಾದ ಉತ್ತರ ಸಿಗಲಾರದು.

ಕೆಲ ಮಟ್ಟಿಗೆ ನಿರಾಶ್ರಿತರ ಆಗಮನವೆಂತಿದ್ದರೂ ಹೇಳುವಷ್ಟು ಸಮಂಜಸ ಉತ್ತರ ಆದಾಗಲಾರದು.

ಅದರ ಮೂಲಕಾರಣ ಇಂದು ಹಣದ ಬೆಳೆ ಹೆಚ್ಚಾಗಿದೆ. ಜೊತೆಗೆ ಕಳ್ಳ ಹಣ ಲೆಕ್ಕವಿಲ್ಲದಷ್ಟು ಹೆಚ್ಚಿದೆ. ಆ ಬಗ್ಗೆ ಈಗಾಗಲೇ ಸಾಕಷ್ಟು ತಪಾಸಣೆಗೆ ಸರಕಾರ ಕೈಯಿಕ್ಕಿದರೂ ಹೆಚ್ಚೇನೂ ಯಶಸ್ವಿಯಾಗಿಲ್ಲವೆಂದೇ ಹೇಳಬೇಕು.

ಅದನ್ನು ಕಂಡು ಹಿಡಿಯಲು ಹೊಸ ಉಪಾಯವನ್ನೇ ಯೋಚಿಸಬೇಕು. ಈಗಿರುವ ಬಳಕೆಯ ನಾಣ್ಯ ನೋಟುಗಳನ್ನೆಲ್ಲಾ ಹಿಂತೆಗೆದು ಕೊಂಡು; ಹೊಸ ಚಲಾವಣೆಯ ನಾಣ್ಯಗಳನ್ನು ಹೊರಡಿಸಬೇಕು.

ರೈತರಿಂದ ಪಡೆಯುವ ಅಕ್ಕಿ ಭತ್ತ ವ್ಯಾಪಾರದಲ್ಲಿ ವ್ಯಾಪಾರಿ ವರ್ಗದೊಡನೆ ಸರಕಾರವೆಂದೂ ಸೆಣಸಿಗಿಲ್ಲುವಂತಿಲ್ಲ. ಈಗಾಗಲೇ ಬೆಳೆದ ಬೆಳೆಯೆಲ್ಲಾ ವ್ಯಾಪಾರಿ ವರ್ಗದವರ ಕೈಸೇರಿದೆ. ಆದ್ದರಿಂದ ಜ್ಯಾರಿಯಲ್ಲಿರುವ ಅಕ್ಕಿ ಭತ್ತದ ಮೇಲಿರುವ ನಿಯಂತ್ರಣವನ್ನು ಒಮ್ಮೆ ಕೈಬಿಟ್ಟು ನೋಡಬಹುದು.

ಇಲ್ಲವೇ ಸರಕಾರ ಸಾಧ್ಯವಾದಷ್ಟು ಕಡಿಮೆ ಬೆಲೆಗೆ ಜನತೆಗೆ ಸಾಕಷ್ಟು ಆಹಾರ ಧಾನ್ಯ ಸಿಗುವ ಏರ್ಪಾಡು ತ್ವರಿತಗತಿಯಿಂದ ನಡೆಯಿಸಬೇಕು.

ಸರಕಾರ ಒದಗಿಸಿದಾಗಲೂ ಜನತೆಗೆ ಸರಿಯಾಗಿ ಸಿಗದ ಪರಿಸ್ಥಿತಿ ಆದೆಷ್ಟೋ ವೇಳೆ ಇರುತ್ತದೆ.

ಅದಕ್ಕೆ ಅಲ್ಲಿನ ರಾಜಕೀಯ ಮುಂದಾಳುಗಳು; ಇಲ್ಲವೇ ಅಧಿಕಾರಿ ವರ್ಗದ ಸ್ವಾರ್ಥ ಅಥವಾ ಅಲಕ್ಷ್ಯವೇ ಕಾರಣವಾಗಿರುತ್ತದೆ.

ಹಾಗೆಂದಾದರೂ ಸರಕಾರದ ಅವಗಾಹನೆಗೆ ಬಂದಲ್ಲಿ ಅವರ ಮೇಲೆ ನೇರವಾದ ಕಾರ್ಯಕ್ರಮ ಕೈಗೊಳ್ಳಲು ಸರಕಾರವೆಂದೂ ಹಿಂದೆಗೆಯಬಾರದು.

ಆಗಲಾದರೂ ಈ ಸಮಸ್ಯೆ ಬಗೆ ಹರಿಯಬಹುದೇ ಎಂದು ನೋಡಬಹುದು.

ಆಹಾರ ಸಮಸ್ಯೆ ಭೀಕರವಾಗಿರುವಾಗಲೇ ಭಾಷಾ ಸಮಸ್ಯೆಯೂ ಹೊಸ ರೂಪ ತಾಳಬೇಕೇ?

ಭಾಷೆಗಾಗಿ ಜನತೆ ಇಷ್ಟೊಂದು ಹಿಂಸಾಕೃತ್ಯಕ್ಕಿಳಿಯುವರೆಂದಾದರೆ ಆಶ್ಚರ್ಯವೇ ಸರಿ.

ಹಿಂದೆ ಭಾರತೀಯವಲ್ಲದ ಇಂಗ್ಲೀಷ್ ಭಾಷೆಯನ್ನೇ ನಾವು ಕಲಿತು ಬಂದಿಲ್ಲವೇ? ಇಂದು ಅದನ್ನು ಬಿಡಲಾರದಷ್ಟು ಅದಕ್ಕೆ ಅಂಟಿಕೊಂಡಿಲ್ಲವೇ?

'ಯಾವ ಸಮಸ್ಯೆಯನ್ನಾದರೂ ನಾವು ಅಹಿಂಸಾ ತತ್ವದಿಂದಲೇ ಬಗೆ ಹರಿಸಬೇಕು' ಇದು ಗಾಂಧೀಜಿಯವರ ವಾದ. ಅವರ ಆ ತತ್ವಬೋಧೆ ಅವರ ಹಿಂದೆಯೇ ಸಾಗಿತೇ?

ಒಂದು ಕಾಲದಲ್ಲಿ ಸೂರ್ಯಾಸ್ತಮಾನವಿಲ್ಲದ ದೇಶದಿಂದ ನಾವು ಸ್ವಾತಂತ್ರ್ಯವನ್ನು ಅಹಿಂಸಾತತ್ವದಿಂದಲೇ ಪಡೆದಿಲ್ಲವೇ?

ಯೇಸು; ಬುದ್ಧ; ಗಾಂಧಿ; ಅಹಿಂಸಾ ತತ್ವದಿಂದಲೇ ವಿಭೂತಿ ಪುರುಷರಾಗಲಿಲ್ಲವೇ?

ನಮ್ಮವರೇ ನಮ್ಮವರನ್ನು ಕೊಲ್ಲುವರೆಂದಾದರೆ ಇದು ರಾಮರಾಜ್ಯವಾದೀತೆ?

ಸತ್ಯ; ಧರ್ಮ; ನ್ಯಾಯ; ನೀತಿ ಬೆಳೆದು ನೈತಿಕ ಹಾದಿಯಲ್ಲಿ ಸಾಗಿದರೇನೇ ಅದು ಆದರ್ಶವಾದೀತು. ಬದಲು ಹಿಂಸೆಯಿಂದ; ದ್ವೇಶದಿಂದ ಯಾವದನ್ನೂ ಹತ್ತಿಕ್ಕಲು ಇಲ್ಲವೇ ಸಾಧಿಸಲು ಅಸಾಧ್ಯವೇ ಸರಿ.

ಇಂದು ಬಡವರ ಶೋಷಣೆ ನಡೆಯುತ್ತಿದೆ; ಲಂಚಗುಳಿತನ ಹಾಸು ಹೊಕ್ಕಾಗಿದೆ. ನಿಯಮೋಲ್ಲಂಘನೆ ಅವ್ಯಾಹತವಾಗಿ ಸಾಗುತ್ತಿದೆ.

ಮಹಾತ್ಮರು ಬಯಸಿದ ರಾಮರಾಜ್ಯ ಇದೆಂದಿಗೂ ಅಲ್ಲ.

ಇವಕ್ಕೆಲ್ಲಾ ಕಾರಣರಾರು? ರಾಜಕೀಯ ಪುಢಾರಿಗಳೇ? ಅಧಿಕಾರಿ ವರ್ಗವೇ? ಇಲ್ಲವೇ ಜನತೆಯೇ?

ತಪ್ಪುಗಳನ್ನು ಒಂದೆಡೆಯೇ ರೂಪಿಸುವಂತಿಲ್ಲವಾದರೂ ಎಲ್ಲೆಡೆಯೂ ಇದೆಯೆಂದೇ ಹೇಳಬೇಕು.

ಜನತೆಯು ಸಹಕರಿಸಬೇಕು. ರಾಜಕೀಯ ಮುಂದಾಳುಗಳು ನಿಸ್ವಾರ್ಥಿಗಳಾಗ ಬೇಕು. ಅಧಿಕಾರಿ ವರ್ಗ ಪ್ರಾಮಾಣಿಕತನದಿಂದ ಕಾರ್ಯತತ್ಪರರಾಗಬೇಕು. ಮುಖ್ಯವಾಗಿ ಇವೆಲ್ಲವೂ ನುಡಿಗಿಂತಲೂ ನಡೆಯಲ್ಲಿ ಕಂಡು ಬರಬೇಕು. ಆಗ ಖಂಡಿತ ನಮ್ಮ ದೇಶ ರಾಮರಾಜ್ಯವಾದೀತು. ಗಾಂಧೀಜಿಯ ಆತ್ಮಕ್ಕೆ ಶಾಂತಿ ಸಿಕ್ಕೀತು. ನೆಹರೂವಿನ ಆದರ್ಶ ಮತ್ತೆ ಬದುಕೀತು. ಭಾರತವು ತನ್ನ ಗುರಿಯನ್ನು ಮುಟ್ಟೀತು.

ಚುಟುಕಗಳು

ಪಂಚಾಯಿತಿ ರಾಜ್ಯ:

ತಂದರು ನಮ್ಮವರು ಪಂಚಾಯಿತಿ ರಾಜ್ಯ!
ಅದರಿಂದ ಹುಟ್ಟಿತು ರಾಜಕೀಯ ವ್ಯಾಜ್ಯ!
ಅದು ಮಾತ್ರ ತರಲಿಲ್ಲ ರಾಮರಾಜ್ಯ!
ಯಾಕೆಂದು ಕೇಳಿದರೆ ಅದು ಮಾತ್ರ ಪೂಜ್ಯ!

ಸಕ್ಕರೆ ಹಂಚಿಕೆ:

ತೋರಿದರು ಸಕ್ಕರೆಯ ಹಂಚಿಕೆಯನೆಲ್ಲ!
ಸುತ್ತಿದರು ಹತ್ತಿಳ್ಳ ಅವನೇನು ಬಲ್ಲ!
ತಿಂಗಳಾದಾಗಲೇ ಮೂಟೆಗಳು ಮೆಲ್ಲ
ಕಾಲಕಿತ್ತವು ಕಾಳ ಸಂತೆಗೆಲ್ಲ ||



ಪೆಪ್ಪರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ
ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿ ಪಟ್ಟಿವೆ

NOTICE

IN THE COURT OF THE CIVIL JUDGE OF MANGALORE, SOUTH KANARA.

R.E.P. No. 46 of 1963.
In O. S No. 96 of 1959.

Between:-

The Vijaya Bank Ltd., Mangalore } *Petitioner.*

And

T.S Abdul Rahiman Saheb and others } *Respondents.*

Notice to Respondents:—

R. 2 T. S.Mohammed Hussain, C/o S. M. Kassim, Advocate, Davangerai, (Mysore State). R. 4 Shek Sulaiman Saheb, Post: Kodi Bengre, Udipi Taluk, South Kanara District.

Please take notice that the above application filed by the petitioner for recovery of Decree amount by sale of the right title and interest of the Respondents in the properties mentioned in the petition (Properties situated in Kodi village of Udipi Taluk) stands posted for your appearance on 22—3—1965. Therefore you are required to appear before the court on the said date of hearing if you have any objection for the sale of the said properties failing which the pr[illegible] will be sold ex parte.

/ By order of the Court /

B.M. Hegde,
Advocate for Petitioner.

Mangalore, 22—2—1965.

ಪ್ರಚಲಿತ ಪ್ರಸಂಗ

ಶಿವ ಶಿವಾ - ಕಾಯುವನೇ ಶಿವ?

ಬರೆದವರು. ಶ್ರೀ ಶಿವಶಂಕರ

ಕೆಲವು ವರ್ಷಗಳ ಹಿಂದೆ ನಡೆದ ಘಟನೆ. ಅದು ವ್ಯಕ್ತಿಯ ಜೀವನದಲ್ಲಿ ಮಹತ್ತರ ಬದಲಾವಣೆ ಉಂಟುಮಾಡಿತ್ತು. ಸಂಪ್ರದಾಯವಾದಿ ಬ್ರಾಹ್ಮಣನ ಮಗನ ತೋರಿಕೆಯ ಸಂಪ್ರದಾಯವನ್ನು ಅಂದಿನಿಂದ ಖಂಡಿಸಲಾರಂಭಿಸಿದನು. ಅಂದು ಶಿವ, ಶಿವಾ ಎಂದು ಜಾಗರಣೆಯಿಂದ ಶಿವಲಿಂಗವನ್ನೇ ನೋಡುತ್ತಿದ್ದನು ಆ ಬಾಲಕನು. ಶಿವಲಿಂಗದ ಮೇಲೆ ಒಂದು ಇಲಿ ಹೋಯಿತು. ಅದುವರೆಗೆ ಬಾಲಕನಲ್ಲಿದ್ದ ನಂಬಿಕೆಯ ಮಂಜು ಆಗ ಕರಗಿ ನೀರಾಯಿತು. ತನ್ನನ್ನು ಕಾಯ್ದುಕೊಳ್ಳಲಾರದ ಶಿವ (ಲಿಂಗ) ಸರ್ವ ಜಗತ್ತನ್ನು ಕಾಯ್ವುದುಂಟೇ? ಮೂರ್ತಿ ಪೂಜೆ ತ್ಯಾಜ್ಯವೆಂದು ಆ ಬಾಲಕನು ಅಲ್ಲಿಂದ ಹೊರಟನು. ಆತನು ಸನ್ಯಾಸಿಯಾದನು. ದೊಡ್ಡ ಕ್ರಾಂತಿಯನ್ನೆಬ್ಬಿಸಿದನು. ಕ್ರಾಂತಿಯ ಕಿಡಿ ಭಾರತದಲ್ಲೆಲ್ಲಾ ಹಬ್ಬಿತು. (ಇಂದಿನ ಭಾಷಾ ಬಡಿದಾಟದಲ್ಲಿ ಆ ಕಿಡಿ ಕಂಡುಬರುತ್ತಿದೆ?) ಆ ಕಿಡಿಯೇ ಆರ್ಯ ಸಮಾಜ. ಅದನ್ನು ಸ್ಥಾಪಿಸಿದವರೇ ಶ್ರೀ ದಯಾನಂದ ಸರಸ್ವತಿ. ಆ ಬಾಲಕನನ್ನು ದಯಾನಂದನನ್ನಾಗಿ ಮಾಡಿದ ದಿನವೇ ಮಹಾಶಿವರಾತ್ರಿ.

ದಯಾನಂದ ಸರಸ್ವತಿಯವರು ಮೂರ್ತಿ ಪೂಜೆಯನ್ನು ಖಂಡಿಸಿದವರು. ಅದೇ ಕಾಲದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಹೆಸರು ಭಾರತದಲ್ಲಿ ಪ್ರಖ್ಯಾತವಾಗಿತ್ತು. ಋಷಿ ದಯಾನಂದರು ರಾಮಕೃಷ್ಣ ಪರಮಹಂಸರ ದರ್ಶನ ಪಡೆದಾಗ ಸಾಷ್ಟಾಂಗ ನಮಸ್ಕಾರ ಮಾಡಿದರು. ರಾಮಕೃಷ್ಣ ಪರಮಹಂಸರೋ ದಯಾನಂದರ ಹಾಗೆ ಜ್ವಾಲಾಮುಖಿಯಲ್ಲ. ನಿಜವಾಗಿ ಅವರು ದಯಾಸಾಗರರಾಗಿದ್ದರು. ಅವರು ತರ್ಕ-ವಿತರ್ಕ-ಕುತರ್ಕಗಳಲ್ಲಿ ಕಾಲಕಳೆದವರಲ್ಲ. ಜಗಜ್ಜನನಿ ಕಾಳಿಕಾಂಬೆಯ ಮೂರ್ತಿಯ ಪೂಜಕರಾಗಿದ್ದರು. ಅದರಲ್ಲಿ ಆದಿಸಿಕೂ ತಪ್ಪಿಲ್ಲವೆಂದು ಅವರು ಪೂಜಿಸುತ್ತಿದ್ದರು.

ಮೂರ್ತಿ ಪೂಜೆಯನ್ನು ಖಂಡಿಸುವವರು ಮೂರ್ತಿ ಪೂಜೆಯನ್ನು ಮಾಡುವವರ ಕಾಲು ಮುಟ್ಟಿದರೆ ಅವರ ಸೋಲನ್ನೊಪ್ಪಿದರೆನ್ನಬಹುದೇ? ಅದು ಅವರಲ್ಲಿರುವ ಮಹಾನ್ ಗುಣದ ಪ್ರಕಟಣೆಯಾಗಿಯೂ ಇರಬಹುದು. ಮೂರ್ತಿ ಪೂಜೆ ತಪ್ಪೋ ಸರಿಯೋ ಇದೀಗ ಬೇಕಾಗಿರುವ ವಿಷಯವಲ್ಲ. ಇಂದಿನ ಪರಿಸ್ಥಿತಿಯಲ್ಲಿ ಈ ಘಟನೆ ನಮಗೇನು ಕಲಿಸುತ್ತದೆನ್ನುವದೇ ಮುಖ್ಯ ವಿಷಯ.

ಶಿವನಿಗೆ ಸ್ಥಾನ ಭಾರತದ ಉತ್ತರದಲ್ಲಿರುವ ಹಿಮಾಲಯದ ತಪ್ಪಲಿನಲ್ಲಿರುವ ಕೈಲಾಸದಲ್ಲಿ. ಅವನಿಗೆ ಮಾವನ ಮನೆಯೂ ಹಿಮಾಲಯವೇ ಇದೆ. ಗಿರಿಜೆಯನ್ನು ಹೊಂದಿ ಅವನಲ್ಲಿ ಗಿರಿಜಾಶಂಕರನಾಗಿರುವನು. ಮಹಾಭಾರತದ ಸಮಯ ಅರ್ಜುನನು ಅಲ್ಲಿಗೆ ಹೋಗಿ ಪಾಶುಪತಾಸ್ತ್ರವನ್ನು ತಂದಿದ್ದನು (ಹಿಮಾಲಯದ ಕುರಿತು ಲೇಖನ ಆದಾಗಲೇ "ನವಯುಗ"ದಲ್ಲಿ ಪ್ರಕಟವಾಗಿರುತ್ತದೆ.)

ಕೆಲವು ವರ್ಷಗಳ ಹಿಂದೆ ಆ ಹಿಮಾಲಯದ ಶಾಂತಿಗೆ ಕಮ್ಯೂನಿಸ್ಟ್ ಚೈನೀಯರು ಭಂಗ ತಂದಿದ್ದಾರೆ. ಕೈಲಾಸವನ್ನು ಅವರು ತಮ್ಮ ಕೈಯಲ್ಲಿಟ್ಟುಕೊಂಡಿದ್ದಾರೆ! ಶಿವರಾತ್ರಿಯ ಸಮಯ ಜಾಗರಣೆ ಮಾಡಿ ಬೆಳಗ್ಗೆ ಇಂದು ಎದ್ದೊಡನೆ ಈ ಘಟನೆ ನಡೆದಿರುವದಲ್ಲ. ಕೆಲವು ವರ್ಷಗಳ ಹಿಂದೆಯೇ ನಡೆದಿರುತ್ತದೆ. ಇಂದು ಅದನ್ನು ಎತ್ತಿ ಹೇಳಲು ಕಾರಣವೇನು?

ಚೈನಿ ಕಮ್ಯೂನಿಸ್ಟರು ಆಕ್ರಮಣ ನಡೆಸಿದಾಗ ಆಗಿನ ಭಾರತದ ಪ್ರಧಾನಿಯವರು, "ಒಂದು ಸಮಾಜವಾದಿ ಅಥವಾ ಸೋಷ್ಯಾಲಿಸ್ಟ್ ರಾಷ್ಟ್ರ ಇನ್ನೊಂದು ಸಮಾಜವಾದಿ ಅಲ್ಲದೆ ಸಮಾಜವಾದ ಮಾದರಿ ರಾಷ್ಟ್ರದ ಮೇಲೆ ಆಕ್ರಮಣ ನಡೆಸಲಾರದು". ಹೀಗೆ ಏನೇನೋ ಹೇಳುತ್ತಿದ್ದು ಕೊನೆಗೂ ಒಪ್ಪಿಕೊಳ್ಳಬೇಕಾಯಿತು. ಕಾಯಿಲೆ ಬಂದಾಗ ನನಗೆ ಅಂತಹ ಕಾಯಿಲೆ ಬರುತ್ತದೆನ್ನುತ್ತ ಜಬರದಸ್ತಿನಿಂದ ಇರುವವನಿದ್ದರೆ ಕಾಯಿಲೆ ಉಲ್ಬಣಾವಸ್ಥೆಗೆ ಮುಟ್ಟಿದಾಗ ಅವರು "ಅಯ್ಯಪ್ಪ"ಎಂದು ಅಲ್ಲೇ ಬಿದ್ದು ಬಿಡುತ್ತಾರೆ ಹಾಗೆಯೇ ಆಗಿತ್ತು ನಮ್ಮ ಪರಿಸ್ಥಿತಿ "ನಾನೂ ನಂಬಿದ್ದೇನೆ, ಹಾಗಾಗಿ ಮೋಸ ಹೋದೆನೆಂ"ದು ಶ್ರೀ ಜವಾಹರಲಾಲ ನೆಹ್ರೂಜೀ ನುಡಿದರು. ಯಾರು ಮೋಸ ಹೋದದ್ದೋ, ಅಂತೂ ಆಕ್ರಮಣ ನಡೆದೇ ಹೋಯಿತು. ಬ್ರಿಟಿಷರ ಬೂಟುಗಾಲಿನಡಿಯಲ್ಲಿದ್ದ ಪ್ರದೇಶ ಚೈನೀಯರ ಬೂಟುಗಾಲಿನಡಿಗೆ ಹೋಯಿತು! ಆ ರೀತಿ ತಪ್ಪು ತಪ್ಪು ಏನೇನೋ ಹೇಳುತ್ತಿದ್ದ ಪ್ರಧಾನಿಯವರಾಗಲೀ, ರಕ್ಷಣಾ ಮಂತ್ರಿಯವರಾಗಲೀ ಆ ಸ್ಥಾನಗಳಲ್ಲಿ ಇಲ್ಲ. ಅಲ್ಲಿ ಹೊರಬಿದ್ದಾರೆ. ಅವರಾದರೂ ಸಾಕ್ಷತ್ ಶ್ರಮ ಕೈಗೊಂಡಿರುವರೇ? ಅವರು ಮಾತಿನ ಗಂಡು ಹೊಡೆಯುತ್ತಿದ್ದಾರೆ ಮತ್ತು ತಮ್ಮ ತಮ್ಮ ಸ್ಥಾನಗಳ ಭದ್ರತೆಗಾಗಿ ಹೋರಾಡುತ್ತಿದ್ದಾರೆ! ಇದು ಯಾವ ರಾಷ್ಟ್ರಕ್ಕೂ, ಪ್ರಜೆಗೂ ಹೆಮ್ಮೆಯ ವಿಷಯವಲ್ಲ. ಆದರೂ ಇದು ಇಂದಿನ ನೈಜ ಚಿತ್ರವಿದೆ. ಅತ್ತ ಆಕ್ರಮಣಗಾರರು ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ, ಭಾರತದೊಳಗಿರುವ ಅವರ ಬಂಧುಗಳಿಂದ ಪಚ್ಚೆ ಗುರುತಿಗಾಗಿ ಕಾಯುತ್ತಿದ್ದಾರೆ. ಗೃಹ ಮಂತ್ರಿ ಶ್ರೀ ನಂದಾರವರು ಇತ್ತೀಚೆಗೆ ಹೊರಗೆಡವಿರುವ ವಿಷಯಗಳು ಈ ಮಾತಿಗೆ ಸಾಕ್ಷಿಯನ್ನೀಯುತ್ತವೆ. ಒಟ್ಟಿನಲ್ಲಿ ಆಕ್ರಮಣ ನಡೆದ ಅಂದಿನ ದುರ್ದಿನಕ್ಕಿಂತಲೂ ಇಂದಿನ ದುರ್ದಿನ ಬಹಳ ಭೀಕರವಿದೆ.

ಉತ್ತರದಲ್ಲಿ ಆಕ್ರಮಣ ನಡೆಸಿರುವವರಿಗೆ ಪಚ್ಚೆ ಗುರುತು ತೋರಿಸಲಿಕ್ಕಾಗಿ ಇಲ್ಲಿಯ ಕಮ್ಯೂನಿಸ್ಟರು ಹಲವಾರು ವೇಷಗಳನ್ನು ಹಾಕುತ್ತಿದ್ದಾರೆ. ಹಿಂದೆ, ಭಾರತಕ್ಕೆ ವ್ಯವಹಾರಿಕ ಭಾಷೆಯನ್ನಾಗಿ ಹಿಂದಿಯನ್ನು ಉಪಯೋಗಿಸಬೇಕೆಂದು ಹೆಚ್ಚು ಜನರು ಹೇಳುತ್ತಿದ್ದಾಗ ಅವರೂ ಭಾರತದ ವ್ಯಾವಹಾರಿಕ ಭಾಷೆ ಹಿಂದಿಯೆಂದು ಘೋಷಿಸಿದರು. ಅದಕ್ಕೆ ಕಾರಣವಿಷ್ಟೇ ಇದೆ. ಜಗದ್ವಿಖ್ಯಾತ ಜವಾಹರಲಾಲ ನೆಹ್ರೂಜೀಯವರ ಸಹೋದರಿ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರ ರಾಯಭಾರಿ(ಣಿ)ಯಾಗಿ ರಷ್ಯಾದಲ್ಲಿ ಅಧಿಕಾರ ಪತ್ರಗಳನ್ನು ಸಲ್ಲಿಸಿದಾಗ ಸ್ಟಾಲಿನ್ ಅದನ್ನು ಎಸೆದು ಬಿಟ್ಟರಂತೆ. ಕಾರಣ, ಅಧಿಕಾರ ಪತ್ರ ವಗೈರೆ ಆಂಗ್ಲೇಯ ಭಾಷೆಯಲ್ಲಿತ್ತು "ನಾವು ಆಂಗ್ಲೇಯರ ದಾಸ್ಯದಲ್ಲಿರುವ ಇಂಡಿಯಾದ ರಾಯಭಾರಿಗೆ ಸ್ವಾಗತವೀಯುತ್ತಿರುವದಲ್ಲ, ಸ್ವತಂತ್ರ ರಾಷ್ಟ್ರ ಭಾರತದ ರಾಯಭಾರಿಗೆ ಸುಸ್ವಾಗತವನ್ನೀಯುವದಕ್ಕಾಗಿ ಇದ್ದೇವೆ"ಎಂದು ಅವರು ಅಂದರಂತೆ. ಅನಂತರ ಹಿಂದಿ ಭಾಷೆಯಲ್ಲಿ ಬರೆದಿದ್ದ ಪತ್ರಗಳನ್ನು ತೋರಿಸಿದಾಗ ಅವರು ಒಪ್ಪಿಕೊಂಡರು...ಹಾಗಿರುವಾಗ ಇಲ್ಲಿಯ ಕಮ್ಯೂನಿಸ್ಟರು ಸ್ವರ ಎತ್ತುವ ಹಾಗೆ ಇರಲಿಲ್ಲ. ಅದು ಅವರ ಮೂಲ ಧೋರಣೆಗೆ ಅಥವಾ "ಸ್ಟಾಲಿನ್ ಬರೆದಿರುವ ರಾಷ್ಟ್ರ"ಕ್ಕೆ ವಿರುದ್ಧವಾಗಿದ್ದಿರಬಹುದು. ಆದರೆ ರಷ್ಯಾದಲ್ಲಿ ನಡೆದುದಾದರೂ ಏನು? ಅಲ್ಲಿ ಹಲವಾರು ಭಾಷೆಗಳಿವೆಯಾದರೂ ಅವೆಲ್ಲಕ್ಕೂ ಆಶ್ರಯವನ್ನಿತ್ತು ರಷ್ಯ ಭಾಷೆಯನ್ನು ಮುಖ್ಯ ಭಾಷೆಯನ್ನಾಗಿ ಅಥವಾ ಆಡಳಿತ ಭಾಷೆಯನ್ನಾಗಿ ಅವರು ಮಾಡಿಕೊಂಡಿದ್ದಾರೆ ಭಾರತದ ಪರಿಸ್ಥಿತಿಯೂ ಇದೇ. ಆದರೆ ಆಡಳಿತ ಭಾಷೆಗಾಗಿ, ರಷ್ಯಾದಲ್ಲಿ ನಡೆದಿರುವಂತೆ, ಇತರ ಭಾಷೆಗಳನ್ನು ಬಗ್ಗು ಬಡೆಯಲು ಭಾರತ ಸಿದ್ಧವಿಲ್ಲ. ಯಾಕೆಂದರೆ ಅವೆಲ್ಲವೂ ಭಾರತೀಯ ಭಾಷೆಗಳೇ ಇವೆ. ತಮ್ಮ ಭಾಷೆಯನ್ನು ತಾವೇ ಎಲ್ಲಾದರೂ ಎದುರಿಸುವದುಂಟೇ? (ಇಂದಿನ ಘಟನೆಗಳು ಅದಕ್ಕೆ ಅಪವಾದ!) ರಷ್ಯಾದತ್ತವೇ ಎಲ್ಲದಕ್ಕೂ ನೋಡುತ್ತಿದ್ದ ಕಮ್ಯೂನಿಸ್ಟರು ಅಂದು ಗಮ್ಮನೆ ಇದ್ದರು. ಇಂದು ಅವರು ಎರಡು ಮುಖಗಳಿಂದ ಮಾತಾಡಲಾರಂಭಿಸಿದ್ದಾರೆ. ಸ| ಶ್ರೀ ಸಿ. ಸುಬ್ರಹ್ಮಣ್ಯಂ, ಅಲಗೇಶನ್ ಮುಂತಾದವರೇ ಎಡವಿ ಬೀಳುತ್ತಿರುವಾಗ ಕಮ್ಯೂನಿಸ್ಟರ ಪಾತ್ರ ಮಹತ್ವದ್ದಲ್ಲವೆಂದು ಕೆಲವರು ಹೇಳಬಹುದು. ಸ| ಶ್ರೀ ಸಿ. ಸುಬ್ರಹ್ಮಣ್ಯಂ ಹಾಗೂ ಅಲಗೇಶನ್ ಕೇವಲ ಯಜ್ಞ ಪಶುಗಳೇ ಇರಬಹುದು, ಯಾಕೆಂದರೆ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರು ಆ ಎರಡು ಪಾತ್ರಧಾರಿಗಳಿಂದ ಒಂದು ನಾಟಕವನ್ನು ಆಡಿಸಿರಬಹುದು. ಆದರೆ ಉಳಿದವರ ವಿಷಯ ಹಾಗಲ್ಲ. ಹಿಂದಿಯನ್ನು ವ್ಯಾವಹಾರಿಕ ಭಾಷೆಯನ್ನಾಗಿ ಒಪ್ಪಿಕೊಂಡು ಘಟನೆಯಲ್ಲಿ ಸಮಯ ವಗೈರೆ ನಮೂದಿಸಿದವರು ಕಾಂಗ್ರೆಸ್ಸಿಗರಿದ್ದಾರೆ. ಅವರ ಪಾತ್ರ ಅಲ್ಪವೇನಲ್ಲ. ಆದರೆ ಇಂದು ಆ ಪಕ್ಷದ ಸದಸ್ಯರೇ ಹೊಡೆದಾಡಿಕೊಳ್ಳುತ್ತಿದ್ದಾರೆ ಅದರ ಅಧ್ಯಕ್ಷರು

(ಹತ್ತನೇ ಪುಟ ನೋಡಿರಿ)

ನಿಮ್ಮ ಹಣ ಹೆಚ್ಚು ಶೀಘ್ರವಾಗಿ ಬೆಳೆಯಲು

ಇನ್ನೂ ಹೆಚ್ಚು ಆಕರ್ಷಕವಾದ ಬಡ್ಡಿ ದರಗಳು

ಶೇ. $7\frac{1}{2}$ ಫಿಕ್ಸೆಡ್ ಡಿಪಾಸಿಟ್ಟುಗಳ ಮೇಲೆ

ಶೇ. 4 ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ಟುಗಳ ಮೇಲೆ

ನಿಮ್ಮ ಫಿಕ್ಸೆಡ್ ಡಿಪಾಸಿಟ್ಟುಗಳ ಮೇಲೆ ವರ್ಷಕ್ಕೆ ಶೇ $7\frac{1}{2}$ಯ ವರೆಗೂ, ನಿಮ್ಮ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ಟುಗಳ ಮೇಲೆ ವರ್ಷಕ್ಕೆ ಶೇ 4ರ ವರೆಗೂ ಹೆಚ್ಚಿಸಿದ ಬಡ್ಡಿ ದರಗಳನ್ನು ನೀಡುತ್ತೇವೆಂದು ತಿಳಿಸಲು ನಾವು ಹರ್ಷಿಸುತ್ತೇವೆ

ವಿವರಗಳಿಗೆ ಇಂದೇ ನಿಮ್ಮ ಸಮೀಪದಲ್ಲಿನ ನಮ್ಮ ಬ್ರ್ಯಾಂಚ್ ಮ್ಯಾನೇಜರರನ್ನು ಕಂಡು ವ್ಯವಹರಿಸಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ : 1906)

ಆಡಳಿತ ಕಚೇರಿ : ಬೆಂಗಳೂರು — ರಿಜಿಸ್ಟರ್ಡ್ ಆಫೀಸ್ : ಮಂಗಳೂರು

ವಿಶ್ವದಾದ್ಯಂತ ಪ್ರತಿನಿಧಿಗಳು

ಭಾರತದಲ್ಲಿ 235ಕ್ಕೂ ಹೆಚ್ಚು ಶಾಖೆಗಳು

ಜನತೆಯ ಸೇವಕನಿಗೆ

ನಾಯಕರನ್ನು ಸೃಷ್ಟಿಸುವ ನವನಾಯಕ

ಫೆಬ್ರವರಿ ತಿಂಗಳ ೨೮ನೇ ತಾರೀಕಿನ ರವಿವಾರ ಸಂಜೆ ಮಂಗಳೂರಿನ 'ಟೌನ್ ಹಾಲ್'ನಲ್ಲಿ ಜಿಲ್ಲೆಯ ಸುಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತ ಶ್ರೀ ಕಟಪಾಡಿ ಕಾಂತಪ್ಪ ಶೆಟ್ಟಿಯವರಿಗೆ ಸನ್ಮಾನ ಮಾಡುವ ಸಮಾರಂಭವು ಚೇತೋಹಾರಿಯಾಗಿ ಜರಗಿತು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಕಾಂಗ್ರೆಸ್ ಕಾರ್ಯಕರ್ತರನೇಕರು ಈ ಸಮಾರಂಭದಲ್ಲಿ ಭಾಗವಹಿಸಿ, ಶ್ರೀ ಶೆಟ್ಟಿಯವರ ಮೇಲೆ ತಮಗಿರುವ ಆದರ, ಅಭಿಮಾನ ಹಾಗೂ ವಿಶ್ವಾಸಗಳನ್ನು ವ್ಯಕ್ತಪಡಿಸಿದರು.

ಕಾಂಗ್ರೆಸಿನ ಶಕ್ತಿಯಾದ ಶ್ರೀ ಶೆಟ್ಟರನ್ನು ಸನ್ಮಾನಿಸುವ ಈ ಸಮಾರಂಭದ ಅಧ್ಯಕ್ಷತೆಯನ್ನು ನಮ್ಮ ರಾಜ್ಯದ ಆರೋಗ್ಯ ಮಂತ್ರಿಗಳಾದ ಡಾ। ಕೆ. ನಾಗಪ್ಪ ಆಳ್ವರು ವಹಿಸಿದ್ದರು. ಶ್ರೀಮತಿ ಲೀಲಾವತಿ ಬ್ಯಾ ಬಾಳಿಗರಿಂದ "ವಂದೇ ಮಾತರಂ" ಗೀತೆ ಹಾಡಲ್ಪಟ್ಟು ಸಮಾರಂಭಕ್ಕೆ ನಾಂದಿ ಹಾಕಲ್ಪಟ್ಟಿತು. ನೆರೆದ ಸಭಿಕರನ್ನು ಸನ್ಮಾನ ಸಮಿತಿಯ ಉಪಾಧ್ಯಕ್ಷರಲ್ಲೊಬ್ಬರಾದ ಶ್ರೀ. ಸಿ. ಎಸ್. ತಿಮ್ಮಪ್ಪ ಶೆಟ್ಟಿಯವರು ಸ್ವಾಗತಿಸಿದರು. ಡಾ। ಕೆ. ಬಾಳಪ್ಪ ಶೆಟ್ಟರು ಈ ಶುಭ ಸಮಾರಂಭಕ್ಕೆ ಶುಭ ಕೋರಿ ಬಂದ ಸಂದೇಶಗಳ ವಾಚನ ಮಾಡಿದರು.

ನಂತರ ರಾಜ್ಯದ ಗೃಹಮಂತ್ರಿ ಶ್ರೀ ಆರ್. ಎಂ. ಪಾಟೀಲರು ಶ್ರೀ ಕೆ. ಕೆ. ಶೆಟ್ಟರ ಛಾಯಾ ಚಿತ್ರದ ಅನಾವರಣವನ್ನು ಮಾಡುತ್ತಾ, ಶ್ರೀ ಶೆಟ್ಟರಂತಹ ನಿಷ್ಠಾವಂತ ಕಾರ್ಯಕರ್ತರನ್ನು ಗೌರವಿಸುವುದೆಂದರೆ ನಮ್ಮನ್ನು ನಾವು ಗೌರವಿಸಿಕೊಂಡಂತೆ ಎಂದು ಹೇಳಿ, ಇಂದು ದೇಶದ ಶಕ್ತಿಯಾಗಿರುವ ಕಾಂಗ್ರೆಸ್ ಸಂಸ್ಥೆಗೆ ಶ್ರೀ ಶೆಟ್ಟರಂತಹ ನಿಷ್ಠಾವಂತ ಹಾಗೂ ನಿಸ್ವಾರ್ಥಿ ಕಾರ್ಯಕರ್ತರ ಆವಶ್ಯಕತೆ ಹೆಚ್ಚಿದೆ ಎಂದರು. ಶ್ರೀ॥ ಶೆಟ್ಟರು ಕಟ್ಟೆಸಿಟ್ಟಿದ್ದ ಘೋಷಣೆ ವಹಿಸುವ ಸದಾಕ್ಷಿಣ್ಯ ವ್ಯಕ್ತಿಯೆಂದು ತಿಳಿಸಿ, ರಾಜ್ಯದ ಕಲ್ಯಾಣದಂತಹ ಮಹಾಯಜ್ಞದ ಯಶಸ್ಸಿಗೆ ಅವರಂತಹ ಜನತಾ ಸೇವಕರು ಇನ್ನೂ ಹೆಚ್ಚಾಗಿ ಹುಟ್ಟಬೇಕು ಎಂದರು.

ಶ್ರೀ॥ ಶೆಟ್ಟರಿಗೆ ಜಿಲ್ಲೆಯ ಮೂಲೆ ಮೂಲೆಗಳ ಹಲವಾರು ಸಂಘ ಸಂಸ್ಥೆಗಳ ಪರವಾಗಿ ಹಾರಾರ್ಪಣೆ ಮಾಡಲಾಯಿತು. ಆ ಬಳಿಕ ಅವರಿಗೆ ಸಮಿತಿಯ ಪರವಾಗಿ ಮಾನಪತ್ರವನ್ನು ಶ್ರೀ॥ ಕೆ. ವಿಠಲದಾಸ ಶೆಟ್ಟರು ಓದಿ ಅರ್ಪಿಸಿದರು.

ನಂತರ ಶ್ರೀ॥ ಶೆಟ್ಟರ ಬಹುಮುಖ ಕಾರ್ಯಪ್ರತಿಭೆ, ವ್ಯಕ್ತಿತ್ವ, ಸೇವಾ ಭಾವನೆ ಹಾಗೂ ಜಿಲ್ಲೆಯಲ್ಲಿ ಕಾಂಗ್ರೆಸನ್ನು ಭದ್ರವಾಗಿ ಬೇರೂರುವಂತೆ ಮಾಡುವಲ್ಲಿ ಅವರು ಮಾಡಿರುವ ತ್ಯಾಗ, ಸಾಹಸಗಳ ಕಥೆಯನ್ನು ಅವರ ಅಭಿಮಾನಿಗಳಾದ ಸಭಿಕರನೇಕರು ರಮ್ಯವಾಗಿ ಉಲ್ಲೇಖಿಸಿ, ಅವರಿಗೆ ಶುಭಕಾಮನೆಗಳನ್ನರ್ಪಿಸಿದರು.

ಭಾರತದ ಆಹಾರ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ॥ ಟಿ. ಎ. ಪೈಯವರು ಮಾತನಾಡುತ್ತಾ ಶ್ರೀ॥ ಶೆಟ್ಟರು ನಾಯಕರನ್ನು ಸೃಷ್ಟಿಸುವ ಶ್ರೇಷ್ಠ ನಾಯಕರು; ಸ್ಥಾನಮಾನ, ಅಧಿಕಾರ ಪದವಿಗಳಿಗಾಗಿ ಹಾರೈಸದ ನಿಷ್ಠಾವಂತ ಕಾಂಗ್ರೆಸ್ ಸೇವಕರು; ತನ್ನ ಅಧಿಕಾರವನ್ನು ಯುವಕರಿಗೆ ಸ್ವಸಂತೋಷದಿಂದ ಬಿಟ್ಟುಕೊಟ್ಟ ಆದರ್ಶ ನಾಯಕರೆಂದು ಹೇಳಿ, ಅವರು ಈ ಜಿಲ್ಲೆಯಲ್ಲಿ ಕಾಂಗ್ರೆಸ್ ಉಳಿಯುವಂತೆ ಮಾಡಿದ ಏಕಮಾತ್ರ ವ್ಯಕ್ತಿ ಎಂದು ಹೇಳಿದರು.

ಶ್ರೀ ಎಂ. ಗೋವರ್ಧನ ರಾವ್, ಎಂ. ಎಲ್. ಸಿ. ಇವರು ತಮ್ಮ ಸ್ಫೂರ್ತಿಯುತ ಭಾಷಣದಲ್ಲಿ ಶ್ರೀ ಶೆಟ್ಟರು ಗಂಡೆದೆಯ ಗಂಡು, ಸ್ವಾತಂತ್ರ್ಯ ಹೋರಾಟದ ಧೀರ ಸೇನಾನಿ ಎಂದು ಹೇಳಿ, ೧೯ ಮತ್ತು ೨೦ನೇ ಶತಮಾನಗಳ ಸಂಗಮವಾಗಿರುವ ಶ್ರೀ ಶೆಟ್ಟರ ವ್ಯಕ್ತಿತ್ವ ಬಹು ಬಗೆಯದು. ಅವರು ರಾಜಕೀಯ, ಸಾಹಿತ್ಯ, ಚಳವಳಿ, ಹರಿಜನೋದ್ಧಾರ, ಸ್ವಾತಂತ್ರ್ಯ ಹೋರಾಟ, ಖಾದೀ ಪ್ರಚಾರದಲ್ಲಿ ದುಡಿದ ದೇಶಭಕ್ತ ಎಂದು ಹೇಳಿದರು.

ಶ್ರೀ ಬಿ. ಎಂ. ಇದಿನಬ್ಬರು ಶ್ರೀ ಶೆಟ್ಟರು ಜಾತೀಯ ಕಲಹ, ಗುಂಪು ರಾಜಕೀಯಗಳನ್ನು ನಿರ್ಮೂಲನಗೊಳಿಸುವಲ್ಲಿ ವಹಿಸಿದ ಮಹತ್ತರ ಪಾತ್ರವನ್ನು ವಿವರಿಸಿ, ಅವರ ಲೇಖನಿ ಖಡ್ಗಕ್ಕಿಂತ ಹರಿತವಾದುದು, ಸಮಾಜದ ಹೊಲಸನ್ನು ತೊಳೆಯುವಂತಹುದೆಂದರು. ಅನ್ಯಾಯ ಅತ್ಯಾಚಾರಗಳನ್ನು ಮೆಟ್ಟಿ ನಿಂತ ಜಗಜಟ್ಟಿ ಶ್ರೀ ಕೆ. ಕೆ. ಶೆಟ್ಟರೆಂದು ಕೊಂಡಾಡಿ ಅವರ ಕುರಿತು ತಾನು ಬರೆದ ಕವನವೊಂದನ್ನು ಹಾಡಿದರು.

ಬಳಿಕ ಶ್ರೀ ಕ್ಲಾಡ ಡಿ ಸೋಜ, ಶೇಖರ ರಾವ್, ಮಣೇಲ್ ಶ್ರೀನಿವಾಸ ನಾಯಕ್, ಎಸ್. ನರಸಪ್ಪಯ್ಯ, ಎಂ.ಎಲ್. ಸಿ., ಕೆ. ದೂಮಪ್ಪ ಹಾಗೂ ಶ್ರೀಮತಿ ಲಕ್ಷ್ಮೀದೇವಿ ಆಲ್ಬುಕರ್ಕ್ ಇವರು ಮಾತನಾಡಿ ಶ್ರೀ ಶೆಟ್ಟರ ಜೀವನದ ಆದರ್ಶಗಳನ್ನು ಕೊಂಡಾಡಿ ಅವರಿಗೆ ಶುಭಕಾಮನೆಗಳನ್ನು ಅರ್ಪಿಸಿದರು. ಶ್ರೀ. ಶೆಟ್ಟರು ಕಷ್ಟ ಕಾರ್ಪಣ್ಯಗಳ ದೆಸೆಯಿಂದ ಶಕ್ತಿ ಕಳಕೊಳ್ಳದೆ, ಶಕ್ತಿಯನ್ನು ಗಳಿಸಿದ ವ್ಯಕ್ತಿ; ಅಬಲರ, ದೀನದಲಿತರ, ಅಸಹಾಯಕರ ಸಹಾಯಕ್ಕೆ ಧಾವಿಸುವ ಒಡ ಜನರ ಬಂಧು ಎಂದು ಎಲ್ಲರೂ ಅವರನ್ನು ಕೊಂಡಾಡಿದರು.

ಅಧ್ಯಕ್ಷ ಸ್ಥಾನದಿಂದ ಡಾ॥ ಕೆ ನಾಗಪ್ಪ ಆಳ್ವರವರು ಮಾತನಾಡುತ್ತಾ ದೇಶದ ರಕ್ಷಣೆಯೇ ಪರಮೋದ್ದೇಶವಾಗಿರುವ ಇಂದಿನ ದಿನಗಳಲ್ಲಿ ಇಂತಹ ದೇಶಭಕ್ತರನ್ನು ಗೌರವಿಸುವಂತಹ ಕಾರ್ಯಮಾಡುವುದು ಸಮಯೋಚಿತ ಎಂದು ಹೇಳಿ, ನಾಲ್ಕು ವರ್ಷಗಳ ಹಿಂದೆಯೇ ಜರಗಬೇಕಾಗಿದ್ದ ಈ ಕಾರ್ಯ ಇಂದಾದರೂ ಜರಗುತ್ತಿರುವುದು ಸಂತೋಷದ ಸಂಗತಿ ಎಂದರು. ಶ್ರೀ॥ ಶೆಟ್ಟರು ಕಳೆದ ನಾಲ್ಕು ದಶಕಗಳಿಂದ ಕಾಂಗ್ರೆಸಿಗಾಗಿ, ದೇಶಕ್ಕಾಗಿ, ಜಿಲ್ಲೆಗಾಗಿ ದುಡಿದ ಯೋಧ ಎಂದು ಹೇಳಿ, ಅವರು ನಮ್ಮ ಜಿಲ್ಲೆಯ ರಾಜಕೀಯ ರಂಗದಲ್ಲಿ ಒಬ್ಬ ಶ್ರೇಷ್ಠ ವ್ಯಕ್ತಿ ಎಂದು ಕೊಂಡಾಡಿದರು.

ಅಧಿಕಾರ, ಸ್ಥಾನ, ಗದ್ದುಗೆಗಳನ್ನು ಸಂಸ್ಥೆಗಾಗಿ ತ್ಯಜಿಸಿದ

ತನ್ನ ಆರೋಗ್ಯದ ಪರಿವೆ ಇಲ್ಲದೆ, ಕರೆದಾಗ ಸಮಯ ಸನ್ನಿವೇಶ ಗಣಿಸದೆ, ಜನತೆಯ ಕರೆಗೆ ಓಗೊಡುವ ಜನನಾಯಕರವರು ಎಂದು ಹೇಳಿ, ಅವರ ಜೀವನದುದ್ದಕ್ಕೂ, ಅವರೊಡನೆ ಸಹಧರ್ಮಿಣಿಯಾಗಿ ಬಾಳಿಕೊಂಡು ಬಂದ ಅವರ ಧರ್ಮಪತ್ನಿ ಶ್ರೀಮತಿ ನೇತ್ರಾವತಿ ಶೆಟ್ಟಿಯವರೂ ಶ್ರೀ॥ ಶೆಟ್ಟರಂತೆ ಗೌರವಕ್ಕೆ ಅರ್ಹರು ಎಂದರು. ಈಗಾಗಲೇ ೭೦ರ ಗಡಿ ಮುಟ್ಟಿರುವ ಶ್ರೀ॥ ಶೆಟ್ಟರು ಇನ್ನು ವಿಶ್ರಾಂತಿ ಜೀವನವನ್ನು ಬಾಳುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿ, ಅವರಿಗೆ ಹೆಚ್ಚು ಭಾರವಹಿಸಿಕೊಡುವುದು ಅವರ ಆರೋಗ್ಯದ ದೃಷ್ಟಿಯಿಂದ ಸರಿಯಲ್ಲ ಎಂದರು.

ಅಭಿಮಾನಿಗಳ ಆದರದ ಮಾತುಗಳಿಂದ ಹೃದಯ ತುಂಬಿ ಬಂದ ಶ್ರೀ॥ ಕೆ. ಕೆ. ಶೆಟ್ಟರು ಉತ್ತರ ರೂಪವಾಗಿ ಮಾತನಾಡುತ್ತಾ ತಾನು ಮಾಡಿರುವ ಅಲ್ಪ ಸೇವೆಗಾಗಿ ಈ ರೀತಿಯ ಸನ್ಮಾನ ಮಾಡುತ್ತಿರುವುದಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ತನ್ನ ಜೀವನದಲ್ಲಿ ತನ್ನ ತಾಯಿ ಹಾಗೂ ಧರ್ಮಪತ್ನಿ— ಇವರಿಬ್ಬರು ಮರೆಯಲಾಗದ ವ್ಯಕ್ತಿಗಳು ಎಂದು ಹೇಳಿ, ತನ್ನ ಬಾಳಿನುದ್ದಕ್ಕೂ ಜನತೆ ಹಾಗೂ ಮಿತ್ರರಿತ್ತ ಸಹಕಾರವೇ ತನ್ನ ಯಶಸ್ಸಿನ ಗುಟ್ಟು ಎಂದರು. ಜೀವನದಲ್ಲಿ ಕಷ್ಟಕಾರ್ಪಣ್ಯಗಳು, ನೋವುಗಳು ಬರುವುದು ಸ್ವಾಭಾವಿಕ. ಅವುಗಳನ್ನು ಧೈರ್ಯದಿಂದ ಎದುರಿಸಿ ಬಾಳುವುದೇ ಜೀವನದ ಗುಟ್ಟು ಎಂದವರು ವಿವರಿಸಿ, ಸಿಹಿ ಕಹಿಗಳ ಮಿಶ್ರಣವಾದ ಈ ಬಾಳನ್ನು ಬದುಕುವುದೇ ಒಂದು ಆನಂದದ ಸಂಗತಿ ಎಂದರು. ತನ್ನಲ್ಲಿ ಸಂಪತ್ತಿಲ್ಲ, ಮೋಟಾರಿಲ್ಲ, ಮನೆಯಿಲ್ಲ, ಆದರೆ ಎಲ್ಲದಕ್ಕಿಂತ ಮಿಗಿಲಾದ ಜನರ ಸಹಾಯ ತನ್ನ ಪಾಲಿಗೆ ಇದೆ ಎಂಬುದೇ ತನಗೆ ಸಂತೋಷದ ಸಂಗತಿ ಎಂದು ಹೇಳಿ, ಜನತಾ ಸೇವಕರನ್ನು ಜನತೆ ಮರೆಯುವುದು ಸಾಧ್ಯವಿಲ್ಲ ಎಂದರು. ಹಾರ, ತುರಾಯಿಗಳನ್ನು ಒಂದು ಕಾಲ ಟೀಕಿಸುತ್ತಿದ್ದ ತಾನೇ ಇಂದು ಪತ್ರ ಪುತ್ಥಳಿಯ ಕಟ್ಟುಬಿದ್ದು ಹಾರಗಳಿಗೆ ಕೊರಳೊಡ್ಡುವ ಪ್ರಸಂಗ ಬಂತೆಂದು ಹೇಳಿ, ತಾನು ಇನ್ನು ಮುಂದೆಯೂ ಜಿಲ್ಲೆಯ, ಕಾಂಗ್ರೆಸಿನ, ದೇಶದ ನಮ್ರ ಸೇವಕನಾಗಿ ದುಡಿಯುವೆನೆಂದರು.



ಸಮಾರಂಭದ ಕೊನೆಯಲ್ಲಿ ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದ ಅರ್ಪಿಸಿದರು. ಮನರಂಜನೆಯ ಅಂಗವಾಗಿ ಶ್ರೀ ಯು. ಕೃಷ್ಣರಾಯರ ಶಿಷ್ಯೆಯರಿಂದ ನೃತ್ಯ ಪ್ರದರ್ಶನವು ಜರಗಿತು.

ಈ ಸಂದರ್ಭ ಅವರ ಜೀವನದ ಚಿಕ್ಕ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

ಶ್ರೀ ಕೆ. ಕಾಂತಪ್ಪ ಶೆಟ್ಟಿಯವರಿಗೆ ಅರುವತ್ತನಾಲ್ಕು ವರ್ಷಗಳು ತುಂಬಿದುವು. ಈ ಸುದೀರ್ಘ ಜೀವನದಲ್ಲಿ ಅವರು ಜಿಲ್ಲೆಯ ಮುಂದಾಳುಗಳಲ್ಲೊಬ್ಬರಾಗಿ ಕಾಂಗ್ರೆಸಿನ ಸಂಘಟಕರಲ್ಲೊಬ್ಬರಾಗಿ, ಮೈಸೂರು ರಾಜ್ಯದ ಕೆಲವೇ ಪ್ರತಿಭಾವಂತ ನಾಯಕರಲ್ಲೊಬ್ಬರಾಗಿ ತನ್ನ ಬದುಕನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಅವರ ತುಂಬು ಜೀವನ ಹಾಗೂ ಅವರು ಇರಿಸಿಕೊಂಡ ಆದರ್ಶಗಳು, ಅವರು ಸಾಧಿಸಬೇಕೆಂದಾಶಿಸಿದ ಕಾರ್ಯಗಳು ಅನೇಕ. ಅವರು ತನ್ನ ಗುರಿಯ ಸಾಧನೆಗಾಗಿ ಶ್ರಮಿಸಿ ದುಡಿದ ನಿಷ್ಠಾವಂತರು ಎಂತಹ ಎಡರು ತೊಡರುಗಳು ಬಂದರೂ ಧೈರ್ಯದಿಂದ ಮುನ್ನುಗ್ಗುವ ಅವರ ಪ್ರವೃತ್ತಿ ಪರಿಣಾಮಕಾರಿಯಾಗಿ ಕಂಡಂತೆ. ಕೆಲವೊಮ್ಮೆ ಅನಪೇಕ್ಷಿತ ಪರಿಣಾಮವನ್ನುಂಟು ಮಾಡಿದ್ದೂ ಇರಬಹುದು. ಆದರೂ, ಅವರ ಆತ್ಮವಿಶ್ವಾಸ, ಕೆಚ್ಚು, ಕಾರ್ಯನಿಷ್ಠೆ ನಿರ್ದಾಕ್ಷಿಣ್ಯ ಅಭಿಪ್ರಾಯ ಪ್ರಕಟನ ಎಲ್ಲರೂ ಮೆಚ್ಚುವಂತಹವು.

ಕ್ರಾಂತಿಕಾರಿ ಮನೋವೃತ್ತಿ

ಉಡುಪಿ ತಾಲೂಕಿನ ಕಟಪಾಡಿ ಸಮೀಪದ ಕೋಟೆ ಬೀಡು ಸಂಕಯ್ಯ ಶೆಟ್ಟರ ದ್ವಿತೀಯ ಪುತ್ರ ಕಾಂತಪ್ಪ ಶೆಟ್ಟರು ಎಳವೆಯಲ್ಲೇ ಕ್ರಾಂತಿಕಾರಿ ಮನೋವೃತ್ತಿಯವರು. ಕಟಪಾಡಿಯ ಮಿಶನ್ ಶಾಲೆಯಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾಗ, ಉಪಾಧ್ಯಾಯರ ಕೈಯಲ್ಲಿದ್ದ ಬೆತ್ತವನ್ನು ಹೊಡೆಯುದಂತೆ ಎಳೆದುಕೊಳ್ಳುವವರೆಗೂ ಮುಂದರಿದ ದಿಟ್ಟ ವಿದ್ಯಾರ್ಥಿ

ಜನತೆಯಿಂದ ಗೌರವಾರ್ಪಣೆ

ಶ್ರೀ ಕೆ. ಕಾಂತಪ್ಪ ಶೆಟ್ಟಿ

ನಿಷ್ಠಾವಂತ ಕಾಂಗ್ರೆಸ್ ಸೇವಕರವರು!

ಇವರು ಇದೇ ದಿಟ್ಟತನವನ್ನು ಅವರು ಬ್ರಿಟಿಷ್ ಆಳರಸರ ಕೈಯಿಂದ ಗದ್ದುಗೆಯನ್ನು ಮರಳಿ ಪಡೆಯುವ ಸ್ವಾತಂತ್ರ್ಯ ಚಳವಳಿಯಲ್ಲೂ ತೋರಿದರು. ತೀವ್ರಕ್ರಾಂತಿಕಾರಿಗಳಾದ ಕಾಂತಪ್ಪ ಶೆಟ್ಟರ, ತನ್ನ ತಂದೆಯು ತನ್ನನ್ನು ಇಂಗ್ಲಿಷ್ ವಿದ್ಯಾಭ್ಯಾಸಕ್ಕಾಗಿ ಕಳುಹಿಸುವುದಿಲ್ಲ ಎಂದು ತಿಳಿದಾಗ, ಪರರ ಆಶ್ರಯ ಪಡೆದಾದರೂ ಇಂಗ್ಲಿಷ್ ಕಲಿತೇ ಸಿದ್ಧ ಎಂಬ ಹಟ ಹೂಡಿ ಅದರಲ್ಲಿ ಗೆದ್ದವರು. ಕಟಪಾಡಿಯಿಂದ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿಗೆ ಉದ್ಯಾವರ ಹೊಳೆಯನ್ನು ದಾಟಿ, ದಿನಾಲೂ ಅವರು ನಡೆದೇ ಬರುತ್ತಿದ್ದರು. ಹೈಸ್ಕೂಲಿನಲ್ಲಿ ಅವರು ಚುರುಕಿನ ವಿದ್ಯಾರ್ಥಿಯೆನಿಸಿಕೊಂಡರು.

ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಧೀರ

ದೇಶದ್ಯಂತ ಆ ಸಂದರ್ಭ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟ ಪರಾಕಾಷ್ಠೆಯನ್ನು ಮುಟ್ಟಿತ್ತು. ದೇಶದ ತರುಣರೆಲ್ಲ, ಸ್ವಾತಂತ್ರ್ಯದ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಕಾಲವದು. ಈ ಸಂದರ್ಭ ಕ್ರಾಂತಿಕಾರಿ ಶೆಟ್ಟರು, ಶಾಲೆಗೆ ಬಹಿಷ್ಕಾರ ಹಾಕಿ, ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿದರು. ಕಾಂಗ್ರೆಸಿನ ನಿಷ್ಠಾವಂತ ಕಾರ್ಯಕರ್ತರಲ್ಲೊಬ್ಬರಾಗಿ ಅಂದಿನಿಂದ ಇಂದಿನ ತನಕ ಅವರು ದುಡಿಯುತ್ತಾ ಬಂದಿದ್ದಾರೆ. ಜಿಲ್ಲೆಯ ಕಾಂಗ್ರೆಸಿನಲ್ಲಿ, ಇವರ ಸೇರ್ಪಡೆಯಿಂದಾಗಿ, ಅದರಲ್ಲಿ ಇನ್ನಷ್ಟು ಚೇತನ ತುಂಬಿತು. ಕಾಂಗ್ರೆಸಿನ ಸಂದೇಶವನ್ನು ಹಳ್ಳಿ ಹಳ್ಳಿಗೆ ಸಾರುತ್ತಾ ಅವರು ತನ್ನ ಸಂಗಾತಿಗಳೊಡನೆ ದುಡಿದುದು ಉಲ್ಲೇಖನೀಯ.

ರಾಷ್ಟ್ರೀಯ ವಿದ್ಯಾಶಾಲೆಯ ವಿದ್ಯಾರ್ಥಿಯಾಗಿ

ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತ ಶೆಟ್ಟರು ರಾಷ್ಟ್ರೀಯ ವಿದ್ಯಾಶಾಲೆಯತ್ತ ಆಕರ್ಷಿಸಲ್ಪಟ್ಟರು. ಉಡುಪಿಯ ಮುಕುಂದ ನಿವಾಸದಲ್ಲಿ ಆಗ ಕಾರ್ಯವೆಸಗುತ್ತಿದ್ದ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಒಂದು ವರ್ಷ ಕಾಲ ಅಭ್ಯಾಸ ನಡೆಸಿದರು. ವಿದ್ಯಾರ್ಥಿಯಾಗಿರುವಾಗಲೇ ಅವರಿಗೆ ನಾಟಕ, ಸಾಹಿತ್ಯ ಲೇಖನ ಇತ್ಯಾದಿಗಳಲ್ಲಿ ಆಸಕ್ತಿ. ರಾಷ್ಟ್ರೀಯ ಶಾಲೆಯಲ್ಲಿ ಅವರು ತಮ್ಮ ಪ್ರತಿಭೆಯ ಬೆಳಕನ್ನು ಚೆಲ್ಲಿದರು. ನಾಟಕಗಳನ್ನು ಸ್ವತಃ ರಚಿಸಿ ಅಭಿನಯಿಸಿ ಸಮಾಜದಲ್ಲಿ ಕ್ರಾಂತಿಕಾರಿ ನಾಟಕಕಾರರೆನಿಸಿಕೊಂಡರು.

ರವೀಂದ್ರರ ವಿಶ್ವಭಾರತಿಯಲ್ಲಿ

ರಾಷ್ಟ್ರೀಯ ಭಾವನೆಯಿಂದ ತುಂದಿಲರಾಗಿದ್ದ ಶ್ರೀ|| ಶೆಟ್ಟರ ಜ್ಞಾನತೃಷೆ ಉಡುಪಿಯ ರಾಷ್ಟ್ರೀಯ ಶಾಲೆಯಲ್ಲಿನ ಅಭ್ಯಾಸದಿಂದ ಇಂಗಲಿಲ್ಲ. ಆ ತೃಷೆ ಅವರನ್ನು ರವೀಂದ್ರನಾಥ ಠಾಗೋರರ ಶಾಂತಿನಿಕೇತನಕ್ಕೆ ಸೆಳೆಯಿತು. ಅವರು ಶಾಂತಿನಿಕೇತನದಲ್ಲಿ ಅಭ್ಯಾಸಕ್ಕಾಗಿ ವಿದ್ಯಾರ್ಥಿಯಾಗಿ ಹೋದರು. ರವೀಂದ್ರರ ಶಿಕ್ಷಣ ಸಂಸ್ಥೆಯಲ್ಲಿ ಮೊದಲು ಶಿಕ್ಷಣ ಪಡೆಯುವ ಭಾಗ್ಯ ಪಡೆದವರಲ್ಲಿ ಶ್ರೀ|| ಶೆಟ್ಟರೂ ಒಬ್ಬರು. ಶಾಂತಿನಿಕೇತನದಲ್ಲಿ ಬರೇ ಕೆಲವೇ ತಿಂಗಳುಗಳಷ್ಟೇ ಇವರು ಅಭ್ಯಾಸ ಮಾಡಿದರೂ, ಆ ಅಲ್ಪ ಕಾಲದಲ್ಲಿ ಅವರು ಬಂಗಾಲೀ ಭಾಷೆಯನ್ನು 'ಅಲಿ' ಎಂಬ ಮುಸ್ಲಿಂ ಸಂಗಾತಿಯ ನೆರವಿನಿಂದ ಕಲಿತರು. ರವೀಂದ್ರರ 'ಚಿತ್ರಾ' ಮತ್ತು 'ಪೋಸ್ಟ್ ಆಫೀಸ್' ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು.

ರಾಷ್ಟ್ರೀಯ ಶಾಲಾ ಅಧ್ಯಾಪಕನಾಗಿ

ತನ್ನ ದೀರ್ಘರೂಪದ ಅಸ್ವಾಸ್ಥ್ಯದ ದೆಸೆಯಿಂದ ಶ್ರೀ ಶೆಟ್ಟರು ವಿಶ್ವಭಾರತಿಯನ್ನು ಬಿಟ್ಟು ಊರಿಗೆ ಮರಳಬೇಕಾಯಿತು. ೧೯೩೦ರ ಸುಮಾರಿಗೆ ದಿ|| ಸಾಂತ್ಯಾರು ಅನಂತ ಪದ್ಮನಾಭ ಭಟ್ಟರು ಸಾಂತ್ಯಾರಿನಲ್ಲಿ ತೆರೆದ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಸುಮಾರು ಒಂದು ವರ್ಷಕಾಲ ಅಧ್ಯಾಪಕರಾಗಿ ಶ್ರೀ ಶೆಟ್ಟರು ದುಡಿದರು. ಶಾಲೆಯಲ್ಲಿ ಅಧ್ಯಾಪಕರಾಗಿರುವ ವೇಳೆಯೂ ಇವರು ತನ್ನ ಜೀವನದಲ್ಲಿ ಬೆರೆತ ಒಂದು ಕಥೆ, ಕವನ, ನಾಟಕಾದಿಗಳ ರಚನೆಯನ್ನು ಕೈ ಬಿಡಲಿಲ್ಲ.

ಪತ್ರಿಕೋದ್ಯಮಿಯಾಗಿ

ಇದೇ ಸಂದರ್ಭದಲ್ಲಿ ಅವರು ಮಂಗಳೂರಿನಿಂದ ದಿ|| ಎ. ಬಿ. ಶೆಟ್ಟರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ 'ನವಯುಗ'ದ ಸಂಪಾದಕ ವರ್ಗದಲ್ಲಿ ಸೇರಿದರು. ಅಂದಿನಿಂದ ಮಂಗಳೂರು ಅವರ ಕಾರ್ಯಕ್ಷೇತ್ರವಾಯಿತು. ಈ ಸಂದರ್ಭ ಅವರು 'ನವಯುಗ'ದಲ್ಲಿ ದುಡಿಯುತ್ತಿದ್ದುದಲ್ಲದೆ, ಮಂಗಳೂರಿನ ಎಸ್. ಆರ್. ಎಸ್. ಹೋಂನ ಚಟುವಟಿಕೆಗಳಲ್ಲೂ ಆಸಕ್ತಿ ವಹಿಸಿ ದುಡಿಯುತ್ತಿದ್ದರು. ದಿ|| ಎ. ಬಿ. ಶೆಟ್ಟರು ಪಾರ್ಲಿಮೆಂಟರಿ ಕಾರ್ಯಗಳಿಗೆ ಹೋದ ಮೇಲೆ, ನವಯುಗದ ಜವಾಬ್ದಾರಿಯನ್ನು ತಾನೇ ಹೊತ್ತು ೧೯೩೭ರಲ್ಲಿ ಅದನ್ನು ಉಡುಪಿಗೆ ತಂದರು. ಉಡುಪಿಯಲ್ಲಿ ಶ್ರೀ ಕೆ. ಹೊನ್ನಯ್ಯ ಶೆಟ್ಟರ ಸಹಕಾರದಿಂದ ನವಯುಗ ಪತ್ರಿಕೆಯನ್ನು ಎಂಟು ವರ್ಷಕಾಲ ನಡೆಸುತ್ತ ಬಂದರು.

ಕಾರಾಗೃಹವಾಸ

ಕಾಂಗ್ರೆಸ್ ಚಳವಳಿ ತೀವ್ರವಾಗಿದ್ದ ೧೯೩೭ರ ಕಾಲ ಚುನಾವಣೆ ಸಂದರ್ಭ ಶ್ರೀ ಕೆ. ಕೆ. ಶೆಟ್ಟರು ಕಾಂಗ್ರೆಸಿನ ಪರವಾಗಿ ಗಾಳಿಯಂತೆ ತಿರುಗಿ ಪ್ರಚಾರ ಕಾರ್ಯ ಕೈಗೊಂಡರು. ೧೯೩೬ರಲ್ಲಿ ಫೈಜಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಬಂದರು. ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ನಡೆದಿದ್ದ ಕಾಲ ಸಭೆಗಳನ್ನು ಪ್ರತಿಷೇಧಿಸಿ ೧೪೪ನೇ ಕಲಮು ಜಾರಿಗೊಳಿಸಿದ್ದ ಸಂದರ್ಭ, ಶ್ರೀ ಶೆಟ್ಟರು, ಈ ಪ್ರತಿಷೇಧವನ್ನು ಕಡೆಗಣಿಸಿ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರೊಂದಿಗೆ, ಕಟಪಾಡಿಯಲ್ಲಿ ಸಾರ್ವಜನಿಕ ಸಭೆ ನಡೆಸಿದರು. ಈ ಅಪರಾಧಕ್ಕಾಗಿ ಅವರು ಜೈಲು ಸೇರಬೇಕಾಯಿತು.

ಕಾಂಗ್ರೆಸ್ಸಿನ ಬಂಟ

ಆ ಬಳಿಕವೂ ಕಾಂಗ್ರೆಸಿನ ಚಳವಳಿಯಲ್ಲಿ ದುಡಿದ ಕಾಂಗ್ರೆಸಿನ ಬಂಟ ಇವರು. ೧೯೪೭ನೇ ವರ್ಷ ದೇಶಕ್ಕೆ ಸ್ವಾತಂತ್ರ್ಯ ಬಂದಾಗ, ಇವರು ಅಧಿಕಾರ ಸ್ಥಾನಗಳಿಂದ ದೂರ ಉಳಿದರು. ಮತ್ತೆ ಕೂಡಾ ಪದವಿಗಾಗಿ ಅವರು ಹಾರೈಸಿದವರಲ್ಲ. ೧೯೪೭ರ ಬಳಿಕ ಅವರು ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ದಿ| ಕಿಲ್ಲೆಯವರ ಜತೆಗೆ ಸರ್ವೋದಯ ಕಾರ್ಯಕ್ರಮಗಳಲ್ಲೂ ಭಾಗವಹಿಸಿ 'ಸರ್ವೋದಯ' ಪತ್ರಿಕೆಯ ಸಂಪಾದಕರಾಗಿ ದುಡಿದರು. ಪತ್ರಿಕೋದ್ಯಮಿಯಾಗಿ ಅವರು ಪತ್ರಿಕಾ ರಂಗಕ್ಕೆ ಸಲ್ಲಿಸಿದ ಸೇವೆಯು ಅಪಾರವಾದುದು.

ಬಹುಮುಖ ಸಾರ್ವಜನಿಕ ಸೇವೆ

ಶ್ರೀ|| ಕೆ. ಕೆ. ಶೆಟ್ಟರು ಇಂದು ಮೈಸೂರು ರಾಜಕೀಯದಲ್ಲಿ ಒಬ್ಬ ಪ್ರಭಾವೀ ವ್ಯಕ್ತಿಯಾಗಿದ್ದಾರೆ. ಇಂದು ಅವರು ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರು. ಮೈಸೂರು ರಾಜ್ಯದ ಕೊಯರ್ ಬೋರ್ಡಿನ ಅಧ್ಯಕ್ಷರಾಗಿದ್ದರು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದಾರೆ. ಕೇಂದ್ರ ಕೊಯರ್ ಬೋರ್ಡಿನಲ್ಲೂ ಇವರು ಸ್ಥಾನಪನ್ನರಾಗಿ ದುಡಿಯುತ್ತಿದ್ದಾರೆ. ಹತ್ತು ಹಲವಾರು ಚಟುವಟಿಕೆಗಳಲ್ಲಿ ನಿರತರಾದ ಶ್ರೀ|| ಶೆಟ್ಟರದು ಬಹುಮುಖವುಳ್ಳ ವೈವಿಧ್ಯಮಯ ಜೀವನ.

ಉತ್ತಮ ನಾಟಕಕಾರ ಮತ್ತು ನಟ

ಶ್ರೀ|| ಶೆಟ್ಟರು ಉತ್ತಮ ನಾಟಕಕಾರರೂ ಹೌದು, ನಟರೂ ಹೌದು. ಅವರು ಬರೆದಿರುವ 'ವ್ಯಭಿಚಾರಿಣಿ ಯಾರು?', 'ಪುರುಷ ವಧು', 'ಹೆಂಡ್ತಿ ಗಂಡನಾದರೆ', 'ಪ್ರೇಮ ವಿಜಯ', 'ದೇಶಭಕ್ತ' ಮೊದಲಾದ ನಾಟಕಗಳು ಕ್ರಾಂತಿಕಾರಿ ಮನೋವೃತ್ತಿಯ, ಸಮಾಜದ ಏರುಪೇರುಗಳನ್ನು, ಮೂಢ ನಂಬಿಕೆಗಳನ್ನು, [illegible] ಕಟುವಾಗಿ ಟೀಕಿಸುವ ಸಾಲಿನಲ್ಲಿ ಸೇರುವಂಥವುಗಳು. ಇವರ ನಾಟಕಗಳು ಓದಿ ತೋರಿಸಲು ಅತಿ ಉಪಯುಕ್ತವಾದುವುಗಳು. ಓದುವುದಕ್ಕಿಂತ ಹೆಚ್ಚಾಗಿ ಅಭಿನಯಿಸುವುದರಿಂದ ಇವುಗಳ ಪರಿಣಾಮ ಬಹಳ. ಅವರ ಪ್ರಪ್ರಥಮ ನಾಟಕ 'ನಿಜ ದಾಂಪತ್ಯ' ಆ ಕಾಲ ಮಂಗಳೂರು, ಕುಂದಾಪುರಗಳಲ್ಲಿ ಜಯಭೇರಿ ಹೊಡೆಯಿತು. ನಾಟಕ ರಚನೆಯಲ್ಲಿ ನಿಪುಣರಾಗಿದ್ದಂತೆ ಶ್ರೀ|| ಶೆಟ್ಟರು ನುರಿತ ನಟರೂ ಹೌದು. ಸುಮಾರು ೧೯೩೦ರಲ್ಲಿ "ಕಿರಿಯರ ಪ್ರಪಂಚ"ದ ಸಹಾಯಾರ್ಥ ಉಡುಪಿಯ ರಾಮಕೃಷ್ಣಾ ಥಿಯೇಟರಿನಲ್ಲಿ ಅವರು ಬರೆದ ನಾಟಕವೊಂದರ ಪ್ರಯೋಗ ನಡೆಯಲಿತ್ತು. ಪ್ರಮುಖ ನಟನೊಬ್ಬ ಅನಿರೀಕ್ಷಿತವಾಗಿ ಅಸ್ವಸ್ಥಗೊಳ್ಳಲಾಗ, ಶ್ರೀ|| ಶೆಟ್ಟರೇ ಆ ಪಾತ್ರವನ್ನು ಸ್ವತಃ ಪೂರ್ವ ತಯಾರಿ ಇಲ್ಲದೆ, ತೃಪ್ತಿಕರವಾಗಿ ಅಭಿನಯಿಸಿದರು.

ನಿರ್ದಾಕ್ಷಿಣ್ಯ ಪ್ರವೃತ್ತಿಯ ಬಿಚ್ಚು ಮನಸ್ಸು

ಅವರು ಭಾವೋದ್ವೇಗಕ್ಕೊಳಗಾಗಿ ಕಾರ್ಯವೆಸಗುವವರು ಎಂದೂ ಹಲವರು ಅನ್ನುತ್ತಾರೆ. ಅವರ ಹೆಚ್ಚು ಧೈರ್ಯವೇ ಅವರಿಗೆ ಹಲವಾರು ಬಾರಿ ಹೆಚ್ಚು ಪ್ರಯೋಜನವನ್ನು ಒದಗಿಸಿದ್ದುಂಟು. ಅವರು ಹಿಂದು ಮುಂದಿನ ಆಲೋಚನೆ ಮಾಡದೆ ಉದ್ದೇಶದ ಸಾಧನೆಗಾಗಿ ಮುನ್ನುಗ್ಗುವವರು. ಈ ದಿಸೆಯಲ್ಲಿ ಅವರು ಯಾವ ಅಡ್ಡಿ ಆತಂಕಗಳಿಗೂ ಹೆದರುವುದಿಲ್ಲ. ಅವರು ನಿರ್ದಾಕ್ಷಿಣ್ಯ ಪ್ರವೃತ್ತಿಯವರಾಗಿದ್ದು, ಇದ್ದುದನ್ನು ಇದ್ದಂತೆ ಆಡುವ ಸ್ವಭಾವದವರಾದುದರಿಂದ ಅವರು ಇಂದು ಕಾಂಗ್ರೆಸಿನಲ್ಲಿ ಏರಬೇಕಾದ ಸ್ಥಾನಕ್ಕೆ ಏರಿಲ್ಲ. ಕಟು ಸತ್ಯ ಎಲ್ಲರಿಗೂ ರುಚಿಸುವುದಿಲ್ಲ ತಾನೆ?

ಆತ್ಮಶೋಧನೆಯ ಮಾತು

ಅವರ 'ಚಿತ್ರಾಂಗದ' ನಾಟಕದ ಮುನ್ನುಡಿಯಲ್ಲಿ ಶ್ರೀ ಶೆಟ್ಟರು ಹೇಳಿರುವ ಒಂದೆರಡು ಮಾತುಗಳನ್ನು ಇಲ್ಲಿ ಉಲ್ಲೇಖಿಸಿದರೆ, ಅವರ ಜೀವನದುದ್ದಕ್ಕೂ ಈ ಮಾತು ಅನ್ವಯಿಸೀತೇ ಎಂಬ ಸಂಶಯ ಬರುತ್ತದೆ. 'ಸಂದರ್ಭಾನುಸಾರ ಮನಸ್ಸಿನ ಮೇಲೆ ತೀವ್ರ ಪ್ರತಿಕ್ರಿಯೆಯನ್ನುಂಟುಮಾಡುವ ಇಲ್ಲವೆ ಕಲ್ಪನಾ ತರಂಗಗಳಲ್ಲಿ ತೇಲಿ ಬರುವ ವಿಷಯ ನನ್ನ ಸಾಧ್ಯವಾದ ಮಟ್ಟಿಗೆ ಗೀಚಿ ಬಿಡುವ ಹುಚ್ಚು ನನ್ನದು. ಆದರೆ ಇತ್ತೀಚೆಗೆ ರಾಜಕೀಯ ಬಡೆಮ್ಮೆಯನ್ನು ಕರೆಯು ಹತ್ತಿದ ಮೇಲೆ ಈ ಹಸರಿನ ಬಗ್ಗೆ ಕೂಡಾ ಬತ್ತಿ ಹೋಗಿರುವಂತಿದೆ. ಅಲ್ಲದೆ ಒಮ್ಮೆ ಅವಸರದಲ್ಲಿ ಬರೆದ ಬಿಟ್ಟುದನ್ನು ಮತ್ತೊಮ್ಮೆ ನೋಡುವ ತಾಳ್ಮೆಯಾಗಲೀ, ಅದನ್ನು ಸಂಗ್ರಹಿಸಿಡುವ ಆಸಕ್ತಿಯಾಗಲೀ ಇಲ್ಲದವನು ನಾನು' ಈ ಮಾತುಗಳು, ಬರೇ ಅವರ ಸಾಹಿತ್ಯ ರಂಗಕ್ಕಷ್ಟೇ, ಅವರ ಇತರ ಕಾರ್ಯರಂಗಗಳಿಗೂ ಅನ್ವಯಿಸಬಹುದೇನೋ ಎಂದು ಹಲವೊಮ್ಮೆ ತೋರುತ್ತದೆ.

ಶತಮಾನೋತ್ಸವದ ಹಾರೈಕೆ

ಇಂದು ಅವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾಗಿದ್ದಾರೆ. ಜಿಲ್ಲೆಯ ಹಳೆಯ ಕಾಂಗ್ರೆಸಿಗರ ಸಾಲಿಗೆ ಸೇರುವವರಲ್ಲಿ ಇವರೂ ಒಬ್ಬರು. ಸಂಸ್ಥೆಗಾಗಿ, ತನ್ನ ಜೀ

(ಹದಿನಾಲ್ಕನೇ ಪುಟ ನೋಡಿರಿ)

ಶಿವ ಶಿವಾ - ಕಾಯುವನೇ ಶಿವ?

([illegible]ನೇ ಪುಟದಿಂದ)

'ಥಕಥೈ' ಎನ್ನುತ್ತಿದ್ದಾರೆ. ಹಿಂದಿಯಲ್ಲಿ ಬಂದ ಪತ್ರಗಳನ್ನು ಕಸದ ಬುಟ್ಟಿಗೆ ಒಗೆಯಿರೆಂದು ಅವರು ಚುನಾವಣೆಗೆ ಪ್ರಚಾರದ ಆವೇಶದಲ್ಲಿ ಕೇರಳದಲ್ಲಿ ಆರ್ಭಟಿಸಿದ್ದರು. ಅವರು ಡಿಲ್ಲಿಗೆ ಹೋದಾಗ ಇಲಿಯಂತಾದರು. ಆದರೂ ಅವರು ರಾಜಕಾರಣಿಗಳಿದ್ದಾರೆ. ತಾನು ಆ ರೀತಿ ಬೆಂಗಳೂರಿನಲ್ಲಿ ಹೇಳಿರುವದಿಲ್ಲವೆಂದೂ ಅಲ್ಲಿ ರೊಚ್ಚಿನಿಂದ ಕೇಳಿದ ಪ್ರತಿನಿಧಿಗಳಿಗೆ ಕೆಚ್ಚಿನಿಂದ ಹೇಳಿದರು. ವಿಷಯ ತಣ್ಣಗಾಯಿತು! ಅಧ್ಯಕ್ಷ ಸ್ಥಾನದತ್ತ ಕಣ್ಣಿಟ್ಟುಕೊಂಡಿರುವ ಅತುಲ್ಯಘೋಷರ ಅವಸ್ಥೆಯೂ ಅಷ್ಟೇ. ಬೆಂಗಳೂರಿನಲ್ಲಿ ನಿಜಲಿಂಗಪ್ಪನವರ ಜನ್ಮ ದಿನೋತ್ಸವಾಚರಣೆಯ ಸಮಯ ಅವರು ಹಿಂದಿಯ ಮೇಲೆ ಹಿಡಿಶಾಪ ಹಾಕಿದ್ದರು. ಆದರೆ ಲೋಕಸಭೆಯಲ್ಲಿ ಅವರು ಆಗಲೇ ಹಿಂದಿ ವ್ಯಾವಹಾರಿಕ ಭಾಷೆಯೆಂದು ಬಂಗಾಲ ದೇಶ ಒಪ್ಪಿಕೊಂಡಿದೆಯೆಂದು ಘೋಷಿಸಿರುವರು! ಸ. ಶ್ರೀ ನಿಜಲಿಂಗಪ್ಪ, ನೀಲಂ ಸಂಜೀವ ರೆಡ್ಡಿ, ಭಕ್ತವತ್ಸಲಂ... ಅವರ ಮಾತಿನ ಪ್ರವಾಹವೂ ಹಾಗೆಯೇ ದಿಲ್ಲಿಯಲ್ಲಿ ಏಮ್ಮು ಹಿಡಿದು ಕೊಳ್ಳುತ್ತಾರೆ! ಕಾಂಗ್ರೆಸ್ಸಿಗರ ಈ ನಾಟಕದ ಲಾಭವನ್ನು ಪಡೆದು ಕೊಂಡವರು ದ್ರಾವಿಡ ಮುನ್ನೇಟ್ರ ಕಳಗಂ, ಸ್ವತಂತ್ರ ಪಾರ್ಟಿ ಹಾಗೂ ಮುಸ್ಲಿಂ ಲೀಗಿನವರು. ಕಾಂಗ್ರೆಸಿನ ಕಾಲನ್ನು ಹೇಗಾದರೂ ಹಿಡಿದೆಳೆಯಬೇಕೆಂದು ಈ ಮೂವ್ವರೂ ಸೇರಿ ಹೊಂಚು ಹಾಕುತ್ತಿದ್ದಾರೆ. ಅವರಿಗೆ ಇದೊಂದು ಸುವರ್ಣ ಸಂಧಿಯಾಯಿತು. ತಮ್ಮ ನಿರ್ಣಯಾನುಸಾರವಾಗಿ ನಡವರಿಸದೆ ಅಶಕ್ತಿಯಿಂದ, ಸಹನೆಯಿಂದ, ದೃಢತೆಯಿಂದ ಕಾಂಗ್ರೆಸ್ಸಿಗರು ವರ್ತಿಸುತ್ತಿದ್ದಕ್ಕೆ ಇಂದುಂಟಾಗಿರುವ ಅಪಮಾನ ಹಾಗೂ ಅನಾದರ ನಷ್ಟಗಳನ್ನು ತಪ್ಪಿಸಬಹುದಾಗಿತ್ತು. ದುರಾದೃಷ್ಟವಶಾತ್ ಅವರಿಗೆ ಸನ್ಮತಿ ಬರಲಿಲ್ಲ. ಹಾಗಾಗಿ ರಾಷ್ಟ್ರದ ನೈಜ ಸ್ವಯಂ ಸೇವಕರಿಗೆ ಅಥವಾ ಭಾರತಾಂಬೆಯ ನೆಚ್ಚಿನ ಕಂದರಿಗೆ ವರ್ಷದಲ್ಲಿ ಒಂದು ದಿನ ಮಾತ್ರವಲ್ಲ, ಎಲ್ಲಾ ದಿನಗಳೂ ಶಿವರಾತ್ರಿಯೇ ಆಗಿವೆ; ಅವರಿಗೆ ಜಾಗರಣೆ ತಪ್ಪಿದ್ದಲ್ಲ.

ದಯಾನಂದರಿಗೆ ಶಿವಲಿಂಗದ ಮೇಲೆ ಸಿಟ್ಟು ಬಂದಿತೇ ವಿನಃ ತಮ್ಮ ಅಜಾಗರೂಕತೆ ಹಾಗೂ ತಪ್ಪಿನತ್ತ ಲಕ್ಷ್ಯ ಹೋಗಲೇ ಇಲ್ಲ. ತಮ್ಮ ಮನೆಯೊಳಗನೇ ಇಲಿಗಳಿವೆ ಯೆಂಬುದನ್ನವರು ಅರಿತುಕೊಳ್ಳಲಿಲ್ಲ. ಅಂತೆಯೇ ನಾವಿಂದು ದೇಶದೊಳಗಿರುವ ಕಮ್ಯೂನಿಸ್ಟ್, ಸ್ವತಂತ್ರ, ಮುಸ್ಲಿಂ ಲೀಗು ಅಥವಾ ದ್ರಾವಿಡ ಮುನ್ನೇಟ್ರ ಕಳಗಂ ಮುಂತಾದ ರಾಜಕೀಯ ಹೆಗ್ಗಣಗಳತ್ತ ಗಮನ ಕೊಡದೆ ಇದ್ದೇವೆ. ಹಾಗೆಯೇ ಹೊರಗಿನಿಂದ ಬಂದಿರುವ ಚೈನಿ ಕೆಂಪ ಹೆಗ್ಗಣದತ್ತವೂ ಲಕ್ಷ್ಯಕೊಡದೆ ನಾವು ನಾವೇ ಬಡಿದಾಡಿಕೊಳ್ಳುತ್ತಿದ್ದೇವೆ. ದೇಶದೊಳಗಿನ ಈ ಹೆಗ್ಗಣಗಳು ಗಡಬಡ ಮಾಡಿದಲ್ಲಿ ನಮ್ಮ ಅಜಾಗರೂಕತೆಗೆ ಹಿಡಿಶಾಪ ಹಾಕಿಕೊಂಡು ಕಾರ್ಯ ಪ್ರವೃತ್ತರಾಗದೆ ಭಾರತೀಯತೆಯಲ್ಲಿ ಆಸೀನಿದೆಂದು ಹಂಗಿಸಲಾರಂಭಿಸುತ್ತೇವೆ. ಸ್ವತಃ ಅಮೇರಿಕನರೇ ಬಂದು ನಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತೇವೆ! ದೇಶದ ಹೊರಗಿನಿಂದ ಹೆಗ್ಗಣ ಬಂದಾಗ ಈ ದೇಶದಲ್ಲಿ ಆದೇನು ಬಲವಿದೆಂದು ನಮ್ಮನು ನಾವೇ ಬಹಳ ಹಗುರವಾಗಿ ಗ್ರಹಿಸಿಕೊಳ್ಳುತ್ತೇವೆ. ಮುಸಲ್ಮಾನರಿಗೆ ಆಂಗ್ಲೇಯರಿಗೆ ನಮಸ್ಕಾರ ಹಾಕಿದ್ದೆವು. ಇನ್ನು ಚೈನಿ ಕಮ್ಯೂನಿಷ್ಟರಿಗೆ ಸಾಷ್ಟಾಂಗ ಹಾಕಬೇಕು ಅಷ್ಟೆ ಅನ್ನುತ್ತೇವೆ! ಬಾಲ ದಯಾನಂದರು ಮೂರ್ತಿಯಲ್ಲಿ ದೋಷ ಕಂಡುಹಿಡಿದಂತೆ ನಾವು ದೇಶ ಹಾಗೂ ಭಾರತ ಮಾತೆಯಲ್ಲೇ ದೋಷ ಕಂಡುಹಿಡಿಯುತ್ತಿದ್ದೇವೆ. ಮೂರ್ತಿಯ ಮೇಲೆ ಇಲಿ ಸೋಗುವಂತಾಗಲು ಕಾರಣ ಯಾರೆಂಬುದನ್ನು ಬಾಲಕ ಯೋಚಿಸಲಿಲ್ಲ, ಹಾಗೆಯೇ ಆಕ್ರಮಣಕ್ಕೆ ಆದೇನು ಕಾರಣವೆಂಬುದನ್ನು ನಾವಿಂದು ಯೋಚಿಸಿದಿರುವದಿಲ್ಲ! ಹೇಗಿದ್ದರೂ ಋಷಿ ದಯಾನಂದರು ರಾಮಕೃಷ್ಣ ಪರಮಹಂಸರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದಂತೆ ಭಾರತ ಮಾತೆಯನ್ನೇ ದೋಷದ ಆರೋಪ ಹೊರಿಸುತ್ತಿರುವವರೂ ನೈಜ ರಾಷ್ಟ್ರ ಭಕ್ತರ, ದೇಶ ಪ್ರೇಮಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುವರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಸಮಯ ಇನ್ನು ಸನ್ನಿಹಿತವಾಗಿಲ್ಲ. ಆ ರಾಷ್ಟ್ರ ಭಕ್ತರಾದರೋ ಇದೋ ನಾವಿಲ್ಲಿ ಇದ್ದೇವೆಂದು ಬಂಬಡ ಬಾರಿಸುತ್ತಿರುವದಿಲ್ಲ. ಶ್ರೀ ರಾಮಕೃಷ್ಣ ಪರಮಹಂಸರ ಮಾತಿನಲ್ಲೇ ಹೇಳುವದಿದ್ದಲ್ಲಿ - "ಸಾಮಾನ್ಯ ಮಾನವನು ಧರ್ಮದ ಕುರಿತು ಗಂಟೆಗಟ್ಟಲೆ ಮಾತಾಡುತ್ತಾನೆ, ಆದರೆ ಆದರಂತೆ ಆದಿನಿತೂ ಕಾರ್ಯ ಮಾಡುವದಿಲ್ಲ. ಬುದ್ಧಿವಂತರು ಬಂಬಡ ಬಾರಿಸುವದಿಲ್ಲ, ಬದಲು ಅದರಂತೆ ನಡೆದುಕೊಳ್ಳುತ್ತಾರೆ." ರಾಜಕೀಯಸ್ಥರ ಕುರಿತು ಕೇಳುವದೇ ಬೇಡ. ಅವರ ಬಳಿ ಇರುವದು ಕೇವಲ ಮಾತಿನ ಬಂಬಡ ಅಥವಾ ಜಾಗಟೆ. ನೈಜ ಸ್ವಯಂ ಸೇವಕರು ನಿಜವಾಗಿ ದೇಶ ಸೇವೆಯನ್ನು ಮಾಡುತ್ತಿರುತ್ತಾರೆ. ಅವರಿಗೆ ಚುನಾವಣೆಯತ್ತ ಗಮನವೇ ಇರುವದಿಲ್ಲ.

"ನಾನು ಹೇಳುತ್ತಿರುವವರ ಹದಿನಾರನೇ ಒಂದಂಶದಷ್ಟನ್ನಾದರೂ ಕಾರ್ಯರೂಪಕ್ಕೆ ತರದಲ್ಲಿ ನಿಮಗೆ ಮುಕ್ತಿಯು ಖಂಡಿತವಾಗಿ ದೊರಕುತ್ತದೆ...."

ಶ್ರೀ ರಾಮಕೃಷ್ಣರ ಈ ಮಾತು ಇಂದಿನ ರಾಜಕೀಯಕ್ಕೂ ಚೆನ್ನಾಗಿ ಅನ್ವಯಿಸುತ್ತದೆ. ಆಡಳಿತ ಲಗಾಮು ಹಿಡಿದುಕೊಂಡಿರುವವರು ಹದಿನಾರು ವರ್ಷಗಳಲ್ಲಿ ಬಂಬಡ ಬಾರಿಸಿರುವದರಲ್ಲಿ ಹದಿನಾರನೇ ಒಂದಂಶವನ್ನು ಪ್ರಯೋಗ ತರುತ್ತಿದ್ದಲ್ಲೂ ರಾಷ್ಟ್ರ ಬಹಳ ಪ್ರಗತಿ ಹೊಂದುತ್ತಿತ್ತು. ಅದು ಭಾಷೆಯ ವಿಷಯದಲ್ಲೂ ಹಾಗೇನೇ ಎಲ್ಲರನ್ನು ಸದಾಕಾಲ ತೃಪ್ತಿಪಡಿಸಿಟ್ಟುಕೊಳ್ಳಲೂ ಯಾರಿಂದಲೂ ಸಾಧ್ಯವಿಲ್ಲ. ಗಡಿ ರಕ್ಷಣೆಯ ವಿಷಯದಲ್ಲೂ ಹಾಗೆಯೇ. ಈಗ ಭಾಷಾ ಬಡಿದಾಟ ಬಹಳಷ್ಟು ಬಿಗಡಾಯಿಸಿರುವಾಗ ರಕ್ಷಣಾ ಮಂತ್ರಿ ಚವ್ಹಾಣರು ಚೈನಾ ಆಕ್ರಮಣ ನಡೆಸಲು ಮುಂದಾಗಿದೆಂದು ಹಾಹಾಕಾರ ಎಬ್ಬಿಸುತ್ತಿದ್ದಾರೆ. ಅವರಿಗೆ ಪಚ್ಚೆ ಗುರುತು ತೋರಿಸಲು ಇಲ್ಲಿನ ಕಮ್ಯೂನಿಸ್ಟರು ಕಾತುರರಾಗಿದ್ದಾರೆಂದು ಗೃಹಮಂತ್ರಿ ನಂದಾ ನುಡಿದಿದ್ದಾರೆ. ಈ ಮಂತ್ರಿಗಳೆಲ್ಲರೂ ತಮ್ಮ ಮಾತುಗಳನ್ನು ಕೃತಿಗೆ ತರುತ್ತಿದ್ದಲ್ಲಿ, ಅದೆಷ್ಟು ಚೆನ್ನಾಗಿರುತ್ತಿತ್ತು!

ಋಷಿ ದಯಾನಂದರು ರಾಮಕೃಷ್ಣ ಪರಮಹಂಸರಿಗೆ ಸಾಷ್ಟಾಂಗ ಪ್ರಣಾಮ ಮಾಡಿರುವುದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಭಾರತ ಭೂಮಿಯಲ್ಲಿ ಆದೇನೂ ತಪ್ಪಿಲ್ಲ. ಆಕ್ರಮಣಗಾರರನ್ನು ಉಳಿಯಲು ಬಿಟ್ಟದ್ದೇ ನಮ್ಮ ತಪ್ಪಿದೆ. ಇದನ್ನು ನಾವಿಂದು ತಿದ್ದಿಕೊಳ್ಳಬೇಕಾಗಿದೆ. ಅದೇ ಇಂದಿನ ಶಿವರಾತ್ರಿ ಸೂಚಿಸುತ್ತಿದೆ.

ಕೈಲಾಸವು ಚೈನೀಯರ ವಶವಿರುವದರಿಂದ ಶಿವ ಓಡಿಹೋಗಿರುವದರಿಂದ ಆ ಪರಮೇಶ್ವರನು ನಮ್ಮನ್ನೆಂತು ಕಾಯುವನೆಂಬ ಪ್ರಶ್ನೆಯನ್ನು ಕಮ್ಯೂನಿಸ್ಟರು ಹಳ್ಳಿಗರ ಬಳಿ ಕೇಳುತ್ತಿದ್ದಾರೆ. ಕಲಿಯುಗದಲ್ಲಿ ಸಂಘವೇ ಶಕ್ತಿ ಯೆಂದು ಭಾರತೀಯರ ಸಂಘಟನೆಯೇ ಆದೆಂತಹ ಆಕ್ರಮಣವನ್ನು ಎದುರಿಸಬೇಕಾಗಿರುತ್ತದೆ! ಅದು ಯಾವ ರೀತಿಯ ಸಂಘಟನೆಯೆಂಬುದನ್ನು ಹಿಂದಿನ ಸಂಚಿಕೆ ಸ್ಪಷ್ಟಪಡಿಸುತ್ತದೆ. ಈ ಸಂಘಶಕ್ತಿಯಲ್ಲದೆ ಪ್ರತ್ಯೇಕ ಪರಮೇಶ್ವರನ ಆಗಮನದ ಆವಶ್ಯಕತೆಯಾದರೂ ಏನಿದೆ? ಅವನ ಅನುಗ್ರಹವಿದ್ದಲ್ಲಿ ಸಾಕು, ನಾವು ಬಲವೊಂದಿದ್ದರೆ ಸಾಕು.

ಪವಿತ್ರ ಕೆಲಸವು ಆ ಕೆಲಸ ಮಾಡಿದವನ ಆಂತರಿಕ ಪಾವಿತ್ರ್ಯವನ್ನು ಹೆಚ್ಚಿಸುವದರೊಂದಿಗೆ ನಿಸ್ವಾರ್ಥಜೀವನ ವಿಶ್ವ ಜೀವನವಾಗುವ ಬೀಜವನ್ನು ಬಿತ್ತುತ್ತದೆ.

೦ ೦ ೦

1964-65
ಬೋನಸ್ ವರ್ಷ!

ಲೈಫ್ ಇನ್ಷೂರೆನ್ಸ್ ಕಾರ್ಪೋರೇಷನ್ನಿನ ಐದನೇ ವೇಲ್ಯುಯೇಷನ್ 31-3-1965 ರ ವರೆಗೆ ಆಗಲಿದೆ, ಮತ್ತು ಆಗ ಸಂಪೂರ್ಣ ವಿಮಾ ಹಣದ ಮೇಲೆ ಜಾರಿಯಲ್ಲಿರುವ ಎಲ್ಲಾ ಲಾಭಸಹಿತ ಪಾಲಿಸಿಗಳಿಗೆ ವೇಲ್ಯುಯೇಷನ್ನಿನ ಫಲವಾಗಿ ಬರುವ ಲಾಭದಲ್ಲಿ ಭಾಗವಹಿಸಲು ಹಕ್ಕಿರುತ್ತದೆ.

31-3-1963ರ ವರೆಗೆ 4ನೇ ವೇಲ್ಯುಯೇಷನ್ನಿನ ಫಲವಾಗಿ ಹೆಚ್ಚಿಸಿದ ದರಗಳು ಹೀಗಿತ್ತು:

ಹೋಲ್ ಲೈಫ್ ಎಷೂರೆನ್ಸ್:	ಎಂಡೋಮೆಂಟ್ ಎಷೂರೆನ್ಸ್:
ರೂ. 17.50, ವಿಮಾ ಹಣ ಪ್ರತಿ 1,000 ದ ಮೇಲೆ ವರ್ಷಕ್ಕೆ	ರೂ. 14.00, ವಿಮಾ ಹಣ ಪ್ರತಿ 1,000 ದ ಮೇಲೆ ವರ್ಷಕ್ಕೆ

ನಿಮ್ಮ ಹಿತಕ್ಕಾಗಿ 31-3-1965 ರಲ್ಲಿ ಸಂಪೂರ್ಣ ವಿಮಾ ಹಣದ ನಿಮ್ಮ ಪಾಲಿಸಿಯನ್ನು ಜಾರಿಯಲ್ಲಿಡಿ. ಇದಲ್ಲದೆ ಮೇಲೆ ಹೇಳಿದ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚೆ ಲಾಭ ಸಹಿತ ಪಾಲಿಸಿಯನ್ನು ತೆಗೆದುಕೊಳ್ಳುವುದು ಲಾಭದಾಯಕ ಏಕೆಂದರೆ ಅಂತಹ ಹೊಸ ಪಾಲಿಸಿಗಳಿಗೂ ಸಹ ಒಂದು ವರ್ಷದ ಬೋನಸ್ಸಿನ ಹಕ್ಕಿರುತ್ತದೆ.

ಜೀವ ವಿಮೆ ಮಾಡಿದ ದಿನದಂದಿನಿಂದ ನಿಮ್ಮ ಭವಿಷ್ಯದ ಬಗ್ಗೆ ನೀವು ನಿಶ್ಚಿಂತರಾಗಿರಬಹುದು

ಲೈಫ್ ಇನ್ಷೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ

ASP/LIC/AS 22 Kan

ಹೂ ಬಾಣ

ಸತ್ತ ಮೇಲೆ.....?

ಹೂಡಿದವರು: ಶ್ರೀ ಮಾಜಿಬೈಲು ಭಾಸ್ಕರ ಭಂಡಾರಿ, ಪಿಟಿ, ಬೆಂಗಳೂರು

"ಲೇ, ಬಾರೇ ಇಲ್ಲಿ'

"ಯಾರು" ಏನೂಂದ್ರಿ?"

"ಯಾರೂಂದ್ರೆ ನಿನ್ನ ಅಪ್ಪ್ರ...ಬಂದು ನೋಡು"

"ನೋಡುವುದೇನ? ನಿಮ್ದೇನ್ರಪ್ಪ.... ಅದಿರ್ಲಿ, ಇಂದೇನು ನಿಮಾರಿ ಬಲು ಬೇಗ? ಮುಸುಡು ಕಂಡ್ರೇ ಬಹಳ ಸಂತೋಷದಲ್ಲಿ ಇರುವಾ ಹಾಗಿದೆಯಲ್ಲ?"

"ಸಂತೋಷ ಇಲ್ದೇ ಮತ್ತೇನು?.... ಒಟ್ಟಾರೆ ನಿನ್ನ ಭಾಗ್ಯ ಅನ್ನೂ...."

"ಅದೇನು ನನ್ಭಾಗ್ಯ?... ನನ್ಭಾಗ್ಯವೇ ನಿಂಭಾಗ್ಯ.... ಅಂತೂ ನಮ್ಮಿಬ್ಬರ ಭಾಗ್ಯ ಅನ್ನಿ."

"ಛೆ ಛೆ ಎಲ್ಲಿಂತೂ? ನಿನ್ನದೇ ಭಾಗ್ಯ"

"ಅಂದ್ರೇ"

"ಅಂದ್ರೇನೂ...ನಮ್ಮನಕ್ಕೇ ಈಗೊಂದು ಹೊಸ ರೋಗ ಬಂದಿದೆ. ಈ ರೋಗದಿಂದ ನಿನ್ನಂತವರ ದೆಸೆ ಕೋಟಿಂತ ರಾಜು ದೆಸೆ ಆಗ್ಬಿಡ್ತೆ!"

"ನಿಮ್ಮನಕ್ಕೇ ರೋಗ ಬಂದ್ರೇ ನನ್ನ ದೆಸೆ ಕೋದಂಡರಾಮನದೆಸೆ ಆಗೋಕೆ ನಾನೇನು ಡಾಕ್ಟ್ರೇ ನರ್ಸೋ?"

"ಈ ರೋಗಕ್ಕೆ ಡಾಕ್ಟ್ರು ಬೇಕಿಲ್ಲ.. ನರ್ಸ ಬೇಕಿಲ್ಲ...ಅಂಕೂ ನೀನು ಕವಿಹುತ್ತಿ ತಾನ?"

"ಅರ್ಥವಾಗೋಲ್ಲಲ್ಲಾ....ಅಂದ್ರೆ ಅದೆಂತಹಾ ರೋಗ?"

"ಅದೇ... ನೋಡ ಮೊನ್ನೆ ಮೊನ್ನೆ ಕುಂದಾಪುರದಲ್ಲಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ ಸ್ಮಾರಕ ಗ್ರಂಥ ಬಿಡುಗಡೆಯಾದ ಸಂಗ್ತಿಯಾದ್ರೂ ನಿಂಗೊತ್ತೇ..."

"ಛೆ ಗೊತ್ತಿಲ್ದೇನು...ಇದೂ ಗೊತ್ತಿಲ್ದಿದ್ರೆ ಸಂತೆಯಲ್ಲಿ ಸಿಕ್ಕ ಪೇಪರನ್ನೆಲ್ಲಾ ತಲೆ ಮೇಲೆ ಹೊತ್ಕೊಂಡು ಬರುವ ನಿಮ್ಮಂತಹ ಮಹಾ ಕವಿಗಳ ಕೈ ಹಿಡಿದೇನು ಸಾರ್ಥಕ? ನಿಮ್ಮ ಆ ಸ್ಮಾರಕ ಗ್ರಂಥ ಬಿಡುಗಡೆಗೆ ಮೈಸೂರಿನ ಮುಖ್ಯಮಂತ್ರಿ ನಿಜಲಿಂಗಪ್ಪನವ್ರೂ, ವಿಶ್ವ ನಾಟಿತಿ ಶಿವರಾಮ ಕಾರಂತ್ರೂ ಎಲ್ಲಾ ಬಂದಿದ್ರಂತಲ್ಲಾ...."

"ಭೇಷ್! ಭೇಷ್! 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬಂತೆ ಪತ್ನ್ಯಾದಿಚ್ಛೇತ್' ಪರಾಜಯಂ ಆಗಲಿ...ಆ ಹೌದು... ಮೊನ್ನೆ ಪೈಗಳನ್ನು ಹುಟ್ಟಿದಂದಿನಿಂದ ಕಾಣದವರೂ ಅವರ ಗ್ರಂಥಗಳೇನೆಂದು ಕಣ್ಣೆತ್ತಿ ನೋಡದವ್ರೂ ಉದ್ದುದ್ದ ಭಾಷಣಗಳನ್ನು ಬಿಗಿದಂತೆ....ಅಂತವರ ಲೇಖನಗಳಂಥೇ ಸ್ಮಾರಕ ಗ್ರಂಥ ಆಳತೆ ಮೀರಿ ಪೈಗಳ ಜೀವನಚರಿತ್ರೆಗೆ ಜಾಗವೂ ಅವರೊಂದಿಗೆ ಅವರ ಕೊನೆಯುಸಿರಿನ ತನಕ ಜೀವಿಯುತ್ತಿದ್ದವರ ಲೇಖನಗಳಿಗೆ ಎಡೆಯೇ ಇರಲಿಲ್ಲವಂತೆ. ಅಂತಹಾ ಲೇಖನಗಳನ್ನು ಓದಿದರುಗಳು ತ್ತಾ ವ್ಯವಸ್ಥಾಪಕರು "ಈ ವಿಷಯದಲ್ಲಿ ತಾವು ಎಳ್ಳಷ್ಟು ಬೇಸರಿಸುವುದಿಲ್ಲವೆಂದು ನಂಬಿಯೇ ಕಳುಹಿಸುತ್ತೇವೆ" ಎಂದು ಸಹಾನುಭೂತಿಯನ್ನೂ ತೋರಿದಂತೆ..."

"....! ಭಾಷಣಗಾರರು ಮಾತನಾಡುತ್ತಾ 'ಪೈಗಳ ಉದ್ದೇಶ ಕೈಗೂಡಲಿ!' ಎಂದು ವೈರಾಗ್ಯವನ್ನು ಗಟ್ಟಿಯಾಗಿ ಹಿಡಿದುಕೊಂಡೇ ನಿರರ್ಗಳವಾಗಿ ಕರತಾಡನಗಳ ಮಧ್ಯೆ ಸಾರಿದರಂತೆ"

'ಅದಕ್ಕೆ ನೀವೇಕ್ರೀ ತಾನೆ ತಲೆ ಬಡಕೊಳ್ಳೋದು? ಮಹಾನೀಯರ ಸ್ಮಾರಕ ಗ್ರಂಥ ರಚಿಸುವುದು ಸ್ವಾಭಾವಿಕ ತಾನೆ?..."

"ನಾನು ಅಲ್ಲಾ ಅನ್ನೆನೆಯೆ? ಅದಕ್ಕಾಗಿಯೇ ನಾನಂದದ್ದು ನಮ್ಮನಕ್ಕೆ ಈ ಬುದ್ಧಿ ಬಂದದ್ದರಿಂದ ನಿನ್ನಂತವರ ದೆಸೆ ಮೇಲೇರಿತು ಅಂತಾ...."

"ಅಂದ್ರೆ...?"

"ಅಂದ್ರೇ....ನೋಡು ಎಂಭತ್ತರ ಹರೆಯದಲ್ಲಿ ಕೈ ನಡುಗುತ್ತಿದ್ದರೂ....ಇಂದು ಬಂದ ಪತ್ರಗಳಿಗೆ ಇಂದೇ ಉತ್ತರಿಸಿದ ಆ ಅನನ್ಯ ಬಹು ಭಾಷಾ ಬೃಹಸ್ಪತಿ....ಕೊನೆಯುಸಿರೆಳೆಯುವ ತನಕವೂ ನವಿರ್ಗ್ರ ಜನನಿದ್ದೆಯಲ್ಲೇ ಇತ್ತು. ಅಂತಹ ಒಬ್ಬ ವಿದ್ವಾಂಸ ಕನ್ನಡ ನಾಡಿನಲ್ಲಿ ಹುಟ್ಟಿದ್ದೂ ಇಲ್ಲ...ಇನ್ನು ಹುಟ್ಟುವುದೂ ಸಂಶಯ! ಹುಟ್ಟಿದರೂ ಆ ಸ್ಮರಣೆಯು, ಆ ನಿರಾಡಂಬರ.. ಆ ಸರಳತೆಯನ್ನು ಕಾಣಲು ಸಾಧ್ಯವೇ ಇಲ್ಲ. ಅವರನ್ನು ತನ್ನ 'ಸಾಹಿತ್ಯದ ಗುರು ಎಂದು ಒಪ್ಪಿಕೊಳ್ಳುವ ಅನೇಕರನ್ನು ಸನ್ಮಾನಿಸಿ ಡಾಕ್ಟರೇಟೋ, ಪದ್ಮಶ್ರೀಯೋ ಇನ್ನಾವುದೋ ಬಿರುದುಗಳನ್ನೂ ನಿಧಿಗಳನ್ನೂ ಸಮರ್ಪಿಸಿದರೂ ಅವರು ಮಾತ್ರ ಯಾರ ಕಣ್ಣಿಗೂ ಗೋಚರಿಸದಾದರು! ಅವರದನ್ನು ಬಯಸಿದ್ದೂ ಇಲ್ಲ ಅನ್ನು...ಸತ್ತ ಮೇಲೆ ಅವರು ಅಂತವರು... ಇಂತವರು.. ಎಂದೆಲ್ಲಾ ಹಾಡಿ ಕುಣಿದರೆ ಏನು ತಾನೆ ಸಾರ್ಥಕ? ಅದಕ್ಕಾಗಿಯೇ ನೀನನ್ನುತ್ತಿಯಲ್ಲಾ! 'ನಿಮಗೊಮ್ಮೊಮ್ಮೆ ತಲೆ ಬಿಸಿಯಾಗುತ್ತೇ'ಅಂತ? ಆ ತಲೆ ಬಿಸಿ ಬರುವಾಗ ನಾನೊಮ್ಮೆ ಕೇಳಿದ್ದು –

"ಕ್ರಿಸ್ತನಿಗೆ ಕಲು ಶಿಲುಬೆ ಗಾಂಧಿಗೆ ಗುಂಡೇಟು ಲಿಂಕನರು ಕೆನ್ನಡಿಗೆ ಕೊಲೆಯು ನೋಡು...."

"ಸತ್ತ ಮೇಲೆಯೆ ಪೂಜೆ ಸಾಯುವ ತನಕವು ಹಿಂಸೆ ಏಕೆ ಬಂತೋ ನರಗೆ ಈ ಕೆಟ್ಟ ಬುದ್ಧಿ? ಎಂದು.

"ಸಾಕು ನಿಮ್ಮ ಈ ವ್ಯಾಖ್ಯಾನ ಆದಿರಲಿ... ನಿಮ್ಮ ಈ ಪುರಾಣಕ್ಕೂ ನನ್ನ ದೆಸೆಗೂ ಏನು ಸಂಬಂಧ..."

"ಅದೇ ನೋಡು ಹೆಂಗಸ್ರಿಗೆ ಮೊಣಕಾಲು ವರೇಗೆ ಬುದ್ಧಿ ಅನ್ನೋದು...."

"ಅಂದ್ರೇ!...."

"ಅಂದೇ ಅದೇ....ಆಗೇನೋ ನಿಮಗೆ ತಲೆ ಬಿಸಿ' ಎಂದು ನೀನಂದ್ರೂ....ನಾನು ಸಾಯುವ ವರೇಗಾ ಅವನಿಗೆ ದುಃಖ್ಖ ಎಂದ. ಜನ ಅಂದ್ರೂ....ಮತ್ತೆ ಒಂದು ದಿನ ನಾನು....ಆಚೆ ದಾಟಿದ ಮೇಲೆ ನನ್ನ ಸ್ಮಾರಕ ಗ್ರಂಥ.. ನಿಧಿ...ಎಲ್ಲಾ ರಚಿಸುವಾಗ ನೀನಿದ್ದು ಕೊಂಡರೆ ...ನಿನ್ನ ದೆಸೆ ಕೇಳಬೇಕೇ?

"ಸಾಕು ಆಸಿಸ್ಟ ಇದಕ್ಕೇ ಇಷ್ಟೆಲ್ಲಾ ಬಿಟ್ಟಿದ್ದೇ!"

"ನಮಸ್ಕಾರ",

"ಲಪ್ಪಣಿ .."

ನಗು ನೀನು...
ಜಗವೆ ನಿನ್ನೊಡನೆ
ನಗುತಲಿಹುದು!

ಮಂಜಯ್ಯ: ಭ್ರಷ್ಟಾಚಾರ ನನಗೆ ಎಂದಿಗೂ ಸೇರದು.

ಸಂಜಯ್ಯ: ನನಗೂ ಅಷ್ಟೆ!

ಮಂಜಯ್ಯ: ಹಾಗಾದರೆ ನಿಮಗೂ ಬೇಸರ ಬಂತೇನ್ನಿ!

o o o

ನವದಂಪತಿಗಳು ಸರಸ ಸಲ್ಲಾಪ ಮಾಡುತ್ತಾ —

ಗಂಡ: ನಾನು ನಿನ್ನನ್ನು ಪ್ರೀತಿಸುವಷ್ಟು ಬೇರೆ ಯಾರನ್ನೂ ಪ್ರೀತಿಸುವುದಿಲ್ಲ.

ಹೆಂಡತಿ: ನಾನೂ ಹಾಗೆಯೆ!

o o o

ಮಂತ್ರಿ: ಈ ಸಭೆಯಲ್ಲಿಯೇ ಪಕ್ಷಾಂತರಿಗಳಿದ್ದರೆಂದು ನನ್ನ ನಂಬಿಕೆ.

ಒಬ್ಬ ಪ್ರೇಕ್ಷಕ: ನೂರಕ್ಕೆ ನೂರರಷ್ಟು ಸತ್ಯದ ಮಾತು ಸ್ವಾಮಿ!

o o o

ಬಬ್ಬಿ: ಭಾವ, ರಾತ್ರಿ ನೀವು ತಿಂಡಿ ತರಲೇ ಇಲ್ಲ.

ಭಾವ: ನಾನು ರಾತ್ರಿ ಬರಲೇ ಇಲ್ಲವಲ್ಲ!

ಬಬ್ಬಿ: ಓಹೋ! ನೀನಲ್ಲವೆ ರಾತ್ರಿ ಅಕ್ಕನೊಡನೆ ಮಾತಾಡುತ್ತಿದ್ದುದು?

— ಕೆ: ಸುರೇಂದ್ರನಾಥ ಶೆಟ್ಟಿ, ಬಳ್ಕೂರು.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪಾಲಕೃಷ್ಣ ರಾವ್

ಪುಟಗಳು 126 ಬೆಲೆ. ರೂ. 1 50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿ ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

Statement about ownership and other particulars about Newspaper: NAVAYUGA

FORM IV (Rule 5)

1. *Place of Publication*	...	UDIPI
2. *Periodicity of its Publication*	...	WEEKLY
3. *Printer's Name*	...	K. H SHETTY
Nationality	...	INDIAN
Address	...	Palukote, Udipi (S. K.)
4. *Publisher's Name*	...	K. H. SHETTY
Nationality	...	INDIAN
Address	...	Palukote, Udipi (S. K.)
5. *Editor's Name*	...	K. H. SHETTY
Nationality	...	INDIAN
Address	...	Palukote, Udipi (S. K.)
6. *Names and addresses of individuals who own the news-paper and partners or shareholders holding more than one percent of the total capital.*		K. H. SHETTY Palukote, Udipi (S. K.) (Prop.)

I, K H. Shetty, hereby declare that the particulars given above are true to the best of my knowledge and belief.

Date 2—3—1965. (Sd.) K H SHETTY, *Signature of Publisher.*

ಭಾರತದ ಆಹಾರ ಕಾರ್ಪೊರೇಶನ್

(ಐದನೇ ಪುಟದಿಂದ)

ಸಲ್ಪಡುತ್ತಿದೆ. ಹೀಗಿರುವಾಗ ಆಹಾರ ಧಾನ್ಯಗಳ ಬೆಲೆಯಲ್ಲಿ ಹೆಚ್ಚಳವೆಂದರೆ, ಜೀವನದ ವೆಚ್ಚದಲ್ಲಿ ಹೆಚ್ಚಳ, ಸಂಬಳದಲ್ಲಿ ಹೆಚ್ಚಳ, ಇದರ ಫಲವಾಗಿ ಹಣದ ಉಬ್ಬರ ಹಾಗೂ ಎಲ್ಲೆಲ್ಲೂ ವಿಷವೃತ್ತ. ಉತ್ಪಾದಕರಿಗೆ ಹೆಚ್ಚು ಬೆಲೆ ದೊರೆಯಬೇಕೆಂಬುದೇನೋ ನಿಜ. ಆದರೆ ಬಳಕೆದಾರರಿಗೂ ಅತಿ ಕಡಿಮೆ ದರದಲ್ಲಿ ಆಹಾರ ಧಾನ್ಯಗಳ ಸರಬರಾಜಾಗಬೇಕು. ಇದಕ್ಕೆ ಇರುವ ಒಂದೇ ದಾರಿಯೆಂದರೆ ವಿತರಣೆಯ ಪದ್ಧತಿಯಲ್ಲಿ ಬರುವ ಮಧ್ಯವರ್ತಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದು. ಇಂದು ಆಹಾರಧಾನ್ಯ ವಿತರಣೆಯಲ್ಲಿ ಕಾರ್ಯವೆಸಗುತ್ತಿರುವ ಎಲ್ಲಾ ವರ್ಗದವರ ಸಹಕಾರ ಹಾಗೂ ಸೇವೆಗಳನ್ನು ಭಾರತದ ಆಹಾರ ಕಾರ್ಪೊರೇಶನು ಸಾಧ್ಯವಾದಷ್ಟು ಮಟ್ಟಿಗೆ ಪಡೆಯಲು ಯತ್ನಿಸುವುದು. ಇದಕ್ಕೆ ಕಾರಣ, ಕಾರ್ಪೊರೇಶನು ಅವರು ಮಾಡುತ್ತಿರುವ ಕಾರ್ಯದ ಪುನರಾವರ್ತನೆಯನ್ನು ಬಯಸುವುದಿಲ್ಲ. ಉತ್ಪಾದಕರಿಂದ ಬಳಕೆದಾರರ ಕೈಗೆ ಆಹಾರಧಾನ್ಯ ಹೋಗುವಾಗ ಬೆಲೆಯಲ್ಲಿ ಸ್ವಲ್ಪ ಮಾತ್ರ ಹೆಚ್ಚಳವಾಗಿ ಮಧ್ಯವರ್ತಿಗಳ ಲಾಭದ ಅಂಶವನ್ನು ಕಡಿಮೆ ಮಾಡುವುದೇ ಕಾರ್ಪೊರೇಶನಿನ ಉದ್ದೇಶ. ಈ ಉದ್ದೇಶ ಸಾಧನೆಗಾಗಿ ಕಾರ್ಪೊರೇಶನ್ ಭಯೋತ್ಪಾದಕ ಒತ್ತಾಯದ ಕಾರ್ಯಗಳನ್ನು ಕೈಕೊಳ್ಳುವುದಿಲ್ಲ. ಅದು ಉತ್ಪಾದಕರು ಸಮಾಜದ ಕಡೆಗೆ ತೋರಬೇಕಾದ ಕರ್ತವ್ಯಪ್ರಜ್ಞೆಗೆ ವ್ಯಾಪಾರಿಗಳ ಪ್ರಾಮಾಣಿಕತೆಯೆಡೆಗೆ ಹಾಗೂ ಬಳಕೆದಾರರ ತಾಳ್ಮೆಯೆಡೆಗೆ ಅವರ ಗಮನವನ್ನು ಸೆಳೆದು, ಅವರಲ್ಲಿ ಸಹಕಾರಕ್ಕಾಗಿ ವಿನಂತಿಸುತ್ತದೆ.

ಭಾರತದ ಆರ್ಥಿಕ ಅಸಮಾನತೆಯೆಂಬ ಕ್ಯಾನ್ಸರ್ ರೋಗವನ್ನು ನಿರ್ಮೂಲಿಸಬೇಕಾದರೆ ಅದಕ್ಕೆ ನಿರತ ಶಸ್ತ್ರಕ್ರಿಯೆಯೇ ಜರಗಬೇಕಲ್ಲದೆ ಕಟಿಕನ ಚಾರಿಯ ಉಪಚಾರವಲ್ಲ. ಹಾಗೆಂದು ಕಾರ್ಪೊರೇಶನಿನ ಬೃಹತ್ಪ್ರಮಾಣದ ಭಂಡವಾಳ ಹಾಗೂ ಸರಕಾರದ ಕಕ್ಷೆಯೊಳಗಿರುವ ಶಿಕ್ಷೆಯ ಕಠಿಣ ತರಹವುಗಳನ್ನು ಅಗತ್ಯ ಬಿದ್ದಲ್ಲಿ ಉಪಯೋಗಿಸುವಲ್ಲಿ ಅವುಗಳು ಹಿಂಜರಿಯಲಾರವು. ಇಲ್ಲಿ ಸಮಾಜದ ಹಿತರಕ್ಷಣೆಯೇ ಮುಖ್ಯವಾದ ಗುರಿಯಾಗಿದೆ. ಸಂದರ್ಭ ಬಂದರೆ ಇಂತಹ ಕ್ರಮ ಕೈಕೊಳ್ಳಲು ಅವುಗಳು ಬದ್ಧವಾಗಿವೆ. ಕೆಲವೇ ವ್ಯಕ್ತಿಗಳ ಲಾಭ ಒಡಕತನಕ್ಕಾಗಿ ಇಡೀ ಸಮಾಜವನ್ನೇ ಬಲಿಗೊಡುವುದು ಸರಿಯಲ್ಲ. ಕೃಷಿಯ ರಂಗದಲ್ಲಿ ಕಾರ್ಪೊರೇಶನಿನ ಅಸ್ತಿತ್ವವು ಅಗತ್ಯವಿಲ್ಲದಂತೆ ಮಾಡುವುದೇ ಕಾರ್ಪೊರೇಶನಿನ ಯಶಸ್ಸನ್ನರಿಯಲು ಇರುವ ಮಾರ್ಗ, ಅದು ಗಂಡಾಂತರ ಪ್ರಸಂಗಗಳಲ್ಲಿ ಕಾರ್ಯವೆಸಗಲು ಇರುವ ಅಗ್ನಿ ಶಾಮಕ ದಳದಂತೆ ಕಾರ್ಯವೆಸಗಬೇಕು.

ರಾಷ್ಟ್ರವೊಂದು ಘಟಕವಾಗಿರಬೇಕು

ಜನರಿಗಾಗಿ ಆಹಾರ ಪೂರೈಸುವಲ್ಲಿ ಇಡೀ ರಾಷ್ಟ್ರವು ಒಂದು ಘಟಕವಾಗಿ ಎಣಿಸಲ್ಪಡಬೇಕು. ರಾಷ್ಟ್ರದ ಉಳಿತಾಯ ಅಥವಾ ಕೊರತೆಯನ್ನು ಇಡೀ ರಾಷ್ಟ್ರಕ್ಕೆ ಅನ್ವಯಿಸಬೇಕು. ದೇಶದ ಕೆಲವು ಭಾಗಗಳು ಆಹಾರದ ಮಟ್ಟಿಗೆ ಮಿಗತೆಯ ಭಾಗಗಳಾಗಿದ್ದರೆ ಇನ್ನು ಕೆಲವು ಭಾಗಗಳು ಅಧಿಕ ಜನಸಂಖ್ಯೆಯ ದೆಸೆಯಿಂದಲೋ, ಬರಗಾಲ, ನೆರೆಗಳ ಹಾವಳಿಯಿಂದಲೋ ಕೊರತೆಯ ಪ್ರದೇಶಗಳಾಗಿರಬಹುದು. ದೇಶದ ಎಲ್ಲಾ ಜನರಿಗೆ ಬೇಕಾದಷ್ಟು ಆಹಾರವನ್ನು ಒದಗಿಸುವುದೇ ನಮ್ಮ ಆದ್ಯ ಗುರಿಯಾಗಿರುವಾಗ, ದೇಶದ ಕೊರತೆಯ ಭಾಗಗಳಿಗೆ ಮಿಗತೆಯ ಭಾಗಗಳಿಂದ ಯಾವುದೇ ದಾಕ್ಷಿಣ್ಯಕ್ಕೊಳಪಡದೆ ಆಹಾರ ಧಾನ್ಯ ಸರಬರಾಜಾಗಬೇಕು. ಮಿಗತೆಯ ಭಾಗಗಳ ಜನರು ತಮಗೆ ತೊಂದರೆಯಾದರೂ ಸಹಿಸಿಕೊಂಡು ಕೊರತೆಯ ಭಾಗಗಳ ಜನರಿಗೆ ಸ್ವಸಂತೋಷದಿಂದ ಆಹಾರ ಧಾನ್ಯ ಒದಗಿಸಬೇಕು. ಕೊರತೆಯ ರಾಜ್ಯಗಳ ಜನರು ಆಹಾರಾಭಾವದಿಂದ ಉಪವಾಸ ಬೀಳುತ್ತಿರುವಾಗ ಮಿಗತೆಯ ರಾಜ್ಯಗಳವರು ಹೆಚ್ಚುಂಡು, ಆಹಾರದ ವ್ಯಯ ಮಾಡಲು ಬಿಡುವುದಲ್ಲ. ರಾಷ್ಟ್ರದಲ್ಲಿ ಆಹಾರದ ಕೊರತೆ ಇರುವಾಗ ದೇಶದ ಎಲ್ಲಾ ಭಾಗಗಳ ಜನರು ತ್ಯಾಗಕ್ಕೆ ಸಿದ್ಧರಾಗಿದ್ದು ಸಂಯಮವನ್ನಾಚರಿಸಬೇಕು. ಇದರಲ್ಲಿ ಕೊರತೆಯ ಅಥವಾ ಮಿಗತೆಯ ಭಾಗ ಎಂಬ ಭೇದ ಭಾವಕ್ಕೆಡೆಯಿಲ್ಲ. ಈ ಭಾವನೆ ಇಲ್ಲದೆ ಹೋದರೆ ರಾಷ್ಟ್ರೀಯ ಭಾವೈಕ್ಯ ಮತ್ತು ನಾವೆಲ್ಲರೂ ಒಂದೇ ಆ ಮಾತಿಗೆ ಬೆಲೆಯಿಲ್ಲ.

ಭಾರತವು ಈ ಹಿಂದೆ ಬರಗಾಲದ ಬವಣೆಯನ್ನು ಸಾಕಷ್ಟು ಅನುಭವಿಸಿದ ದೇಶವಾಗಿದೆ. ಕಳೆದ ನೂರು ವರುಷಗಳಲ್ಲಿ ಇಪ್ಪತ್ತೆರಡು ಬರಗಾಲಗಳ ಬವಣೆ ಅನುಭವಿಸಿದವರು ನಾವು. ತ್ವರಿತ ಗತಿಯ ಸಾಗಾಟದ ಸೌಕರ್ಯ ಹಾಗೂ ಮುಖ್ಯ ಕೇಂದ್ರಗಳಲ್ಲಿ ಸಂಗ್ರಹಾಲಯಗಳ ರಚನೆಯಾದುದರಿಂದ ಆ ರೀತಿಯ ದುರದೃಷ್ಟಕರ ಪ್ರಸಂಗ ಇತ್ತೀಚೆಗೆ ಬಂದಿಲ್ಲ. ಕೃತಕ ಆಹಾರದ ಅಭಾವವನ್ನು ಜನರೇ ತರುತ್ತಾರೆ. ಆಹಾರಧಾನ್ಯಗಳ ದಾಸ್ತಾನು ಮಾಡುವುದು, ಮಾರುಕಟ್ಟೆಯಿಂದ ಉತ್ಪಾದನೆಯನ್ನು ಹೊರಗೆ ಹೋಗದಂತೆ ಮಾಡುವುದು ಈ ಕೃತಕ ಅಭಾವಕ್ಕೆ ಕಾರಣ. ಉತ್ತಮ ಸ್ಥಿತಿಯಲ್ಲಿರುವ ಜನರೇ ಈ ಸಂಸ್ಥಿತಿಗೆ ಕಾರಣವಾಗುತ್ತಾರೆ. ಬಡವರ ಬಾಳು ದುಸ್ತರವಾಗುವಂತೆ ಮಾಡುತ್ತಾರೆ. ಈ ರೀತಿಯ ದುರ್ಧರ ಪ್ರಸಂಗ ಹಾಗೂ ಕೃತಕ ಅಭಾವಕ್ಕೆ ಕಾರಣವೇನು ಎಂಬುದರ ಕುರಿತು ಸಮೂಲಾಗ್ರ ಅಭ್ಯಾಸವಾಗಬೇಕು. ಮತ್ತು ಇದರ ಪರಿಹಾರಕ್ಕೆ ಮಾರ್ಗ ಹುಡುಕಬೇಕು. ಸರಕಾರವು ವಿಶೇಷ ಅಧಿಕಾರದ ಮೂಲಕ ಈ ಪರಿಸ್ಥಿತಿಯನ್ನು ಎದುರಿಸಲು ಶಾಸನವಾಗಬೇಕು. ಇದರಿಂದ ಪ್ರತಿಯೊಬ್ಬರೂ ಸ್ವಲ್ಪ ಮಟ್ಟಿನ ತ್ಯಾಗವನ್ನು ಮಾಡಿ, ಕೊರತೆಯ ಪರಿಸ್ಥಿತಿಯ ನಿವಾರಣೆಗೆ ನೆರವಾಗಬಹುದು. (ಮುಂದುವರಿಯುವುದು)

ಜನತಾ ಉವಾಚ

ಇಂದು ನಡೆಯಬೇಕಾದುದು ರೈತರ ಉದ್ಧಾರ

"ಕೃಷಿತೋ ನಾಸ್ತಿ ದುರ್ಭಿಕ್ಷ್ಯಂ" ಎಂಬ ಸಂಸ್ಕೃತ ಮಾತೊಂದು ನಮ್ಮಲ್ಲಿ ಬಳಕೆಯಲ್ಲಿದೆ. ಕೃಷಿ ಪ್ರಧಾನ ರಾಷ್ಟ್ರವಾದ ಭಾರತದ ಮಟ್ಟಿಗೆ ಇದು ನೂರಕ್ಕೆ ನೂರು ಪಾಲು ಸತ್ಯವೆನಿಸುವ ಮಾತು. ಇಂದು ದೇಶದಾದ್ಯಂತ ತಾಂಡವವಾಡುತ್ತಿರುವ ಆಹಾರ ಸಮಸ್ಯೆ ದೇಶದ ಪ್ರಗತಿಯ ದಾರಿಯಲ್ಲೊಂದು ಅಡ್ಡಗಲ್ಲು. ಈ ಸಮಸ್ಯೆಯನ್ನು ಯಶಸ್ವಿಯಾಗಿ ಎದುರಿಸುವಲ್ಲಿ ನಾವು ಪರಿಣಾಮಕಾರೀ ಮಾರ್ಗಗಳನ್ನು ಹುಡುಕಿ ಕಾರ್ಯವೆಸಗಬೇಕಾದುದು ಪ್ರಕೃತ ಅಗತ್ಯವೆನಿಸಿದೆ. ನಮ್ಮ ಪಂಚವಾರ್ಷಿಕ ಯೋಜನೆಗಳು, ಹಾಗೂ ಇತರ ಕಾರ್ಯಕ್ರಮಗಳು ರೈತನ ಉದ್ಧಾರ ಮಾಡುವುದನ್ನೇ ಉದ್ದೇಶವಾಗಿಟ್ಟು ಜನ್ಮ ತಳೆದವುಗಳಾದರೂ, ಆ ಯೋಜನೆಗಳ ಫಲ ಮಾತ್ರ ರೈತನ ಕೈಸೇರಿಲ್ಲ ಎಂಬ ವಿಷಾದದಿಂದ ತಿಳಿಸಬೇಕಾಗಿದೆ.

ನಮ್ಮ ಯಾವ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೊದಲು ಇಂದು ಹಳ್ಳಿಯಲ್ಲಿ ದುಡಿಯುತ್ತಿರುವ ಬಡ ರೈತರ ಜೀವನದತ್ತ ನಾವು ದೃಷ್ಟಿ ಹರಿಯಿಸಬೇಕಾದುದು ಅತಿ ಅಗತ್ಯ. ಅವರ ಜೀವನವಿಂದು ದಾರುಣವೆನಿಸಿದೆ. ಬಡತನ, ನಿರಕ್ಷರತೆ, ಅಜ್ಞಾನ, ಹಾಗೂ ಸಾಲದ ಹೊರೆಯಿಂದ ಬಳಲುತ್ತಿರುವ ರೈತರ ಜೀವನದಲ್ಲಿ ಸಂತೋಷದ ಛಾಯೆ ಮೂಡುವಂತೆ ಮಾಡುವುದರಿಂದ ಮಾತ್ರವೇ ಆಹಾರ ಸಮಸ್ಯೆಯು ಪರಿಹಾರವಾದೀತು.

ಜೀವನಾವಶ್ಯಕ ವಸ್ತುಗಳ ಬೆಲೆ ವಿಪರೀತ ಏರುವ ಇಂದಿನ ದಿನಗಳಲ್ಲಿ, ನರಳುತ್ತಿರುವ ಜನರ ಸಾಲಿಗೆ ಸೇರುವವನು ರೈತನು ಕೂಡಾ. ಆತನ ಆದಾಯ ಹೆಚ್ಚಿಲ್ಲ. ಭೂಕಂದಾಯದ ಏರಿಕೆಯಿಂದ ಆತನೇ ಕಷ್ಟಕ್ಕೊಳಗಾಗಿದ್ದಾನೆ. ಅವನು ದುಡಿಯುವ ಭೂಮಿಯಲ್ಲಿ ಆತನಿಗೆ ಸ್ಥಿರತೆ ಇಲ್ಲ. ಹೆಚ್ಚು ದುಡಿದು, ಹೆಚ್ಚು ಉತ್ಪಾದಿಸಿದರೂ ಅದರ ಫಲ ತನ್ನ ಕೈಗೇ ಸಿಗುವುದೆಂಬ ಭರವಸೆ ಆತನಿಗಿಲ್ಲ. ಅಶಿಕ್ಷಿತತೆಯಿಂದಲೇ ಆತ ಬಳಲಬೇಕಾಗಿದೆ. ದಿನವಿಡೀ ಕಷ್ಟಪಟ್ಟು ದುಡಿದರೂ, ಆತನ ಸಂಸಾರಕ್ಕೆ ಹೊಟ್ಟೆ ತುಂಬಾ ಅನ್ನ, ಮೈ ತುಂಬಾ ಬಟ್ಟೆ ದೊರೆಯುತ್ತಿಲ್ಲ. ಇದಕ್ಕಿಂತ ದಿನವಿಡೀ ದುಡಿಯುವ ಸಾಮಾನ್ಯ ಕೂಲಿಕಾರನ ಬಾಳು ಉತ್ತಮ ಎಂಬ ಭಾವನೆ ಅವನಲ್ಲಿ ಬೇರೂರಿದೆ. ವ್ಯಾಪಾರಸ್ಥರು, ನೌಕರ ವರ್ಗದವರು, ಉದ್ಯಮಿಗಳು, ಜಮೀನ್ದಾರರು ಕಾಲಕ್ಕೆ ಸರಿಯಾಗಿ, ಸುಖಜೀವನವನ್ನು ನಡೆಸುತ್ತಿದ್ದಾರೆ. ಸರಕಾರದ ಆಡಳಿತ ವಿಧಾನಗಳಿಂದ ಹಾಗೂ ಶಾಸನಗಳಿಂದ ರೈತನ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ.

ಆಹಾರ ಧಾನ್ಯಗಳ ಬೆಲೆ ಗಗನ ಮುಟ್ಟುತ್ತಿರುವ ಇಂದಿನ ದಿನಗಳಲ್ಲಿ ರೈತನಿಗೆ ಧಾರಾಳ ಲಾಭವಾಗುತ್ತಿದೆ ಎಂದು ಊಹಿಸುವವರೂ ಇರಬಹುದು. ಆದರೆ, ಈ ಮಾತು ಸತ್ಯಕ್ಕಿಂತ ದೂರವಾದುದು. ಆಹಾರದ ಉತ್ಪಾದನೆಯಲ್ಲಿ ಸರಕಾರ ಪಾಲು ಕೇಳುತ್ತಿದೆ! ಸರಕಾರದ ಕಣ್ಣು ರೈತನು ಬೆಳೆಸಿದ ಆಹಾರ ಧಾನ್ಯದ ಮೇಲಿದೆಯೇ ಹೊರತು, ಕಳ್ಳ ಸಂತೆಯಲ್ಲಿ ಮಾರಲು ಬಚ್ಚಿಟ್ಟ ವ್ಯಾಪಾರಿಗಳ ಗೋದಾಮಿನ ಮೇಲಿಲ್ಲ! ಇತರ ಜೀವನಾವಶ್ಯಕ ವಸ್ತುಗಳ ಬೆಲೆಯೂ ಗಣನೀಯವಾಗಿ ಏರಿರುವಾಗ, ರೈತನು ತನ್ನ ಕನಿಷ್ಠ ಆದಾಯದಿಂದಲೇ ಜೀವನವನ್ನು ಸಾಗಿಸಬೇಕಲ್ಲವೇ?

ಸರಕಾರದ ಯಾವ ಯೋಜನೆಯೇ ಇರಲಿ, ಅಥವಾ ಯಾವ ಕಾರ್ಯಕ್ರಮವೇ ಇರಲಿ, ರೈತನ ಸ್ಥಿತಿ ಸುಧಾರಿಸದೆ ದೇಶದ ಉದ್ಧಾರವಾಗುವಂತಿಲ್ಲ. ದೇಶದ ಬೆನ್ನೆಲುಬು ರೈತ ಎಂದು ಉದ್ದುದ್ದ ಭಾಷಣಗಳನ್ನೇನೋ ನಾವು ಬಿಗಿಯುತ್ತೇವೆ. ಆದರೆ ಇದರಿಂದ ಪ್ರಯೋಜನವಿಲ್ಲ. ಸರಕಾರವು ರೈತನ ಸುಖ ದುಃಖಗಳನ್ನರಿತು, ಅವುಗಳನ್ನು ಚೆನ್ನಾಗಿ ಮನನ ಮಾಡಿಕೊಂಡು, ಅದಕ್ಕೆ ಸೂಕ್ತ ಪರಿಹಾರ ಕಂಡು ಹುಡುಕಿದರೆ ಮಾತ್ರ ರೈತನ ಸ್ಥಿತಿ ಸುಧಾರಿಸಿ ಆಹಾರ ಸಮಸ್ಯೆ ನೀಗಬಹುದು. ರೈತರ ಜೀವನದಲ್ಲಿ ಮನೆ ಮಾಡಿರುವ ಬಡತನ, ನಿರಕ್ಷರತೆ, ಅಜ್ಞಾನ, ಅಂಧಶ್ರದ್ಧೆಗಳನ್ನು ಹೋಗಲಾಡಿಸಬೇಕು. ಸರಕಾರ ಕೈಗೊಂಡಿರುವ ಯೋಜನೆಗಳ ಫಲ ನಡು ದಾರಿಯಲ್ಲೇ ಇತರರ ಕೈ ಸೇರದೆ ರೈತನ ಕೈ ಸೇರುವಂತೆ ಮಾಡಬೇಕು. ಈ ರೀತಿಯ ನವೀನ ದೃಷ್ಟಿಕೋನವನ್ನು ಅಳವಡಿಸಿಕೊಳ್ಳದೆ ಬೇರೆ ಮಾರ್ಗವೇ ಇಲ್ಲ. ಸರಕಾರ ಇನ್ನಾದರೂ ರೈತರ ಹಿತದತ್ತ ಗಮನ ಹರಿಸಬೇಕು.

—ಓರ್ವ ಗ್ರಾಮ ನಿವಾಸಿ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ.

O. P. No 2/1965

ಮ್ಯೆಕೆ ಸಲ್ಡ ಕೂಡಾ— ಅರ್ಜಿದಾರರು

ಮತ್ತು

ಸರ್ವಶ್ರೀ ಸಿಪ್ರಿ ಕೂಡ— ಎದುರುದಾರರು.

ಇವರೊಳಗೆ

ಮೃತ ಪ್ಲೊಬಿಲ ಸಲ್ಡ ಹೊಂದ ಬಾಕಿ ವಸೂಲಿ ಬಗ್ಗೆ

ಅರ್ಜಿದಾರರು ಮೃತ ಪ್ಲೊಬಿಲ ಸಲ್ಡ ವಾರೀಸುದಾರರಾಗಿ ಅವರಿಗೆ ನೋಟುಗಳ ಪ್ರಕಾರ ಪ್ರೊ ಡಿಕ್ರಿ ಪ್ರಕಾರವೂ ಬೇಂಕ್ ಡಿಪೊಸಿಟಿನ ಆ್ಯವೆಜುಗಳನ್ನು ವಸೂಲು ಮಾಡುವ ಬಗ್ಗೆ 1ನೇ ಅರ್ಜಿದಾರರ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ರೂ. 8391.43 ಕಾಣಿಸಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ 8—3—65ಕ್ಕೆ ಇಡಲಾಗಿದೆ. ಆಕ್ಷೇಪ ಹೇಳತಕ್ಕವರು ಸದ್ರಿ ತಾ. 8.3.65 ನೇ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಸದ್ರಿ ಅರ್ಜಿಯಲ್ಲಿ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು ಎಂಬುದಾಗಿ ಈ ಮೂಲಕ ತಿಳಿಸಲಾಗಿದೆ.

Gratian C. Rego.
Vakil for Petitioners.

ಉಡುಪಿ, ತಾರೀಕು 20—2—65

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಶ್ರೀ ಹಿಂದಿಯೇ ಅಧಿಕೃತ ಭಾಷೆ

(ನಾಲ್ಕನೇ ಪುಟದಿಂದ)

ಬೇಡ, ಅದು ಹಿಂದೀ ಉಳೀಲಿ ಅಂತ ಒಳಗಿಂದೊಳ್ಗೇ ಅಂದುಕೊಳ್ತೀರು. ಉಳಿದ ಮಧ್ಯವರ್ತಿಗಳು. ಹಾಗೂ ಆಗಬಾರ್ದು, ಹೀಗೂ ಆಗಬಾರ್ದು..."

"ಅದಕ್ಕೇ ನೋಡಿ, ಪಂಚಾತಿಕೆ ಅನ್ನೋದು. ಒಪ್ಪಂದದ ಸ್ವರೂಪ, ಉಭಯ ಸಮ್ಮತ, ಮಧ್ಯವರ್ತಿ ಮಾರ್ಗ... ಹೀಗೇ...."

"ಹ್ಞಾಂ...."

"ಅಲ್ಲ, ಇದರ ಪರಿಣಾಮ ಹೇಗೇಂತ?"

' ನೋಡು, ಅಹಿಂದೀ ಪ್ರದೇಶದ ಜನ ಹಿಂದಿಯೊಂದೇ ಅಧಿಕೃತ ಭಾಷೆಯಾಗಿ ಉಳಿದ್ರೆ ಸಾಕು, ಇಂಗ್ಲಿಷನ್ನ ಆದ್ರ ಮನೆಗೆ ಕಳಿಸಿಕೊಡಿ ಅಂತ ಆಜ್ಞೆ ನೀಡೋವರ್ಗೆ ಇಂಗ್ಲಿಷನ್ನೂ ಸ್ವತಂತ್ರವಾಗಿ ಉಳಿಸಿಕೊಳ್ಳುವುದು..."

"ಇದೂ ನ್ಯಾಯವೇ ಅಲ್ವೆ?"

"ನ್ಯಾಯ ಹೌದು; ಆದ್ರೆ ಅಂತಹ ಆಜ್ಞೆ ಹೊರಟೀತೇಂತ....'

'ಯಾಕೆ?'

'ಯಾಕೇಂತಂದ್ರೆ....ನೋಡು, ಒಬ್ರು ಅಂತಾರೆ ೧೦ ವರ್ಷ ಇಂಗ್ಲಿಷ್ ಬೇಕಾದೀತೂಂತ, ಇನ್ನೊಬ್ರು ೨೦ ಅಂತಾರೆ, ಮತ್ತೆ ಕೆಲವ್ರು ೫೦—ನೂರೊಂಕ ಅವಧಿ ಅಂತಾರೆ. ಹಾಗಿದ್ದಾಗ ಏನಾಗುತ್ತೋ ಏನೋ!'

'ಅಂದ್ರೆ, ಅದ್ರಿಂದ ಪ್ರಯೋಜನ ಇಲ್ಲಾಂತ ಅಲ್ವೆ?'

"ಪ್ರ ಅಂದ್ರೆ ಪ್ರಗಲ್ಭ ಅಂದ್ರೆ ದೊಡ್ಡ ಗಂಭೀರವಾದ ಯೋಜನೆ ಇದ್ದೇ ಇದೆ ಎನ್ನು...."

"ಸಾಕು ಬಿಡೀಂಸ್ರಿ....'

'ಏನನ್ನೇ ಬಿಡೋದು?"

'ಒಂಡ್ಯಾಳ ಬಿಡ್ತಾ ಇದ್ದೀರಲ್ಲಾ ...'

'ತಡೆ....ಸಮಸ್ಯೆಯನ್ನ ಕೂಲಂಕುಷವಾಗಿ ನೀನು ಅರಿತುಕೊಂಡೆ. ನೋಡೋಣ...ಒಂದು ಪರಿಹಾರ ನೀನೇ ಯೋಜಿಸು....'

'ಪರಿಹಾರವೇನು? ಜನಮತವೇ ಜನಾರ್ದನನ ಮತ. ನೀನೇನನ್ನುತ್ತೀರಿ?"

"ನಾನನ್ನಲೆ? ಒಂದೇ ಒಂದು ಪರಿಹಾರ."

'ಏನದು?'

'ನೋಡು, ಹಿಂದೆ ಬಾದೀಲ್ಬಂಡಿ. ಖಡೀಬೋಲಿ, ಅವಧಿ, ವ್ರಜ, ಕಿಚಡಿ ಎಂದಿತ್ಯಾದಿ ಭಾಷೆಗಳಲ್ಲಿ ರಚಿತವಾದ ಸಾಹಿತ್ಯವೆಲ್ಲ ಹಿಂದೀಂತ ಒಪ್ಪಿಕೊಂಡಿದ್ದೇವೆ. ಇನ್ನು ಕನ್ನಡ, ತಮಿಳು, ಮಲಯಾಳಂ, ತೆಲುಗು, ಬಂಗಾಲಿ ಮೊದಲಾದ ವಗಳ ಕೃತಿಗಳೂ ಹಿಂದೀ ಕೃತಿ ಕೋಟೀಂತ ಅಂದುಕೊಂಡ್ರೆ ಹಿಂದೀ ಭಾಷೆಯ ಪ್ರಾಚೀನತೆ ಇಂದಿಗಿಂತಲ್ಲಾ ಎರಡು ಸಾವಿರ ವರ್ಷ ಹಿಂದೆ ಸರಿಯುತ್ತೆ....'

"ಮುಗಿಯಿತೆ?'

"ಅದಕ್ಕಾಗಿ ಒಂದು ಒಪ್ಪಂದವಾಗಬೇಕು. ನಮ್ಮ ಕೃತಿ, ನಮ್ಮ ಭಾಷೆಯನ್ನೆ ನೀವು ಹಿಂದೀ ಅಂತ ಕರೀರಿ. ಲಿಪಿ ದೇವನಾಗರಿ ಅಂತನ್ನಿ. ಆಗ ನಮಗೂ ನಿಮಗೂ ತ್ರಿಭಾಷಾ ಚತುರ್ಭಾಷಾ ಸೂತ್ರದ ಬಂಧನ ತಪ್ಪುತ್ತೆ..."

"ಮುಂದೆ..."

"ನಾವೂ ಹಿಂದೀ ಮಾತಾಡ್ಬೇಕು..."

"ಅಲ್ರಿ, ಹ್ಯಾ ಹ್ಞಾಂ ಅನ್ನೋಕೆ ಬಂದ್ರೆ ಹಿಂದೀ ಬರುತ್ತ ಅಂತಾರೆ...."

"ಹೌದು ಕಣೇ....ನಾವು ಅವೆರಡನ್ನ ಕಲ್ತುಕೊಂಡು ಹಿಂದೀ ಆಡ್ಬೇಕು..."

"ಹೇಗೆ?...."

"ಹೇಗೇಂದ್ರೆ.... ನೋಡು ತೂ ಕ್ಯಾ ನೋಡ್ತಾ ಹೈ?"

"ನಾ ಸಿನ್ಮೋ ನೋಡ್ತೀ ಹ್ಞಾಂ"

"ನನ್ಕೋ ಕ್ಯಾ ಹೈ?"

'ನನ್ಕೋ ಗೊತ್ತ ನಹೀಂ'

'ನಿನ್ಕೋ ಗೊತ್ತು ನಹೀಂ ತೋ ನನ್ಕೋ ಗೊತ್ತು ಹೈ...'

'ತೋ ಹೇಳು...'

'ತೋ ತೋ ತೋಂಗ ತೋ ತಕತೊ'

"ಧೂ...ನಿಮ್ಮ...ಇದೇಂಸ್ರಿ ಹಿಂದಿ!'

'ನೋಡು ಬಟ್ಲರ್ ಇಂಗ್ಲಿಷ್ ಅಂತ ಒಂದು ಇದೆ ನೋಡು, ಹಾಗೆ ಈಗ 'ಶ್ರೀ ಹಿಂದೀ' ಅಂತ ಇದನ್ನ ಹೆಸರಿಸ ಬಹುದು'

'ಅಲ್ರಿ, ಈ ಶ್ರೀ ಹಿಂದಿಯಿಂದ ಹಿಂದಿಯ ಇತಿಶ್ರೀ ಆಗುತ್ತಲ್ಲ...'

'ಯಾವ ಭಾಷೆಗನ್ನು ಬೇಕಾದ್ರೂ ನೋಡು. ಅವಸ್ಥೆಗಳಿವೆ. ಹಿಂದೀಗೆ 'ಶ್ರೀ ಅವಸ್ಥೆ' ಬಂದಾಗಲೇ ಅದ್ರ ಶ್ರೀ ಗಂಧ ದೇಶತುಂಬ ಹರಡೀತ. ಅದಕ್ಕಾಗಿ ಸಂಘಾನ ಕಾರ್ಯನಡೆಯಬೇಕು. ಈ ಹಿಂದೀನೇ ಭಾರತದ ಅಧಿಕೃತ ಭಾಷೆಯಾಗೋದು..."

'ಸರಿಯಪ್ಪ. ಸಂಧಾನ ಸಮಿತಿಯನ್ನು ರಚಿಸುವಾಗ್ಲ'

"ಅದ್ರ ಅಧ್ಯಕ್ಷಗಿರಿ ನಿಮಗೇ ಸಿಗ್ಲಿ ಅನ್ನು."

'ಅಧ್ಯಕ್ಷತೆಯೋ ಉಪಾಧ್ಯಕ್ಷತೆಯೋ ಏನಾದ್ರೂ ಸಿಗ್ಲಿ ನಾಗೇನೆ?"

"ನಿಂಗೇನೂ ಇಲ್ವೆ?"

'ಊಹ್ಞಾಂ...'

"ನಂಗಿದೆ....'

"ಏನು?"

"ಹಸಿವ ಕಣೇ....'

'ಬನ್ನಿ ಹಾಗಾದ್ರೆ. ಅದು ಯಾವ ಹಿಂದೀ ಹಸಿವು?'

"ಸದ್ಯ ಈ ಹಿಂದೀಯಲ್ಲೇ ಆಗ್ತಿದೆ. ಇನ್ನೂ ನಾಲ್ಕು ತಿಂಗ್ಳು ಕಳೀತೂಂತಾದ್ರೆ ಶ್ರೀ ಹಿಂದಿಯಲ್ಲಿ ಆಗಬಹುದು....'

'ಯಾಕೆ ಹಾಗಂತೀರಾ..'

'ಅಲ್ಲ, ಮಳೆಗಾಲ ಪ್ರಾರಂಭವಾಗುತ್ತೆ ನೋಡು...ಈಗ್ಲೇ ಅಕ್ಕಿ ಸಿಗದಿರೋವಾಗ ಆಗ...'

'ಸಾಕು ಬನ್ನೀಂದ್ರೆ. ಭವಿಷ್ಯದ ಬಗ್ಗೆ ಚಿಂತೆ ಮಾಡಿದ್ರೆ ವರ್ತಮಾನವೂ ಇಲ್ಲಾಂತಾದೀತು..'

'ಸರಿ. ಆಗ್ಲೆ ಕೈ ಕಾಲು ತೊಳ್ದಿದ್ದೇನೆ. ಒಟ್ಟಲಿಡು ಮುಂದೆ...'

'ಓ, ಆಗೋ, ಬನ್ನಿ ಹಾಗಿದ್ರೆ....'

'ಹ್ಞಾಂ....ಹ್ಞಾಂ....'

— ಗೋರಾ.

ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಶಿರ್ವ ಹಿಂದೂ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾರೀಕು 21—2—1966ರಂದು, ಕಾರ್ಕಳ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಅಧ್ಯಕ್ಷ ಶ್ರೀ ಎನ್. ಮೋಹನದಾಸ್ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿಸಲ್ಪಟ್ಟಿತು.

ಸಂಘದ ಅಧ್ಯಕ್ಷ ಶ್ರೀ ಬಿ. ಜಯರಾಮ ಶೆಟ್ಟಿ ಸ್ವಾಗತ ಭಾಷಣವನ್ನೂ ಸಂದೇಶವಾಚನವನ್ನೂ ಗೈದ ಅನಂತರ ಕಾರ್ಯದರ್ಶಿಗಳಾದ ಶ್ರೀ ಎಸ್ ಎನ್. ಸೀತಾರಾಮ ಹೆಗ್ಡೆಯವರು ವರದಿ ವಾಚನ ಗೈದರು.

ಡಾ| ಎಸ್. ರಾಜಶೇಖರ ಹೆಗ್ಡೆಯವರು ಪೋಷಕ ಸಮಸ್ಯೆ ಕುರಿತು ಉದ್ಘಾಟನೆ ಗೈದರು. ಸಭೆಯಲ್ಲಿ ಇಪ್ಪತ್ತೈದು ಮಂದಿ ಸಂಘದ ಪೋಷಕ ಸದಸ್ಯರಾದರು. ಶ್ರೀಮತಿ ಎನ್. ಎಮ್. ಅಡ್ಯಂತಾಯರು ಆಟ ಸಂದ್ಯಾಟಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಗೈದರು.

ಪ್ರತಿವರ್ಷ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕೆಗಳನ್ನು ಪಡೆಯುವ ವಿದ್ಯಾರ್ಥಿಗೆ ರೂ 25/- ರ ನಗದು ಬಹುಮಾನವನ್ನು ತನ್ನ ತಾಯಿಯಾದ ಶ್ರೀಮತಿ ಮೀನಾಕ್ಷಿ ಶೆಟ್ಟಿಯವರ ಹೆಸರಲ್ಲಿ ಕೊಡುವುದಾಗಿ ಹಳೆವಿದ್ಯಾರ್ಥಿ ಶ್ರೀ ದಿವಾಕರ ಶೆಟ್ಟಿ ವಾಗ್ದಾನಿತ್ತರು. ಬಳಿಕ ವಿವಿಧ ಮನರಂಜನಾ ಕಾರ್ಯಕ್ರಮಗಳಾದುವು. ಶ್ರೀ ಬಿ. ಜಯರಾಮ ಶೆಟ್ಟಿ ಧನ್ಯವಾದವಿತ್ತರು.

ಕೃತಿ ಪ್ರಕಟಣೆ

ದ. ಕ ಜಿಲ್ಲೆಯ ಯಕ್ಷಗಾನ ಕವಿಗಳ ರ್ಲೊಬ್ಬರಾದ ದಿ| ಮುಯ್ಯವಟೆ ವೆಂಕಟರಮಣಯ್ಯನವರು ಬರೆದ 'ಅನಂತ ವ್ರತ ಕಥೆ' ಎಂಬ ಕನ್ನಡ ಪದ್ಯ ಕೃತಿಯ ಪ್ರಕಾಶನವು ತಾ. 14ರಲ್ಲು ಸುರತ್ಕಲ್ಲು ಜಯಶ್ರೀ ಪ್ರೆಸ್ಸಿನ ಮಳಿಗೆಯಲ್ಲಿ ನೆರವೇರಿತು. ಉತ್ತರರಾಮ ಕಥೆ ಮೊದಲಾದ ಕೃತಿಗಳಂತೆ ಈ ಕೃತಿಗೂ ಸಾರ್ವಜನಿಕರ ನೆರವು ದೊರೆಯುವಂತೆಯೂ, ಶ್ರೀ ರಾಮಕೃಷ್ಣೋದ್ಧಾರ ಹೊಸಗನ್ನಡ ಅನುವಾದ ಮೊದಲಾದ ಕೃತಿಗಳ ಪ್ರಕಟಣೆಗೆ ಸಾರ್ವತ್ರಿಕ ಸಹಕಾರ ದೊರೆಯಲೆಂದೂ ಸಂಪಾದಕರಾದ ಶ್ರೀ ಕೆ. ವೆಂಕಟರಾಯಾಚಾರ್ಯರು ಹಾರೈಸಿದರು. ಶ್ರೀ ಮುನಿಪಾಲ ರಾಜು, ಅವರು ಹಿತವಾದಗಳನ್ನು ಸೂಚಿಸಿದರು. ಶ್ರೀ ಬಿ ಜಯರಾಮ ರಾಯರು ಶುಭ ಕೋರಿದರು.

ಲೋಕ ಸೇವಾ ವೃಂದ

ಆಳಕೆ, ತಾ. 19-2-66ರಂದು ಲೋಕ ಸೇವಾ ವೃಂದದ ಆಶ್ರಯದಲ್ಲಿ ನೆಹರು ಸಭಾ ಭವನದಲ್ಲಿ ವಕೀಲ ಶ್ರೀ ಸದಾಶಿವ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಉಗ್ರಾಣ ಮಂಗೇಶರಾಯರು "ಸಾಹಿತ್ಯಾಧ್ಯಯನ"ದ ಕುರಿತು ಮಾತನಾಡುತ್ತಾ "ಸಾಹಿತ್ಯ ರಚಿಸುವಾಗ ಇಂತಹದೇ ರೀತಿಯಲ್ಲಿ ರಚಿಸಬೇಕೆಂಬ ನಿಯಮವಿಟ್ಟು ರಚಿಸಿದ ಸಾಹಿತ್ಯ ಒಳ್ಳೆದಿರುವುದಿಲ್ಲ. ಹೃದಯದಲ್ಲಿ ಬಂದ ಭಾವನೆಗಳನ್ನು ಮನಸ್ಸಿಗೆ ಹೊಳೆದ ರೀತಿಯಲ್ಲಿ ಪ್ರಕಟಿಸುವುದರಲ್ಲಿ ಸೊಬಗಿದೆ. ಬಹುಮಾನಕ್ಕಾಗಿ ಪೆಗ್ಗಳಿಕೆಗಾಗಿ ಬರೆದ ಕಾವ್ಯಯೂ ಇತರ ಗ್ರಂಥಗಳು ಎಷ್ಟೆಕ್ಕೂ ಉತ್ತಮವಿರಲಾರವು. ಅಂತರಾಳದ ಪ್ರೇರಣೆಯಿಂದ ಬರೆದ ಕೃತಿಗಳಲ್ಲಿ ಸೊಬಗಿರುತ್ತದೆ ಎಂದು ಮನಂತಾಗಿ ಹೇಳಿದರು.

ಸಭಾಧ್ಯಕ್ಷರು ಮಾತನಾಡುತ್ತಾ "ಸಾಹಿತ್ಯದಲ್ಲಿ ಅಭಿರುಚಿ ಬರಬೇಕಾದರೆ ಭಾಷಾಜ್ಞಾನವು ಅತ್ಯಗತ್ಯ. ವಿದ್ಯಾರ್ಥಿಗಳು ಚೆನ್ನಾಗಿ ಓದಿ, ಜ್ಞಾನ ಬೆಳೆಸಿ ಮುಂದಿನ ಸತ್ಪ್ರಜೆಯಾಗಬೇಕೆಂದರು.

ಆರಂಭದಲ್ಲಿ ಲೋಕಸೇವಾ ವೃಂದದ ಅಧ್ಯಕ್ಷರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿದರು. ಅಂತ್ಯದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳು ಧನ್ಯವಾದ ಸಮರ್ಪಿಸಿದರು.

ಶಾಲಾ ವರ್ಧಂತಿ

ಕಡಿಯಾಳಿ ಜ್ಯೂನಿಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ತಾ. 13ರಂದು ಶ್ರೀ ಎ. ಕೃಷ್ಣರಾವ್, ಎಂ. ಎ., ಎಂ ಎಲ್., ಡಿವಿಜನಲ್ ಮೆನೇಜರ್, ಸಿಂಡಿಕೇಟ್ ಬ್ಯಾಂಕ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತಿಸಿ ಶಾಲಾ ಪ್ರಗತಿಪರ ವರದಿಯನ್ನು ಓದಿದರು. ಶ್ರೀ ಡೇನಿಸ್ ಡಿಸೋಜರವರು ಸಂದೇಶಗಳ ವಾಚನ ಮಾಡಿದರು. ಶಾಲಾ ಹಳೆ ವಿದ್ಯಾರ್ಥಿ ಶ್ರೀ ಬಿ. ಸುರೇಶ ರಾವ್, ಬಿ. ಎ., ಇವರು ಸ್ವಾಗತ ವಾಚನ ಮಾಡಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದ ಬಳಿಕ ಅವರು ಮಾತನಾಡುತ್ತಾ ಶಿಕ್ಷಣದ ಗುರಿಯು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ. ಈ ದಿಸೆಯಲ್ಲಿ ಈ ಶಾಲೆಯು ಅತ್ಯುತ್ತಮ ಪ್ರಗತಿ ಸಾಧಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಂದು ಪೂರ್ವಾಹ್ನ ಶ್ರೀ ಆರ್. ಎಸ್. ಮಾಧವ ರಾವ್, ಎಂ. ಎಸ್. ಸಿ., ಇವರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ಮಕ್ಕಳಿಗೆ ಸಿಹಿತಿಂಡಿ ವಿತರಣೆಯ ಜತೆ ಛದ್ಮವೇಷ ಸ್ಪರ್ಧೆಯೂ ಜರಗಿತು.

(ಒಂಭತ್ತನೇ ಪುಟದಿಂದ)

ವನವನ್ನೇ ಮುಡಿಪಾಗಿಟ್ಟ ಆದರ್ಶ ಜೀವನ ಅವರದು. ಅವರಿಗೆ ಅರುವತ್ತೈದು ವರ್ಷ ತುಂಬಿದ ಈ ಸಂದರ್ಭ ಸನ್ಮಾನಿಸುವ ಯೋಗ್ಯ ಕಾರ್ಯವನ್ನು ಜಿಲ್ಲೆಯ ಕಾಂಗ್ರೆಸಿಗರನೇಕರು ಕೈಕೊಂಡಿರುವುದು ಸೂಕ್ತ ಹಾಗೂ ಶ್ಲಾಘನೀಯ. ಅಧಿಕಾರ, ಗದ್ದುಗೆ, ಸ್ಥಾನಮಾನಗಳನ್ನೇ ಹಾರೈಸುವವರು ಕಾಂಗ್ರೆಸಿನಲ್ಲಿರುವರೆಂಬ ಮಾತು ಕೇಳಿಬಂದರೂ ಶ್ರೀ|| ಶೆಟ್ಟರಂತಹ ನಿಷ್ಕಾಮ ಕಾಂಗ್ರೆಸ್ ಸೇವಕರಿರುವುದರಿಂದಲೇ ಕಾಂಗ್ರೆಸ್ ಸಂಸ್ಥೆ ಇಂದು ಬಾಳಿದೆ, ಬದುಕಿದೆ. ಶ್ರೀ|| ಶೆಟ್ಟರ ಷಷ್ಟ್ಯಬ್ದ ಮಹೋತ್ಸವದ ದಿನ ಕಾಣುವ ಸುಯೋಗ ನಮಗೆ ಲಭಿಸಲಿ ಎಂದು ಹಾರೈಸುವುದರ ಜತೆಗೆ ಈ ಸಂದರ್ಭ ಅವರಿಗೆ ಶುಭಕಾಮನೆಗಳನ್ನು ಅರ್ಪಿಸುವುದು ಕರ್ತವ್ಯವೆನಿಸಿದೆ.

ಶ್ರೀ. ಕೆ. ಕೆ. ಶೆಟ್ಟರು ಪ್ರಕಟಣೆಗಾಗಿ ತಮ್ಮ ಹಲವು ಪುಸ್ತಕಗಳನ್ನು "ಕಿರಿಯರ ಪ್ರಪಂಚ"ಕ್ಕೆ ಕೊಟ್ಟು ನೆರವಾಗಿದ್ದಾರೆ. ಮೇಲಿನ ಚಿತ್ರದಲ್ಲಿ ಗ್ರಂಥಕರ್ತ ಶ್ರೀ ಕೆ. ಕೆ. ಶೆಟ್ಟರನ್ನೂ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸುತ್ತಿದ್ದ ಶ್ರೀ ಕೆ. ಹೊನ್ನಯ್ಯ ಶೆಟ್ಟರನ್ನೂ ಕಾಣಬಹುದು. (ಸುಮಾರು 1934ರಲ್ಲಿ ತೆಗೆದ ಚಿತ್ರ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 375/1964.

ಸಿಂಡಿಕೇಟ್ ಬೇಂಕ್ ಲಿಮಿಟೆಡ್ ಮಣಿಪಾಲ —ವಾದಿ.

ಮತ್ತು

M. ಯಿಬ್ರಾಹಿಂ ಬ್ಯಾರಿ, ಮೊಯಿದಬ್ಬ ಬ್ಯಾರಿ ಮಗ- ಉಡುಪಿ ತಾಲ್ಲೂಕು ಮೂಳೂರು ಗ್ರಾಮದಲ್ಲಿರುವವರು —1ನೇ ಪ್ರತಿವಾದಿ

ಸದ್ರಿ 1ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

1ನೇ ಪ್ರತಿವಾದಿ ಕೂಡಾ ಎರಡು ಜನರು ವಾದಿ ಬೇಂಕಿಗೆ ಬರೆಕೊಟ್ಟ ಕಂಟಿನ್ಯೂಯಿಂಗ್ ಸೆಕ್ಯೂರಿಟಿ ಮಾರ್ಗೇಜ್ ಡೀಡ ಪ್ರಕಾರ ಬಹಾ ಪ್ಲೈಂಟಿನಲ್ಲಿ ಕಾಣಿಸಿದ ಅಮೇಜು ವಗ್ಯೆರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 8-3 1965ಕ್ಕೆ ಇಟ್ಟಿದೆ. ಆ ಕುರಿತು ನಿಮಗೇನಾದರೂ ಉಪಾಹರಿಸುವಂತಾದಿದ್ದರೆ ಆ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಬಂದು ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By order of the court)

Sri M. Damodar Kamath
Advocate for Plaintiff

Udipi, 26—2—65

1940ರಲ್ಲಿ ನವಯುಗ ಪ್ರೆಸ್ ಪ್ರಾರಂಭೋತ್ಸವದ ಸಮಯದಲ್ಲಿ ತೆಗೆದ ಮೇಲಿನ ಚಿತ್ರದಲ್ಲಿ ಪ್ರಾರಂಭೋತ್ಸವವನ್ನು ನೆರವೇರಿಸಿದ ದಿ| ಎ. ಬಿ. ಶೆಟ್ಟಿ (ನಡುವೆ ಕುಳಿತವರು) ಅಧ್ಯಕ್ಷತೆ ವಹಿಸಿದ ದಿ| ಡಾ| ಕೆ. ವಿಟ್ಠಲ ಶೆಟ್ಟಿ, (ಬಲದಲ್ಲಿ) ದಿ| ಕೆ. ಜಿ. ಬಲ್ಲಾಳ್ (ಎಡದಲ್ಲಿ) ಶ್ರೀ ಕೆ. ಕೆ. ಶೆಟ್ಟಿ (ನಡುವೆ ನಿಂತವರು) ಶ್ರೀಗಳಾದ ಬಾಳೆಕುದ್ರು ಕೃಷ್ಣಯ್ಯ ಹೆಗ್ಡೆ, ಕೆ. ಹೊನ್ನಯ್ಯ ಶೆಟ್ಟಿ (ಎಡ ಬಲಗಳಲ್ಲಿ) ಕಾಣಬಹುದು.

ಎಲ್ಲೆಲ್ಲಿ ಏನೇನು?

ವಾರ್ಷಿಕೋತ್ಸವ

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲಾ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ. ೧೪ರಂದು ಡಾ|| ವಿ. ಎಸ್. ಶೆಟ್ಟಿ ಎಂ. ಡಿ., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈ ಇವರು ಸ್ವಾಗತಿಸುತ್ತಾ ಹನ್ನೆರಡು ವರ್ಷಗಳ ಚರಿತ್ರೆಯುಳ್ಳ ಸಂಘವು ಮಾತೃಶಾಲೆಯ ಅಭಿವೃದ್ಧಿಗಾಗಿ ಕೈಕೊಂಡ ಹಲವಾರು ಉಪಯುಕ್ತ ಕಾರ್ಯಗಳ ಪರಿಚಯ ಮಾಡಿಸಿ, ಇಲ್ಲಿ ಹೈಸ್ಕೂಲನ್ನು ತೆರೆಯುವಲ್ಲೂ ಅದು ಮಾಡಿದ ಪ್ರಯತ್ನಗಳನ್ನು ವಿವರಿಸಿ, ಸಾರ್ವಜನಿಕರ ಸಹಾಯ ಸಹಕಾರಗಳೇ ಯಶಸ್ಸಿನ ಗುಟ್ಟು ಎಂದರು. ಕಾರ್ಯದರ್ಶಿ ಶ್ರೀ ಕೆ. ದಾಮೋದರ ಐತಾಳರು ಸಂಘದ ಚಟುವಟಿಕೆಗಳ ವರದಿಯನ್ನು ಒಪ್ಪಿಸಿದರು.

ಶಾಲಾ ವ್ಯವಸ್ಥಾಪಕ ಶ್ರೀ ಪಡುಬಿದ್ರಿ ನಾರ್ಣಪ್ಪಯ್ಯನವರ ತೈಲಚಿತ್ರದ ಅನಾವರಣವನ್ನು ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಮಾಡಿ ಶ್ರೀ ನಾರ್ಣಪ್ಪಯ್ಯನವರು ಇಲ್ಲಿಯ ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲಿ ಅಹೋರಾತ್ರಿ ಶ್ರಮಿಸಿದ ತ್ಯಾಗಜೀವಿ ಎಂದು ಪ್ರಶಂಸಿಸಿದರಲ್ಲದೆ, ಅವರೂ ಅವರ ಮಕ್ಕಳೂ ಆದರ್ಶ ಅಧ್ಯಾಪಕರಾಗಿ ದುಡಿಯುತ್ತಿರುವುದನ್ನು ಸ್ಮರಿಸಿದರು. ಕಲಾವಿದ ಆರ್. ಕೆ. ದೇವಡಿಗಾರ್ ಇವರು ರಚಿಸಿದ ತೈಲಚಿತ್ರವನ್ನು ಶಾಲೆಯ ಪರವಾಗಿ ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಸ್ವೀಕರಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ಜರಗಿದ ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದ ಬಳಿಕ ಮಾತನಾಡುತ್ತಾ ಸಂಘದ ಬಹುವಿಧ ಕಾರ್ಯಗಳನ್ನು ಪ್ರಶಂಸಿಸಿದರಲ್ಲದೆ, ಇಂತಹ ಸಂಘಸಂಸ್ಥೆಗಳು ಸಮಾಜದ ಅಭಿವೃದ್ಧಿಗೆ ನೆರವಾಗುವ ಸಾಧನಗಳು ಎಂದರು. ವಿವಿಧ ಮನರಂಜನೆಯ ಕಾರ್ಯಕ್ರಮಗಳಲ್ಲದೆ ಹಳೆ ವಿದ್ಯಾರ್ಥಿಗಳು "ಕಾಲ ಬದಲಾಯಿತು" ಎಂಬ ಸಾಮಾಜಿಕ ಸಂಗೀತ ನಾಟಕವನ್ನು ಅಭಿನಯಿಸಿದರು. ಸಮಾರಂಭದ ಕೊನೆಯಲ್ಲಿ ಉಪಕಾರ್ಯದರ್ಶಿ ಶ್ರೀ|| ಚಿನ್ನಪ್ಪ ಶೆಟ್ಟಿಗಾರರು ಧನ್ಯವಾದ ಅರ್ಪಿಸಿದರು.

ಅಂದು ಪೂರ್ವಾಹ್ನ ಹಳೆ ವಿದ್ಯಾರ್ಥಿಗಳಿಗಾಗಿ ಹಲವಾರು ಸ್ಪರ್ಧೆಗಳು ಜರಗಿದುವು. ಸಂಘದ ಮಹಾಧಿವೇಶನವು ಅಪರಾಹ್ನ ನಾರ್ಣಪ್ಪಯ್ಯ ಕೆ ಸಮಿತಿಯ ಆಯ್ಕೆಯೂ ನಡೆಯಿತು.

ವಾರ್ಷಿಕೋತ್ಸವ

ಬೆಳ್ಳೆ, ಸ್ಥಳೀಯ ಸ್ಯೆಂಟ್ ಲೋರೆನ್ಸ್ ಹೈಸ್ಕೂಲಿನ ಚತುರ್ಥ ವಾರ್ಷಿಕೋತ್ಸವ ಹಾಗೂ ಹಳೆ ವಿದ್ಯಾರ್ಥಿ ಸಂಘದ ಪ್ರಥಮ ವಾರ್ಷಿಕೋತ್ಸವವು ಶ್ರೀ ಎಂ. ಮಧ್ವರಾಜ ಎಂ. ಎಲ್. ಎ., ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಲ್ಲಿ ತಾ. 20-2-65ರಂದು ಜರಗಿತು. ಇದರ ಅಂಗವಾಗಿ ಪೂರ್ವಾಹ್ನ ಡಾ| ಪಿ. ಸಿ. ರೈ ಇವರಿಂದ ಧ್ವಜಾರೋಹಣವಾದ ಬಳಿಕ ಛದ್ಮವೇಷ ಸ್ಪರ್ಧೆ ಮತ್ತು ಲಘೂಪಹಾರ ನಡೆಯಿತು. ರಾತ್ರಿ ಶಾಲಾ ಆಡಳಿತೆದಾರರಾದ ರೆವರೆಂಡ್ ಫಾದರ್ ಎ. ಎಫ್. ಡಿಸೋಜಾ ಇವರಿಂದ ಸ್ವಾಗತ ಭಾಷಣವಾದ ಬಳಿಕ ಶಾಲಾ ವರದಿಯನ್ನು ಮುಖ್ಯೋಪಾಧ್ಯಾಯ ಶ್ರೀ ಬೆಳ್ಳೆ ಅನಂತಕೃಷ್ಣ ಸಾಮಕರು ಒಪ್ಪಿಸಿದರು. ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಅಮೃತರಾಯರು ತಮ್ಮ ಸಂಘದ ವರದಿಯನ್ನು ಒಪ್ಪಿಸಿದರು. ಸಂದೇಶಗಳನ್ನು ಶಾಲಾ ಅಧ್ಯಾಪಕ ಶ್ರೀ ನಿರಂಜನ ಆಚಾರ್ಯರು ಓದಿದ ತರುವಾಯ ಹಳೆ ವಿದ್ಯಾರ್ಥಿ ವಿಲ್‌ಫ್ರೆಡ್ ರಾಫೈಲ್ ಡಿಸೋಜರು ಮಾಡಿದ ಸ್ವಸ್ತಿವಾಚನಕ್ಕೆ ಈಗಿನ ವಿದ್ಯಾರ್ಥಿ ಅಪ್ಪಿಕಾಮತರು ಉತ್ತರ ಕೊಟ್ಟರು. ಇದೇ ಶಾಲೆಯ ಮಾಜಿ ಮುಖ್ಯೋಪಾಧ್ಯಾಯ ಶ್ರೀ ಬೇಜಾ ಉಚ್ಚಿಲರವರು ಬಹುಮಾನ ವಿತರಣೆಗೈದು ವಿದ್ಯಾರ್ಥಿಗಳಿಗೆ ಶ್ರೇಯಸ್ಸನ್ನು ಕೋರಿದರು. ಡಾ| ಶ್ರೀ ಆರ್. ಆರ್. ಕೊಂಡ್ಕರ್ ಇವರು ಶಾಲೆಯ ಹಸ್ತಪತ್ರಿಕೆಯಾದ ಬಾಲವಾಣಿಯ ವಾರ್ಷಿಕ ಸಂಚಿಕೆಯನ್ನು ಉದ್ಘಾಟಿಸಿ ವಿದ್ಯಾರ್ಥಿಗಳ ಈ ಕಾರ್ಯವನ್ನು ಪ್ರಶಂಸಿಸಿದರು. ತರುವಾಯ ಶ್ರೀ ಯಂ. ಮಧ್ವರಾಜರು ಅಧ್ಯಕ್ಷ ಭಾಷಣದಲ್ಲಿ ಈ ಶೈಶವಾವಸ್ಥೆಯಲ್ಲಿರುವ ವಿದ್ಯಾಸಂಸ್ಥೆಯ ಪ್ರಗತಿಯನ್ನು ಪ್ರಸ್ತಾಪಿಸಿ ರೆ| ಫಾದರ್ ಎ. ಎಫ್. ಡಿಸೋಜರ ವಿದ್ಯಾಪ್ರಸಾರದ ಸೇವೆಯನ್ನು ಪ್ರಶಂಸಿಸಿದರು. ಅಧ್ಯಾಪಕರ ಸೇವಾತತ್ಪರತೆಯನ್ನೂ ವಿದ್ಯಾರ್ಥಿಗಳ ಆಸಕ್ತಿ ಮತ್ತು ಶಿಸ್ತಿನ ಜೀವನವನ್ನೂ ಕೊಂಡಾಡಿ ಐನೂರ ಒಂದು ರೂಪಾಯಿಗಳನ್ನು ಶಾಲೆಗೆ ಈಗ ಕಟ್ಟುತ್ತಿರುವ ಹೊಸ ಕಟ್ಟೋಣಕ್ಕೆ ಸಹಾಯ ಧನವಾಗಿ ದಾನವಿತ್ತರು. ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ದೀರ್ಘವಾದ ಮನರಂಜನಾ ಕಾರ್ಯಕ್ರಮಗಳು ಜರಗಿದ ನಂತರ ಅಧ್ಯಾಪಕರಾದ ಶ್ರೀ ಎಂ. ವಾಸುದೇವ ಭಟ್ಟರು ಧನ್ಯವಾದ ಸಮರ್ಪಣೆ ಮಾಡಿದರು.

ಕೋಟಿ ಚೆನ್ನಯ ಬೈದೇರುಗಳ ಉತ್ಸವ

ಎಣ್ಣೂರು, ಇದೇ ಬರುವ ತಾ. 16-3 65ನೇ ಮಂಗಳವಾರ ಶ್ರೀ ಎಣ್ಣೂರು ಬೀಡಿನಲ್ಲಿ ಪೂರ್ವಪದ್ಧತಿ ಪ್ರಕಾರ 'ಶ್ರೀ ಬೈದ್ಯೇರ್ಕಳ ನೇಮ'ವು ನಡೆಯುವದರಿಂದ ಸರ್ವರೂ ಬಂದು ಗಂಧಪ್ರಸಾದಗಳನ್ನು ಸ್ವೀಕರಿಸಬೇಕಾಗಿ ಕಟ್ಟಬೀಡಿನ ಪಟೇಲ್ ಶ್ರೀ ಕೆ. ಬಿ. ವಿಟ್ಠಲ ರೈಗಳು ವಿನಂತಿಸುತ್ತಾರೆ.

ವಾರ್ಷಿಕೋತ್ಸವ

ಮುಂಬಯಿಯ ಬಂಟರ ಯಾನೆ ನಾಡವರ ಸಂಘದ ವತಿಯಿಂದ ನಡೆಸಲ್ಪಡುತ್ತಿರುವ ಕೆನರಾ ಹಿಂದೂ ಸ್ಯಾಂಟ್ ಹೈಸ್ಕೂಲಿನ 41ನೇ ವಾರ್ಷಿಕೋತ್ಸವ ಮತ್ತು ಬಹುಮಾನ ವಿತರಣಾ ಸಮಾರಂಭ, ಇದೇ ಬರುವ 7-3 65ನೇ ರವಿವಾರ ಮುಂಬೈಯ ಫ್ರೋರ್ಟ್ ವಿಭಾಗದಲ್ಲಿರುವ ಸರ್ ಕಾವಸ್‌ಜೀ ಜಹಾಂಗೀರ್ ಹಾಲ್‌ನಲ್ಲಿ ಜರುಗಲಿದೆ. ಶ್ರೀ ಜೆ. ಡಿ. ಹಾಲ್ಟ್‌ಜೈ ಅವರು ಅಧ್ಯಕ್ಷ ಸ್ಥಾನವನ್ನು ವಹಿಸಲಿರುವರು. ಶ್ರೀ ಕೆ. ಕೆ ಶೆಟ್ಟಿ ಮತ್ತು ಬಳಗದವರಿಂದ ಮನೋರಂಜನೆ ಕಾರ್ಯಕ್ರಮವನ್ನು ಪ್ರದರ್ಶಿಸಲಾಗುತ್ತದೆ. ಎಲ್ಲರಿಗೂ ಸ್ವಾಗತವಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸತ್ಕಾರ

ಉಡುಪಿ, ಮಾ. 1, ಪದ್ಮಶ್ರೀ ಡಾ| ಟಿ. ಎಂ. ಎ. ಪೈ ಮತ್ತು ಪ್ಲಾನಿಂಗ್ ಕಮಿಶನಿನ ಸದಸ್ಯ ಡಾ|| ಪಿ. ಕೆ. ಆರ್. ವಿ. ರಾವ್ ಇವರಿಗೆ ಎಂ. ಜಿ. ಎಂ. ಕಾಲೇಜಿನಲ್ಲಿ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ಪ್ರಿನ್ಸಿಪಾಲ್ ಶ್ರೀ ಕೆ. ಎಸ್. ಹರಿದಾಸ ಭಟ್ಟರು ಸ್ವಾಗತಿಸಿ ಕಾಲೇಜಿನ ಸ್ಟಾಫ್ ಕ್ಲಬ್ಬಿನ ಪರವಾಗಿ ಡಾ| ಪೈಗಳಿಗೆ ಸನ್ಮಾನ ಪತ್ರಗಳನ್ನೊಪ್ಪಿಸಿದರು. ಇದೇ ಸಂದರ್ಭದಲ್ಲಿ ಡಾ| ಟಿ. ಎಂ. ಎ. ಪೈಯವರು ದಿ|| ಕೊಚ್ಚಿಕಾರ್ ಪದ್ಮನಾಭ ಪೈ ಇವರ ಭಾವಚಿತ್ರವನ್ನು ಅನಾವರಣ ಮಾಡುತ್ತ ದಿವಂಗತರ ಸೇವಾಕಾರ್ಯ ಹಾಗೂ ವ್ಯಕ್ತಿತ್ವದ ಕುರಿತು ಮಾತನಾಡಿದರು. ಡಾ| ಪಿ. ಕೆ. ಆರ್. ವಿ. ರಾಯರು ಮಾತನಾಡುತ್ತ ದ. ಕ. ಜಿಲ್ಲೆಯಲ್ಲಿ ಒಂದು ಯೂನಿವರ್ಸಿಟಿ ಸೆಂಟರ್‌ಗಾಗಿ ಪ್ರಯತ್ನಿಸುವುದು ಯೋಗ್ಯವೆಂದೂ ಮಹಾತ್ಮ ಗಾಂಧಿಯವರ ಹೆಸರನ್ನು ಪಡೆದ ಈ ಕಾಲೇಜು ಇತರ ಕಾಲೇಜುಗಳಿಗಿಂತ ವಿಭಿನ್ನವಾಗಿರುವುದು ಉತ್ತಮವೆಂದೂ ಸೂಚಿಸಿದರು. ಅಂತ್ಯದಲ್ಲಿ ಪ್ರೊ| ಕೃಷ್ಣರಾಯರು ಧನ್ಯವಾದಗಳನ್ನರ್ಪಿಸಿದರು.

ಕೈಗಾರಿಕೆ ಮತ್ತು ಕೃಷಿ ಪ್ರದರ್ಶನ

ಕಳೆದ ತಾ. 26ರಂದು, ಕಾರ್ನಾಡು ಸದಾಶಿವ ರಾವ್ ಮೆಮೋರಿಯಲ್ ಟ್ರಸ್ಟ್‌ನವರು, ಮಂಗಳೂರು ನೆಹರೂ ಮೈದಾನಿನಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಕೈಗಾರಿಕೆ ಮತ್ತು ಕೃಷಿ ಪ್ರದರ್ಶನವನ್ನು ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಕೈಗಾರಿಕಾ ಸಚಿವ ಶ್ರೀ ಕೆ. ಮಲ್ಲಪ್ಪನವರು ಉದ್ಘಾಟಿಸಿದರು.

ಆರಂಭದಲ್ಲಿ ಪ್ರದರ್ಶನ ಸಮಿತಿಯ ಅಧ್ಯಕ್ಷ ಶ್ರೀ ಕೆ. ಕೆ ಶೆಟ್ಟಿಯವರು ಅತಿಥಿಗಳ ಪರಿಚಯ ಮಾಡಿದರು. ಉಪಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತಿಸಿದರು.

ಶ್ರೀ ಮಲ್ಲಪ್ಪನವರು ಮಾತನಾಡುತ್ತಾ ಖಾಸಗಿ ವಲಯದವರು ಬಳಕೆ ವಸ್ತುಗಳ ತಯಾರಿಯ ಜವಾಬ್ದಾರಿ ವಹಿಸಬೇಕೆಂದರು. ಅಧ್ಯಕ್ಷರು ಮೈಸೂರಿನ ವಿದ್ಯಾವಂತರಿಗೆ ರಾಜ್ಯದಲ್ಲಿ ಅವಕಾಶ ಕಲ್ಪಿಸಿಕೊಡಬೇಕು ಸರಕಾರ ದೊಡ್ಡ ಪ್ರಮಾಣದ ಪ್ರದರ್ಶನ ನಡೆಸಲು ಮುಂದೆ ಬರಬೇಕೆಂದು ನುಡಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಎಚ್. ಕೆ. ಶ್ರೀಗಳಾಯರು ಧನ್ಯವಾದ ಸಮರ್ಪಿಸಿದರು.

ಬೀಳ್ಕೊಡುವ ಸಮಾರಂಭ

ಅದಮಾರ್ ಪೈಯರ್ ಸೆಕೆಂಡರಿ ಶಾಲಾ 11ನೇ ತರಗತಿ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ತಾ. 22ರಂದು ಮುಖ್ಯೋಪಾಧ್ಯಾಯ ಎ. ಎಸ್. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳ ಪೈಕಿ ಶ್ರೀನಿವಾಸ ಭಟ್ಟ ಮತ್ತು ಎಡ್ವರ್ಡ್ ಎಚ್. ಮೆಂಡೋನ್ಸರು ಮಾತಾಡಲು ಅಧ್ಯಕ್ಷರು ಶಾಲೆಯಿಂದ ಅಗಲುವ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಕೊನೆಗೆ ವಿದ್ಯಾರ್ಥಿ ಶ್ರೀ ಎಲ್. ಮೆಂಡೋನ್ಸರು ಧನ್ಯವಾದ ಸಮರ್ಪಿಸಿದರು.

ದಿ ಪಾಂಗಾಳ ನಾಯಕ್ ಬೇಂಕಿನ

ಡಿಪಾಜಿಟುಗಳ ಮೇಲೆ 8% ತನಕ ಏರಿಸಿದ ಹೊಸ ಬಡ್ಡಿ ದರಗಳ ಪ್ರಕಟಣೆಗೆ ವಿಳಂಬವಾಗಿ ಕೈ ಸೇರಿದ ಪ್ರಯುಕ್ತ ಈ ಬಾರಿ ಪ್ರಕಟಿಸಲಾಗದುದಕ್ಕೆ ವಿಷಾದಿಸುತ್ತೇವೆ.

(ಸಂ. ನ.)

ಒಡ ಹುಟ್ಟಿದವಳು

(ಎರಡನೇ ಪುಟದಿಂದ)

ಹೇಳು....ನನ್ನ ಮರ್ಯಾದೆ ಉಳಿಸು. ದುಡಿದು ಮತ್ತೆ ಹಣ ಹಿಂತಿರುಗಿಸುತ್ತೇನೆ. ನಿನಗೆ ಅಷ್ಟು ಕನಿಕರವಿಲ್ಲವೆ..." ಎಂದು ಬೇಡಿಕೆಯ ದನಿಯಲ್ಲಿ ಕೇಳಿದ ರಮೇಶ.

ಮಂಗಳ ಯಾವ ಬೇಡಿಕೆಗೂ ಮಣಿಯಲಿಲ್ಲ.

ರಮೇಶನ ನಂಬಿಕೆ ವ್ಯರ್ಥವಾಯಿತು.

"ನಿನ್ನ ನಂಬಿ ಕೆಟ್ಟೆ ಮಂಗಳ" ಎಂದು ಮನನೊಂದು ಹೇಳಿದ ರಮೇಶ.

ಮಂಗಳೆಯ ಹೃದಯ ವಜ್ರದಷ್ಟೇ ಕಠೋರವಾಗಿತ್ತು.

'ಅಣ್ಣನ ಕಾಗದ ನೋಡಿದಿರಾ"

"ನೋಡಿದ್ದೇನಲ್ಲ"

'ಅಯ್ಯೋ ಪಾಪ. ಅವರಿಗೆ ಅಂತಹ ಕಷ್ಟ ಬರಬಾರದಿತ್ತು'

"ಹೋಗಲಿ ಬಿಡು 'ಮಾಡಿದವರ ಪಾಪ ಆಡಿದವರ ಬಾಯಲ್ಲಿ' ನಾವು ಮಾಡಿದ ಪಾಪಕ್ಕೆ ಅವರಿಗೆ ಬಡ್ಡಿ ಸಹಿತ ಶಿಕ್ಷೆ ಅನುಭವಿಸಬೇಕು."

'ಈ ಸಂದರ್ಭದಲ್ಲಿ ನೀವೂ ಹಾಗಂದರೆ, ಅವನು ಜೈಲು ಸೇರಬೇಕು'

"ಅತ್ತೆ ಮಾವ ಇವರಿಗೆ ಆದ ಅನ್ಯಾಯ, ನಿನಗೆ ನನಗೆ ಆದ ಅವಮಾನ ಮರೆತೆಯಾ ಕಲ್ಯಾಣಿ ...ನೀನು ಮರೆತರೂ ನಾನು ಮರೆಯಲಾರೆ."

'ನೋಡಿ....ನನ್ನ ಮಾತುಕೇಳಿ...'

"ನೀನು ಹೇಳಲೂ ಬೇಡ..ನಾನು ಕೇಳಲೂ ಸಿದ್ಧನಿಲ್ಲ"ಎಂದು ವೇಣು ಹೊರಟುಹೋದ.

ಕಲ್ಯಾಣಿ ಕಣ್ಣಿಂದ ನೀರು ಸುರಿಯಿತು.

ಉತ್ತರವನ್ನು ನಿರೀಕ್ಷಿಸಿ ನಿರಾಶನಾಗಿ ರಮೇಶ ತಂಗಿ ಇದ್ದ 'ಮಲ್ಲಿಗೆ ಹಳ್ಳಿ'ಗೆ ಧಾವಿಸಿ ಬಂದ. ಕಲ್ಯಾಣಿ ಅಣ್ಣನನ್ನು ಆದರದಿಂದಲೇ ಸ್ವಾಗತಿಸಿದಳು. ಅವಳಲ್ಲಿ ಸೂಜಿಮೊನೆಯಷ್ಟು ಅಣ್ಣನ ಬಗ್ಗೆ ಬೇಸರ ಕೋಪ ಇರಲಿಲ್ಲ.

ವೇಣು ಮೌನ ತಾಳಿದ್ದ.

ರಮೇಶ ಕೂಲಂಕುಷವಾಗಿ ಎಲ್ಲ ಸಂಗತಿಯನ್ನು ವಿವರಿಸಿ "ನನ್ನ ತಪ್ಪನ್ನೆಲ್ಲ ಕ್ಷಮಿಸಿ ನನ್ನನ್ನು ಕಾಪಾಡಬೇಕು ಕಲ್ಯಾಣಿ. ಕೊನೆಯ ಆಸೆಯಿಟ್ಟು ಕೊಂಡು ಬಂದಿದ್ದೇನೆ. ನೀನು ಇಲ್ಲವೆಂದರೆ ನನಗೆ ಸೆರೆಮನೆಯೇ ಗತಿ" ಎಂದು ಭಾರವಾದ ದನಿಯಲ್ಲಿ ಹೇಳಿದ.

"ಹೆತ್ತ ತಂದೆ ತಾಯಿ, ಒಡ ಹುಟ್ಟಿದ ತಂಗಿಗೆ ನೀನು ಮಾಡಿರುವ ಉಪಕಾರವನ್ನೂ ನಾನು ಮರೆಯಲಾರೆ ರಮೇಶ. ಕೈ ಹಿಡಿದ ಹೆಂಡತಿಯೇ ಕೈ ಬಿಟ್ಟಾಗ ನಾನೇನು ಮಾಡಲು ಸಾಧ್ಯ?" ಎಂದು ವ್ಯಂಗವಾಗಿ ಹೇಳಿದ ವೇಣು.

'ಸೇಡು ತೀರಿಸಿಕೊಳ್ಳುವ ಸಮಯವೇ ಇದು ವೇಣು?'

'ನಾನು ಸಾಮಾನ್ಯ ಮನುಷ್ಯ, ಯೋಗಿಯಲ್ಲ'

"ಹಾಗಾದರೆ ನಿಮ್ಮ ಉತ್ತರ?"

"ಬಂದ ದಾರಿಗೆ ಸುಂಕವಿಲ್ಲ" ಎಂದು ವೇಣು ತೋಟದ ಕಡೆಗೆ ನಡೆದ.

"ಕಲ್ಯಾಣಿ, ನಾನು ಹೊರಡುತ್ತೇನಮ್ಮ" ಎಂದು ರಮೇಶ ಕುರ್ಚಿಯಿಂದ ಎದ್ದ.

"ನಾನು ನಿರ್ಭಾಗ್ಯೆ ಅಣ್ಣ" ಎಂದು ಅತ್ತಳು ಕಲ್ಯಾಣಿ.

ರಮೇಶ ನಿರಾಶೆಯಿಂದ ಮನೆ ಬಿಟ್ಟು ಹೊರಟ.

ವೇಣು ಮನೆಗೆ ಹಿಂದಿರುಗಿದಾಗ ಕಲ್ಯಾಣಿ ಮಂಚದ ಮೇಲೆ ಮಲಗಿ ಅಳುತ್ತಿದ್ದಳು. ಪತ್ನಿಯ ಕಣ್ಣೀರಿಗೆ ಕಾರಣ ಗೊತ್ತಿದ್ದರೂ ವೇಣು ಗಾಬರಿಗೊಂಡ.

"ಓಹೋ! ಅಣ್ಣನಿಗೆ ಸಹಾಯ ಮಾಡಲಿಲ್ಲವೆಂದು ಅಳು ಅಲ್ಲವೆ ಕಲ್ಯಾಣಿ?'

"ನಾನು ಅತ್ತರೆ ನಿಮಗೇನು....ಹೊರಟು ಹೋಗಿ'

"ನಿಮ್ಮಣ್ಣ ಆಡಿರುವ ಒಂದೊಂದು ಮಾತನ್ನು ನೆನಪು ಮಾಡಿಕೋ"

'ಆ ಪುರಾಣ ಬೇಡ...ನಿಮ್ಮಣ್ಣನೇ ಇಂತಹ ಸ್ಥಿತಿಯಲ್ಲಿದ್ದಿದ್ದರೆ ನೀವು ಸುಮ್ಮನಿರುತ್ತಿದ್ದಿರಾ....?'

"ಕಲ್ಲು ಮುರಿದು ಕೈಗೆ ಕೊಡುತ್ತಿದ್ದೆ"

"ಭಾರಿ ಗಂಡಸರು.....ಕಟುಕರು..." ಎಂದು ಕೋಪದಿಂದ ಕಲ್ಯಾಣಿ ಮಂಚದ ಮೇಲೆ ಎದ್ದು ಕುಳಿತಳು.

ಪತ್ನಿಯ ಕಣ್ಣೀರು ವೇಣು ಹೃದಯವನ್ನು ಕರಗಿಸಿತ್ತು.

"ಅಣ್ಣ ನೊಂದುಕೊಂಡು ಹೋದ. ಅವನಿಗೆ ಉಪಕಾರ ಮಾಡುವ ಪುಣ್ಯವೂ ನನಗಿಲ್ಲ. ಅಮ್ಮ ಇಲ್ಲವಾದಳು. ಅಪ್ಪ ಕಾಣೆಯಾದರು. ಅಣ್ಣ ಹೀಗಾದ" ಎಂದು ಕಲ್ಯಾಣಿ ಅಳ ತೊಡಗಿದಳು.

ವೇಣು ಪತ್ನಿಯ ಬಳಿ ಕುಳಿತು ಸಮಾಧಾನಗೊಳಿಸ ತೊಡಗಿದ.

ಕಲ್ಯಾಣಿ ಕೆರಳಿ "ನಿಮ್ಮ ಉಪಚಾರ ಬೇಡ"ವೆಂದು ತನ್ನ ಪೆಟ್ಟಿಗೆ ತೆಗೆದು ಒಂದು ಗಂಟನ್ನು ಹೊರಕ್ಕೆ ತೆಗೆದು ಬಿಚ್ಚಿದಳು. ಅದರಲ್ಲಿ ಹಲವಾರು ಬೆಲೆ ಬಾಳುವ ಆಭರಣಗಳಿದ್ದವು.

ವೇಣು ನೋಡುತ್ತಲೇ ಇದ್ದ.

ಪತಿಯ ಮುಂದೆ ಆಭರಣಗಳನ್ನು ಹಿಡಿದ ಕಲ್ಯಾಣಿ" ಇದು ಯಾರದು ಅದನ್ನಾದರೂ ಹೇಳಿ" ಎಂದಳು.

''ಎಲ್ಲ ನಿನ್ನದೇ ಕಲ್ಯಾಣಿ"

"ಇವುಗಳನ್ನು ಉಪಯೋಗಿಸುವ ಸ್ವಾತಂತ್ರ್ಯ ನನಗಿದೆಯಷ್ಟೆ?"

"ಧಾರಾಳವಾಗಿ"

"ಹಾಗಾದರೆ ನಾನೇ ಇವುಗಳನ್ನು ಕೊಡುತ್ತಿದ್ದೇನೆ. ಮಾರಾಟ ಮಾಡಿ, ಅಣ್ಣನಿಗೆ ಹಣ ಕೊಡಿ....ಅವನು ಸೆರೆಮನೆಗೆ ಹೋಗುವುದು ಬೇಡ" ಎಂದು ಆರ್ತಳಾಗಿ ಹೇಳಿದಳು ಕಲ್ಯಾಣಿ.

"ನಿನಗೆ ಹುಚ್ಚು ಕಲ್ಯಾಣಿ"

"ಹುಚ್ಚು ಹಿಡಿಯುವ ಮುಂಚೆ ಇಷ್ಟು ಕೆಲಸ ಮಾಡಿ"

"ನಾನು ಮನುಷ್ಯ ಕಲ್ಯಾಣಿ... ನನ್ನ ಮನಸ್ಸು ನಿನ್ನ ದುಃಖದ ಕಾರಣವನ್ನು ಅರಿತಿದೆ...ಭೂಮಿ ತಾಯಿಯನ್ನು ನಂಬಿ ದುಡಿಯುತ್ತಿದ್ದೇನೆ. ಕೈ ತುಂಬ ಸಂಪಾದನೆ ಬರುತ್ತಿದೆ....ನಿನ್ನ ಆಭರಣಗಳನ್ನು ಮಾರಿ ಹಣ ಕೊಡಬೇಕಾದ ಸ್ಥಿತಿ ಬಂದಿಲ್ಲ. ನಿನ್ನಣ್ಣನಿಗೆ ಹಣ ತಲುಪಿಸುವ ಏರ್ಪಾಟು ಮಾಡೋಣ" ಎಂದ ವೇಣು.

"ನೀವು ತುಂಬ ಕೆಟ್ಟವರು....ಮೊದಲೇ ಆ ಮಾತು ಹೇಳಬಾರದಿತ್ತೆ....?"

"ನಿನ್ನ ಮೊದಲು ಗಂಗಾ ಯಮುನಾ ಪ್ರವಾಹಕ್ಕೆ ಅಣೆಕಟ್ಟು ಹಾಕು. ಆ ಮೇಲೆ ಮುಂದಿನ ಮಾತು"ಎಂದ ವೇಣು.

ಕಲ್ಯಾಣಿಗೆ ಅಮಿತಾನಂದವಾಗಿತ್ತು.

"ಅಷ್ಟು ದುಡ್ಡಿಗೆ ಬಡ್ಡಿ ಕೊಡುವವರು ಯಾರು ಕಲ್ಯಾಣಿ?"

"ನಾನು ಕೊಡುತ್ತೇನೆ"

"ನೀನು ಕೊಟ್ಟ ಹಾಗೆ, ನಾನು ತೆಗೆದುಕೊಂಡ ಹಾಗೆ"

"ಸಂದೇಹವೇ ರಾಜಾ"

"ರಾಜ ರಾಣಿ ಇರಲಿ.... ಹಣ ಕೊಟ್ಟವನು ನಾನು ಎಂದು ನಿನ್ನಣ್ಣನಿಗೆ ತಿಳಿಸುವುದಿಲ್ಲ ಎಂದು ಭರವಸೆ ಕೊಡುವುದಾದರೆ ಹಣ ಕೊಡುತ್ತೇನೆ. ಇಲ್ಲವಾದರೆ ಇಲ್ಲ."

"ಸರಿ ರಾಜಾ" ಎಂದಳು ಕಲ್ಯಾಣಿ.

ವೇಣು ಮೃದುವಾಗಿ ನಕ್ಕ

೦

ರಮೇಶ ಉಳಿಸಿಕೊಂಡಿದ್ದ ಎಲ್ಲ ಹಣವನ್ನೂ ಜಮಾ ಮಾಡಿದ್ದರು ಅಪರಿಚಿತರೊಬ್ಬರು. ಕಂಪೆನಿಗೆ ತನ್ನ ಪರವಾಗಿ ಹಣ ಪಾವತಿ ಮಾಡಿದವರು 'ಯಾರು?' ಎಂದು ವಿಚಾರಿಸಿದ ರಮೇಶ. ಸರಿಯಾದ ಉತ್ತರ ದೊರೆಯಲಿಲ್ಲ. ಯೋಚಿಸಿದಾಗ ಅವನಿಗೆ ತಂಗಿಯ ನೆನಪು ಬಂತು.

ರಮೇಶ ಗಂಡಾಂತರದಿಂದ ಪಾರಾಗಿದ್ದ.

'ಇನ್ನು ಮುಂದೆಯಾದರೂ ಹುಷಾರಾಗಿರು ರಮೇಶ್.. ಆ ಪುಣ್ಯಾತ್ಮ ನಿನಗಾಗಿ ಹಣ ಒಪ್ಪಿಸಿ ಹೋಗಿದ್ದಾರೆ..ಅವರ ಹೆತ್ತ ಒಡಲು ತಣ್ಣಗಿರಲಿ. ಮತ್ತೆ ಕೆಳೆಯ ಜಾಡನ್ನೇ ತುಳಿಯಬೇಡಿ. ಉಪಕಾರ ಮಾಡಿದವರನ್ನು ಮರೆಯಬೇಡಿ' ಎಂದು ಡೈರಕ್ಟರು ಉಪದೇಶ ನೀಡಿದರು.

ತಂಗಿಯನ್ನು ಭೇಟಿ ಮಾಡಲು ರಮೇಶ 'ಮಲ್ಲಿಗೆ ಹಳ್ಳಿ'ಗೆ ಧಾವಿಸಿಬಂದ

"ಕಲ್ಯಾಣಿ"

"ಏನಣ್ಣಾ?"

"ನೀನು, ವೇಣು ನನ್ನನ್ನು ಮತ್ತೆ ಬದುಕಿಸಿದಿರಿ. ನಿಮ್ಮ ಉಪಕಾರ ಮರೆಯಲಾರೆ"

"ನಾವೇನಣ್ಣಾ ಮಾಡಿದ್ದೇವೆ"

"ನನಗೆಗೊತ್ತಮ್ಮ" ಎಂದು ತೃಪ್ತಿಯಿಂದ ಹೇಳಿದ ರಮೇಶ.

೦ ೦ ೦

'ಅಣ್ಣ'

"ಏನಮ್ಮ"

"ಅತ್ತಿಗೆಯನ್ನು ಕೈ ಬಿಡ ಬೇಡಣ್ಣ'."

"ಅವಳ ಹೆಸರನ್ನು ನನ್ನ ಮುಂದೆ ಎತ್ತ ಬೇಡಮ್ಮ'

"ತನಗೆ ಪ್ರವೇಶವಿಲ್ಲ' ಎಂದ ವೇಣು'

"ಹೆಣ್ಣಿನ ಹೃದಯದ ನೋವು ನೀನು ಕಾಣೆ ಅಣ್ಣ' ಎಂದಳು ಕಲ್ಯಾಣಿ.

ರಮೇಶನ ಹೃದಯ ಒಡ ಹುಟ್ಟಿದವಳ ಅನುರಾಗವನ್ನು ಚಿಂತಿಸುತ್ತಿತ್ತು.



"ಶಾಂತಿ—ದೂತ"

(ಯಸ್. ಕೃಷ್ಣ ಮುಕಾರಿ,
ಬೆಂಗಳೂರು.)

ಹಿಮವಂತನ ಉತ್ತುಂಗದ
ಗಿರಿ ಮುಕುಟವ ಮೀರಿ,
ಅಮರತ್ವದ ಸೀಮೆಯೊಳಿಹ
ಭಾರತಿ ಸುತ ಸೇರಿ,
ಅವನಮ್ಮಯ ನಲ್ಮೆಯಗಲಿ,
ಸ್ವಾತಂತ್ರ್ಯದ ವೈರಿ,
ನವಿರೇಳದೆ? ಇವನರಿಯೂ
ನರನಾಡಿಯು ನಿಮಿರಿ: || ೧ ||

'ಸ್ವಾತಂತ್ರ್ಯಕೆ ಹೋರಾಡಿದೆ
ಶಾಂತ್ಯ ಹಿಂಸೆ ಮಂತ್ರ.
ಸತ್ಯವ ನೀನುಸಿರಾಡಿದ
ನಿಂತಿತೆ ಪರತಂತ್ರ?
ಜಾತೀಯತೆ ಈಡಾಡಿದೆ.
ಎಲ್ಲಿದ್ದಿತು ತಂತ್ರ?
ಮಾತೆಯ ಬಂಧನವಳಿಯಿತೆ?
ಬಲ್ಮೆಯ ಧೀಮಂತ! || ೨ ||

ಕಡೆಯುಸಿರಿನ ಕೊನೆ ತನಕವು
ನಡೆಸಿದೆ ಈ 'ರಥವ'
ಬಿಡುಗಡೆ ಪಡೆದುಪಕ್ರಮಿಸಿದ
ಕಡೆಗಾಳದಿಹ ಪಥವ,
ಗಂಭೀರದ ಸುಖ ಭಾವವ,
ಗಾಂಧೀಜಿಯ ಮತವ
ಎಂದೆಂದಿಗು ಮೈಗೊಂಡೆಯ
ತಂಡೆಯ ಹೊಸ ರಾವ? || ೩ ||

ನಾಡಿನ ಗುರಿ, ಗುಡಿಸಲಿನಲಿ
ಜಯ ಜವಹರ ಶೂರ,
ನೋಡದೊ ಕೋಟ್ಯಂತರದೀ
ನಯನದೊಳಿಹ ಪೂರ.
ಹಾಡುತಲಿದೆ ಶಾಂತಿಯ ನುಡಿ,
ಹಾಕಿದೆ ಹೂ,ಹಾರ
ನಾಡಿನ ಬಾವುಟ ಹಾರಿದೆ?
ಬಿಸಿ ಉಸಿರದೊ ಜನರ! || ೪ ||

ದೇಶದ ಜನ-ಮನ ಕಂದಿತು
ಮೊರೆಯಿಟ್ಟಿತು ಪ್ರೇಮ,
ಭಾಷ್ಪಾಂಜಲಿಯೊಳು ಬೇಡಿತು
"ಚಿರಶಾಂತಿಯ ಧಾಮ"
ನೀನಿಟ್ಟಿಹ ನುಡಿಗಟ್ಟಿದೆ:
"ಪ್ರೇಮ—ಶಾಂತಿ—ಧರ್ಮ"
ಮನುಮಂಶವು ತಿಳಿದೇಳಲಿ
ಆ ಮಾತಿನ ಮರ್ಮ. || ೫ ||

ಹರಸೆಮ್ಮನು ನೀನೆಂದಿಗು
ಓ....ಶಾಂತಿಯ ದೂತ!
"ಭಾರತ ಸುತರೆದ್ದೇಳಲಿ"
ಹಾಡಲಿ ಹೊಸ ಗೀತಾ....
ಹಾಡಲಿ ಹೊಸ ಗೀತಾ...
ಓ ಶಾಂತಿ—ದೂತಾ...

NAVAYUGA 4-3-1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೪-೩-೬೫ರಿಂದ ೧೦-೩-೬೫ರ ವರೆಗೆ

೧. ಮೇಷ

ಕೃಷ್ಣ ಪಕ್ಷದ ಚಂದ್ರಸೋಲಾದಿಯಲ್ಲಿ ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಹ್ರಾಸವನ್ನೈದುತ್ತಿರುವುದು. ವ್ಯಯಸ್ಥಾನಕ್ಕೆ ಬಂದಿಹ ನೀಚ ಬುಧನ ದೆಸೆಯಿಂದಾಗಿ ಇಂದಿನ ಖರ್ಚುವೆಚ್ಚಗಳು ಕೆಲವೊಮ್ಮೆ ನಿಮ್ಮ ಆಯವನ್ನೂ ಕೂಡ ಅತಿಕ್ರಮಿಸಲಿವೆ. ದೇಹಾಲಸ್ಯ, ಸ್ವಜನ ವಿರೋಧ ಸೋದರರೊಳಗಿನ ಮನಸ್ತಾಪಕ್ಕೀಡಾದ ನಿಮಗೆ ತಾ. 7, 8 ಮಾತ್ರ ಸ್ವಲ್ಪ ಅನುಕೂಲವಾಗಿ ಕಾಣಿಸಲಿವೆ.

೨ ವೃಷಭ

ಶ್ರಮವಹಿಸಿ ದುಡಿಯುವಿರಿ. ಆದರೂ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ಲಭಿಸಲಾರದು. ಆತನಿವ ನೀಸಿಂದು ಆರ್ಥಿಕ ತಗಾದೆಗೊಳಗಾಗಲಿರುವಿರಿ. ಕೆಲವೊಂದು ದುಷ್ಟ ಶಕ್ತಿಗಳ ಸ್ವಾರ್ಥಕ್ಕೆ ನೀವಿಂದು ಬಲಿಯಾಗುವ ಸಂಭವವಿದೆ. ದುಡಿಮೆಯಲ್ಲಿನ ಬಹ್ವಂಶವನ್ನು ಸದ್ವಿನಿಯೋಗ ಮಾಡುವಿರಾದರೂ ಜನತೆಯ ಅಪವಾದದಿಂದ ಮುಕ್ತರಾಗಲಾರಿರಿ. ವ್ಯಾಪಾರೀ ವರ್ಗಕ್ಕೆ ಆಕಸ್ಮಿಕ ನಷ್ಟವುಂಟಾದೀತು. ತಾ. 7, 8 ಬಿಟ್ಟು ಉಳಿದ ದಿನಗಳು ಸಾಕಷ್ಟು ಉತ್ತಮವಾಗಿವೆ.

೩. ಮಿಥುನ

ನಿಮ್ಮ ಸಂಕಲ್ಪಗಳಿಂದು ನಿರ್ವಿಘ್ನದಿಂದ ನೆರವೇರಲಿರುವವು. ಎಂತಹ ಮಹತ್ಕಾರ್ಯವೂ ಕೂಡ ತೃಣಸಮವೆನಿಸೀತು. ಪ್ರಬಲರಾದ ಪ್ರತಿಪಕ್ಷಿಗಳನ್ನೂ ಪರಾಭವಗೊಳಿಸುವ ಅತ್ಯಶಕ್ತಿಯುಳ್ಳ ನಿಮಗೆ ಸರ್ವತ್ರ ವಿಜಯ ಕೀರ್ತಿಗಳು ಲಭಿಸಲಿವೆ. ಹಣದ ಲೇವಾದೇವಿ ವಿಷಯದಲ್ಲಿ ಜಾಗರೂಕರಾಗಿರಿ. ದುಷ್ಟ ಶಕ್ತಿಗಳು ನಿಮ್ಮ ಸಂಪತ್ತಿನ ಮೇಲೆ ದೃಷ್ಟಿಯನ್ನಿಟ್ಟಿಹರು. ವಾರಾದಿಯ 5 ದಿನಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗುವವು.

೪. ಕರ್ಕಟ

ದೈವವಿಂದು ತೀವ್ರ ವಕ್ರವಾಗಿರುವುದರಿಂದ ತಾನೊಂದು ಬಗೆದರೆ ದೈವವೊಂದೆಣಿಸಿತೆಂಬ ಗಾದೆಯಂತೆ ನಿಮ್ಮೆಣಿಕೆಯಂತೆ ಯಾವೊಂದು ಕಾರ್ಯವೂ ನೆರವೇರಲೊಲ್ಲದು. ಅಧಿಕಾರಿ ವರ್ಗದವರ ಕಡೆಗೆ ಗುರಿಯಾದ ನಿಮಗೆ ಸರ್ವತ್ರ ವಾಕ್ಕಲಹ ಬೇರೆ ತಪ್ಪಿದ್ದಲ್ಲ. ಗೃಹತಾಪತ್ರಯ ಆರ್ಥಿಕ ದುರವಸ್ಥೆ ದೇಹಾಲಸ್ಯಾದಿಗಳಿಂದ ಪೀಡಿತರಾದ ನಿಮಗೆ ವಾರದ ಕೊನೆಯ ನಾಲ್ಕು ದಿನಗಳು ಸ್ವಲ್ಪ ಉತ್ತಮವಾಗಿ ಕಾಣಿಸಬಹುದು.

೫. ಸಿಂಹ

ಸಾಂಸಾರಿಕ ತಾಪತ್ರಯಗಳಿಂದ ಸಟ್ಟ ಮುಕ್ತರಾದಿರಿ ಮಾತ್ರವಲ್ಲ ಬಿಟ್ಟನ ಭಾಗದಲ್ಲೂ ದುರ್ವ್ಯಯಗಳಿಗೆಡೆಯಿಲ್ಲದಿರುವುದರಿಂದ ಹಣದ ತೊಂದರೆಯುಂಟಾಗದು. ಜನತೆಯ ಸಹಕಾರವು ಸಾಕಷ್ಟಿದ್ದರೂ ಶತ್ರುಗಳ ಕಾಟದಿಂದ ಮುಕ್ತರಾಗಲಾರಿರಿ. ಶ್ರಮಜೀವಿಗಳಿಗೀಕಾಲವು ಅಷ್ಟೊಂದು ಚೆನ್ನಾಗಿರದು. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟ, ಗಿರಾಕಿಗಳೊಡನೆ ಕಲಹವು ಕೂಡ ಆಗಲಿದೆ. ತಾ. 9, 10 ಈ ದಿನಗಳಲ್ಲಿ ಮಿತ್ರರ ಸಮಾಗಮ ಧನಲಾಭಗಳುಂಟಾಗುವವು.

೬. ಕನ್ಯಾ

ದಿನದಿಂದ ದಿನಕ್ಕೆ ಪರಿಸ್ಥಿತಿಯು ಗಂಭೀರವಾಗುತ್ತಿದೆ. ನಿಮ್ಮ ಸುಖಪತಿಯಾದ ಬೃಹಸ್ಪತಿಯು ಅಷ್ಟಮದಲ್ಲಿಹನಲ್ಲದೆ ದೇಹಪತಿಯಾದ ಬುಧನೂ ನೀಚನಾಗುವುದರಿಂದ ನಿಮ್ಮ ತನುಮನಗಳಿಗೆ ಸುಖಶಾಂತಿಯೆಂಬುದು ಕನಸಿನ ಮಾತಾಗುವದು. ಶ್ರಮವಹಿಸಿ ದುಡಿಯುವಿರಾದರೂ ಪರಿಶ್ರಮಕ್ಕೆ ತಕ್ಕ ಫಲವನ್ನು ಕಾಣಲಾರಿರಿ. ಆತ್ಮೀಯರ ವಿರಹ ವಿರೋಧಗಳಿಗೀಡಾದ ನಿಮಗೆ ವಾರಾದಿಯ 3 ದಿನಗಳು ಇತರ ದಿನಗಳಿಗಿಂತ ಲೇಸಿಹವು.

೭. ತುಲಾ

ನಿಮ್ಮ ಭಾಗ್ಯದ ಕದವಿಂದು ತೆರೆದಿಹುದೆಂದರೂ ತಪ್ಪಾಗಲೊಲ್ಲದು. ಇಂದು ನಿಮ್ಮ ಯಾವತ್ತೂ ಸಂಕಲ್ಪಗಳು ನಿರ್ವಿಘ್ನದಿಂದ ಕಾರ್ಯರೂಪಕ್ಕೆ ಬರಲಿವೆ. ಮೃಗರಾಜನಂ ಕಂಡ ಹರಿಣಗಳಂತೆ ಶತ್ರುವೃಂದದವರು ಅಲ್ಲಲ್ಲೇ ಮಾಯವಾಗುವರು. ಇಂತಹ ಸುಸಂಧಿಯನ್ನು ವ್ಯರ್ಥಗೊಳಿಸಬಿಡದೆ ಸಮುದ್ಯಮದಲ್ಲಿ ಪ್ರವೃತ್ತರಾಗಿ ಕಾಲದ ಸದುಪಯೋಗವನ್ನು ಪಡೆಯಿರಿ. ವಾರಾದಿಯ 5 ದಿನಗಳು ನಿಮ್ಮೆಲ್ಲಾ ಬಯಕೆಗಳನ್ನು ಈಡೇರಿಸಲುಪಯುಕ್ತಗಳಾಗಿವೆ.

೮. ವೃಶ್ಚಿಕ

ನಿಮ್ಮ ಧನಪತಿಯಾದ ಗುರುವು ಪ್ರತಿಕೂಲನಾಗಿಹನಲ್ಲದೆ ಲಾಭಪತಿಯಾದ ಬುಧನೂ ನೀಚಸ್ಥಾನವನ್ನು ಸೇರಿರುವ ಕಾರಣ ಇಂದು ನಿಮಗೆ ಆರ್ಥಿಕ ತಗಾದೆ ವಿಶೇಷವಾಗಲಿದೆ. ನಿಮ್ಮ ಕರ್ತವ್ಯದಲ್ಲಿ ನೀವು ಕೃತಕೃತ್ಯರಾದರೂ ನಿರೀಕ್ಷಿಸಿದ ಫಲವು ಕೈಸೇರದು. ಜನತೆಯ ಮುನಿಸಿಗೆ ಗುರಿಯಾದ ನಿಮಗೆ ಸರ್ವತ್ರ ನಿಂದೆ ತಿರಸ್ಕಾರಗಳೇ ಪ್ರಾಪ್ತವಾಗುವವು. ಗೃಹತಾಪತ್ರಯಗಳಿಂದ ನೊಂದ ನಿಮ್ಮ ಮನಸ್ಸಿಗೆ ವಾರಾಂತ್ಯದ 4 ದಿನಗಳು ಸ್ವಲ್ಪ ನೆಮ್ಮದಿಯನ್ನೀಯುವವು.

೯. ಧನು

ದೈವವಿಂದು ನಿಮ್ಮ ಮೇಲೆ ಪೂರ್ಣ ಅನುಗ್ರಹದ ದೃಷ್ಟಿಯಂ ಬೀರಿರುವದು. ಗಾಳಿ ಬಂದಾಗ ತೂರಿಕೊಂಡದ್ದೇ ಬಂತೆಂಬ ಗಾದೆಯ ಮಾತಿನಂತೆ ಸಟ್ಟ ನೀವು ನಿಮ್ಮ ಆಶೋತ್ತರಂಗಳನ್ನು ಪೂರೈಸಲು ಕಾರ್ಯಪ್ರವೃತ್ತರಾಗಿರಿ. ನಿಷ್ಪ್ರಯೋಜಕ ಅನಾಯಾಸದಿಂದ ಗುರಿ ಸೇರಲಿರುವಿರಿ. ಯಾವೊಂದು ತರದ ತಂಟೆ ತಕರಾರುಗಳಾಗಲಿ ತಾಪತ್ರಯಗಳಾಗಲಿ ನಿಮಗಿಂದುಂಟಾಗದು. ತಾ. 9, 10, ಈ ದಿನಗಳು ನಿಮ್ಮ ಸಂಕಲ್ಪಗಳನ್ನು ಪೂರ್ಣ ಮಾಡುವವು.

೧೦. ಮಕರ

ಗುರುವಿನ ಮೇಲೆ ಬೊಕ್ಕೆಯೆದ್ದಂತೆ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರುವವು. ಶತ್ರುಜನರ ಮಾತಂತಿರಲಿ. ನಿಮ್ಮ ಆಪ್ತೇಷ್ಟವರ್ಗದವರೂ ನಿಮ್ಮ ಮೇಲಿಂದು ಎರಡೆಣಿಸಲಿರುವರು. ಬಂಧುಜನರ ಕೂಡೆ ಕಲಹ ಮನಸ್ತಾಪಗಳೊದಿಗಲಿವೆ. ಗೃಹತಾಪತ್ರಯ ಆರ್ಥಿಕ ಬಿಕ್ಕಟ್ಟು ದೇಹಾಲಸ್ಯಗಳಿಂದ ನೊಂದ ನಿಮ್ಮ ಮನಸ್ಸಿಗೆ ತಾ. 4 5, 6 ಕೊಂಚ ಉತ್ತಮವಾಗಿ ಕಾಣಬಹುದು.

೧೧. ಕುಂಭ

ಸಂದು ಹೋದ ದಿನಗಳಿಗಿಂತ ಇಂದಿನ ವಾರವು ಸ್ವಲ್ಪ ಉತ್ತಮವಾಗಿ ಕಾಣಬಹುದು. ಹಣದ ತಗಾದೆಗಳು ಮುಂಚಿನಂತೆ ಇರಲಾರವು. ಸ್ವಂತ ಉಪಭೋಗಕ್ಕೆ ಬೇಕಾದ ವಸ್ತುವಡವೆಗಳು ಅನಾಯಾಸದಿಂದ ಲಭಿಸಲಿವೆ. ಆದರೂ ಮನೆಯಾಕೆಯ ಮುನಿಸಿಗೆ ನೀವಿಂದು ಗುರಿಯಾಗಬೇಕಾದೀತು. ನೌಕರಿ ಜನರಿಗೆ ಅಧಿಕಾರಿಗಳಿಂದ ತೊಂದರೆಗಳುಂಟಾಗಲಿವೆ. ವಿಶೇಷಕ್ಕೆ ಶ್ರಮಜೀವಿಗಳಿಗೀ ಕಾಲವು ತೀರ ದುಃಖದಾಯಿಯಾಗಿರುವದು. ತಾ. 7, 8ರಲ್ಲಿ ಕಿಂಚಿತ್ ಸುಖ ನೆಮ್ಮದಿ ದೊರೆತೀತು.

೧೨. ಮೀನ

ಧನಪತಿಯ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಇಂದು ಸರ್ವತ್ರ ವಿಜಯವುಂಟಾದೀತು. ಹೆರವರ ಹಂಗಿಲ್ಲದೆ ಕಾರ್ಯವನ್ನು ಸಾಧಿಸುವಿರಿ. ನಿಮ್ಮೆಣಿಕೆಗಿಂತಲೂ ಹೆಚ್ಚಿನ ಫಲವು ತಾನಾಗಿ ಲಭಿಸಲಿದೆ. ನ್ಯಾಯವಾದಿ ಚತುರರೂ ಕಾರ್ಯದಕ್ಷರೂ ಆದ ನಿಮಗೆ ಸಮಾಜದಲ್ಲೂ ಒಳ್ಳೆಯ ಗೌರವಾದರಗಳು ಲಭಿಸುವವು. ಸ್ವಂತ ಆರೋಗ್ಯದತ್ತ ಕೊಂಚ ನಿಗಾ ಇರಲಿ. ತಾ. 4, 5, 6, 9, 10 ಈ ದಿನಗಳು ಇಷ್ಟಸಿದ್ಧಿಪ್ರದಗಳಾಗಿವೆ.

ವಾರ್ಷಿಕೋತ್ಸವ

ಮುಲ್ಕಿ, ಫೆ. 16. ಇಲ್ಲಿಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ನಿಲಯದ ದ್ವಿತೀಯ ವಾರ್ಷಿಕೋತ್ಸವವು ಮಂಗಳೂರು ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಜಿ. ಮಲ್ಯ ಇವರು ನಿಲಯದ ವರದಿ ವಾಚನ ಮಾಡಿದರು. ಶ್ರೀ ಮಂಗಳಪ್ರಸಾದ ರೈಯವರು ಮಾಡಿದ ಪ್ರಸ್ತಾವನೆಕ್ಕೆ ಶ್ರೀ ಗೋಪಾಲ ಎಂ. ಶೆಟ್ಟರು ಉತ್ತರವಿತ್ತರು. ನಿಲಯದ ನಿವಾಸಿ ಸಂಘದ ಅಧ್ಯಕ್ಷ ಎಂ. ಬಾಲಕೃಷ್ಣ ಶೆಟ್ಟರು ನಿಲಯಕ್ಕೆ ರೇಡಿಯೋ ಒಪ್ಪಿಸಿದ ಬಳಿಕ ಶ್ರೀ ವಿಯೋನ ಲಕ್ಷ್ಮೀನಾರಾಯಣ ಆಳ್ವರು ಧನ್ಯವಾದವಿತ್ತರು. ಶ್ರೀ ಬಿ. ಪುಷ್ಪರಾಜ ಶೆಟ್ಟರಿಂದ ಬಹುಮಾನ ವಿತರಣೆ ಶ್ರೀ ಎನ್. ನಾರಾಯಣ ಶೆಟ್ಟರಿಂದ ಕವಿತಾವಾಚನವಾದ ಬಳಿಕ ಅಧ್ಯಕ್ಷರು ನಿಲಯದ ಅವಶ್ಯಕತೆ ಹಾಗೂ ಅಭಿವೃದ್ಧಿಯ ಕುರಿತು ಮಾತನಾಡಿದರು. ಶ್ರೀ ಬಿ. ಶ್ರೀನಿವಾಸ ಶೆಟ್ಟರು ಉಪಕಾರ ಸ್ಮರಣೆ ಮಾಡಿದರು. ಕೊನೆಗೆ ವಿವಿಧ ವಿನೋದಾವಳಿಗಳಾದುವು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ (ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ. ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕರ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಔಷಧಿ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ.ಖ. ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪]   ಮಾರ್ಚ್ ೯, ೧೯೬೫,   [ಸಂಚಿಕೆ ೨೮

Phone No. 226
ಫೋನ್ ನಂಬ್ರ: 226

leading nationalist weekly

ವಾರದ ಕಥೆ

ಚುನಾವಣೆ

ಲೇಖಿಕೆ: ಶ್ರೀಮತಿ ಆನಂದಿ ಸದಾಶಿವ ರಾವ್.

ವೀಣಾ ಓದುತ್ತಿದ್ದ ಪುಸ್ತಕವನ್ನು ಮುಚ್ಚಿದಳು. ಓದಿ ಪೂರ್ತಿಯಾಗಿತ್ತು. ಆದರೆ ಕಾದಂಬರಿಯಲ್ಲಿ ಬಂದ ಪಾತ್ರಗಳು ಮನಸ್ಸಿನಲ್ಲಿ ಸುಳಿಸುಳಿದು ರಂಜಿಸಿದುವು. ಸುಳಿಯುತ್ತಿದ್ದುವು. ಶಾಮು, ಪದ್ಮಾ, ವಿದ್ಯಾ, ಚಂದ್ರು, ಒಬ್ಬೊಬ್ಬರು ಒಂದೊಂದು ವ್ಯಕ್ತಿತ್ವದಿಂದ ಕೂಡಿದವರು. ಇದಿರಾದ ಸಮಸ್ಯೆಗಳನ್ನು ಬೇರೆ ಬೇರೆ ರೀತಿಯಲ್ಲಿ ಬಗೆಹರಿಸಿದ್ದರು. ಒಂದೇ ಕುಟುಂಬದ ವ್ಯಕ್ತಿಗಳಾದರೂ, ಗುಣದಲ್ಲಿ ಏನೇನು ವ್ಯತ್ಯಾಸವಿರುತ್ತದೆ! ಕಾದಂಬರಿ ಸುಖಾಂತ್ಯ ಹೊಂದಿತ್ತು. ಇದರಿಂದ ವೀಣಾ ಸಮಾಧಾನಗೊಂಡಿದ್ದಳು. ಹದಿನೈದು ವರ್ಷ ವಯಸ್ಸಿನ ವೀಣಾಳಿಗೆ, ಪ್ರತಿಯೊಂದು ಕತೆ, ಕಾದಂಬರಿಯೂ ಸುಖಾಂತ್ಯದಲ್ಲಿ ಪರ್ಯವಸಾನವಾಗಬೇಕೆಂಬ ಹಂಬಲ.

ಕಾದಂಬರಿಯಲ್ಲಿ ಬಂದ ಪಾತ್ರಗಳ ನಡತೆಯಲ್ಲಿ ವ್ಯತ್ಯಾಸವಿದ್ದಂತೆ, ಮನೆಯಲ್ಲಿಯೂ, ಅಣ್ಣ ತಮ್ಮಂದಿರ ಗುಣ ನಡತೆಗಳಲ್ಲಿ ಅಂತರವಿರುವುದಿಲ್ಲವೆ? ವೀಣಾಳ ಯೋಚನೆ ತನ್ನ ಅಣ್ಣ ರಾಜೀವ, ತಮ್ಮ ರಾಮುವಿನ ಕಡೆಗೆ ಹರಿಯಿತು. ರಾಜೀವ ತನ್ನ ಪಾಡಿಗೆ ತಾನು ಇದ್ದು, ಇತರರ ಕಷ್ಟಸುಖಗಳಲ್ಲಿ ಒಂದಿನಿತೂ ಭಾಗಿಯಾಗದವನು. ರಾಮು, ಎಳೆಯವನಾದರೂ, ವಯಸ್ಸಿಗೆ ಮೀರಿದ ಪ್ರಬುದ್ಧತೆಯಿಂದ ಮನೆಯವರೆಲ್ಲರ ಸೇವೆ ಮಾಡಲು ಸದಾ ಸಿದ್ಧನು.

ವೀಣಾಳಿಗೆ ಅವಳಮ್ಮ ಕೂಗಿದುದು ಕೇಳಿಸಿತು.

"ನಿನ್ನ ಗೆಳತಿ ವಿಮಲಾ ಬಂದಿದ್ದಾಳೆ."

"ಬಂದೆ." ಎಂದು ವೀಣಾ ಕೋಣೆಯಿಂದ ಹೊರಗಡೆ ಬಂದಳು.

ನಡುಮನೆಯಲ್ಲಿ ವಿಮಲಾ ನಿಂತಿದ್ದಳು.

ಇಬ್ಬರೂ ಸಹಪಾಠಿಗಳು. ಇದೇ ವರ್ಷ ಎಸ್. ಎಸ್. ಸಿ. ಪರೀಕ್ಷೆಗೆ ಕುಳಿತುಕೊಳ್ಳುವವರು.

"ನಿನ್ನೊಡನೆ ಗಣಿತ ಕೇಳಿ ತಿಳಿದುಕೊಳ್ಳಲು ಬಂದೆ" ಎಂದಳು ವಿಮಲಾ.

"ಒಳಗೆ ಬಾ." ಎಂದು ವೀಣಾ ಅವಳನ್ನು ತನ್ನ ಕೋಣೆಯ ಮೇಜಿನ ಬಳಿಗೆ ಕರೆದೊಯ್ದು ಕುರ್ಚಿ ತಂದು ಅವಳನ್ನು ಕೂಡಲು ಹೇಳಿದಳು.

"ನನಗೆ ಗಣಿತದ ಪಾಠ ಎಂದರೆ ಹಿಂದೆಯೇ ತಲೆ ನೋವು ಬರುತಿತ್ತು. ಈ ವರ್ಷ ಸಾಕೆ. ಸಾಕಾಗಿ ಹೋಯಿತು? ಎನ್ನುತ್ತ ವಿಮಲಾ ಕೇಳಿದಳು.

"ವರ್ಷದ ಕೊನೆಗೆ ಇನ್ನು ಮೂರೇ ತಿಂಗಳುಗಳು ಅಲ್ಲವೆ? ಬಹಳ ಬೇಗನೆ ಕಳೆದು ಹೋಗುತ್ತದೆ" ಎಂದು ವೀಣಾ ಹಸನ್ಮುಖದಿಂದಲೇ ನುಡಿದು, ಗೆಳತಿಗೆ ಕಷ್ಟವಾದ ಭಾಗಗಳನ್ನು ವಿವರಿಸತೊಡಗಿದಳು.

"ಈ ವರ್ಷ ನಿನ್ನ ಸಹಾಯದಿಂದ ಬದುಕಿದೆ. ಕೊನೆಯ ಪರೀಕ್ಷೆಯಲ್ಲಿ ಪಾಸಾದರೆ ಸಾಕು."

"ಪಾಸಾಗದೆ ಏನು? ಫಸ್ಟ್ ಕ್ಲಾಸು ಹೊಡೆಯಬೇಕು." ಎನ್ನುತ್ತಾ ವೀಣಾ ಗೆಳತಿಗೆ ಪ್ರೋತ್ಸಾಹವಿತ್ತಳು.

ಗಣಿತದಲ್ಲಿ ಮಗ್ನರಾಗಿದ್ದವರಿಗೆ ಕತ್ತಲಾದುದು ತಿಳಿಯಲಿಲ್ಲ. ಅವರ ಎಲ್ಲಾ ಕೆಲಸ ಮುಗಿದಾಗ, ವಿಮಲಾ, "ಎಷ್ಟು ತಡವಾಯಿತು. ಸಮಯ ಹೋದುದೇ ತಿಳಿಯಲಿಲ್ಲ" ಎಂದು ಎದ್ದು ನಿಂತಳು.

"ಹೀಗೆ ಯಾವಾಗಲೂ ಬಂದು ನನ್ನನ್ನು ಕೇಳಬಹುದು. ನನಗೂ ಕಲಿತಂತಾಗುತ್ತದೆ" ವೀಣಾ ನುಡಿಯಲು,

"ನೀನು ಜಾಣೆ, ನಿನಗೆ ಓದುವ ಅಗತ್ಯವೇ ಇಲ್ಲ. ನಾನಿನ್ನು ಹೋಗಿ ಬರುತ್ತೇನೆ" ಎಂದು ವಿಮಲಾ ತನ್ನ ಮನೆಗೆ ಹೊರಟಳು.

ರಾಮು ಆಗ ತಾನೇ ಬಂದಿದ್ದನು.

"ಅಕ್ಕಾ, ನೀನು ಪುಸ್ತಕ ಓದಿಯಾಯಿತೆ? ಅದನ್ನು ಇಂದೇ ಹಿಂದಿರುಗಿಸುತ್ತೇನೆ ಎಂದು ತೆಗೆದುಕೊಂಡು ಬಂದೆ" ಎಂದು ಪ್ರಶ್ನಿಸಿದನು.

ವೀಣಾ, "ಮುಗಿಸಿಯಾಯಿತು. ಬಹಳ ಚೆನ್ನಾಗಿದೆ." ಎಂದು ಪುಸ್ತಕ ತಂದು ಕೊಟ್ಟಳು. ಸಂಜೆ ಆರೂವರೆ ತಾಸು ಆದುದರಿಂದ ರಾಮು ಸೈಕಲಿನಲ್ಲಿ ತನ್ನ ಗೆಳೆಯನಲ್ಲಿಗೆ ಪುಸ್ತಕ ಕೊಡಲು ಹೋದನು.

ಹಿಂತಿರುಗಿ ಬಂದವನು, ಒಳಗೋಡಿ ಬಂದು "ಅಕ್ಕಾ, ಅಮ್ಮಾ ಒಂದು ವಿಶೇಷ ಸಮಾಚಾರ ಇದೆ" ಎಂದನು.

"ಏನ ?" ಕುತೂಹಲದಿಂದ ವೀಣಾ ಪ್ರಶ್ನಿಸಿದಳು.

"ರಾಜಣ್ಣ ಕಾಲೇಜಿನಲ್ಲಿ ಯೂನಿಯನ್ ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರನಾಗಿ ನಿಂತಿದ್ದಾನೆ. ನನ್ನ ಸ್ನೇಹಿತ ಶ್ರೀಪತಿಯ ಅಣ್ಣ ಈ ಸುದ್ದಿ ಹೇಳಿದ. ಅವನೂ, ರಾಜಣ್ಣನ ಕಾಲೇಜಿನಲ್ಲಿ ಓದುತ್ತಾನೆ"

"ಹಾಗಾದರೆ ರಾಜಣ್ಣನಿಗೆ ಭಾರೀ ಸಂಭ್ರಮವಿದೆ."

"ಹೌದು ನನಗೂ ಇದೆ" ಎಂದ ರಾಮು.

"ಏನು ಯೋಚನೆ ಮಾಡಿದ್ದಾನೋ? ನನ್ನ ಬಳಿ ಏನೂ ಹೇಳಲಿಲ್ಲ" ತಾಯಿ ನುಡಿದರು.

ರಾಜೀವ ಮನೆಗೆ ಮರಳುವುದನ್ನೇ ಕಾದು ಕುಳಿತಿದ್ದರು. ಅವನು ಬರುವಾಗ ಎಂದಿಗಿಂತ ತಡವಾಗಿತ್ತು. ಮುಖದಲ್ಲಿ ಆಯಾಸದ ಕಳೆಯು ಇತ್ತು. ಗಂಭೀರವಾಗಿಯೇ ಇದ್ದನು. ಗೆಳೆಯರ ಒತ್ತಾಯಕ್ಕೆ ಕಟ್ಟುಬಿದ್ದು ರಾಜೀವನು ಸ್ಪರ್ಧಾಳುಗಳ ಪಟ್ಟಿಗೆ ತನ್ನ ಹೆಸರನ್ನು ಕೊಟ್ಟಿದ್ದನು. ಹೆಸರು ಕೊಟ್ಟ ಬಳಿಕ ತನ್ನ ಗೆಳೆಯರು ಹೂಡಿದ ಸಂಚು ಅವನಿಗೆ ತಿಳಿಯಿತು. ಸಹ ವಿದ್ಯಾರ್ಥಿಗಳೊಡನೆ ರಾಜೀವನು ಹೆಚ್ಚು ಕಲೆಯುತ್ತಿರಲಿಲ್ಲ. ಅಲ್ಲದೆ ಸ್ನೇಹಿತರ ಬಳಗವೂ ದೊಡ್ಡದಿರಲಿಲ್ಲ. ಈಗ ಅವನ ಮುಂದೆ ಚುನಾವಣೆ ಬ್ರಹ್ಮಾಕಾರವನ್ನು ತಳೆದಿತ್ತು. ಅದೇ ಯೋಚನೆಯು ಅವನನ್ನು ಕಾಡುತ್ತಿತ್ತು.

ರಾಮುವು, "ಅಣ್ಣಾ ನೀನು ಚುನಾವಣೆಯಲ್ಲಿ ಸ್ಪರ್ಧಿಸುವೆಯಂತೆ? ಹೌದೆ?" ಎಂದು ಪ್ರಶ್ನಿಸಿದನು. ಅವರೀರ್ವರೊಳಗೆ ಎಂಟು ವರ್ಷಗಳ ಅಂತರವಿದ್ದುದರಿಂದ ಹೆಚ್ಚು ಸಲಿಗೆ ಇರಲಿಲ್ಲ.

"ಹೌದು" ಚಿಕ್ಕ ಮುಗುಳ್ನಗುವೊಂದು ತೇಲಿ ಹೋಯಿತು. ವೀಣಾ ಬಳಿಯಲ್ಲಿದ್ದಳು.

"ಯಾವಾಗ ಚುನಾವಣೆ? ಎಷ್ಟು ಮಂದಿ ಇದ್ದಾರೆ?" ಎಂದು ಪ್ರಶ್ನಿಸಿದಳು.

"ಹದಿನೈದು ದಿವಸಗಳಿವೆ. ನಾಲ್ಕು ಜನರಿರುವರು."

"ನೀನು ನಿಜವಾಗಿಯೂ ಧೈರ್ಯಶಾಲಿ" ಎಂದಳು ತಂಗಿ.

"ನಿಲ್ಲುವುದೆಂದು ನಿರ್ಧರಿಸಿಯಾಗಿದೆ."

"ಏನು ಸಹಾಯಬೇಕಾದರೂ ನಾನು ಮಾಡ್ತೇನೆ" ರಾಮು ಹೇಳಿದ.

ವೀಣಾ, "ನಾನೂ ಕೂಡಾ ಇದ್ದೇನೆ" ಎಂದಳು.

"ಈಗ ನನಗೆ ಎಲ್ಲರ ಸಹಾಯವೂ ಬೇಕು." ರಾಜೀವ ಹೇಳುವಾಗ ಅವನ ಮಿತ್ರನು, ಗೇಟಿನ ಬಳಿ ಸೈಕಲ್ ಬೆಲ್ ಸದ್ದು ಮಾಡಿದ್ದುದು ಕೇಳಿಸಿತು.

'ಈಗ ಬಂದೆ' ಎಂದು ಹೊರಟನಾತ.

"ಊಟಮಾಡಿ ಹೋಗಬಹುದಲ್ಲವೆ?" ಎಂದು ತಾಯಿ ಹೇಳಿದಾಗ "ಹೊರಗೆ ಹೋಗುವುದಿಲ್ಲ. ಇಲ್ಲಿಯೇ ನಿಂತು ಮಾತಾಡಿ ಬರುವುದು." ಎಂದು ಹೋದನಾತ.

ರಾತ್ರಿ ಊಟದ ವೇಳೆಯಲ್ಲಿ ತಂದೆಗೂ ಸಮಾಚಾರ ತಿಳಿಯಿತು.

"ನಿನಗೆ ವಿಜಯವಾಗಲಿ" ಎಂದವರು ಸುಮ್ಮನಾದರು.

ರಾಮು, ಮತ್ತು ವೀಣಾ ತಾವು ನುಡಿದಂತೆ ಸಹಾಯ ನೀಡಲು ಮುಂದಾದರು. ಕರಪತ್ರಗಳ ತಯಾರಿ, ಹಂಚುವಿಕೆ, ಅಣ್ಣನಿಗೆ ಪ್ರೋತ್ಸಾಹವೀಯುವುದು, ಮತ್ತು ತಮ್ಮ ಸಹಪಾಠಿಗಳೊಡನೆ ಚುನಾವಣೆಯ ವಿಷಯದ ಮಾತುಕತೆ ಇವುಗಳಲ್ಲಿಯೇ ಅವರ ಸಮಯ ಕಳೆದು ಹೋಗುತ್ತಿತ್ತು.

ರಾಜೀವನು ಹಿಂದೆ ತನ್ನಷ್ಟಕ್ಕೆ ತಾನಿರುತ್ತಿದ್ದನು, ತನ್ನ ಗೆಳೆಯರ ಸಹಪಾಠಿಗಳ ಪರಿಚಯ ಮಾಡತೊಡಗಿದನು. ಜನರೊಡನೆ ಹೇಗೆ ವರ್ತಿಸಬೇಕೆಂದು ಕಲಿತನು. ಹಿಂದಿನ ಒರಟುತನ, ಆಡಂಬರ ಮಾಯವಾಗುತ್ತಾ ಬಂತು.

ರಾಜೀವನು ಕಾಲೇಜಿನಲ್ಲಿ ಯಾವ ಪಂದ್ಯಾಟಗಳಲ್ಲಾಗಲೀ, ಇತರ ಚಟುವಟಿಕೆಗಳಲ್ಲಾಗಲೀ ಪಾತ್ರವಹಿಸಿರಲಿಲ್ಲ. ಇದರಿಂದ ಅವನು ಹೆಚ್ಚಿನವರಿಗೆ ಅಪರಿಚಿತನಾಗಿದ್ದನು. ಚುನಾವಣೆಯ ದೆಸೆಯಿಂದ ಅವನ ಹೆಸರು ಎಲ್ಲರಿಗೂ ತಿಳಿಯುವಂತಾಯಿತು. ಅವನ ಇದಿರಾಳಿ ರಂಗಣ್ಣನಾದರೆ ಈಗಾಗಲೇ ವಿದ್ಯಾರ್ಥಿಗಳ ಪ್ರಿಯ ಮಿತ್ರನು, ಮತ್ತು ಎಲ್ಲರ ಗೌರವ ಆದರಗಳನ್ನು ತನ್ನ ವೈಯಕ್ತಿಕ ಪ್ರತಿ

(ಹದಿನೈದನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p. a.	7ರಿಂದ 11 ತಿಂಗಳು % p. a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು % p. a.	36ರಿಂದ 47 ತಿಂಗಳು. % p. a.	48ರಿಂದ 59 ತಿಂಗಳು. % p. a.	60ರಿಂದ 83 ತಿಂಗಳು. % p. a.	84ರಿಂದ 120 ತಿಂಗಳು % p. a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ -	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲೆಲ್ಲಿಯೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್]

ರಿಜಿಸ್ಟರ್ಡ್ ಆಫೀಸು:— ಕೋರ್ಟ್ ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಹಾಳೆಯ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮುಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್‌ಬೇಟನ್ನರು ಮರಳಿ ಭಾರತಕ್ಕೆ ಬಂದಾಗ ಅವರು ಪ್ರ| ನೆಹರು ಮತ್ತು ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ಮೊದಲಾದವರಿಂದ ಆದರದ ಸ್ವಾಗತವನ್ನು ಪಡೆದರು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೨೮	೧೧—೩—೧೯೬೫	No. 28

ಮತ್ತೆ ಕೇರಳ

ದೇಶ—ವಿದೇಶಗಳಲ್ಲಿ ಕುತೂಹಲ ಕೆರಳಿಸಿರುವ ಕೇರಳದ ಮಧ್ಯಾವಧಿ ಚುನಾವಣೆಗಳ ಫಲಿತಾಂಶವು ಸಂಪೂರ್ಣ ನಿರಾಶಾಜನಕವಿದೆ ಮಾತ್ರವಲ್ಲ ಕುಸು ಗಂಡಾಂತರಕಾರಿಯೂ ಆಗಿದೆ. ಭಾರತವು ಗಣರಾಜ್ಯವೆಂದು ಘೋಷಿಸಿದ ಬಳಿಕದ ಈ ೧೪ ವರ್ಷಗಳಲ್ಲಿ ಹಲವು ಸರಕಾರಗಳು ಪಕ್ಷ ಗದ್ದುಗೆಯೇರಿ ಅಸಫಲವಾಗಿ ಪತನಗೊಂಡವು, ರಾಷ್ಟ್ರಪತಿಯ ಆಡಳಿತೆಯು ಅಲ್ಲಿ ಅತ್ಯಗತ್ಯವಾಯಿತು. ಅತ್ಯಧಿಕ ವಿದ್ಯಾವಂತರಿರುವ ಕೇರಳದ ಮತದಾರರು ತಮಗೊಂದು ಸುಸ್ಥಿರವಾದ ಸರಕಾರವನ್ನು ರಚಿಸಿಕೊಳ್ಳಲು ಇನ್ನೂ ಅಸಮರ್ಥರಾದುದು ವ್ಯಾಕುಲಕ್ಕೆ ಕಾರಣವಾಗಿದೆ. ರಾಜಕೀಯ ಸುಸ್ಥಿರತೆಯಿಲ್ಲದಿರುವುದು ಪ್ರಜಾಸತ್ತಾತ್ಮಕ ಆಡಳಿತಕ್ಕೆ ಶೋಭೆಯನ್ನು ತರುವುದಿಲ್ಲ. ಈ ಸಂಗತಿಯು ದೇಶದ ಆರೋಗ್ಯಕ್ಕೆ ಭಂಗ ತರುವುದು ಖಂಡಿತ.

೧೯೫೭ರಲ್ಲಿ ಕೇರಳ ರಾಜ್ಯವು ನಿರ್ಮಾಣಗೊಂಡ ನಂತರದ ಶಾಸನ ಸಭೆಯ ೧೨೬ ಸ್ಥಾನಗಳಲ್ಲಿ ೬೦ ಸ್ಥಾನ ಗಳಿಸಿದ ಕಮ್ಯುನಿಸ್ಟರು ಸರಕಾರ ರಚಿಸಿಕೊಂಡರು; ಆದರೆ, ಅದು ಜನ ವಿರೋಧದಿಂದ ಪತನವಾಯಿತು. ಮುಂದೆ ೧೯೬೦ರ ಮಧ್ಯಾವಧಿ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಕಮ್ಯುನಿಸ್ಟರನ್ನು ಸಂಪೂರ್ಣ ಸೋಲಿಸಿತು. ಮುಸ್ಲಿಂ ಲೀಗ್, ಪ್ರಸಪಾ ಪಕ್ಷಗಳನ್ನು ಕೂಡಿ ಸರಕಾರ ನಡೆಸಿತು. ಮುಂದೆ ಅದು ಪತನಗೊಳ್ಳುವ ಪ್ರಸಂಗಕ್ಕೆ ಉಳಿದೆಡೆ, ಪಕ್ಷಗಳು ತೆರೆಯಿಂದ ಹೊರ ಸಂದುವು. ಕಾಂಗ್ರೆಸಿನೊಳಗಣ ಭಿನ್ನಾಭಿಪ್ರಾಯ ಮತ್ತು ವ್ಯಕ್ತಿ ದ್ವೇಷದ ಪರಿಣಾಮವಾಗಿ ಕಾಂಗ್ರೆಸಿಗರಿಂದಲೇ ಆ ಸರಕಾರ ಬಿದ್ದು ಹೋಯಿತು. ಇದು ಲಜ್ಜೆಗೇಡೆಂದು ಆಗಲೇ ಎಲ್ಲರೂ ತಿಳಿದಿದ್ದಾರೆ. ಬಂಡುಗಾರ ಕಾಂಗ್ರೆಸ್ಸಿಗರು ಕೇರಳ ಕಾಂಗ್ರೆಸ್ ಎಂಬ ಹೊಸ ಪಕ್ಷವನ್ನು ರಚಿಸಿಕೊಂಡು ಇಂದಿನ ಚುನಾವಣೆಗಳಲ್ಲಿ ಭಾಗವಹಿಸಿದರು; ಒಟ್ಟು ೨೩ ಸ್ಥಾನಗಳನ್ನು ಪಡೆದರು. ಕಾಂಗ್ರೆಸ್ಸು ಗಳಿಸಿದ ಸ್ಥಾನಗಳು ಬರೇ ೩೬. ಎಡ ಕಮ್ಯುನಿಸ್ಟರು ೪೦ ಸ್ಥಾನಗಳನ್ನು ಗಿಟ್ಟಿಸಿಕೊಂಡು ವಿಧಾನ ಸಭೆಯಲ್ಲಿ ಒಂದು ದೊಡ್ಡ ಪಕ್ಷದವರೆಂದು ಸನ್ಮಾನಿತರಾಗಿದ್ದಾರೆ. ಹಿಂದಿನ ಮುಖ್ಯಮಂತ್ರಿ, ಬಂಡುಗಾರ ಕಾಂಗ್ರೆಸಿಗರಿಂದ ಅರೇಸಿಯೆಂದು ಕರೆಯಲ್ಪಟ್ಟ ಆರ್. ಶಂಕರರು, ಚುನಾವಣೆಯಲ್ಲಿ ಸೋತು ತಮ್ಮ 'ಗೌರವ'ನ್ನೇ ಕಳೆದುಕೊಂಡಿದ್ದಾರೆ. ಅವರ ಹೆಚ್ಚಿನ ಸಹಯೋಗಿಗಳೂ ತಂತಮ್ಮ ಸ್ಥಾನಗಳಿಗೆ ಎರವಾಗಿದ್ದಾರೆ ಇದು ವಿಚಿತ್ರವೆಂದು ಹೇಳುವಂತಿಲ್ಲವಾದರೂ ಅಲಕ್ಷಿಸುವ ಸಂಗತಿ ಮಾತ್ರ ಅಲ್ಲವೇ ಅಲ್ಲ.

ಇದೀಗ ಕೇರಳದಲ್ಲಿ ಯಾರು ಸರಕಾರ ರಚಿಸಬಲ್ಲರು? ಎಡ ಕಮ್ಯುನಿಸ್ಟರು ಅಧಿಕ ಸ್ಥಾನವನ್ನೇನೋ ಪಡೆದಿದ್ದಾರೆ. ಆದರಿದು ಮೂರರಲ್ಲೊಂದು ಭಾಗದಷ್ಟೂ ಇಲ್ಲ. ಕಾಂಗ್ರೆಸೇತರ ಪಕ್ಷವು ಸರಕಾರ ರಚಿಸುವುದಾದರೆ, ಅದು ಜನಮತವನ್ನೂ ಜನತಂತ್ರವನ್ನೂ ಅಲಕ್ಷ್ಯಿಸದಿರುವ ವರೆಗೆ ಎಸ್ ಎಸ್ ಪಿ ಅದನ್ನು ಬೆಂಬಲಿಸುವುದೆಂದು ಹೇಳಲಾಗುತ್ತಿದೆ. ಆದರೆ ಅವರ ಸಹಾಯವೇ ಸರಕಾರ ರಚಿಸಲು ಸಾಲದು. ಬಂಡುಗಾರ ಕಾಂಗ್ರೆಸಿಗರು ಎಡ ಕಮ್ಯುನಿಸ್ಟರಿಗೆ ಬೆಂಬಲ ಕೊಡಲಾರರು. ಅವರಿಗೆ ಕಾಂಗ್ರೆಸ್ ಪಕ್ಷವನ್ನು, ಆರ್. ಶಂಕರರ ಮೇಲಿನ ದ್ವೇಷ, ಚಾಕೋಪೋಸಿನ ನಿಷ್ಠೆಯೇ ಕಾರಣವಾಗಿ, ವಿರೋಧಿಸುವುದಷ್ಟೇ ಉದ್ದೇಶ. ಇನ್ನುಳಿದ ಯಾರ ನೆರವಿನಿಂದಾದರೂ ಸರಕಾರ ಕಟ್ಟಬಹುದೆಂಬ ಆಶೆಯನ್ನು ಎಡ ಕಮ್ಯುನಿಸ್ಟರು ಇಟ್ಟುಕೊಂಡಿದ್ದರೂ ಅದು ಸಾಧ್ಯವಾಗದು; ಆದರೂ ಸ್ಥಿರ ಸರಕಾರವಾಗಲಾರದು. ಅದು, ಕಾಂಗ್ರೆಸ್ ಮತ್ತು ಬಂಡುಗಾರ ಕಾಂಗ್ರೆಸ್ ಒಂದಾಗಿ ಕೆಲವರಾದರೂ ಸ್ವತಂತ್ರ ಸದಸ್ಯರ ಸಹಕಾರದಿಂದ ಸರಕಾರ ರಚಿಸಬಹುದು; ಆದರೆ, ಇದು ಕಲ್ಪನೆಗೂ ನಿಲುಕದ ವಿಷಯ. ಕೆಲವೊಮ್ಮೆ ಇಂತಹ ಘಟನೆಗಳೂ ನಡೆಯುವುದುಂಟು. ಅದೀಗ ಕೇರಳದಲ್ಲಿ ಆದೀತೆ? ಕಾದು ನೋಡಬೇಕು. ಇವೆಲ್ಲ ವಿಷಯಗಳನ್ನು ನೋಡುವಾಗ, ಕೇರಳದಲ್ಲಿ ಭದ್ರ ಸರಕಾರ ಸ್ಥಾಪಿತವಾಗುವ ಲಕ್ಷಣಗಳು ಗೋಚರಿಸುವುದಿಲ್ಲ. ಗವರ್ನರರು ಅಲ್ಲಿ ಸರಕಾರ ರಚಿಸುವುದಕ್ಕೆ ಇರುವ ಸಾಧ್ಯಾಸಾಧ್ಯತೆಗಳನ್ನು ಅಭ್ಯಾಸ ಮಾಡುವರು. ಒಂದು ವೇಳೆ ಅವರಿಗೆ ಸಮಾಧಾನವಾಗದೆ ಹೋದರೆ, ಇದುವರೆಗಿನ ಅನುಭವದಿಂದ ಹೇಳುವುದಾದರೆ, ಇದಾಗುವುದು ಸಾಧ್ಯವಿಲ್ಲ, ಕೇರಳಕ್ಕೆ ಮತ್ತೆ ರಾಷ್ಟ್ರಪತಿಯ ಆಳಿಕೆಯೇ ಒದಗಬೇಕಾಗುತ್ತದೆ. ಪ್ರಜಾತಂತ್ರಾತ್ಮಕವೆಂದಿದನ್ನು ಧೈರ್ಯದಿಂದ ಹೇಳಲಾಗದಾದರೂ ಅನ್ಯತ್ರ ಗತಿಯಿಲ್ಲ.

ಈಗಿನ ಚುನಾವಣೆಯಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ. ಕಾಂಗ್ರೆಸ್ ಪಕ್ಷದಲ್ಲಿ ಉಂಟಾದ ಬಿರುಕು ಅದರ ಅಳಿವಿಗೆ ಕಾರಣವಾಗುತ್ತದೆಯೆಂಬುದೊಂದು. ದೇಶ ದ್ರೋಹಿಗಳೆಂದೂ ಕೆಂಪು ಚೀನಾದ ಪರರೆಂದೂ ಹೆಸರು ಪಡೆದ ಎಡ ಕಮ್ಯುನಿಸ್ಟರು ಮತದಾರರ ಮನಸ್ಸನ್ನು ಹೇಗೆ ಮೆಚ್ಚಿಸಿಕೊಂಡಿದ್ದಾರೆ ಎಂಬುದಿನ್ನೊಂದು. ಇವರು ದೇಶವನ್ನು ಚೀನೀಯರ ವಶ ಮಾಡಲು ಭಾರಿ ಸಂಚು ಹೂಡಿದ್ದಾರೆಂಬ ಸಂಗತಿಯನ್ನು ಕೇರಳೀಯರು ಇನ್ನೂ ಅರಿತುಕೊಂಡಿಲ್ಲ. ಅರಿಯುವಂತೆ ಮಾಡುವಲ್ಲಿ ದೇಶ ಪ್ರೇಮಿಗಳು ತಪ್ಪಿದ್ದಾರೆ. ವಿಭಿನ್ನ ರಾಜ್ಯಗಳಲ್ಲಿರುವ ಕಾಂಗ್ರೆಸ್ ಭಿನ್ನಾಭಿಪ್ರಾಯವು ಬಲಿಯುತ್ತ ಬಂದರೆ, ಯಾದವರಂತೆ ಕಾಂಗ್ರೆಸ್ಸು ಇತಿಶ್ರೀಯಾಗಬಹುದು. ಈ ಬಗ್ಗೆ ಕಾಂಗ್ರೆಸ್ ವರಿಷ್ಠರು ತೀವ್ರ ಗಮನ ಕೊಡಬೇಕಾಗಿದೆ. ಯಾವ ಪಕ್ಷವನ್ನೂ ಬಹುಮತದಿಂದ ಆರಿಸದ ಕೇರಳದ ಜನತೆಯ ಸಾಮೂಹಿಕ ಅಭಿಪ್ರಾಯವೇನು ಎಂಬುದಿನ್ನೂ ಯಕ್ಷ ಪ್ರಶ್ನೆ. ಇದಕ್ಕೆ ಸೂಕ್ತ ಉತ್ತರವೆನಿಸುವುದು: ಎಲ್ಲಾ ಪ್ರಜಾತಂತ್ರಾತ್ಮಕ ಪಕ್ಷಗಳ ಆದ್ಯ ಕರ್ತವ್ಯವೆಂದು ಮಾತ್ರ ನಾವು ಹೇಳಬಹುದು.

ವಚನ ಸುಧೆ

ಚರನ್ವೈ ಮಧು ವಿಂದತಿ
ಚರನ್ ಸ್ವಾದುಮುದುಂಬರಮ್ ||

(ಐತರೇಯ ಬ್ರಾಹ್ಮಣ, ೭—೧೫)

O ನಿಶ್ಚಯವಾಗಿಯೂ ತಿರುಗಾಡುವುದರಿಂದ ಜೇನು ದೊರೆಯುತ್ತದೆ. ಹಾಗೆಯೇ ಸಂಚಾರದಿಂದ ಸಿಹಿಯಾದ ಫಲವು ಲಭಿಸುತ್ತದೆ.

OO ಜೇನು ನೊಣಗಳು ತಿರುಗಾಡಿ ಜೇನನ್ನು ಸಂಗ್ರಹಿಸುತ್ತವೆ. ಪಕ್ಷಿಗಳು ಹಾರಾಡಿಯೇ ರುಚಿಕರವಾದ ಹಣ್ಣುಗಳನ್ನು ಪಡೆಯುತ್ತವೆ. ಮಾನವನೂ ಪರಿಶ್ರಮದಿಂದ ಮಾತ್ರ ಉತ್ತಮ ಸ್ಥಿತಿಗೆ ಬರಬಲ್ಲನು.

ಶ್ರೀ ಕಡೆಂಗೋಡ್ಲು

ಇದೇ ಬೇಸಗೆಯಲ್ಲಿ ಕಾರವಾರದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ದಕ್ಷಿಣ ಕನ್ನಡದ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಆಯ್ಕೆ ಹೊಂದಿದ್ದಾರೆ. ಶ್ರೀ ಕಡೆಂಗೋಡ್ಲರವರು ಶ್ರೇಷ್ಠ ಸಾಹಿತಿಯವರಲ್ಲಿ ಅಗ್ರಗಣ್ಯರಾಗಿದ್ದಾರೆ. ಇಂದಿನವರಂತೆ ಅವರು ದಶಸಂಖ್ಯೆಗಳಲ್ಲಿ

(ಹದಿನಾಲ್ಕನೇ ಪುಟ ನೋಡಿರಿ)

ನಗಸಣ್ಣನ ಸರಸ



"ಕೇರಳದಲ್ಲಿ ಎಡಕಮ್ಯುನಿಸ್ಟ್ ಪಕ್ಷದ ವಿಜಯ ಕೇರಳೀಯರ ಚೈನಾಭಕ್ತಿಯನ್ನು ಪ್ರತಿಬಿಂಬಿಸುತ್ತದೆ...

"ಬಂಡುಗಾರ ಕಾಂಗ್ರೆಸಿಗರ ನಗಾರಿ ತನ್ನಿಂದಾಗಿಯೇ ಕಾಂಗ್ರೆಸು ೧೯೬೦ರಲ್ಲಿ ಗೆದ್ದು ಬಂದಿತ್ತು ಎಂದು ಸಾರುತ್ತದೆ..."

"ಆದರೆ, ಚುನಾವಣೆಯ ಫಲಿತಾಂಶ ಕೇರಳದಲ್ಲಿ ಸರ್ವಾಧಿಕಾರ ಬೇಕೆಂದು ಡಂಗುರ ಸಾರುವುದಿಲ್ಲವೇ?"

ಗೇಹ ರಾಜ್ಯದಲ್ಲಿ

ಕ್ರೋಧಿ - ವಿಶ್ವಾವಸು ಸಂಕ್ರಾಂತಿ

"ಅಂತೂ ಏನೇ ಇರ್‍ಲಿ, ಕ್ರೋಧಿ ಸಂವತ್ಸರವು ಆರಂಭದಲ್ಲಿ ಕ್ರೋಧಿಯಾಗಿದ್ದರೂ ಕೊನೆಯಲ್ಲಿ ತನ್ನ ಕ್ರೋಧವನ್ನು ಬಿಟ್ಟುಕೊಟ್ಟಂತೆ ತೋರುತ್ತದೆ."

"ಯಾಕೆ ಹಾಗಂತೀಯ?'

"ಅಲ್ಲ ನೋಡಿ, ಕಳೆದ ವರ್ಷದ ಮುಂಗಡ ಪತ್ರಗಳೆಲ್ಲವೂ ಹೊಸ ಹೊಸ ಕರಭಾರವನ್ನು ಹೊತ್ತುಕೊಂಡೇ ಬಂದಿದ್ದವು......'

'ಅಂದರೆ, ಅವುಗಳ ಮೇಲೆ ಕ್ರೋಧಿಯ ಪ್ರಭಾವ ಬಿದ್ದಿತ್ತೂಂತ ನೀನನ್ನೋದು......."

"ಅಲ್ದೆ ಮತ್ತೇನಂತೆ? ಕೇಂದ್ರ—ರಾಜ್ಯ ಹೀಗೆ ಎಲ್ಲಾ ಮುಂಗಡ ಪತ್ರಗಳು ಕೊಡತೆ—ಹೊಸ ಕಂತಂತ......."

"ಸರಿ ಕಣೇ, ದೇಶದ ಮೇಲೆಯೇ ದೇವನ ಕ್ರೋಧ ಬಿದ್ದಿದೇಂತ ಅಂದ ಮೇಲೆ...."

"ಅದೂ ಹೌದೂನ್ನಿ, ಪ್ರಾರಂಭಕ್ಕೆ ಮೊದಲೇ ಬಗ್ಗಿದ ಬೆನ್ನ ಮೇಲೆ ಮತ್ತಷ್ಟು ಭಾರಬಿತ್ತು ...ಆದ್ರ ಮೇಲೆ ಭಾರತ ರತ್ನ ಉದುರಿ ಹೋಯ್ತು..."

'ಅಂದ್ರೆ...'

"ಅಂದ್ರೆ ಏನೂಂತ ನನ್ನ ಯಾಕೆ ಕೇಳ್ತೀರಾ?"

'ಅಲ್ಲಾ, ನಿನ್ನಿಂಗಿತವೇನೆಂದು..."

"ಅಷ್ಟೂ ತಿಳಿಯೋದಿಲ್ವೆ?"

"ತಿಳಿದ್ರೆ ಕೇಳ್ತೀನೇನು ನಿನ್ನ...."

"ಸತ್ಯಕ್ಕೂ ಗೊತ್ತಿಲ್ಲವೇನು?'

'ಇಲ್ಲ...."

'ಸುಳ್ಳು ಸುಳ್ಳು....ನನ್ನ ಬಾಯಿಂದಲೇ ಬರ್‍ಸೋದಕ್ಕೆ ಮಾಡಿರೋ ಸಂಚು ಅದು..."

"ಆಲ್ವೆ, ನಿನ್ನ ಸಂಗಡ ಸಂಚು ಹೂಡಿ ಮಾಡಬೇಕಾದದ್ದಾದರೂ ಏನೂಂತ...."

"ಮತ್ತೆ ಭಾರಿ ದೊಡ್ಡ...ಇವರಂತೆ ಎದೆ ತಟ್ಟಿಕೊಳ್ತಾ ಇದ್ದೀರಲ್ಲಾ .."

"ಏನೂಂತ?...."

"ತಟ್ಟಿಕೊಂಡವ್ರಿಗೆ ತಿಳೀದಲ್ವೆ?"

"ಅಯ್ಯೋ ಮಹಾರಾಯಿತಿ, ತಿಳಿಯೋದು ತಿಳಿಯೋದೂಂತ ಅಂದ್ರೆ ಇನ್ನೂ ವಿಶ್ವಾಸಾನೇ ಹುಟ್ಟೋಲ್ಲವಲ್ಲಾ......"

"ಅಲ್ಲಾ, ತಿಳಿತಿಳಿದೂ ತಿಳಿಯೋಲ್ಲಾಂತಂದ್ರೆ ಹೇಗೆ ವಿಶ್ವಾಸ ಮೂಡುತ್ತೇಂತ......?"

"ಇನವಪ್ಪ ಅದು ಬೇಗ ಅಂದು ಬಿಟ್ಟಿ...'

"ಉಸಿರು ಬಿಡ್ತೇನೆ ಅನ್ನ ಬೇಡಿ ಮತ್ತೆ...'

ಇಲ್ಲಾ, ಇಲ್ಲಾ ಇಲ್ಲ. ಹಾಯಾಗೇಂತ ಕೇಳಿಸ್ತೇನೆ. ಆಯ್ತ?"

"ಕಂಡಿತಕ್ಕೂ ನಿಮಗೆ ತಿಳಿಯೋಲ್ಲ?"

'ಮತ್ತೆ ಇದು ವರೆಗೆ ಅಂದದ್ದು ಏನೂಂತ....?'

"ಸರಿ ಹಾಗಾದ್ರೆ.... .. ನಾನೇ ಹೇಳಿ ಬಿಡಲೆ?"

"ನಾನು ಕೇಳೋಕೆ ಸಿದ್ಧ...."

"ಸೋತೆ ಅನ್ನಿ..."

"....ಯಾಕಂತೆ?"

'ಮೊದ್ಲು ಸೋತೇಂತನ್ನಿ. ಮುಂದಿನದು ಮುಂದೆ..'

"ಏನಪ್ಪಾ ಇದು? ನನ್ನ ಗೋಳು ಹೊಯ್ಕೋಕೆ ಹೂಡಿದ ಸಂಚು?'

"ಸಂಚೂ ಇಲ್ಲ, ಹೊಂಚೂ ಇಲ್ಲ. ನೀವು ಮೊದ್ಲು ಸೋತೇಂತನ್ನಿ....'

'ಆಯ್ತಪ್ಪಾ ಆಯ್ತು...."

"ಏನು?"

"ಏನೋ ನೀನಂದೆಯಲ್ಲಾ ಅದೇ..."

"ಊಹ್ಞೂಂ........ಹಾಗೆಲ್ಲಾ ಮಾತು ಹಾರ್‍ಸಿದ್ರೆ ನಡಿಯೋಕಿಲ್ಲ, ಸರಿಯಾಗಿ ಬಾಯಿ ಬಿಟ್ಟು ಒಪ್ಪಿಕೊಳ್ಳಿ.

"ಅಯ್ಯೋ, ನೀನೊಬ್ಳು ..."

"ನಾನು ಒಬ್ಳೇ ಸಾಲಸೇನು ನಿಂಗೆ"

'ಅಯ್ಯೋ ಮಹಾರಾಯ್ತಿ, ನಿನ್ನ ಮಾತೇ! ಹುಸ ನಾಲಿಗೆ ಹಿಡಿತದಲ್ಲಿಲ್ಲ. ನೀನನ್ನೋದೇನು? ಸೋತೇಂತ ಅನ್ನಬೇಕೂಂತ ತಾನೆ? ಸರಿ, ಹ್ಞೂಂ... ಸೋತೆ.... ಇನ್ನಾದ್ರೂ....'

"ಊಹ್ಞೂಂ, ಅದಾಗ್ಲಿಕ್ಕಿಲ್ಲ. ಸೋಲೊಪ್ಪಿಕೊಂಡೇಂತನ್ನಿ..."

"ಯಾಕಂತೆ? ಸೋತೇಂತಂದ್ರೆ ಸೋಲೊಪ್ಪಿಕೊಂಡಂತೇ ಅಲ್ವೆ?'

"ಅಯ್ಯಯ್ಯ....ಹ್ಯಾಗಂತೆ ಅದು?"

"ಯಾಕೆ ಅಲ್ಲಾಂತನ್ನು..."

"ನೋಡಿ, ಇವತ್ತು ನಮ್ಮ ಸುಬ್ಬಣ್ಣಯ್ಯ ಬಂದಿದ್ರು..."

"ಯಾವ...."

"ಅವೇ ನೋಡಿ, ನಿಮ್ಮ ತಾಯಿಯ, ತಂಗಿಯ ಗಂಡನ ಮಗನ ಮಾವ...'

"...ಹಾಂಹ್ಞಾಂ...ಅವ್ರು ಅವ್ರು..."

"ಹ್ಞೂಂ ಅವ್ರೇ....ಮಧ್ಯಾಹ್ನಕ್ಕೆ ಬಂದಿದ್ರು..."

"ಅಲ್ಲಾ, ನನ್ನ ಮಾತಿಗೂ ಈ ಸುಬ್ಬಣ್ಣನಿಗೂ ಯಾವ ಸಂಬಂಧಾಂತ?

"ಅವಸ್ರ ಪಡಬೇಡ....ಯಾವ ಸಂಬಂಧಾಂತಂದ್ರೆ ಬಾದರಾಯಣ. ನೋಡಿ, ಮಧ್ಯಾಹ್ನ ಊಟ ಮಾಡಿಂದ್ರೆ ಮಾಡಿಯೋ ಹೊರಟದ್ದೂಂತಂದ್ರು."

"ಹ್ಞೂಂ...ಇರಬಹುದು....."

"ಮತ್ತೂ ಮತ್ತೂ ಒತ್ತಾಯ ಮಾಡಿದ ಮೇಲೆ ಬೇಡ ಬೇಡಾಂತಂದ್ರು.... ಕೂತು ಒಟ್ಟಿಗೆ ಇಬ್ರ ಪಾಲನ್ನೂ ಮುಗಿಸಿದ..."

"ಸದ್ಯ ಅವನ ಹೊಟ್ಟೆಯಾದ್ರೂ ತಣ್ಣಗಾಯಿತಲ್ಲಾ....ಈಗ ಹೇಳು, ಯಾಕೆ ಈ ಸಂಗ್ತೀಂತ...."

"ಅವ್ನ ಮಗನಿಗೆ ಉಪನಯನವಂತೆ.. ಹೇಳಿಕೆ ಕೊಡೋಣಾಂತ ಬಂದ....'

"ಆಯ್ತಲ್ಲ, ಈಗ ಹೇಳು ಏನು ಸಂಬಂಧಾಂತ..."

"ಆಗ್ಲೆ ಅಂದೆನಲ್ಲಾ ಬಾದರಾಯಣಾಂತ?'

ಅಲ್ವೆ, ನಿನ್ಗೆ ಏನಾಗಿದೆ ಇವತ್ತೂಂತ?

"ಯಾಕೆ?"

'ಮತ್ತೆ ತಲೆತುಂಬ ಮಾತಾಡ್ತಾ ಇದ್ದೀಯಲ್ಲಾ?"

'ಆಗಿರೋದು ನಿಮ್ಗೆ...'

"ಏನು?"

'ಬುದ್ಧಿ ಭ್ರಮಣೆ....'

"ಯಾಕೆ?'

"ಮತ್ತೆ ಒಂದು ಅಂದ್ರೆ ನೂರು ತಿಳ್ಕೊಳ್ಳೋ ನಿಮ್ಮ ಬುದ್ಧಿ ಶಕ್ತಿ ಎಲ್ಲಿ ಉಡುಗಿದೇಂತ ಈವತ್ತು? ಆದ್ರ ಮೇಲೆ ಮಾತು ಮಾತಿಗೂ ಅನ್ತೀರಿ ..'

"ಏನೂಂತ??

"ಅನ್ನೋರಿಗೆ ಗೊತ್ತಿಲ್ವೆ?"

"ಇಲ್ಲ...."

'ಹೋಗ್ಲಿ ಬಿಡಿ. ಇದಕ್ಕೇ ಅನ್ನೋದು ಗಂಡಸ್ರ ಮಾತು ಹೆಂಗಸ್ರಿಗೆ ಮಾತ್ರಾಂತ...."

"ಯಾಕೆ?"

"ಅಲ್ಲಾ, ನೀವೇನಂದ್ರಿ ನೆನಪು ಮಾಡಿ ..."

"ಯಾವಾಗ?"

'ಸರಿಹೋಯ್ತು ಬಿಡಿ. ಅಲ್ಲಾ, ಸೋತೇಂತಂದ್ರಲ್ಲಾ...."

'ಹೌದು....ಹೌದು..."

'ಆದ್ರೆ ಹಾಗಂದ ಮಾತ್ರಕ್ಕೆ ಸೋಲೊಪ್ಪಿದಂತಾಗಲಿಲ್ಲ...."

"ಯಾಕೆ?"

'ಊಟ ಮಾಡಿದೇಂತಂದ್ರೆ ಹೊಟ್ಟೆ ತುಂಬಿರುತ್ತೆ?"

'ಓ, ಹಾಗೆ.... ಹ್ಞೂಂ... ಅಂದ್ರೆ ನಾನು ಸೋತದ್ದು ಮಾತ್ರವಲ್ಲ, ಸೋಲನ್ನೂ ಒಪ್ಪಿಕೊಳ್ಬೇಕು ಅಲ್ವೆ?"

"ಇದರಲ್ಲಿ ಬೇಸರಿಸೋ ಸಂಗ್ತಿಯೇನಿಲ್ಲ. ಅದೂ ಒಂದು ತರದ ಶಿಷ್ಟಾಚಾರ..'

"ಸರೀನ್ನು ಸೋಲೊಪ್ಪಿಕೊಂಡೆ. ಆಯ್ತಲ್ಲಾ...."

"ಈಗ ಹೇಳ್ತೀನೆ ಕೇಳಿ...."

"ಕೇಳುತ್ತ್ಲೇ ಇದ್ದೇನೆ ನಿನ್ನ ಅಮರವಾಣಿಯನ್ನು..."

"ಅದೇ, ಕ್ರೋಧಿಯ ಕ್ರೋಧ ನಮ್ಮ ದೇಶಕ್ಕೆ ಸರಿಯಾಗಿ ನಟಿದೇಂತಂದೆನಲ್ಲಾ...."

"ಹೌದು ಹೌದು. ಹಾಗಲ್ಲದಿದ್ರೂ ಅದೇ, ದಾಟಿಯಲ್ಲಿ ಏನೋ ಅಂದೆ..."

"ನೋಡಿ, ಆರಂಭದಲ್ಲೇ ಕರ ಭಾರ, ಮಧ್ಯೆ ತಲೆ ಭಾರ, ಮುಂದೆ ಸರ್ವಸ್ವ ಭಾರ..."

"ಏನೇ ಇದು? ನಿನ್ನ ಸೂತ್ರವನ್ನು ಸ್ವಲ್ಪ ಬಿಡಿಸಿ ಹೇಳು..'

"ನೀವೇನೂ ಅನ್ನೋದಿಲ್ಲ. ನಾನು ಮಾತ್ರ...."

"ಅನ್ನೋದಿದ್ರೆ ಅನ್ನು...'

'ಮೊದಲ ತಿಂಗಳು ತೆರಿಗೆ ತೆರಲು ಭಾರವಾಯ್ತು. ಮಧ್ಯೆ ಭಾರತ ರತ್ನ..."

"...ಓ, ಈಗ ಅರ್ಥವಾಯ್ತು ಪಂಡಿತ ನೆಹರು ತೀರಿಹೋದರೂಂತ ತಾನೆ?"

"ಹ್ಞಾಂ.... ಮುಂದೆ....'

"ಮುಂದೆ ಹುಟ್ಟಿಕೊಂಡ ಕೃತಕ ಆಹಾರ ಸಮಸ್ಯೆಯಿಂದ ಜೀವನವೇ ಭಾರವಾಯ್ತೂಂತ ತಾನೇ ನೀನನ್ನೋದು?"

"ಹ್ಞೂಂ....ಈಗಲಾದರೂ ಸರಿಯಾಗಿ ಅರ್ಥವಾಯ್ತಲ್ಲಾ....'

"ಅಲ್ಲಾ ಬರೇ ಒಗಟನಂತೆ ನೀನುಸಿರು ಬಿಟ್ರೆ ಹೇಗೇಂತ?'

"ಇಲ್ಲ ನಾನೇನೂ ಅದ್ಕೆ ತಯಾರಾಗಿಲ್ಲ.'

"ನನ್ನ ನಿನ್ನ ತಯಾರಿಗಿಯಾರಿಯನ್ನ ಕೇಳ್ತಾರೆ ಯಾರೂಂತ? ಬಿಡಬೇಕಾಗೋ ಕಾಲ್ದಲ್ಲಿ ಬಿಟ್ಟೇ ತೀರಬೇಕೂನ್ನು..."

"ಇಲ್ಲದ ಚಿಂತೆಯನ್ನೆಲ್ಲಾ ಯಾಕೆ ಕರೀಬೇಕೂಂತ?

"ಅಂದ್ರೆ, ನಿನ್ನ ಮಾತಿನ ಅರ್ಥ ಇಷ್ಟೇಂತಾಯ್ತು...'

'ಸದ್ಯಕ್ಕೆ ಅಷ್ಟೇನ್ನಿ. ಅಲ್ಲಾ, ಯಾವಾಗ್ಲೂ ನನ್ನ ಬುದ್ಧಿಗೆ ಗರ ಬಡಿದಿದೇನ್ನೋರು ಇವತ್ತು ತಮ್ಮ ಬುದ್ಧಿಯನ್ನ ಎಲ್ಲಿ ಅಡವಿಟ್ರೀಂತ...."

"ಪ್ರಾಯಃ ಇವತ್ತು ಬೆಳಗ್ಗೆ ಎದ್ದಗಳಿ

(ಹದಿಮೂರನೇ ಪುಟ ನೋಡಿರಿ)

ಶ್ರೀ ಕೆ. ಕೆ. ಶೆಟ್ಟಿ, ಎಂ ಎಲ್‌ಸಿ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0-30
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಠೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¼%ರ ವರೆಗಿನ ಬಡ್ಡಿ ನೀಡಲಾಗುವುದು.

೫ ವರ್ಷ ವ ಅವುಗಳಿಗೆ ಮೇಲ್ಪಟ್ಟ ಖಾಯಿಂಕ ಠೇವಣಾತಿಗಳಿಗೆ 6¼%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಕಗ್ಗತ್ತಲಲ್ಲೊಂದು ಆಶಾಜ್ಯೋತಿ

ಭಾರತದ ಆಹಾರ ಕಾರ್ಪೋರೇಶನ್

ಅದರ ಧ್ಯೇಯಗಳು ಹಾಗೂ ಕಾರ್ಯವಿಧಾನಗಳು

(ಕಳೆದ ಜನವರಿ ೧೪ರಂದು ಪೊಂಗಲ್ ಹಬ್ಬದ ಶುಭ ಅವಸರದಲ್ಲಿ ಮದ್ರಾಸಿನಲ್ಲಿ ಭಾರತದ ಆಹಾರ ಕಾರ್ಪೋರೇಶನಿನ ಉದ್ಘಾಟನೆ ನಡೆದ ಸಂದರ್ಭ ಕಾರ್ಪೋರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈ ಇವರು ಮಾಡಿದ ಸ್ವಾಗತ ಭಾಷಣ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಆಹಾರ ಸೇವನೆಯ ಪದ್ಧತಿ

ನಮ್ಮ ಜನರ ಮಾತ್ರವಲ್ಲ ಜಾನುವಾರುಗಳ ಆಹಾರ ಅಭ್ಯಾಸವನ್ನು ಶಾಸ್ತ್ರೀಯವಾಗಿ ಪರಿಶೀಲಿಸುವುದರಿಂದ ಅವರಿಗೆ ಸಂತೋಷಕರ ಹಾಗೂ ಪರಿಪುಷ್ಟವಾದ ಆಹಾರ ದೊರೆಯುವಂತಾಗಬಹುದು. ಮೈಸೂರು ರಾಜ್ಯದ ಕೆಲವು ಭಾಗಗಳಲ್ಲಿ ಧಾನ್ಯಗಳನ್ನೂ, ಪಂಜಾಬದ ಕೆಲವು ಪ್ರದೇಶಗಳಲ್ಲಿ ಗೋಧಿಯನ್ನೂ ಜಾನುವಾರುಗಳಿಗೆ ಆಹಾರ ರೂಪವಾಗಿ ಕೊಡುತ್ತಿದ್ದಾರೆ ಈ ಕ್ರಮದಿಂದಾಗಿ ರೈತರಲ್ಲಿ ಆಹಾರ ಧಾನ್ಯ ମಿಗತೆಯಾಗಿ ಉಳಿಯುವುದು ಅಸಾಧ್ಯ. ಜಾನುವಾರುಗಳ ಆಹಾರಕ್ಕಾಗಿ ಇತರ ಯಾವುದಾದರೂ ಬದಲಿ ವಸ್ತುವನ್ನು ಕಂಡು ಹಿಡಿಯಬೇಕು. ಇದರಿಂದ ಧವಸ ಧಾನ್ಯಗಳು ಜನರ ಉಪಯೋಗಕ್ಕೇನೇ ದೊರೆತು, ಈಗಿರುವ ಅಭಾವ ಸ್ವಲ್ಪ ಮಟ್ಟಿಗೆ ನೀಗಬಹುದು.

ನಮ್ಮ ಆಹಾರದ ಉತ್ಪಾದನೆಯು ೫೦ ಮಿಲಿಯ ಟನ್ನುಗಳಿಂದ ೮೦ ಮಿಲಿಯ ಟನ್ನುಗಳಿಗೆ ಏರಿದೆ. ಆದರೆ ಮಾರುಕಟ್ಟೆಗೆ ಬರುವ ಆಹಾರದ ಪ್ರಮಾಣ ಮಾತ್ರ ಇದಕ್ಕನುಗುಣವಾಗಿ ಏರಿಲ್ಲ. ಇದಕ್ಕೆ ಕಾರಣ, ರೈತವರ್ಗದಲ್ಲೇ ಜನಸಂಖ್ಯೆಯು ಹೆಚ್ಚಳವಾದುದು. ಮಾತ್ರವಲ್ಲ ಕಳೆದ ಹತ್ತು-ಹನ್ನೆರಡು ವರುಷಗಳಿಂದ, ರೈತರು ಗೇಣಿ ಕೊಡುವ ಕ್ರಮದಲ್ಲಿ ನಡೆದ ಬದಲಾವಣೆಯ ದೆಸೆಯಿಂದಲೂ ಮಾರುಕಟ್ಟೆಗೆ ಹೆಚ್ಚುವರಿಯ ಧಾನ್ಯ ಬರದಂತಾಗಿದೆ. ಹಿಂದಿನ ಕಾಲದಲ್ಲಿ ರೈತನು ಧನಿಗೆ ಧಾನ್ಯ ಅಥವಾ ವಸ್ತುವಿನ ರೂಪದಲ್ಲಿ ಗೇಣಿ ಕೊಡುತ್ತಿದ್ದನು. ಧನಿಯು ಈ ರೀತಿ ವಕ್ಕಲುಗಳಿಂದ ಸಂಗ್ರಹವಾದ ಧಾನ್ಯ ಹಾಗೂ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಮಾರುತ್ತಿದ್ದನು. ಆದರೆ ಈ ಪದ್ಧತಿ ಇಂದು ಮಾಯವಾಗಿದೆ. ಈಗಿನ ಕಾಯಿದೆಯ ಪ್ರಕಾರ ವಕ್ಕಲು ಧನಿಗೆ ನಗದು ಹಣ ರೂಪದಲ್ಲಿ ಗೇಣಿ ಸಲ್ಲಿಸುವಂತಾಗಿದೆ. ಚಿಕ್ಕ ಭೂಮಿಯ ಸಾಗುವಳಿ ಮಾಡುವ ರೈತನಾದರೂ ತನ್ನ ಎಲ್ಲಾ ಉತ್ಪಾದನೆಯನ್ನು ತಾನೇ ಈಗ ಉಪಯೋಗಿಸಬಹುದು. ಈ ಹಿಂದೆ ಬಹು ಹೆಚ್ಚು ಆಹಾರಧಾನ್ಯ ಬೆಳೆದು ಮಾರುಕಟ್ಟೆಗೆ ಒದಗಿಸುತ್ತಿದ್ದ ರೈತನೇ ವಾಣಿಜ್ಯ ಬೆಳೆಗಳನ್ನು ಬೆಳೆದು, ಹಳ್ಳಿಯಲ್ಲಿರುವ ಆಹಾರ ಧಾನ್ಯದ ಬಹ್ವಂಶವನ್ನು ತಾನೇ ತನ್ನ ಬಳಕೆಗೆ ಉಪಯೋಗಿಸುವ ಪರಿಸ್ಥಿತಿಯೂ ಇದೆ. ಇದು ಮಾರುಕಟ್ಟೆಗೆ ಆಹಾರಧಾನ್ಯ ಬರಲು ಇರುವ ಇನ್ನೊಂದು ತೊಡಕು.

ಇಂದಿನ ಸಂದರ್ಭದಲ್ಲಿ ಆಹಾರ ಧಾನ್ಯದ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ ಮಾರುಕಟ್ಟೆಯಲ್ಲಿ ಆಹಾರ ಧಾನ್ಯದ ಓಡಾಟ ಸುಸೂತ್ರವಾಗಿ, ಧಾರಾಳವಾಗಿ ಆಗುವಂತಿಲ್ಲ. ಪಟ್ಟಣಗಳಲ್ಲಿ ಜನಸಂಖ್ಯೆ ಹೆಚ್ಚಿದಂತೆ, ಕೈಗಾರಿಕೆಗಳು ಬೆಳೆದಂತೆ ಮಾರುಕಟ್ಟೆಗಳಲ್ಲಿ ಆಹಾರ ಧಾನ್ಯಕ್ಕೆ ಬೇಡಿಕೆ ಹೆಚ್ಚುತ್ತಿದೆ. ಆದರೆ, ಮಾರುಕಟ್ಟೆಗೆ ಬರುವ ಆಹಾರ ಧಾನ್ಯದ ಪರಿಮಾಣ ಮಾತ್ರ ಹೆಚ್ಚುತ್ತಿಲ್ಲ. ಆದುದರಿಂದ ಹೊಸ ಕೈಗಾರಿಕೆಗಳನ್ನು ಹಳ್ಳಿಗಳಲ್ಲೇ ಸ್ಥಾಪಿಸಬೇಕು. ಇದರಿಂದ ಈಗಾಗಲೇ ಬೆಳೆದಿರುವ ಶಹರುಗಳು ಮಿತಿಮೀರಿ ಬೆಳೆಯದಂತಾಗುತ್ತದೆ. ಮಾತ್ರವಲ್ಲ ಪಟ್ಟಣ ಮತ್ತು ಹಳ್ಳಿಗಳ ಪ್ರಗತಿಯ ನಡುವಿರುವ ಅಂತರವನ್ನು ಹೋಗಲಾಡಿಸಿದಂತಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆ ಮಾಡುವುದರಿಂದ ಹಲವಾರು ಪ್ರಯೋಜನಗಳಿವೆ. ರೈತರು ಪಟ್ಟಣದ ಜೀವನಕ್ಕೆ ಆಕರ್ಷಿಸಲ್ಪಟ್ಟು ಅಧಿಕ ಸಂಪಾದನೆಯ ಆಶೆಯಿಂದ, ಅಲ್ಲಿಗೆ ವಲಸೆ ಹೋಗುವುದು ನಿಲ್ಲುತ್ತದೆ. ಬಿಡುವಿನ ಕಾಲದಲ್ಲಿ, ಅವರು ಕಾರ್ಖಾನೆಗಳಲ್ಲಿ ದುಡಿದು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವ ಅವಕಾಶ ಒದಗಿಸಿದಂತಾಗುತ್ತದೆ.

ದಾಸ್ತಾನು ಮಾಡಲು ಸೌಕರ್ಯಗಳು

ಆಹಾರ ಧಾನ್ಯಗಳನ್ನು ದಾಸ್ತಾನು ಮಾಡುವುದೂ ಒಂದು ಕಠಿಣ ಸಮಸ್ಯೆ. ಸುಸಜ್ಜಿತವಾದ ಸಂಗ್ರಹಾಲಯಗಳ ಅಭಾವದಿಂದ ಹಾಗೂ ಅವ್ಯವಸ್ಥಿತವಾದ ದಾಸ್ತಾನಿನ ಕ್ರಮಗಳಿಂದ ಸುಮಾರು ೧೦ರಿಂದ ೧೫%ದಷ್ಟು ಆಹಾರಧಾನ್ಯ ನಷ್ಟಕ್ಕೆ ವ್ಯರ್ಥವಾಗುತ್ತಿದೆ. ಇಲಿ ಹೆಗ್ಗಣ, ಕ್ರಿಮಿಕೀಟಗಳು ತಿಂದು ಆಹಾರಧಾನ್ಯ ವ್ಯರ್ಥವಾಗುವುದು ಒಂದು ನಷ್ಟವಾದರೆ, ಯೋಗ್ಯ ರೀತಿಯಲ್ಲಿ ಆಹಾರಧಾನ್ಯಗಳನ್ನು ಸಂಗ್ರಹಿಸದೆ, ಅವುಗಳು ಕೆಟ್ಟುಹೋಗಿ ಆಗುತ್ತಿರುವುದು ಇನ್ನೊಂದು ಬಗೆಯ ನಷ್ಟ. ಉತ್ತಮ ಸಂಗ್ರಹಾಲಯಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದರಿಂದ, ಆಹಾರಧಾನ್ಯಗಳನ್ನು ಉತ್ಪಾದನೆಯ ಸ್ಥಳಗಳಿಂದ ಸಂಗ್ರಹಾಲಯಗಳಿಗೆ ಒಮ್ಮೆ ಸಾಗಿಸುವುದು, ಪುನಃ ಅಗತ್ಯ ಬಿದ್ದಾಗ ಇನ್ನೊಂದೆಡೆಗೆ ಒಯ್ಯುವುದೇ ಮೊದಲಾದುವುಗಳಿಂದ ಅನಾವಶ್ಯಕವಾದ ಸಾಗಣೆಯು ಹೆಚ್ಚುವಾಗುತ್ತದೆ.

ಆದುದರಿಂದ ಇಂದು ಆಧುನಿಕ ಮಾದರಿಯ ಸಂಗ್ರಹಾಲಯಗಳನ್ನು, ಉತ್ಪಾದಿಸುವ ಹಾಗೂ ಸೂರಾಟ ಮಾಡುವ ಕೇಂದ್ರಗಳಲ್ಲಿ ರಚಿಸಬೇಕಲ್ಲದೆ, ಸರಕಾರವು ಆಹಾರಧಾನ್ಯ ಸಂಗ್ರಹಣೆಯ ವಿಚಾರದಲ್ಲಿ ಕನಿಷ್ಟ ಆವಶ್ಯಕತೆಗಳನ್ನು ಸೂಚಿಸಿ, ಸಂಗ್ರಹ ಕಾರ್ಯದಲ್ಲಿ ಆಗುವ ನಷ್ಟವನ್ನು ಹೋಗಲಾಡಿಸಬೇಕು. ಸಂಗ್ರಹಗಾರರು, ಆಧುನಿಕ ಕ್ರಮಗಳನ್ನು ಅರಿತುಕೊಂಡು, ಆ ಪ್ರಕಾರ ಆಹಾರಧಾನ್ಯಗಳನ್ನು ಸಂಗ್ರಹಿಸಿ, ಅವುಗಳು ಕೊನೆ ಕಾಲದ ವರೆಗೂ ಉತ್ತಮವಾಗಿರುವಂತೆ ನೋಡಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ಆಹಾರಧಾನ್ಯಗಳನ್ನು ಎಳೆಂಟು ವರ್ಷಗಳ ವರೆಗೂ ಸಂಗ್ರಹಿಸುತ್ತಾರೆ. ನಾನು ಅಮೆರಿಕೆಯಲ್ಲಿ ಕಣ್ಣೆದುರು ವರ್ಷಗಳ ವರೆಗೆ ಸಂಗ್ರಹಿಸಿಟ್ಟ ಆಹಾರಧಾನ್ಯವನ್ನು ನೋಡಿದೆ. ಅದು ಅತಿ ಉಚ್ಚ ದರ್ಜೆಯದಾಗಿತ್ತು!

ಆಹಾರ ಧಾನ್ಯಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವಲ್ಲಿ ಆಗುತ್ತಿರುವ ಅಪವ್ಯಯವನ್ನು ನಿಲ್ಲಿಸಬೇಕಾದುದು ಇನ್ನೊಂದು ಅಗತ್ಯದ ಕೆಲಸ. ಇದಕ್ಕಾಗಿ, ಪ್ರತಿಯೊಂದು ಭಾಗದ ಆಹಾರದ ಆವಶ್ಯಕತೆಗಳನ್ನು ಅಂದಾಜು ಮಾಡಿ, ಸೂಕ್ತವಾದ ಸ್ಥಳದಲ್ಲಿ ಆಹಾರ ಧಾನ್ಯವನ್ನು ಸಂಗ್ರಹಿಸಿಟ್ಟರೆ, ಆವಶ್ಯಕತೆ ಒದಗಿದಾಗ ಅದರ ಸರಬರಾಜು ಮಾಡಬಹುದು. ಇದರಿಂದಾಗಿ ಆಗುವ ಇನ್ನೊಂದು ಪ್ರಯೋಜನವೆಂದರೆ, ಬೆಲೆಯಲ್ಲಿ ವಿಪರೀತ ಸ್ಥಿತ್ಯಂತರವನ್ನು ಹೋಗಲಾಡಿಸುವುದು. ಮಾರುಕಟ್ಟೆಯಲ್ಲಿ ಬೆಲೆ ಏರುವ ಸೂಚನೆ ಕಂಡಾಗ, ಅಲ್ಲೇ ದಾಸ್ತಾನಿರುವ ಆಹಾರ ಧಾನ್ಯದ ಬಿಡುಗಡೆ ಮಾಡುವುದರಿಂದ, ಬೆಲೆಯು ವಿಪರೀತ ಏರಲಾರದು.

ಆಹಾರ ಧಾನ್ಯಗಳ ಗುಣದಲ್ಲಿ ಉಚ್ಚ ಮಟ್ಟ ಕಾಯ್ದುಕೊಳ್ಳಬೇಕಾದುದು ಇನ್ನೊಂದು ಮುಖ್ಯ ಸಂಗತಿ. ನಮ್ಮ ದೇಶದಲ್ಲಿ ಇಂದು ಇರುವ ನೂರಾರು ಬಗೆಯ ಆಹಾರ ಧಾನ್ಯಗಳ ಅನಗತ್ಯ. ಅಕ್ಕಿಯಲ್ಲೇ ನಾವು ಹತ್ತು ಹಲವು ಬಗೆಯವುಗಳನ್ನು ನೋಡುತ್ತೇವೆ. ಒಬ್ಬೊಬ್ಬ ವ್ಯಕ್ತಿ ಒಂದೊಂದು ತರದ ಧಾನ್ಯಕ್ಕೆ ಒಗ್ಗಿಕೊ

(ಹನ್ನೆರಡನೇ ಪುಟ ನೋಡಿರಿ)

ಜೀವ ವಿಮಾ ಪಾಲಿಸಿದಾರರಿಗೆ

ನೀವು ವಿಳಾಸದ ಬದಲಾವಣೆಯನ್ನು ಸೂಚಿಸಿರುವಿರಾ?

ಪ್ರತಿ ಸಲ ನಿಮ್ಮ ವಿಳಾಸದಲ್ಲಿ
ಬದಲಾವಣೆಯುಂಟಾದಾಗ ಅದನ್ನು ಲೈಫ್
ಇನ್‌ಶೂರೆನ್ಸ್ ಕಾರ್ಪೋರೇಷನ್‌ಗೆ ಸೂಚಿಸಬೇಕಾದುದು
ಅತ್ಯಗತ್ಯ. ನಿಮ್ಮ ಈಗಿನ ವಿಳಾಸ ಲೈಫ್ ಇನ್‌ಶೂರೆನ್ಸ್ ಕಾರ್ಪೋರೇಷನ್‌ಗೆ
ತಿಳಿದಿರುತ್ತದೆಯೇ? ಇಲ್ಲದಿದ್ದಲ್ಲಿ ಇಂದೇ ಕಾರ್ಪೋರೇಷನ್‌ಗೆ ಬರೆಯಿರಿ. ಮತ್ತು ಯಾವಾಗಲೂ
ನಿಯಮಿತ ಸಮಯದಲ್ಲಿ ನಿಮ್ಮ ಪ್ರೀಮಿಯಮ್‌ಗಳನ್ನು ಪಾವತಿ ಮಾಡಲು ಮರೆಯಬೇಡಿ.

ಪಾಲಿಸಿದಾರರು ಕೊಟ್ಟಿರುವ ವಿಳಾಸಗಳಲ್ಲಿ ಅವರು ವಾಸವಾಗಿರದಿದ್ದ ಕಾರಣ 31 ಮಾರ್ಚ್ 1964ರಂದು ಕೊನೆಗೊಂಡ ವರ್ಷದಲ್ಲಿ 8,023, ಅಂದರೆ ಬಾಕಿ ಉಳಿದ ಮೆಚ್ಯೂರಿಟಿ ಕ್ಲೈಮ್‌ಗಳಲ್ಲಿ ಶೇಕಡ 19ರಷ್ಟು ಕ್ಲೈಮ್‌ಗಳನ್ನು ಸಲ್ಲಿಸಲಾಗಲಿಲ್ಲ.

ಲೈಫ್ ಇನ್‌ಶೂರೆನ್ಸ್
ಕಾರ್ಪೋರೇಷನ್
ಆಫ್ ಇಂಡಿಯಾ

ASP-LIC-AS 21

ವಿವೇಚನೆ

ಕೊಲೆಗಳನ್ನು ತಡೆಯಲು ಸಾಧ್ಯವಿದೆಯೇ?

ಅನು.: ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್, ಕಾವ್ಯತೀರ್ಥ.

ಪ್ರೆಸಿಡೆಂಟ್ ಕೆನ್ನೆಡಿಯವರ ಕೊಲೆಯಿಂದ ದುಃಖಿತರಾದ ಪ್ರಪಂಚದ ಮಿಲಿಯಾಂತರ ಜನರು, ಈ ೨೦ನೇ ಶತಮಾನದಲ್ಲಿ ಆಧುನಿಕ ವೈಜ್ಞಾನಿಕ ಸಾಧನಗಳಿಂದಲೂ, ಅಂತಾರಾಷ್ಟ್ರೀಯ ಪೋಲೀಸರ ಸಹಕಾರದಿಂದಲೂ ಅಂತಹ ದುರಂತಗಳನ್ನು ತಡೆಯಲು ಸಾಧ್ಯವಿದೆಯೇ ಎಂದು ವಿಚಾರಿಸುತ್ತಿರಬಹುದು. ಈ ವಿಷಯದಲ್ಲಿ ತಮ್ಮ ಬಾಹ್ಯ ದೃಷ್ಟಿಯಲ್ಲಿ ಎರಡು ಧ್ರುವಗಳಷ್ಟು ಅಂತರವುಳ್ಳ ಇಬ್ಬರು ಪ್ರಸಿದ್ಧ ನಾಯಕರ ಅಭಿಪ್ರಾಯಗಳು ನಮಗೆ ಸಿಕ್ಕುತ್ತವೆ. ಮಹಾತ್ಮಾ ಗಾಂಧಿ ಮತ್ತು ಎಡೋಲ್ಫ್ ಹಿಟ್ಲರ್. ಅವರು ಕೊಡುವ ಉತ್ತರವು ಸಾಧ್ಯವಿಲ್ಲವೆಂದೇ ಆಗಿರುತ್ತದೆ.

ಮಹಾತ್ಮಾ ಗಾಂಧಿಯವರು, ವಸ್ತುತಃ ಈ ಕೊಲೆಯ ಭೀತಿಗೆ ಒಂದು ತಾತ್ವಿಕ ಧೋರಣೆಯನ್ನು ಪಹಿಸಿಕೊಂಡಿದ್ದರು. ೧೯೪೮ನೇ ಜನವರಿಯಲ್ಲಿ ಒಂದು ಬಾಂಬಿನಿಂದ ಅವರನ್ನು ಕೊಲ್ಲಲು ಮಾಡಿದ ಪ್ರಥಮ ಪ್ರಯತ್ನವು ವಿಫಲವಾದಾಗ, ಅವರು 'ಕೊಲ್ಲುವವನು ತನ್ನನ್ನು ಗಾಂಧಿಯನ್ನಾಗಿ ಕೊಲ್ಲಲಾರನು. ಆದರೆ ಒಬ್ಬ ಪಾಪ ಸ್ವರೂಪಿಯನ್ನಾಗಿ ಕೊಂದಾನು' ಎಂದು ಹೇಳಿದರು. ಹೀಗೆಯೇ ಅವರು 'ಗಾಂಧಿಯು ಸಾಯಬೇಕೆಂದು ದೇವರ್ನ ಅಪೇಕ್ಷೆಯಿದ್ದರೆ ಯಾರೊಬ್ಬನೂ ಅದನು ತಡೆಯಲಾರನು' ಎಂಬೊಂದು ಹುಚ್ಚು ರೀತಿಯಲ್ಲಿ ತನ್ನನ್ನು ಹಿಂಬಾಲಿಸುವವರ ಮನೋಭೀಷ್ಟಕ್ಕೆ ಆಹ್ವಾನವಿತ್ತರು.

ಕೇವಲ ಅದೃಷ್ಟ

ಆಶ್ಚರ್ಯವೆನಿಸುವಂತೆ ಎಡೋಲ್ಫ್ ಹಿಟ್ಲರನು ಕೂಡ ಒಬ್ಬ ಸಿಶ್ಚಿತ ಕೊಲೆಗಾರನನ್ನು ತಡೆಯಲು ಯಾವ ಮನುಷ್ಯ ಯತ್ನವೂ ಸಮರ್ಥವಾಗಲಾರದೆಂದು ನಿರಾಶೆಗೊಂಡಿದ್ದನು. ಸೇಕಡ ತೊಂಭತ್ತು ಚಾರಿತ್ರಿಕ ಕೊಲೆಗಳೂ ಸಫಲವೇ ಆಗುವವೆಂದು ಅವನು ತಿಳಿದಿದ್ದನ. ಅವನು ನಾಜೀ ಜರ್ಮನಿಯ ಶಿರೋವರ್ತಿಯಾಗಿದ್ದುದರಿಂದ ಅವನನ್ನು ರಕ್ಷಿಸಲು ಭಟಾಂಗರರೂ ಅತ್ಯಂತ ಕುಶಲರೂ ಆದ ಜರ್ಮನ್ ಗುಪ್ತ ಪೋಲೀಸರ ಸಹಾಯವಿತ್ತು. ಆದರೂ ಮೂರು ಸಂದರ್ಭಗಳಲ್ಲಿ ಅವನು ಒಬ್ಬ ಭ್ರಾಂತನಿಂದಾಗುವ ಕೊಲೆಯನ್ನು ತಪ್ಪಿಸಿಕೊಂಡುದು ಗುಪ್ತ ಪೋಲೀಸರ ಕೌಶಲ್ಯದಿಂದ ಆದುದಲ್ಲ. ಕೇವಲ ಅದೃಷ್ಟವಶದಿಂದ.

ಮೊದಲನೇ ಸಂದರ್ಭದಲ್ಲಿ ಅವನು ಪ್ರಯತ್ನಿಸಿದ ಕೊಲೆಯ ಸ್ಥಳವನ್ನು ಹತ್ತು ನಿಮಿಷ ಮೊದಲೇ ಬಿಟ್ಟು ಹೋಗಿದ್ದನು. ಎರಡನೇ ಸಂದರ್ಭದಲ್ಲಿ ಕೊಲೆಗಾರನು ಟಿಕೇಟಿಲ್ಲದ ಪ್ರಯಾಣಕ್ಕಾಗಿ ಹಿಡಿಯಲ್ಪಟ್ಟನು. ಅವನ ಪಂಚೆಯ ಪತ್ರಗಳನ್ನು ಪೋಲೀಸರು ಶೋಧಿಸಿದಾಗ ಆ ಕೊಲೆಯ ಯತ್ನವು ವಿಫಲವಾಯಿತ. ಮೂರನೆಯ ಸಂದರ್ಭದಲ್ಲಿ ಹಿಟ್ಲರನಿದ್ದ ರೂಮಿನೊಳಗೆ ಟೈಮ್ ಬಾಂಬು ಸ್ಫೋಟನಗೊಂಡಿತು. ಆದರೆ ಗೋಡೆಗಳು ಮರದವುಗಳಾಗಿದ್ದುದರಿಂದ ಆ ಸ್ಫೋಟನದ ಆಘಾತವು ಆ ಕಟ್ಟಡವನ್ನು ಬಡಿದು ಅದನ್ನು ಪುಡಿ ಮಾಡಿತು. ಆ ಕಟ್ಟಡವು ಕಾಂಕ್ರೀಟಿನದ್ದಾಗಿದ್ದರೆ ತತ್‌ಕ್ಷಣ ಅದರೊಳಗಿರುವವರೆಲ್ಲರ ಮರಣವೇ ಫಲಿತಾಂಶವಾಗುತ್ತಿತ್ತು.

'ಆದರ್ಶರೂಪ ಕಾರಣಗಳಿಂದ ತಾನು ಮಾಡುವ ಕಾರ್ಯ ಸಾಧನೆಯಲ್ಲಿ ತನ್ನ ಜೀವವನ್ನೇ ಅಪಾಯಕ್ಕೊಡ್ಡುವ ಒಬ್ಬ ಕೊಲೆಗಾರನೊಡನೆ ಯಾವಾತನೂ ಯಶಸ್ವಿಯಾಗಿ ಹೋರಾಡಲಾರನು' ಎಂಬ ನನ್ನ ನಂಬಿಕೆಯನ್ನು ಒಬ್ಬ ಕೊಲೆಗಾರನ ಒಪ್ಪಿಗೆಯ ಮಾತುಗಳು ಧೃಡಪಡಿಸುತ್ತವೆಯೆಂದು ಹಿಟ್ಲರನೇ ಹೇಳುತ್ತಾನೆ. ಅವನ ಅಭಿಪ್ರಾಯದಂತೆ ಕೊಲೆಯನ್ನು ತಪ್ಪಿಸಲಿಕ್ಕಿರುವ ಒಂದೇ ಒಂದು ಉಪಾಯವು, ಅನಿಯತ ಕ್ರಮದಿಂದ ಜೀವಿಸುವುದು-ನಡೆಯುವುದು, ವಾಹನದಿಂದ ಹೋಗುವುದು ಮತ್ತು ಅನಿಯತ ಕಾಲದಲ್ಲಿ ಮತ್ತು ಆಕಸ್ಮಿಕವಾಗಿ ಪ್ರಯಾಣಿಸುವುದು ಮಾತ್ರವೇ ಆಗಿರುತ್ತದೆ. ತನ್ನ ಚಲನವಲನಗಳನ್ನು ಕಟ್ಟುನಿಟ್ಟಾಗಿ ಗುಪ್ತವಾಗಿರಿಸಬೇಕು, ವಿಶೇಷತಃ ಉಚ್ಚ ಅಧಿಕಾರಿಗಳು ಪ್ರತ್ನಿಸುವಾಗ ಹಾಗೆ ಮಾಡಬೇಕು ಎಂದು ಹಿಟ್ಲರನು ತನ್ನ ವಾಹಕ ಜನರಿಗೆ ಆಜ್ಞೆ ಕೊಡುತ್ತಿದ್ದನು.

ಯಾಂತ್ರಿಕ ಸಾಧನಗಳ ಕುರಿತು ಹೇಳುವುದಾದರೆ ಅತಿ ಪ್ರಧಾನ ಪುರುಷರ ವಾಹನಕ್ಕೆ ಹಿಂದುಗಡೆಯಲ್ಲಿ ಸಂಶಯ ಬಂದಾಗ ಹಿಂಬಾಲಿಸುವವರ ಕಣ್ಣು ಕುಕ್ಕುವುದಕ್ಕೆ ಪ್ರಯೋಗಿಸ ಬಹುದಾದ ಸರ್ಚ್‌ಲೈಟು ತಪ್ಪದೆ ಇರಬೇಕು, ಎಂದು ಹಿಟ್ಲರನು ಅಭಿಪ್ರಾಯಪಟ್ಟಿದ್ದನು.

ನಿಃಸಂಕೋಚ

ಹಿಟ್ಲರನಿಗೆ ತನ್ನ ರಾಜಕೀಯ ವಿರೋಧಿಗಳನ್ನು ಕೊಲ್ಲಲು ಯಾವ ಮೋಸಗಾರಿಕೆ ತಂತ್ರಗಳನ್ನು ಪ್ರಯೋಗಿಸಲೂ ಸಂಕೋಚವಿರಲಿಲ್ಲ. ಜರ್ಮನ್ ಪೋಲೀಸ್ ಮುಖಂಡನು ತನ್ನ ಒಂದು ಬರವಣಿಗೆಯಲ್ಲಿ ಮಾರ್ಶಲ್ ಸ್ಟೇಲಿನನನ್ನು ಕೊಲ್ಲುವುದಕ್ಕೆ ಬೇಕಾದ ಯೋಜನೆಗಳನ್ನು ಪೂರ್ಣಗೊಳಿಸ ಬೇಕೆಂದು ತನಗೊಮ್ಮೆ ಆದೇಶ ಬಂದಿತ್ತೆಂದು ಸ್ಪಷ್ಟಪಡಿಸುತ್ತಾನೆ. ಕೊಲೆಗಾರರು ರಷ್ಯದ ಜರ್ಮನ್ ರಾಯಭಾರಿಯಾದ ವೋನ್ ರಿಬ್ಬನ್ ಟ್ರೋಪ್ ಮತ್ತು ಸ್ವತಃ ಗುಪ್ತ ಪೋಲೀಸ್ ಮುಖಂಡ ಇವರಿಬ್ಬರು. ರಿವಾಲ್ವರುಗಳು ಮುಂದಕ್ಕೆ ಎದ್ದು ಕಾಣದ ಫೌಂಟನ್‌ಪೆನ್ನುಗಳ ಆಕಾರದಲ್ಲಿ ಮಾಡತಕ್ಕವುಗಳಾಗಿದ್ದುವು. ಆದರೆ ಒಬ್ಬ ಕೇವಲ ರಾಯಭಾರಿಯನ್ನು ಕಾಣಲು ಒಂದು ಕೂಟಕ್ಕೆ ಸ್ಟೇಲಿನನನ್ನು ಬರುವಂತೆ ಮಾಡುವುದು ಜರ್ಮನರಿಗೆ ಕಷ್ಟವೆನಿಸಿದ್ದರಿಂದ ಈ ಯೋಜನೆಯನ್ನು ಮುಂದಕ್ಕೆ ಇಡಲಾಯಿತು. ಇದರ ಬದಲು ಸ್ಟೇಲೀನಿನ ಗೇರೇಜಿನಲ್ಲಿರುವ ಒಬ್ಬ ಯಾಂತ್ರಿಕನಿಗೆ ಸೋವಿಯಟ್ ಡಿಕ್ಟೇಟರನ ವಾಹನದಲ್ಲಿ ಒಂದು ಪ್ಲಾಸ್ಟಿಕ್ ಬಾಂಬನ್ನು ತಾಗಿಸಿಡಲು ಲಂಚ ಕೊಡಬೇಕಾಗಿ ಬಂತು. ಮತ್ತು ಜರ್ಮನ್ ಗುಪ್ತ ಸರ್ವೀಸಿನ ಇಬ್ಬರು ರಷ್ಯದ ಏಜೆಂಟರನ್ನು ಈ ಕೆಲಸಕ್ಕೆ ಪೆರಾಚ್ಯೂಟನಿಂದ ರಷ್ಯದೊಳಗೆ ಇಳಿಸಲಾಯಿತು. ಆದರೆ ಸೋವಿಯಟ್ ಗುಪ್ತವಾರ್ತಾನ್ವೇಷಕ ದಳವು ಕೊನೆಯ ಸುತ್ತಿನಲ್ಲಿ ಜಯ ಪಡೆಯಿತು. ಏಕೆಂದರೆ ವೋನ್ ಶೆಲ್ಲೆನ್‌ಬರ್ಗ್ ಎಂಬವನೇ ಹೇಳುವಂತೆ ಪೆರಾಚ್ಯೂಟಿನಿಂದ ಇಳಿಸಲ್ಪಟ್ಟ ಏಜೆಂಟರು ಸೋವಿಯಟ್ ಗೂಢಚಾರರೇ ಆದರು.

ಎರಡನೇ ಜಾಗತಿಕ ಯುದ್ಧದ ಕೊನೆಯ ತಿಂಗಳುಗಳಲ್ಲಿ ಜರ್ಮನ್ ಗೂಢಚಾರರು ಜನರಲ್ ಐಸನ್‌ಹೋವರರನ್ನು ಕೊಲ್ಲಬೇಕೆಂದಿದ್ದರು. ಆದರೆ ಅವರನ್ನು ಕೊಲ್ಲುವುದಕ್ಕೆ ಗೊತ್ತು ಮಾಡಿದ ಸೇನಾ ನಿವೇಶ ಸ್ಥಳವನ್ನು ಅವರು ಸೇರುವ ಮೊದಲೇ ಜನರಲ್ ಐಸನ್‌ಹೋವರರು ಸಮೀಪದ ಹಳ್ಳಿಗೆ ಇಬ್ಬರು ವೃದ್ಧರನ್ನು ಮುಟ್ಟಿಸುವ ಸಲುವಾಗಿ ನಿಂತುಬಿಟ್ಟರು. ಈ ಬೇರೆ ದಾರಿಯ ಪ್ರಯಾಣವು ಅವರ ಪ್ರಾಣವನ್ನು ಉಳಿಸಿತು. ಆದರೂ ಅವರ ಸಿಬ್ಬಂದಿಗಳ ಕಾರು ಆ ಸೇನಾ ನಿವೇಶ ಸ್ಥಳಕ್ಕೆ ಹೋಗಿ ಸಂಪೂರ್ಣವಾಗಿ ನಾಶವಾಯಿತು.

ಕೆಲವು ಸಮಯಗಳಲ್ಲಿ ಆ ವಧ್ಯ ಪುರುಷರಿಗೆ ಆ ದುರಂತದ ಮುನ್ನೆಚ್ಚರಿಕೆಯು ಸಿಕ್ಕುತ್ತದೆ. ಪ್ರೆಸಿಡೆಂಟ್ ಲಿಂಕನ್ನರಿಗೆ ತನ್ನ ಮರಣದ ಕೆಲವು ದಿನಗಳ ಮೊದಲು ಸ್ವಪ್ನದಲ್ಲಿ ಆ ದುರಂತದ ಪೂರ್ವ ಸೂಚನೆಯು ಸಿಕ್ಕಿತ್ತು. ಅವರು ಶ್ರೀಮತಿ ಲಿಂಕನ್ನರಿಗೆ ಕೊಲೆಗೊಂಡ ಪ್ರೆಸಿಡೆಂಟನ ಕುರಿತು ಶೋಕಿಸುವ ಜನಸಮುದಾಯವನ್ನು ತಾನು ಸ್ವಪ್ನದಲ್ಲಿ ಕಂಡೆನೆಂದು ಹೇಳಿದ್ದರು.

ನಾವು ಪ್ರೆಸಿಡೆಂಟ್ ಕೆನ್ನೆಡಿಯವರ ಕೊಲೆಗಾರನ ವಿಷಯದಲ್ಲಿ ಕಂಡಂತೆ, ಒಮ್ಮೆ ಕೆಲಸವನ್ನು ಮಾಡಿದ ಮೇಲೆ, ಒಳಸಂಚುಗಾರರಿಗೆ ಕೊಲೆಗಾರನ ಜೀವವು ನಿಷ್ಪ್ರಯೋಜನವಾಗುವುದು. ಆದರೆ ಆ ರಹಸ್ಯವನ್ನು ಬಯಲಿಗೆ ತರಲಪೇಕ್ಷಿಸುವ ಕಾನೂನು ಮತ್ತು ವ್ಯವಸ್ಥೆಯ ಅಧಿಕಾರಿಗಳಿಗೆ ಅದು ಅತ್ಯಂತ ಅಮೂಲ್ಯವಾಗಿರುವುದು. ೧೯೫೧ರಲ್ಲಿ ಪಾಕಿಸ್ತಾನದ ಮುಖ್ಯಮಂತ್ರಿಯಾದ ಮಿಸ್ಟರ್ ಲಿಯಾಕತ್ ಅಲೀಖಾನರ ಕೊಲೆಯ ವಿಷಯದಲ್ಲಿ ನಡೆದಂತೆಯೇ ಅಪರಾಧಿಯ ಸಹಾಯಕರು ಸಾಮಾನ್ಯವಾಗಿ ಅವನನ್ನು ಕೊಲ್ಲುವರು.

ಹಿಟ್ಲರನು ತನ್ನ ಒಂದು ಪುಸ್ತಕದಲ್ಲಿ ಯಾವಾದರೂ ಒಳಸಂಚುಗಾರರ ಪತ್ತೆ ಹಚ್ಚುವುದನ್ನು ತಡೆಯುವುದಕ್ಕಾಗಿ ರಷ್ಯನರು ಕೊಲೆಗಾರನನ್ನು ತಪ್ಪದೆ ಕೊಲ್ಲುತ್ತಿದ್ದರೆಂದು ಹೇಳುತ್ತಾನೆ. ಒಂದು ಸಂದರ್ಭದಲ್ಲಿ ವಧ್ಯ ಪುರುಷನನ್ನು ಕೊಂದ ಮೇಲೆ ಒಂದು ಸಣ್ಣ ಯಂತ್ರೋಪಕರಣದ ಚಲನೆಯನ್ನು ಮಾಡಬೇಕೆಂದು ರಷ್ಯದ ಕೊಲೆಗಾರನಿಗೆ ಆದೇಶ ಕೊಡಲಾಗಿತ್ತು. ಈ ಚಾಲನೆಯು, ಅಪರಾಧಿಯು

(ಹನ್ನೊಂದನೇ ಪುಟ ನೋಡಿರಿ)

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ.

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.

ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳುದೃಷ್ಟಿಯ ನಿವಾರಣೆ— ಶಸ್ತ್ರಕರ್ಮ ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು= ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು



ಪ್ರಜಾಸತ್ತೆಯ ಪರಮಶತ್ರು

ಮಹತ್ವಾಕಾಂಕ್ಷಿ ಚೈನಾ

ಬರೆದವರು ಶ್ರೀ ಶಿವಶಂಕರ.

ಶಾಂತಿಪ್ರಿಯ ಹಾಗೂ ಸಹನಾಮಯಿ ಭಾರತದ ಭೂಭಾಗವನ್ನು ಚೈನಾ ಆಕ್ರಮಿಸಿ ಕೊಂಡಿರುವದು ಮಾತ್ರವಲ್ಲದೆ, ನೆರೆಕರೆಯ ರಾಷ್ಟ್ರಗಳನ್ನು ಪ್ರವಿಷ್ಟವದಂತೆ ಕ್ರಮಶಃ ನುಂಗಿಕೊಳ್ಳಲು ನಾಲಗೆ ಚಾಚುತಿದ್ದು, ಎದುರಿಸುವ ರಾಷ್ಟ್ರಗಳನ್ನು ಭಯಭೀತಗೊಳಿಸಲು ಅಣುಗುಂಡಿನ ಪ್ರಯೋಗ ನಡೆಸುತ್ತಿದೆ. ಚೈನಾ ಅಣುಗುಂಡಿನ ಪ್ರಯೋಗ ನಡೆಸಿದೊಡನೆ ಭಾರತಮಾತೆಯ ಮಕ್ಕಳು ಅಣ್ವಸ್ತ್ರ ಸಜ್ಜಿತರಾಗಿರಬೇಕೆಂದು ಆಳುವ ಸರಕಾರವನ್ನು ಎಚ್ಚರಿಸಿದರು. ಆದರೆ ಅಹಿಂಸಾಪ್ರಿಯ, ಆರ್ಥಿಕ ದುಸ್ಥಿತಿಗೊಳಗಾಗಿರುವ ಹಾಗೂ ಹಿಂದುಳಿದಿರುವ ಸರಕಾರ ಅದನ್ನು ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ಇಂದಿನ ಸ್ವದೇಶದ ಪರಿಸ್ಥಿತಿ ಅಥವಾ ಪರರಾಷ್ಟ್ರ ತಕ್ಕಂತೆ ತಣ್ಣನೆಯ ಹೋರಾಟಗಳನ್ನು ನಡೆಸುತ್ತ ಸಮಯ ಕಳೆಕಳೆಯುತ್ತಿದೆ. ಚೀನಾ ಹಾಗೂ ಪಾಕಿಸ್ತಾನ ಉತ್ಪಾದದ ದೃಷ್ಟಿಯಿಂದ ಅಣುಗುಂಡನ್ನು ತಯಾರಿಸದೇ ಮಡೆಯನ್ನುತ್ತರವನ್ನು ಹತೋಟಿಗಿಟ್ಟುಕೊಳ್ಳಲು ಇದೆಂತು ಸಾಧ್ಯವೆಂಬುದನ್ನು ‹ನವಯುಗ› ಬಿದಾಗಲೇ ತನ್ನ ಅಭಿಪ್ರಾಯವನ್ನು ಸೂಚಿಸಿರುತ್ತದೆ. ಸರಕಾರ ಇತ್ತ ದುರ್ದೈವವಶಾತ್ ಗಮನ ಕೊಟ್ಟಿರುವದಿಲ್ಲ ಈ ಮಧ್ಯೆ ಇದೆಲ್ಲವನ್ನು ನೋಡುವ ಜನತೆ ತಮ್ಮೊಳಗನೇ ಜಗಳ ಡಿಕೊಳ್ಳಲು ಆರಂಭಿಸಿದ್ದಾರೆ ನಾಲಿಗಾನ್ನು ಒಂದಷ್ಟು ಉದ್ದಕ್ಕೆ ಬಿಟ್ಟು ಬಿಟ್ಟಿದ್ದಾರೆ. ಅವರನ್ನು ಭಾಷಾ ಒಡದಿಂದ ತಪ್ಪಿಸಲು ರಕ್ಷಣಾ ಮಂತ್ರಿ ಶ್ರೀ ಚವ್ಹಾಣರು ಗಡಿಗಳಲ್ಲಿ ಪುನಃ ಗಡಿಬಿಡಿ ಜಾಸ್ತಿಯಾಗಿದೆಂದು ಹೇಳಲಾರಂಭಿಸಿರುವರು ಆದೂ ಭಾಷಾಂಧರ ಕಣ್ಣನ್ನು ತೆರೆಯಿಸಿರುವದಿಲ್ಲ ಚೈನಾ ಆಕ್ರಮಣ ಮುನ್ನಡೆಸಿದರೆ ನಡೆಸಲಿ ಅವರು ಹಿಂದೀವಾಲಗಳನ್ನು ತಾನೇ ಹೊಡೆಯುತಾರೆ. ಇಷ್ಟಕ್ಕೂ ದ್ರಾವಿಡ ನಾಡಿಗೆ ಅಥವಾ ದಕ್ಷಿಣ ಪ್ರದೇಶಕ್ಕೆ ಬರುತ್ತಾರೇನು? ನಮ್ಮ ತಲೆಯ ಮೇಲೆ ಕುಳಿತು ಹಿಂದೀವಾಲಗಳು ಪ್ರಯತ್ನಿಸುತ್ತಿರುವದನ್ನು ಯಾರು ತಪ್ಪಿಸುತ್ತಾರೆ! ಇಂಥ ವಿಧ್ಯ ಪ್ರಚಾರವನ್ನು ಕಮ್ಯೂನಿಸ್ಟರ ಎಡೆಬಿಡದೆ ನಡೆಸುತ್ತಿದ್ದಾರೆ. ಚೈನೀ ಸೇನೆ ನುಗ್ಗಿ ಸೇನೆಯವಂತೆ! ಚೈನೀ ಕಮ್ಯೂನಿಸ್ಟ್‌ರಾಷ್ಟ್ರ ರಷ್ಯನ್ ಭಾಷೆಯನ್ನು ಒದಿಗೆ ಕಲಿಸಿ ಅಂಗ್ಲೇಯ ಬಾಷೆಯನ್ನು ಒಕೆಗ ತಂದಿರುವದರಿಂದ ಇಲ್ಲೂ ಹಾಗೆ ಮಾಡುತ್ತಾರಂತ! ಆದರೆ ಹಿಂದಿ ಎಂದಂದೂ ಬರದು, ಇಂಗ್ಲೀಷ್ ಎಂದೆಂದೂ ಇರುವದು! ಪ್ರಚಾರ ಪ್ರವಾಹಕ್ಕೆ ಅಡೆತಡೆಯೇ ಇಲ್ಲ. ಅದೆಂತಂತಹವನ್ನೂ ಕೊಚ್ಚಿಕೊಂಡು ಹೋಗಿ ಬಿಡುತ್ತಿದೆ. ಕಮ್ಯೂನಿಸ್ಟರು ತನಗೆ ವೈರಿ ಕ್ರಮಾಂಕ ಒಂದೆಂದು ಹೇಳಿದ್ದ ಚಕ್ರವರ್ತಿ ರಾಜಗೋಪಾಲಚಾರಿಯವರೂ ಇಂದ ಆಂಗ್ಲ ಭಾಷಾ ಪ್ರವಾಹದಲ್ಲಿ ದಾಸಾನುದಾಸರಾಗಿ ಅವರೊಂದಿಗೆ ಸೇರಿ ಬಿಟ್ಟಿದ್ದಾರೆ. ಕಮ್ಯೂನಿಸ್ಟರು ನಡೆಸುವ ಆತ್ಯಾಚಾರ ಆದಾಂತಹವರ ಎದೆಯನ್ನು ನಡುಗಿಸುವಂತಹದಿದೆ. ಅವರು ಸ್ವತಂತ್ರ ಪಾರ್ಟಿ, ಮುಸ್ಲಿಂ ಲೀಗು ಮತ್ತು ದ್ರಾವಿಡ ಮುನ್ನೇಟ್ರ ಕಳಗಮಿನವರ ಹಿಂದಗಡೆ ನಿಂತುಕೊಂಡು ಹಿಂದಿ ವಿಂದ್ಯೆಯಿಂದ ಕೇಳಿಗಳಿಯದಂತೆ ದೊಡ್ಡ ಅಣೆಕಟನ್ನು ಹಾಕಲು ಭಾರತೀಯರ ಕವಗಳನ್ನು ಒಟ್ಟುಹಾಕುತ್ತಿದ್ದಾರೆ. ಇದೆಂದು ಇನ್ನೊಬ್ಬ ಅಗಸ್ತ್ಯ ಮಹಾಮುನಿಗಳು ಬಂದು ಈ ತಮಿಳು ನಾಡನ್ನು ಉದ್ಧರಿಸುತ್ತಾರೋ? ಅಲ್ಲಿಯ ವರೆಗೆ ಈ ಆತ್ಯಾಚಾರಗಳ ನಗ್ನ ನೃತ್ಯ ಮುಂದುವರೆಯಬಹುದು. ಕಮ್ಯೂನಿಸ್ಟರ ಈ ಕೇಳಿಕೆಯಿಂದ ಚೈನಾ ಕಮ್ಯೂನಿಸ್ಟರು ಉತ್ಸಾಹಿತರಾಗಿದ್ದಾರೆ ಅವರು ಕ್ರಮಶಃ ಇಲ್ಲಿ ಆಕ್ರಮಣವನ್ನು ಮುಂದುವರಿಸುತ್ತಿದ್ದಾರೆ. ಅಲ್ಲಿ, ಚೈನಾದಲ್ಲಿ, ಇನ್ನೊಂದು ಅಣುಗುಂಡಿನ ಪ್ರಯೋಗ ನಡೆಸಲು ಸಿದ್ಧತೆ ನಡೆಸುತ್ತಿದ್ದಾರೆ. ಇತ್ತ ಜಲಮಾರ್ಗದಿಂದ ಒಂದು ದಕ್ಷಿಣದಿಂದಲೂ ಒಮ್ಮೆಲೆ ಆಕ್ರಮಣ ನಡೆಸಲು ಅನಕೂಲವಾಗುವಂತಾಗಲೆಂದು ಶ್ರೀಲಂಕೆಯನ್ನೇ ಮಡಿಲಲ್ಲಿ ಹಾಕಿಕೊಳ್ಳಲು ಹೊಂಚು ಹಾಕುತ್ತಿದ್ದಾರಲ್ಲದೆ, ಭಾರತದ ಅಧೀನಕ್ಕೊಳಪಟ್ಟಿರುವ ಚಿಕ್ಕ ಪುಟ್ಟ ದ್ವೀಪಗಳನ್ನು ಕಬಳಿಸಲು ಪ್ರಯತ್ನಮಾಡುತ್ತಿದ್ದಾರೆ. ಈ ದುರತ್ವಾಕಾಂಕ್ಷೆ ಒಮ್ಮೆಲೆ ಇವ್ವಕ್ಕಿದ್ದಂತೆ ಬಂದಿರುವದಿಲ್ಲ. ಅದು ರಕ್ತದಲ್ಲಿಯೇ ಇದೆ. ಆದರಲ್ಲಿ ಈಗ ಮಾದರಿ ಸೇವಿಸಿರುವ ಮಂಗನ ಕೈಯಲ್ಲಿ ಕೊಳ್ಳಿ ಕೊಟ್ಟಂತಾಗಿದೆ ಅವರಿಗೆ ಕಮ್ಯೂನಿಸಮಿನ ಗಾಳಿ ಸೋಂಕಿದಲ್ಲಿ, ಅವರ ಮಹತ್ವಾಕಾಂಕ್ಷೆ ಮೇರೆದಪ್ಪುಗುವಂತೆ ಇದೆ ಒಂದು ಕಡೆ. ಅದನ್ನು ವೀ ಕೈ-ಎಸ್ ಬರೆದಿರುವರು.

ಮುದುಕ ವಾಪ್ರೋ, ಮಾಪ್ರೋನ ಮಗ, ತನ್ನ ಮನೆಯಲ್ಲೇ ಮೃತ್ಯು ಶಯ್ಯೆಯಲ್ಲಿ ಮಲಗಿಕೊಂಡಿದ್ದ. ಅವನೊಬ್ಬ ಬೆಸ್ತರವ. ಅವನಿಗೆ ಉಸಿರು ಮೇಲೆ ಮೇಲೆ ಬರುತ್ತಿತ್ತು ಕೊನೆಯ ಕ್ಷಣ ಬಂದಿದ್ದೆಂಬುದರ ಅರಿವು ಅವನಿಗಾಗಿತ್ತು. ತಾನಿನ್ನು ತಡ ಮಾಡಲು ಸಾಧ್ಯವಿಲ್ಲವೆಂಬುದು ಅವನಿಗೆ ಮನದಟ್ಟಾಯಿತು. ಒಡನೆ ಅವನು ತನ್ನ ಮಗನನ್ನು ಹತ್ತಿರಕ್ಕೆ ಕರೆದನು. ಅವನ ಮಗನ ಹೆಸರು ಕಾಪ್ರೋ—ಲಿಂಗ್. ತನ್ನ ಮನಸ್ಸಿನಲ್ಲಿರುವದನ್ನು ಇನ್ನು ಮಗನಿಗೆ ತಿಳಿಸದಿದ್ದಲ್ಲಿ ನಂತರ ತಿಳಿಸದೆನೇ ಹೋಗಬೇಕಾದೀತೆಂದು ಅವನು ಮಗನನ್ನು ಕರೆದನು ಪಿತೃ ವಾಕ್ಯವನ್ನ ಶಿರಸಾ ವಹಿಸಿ ಅವನ ಮಗನು ಸಮೀಪಕ್ಕೆ ಬಂದನು. «ಮಗನೇ, ಇನ್ನು ಕೆಲವೇ ಕ್ಷಣಗಳಲ್ಲಿ ನಾನು ಪರಮಾತ್ಮನಲ್ಲಿ ಲೀನನಾಗುತ್ತೇನೆ. ನಾನು ಹೋದ ಮೇಲೆ ನೀನು ಮೂರು ವಿಷಯಗಳನ್ನು ಸದಾ ಸ್ಮರಣೆಯಲ್ಲಿಟ್ಟುಕೊಳ್ಳಬೇಕು. ಇದು ನನ್ನ ಆಜ್ಞೆ. ಇವ ಮೊದಲನೆಯದಾಗಿ ನೀನು ಚಕ್ರವರ್ತಿಗೆ ವಿಧೇಯನಾಗಿರ ಬೇಕು. ಎರಡನೆಯದಾಗಿ ಉದ್ಯೋಗವಾಗಿರುವ ಮೀನು ಹಿಡಿಯುವ ಕೆಲಸ, ನೀನೆಂದಿಗೂ ಬಲೆಯನ್ನು ಬಿಡ ಬಾರದು, ಕೊನೆಯದಾಗಿ ವಂಶ ಪಾರಂಪರ್ಯವಾಗಿ ಬಂದಿರುವ ಪ್ರಾಚೀನ ಚೈನಾ ಬಟ್ಟಲನ್ನು ಬಹಳ ಜಾಗ್ರತೆಯಿಂದ ಕಾಪಾಡು. ನಿನ್ನ ಪೂರ್ವಜರಲ್ಲೊಬ್ಬನು ಚೈನಾ ಸಮುದ್ರದಲ್ಲಿ ಸಿಕ್ಕಿದ ಅತ್ಯುತ್ತಮ ಮೀನನ್ನು ಚಕ್ರವರ್ತಿಗೆ ಅರ್ಪಿಸಿದಾಗ ಅವರು ಆನಂದದಿಂದ ಈ ತಟ್ಟೆಯನ್ನು ಕೊಟ್ಟರು. ಅದು ನಿನಗೆ ಉತ್ತಮ ಅದೃಷ್ಟವನ್ನು ತರುತ್ತದೆ. ದೇವರು ನಿನಗೆ ಒಳ್ಳೆಯದನ್ನೇ ಮಾಡಲಿ.' ಮುದುಕನು ಕೊನೆಯುಸಿರೆಳೆದನು, ಮತ್ತೆ ಅವನು ಏಳಲೇ ಇಲ್ಲ.

ಅಗಲಿದ ಅಪ್ಪನ ಆಜ್ಞೆಯಂತೆ ಮಗನು ನಡೆದು ಕೊಂಡು ಬರುತಿದ್ದನು. ಅವನು ಮೀನು ಹಿಡಿಯುವ ಕೆಲಸವನ್ನು ಬಿಡಲಿಲ್ಲ. ಕೆಲವು ದಿನಗಳು ಸಂದುವು. ಒಂದು ದಿನ ಅದೇನಾಯ್ತೋ! ಅವನು ಆ ದೆಂತು ಬಲೆ ಬೀಸಿದರೂ ಮೀನುಗಳೆಲ್ಲಾ ಯುಕ್ತಿಯಿಂದ ತಪ್ಪಿಸಿಕೊಂಡುವು. ಹಿಂದಕ್ಕೆ ಬರುವಾಗ ಅವನು ಬರಿಗೈಯಲ್ಲಿ ಬರಬೇಕಾಯ್ತು, ಬರಿಗೈಯಲ್ಲಿ ಬಂದ ಕಾಪ್ರೋ—ಲಿಂಗನು ಗುಡಿಸಲಲ್ಲಿ ಕುಳಿತು ಚಿಂತಿಸ ತೊಡಗಿದನು. ಆಗ ಅವನಿಗೆ ತನ್ನ ತಂದೆಯ ಮಾತು ಜ್ಞಾಪಕಕ್ಕೆ ಬಂತು. ಅವನು ಆ ಒಂದು ಸೂತ್ರವನ್ನು ಬಿಟ್ಟುಕೊಟ್ಟಿದ್ದನು. ಅದನ್ನು ಮಗನಿಗೆ

(ಹತ್ತನೇ ಪುಟ ನೋಡಿರಿ)

ತಾ.೧೮-೨-೧೯೬೫ರಿಂದ ಖಾಯಂ ಠೇವಣಾತಿ ಮತ್ತು ಸೇವಿಂಗ್ಸ್ ಖಾತೆಗಳ ಮೇಲಣ ಬಡ್ಡಿ ದರಗಳನ್ನು ಸೇಕಡಾ ೧ರಷ್ಟು ಏರಿಸಲಾಗಿದೆಯೆಂದು ತಿಳಿಸಲು ನಾವು ಸಂತೋಷಪಡುತ್ತೇವೆ.

ಈಗ ಚಾಲ್ತಿಯಲ್ಲಿರುವ ಬಡ್ಡಿ ದರಗಳು

ಕೆಳಗೆ ಕಾಣಿಸಿದ ಅವಧಿಗೆ ಅಥವಾ ಹೆಚ್ಚಿಗೆ	ಕೆಳಗೆ ಕಾಣಿಸಿದ ಅವಧಿಗಿಂತ ಕಡಿಮೆ	ಬಡ್ಡಿ ದರ
91 ದಿವಸಗಳು	6 ತಿಂಗಳು	5 1/8 %
6 ತಿಂಗಳು	1 ವರ್ಷ	5 5/8 %
1 ವರ್ಷ	2 ವರ್ಷ	6 1/8 %
2 ವರ್ಷ	3 ವರ್ಷ	6 3/8 %
3 ವರ್ಷ	5 ವರ್ಷ	6 5/8 %
5 ವರ್ಷ	7 ವರ್ಷ	7 1/8 %
7 ವರ್ಷ	9 ವರ್ಷ	7 3/8 %
9 ವರ್ಷ	ಮತ್ತು ಹೆಚ್ಚಿನ ಅವಧಿಗೆ	7 5/8 %

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟಿನ ಮೇಲೆ ಸೇಕಡಾ 4 ಬಡ್ಡಿ ಕೊಡಲಾಗುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು : **ಮಣಿಪಾಲ,** ಮೈಸೂರು ರಾಜ್ಯ)

ಶಾಖೆಗಳು ೨೦೦ಕ್ಕೂ ಮಿಕ್ಕಿ. ಚಲಾವಣಾ ನಿಧಿ: ರೂ. ೭೦ ಕೋಟಿಗೂ ಮಿಕ್ಕಿದೆ.

......ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ ......

ಭಾರ

ಉಕ್ಕಿನ ಗಿಡು

೧

ಸಂಚಾರಕ್ಕೆ ನೆಲವೇ ದಾರಿಯಾಗಿದ್ದ ಕಾಲವೊಂದಿತ್ತು. ಪ್ರಾಚೀನ ಇತಿಹಾಸ ವನ್ನು ನಾವು ಅವಲೋಕಿಸಿದರೆ, ಭಾರತಕ್ಕೆ ಅನೇಕಾನೇಕ ವಿದೇಶೀಯರು ಪಾದಾರ್ಪಣ ಮಾಡಿದ್ದು ನೆಲಮಾರ್ಗವಾಗಿಯೇ ಎಂಬುದು ಮನವರಿಕೆಯಾಗುವುದು. ಮುಂದೆ ಜಲಸಂಚಾರವೂ ಆರಂಭವಾಯಿತು. ಯಂತ್ರ ಶಕ್ತಿಯಿಂದ ಸುದೀರ್ಘ ಜಲಯಾತ್ರೆಗೂ ಅನುಕೂಲವೊದಗಿತು. ಈ ಶತಮಾನದ ಆರಂಭ ಕಾಲದ ವರೆಗೂ ಜಲಯಾನವೇ ವಿದೇಶ ಸಂಚಾರದ ಮುಖ್ಯ ಸಾಧನವೆನಿಸಿತ್ತು.

ಆಕಾಶದಲ್ಲಿ ಹಕ್ಕಿಗಳು ರೆಕ್ಕೆ ಬಡಿದು ಗಾಳಿಯಲ್ಲಿ ಆಧರಿಸಿಕೊಂಡು ಹಾರುವುದನ್ನು ಕಂಡ ಮಾನವನ ಮನಸ್ಸು ತಾನೂ ದೈಹಿಕವಾಗಿ ಹಾರಲಾರನೇ ಎಂದು ಆತುರ ಪಡುತಿತ್ತು. ಹಿಂದಿನ ಪುರಾಣ ಕಾಲದಲ್ಲಿ ವಿಮಾನಗಳ ಕಥೆಯು ಇದನ್ನು ಮತ್ತೆ ಕೆಣಕುತಿತ್ತು. ಅಂತೂ ಕೊನೆಗೆ ಮಾನವನ ಬುದ್ಧಿ ಶಕ್ತಿಯು ಪ್ರತೀಕವೆಂಬಂತೆ ಆತನ ಆತುರವು ಕಾರ್ಯರೂಪಕ್ಕೆ ಬಂದಿತು. ಆಧುನಿಕ ವಿಮಾನಗಳು ನಿರ್ಮಾಣಗೊಂಡವು. ಅಧಿಕ ವೇಗವಾಗಿ ಹಾರುವ ಈ ಉಕ್ಕಿನ ಗಿಡುಗ ವಿಮಾನಗಳಿಗೆ ಪರ್ವತ—ಸಮುದ್ರಗಳೆಲ್ಲವೂ ದಾರಿ ಬಿಟ್ಟುಕೊಟ್ಟವು.

ಇಂದು ನಾವು ಪ್ರತಿನಿತ್ಯವೆಂಬಂತೆ ಆಕಾಶದಲ್ಲಿ ಲೀಲಾಜಾಲವಾಗಿ ಹಾರುತ್ತಿರುವ ವಿಮಾನವನ್ನು ಕಾಣುತ್ತೇವೆ. ಆಟಿಕೆಯ ವಿಮಾನದಲ್ಲಿ ಮಕ್ಕಳು ತೋರಿಸುವ ಆಸಕ್ತಿಯಿಂದಲೇ ವಿಮಾನದ ಜನಪ್ರಿಯತೆಯನ್ನು ನಾವು ಅರಿಯಬಹುದು. ಇಂದು ಪ್ರಪಂಚದ ಕೆಲವು ದೇಶಗಳು ಅತಿ ಶೀಘ್ರ ವೇಗದ ಉಪಗ್ರಹಾದಿ ಹಾರುವ ಯಂತ್ರಗಳನ್ನು ನಿರ್ಮಿಸಿವೆ; ಚಂದ್ರ-ಶುಕ್ರ ಮೊದಲಾದ ದೂರಾತಿದೂರ ಗ್ರಹಗಳಿಗೂ ಇವುಗಳ ಸಹಾಯದಿಂದ ಸಂಚಾರ ಮಾಡಬಹುದೆಂದು ವಿಶ್ವಾಸ ತಾಳಿವೆ. ಆದರೆ, ಹೆಚ್ಚಿನ ದೇಶಗಳು ವಿಮಾನ ಕೈಗಾರಿಕೆಯಲ್ಲಿನ್ನೂ ಕೈಶವದಲ್ಲೇ ಉಳಿದಿವೆಯೆನ್ನಬೇಕು.

ಸ್ವಾತಂತ್ರ್ಯಕ್ಕೆ ಮೊದಲು ಭಾರತದಲ್ಲಿ ಯಾವ ಕೈಗಾರಿಕೆಗಳಿಗೂ ಪ್ರೋತ್ಸಾಹವಿರಲಿಲ್ಲವೆಂದು ಎಲ್ಲರಿಗೂ ಗೊತ್ತು. ಗುಂಡುಸೂಜಿ - ಬ್ಲೇಡು ಮೊದಲಾದ ಚಿಕ್ಕ ಪುಟ್ಟ ವಸ್ತು ಒಡವೆಗಳೂ ವಿದೇಶಗಳಿಂದ ನಮ್ಮಲ್ಲಿಗೆ ಆಯಾತವಾಗಬೇಕಿತ್ತೆಂದ ಮೇಲೆ ಹಡಗ, ರೈಲ್ವೆ, ವಿಮಾನ ಮೊದಲಾದ ಬೃಹತ್ ಯಂತ್ರಗಳ ತಯಾರಿಕ ನಸಿನ ಗಂಟೇ ಸರಿ. ಆದರೆ, ಅಂದಿನ ಕನಸು ನನಸಾಗಿದೆಯೆಂದು, ಈ ದಿನ, ನಮ್ಮಲ್ಲೇ ಇವುಗಳಿಗೆ ಬೇಕಾದ ಯಂತ್ರ ಸಾಮಗ್ರಿಗಳು ತಯಾರಾಗುತ್ತಿವೆ—ಇದು ನಮಗೊಂದು ಅಭಿಮಾನ.

ಭಾರತದಲ್ಲಿ ಉಳಿದ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿರುವಂತೆ ವಿಮಾನ ಕೈಗಾರಿಕೆಯೂ ವೃದ್ಧಿ ಹೊಂದಿದೆ; ಹೊಂದುತ್ತಿದೆ. ವಿಮಾನಗಳಿಗೆ ಸಂಬಂಧಿಸಿದ ಉದ್ಯೋಗ ನಮ್ಮ ದೇಶದಲ್ಲಿ ಮೊತ್ತಮೊದಲಿಗೆ ಪಾದಾರ್ಪಣ ಮಾಡಿದ್ದು ಹಿಂದಿನ ಯುದ್ಧ ಕಾಲದಲ್ಲಿ. ಆ ಸಮಯದಲ್ಲಿ ವಿಮಾನಗಳನ್ನು ರಿಪೇರಿ ಮಾಡುವ ಉದ್ದೇಶದಿಂದ ಬೆಂಗಳೂರಿನಲ್ಲಿ ಸುಮಾರು ೪ ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಹಿಂದುಸ್ಥಾನ್ ಏರ್‌ಕ್ರಾಫ್ಟ್ ಎಂಬ ಸಂಸ್ಥೆ ಸ್ಥಾಪಿತವಾಯಿತು. ಅವರ ಬಹುಭಾಗ ಒಂದ ನಾಳವನ್ನು ಸರಕಾರವೇ ಹಾಕಿತ್ತು. ಸ್ವಾತಂತ್ರ್ಯ ... ಭಾರತೀಯ ವಿಮಾನಗಳ ಪ್ರಯೋಜನಕ್ಕಾಗಿ ವ್ಯಾಂಪೈರ್ ಜಾತಿಯ ವಿಮಾನಗಳನ್ನು ಇದು ತಯಾರಿಸ ತೊಡಗಿತು. ಶಿಕ್ಷಣಕ್ಕೆ ಒದಗುವ ಎಚ್ ಟಿ ೨ ಎಂಬ ಸಣ್ಣ ವಿಮಾನಗಳನ್ನು ಸ್ವಂತವಾಗಿ ಇದು ಕಟ್ಟಿತು. ಬೇರೆ ಬೇರೆ ಬಗೆಯ ಉತ್ತಮ ವಿಮಾನಗಳನ್ನು ಸ್ವಂತಕ್ಕಾಗಿ ನಿರ್ಮಿಸುವಷ್ಟು ಚೈತನ್ಯ ಈಗ ಈ ಸಂಸ್ಥೆಗೆ ಒದಗಿ ಬಂದಿದೆ. ಇತ್ತೀಚೆಗೆ ಕಾನಪುರದಲ್ಲಿ ಸೈನ್ಯ ಶಾಖೆಗೆ ಸಂಬಂಧಿಸಿದಂತೆ ವಿಮಾನೋದ್ಯೋಗದ ಕಾರ್ಖಾನೆಯೊಂದು ಸ್ಥಾಪಿತವಾಗಿ ಸೇನೆಯ ಆವಶ್ಯಕತೆಯನ್ನದು ಪೂರಯಿಸ ತೊಡಗಿದೆ.

ಹಿಂದಿನ ಕಾಲದಲ್ಲಿ ದೇಶ ರಕ್ಷಣೆಯ ಕರ್ತವ್ಯಕ್ಕೆ ಕೋಟೆ-ದುರ್ಗಗಳು ನೆರವಾಗುತ್ತಿದ್ದುವು. ಆದರೆ, ವಿಮಾನ ನಿರ್ಮಾಣದ ಪ್ರಗತಿಯು ಈ ಕೋಟೆ ಕೊತ್ತಳಗಳನ್ನು ನಿರುಪಯುಕ್ತ ಮಾಡಿದೆ. ಇಂದು ನಾವೂ ರಕ್ಷಣೆಗಾಗಿ ವಿಮಾನಗಳನ್ನೇ ಬಳಸಿಕೊಳ್ಳುವುದು ಅಗತ್ಯವಿದೆ. ಪ್ರಪಂಚವು ದ್ರುತಗತಿಯಿಂದ ಧಾವಿಸುತ್ತಿರುವಾಗ, ನಾವು ಮಾತ್ರ ಇರುವೆ ನಡಿಗೆಯಲ್ಲಿರುವುದು ಸಾಧ್ಯವಿಲ್ಲ. ಶತ್ರುಗಳು ನಮ್ಮ ಮೇಲೆ ವಕ್ರ ದೃಷ್ಟಿಯನ್ನಿಟ್ಟುಕೊಂಡಿರುವ ಈ ಕಾಲದಲ್ಲಿ ನಾವಿನ್ನೂ ಕೋಟೆ—ಕೊತ್ತಳಗಳಿಗೆ ಶರಣು ಹೋಗುವುದು ಹಾಸ್ಯಾಸ್ಪದ. ಮೊನ್ನೆ ಮೊನ್ನೆಯ ವರೆಗೆ ನಮ್ಮ ರಕ್ಷಣೆಗಾಗಿ ನಮ್ಮದೇ ಆದ ವಿಮಾನದ ಮಾದರಿ ತಯಾರಾಗಲು ಅವಕಾಶವಿರಲಿಲ್ಲ. ಈಗ ಹೊಸ ಜೆಟ್ ... ಎಂಬ ಒಂದು ವಿಮಾನ ಮಾದರಿಯ ನಿರ್ಮಾಣದ ಸರ್ವ ಸಾಮರ್ಥ್ಯವನ್ನು ಭಾರತವು ಕೊಂಡುಕೊಂಡಿದೆ. ಇದಕ್ಕೆ ಸಂಬಂಧಿಸಿದ ಎಲ್ಲ ಭಾಗಗಳನ್ನೂ ನಾವು ಭಾರತದಲ್ಲಿಯೇ ಉತ್ತರೋತ್ತರ ನಿರ್ಮಾಣ ಮಾಡಿಕೊಂಡು ಪೂರ್ತಿ ನಮ್ಮದೇ ಆದ ಒಂದು ವಿಮಾನವನ್ನು ರಚಿಸಿಕೊಳ್ಳುವುದು ಸಾಧ್ಯವಾಗಿದೆ. ಹೊರಗಿನ ದೇಶಗಳವರನ್ನು ಕಾಯದೆ ನಮಗೆ ಬೇಕಾದಂತೆ ನಾವು ವಿಮಾನಗಳನ್ನು ಮಾಡಿಕೊಳ್ಳಬಹುದು. ... ಅನುಭವದ ಮೇಲೆ ಹೊಸ ಹೊಸ ಬಗೆಯ ವಿಮಾನದ ರೂಪಗಳನ್ನು ನಮ್ಮಲ್ಲಿಯೇ ಸೃಷ್ಟಿ ಮಾಡಿಕೊಳ್ಳಬಹುದು. ಸೂಪರ್ ಸಾನಿಕ್‌ಗಳು, ಹೆಲಿಕಾಪ್ಟರ್‌ಗಳು ಮುಂ



ಶಕ್ತಿ ಸಾಮರ್ಥ್ಯ

೨



ತಾವು ದು ಪ್ರಗಳನ್ನೂ ಮಾಡಿಕೊಳ್ಳಬಹುದು.

ಸಾರಿಗೆ ಸಂದರ್ಭದಲ್ಲಿ ವಿಮಾನಗಳನ್ನು ಮೀರುವುದು ನೆಲ ಜಲ ವಾಹನಗಳಿಗೆ ಸಾಧ್ಯವಾಗಿಲ್ಲ. ಮುಂದುವರಿದ ದೇಶದಲ್ಲಿ ವಿಮಾನ ಪ್ರಯಾಣವೂ ಅತಿಶಯವಾಗಿ ಬೆಳೆದಿದೆ. ನಮ್ಮ ದೇಶದ ಒಂದು ಸಿಳ್ಳಾರಿ ವಿಮಾನವನ್ನು ತರಬೇತಿಗಾಗಿ ಬೆಂಗಳೂರಿನಲ್ಲಿ ತಯಾರಿಸಲಾಗಿದೆ. ಸಾಮಾನ್ಯ ವಿಮಾನಗಳು ಬೆಂಗಳೂರಿನಲ್ಲಿಯೂ ವಿಶೇಷ ಬಗೆಯ ಜೆಟ್ ವಿಮಾನಗಳು ಕಾನಪುರದಲ್ಲಿಯೂ ಇಂದು ತಯಾರಾಗುವುದು ಸಾಧ್ಯವೆನಿಸಿದೆ.

ಸಾಮಾನ್ಯ ಪ್ರಯಾಣಿಕರ ಸಂಚಾರಕ್ಕಾಗಿ ಈ ಕೈಗಾರಿಕೆಯನ್ನು ಹೆಚ್ಚಿಸಲು ಇನ್ನೂ ಸ್ವಲ್ಪ ಸಮಯ ಬೇಕು. ಹಣವುಳ್ಳವರಿಗೆ ಅದರ ಪ್ರಯೋಜನ ಸಾಕಷ್ಟು ಸಿಗುತ್ತಿದೆ. ಪ್ರಯಾಣದ ವೆಚ್ಚವು ಕಡಿಮೆಯಾದರೆ, ಸಂಚಾರವೂ ಬೆಳೆಯುವುದು. ಪಾಕಿಸ್ತಾನದಲ್ಲಿ ವಿಮಾನ ಪ್ರಯಾಣ ತುಂಬ ಅಗ್ಗವಾಗಿದೆ; ಅಲ್ಲಿ ಅದು ಲಾಭಕರವಾದ ಉದ್ಯೋಗವಾಗಿದೆ. ದೇಶದೊಳಗಡೆಯೂ ಹೊರಗಡೆಯೂ ಇಂದು ಭಾರತೀಯ ವಿಮಾನಗಳು ಸಂಚಾರದ ಸಾಧನಗಳಾಗಿವೆ. ಭಾರತದಲ್ಲಿ ಬೋಯಿಂಗ್ ಎಂಬ ಅತಿವೇಗ ಶಾಲಿಯಾದ ವಿಮಾನಗಳೂ ಇವೆ. ವಿಮಾನ ಪ್ರಯಾಣಕ್ಕೆ ಒದಗುವಂತೆ ಅವನ್ನು ನಡೆಸುವವರು ಎಂಜಿನಿಯರರು, ನಿಲ್ದಾಣದ ಅಧಿಕಾರಿಗಳು, ಕುಶಲ ಕರ್ಮಿಗಳು, ಅಗ್ನಿ ಶಮನ ಮಾಡುವವರು — ಮೊದಲಾದವರು ತರಬೇತಿ ಪಡೆಯಲು ಅಲಹಾಬಾದಿನಲ್ಲಿ ಶಿಕ್ಷಣ ಶಾಲೆಯೊಂದಿದೆ. ಶಾಂತಿ ಕಾಲದ ಜತೆಗೆ ದೇಶದ ಗಡಿ ರಕ್ಷಣೆಗೂ ವಿಮಾನ ಸಂಚಾರ ದಳದ ಅಭಿವೃದ್ಧಿ ಅನಿವಾರ್ಯವಾಗುತ್ತದೆ.

ಶತ್ರು ಚೀನೀಯರು ನಮ್ಮ ಗಡಿಯಲ್ಲಿ ಹೊಂಚು ಹಾಕುತಿದ್ದಾರೆ. ಹಿಂದೊಮ್ಮೆ ಆವರಿಸಿದ ವಿಸ್ತಾರ ಭಾಗವನ್ನು ನಾವು ಎಂದಿಗೂ ಮರೆಯಲಾರೆವು. ಇದಕ್ಕಾಗಿ ಹಿಮಾಲಯದ ಗುಡ್ಡಗಾಡುಗಳ ಪ್ರದೇಶದಲ್ಲಿ ಹೋರಾಡಲು ಅನುಕೂಲವಾದ ಮಿಗ್ ವಿಮಾನ ತಯಾರಿಯ ಕಾರಖಾನೆಯನ್ನು ಕಟ್ಟುವ ಬಗ್ಗೆ ಪ್ರಯತ್ನಗಳು ನಡೆಯುತ್ತಿವೆ. ವಿಮಾನ ಚಾಲಕರಿಗೆ ಸೂಕ್ತ ತರಬೇತಿ ನೀಡುವುದೂ ಅತ್ಯಗತ್ಯ. ಯುದ್ಧದ ಪೂರ್ವಭಾವಿಯಾಗಿ, ಯುದ್ಧದ ವಿಕಟ ಸನ್ನಿವೇಶದಲ್ಲಿ ಅವನ್ನು ಸುರಕ್ಷಿತವಾಗಿ ನಡೆಸುವುದೂ ಒಂದು ಅಪೂರ್ವ ಕಲೆ. ಇದರಲ್ಲಿ ಸಾಕಷ್ಟು ತರಬೇತಿಯು ನಮ್ಮ ವೈಮಾನಿಕ ದಳದವರಿಗೆ ಅತ್ಯಗತ್ಯ. ಈ ಬಗೆಯೂ ಸೂಕ್ತ ಕ್ರಮಗಳನ್ನು ನಾವು ಕೈಗೊಳ್ಳುತ್ತಿದ್ದೇವೆ. ನಮ್ಮ ಸಂರಕ್ಷಣಾ ಮಂತ್ರಿ ಚವನರು ಹೇಳುವಂತೆ ನಮ್ಮ ವಿಮಾನ ಬಲವು ಶತ್ರುವಿನ ಆಕ್ರಮಣವನ್ನು ಎದುರಿಸಲು ಸಶಕ್ತವಿದೆ. ಈ ಮಾತು ನಮ್ಮ ದೇಶ ರಕ್ಷಣೆಯ ದೃಢ ನಿಶ್ಚಯದ ಪ್ರತೀಕವಾಗಿದೆ.

ಇಲ್ಲಿನ ಚಿತ್ರಗಳಲ್ಲಿ ವಿಮಾನ ನಡೆಸುವ ಕೆಲವೊಂದು ವಿಧಾನಗಳನ್ನು ನಾವು ನೋಡಬಹುದು.

ಚಿತ್ರ: ೧

ಏರ್ ಅಥವಾ ಮೇಲ ಹಾರಾಟ ನಿರ್ಮಾಣದ ಒಂದು ಸನ್ನಿವೇಶ.

ಚಿತ್ರ: ೨

ಮೂಲ ಹಾರಾಟ ರಚನೆಯು ನೋಟವಿದು. ಸಂಖ್ಯೆ ೨ ನಾಯಕನಿಗಿಂತ ಬಲಕ್ಕೆ ತುಸು ದೂರದಲ್ಲಿದೆ ಸಂಖ್ಯೆ ೩ ಅವನಿಗೆ ಎಡದಲ್ಲಿದೆ.

ಚಿತ್ರ: ೩

"ಇಕೆಲನ್ ಸ್ಟಾರ್ ಬರ್ಡ್"ನ ರಚನೆ. ಸಂಖ್ಯೆ ೨ ಮತ್ತು ೩ ಬಹಳ ಎತ್ತರದಲ್ಲಿದ್ದು ನಾಯಕ ವಿಮಾನವು ಕೆಮರಾಕ್ಕೆ ನಿಕಟವಿದೆ. ಭೂಮಿಗೆ ಇಳಿಯುವ ವೇಳೆ ಈ ಬಗೆಯ ರಚನೆ ಮಾಡುತ್ತಾರೆ.

ಚಿತ್ರ: ೪

ಹಿಂದಿನ ವಿಮಾನದ ಎಚ್ಚರಗೇಡಿತನದಿಂದ ತಪ್ಪಿಸಿಕೊಳ್ಳಲು ವಿಮಾನಗಳು ಈ ರೀತಿ ಕೆಳಗೆ ಇಳಿಯುವುದುಂಟು. ಸಂಖ್ಯೆ ೨ ಮತ್ತು ೩ ಈ ರೀತಿ ಕೆಳಗೆ ಇಳಿದಿವೆ. "ನಾಯಕನನ್ನು ಅನುಸರಿಸು" ಎನ್ನುವ ಸ್ಕ್ವಾಡ್ರನ್‌ಗಳ ತರಬೇತಿಯಲ್ಲೂ ಈ ಬಗೆಯ ರಚನೆಯನ್ನು ಮಾಡುತ್ತಾರೆ.

— —

ಅಮೃತ ಬಿಂದು

ಜೀವನದ ಗುರಿ, ಕುಳಿತು ಚಿಂತಿಸುವದರಲ್ಲಿಲ್ಲ; ನಡೆದು ದುಡಿಯುವುದರಲ್ಲಿದೆ. ಚಿಂತಿಸಿದ್ದು ನಿರ್ಜೀವ, ನಿರಾಕಾರ; ದುಡಿದದ್ದು ಸಜೀವ, ಸಾಕಾರ.

೦ ೦ ೦

ಒಳ್ಳೆಯ ಬುದ್ಧಿವಾದ ಹೇಳಿಕೊಡುವವನದು ಒಂದು ಕೈಯ ನೆರವಿನಂತೆ. ಬುದ್ಧಿ ಹೇಳಿದ್ದನ್ನು ಮಾಡಿ ತೋರಿಸುವವನದು ಎರಡು ಕೈಗಳ ಸಹಾಯದಂತೆ.

೦ ೦ ೦

ಕಷ್ಟ, ನಿಷ್ಠುರ, ಬಡತನಗಳ ಮಧ್ಯೆ ಶೀಲ ಬದುಕಿ ಬಾಳೀತು, ಆದರೆ, ಸುಖ ಐಶ್ವರ್ಯ, ಅಧಿಕಾರಗಳೆಡೆ ಅದು ಬಾಳಲಾರದು.

೦ ೦ ೦

ಶಾಶ್ವತವೆಂಬುದು ಹೇಗೆ ಜೀವಿತವಿರುವದರ ಆಳತೆಕೋಲೋ ಅದರಂತೆ ಪ್ರೇಮವು ಸಾರ್ಥಕ ಜೀವನದ ಆಧಾರ.

೦ ೦ ೦

೪

ಮಹತ್ವಾಕಾಂಕ್ಷಿ ಚೈನಾ

(ಏಳನೇ ಪುಟದಿಂದ)

ಕೊಡಕ್ಕೆ ಕಣ್ಣಿನಲ್ಲಿ ಎಣ್ಣೆ ಹಾಕಿಕೊಂಡು ಕಾಯುತ್ತಿರಬೇಕೆಂದು ಕಟ್ಟಾಜ್ಞೆ ಇತ್ತಿದ್ದನು. ಅದನ್ನು ಅಡಗಿಸಿಟ್ಟಿದ್ದ ಸ್ಥಳದಿಂದ ಅವನು ಹೊರತೆಗೆದನು. ಅದನ್ನು ಪುನಃ ಪವಿತ್ರ ಸ್ಥಳದಲ್ಲಿಡುವ ಮುಂಚೆ ತೊಳೆದು ಇಟ್ಟಲ್ಲಿ ಬಹಳ ಚೆನ್ನಾಗಿರಬಹುದೆಂಬ ಯೋಚನೆ ಅವನಿಗೆ ಬಂತು. ಅದನ್ನು ತೊಟ್ಟಿಯಲ್ಲಿ ಮುಳುಗಿಸಿದ್ದೇ ತಡ, ಅವನಿಗೆನೇ ಆಶ್ಚರ್ಯವಾಯಿತು. ಅಬ್ಬಾ! ಅದೆಂತಹ ಕಲಾನೈಪುಣ್ಯತೆ! ಅದರಲ್ಲಿ ಮರಗಳ, ಮುಗಿಲುಗಳ, ಹಕ್ಕಿಗಳ ಅಲ್ಲದೆ ಮೀನುಗಳ ಚಿತ್ರವನ್ನು ಬಿಡಿಸಿದ್ದರು. ಅದ್ಯಾರು ಬಿಡಿಸಿದ್ದು, ಆ ಕಲಾಕಾರನಾರೆಂಬುದು ಕಾವ್ರೋ—ಲಿಂಗನಿಗೆ ಗೊತ್ತಾಗದಿದ್ದರೂ, ಅದನ್ನು ಚಕ್ರವರ್ತಿ ಹಾವನ ಸಮಯದಲ್ಲಿದ್ದ ಕಿವ್ರೋ—ಷಿಯು ಬಿಡಿಸಿದ್ದು.

ಕಿವ್ರೋ-ಷಿಯ ಕಲಾನೈಪುಣ್ಯತೆಯನ್ನು ಕಂಡು ಕಾವ್ರೋ-ಲಿಂಗನು ಕೆಲಕ್ಷಣ ಮೈಮರೆತಿದ್ದನು. ಅಷ್ಟರಲ್ಲಿ ಅವನನ್ನು ಅದಕ್ಕಿಂತಲೂ ಆಶ್ಚರ್ಯಜನಕ ಘಟನೆಯು ಇನ್ನೊಂದು ಲೋಕಕ್ಕೆ ಕರೆದೊಯ್ಯಿತು. ಅವನು ತಟ್ಟೆಯನ್ನು ನೀರಿನಲ್ಲಿ ಮುಳುಗಿಸಿದಾಕ್ಷಣ ತಟ್ಟೆಯಲ್ಲಿದ್ದ ಚಿತ್ರರೂಪದಲ್ಲಿದ್ದ ಮೀನು ನೈಜ ಮೀನಿನಂತೆ ಈಜಾಡತೊಡಗಿತು. ಅವನು ಆ ಚಿಕ್ಕ ಮೀನನ್ನು ಕೈಯಲ್ಲಿ ಹಿಡಿದನು ಮತ್ತು ತಟ್ಟೆಯನ್ನಿಟ್ಟನು. ಹೀಗೆ ಕೆಲಕ್ಷಣಕಾಲ ಆಡಿದ ಮೇಲೆ ಅವನು ತಟ್ಟೆಯನ್ನು ನೀರಿನಿಂದ ಮೇಲಕ್ಕೆತ್ತಿದ್ದನು. ಪುಟದಾಡುತ್ತಿದ್ದ ಪುಟ್ಟ ಮೀನು ನೀರಿನಲ್ಲಿಲ್ಲ. ಹಿಂದಿನಂತೆ ತಟ್ಟೆಯ ಮೇಲೆ ಮೀನಿನ ಚಿತ್ರಮಾತ್ರವಿತ್ತು. ಕಾವ್ರೋ—ಲಿಂಗನಿಗೆ ಪರಮಾಶ್ಚರ್ಯವಾಯಿತು.

ತನ್ನ ಕಣ್ಣುಗಳಲ್ಲಿ ಏನಾದರೂ ದೋಷವಿರಬಹುದೆಂಬ ಸಂದೇಹದಿಂದ ಕಾವ್ರೋ-ಲಿಂಗನು ಪುನಃ ತಟ್ಟೆಯನ್ನು ನೀರಿನಲ್ಲಿಟ್ಟನು. ಮೀನು ಈಜಾಡತೊಡಗಿತು. ತಟ್ಟೆಯನ್ನು ಮೇಲಕ್ಕೆತ್ತಿದ್ದರೆ ಅಲ್ಲಿ ಮೀನಿನ ಚಿತ್ರಮಾತ್ರ ಇರುತಿತ್ತು. ಕಾವ್ರೋ-ಲಿಂಗನು ಅನೇಕ ಬಾರಿ ಆ ರೀತಿ ಮಾಡಿದನು. ಪ್ರತಿಸಲವೂ ಅದೇ ದೃಶ್ಯ ಕಂಡುಬಂತು. ಅವನು ಆಶ್ಚರ್ಯಚಕಿತನಾದನು. ಇದರಲ್ಲೇನೋ ರಹಸ್ಯವಡಗಿರಲೇಬೇಕು. ಇಲ್ಲದಿದ್ದಲ್ಲಿ . . .

ಇದರಿಂದ ಅದೇನು ಮಾಡುವುದೆಂದು ಕಾವ್ರೋ-ಲಿಂಗನಿಗೆ ತಿಳಿಯದಾಯಿತು. ಅವನು ತಟ್ಟೆಯನ್ನು ತಿರುಗಿಸಿ ತಿರುಗಿಸಿ, ಅತ್ತಲಾಗಿಂದ ಇತ್ತಲಾಗ, ಇತ್ತಲಾಗಿನಿಂದ ಅತ್ತಲಾಗ, ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ನೋಡಿದನು. ಅದೇನಾದರೂ ಚಿನ್ಹೆ ಅಥವಾ ಗುರುತನ್ನು ಕಂಡುಹಿಡಿಯಲಿಕ್ಕಾಗಿ. ಆದರೆ ಅವನಿಗೆ ಅದೇನೂ ಗೊತ್ತಾಗಲಿಲ್ಲ. ಆದರೂ ಅವನು ಅದನ್ನು ತಿರುಗಿಸಿ ತಿರುಗಿಸಿ ನೋಡುವುದನ್ನು ನಿಲ್ಲಿಸಲಿಲ್ಲ. ಆ ರೀತಿ ಅವನು ಆಶ್ಚರ್ಯಚಕಿತನಾಗಿ ಮೈಮರೆತಿದ್ದಾಗ ತಟ್ಟೆಯು ತಟ್ಟನೆ ಕೆಳಗೆ ಬಿತ್ತು. ಅವನಿಗೆ ಆಕಾಶವೇ ಕೆಳಗೆ ಬಿದ್ದಂತಾಯಿತು. ದುಃಖ ಅವನನ್ನು ಆಲಿಂಗಿಸಿಕೊಂಡಿತು. ಅಯ್ಯೋ! ಇದಂತಹ ಅಶುಭ, ಅಪಶಕುನವೆಂದವನು ಅಳಲಾರಂಭಿಸಿದನು.

ಕಣ್ಣುಗಳಲ್ಲಿ ನೀರು ಸರಾಗವಾಗಿ ಇಳಿಯಲಾರಂಭವಾಯಿತು, ಹೃದಯ ನಡುಗುತ್ತಿತ್ತು. ಅವನು ಹೆದರಿ ಹೋಗಿದ್ದನು. ಸರಿ. ಆದದ್ದು ಆಗಿ ಹೋಯಿತು. ಅವನು ತುಂಡುಗಳೆಲ್ಲವನ್ನೂ ಹೆಕ್ಕಿದನು. ಅದನ್ನು ಪುನಃ ಜೋಡಿಸಲು ಸಾಧ್ಯವಾಗುತ್ತದೆಯೇ, ನೋಡೋಣವೆಂದು ಅವನು ಅವುಗಳನ್ನು ಜೋಡಿಸಲಾರಂಭಿಸಿದನು. ಅವನಿಗದು ಅತೀ ಕಷ್ಟದ ಕೆಲಸವಾದರೂ ಉತ್ಸಾಹ ಬರುವಂತಹದ್ದಾಗಿಯೂ ಇತ್ತು. ಆದುದರಿಂದ ಅವುಗಳನ್ನು ತೆಗೆದು ಅವನು ಬಿಸಾಡಲಿಲ್ಲ. ಹೀಗೆ ಜೋಡಿಸುತ್ತಿರುವಾಗ ಒಂದು ತುಂಡಿನ ಮೇಲೆ ಇದ್ದ ಮರದ ಚಿತ್ರ ಅವನ ಗಮನವನ್ನು ಸೆಳೆಯಿತು. ಅಬ್ಬ! ಅದೆಂತಹ ವೃಕ್ಷ! ಅದುವರೆಗೂ ಅವನು ಅಂತಹ ಮರವನ್ನು ನೋಡಿದ್ದೇ ಇಲ್ಲ. ಅವನು ಚಿತ್ರವನ್ನು ಪ್ರಶಂಸಿಸುತ್ತಿದ್ದಾಗ ಒಂದು ವಿಚಿತ್ರ ಯೋಚನೆ ಅವನಿಗೆ ಹೊಳೆಯಿತು. ತಟ್ಟೆಯಿಂದ ಹೊರಬಂದು ಮೀನು ಈಜಾಡಬಲ್ಲುದು; ಅದೇ ರೀತಿ ಈ ಮರವು ಬೆಳೆದೀತೇ? ಅನ್ವೇಷಕನ ಮನಸ್ಸಿಗೆ ನೆಮ್ಮದಿಯೆಂಬುದು ಇರುತ್ತದೆಯೇ? ಯೋಚನೆ ಹೊಳೆದೊಡನೆ ಅವನು ಆ ತಟ್ಟೆಯ ತುಂಡನ್ನು ತನ್ನ ಗುಡಿಸಲಿನ ಹಿಂದುಗಡೆ ಕೊಂಡೊಯ್ದು ನೆಟ್ಟು ನೀರು ಹಾಕಿದನು, ಹೊಸ ಗಿಡವನ್ನು ನೆಟ್ಟು ನೀರು ಸುರಿವಂತೆ. ಉಳಿದ ತುಂಡುಗಳನ್ನು ಶೇಖರಿಸಿ, ಒಂದು ಪೆಟ್ಟಿಗೆಯಲ್ಲಿ ಗಂಟು ಕಟ್ಟಿ ಮುಂಚೆ ತಟ್ಟೆ ಇದ್ದ ಗುಪ್ತ ಸ್ಥಳದಲ್ಲೇ ಗಂಟನ್ನಿಟ್ಟನು. ಇತ್ತ ಉತ್ಸುಕತೆಯಿಂದ ನೆಟ್ಟ ಚೂರು ಅದೇನಾಗುತ್ತದೋ ಎಂದು ಪರೀಕ್ಷಿಸಲಾರಂಭಿಸಿದನು.

ಹೌದು. ಅಣುಗುಂಡಿಗಾಗಿ ಕಮ್ಯೂನಿಸ್ಟ್ ಚೈನೀಯರು ಬಹಳ ಕಷ್ಟಪಟ್ಟಿರುವುದೇನೋ ನಿಜ. ಆದರೂ ಕಾವ್ರೋ ಲಿಂಗನಿಗೆ ಆ ತಟ್ಟೆ ಸಿಕ್ಕಿದಂತೆ ಮಾವ್ರೋನಿಗೆ ಅಣುಗುಂಡು ಸಿಕ್ಕಿರಬಹುದು. ಕೆಲವೊಮ್ಮೆ ನಿಶ್ಚಿತ ಫಲಿತಾಂಶ ಸಿಗುವ ಧೈರ್ಯವಿಲ್ಲದಿದ್ದರೂ ಪ್ರಯೋಗವನ್ನು ಮುನ್ನಡೆಸಿದಾಗ, ಬೇರೆ ವಸ್ತು ಅಪರೀಕ್ಷಿತವಾಗಿ ಲಭಿಸುವಂತೆ ಬೇರೆ ರೀತಿಯ ಗುಂಡಿನ ತಯಾರಿಗೆ ಪ್ರಯೋಗ ನಡೆಯುತ್ತಿದ್ದಾಗ ಅಣುಗುಂಡು ಲಭಿಸಿರಲೂಬಹುದು. ನಿಜವಾಗಿ ಹಾಗೇ ಇರಬೇಕೆಂದೇನಿಲ್ಲ. ಕಾವ್ರೋ-ಲಿಂಗನಲ್ಲಿ ಆಕಾಂಕ್ಷೆ ಸ್ಫುರಿಸಿದಂತೆ ಮಾವ್ರೋನಲ್ಲೂ ಆಕಾಂಕ್ಷೆ ಸ್ಫುರಿಸಿರಬಹುದು. ಕಾವ್ರೋ-ಲಿಂಗನು ಪಿಂಗಾಣಿ ತಟ್ಟೆಯ ತುಂಡನ್ನು ನೆಟ್ಟು ಪರೀಕ್ಷಿಸಿದಂತೆ ಮಾವ್ರೋ ಕೂಡಾ ಅಣುಗುಂಡು ತಯಾರಿಕೆಗಾಗಿ ಏರ್ಪಾಡು ಮಾಡಿ ಪರೀಕ್ಷಿಸಿಕೊಂಡಿದ್ದಿರಬಹುದು. ಮುಂದೇನಾಯ್ತು?

ರೋಟರಿ ವಾರ್ಷಿಕೋತ್ಸವ

ಮಣಿಪಾಲ, "ರೋಟರಿ ಸಂಸ್ಥೆಯ ಮಹಾಧ್ಯೇಯಗಳು ಅತ್ಯಂತ ಪ್ರಶಂಸನೀಯವಾಗಿವೆ" ಎಂದು ಮುಂಬಯಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ| ಆರ್. ವಿ. ಸಾಠೆ ರೋಟರಿಯ 60ನೇ ವಾರ್ಷಿಕೋತ್ಸವವನ್ನು ತಾ|| 23-2-61ರಂದು ಉಡುಪಿ ರೋಟರಿ ಕ್ಲಬ್ ಆಚರಿಸಿದ ಸಂದರ್ಭದಲ್ಲಿ ನುಡಿದರು.

ಅಧ್ಯಕ್ಷ ಡಾ| ಎ. ಕೃಷ್ಣರಾವ್ ಸ್ವಾಗತಿಸಿದರು. ಮಾಜಿ ಅಧ್ಯಕ್ಷ ಶ್ರೀ ರಮೇಶ ಪೈಯವರು, ಅಪರೂಪದ ಉಡುಪುಗಳನ್ನು ಧರಿಸಿಕೊಂಡು ಬಂದ ಕ್ಲಬ್ಬಿನ ಸದಸ್ಯರುಗಳನ್ನು ಡಾ| ಸಾಠೆಯವರಿಗೆ ಪರಿಚಯ ಮಾಡಿಸಿದರು. ಅಂತರ್ರಾಷ್ಟ್ರೀಯ ರೋಟರಿಯ 317ನೇ ಜಿಲ್ಲಾ ಗವರ್ನರ್ ಡಾ| ಟಿ. ಎಂ. ಎ. ಪೈಯವರು ಮಾತನಾಡಿ ರೋಟರಿಯ ಏಳನೆ ದಶಕ ಆರಂಭವಾಗುತ್ತಿರುವ ಈ ಮಹತ್ವಪೂರಿತ ಘಟನೆಯನ್ನು ಪ್ರಪಂಚದಾದ್ಯಂತ ಆಚರಿಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ವ್ಯವಸ್ಥೆಗೊಳಿಸಲಾಗಿದ್ದ ಮೋಜಿನ ಮೇಳದಲ್ಲಿ ವಸ್ತು ಪ್ರದರ್ಶನ ಮತ್ತು ಆಹಾರದ ಹಾಗೂ ಕ್ರೀಡೆಗಳ ಸ್ಟಾಲುಗಳಿದ್ದುವು. ಅವುಗಳಿಂದ ಬಂದ ಹಣವನ್ನು ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಕಟ್ಟಲಿರುವ ರೋಟರಿ ಬ್ಲಾಕಿಗೆ ವಿನಿಯೋಗಿಸಲಾಗುವುದು

ಗ್ರಿಗ್ ಸ್ಮಾರಕ ಪಂದ್ಯಾಟಗಳು

ದ. ಕ. ಜಿಲ್ಲಾ ಸ್ಪೋರ್ಟ್ಸ್ ಮತ್ತು ಎತ್ಲೆಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ಉಡುಪಿಯ ಅಜ್ಜರಕಾಡ್ ಮೈದಾನಿನಲ್ಲಿ ಕಳೆದ ತಾ. 19 ಮತ್ತು 20ರಲ್ಲಿ ಗ್ರಿಗ್ ಸ್ಮಾರಕ ಪಂದ್ಯಾಟಗಳು ಜರಗಿದುವು. ಇದರಲ್ಲಿ ಭಾಗಿಗಳಾದವರಿಗೆ ಸಿಂಡಿಕೇಟ್ ಬ್ಯಾಂಕಿನವರು ಕಳೆದ ತಾ. 20ರಂದು ಭೋಜನ ಕೂಟವೊಂದನ್ನು ಏರ್ಪಡಿಸಿದ್ದರು. ಅತಿಥಿಗಳಿಗೆ ಪ್ರಧಾನ ಕಾರ್ಯಾಲಯದ ಕಾರ್ಯಕಲಾಪಗಳನ್ನೂ ಮಣಿಪಾಲದಲ್ಲಿರುವ ವಿವಿಧ ವಿದ್ಯಾಸಂಸ್ಥೆಗಳನ್ನೂ ತೋರಿಸಲಾಯಿತು. ಅಲ್ಲದೆ ಕಳೆದ ತಾ. 23ರಂದು ಸಿಂಡಿಕೇಟ್ ಬ್ಯಾಂಕಿನವರು ವಾಲ್‌ಚಂದ್ ಗ್ರೂಪ್ ಆಫ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಶ್ರೀ ಲಾಲ್‌ಚಂದ್ ಹೀರಾಚಂದ್, ಬೊಂಬಾಯಿ ಯುನಿವರ್ಸಿಟಿಯ ವೈಸ್ ಚಾನ್ಸಲರ್ ಡಾ| ಆರ್. ವಿ. ಸಾಠೆ ಮತ್ತು ಶ್ರೀಮತಿ ಸಾಠೆ ಇವರ ಗೌರವಾರ್ಥವಾಗಿ ಭೋಜನ ಸತ್ಕಾರವನ್ನು ಏರ್ಪಡಿಸಿದರು. ಇವರೆಲ್ಲರೂ ಮಣಿಪಾಲದಲ್ಲಿಯ ಬ್ಯಾಂಕ್ ಮತ್ತು ವಿದ್ಯಾಸಂಸ್ಥೆಗಳ ಪ್ರಗತಿಗಾಗಿ ಮೆಚ್ಚಿಗೆ ಸೂಚಿಸಿದರು.

1961ನೇ ಫೆಬ್ರವರಿ ಎರಡನೆಯ ವಾರದಲ್ಲಿ, ಮದ್ರಾಸ್ ಧರ್ಮ ಪ್ರಕಾಶದಲ್ಲಿ ಸಂಯುಕ್ತವಾಗಿ ನಡೆದ ಮದ್ರಾಸ್ ಮಾಧ್ವ ಸಂಘದ ಮಧ್ವನವಮೀ ಉತ್ಸವದ ರಜತ ಮಹೋತ್ಸವದ ಮತ್ತು ಮಾಧ್ವ ಸಿದ್ಧಾಂತ ಸಂವರ್ಧಿನೀ ಸಭೆಯ 22ನೇ ಅಧಿವೇಶನದ ಸಂದರ್ಭದಲ್ಲಿ, ಶ್ರೀ ಮಧ್ವಾಚಾರ್ಯರ ಭಾವಚಿತ್ರದ ಮೆರವಣಿಗೆಯು 'ಧರ್ಮಪ್ರಕಾಶ'ಕ್ಕೆ ಹಿಂತಿರುಗಿ ಬಂದ ಕೂಡಲೇ 'ಪುಷ್ಪವೃಷ್ಟಿ' ಮಾಡಿದ ದೃಶ್ಯ. ಶ್ರೀ ಭಂಡಾರಕೇರಿ ಮತ್ತು ಶ್ರೀ ಪೇಜಾವರ ಸ್ವಾಮಿಗಳ ಉಭಯ ಶ್ರೀಪಾದಂಗಳವರನ್ನು ಈ ಚಿತ್ರದಲ್ಲಿ ಕಾಣಬಹುದು.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction Madras

ಕೊಲೆಗಳನ್ನು ತಡೆಯಲು ಸಾಧ್ಯವಿದೆಯೇ?

(ಆರನೇ ಪುಟದಿಂದ)

ತಪ್ಪಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಒಂದು ಕೃತ್ರಿಮವಾದ ಮಂಜನ್ನು ಹೊರಡಿಸುವುದಕ್ಕಾಗಿ ಬೇಕಾದುದೆಂದು ನಂಬಿಸಲಾಗಿತ್ತು. ಆದರೆ ಆ ಉಪಕರಣವು ಒಂದು ಟೈಮ್ ಬಾಂಬಾಗಿತ್ತು. ಅದು ಕೊಲೆಗಾರನನ್ನು ಹೊಡೆದು ಪುಡಿ ಪುಡಿ ಮಾಡಿತು.

ಅನೇಕ ರಾಜಾಧಿರಾಜರು ಮತ್ತು ಮಹೋನ್ನತ ಪದವಿಯ ಪುರುಷರು ಅವಿರತವಾದ ಕೊಲೆಯ ಭೀತಿಯಿಂದಲೇ ಜೀವಿಸುತ್ತಾರೆ. ಮತ್ತು ತಮ್ಮ ಶತ್ರುಗಳ ವಿಷಯದಲ್ಲಿ ಯಾವಾಗಲೂ ಎಚ್ಚರಿಕೆಯಿಂದಿರುವುದು ಅಗತ್ಯವೆಂದು ತಿಳಿದಿರುತ್ತಾರೆ. ಅನೇಕ ಸಲ ಪರರಾಷ್ಟ್ರಗಳನ್ನು ಸಂದರ್ಶಿಸುವಾಗ ಕೊಲೆಗಾರನನ್ನು ಮೋಸಗೊಳಿಸುವ ಸಲುವಾಗಿ ಬೇರೆ ಬೇರೆ ಹೋಟೇಲುಗಳಲ್ಲಿ ಎರಡು ಮೂರು ವಸತಿ ಸ್ಥಾನಗಳನ್ನು ನೇಮಿಸಿಕೊಳ್ಳುತ್ತಾರೆ. ಅವರು ತಂಗಿರುವ ಹೋಟೆಲುಗಳಲ್ಲಿ ಕೂಡ ಪ್ರಧಾನ ಪುರುಷರು ಒಂದು ಕಾಲ್ಪನಿಕ ಹೆಸರನ್ನಿಟ್ಟುಕೊಂಡಿರುತ್ತಾರೆ. ಈ ಪ್ರತಿಯೊಂದು ವಾಸಸ್ಥಾನಗಳೂ ಹಗಲು ರಾತ್ರಿ ಕಾವಲುಗಾರರಿಂದ ರಕ್ಷಿಸಲ್ಪಡುತ್ತವೆ. ಎಂದಿಗೂ ಮುಖ್ಯಸ್ಥರನ್ನು ಒಬ್ಬರನ್ನೇ ಬಿಟ್ಟಿರುವುದಿಲ್ಲ. ಬಚ್ಚಲುಮನೆ ಮತ್ತು ಪ್ರೆಸ್ಸಿನ ಕೋಣೆಗಳಿಗೆ ವಿಶೇಷ ಗಮನ ಕೊಡುತ್ತಾರೆ. ಕಾಣಿಕೆಗಳನ್ನೂ ಪುಸ್ತಕ ಪಾರ್ಸಲುಗಳನ್ನೂ ಅವುಗಳು ಬಾಂಬುಗಳನ್ನು ಒಳಗೊಂಡಿರಬಹುದೆಂಬ ಭಯದಿಂದ ನೇರವಾಗಿ ಮುಖ್ಯಸ್ಥರಿಗೆ ಮುಟ್ಟಿಸಲು ಬಿಡುವುದಿಲ್ಲ. ಆಹಾರವನ್ನು ಅಂಗರಕ್ಷಕರು ತಿಂದು ನೋಡುತ್ತಾರೆ. ಸಾಮಾನ್ಯವಾಗಿ ಎಲ್ಲಾ ವಿಷಪರಿಹಾರಕ ಔಷಧಗಳೊಡನೆ ಡಾಕ್ಟರನ್ನು ಹತ್ತಿರದಲ್ಲೇ ಇರುತ್ತಾನೆ.

ಒಂದು ಲಂಡನ್ ಪತ್ತೇದಾರಿ ಸಂಸ್ಥೆಯು ಈ ರೀತಿಯ ಪುರುಷ ರಕ್ಷಣೆಯ ಕಾರ್ಯದಲ್ಲಿ ವಿಶೇಷ ಕೌಶಲ್ಯವನ್ನು ಪಡೆದಿರುತ್ತದೆ. ಪ್ರತಿಯೊಬ್ಬ ಅಂಗರಕ್ಷಕ ಅಥವಾ ಪತ್ತೇದಾರನಿಗೆ ಒಂದು ಗಂಟೆಗೆ ಹತ್ತು ಶಿಲ್ಲಿಂಗುಗಳೆಂದು ಇಂತಹ ರಕ್ಷಣೆಗೆ ಸಾಮಾನ್ಯವಾದ ಚಾರ್ಜನ್ನು ಅದು ಇತ್ತೀಚೆಗೆ ಪ್ರಕಟಿಸಿದೆ. ತನ್ನ ವಾಸಸ್ಥಾನದಿಂದ ಹೊರಗೆ ಆಗಾಗ್ಯೆ ಸಂಚಾರ ಮಾಡುವ ಒಬ್ಬ ಮುಖ್ಯಸ್ಥನಿಗೆ ಅಂತಹ ಎಂಟು ಮಂದಿ ರಕ್ಷಕರು ಬೇಕಾಗುತ್ತಾರೆ. ಅವರಿಗೆ ತಗಲುವ ವೆಚ್ಚವು ವಾಸಸ್ಥಾನದ ವೆಚ್ಚ ಹೊರತು ದಿನಕ್ಕೆ ೧೦೦ ಪೌಂಡುಗಳು ಅಥವಾ ೧೩೦೦ ರೂಪಾಯಿಗಳಾಗುತ್ತವೆ. ಯಾರಾದರೂ ಒಬ್ಬನ ಮೇಲೆ ಮಾತ್ರ ಸಂಶಯವಿದ್ದರೆ ಈ ವೆಚ್ಚವು ಕಡಿಮೆಯಾಗುವುದು. ಏಕೆಂದರೆ ಒಬ್ಬ ಸಂಶಯಗ್ರಸ್ತನನ್ನು ಕಾಯುವುದಕ್ಕೆ ಒಂದು ಸಮಯದಲ್ಲಿ ಒಬ್ಬ ಪತ್ತೇದಾರನು ಮಾತ್ರ ಸಾಕಾಗುತ್ತಾನೆ. ರಷ್ಯನ್ ಮುಖ್ಯಮಂತ್ರಿ ಮತ್ತು ಇತರ ಪ್ರಧಾನ ಪುರುಷರು ಮಾಡುವ ಸಂದರ್ಶನಕ್ಕೆ ಮುಂಚಿತವಾಗಿ ಸೋವಿಯತ್ ರಕ್ಷಣಾ ದಳವು ಕೆಲವು ತಿಂಗಳ ಮೊದಲೇ ಹೋಗತಕ್ಕ ದೇಶಕ್ಕೆ ಹೋಗಿ ನೋಡಿ ಪ್ರಧಾನ ಪುರುಷರನ್ನು ರಕ್ಷಿಸಲಿಕ್ಕಾಗಿ ಸ್ಥಳೀಕ ರಕ್ಷಣಾ ದಳದವರೊಡನೆ ಸಹಕರಿಸುತ್ತದೆ. ಭಾರತದ ಗೃಹಮಂತ್ರಿ ಶಾಖೆಯ ಹೇಳಿಕೆಯಂತೆ, ಮಹಾತ್ಮಾ ಗಾಂಧಿಯವರು ಕಂಠೋಕ್ತವಾಗಿ ನಿರಾಕರಿಸಿದ್ದರೂ ಅವರ ಕೊಲೆಯ ದಿನದಲ್ಲಿ ಸುಮಾರು ಎಪ್ಪತ್ತು ಮಂದಿ ಇಂಡಿಯನ್ ಸೆಕ್ಯೂರಿಟಿ ಪೋಲೀಸರು ಸಾದಾ ಉಡುಪು ಧರಿಸಿ ಪ್ರಾರ್ಥನಾ ಮಂದಿರದೊಳಗಿದ್ದರು. ಆದರೂ ಯಾರೊಬ್ಬರಿಗೂ ಅವರನ್ನು ರಕ್ಷಿಸಲಾಗಲಿಲ್ಲ. ಏಕೆಂದರೆ ಆ ಜನಸಂದಣಿಯಲ್ಲಿ ಯಾರನ್ನೂ ಶೋಧಿಸುವುದಕ್ಕೆ ಮಹಾತ್ಮರು ಅನುಮತಿ ಕೊಡಲಿಲ್ಲ.

ಶರೀರವನ್ನು ಮುಚ್ಚುವ ಉಕ್ಕಿನ ತಗಡುಗಳಿಂದ ಮಾಡಿದ ಗುಂಡುತಾಗದ ಒಂದು ಕವಚವು ಕೊಲೆಗಾರರಿಗೆ ಅಡ್ಡಿ ಮಾಡುವ ಬೇರೊಂದು ಆಯುಧ ಸಾಧನವಾಗಿದೆ. ಲಂಡನಿನ ಒಂದು ಸಂಸ್ಥೆಯು (ಮೆಸ್ಸರ್ಸ್ ವಿಲ್ಕಿನ್‌ಸನ್ ಸಾರ್ಡ್ ಕೋ, ಲಿಮಿಟೆಡ್) ಈ ಕವಚಗಳಲ್ಲಿ ವಿಶೇಷ ನೈಪುಣ್ಯವನ್ನು ಪಡೆದಿರುತ್ತದೆ. ಅದಕ್ಕೆ ಸುಮಾರು ೪೦೦ ರೂಪಾಯಿಗಳ ವೆಚ್ಚವು ತಗಲುತ್ತದೆ. ಅದು ೨೦ರಿಂದ ೨೨ ಪೌಂಡುಗಳಷ್ಟು ಭಾರವಾಗಿ ವಿಶೇಷತಃ ಹಗುರವಾಗಿರುತ್ತದೆ. ಕಳೆದ ಯುದ್ಧ ಕಾಲದಲ್ಲಿ ಮಿಲಿಟರಿಗೆ ಈ ಕವಚಗಳನ್ನು ಒದಗಿಸಲಿಕ್ಕಾಗಿ ದಿನಕ್ಕೆ ೨೪ ಗಂಟೆ ಕೆಲಸ ಮಾಡುವ ಮೂರು ಕಾರ್ಖಾನೆಗಳು ಈ ಸಂಸ್ಥೆಗೆ ಇರುತ್ತಿದ್ದವು. ಈಗಲೂ ಕೂಡ ಅದು ಒಂದು ವರ್ಷಕ್ಕೆ ೨೦೦ ಕವಚಗಳನ್ನು ಮಾರಾಟ ಮಾಡುತ್ತಿದೆ. ಈ ಕವಚಗಳು ಎಲ್ಲಾ ರಿವಾಲ್ವರುಗಳ ಗುಂಡುಗಳನ್ನೂ ಕೆಲವು ಕೋವಿಗುಂಡುಗಳನ್ನೂ ಸಹ ತಡೆಯಬಲ್ಲವು. ಗತಿಸಿದ ಆಗಾಖಾನರು ಈಯೊಂದು ಕವಚವನ್ನು ಧರಿಸಿಕೊಂಡಿದ್ದರು. ಮೇಡಮ್ ಚಿಯಾಂಗ್ ಕೈಶೇಕರು ತನಗಾಗಿ ನೀಲೀ ಸಿಲ್ಕಿನಲ್ಲಿ ಮುಚ್ಚಿದ ಒಂದು ಕವಚಕ್ಕೆ ಆರ್ಡರು ಕೊಟ್ಟಿದ್ದರು. ಅನೇಕ ಹಿಂದೂ ಅರಸರು ಆಗಾಗ್ಯೆ ಈ ಸಂಸ್ಥೆಗಳಿಗೆ ಗಿರಾಕಿಗಳಾಗುತ್ತಿದ್ದರು. ಒಬ್ಬರು ಮಹಾರಾಜರು ಕಾಲ್ನಡಿಗೆಯಲ್ಲೇ ಹುಲಿಗಳನ್ನು ಬೇಟೆಯಾಡುವುದಕ್ಕಾಗಿ ಸಂಪೂರ್ಣವಾದ ಒಂದು ಕವಚಕ್ಕೆ ಆರ್ಡರು ಕೊಡಲು ಅಪೇಕ್ಷಿಸಿದರು. ಆದರೆ ಆ ಆರ್ಡರು ಮಾಡಿದ ಕವಚದ ಅತಿ ಹೆಚ್ಚಿನ ಭಾರವು (ಒಂದು ನೂರು ಪೌಂಡುಗಳು.) ಅವರನ್ನು ಆ ಆಲೋಚನೆಯಿಂದ ಬಿಡುಗಡೆಗೊಳಿಸಿತು. ಅವರು ಆ ಆರ್ಡರನ್ನು ರದ್ದುಗೊಳಿಸಿದರು.

ತಡವಾಗಿ ಬರುವ ಸೂಚನೆ

ಕೆಲವು ಸಮಯಗಳಲ್ಲಿ ಕೊಲೆಗೆ ಎಲ್ಲಾ ಸಿದ್ಧತೆಗಳನ್ನು ಮಾಡಿದ ಮೇಲೆ ಅದನ್ನು ರದ್ದುಗೊಳಿಸುವುದು ಬಹುಕಷ್ಟವಾಗುವುದು. ಈ ಶತಮಾನದ ಕಳೆದ ನಲ್ವತ್ತರ ವರ್ಷಗಳಲ್ಲಿ ಯುಗೋಸ್ಲೇವಿಯದ ಮಾರ್ಶಲ್ ಟಿಟೋವಿಗೂ, ಮಾರ್ಶಲ್ ಸ್ಟೇಲಿನನಿಗೂ ದ್ವೇಷವು ಹೆಚ್ಚಾಯಿತು. ಒಮ್ಮೆ ಸ್ಟೈಲೀನನು ಟಿಟೋನ ಕೊಲೆಯ ಯೋಜನೆ ಮಾಡಲು ತನ್ನ ಉಚ್ಚ ಗೂಢಚಾರರಿಗೆ ಆದೇಶವಿತ್ತನು. ಆ ಕೊಲೆಯು ಒಂದು ರಸ್ತೆಯ ಮೂಲೆಯಲ್ಲಿ ನಡೆಯತಕ್ಕದ್ದಾಗಿತ್ತು. ಇದಕ್ಕೆ ಎಲ್ಲಾ ಏರ್ಪಾಡು ನಡೆದಿತ್ತು. ಆದರೆ ಕೊಲೆ ನಡೆಯುವ ಹತ್ತು ಮಿನಿಟುಗಳ ಮೊದಲು ಸ್ಟೈಲೀನನಿಂದ ನೇರವಾಗಿ "Stop" "ನಿಲ್ಲು" ಎಂದು ಅಪ್ಪಣೆ ಬಂತು. ತೊಂದರೆಗೊಳಗಾದ ಆ ಗೂಢಚಾರನು ಹೇಗಾದರೂ ಆ ಕೊಲೆಯನ್ನು ತಡೆಯಲು ಶಕ್ತನಾದನು. ಆದರೆ ಇದು ಅವನಿಗೆ ಬಹು ಹಾನಿಯನ್ನು ಮಾಡಿತು. ಅವನು ಬುದ್ಧಿ ಸ್ವಾಸ್ಥ್ಯವಿಲ್ಲದವನಾದನು.

ಬಹು ಜನರಿಗೆ ಇದು ಆಶ್ಚರ್ಯವೆನಿಸಬಹುದು. ಆದರೆ ಅದು ನಿಜವಾದ ಸಂಗತಿ. ಲಂಡನಿನ ಸುಪ್ರಸಿದ್ಧ ಲಾಯ್ಡ್ಸ್ ಇನ್ಶೂರೆನ್ಸ್ ಸಂಸ್ಥೆಯು, ಸರಿಯಾದ ಪ್ರೀಮಿಯಮ್ ಹಣವನ್ನು ಕೊಟ್ಟರೆ ಪ್ರಧಾನ ಪುರುಷರ ಮರಣ ಅಥವಾ ಕೊಲೆಯಿಂದಾಗುವ ನಷ್ಟದ ಮೇಲೆ ಒಬ್ಬ ಮನುಷ್ಯನ ಸಂಬಂಧದಲ್ಲಿ ಇನ್ಶ್ಯೂರ್ ಮಾಡುವುದು. ೧೯೫೩ರಲ್ಲಿ ಎಲಿಸಬೆತ್ ರಾಣಿಯ ಕಿರೀಟಧಾರಣೆಯ ಏರ್ಪಾಡು ನಡೆಯುತ್ತಿದ್ದಾಗ, ಬ್ರಿಟಿಷ್ ಉದ್ಯಮಿಗಳು ಕಿರೀಟಧಾರಣೆಗೆ ಸಂಬಂಧಪಟ್ಟ ಸ್ಮಾರಕಗಳು ಮತ್ತು ಪ್ರಯಾಣದ ಸರ್ವೀಸು ಮುಂತಾದುವುಗಳ ರಚನೆಯಲ್ಲಿ ಮಿಲಿಯಗಟ್ಟಲೆ ಹಣವನ್ನು ವಿನಿಯೋಗಿಸಿದ್ದರು. ಈ ಎಲ್ಲಾ ಹಣವು ತರುಣಿಯಾದ ರಾಣಿಯು ಕಾಯಿಲೆಯಿಂದ ಸತ್ತು ಹೋದರೆ ಅಥವಾ ಯಾರಾದರೊಬ್ಬ ಭ್ರಾಂತನಿಂದ ಕೊಲೆಗೊಂಡರೆ ನಷ್ಟವಾಗಿ ಹೋಗುತ್ತಿತ್ತು. ಇವೆಲ್ಲಕ್ಕೂ ಭದ್ರತೆಯನ್ನಪೇಕ್ಷಿಸುವ ಪ್ರತಿ ಉದ್ಯಮಿಯ ಸಂಬಂಧದಲ್ಲಿ ಲಾಯ್ಡ್ಸ್ ಸಂಸ್ಥೆಯು ಕೂಡಲೇ ಇನ್ಶೂರು ಮಾಡಿತು. ರಾಜ್ಯದ ಯಾವ ಪ್ರಧಾನ ಪುರುಷನ ಮೇಲೆಯೂ ಕೇಳದ ಪ್ರೀಮಿಯಮ್ ಚಾರ್ಜುಗಳು ಕನಿಷ್ಠ ಮಿತಿಯವುಗಳಾಗಿದ್ದವು. ಏಕೆಂದರೆ ಬ್ರಿಟಿಷ್ ರಾಣಿಯ ಕೊಲೆಯು ರಾಷ್ಟ್ರೀಯ ಧೋರಣೆಯಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲಾರದಾದುದರಿಂದ ಯಾವ ರಾಜಕೀಯ ಭ್ರಾಂತನೂ ಬ್ರಿಟಿಷ್ ರಾಣಿಯ ಕೊಲೆಗೆ ನಿಜವಾಗಿ ಪ್ರಯತ್ನ ಮಾಡಲಾರನು.

(ನೈಲ್ ಪತ್ರಿಕೆಯಿಂದ)

ದೇವನೆ!

ಹೃದಯದಲ್ಲಿ ನಿತ್ಯ ನಿಲಿಸು
　ನಿನ್ನದಮರ ಚಿಂತನೆ
ಮನಸಿನಲ್ಲಿ ಕಾಣುತಿಹುದು
　ಸತ್ಯರೂಪ ಕಲ್ಪನೆ. ॥ ೧ ॥
ಹಗಲು ಇರುಳು ಬಿಡುವಿನಲ್ಲಿ,
　ಬೇರೆಯಿಲ್ಲ ಸ್ವಪ್ನವು.
ಬೇಕನೆಲ್ಲ ಬೇಡುತಿಹುದು
　ನಿನ್ನದಾಗಿಯೆ ಲ್ಲವು. ॥ ೨ ॥
ವಿರಸವಾದ ಬಾಳಿನಲ್ಲಿ
　ಸರಸವುಂಟು ಪಕ್ಕನೆ,
ಆಗ ನಿನ್ನ ನೆನೆಕೆಬೇಕು
　ಅದುವೆ ಸ್ವರ್ಗ ಸೇವನೆ. ॥ ೩ ॥
ಯಾರ ಬಳಿಯೊಳಿದ್ದರೇನು
　ನಿನ್ನ ಕಣ್ಣಿನಾಸರೆ—
ಯಿಲ್ಲ ಬೇರೆ ನೆರಳು ತಲ್ಪ—
　ಬೇಕು ನೀಡು ನೀಯೆಡೆ ॥ ೪ ॥
ತೊಟ್ಟಿಲಿಂದ ತೊಟ್ಟಿಲೆಡೆಗೆ
　ತೊಟ್ಟಿಲೀವ. ಜಗಲಿಗೆ
ಜಗಲಿಯಿಂದ ಜಗಕೆ ನಡೆವ
　ನಾಳು ಬಾಳು ಜೀವಕೆ ॥ ೫ ॥
ಕಾಮ ಕ್ರೋಧ ತುಂಬಿ ಬಂತು
　ಹೇಸಿ ಹೊಲಸಿದಾಗಿದೆ
ಅನ್ಯಮಾಕುಯಿಲ್ಲ ಮಮತೆ
　ಎಲ್ಲ ಚಾಗ ಕಲುಷಿದೆ. ॥ ೬ ॥
ನ್ಯಾಯ ಶಾಂತಿ ನೀಡುವಂಥ
　ಸರ್ವಿಕಾರ ಸೌಧವ
ದಣಿದ ದೇಹ ಬಯಸಿದಾಗ
　ಕರೆಸಿಕೊಳ್ಳು ಭಕ್ತರ ॥ ೭ ॥

—ಅಬ್ದುಲ್ ರಹಿಮಾನ್.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ವೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126　　ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಭಾರತದ ಆಹಾರ ಕಾರ್ಪರೇಶನ್

(ಐದನೇ ಪುಟದಿಂದ)

ಳ್ಳುವುದರಿಂದ, ಇದರ ಸರಬರಾಜಿನ ವೆಚ್ಚವೇ ಅಧಿಕವೆನಿಸುತ್ತದೆ. ಆಹಾರ ಧಾನ್ಯ ಮಿಗತೆಯಾಗಿರುವ ಪ್ರದೇಶಗಳಿಗೇನೇ ಇತರ ನಮೂನೆಯ ಆಹಾರ ಧಾನ್ಯಗಳು ಬೇರೆ ಪ್ರದೇಶಗಳಿಂದ ಬರುತ್ತವೆ. ಇದು ತೀರಾ ಅಭ್ಯಾಸಕರ ವಿಷಯ ಹಾಗೂ ಅನಾವಶ್ಯಕವಾದ ವೆಚ್ಚ. ಇದಕ್ಕಾಗಿ ಜನರ ಆಹಾರ ಪದ್ಧತಿಯು, ಪಂಕ್ತಿತಿಗನು ಗುಣವಾಗಿ ಬದಲಾಗಬೇಕು.

ಕೇವಲ ಧಾನ್ಯಗಳನ್ನೇ ತಿಂದು ನಮ್ಮ ಜನ ಈ ವರೆಗೆ ಬದುಕಿದ್ದಾರೆ. ಇದರಲ್ಲಿ ಬದಲಾವಣೆ ಆಗಬೇಕು. ಇಂದು ನಮ್ಮ ಜನರ ಆಹಾರದಲ್ಲಿ ೭೫% ದಷ್ಟು ಧಾನ್ಯಗಳೇ ಇವೆ. ಈ ಪ್ರಮಾಣವನ್ನು ೫೦%ಕ್ಕೆ ಇಳಿಸಿ ಈ ಇಳುವರಿಯ ನಷ್ಟವನ್ನು ಹಣ್ಣು ಹಂಪಲು, ತರಕಾರಿ, ಮೀನು ಮೊದಲಾದುವುಗಳಿಂದ ತುಂಬಬೇಕು. ದುರದೃಷ್ಟದಿಂದ ನಮ್ಮ ಜನ ಇವುಗಳನ್ನು ಆಹಾರವೆಂದು ತಿಳಿಯುತ್ತಿಲ್ಲ. ಬದಲು, ಹೆಚ್ಚು ಧಾನ್ಯವನ್ನು ತಿನ್ನಲು ನೆರವಾಗುವ ಸಾಧನಗಳೆಂದೇ ಇವುಗಳನ್ನು ತಿಳಿದಿದ್ದಾರೆ. ಭೋಜನ ಕೂಟಗಳಲ್ಲಿ ಆಹಾರದ ಅಪವ್ಯಯ ಮಾಡುವುದು ಅಥವಾ ಅಭ್ಯಾಸ ಬಲದಿಂದ ಆಹಾರದ ದಂಡು ವೆಚ್ಚ ಮಾಡುವುದು ದೇಶದ ಇಂದಿನ ಪರಿಸ್ಥಿತಿಯಲ್ಲಿ ಅಕ್ಷಮ್ಯವಾದ ಅಪರಾಧ. ಇಂದಿನ ಜನರ ಆಹಾರದ ಕ್ರಮದಲ್ಲಿ ಅಪವ್ಯಯಕ್ಕೆ ಹೆಚ್ಚಿನ ಅವಕಾಶವಿದೆ. ಇದನ್ನು ಈಗಿಂದೀಗಲೇ ತಡೆಗಟ್ಟದಿದ್ದರೆ ಇದು ಇನ್ನಷ್ಟು ಹೆಚ್ಚಬಹುದು. ಪ್ರತಿಯೊಬ್ಬ ವ್ಯಕ್ತಿಗೆ ಹೆಚ್ಚು ಆಹಾರ ತಿನ್ನುವ ಹಕ್ಕನ್ನು ನಾವು ಕೊಟ್ಟಂತೆ, ಅಪವ್ಯಯ ಮಾಡುವ ಹಕ್ಕನ್ನು ನಿರಾಕರಿಸಬೇಕು.

ದೇಶದ ಆಹಾರ ಸಮಸ್ಯೆಯ ಪರಿಹಾರಕ್ಕೆ ಎಲ್ಲವುಗಳಿಗಿಂತ ಪರಿಣಾಮಕಾರಿಯಾದ ಮಾರ್ಗವಿರುವುದು ಮಹಿಳೆಯರ ಕೈಗಳಲ್ಲಿ. ಆಹಾರ ಸೇವನೆಯ ಕ್ರಮದಲ್ಲಿ ಬದಲಾವಣೆ ಹಾಗೂ ಆಹಾರದ ಅಪವ್ಯಯದ ತಡೆಗಟ್ಟುವಿಕೆಯನ್ನು ಸಾಧಿಸಬಲ್ಲವರು ಅವರು ಮಾತ್ರ. ನಮ್ಮ ದೇಶದ ಜನ ಆಹಾರವನ್ನು ದೇವರೆಂದ ನಂಬಿದವರು. ಉಣ್ಣುವಾಗ ಎಂದೇ ಒಂದು ಅನ್ನದ ಅಗಳಾದರೂ ಒಟ್ಟಲಿಂದ ಕೆಳಗೆ ಬೀಳಬಾರದು; ಆ ರೀತಿ ಆಹಾರವನ್ನು ಹಾಳು ಮಾಡುವುದು ಮಹಾ ಪಾಪ ಎಂದು ನನ್ನ ಅಜ್ಜಿ ನನಗೆ ಹೇಳುತ್ತಿದ್ದ ಮಾತು ನನಗೆ ಜ್ಞಾಪಕಕ್ಕೆ ಬರುತ್ತಿದೆ. ಆದರೆ ಆಹಾರ ಧಾನ್ಯಗಳ ನಷ್ಟದ ಕಡೆಗಿನ ನಿರ್ಲಕ್ಷ್ಯ ಭಾವ ಇನ್ನೂ ಹೋಗಿಲ್ಲ ಎಂಬುದೇ ದುರದೃಷ್ಟಕರವಾದ ಸಂಗತಿ. ಒಬ್ಬನು ತಾನು ಉಂಡು ಬಳಿಕ ಬಿಸಾಡುವ ಸಾಮರ್ಥ್ಯ ಇದ್ದವನಿರಬಹುದು. ಆದರೆ ಆ ರೀತಿ ನಾವು ತಿಂದುಂಡು, ಬಿಸಾಡುವ ಆಹಾರವೇ ಹಸಿದು ಕಂಗೆಟ್ಟಿರುವ ನೂರಾರು ಜೀವಗಳಿಗೆ ಜೀವನಾಧಾರವಾಗಿದೆ. ಇದನ್ನು ನಾವು ಪದೇ ಪದೇ ಜ್ಞಾಪಿಸಿಕೊಳ್ಳಬೇಕು. ನಮ್ಮ ಮುಂದಿನ ಜನಾಂಗವಾದ ಇಂದಿನ ಮಕ್ಕಳು ಬಹಳಾದ ಆಹಾರ ಕ್ರಮವನ್ನು ಅಳವಡಿಸಿಕೊಳ್ಳಬೇಕೆಂಬ ಬಯಕೆ ನನ್ನದು, ಇದು ರಾಷ್ಟ್ರೀಯ ಶಿಸ್ತೆಂಬ ಭಾವ ಎಲ್ಲರಲ್ಲಿ ಮೂಡಬೇಕು. ಬೆರಕೆ ಆಹಾರ ಧಾನ್ಯದ ಉಪಯೋಗ ತಡೆಯುವಲ್ಲಿ ನಮ್ಮ ಮಹಿಳೆಯರು ಮಹತ್ವದ ಪಾತ್ರವಹಿಸಬಲ್ಲರು. ಪರದೇಶಗಳ ಜನ ಶುದ್ಧ ಹಾಗೂ ಉತ್ತಮ ಆಹಾರ ವಸ್ತುಗಳನ್ನೇ ಪಡೆಯ ಬಲ್ಲರಾದರೆ ನಮ್ಮಲ್ಲಿ ಮಾತ್ರ ಅದು ಯಾಕೆ ಅಸಾಧ್ಯ?

ಆಹಾರ ಕಾರ್ಪೇರೇಶನಿನ ಕಾರ್ಯಗಳು

ಆಹಾರ ಕಾರ್ಪರೇಶನಿನ ಚಟುವಟಿಕೆಗಳ ಯಶಸ್ಸು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅದಕ್ಕೆ ಕೊಡುವ ಸಹಕಾರ ಹಾಗೂ ಸಹಾಯದ ಮೇಲೆ ಹೊಂದಿಕೊಂಡಿವೆ. ಆಹಾರ ಕಾರ್ಪರೇಶನು ಈ ವಿಚಾರಗಳಲ್ಲಿ ಯಾವುದೇ ಧ್ಯೇಯ ಧೋರಣೆಗಳನ್ನು ರೂಪಿಸುವಂತಿಲ್ಲ. ಕಾರಣವೆಂದರೆ, ಅದು ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಿಯಮ ಹಾಗೂ ಕಾರ್ಯಕ್ರಮಗಳಂತೆ ಕಾರ್ಯವೆಸಗಬೇಕು. ಸರಕಾರಗಳ ಧೋರಣೆ ಹಾಗೂ ನಿಯಮ, ನಿಬಂಧನೆಗಳು ಕಾರ್ಪರೇಶನಿನ ಚಟುವಟಿಕೆಗಳನ್ನು ಕಗ್ಗಿಸಲೂ ಬಹುದು. ಕಾರ್ಪರೇಶನು ದೇಶದ ಸಮಗ್ರ ಜನತೆಯ ಹಿತವನ್ನು ದೃಷ್ಟಿಯಲ್ಲಿ ಇರಿಸಿ ಕೊಂಡು ಹಾಗೂ ದೇಶವನ್ನೇ ಒಂದು ಘಟಕವನ್ನಾಗಿ ಭಾವಿಸಿ, ತನ್ನದೇ ಆದ ಧ್ಯೇಯ ಧೋರಣೆಗಳನ್ನು ರೂಪಿಸುವ ಆಶೆ ತಾಳಿದೆ. ಹಾಗಾಗಿ, ಎಲ್ಲಾ ರಾಜ್ಯ ಸರಕಾರಗಳಲ್ಲಿ ನನ್ನ ವಿಜ್ಞಾಪನೆ ಇಷ್ಟೆ. ನಾವೆಲ್ಲರೂ ಒಕ್ಕಟ್ಟಾಗಿ ಈ ಘೋರ ಸಮಸ್ಯೆಯನ್ನು ಎದುರಿಸೋಣ. ಇದರಿಂದ ನಾವು ಸ್ವಲ್ಪ ಮಟ್ಟಿನ ತ್ಯಾಗ ಮಾಡಬೇಕಾಗಿ ಬರಬಹುದಾದರೂ ರಾಷ್ಟ್ರದ ಹಿತ ದೃಷ್ಟಿಯಿಂದ ಈ ತ್ಯಾಗಕ್ಕೆ ಸಿದ್ಧರಾಗೋಣ. ಸಮಗ್ರ ರಾಷ್ಟ್ರವೇ ಸನ್ನದ್ಧವಾಗಿ, ದೃಢ ನಿರ್ಧಾರ ಹಾಗೂ ವಿಶ್ವಾಸದಿಂದ ಕಾರ್ಯವೆಸಗದಿದ್ದರೆ ಈ ಕಾರ್ಯದಲ್ಲಿ ಜಯಗಳಿಸುವುದು ಅಸಾಧ್ಯ.

ಜನತೆಗೆ ವಿಶ್ವಾಸ ಮಾಡುವ ಹಾಗೂ ಕಠಿಣ ಪರಿಸ್ಥಿತಿಯಲ್ಲಿ ಆಹಾರ ಸರಬರಾಜು ಮಾಡಲು, ಸಾಕಷ್ಟು ಆಹಾರಧಾನ್ಯವನ್ನು ದಾಸ್ತಾನು ಮಾಡುವುದು ಅತಿ ಅಗತ್ಯ. ರಾಷ್ಟ್ರಕ್ಕೆಂದು ಕಾದಿರಿಸಿದ ಧಾನ್ಯ ಸಂಗ್ರಹವು ಅವಶ್ಯಕತೆ ಎನಿಸಿದೆ ಈ ಸಂಗ್ರಹವನ್ನು ಮಾಡುವಲ್ಲಿ ಪ್ರತಿಯೊಬ್ಬ ರೈತನೂ ತನ್ನ ಪಾಲನ್ನು ಯೋಗ್ಯ ದರದಲ್ಲಿ ಕೊಡಬೇಕಾಗಿ ನಾನು ವಿನಂತಿಸುತ್ತೇನೆ. ಬೇರೆ ದೇಶಗಳಿಂದ ಆಮದು ಮಾಡಿಯೋ ಅಥವಾ ತಮ್ಮಲ್ಲೇ ಹೆಚ್ಚು ಬೆಳೆದೋ ಹಲವಾರು ರಾಷ್ಟ್ರಗಳು ರಾಷ್ಟ್ರೀಯ ಸಂಗ್ರಹವನ್ನು ಮಾಡಿವೆ. ಮುಂದಿನ ಐದು ವರ್ಷಗಳಲ್ಲಿ ೨೦ ಮಿಲಿಯ ಟನ್ ಆಹಾರಧಾನ್ಯ ಖರೀದಿಸಲು ಕಾರ್ಪರೇಶನಿಗೆ ಸಾಧ್ಯವಾಗುವಂತೆ, ಮಾರುಕಟ್ಟೆಗಳಿಂದ ನಿಯಮಿತ ಸಂಗ್ರಹವನ್ನು ಪಡಕೊಳ್ಳುವ ಮತ್ತು ಆಹಾರ ಧಾನ್ಯದ ಉತ್ಪಾದನೆಯನ್ನು ಹೆಚ್ಚಿಸುವ ಧೋರಣೆಯನ್ನು ನಾವು ಸ್ವೀಕರಿಸಬೇಕು. ಇದರಿಂದ ಉತ್ಪಾದಕರಿಗೆ ಅವರ ಹೆಚ್ಚಾದ ಉತ್ಪಾದನೆಗೆ ಯೋಗ್ಯ ದರದೊರೆವಂತಾಗುವುದು. ಯಾಕೆಂದರೆ ಕಾರ್ಪರೇಶನು ಉತ್ಪಾದಕರ ಆಹಾರದ ಬೆಲೆ ಕಡಿಮೆಯಾಗದಂತೆ ನೋಡಿಕೊಳ್ಳುವುದು.

ದೊಡ್ಡ ಸಂಗ್ರಹವನ್ನು ಕಾರ್ಪರೇಶನು ಇಟ್ಟುಕೊಳ್ಳುವುದರಿಂದ ಬಳಕೆದಾರರಿಗೆ ಯಾವಾಗಲೂ ಯೋಗ್ಯದರದಲ್ಲಿ ಆಹಾರ ಧಾನ್ಯ ಸರಬರಾಜು ಮಾಡಬಹುದು. ಆಹಾರ ಧಾನ್ಯಗಳ ಬೆಲೆ ಮಾರುಕಟ್ಟೆಯಲ್ಲಿ ಹೆಚ್ಚಿದಾಗ ಕಾರ್ಪರೇಶನು ತನ್ನ ದಾಸ್ತಾನನ್ನು ಬಿಡುಗಡೆ ಮಾಡಿ, ಬೆಲೆ ಏರದಂತೆ ನೋಡಿಕೊಳ್ಳುವದು. ಕಾಲಕ್ರಮೇಣ ಅದು ಪುನಃ ತನ್ನ ದಾಸ್ತಾನನ್ನು ಹೆಚ್ಚಿಸಬಹುದು. ಈ ರೀತಿ ದೀರ್ಘಕಾಲ ದೇಶದಾದ್ಯಂತ ಸಮಸಮಾನ ಬೆಲೆಯ ಮಟ್ಟ ಕಾಯ್ದುಕೊಳ್ಳಬಹುದು.

ಈ ಸಂದರ್ಭದಲ್ಲಿ ನಾನು ಅಮೆರಿಕೆಯ ಜನತೆ ಹಾಗೂ ಅಧ್ಯಕ್ಷರಿಗೆ, ಅವರು ನಮಗೆ ಕಠಿಣ ಪರಿಸ್ಥಿತಿಯಲ್ಲಿ ಒದಗಿಸಿದ ಆಹಾರಧಾನ್ಯಗಳಿಗಾಗಿ ಕೃತಜ್ಞತೆ ಸೂಚಿಸುತ್ತೇನೆ. ನಾನು ಅಮೆರಿಕೆಯ ಸಂಚಾರದಲ್ಲಿದ್ದಾಗ ಅಲ್ಲಿನ ಕೃಷಿಮಂತ್ರಿ ಶಾಖೆಯವರು ನನಗಿತ್ತ ಸಹಕಾರಕ್ಕಾಗಿ ನಾನು ಆಭಾರಿಯಾಗಿದ್ದೇನೆ. ಕೃಷಿಕ್ಷೇತ್ರದಲ್ಲಿ ನುರಿತವರೂ ಆ ಖಾತೆಯ ಸಚಿವರೂ ಆಗಿದ್ದ ಮದ್ರಾಸಿನ ಮುಖ್ಯಮಂತ್ರಿ ಶ್ರೀ ಭಕ್ತವತ್ಸಲಂ ಅವರನ್ನು ಈ ಸಂದರ್ಭ ಅಭಿನಂದಿಸುತ್ತೇನೆ. ಕೇಂದ್ರ ಆಹಾರಮಂತ್ರಿ ಶ್ರೀ|| ಸಿ ಸುಬ್ರಹ್ಮಣ್ಯಂರವರ ದೂರದೃಷ್ಟಿಯು ಈ ಕಾರ್ಪರೇಶನಿನ ಸ್ಥಾಪನೆಗೆ ಕಾರಣವಾಯಿತು. ಅವರಿಗೆ ಈ ಸಂದರ್ಭ ನಾನು ಕೃತಜ್ಞತೆ ಸೂಚಿಸುತ್ತೇನೆ.

ಕಾರ್ಪರೇಶನಿನ ಆಡಳಿತ ಮಂಡಳಿಯು ಸಾರ್ವಜನಿಕ ಜೀವನದಲ್ಲಿ, ವ್ಯಾಪಾರಿರಂಗದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ, ಕೃಷಿ ವಿಭಾಗದಲ್ಲಿ ನುರಿತ ಮಹಾ ವ್ಯಕ್ತಿಗಳ ನ್ನೊಳಗೊಂಡಿದೆ. ಇವರ ಬುದ್ಧಿಮತ್ತೆ ಹಾಗೂ ಪರಿಪಕ್ವವಾದ ಅನುಭವಗಳು ಕಾರ್ಪರೇಶನಿನ ಧ್ಯೇಯ ಸಾಧನೆಯಲ್ಲಿ ನೆರವಾಗ-ವುದೆಂಬ ಆಶೆ ನನಗಿದೆ. ನಮ್ಮ ದೇಶದ ಜನತೆಗೆ ಹಾಗೂ ಸಾಮಾನ್ಯ ಪ್ರಜೆಗೆ ನಾವು ನಮ್ಮ ಹೃತ್ಪೂರ್ವಕವಾದ ಸೇವೆ ಹಾಗೂ ಕಠಿಣ ಪರಿಶ್ರಮಗಳನ್ನೇ ಮುಡಿಪಾಗಿರಿಸಿದ್ದೇವೆ. ಅವರು ನಮ್ಮ ಮೇಲೆ ಇರಿಸುವ ವಿಶ್ವಾಸವೇ ನಮ್ಮ ಶಕ್ತಿಯಾಗಿರವುದು. ನಾವು ಅವರ ಹಿತಕ್ಕಾಗಿಯೇ ನಮ್ಮನ್ನು ಅರ್ಪಿಸುತ್ತಿದ್ದೇವೆ ಹಾಗೂ ನಮ್ಮ ಶ್ರಮಪೂರ್ವಕವಾದ ಯತ್ನಗಳಿಂದ ಈ ಸಮಸ್ಯೆಯನ್ನು ಪರಿಹರಿಸುವೆಂಬ ಭಾವನೆ ತಾಳುತ್ತೇವೆ. ಕಾರ್ಪರೇಶನು ತನ್ನ ಅತಿ ಪ್ರಮುಖ ಸಮಸ್ಯೆಯೊಂದರ ಪರಿಹಾರ ಕಾರ್ಯದಲ್ಲಿ ಯಶಸ್ಸು ಪಡೆದಂತೆ. ಆದುದರಿಂದ ನಮ್ಮ ಕಾರ್ಯಗಳಲ್ಲಿ ನಮಗೆ ಯಶಸ್ಸನ್ನು ಕರುಣಿಸುವಂತೆ ಆ ಪರಮಾತ್ಮನಲ್ಲಿ ನಾವು ಪ್ರಾರ್ಥಿಸುತ್ತೇವೆ.

(ಮುಗಿದುದು)

ಇದು ೨ನೇ ಪುಟದಲ್ಲಿಯ ಪ್ರಕಟಣೆಯನ್ನು ರದ್ದುಪಡಿಸುತ್ತದೆ.

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಕ್ರೋಧಿ — ವಿಶ್ವಾವಸು ಸಂಕ್ರಾಂತಿ

(ನಾಲ್ಕನೇ ಪುಟದಿಂದ)

ಗೆ ನೆಟ್ಟಗಿಲ್ಲಲ್ಲಾಂತ ತೋರುತ್ತೆ ..

'ಪೇಟೆಗೆ ಹೋಗೋದು, ಏನೇನೋ ಯೋಚಿಸೋದು ಇಲ್ಲಿ ಬಂದು .'

"ಸರಿಯಪ್ಪ, ಅಂತೂ ಇವತ್ತು ನಿನ್ನ ಬಾಯಿಯಿಂದ ಆಶೀರ್ವಾದ ಕೇಳ ಬೇಕಾಗಿದೇನ್ನ."

'ಪಾಪ, ಆದಕ್ಯೋಸ್ಕರ ಯೋಚನೆ ಯೇನು?"

'.........'

"ಚಿಂತಿಸಬೇಡಿ. ನೂವಾಗ್ಲೂ ನಿವ್ಮಿಂದ ಸಹಸ್ರ ನಾವೂವಳಿ ಪರನವಾಗೋವಾಗ ಇವತ್ತು ಮಾತ್ರ........'

"ಹೌದಪ್ಪ, ಸೋತಿದ್ದೇನೆ, ಸೋಲುಂಡಿದ್ದೇನೆಂತ ಆವಾಗ್ಲೇ ಒಪ್ಪಿಕೊಂಡು ಬಿಟ್ಟಿದ್ದೇನಲ್ಲಾ...."

'ಅಂತೂ ಒಂದು ಸತ್ಯವಾಯ್ತು...'

'ಏನು?"

'ಆದೇ ನೀವು, ಟೋಪಿಯವ್ರು ಏನು ಅವಾಂತ್ರ ಮಾಡಿದ್ರೂ ಕೇರಳದಲ್ಲಿ ಸೋತು ಹೋಗ್ಲೇ ಬೇಕಾಯ್ತು..."

"ಹ್ಞೂಂ.... ಏನೋ ಸರಕಾರ ರಚಿಸೋ ಆಶೆ ಇಲ್ಲಾನ್ನು....'

"ಆಶೆ ಇದ್ರೂ ಅದು ಸಾಧ್ಯವಾಗೋಲ್ಲ.."

"ಹಾಗೆ ಹೇಳೋಕೆ ಮತ್ಯಾರು ತ-ನೇ ಕಯೂರಿದ್ದಾರೆ?"

"ಯಾರೂಂತ ನೋಡಬೇಕು. ನಿನ್ಗೆ ಇವತ್ತೇ ಅರ್ಜಂಟಾದ್ರೆ..."

"ಏನು ಮಾಡೋದು ಹೇಳು. ಅಂತೂ ಕಾಂಗ್ರೆಸಿಗರು ಅಂದಿದ್ರು, ನಮಗೆ ಚುನಾವಣೆಯಲ್ಲಿ ಗೆಲ್ಲಲೇ ಬೇಕೆಂಬ ಆಗ್ರಹವಿಲ್ಲಾಂತ..."

"ಸರಿಯಾಯ್ತು ಬಿಡಿ, ನರಿ ದ್ರಾಕ್ಷಿ ಹುಳಿಯೆಂತ ತನಗೆ ಮೊದ್ಲೇ ಗೊತ್ತಿತ್ತೂಂತಂಚ ಹಾಗೆ...."

"ಅಂತೂ ಇಂದು ನಿನ್ನ ಸರ್ದಿ. ನೀನೇನು ಅನ್ನಬೇಕೋ ಎಲ್ಲಾ ಅಂದು ಬಿಡು. ಎಲ್ಲಾ ಅನಿಷ್ಟಗಳು ಕ್ರೋಧಿಯೊಂದಿಗೇನೇ ಹೋಗಿ ಬಿಡ್ಲಿ"

"ಅಲ್ರಿ, ಬರೋ ಸಂವತ್ಸರ?"

"ಬರೋರು ಬರೋದು ವಿಶ್ವಾವಸು"

"ಅಂದ್ರೆ. ವಿಶ್ವದಲ್ಲಿ ವಸು ತುಂಬುತ್ತೇಂತ ಅಲ್ವೆ?"

'ಹಾಗಂದುಕೊಳ್ಳ ಬಹುದು ..."

'ಅಂದ್ರೆ, ಬ್ಲ್ಯಾಕ್ ಮನಿಯೆಲ್ಲಾ ಮಣ್ಣಿನಡಿ ಸೇರಿ ಬಿಡುತ್ತೇಂತಾಯ್ತು .."

"ಯಾಕೆ?"

"ಯಾಕೇಂತಂದ್ರೆ? ಮಣ್ಣಿನ ನೇಲಿದ್ದರೆ ನಿಮ್ಮ ಟಿಟೀ ಬಿಡೋದಿಲ್ಲ ನೋಡಿ...."

'ಹ್ಞಾ ನಮ್ಮ ಅಂತೂ ನಿನ್ನ ತಲೆ ಎಲ್ಲೆಲ್ಲೊ ಓಡುತ್ತೇನ್ನ...."

"ಇಲ್ರಿ, ತಲೆ ಇಲ್ಲೇ ಕೊಂಕಳ ಮೇಲೇನೇ ಇದ ...'

'ತಲೆ ಓಡೋದಲ್ಲ, ಆದ. ಕಂಬಿಯಿಲ್ಲದರೈಲ ಮೇಲೆ ಉಳಿತಿರುತ್ತೆ..."

'ನೋಡೋಣ, ಕಂಬಿಯಿಲ್ಲದ ರೈಲು ಯಾರದ್ದೂಂತ. ಉಪನಯನ ಮುಗಿಸಿ ಬರೋದ್ರೊಳ್ಗೆ ಗೊತ್ತಾದೀತು..."

"ಏನು?"

"ನಾನಂದದ್ದು ನಿಜವೋ, ನೀವಂದದ್ದೋಂತ..."

"ನಿನ್ನದೇ ನಿಜವಾಗ್ಲಿ ಇವತ್ತಿಗೆ..."

'ಅಂದ್ರೆ, ಇವತ್ತಿಗೆ ಸೋತು ಹೋಯ್ತೂಂತ ತೋರುತ್ತೆ ..'

'ಅಲ್ವೆ, ನಿನಗೇನು ಹೇಳು, ಮಧ್ಯಾಹ್ನ ಸರಿ ಗೊರಕೆ ಹೊಡೆದಿದ್ದೀಯ?'

"ಪಾಪ, ರಾತ್ರೆಯಿಡಿ ಜಾಗರ, ಹಗಲೆಲ್ಲಾ ಕೆಲ್ಸ. ಅಲ್ಲ, ಹಾಗಿರುವಾಗ ಆ ಸುಡುಗಾಡ ಸಿನೆಮಾ ನೋಡೋಕೆ ಹೋದದ್ದಾದ್ರೂ ಯಾಕೇಂತ?"

"ಅಲ್ಲಾ, ಮುಗಿಯಿತೇ ಇಲ್ವೆ ನಿನ್ನ ಕೊಂಕು ಮಾತು!"

'ಹೌದಪ್ಪ, ನಾನನ್ನೋದೆಲ್ಲಾ ಕೊಂಕು, ಸೆಡಕು, ನೀವನ್ನೋದು ಮಾತ್ರ...'

"ಸಾಕು ಬಿಡೇ ಮಹಾರಾಯ್ತಿ ಸಾಕು. ಅಂತೂ ಸೋತು ಸುಣ್ಣವಾಗಿದ್ದೇನೆ. ಏನಾದ್ರೂ ಅನ ಗ್ರಹಿಸಿದ್ರೆ ಸಂತೋಷದಿಂದ ..."

'ಆಯ್ಯೋ ಆದಕ್ಕೆಲ್ಲಾ ಹೀಗಸ್ಬೇಕಿತ್ತೇ? ಬಂದ ಕೂಡ್ಲೆ ಒಂತಿದ್ರೆ ...'

'ಅಲ್ವೆ ಗೇಟಿನ ಸದ್ದಿನೊಡನೆಯೇ ಆ ಟಂ ಬಾಂಬು ಹಾರಿಸೋಕೆ ತೊಡಗಿದ್ದೀಯ? ನನಗೆ ಬೇಕು ಬೇಡಾಂತನ್ನೋ ಅವಕಾಶವಾದ್ರೂ ಎಲ್ಲಿತ್ತೂಂತ...."

'ಹ್ಞೂಂ ... ಆಗಂತೂ ಅವಕಾಶವಿಲ್ಲ ಈಗ ಇದೆ ತಾನೆ? ಅನ್ನಿ ನೋಡೋಣ ಬೇಕೂ ಬೇಡ?"

"ಆಯ್ಯೋ, ಅದೇನು ಕೇಳ್ತೀಯ? ಬೇಡಾಂತನ್ನೋಷ್ಟು ಇವ್ನಲ್ಲ ನೋಡು...'

"ಹ್ಞೂಂ ಬನ್ನಿ ಹಾಗಾದ್ರೆ... ಬಿಸಿಬಿಸಿ ತಿಳಿ ಗಂಜಿ ಆಗ್ಲೇ ಬೆಂದಿದೆ ..."

'ಹ್ಞೂಂ. ಬಂದೆ ಕಾಲಿಗೆ ತುಸ ನೀರು ಹೊಯ್ಕೊಂಡು...."

'ಜತೆಗೆ ಕೈಗೂ.."

'ಅದೆಲ್ಲಾ ನೀನು ಹೇಳ್ಬೇಕೆ! ಬುಡೆ ಬಂದೇ ಬಿಟ್ಟೆ ನೋಡ ..."

'ಆಯ್ಯೋ ನೀವೊಬ್ರು .."

'ಹ್ಞೂಂ... ನಾನೊಬ್ನೇ ಇಲ್ಲಿರೋದ...."

— ಗೋರಾ.

ಎಲ್ಲೆಲ್ಲಿ ಏನೇನು?

ಬೀಳ್ಕೊಡುವ ಸಮಾರಂಭ

ಕಾಳಾವರ ಪಂಚಾಯತಿನ ಕಾರ್ಯದರ್ಶಿ ಶ್ರೀ ಕೆ. ಎಲ್. ಉಡುಪರವರಿಗೆ ರೆವಿನ್ಯೂ ಇಲಾಖೆಯ ಸೆಕೆಂಡ್ ಡಿವಿಜನ್ ಗುಮಾಸ್ತರಾಗಿ ನೇಮಕವಾದ ಪ್ರಯುಕ್ತ ಸದ್ರಿಯವರಿಗೆ ಕಾಳಾವರ ಬೋರ್ಡ್ ಎ. ಶಾಲಾ ವಠಾರದಲ್ಲಿ ತಾ. 31-1-65ರಂದು ಶ್ರೀ ಕೆ. ರಾಜೀವ ಶೆಟ್ರ ಅಧ್ಯಕ್ಷತೆಯಲ್ಲಿ ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಲಾಯಿತು. ಸಭಿಕರಲ್ಲಿ ಸರ್ವಶ್ರೀ ಕೊಗ್ಗ ವಿಟ್ಠಲ ಶೆಟ್ಟಿ, ಅಲ್ತಾರು ಜಗನ್ನಾಥ ಸೆಟ್ಟಿ ಹಾಗೂ ಎಮ್ ಹಾಬಲ ಶೆಟ್ಟಿಯವರು ಸದ್ರಿಯವರ ಗುಣಗಾನ ಗೈದರು. ಮುಖ್ಯ ಅತಿಥಿ ಶ್ರೀ ಉಡುಪರು ತನ್ನ ಸೇವೆ ಮತ್ತು ಸತ್ಕಾರದ ವಿಚಾರವಾಗಿ ಕೆಲವು ಮಾತುಗಳನ್ನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪಂಚಾಯತ್ ಹಾಗೂ ಕಾರ್ಯದರ್ಶಿಯ ಜೊತೆಗಾರಿಕೆಯನ್ನು ವಿವರಿಸಿದ ಬಳಿಕ ಲಘೂಪಹಾರದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಈಜು ಕೊಳದ ಉದ್ಘಾಟನೆ

ಮಣಿಪಾಲ ಫೆ. 28—ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾಭ್ಯಾಸಕ್ಕೆ ಈ ಹಿಂದಿನ ಮೂರು ಯೋಜನೆಗಳಲ್ಲಿ ಕೊಟ್ಟದ್ದಕ್ಕಿಂತ ಹೆಚ್ಚು ಪ್ರಾಮುಖ್ಯತೆ ಕೊಡಲು ಉದ್ದೇಶಿಸಲಾಗಿದೆ ಎಂದು ಯೋಜನಾ ಆಯೋಗದ ಸದಸ್ಯ ಡಾ| ವಿ. ಕೆ. ಆರ್. ವಿ. ರಾವ್ ಇಂದಿಲ್ಲಿ ತಿಳಿಸಿದರು. ಇದೇ ಯೋಜನೆಗೆ 3600 ಕೋಟಿ ರೂಪಾಯಿಗಳನ್ನು ವಿನಿಯೋಗಿಸುವುದಾದಲ್ಲಿ 1200 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕೆ ಒದಗಿಸುವ ನಿರೀಕ್ಷೆ ಇದೆ ಎಂದೂ ಈ ಭಾರಿ ಮೊತ್ತವನ್ನು ವಯಸ್ಕರ ಶಿಕ್ಷಣ ಪ್ರಾದೇಶಿಕ ಭಾಷೆಗಳಲ್ಲಿ ಪುಸ್ತಕಗಳ ಪ್ರಕಟನೆ, ವೈಜ್ಞಾನಿಕ ಶಿಕ್ಷಣದ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳಿಗಾಗಿ ಬಳಸಲಾಗುವುದೆಂದೂ ಹೇಳಿದರು.

ಡಾ| ರಾವ್‌ರವರು ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಕೇಂದ್ರ ಸರಕಾರದ ಸಹಾಯದಿಂದ ನಿರ್ಮಿಸಿರುವ ಈಜು ಕೊಳವನ್ನು ಉದ್ಘಾಟಿಸುತ್ತಾ ದೇಶದ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯೂ ಬೇಕಾದಲ್ಲಿ ಎಲ್ಲಾ ರೀತಿಯಲ್ಲೂ ಸ್ವಪರಿಪೂರ್ಣತೆ ಅಗತ್ಯವೆಂದು ಒತ್ತಿ ನುಡಿದರು. ಕಾಲಕ್ರಮೇಣವಾಗಿ ವಿದೇಶಿ ಬಂಡವಾಳ ಮತ್ತು ತಾಂತ್ರಿಕ ಸಹಾಯ ತೆಗೆದುಕೊಳ್ಳುವುದನ್ನು ನಿಲ್ಲಿಸಿ ಜನರ ಚೆನ್ನಾಗಿ ಕೆಲಸ ಮಾಡುವಂತಾಗಬೇಕೆಂದೂ, ಸರಕಾರ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲವೆಂದೂ, ಅವರು ಅಭಿಪ್ರಾಯಪಟ್ಟರು. ಇಲ್ಲಿಯ ವಿದ್ಯಾಸಂಸ್ಥೆಗಳು ಶಿಕ್ಷಣಕ್ಕಾಗಿ ವೆಚ್ಚಮಾಡುವ ಹಣ ಫಲಕಾರಿ ಎಂಬುದನ್ನು ತೋರಿಸುತ್ತವೆಂದೂ, ಸಂಪನ್ಮೂಲಗಳು ಕಡಿಮೆ ಇರುವ ನಮ್ಮಂಥ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ವಿದ್ಯಾಭ್ಯಾಸ ಪ್ರಯೋಜನಕರವಾಗಿರಬೇಕೆಂದೂ ಡಾ|| ರಾವ್ ತಿಳಿಸಿದರು. ಡಾ| ಟಿ. ಎಂ. ಎ. ಪೈಯವರು ಈ ವಿದ್ಯಾಸಂಸ್ಥೆಗಳನ್ನು ಬಹಳ ಕಷ್ಟದಿಂದ ನಡೆಸಿಕೊಂಡು ಬರುತ್ತಾರೆಂದು ಅವರು ಹೇಳಿದರು

ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ|| ಟಿ. ಎಂ. ಎ. ಪೈಯವರು ಮಾತನಾಡಿ ಖಾಸಗಿ ಕಾಲೇಜುಗಳು ಉತ್ತಮ ಮಟ್ಟವನ್ನುಳಿಸಿಕೊಂಡು ಉಪಯುಕ್ತವೆನಿಸಿವೆ ಎಂದೂ, ಸರಕಾರ ಇಂತಹ ಸಂಸ್ಥೆಗಳಿಗೆ ಸಹಕಾರ ಕೊಡಬೇಕೆಂದೂ ತಿಳಿಸಿದರು.

ಕಾಲೇಜಿನ ಡೀನ್ ಡಾ| ಎ. ಕೃಷ್ಣರಾವ್‌ರವರು ಎಲ್ಲರನ್ನೂ ಸ್ವಾಗತಿಸಿದರು. ಈಜು ಕೊಳವನ್ನು ಸುಮಾರು 60,000 ರೂ ವೆಚ್ಚದಲ್ಲಿ ನಿರ್ಮಿಸಲಾಗಿದೆ, 30,000 ರೂ. ಗಳನ್ನು ಸರಕಾರ ಕೊಟ್ಟಿದೆ ಎಂದು ಡಾ|| ಆರ್. ವಿ. ರಾವ್‌ರವರು ಹೇಳಿದರು ಶ್ರೀ ಎಚ್. ಮುದ್ದಣ್ಣ ಶೆಟ್ಟಿಯವರು ಸಂದೇಶಗಳನ್ನು ಓದಿದರು. ಕ್ರೀಡಾ ಕಾರ್ಯದರ್ಶಿ ಶ್ರೀ ಸುಕುಮಾರನ್ ನಾಯರ್‌ರವರು ವಂದನೆಗಳನ್ನು ಸಲ್ಲಿಸಿದರು.

ಮಣ್ಣು ಪರೀಕ್ಷಾಲಯದ ಉದ್ಘಾಟನೆ

ಮಣಿಪಾಲ, ಮಾ. 1 ಮೈಸೂರು ರಾಜ್ಯದಲ್ಲಿ ಖಾಸಗಿ ರಂಗದಲ್ಲಿ ವ್ಯವಸ್ಥೆಗೊಳಿಸಿದ ಪ್ರಥಮ ಮಣ್ಣಿನ ಪರೀಕ್ಷಾಲಯವನ್ನು ಆಹಾರ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಇಂದಿಲ್ಲಿ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನಲ್ಲಿ ಉದ್ಘಾಟಿಸಿದರು.

ಭಾರತದಲ್ಲಿ ಎಕರೆಯೊಂದಕ್ಕೆ ಆಗುವ ಭತ್ತದ ಉತ್ಪನ್ನ ಪ್ರಪಂಚದಲ್ಲೇ ಅತಿ ಕಡಮೆಯಾಗಿದೆ ಎಂದೂ, ಬೆಳೆ ಹೆಚ್ಚಾಗಬೇಕಾದರೆ ಮಣ್ಣನ್ನ ಪರೀಕ್ಷೆ ಮಾಡುವುದು ಅಗತ್ಯವೆಂದೂ ಅವರು ಹೇಳಿದರು. ಮಣ್ಣಿನ ಪರೀಕ್ಷಾಲಯಕ್ಕೆ ಬಹಳ ಖರ್ಚಾಗುತ್ತದೆಂಬ ಅಂದಾಜು ಇದ್ದರೂ ಕಾಲೇಜಿನ ಉಪಕರಣಗಳನ್ನು ಬಳಸಿಕೊಂಡು ಇಲ್ಲಿ ಆರಂಭಿಸಲಾಗಿದೆ ಎಂದೂ ಅವರು ಹೇಳಿದರು. ಈ ಪರೀಕ್ಷಾಲಯದಿಂದ ದಕ್ಷಿಣ ಕನ್ನಡದ ರೈತರಿಗೆ ಸೇವೆ ಸಲ್ಲಿಸಿರುವ ಸಿಂಡಿಕೇಟ್ ಬ್ಯಾಂಕಿನ ವ್ಯವಸಾಯ ಆರ್ಥಿಕ ಇಲಾಖೆಯ ಕಾರ್ಯದ ಬಗ್ಗೆ ಅವರು ಮೆಚ್ಚಿಗೆ ಸೂಚಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ರಿಜಿಸ್ಟ್ರಾರ್ ಡಾ|| ಟಿ. ಎಂ. ಎ. ಪೈಯವರು ಒಳ್ಳೆಯ ಬೀಜ ಮತ್ತು ಗೊಬ್ಬರವನ್ನು ಉಪಯೋಗಿಸಿ ಹೆಚ್ಚು ಆಹಾರ ಉತ್ಪಾದಿಸಬೇಕೆಂದರು. ಕಾಲೇಜಿನ ಡೀನ್ ಡಾ| ಎ. ಕೃಷ್ಣರಾವ್ ಸಭಿಕರನ್ನು ಸ್ವಾಗತಿಸಿ ಒಳ್ಳೆಯ ಆರೋಗ್ಯ ದೊರಕಿಸುವಂತಹ ಒಳ್ಳೆಯ ಆಹಾರದ ಉತ್ಪಾದನೆಗಾಗಿ ಈ ಪರೀಕ್ಷಾಲಯವನ್ನು ಆಣಿಗೊಳಿಸಲಾಗಿದೆ ಎಂದರು. ಸಿಂಡಿಕೇಟ್ ಬ್ಯಾಂಕಿನ ಮುಖ್ಯಾಧಿಕಾರಿ ಶ್ರೀ ಕೆ. ಕೆ. ಪೈಯವರು ಸಂದೇಶಗಳನ್ನು ಓದಿದರು. ಬ್ಯಾಂಕಿನ ವ್ಯವಸಾಯ ಆರ್ಥಿಕ ಶಾಖೆಯ ಡಾ| ನಿರಂಜನ ಮೆಪ್ಪಾಡರವರು ಅಭಾರ ಮನ್ನಿಸಿದರು.

ಮೆಡಿಕಲ್ ಕಾಲೇಜ್ ವರ್ಧಂತಿ

ಮಣಿಪಾಲ, ರೋಗಿಗಳಿಗೆ ಸೇವೆ ಸಲ್ಲಿಸುವುದು ಮತ್ತು ರಾಷ್ಟ್ರದ ಹಿತವನ್ನು ವರ್ಧಿಸುವುದು ವೈದ್ಯಕೀಯ ವಿದ್ಯಾರ್ಥಿಗಳ ಮುಖ್ಯ ಧ್ಯೇಯಗಳಾಗಿರಬೇಕೆಂದು ಮುಂಬಯಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ| ಆರ್. ವಿ. ಸಾಠೆ ಇವರು ತಾ. 24-2-65ರಂದು ಕಸ್ತೂರ್‌ಬಾ ಮೆಡಿಕಲ್ ಕಾಲೇಜ್ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತಿಳಿಸಿದರು. ಡಾ| ಶ್ರೀಮತಿ ಕಾಶೀಬಾಯಿ ಸಾಠೆಯವರು ಪರಿಣತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಣೆ ಮಾಡಿದರು.

ಕಾಲೇಜಿನ ರಿಜಿಸ್ಟ್ರಾರ್ ಡಾ| ಟಿ.ಎಂ.ಎ. ಪೈಯವರು ಸ್ವಾಗತ ಭಾಷಣ ಮಾಡಿ ೧೯೫೩ರಲ್ಲಿ ಆರಂಭವಾದ ಈ ಕಾಲೇಜಿನಲ್ಲಿ ಕಲಿತ ಅನೇಕರು ಹೆಚ್ಚು ವೈದ್ಯರುಗಳು ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದರು.

ಕಾಲೇಜಿನ ಡೀನ್ ಡಾ| ಎ. ಕೃಷ್ಣರಾವ್ ವರದಿಯನ್ನೋದಿದರು. ವೈಸ್ ಪ್ರಿನ್ಸಿಪಾಲ್ ಡಾ| ಎಂ. ವಿ. ಚಾರಿಯವರು ಧನ್ಯವಾದ ಅರ್ಪಿಸಿದರು.

ವಾರ್ಷಿಕೋತ್ಸವ

ಮುಂಬಾಯಿ, ಬಾಲ್ಸಾ ಕಾಲೇಜಿನ ಕನ್ನಡ ಪ್ರೇಮಿ ಮಂಡಳಿಯ ವಾರ್ಷಿಕೋತ್ಸವವು ಇತ್ತೀಚೆಗೆ ಮುಂಬಾಯಿಯಲ್ಲಿ ಜರಗಿತು. ಕರ್ನಾಟಕದ ಖ್ಯಾತ ನಾಟಕ ಬರೆಹಗಾರರಾದ "ಶ್ರೀರಂಗರು" ಅಂದಿನ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಪ್ರೊ| ಸಿ. ಯಂ. ಕುಲಕರ್ಣಿಯವರು ಅಂದಿನ ಅಧ್ಯಕ್ಷತೆ ವಹಿಸಿದ್ದರು.

ಮೊದಲಿಗೆ, ಪ್ರೊ| ಶ್ರೀಮತಿ ಇಂದುದಾಂಡೇಕರ್, ಚೇರ್‌ಮೇನ್ ಇವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ, ಅವರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು. ಪ್ರಧಾನ ಕಾರ್ಯದರ್ಶಿ ಎಂ. ಪಿ ಅಸಾಳಿಗ್ರಾನಾ, ಇವರು ಮಂಡಳಿಯ ವರದಿಯನ್ನೊಪ್ಪಿಸಿದರು. ಮುಖ್ಯ ಅತಿಥಿಗಳ ಭಾಷಣದ ತರುವಾಯ, ವೈಸ್ ಚೇರ್‌ಮೆನ್, ಶ್ರೀ ಶಂಕರ ಪಕ್ಕಳ, ಇವರು ವಂದನಾರ್ಪಣೆಗೈದರು. ಕಾರ್ಯಕ್ರಮದ ಅಂಗವಾಗಿ, ಬೇಬಿ ರಾಣೀರಾವ್ ಇವರಿಂದ ನೃತ್ಯ, ಶ್ರೀ ಶಿವರಾಜ್ ಸುವರ್ಣ ಇವರಿಂದ ಬೇಡರ ನೃತ್ಯ, ಶ್ರೀ ನಾರಾಯಣಗುರು ಸ್ವಾಮಿ ಯಕ್ಷಗಾನ ಮಂಡಳಿಯವರಿಂದ ಯಕ್ಷಗಾನ ಬಯಲಾಟ ಹಾಗೂ ಇತರ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಶ್ರೀ ಬಿ ಡಿ. ಪಾಂಡೆ ಎಲ್.ಐ.ಸಿಯ ಹೊಸ ಚೇರ್ಮನರಾಗಿ ನೇಮಕ

ಜೀವವಿಮಾ ಕಾರ್ಪೊರೇಶನಿನ ಚೇರ್‌ಮೇನರಾಗಿ, ಶ್ರೀ ಬಿ. ಡಿ. ಪಾಂಡೆಯವರು ಕಳೆದ ತಾ. 3ರಂದು ಹಿಂದಿನ ಚೇರ್‌ಮೇನ್ ಶ್ರೀ ಬಿ ಕೆ. ಕೌಲರಿಂದ ಅಧಿಕಾರ ಸ್ವೀಕರಿಸಿದರು.

೪೭ ವರ್ಷ ವಯಸ್ಸಿನ ಶ್ರೀ ಪಾಂಡೆಯವರು ೧೯೩೮ರಲ್ಲಿ ಐ.ಸಿ.ಎಸ್ ಪದವಿ ಪಡೆದು, ರಾಜ್ಯ ಹಾಗೂ ಕೇಂದ್ರ ಸರಕಾರಗಳಲ್ಲಿ ಹಲವಾರು ಹುದ್ದೆಗಳಲ್ಲಿ ದುಡಿದಿದ್ದರು. ಜೀವವಿಮಾ ಕಾರ್ಪೊರೇಶನನ್ನು ಸೇರುವ ಮೊದಲು ಅವರು ಕೇಂದ್ರ ಸರಕಾರದ ಅರ್ಥ ಮಂತ್ರಿ ಶಾಖೆಯಲ್ಲಿ ಎಡಿಶನಲ್ ಸೆಕ್ರೆಟರಿಯಾಗಿ ಮತ್ತು ಬಸ್ಸ ನಿಯಂತ್ರಣದ ಆಡಳಿತದಾರರಾಗಿ ಕಾರ್ಯ ಮಾಡುತ್ತಿದ್ದರು.

ಹೊಸ ಚೇರ್‌ಮೇನ್‌ರು ಜೀವವಿಮಾ ಕಾರ್ಪೊರೇಶನಿನ ಬಹುಮುಖ ಪ್ರಗತಿಗೆ ಮಾರ್ಗದರ್ಶನ ನೀಡುವರೆಂದು ನಂಬಿ, ಅವರ ಹೊಸ ಹುದ್ದೆಯಲ್ಲಿ ಅವರಿಗೆ ಯಶ ದೊರೆಯಲೆಂದು ಹಾರೈಸುತ್ತೇವೆ

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ

ಮೈಸೂರು, ಫೆ. 27 ಎ. ಬಿ. ಶೆಟ್ಟರ ಸ್ಮಾರಕ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವವು ಸಂಸ್ಥಾನದ ಮುಖ್ಯ ನ್ಯಾಯಾಧೀಶ ಶ್ರೀ ಎಚ್. ಹೊಂಬೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ದಕ್ಷಿಣ ರೈಲ್ವೆಯ ಡಿವಿಜನಲ್ ಸೂಪರಿಂಟೆಂಡೆಂಟ್ ಶ್ರೀ ಪಿ. ಕೆ. ಸ್ವಾಮಿನಾಥನ್ ಮುಖ್ಯಾಯ ಭಾಷಣ ಮಾಡಿದರು. ನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸ್ವಾಗತ ಭಾಷಣ ಮಾಡುತ್ತಾ ಶ್ರೀ ಹೊಂಬೇಗೌಡರಿಗೆ ದಿವಂಗತ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಬಗ್ಗೆ ಇರುವ ಆತ್ಮೀಯ ಮೈತ್ರಿಯನ್ನು ವಿವರಿಸಿದರು. ಹಾಗೂ ಶ್ರೀ ಹೊಂಬೇಗೌಡರು ನಮ್ಮ ದೇಶದ ಉಚ್ಚ ನ್ಯಾಯಾಧೀಶರಾಗಲಿ ಎಂದು ಹಾರೈಸಿದರು. ಒಳ್ಳೆಯ ವಾಗ್ಮಿಗಳೂ ವಿದ್ವಾಂಸರೂ ಬಹು ಭಾಷಾ ಪಂಡಿತರೂ ಆದ ಶ್ರೀ ಸ್ವಾಮಿನಾಥನ್‌ರವರನ್ನು ಸಭೆಗೆ ಪರಿಚಯ ಮಾಡಿ ಕೊಟ್ಟರು.

ಶ್ರೀ ಸ್ವಾಮಿನಾಥನ್‌ರವರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ದೆಶೆಯಲ್ಲಿ ಕಾಲಹರಣ ಮಾಡದೆ ಜ್ಞಾನ ಸಂಪಾದನೆ ಮಾಡಿಕೊಳ್ಳಬೇಕು. ಜೀವನದ ಬಗ್ಗೆ ಜಿಜ್ಞಾಸೆಗಳು ಬೇಕು. ಜೀವನದ ಎಡರು ತೊಡರುಗಳನ್ನು ಧೈರ್ಯವಾಗಿ ಎದುರಿಸಬೇಕು. ಜೀವನದಲ್ಲಿ ಉತ್ತಮ ಆದರ್ಶಗಳನ್ನು ಇಟ್ಟುಕೊಳ್ಳಬೇಕು. ಜೀವನವನ್ನು ಸಂಪದ್ಭರಿತವಾಗಿರಿಸಿಕೊಳ್ಳಬೇಕು. ಎಲ್ಲಕ್ಕೂ ಮಿಗಿಲಾಗಿ ದೇಶಪ್ರೇಮವನ್ನು ಬೆಳೆಸಿಕೊಳ್ಳಬೇಕೆಂದು ಒತ್ತಿ ಹೇಳಿದರು.

ನಿಲಯದ ವಿದ್ಯಾರ್ಥಿಗಳು ಹಾಡುಗಳಿಂದ ಸಭಿಕರನ್ನು ಮನರಂಜಿಸಿದರು. ಮುಖ್ಯ ನ್ಯಾಯಾಧೀಶ ಶ್ರೀ ಹೊಂಬೇಗೌಡರು ತಮ್ಮ ಭಾಷಣದಲ್ಲಿ ದಿವಂಗತ ಎ. ಬಿ. ಶೆಟ್ಟರ ಆತ್ಮೀಯ ಸ್ನೇಹವನ್ನು ಸ್ಮರಿಸಿಕೊಂಡರು. ಅವರು ತಾವು ಸಾಮಾನ್ಯವಾಗಿ ಯಾವ ಸಭೆ ಸಮಾರಾಧನೆಗಳಿಗೂ ಹೋಗುವುದಿಲ್ಲ ಬಂದ ಆಹ್ವಾನಗಳನ್ನು ಸ್ವೀಕರಿಸುವುದಿಲ್ಲ. ಆದರೆ ನನಗೂ ಎ. ಬಿ. ಶೆಟ್ಟರಿಗೂ ಇದ್ದ ಮೈತ್ರಿಯಿಂದ ಇಲ್ಲಿಗೆ ಬಂದೆ. ಶ್ರೀ ಎ. ಬಿ. ಶೆಟ್ಟರ ಮಂತ್ರಿಪದವಿಯಲ್ಲಿದ್ದಾಗಲೇ ಅಸೆಂಬ್ಲಿ ಸದಸ್ಯತ್ವಕ್ಕೆ ನಿಲ್ಲಲಿಲ್ಲ: ಕಿರಿಯರಿಗೆ ಅವಕಾಶ ದೊರೆಯಲೆಂದರು. ಅವರ ಗೌರವಾರ್ಥವಾಗಿ ವುಡ್‌ಲ್ಯಾಂಡ್ಸ್ ಹೋಟೇಲಿನಲ್ಲಿ ಒಂದು ಸಮಾರಂಭ ಏರ್ಪಟ್ಟಿತ್ತು. ಆವರು ನನ್ನನ್ನು ನೋಡಿ ಆಶ್ಚರ್ಯದಿಂದ ನೀವು ಯಾವ ಸಮಾರಂಭಗಳಿಗೂ ಹೋಗುವುದಿಲ್ಲ, ಆದರೆ ಇಲ್ಲಿ ಇಂದು ಬಂದಿದ್ದೀರಿ ಎಂದರು. ನಾನು ಕೂಡಲೇ ಮಂತ್ರಿಯಾಗಿದ್ದು ಅಧಿಕಾರ ತ್ಯಾಗ ಮಾಡುವ ನಮ್ಮ ದೇಶದಲ್ಲಿ ಅತಿ ವಿರಳ. ಆದರೆ ತಾವು ಮಂತ್ರಿಪದವಿಯಲ್ಲಿ ಮುಂದುವರಿಯುವ ಅವಕಾಶವಿದ್ದರೂ ಕಿರಿಯರಿಗೆ ಅವಕಾಶವನ್ನು ಕಲ್ಪಿಸಿಕೊಡುವ ಸಲುವಾಗಿ ಅಸೆಂಬ್ಲಿಗೆ ನಿಲ್ಲುವುದಿಲ್ಲವೆಂದು ಹೇಳಿರುವಿರಾದ್ದರಿಂದ ನಾನು ಬಂದಿದ್ದೇನೆ ಎಂದು ಹೇಳಿದೆ ಎಂದರು. ವಿದ್ಯಾರ್ಥಿಗಳು ಜೀವನದಲ್ಲಿ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಅದೇ ಜೀವನಕ್ಕೆ ಸಂತೋಷವನ್ನೂ ಆನಂದವನ್ನೂ ಕೊಡತಕ್ಕದ್ದೆಂದು ಹೇಳಿದರು.

ಉಪಾಧ್ಯಕ್ಷ ಶ್ರೀ ಕೃಷ್ಣ ಶೆಟ್ಟರು ನಿಲಯದ ವಾರ್ಷಿಕ ವರದಿಯನ್ನು ಓದಿದರು. ಕಾರ್ಯದರ್ಶಿ ಶ್ರೀ ಎಂ. ಎ. ಇಸ್ಮಾಯಿಲ್ ವಂದನಾರ್ಪಣೆ ಮಾಡಿದರು. ಸಂದೇಶಗಳನ್ನು ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಎ. ಸಂಜೀವ ಶೆಟ್ಟರು ಓದಿದರು.

ಜಿಲ್ಲಾ ಕೈಗಾರಿಕಾ ಸಹಕಾರಿ ಬೇಂಕಿನ ಉದ್ಘಾಟನೆ

ಮಂಗಳೂರು, ಹೊಸತಾಗಿ ರೂಪುಗೊಂಡ ದಕ್ಷಿಣ ಕನ್ನಡ ಜಿಲ್ಲಾ ಕೈಗಾರಿಕಾ ಸಹಕಾರೀ ಬೇಂಕಿನ ಉದ್ಘಾಟನಾ ಸಮಾರಂಭವು ತಾ. 1ರಂದು ಸ್ಥಳೀಯ ಸಿ. ಪಿ. ಸಿ. ಸಭಾಭವನದಲ್ಲಿ ಬೇಂಕಿನ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವಾರವರ ಅಧ್ಯಕ್ಷತೆಯಲ್ಲಿ, ಶ್ರೀ ಟಿ. ಎ. ಪೈಯವರಿಂದ ನೆರವೇರಿತು.

ಪ್ರಾರಂಭದಲ್ಲಿ ಶ್ರೀಮತಿ ಒಕ್ಕೇವಿಯೂ ಅಲ್ಪುಕರ್ಕ್‌ರವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕುಡ್ವಾರವರು ಮಾತಾಡುತ್ತಾ ಬೇಂಕಿನ ಕಾರ್ಯಗಳನ್ನು ವಿವರಿಸಿ, ಜನತೆ ಅದರ ಸಂಪೂರ್ಣ ಪ್ರಯೋಜನ ಪಡೆಯಬೇಕೆಂದರು. ಶ್ರೀ ಪೈಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಸಂಸ್ಥೆಯ ಮುಖ್ಯ ಕಾರ್ಯಗಳೇನೆಂದು ತಿಳಿಸಿ, ಉತ್ತಮ ರೀತಿಯಿಂದ ಸಂಸ್ಥೆ ಮುಂದುವರಿಯಲೆಂದು ಹಾರೈಸಿದರು.

ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗಾ ಹಾಗೂ ಶ್ರೀ ಎಸ್. ನರ್ಸಪ್ಪಯ್ಯ, ಎಂ. ಎಲ್. ಸಿ. ಇವರು ಶುಭ ಹಾರೈಸಿ ಭಾಷಣ ಮಾಡಿದ ಬಳಿಕ, ಬೇಂಕಿನ ಉಪಾಧ್ಯಕ್ಷ ಶ್ರೀ ಎಂ. ರಂಗಾ ಇವರು ವಂದನೆ ಸಲ್ಲಿಸಿದರು.

ಶ್ರೀ ಎಲ್ಲಪ್ಪ ಅಜಿಲರ ನಿಧನ

ಕಾಫಿ ಪ್ಲಾಂಟರರೂ ಪ್ರಸಿದ್ಧ ಜಮೀನ್ದಾರರೂ ಆದ ಶ್ರೀ ಕನತ್ತಾರು ಎಲ್ಲಪ್ಪ ಅಜಿಲರು ತಾ. 25–2–65ರಂದು ಅಕಸ್ಮಿಕವಾಗಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ದೈವಭಕ್ತರೂ, ಸಾಹಸಿಗಳೂ, ಜನಪ್ರಿಯರೂ ಆಗಿದ್ದರು. ಹಲವು ಸಂಘ ಸಂಸ್ಥೆಗಳಿಗೆ ಸಹಾಯ ಮಾಡಿದ್ದರಲ್ಲದೆ ಸತತ ಉದ್ಯೋಗ ಪ್ರಿಯರಾಗಿದ್ದರು.

ಶ್ರೀ ಕೆ. ಮಂಜಪ್ಪ ರೈಗಳ ನಿಧನ

ಪುತ್ತೂರು ತಾಲೂಕಿನ ಪ್ರಸಿದ್ಧ ಬಂಟ ಸಮಾಜದ ಕೇನ್ಯಗುತ್ತು ಮಂಜಪ್ಪ ರೈಗಳು ಬೆಳ್ಳಾರೆ ಸಮೀಪದ ಬಾಳಿಲದಲ್ಲಿ ಸ್ವಗೃಹದಲ್ಲಿ ತಾ. 26–2–65ರಂದು ತಮ್ಮ 73ನೇ ವಯಸ್ಸಿನಲ್ಲಿ ದೈವಾಧೀನರಾದರು. ದಿವಂಗತರು ವಿದ್ಯಾಭಿಮಾನಿಗಳೂ ಹಲವಾರು ವಿದ್ಯಾ ಮತ್ತು ಇತರ ಸಂಸ್ಥೆಗಳಿಗೆ ಉದಾರ ಸಹಾಯ ಮಾಡಿದವರೂ ಗ್ರಾಮಾಭ್ಯುದಯಕ್ಕಾಗಿ ದುಡಿದವರೂ ಸರಳರೂ ದಯಾಳುವೂ ಆಗಿದ್ದ ಪ್ರಮುಖ ವ್ಯಕ್ತಿಯಾಗಿದ್ದರು.

ಫಿಶರೀಸ್ ಹೈಸ್ಕೂಲಿನ ವರ್ಧಂತಿ

ಮಲ್ಪೆ, ಸ್ಥಳೀಯ ಫಿಶರೀಸ್ ಹೈಸ್ಕೂಲು ಮತ್ತು ಹಾ|-ಪ್ರಾ| ಶಾಲೆಯ ವರ್ಧಂತ್ಯುತ್ಸವವು ಪೂರ್ಣಪ್ರಜ್ಞ ಕೊಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಮ್‌ದಾರರ ಅಧ್ಯಕ್ಷತೆಯಲ್ಲಿ ನೆರವೇರಿತು. ಹೆ| ಮಿ| ಶ್ರೀಮತಿ ಸಾರಾ ಎಸ್. ಅಮೀನರು ಸ್ವಾಗತ ಭಾಷಣ ಮಾಡಿ ವರದಿಯನ್ನೋದಿದರು. ಶ್ರೀಮತಿ ನಿರ್ಮಲಾ ಇನಾಮ್‌ದಾರರು ಪಾರಿತೋಷಕಗಳನ್ನು ಹಂಚಿದರು. ಜನಾಬ್ ಅಬ್ದುಲ್ ಗುಲಾಮರು ಸಂದೇಶಗಳನ್ನು ಓದಿದ ಬಳಿಕ ಅಧ್ಯಕ್ಷರ ಭಾಷಣವಾಗಿ ಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳಾದುವು. ಶ್ರೀ ಎ| ಸುಬ್ರಾಯ ಅಲ್ಸೆಯವರು ವಂದನೆಗಳನ್ನರ್ಪಿಸಿದರು.

‘ಕಸದಿಂದ ರಸೋತ್ಪತ್ತಿ’

ಅಳಿಕೆ, ತಾ. 4–3–65ರಂದು ಅಖಿಲ ಭಾರತ ಗ್ರಾಮೋದ್ಯೋಗ ಸಮಿತಿಯ ಸಲಹೆಗಾರರಾದ ಶ್ರೀ ಯಸ್. ಕೆ. ಕಲ್ಲಾಪುರ್‌ಜೀಯವರು ಧಾರವಾಡದ ಸುಪ್ರಸಿದ್ಧ ಸಮಾಜ ಸೇವಕ ಶ್ರೀ ಯನ್. ಜಿ. ನಾಯಕರ ಅಧ್ಯಕ್ಷತೆಯಲ್ಲಿ, ನೆಹರೂ ಸಭಾಭವನದಲ್ಲಿ “ಕಸದಿಂದ ರಸೋತ್ಪತ್ತಿ” ಎಂಬ ವಿಷಯದಲ್ಲಿ ಉಪನ್ಯಾಸವಿತ್ತರು. ಶ್ರೀಯುತರು ಬಾಳೆಯ ಕುರಿತು ಮಾತನಾಡುತ್ತಾ “ಇದು ದಕ್ಷಿಣ ಕನ್ನಡದಲ್ಲಿ ಧಾರಾಳ ಬೆಳೆಯುತ್ತದೆ. ಇದರ ಕಾಯಿ ಮತ್ತು ಎಲೆಗಳು ಮಾತ್ರ ಉಪಯೋಗಿಸಲ್ಪಟ್ಟು ಉಳಿದ ಬಹಳ ಭಾಗ ಕೊಳೆತು ಹಾಳಾಗಿ ರೋಗಗಳಿಗೂ ಮೂಲವಾಗುತ್ತದೆ. ಆದರೆ ಅದರಿಂದ ಬಹಳ ಉಪಯುಕ್ತ ವಸ್ತುಗಳನ್ನು ತಯಾರಿಸಬಹುದು. ಬಾಳೆಕಾಯಿಯಿಂದ ನಿರಪಾಯಕಾರಿಯಾದ “ಬನಾನಾ ಪೌಡರ್” ಮಾಡಬಹುದು. ಮಕ್ಕಳಿಗೆ ಹಾಗೂ ವಯೋವೃದ್ಧರಿಗೆ ಯೋಗ್ಯವಾದ ಆಹಾರ ತಯಾರಿಸಬಹುದು. ಕಾಂಡ ಮತ್ತಿತರ ಭಾಗಗಳಿಂದ ನಾರು ತೆಗೆದು “ಮೆರ್ಸ್ಯಿನ್ ರೋಪ್” “ವಾಲ್‌ಕ್ಲಾಸ್” “ಕಾರ್ಪೆಟ್” ಇತ್ಯಾದಿಗಳ ಉತ್ಪತ್ತಿ ಮಾಡಬಹುದು ಎಂದರು.

ಅಧ್ಯಕ್ಷರು ಮಾತನಾಡುತ್ತಾ ಹಾನಿಕಾರಿಯಾದ ವಸ್ತುಗಳಿಂದ ಎಂತೆಂತಹ ಉಪಯುಕ್ತ ವಸ್ತುಗಳನ್ನು ಪಡೆಯಬಹುದು ಎಂಬುದನ್ನು ವಿವರಿಸಿದರು. ಆರಂಭದಲ್ಲಿ ಶ್ರೀ ಯು. ಗಂಗಾಧರ ಭಟ್ಟರು ಸ್ವಾಗತಿಸಿದರು. ಶ್ರೀ ಕೆ. ಯಸ್. ಕೃಷ್ಣ ಭಟ್ಟರು ಧನ್ಯವಾದ ಸಮರ್ಪಿಸಿದರು.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ‘ಶ್ರೀಕೃಷ್ಣ ಸಂಧಾನ’ ಎಂಬ ಕಥಾಭಾಗದ ಯಕ್ಷಗಾನವು ಕಳೆದ ತಾ. 27ರಂದು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೀ. ಪ. ಕೇಶವ, ಬಾಬು ರೈ, ಬಿ. ವಿ. ವಿನೋದ, ಡಾ| ರಮಾನಂದ ಬನಾರಿ, ಅಪ್ಪುಪಾಟಾಳಿ, ಮಾಸ್ಟರ್ ಶಂಕರಪ್ಪ ಕೆ. ಎ. ಭಂಡಾರಿ, ಗೌಡ ಮೊದಲಾದವರು ಭಾಗವಹಿಸಿದ್ದರು. ಶ್ರೀ ನಾರಾಯಣದಾಸಯ್ಯರಿಂದ ಅಣಿಗೊಳಿಸಿದ ಈ ಸಮಾರಂಭದ ಕೊನೆಗೆ ಶ್ರೀ ಕೆ. ಬಿ. ರೈಗಳು ಧನ್ಯವಾದವಿತ್ತರು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಸಕಲ ಸದಸ್ಯರ ಸಭೆಯು ತಾ. 28–2–65 ರಂದು ಅಧ್ಯಕ್ಷ ಶ್ರೀ ಕೆ. ದೇಜು ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ವಾರ್ಷಿಕ ವರದಿ, ಲೆಕ್ಕ ಪುಸ್ತಕಗಳು ಹಾಗೂ ಆಡಿಟರ್‌ರವರ ವರದಿಯನ್ನು ಸಭೆಯ ಮುಂದೆ ಮಂಡಿಸಿದರು. ಅದು ಅಂಗೀಕೃತವಾದ ನಂತರ ಮುಂದಿನ ಸಾಲಿಗೆ ಈ ಕೆಳಗೆ ಕಂಡವರು ಕಾರ್ಯಕಾರೀ ಸಮಿತಿಗೆ ಚುನಾಯಿತರಾದರು.

ಶ್ರೀಗಳಾದ ಕೆ. ದೇಜು ಶೆಟ್ಟಿ, ಎನ್. ಬೈರಪ್ಪ, ಎ. ರಾಮಣ್ಣ, ಕೆ. ರಾಮಚಂದ್ರ ರಾವ್, ಕೆ. ಶಂಭು ಶೆಟ್ಟಿ, ಕೆ. ಹಿರಿಯಣ್ಣ ಶೆಟ್ಟಿ, ಎ. ಸಿ. ಶ್ರೀಕಂಠಯ್ಯ, ಕೆ. ವಾಸು ಶೆಟ್ಟಿ, ದಿವಾಕರ ಹೆಗ್ಡೆ.

(ಮೂರನೇ ಪುಟದಿಂದ)

ಕೃತಿಯನ್ನು ಪ್ರಕಟಿಸಿಲ್ಲ; ಹಾಗೆ ಪ್ರಕಟಿಸುವ ಅಭಿಲಾಷೆಯೂ ಅವರಿಗಿಲ್ಲ. ಉತ್ತಮ ಮಟ್ಟದ ಕವಿಗಳವರು; ಏಕೆಂದರೆ, ಅವರದು ಕವಿ ಹೃದಯ. ಅವರು ಕವಿತೆಗಳನ್ನು ಬರೆದಿದ್ದಾರೆ, ಕತೆಗಳನ್ನು ಹೆಣೆದಿದ್ದಾರೆ, ಕಾದಂಬರಿಯ ರಂಗಕ್ಕೂ ಕಾಲಿಟ್ಟಿದ್ದಾರೆ. ಪತ್ರಿಕೋದ್ಯಮದಲ್ಲಿ ಇವರದು ಎತ್ತಿದ ಕೈ. ಪ್ರಾರಂಭದಲ್ಲಿ ‘ರಾಷ್ಟ್ರಬಂಧು’ವಿನ ಬಂಧುವಾಗಿದ್ದು ಕೆಲವರ್ಷಗಳಿಂದ ‘ರಾಷ್ಟ್ರಮತ’ದ ಸಂಪಾದಕರಾಗಿದ್ದಾರೆ. ಇವರ ಲೇಖನಿ ಸಮಾಜದ ಲೋಪದೋಷಗಳನ್ನು ಸರಿಪಡಿಸುವಲ್ಲಿ ಇಂದಿಗೂ ಹಿಂಜರಿದಿಲ್ಲ. ನಿಸ್ಪೃಹರೂ ನಿರಾಡಂಬರ ಶೀಲರೂ ಆದ ಕಡೆಂಗೋಡ್ಲುರವರು ಯಾವ ಸಮ್ಮಾನವನ್ನೂ ಬಯಸುವವರಲ್ಲ. ತೆರೆಯ ಮುಂದೆ ಬರಬೇಕೆಂಬ ಹೇರಾಸೆಯೂ ಅವರಲ್ಲಿಲ್ಲ. ಉತ್ತರ ಕನ್ನಡದಲ್ಲಿ ನಡೆಯುವ ಈ ವರ್ಷದ ಸಾರಸ್ವತ ಉತ್ಸವದಲ್ಲಿ ಕಡೆಂಗೋಡ್ಲುರವರನ್ನು ಅಗ್ರಾಸನಕ್ಕೇರಿಸುವುದು ಸಂತೋಷದ ಸುದ್ದಿ. ಇದಕ್ಕಾಗಿ ನಾವು ಸ್ವಾಗತ ಸಮಿತಿಯನ್ನೂ ಕನ್ನಡ ಸಾಹಿತ್ಯ ಪರಿಷತ್ತನ್ನೂ ಶ್ರೀ ಭಟ್ಟರನ್ನೂ ಅಭಿನಂದಿಸುತ್ತೇವೆ. ಲಿಪಿ ಬಲ್ಲವರೆಲ್ಲರೂ ಸಾಹಿತಿ–ಕವಿಯಾಗಬಹುದಾದ ನವ್ಯಯುಗದ ನವೋದಿತರಿಗೆ ಶ್ರೀಯುತರು ಮಾರ್ಗದರ್ಶನ ಮಾಡಿ ಉತ್ತಮ ಗುಣ ಸಹಿತವಾದ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಕ ಶಕ್ತಿ ನೀಡುವುದು ಖಂಡಿತ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹಿಂಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಚುನಾವಣೆ

(ಎರಡನೇ ಪುಟದಿಂದ)

ಧೈರ್ಯದಿಂದ, ಚಟುವಟಿಕೆಯಿಂದ ಗಳಿಸಿದ್ದನು.

ದಿವಸಗಳು ಬಹು ಬೇಗನೆ ಉರುಳಿ ಹೋಗುತ್ತಿದ್ದವು. ಚುನಾವಣಾ ದಿವಸ ಸಮೀಪವಾದಂತೆ ಮನೆಯಲ್ಲಿ ಪರೀಕ್ಷೆಯ ವಾತಾವರಣ ಹರಡತೊಡಗಿತ್ತು.

ರಾಜೀವನ ಗೆಳೆಯರು ರಾಮುವಿನ ಬಗ್ಗೆ ಪ್ರಶಂಸೆ ಮಾಡತೊಡಗಿದರು. "ಏನು ಕೆಲಸ ಮಾಡುತ್ತಿದ್ದಾನೆ! ಎಷ್ಟು ಚುರುಕಾಗಿದ್ದಾನೆ!" ಎನ್ನುವರು.

ರಾಜೀವನಿಗೆ, ತಮ್ಮನ ಗುಣದ ಹೊಸ ಪರಿಚಯವಾದಂತೆ ಅವನ ಬಗ್ಗೆ ಆದರ ಬೆಳೆಯತೊಡಗಿತು.

ಮೀನಾ ಕೂಡಾ ತನ್ನ ಗೆಳತಿಯರೊಡನೆ ರಾಜೀವನ ಬಗ್ಗೆ ಅಭಿಮಾನದ ಮಾತುಗಳನ್ನಾಡಿ, ಅವರ ಅಣ್ಣಂದಿರು ಕಾಲೇಜಿನಲ್ಲಿ ಚುನಾವಣೆಯಲ್ಲಿ ಸಹಾಯ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದಳು.

ಇದನ್ನರಿತ ರಾಜೀವನು, ಮೀನಾಳಿಗೆ ತಾನು ಅದೆಷ್ಟು ಬಾರಿ ಗದರಿಸಿದ್ದೆನು! ನಿರಾಶೆಗೊಳಿಸಿದ್ದೆನು! ಎಂದುಕೊಳ್ಳುತ್ತಿದ್ದನು. ಅವಳ ಸಹೃದಯತೆಯನ್ನರಿತ, ತಂಗಿಯ ಬಗ್ಗೆ ಹಿಂದೆಂದೂ ಇಲ್ಲದ ಪ್ರೀತಿ ತಾಳಿದನು.

ತಾಯಿ ಮತ್ತು ತಂದೆ ಕೂಡಾ ಮಗನ ಇದಿರಾದ ಈ ಪ್ರಸಂಗದಲ್ಲಿ ತಮ್ಮಿಂದ ಸಾಧ್ಯವಾದಷ್ಟು ಪ್ರೋತ್ಸಾಹಕರ ಸಲಹೆ ಹೇಳುತ್ತಿದ್ದರು. ಹೀಗೆ ಕುಟುಂಬದಲ್ಲಿ ಹಿಂದೆಂದೂ ಇಲ್ಲದ ಒಂದು ಒಗ್ಗಟ್ಟು ಉಂಟಾಗಿತ್ತು.

ಚುನಾವಣೆಯ ಹಿಂದಿನ ದಿನ ರಾಜೀವನು ಮನೆಗೆ ಮರಳುವಾಗ ರಾತ್ರಿ ತಾಸು ಹತ್ತರ ಮೇಲಾಗಿತ್ತು. ರಾಮು ಅಣ್ಣನನ್ನು ಕಾದು ನಿಂತು ಜತೆಯಲ್ಲಿಯೇ ಬಂದನು. ಮೀನಾ ಅವರೀರ್ವರ ಆಗಮನವನ್ನು ತಾಯಿಯೊಡನೆ ಇದಿರು ನೋಡುತ್ತಿದ್ದಳು.

"ಇಂದು ಕಾಲೇಜಿನಲ್ಲಿ ವಾತಾವರಣ ಹೇಗಿದೆ?" ಎಂದು ಪ್ರಶ್ನಿಸಿದಳು ತಾಯಿ.

"ರಂಗಣ್ಣನಿಗೇ ವಿಜಯವಾಗಬಹುದು"

"ಅದೇನು?"

"ಅವನಿಗೆ ಹಿತಚಿಂತಕರೂ, ಗೆಳೆಯರೂ ಅಸಂಖ್ಯರಾಗಿರುವರು" ರಾಜೀವ ಉತ್ತರಿಸಿದ.

ಮಾತನ್ನು ಮುಂದುವರಿಸುತ್ತಾ, "ಅವನಲ್ಲಿ ಒಂದು ತರಹದ ಆಕರ್ಷಣೆ ಇದೆ. ಜನಪ್ರಿಯನಾಗುವ ಗುಣವಿದೆ"

"ನೀನು ಅವನ ಬಗ್ಗೆ ಎಷ್ಟು ಅಭಿಮಾನದಿಂದ ಮಾತನಾಡುತ್ತಿರುವೆ?"

"ಗುಣಕ್ಕೆ ಮತ್ಸರವಿದೆಯೆ? ಪ್ರತಿಸ್ಪರ್ಧಿಯಾದರೇನು? ವಿಶೇಷ ಗುಣ ನಡತೆಗಳನ್ನು ಒಪ್ಪಿಕೊಳ್ಳಬೇಡವೆ?"

ಮೀನಾಳಿಗೆ ಅಣ್ಣನಲ್ಲಿ ಹದಿನೈದು ದಿವಸಗಳಲ್ಲಾದ ಪರಿವರ್ತನೆ ತಿಳಿದು ಬಂತು. ಇತರರ ಬಗ್ಗೆ ತೋರುತ್ತಿದ್ದ ಅವನ ಅನಾಸಕ್ತಿ ಈಗ ಇರಲಿಲ್ಲ. ಎಲ್ಲರ ಬಗ್ಗೆ ಅಭಿಮಾನ, ಪ್ರೇಮ ಜಾಗೃತವಾಗಿತ್ತು. ಒಂದೇ ಒಂದು ಘಟನೆಯಿಂದ ಮನುಷ್ಯನಲ್ಲಿ ಬದಲಾವಣೆಯಾಗಲು ಸಾಧ್ಯವಿದೆ ಎನಿಸಿತು.

ಹಿಂದೆ ಎಂದೂ ಬಾರದಷ್ಟು ಮಿತ್ರರು ಈಗ ಮನೆಗೆ ಬರುತ್ತಿದ್ದರು. ರಾಜೀವ ಹಿಂದೆ ಮನೆ ಬಿಟ್ಟು ಹೊರಹೋಗುತ್ತಿರಲಿಲ್ಲ. ಈಗ ಅವನು ಹಿಂದಿನ ರಾಜಣ್ಣನಾಗಿರಲಿಲ್ಲ. ಎಲ್ಲರ ಮೇಲೂ ವಾತ್ಸಲ್ಯ ತೋರುತ್ತಿದ್ದನು. ಇದೇ ತರಹ ಅವನು ಚುನಾವಣೆ ಮುಗಿದ ನಂತರವೂ ಇರಬಹುದೆ?

ಚುನಾವಣೆಯ ದಿನ. ನಿರೀಕ್ಷಣೆಯ ದಿನ. ಸಂಜೆಯಾಯಿತು. ಕತ್ತಲಾಗತೊಡಗಿತು. ಫಲಿತಾಂಶ ತಿಳಿಯಿತು. ರಂಗಣ್ಣ ವಿಜಯ ಹೊಂದಿದ್ದನು. ಆದರೆ ರಾಜೀವನ ಮೊಗದಲ್ಲಿ ಬೇಸರದ ಛಾಯೆ ಇರಲಿಲ್ಲ. ನಿರಾಶೆಯ ಕಾರ್ಮೋಡ ಕವಿಯಲಿಲ್ಲ. ಬದಲು ಒಂದು ಪರೀಕ್ಷೆಯಲ್ಲಿ ಉತ್ತೀರ್ಣನಾದಂತೆ ಹಗುರ ಹೃದಯಿಯಾಗಿ ಪ್ರಸನ್ನಮುಖಿಯಾಗಿ ರಂಗಣ್ಣನನ್ನು ಅಭಿನಂದಿಸಿ ಗೆಳೆಯರನ್ನು ಬೀಳ್ಕೊಂಡು ಮನೆಗೆ ಬಂದನು.

ಮೀನಾಳಿಗೂ, ರಾಮುವಿಗೂ ದೊಡ್ಡ ನಿರಾಶೆಯಾಗಿತ್ತು. ಆದರೆ ಅಣ್ಣನ ಗೆಲುವಿನ ಮುಖದ ಇದಿರು ಅವರ ಬೇಸರ ಮಾಯವಾಯಿತು.

"ಈ ಚುನಾವಣೆಯಲ್ಲಿ ನಾನು ಗೆದ್ದರೂ, ಸೋತರೂ ಒಂದೇ ಎಂದು ನಿರ್ಧರಿಸಿದ್ದೆನು. ನನ್ನನ್ನು ನಂಬಿ ನಿಲ್ಲಿಸಿದ ನನ್ನ ಕೆಲವು ಗೆಳೆಯರ ಯುಕ್ತಿಗೆ ನಾನು ಅವರ ಮೇಲೆ ಒಂದಿನಿತೂ ಅಸಮಾಧಾನ ಪಡುವುದಿಲ್ಲ. ನನಗೆ ಹಲವು ಅನುಭವಗಳು ದೊರೆತುವು. ಅವೇ ನನ್ನ ಬಾಳಿಗೆ ಮಾ. ನನ್ನನ್ನು ಅವು ತಿದ್ದಿ ಒಂದು ಮಾನವನನ್ನಾಗಿ ಮಾಡಿರುವುವು."

ರಾಜೀವನ ಮನಸ್ಸಿನಲ್ಲಿ ಮೂಡಿದ್ದ ಯೋಚನೆಗಳನ್ನು ಮನೆಯವರಿಗೆ ತಿಳಿಸಿದಾಗ ಮೀನಾಳಿಗೆ ಅಣ್ಣನಲ್ಲಿ ಆದ ಪರಿವರ್ತನೆ ಚಿರವಾಗಿ ಉಳಿಯುವುದು ಎಂದಾಯಿತು. ಇದು ಅವನ ಮುಂದಿನ ವ್ಯಕ್ತಿತ್ವದ ವಿಕಾಸಕ್ಕೆ ಇಟ್ಟ ಮೊದಲ ಹೆಜ್ಜೆ ಎಂದು ಭಾಸವಾಯಿತು.

ಗೃಹಿಣಿಯರಿಗೆ ಸಲಹೆ

ಹಿತ್ತಲಲ್ಲಿ ತರಕಾರಿ ಬೆಳೆಯಿರಿ

ಪ್ರಪಂಚದ ಯಾವ ಮೂಲೆಯನ್ನು ತಿರುಗಿ ನೋಡಿದರೂ ಇಂದು ಅನ್ನದ ಕೂಗನ್ನು ಕೇಳುತ್ತಿದ್ದೇವೆ. ಅಭಾವದ ಹಾಹಾಕಾರವನ್ನು ಕೇಳುತ್ತಿದ್ದೇವೆ. ಅಥವಾ ಪವೇರ್ಪಟ್ಟಾಗ ಕೇವಲ ಸರಕಾರವನ್ನು ಬಯ್ಯುತ್ತಾ ಕುಳಿತು ಬಿಡುವುದರಿಂದ ಕಾರ್ಯ ಸಾಧನೆಯಾಗಲಾರದೆಂದು ಡಚ್ ಹಿರಿಯರೊಬ್ಬರು ತಿಳಿಸಿದ್ದಾರೆ. ಆಹಾರಾಭಾವವನ್ನು ತೀರಿಸುವುದರಲ್ಲಿ ಒಬ್ಬೊಬ್ಬನದೂ ಮಹತ್ವದ ಪಾತ್ರವಿದೆ.

ಇಪ್ಪತ್ತನೆಯ ಶತಮಾನದಲ್ಲಿಯೂ ಎಲ್ಲಿಯಾದರೂ ಯಾರಾದರೂ ಹಸಿವಿನಿಂದ ಸತ್ತರೆಂದು ತಿಳಿದರೆ, ಅದಕ್ಕಿಂತ ನಾವು ತಲೆ ತಗ್ಗಿಸಬೇಕಾದ ವಿಷಯವು ಬೇರೊಂದಿರಲಾರದು. ಅಂತೆಯೇ, ಹಸಿವಿನ ಮೂಲೋಚ್ಚಾಟನೆ ಮಾಡಬೇಕೆಂದು ವಿಶ್ವಸಂಸ್ಥೆಯು ಎಲ್ಲಾ ದೇಶಗಳಿಗೂ ಆದೇಶವಿತ್ತಿದೆ.

ವಿಶ್ವ ಸಂಸ್ಥೆಯ ಕರೆಯನ್ನು ಮನ್ನಿಸಿ, ನೆದರ್‌ಲ್ಯಾಂಡ್ಸಿನಲ್ಲಿ ಕೆಲವಾರು ಹೊಸವಿಧಾನಗಳನ್ನು ಜಾರಿಗೆ ತರಲಾಗಿದೆ. ಮೊಟ್ಟಮೊದಲನೆಯದಾಗಿ, ಹಾಲೆಂಡಿನ ಎಲ್ಲೆಡೆಯೂ, "ಮನೆಗಳ ಮುಂಭಾಗ, ಹಿಂಭಾಗಗಳಲ್ಲಿ ತೋಟಗಳನ್ನು ಬೆಳೆಸಿರಿ." ಎಂಬ ಚಳುವಳಿಯನ್ನು ನಡೆಸಲಾಗುತ್ತಿದೆ. ಡಚ್ಚರು ಇದನ್ನು ಕೇವಲ ತಮ್ಮ ನಾಡಿನಲ್ಲಿ ಮಾತ್ರ ಜಾರಿಯಲ್ಲಿಡದೆ, ಹೊರ ದೇಶಗಳಿಗೂ ಹೋಗಿ, ಅಲ್ಲಿಯೂ ಈ ಚಳುವಳಿಯನ್ನು ಅನುಷ್ಠಾನಕ್ಕೆ ತರುವಂತೆ ಹುರಿದುಂಬಿಸುತ್ತಿದ್ದಾರೆ.

ಬಹು ಹಿಂದಿನ ಕಾಲದಿಂದಲೂ, ಹಾಲೆಂಡ್ ದೇಶವು ತೋಟಗಾರಿಕೆಗೆ ಹೆಸರಾಂತ ದೇಶವೆನಿಸಿಕೊಂಡಿದೆ. ಆದ್ದರಿಂದಲೇ, ಹಸಿವಿನಿಂದ ವಿಮೋಚನೆ ಪಡೆಯಲು ತೋಟಗಾರಿಕೆಯನ್ನು ಆಶ್ರಯಿಸುವುದೇ ಉತ್ತಮ ಮಾರ್ಗವೆಂದು ಹಾಲೆಂಡಿನ ಜನರಿಗೆ ಅನ್ನಿಸಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಶರೀರದ ಬಲಸಂವರ್ಧನೆಗೆ ಸತ್ವಯುತವಾದ ತರಕಾರಿ, ಕಾಯಿಪಲ್ಯೆಗಳ ಆವಶ್ಯಕತೆಯು ಬಹಳವಾಗಿದೆಯೆಂದು ತಿಳಿದುಕೊಂಡ ಡಚ್ಚರು, ಒಂದೊಂದು ಮನೆಯ ಕೈದೋಟಗಳಲ್ಲಿಯೂ ತರಕಾರಿಗಳನ್ನು ಹೆಚ್ಚು ಹೆಚ್ಚಾಗಿಯೇ ಬೆಳೆಸುತ್ತಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯು ಹಸಿವಿನಿಂದ ವಿಮೋಚನೆಯನ್ನು ಪಡೆಯಬೇಕೆಂದು ಪ್ರಣಾಳಿಕೆಯನ್ನು ಸಲ್ಲಿಸಿದೊಡನೆ, [illegible]ರಲ್ಲಿ ಈ ಗೃಹ ತೋಟಗಾರಿಕೆಯನ್ನು ಹಾಲೆಂಡಿನಲ್ಲಿ ಆರಂಭಿಸಲಾಯಿತು. ಪೌಷ್ಟಿಕ ಆಹಾರವು ಸಾಕಷ್ಟಿಲ್ಲದ ಅನಭಿವೃದ್ಧಿ ದೇಶಗಳಲ್ಲಿನ ಒಂದೊಂದು ಮನೆಯಲ್ಲಿಯೂ ಈ ಕಾರ್ಯವನ್ನು ಆಚರಣೆಗೆ ತಂದರೆ, ಆಹಾರದ ಕೊರತೆಯು ಎಷ್ಟೋ ಮಟ್ಟಿಗೆ ತೀರೀತು.

ಉತ್ತರ ಆಫ್ರಿಕಾ, ಪಶ್ಚಿಮ ಆಫ್ರಿಕಾದ ಅನೇಕ ದೇಶಗಳಲ್ಲಿ ಆಹಾರವು ಒಂದು ಬೃಹತ್ಸಮಸ್ಯೆಯಾಗಿದೆ. ಪ್ರೋಟೀನು ಸಾಕಷ್ಟಿರುವ ಮಾಂಸ, ಮೀನು, ಕಾಯಿಪಲ್ಯೆಗಳು ಸಿಗುವುದೇ ಅಲ್ಲಿ ದುರ್ಲಭ. ಹೀಗಾಗಿ ಅಲ್ಲಿ ಮರಣ ಸಂಖ್ಯೆಯು ಏರುತ್ತಲೇ ನಡೆದಿದೆ. ಈ ದೇಶಗಳ ಒಂದೊಂದು ಮನೆಯಲ್ಲಿಯೂ ಕೈದೋಟಗಳಿದ್ದರೂ, ಪ್ರೋಟೀನು ಸಾಕಷ್ಟಿಲ್ಲದ ತರಕಾರಿಗಳನ್ನೇ ಅಲ್ಲಿ ಬೆಳೆಯಲಾಗುತ್ತಿದೆ. ಅಂತಹವುಗಳಿಗೆ ಬದಲು ಪೌಷ್ಟಿಕಾಂಶ ಹೆಚ್ಚಾಗಿರುವ ಹೆಚ್ಚು ಪ್ರೋಟೀನನ್ನೊಳಗೊಂಡ ತರಕಾರಿಗಳನ್ನು ಬೆಳೆಸುವುದರಿಂದ ಅರ್ಧದಷ್ಟು ಸಮಸ್ಯೆಯನ್ನು ಗೆಲ್ಲಬಹುದೆಂದು ಡಚ್ ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ಇದೇ ಕಾರಣದಿಂದ, ಡಚ್ ತಜ್ಞರು ಆಫ್ರಿಕಾದ ಈ ದೇಶಗಳಿಗೆ ಹೋಗಿ ಮನೆಯಂಗಳದಲ್ಲಿ ಸತ್ವಯುತ ಆಹಾರವನ್ನು ಪಡೆಯುವ ಬಗ್ಗೆ ಪ್ರಚಾರವನ್ನು ಕೈಗೊಂಡಿದ್ದಾರೆ.

ಹಲವು ಬಗೆಯ ಹೊಸ ತರಕಾರಿ ಹಣ್ಣುಹಂಪಲುಗಳನ್ನು ಮನೆಯ ಕೈದೋಟಗಳಲ್ಲಿಯೂ ಹಿತ್ತಲುಗಳಲ್ಲಿಯೂ ಬೆಳೆಯುವುದು ಹೇಗೆ ಎಂದು ಹಾಲೆಂಡಿನಿಂದ ಆಫ್ರಿಕಾಕ್ಕೆ ತೆರಳಿರುವ ಡಚ್ ಪರಿಣತರು ಆಫ್ರಿಕಾದ ನಗರ, ಹಾಗೂ ಗ್ರಾಮವಾಸಿಗಳಿಗೆ ತಿಳಿಸಿಕೊಡುತ್ತಿದ್ದಾರೆ. ಈ ಹೊಸ ಮಾರ್ಗವನ್ನನುಸರಿಸಿ, ತಕ್ಕ ಫಲವನ್ನು ಕಾಣಲು ಆರು ತಿಂಗಳುಗಳ ಕಾಲ ಬೇಕು.

ಈ ಪ್ರಚಾರ, ಪ್ರಯಾಣ ಮುಂತಾದವುಗಳನ್ನೊಳಗೊಂಡ ಯೋಜನೆಗೆ ಸಾಕಷ್ಟು ಹಣದ ಆವಶ್ಯಕತೆಯಿದೆ. ಇದಕ್ಕಾಗಿಯೇ ಹಾಲೆಂಡಿನಲ್ಲಿ ನಿಧಿಸಂಗ್ರಹಣೆಯನ್ನು ಮಾಡಲಾಗುತ್ತಿದೆ. ಈಗಾಗಲೇ ಸಂಗ್ರಹಿಸಲ್ಪಟ್ಟಿರುವ ನಿಧಿಯ ಬಹು ಹೆಚ್ಚಿನ ಭಾಗವು ಇಪ್ಪತ್ತು ವರ್ಷಗಳಿಗೊಳಪಟ್ಟ ತರುಣ ತರುಣಿಯರು ಕೂಡಿಸಿದುದೇ ಆಗಿದೆ. ನೆದರ್‌ಲ್ಯಾಂಡ್ಸಿನ ಈ ಯೋಜನೆಯನ್ನು ವಿಶ್ವಸಂಸ್ಥೆಯು ಆದಿಯಾಗಿ ಎಲ್ಲಾ ದೇಶಗಳೂ ಬಹುವಾಗಿ ಪ್ರಶಂಸಿಸಿವೆ.

ಈಚೆಗೆ ನಮ್ಮ ಮೈಸೂರು ರಾಜ್ಯದ ಮಂತ್ರಿಗಳೂ ಇದೇ ರೀತಿಯ ಸಲಹೆಯನ್ನು ನಮ್ಮ ನಾಡಿನ ಗೃಹಿಣಿಯರ ಮುಂದಿಟ್ಟಿದ್ದಾರೆ. ವ್ಯರ್ಥ ಹರಟೆ ಕೊಂಕು ಮಾತುಗಳಲ್ಲಿ ಕಾಲಯಾಪನೆ ಮಾಡದೆ ಮನೆಗಳಲ್ಲಿ ತರಕಾರಿ ತೋಟಗಳನ್ನು ಬೆಳೆಸಿರಿ ಎಂಬುದೇ ಆ ಸಲಹೆ. ಈಗ ತಲೆದೋರಿರುವ ಆಹಾರಾಭಾವ ಸಧ್ಯದಲ್ಲಿಯೇ ತೀರುವಂತಹುದೂ ಅಲ್ಲ. ಆದ್ದರಿಂದ ನಮ್ಮ ದೇಶದ ಒಟ್ಟು ಗೃಹಿಣಿಯರು ಈ ವಿಷಯಕ್ಕೆ ಪೂರ್ಣ ಮನ್ನಣೆ ನೀಡಿದಲ್ಲಿ ಸಮಸ್ಯೆಯು ಎಷ್ಟೋ ಪರಿಹಾರವಾಗುವುದು.

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

NAVAYUGA 11-3-1965

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೧-೩-೬೫ರಿಂದ ೧೭-೩-೬೫ರ ವರೆಗೆ

೧. ಮೇಷ

ನೀವೆಷ್ಟೇ ಮಿತವ್ಯಯಿಗಳಾಗಿದ್ದರೂ ಕೂಡ ಇಂದು ಆಯಕ್ಕಿಂತ ದ್ವಿಗುಣ ವ್ಯಯವಾಗುವದು. ಜನತೆಯೊಡನೆ ಕಲಹ ನಿಷ್ಠುರಗಳಾಗಲಿವೆ. ಕೋರ್ಟು ಕಚೇರಿಗಳ ವ್ಯವಹಾರದಲ್ಲಿ ನಷ್ಟ ಸಂಭವಗಳುಂಟಾದಾವು.

ಆದರೂ ಹಿಡಿದ ಕಾರ್ಯವನ್ನು ಕೊನೆಗಾಣಿಸದೆ ಮಧ್ಯದಲ್ಲಿ ಕೈಬಿಡಲಾರಿರಿ. ಆಪ್ತೇಷ್ಟರ ನೆರವುಳ್ಳ ನಿಮಗೆ ತಾ. 11, 12, 17 ಈ ದಿನಗಳಲ್ಲಿ ಕಾರ್ಯಸಿದ್ಧಿ ಧನಲಾಭಗಳುಂಟಾಗಲಿವೆ.

೨. ವೃಷಭ

ದೇಹಾಲಸ್ಯ ಮನೋರೋಗಗಳಿಂದ ಪೀಡಿತರಾದ ನಿಮಗೆ ಈ ವಾರವು ಸ್ವಲ್ಪ ಕಷ್ಟದಾಯಿಯಾಗಿ ಪರಿಣಮಿಸಲಿವೆ. ಮಿತಭಾಷಿಯಾಗಿದ್ದರೂ ವಿನಾಕಾರಣ ಕಲಹವಾದೀತು. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಫಲ ದೊರೆಯಲಾರದು. ಕಾರ್ಮಿಕ ವರ್ಗದವರಿಂದಲೂ ನೀಚ ಜನರಿಂದಲೂ ಕೆಲಮಟ್ಟಿನ ಧನಲಾಭವಾಗಲಿದೆ. ಬಂಧುಮಿತ್ರರ ವಿಯೋಗವುಂಟಾದೀತು. ತಾ. 13, 14 ಇದ್ದುದರಲ್ಲಿ ಸ್ವಲ್ಪ ಉತ್ತಮವಾಗಿ ಕಾಣಿಸಲಿವೆ.

೩. ಮಿಥುನ

ನಿಮ್ಮ ಬಯಕೆಗಳಿಂದು ನಿರ್ವಿಘ್ನದಿಂದ ಪೂರೈಸಲಿವೆ. ಎಂತಹ ದುಶ್ಶಕ್ಯವೆನಿಸಿದ ಕೆಲಸವೂ ಇಂದು ನಿಮಗೆ ಸುಲಭಸಾಧ್ಯವೆನಿಸುದು. ವಿಶೇಷತಃ ರಾಜಕೀಯ ರಂಗದಲ್ಲಿ ಕೀರ್ತಿ ಧನಲಾಭವನ್ನು ಪಡೆವಿರಿ. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗ ಮಾಡಿ ಜನತೆಯ ಮನ್ನಣೆ ಆದರಗಳಿಗೆ ಪಾತ್ರರಾಗಲಿರುವಿರಿ. ಗೃಹ ತಾಪತ್ರಯದಿಂದ ಮುಕ್ತರಾದ ನಿಮ್ಮ ಸಂಸಾರ ರಥವು ಸುಗಮವಾಗಿ ಸಾಗಲಿದೆ. ತಾ. 11-12-15-16 ತುಂಬ ಅನುಕೂಲವಾಗಿವೆ.

೪. ಕರ್ಕಟ

ಎತ್ತು ಕರು ದಾಕಿತೆಂದೊಡನೆ ಕೊಟ್ಟಿಗೆಯಲ್ಲಿ ಕಟ್ಟೆಂಬ ಸ್ವಭಾವದವರಾದ ನಿಮಗಿಂದು ಸ್ವಲ್ಪ ವಿವೇಕೋದಯವಾದಂತಿದೆ. ಸರಿಯಾಗಿ ಪರ್ಯಾಲೋಚಿಸದೆ ಕಾರ್ಯವನ್ನು ನಡೆಸುವವರಾಗಲಾರಿರಿ. ಅಧಿಕಾರಿ ವರ್ಗದವರ ಕೋಪತಾಪಕ್ಕೆ ಸಿಲುಕಿದ ನಿಮಗೆ ಸ್ಥಾನ ಪಲ್ಲಟದ ಯೋಗವಿದೆ. ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ಬಳಲುತ್ತಿದ್ದ ನಿಮಗೆ ತಾ. 13, 14, 17 ಸ್ವಲ್ಪ ತೃಪ್ತಿಯನ್ನುಂಟುಮಾಡಲಿರುವವು.

೫. ಸಿಂಹ

ಇಂದು ನಿಮ್ಮ ಪರಿಸ್ಥಿತಿಯಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಕಂಡುಬರದಾದರೂ ಆರೋಗ್ಯ ಭಾಗದಲ್ಲಿ ಕೊಂಚ ನ್ಯೂನತೆ ಕಂಡುಬರಲಿದೆ. ಪಿತ್ಥ ವಿಕಾರದಿಂದ ನಿದ್ರಾಭಾವ ದುಃಸ್ವಪ್ನಾದಿಗಳು ಕಾಣಿಸಲಿವೆ. ನಿಮ್ಮ ಆದಾಯವು ಹಿಂದಿನಂತಿರಲು ವಿನಾಕಾರಣ ಸ್ತ್ರೀವರ್ಗದವರೊಡನೆ ಕಲಹವುಂಟಾದೀತು. ಇದ್ದುದರಲ್ಲಿ ತೃಪ್ತಿ ಎಂದರೆ ಗೃಹತಾಪತ್ರಯಗಳಿಂದ ನೀವಿಂದು ಮುಕ್ತರಾಗಲಿರುವಿರಿ. ತಾ. 11, 12, 15, 16 ಈ ದಿನಗಳಲ್ಲಿ ಮಿತ್ರರ ಭೆಟ್ಟಿ ಸುಖಭೋಗಗಳಂ ಪಡೆವಿರಿ.

೬. ಕನ್ಯಾ

ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೆಡುತ್ತಿದೆ. ಶತ್ರುವರ್ಗದವರ ಕಾಟಲೆಯು ಹೆಚ್ಚುವುದಲ್ಲದೆ ಜನತೆಯೊಡನೆಯೂ ಕಲಹ ನಿಷ್ಠುರಗಳಾಗುವವು. ಹಿಂದಿನ ನಿಮ್ಮ ಧೈರ್ಯಸಾಹಸಗಳು ಇಂದು ಮಾಯವಾಗಲಿವೆ. ಪ್ರವಾಸವು ದುಃಖ ಕಷ್ಟದಾಯಿಯಾಗಿ ಪರಿಣಮಿಸೀತು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಭ್ಯಾಸಕ್ಕೆ ಹೆಚ್ಚಿನ ತೊಡಕು ತೊಂದರೆಗಳುದ್ಭವಿಸಲಿವೆ. ತಾ. 15, 16ರಲ್ಲಿ ಅನಿರೀಕ್ಷಿತ ನಷ್ಟ ಸಂಭವಿಸಲಿದೆ.

೭. ತುಲಾ

ಸದ್ಯ ಶನೈಶ್ಚರನೋರ್ವನನ್ನುಳಿದು ಇತರೆಲ್ಲಾ ಗ್ರಹರ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಎಲ್ಲೆಲ್ಲೂ ಹಾರ್ದಿಕ ಸ್ವಾಗತ ಸತ್ಕಾರಗಳು ಲಭಿಸಲಿವೆ. ಬಂಧು ಮಿತ್ರಾದಿ ಪರಿವಾರ ವರ್ಗದವರಿಂದ ಕೂಡಿದ್ದ ನಿಮ್ಮ ಗೃಹಪರಿವಾರದಲ್ಲಿ ಏನೊಂದೂ ನ್ಯೂನತೆಗಳಿಗವಕಾಶವಿಲ್ಲವು. ನಿಮ್ಮ ಆರ್ಥಿಕ ಭಾಗವಂತೂ ತುಂಬಾ ಸುಧಾರಿಸಲಿದೆ. ಮಕ್ಕಳ ಆರೋಗ್ಯ ಅಷ್ಟೊಂದು ಪ್ರಶಸ್ತವಾಗಿರದು. ತಾ. 13 ರಿಂದ 16ರ ವರೆಗಿನ ದಿನಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗಲಿವೆ.

೮. ವೃಶ್ಚಿಕ

ದುರ್ದೈವವು ದೂರ ಸರಿಯುತ್ತಿದೆ. ನಿಮ್ಮ ಸಂಯಮದ ಫಲವಾಗಿಯೋ ಎಂಬಂತೆ ಇಂದು ನಿಮ್ಮ ಕಾರ್ಯಗಳಿಗೆ ಬಂಧುಗಳ ನೆರವು ಲಭಿಸಲಿವೆ. ಆರ್ಥಿಕ ಪರಿಸ್ಥಿತಿಯೂ ಕೂಡ ಹಿಂದಿಗಿಂತ ಎಷ್ಟೋ ಸುಧಾರಿಸಲಿದೆ. ಆದರೆ ಸಂಸಾರದಲ್ಲಿ ಮಾತ್ರ ನಿಮಗೆ ಸುಖ ನೆಮ್ಮದಿಯಿರದು. ಸತಿಸುತರ ಕಾಟದಿಂದ ಬೇಸತ್ತ ನಿಮ್ಮ ಮನಸ್ಸಿಗೆ ವಾರಾಂತ್ಯದ 3 ದಿನಗಳು ಸ್ವಲ್ಪ ನೆಮ್ಮದಿಯನ್ನೀಯುವವು.

೯. ಧನು

ನಿರರ್ಗಳವಾಗಿ ಮುಂದೆ ಸಾಗುತ್ತಿದ್ದ ನಿಮ್ಮ ಕಾರ್ಯಕಲಾಪಗಳಿಗೆ ಇಂದು ಕೆಲವೊಂದು ಅಡೆತಡೆಗಳು ಪ್ರಾಪ್ತವಾಗುವ ಸಂಭವವಿದೆ. ಕೋರ್ಟು ಕಛೇರಿಗಳ ವ್ಯವಹಾರದಲ್ಲಿ ಸ್ವಲ್ಪ ನಷ್ಟವುಂಟಾದೀತು ಆದರೂ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬ ಭಗವದುಕ್ತಿಯಂತೆ ಫಲದ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸದೆ ಇದು ನಮ್ಮ ಕರ್ತವ್ಯವೆಂಬ ಭಾವನೆಯಿಂದ ಮುಂದುವರಿದಲ್ಲಿ ತಾ. 11, 12, 17 ಈ ದಿನಗಳು ಸ್ವಲ್ಪ ಅನುಕೂಲವಾಗಿ ಕಾಣಿಸೀತು.

೧೦. ಮಕರ

ನಿಮ್ಮ ಸುಖಲಾಭಪತಿಯಾದ ಕುಜನು ಅಷ್ಟಮದಲ್ಲಿದ್ದು ಆರ್ಥಿಕ ದುರವಸ್ಥೆ ಮನೋರೋಗಗಳಿಗೆ ನಿಮ್ಮನ್ನು ಗುರಿಮಾಡಲಿರುವನು. ಆದರೂ ಕಷ್ಟಸಹಿಷ್ಣುಗಳಾದ ನೀವು ಹಿಡಿದ ಮಾರ್ಗವನ್ನು ಬಿಡದೆ ಮುಂದರಿವಿರಿ. ಖರ್ಚಿಗೆ ತಕ್ಕ ಫಲವೂ ದೊರೆವುದು. ಹಿರಿಯರ ನೆರವೂ ಲಭಿಸಲಿದೆ. ಬಂಧುಗಳೊಳಗಿನ ಮನಸ್ತಾಪವು ದೂರವಾಗಲಿದೆ. ವಾರಾರಂಭದ 4 ದಿನಗಳು ಅನುಕೂಲವಾಗಿವೆ.

೧೧. ಕುಂಭ

ನಿಮ್ಮ ಆರೋಗ್ಯವು ಹಿಂದಿಗಿಂತ ಸ್ವಲ್ಪ ಸುಧಾರಿಸುವುದಾದರೂ ಬೇರಾವ ಭಾಗದಲ್ಲೂ ಪ್ರಗತಿ ಕಾಣಿಸದು. ಆಯಾಧಿಕ ವ್ಯಯವೇ ಕಂಡುಬರಲಿದೆ. ಉದ್ಯೋಗ ವ್ಯಾಪಾರಾದಿಗಳಲ್ಲಿ ಕ್ರಮಕ್ಕೆ ತಕ್ಕ ಫಲವನ್ನು ಹೊಂದುವಿರಿ. ಚಿಕ್ಕಪುಟ್ಟ ವಿಷಯಗಳ ಸಲುವಾಗಿ ಬಂಧುವರ್ಗದವರೊಡನೆ ಮನಸ್ತಾಪ ಹುಟ್ಟಲಿದೆ. ಶತ್ರುಜನರ ಕಾಟ ಕಡಿಮೆಯಾದರೂ ಅರ್ಧಾಂಗಿಯ ಪೀಡೆ ಹೆಚ್ಚಲಿದೆ. ತಾ. 13 ರಿಂದ 16ರ ವರೆಗಿನ ದಿನಗಳು ಇದ್ದುದರಲ್ಲಿ ಉತ್ತಮವಾಗಿ ಕಾಣುವವು.

೧೨. ಮೀನ

ದಕ್ಷರೂ ಸಾಹಸಿಗಳೂ ಆದ ನಿಮಗೆ ಸ್ಥಾನಮಾನಗಳು ಲಭಿಸಲಿವೆ. ಹಿಡಿದ ಕಾರ್ಯವು ಯಶಸ್ವಿಯಾಗಿ ಕೊನೆಗೊಂಡುವದು. ಆರ್ಥಿಕ ಭಾಗದಲ್ಲಿ ನೀವು ನಿಶ್ಚಿಂತರಾಗಿದ್ದರೂ ಆರೋಗ್ಯ ವಿಷಯದಲ್ಲಿ ಅಷ್ಟೊಂದು ಉತ್ತಮವಿರಲಾರದು. ಏಳೂವರೆ ಶನಿಯು ಅನಿರೀಕ್ಷಿತ ಅಪಘಾತಗಳಿಗೆ ಗುರಿಮಾಡಲಿರುವನು. ಚಿಕ್ಕಪುಟ್ಟ ಗೃಹಚ್ಛಿದ್ರಗಳೂ ಆಗಾಗ ಕಂಡುಬರಲಿವೆ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಇಷ್ಟಾರ್ಥಗಳು ಪೂರ್ಣವಾಗಲಿವೆ.

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘ ಉಡುಪಿ

ಕುರ್ಕಾಲು,— ಸಂಘದ ಆಡಳಿತ ಮಂಡಳಿಯ ಸಭೆಯು ತಾ. 20-2-65ರಲ್ಲು ಸಂಘದ ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ನೇತೃತ್ವದಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕುರ್ಕಾಲು ಗಣಪಯ್ಯ ಸೆಟ್ಟರು ಗತ ಸಭೆಯ ವರದಿಯನ್ನು ಸಭೆಯ ಮುಂದಿಟ್ಟ ಬಳಿಕ ಸರಕಾರವು ಖಾಸಗಿ ಶಾಲೆಗಳಿಗೆ ಸಂಪೂರ್ಣ ಮೈಂಟೆನೆನ್ಸ್ ಗ್ರಾಂಟು ಕೊಡದ ವೃತ್ತಿ ಶಿಕ್ಷಕರ ಸ್ಕೇಲು ಗ್ರಾಂಟನ್ನು ತಡೆಹಿಡಿದ ಮತ್ತು 1964ರಿಂದ ಶಾಲಾ ಕಂಪೆನ್‌ಸೇಶನ್ ಗ್ರಾಂಟನ್ನು ನಿಲ್ಲಿಸಿದ ವಿಚಾರಗಳನ್ನು ಚರ್ಚಿಸಿ ಈ ಕೆಳಗಿನ ನಿರ್ಣಯಗಳನ್ನು ಮಾಡಲಾಯಿತು.

ಮದ್ರಾಸು ಸರಕಾರದ ನಿಯಮದಂತೆ ಮೈಸೂರು ಸರಕಾರವು 1960ನೇ ಇಸವಿಯ ವರೆಗೆ, ಖಾಸಗಿ ಶಾಲೆಗಳಿಗೆ ಮೈಂಟೆನೆನ್ಸ್ ಗ್ರಾಂಟು ಕೊಡುತಿದ್ದು, ಆ ಬಳಿಕ 1961ನೇ ವರ್ಷಕ್ಕೆ ಗತವರ್ಷದ ¾ನೇ ಅಂಶ 1962 ಮತ್ತು 1963ನೇ ವರ್ಷಗಳಿಗೆ ½ನೇ ಅಂಶ ಮಾತ್ರ ಕೊಟ್ಟದ್ದರಿಂದ ಹಲವು ಶಾಲೆಗಳು ಮುಚ್ಚಲ್ಪಟ್ಟವು. ಆದ ಕಾರಣ 1964ನೇ ಇಸವಿಯ ಬಾಬ್ತು ಸಂಪೂರ್ಣ ಮೈಂಟೆನೆನ್ಸ್ ಗ್ರಾಂಟನ್ನು ಕೊಡಬೇಕು. ಅಧ್ಯಾಪಕರ ವಾರ್ಷಿಕ ಸಂಬಳದ ಮೊತ್ತವನ್ನು ಅನುಸರಿಸಿ ಶಾಲೆಗಳಿಗೆ ಮೈಂಟೆನೆನ್ಸ್ ಗ್ರಾಂಟು ಕೊಡುವ ಕ್ರಮವಾದ್ದರಿಂದ, ಅಧ್ಯಾಪಕರಿಗೆ ಏರಿದ ಸಂಬಳದ ಮೊತ್ತದ ಮೇಲೆ, 1964ನೇ ಇಸವಿಯ ಮೈಂಟೆನೆನ್ಸ್ ಗ್ರಾಂಟನ್ನು ಕೊಡಬೇಕು. ಮದ್ರಾಸು ಕ್ರಮದಂತೆ ಸಂಪೂರ್ಣ ಮೈಂಟೆನೆನ್ಸ್ ಗ್ರಾಂಟನ್ನು ಕೊಡಲಾಗದಿದ್ದರೆ ಅದರ ಭರ್ತಿಯ ಬಗ್ಗೆ ಬರುವ ಶಾಲಾ ವರ್ಷದ ಆರಂಭದಿಂದ ಮಕ್ಕಳಿಂದ ಸಂಬಳದ ವಸೂಲು ಮಾಡುವರೇ ಅನುಮತಿ ನೀಡಿ ಕಡ್ಡಾಯ ಶಿಕ್ಷಣದ ಕ್ರಮದ ಮೇರೆಗೆ ಸಂಬಳ ವಿನಾಯತಿ ಮಾಡಿದ ಮಕ್ಕಳ ಬಗ್ಗೆ ಕಂಪೆನ್‌ಸೇಶನ್ ಗ್ರಾಂಟು ಕೊಡಬೇಕು. ಮದ್ರಾಸು ಸರಕಾರವು—ಹಲವು ಶಾಲೆಗಳು ಕಡ್ಡಾಯ ಶಿಕ್ಷಣದ ನಿಯಮದಂತೆ ವಾರ್ಷಿಕ ಆದಾಯವು 2400ಕ್ಕೆ ಕಮ್ಮಿಯಾದ ರಕ್ಷಕರ ಮಕ್ಕಳಿಗೆ ಸಂಬಳ ವಿನಾಯತಿ ಮಾಡಿದ ಬಗ್ಗೆ ಕಂಪೆನ್‌ಸೇಶನ್ ಗ್ರಾಂಟು ಕೊಡುತ್ತಿತ್ತು. ಆದರೆ ಮೈಸೂರು ಸರಕಾರವು 1964ನೇ ಇಸವಿಯಲ್ಲಿ ಇದ್ದ ಕಂಪೆನ್‌ಸೇಶನ್ ಗ್ರಾಂಟನ್ನು ರದ್ದು ಮಾಡಿದ್ದು ನ್ಯಾಯದಲ್ಲ ಆದ್ದರಿಂದ ಆ ಶಾಲೆಗಳಿಗೆ ಹಿಂದಿನಂತೆಯೇ ಕಂಪೆನ್‌ಸೇಶನ್ ಗ್ರಾಂಟನ್ನು ಕೊಡತಕ್ಕದ್ದು.

ಪೂರ್ಣ ಹೊತ್ತು ಕೆಲಸಮಾಡುತ್ತಿರುವ ವೃತ್ತಿ ಶಿಕ್ಷಕರಿಗೆ 1957ನೇ ಇಸವಿಯ ಸ್ಕೇಲಿನ ಮೇರೆಗೆ ತಿಂಗಳು ಒಂದರ ರೂಪಾಯಿ 40 + 30ರಂತೆ 1961ನೇ ಇಸ್ವಿ ಮೇಲಂತ್ಯದ ವರೆಗೆ ಕೊಡುತ್ತಿದ್ದು ಆ ಬಳಿಕ ಬರೇ ತಿಂಗಳೊಂದರ ರೂಪಾಯಿ 25 + 30 ಕೊಡುವುದು ಆ ಉಪಾಧ್ಯಾಯರ ಜೀವನಕ್ಕೆ ಎಷ್ಟಕ್ಕೂ ಸಾಲದಾದ್ದರಿಂದ, ಅವರು ಇತರ ಅಧ್ಯಾಪಕರಂತೆ ಪೂರ್ಣ ಹೊತ್ತು ಕೆಲಸಮಾಡುತ್ತಿರುವ ಕಾರಣ ಚಾಲ್ತಿ ವರ್ಷದ ಆರಂಭದಿಂದ 1957ರ ದರದಲ್ಲಿ ಸಂಬಳ ಕೊಡಬೇಕಾಗಿಯೂ ಮತ್ತು ಸದ್ರಿ ಅಧ್ಯಾಪಕರ ತಡೆಹಿಡಿಯಲ್ಪಟ್ಟ ಸಂಪೂರ್ಣ ಸಂಬಳವನ್ನು ಸಹ ಕೊಡಬೇಕಾಗಿಯೂ ಕೇಳಿಕೊಳ್ಳುವುದು. ಆಡಳಿತದಾರರು ತಮ್ಮ ಶಾಲೆಗಳ ಭವಿತವ್ಯದ ಬಗ್ಗೆ ತಕ್ಕ ಯೋಜನೆಯನ್ನು ಮುಂದರಿಸುವರೇ ಅನುಕೂಲವಾಗುವಂತೆ ಮೈಸೂರು ಪ್ರಾಂತ್ಯಕ್ಕೆ ಅನ್ವಯವಾಗುವ "ಗ್ರಾಂಟ್, ಇನ್, ಏಯಿಡ್" ಕೋಡನ್ನು ಶೀಘ್ರದಲ್ಲಿಯೇ ಜ್ಯಾರಿಗೆ ತರಬೇಕು.

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ಪ
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ ಬಿ ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು ಆರ ಆಚಾರ್ಯ)	1=50
ಮೋಹದ ಮಹಾ ಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು ಶಿ ಹರಿದಾಸ ಭಟ್)	1=75
ಕಾಲವಿಲ್ಲದ ಹೆಣ್ಣು	(ಪಿ ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮೋಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಋಣ ಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಮಾರ್ಚ್ ೯, ೧೮ ೬೫, [ಸಂಚಿಕೆ ೨೯ [illegible]



Phone No. 226
ಫೋನ್ ನಂಬ್ರ: 226

leading nationalist weekly

೨೦
ಪೈಸೆ

ವಾರದ ಕಥೆ

ತೀರದ ಸಾಲ

ಬರೆದವರು: ಎಚ್. ಸುಬ್ರಾಯ ಭಟ್, ಚೊನಾಳಿ.

ರಣ ರಣ ಬಿಸಿಲು ಭೂಮಿಯನ್ನು ಸುಡುವಂತಿತ್ತು. ಹೊಲದಲ್ಲಿ ಪೈರೆಲ್ಲಾ ಹಣ್ಣಾಗಿ ತಲೆ ಎತ್ತಿ ನಿಂತಿತ್ತು. ತೆನೆಗಳೆಲ್ಲಾ ಭತ್ತದ ರಾಶಿಯೊಡ್ಡಿದಂತೆ ಕಾಣುತಿತ್ತು.

ಹೊರ ಜಗಲಿಯಲ್ಲಿ ಕುಳಿತ ದೇರಣ್ಣ ಗೌಡನ ದೃಷ್ಟಿ ಹೊಲದತ್ತ ಸಾಗಿತು. ಬೆಳೆದು ನಿಂತ ಪೈರೆಲ್ಲಾ ಒಮ್ಮೆ ಗೌಡನನ್ನು ನೋಡಿ ಅಣಕಿಸಿದಂತಾಯಿತು. ಮತ್ತೊಮ್ಮೆ ವ್ಯಂಗ್ಯಪೂರಿತ ನಗೆಯಿಂದ ನಕ್ಕಂತಾಯಿತು. ಹೆಚ್ಚು ಹೊತ್ತು ಗೌಡ ಹೊಲವನ್ನು ನೋಡದಾದ. ಕೂಡಲೇ ದೃಷ್ಟಿಯನ್ನು ಬೇರತ್ತ ಹೊರಳಿಸಿದ. ಎದುರಿಗೆ ತೋರಿದ್ದು ಎಲುಬಿನ ಹಂದರವಾಗಿ ಮಲಗಿದ್ದ ತನ್ನ ಪತ್ನಿಯ ಪ್ರೇತ ಕಳೆಯ ಮುಖ.

ಹರಕು ಚಾಪೆಯಲ್ಲಿ ಚಿಂದಿ ಬಟ್ಟೆಯನ್ನುಟ್ಟು ಮಲಗಿದ್ದಳು ಸಂಕಮ್ಮ ಗೌಡತಿ. ಬಲವಾದ ರೋಗವೊಂದು ಆತಳನ್ನು ಹಿಡಿದು ಹಿಂಡಿ ಸಿಪ್ಪೆಯನ್ನಾಗಿ ಮಾಡಿತ್ತು. ಪತ್ನಿಯ ಮುಖವನ್ನು ನೋಡಿದ ಕೂಡಲೇ ಗೌಡನಿಗೆ ಔಷಧದ ನೆನಪಾಯಿತು. ಅಂದೇ ಪತ್ನಿಗೆ ಔಷಧ ತರಲು ಹೋಗಬೇಕಾಗಿತ್ತು.

ಆದರೆ ಅಂದು ದುಡ್ಡಿಲ್ಲದೆ ಹೋಗುವಂತಿರಲಿಲ್ಲ. ಕಾರಣ "ಇನ್ನೊಮ್ಮೆ ಬರುವಾಗ ದುಡ್ಡು ತಾರದಿದ್ದರೆ ಇಲ್ಲಿಗೆ ಬರಲೇ ಬೇಡವೆಂದು" ಖಡಾ ಖಂಡಿತವಾಗಿ ಹೇಳಿದ್ದರು ಡಾಕ್ಟರು. ಆ ವರೆಗೆ ಪರಿಚಯ ಇದ್ದವರಲ್ಲಿ ಮತ್ತು ಇಲ್ಲದವರಲ್ಲಿ ಎಲ್ಲರೊಡನೆಯೂ ಸಿಕ್ಕಿದಷ್ಟು ಸಾಲಮಾಡಿದ್ದನು. ಎಷ್ಟೋ ಉದಾರಿಗಳು" ಇನ್ನೊಮ್ಮೆ ಇಲ್ಲಿಗೆ ಬರಲೂ ಬೇಡ! ಇದನ್ನು ವಾಪಾಸು ಕೊಡುವುದೂ ಬೇಡವೆಂದು" ಆತನಿಗೆ ತಮ್ಮ ಉದಾರತೆಯನ್ನು ತೋರಿಸಿದ್ದರು. ಕೊಟ್ಟದ್ದು ಖಂಡಿತಾ ತಮಗೆ ಮರಳಿ ಬರವುದಿಲ್ಲವೆಂದು ತಿಳಿದೇ ಹಾಗೆ ಹೇಳಿದ್ದರು. 'ತೀರದ ಸಾಲ'ದಿಂದಾಗಿ ಮತ್ತೆ ಸಾಲ ಹುಟ್ಟುವಂತಿರಲಿಲ್ಲ.

ಕಣ್ಣೀರ ಕಟ್ಟೆ ಬತ್ತಿ ಹೋಗಿದ್ದರೂ ಚೈತ್ರ ಮಾಸದಲ್ಲಿ ಬಿದ್ದ ಮಳೆ ಹನಿಯಂತೆ ಎರಡು ತೊಟ್ಟು ಕಣ್ಣೀರು ಗೌಡನ ಮುಖದ ಮೇಲಿಳಿಯಿತು. ಉಟ್ಟ ಬಟ್ಟೆಯಿಂದ ಕಣ್ಣೀರನ್ನು ಉಜ್ಜಿಕೊಳ್ಳುವುದನ್ನು ಸಂಕಮ್ಮ ಗೌಡತಿ ಮಲಗಿದಲ್ಲಿಂದಲೇ ನೋಡಿದಳು.

"ಯಾಕೆ ಸುಮ್ಮನೆ ಕಣ್ಣೀರು ಹಾಕುವಿರಿ! ಬಂದದ್ದನ್ನು ಹೊರದೂಡಲು ಕಣ್ಣೀರಿನಿಂದಾಗುವುದೇ?" ಶಕ್ತಿ ಗುಂದಿದ್ದರೂ ಮೆಲ್ಲ ನುಡಿದಳು.

"ಸಂಕ! ಇಂದು ನನ್ನ ಪಾಲಿಗುಳಿದಿರುವುದು ಈ ಎರಡು ತೊಟ್ಟು ಕಣ್ಣೀರು ಮಾತ್ರ"

"ಸಂಕ! ನೋಡಿದೆಯಾ ಈ ವರ್ಷದ ಬೆಳೆಯನ್ನು! ನಮ್ಮ ಕೈ ಬಿಟ್ಟ, ಮೊದಲ ವರ್ಷದಲ್ಲಿಯೇ ಅದೆಂತಹಾ ಬೆಳೆ ಬಂದಿದೆ?"

"ಅದು ಅವರವರ ಪುಣ್ಯ!" ಆ ಮಾತುಗಳು ಬಹಳ ವ್ಯಥೆಯಿಂದ ಕೂಡಿದಿತ್ತು.

"ಹೌದು ನಮಗೆ ಆ ಪುಣ್ಯವಿಲ್ಲ!"

"........"

"ಸಂಕ! ಇಂದು ಹಣವಿಲ್ಲದೆ ಔಷಧ ತರುವಂತಿಲ್ಲ"

"ಸಾಯಲು ತಯಾರಾದ ನನಗೆ ಇನ್ನೇಕೆ ಔಷಧ!"

"ಸಂಕ ನಾನು ನಿನಗೆ ಅನ್ಯಾಯ ಮಾಡಿದ್ದೇನೆ. ಇಂದು ಎಲ್ಲಿಯೂ ಸಾಲ ಹುಟ್ಟುವಂತಿಲ್ಲ' ಕಂಠ ಗದ್ಗದವಾಗಿತ್ತು.

"ಹಿಂದಿನದನ್ನು ಯೋಚಿಸಿ ಇನ್ನೇನು ಫಲ.

'ತೀರದ ಸಾಲದಿಂದಾಗಿ ನಿನಗಿಂದು ಔಷಧವಿಲ್ಲವಾಗಿದೆ."

"ಔಷಧದಿಂದ ಗುಣವಾಗುವ ರೋಗ ಇದಲ್ಲ. ಅದಕ್ಕಾಗಿ ಚಿಂತಿಸಬೇಡಿ. ಇನ್ನು ಮುಂದೆ ಯಾರಲ್ಲು ಸಾಲ ಕೇಳಬೇಡಿ".

ಗುಣವಾಗದ ರೋಗವೆಂಬುದು ಆತನಿಗೂ ಗೊತ್ತು. ಆದರೆ ಕರ್ತವ್ಯ ಮಾಡದಿರಲು ಸಾಧ್ಯವೇ?

"ಯಾರನ್ನೂ ಸಾಲ ಕೇಳಬೇಡಿ" ಕೊಡುವವರಿದ್ದರೆ ತಾನೆ ಕೇಳುವುದು? ತನ್ನಲ್ಲಿಯೇ ನಕ್ಕನು. ಉಟ್ಟ ಬಟ್ಟೆಯಲ್ಲಿಯೇ ಉರಿಬಿಸಿಲಿನಲ್ಲಿ ಹೊರ ಹೊರಟನು. ಸಂಕಮ್ಮ ಒಮ್ಮೆ ಪತಿ ಹೋದತ್ತ ಕಣ್ಣರಳಿಸಿ ನೋಡಿದಳು. ತಕ್ಷಣವೇ ಮುಖ ಪಕ್ಕದತ್ತ ಹೊರಳಿಸಿ ಬಿಕ್ಕಿ ಬಿಕ್ಕಿ ಅತ್ತಳು. ಆ ಅಳುವೆಂಬುದು ಇಡಿ ಮನೆಯಲ್ಲಿಯೇ ಪ್ರತಿಧ್ವನಿಸುತಿತ್ತು.

೨

ವೀರಪ್ಪ ಗೌಡರ ಏಕ ಮಾತ್ರ ತಬ್ಬಲಿ ಪುತ್ರ ದೇರಣ್ಣ ಗೌಡ. ಮಗನನ್ನು ಮಮತೆಯಿಂದ ಸಾಕಿ ಬೆಳೆಸಿ ಯಾರೂ ಇಲ್ಲದ ತಬ್ಬಲಿ ಸಂಕಮ್ಮನನ್ನೇ ಸೊಸೆಯನ್ನಾಗಿ ತಂದಿದ್ದರು.

ಯೌವನದ ಹೊಸ್ತಿಲಿನಲ್ಲಿ ಕಾಲಿಟ್ಟದ್ದ ದೇರಣ್ಣ ಗೌಡನ ಮಿತ್ರತಂಡ ದೊಡ್ಡದಾಗಿದ್ದಿತ್ತು. ಮಾಡಲು ಕೆಲಸವಿಲ್ಲದ ಆತನು ದಿನದ ಬಹುಭಾಗವನ್ನು ಮಿತ್ರರೊಡನೆಯೇ ಕಳೆಯುತ್ತಿದ್ದನು.

ಉಂಡುಟ್ಟು ಸುಖವಾಗಿ ಕಾಲ ಕಳೆಯಬಹುದಾದ ಆಸ್ತಿ ವೀರಪ್ಪ ಗೌಡರದು. ಮನೆಯಲ್ಲಿ ಸೊಸೆ ಹಾಗೂ ಯಜಮಾನಿ ಎಲ್ಲವೂ ಸಂಕಮ್ಮನೇ ಆಗಿದ್ದಳು. ಮಗನಿಗೆ ಪ್ರಾಯ ಬಂದಿದ್ದರೂ ಎಲ್ಲಾ ವ್ಯವಹಾರವನ್ನು ವೀರಪ್ಪ ಗೌಡರೇ ನಡೆಸುತ್ತಿದ್ದರು. ತಂದೆಗೆ ತಿಳಿಯದಂತೆ ಆಗಾಗ ಒಂದಿಷ್ಟು ಹಣವನ್ನು ಕೊಂಡು ಹೋಗಿ ಮಿತ್ರರೊಡನೆ ಇಸ್ಪೀಟಾಡಲು ತೊಡಗುತಿದ್ದ ದೇರಣ್ಣ ಗೌಡ. ಹಣದ ಕೊರತೆಯಿಂದ ಮನದಲ್ಲಿಯೇ ಆತಂಕ ಪಡುತ್ತಿದ್ದ. ತಂದೆಯೊಡನೆ ಜಗಳಾಡಿ ಹಣ ಪಡೆಯಲು ಆತನ ಮನ ಹಿಂದೇಟು ಹಾಕುತ್ತಿತ್ತು. ಮಗನ ಮೇಲಿನ ಮಮತೆ ತಂದೆಯನ್ನು ಕುರುಡಾಗಿಸಿತ್ತು.

ಸಂಕಮ್ಮನಾದರೂ ಏನೊಂದು ಅರಿಯದ ಹಸುಳೆ. ಮಾವ ಮತ್ತು ಪತಿಯನ್ನು ಭಯ ಭಕ್ತಿಯಿಂದಲೇ ನೋಡುತ್ತಿದ್ದಳು. ಹಿರಿಯರ ಮನದಂತೆ ನಡೆಯುವುದೇ ತನ್ನ ಕರ್ತವ್ಯವೆಂದು ಭಾವಿಸಿದ್ದಳು.

ಮೈ ಕೈ ತುಂಬಿಕೊಂಡು ತಿರುಗುತ್ತಿರುವ ಸೊಸೆಯನ್ನು ನೋಡಲು ವೀರಪ್ಪ ಗೌಡರಿಗೆ ಎಲ್ಲಿಲ್ಲದ ಉತ್ಸಾಹ. ಆತಳು ಗರ್ಭಿಣಿ ಎಂಬುದನ್ನು ತಿಳಿದ ಮೇಲಂತೂ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಸೊಸೆಯ ನೆರವಿಗೆಂದು ಕೆಲಸದಾಳನ್ನು ನೇಮಿಸಿದರು.

ಒಂದು ದಿನ ಸಂಕಮ್ಮ ಹೆಣ್ಣು ಶಿಶುವಿಗೊಂದು ಜನ್ಮವಿತ್ತಳು. ಬಲು ವಿಜೃಂಭಣೆಯಿಂದಲೇ ನಾಮಕರಣ ಶಾಸ್ತ್ರವೂ ನೆರವೇರಿತು. ಗೌರಿ ದಿನದಿನಕ್ಕೆ ಪೂರ್ಣಿಮೆಯ ಚಂದ್ರನಂತೆ ಬೆಳೆಯುತ್ತಿದ್ದಳು.

ಹೀಗೆ ಆ ಸಂಸಾರ ಬೆಳಗುತ್ತಿರುವಾಗ ಅಕಸ್ಮಾತ್ತಾಗಿ ಕಾರ್ಮೋಡ ಒಂದು ಬಂದು ಮುಸುಕಿತು.

ಒಂದು ಮುಂಜಾನೆ ಸಂಕಮ್ಮ ಕಾಫಿ ತಯಾರಿಸಿ ಪತಿಗೆ ಇತ್ತು; ಆದೆಷ್ಟು ಸಮಯ ಸಂದರೂ ಮಾವ ಬಂದಿರಲಿಲ್ಲ. ಪ್ರತಿದಿನ ಆತಳು ಕಾಫಿ ತಯಾರಿಸುವ ಮೊದಲೇ ಒಲೆಯ ಸಮೀಪ ಬರುತ್ತಿದ್ದರು. ಅಂದೇಕೆ ಬರಲಿಲ್ಲವೆಂದು ನೋಡಲು ಕೋಣೆಯತ್ತ ಸಾಗಿದಳು. ಮೆಲ್ಲನೆ ಬಾಗಿಲನ್ನು ದೂಡಿದಳು. ಅಗುಳಿ ಹಾಕದೆ ಇರುವುದರಿಂದ ಬಾಗಿಲು ಮೆಲ್ಲನೆ ಕಿರ್ರೆಂಯ ತೆರೆಯಿತು.

"ಮಾವ! ಮಾವ!" ಕೂಗಿದಳು.

"ಮುಸುಕನ್ನೆಳೆದು ಮುಟ್ಟಿ ನೋಡಿದಳು. ಮೈಯೆಲ್ಲಾ ತಣ್ಣಗಾಗಿತ್ತು. ಮತ್ತೂ ಅಲುಗಾಡಿಸಿದಳು. ಮರದ ತುಂಡಿನಂತೆ ದೇಹವೆಲ್ಲಾ ಗಟ್ಟಿಯಾಗಿತ್ತು. ಚಿಟ್ಟನೆ ಚೀರಿದಳು. ದೇರಣ್ಣ ಓಡಿಬಂದ. ಮನೆಯಲ್ಲಿಯ ಬೊಬ್ಬಾಟ ಕೇಳಿ ನೆರೆಯವರೆಲ್ಲಾ ಕೂಡಿದರು. ವೀರಪ್ಪನ ಅಂತ್ಯಕ್ರಿಯೆಯನ್ನು ವಿಧಿವತ್ತಾಗಿ ನೆರವೇರಿಸಿದರು.

ಎಂದೋ ಆಶಿಸಿಕೊಂಡಿದ್ದ ಪಟ್ಟಿಗೆಯ ಬೀಗದ ಕೈ ಅಂದು ದೇರಣ್ಣನ ವಶವಾಯಿತು. ಹಣವಿಲ್ಲದೆ ತೊಂದರೆಗೊಳಗಾಗಿದ್ದ ದೇರಣ್ಣನಿಗೆ ಸುಲಭದಲ್ಲಿ ಹಣ ದೊರಕಿತ್ತು. ಮನ ಬಂದಂತೆ ಖರ್ಚು ಮಾಡಲು ಅಡ್ಡಿಯಾಗಿದ್ದ ತಂದೆ ಮೃತಪಟ್ಟದ್ದು ಆತನ ಪಾಲಿಗೆ ಸಂತೋಷವೇ ಆಗಿತ್ತು.

ಮಾವನ ಮರಣದಿಂದ ಸಂಕಮ್ಮ ಕಂಗಾಲಾದಳು. ಆತಳ ಪಾಲಿಗೆ ಅದು ಮರೆಯಲಾರದ ನಷ್ಟವಾಗಿತ್ತು. ಪತಿಯ ವರ್ತನೆಯೇ ಆತಳಿಗೆ ಅರ್ಥವಾಗುತಿದ್ದಿಲ್ಲ.

ದಿನದಿನಕ್ಕೆ ದೇರಣ್ಣ ಸಮಯ ತಪ್ಪಿ ಮನೆಗೆ ಬರಲಾರಂಭಿಸಿದ. ಕೆಲವು ದಿನ ರಾತ್ರಿ ಅರ್ಧ ಸಂದ ಮೇಲೆಯೇ ಮನೆಗೆ ಬರುತ್ತಿದ್ದನು. ಮೊದ ಮೊದಲು ಸಂಕಮ್ಮ ಪತಿಯೊಡನೆ ಏನೊಂದು ವಿಚಾರಿಸದೆ, ಮೌನವಾಗಿಯೇ ಇರುತ್ತಿದ್ದಳು. ಕೊನೆಗೊಂದು ದಿನ ವಿಚಾರಿಸಿದಾಗ "ಗಂಡಸರಿಗೆ ಹಲವಾರು ವ್ಯವಹಾರ ಇರುವಾಗ ಬರುವುದು ತಡವಾದುದಕ್ಕೆ ಆಕ್ಷೇಪಿಸಬಾರದ"ಂದಿದ್ದನು.

ಪತಿ ಭಕ್ತಿ ಪರಾಯಣೆಯಾದ ಸಂಕಮ್ಮ ಗಂಡನ ಮಾತಿಗೆ ಪ್ರತಿಯಾಡದಿದ್ದರೂ ಮನದಲ್ಲಿಯೇ ತರ್ಕಿಸುತ್ತಿದ್ದಳು. 'ಮಾವನಿರುವಾಗ ಒಂದು ದಿನವೂ ಯಾರೂ ತಡವಾಗಿ ಬರುತ್ತಿರಲಿಲ್ಲ. ಅಲ್ಲದೆ ಗಂಟೆ ಹತ್ತರೊಳಗಾಗಿ ಎಲ್ಲರೂ ಊಟ ತೀರಿಸಿ ಮಲಗುತ್ತಿದ್ದರು. ಆದರೆ ಪತಿಯ ವ್ಯವಹಾರವೇನೆಂಬುದೇ ಆತಳಿಗೆ ತಿಳಿಯದಾಯಿತು. ಕೆಲವು ದಿನ ದೀಪವಿಟ್ಟು ಕುಳಿತಲ್ಲಿಯೇ ಮಲಗಿ ನಿದ್ರಿಸಿ ಬೆಳಗ್ಗೆ ಏಳುವಾಗ ರಾತ್ರಿ ಪತಿ ಮನೆಗೆ ಬಂದಿರಲಿಲ್ಲವೆಂಬುದನ್ನು ತಿಳಿಯುತ್ತಿದ್ದಳು.

ಏಕಾಂತದಲ್ಲಿ ಕುಳಿತು ದುಃಖಿಸುವುದೇ ಆತಳ ಕೆಲಸವಾಗಿತ್ತು. ಗೌರಿಯ ಆದಾರೋಪಚಾರಗಳನ್ನು ಕ್ರಮವಾಗಿಯೇ ಮಾಡುತ್ತಿದ್ದಳು. ಆದರೆ, ತಾನು ಮಾತ್ರ ಕೆಲವು ವೇಳೆ ಉಪವಾಸಗಳನ್ನೇ ಮಾಡುತ್ತಿದ್ದಳು. ಚಿಂತೆಯು ಚಿತೆಯಂತೆ ಆತಳ ದೇಹವನ್ನು ಸುಡತೊಡಗಿತ್ತು.

ತಂದೆ ತೀರಿದಂದಿನಿಂದಲೇ ಕೆಲಸದಾಳನ್ನು ಮನೆಗೆ ಕಳುಹಿಸಿದ್ದ ದೇರಣ್ಣ ಗೌಡ. ಕೆಲಸದಾಳನ್ನು ತೆಗೆಯಲು ಕಾರಣವೇನೆಂದು ಅಪ್ಪಿತಪ್ಪಿಯೂ ಸಂಕಮ್ಮ ಪತಿಯೊಡನೆ ಕೇಳಿರಲಿಲ್ಲ. ಆದರೆ ಆತನೇ ಒಂದು ದಿನ "ಕೆಲಸದಾಳನ್ನು ಇಟ್ಟು ನಾವು ಜೀವಿಸಲು ಬೆಳೆಯುತ್ತಿರುವ ಸಂಸಾರದಲ್ಲಿ ಸಾಧ್ಯವಿಲ್ಲ" ಎಂದಿದ್ದ.

ಆ ಮಾತುಗಳು ಅಂದು ಆತಳಿಗೂ ಹೊಂದಿಸಿತ್ತು. ಆದರೆ ಇಂದಿನ ಪತಿಯ ವರ್ತನೆಯೇ ಆತಳಿಗೆ ಅರ್ಥವಾಗುತ್ತಿದ್ದಿಲ್ಲ. ಯೋಚಿಸುತ್ತಾ ಕುಳಿತಳು. ಎಷ್ಟು ಯೋಚಿಸಿದರೂ ಬಗೆಹರಿಯದಾಯಿತು.

೩

ಗೌರಿ ಆಗ ತಾನೆ ಊಟ ಮಾಡಿ ಮಲಗಿದ್ದಳು. ಸಂಕಮ್ಮ ಯೋಚಿಸುತ್ತಾ ಕುಳಿತಿದ್ದಳು. ಹೊರಗಿನ ಕಾಲ ಸಪ್ಪಳ ಆ

(ಹನ್ನೆರಡನೇ ಪುಟ ನೋಡಿರಿ)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: **ಸುದರ್ಶನ ಟೈಲ್ ವರ್ಕ್ಸ್**, ಬೋಳಾರ, ಮಂಗಳೂರು-೧.

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ನೋಟೀಸ್ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರವಾಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ವೆಚ್ಚಗಳನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಭಾರತದ ಕೈಗಾರಿಕೋದ್ಯಮದ ಪ್ರಗತಿಪಥದ ಮೂರು ನೋಟಗಳು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೨೯	೧೮—೩—೧೯೬೫	No. 29

ಗೋವೆಯನ್ನು ಕೆದಕಬೇಡಿ

ಮಹಾರಾಷ್ಟ್ರವು ತನ್ನಲ್ಲಿ ವಿಲೀನಗೊಳಿಸುವಂತೆ ಅಧಿಕೃತ ಗೊತ್ತುವಳಿಯೊಂದರಲ್ಲಿ ಕೇಂದ್ರ ಸರಕಾರವನ್ನು ಕೇಳಿಕೊಳ್ಳುತ್ತಿದೆ. ಗೋವೆಯ ವಿಧಾನ ಸಭೆಯೂ ಇಂತಹುದೇ ಗೊತ್ತುವಳಿಯೊಂದನ್ನು ಸ್ವೀಕರಿಸಿದೆ. ಕರ್ನಾಟಕದ ವಿಧಾನ ಸಭೆಯು ಇದಕ್ಕೆ ಪ್ರತಿಯಾಗಿ ಎಂಬಂತೆ ಕೇಂದ್ರವು ಈ ಮೊದಲೇ ಹಲವು ಬಾರಿ ಹೇಳಿರುವಂತೆ ಮುಂದಿನ ಹತ್ತು ವರ್ಷಗಳ ಕಾಲ ಗೋವೆಯಲ್ಲಿ ಯಥಾಸ್ಥಿತಿಯನ್ನು ಕಾದುಕೊಂಡು ಬರಬೇಕು. ಇಲ್ಲವೇ ಕರ್ನಾಟಕದಲ್ಲಿಯೇ ವಿಲೀನಗೊಳಿಸಬೇಕು ಎಂಬ ಅನಧಿಕೃತ ಗೊತ್ತುವಳಿಯನ್ನು ಇತ್ತೀಚೆಗಷ್ಟೇ ಸ್ವೀಕರಿಸುತ್ತಿದೆ. ಗೋವೆಯ ಬಗ್ಗೆ ಯಾವುದೇ ವಿಧದ ನಿರ್ಣಯವನ್ನು ಕೈಗೊಳ್ಳಲು ಮಹಾರಾಷ್ಟ್ರ ಅಥವಾ ಕರ್ನಾಟಕದ ವಿಧಾನ ಸಭೆಯು ಯಾವ ಅಧಿಕಾರವನ್ನೂ ಪಡೆದಿಲ್ಲವಾದರೂ ತಂತಮ್ಮ ಅಭಿಪ್ರಾಯವನ್ನು ಕೇಂದ್ರ ಸರಕಾರದ ಮುಂದಿಡಲು, ತಮ್ಮ ಬೇಡಿಕೆಯನ್ನು ಅದರ ಮುಂದೆ ಮಂಡಿಸಲು ಯಾವ ಅಭ್ಯಂತರವೂ ಇರುವುದಿಲ್ಲ.

ಮಹಾರಾಷ್ಟ್ರವು ತನ್ನ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿ ಗೋವೆಯನ್ನು ಅಧಿಕಾರ ವಾಣಿಯಿಂದಲೇ ಕೇಳುತ್ತಿದೆ. ಆದರೆ, ಕನ್ನಡಿಗರು ಅಷ್ಟು ಹಠವಾದಿಗಳಾಗಿರುವುದಿಲ್ಲ. ಕಾಂಗ್ರೆಸ್ಸು ಈಗಾಗಲೇ ಮಾಡಿರುವ ನಿರ್ಧಾರವನ್ನು ಮಹಾರಾಷ್ಟ್ರೀಯರ ಬೆದರಿಕೆಗಾಗಿ ಬದಲಾಯಿಸಬಾರದು; ದಿವಂಗತ ಪ್ರಧಾನಿ ನೆಹರೂರವರೂ ಇಂದಿನ ಪ್ರಧಾನ ಮಂತ್ರಿಯವರೂ ಕಾಂಗ್ರೆಸ್ ಪಕ್ಷವೂ ಪುನರುಚ್ಚರಿಸುತ್ತ ಬಂದ ವಚನವನ್ನು ಪಾಲಿಸಬೇಕು; ಹತ್ತು ವರ್ಷಗಳ ಅವಧಿಯು ಪೂರ್ಣಗೊಂಡ ಬಳಿಕ ಗೋವೆಯವರು ತಮ್ಮ ಭವಿಷ್ಯವನ್ನು ರೂಪಿಸಲು ಸ್ವತಂತ್ರರಿರಬೇಕು. ಇದರಲ್ಲಿ ಯಾರ ಪ್ರಭಾವಕ್ಕಾಗಲೀ ಯಾರ ಒತ್ತಾಯಕ್ಕಾಗಲೀ ಅವಕಾಶವಿರಬಾರದು ಎಂಬುದು ಕನ್ನಡಿಗರ ವಾದ. ಇದು ನ್ಯಾಯವಾದುದು; ಸದುದ್ದೇಶಪೂರಿತವಾದುದು. ನಿಷ್ಪಕ್ಷಪಾತ ಮನಸ್ಸಿನಿಂದ ಯಾರೇ ವಿಚಾರ ಮಾಡಿದರೂ ಈ ನಿಲುವು ತಪ್ಪಿದೆಯೆನ್ನಲಾರರು.

ಗೋವೆಯ ಮೇಲೆ ಮಹಾರಾಷ್ಟ್ರದ ಪ್ರಭಾವವು ಈಗೀಗ ಅಧಿಕವಾಗುತ್ತ ಬರುತ್ತಿದೆ. ಈ ಬಗೆಯ ಪ್ರಭಾವ ಬೀರುವವರು ಮಹಾರಾಷ್ಟ್ರದ ಮಂತ್ರಿಗಳು ಮಾತ್ರವಲ್ಲ; ಕೇಂದ್ರದಲ್ಲಿ ಮಂತ್ರಿಗಳಾಗಿರುವ ಮರಾಠಿಗರೂ ಸೇರಿದ್ದಾರೆ. ತಮ್ಮ ಜನಪ್ರಿಯತೆಯನ್ನು ತಮ್ಮ ರಾಜ್ಯದಲ್ಲಿ ಹೆಚ್ಚಿಸುವ ಇರಾದೆಯಿಂದ ಇವರು ಹೀಗೆ ಮಾಡಿದ್ದರೂ ಇರಬಹುದು; ಇಲ್ಲದ ಮತ್ತೇನು? ಕಾಂಗ್ರೆಸ್ ಸಂಸ್ಥೆಯು ಗೋವೆಯ ಬಗ್ಗೆ ಒಂದು ನಿಶ್ಚಿತ ನೀತಿಯನ್ನು ಅನುಸರಿಸುತ್ತಿರುವಾಗ, ಮಂತ್ರಿಸ್ಥಾನದಂತಹ ಜವಾಬ್ದಾರಿಕೆಯ ಪದದಲ್ಲಿರುವವರು ಅದಕ್ಕೆ ವ್ಯತಿರಿಕ್ತವಾದ ಹೇಳಿಕೆಗಳನ್ನು ನೀಡುವುದು ಅವರಿಗಾಗಲೀ ಕಾಂಗ್ರೆಸ್ ಸಂಸ್ಥೆಗಾಗಲೀ ಶೋಭೆಯನ್ನೀಯುವುದಿಲ್ಲ. ಒಮ್ಮೆ ಒಂದು ನಿರ್ಧಾರಕ್ಕೆ ಬಂದ ಮೇಲೆ ಅದನ್ನು ಮತ್ತೆ ಮತ್ತೆ ಪುನರಾಲೋಚನೆಗೆಂದೆತ್ತಿ ಕೊಳ್ಳುವುದು ಸಾಧುವಲ್ಲ. ಇಂತಹ ಪ್ರವೃತ್ತಿಯು ದುರದೃಷ್ಟಕರವೆಂದೇ ಹೇಳಬೇಕು. ಕೆಲವರ ಒತ್ತಾಯ ಅಥವಾ ಪ್ರಭಾವಗಳಿಂದಾಗಿ ಪಕ್ಷದ ನೀತಿಯು ಬದಲಾಗುತ್ತದೆಂದರೆ, ಆ ಪಕ್ಷಕ್ಕೆ ಅವಹೇಳನ; ಸರಕಾರಿ ನೀತಿಯಲ್ಲಿ ಅಸ್ಥಿರತೆಯಿರುವುದು ಗೊಂದಲಕ್ಕೆ ಕಾರಣವೆಂಬುದನ್ನು ಎಲ್ಲರೂ ಒಪ್ಪಬೇಕು.

ಕರ್ನಾಟಕದ ವಿಧಾನ ಸಭೆಯು ಸ್ವೀಕರಿಸುತ್ತಿರುವ ಗೊತ್ತುವಳಿಯು ಗೋಮಾಂತಕರಿಗೆ ಮಾಡುವ ಅವಮಾನವೆನ್ನುತ್ತಾರೆ. ಗೋವೆಯ ಅಧಿಕಾರ ಸೂತ್ರ ಹಿಡಿದ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷದವರು. ರಾಜ್ಯದ ವಿಧಾನ ಸಭೆಗೆ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ೩೦ ಸ್ಥಾನಗಳಲ್ಲಿ ೧೬ನ್ನು ಗೆದ್ದುಕೊಂಡ ಈ ಪಕ್ಷವು ಎರಡು ಲೋಕ ಸಭೆಯ ಸ್ಥಾನಗಳನ್ನೂ ಗಿಟ್ಟಿಸಿಕೊಂಡಿದೆ ನಿಜ. ಚುನಾವಣಾ ಘೋಷಣೆಯಲ್ಲಿ ಗೋವೆಯನ್ನು ಮಹಾರಾಷ್ಟ್ರದಲ್ಲಿ ಸೇರ್ಪಡೆಗೊಳಿಸುವುದೇ ತನ್ನ ಉದ್ದೇಶವೆಂದೂ ಅದು ಸಾರಿತು: ಉದ್ದೇಶ ಪೂರ್ತಿಯಾದೊಡನೆಯೇ ಈ ಪಕ್ಷವು ವಿಸರ್ಜಿತವಾಗುವುದೆಂದೂ ಹೇಳಲಾಗುತ್ತಿದೆ. ಗೋಮಾಂತಕರೂ ತಮ್ಮನ್ನೇ ಬಹುಮತದಿಂದ ಆರಿಸಿರುವುದರಿಂದ ಅವರೆಲ್ಲರೂ ಮಹಾರಾಷ್ಟ್ರಕ್ಕೆ ಸೇರಲು ಬಯಸುತ್ತಾರೆಂದು ಅದರ ವಾದ. ಇದೂ ಬರಿಯ ವಾದ ಮಾತ್ರ. ಗೋವೆಯ ಚುನಾವಣೆಗಳಲ್ಲಿ ಈ ಪಕ್ಷವು ಬಹುಮತ ಪಡೆಯಲು ಒಂದಲ್ಲ ಹಲವು ಕಾರಣಗಳಿದ್ದುವು. ಇಂದು ಗೋಮಾಂತಕರಲ್ಲಿ ಈ ವಾದವನ್ನು ವಿರೋಧಿಸುವವರೂ ಇದ್ದಾರೆ; ಅಧಿಕ ಸಂಖ್ಯೆಯಲ್ಲಿ! ವಿಲೀನಗೊಳಿಸುವ ಸಂಬಂಧದ ಗೊತ್ತುವಳಿಯನ್ನು ಅಲ್ಲಿನ ವಿಧಾನ ಸಭೆಯು ಬರೇ ಒಂದು ಬಹುಮತದಿಂದ ಸ್ವೀಕರಿಸಿತ್ತೆಂಬುದನ್ನು ಮರೆಯಬಾರದು. ಗೋವೆಯು ಮಹಾರಾಷ್ಟ್ರಕ್ಕೆ ಅಥವಾ ಕರ್ನಾಟಕಕ್ಕೆ ಸೇರುವಂತೆ ಸ್ವೀಕರಿಸುವ ಗೊತ್ತುವಳಿಯು ಬರಿಯ ಬಹುಮತದಿಂದಲೇ ಸ್ವೀಕೃತವಾದರೆ ಸಾಕೆಂದು ಹೇಳುವಂತಿಲ್ಲ. ಅಲ್ಪಮತ—ಬಹುಮತದ ಪ್ರಶ್ನೆಯು ಪ್ರಜಾಪ್ರಭುತ್ವದ ದುರ್ಬಲತೆ. ಭವಿಷ್ಯರೂಪಿಸುವಂತಹ ಮಹತ್ತರ ವಿಷಯವು ಸರ್ವಸಮ್ಮತವಾಗಬೇಕು; ಇದು ಅಸಾಧ್ಯವೆನಿಸಿದರೆ, ಅತ್ಯಧಿಕ ಬಹುಮತವಾದರೂ ಅಗತ್ಯ.

ಇಬ್ಬರು ಬಯಸುವ ಒಬ್ಬ ಯಾರನ್ನಾದರೂ ಸೇರುವುದು ಬಿಡುವುದು ಆಕೆಯ ಇಷ್ಟ. ಎಳೆಯ ಬಾಲಿಕೆಯ ಮನಸ್ಸು ಹೇಗಿದೆಯೆಂದು ಯಾರೂ ಅರಿಯರು. ಗೋಮಾಂತಕರಿಗೆ ತಮ್ಮ ಭವಿಷ್ಯದ ಬಗ್ಗೆ ಕೂಲಂಕಷ ಆಲೋಚನೆ ನಡೆಸಲು ಮತ್ತೊಂದು ನಿರ್ಧಾರಕ್ಕೆ ಬರಲು, ಕಡಿಮೆ ಪಕ್ಷ ಹತ್ತು ವರ್ಷವಾದರೂ ಬೇಕಾದೀತೆಂದು ದಿ। ಪ್ರಧಾನಿ ನೆಹರೂರವರು ಭಾವಿಸಿ ವಿಲೀನೀಕರಣದ ಪ್ರಶ್ನೆಯನ್ನು ಅಷ್ಟು ಕಾಲ ಹಿಂದಿಟ್ಟಿದ್ದರು. ಮತ್ತೆ ಮತ್ತೆ ಅದನ್ನು ಕೆದಕಿ ಗೊಂದಲವೆಬ್ಬಿಸುವುದು ಯಾರಿಗೂ ನೆಮ್ಮದಿ ತರುವಂತಹುದಲ್ಲ. ಐತಿಹಾಸಿಕ—ಭೌಗೋಳಿಕ ಅಥವಾ ಇನ್ನಿತರ ಯಾವ ಕಾರಣಗಳು ಹೇಗೂ ಇರಲಿ, ಗೋವೆಯು ಸರ್ವಾಂಗೀಣವಾಗಿ ಅಭಿವೃದ್ಧಿ ಹೊಂದಬೇಕು. ಗೋಮಾಂತಕರು ಸುಖಸಂತೋಷಗಳಿಂದಿರಬೇಕು; ಅತ್ತಿಂದಿತ್ತ ತೂರಾಡುವ ಚೆಂಡಾಗಬಾರದು. ಆದುದರಿಂದ ಕರ್ನಾಟಕದ ವಿಧಾನ ಸಭೆಯ ನಿರ್ಧಾರವು ನ್ಯಾಯಪಕ್ಷಪಾತಿಗಳಿಗೆ ಸಮಂಜಸವಾಗಿದೆ. ಕೇಂದ್ರ ಸರಕಾರವೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೂ ಇದನ್ನು ತಿಳಿದುಕೊಳ್ಳಬೇಕು. ವೃಥಾ ಗಲಿಬಿಲಿ ಯಾರಿಗೂ ಬೇಕಾಗಿಲ್ಲ. ಇದರಿಂದಲೇ ಕಹಿ ಬೆಳೆಯಲು ಕಾರಣವಾಗುವುದು.

ವಚನ ಸುಧೆ

ಸೂರ್ಯಸ್ಯ ಪಶ್ಯ ಶ್ರೇಮಾಣಂ ಯೋ ನ ತಂದ್ರಯತೇ ಚರನ್॥

(ಐತರೇಯ ಬ್ರಾಹ್ಮಣ, ೭—೧೫)

೦ ಸೂರ್ಯನ ಶೋಭೆಯನ್ನು ನೋಡು, ಸದಾ ಸಂಚರಿಸುತ್ತಿರುವ ಆತನು ಎಂದೆಂದಿಗೂ ಆಯಾಸಗೊಳ್ಳುವುದಿಲ್ಲ.

೦೦ ಸೂರ್ಯನಿಗೆ ಆಯಾಸವೆಂಬುದಿಲ್ಲ. ಆಲಸ್ಯವು ಆತನನ್ನು ಸೋಂಕುವುದೇ ಇಲ್ಲ. ಆದುದರಿಂದಲೇ ಆತನ ಶೋಭೆಯು ವರ್ಧಿಸುತ್ತ ಹೋಗುತ್ತದೆ. ಇದೇ ರೀತಿಯಾಗಿ ಪುರುಷಾರ್ಥ ಸಾಧಿಸುತ್ತ ಆಯಾಸ ಮತ್ತು ಆಲಸ್ಯವನ್ನು ತ್ಯಜಿಸುವವನ ಯಶಸ್ಸು ಹರಡುತ್ತದೆ.

ನರಸಣ್ಣನ ಸರಸ

'ಕೇರಳದಲ್ಲಿ ಸರಕಾರ ರಚಿಸಲು ಎರಡು ಕಮ್ಯುನಿಸ್ಟರಿಗೆ ಸಹಕಾರ ನೀಡಲು ಎಲ್ಲರೂ ಮುಂದೆ ಬರುತ್ತಿದ್ದಾರೆ.'

'ಮಗಳು ವಿಧವೆಯಾದರೂ ಚಿಂತಿಲ್ಲ, ಅಳಿಯ ಸಾಯಬೇಕು ಎಂಬ ಉಚ್ಚ ಕಾಲದವರಲ್ಲವೇ!'

ಗೇಹರಾಜ್ಯದಲ್ಲಿ

ಭಾಸ್ಕರಾಚಾರ್ಯರ ಕುಲದವರು

"ಅಂತೂ ಕೊನೆಗೂ ನೀನೇ ಗೆದ್ದು ಬಿಟ್ಟೆ...."

"ಯಾಕೆ? ಏನಾಯ್ತು?"

"ಆಗೋದೇನು, ನೀನು ಅವತ್ತು ಎನ್‌ಜಿವೋಗಳ ಪರ ವಕಾಲತ್ತು ಮಾಡಿದೆ ನೋಡು."

"ವಕಾಲತ್ತು ಮಾಡೋಕೆ ನಾನೇನು ವಕೀಲಳೆ?"

"ವಕೀಲಳಲ್ಲವಾದ್ರೂ ಫೂಟ್‌ಲಾಯರ್..."

"ಹಾಗಂದ್ರೆ?"

"ಫೂಟ್ ಲಾಯರ್ ಅಂದ್ರೆ ಅರ್ಥ ಆಗೋದಿಲ್ವೆ?"

"ಫೂಟ್ ಅಂದ್ರೆ ಗೊತ್ತಾಗುತ್ತೆ. ಲಾಯರ್ ಅಂದ್ರೂ ಗೊತ್ತು. ಆದ್ರೆ..."

"ಫೂಟ್ ಲಾಯರ್ ಅಂದ್ರೆ ಅರಿಯೆ ಅಲ್ವಾ..."

"ಪಾದ ವಕೀಲ....ವಕೀಲರ ಪಾದ ಸೇವಕಾಂತಾಗುತ್ತೆ.. ಆದ್ರೆ, ನೀವೇನೂ ವಕೀಲರಲ್ಲ ನೋಡಿ....'

"ಹ್ಞಾಂ....ನಿನ್ನ ಅರ್ಥ ಸರಿಯಾದದ್ದೇ ನೋಡು. ವಕೀಲರ ಪಾದ ಸೇವಕಾಂತಂದ್ರೆ, ಕಕ್ಷಿಗಾರ— ವಕೀಲರಿಬ್ಬರ ನಡುವೆಯೂ ಬಂದು ಇಬ್ಬರಿಂದಲೂ ಕಮಿಶನ್ ಗಿಟ್ಟಿಸುವವ...."

'ಅಂದ್ರೆ, ನಮ್ಮ ಅನಂತ ಭಟ್ಟರ ಹಾಗೇಂತ ಅಲ್ವೆ?'

'ಹ್ಞಾಂ...'

'ನೋಡಿ ನೀವು ತಪ್ಪಿ ಬಿದ್ರಿ....'

'ಎಲ್ಲಿ?'

"ಇಲ್ಲೇ...."

'ಯಾಕೆ?'

"ಯಾಕೇಂತ ನನ್ನನ್ನೇನು ಕೇಳ್ತೀರಿ? ಕೇಳಿಕೊಳ್ಳಿ ನಿಮ್ಮನ್ನು ನೀವೇ...."

"ಅಲ್ವೆ, ನಾನು ನಿನ್ನನ್ನ ಕೇಳೋವಷ್ಟು ಸಲೀಸಾಗಿ ನನ್ನನ್ನ ಕೇಳೋಕಾಗುತ್ತೆ?"

"ಆಗುತ್ತೇಂತ ಯಾಕೆ ಅರ್ಥ ಮಾಡ್ತೀರಿ? ಆಗೋಲ್ಲಾಂತ ಸ್ಪಷ್ಟವಾಗಿ ಅಂದು ಬಿಡಿ....'

'ಹೇಗೆ ಬೇಕಾದ್ರೂ ಅಂದು ಕೋ...."

'ಅಲ್ರಿ, ನಾನೆಲ್ಲಿ ಅಂತಹ ಕೆಲ್ಸ ಮಾಡ್ತೀನಿ?"

"ಮತ್ತೇನಮ್ಮ ನೀನು ಮಾಡಿದ್ದು? ಎನ್‌ಜಿವೋಗಳ ಸಂಕಷ್ಟವನ್ನ ಕಣ್ಣಿಗೆ ಕಟ್ಟುವಂತೆ ವರ್ಣಿಸಿ, ಅವರ ಕಣ್ಣೀರ ಕತೆಯನ್ನು ಹೇಳಿ ನಿನ್ನ ಕಣ್ಣಲ್ಲಿ ನೀರು ಸುರಿಸಿದ್ದು ಸಾಕಾಗದೆ ನನ್ನ ಕಣ್ಣುಗಳಲ್ಲೂ ನೀರು ಸುರಿಯುವಂತೆ ಮಾಡಿದಿಯಲ್ಲಾ...."

'ಅಯ್ಯೋ, ಇದ್ರಲ್ಲಿ ವಿಶೇಷವಾದ್ದೂ ಏನೂಂತ? ಇದ್ದದ್ದನ್ನ ಇದ್ದಂತೆ ಅಂದು ಬಿಟ್ರೆ...."

"ಅದೇ ನೋಡು ಫೂಟ್ ಲಾಯರ್ರ ಕೆಲ್ಸ'

"ಅಲ್ರಿ, ಅವ್ರು ಸುಳ್ಳನ್ನ ಸತ್ಯಾಂತ ಸಾಧಿಸ್ತಾರೆ......"

"ಅಯ್ಯೋ ನೀನೇ... ಅಲ್ವೆ, ವಾದಿ— ಪ್ರತಿವಾದಿಗಳ ವಕೀಲ್ರಿಬ್ರೂ ತಮ್ಮ ಕಕ್ಷಿಗಾರನೇ ಸರಿಯೆಂದು ವಾದಿಸುವುದಿಲ್ವೆ? ಅದು ಎಂದಾದರೂ ಸಾಧ್ಯವಾಗುತ್ತೆ?"

"ನೀವೀಗ ಅನ್ನೋದಾದ್ರೂ ಏನು? ನಾನು ವಕಾಲತ್ತು ಮಾಡಿ ಗೆದ್ದೇಂತ ತಾನೆ? ಏನಾಯ್ತು ಈಗ? ಯಾವ ಜಜ್‌ಮೆಂಟ್ ಬಂತೂಂತ?"

"ಪಾಪ, ಏನೂ ತಿಳಿಯದವಳ ಹಾಗೆ ಕೇಳ್ತಾ ಇದ್ದೀಯಲ್ಲಾ! ನೋಡು, ಆ ನಿನ್ನ ಮುಖವೇ ಸಾರಿ ಹೇಳುತ್ತೆ, ನೀನನ್ನೋದು ಸುಳ್ಳೂಂತ.... ಆ ಕಣ್ಣುಗಳು ನೋಡು, ಅರೆ ಬಿರಿದು ಹೊರಬರುವ ಚೆಂದ...'

"ಅಯ್ಯೋ, ನೀವೊಬ್ರು.... ಯಾವ ಕವಿ ಕಲೆಗೆ ಕೈಯಿಟ್ಟಾಂತ ಬರೋವಾಗ...."

"ಇದಕ್ಕೆಲ್ಲಾ ಯಾರು ಯಾಕೆ ಕೈಯಿಡಬೇಕು?"

"ಮತ್ತೆ ಹೇಗೆಲ್ಲಾ...."

"ಅಂದ್ರೆ ಇದ್ದದ್ದನ್ನ ಇದ್ದ ಹಾಗೆ ಹೇಳಬೇಕಾದ್ರೂ..."

"ಸಾಕು ಬಿಡೀಂದ್ರೆ... ಯಾವಾಗ್ಲೂ ನೀವು ಹೀಗೇ .."

"ಇಲ್ಲ ಕಣೇ.. ಇನ್ನೂ ಒಂದು ಹತ್ತು ಮಳೆಗಾಲ ಕಳದ್ರೆ ಹೇಗೇಂತ ನೋಡಬೇಕಷ್ಟೆ..."

"ಶುರುವಾಯ್ತು ಇವ್ರದ್ದೊಂದು ಭವಿಷ್ಯ ಪುರಾಣ...ಅಲ್ವಾ ..."

"ವರ್ತಮಾನ ಪುರಾಣ ಓದೋಕೂ ಬಿಡುವಿಲ್ದೆ ಇರುವಾಗ ಮತ್ತೆ...."

"ಸಾಕೂಂದ್ರೆ . ಅಲ್ಲಾ ಒಂದು ಮಾತು ಕೇಳ್ತೀನಿ..."

"ಇಲ್ಲಾ..."

"ಯಾಕೆ ಹೀಗಂತೀರಾ? ಯಾವಾಗ್ಲೂ ನೂರು ಕೇಳು ಅನ್ನೋವ್ರು...."

"ಹಿಂದೆ ಹಾಗಿದ್ರೆ ಇಂದೂ ಹಾಗೆಯೇ ಇರಬೇಕೂಂತ ನಿಯಮವಿದೆಯೇನೆ?"

'ಇದಿಲ್ಲನ್ನಿ. ಆದ್ರಲ್ಲೂ ನಿಮ್ಮ ಟೋಪಿಯವ್ರ ಸರ್ಕಾರ ಇರೋವರ್‍ಗೆ ನಿಯಮಾಂತನ್ನೋದು ಆಫೀಸಿನ ಎಪ್ರೆಂಟಿಸ್ ನಂತೆ...'

"ಸಾಕು ಕಣೇ, ಮರಳಿ ನಾಲಗೆ ಉದ್ದವಾಯ್ತು..."

"ಎಷ್ಟು ಉದ್ದವಾದ್ರೂ ನೋಡಿ, ಮೂಗಿಗೆ ಮುಟ್ಟೋದೇ ಇಲ್ಲ...."

'ಆದ್ರೇಂದ್ಲೇ ಆಡಿದೆಲ್ಲಾ ನೀರಲ್ಲಿ ಹೋಮ.'

'ಅಲ್ರಿ, ನೀವಂದ್ರಲ್ಲಾ, ನನ್ನ ಮಾತು ಗೆದ್ದು ಬಿಟ್ಟೂಂತ....'

'ನಿನ್ನ ಮಾತಲ್ಲಿ ಗೆದ್ದದ್ದೇ? ನಿನ್ನ ವ್ಯಕ್ತಪಡಿಸಿದ ಸಹಾನುಭೂತಿ ಸಾರ್ಥಕವಾಗ್ಯೂಂತ ಅಂದೆ....'

'ಅದೇ ಏನಾಯಿತಂತೆ?'

'ನಾಯಿಯೂ ಇಲ್ಲ, ಬೆಕ್ಕೂ ಇಲ್ಲ....'

'ಮತ್ತೇನಿದೇಂತ?'

"ಇರೋದೇನೂಂತ ತುಸು ಕಣ್ಣು ಬಿಟ್ಟು ನೋಡು...."

"ಏನೋಪ್ಪ ಏನೂ ಇಲ್ಲದ್ದು ಕಾಣೋಲ್ಲ."

"ಅಲ್ವೆ ಇಲ್ಲದ್ದು ಹೇಗೆ ಕಾಣಿಸ್ಬೇಕೂಂತ...."

"ಅದಿರ್ಲಿ...."

ಇರ್ಲಿ ಯಾರು ಬೇಡಾಂತಾರೆ?"

"ನೀವೊಂದು...."

"ಒಂದು ಅಲ್ಲ ಒಬ್ರು..."

"ಊಹ್ಞಾಂ .. ಇಬ್ರು..."

"ಅಗ್ಲಪ್ಪ, ಇಬ್ರು ..."

"ಬೇಡ ಹಾಗಾದ್ರೆ...'

"ಬೇಡವಾದ್ರೆ ಬೇಡ. ಯಾರು ಮತ್ತೆ ಬೇಕೂಂತಾರೆ?"

"ಮತ್ತೆ ಯಾರೂ ಅನ್ನೋಲ್ಲ. ಬೇಕೂಂತನ್ನೋದು ಈಗ...."

"ಏನು?"

"ಅದೇ ಅಂದೆನಲ್ಲಾ. ಎನ್‌ಜಿವೋಗಳ ಕತೆ...."

"ಓ, ಅದು ನಿಂಗೆ ಗೊತ್ತೇ ಇದೆ...."

"ಇಲ್ರಿ, ನಂಗೊತ್ತಿದ್ರೆ ಮತ್ತೆ ಯಾಕೆ ನಿಮ್ಮನ್ನ ಕೇಳ್ತಿದ್ದೀನಿ?"

"ಅಲ್ವೆ, ಇವತ್ತು ಪೇಪ್ರು ಬರ್ಲಿಲ್ವಾ?"

"ಬಾರ್ದೆ ಉಂಟೆ?"

"ಇರ್ಲಿಲ್ವೆ ಅದ್ರಲ್ಲಿ?"

"ಇತ್ತು...'

"ಏನೂಂತ?"

"ವೇತನ— ತುಟ್ಟಿ ಭತ್ತೆಗಳ ಪರಿಷ್ಕರಣ ಮಾಡ್ತೇವೇಂತ ..."

"ಸರಿ ಮುಗಿಯಿತಲ್ಲಾ...."

'ಮುಗಿಯೋದು ಏನೂಂತ?"

'ಯೋಚನೆ..."

'ಅಲ್ರಿ, ತುಟ್ಟಿಭತ್ತೆಯಲ್ಲೇನೋ ಹೆಚ್ಚಳವಾಗುತ್ತೆ ನಿಜಾನ್ನಿ. ಆದ್ರೆ ವೇತನ....?"

ಸಮಾನ ಮಟ್ಟದ ಹುದ್ದೆಗಳಲ್ಲಿ ಇಲ್ಲಿನ ವೇತನ ಮಟ್ಟ ಕಡಿಮೆಯಿದ್ರೆ ಅದನ್ನ ಮದ್ರಾಸಿನದ್ದಕ್ಕೆ ತರಲಾಗುವುದು ಎಂದು ಅಂದಿದ್ದಾರಲ್ಲಾ .."

"ಹೌದು.."

"ಮತ್ತಿನ್ನು ಏನಾಗಬೇಕು?"

"ಏನಾಗಬೇಕೂಂತಂದ್ರೆ? ನೋಡಿ, ವೇತನವನ್ನು ಹೊಸ ಸ್ಕೇಲಿನಲ್ಲಿ ಗೊತ್ತುಪಡಿಸೋದು ಹೇಗೇಂತ?"

"ಅದೆಲ್ಲಾ ಇನ್ನು ಲೆಕ್ಕ ಮಾಡಬೇಕಷ್ಟೆ...."

"ಅಂದ್ರೆ ಹಿಂದೆ ಮುಂದೆ ಯೋಚನೆ ಮಾಡದೇನೇ ಘೋಷಣೆ ಮಾಡಿದ್ದೂಂತ ಅನ್ನೋಣ?"

'ಸದ್ಯ ಅದೇ ಸರಿ...'

"ಅಲ್ರಿ, ಇದು ಯಾವ ನ್ಯಾಯಾಂತ"

'ಮತ್ತೆ ಲೆಕ್ಕಮಾಡಿ ಕೂತುಕೊಳ್ಳೋದು ಯಾರೂಂತ? ಜತ್ತಿಯವ್ರೆ ಅಂದಿದ್ದಾರಲ್ಲಾ, ಈ ಸಂಬಂಧದ ವಿವರಗಳನ್ನ ತಯಾರಿಸಲಾಗುತ್ತಿದೇಂತ..."

'ಹೌದು, ಅವ್ರ ವಿವರ ತಯಾರಾಗೋದು ಯಾವಾಗಾಂತ?'

"ಅದೀತು ಒಂದು ದಿನ..."

'ಆ ಒಂದು ದಿನ ಬರೋದ್ರೊಳ್ಗೆ....'

'ಭೂಮಿಯೇ ಮುಳುಗಿ ಬಿಡಬಹುದೇನು.. '

'ಅದ್ಕಿಂತ್ಲೇ ನೋಡಿ, ಅದು ಬೇಗ ಬರಬೇಕಲ್ಲಾ...'

'ಅಲ್ವೆ, ಯಾಕೆ ನಿನ್ಗೆ ಅದ್ರ ಮೇಲೆ ಅಷ್ಟು ಕುತೂಹಲಾಂತ..'

'ಅಲ್ರಿ, ಹಿಂದಿನಸಾರಿ ವೇತನ ಮಟ್ಟಗಳನ್ನು ಹೆಚ್ಚಿಸೋವಾಗ....'

"ಏನಾಯ್ತು?'

"ಆಗೋದೇನು? ನೋಡಿ, ೧೯೫೭ರಲ್ಲಿ ಆಯ್ತಲ್ಲಾ ಒಮ್ಮೆ ಆಗ ನಮ್ಮ ನಿರಂಜನ..."

'ನಿರಂಜನನೆ?... ಹ್ಞಾಂ ಸರಿತೀತ. ಬಿಡು...."

"ಅವನಿಗೆ ಎರಡೂವರೆ ವರ್ಷ ಸರ್ವೀಸಾಗಿತ್ತು. ಪ್ರತಿ ಮೂರು ವರ್ಷಗಳಿಗೊಂದು ಇಂಕ್ರಿಮೆಂಟ್ ಅಂತ ಮಾಡಿದ್ರಿಂದ ಅವನಿಗೆ ಬೇಸಿಕ್‌ನಲ್ಲೇ ಫಿಕ್ಸ್ ಮಾಡಿದ್ರು..."

"ಅಂದ್ರೆ ೪೫ರಿಂದ ೫೦ಕ್ಕೆ ಗೊತ್ತು ಮಾಡಿದ್ರು..."

"ಹ್ಞಾಂ... ಮತ್ತೆ ನೋಡಿ ೧೯೬೦ರಲ್ಲಿ ಆಯ್ತಲ್ಲ. ಆಗ ಅವರಿಗೆ ಮೂರು ಇಂಕ್ರಿಮೆಂಟ್ ಆಗಿತ್ತು...'

'ಅಂದ್ರೆ ೫೫ ವೇತನವಿತ್ತು...."

'ಅದಕ್ಕೆ ೨೫ನ್ನು ಸೇರ್ಸಿ ೮೦ ಮಾಡಿ ಹೊಸ ಸ್ಕೇಲಿಗೆ ಸರಿಯಾಗಿ ೮೫ ಮಾಡಿದ್ರು... ಹೀಗೆ ಹಿಂದೆ ಮಾಡಿದ ಸರ್ವೀಸೆಲ್ಲಾ...'

'ಅದಕ್ಕೇನು ಮಾಡೋದೇ? ಹಿಂದೆ ಕೆಲ್ಸ ಮಾಡಿದ್ದಕ್ಕೆ ಹಿಂದೆ ಸಂಬ್ಳ ಕೊಟ್ಟಿತ್ತು ನೋಡು...."

"ಅದು ಸರಿ. ಆದ್ರೆ ಸರ್ವೀಸಾದವರ್ರಿಗೂ ಇವತ್ತು ಸೇರೋವ್ರಿಗೂ ಒಂದೇ ವೇತನಾಂತಂದ್ರೆ..."

"ಅದಕ್ಕೆ ಏನು ಮಾಡೋದು ಹೇಳು..'

"ಅಲ್ಲಾ ಹೀಗೆಲ್ಲಾ ಮಾಡ್ತಾ ಹೋದ್ರೆ ನಿರಂಜನ ಹೇಳ್ತಾನೆ... ವೇತನ ಮಟ್ಟದ ಮಧ್ಯದ ಹಂತವನ್ನೂ ಮುಟ್ಟುವುದು ಸಾಧ್ಯವಿಲ್ಲ ಜೀವನದಲ್ಲೇಂತ..."

"ಯಾಕೆ?"

"ನೋಡಿ ಈ ಎಂಟು ವರ್ಷಗಳಲ್ಲೇ ಮೂರು ಬಾರಿ ಪರಿಷ್ಕರಣವಾಯ್ತು. ಹಾಗಿರುವಾಗ ..."

"ಆಗ ಬೇಕೂಂತ ಹೆದರಿಸುವವ್ರು, ದೊಂಬಿಯೆಬ್ಬಿಸುವವ್ರು ಎಲ್ಲಾ ಅವ್ರೇ ಅಲ್ವೆ?"

"ನಿಮ್ಮ ಬುದ್ಧಿಗೆ ಏನೆನ್ನ ಬೇಕೂಂತ? ಅಲ್ರಿ, ವೇತನ ಏರ್ಸಿದ್ರೆ ಉಣ್ಣೋದು ಏನನೂಂತ...'

(ಹದಿಮೂರನೇ ಪುಟನೋಡಿರಿ)

ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯು ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	[illegible]

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ವಿವೇಚನೆ

ನಾವು ಮತ್ತು ನಮ್ಮ ಪ್ರಾಥಮಿಕ ಶಿಕ್ಷಣ

ಬರೆದವರು: ಶ್ರೀ ಪಿ. ಕೆ. ಶೆಟ್ಟಿ, ಕರೋಪಾಡಿ.

ನಮ್ಮಲ್ಲಿ ಇಂದು ಎಲ್ಲೆಂದರಲ್ಲಿ ಕೇಳಿ ಬರುತ್ತಿರುವ ಸುದ್ದಿಯೆಂದರೆ ವಿದ್ಯಾರ್ಥಿಗಳ ಅಶಿಸ್ತಿನದು. ವಿದ್ಯಾರ್ಥಿಗಳು ಕೇವಲ ಕ್ಷುಲ್ಲಕ ವಿಷಯಗಳಿಗಾಗಿ ಮುಷ್ಕರ ಹೂಡಿ ಗೊಂದಲವೆಬ್ಬಿಸುತ್ತಿರುವುದು ವಾಡಿಕೆಯಾದಂತಿದೆ. ಅದರಲ್ಲೂ ಜವಾಬ್ದಾರಿಯುತ ಉಚ್ಚ ತರಗತಿಗಳ ವಿದ್ಯಾರ್ಥಿಗಳೇ ಈ ಹವ್ಯಾಸದಿಂದ ದೇಶದ ಉನ್ನತಿಗೆ ಕೊಡಲಿ ಪೆಟ್ಟನ್ನೀಯುತ್ತಿರುವುದು ಶೋಚನೀಯವಲ್ಲದೆ ಮತ್ತೇನು? ಇನ್ನು ಸಾಮಾನ್ಯ ವರ್ಗದ ಜನರು ತಮ್ಮ ನಡತೆಯನ್ನು ಹೇಗೆ ವಶವಿರಿಸಿಕೊಂಡಾರು?

ದೇಶದ ಮುಂದಿನ ಪೀಳಿಗೆಯೇ ಆದ ವಿದ್ಯಾರ್ಥಿಗಳ ಈ ಉದ್ಧಟತನಕ್ಕೆ ಹಲವರು ಕೆಲವು ಕಾರಣಗಳನ್ನು ಕೊಡುತ್ತಾ ಇದ್ದಾರೆ. ಕೆಲವರು ವಿದ್ಯಾರ್ಥಿಗಳನ್ನು ಸಚ್ಚೀಲರಾಗಿ ರೂಪಿಸುವ ಶಿಕ್ಷಕರಲ್ಲಿ ದೋಷವನ್ನು ಎತ್ತಿ ಹೇಳಿದರೆ, ಕೆಲವರು ವಿದ್ಯಾರ್ಥಿಗಳ ಹೆತ್ತವರು ಯಾ ರಕ್ಷಕರನ್ನು ಹೇಳುತ್ತಿದ್ದಾರೆ.

ವಾಸ್ತವಿಕ ಸ್ಥಿತಿ ಎಂತಿದ್ದರೂ ನಮ್ಮ ಶಿಕ್ಷಣ ಪದ್ಧತಿಯಲ್ಲಿರುವ ಕೆಲವು ದೋಷಗಳನ್ನು ಇಲ್ಲಿ ಎತ್ತಿ ನುಡಿಯಬಹುದಾಗಿದೆ.

ನಾವು ಕಟ್ಟುತ್ತಿರುವ ಕಟ್ಟಡವೊಂದು ಸುದೃಢವಾಗಿ ರೂಪುಗೊಂಡು ಸುರಕ್ಷಿತವಾಗಿ ಕಂಗೊಳಿಸಬೇಕಿದ್ದರೆ ಅದಕ್ಕೆ ಯೋಗ್ಯ ಅಡಿಪಾಯವೆಂತು ಅಗತ್ಯವೋ ಹಾಗೇ ನಮ್ಮ ಶಿಕ್ಷಣದ ಅಡಿಪಾಯವೆನಿಸುವ ಪ್ರಾಥಮಿಕ ಶಿಕ್ಷಣದಲ್ಲಿ ಈಗ ಇದ್ದುದಕ್ಕಿಂತಲೂ ಅಧಿಕ ತಮ್ಮ ಸುಧಾರಣೆ ಅವಶ್ಯವೆಂದು ಒತ್ತಿ ಹೇಳಬಹುದು.

ಪ್ರಜಾಪ್ರಭುತ್ವದ ಯಶಸ್ಸನ್ನು ಗಳಿಸಬೇಕೆಂದಿದ್ದರೆ ರಾಷ್ಟ್ರದ ಪ್ರಜಾಕೋಟಿ ಸುಶಿಕ್ಷಿತವಾಗಬೇಕಾದುದು ಅಗತ್ಯ ತಾನೆ? ಪ್ರಜಾಪ್ರಭುತ್ವವೆಂದರೇನೆಂಬುದನ್ನೇ ತಿಳಿದುಕೊಳ್ಳಬಲ್ಲಂತಹ ವ್ಯಕ್ತಿಗಳು ಗ್ರಾಮೀಣ ಪ್ರದೇಶಗಳಲ್ಲಿ ಕೇವಲ ಬೆರಳೆಣಿಕೆಯಷ್ಟೇ ದೊರೆಯಬಹುದು. ಚುನಾವಣೆಯ ವೇಳೆ ಧನಿಗಳ ಪಕ್ಷಕ್ಕೆ ತನ್ನ ಓಟನ್ನು ಕೊಟ್ಟು ಕರ್ತವ್ಯ ಮುಗಿಸುವ ಕಳ್ಳಿಗರೇ ಹೆಚ್ಚು. ಇದು ಕೇವಲ ಒತ್ತಾಯಕ್ಕಾಗಿ.

ಇಂದಿನ ರಾಜ್ಯಭಾರ ಕ್ರಮಕ್ಕಿಂತ ಆಂಗ್ಲರ ರಾಜ್ಯಭಾರವೇ ಹೆಚ್ಚಿನದೆಂದು ಹಲವು ಮಂದಿ ಜನಗಳು ಹೇಳುವುದನ್ನು ನಾನು ಕಿವಿಯಾರೆ ಕೇಳಿದ್ದೇನೆ! ಇಂದಿನ ಶಿಕ್ಷಣಕ್ಕೂ ಆಗಿನ ಶಿಕ್ಷಣಕ್ಕೂ ಹೋಲಿಕೆ ಕೊಡುತ್ತಾ ಅವರು ವಾದಿಸುವಾಗ ಅವರಿಗೆ ನಾವು ಶರಣೆನ್ನಲೇ ಬೇಕಾಗುತ್ತದೆ. "ನಾವೆಲ್ಲ ಶಾಲೆಗೆ ಹೋಗುವ ಸಮಯದಲ್ಲಿ ನಾಲ್ಕನೆ ತರಗತಿ ಓದಿದ ವಿದ್ಯಾರ್ಥಿಯನ್ನು ಈಗ ಹನ್ನೊಂದನೇ ತರಗತಿಯ ವಿದ್ಯಾರ್ಥಿಯೊಡನೆ ತೂಗಿ ನೋಡಿದರೆ ಅವನಷ್ಟರ ಶಿಕ್ಷಣದ ಮಟ್ಟ ಸಮನಾಗಿರಬಹುದು" ಎಂದು ಅವರು ವಾದಿಸುತ್ತಾರೆ. ಹಾಗಿದ್ದರೆ ಈಗಿನ ಶಿಕ್ಷಣ ವಿಷಯಗಳು ಬಹಳ ಲಘುವೆಂದಾಯಿತಲ್ಲವೇ?

ಇಂದು ಶಿಕ್ಷಣದಲ್ಲಿ ವಿಷಯಕ್ಕೆ ಪ್ರಾಧಾನ್ಯತೆಯಿಲ್ಲ. ಮಗುವಿಗೇ ಪ್ರಾಧಾನ್ಯತೆ. ತಪ್ಪು ದಾರಿ ತುಳಿಯುತ್ತಿರುವ ವಿದ್ಯಾರ್ಥಿಯನ್ನು ಸರಿದಾರಿಗೆ ತರುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ ಶಿಕ್ಷಕನಿಗೆ. ಏಕೆಂದರೆ ಭಯಕ್ಕೆ ಬಾಗಬೇಕಾದ ಪ್ರಮೇಯ ಕಡಿಮೆ. ಇಲ್ಲಿ ಶಿಕ್ಷಕನದೇನು ದೋಷ?

ಶಿಕ್ಷಣದ ಪಂಚಾಂಗವಾದ ಪ್ರಾಥಮಿಕ ಶಿಕ್ಷಣದಲ್ಲೇ ಎಳೆ ಹರೆಯದ ಬಾಲಕನಲ್ಲಿ ಶಿಸ್ತನ್ನು ಬೇರೂರಿಸುತ್ತಾ ಸಾಗಿದ್ದಲ್ಲಿ ಮುಂದಿನ ಮಾಧ್ಯಮಿಕ ತರಗತಿಗಳಲ್ಲಿ ಆತ ದಾರಿ ತಪ್ಪುವುದು ಖಂಡಿತ ನ. ಆದುದರಿಂದ ಮಗುವನ್ನು ಭಯದಿಂದ ಬಾಗಿಸುವ ಕ್ರಮ ಹೆಚ್ಚು ಪರಿಣಾಮಕಾರಿ. ಗಿಡವಾಗಿ ಬಾಗದ್ದು ಮರವಾಗಿ ಬಾಗಲಾರದು.

ತಮ್ಮ ಮಕ್ಕಳನ್ನು ಸರಿ ದಾರಿಗೊಯ್ಯುವಲ್ಲಿ ಹೆತ್ತವರ ಪಾತ್ರವೂ ಹಿರಿದಾದುದು. ಚಿಕ್ಕಂದಿನಿಂದಲೇ ಮಕ್ಕಳು ಸತ್ಶೀಲ—ಸದ್ವರ್ತನೆಗಳಲ್ಲಿ ಪ್ರವೃತ್ತರಾಗಿರುವಂತೆ ಪ್ರೇರೇಪಿಸಿ, ಗುರುಹಿರಿಯರು ದೇವರುಗಳಲ್ಲಿ ಭಕ್ತಿಯಿರುವಂತೆ ನೋಡಿಕೊಂಡು, ತಮ್ಮ ಮಕ್ಕಳು ಆದರ್ಶದ ಆಗರವಾಗುವಂತೆ ನೋಡಿಕೊಳ್ಳಬೇಕಾದುದು ಹಿರಿಯರ ಆದ್ಯ ಕರ್ತವ್ಯಗಳಲ್ಲಿ ಒಂದು.

ನಮ್ಮ ರಾಜ್ಯದಾದ್ಯಂತ ಶಿಕ್ಷಣದಲ್ಲಿ ಏಕರೂಪತೆಯನ್ನು ಸಾಧಿಸುವುದಕ್ಕಾಗಿ ಸರಕಾರದ ವತಿಯಿಂದಲೇ ಪಠ್ಯ ಪುಸ್ತಕಗಳನ್ನು ಅಚ್ಚು ಹಾಕಿಸಿ ಪ್ರಾಥಮಿಕ ತರಗತಿಗಳಿಗೊದಗಿಸುವ ವ್ಯವಸ್ಥೆ ಸ್ವಾಗತಾರ್ಹವಾದರೂ, ಅದೂ ಸಂಪೂರ್ಣ ಯಶಸ್ಸು ಗಳಿಸಿದಂತಿಲ್ಲ. ಪಠ್ಯ ಪುಸ್ತಕಗಳ ಸಮಿತಿಗಳಿಗಾಗಿ ಆಯ್ಕೆ ಮಾಡಿದ ಸದಸ್ಯರನೇಕರು ಪ್ರಾಥಮಿಕ ಶಿಕ್ಷಣದ ಬಗೆಗೆ ಸಂಪೂರ್ಣ ದೂರವಿರಲೇಬೇಕಾದ ವ್ಯಕ್ತಿಗಳಾಗಿರಬೇಕು! ಇಡೀ ರಾಜ್ಯಕ್ಕೆ ಒಂದು ಸಮಿತಿಯನ್ನು ರಚಿಸಿಕೊಂಡು ರಾಜ್ಯದ ಒಂದು ಮೂಲೆಯಲ್ಲಿ ಕುಳಿತು ತಯಾರಿಸಿದ ಪಠ್ಯ ಪುಸ್ತಕಗಳು ಎಲ್ಲಾ ಜಿಲ್ಲೆಗಳಿಗೂ ಹೊಂದಿಕೊಳ್ಳುತ್ತಿಲ್ಲ. ಒಂದೆಡೆಯ ಪರಿಸನ್ನಿವೇಶ ಇನ್ನೊಂದೆಡೆಯಲ್ಲಿ ಅನ್ವಯಿಸುತ್ತಿಲ್ಲ.

ಪೇಟೆಯ ಜನಜೀವನ ಹಳ್ಳಿ ಮಕ್ಕಳಿಗೆ ಕನಸು ಕಂಡಷ್ಟೆ ಸತ್ಯ. ಎಷ್ಟೋ ವಿಚಾರ ಹಳ್ಳಿ ಮಕ್ಕಳ ಅಭಿಪ್ರಾಯಕ್ಕೆ ಸಿಲುಕದೆ ಕಬ್ಬಿಣದ ಕಡಲೆಯಂತಾಗಿವೆ. ಪರಿಸ್ಥಿತಿಗೆ ಹೊಂದದ ವಿಷಯ ಬೋಧನೆಯಿಂದ ಯಾವ ಪರಿಣಾಮವೂ ಮಕ್ಕಳಲ್ಲಿ ಉಂಟಾಗದು.

ಆಯಾಯ ಜಿಲ್ಲೆಗಳಲ್ಲಿರುವ ದೀರ್ಘ ಸೇವೆ ಸಲ್ಲಿಸಿರುವ ಪ್ರಾಥಮಿಕ ಶಾಲಾ ಶಿಕ್ಷಕರೇ ಆಯಾಯ ಜಿಲ್ಲೆಗಳಿಗೆ ಬೇಕಾದ ಪ್ರಾಥಮಿಕ ಗ್ರಂಥಗಳನ್ನು ರಚಿಸಬೇಕು. ಪದವೀಧರ ಅಧ್ಯಾಪಕರು ಪಠ್ಯ ಪುಸ್ತಕ ಸಮಿತಿಗಳಿಂದ ದೂರವಿರಬೇಕು.

ಇಂತಾದರೆ ಪಠ್ಯ ಪುಸ್ತಕಗಳ ಸರಬರಾಜು ಶೀಘ್ರವಾದೀತು. ಜಿಲ್ಲೆಯ ಕೇಂದ್ರಗಳಲ್ಲಿ ಮುದ್ರಣಾ ವ್ಯವಸ್ಥೆಯನ್ನು ಕೈಕೊಂಡು ಅದನ್ನು, ಮುದ್ರಣ ದೋಷಗಳನ್ನು ಕಡಿಮೆ ಮಾಡಬಹುದು.

ಇನ್ನು, ಪ್ರತಿ ದಿನವೆಂಬಂತೆ ಶಿಕ್ಷಕ ತನ್ನ ಅಲ್ಪ ವೇತನಕ್ಕಾಗಿ, ಅದು ಪ್ರತಿ ತಿಂಗಳ ಒಂದು ನಿರ್ದಿಷ್ಟ ದಿನ ತನ್ನ ಕೈ ಸೇರಬೇಕೆಂದು ಮೊರೆಯಿಡುತ್ತಿರುವುದು ನಮಗೆ ತಿಳಿದೇ ಇದೆ. ದೀರ್ಘ ಸಮಯದಿಂದ ಪರಿಸ್ಥಿತಿ ಹಾಗೇ ಮುಂದುವರಿದಿದೆ. ಅಧ್ಯಾಪಕನ ಮೊರೆ ಇದು ತನಕ ಯಾವ ನಾಯಕನ ಕಿವಿಗಳಿಗೂ ಬೀಳಲೇ ಇಲ್ಲವೋ ಏನೋ!

ಆಹಾರ ಸಾಮಗ್ರಿಗಳಿಗೆ ಬೆಲೆ ಏರುವ ಈ ಸಂದರ್ಭದಲ್ಲಿ ಅಧ್ಯಾಪಕನಿಗೆ ದೊರೆಯುತ್ತಿರುವ ವೇತನ ಬರೇ ಅಲ್ಪ. ಶಿಕ್ಷಣದ ಮಟ್ಟವನ್ನು ಸುಧಾರಿಸಬೇಕೆಂದು ಹೇಳುವವರು ಅಧ್ಯಾಪಕನ ಹೊಟ್ಟೆಯ ಪಾಡು ತೊಲಗಬೇಕೆಂದೂ ಹೇಳುವುದು ಅಗತ್ಯ.

ಅಧ್ಯಾಪಕನ ಸ್ಥಾನ ಹಿಂದಾದರೂ ಆವನ ವೇತನದಿಂದಾಗಿ ಆತನ ಸ್ಥಾನ ಇಂದು ಹೀನ ಎನ್ನುವಂತಾದುದು ಸರಕಾರಕ್ಕೆ ಭೂಷಣವೇ? ನಮ್ಮ ರಾಷ್ಟ್ರಪತಿಯವರೊಮ್ಮೆ "ಅಧ್ಯಾಪಕರು ಗೌರವಿಸಲ್ಪಡದಿದ್ದರೆ ರಾಷ್ಟ್ರವು ವಿನಾಶವಾಗುವುದು" ಎಂದು ಹೇಳಿದ್ದರು. ಈ ಮಾತಿನಂತೆ ಅಧ್ಯಾಪಕನು ಸಮಾಜದಲ್ಲಿ ಗೌರವದ ಸ್ಥಾನಕ್ಕೇರಬೇಕಿದ್ದರೆ, ಆತನ ಜೀವನ ಮಟ್ಟ ಏರಬೇಕು! ಇಲ್ಲವಾದರೆ ರಾಷ್ಟ್ರಪತಿಯವರ ಮಾತು ನಿಜವಾಗಲೂ ಬಹುದು.

ತಾ.೧೮-೩-೧೯೬೫ರಿಂದ ಖಾಯಂ ಠೇವಣಾತಿ ಮತ್ತು ಸೇವಿಂಗ್ಸ್ ಖಾತೆಗಳ ಮೇಲಣ ಬಡ್ಡಿ ದರಗಳನ್ನು ಸೇಕಡಾ ೧ರಷ್ಟು ಏರಿಸಲಾಗಿದೆಯೆಂದು ತಿಳಿಸಲು ನಾವು ಸಂತೋಷಪಡುತ್ತೇವೆ.

ಈಗ ಚಾಲ್ತಿಯಲ್ಲಿರುವ ಬಡ್ಡಿ ದರಗಳು

ಕೆಳಗೆ ಕಾಣಿಸಿದ ಅವಧಿಗೆ ಅಥವಾ ಹೆಚ್ಚಿಗೆ	ಕೆಳಗೆ ಕಾಣಿಸಿದ ಅವಧಿಗಿಂತ ಕಡಿಮೆ	ಬಡ್ಡಿ ದರ
91 ದಿವಸಗಳು	6 ತಿಂಗಳು	$5\frac{1}{8}$ %
6 ತಿಂಗಳು	1 ವರ್ಷ	$5\frac{3}{8}$ %
1 ವರ್ಷ	2 ವರ್ಷ	$6\frac{1}{8}$ %
2 ವರ್ಷ	3 ವರ್ಷ	6 [illegible] %
3 ವರ್ಷ	5 ವರ್ಷ	6 [illegible] %
5 ವರ್ಷ	7 ವರ್ಷ	$7\frac{1}{8}$ %
7 ವರ್ಷ	9 ವರ್ಷ	7 [illegible] %
9 ವರ್ಷ	ಮತ್ತು ಹೆಚ್ಚಿನ ಅವಧಿಗೆ	7 [illegible] %

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟಿನ ಮೇಲೆ ಸೇಕಡಾ 4 ಬಡ್ಡಿ ಕೊಡಲಾಗುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು : ಮಣಿಪಾಲ, ಮೈಸೂರು ರಾಜ್ಯ)

ಶಾಖೆಗಳು: ೨೮೦ರಕ್ಕೂ ಮಿಕ್ಕಿ. ಚಲಾವಣಾ ನಿಧಿ: ರೂ. ೭೦ ಕೋಟಿಗೂ ಮಿಕ್ಕಿವೆ.

......ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ... ...

ಚೀನಾದಲ್ಲಿ

ಬೆಸ್ತ ಚಕ್ರವರ್ತಿಯಾದ

ಬರೆದವರು: ಶ್ರೀ ಶಿವಶಂಕರ

ಐದನೇ ದಿನ ಅವನು ವಿಲಕ್ಷಣ ನೋಟವನ್ನು ಕಂಡನು. ಅವನು ಸಿಂಗಾಣಿ ಚೂರನ್ನು ನೆಟ್ಟಿದ್ದ ಸ್ಥಳದಲ್ಲಿ ಭೂಮಿ ಭಾಗವಾಗಿತ್ತು, ಬಿರುಕು ಬಿಟ್ಟಿತ್ತು. ಆ ಹೊಂಡದಿಂದ ಸೂರ್ಯನ ಬೆಳಕನ್ನು ಹುಡುಕಿಕೊಂಡು ಒಂದು ಗಿಡ ಬೆಳೆಯುತ್ತ ಮೇಲಕ್ಕೆ ಬರುತ್ತಿತ್ತು. ಅವನಿಗೆ ಅತ್ಯಾನಂದವಾಯಿತು. ಅವನು ಅದಕ್ಕೆ ದಿನಾಲೂ ನೀರು ಹಾಕತೊಡಗಿದನು. ಈ ವಿಚಿತ್ರ ಗಿಡ ಅದೆಂತಹ ವಿಚಿತ್ರ ಫಲವನ್ನಿತ್ತೀತೆಂದು ತನ್ನಲ್ಲೇ ತಾನು ಕೇಳಿಕೊಳ್ಳುತ್ತಿದ್ದನು. ಅವನು ಬಹಳ ಜಾಗ್ರತೆಯಿಂದ ಹಾಗೂ ಪ್ರೀತಿಯಿಂದ ಗಿಡವನ್ನು ಸಾಕುತ್ತಿದ್ದನು. ಗಿಡವಾದರೋ ಆಶ್ಚರ್ಯಕರ ರೀತಿಯಲ್ಲಿ ಬೆಳೆಯುತ್ತಿತ್ತು. ಸಾಧಾರಣವಾಗಿ ವರ್ಷದಲ್ಲಿ ಬೆಳೆಯುತ್ತಿದ್ದಷ್ಟು ವಾರದಲ್ಲೇ ಬೆಳೆಯುತ್ತಿತ್ತು. ಸ್ವಲ್ಪ ಸಮಯದಲ್ಲೇ ಅದು ದೊಡ್ಡ ಮರವಾಗಿ ಬೆಳೆಯಿತು. ಅದು ನಾಲ್ದೆಸೆಗಳಲ್ಲೂ ತನ್ನ ನೀಳ ರೆಂಬೆಗಳನ್ನು ಚಾಚಿತ್ತು. ರೆಂಬೆಗಳು ಅವನ ಗುಡಿಸಲನ್ನು ಆವರಿಸಿದ್ದುವು. ಗುಡಿಸಲಿರುವುದೇ ಗೊತ್ತಾಗುತ್ತಿರಲಿಲ್ಲ.

ಒಂದು ದಿನ ಅವನು ಕಲ್ಪನಾ ಸಾಮ್ರಾಜ್ಯದಲ್ಲಿ ಸಿಂಹಾಸನಾರೂಢನಾಗಿದ್ದನು. ಅವನು ಕಲ್ಪನೆಯ ಗುಳ್ಳೆಗಳನ್ನು ಬಿಡಲಾರಂಭಿಸಿದನು— ಮರ ಹಣ್ಣು ಕೊಡುತ್ತದೆ. ಹಣ್ಣುಗಳು ಬಹಳ ವಿಚಿತ್ರ ರೀತಿಯವು. ಅವು ಭಾರೀ ಕೆಂಪು ಬಣ್ಣದ ಹಣ್ಣುಗಳು, ಬಹಳ ಸಿಹಿ ಹಣ್ಣುಗಳು, ಇಡೀ ಚೈನಾದಲ್ಲೇ ಅಂತಹ ಹಣ್ಣುಗಳಿಲ್ಲ. ಹಾಗಿರುವಾಗ ಅದಕ್ಕೆ ಅದೇನು ಹೆಸರಿಡುವದು? ಉತ್ತಮ ಹೆಸರು ಯಾವದು? ಛೇ! ಅದೂ ಚೆನ್ನಾಗಿಲ್ಲ! ಇದೂ ಚೆನ್ನಾಗಿಲ್ಲ! ಇಷ್ಟು ಒಳ್ಳೆಯ ಹಣ್ಣಿಗೆ ಆ ಹೆಸರೇ? ಕೊನೆಯಲ್ಲಿ ಅವನೊಂದು ನಿಶ್ಚಯಕ್ಕೆ ಬಂದನು. ಅದನ್ನು ಸ್ವರ್ಗ ಫಲವೆಂದು ಕರೆದಲ್ಲಿ! ಆಹಾ! ಬಹಳ ಚೆನ್ನಾಗಿದೆ— ಹಣ್ಣಿನ ಹಾಗೆಯೇ. ಆದ್ದರಿಂದ ಆ ಮರದ ಹೆಸರು ಸ್ವರ್ಗವೃಕ್ಷ! ಅವನ ಕನಸು— ಕಲ್ಪನೆ ನಿಜವಾಯಿತು.

ಕಾವ್ಹೋ-ಲಿಂಗನ ಸ್ವರ್ಗ ಫಲದ ಪ್ರಖ್ಯಾತಿ ಚಕ್ರವರ್ತಿಯ ಕಿವಿಗೆ ಬೀಳಲು ಬಹಳ ಸಮಯ ಬೇಕಾಗಲಿಲ್ಲ. ಆಗ ವಾಂಗನು ಚಕ್ರವರ್ತಿಯಾಗಿದ್ದನು. ಒಬ್ಬ ಚಾಣಾಕ್ಷ ವ್ಯಾಪಾರಿಯು ಕಾವ್ಹೋ-ಲಿಂಗನಿಂದ ನೂರು ಹಣ್ಣುಗಳನ್ನು ತೆಗೆದುಕೊಂಡನು. ಅವನು ನೂರು ಹಣ್ಣುಗಳಿಗೆ ಕೊಟ್ಟದ್ದು ಕೇವಲ ಒಂದು ರೂಪಾಯಿ. ಆದರೆ ಅವುಗಳನ್ನು ಹಣ್ಣಿಗೆ ಒಂದು ರೂಪಾಯಿಯಂತೆ ಚಕ್ರವರ್ತಿಗೆ ಮಾರಿದನು.

ವಾಂಗನು ಕಳೆದ ಎಪ್ಪತ್ತೈದು ವರ್ಷಗಳಿಂದ ರಾಜ್ಯವನ್ನು ಆಳಿಕೊಂಡಿದ್ದನು. ಅವನು ತನ್ನ ಜೀವಮಾನದಲ್ಲೆಂದೂ ಅಂತಹ ಫಲವನ್ನು ತಿಂದಿದ್ದಿಲ್ಲ. ಎಷ್ಟು ಸಿಹಿ! ಒಂದೆರಡು ಹಣ್ಣಿನಿಂದ ಅವನಿಗೆ ತೃಪ್ತಿಯಾಗುವದುಂಟೇ? ಆ ಹಣ್ಣು ಎಲ್ಲಿಂದ ಬಂದದ್ದು, ಅದನ್ನು ಬೆಳೆಸುವದು ಯಾರು...ಇತ್ಯಾದಿ ಪ್ರಶ್ನೆಗಳು ಸ್ವಾಭಾವಿಕವಾಗಿ ಬರುತ್ತವೆ. ಹಣ್ಣು ತನ್ನ ರಾಜ್ಯದಲ್ಲೇ ಇದೆಯೆಂಬುದನ್ನು ಕೇಳಿದ ಚಕ್ರವರ್ತಿಗೆ ಬಹಳ ಆನಂದವಾಯಿತು. ಅದೂ ಒಬ್ಬ ಸಾಮಾನ್ಯ ಪ್ರಜೆಯ ಬಳಿ ಇದೆ! ಒಬ್ಬ ನಮ್ರ ಬೆಸ್ತರವನು. ಆ ಹಣ್ಣಿನ ಮರವನ್ನು ನೋಡಿಕೊಳ್ಳುತ್ತಿದ್ದಾನೆ! ಆ ಮರವನ್ನು ದಿವ್ಯ ಫಲವನ್ನೀಯುವ ಮರವನ್ನು ಕಣ್ಣಾರೆ ಕಾಣಬೇಕೆಂದು ಚಕ್ರವರ್ತಿಯು ತನ್ನ ಪಲ್ಲಕಿಯನ್ನು ತರಿಸಿದನು. ಆಶ್ಚರ್ಯತರ ವೃಕ್ಷವನ್ನು ಕಾಣುವ ಲವಲವಿಕೆ ಯಾರಲ್ಲಿ ತಾನೇ ಬರದಿದ್ದೀತು? ಅದರಲ್ಲೂ ಚಕ್ರವರ್ತಿಯೆಂದ ಮೇಲೆ ಕೇಳಬೇಕೇ? ಚಕ್ರವರ್ತಿ ಹೊರಡುವನೆಂದರೆ ಹೇಳಬೇಕೇ? ಭಾರೀ ಸಮೂಹವೇ ಹೊರಟಿತು. ಸಮೂಹವನ್ನು ಕಂಡ ಕಾವ್ಹೋ—ಲಿಂಗನಿಗೆ ಭಯವಾಯಿತು. ನಾನೇನು ತಪ್ಪು ಮಾಡಿದ್ದೇನೆಂದು ರಾಜಭಟರು ಇತ್ತ ಬರುತ್ತಿರುವರು? ಅವನ ಭಯವನ್ನು ಚಕ್ರವರ್ತಿಯೇ ನಿವಾರಿಸಿಬಿಟ್ಟನು. ಪಲ್ಲಕಿಯಿಂದ ಕೆಳಗಿಳಿದು ಬಂದ ಚಕ್ರವರ್ತಿಯು ಕಾವ್ಹೋ—ಲಿಂಗನ ಬಳಿ ಅತೀವ ಅಕ್ಕರೆಯಿಂದ ಮಾತು ತೆಗೆದನು.

"ಓ! ಕಾವ್ಹೋನ ಮಗನೇ, ನಿನ್ನ ವಿಚಿತ್ರ ವೃಕ್ಷದ ಹಣ್ಣುಗಳು ಚಕ್ರವರ್ತಿಯ ಮನಸ್ಸಿಗೆ ಅತೀವ ತೃಪ್ತಿಯನ್ನಿತ್ತಿರುತ್ತವೆ, ಸಂತೋಷವನ್ನುಂಟು ಮಾಡಿವೆ. ಅಂತಹ ಭಾರಿ ವೃಕ್ಷಕ್ಕೆ ತಕ್ಕ ಗೌರವ ಸಲ್ಲಬೇಕು. ಅದಕ್ಕೆ ಗೌರವ ಸಲ್ಲಬೇಕಾದರೆ ಅದು ಚಕ್ರವರ್ತಿಯ ತೋಟದಲ್ಲಿರಬೇಕು. ಅದಕ್ಕೆ ಈ ನಿರ್ಜನ ಕಡಲ ಬದಿ ತಕ್ಕ ಸ್ಥಳವಲ್ಲ. ಈ ಮರದ ಬದಲಿಗೆ ನಿನ್ನನ್ನು ಈ ಪ್ರಾಂತ್ಯದ ಪ್ರಾಂತ್ಯಪಾಲನನ್ನಾಗಿ ನೇಮಿಸುತ್ತೇನೆ. ನಿನಗೆ ವರ್ಷವೊಂದಕ್ಕೆ ಐದು ಸಾವಿರ ರೂಪಾಯಿ ಕೊಡಲು ಏರ್ಪಾಡು ಮಾಡುತ್ತೇವೆಂದು ಚಕ್ರವರ್ತಿಯು ಬಹಳ ಚಾಣಾಕ್ಷತನದಿಂದ ಹೇಳಿದನು. (ಅವನು ಕಾವ್ಹೋ—ಲಿಂಗನ ಕುಟುಂಬದ ಕುರಿತು ವ್ಯಾಪಾರಿಯ ಬಳಿ ವಿಷಯ ಸಂಗ್ರಹಿಸಿ ಕೊಂಡಿದ್ದನು.)

ಕಾವ್ಹೋ—ಲಿಂಗನಿಗೆ ಏನು ಮಾಡುವದೆಂದು ತೋಚಲಿಲ್ಲ. ಆದರೆ ಅದು ಕ್ಷಣಿಕವಾಗಿತ್ತು. ಒಡನೆ ಅವನಿಗೆ ತನ್ನ ತಂದೆಯ ಕೊನೆಯ ಕಾಲದ ವಾಕ್ಯಗಳು ಜ್ಞಾಪಕಕ್ಕೆ ಬಂದುವು. ಆಗ ಅವನು ಅತೀವ ನಮ್ರತೆಯಿಂದ ಚಕ್ರವರ್ತಿಯ ಬಳಿ, "ಸರ್ವಶಕ್ತಿವಾನ್, ಓರ್ವ ಅಯೋಗ್ಯನು ಎಲ್ಲವನ್ನು ನೋಡುವವರನ್ನು ತೃಪ್ತಿಪಡಿಸಬಲ್ಲನಾದನಲ್ಲ, ಇದನ್ನು ಕೊಡಲು ಹಿಂದು ಮುಂದು ನೋಡುವವನ ಮಾತುಗಳಿಗೆ ಧಿಕ್ಕಾರವಿರಲೆಂದು" ಹೇಳಿದನು.

ಕಾವ್ಹೋ ಲಿಂಗನ ಮಾತುಗಳನ್ನು ಕೇಳಿದ ಚಕ್ರವರ್ತಿಗೆ ಮಹದಾನಂದ ಆಯಿತು. ಅವನು ಕಾವ್ಹೋ—ಲಿಂಗನೊಂದಿಗೆ ಮರವನ್ನು ನೋಡಲು ಹೋದನು. ಮರವನ್ನು ಅಲ್ಲಿಂದ ಒಯ್ದು ರಾಜನ ತೋಟದಲ್ಲಿ ಅದನ್ನು ಹೇಗೆ ನೆಡಬಲ್ಲನೆಂಬುದು ಚಕ್ರವರ್ತಿಗೆ ಆಶ್ಚರ್ಯದ ವಿಷಯವಾಗಿತ್ತು. ಆಗ ಅಬ್ಬಾ! ಮರ ಪೂರ್ಣ ಮಾಯವಾಗಿತ್ತು. ಚಕ್ರವರ್ತಿಯು ಕಾವ್ಹೋ-ಲಿಂಗನತ್ತ ನೋಡಿದನು. ಕಾವ್ಹೋ—ಲಿಂಗನು ಗಲಿಬಿಲಿಗೊಂಡವರಂತೆ ನಿಂತುಕೊಂಡಿದ್ದನು; ಆಶ್ಚರ್ಯ ಚಕಿತನಾಗಿದ್ದನು. ಆಗ ಕಾವ್ಹೋ—ಲಿಂಗನು ಆ ಮರ ಹೇಗೆ ಬಂದದ್ದು, ಸಿಂಗಾಣಿ ತಟ್ಟೆ ಯಾರು ಕೊಟ್ಟದೆಂಬ ಕಥೆಯನ್ನು ಚಕ್ರವರ್ತಿಗೆ ಹೇಳಿದನು. ಚಕ್ರವರ್ತಿಯು ಎಲ್ಲವನ್ನೂ ಕೇಳಿದನು. ಕಥೆ ಮುಗಿದಾಗ ಮರವೇಕೆ ಅದೃಶ್ಯವಾಯಿತೆಂಬುದು ಚಕ್ರವರ್ತಿಗೆ ಗೊತ್ತಾಯಿತು. ಬಹುಮಾನವೆಂದು ಒಮ್ಮೆ ದಾನ ಮಾಡಿರುವುದನ್ನು ಹಿಂದಕ್ಕೆ ತೆಗೆದುಕೊಂಡಲ್ಲಿ ಅವನು ಪಾಪಿಯಾಗುತ್ತಾನೆ. ಅವನು ಆಗ ದಾನ ಮಾಡದವನಿಗಿಂತಲೂ ಹೆಚ್ಚಿನ ಪಾಪಿಯಾಗುತ್ತಾನೆ. ಖ್ಯಾತ ಹಾನ್ ಚಕ್ರವರ್ತಿ ಕೊಟ್ಟದನ್ನು ವಾಂಗ್ ಹಿಂದಕ್ಕೆ ಕೊಂಡು ಹೋದನೆಂದಾಗ ಕೂಡದೆಂಬುದಕ್ಕಾಗಿ ಮರ ಅದೃಶ್ಯವಾಯಿತು. ತಟ್ಟೆಯನ್ನು ನಿನಗೆ ಕೊಟ್ಟಿರುವದರಿಂದ ಆ ತಟ್ಟೆಗೆ ಹಾಗೂ ಮರಕ್ಕೆ ನೀನೇ ನಿಜವಾದ ಯಜಮಾನನು. ಅದನ್ನು ಯಾರೂ ಕಸಿದುಕೊಳ್ಳುವದು ಸರಿಯಲ್ಲ. ನೀನು ಈಗಲೂ ಕ್ವಾಂಗ್ಸಿಯ ಪ್ರಾಂತ್ಯಪಾಲನಾಗಿರುವೆ. ನಿನ್ನ ಬಳಿ ನಾವು ವರ್ಷವೊಂದಕ್ಕೆ ಐನೂರು ಸ್ವರ್ಗ ಫಲಗಳನ್ನು ಯಾಚಿಸುತ್ತೇವೆ. ಸಂತೋಷದ ದಾರಿಯಲ್ಲಿ ನಿನ್ನ ಭವಿಷ್ಯತ್ತನ್ನು ದೇವರು ನಡೆಸಲೆಂದು ಚಕ್ರವರ್ತಿ ಹೇಳಿದನು. ಧನ್ಯವಾದ-ಆಶೀರ್ವಾದಗಳೆಲ್ಲಾ ಆದ ಮೇಲೆ ತನ್ನ ಪಡೆಯೊಂದಿಗೆ ಚಕ್ರವರ್ತಿಯು ಹಿಂತಿರುಗಿದನು.

ಹಾಗೆ ಕಾವ್ಹೋ-ಲಿಂಗನು ಪ್ರಾಂತ್ಯಪಾಲನಾದನು. ಅವನು ಬಹಳ ಎಚ್ಚರಿಕೆ ಹಾಗೂ ಚಾಣಾಕ್ಷತನದಿಂದ ಚಕ್ರವರ್ತಿಯ ಕಟ್ಟಳೆಗಳನ್ನು ಪ್ರಯೋಗಕ್ಕೆ ತರುತ್ತಿದ್ದನು. ದೇವರ ಪಟಗಳೆದುರು ದಿನಾಲೂ ದೀಪವನ್ನುರಿಸುವುದನ್ನು ಅವನು ತಪ್ಪಿಸಲೇ ಇಲ್ಲ. ಅವನು ಪ್ರಾಂತ್ಯಪಾಲನಾಗಿದ್ದರೂ ತನ್ನ ಕುಲ ಕಸುಬಾಗಿರುವ ಮೀನು ಹಿಡಿಯುವದನ್ನು ಬಿಡಲೇ ಇಲ್ಲ. ಅವನು ಚಕ್ರವರ್ತಿಗೆ ವಿಧೇಯನಾಗಿದ್ದನು. ಮತ್ತು ಮರ್ಯಾದೆಯಿಂದ ನಡೆದುಕೊಳ್ಳುತ್ತಿದ್ದನು. ಹೀಗೆ ಕೆಲವು ವರ್ಷಗಳು ಸಂದುವು. ಒಂದು ದಿನ, ಅವನ ಪ್ರಾಂತ್ಯಕ್ಕೆ ಬರುತ್ತಿದ್ದ ವ್ಯಾಪಾರಿಗಳಲ್ಲೊಬ್ಬನು ಒಂದು ಸಮಾಚಾರವನ್ನು ತಿಳಿಸಿದನು. ಚಕ್ರವರ್ತಿಯ ಮಗಳು ಲಿ-ಲೋ ಅಥವಾ ಚಂದ್ರಮುಖಿ ಆ

(ಹನ್ನೊಂದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	.... ..	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7½
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್ ಖಾತೆಯ ಮೇಲೆ		... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1921

ರಾಷ್ಟ್ರಕವಿ ಎಂ. ಗೋವಿಂದ ಪೈಯವರು

[ಕೆಲವು ವಿಚಾರಗಳು - ನೆನಪುಗಳು]

(ಲೇಖಕ— ಕೆ. ವೆಂಕಟರಾಯಾಚಾರ್ಯ, ಪಂಡಿತ ರತ್ನಂ, ವಿದ್ವಾನ್, ಸುರತ್ಕಲ್ಲು.)

ಪ್ರತಿಯೊಬ್ಬ ಮಾನವನ ಸಾಧಾರಣವಾಗಿ ವಿವಿಧ ಭಾಷೆಗಳ ಸಾಹಿತ್ಯಾದಿ ಗ್ರಂಥಗಳನ್ನು ಯಥಾನುಕೂಲ ಕಲಿತು ಆನಂದಿಸುತ್ತಾನೆ, ತನ್ಮೂಲಕ ಸಾಹಿತ್ಯ ದೇವಿಯ ಸೇವೆಯನ್ನು ಸಲ್ಲಿಸಿ ಕೃತಕೃತ್ಯನಾಗುತ್ತಾನೆ. ಇನ್ನು ಕೆಲವರು ಸ್ವಯಂ ಸಾಹಿತ್ಯ ಕೃತಿಗಳನ್ನು ನಿರ್ಮಿಸಿ, ಸಾಹಿತ್ಯ ದೇವಿಯನ್ನು ಆರಾಧಿಸಿ ಆನಂದಿಸುತ್ತಾರೆ, ಧನ್ಯರಾಗುತ್ತಾರೆ. ಶ್ರೀ ಎಂ. ಗೋವಿಂದ ಪೈಯವರು ಈ ಎರಡನೆಯ ಗುಂಪಿಗೆ ಸೇರಿದ ಮಹನೀಯರೆನ್ನಲಡ್ಡಿಯಿಲ್ಲ!

"ಹಿರಿಯರಿಂದ ಪರಂಪರಾಗತವಾಗಿ ಬಂದ ಸಂಪತ್ತಿಗೆ ಪ್ರತ್ಯೇಕ ಕಲಿಮಾನವರೂ ತಂತಮ್ಮ ದುಡಿತವನ್ನು ಕೂಡಿಸಿ ಅದನ್ನು ಓರಂತೆ ಹೆಗ್ಗಿಸುತ್ತ ಬರಬೇಕೆಂಬುದ ಧರ್ಮವೇ ಸರಿ. ಆದರೆ ಹೊಸ ವಿತ್ತವನ್ನು ಗಳಿಸುವಷ್ಟೇ ಸಾಲದು, ಹಿರಿಯರ ಸಂಪತ್ತಿನಲ್ಲಿ ಹುಗಿದಿಟ್ಟ ನಿಕ್ಷೇಪವೂ ಇದೆ ಎಂದು ಬಲ್ಲವರು ಅದನ್ನು ಕಂಡುಕೊಳ್ಳುವ ವರೆಗೆ ಅವರ ಹಂಗೂ ತೀರದು, ಹಿರಿಯರ ಋಣವೂ ತಿದ್ದದು ಎಂಬುದನ್ನು ಒಪ್ಪಿದರೆ; ಹಿಂದಣ ಕನ್ನಡ ಸಾಹಿತ್ಯವನ್ನು ಅರಿವುದೂ ಸಹಿಸುವುದೂ ಹೇಗೋ ಹಾಗೆಯೇ ಅದರಲ್ಲಿ ಬಯ್ತಿರುವ ಒಡವೆಗಳನ್ನು ಬೆಳಕಿಗೆ ತರುವುದೂ ನಮ್ಮ ಹೊಣೆ ಎಂಬುದನ್ನು ಒಪ್ಪಬೇಕು. ಆ ದೃಷ್ಟಿಯಿಂದ ನಾನೆ ನಮ್ಮ ಹಳೆಯ ಸಾಹಿತ್ಯದಿಂದ ಎಗೆದೆತ್ತಿದ ಕೆಲವು ವಿಷಯಗಳನ್ನು ಇಲ್ಲಿ ವಾಚಕ ಮಹಾಶಯರ ಮುಂದೆ ಮಡಗಿದೆ" (ಮೂರು ಉಪನ್ಯಾಸಗಳು—ಎರಡು ಮಾತು). ಸಾಹಿತ್ಯಾಭ್ಯಾಸ ಹಾಗೂ ಸಾಹಿತ್ಯ ನಿರ್ಮಾಣಗಳು ಮಾತ್ರವಲ್ಲ, ಸಂಶೋಧನಾಭ್ಯಾಸವೂ ಆಯಾ ವರ್ಗದ ಬಲ್ಲವರು ಮಾಡತಕ್ಕ ಕೆಲಸಗಳೆಂದು ಇಲ್ಲಿ ವ್ಯಕ್ತವಾಗುತ್ತದೆಯಲ್ಲವೆ? ಶ್ರೀ ಗೋವಿಂದ ಪೈಯವರು ಹೇಗೆ ಸಾಹಿತ್ಯ ಮಾತೆಯನ್ನು ಆರಾಧಿಸಿದರೆಂಬುದರ ಬಗ್ಗೆ ಕೆಲವು ವಿಚಾರಗಳು ನೆನಪುಗಳು ಬರೆಯಲಾಗಿವೆ. ಇಲ್ಲಿ.

ಅವರ ಕವಿತಾ ರಚನೆಯ "ಪ್ರಸಾಹಿತ್ಯ"ದ ಬಗ್ಗೆ ಮೊದಲಾಗಿ ಅವರ ಮಾತುಗಳನ್ನು ಎತ್ತಿ ಬರೆಯುವೆ: "೧೯೧೧ನೆಯ ಎಪ್ರಿಲ್ ತಿಂಗಳಲ್ಲಿ ನಾನು ಸುಮಾರು ಒಂದು ತಿಂಗಳು ಬಡೋದಾ ರಾಜ್ಯದ ನವಸಾರಿಯೊಳಿದ್ದೆ. ಆಗ್ಗೆ ಒಂದು ಮುಂಜಾನೆ. ಮಾಳಿಗೆಯಲ್ಲಿ ಶತಪತಗೈಯುತ್ತಿದ್ದಾಗ ಹಠಾತ್ತಾಗಿ, ಆಗೋದು ಹೋಗೋದು ದೇವರ ಇಚ್ಛೆ, ಹಾಡೋದು ಬಿತ್ತೋದು ನನ್ನ ಇಚ್ಛೆ, ಇನ್ನು ಮಾನ ಮೇಷ ನೋಡದೆ 'ಪ್ರಸವನೀಗಲೇ ತೊಡೆದು ಬಿಡುವುದೇ ನಿಶ್ಚಯಂ' ಎಂದಾಯಿತು (ಸಾಹಿತ್ಯಜ್ಞರ ಆತ್ಮ ಕಥನ--ಮಿಂಚಿನ ಬಳ್ಳಿ, ಧಾರವಾಡ) ಆ ಮೇರೆಗೆ ಕೂಡಲೆ ಶ್ರೀ ರವೀಂದ್ರನಾಥ ಠಾಕೂರರ "ಭಾರತ ಲಕ್ಷ್ಮೀ," "ವಿದಾಯ"ಗಳನ್ನೂ, ಅನಂತರ ಶ್ರೀ ಶೇಖ್ ಮಹಮ್ಮದ್ ಇಕ್ಬಾಲರ "ಹಿಂದುಸ್ತಾನ ಹಮಾರಾ"ವನ್ನೂ ಅವರು ಕನ್ನಡಿಸಿದ್ದರು. 'ಅಲ್ಲಿಂದ **ಮೂರನೆಯ ತಿಂಗಳು** ಊರಿಗೆ ಮರಳಿದವನೇ ಅವನ್ನು "ಸ್ವದೇಶಾಭಿಮಾನಿ"ಯಲ್ಲಿ ಪ್ರಕಟಿಸಿದೆ. **ಪ್ರಾಸರಹಿತವಾದ ತನ್ನ ಕವಿತೆಗಳು ಅಚ್ಚಾದುದು ಅದೇ ಮೊದಲು**" (ಅದೇ ಪುಸ್ತಕ)

ಅದೇ ಸಪ್ತಂಬರದಲ್ಲಿ "ಹೊಲೆಯನು ಯಾರು?" ಎಂಬ ಪ್ರಾಸರಹಿತವಾದ ಅವರ ಪದ್ಯ ಪ್ರಕಟವಾದೊಡನೆ "ಕನ್ನಡ ಕಾವ್ಯಮಾರ್ಗದಲ್ಲಿ ಹುಲಿ" ಎಂದು ಬಿರುಸಾಗಿ ಖಂಡನೆಯ "ಪತ್ರ ವ್ಯವಹಾರದ ಹುಲಿ"ಯೆದ್ದಿತು, ಅವರು ಇತರ ಕವಿಗಳ ಆಧಾರಗಳೊಂದಿಗೆ ಪ್ರಾಸರಾಹಿತ್ಯದ ಸಾಧುತ್ವದ ಬಗ್ಗೆ ಆ ಪತ್ರಿಕೆಯಲ್ಲಿ ಬರೆದರು." ಆದರೆ ಆ ವಿವಾದವನ್ನು ಆ ದಿನ ಸಂಪಾದಕರು "[illegible] ಮುಚ್ಚಿಬಿಟ್ಟರು. ಅನಂತರ ಯಾವತ್ತೂ ಅವರ ಕವಿತೆಗಳಲ್ಲಿ (ಒಂದೆರಡರಲ್ಲಿ ವಿನಾ) ಪ್ರಾಸವಿಸರ್ಜನವು ತಿಳಿಯಬರುತ್ತದೆ (ಶ್ರೀ **ಪಂಜೆಯವರ ನೆನಪಿಗಾಗಿ**—ನೋಡಿರಿ).

ಅವರು ಬರೆದ ಭಾವಗೀತೆಗಳಲ್ಲಿ ವಿವಿಧ ವಿಚಾರಗಳು ಅಡಕವಾಗಿವೆ: ದೈವಭಕ್ತಿ, ರಾಷ್ಟ್ರಭಕ್ತಿ, ಪರರ ದಾಳಿಯನ್ನು ಪ್ರತಿಭಟಿಸುವಂತೆ ಎಚ್ಚರಿಕೆ, ದೀನ—ಬಡ ಜನರ ಬಗ್ಗೆ ಕಳಕಳಿ, ಜನರ ಹೊಲಸುಗಳ ಬಗ್ಗೆ ಟೀಕೆ, ಪ್ರಾಚೀನರಾದ ಮಹನೀಯ ವ್ಯಕ್ತಿಗಳ ಒಳ್ಳೆಡೆಗಳ ಆದರ್ಶ, ಅವರ ಉನ್ನತ ತತ್ತ್ವಗಳ ಪ್ರತಿಪಾದನೆ, ಪರರ ದುಃಖದ ಬಗ್ಗೆ ಅನುಕಂಪ, ತಾಯ್ನಾಡು—ತಾಯ್ನುಡಿಗಳ ಬಗ್ಗೆ ಆದರ, ವಿಶಿಷ್ಟ ಧಾರ್ಮಿಕ ಪುರುಷರಲ್ಲಿ ಗೌರವ, ಸೂಕ್ತಿಗಳ ಒಳತಿರುಳುಗಳ ವಿವರಣ, ಇತ್ಯಾದಿ ಹತ್ತಾರು- ಹಲವಾರು ಅಂಶಗಳು ಕವಿತೆಗಳಲ್ಲಿ ಕಾಣಿವೆ. ಈ ಭಾವಗೀತೆಗಳನ್ನು, ವಸ್ತುಗೀತೆಗಳನ್ನು, ಲಘು ಕಾವ್ಯಗಳನ್ನು ರಚಿಸುವಲ್ಲಿ ಮೂಲೆ ಗುಂಪಾದ ಹಾಗೂ ಕೋಶಗಳಲ್ಲಿ ಬರೆದಿದ್ದ ಅನೇಕಾನೇಕ ನುಡಿಗಟ್ಟುಗಳನ್ನು ಬಳಸುತ್ತಾ, ಕೆಲವೊಮ್ಮೆ ಹೊಸ ರೂಪುಗಳುಳ್ಳ ನುಡಿಗಟ್ಟುಗಳನ್ನು ಹೊಸೆದುಕೊಳ್ಳುತ್ತಾ, ಅವರು ಕನ್ನಡದ "ಶಬ್ದಬ್ರಹ್ಮರಾಗಿದ್ದರು."

ಗಿಳಿವಿಂಡು (1930), ಗೊಲ್ಗೊಥಾ (1936), ಹೆಬ್ಬೆರಳು (1946), ವೈಶಾಖಿ (1947) ನಂದಾದೀಪ, ಇತ್ಯಾದಿ ಕವಿತಾಗುಚ್ಛಗಳು ಹಾಗೂ ಲಘು ಕಾವ್ಯಗಳು, ಅವರು ಕನ್ನಡ ಕಾವ್ಯ ನಿರ್ಮಾಣದ ಸೌಧಾಗ್ರಹಕ್ಕೆ ಅಳವಡಿಸಿದ ಚಿನ್ನದ ಕಲಶಗಳಾಗಿವೆ. ಈ ಕಾವ್ಯಗಳನ್ನು ಕುರಿತು ಶ್ರೀ ಜಿ. ಪಿ. ರಾಜರತ್ನಂ, ಅವರು ಮೊದಲು 3 ಲೇಖನ ಬರೆದರು. ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರು ಮತ್ತೆ ಪರಿಚಯ ಬರೆದರು. ಇತರ ಲೇಖಕರೂ ಆಗಾಗ ಬೇರೆ ಬೇರೆ ಬರೆದರು! ಅವೇ ಒಂದು ಗ್ರಂಥವಾದೀತು!

ಮಹಾಕವಿ ರನ್ನನ ಕೃತಿತ್ರಯಗಳು, ಬಸವೇಶ್ವರರ ಕಾಲ ನಿರ್ಣಯ ಮತ್ತು ಕನ್ನಡ ಸಾಹಿತ್ಯದ ಪ್ರಾಚೀನತೆಗಳ ಬಗ್ಗೆ ಮೊದಲು ಬರೆದ ಲೇಖಗಳ ವಿಸ್ತ್ರೀಕರಣದ 'ಮೂರು ಉಪನ್ಯಾಸಗಳು' ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯಲ್ಲಿ ನಡೆದ, ಪ್ರಕಟವಾದುವು (1940). ಅವರ ಬಂಗಾಳೀ ಕೃತಿಯೊಂದರ ಕೆಲವು ಘಟ್ಟಗಳ ಅನುವಾದ 'ಶ್ರೀಕೃಷ್ಣ ಚರಿತ್ರೆ', 'ಚಿತ್ರಭಾನು' ಅಥವಾ (1942)' ರಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ಆತ್ಮಬಲಿದಾನಕ್ಕೆ ತುತ್ತಾದ ತೀರಾ ಎಳೆಯ ಯುವಕನೊಬ್ಬನ ಕೊನೆಯ ಕತೆಯನ್ನು ಹೃದಯವಿದ್ರಾವಕವಾಗುವಂತೆ ಬರೆದ ನಾಟಕವೊಂದು ಇದೀಗ ಪ್ರಥಮತಃ ಮುದ್ರಣಗೊಂಡಿವೆ. ಇತ್ತಗಳಲ್ಲದೆ ಅನೇಕ ಪತ್ರಿಕೆ-ಪುಸ್ತಕಗಳಲ್ಲಿ ಪ್ರಕಟವಾದ ಹಲವಾರು ಕವಿತೆಗಳು ಹಾಗೂ ಅನೇಕ ಸಂಶೋಧನಾತ್ಮಕ— ವಿಮರ್ಶಾತ್ಮಕ ಲೇಖನಗಳು ಕ್ರಮಶಃ ಸಂಪುಟಾಕಾರವಾಗಿ ಪ್ರಕಟವಾಗಲಿವೆ (ಕಾವ್ಯಾಲಯ, ಮೈಸೂರು, ಅವರು ಇವುಗಳ ಪ್ರಕಟಣೆಯನ್ನು ಕೈಗೊಂಡಿದ್ದಾರೆಂಬುದು ಶ್ಲಾಘನೀಯವಾಗಿದೆ.

ಕವಿತೆ, ಸಣ್ಣ ಕತೆ, ಪ್ರಬಂಧ, ಕಾದಂಬರಿ ಇತ್ಯಾದಿ ಕುಶಲ (ಲಲಿತ) ಕಲೆಗಳೊಂದಿಗೆ ಜ್ಞಾನ ಸಾಹಿತ್ಯವನ್ನು ಹಲ ಕೆಲವರು ನಿರ್ಮಿಸುತ್ತಾರೆ. ಸಾಹಿತ್ಯ ಕೃತಿಗಳ ನಿರ್ಮಾಣವು ಪ್ರತಿಭಾನ್ವಿತರಿಂದ-ವಿದ್ವಾಂಸರಿಂದ ಆಗತಕ್ಕದು. ಭಾವಜೀವಿಗಳಾದ ರಸಿಕರಿಗೆ ಹೆಚ್ಚು ರುಚಿಸತಕ್ಕದಾಗಿದೆ. ಸಾಹಿತ್ಯ ಸಂಶೋಧನೆಯು ವಿವೇಚನಾ ಶೀಲರಿಂದ ಸಾಗತಕ್ಕದು, ಬುದ್ಧಿಜೀವಿಗಳಾದ ವಿಮರ್ಶಕರಿಗೆ ಇತಿಹಾಸ ಪ್ರೇಮಿಗಳಿಗೆ-ಹೆಚ್ಚು ರುಚಿಸತಕ್ಕದು. ಶ್ರೀ ಗೋವಿಂದ ಪೈಯವರು ಈ ಉಭಯ ವಿಧಾನಗಳಲ್ಲೂ ಅಸಾಮಾನ್ಯ ಕ್ರಮದಲ್ಲಿ ಸಾಗಿದ್ದಾರೆ ಹೇಗೆ 'ಮೃದೂನಿ ಕುಸುಮಾದಪಿ' ಎಂಬ ಸಾಹಿತ್ಯ ಕೃತಿಗಳನ್ನೂ, 'ವಜ್ರಾದಪಿ ಕಠೋರಾಣಿ' ಎಂಬ ಸಂಶೋಧನಾತ್ಮಕ ಲೇಖನಗಳನ್ನೂ ಅಖಂಡವಾಗಿ ಒಬ್ಬರೇ ಬರೆದುದು ಸಾಹಿತ್ಯ ಚರಿತ್ರೆಯಲ್ಲಿ ವಿರಳವಾಗಿದೆ. **ಈ ವಿಚಾರದಿಂದ 'ಶ್ರೀ ಪೈಯವರು ಕನ್ನಡದ ಸವ್ಯಸಾಚಿ'ಯೆನ್ನಲಡ್ಡಿಯಿಲ್ಲ!** (ಶ್ರೀ ಗೋವಿಂದ ಪೈಯವರಿಗೆ ಸಂತತಿಯಿಲ್ಲ. ಸಪ್ತ ಸಂತತಿಗಳಲ್ಲಿ 'ಸದ್ಗ್ರಂಥ ರಚನೆ'ಯೂ ಸೇರಿದೆ. ವಿವೇಕ ಚಿಂತಾಮಣಿ ಪುಟ. 224.ಆ ಮೇರೆಗೆ ಇವರಿಗೆ ಸಂತತಿ ಇದೆ.)

ಅವರು ಬರೆದ ಲೇಖನಗಳಲ್ಲಿ ಹಲವಾರು ಗ್ರಂಥಗಳ ಉಲ್ಲೇಖನಗಳಿದ್ದು ಅಭ್ಯಾಸಿಗಳಿಗೆ ಮಾರ್ಗದರ್ಶಕವಿವೆ. ಇದೀಗ **ಅವರ ಎರಡು ಲೇಖನಗಳ ಅನುಮೋದನೆ** ಸಣ್ಣದು ಬರೆಯಲೆಳಸಿದ್ದೇನೆ: ಕಾಲ ವಿಚಾರದ ಮೊದಲ ಲೇಖನದಲ್ಲಿ ನಿರ್ಧಾರಕ ವಾಕ್ಯಗಳಾಗಿ ಅವರು ಬರೆದಿಲ್ಲ. (ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ. 1943 ದಶಂಬರ), ಆ ಬಗ್ಗೆ ಪುನಃ ವಿವರಿಸಿ ಬರೆದುದರಲ್ಲಿ ನಿರ್ಧಾರಕ ವಾಕ್ಯಗಳಿವೆ (ವಿವೇಕಾಭ್ಯುದಯ—1952 ಎಪ್ರಿಲ್) ಆ ಬಗ್ಗೆ ಚರ್ಚೆಯ ಪದ್ಯ ವಿದುಃ ರತ್ನಾಕರ ವರ್ಣಿಯು ಬರೆದ ತ್ರಿಲೋಕ ಶತಕವು 'ಮಣಿಶೈಲಂಗತಿಯೆಂದು ಶಾಲಿ ಶಕಕಾಲಂ'' ಮುಗಿದಿದೆ. ಇಲ್ಲಿ "ಗತಿ'ಯೆಂದರೆ "ಮೂರು" ಎಂಬ ಅಂಕನವೆಂದು ಬೇರೆಯವರು ಬೇರೆ ಬರೆದಿದ್ದಾರೆ (ಶ್ರೀ ತ. ಸು. ಶ್ಯಾಮರಾವ್, ಶ್ರೀ ರಾಜ ಪುರೋಹಿತರು) 'ಗತಿ'ಯೆಂದರೆ ಜೈನ ಪಾರಿಭಾಷಿಕಾರ್ಥವಾಗಿ ನಾಲ್ಕು ಎಂದಾಗುತ್ತದೆಯೆಂದು ಒಂದು ಆಶಯವು (ಶ್ರೀ ಆರ್. ನರ

(೩೩ನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½% ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪ್ರಕೃತಿಯ ಮಾನವ ನಿರ್ಮಿ



೧

ಹಕ್ಕಿಯು ಆಕಾಶದಲ್ಲಿ ಹಾರುತ್ತಿರುವುದನ್ನು ಕಂಡ ಮಾನವನು ಅಸೂಯೆಗೊಂಡು ತಾನೂ ಹಾರುವ ಪ್ರಯತ್ನ ಮಾಡಿದ ಕತೆಗಳು ಹಲವಿವೆ. ಪುರಾಣದ ಕತೆಗಳಲ್ಲಿ ಬರುವ ವಿಮಾನಗಳ ಹಾರಾಟದ ಸನ್ನಿವೇಶಗಳು ಆತನಿಗೆ ಒತ್ತಾಸೆ ನೀಡಿದವೆಂಬುದು ನಿಜ. ಈ ಕಾರಣಗಳಿಂದಾಗಿಯೇ ಆಧುನಿಕ ವಿಮಾನಗಳ ರಚನೆಯಾಯಿತ, ಇವು ಆಕಾಶಯಾನಕ್ಕೆ ಸಫಲ ಸಾಧನಗಳೆಂಬುದೂ ಸಿದ್ಧವಾಯಿತು. ಯುದ್ಧಗಳ ಕಾರಣದಿಂದಾಗಿ ವೈಜ್ಞಾನಿಕ ಪ್ರಗತಿಯು ಏಕಮುಖವಾಗಿ ಬೆಳೆಯುತ್ತ ಬಂತು. ಈ ಬೆಳವಣಿಗೆಯ ಪರಿಣಾಮವು ಆಕಾಶಯಾನಗಳ ಮೇಲೂ ಬೀರದಿರಲಿಲ್ಲ. ಮೊದಲ ಮತ್ತು ಎರಡನೆಯ ಜಾಗತಿಕ ಸಮರಗಳ ವೇಳೆ ವಿಮಾನಗಳ ನಾನಾ ಪ್ರಕಾರಗಳು ನಿರ್ಮಾಣವಾದುವು. ಯುದ್ಧಕಾರ್ಯಗಳಿಗಲ್ಲದೆ ಜನ ಸಂಚಾರಕ್ಕೆ, ಅಂಚೆ ಒಯ್ಯುವುದಕ್ಕೆ—ಮೊದಲಾದ ಲೋಕ ಕಲ್ಯಾಣಕಾರಕ ಕಾರ್ಯಗಳಿಗೂ ವಿಮಾನಗಳಿಂದು ಬಳಕೆಯಲ್ಲಿ ಬಂದಿವೆ.

ಅಂತರಿಕ್ಷದ ಬಗ್ಗೆ ಖಗೋಳ ಶಾಸ್ತ್ರವು ಪರಿಚಯ ನೀಡುತ್ತದೆ. ಆದರೆ, ಈ ಶಾಸ್ತ್ರವು ಅಂದಾಜು—ಕಲ್ಪನೆಗಳಿಂದಲೇ ಕಟ್ಟಲ್ಪಟ್ಟದ್ದೆಂದು ಹೇಳಬಹುದು. ಸತ್ಯ ಸಂಗತಿಯೇನು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳುವುದು ಸಾಧ್ಯವಾಗಲಿಲ್ಲ. ಅಧ್ಯಯನಕ್ಕೆ ಅನುಕೂಲವಾದ ವಾತಾವರಣವು ಇಲ್ಲವಾದುದೇ ಇದಕ್ಕೆ ಕಾರಣವೆನ್ನಬಹುದು. ಯುದ್ಧದ ಕಾರ್ಮೋಡಗಳು ಕಳೆದ ಮೇಲೆ ಶಾಂತಿ ಕಾಲವು ಜಗತ್ತಿನಲ್ಲಿ ನೆಲೆಯೂರಿದ ಬಳಿಕ, ಈ ಬಗ್ಗೆ ಹೆಚ್ಚು ಹೆಚ್ಚಾಗಿ ಗಮನ ಹರಿಸುವುದು ಸಾಧ್ಯವಾಯಿತು. ವಿಜ್ಞಾನದ ಸಹಾಯದಿಂದ ಉಪಗ್ರಹಗಳು ಅಂತರಿಕ್ಷದಲ್ಲಿ ಹಾರಾಡ ತೊಡಗಿದುವು.

ಮೊದ ಮೊದಲಿಗೆ ಹಾರಿದ ಈ ಬಗೆಯ ಮಾನವ ನಿರ್ಮಿತ ಗ್ರಹಗಳ ಆಯುಷ್ಯವು ಅಲ್ಪವಾಗಿತ್ತು. ಅವುಗಳು ಯಶಸ್ವಿಯಾಗಿ ಹಾರಾಡುವವೆಂಬ ವಿಶ್ವಾಸವೂ ಇರಲಿಲ್ಲ. ಆದರೆ, ಪ್ರಯೋಗಗಳು ಫಲಪ್ರದವಾಗುತ್ತ ಬಂದಂತೆ, ಸಂಶೋಧನೆಗಳು ಹೆಚ್ಚುತ್ತ ಬಂದಂತೆ ಪ್ರಾಣಿಗಳನ್ನು, ಮಾನವರನ್ನು ಹೊತ್ತು ಆಕಾಶದಲ್ಲಿ ಬಹು ಎತ್ತರದಲ್ಲಿ, ಬಹು ವೇಗದಲ್ಲಿ ಹಾರಬಲ್ಲ ಉಪಗ್ರಹಗಳೂ ನಿರ್ಮಾಣವಾದುವು. ಅಮೆರಿಕೆ—ರಶ್ಯಗಳು ಈ ರಂಗದಲ್ಲೂ ಸ್ಪರ್ಧೆಗೆ ಇಳಿದಿವೆ. ಇದರಿಂದಲೇ ಇಂದು ಭೂವ್ಯೇತರ ಗ್ರಹಗಳವರೆಗೂ ಮಾನವನು ಪ್ರಯಾಣಿಸಬಲ್ಲ, ಅಲ್ಲಿ ಯಶಸ್ವಿಯಾಗಿ ಇಳಿಯಬಲ್ಲನೆಂಬ ಆಶೆಯು ಮೊಳೆದೋರುವಂತಾಗಿದೆ.

“ಉಪಗ್ರಹಗಳ ಮೂಲಕ ವಿವಿಧ ಗ್ರಹಗಳ ಪರಿಚಯ ಬೆಳೆಸುವುದು, ಅವುಗಳ ಯಥಾಸ್ಥಿತಿಯ ಬಗ್ಗೆ ಹೆಚ್ಚಿನ ಅನುಭವ ಮಾಡಿಕೊಳ್ಳುವುದು, ದುರ್ಗಮವಾದ ಭೂಭಾಗದ ನಕ್ಷೆಯನ್ನು ಮೇಲಿಂದಲೇ ತೆಗೆದುಕೊಳ್ಳುವುದು ಮೊದಲಾದುವುಗಳು ಇಂದು ಸಾಧ್ಯವೆನಿಸಿವೆ. ಇದೇ ವೇಗದಲ್ಲಿ ಮುಂದುವರಿದರೆ, ಉಪಗ್ರಹಗಳ ಮೂಲಕ ೧೯೭೦ರ ಸುಮಾರಿನಲ್ಲಿ ಚಂದ್ರಲೋಕದಲ್ಲಿ ಇಳಿಯಬೇಕೆನ್ನುವ ಅಮೆರಿಕೆಯ ಅಭಿಲಾಷೆಯು ಈಡೇರುವ ಸಂಭವವೂ ಇಲ್ಲದಿಲ್ಲ.

ಆಕಾಶದಲ್ಲಿ ಹಾರುತ್ತಿರುವ ಉಪಗ್ರಹಗಳಿಗೂ ಭೂಮಿಗೂ ನಡುವೆ ಸಂಪರ್ಕವನ್ನು ಬೆಳೆಸಲು ಅನುಕೂಲವಾದ ಒಂದು ಗತಿ ಶೋಧಕ ಪ್ರಯೋಗವನ್ನು ಅಮೆರಿಕೆಯು ಸಾಧಿಸಿದೆ. ಒಂದು ಸಪೂರವಾದ ಬೆಳಕಿನ ಕಿರಣವನ್ನು ಉಪಗ್ರಹಕ್ಕೆ ಗುರಿಯಿಡುತ್ತಾರೆ. ಈ ಬಗೆಯ ಪ್ರಯೋಗವು ಸಾಂಪ್ರದಾಯಿಕವಾದ ರಾಡಾರ್ ಮತ್ತು ರೇಡಿಯೋಗಳ ಗತಿ ಶೋಧನೆಗಳಿಗಿಂತ ಹೆಚ್ಚು ಕರಾರುವಾಕ್ಕಾದುದು. ಈ ಗತಿ ಶೋಧಕ ಪ್ರಯೋಗವು ಭೂಮಿಯಿಂದ ಉಪಗ್ರಹಗಳಿಗೆ ಮತ್ತು ಉಪಗ್ರಹಗಳಿಂದ ಮತ್ತೆ ಭೂಮಿಗೆ ಸಂಪರ್ಕ ಸ್ಥಾಪಿಸಲು ಲೇಸರ್ ಕಿರಣಗಳನ್ನು ಉಪಯೋಗಿಸಲು ಸಾಧ್ಯವಿದೆಯೇ ಎಂಬುದನ್ನು ನಿರ್ಧರಿಸುವ ಮೊದಲ ಹೆಜ್ಜೆ. ಸಂದೇಶಗಳನ್ನೊಯ್ಯಲು ಬೆಳಕಿನ ಅಲೆಗಳನ್ನು ಉಪಯೋಗಿಸುವುದಕ್ಕೆ ಮುಂಚೆ ಸಂಪರ್ಕ ಸ್ಥಾಪನೆಯಾಗಬಲ್ಲುದೇ ಎಂದು ತಿಳಿಯುವ ಹಂಚಿಕೆಯಿದು. ಇದರಲ್ಲಿ ಬಹುಪಾಲು ಯಶವು ಈಗಾಗಲೇ ದೊರಕಿದೆ.

ಹವಾಮಾನವನ್ನು ಮುಂದಾಗಿ ಅರಿತುಕೊಳ್ಳಲು ಅಮೆರಿಕೆಯು ಟೈರಾನ್ ಮಾಲೆಯ ಉಪಗ್ರಹಗಳನ್ನು ಹಾರಿಸಿತ್ತು. ಇವು ಪ್ರಪಂಚ ವ್ಯಾಪಿಯಾಗಿ ಹವೆಯ ಮುನ್ಸೂಚನೆಗಳನ್ನು ದೀರ್ಘ ಕಾಲದವರೆಗೆ ಒದಗಿಸಬಲ್ಲ ಮುಂದುವರಿದ ಉಪಗ್ರಹಗಳಿಗೆ ಬುನಾದಿ ರೂಪ. ನೆಲದ ಮೇಲೂ ಸಮುದ್ರದಲ್ಲೂ ಇರುವ ಬೇರೆ ಬೇರೆ ಹವಾ ಕೇಂದ್ರಗಳು ಭೂಮಂಡಲದ ಸೇಕಡಾ ೨೦ರಷ್ಟರ ಮುನ್ಸೂಚನೆಗಳನ್ನು ಮಾತ್ರವೇ ಒದಗಿಸುತ್ತವೆ ಇಂದು. ಇದರಿಂದ ದೂರಗಾಮಿಗಳಾದ ಮುನ್ಸೂಚನೆಗಳು ದೊರೆಯುವುದಿಲ್ಲ. ದೊರೆತ ಸೂಚನೆಗಳಾದರೂ ನಿಖರವಾದುವುಗಳೆಂದು ಹೇಳಬರುವುದಿಲ್ಲ. ಆದರೆ, ಉಪಗ್ರಹಗಳು ಅಂತರಿಕ್ಷದಲ್ಲಿ ಸುತ್ತುತ್ತಲಿದ್ದು ಹವೆಯ ಮುನ್ಸೂಚನೆಗ



೨



ಧ್ಯಯನದಲ್ಲಿ ಉಪಗ್ರಹಗಳು

ಳನ್ನು ಸಾಕಷ್ಟು ಪೂರ್ವಭಾವಿಯಾಗಿ ತಿಳಿಸುವುದರಲ್ಲಿ ಯಶಸ್ವಿಯಾಗುತ್ತಿವೆ.

ಚಂದ್ರನು ಭೂಮಿಗೆ ಹತ್ತಿರದಲ್ಲಿರುವ ಗ್ರಹ. ಇದರ ಬಗ್ಗೆ ನಮಗೆ ಸಾಕಷ್ಟು ಮಾಹಿತಿಗಳು ದೊರೆತಿವೆ. ಹಿಂದಿನ ಕಾಲದಲ್ಲೂ ಚಂದ್ರ ಬಿಂಬದ ಅಧ್ಯಯನವು ಸೂಕ್ಷ್ಮದರ್ಶಕಾದಿಗಳ ಸಹಾಯದಿಂದ ನಡೆದಿತ್ತು. ಆದರೆ, ಅದಕ್ಕೆ ದೂರವಾದ ಇತರ ಗ್ರಹಗಳ ಪರಿಚಯ ಮಾನವನಿಗೆ ಇಲ್ಲವೆಂದರೂ ತಪ್ಪಲ್ಲ. ಇತ್ತೀಚೆಗೆ ಅಮೆರಿಕೆಯ ಮ್ಯಾರಿನ್ ಮಾಲೆಯ ಉಪಗ್ರಹಗಳನ್ನು ಹಾರಿಸಿ ಮಂಗಳ ಗ್ರಹದ ಬಗ್ಗೆ ಕೆಲವೊಂದು ಸಂಗತಿಗಳನ್ನು ಹೊರಗೆಡಹಿದೆ. ಅಲ್ಲಿ ಸರಳ ಜೀವ ಸ್ವರೂಪಗಳಿರಬಹುದಾದ ಸಾಧ್ಯತೆಯನ್ನದು ಸಮರ್ಥಿಸುತ್ತದೆ.

ಭೂಮಿಯಲ್ಲಿ ಜೀವಸ್ವರೂಪಗಳ ಹಂಚಿಕೆಯಲ್ಲಿ ವೈವಿಧ್ಯವಿದೆ. ಕೆಲವು ಉಷ್ಣವಲಯ, ಸಮಶೀತೋಷ್ಣ ವಲಯ ಮತ್ತು ಸಮುದ್ರ ಪ್ರದೇಶಗಳಲ್ಲಿ, ಸಮೃದ್ಧವಾಗಿದ್ದು, ಮರುಭೂಮಿಗಳೂ ದಕ್ಷಿಣ ಧ್ರುವ ಮುಂತಾದ ಪ್ರದೇಶಗಳಲಿ ವಿರಳವಾಗಿವೆ. ಚಳಿ ಅಧಿಕವಾಗಿರುವ, ಶುಷ್ಕವಾಗಿರುವ ಮತ್ತು ಇನ್ನಿತರ ಪ್ರತಿಕೂಲ ಪರಿಸ್ಥಿತಿಯ ಪ್ರದೇಶಗಳಲ್ಲಿರುವ ಜೀವ ಜಾತಿಗಳು ಜೀವಕ್ಕಿರುವ ದೃಢತೆಯನ್ನು ಸ್ಪಷ್ಟಪಡಿಸುತ್ತವೆ. ಮಂಗಳ ಗ್ರಹವು ಶೀತಲ ಹಾಗೂ ಶುಷ್ಕ. ಅದರ ವಾತಾವರಣದಲ್ಲಿ ಆಮ್ಲಜನಕವಿಲ್ಲ. ಆದರೆ, ಉಗ್ರ ಹವೆಗೆ ವಿಶಿಷ್ಟ ರೀತಿಯಲ್ಲಿ ಹೊಂದಿಕೊಂಡಿರುವ ಜೀವ ಸ್ವರೂಪಗಳು ಅಲ್ಲಿರುವ ಸಾಧ್ಯತೆಯಿದೆ.

ಅದೇ ರೀತಿಯಲ್ಲಿ ಶುಕ್ರ; ಶನಿ ಮೊದಲಾದ ಗ್ರಹಗಳ ಬಗ್ಗೆಯೂ ನಿಜ ಸಂಗತಿಯನ್ನು ತಿಳಿದುಕೊಳ್ಳುವಲ್ಲಿ ಉಪಗ್ರಹಗಳು ಸಹಾಯಕವಾಗಿವೆ. ಇನ್ನೂ ಕೆಲವು ವರ್ಷಗಳು ಕಳೆದಾಗ ಇತರ ಗ್ರಹಗಳ ಸಂಪೂರ್ಣ ಪರಿಚಯವೂ ನಮಗಾಗಬಹುದು. ಅಲ್ಲಿಯೂ ಮಾನವನು ಬದುಕುವಂತಾಗುವ ಅನುಕೂಲ ಪರಿಸ್ಥಿತಿಗಳನ್ನು ನಿರ್ಮಿಸಿಕೊಳ್ಳುವಲ್ಲಿ ಯಶಸ್ಸು ದೊರೆತೀತು.

ಉಪಗ್ರಹಗಳಲ್ಲಿ ಮೇಲ್ಮೆ ಹೊಂದಿದಂತೆಯೇ ವಿಮಾನಗಳ ತಯಾರಿಯಲ್ಲೂ ವಿಜ್ಞಾನವು ಸಾಕಷ್ಟು ಪ್ರಗತಿ ಸಾಧಿಸಿದೆ. ಎರಡು ದಶಕಗಳ ಹಿಂದೆ ವಿಮಾನವು ನೇರವಾಗಿ ಮೇಲೇರುವುದೆಂದರೆ ವಿಜ್ಞಾನದ ಕಟ್ಟುಕತೆಯೆಂದು ಭಾವಿಸಲಾಗುತ್ತಿತ್ತು. ಯಾರೂ ಅಂತಹ ವಿಮಾನದ ನಿರ್ಮಾಣ ಮಾಡಿರದಿದ್ದರೂ ದೂರ ದೃಷ್ಟಿಯುಳ್ಳ ಎಂಜನಿಯರರುಗಳು ಅಂತಹ ನಿರ್ಮಾಣ ಸಾಧ್ಯವೆಂದು ಬಗೆದಿದ್ದರು. ಅಮೆರಿಕೆಯ ಸೈನ್ಯದ ೧೫-೫ ಎ ವಿಮಾನವು ಈ ಊಹನೆಯನ್ನು ಸತ್ಯವಾಗಿಸಿದೆ. ಇದು ಹೆಲಿಕಾಪ್ಟರಿನಂದ ಮೇಲೇರಬಲ್ಲದು. ಗಂಟೆಯೊಂದಕ್ಕೆ ೫೦೦ ಮೈಲಿಗೂ ಹೆಚ್ಚಿನ ವೇಗದಲ್ಲಿ ಬಾಣದಂತೆ ಹಾರಬಲ್ಲದು; ೪೦೦೦೦ ಅಡಿ ಎತ್ತರದಲ್ಲಿ ವಿಹರಿಸಬಲ್ಲದು. ಒಂದೇ ಸ್ಥಳದಲ್ಲಿ ಹಾರಾಡಬಲ್ಲದು. ಅನಂತರ ನೆಟ್ಟಗೆ ಶಬ್ದಾತೀತ ವೇಗದಲ್ಲಿ ಧಾವಿಸಬಲ್ಲದು. ಈ ಬಗೆಯ ವಿಮಾನಗಳಿಗೆ ಹಾರಾಡಲು ಮತ್ತು ಇಳಿಯಲು ವಿಶಾಲವಾದ ಬಯಲು ಬೇಕಾಗಿಲ್ಲ, ಒಂದು ಟೆನ್ನಿಸ್ ಕೋರ್ಟಿನಷ್ಟು ವಿಸ್ತೀರ್ಣದ ಜಾಗವಿದ್ದರೆ ಸಾಕು.

ಯುದ್ಧ ಕಾಲವು ವೈಜ್ಞಾನಿಕ ಪ್ರಗತಿಗೆ ಪ್ರೇರಕವಾದರೂ ಅದರ—ಗತಿಯು ವಿಳ ಮುಖವಾಗುವಂತೆ ಮಾಡುತ್ತದೆ. ಶತ್ರುಗಳನ್ನು ಪರಾಜಿತಗೊಳಿಸುವುದಷ್ಟೇ ಆಗ ಸಂಶೋಧನೆಯ ಉದ್ದೇಶ. ಆದರೆ, ಶಾಂತಿ ಕಾಲದ ಪರಿಸ್ಥಿತಿ ತದ್ವಿರುದ್ಧ. ಮಾನವ ಕಲ್ಯಾಣ ಮಾರ್ಗದಲ್ಲಿ ಸಂಭ್ರಮಿಸುವಲ್ಲಿ ಶಾಂತಿ ಕಾಲವು ಪ್ರಯೋಜನಕರವಾಗಿದೆ. ಪ್ರಕೃತಿಯ ಅಧ್ಯಯನಕ್ಕೆ ಇಂದು ವಿಜ್ಞಾನವು ಬಹ ಸರಿಯಾಗಿ ನೆರವಾಗುತ್ತಿರುವುದನ್ನು ಯಾರೂ ಅಲ್ಲಗಳೆಯಲಾರರು.

ಚಿತ್ರಗಳು

೧. ಅಂತರಿಕ್ಷ ಸಂಶೋಧನೆಗೆ ನೆರವಾಗುವ ಅಮೆರಿಕನ್ ಉಪಗ್ರಹ ಸಾಟರ್ನ್ ೧. ಫ್ಲೋರಿಡಾದ ಕೇಪ್ ಕೆನೆಡಿಯಿಂದ ಇದು ಮೇಲೇರುತ್ತಿದೆ. ಇದರ ಮೊದಲ ಹಂತದಲ್ಲಿ ಎಂಟು ರಾಕೆಟ್ ಡೈನ್ ಎಚ್-೧ ಯಂತ್ರಗಳಿವೆ.

೨. ಮೂರು ಅಂತಸ್ತುಗಳುಳ್ಳ ಪುಶ್ ಬಟನ್ ಮಿಸಲ್. ಇದನ್ನು ಮಿನಟ್ ಮ್ಯಾನ್ ಎಂದು ಕರೆಯುತ್ತಾರೆ.



೨

೩. ಕೆಲಿಫೋರ್ನಿಯಾದ ಎಡ್ವರ್ಡ್ಸ್ ವಾಯು ಸೇನಾ ನೆಲೆಯಿಂದ ಹಾರುವ ಜೆಮಿನಿ.

೪. ೧೯೭೦ರ ಒಳಗೆ ಚಂದ್ರಲೋಕದಲ್ಲಿ ಇಳಿಯುವ ಯೋಜನೆ ಅಮೆರಿಕೆಯದ್ದು. ಅದಕ್ಕಾಗಿ ಅದು ಅಂತರಿಕ್ಷಯಾನಗಳಲ್ಲಿ ಅನೇಕಾನೇಕ ಸಂಶೋಧನೆಗಳನ್ನು ಮಾಡುತ್ತಿದೆ. ಮರ್ಕ್ಯುರಿ ವಾಯುಯಾನದ ಮಾದರಿಗಳಿವು.

೫ ಅಮೆರಿಕೆಯ ವಾಯು ಪರಿಶೀಲನಾ ಮಂಡಳದ ಒಂದು ಉಪಗ್ರಹ ಟೈಟನ್-೨. ಇದು ೫ ಸಾವಿರ ಮೈಲುಗಳ ವೇಗವನ್ನು ಹೊಂದಿದೆ.

೫





ರಾಷ್ಟ್ರಕವಿ ಎಂ. ಗೋವಿಂದ ಪೈಯವರು

(ಏಳನೇ ಪುಟದಿಂದ)

ಸಿಂಹಾಚಾರ್), ಈ ಆಶಯವೇ ಹಲವಾರು ಗ್ರಂಥ ಲೇಖನಗಳ ಆಧಾರದಿಂದ ಸ್ಪಷ್ಟ ಸರಿಯೆಂಬ ನಿರ್ಧಾರ ಅವರ ಮರು ಬರೆಹದಲ್ಲಿದೆ. ಆ ಲೇಖನದಲ್ಲಿ ಕೇವಲ ಗ್ರಂಥಗಳನ್ನು ಉದಾಹರಿಸುತ್ತ ಬರೆದರು. ಇದೀಗ ಶಿಲಾಶಾಸನ ಸಾಹಿತ್ಯ ವಿಭಾಗದಲ್ಲೂ ಇದಕ್ಕೆ ಬೆಂಬಲವಿದೆಯೆಂದು ತಿಳಿಯುತ್ತದೆ. (ದ. ಭಾ. ಶಾ. ಸಂ.) ಈ ವಿಚಾರದಲ್ಲಿ ನಾನು ಬರೆದ ಬರೆಹ ಬೇರೆಡೆ ಪ್ರಕಟವಾಗಿದೆ (ಗುರುದೇವ—ಶಿವಮೊಗ್ಗ, ಶರಣಸಾಹಿತ್ಯ—ಬೆಂಗಳೂರು, ಶೃಂಗಾರ—ಹೊನ್ನಾವರ), ಅಂತೂ **ತ್ರಿಲೋಕ ಶತಕವು ರತ್ನಾಕರ ವರ್ಣಿಯಿಂದ ಶಾ. ಶ. 1479 (1557-8 ಇಸ್ವಿ) ಕ್ಕೆ ಮುಗಿಸಲಾಗಿದೆಯೆಂಬುದೇ ಸಾಧುವಾಗಿದೆ!**

'ಕರ್ಣಾಟಕ'ವೆಂಬುದು ಸಾಧುವೋ 'ಕರ್ನಾಟಕ'ವೆಂಬುದು ಸಾಧುವೋ ಎಂದು ವ್ಯಾಕರಣಾದಿ ಹಲವು ಗ್ರಂಥಗಳು, ಹಾಗೂ ಲೇಖನಗಳನ್ನು ಉದ್ಧರಿಸಿ, ವಿವರಿಸಿ, ವಿವೇಚಿಸಿ ಶ್ರೀ ಗೋವಿಂದಪೈಯವರು ಬರೆದಿದ್ದಾರೆ. ಈ ವಿಚಾರದಲ್ಲಿ ಕೆಲವರು 'ಣೂಣ' ವಿಷಯವೆಂದು ಕುಟೀಕೆ ಬರೆದುದುಂಟು! ಈ ಶಬ್ದವು 'ಕರ್-ನಾಟ'ವೆಂಬೆರಡು ನುಡಿಗಳ ಸಂಯುಕ್ತತೆಯಿಂದ ಹುಟ್ಟಿತ್ತು. ಇಲ್ಲಿ 'ನ'ದ ಬದಲು 'ಣ' ಕಾರವು ಬರುವುದೆಂದು (ರೇಫದ ಮುಂಗಡೆಯಿರುವುದರಿಂದ) ಕಿಂಚಿದಪಿ ಸಂಸ್ಕೃತದ ವ್ಯಾಕರಣಾಭ್ಯಾಸವುಳ್ಳವರೂ ಸಮ್ಮತಿಸತಕ್ಕುದಾಗಿದೆ. ಕರ್ಣಾಟ—ಕನ್ನಡವೆಂಬವು ಭಾಷಾಂತರ—ರೂಪಾಂತರಗಳೆಂದು ಹೇಳುವರು. "ಬಹುಶಃ ಕರ್ಣಾಟ ಎಂಬುದು ಕನ್ನಡ ಎಂಬುದರ ಸಂಸ್ಕೃತ ರೂಪವಾಗಿರಬೇಕು —ಎಂಬುದರ ಕನ್ನಡ ಆದಿ ರೂಪವು ಕನ್ನಾಡು ಎಂದು ಇದ್ದಿರಬೇಕು (ಪನ್ನಾಡು ಎಂಬುದನ್ನು ಹೋಲಿಸಿರಿ). ಬಳಿಕ ಇದು ಕನ್ನಡ ಎಂದೂ ತರುವಾಯ ಕನ್ನಡ ಎಂದೂ ಆಗಿರಬೇಕು" (ಕವಿ ಚರಿತ್ರೆ ಮೂರನೇಯ ಸಂಪುಟದ ಮುನ್ನುಡಿ. 15-16. ಶ್ರೀ. ಆರ್. ನರಸಿಂಹಾಚಾರ್ಯರು ಹೇಳಿದ್ದು) ತಮಿಳರ ಪ್ರಾಚೀನ ಕೃತಿಗಳಲ್ಲಿ 'ಕರುನಾಡವಂ' ಎಂದಿದೆ. ಇಲ್ಲಿ 'ರ' ಕಾರವಿರುವುದನ್ನು ಗಮನಿಸಬೇಕು. ಹಾಗಾಗಿ, ಕರ್ಣಾಟ"ವೆಂಬಲ್ಲಿ 'ರ'ಕಾರವಿರಬೇಕೆಂದೇ ಹೇಳಬಹುದು. 'ಕರು (ರ್) —ನಾಟ (ಡು)" ಎಂದರೆ, ಮಹಾ (ದೊಡ್ಡ) -(ರಾಷ್ಟ್ರ) ನಾಡವೆಂದರ್ಥವು.

"ಕನ್ನಾಡು ಅಥವಾ ಕರ್ನಾಡು ಎಂಬ ಪದದ ಮೂಲಾರ್ಥ "ಒಂದು ಮಹಾ ನಾಡು" ಅಥವಾ 'ಒಂದು ಎತ್ತರವಾದ ನಾಡು" ಆಗಿದ್ದು ಅದನ್ನು ಸಂಸ್ಕೃತಕ್ಕೆ ತಿರುಗಿಸಿದಾಗ 'ಮಹಾರಾಷ್ಟ್ರ"ವಾದುದು ಅಸಂಭವವೇನಲ್ಲ—ಕ್ರಮವಾಗಿ ಮಹಾರಾಷ್ಟ್ರ ಎಂಬ ಹೆಸರು ಕರ್ನಾಟಕದ ಒಡಲಿನ ಉತ್ತರ ಭಾಗಗಳಿಗೂ, ಹೆಚ್ಚು ಪುರಾತನವಾದ ಕರ್ನಾಟು ಎಂಬ ಅಂಕಿತ ದೇಶದ ಮಿಕ್ಕ ಭಾಗಕ್ಕೂ ಉಳಿದುಕೊಂಡಿರಬೇಕು" (ಕನ್ನಡ ನಾಡಿನ ಚರಿತ್ರೆ ಮೊದಲನೆಯ ಭಾಗ 5. ಡಾ. ಬಿ. ಎ. ಸಾಲೆತೊರೆ.)

ಅಂದರೆ, ತಮಿಳು ಕೃತಿಗಳಲ್ಲಿ 'ಕರ್ನಾಡಗನ್' ಎಂದಿರುವಲ್ಲಿ 'ರ'ಕಾರವಿರುವುದು. ಆ ಮೇರೆಗೆ 'ಕರ್-ನಾಟ'ವೆಂಬುದು 'ಕರ್ಣಾಟ'ವೆಂದೇ ಶುದ್ಧ ರೂಪವಾಗುತ್ತದೆ. ಶ್ರೀ ಗೋವಿಂದ ಪೈಯವರ ವಿವರಣೆ ಈ ತರದಲ್ಲಿ ಸ್ವೀಕಾರಾರ್ಹವಾಗುತ್ತದೆ. "ಅಪ್ರಾಣಿನೀಯವಾದರೂ 'ಶ್ರುತಿ ಸುಭಗತ್ವ'ದಿ ಗುಣಗಳಿಂದ ಕೂಡಿದ ಕರ್ನಾಟಕ'ವೆಂಬುದು ದೂಷ್ಯವಲ್ಲ"ವೆಂದು ಹೇಳುವುದೂ (ಸಮಾಲೋಚನೆ) ಸಾಧುವಲ್ಲ. ಕನ್ನಾಡುವೆಂಬುದು ಕಣ್ನಾಡು, ಕಣ್ಣರನಾಡು, ಎಂದಿದ್ದಿರಬಹುದೆನ್ನುವುದೂ (ಕನ್ನಡ ಕತೆ) ಸಾಧುವಲ್ಲ. ಅವಾಗಲೂ ಶುದ್ಧವಾದ ರೂಪವೇ ತಿಳಿದು ಬಲ್ಲವರಿಂದ ಎಲ್ಲೆಡೆ ಹರಡಿ, ಜನರೆಲ್ಲರೂ ಬಳಸುವಂತಾಗಬೇಕಲ್ಲವೇ? (ಸಾಹಿತ್ಯದ ಹಿನ್ನೆಲೆಯಲ್ಲಿ ಈ ಬಗ್ಗೆ ವಿವರಿಸಲಾಗಿದೆ).

'ರಾಷ್ಟ್ರಕವಿ' ಶ್ರೀ ಎಂ. ಗೋವಿಂದ ಪೈಯವರ ಪುಣ್ಯಸ್ಮೃತಿಗಾಗಿ 'ದೀವಿಗೆ' ಯೆಂಬ ಉದ್ಗ್ರಂಥವು ತಾ 20-2-64 ರಲ್ಲಿ ಕುಂದಾಪುರ ಭಂಡಾರ್ಕರ್ ಕಲಾ ಶಾಲೆಯ ವತಿಯಲ್ಲಿ ಪ್ರಕಟವಾಗಿದೆ. ಅದರಲ್ಲಿ ಹಲವಾರು ಮಂದಿ ಅವರ ಪರಿಚಯ - ಸ್ಮೃತಿ ವಿಚಾರಗಳನ್ನು ಬರೆದಿದ್ದಾರೆ. ಶ್ರೀ ಪೈಯವರು ಹಲವರಿಗೆ ಹಲವು ತರದಲ್ಲಿ ಪರಿಚಿತರು; ಕೆಲವರು ಅವರೊಡನೆ ಮಾತಾಡಿದವರು, ಕೆಲವರು ಪತ್ರವ್ಯವಹಾರದಿಂದ ಹಲವು ವಿಷಯಾಂಶಗಳನ್ನು ತಿಳಿದವರು. ಅವರೊಡನೆ ನಾವು ಮಾತಾಡಿ ತಿಳಿದ—ಬರೆದು ತಿಳಿದ—ವಿಚಾರಗಳನ್ನು ಅವರೆಲ್ಲ ಆಗಾಗ ಪ್ರಕಟಿಸುತ್ತಾರೆ, ಕರ್ತವ್ಯ ಪೂರೈಸುತ್ತಾರೆ. ಅಂತೆ, ಶ್ರೀ ಪೈಯವರೊಡನೆ ಮಾತಾಡಿದಾಗ ತಿಳಿದ ಹಾಗೂ ಅವರ ಲೇಖನಗಳಲ್ಲಿ ಗೊತ್ತಾದ ಕೆಲವು ವಿಚಾರಗಳ ನೆನಪುಗಳನ್ನು ಇಲ್ಲಿ ಬರೆಯುವುದು ಸೂಕ್ತವಾಗಿದೆ:

1947—8 ರ ಹೊತ್ತಿನಲ್ಲಿ ನಾನು ಅವರನ್ನು ಕಾಣಬಯಸಿದೆ: ನನ್ನ ನೆರೆಯ ಶ್ರೀ ಚಿತ್ರಾಪುರದ ಗರ್ಭಾಲಯದಲ್ಲಿರುವ 3 ಶಿಲಾ ಶಾಸನಗಳ ಓಲೆ—ಕಾಗದ ಪ್ರತಿಗಳು ದೊರೆತಿ, ಅವನ್ನು ಒಂದೆರಡು ಪತ್ರಿಕೆಗಳಲ್ಲಿ ಪ್ರಥಮತಃ ಪ್ರಕಟಿಸಿದ್ದೆನು. (ಕಂಠೀರವ-ಮಂಗಳೂರು, ಯುಗಪುರುಷ— ಕಿನ್ನಿಗೋಳಿ). ಆ ಶಾಸನಗಳ ಕಾಲವಿಚಾರಾದಿ ತಿಳಿಯಲು ಶ್ರೀಯುತರಲ್ಲಿಗೆ ಹೋಗಲಾಶಿಸಿದೆ.

ಆ ಪೊಟ್ಟನಾದರೂ ತನಗೇನಾದರೂ ತಿಳಿಯಬಯಸಿ ಪತ್ರ ಬರೆದರೆ ಒಡನೆ ಉತ್ತರಿಸುವ ಮಹನೀಯರಲ್ಲಿ ಶ್ರೀ ಗೋವಿಂದ ಪೈಯೊಬ್ಬರೆಂದ, ಶ್ರೀ ನ. ಕೃಷ್ಣರಾಯರು ಬರೆದಿದ್ದಾರೆ. ಕಿರಿಯರೆಂಬ ಭೇದವಿಲ್ಲದೆ ಪತ್ರ ವ್ಯವಹಾರವನ್ನು ಪರಿಪಾಲಿಸಿದ ಶ್ರೀ ಪೈಯವರ ಪತ್ರಗಳೂ ಅದೊಂದು ಸಾಹಿತ್ಯ ವಿಭೇದವಾಗತಕ್ಕುದೆಂದು ಹೇಳಲಡ್ಡಿಯಿಲ್ಲ. (ದೀವಿಗೆಯಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರು ಅವರ 50 ಓಲೆಗಳನ್ನು ಸಂಗ್ರಹಿಸಿ ಮುದ್ರಿಸಿದ್ದಾರೆ). ಅಂತೆ ಪತ್ರ ಮೂಲಕ ಮೊದಲಾಗಿ ಗೊತ್ತುಮಾಡಿದ ದಿನ ನನ್ನ ಸೋದರ ಶ್ರೀ ಎಂ. ಎಸ್. ಅಚಾರ್ ಮತ್ತು ಶ್ರೀ ಎಂ. ವಿ. ರಾವ್ ಮತ್ತು ನಾನು ಅವರಲ್ಲಿಗೆ ಹೋದೆವು.

ಆ ಶಾಸನಗಳ ವಿಚಾರವಲ್ಲದೆ, ಹಲವು ವಿಚಾರಾಂಶಗಳು ಅವರ ಸಂಭಾಷಣೆಯಲ್ಲಿ ಸೇರಿದ್ದುವು: ಅವರು ಮೊತ್ತಮೊದಲು ಬರೆದ ಒಂದೆರಡು ಬರೆಹಗಳ ಯಥಾ ಪ್ರತಿಯಾಗಲಿ ಕರಡು ಪ್ರತಿಯಾಗಲಿ ಅವರಲ್ಲಿಲ್ಲದೆ, ಅವನ್ನು ಅಚ್ಚಿಗಾಗಿ ಬೇರೆಡೆ ಕಳುಹಿ ಹತ್ತಾರು ವರ್ಷಗಳಂದರೂ ಅಚ್ಚಾಗದ—ಮರಳಿ ಬಾರದ- ಪಶ್ಚಾತ್ತಾಪವನ್ನು ಸೂಚಿಸಿದರು, ಅಂದಿನಿಂದ ಆವೊಂದು ಬರೆಹವನ್ನು (ಪತ್ರವನ್ನಲ್ಲ). ಪ್ರತಿಮಾಡಿಯೇ ಕಳುಹುವ ನಿರ್ಧಾರ ಮಾಡಿದ್ದರಂತೆ. ಲೇಖನಾದಿ ಪ್ರಕಟಿಸಿದ ಪತ್ರಿಯಾಗಲೀ—ಗ್ರಂಥವಾಗಲೀ—ಒಂದು ಪ್ರತಿಯನ್ನೂ ಲೇಖಕನಿಗೆ ಕಳುಹದಿರುವ ಕನ್ನಡ — ಆಂಗ್ಲ ಜನರ ಸಂಕುಚಿತ ಮನೋಭಾವವನ್ನು ಅವರು ಹೇಳಿದರು. ನಮ್ಮ ನೆರೆಯ ಸುರತ್ಕಲ್ಲ ಧರ್ಮಶಾಲೆ, ಹಳೆಯಂಗಡಿಯ ಜೈನ ಬಸ್ತಿಯ ಶಿಲಾಶಾಸನ, ಮತ್ತು ಒಬ್ಬಿಬ್ಬರು ಮಹನೀಯರ ಜೀವನ ವಿಚಾರಗಳೂ ಅವರ ಮಾತಿನ ಲಹರಿಯ ವಿಷಯಗಳಾಗಿದ್ದುವು. ನಮ್ಮ ನೆರೆಯ ಪಣಂಬೂರು, ಬೈಕಂಪಾಡಿ, ಮೈರ್ಪಾಡಿ ಸುರತ್ಕಲ್ಲ ಗ್ರಾಮಗಳಿಗೆ ಆ ಹೆಸರು ಬರಲು ಕಾರಣವೇನೆಂದು ಜಿಜ್ಞಾಸೆಯೂ ಸೂಕ್ಷ್ಮವಾಗಿ ಅವರಲ್ಲಿತ್ತು. ಲೇಖಕರಲ್ಲಿರಬೇಕಾದ ಗುಣಗಳಿವು:

ಅವರ ಮಾತಿನಲ್ಲಿ ಸರಸತೆಯೂ ಇದೆ. "ಇಂತಹ ಸಂಶೋಧನೆಗೆ ತೊಡಗಿದ ನೀವು ಒಲು ಕಡಿಮೆಯೆಂದರೂ ಅಯ್ವತ್ತು ವರ್ಷದವರಿರಬೇಕೆಂದು ನಾನು ಊಹಿಸಿದ್ದೆ"ನೆಂದು ನನಗೆ ಹೇಳಿದರು. "ಇದೇ ತೆರದಲ್ಲಿ ಧಾರವಾಡದ ಗೆಳೆಯರೊಬ್ಬರು ನನಗೆ ಹೇಳಿದುದು ನೆನಪಾಗುತ್ತದೆ: ನನ್ನ ಸಂಶೋಧನಾದಿ ಲೇಖನಗಳ ಪಾಂಡಿತ್ಯ ಪ್ರಖರತೆಯನ್ನು ಕಂಡ ಅವರು ನನಗೆ ಮೂವತ್ತರ ಹರಯವಿರಬೇಕೆಂದು ನೆನೆದುದು ಮೊದಲ ಭೇಟಿಯಲ್ಲಿ ಹೇಳಿದ್ದರು. ನನಗೆ ಆದಾಗಲೇ ನಲ್ವತ್ತೈದು ವರ್ಷವಾದ ದರಿಂದ 'ನೀವೆಂದ ಮೂವತ್ತು ವರ್ಷವೂ ಆಗಿದೆ'ಯೆಂದು ಉತ್ತರಿಸಿದ್ದೆನೆಂ"ದೂ ತುಂಬು ನಗೆಯಲ್ಲಿ ಆಡಿದರು! ಲೇಖನ ಚಾತುರ್ಯವು ಕೇವಲ ಪ್ರಾಯವನ್ನು -ಉಪಾಧಿಯನ್ನು- ಹೊಂದಿಕೊಂಡಿಲ್ಲ, ಬೌದ್ಧಿಕ ವ್ಯವಸಾಯದ ನಿರಂತರಾಭ್ಯಾಸದಿಂದಲೇ ಅದು ಸಮೃದ್ಧಿ ಅಭಿವೃದ್ಧಿಯಾಗುತ್ತದೆಯೆಂದು ಆಗ ತಿಳಿದುಕೊಂಡೆನ!

ಅವರಲ್ಲಿ ಮತ್ತೆ 2-3 ಬಾರಿ ಹೋಗಿದ್ದೆ. ಅವರ ಕೆಲವು ಲೇಖನ ಪ್ರೋದಿಸ್ಟೆ. ಆಗಾಗ ತಿಳಿದ ವಿಚಾರಗಳಲ್ಲಿ ಮುಖ್ಯವಾದವುಗಳು 3-4 ವಿಷಯಗಳು ನನ್ನ ನೆನಹಿನಲ್ಲಿವೆ. ಒಂದನೆಯದು, ಮುಂಬೈಗಿಂತ ಉತ್ತರಕ್ಕಿರುವ ಗುಹೆಯೊಂದರ ಸಂದರ್ಶನಕ್ಕೆ ಶ್ರೀ ಪೈಯವರು ಹೋದ ಸಂಗತಿ. ಅಲ್ಲಿಗೆ ವಾಹನ ಹೋಗದ, ಕಾಲ್ನಡೆಯಲ್ಲೇ ಅವರು ಹೋದರು. ನಡುದಾರಿಯಲ್ಲಿ ಪಾದರಕ್ಷೆಯ ದಾರ ಕಡಿಯಿತು. ಇನ್ನೊಂದನ್ನೂ ಅಲ್ಲೆ ಬಿಸುಟು ಮುನ್ನಡೆದರು. ಬಂಡೆಗಳ ಏರು ತಗ್ಗುಗಳುಳ್ಳ ಪ್ರದೇಶ, ಕಾಲು ಬಿಸಿಯಾಗುತ್ತದೆ, ನೆತ್ತಿಗೂ ಬಿಸಿಲು ತಾಗುತ್ತದೆ, ಬೀಸುವ ಗಾಳಿಯೂ ಬಿಸಿಯಾಗಿದೆ. ನಡ ದಾರಿಯಿಂದ ಹಿಮ್ಮರಳುವುದೇ? ಅಂತೂ ಬಿಸಿಲಲ್ಲಿ ಸಾಗಿ ಅಲ್ಲಿನ ಅಂಶಗಳನ್ನೆಲ್ಲಾ ಕಣ್ಣಾರೆ ಕಂಡು ಸತ್ಯಾಂಶ ತಿಳಿಯಬೇಕೆಂದೂ, ಅದರಿಂದಲೇ ಪ್ರತ್ಯಕ್ಷ ದೃಷ್ಟವೆಂಬ ಆಧಾರವೊದಗಿ, ಆತನ ಬರೆಹವು ಪ್ರಾಮಾಣಿಕವಾಗುತ್ತದೆಂದೂ ಇದರಿಂದ ತಿಳಿಯುತ್ತದೆ.

ಮತ್ತೊಂದು ವಿಷಯವೆಂದರೆ, ಕನ್ನಡದ ಮಹಾಕವಿ ಪಂಪನು ಕನ್ನಡದವನೆಂದು ಶ್ರೀ ಪೈಯವರು ಬರೆದಿದ್ದರು. 'ವಿಜಯನಗರವು.' ಸಂಸ್ಥಾನದ ತರುಣ ವಿದ್ವಾಂಸನೊಬ್ಬನು—ಪಂಪನು ತೆಲುಗನೆನ್ನಲು ತಕ್ಕಷ್ಟು ಆಧಾರ ಬರೆಯಲು ಅಸಾಧ್ಯವಾಗಿ. "ಶ್ರೀ ಪೈಯವರು ಕೋಲೇಜ್ ವಿದ್ಯಾಭ್ಯಾಸ ಕೂಡಾ ಪೂರೈಸದವರು. ಅವಿದ್ಯಾವಂತರಾದ ಇದಿರು ಬರೆದ ಲೇಖನ ತೀರಾ ಅಪ್ರಾಮಾಣ್ಯ"ವೆಂದು ಚುಚ್ಚು ನುಡಿ ಬರೆದನಂತೆ!. ಈ ವಿಷಯ ಅವರ ಖಾಸಾ ತಮ್ಮಂದಿರಾದ ಶ್ರೀ ಸುಬ್ರಾಯ ಪೈಯವರೇ ಆಡಿದ್ದರು ಆ ವಿದ್ವಾಂಸನ ಬಾಲಿಶ ಬುದ್ಧಿಯು ಇಲ್ಲಿ ಗೋಚರಿಸುತ್ತದೆ. ಶ್ರೀ ಗೋವಿಂದ ಪೈಯವರು ಬರೆದ ಲೇಖನ—ತದ್ವಿರೋಧ ಲೇಖನಗಳನ್ನು ಓದಿ, ಆಸಕ್ತರಿಗೆ ಅದನ್ನು ಬಿತ್ತರಿಸುವ ಶ್ರೀ ಸುಬ್ರಾಯ ಪೈಯವರ ರಸಿಕತೆಯೂ ವೇದ್ಯವಾಗುತ್ತದೆ!

1948-49ರಲ್ಲಿ ನನ್ನೊಂದು ಬರೆಹ ತೋರಿಸಲು ಹೋಗಿದ್ದೆ ('ನೀನ್ ಅಂಗ್" ಯೆಂಬ ಅವರ ಲೇಖನಕ್ಕೆ ನನ್ನ ಆಶಯಾಂತರವದು.) ಅದರ ಸಾರವನ್ನು ಮೊದಲು ಓದಿ, 'ಪ್ರಕಟವಾಗಲಿ, ಮತ್ತೆ ಓದುವೆ"ನೆಂದರು. ಪ್ರಬುದ್ಧ ಕರ್ಣಾಟಕದಲ್ಲಿ ಅದು ಪ್ರಕಟವಾದ ವೇಳೆ ಶ್ರೀ ಪೈಯವರು ಭೇಟಿಯಾದುದು ಧರ್ಮಸ್ಥಳದಿಂದ ಮರಳಿ ಬರುವಾಗ ಉಜಿರೆಯಲ್ಲಿ. (ಅದಾಗ 'ಪ್ರಾಕೃತ—ಕನ್ನಡ ಶಬ್ದಗಳು" ಎಂಬೊಂದು ಬೇರೆ ನನ್ನ ಲೇಖ ಪ್ರಕಟವಾಗಿದೆ).

"ಓಹೋ! ಧರ್ಮಸ್ಥಳಕ್ಕೆ ಬಂದಿರಾ? ನಾನು ಕಂಡಿಲ್ಲ, ನಾವಿದ್ದ ನೇಲಿನ ಚಾವಡಿಗೆ ಕೂಡ್ರಲು ಬರಬಹುದಿತ್ತು!" ಎಂದೂ ಹೇಳಿದರು. (ಇದು ಅವರ ಆತ್ಮೀಯತೆಯ ದ್ಯೋತಕ') ತುಸ ತಡೆದು. "ಅದನ್ನ ನಾನೋದ್ದೆ, ಜೈನ ಗ್ರಂಥವೊಂದರಲ್ಲ 'ಟ ನಾಗ್ಗೆ"ಯೆಂದಿದೆ... ಪ್ರಾಕೃತವೂ ಕನ್ನಡವೂ ಸಮಾನತೆಯ ಅಪಭ್ರಂಶ ರೂಪವಲ್ಲ"ವೆಂದು ಗುಡುಗಿನಂತೆ ಬಿರುಸಾಗಿ—ಆಡಿದರು. ಇದು ಅವರ ಸಹಜ ಗಾಂಭೀರ್ಯ ಧ್ವನಿಯಾದರೂ, "ನಾನೆಲ್ಲಿ ಅವರಿಗೆ ಅಪಚಾರ ಬರೆದೆನೋ" ಎಂದು ಶಂಕಿಸ ಹತ್ತಿದ್ದೆ. "ಆ ಬಗ್ಗೆ ನನ್ನ ಅಭಿ

(೧೩ನೇ ಪುಟ ನೋಡಿ)

ಬೆಸ್ತ ಚಕ್ರವರ್ತಿಯಾದ

(ಆರನೇ ಪುಟದಿಂದ)

ಸ್ವಸ್ಥತೆಯಿಂದಾಗಿ ಹಾಸಿಗೆ ಹಿಡಿದಿರುವಳು. ರಾಜಾಶ್ರಮದಲ್ಲಿರುವ ಅದ್ಯಾವ ವೈದ್ಯರಿಂದಲೂ ಅವಳು ಅದ್ಯಾವ ರೋಗದಿಂದ ನರಳುತ್ತಿದ್ದಾಳೆಂಬುದನ್ನು ಕಂಡು ಹಿಡಿಯಲಿಕ್ಕಾಗಿರುವುದಿಲ್ಲ. ಇನ್ನು ರೋಗವನ್ನು ಗುಣಪಡಿಸುವ ಮಾತಿಗೆ ಸಂದರ್ಭವಾದರೂ ಎಲ್ಲಿ? ಅಂತಹ ಆಶ್ಚರ್ಯಕರ ಹಾಗೂ ವಿಚಿತ್ರ ಬೇನೆಯಿಂದ ಅವಳು ಕಷ್ಟಪಡುತ್ತಿದ್ದಳು. ಹೋಗಿ ರಾಜಕುಮಾರಿಯನ್ನು ಕಾಣಬೇಕೆಂಬ ಆಸೆ ಅವನ ಮನಸ್ಸಿನಲ್ಲಿ ಹುಟ್ಟಿತು. ಅವಳು ಸುರ ಸುಂದರಿಯೆಂಬ ವಿಷಯ ಜಗಜ್ಜನಿತವಾಗಿತ್ತು. ಅವಳಿಗೆ ಅದೇನು ಯುಕ್ತ ಕಾಣಿಕೆಯನ್ನು ಕೊಡಲೆಂದು ಅವನು ಯೋಚಿಸಲಾರಂಭಿಸಿದನು. ಅವನ ಜ್ಞಾಪಕಕ್ಕೆ ಒಂದಿದ್ದು ಅದೇ ಹಳೆಯ ಗಂಟು. ಅವನು ಮೂಟೆಯನ್ನು ಬಿಚ್ಚಿ ಪಿಂಗಾಣಿ ಚಟ್ಟಿಯ ಚೂರುಗಳತ್ತ ನೋಡಲಾರಂಭಿಸಿದನು. ಆ ಚೂರುಗಳನ್ನು ಅವಲೋಕಿಸುತ್ತಿದ್ದಾಗ ಅವನ ದೃಷ್ಟಿಗೆ ಅಪೂರ್ವ ಹಾಗೂ ಅತ್ಯಂತ ಸುಂದರ ಹೂವಿನ ಚಿತ್ರವೊಂದು ಕಂಡುಬಂತು. ಅಂತಹ ಹೂವನ್ನು ಅವನು ಇದುವರೆಗೂ ಕಂಡುದೇ ಇಲ್ಲ, ಅದರ ಹೆಸರನ್ನು ಕೇಳಿಯೇ ಇಲ್ಲ. "ಇದೇ ರೀತಿಯ ಒಂದು ನೈಜ ಹೂವನ್ನು ನಾನೊಯ್ದು ರಾಜಕುಮಾರಿಗಿತ್ತಲ್ಲಿ ಅವಳು ನನ್ನನ್ನು ಸದಾ ಸ್ಮರಿಸುತ್ತಿರಬಹುದು, ಮತ್ತು ಚಕ್ರವರ್ತಿಗೆ ನನ್ನ ಮೇಲೆ ಸಂತೋಷವಾಗುತ್ತಿತ್ತು"ಎಂದು ಕಾವ್ರೋ-ಲಿಂಗನು ತನ್ನಲ್ಲೇ ಯೋಚಿಸಿಕೊಂಡನು. ಮನಸ್ಸಿನಲ್ಲಿ ಕೋಲಾಹಲ ಹಾಗೂ ಸಂದೇಹವಿದ್ದಿತ್ತಾದರೂ ಅವನು ಅದನ್ನು ತನ್ನ ತೋಟಕ್ಕೆ ಕೊಂಡೊಯ್ದು ಸ್ವರ್ಗ ವೃಕ್ಷದ ಬಳಿಯೇ ನೆಟ್ಟನು. ಮತ್ತು ಏನಾದರೂ ಪರಿಣಾಮವಾಗಬಹುದೇನೋ ಎಂದು ನಿರೀಕ್ಷಿಸುತ್ತ ನಿಂತುಕೊಂಡನು. ಆ ಸಮಯದಲ್ಲಿ ಅವನು ತನ್ನ ಹಿಂದಿನ ಗುಡಿಸಲಿನಲ್ಲಿ ವಾಸ ಮಾಡುತ್ತಿರಲಿಲ್ಲ. ತನ್ನ ಅಂತಸ್ತಿಗೆ ಅನುಸಾರವಾಗಿ ಅರಮನೆಯನ್ನು ಕಟ್ಟಿಸಿ ಅಲ್ಲಿ ವಾಸ ಮಾಡುತ್ತಿದ್ದನು. ಆ ಪಿಂಗಾಣಿ ಚೂರನ್ನು ನೆಡಲಿಕ್ಕಾಗಿ ಅವನು ಅಲ್ಲಿಗೆ ಬಂದಿದ್ದನು. ನಿರೀಕ್ಷಿಸುತ್ತಿದ್ದಾಗ ಮೂಕನಾಗುವಷ್ಟು ಸಂತೋಷ ಅವನಿಗಾಯ್ತು. ಅದಕ್ಕೆ ಕಾರಣವೆಂದರೆ, ಅವನು ನೆಟ್ಟಿದ್ದ ಹೂವಿನ ಚಿತ್ರ ಅಥವಾ ಪಿಂಗಾಣಿಯ ಚೂರು ಒಂದು ಬಳ್ಳಿಯಾಗಿತ್ತು. ಆ ಬಳ್ಳಿ ನೋಡನೋಡುತ್ತಿದ್ದಂತೆ ಆ ಬಳ್ಳಿಯ ಹೂಗಳನ್ನಿತ್ತಿತು. ಅಬ್ಬಾ! ಅದೆಂಥ ಬಣ್ಣವೇ, ಸುವಾಸನೆಯೇ! ಅದೆಂತಹವನ ಕಲ್ಲೆದೆಯನ್ನು ಸೂರೆಗೊಳ್ಳುವಂತಹದಿತ್ತು. ಅದರಿಂದ ಹೊರಬರುತ್ತಿದ್ದ ಘಮ ಘಮ ಸುವಾಸನೆ ಅದುವರೆಗೆ ಯಾವ ಹೂವಿನಿಂದಲೂ ಬರುತ್ತಿರಲಿಲ್ಲ. ಕಾವ್ರೋ—ಲಿಂಗನು ಅದನ್ನು ನೋಡುವುದರಲ್ಲಿ ಸಮಯ ಕಳೆಯಲಿಲ್ಲ. ಅವಸರ ಅವಸರವಾಗಿ ಅವನು ತನ್ನಿಂದಾದಷ್ಟು ಹೂಗಳನ್ನು ಶೇಖರಿಸಿದನು ಅವುಗಳೊಂದಿಗೆ ಸ್ವರ್ಗ ಫಲಗಳನ್ನೂ ತೆಗೆದು ಕೊಂಡನು ಮತ್ತು ರಾಜಧಾನಿಯತ್ತ ಪ್ರಯಾಣ ಬೆಳೆಸಿದನು. ಅವನು ಅರಮನೆಗೆ ಬಂದೊಡನೆ ಸ್ವತಃ ಚಕ್ರವರ್ತಿ ವಾಂಗನೇ ಬಂದು ಅವನನ್ನು ಸ್ವಾಗತಿಸಿದನು. ಅವನಿಗೆ ಆದರೋಪಚಾರಗಳು ನಡೆದುವು. ಚಕ್ರವರ್ತಿಯು ಅವನನ್ನು ರಾಜಕುಮಾರಿಯ ಹಾಸಿಗೆಯ ಬಳಿಗೆ ಕರೆದೊಯ್ದನು. ಆಕೆ ಅಲ್ಲಿ ಹಾಸಿಗೆಯ ಮೇಲೆ ರಕ್ತ ಛಾಯೆ ಇಲ್ಲದೆ ಬೆಳ್ಳಗಾಗಿ ಬಿದ್ದುಕೊಂಡಿದ್ದಳು. ಚಕ್ರವರ್ತಿ ಹಾಗೂ ಕಾವ್ರೋ—ಲಿಂಗನು ಆ ಕೋಣೆಯೊಳಗೆ ಪ್ರವೇಶಿಸಿದುದೇ ತಡ, ಕೋಣೆಯಿಡೀ ಘಮ ಘಮ ಸುವಾಸನೆಯಿಂದ ತುಂಬಿ ಬಿಟ್ಟಿತು. ಅದು ರಾಜಕುಮಾರಿಯ ಮೇಲೆ ಅತ್ಯಂತ ಉತ್ತಮ ರೀತಿಯಲ್ಲಿ ಪರಿಣಾಮವನ್ನು ಬೀರಿತು. ಆಕೆಯು ತನ್ನ ಹಾಸಿಗೆಯ ಮೇಲೆ ಎದ್ದು ಕುಳಿತು ಕೊಂಡಳು ಮತ್ತು ಮುಗುಳ್ನಗೆ ಬೀರಿದಳು. ಅಂತಹ ಮುಗುಳ್ನಗೆ ಕಾಣದೆ ಬಹಳ ಸಮಯವಾಗಿತ್ತು. ಮಗಳಲ್ಲುಂಟಾದ ಬದಲಾವಣೆಯಿಂದ ಚಕ್ರವರ್ತಿಗೆ ಬಹಳ ಸಂತೋಷವಾಯಿತು. ಅದಕ್ಕೆ ಕಾವ್ರೋ—ಲಿಂಗನ ಆಗಮನವೇ ಕಾರಣವಾಗಿತ್ತು. ಅವನು ಕಾವ್ರೋಲಿಂಗನ ಪರಿಚಯವನ್ನು ರಾಜಕುಮಾರಿಗೆ ಮಾಡಿಕೊಟ್ಟನು. ಕಾವ್ರೋ—ಲಿಂಗನನ್ನು ಹೊಗಳಿದಷ್ಟು ಅವನಿಗೆ ತೃಪ್ತಿಯಾಗಲಿಲ್ಲ. ವಾತ್ಸಲ್ಯ ಅವನ ಮಾತುಗಳಲ್ಲಿ ತುಂಬಿ ತುಳುಕಾಡುತ್ತಿತ್ತು. ಪ್ರಶಂಸೆಯಿಂದ ಕಾವ್ರೋ—ಲಿಂಗನ ಮುಖ ಕೆಂಪಾಯಿತು, ಅವನಿಗೆ ನಾಚಿಕೆಯಾಯಿತು. ನಾಚು ನಾಚುತ್ತಾ-ಸಂಕೋಚಪಡುತ್ತ ತಾನು ತಂದಿದ್ದ ಹೂಗಳನ್ನು ರಾಜಕುಮಾರಿಗೆ ಕೊಟ್ಟನು. ಅದನ್ನು ಕಂಡೊಡನೆ ರಾಜಕುಮಾರಿಯ ಆನಂದಕ್ಕೆ ಪಾರವೇ ಇಲ್ಲದಂತಾಯಿತ, ಅವಳ ಮನಸ್ಸನ್ನು ಅದು ಸೂರೆಗೊಂಡಿತು. ಅದನ್ನು ಕಂಡಷ್ಟು ಆಕೆಗೆ ತೃಪ್ತಿಯಾಗಲಿಲ್ಲ. ಅದರ ದಳದಳಗಳ ಮೇಲೆ ಅವಳು ತನ್ನ ಮೃದು ತುಟಿಗಳನ್ನು ತಾಗಿಸಿದಳು, ಚುಂಬಿಸಿದಳು. ಅವುಗಳನ್ನು ಕಣ್ಣಿನ ಮೇಲೆ ಹಾಕಿಕೊಂಡಳು, ಮುಖದ ಮೇಲೆ ಹಾಕಿಕೊಂಡಳು. ಅವಳು ಪುಷ್ಪವನ್ನು ಆಘ್ರಾಣಿಸಿದಳು. ಅದರ ಸುವಾಸನೆಯನ್ನು ಸೇವಿಸಿದಂತೆ ಆ ಹೂವಿನ ಬಣ್ಣ ಅವಳ ಕೆನ್ನೆಗಳ ಮೇಲೂ ಕಂಡು ಬರಲಾರಂಭವಾಯಿತು. ಬಿಳಿಚಿ ಬೆಳ್ಳಗಾಗಿದ್ದ ಕೆನ್ನೆಗಳು ಪುನಃ ಕೆಂಪಾಗಲಾರಂಭಿಸಿದುವು. ಚಕ್ರವರ್ತಿಯ ಆನಂದಕ್ಕೆ ಮಿತಿಯೇ ಇಲ್ಲವಾಯಿತು, ಅವನು ಆನಂದ ತುಂದಿಲನಾದನು. ಆ ಹೂಗಳನ್ನು ತಂದಿತ್ತುದಕ್ಕಾಗಿ ಅವಳು ಕಾವ್ರೋ—ಲಿಂಗನಿಗೆ ಧನ್ಯವಾದಗಳನ್ನರ್ಪಿಸಿದಳು. ಆ ಪುಷ್ಪಗಳಿಗೆ ಆಕೆ ಅಮೃತ ಪುಷ್ಪವೆಂದು ನಾಮಕರಣ ಮಾಡಿದಳು. ಆಕೆಯು ಮೆಲ್ಲನೆ ಅವನ ಬಳಿ, "ಕಾವ್ರೋ--ಲಿಂಗ, ಈ ಸ್ವರ್ಗದ ಹೂಗಳನ್ನು ನೀನದೆಲ್ಲಿಂದ ತಂದೆ? ಆಶೀರ್ವದಿಸಲ್ಪಟ್ಟವ ಈ ಹೂಗಳು ಎಲ್ಲಿ ದೊರಕುತ್ತವೆ? ಆ ಉತ್ತಮ ಸ್ಥಳವಾದರೂ ಎಲ್ಲಿದೆ? ಆ ಯೋಗ್ಯ ತೋಟಗಳಲ್ಲಿ ಅದನ್ನು ಬೆಳೆಸಲು ಸಾಧ್ಯವೇನು? ..." ಪ್ರಶ್ನೆಗಳ ಪ್ರವಾಹವನ್ನೇ ಹರಿಯಿಸಿದಳು. ಅವಳ ಕುತೂಹಲವನ್ನು ಕಂಡ ಕಾವ್ರೋ--ಲಿಂಗನು ಹಾಗುಂಟಾದ ಕಥೆಯನ್ನು ಅದಷ್ಟು ಸಂಕ್ಷಿಪ್ತವಾಗಿ ತಿಳಿಸಿದನು. ಆ ತಟ್ಟೆಯು ಹಾನ್ ಚಕ್ರವರ್ತಿಯಿಂದ ಕೊಡಲ್ಪಟ್ಟದೆಂಬ ವಿಷಯದಿಂದ ಅವನು ಕಥೆಯನ್ನು ಆರಂಭಿಸಿದನು. ಕಥೆ ಮುಗಿದೊಡನೆ ಅದೇನು ಹೇಳಬೇಕೆಂಬುದು ರಾಜಕುಮಾರಿಗೆ ಗೊತ್ತಾಗಲಿಲ್ಲ. ಅವಳು ಗಿಡವನ್ನು ತಂದು ರಾಜನ ತೋಟದಲ್ಲಿ ನೆಡಲು ಹೇಳಲು ಸಾಧ್ಯವಿರಲಿಲ್ಲ. ಅದರ ಕಾರಣ ಆಕೆಗೆ ಚೆನ್ನಾಗಿ ಗೊತ್ತು. ಮಗಳ ಮನಸ್ಸಿನ ತಳಮಳ ಚಕ್ರವರ್ತಿಗೆ ಗೊತ್ತು. ಅದೇ ರೀತಿ ಕಾವ್ರೋ—ಲಿಂಗನು ಪಡುತ್ತಿರುವ ಕಷ್ಟವೂ ಅವನಿಗೆ ಚೆನ್ನಾಗಿ ಗೊತ್ತು. ಚತುರ ಚಕ್ರವರ್ತಿ ಇದಕ್ಕೊಂದು ಉಪಾಯವನ್ನು ಕಂಡು ಹಿಡಿದನು. ಅವನು ಅವರಿಬ್ಬರನ್ನು ಕುರಿತು ಹೇಳಿದನು, "ಅದಕ್ಕಾಗಿ ಪರಿತಪಿಸಬೇಕಾಗಿಲ್ಲ ಒಂದು ಸುಲಭೋಪಾಯವಿದೆ. ಅದೆಂತಹ ಕಷ್ಟದ ಕೆಲಸಗಳನ್ನು ಸಾಧಿಸಲು ಸಾಧ್ಯವೆಂದು ಗ್ರಂಥಗಳು ಸಾರುತ್ತಿವೆ. ಈ ಕಾರ್ಯವೂ ಹಾಗೆಯೇ, ಅದುದರಿಂದ ಮಗಳೇ ಮರುಗದಿರು. ಸಮಸ್ಯೆಯನ್ನು ಪರಿಹರಿಸೋಣ. ನೀನು ಕಾವ್ರೋ—ಲಿಂಗನನ್ನು ಮದುವೆಯಾಗು ಆಗ ಅವನು ಅವುಗಳನ್ನು ಇಲ್ಲಿಗೆ ತರಲು ಸಾಧ್ಯವಾಗುತ್ತದೆ. ಅವನು ಸ್ವರ್ಗ ಫಲವನ್ನೂ, ಅಮೃತ ಪುಷ್ಪವನ್ನು ಇಲ್ಲಿಗನೇ ತರುವನು, ರಾಜನ ತೋಟವನ್ನು ಶ್ರೀಮಂತಗೊಳಿಸುವನು."

ಅದನ್ನು ಕೇಳಿದ ರಾಜಕುಮಾರಿ ನಾಚಿಕೆಯಿಂದ ಒಂದು ಹಿಡಿಯಂತಾದಳು. ಅದು ಅವಳ ಸರ್ತಿಯಾಗಿತ್ತು. ಕಾವ್ರೋ— ಲಿಂಗನು ಸ್ಫುರದ್ರೂಪಿ ಪುರುಷನು. ಜನ್ಮತಃ ಅವನು ಬೆಸ್ತರವನೇನೋ ಆಗಿದ್ದನು. ಆದರೆ ಈಗ ಅದ್ಯಾವುದರ ಕೊರತೆಯೂ ಅವನಲ್ಲಿಲ್ಲ. ಅವಳು ಒಡನೆ ತನ್ನ ಒಪ್ಪಿಗೆಯನ್ನಿತ್ತಳು. ಸಮ್ಮತಿ ಸೂಚಿಸಿದಳು. ಚತುರ ಚಕ್ರವರ್ತಿಯು ಅವರ ವಿವಾಹವನ್ನು ನೆರವೇರಿಸಿದನು. ಅದೃಷ್ಟವಂತ ಕಾವ್ರೋ—ಲಿಂಗನು ಚೈನಾದ ಚಕ್ರವರ್ತಿಯಾದನು. ಅವನು ನ್ಯಾಯ ರೀತಿಯಿಂದ ರಾಜ್ಯವಾಳಿಕೊಂಡಿದ್ದನು. ಅಲ್ಲಿ ಅತ್ಯಂತ ಬಡವರಿಗೂ ನ್ಯಾಯ ದೊರಕುತ್ತಿತ್ತು. ಕ್ವಾಂಗ್ಸಿಯಲ್ಲಿರುವ ಬೆಸ್ತರು ಈಗಲೂ ಈ ಕತೆಯನ್ನು ಹೇಳುತ್ತಾರೆ."

ಮೀ ಕೆಯಿ—ಎನ್ ರವರ ಕಥೆಯ ಬೆಸ್ತರವನು ಚೈನಾದ ಚಕ್ರವರ್ತಿಯಾಗುವಾಗ ತಾನೇಕೆ ಬಹು ದೊಡ್ಡ ಸಾಮ್ರಾಜ್ಯವನ್ನಾಳಕೂಡದೆಂದು ಚಾವ್ ಎನ್-ಲೈ ಯೋಚಿಸಿಕೊಂಡಿರುವಂತಿದೆ. ಅದಕ್ಕಾಗಿ ಅಕ್ಕಪಕ್ಕದ ರಾಷ್ಟ್ರಗಳ ಮೇಲೆ ಆಕ್ರಮಣ ನಡೆಸಲಾಗುತ್ತಿದೆ. ಆ ಸಾಮ್ರಾಜ್ಯದಾಹಾರದಿಂದ ಅವರು ವಿಶ್ವವಂದ್ಯ ಜಗದ್ಗುರು ಭಾರತದ ಮೇಲೂ ಆಕ್ರಮಣವನ್ನು ನಡೆಸಲು ಹಿಂಜರಿದಿರುವದಿಲ್ಲ. ಅದಕ್ಕೆ ಅವರ ಗುಣವೂ ಕಾರಣವಿದೆ. ಹಾಗಾದರೆ ಸ್ವಾಭಾವಿಕವಾಗಿ ಚೈನೀಯರ ಸ್ವಭಾವ ಹೇಗಿದೆ? ಅದನ್ನು ಮುಂದಿನ ವಾರ ನೋಡುವ.

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ತೀರದ ಸಾಲ

(ಎರಡನೇ ಪುಟದಿಂದ)

ತಳ ಯೋಚನೆಗೆ ತಡೆಯನ್ನುಂಟು ಮಾಡಿತು ಯಾರೆಂದು ನೋಡಲು ದೀಪ ಹಿಡಿದು ಹೊರ ಬಂದಳು. ಬಂದದ್ದು ಪತಿ ಎಂಬುದನ್ನರಿತು ಆನಂದ ಆಶ್ಚರ್ಯಗಳು ಏಕ ಕಾಲದಲ್ಲಿ ಉದ್ಭವಿಸಿದುವು. ಮಾವ ತೀರಿದಂದಿನಿಂದ ಆ ವರೆಗೆ ಆತನು ಅಷ್ಟು ಬೇಗ ಮನೆಗೆ ಮರಳಿರಲಿಲ್ಲ.

ಕೈ ಕಾಲು ತೊಳೆಯಲು ನೀರು ಕೊಟ್ಟು ಊಟಕ್ಕೆ ಬಡಿಸಿದಳು.

ಎಲೆಯ ಮುಂದೆ ಕುಳಿತ ದೇರಣ್ಣನು "ಗೌರಿಯ ಊಟವಾಯಿತೇ?" ಎಂದು ನಸು ನಗೆಯಿಂದಲೇ ಕೇಳಿದನು.

"ಈಗ ತಾನೆ ಊಟ ಮಾಡಿ ಮಲಗಿದಳು."

"ಮತ್ತೆ ಮೌನವಾಗಿಯೇ ಊಟ ಸಾಗಿತು.

ಪತಿಯ ಊಟವಾದೊಡನೆ ತಾನು ಕೂಡಾ ಊಟ ಪೂರೈಸಿ ಎಲೆ ಅಡಿಕೆ ಹಿಡಿದು ಕೋಣೆಗೆ ಬಂದಳು. ದೇರಣ್ಣ ದಿಂಬಿಗೊರಗಿ ಕುಳಿತಿದ್ದನು.

ಕೋಣೆಯೊಳಗೆ ಕಾಲಿಟ್ಟ ಮಡದಿಯನ್ನು "ಇಲ್ಲಿ ಹತ್ತಿರವೇ ಕುಳಿತುಕೋ ಬಾ ಸಂಕ!" ಎಂದು ಕರೆದನು.

ಪತಿಯ ಪಕ್ಕದಲ್ಲಿ ಕುಳಿತು ಎಲೆ ಅಡಿಕೆ ಮಡಚಲು ಆರಂಭಿಸಿದಳು.

"ಗೌರಿಗೆ ನಾವು ತುಂಬಾ ಓದಿಸಬೇಕು ಸಂಕ"! ದೇರಣ್ಣನೇ ಮಾತಿಗಾರಂಭಿಸಿದನು.

'ಹೆಣ್ಣು ಮಕ್ಕಳಿಗೆ ಹೆಚ್ಚು ಓದು ಯಾಕೆ?"

"ನಮಗೆ ಗಂಡು—ಹೆಣ್ಣು ಎಲ್ಲವೂ ಗೌರಿ'!

'ಬೇಗ ಆತಳಿಗೊಂದು ಮದುವೆ ಮಾಡಲು ಯೋಚಿಸಿ.'

'ಇಷ್ಟು ಸಣ್ಣವಳಿಗೆ ಎಂಥ ಮದುವೆ!'

"ವರ್ಷ ಹನ್ನೆರಡಾದರೂ ನೋಡಲು ಹದಿನಾರರಂತೆ ಕಾಣುತ್ತಿದ್ದಾಳೆ."

"ಆಗಲಿ ಸರಿಯಾದ ಕಡೆ ಸಿಕ್ಕಿದರೆ ನೋಡುವ."

....

"ಸಂಕ!"

ಮುಖ ಮೇಲಕ್ಕೆತ್ತಿ ಪತಿಯತ್ತ ನೋಡಿದಳು.

"ಈಗ ನನಗೆ ಒಳ್ಳೆಯ ಲಾಭವಾಗುವ ಕಾಲ ಬಂದಿದೆ".

'ಅದು ನಮ್ಮ ಪುಣ್ಯ'!

'ಆದರೆ ಅದಕ್ಕೆ ನಾಲ್ಕಾರು ದಿನಗಳ ಮಟ್ಟಿಗೆ ಸ್ವಲ್ಪ ಹಣ ಬೇಕಾಗಿದೆ".

"ಅದಕ್ಕೇನು ಮಾಡಲಿ?"

"ನೀನು ಮನಸ್ಸು ಮಾಡಿದರೆ ಆಗುತ್ತದೆ'.

"ನಿಮ್ಮ ಯಾವ ಮಾತಿಗೆ ನಾನು ಅಡ್ಡಿ ಪಡಿಸಿದ್ದೇನೆ?"

"ಹಾಗಲ್ಲ! ಆದರೂ ನೀನು ಮನದಲ್ಲಿ ಬೇರೆ ಏನಾದರೂ ಯೋಚಿಸಬಾರದೆಂದು ಹಾಗಂದೆ."

"ಹೇಳಿ"!

"ನಿನ್ನ ಚಿನ್ನವನ್ನು ನಾಲ್ಕು ದಿನದ ಮಟ್ಟಿಗೆ ಕೊಟ್ಟರೆ ಬೇಂಕಿನಲ್ಲಿಟ್ಟು ಹಣ ಪಡೆದು ಕೂಡಲೇ ಬಿಡಿಸಿ ತಂದು ಕೊಡುವೆ.' ಮಾತನಾಡದೆ ಪೆಟ್ಟಿಗೆಯ ಬೀಗವನ್ನು ತೆಗೆದು ಚಿನ್ನವನ್ನೆಲ್ಲಾ ತಂದು ಪತಿಯ ಕೈಗಿತ್ತಳು.

"ನೀನು ನನ್ನ ಪಾಲಿನ ದೇವತೆ ಸಂಕ!"

"ಹಾಗೆನ್ನಬೇಡಿ ದೊರೆ!"

ತನ್ನ ಬಾಹುಗಳಿಂದ ಪತ್ನಿಯನ್ನು ಬಂಧಿಸಿದ. ಪತಿಯ ಬಂಧನದಿಂದ ಆತಳಿಗೆ ಅಂದು ಎಲ್ಲಿಲ್ಲದ ನಿದ್ದೆ ಆವರಿಸಿತು.

ಬೆಳಗ್ಗೆ ಎದ್ದು ನೋಡುವಾಗ ಪತಿ ಚಿನ್ನದೊಟ್ಟಿಗೆ ಮಾಯವಾಗಿದ್ದ; ಎಲ್ಲಿಯಾದರು ಹೊರ ಹೋಗಿರ ಬಹುದೆಂದು ಕಾಫಿ ತಯಾರಿಸಿಕೊಂಡು ಅದೆಷ್ಟು ಕಾದರೂ ಪತಿರಾಯ ಸ ಕಿ ವಿರಲಿಲ್ಲ.

ಹೊರಗಿನಿಂದ "ಗೌಡರೇ! ಗೌಡರೇ" ಎಂಬ ದನಿ ಕೇಳಿ ಬಂತು.

ಯಾರೆಂದು ನೋಡಲು ಹೊರ ಬಂದಳು.

ತಲೆಯಲ್ಲಿಯ ರುಮಾಲು; ಮೈಯಲ್ಲಿಯ ಕೋಟು; ಉಟ್ಟ ಪಂಚೆ; ಹೊದೆದ ಶಾಲು; ಕೈಯಲ್ಲಿಯ ಬೆತ್ತ; ಮುಖದ ಗಾಂಭೀರ್ಯ; ಇವಿಷ್ಟು ಶ್ರೀಮಂತರೆಂಬುದನ್ನು ತೋರಿಸುತಿತ್ತು. ಆ ವರೇಗೆ ಅವರನ್ನು ನೋಡಿದ ಪರಿಚಯ ಆತಳಿಗಿರಲಿಲ್ಲ. ಯಾರೆಂಬುದನ್ನು ಯೋಚಿಸುತ್ತಾ ನಿಂತಳು.

'ಅಮ್ಮಾ! ಗೌಡರಿದ್ದಾರೋ!" ಅವರೇ ಕೇಳಿದರು.

"ಇಲ್ಲ."

"ಎಲ್ಲಿಗೆ ಹೋಗಿದ್ದಾರೆ? '

ತನಗೆ ತಿಳಿಯದೆ ಇರುವಾಗ ಎಲ್ಲಿಗೆಂದು ಹೇಳಲಿ? ಮೌನವಾದಳು.

"ಎಲ್ಲಿಗೆ ಹೋಗಿದ್ದಾರೆಂದು ನಿಮಗೆ ಗೊತ್ತಿಲ್ಲವೇ? ಆತಳ ಸಮಸ್ಯೆಯನ್ನು ಅವರೇ ಬಿಡಿಸಿದರು.

'ಇಲ್ಲ'

'ಆಗಲಿ! ಬಂದರೆ ನಾನು ಬರಹೇಳಿದ್ದೇನೆಂದು ಹೇಳಿ!' ಹೊರಡಲನುವಾದರು.

"ಯಾರು ಬರಹೇಳಿದ್ದಾರೆಂದು ಹೇಳಬೇಕ?" ಮೆಲ್ಲನೆ ಕೇಳಿದಳು

'ಓಹೋ ಮರೆತೆ! ಸಾಹುಕಾರ ರಂಗಪ್ಪನವರು ಬರ ಹೇಳಿದ್ದಾರೆಂದು ಹೇಳಿ'. ಎಂದು ತಿರುಗಿ ನೋಡುತ್ತಾ ಹೊರಟು ಹೋದರು.

ರಂಗಪ್ಪನವರು ಹೋಗುತ್ತಿರುವುದನ್ನೇ ನೋಡುತ್ತಾ ನಿಂತಳು. "ಯಾಕೆ ಬರ ಹೇಳಿರ ಬಹುದು? ಮನದಲ್ಲಿಯೇ ಯೋಚಿಸಲಾರಂಭಿಸಿದಳು. ಆದರೆ ಅದು ಆತಳ ಯೋಚನೆಗೆ ನಿಲುಕದ ವಿಚಾರವಾಗಿತ್ತು.

ರಂಗಪ್ಪನವರ ಹೆಸರನ್ನು ಆ ಊರಿನಲ್ಲಿ ಕೇಳದ ಜನರಲಿಲ್ಲ. ಅಂತೆಯೇ ಅವಳು ಕೇಳಿದ್ದಳು ಅವರಿಂದ ಪಡೆದ ಸಾಲ ಎಂದೂ ತೀರದ ಸಾಲವಾಗಿರುತಿತ್ತು. ಜೊತೆಗೆ ಕಣ್ಣಿಗೆ ಬಿದ್ದ ಹೆಣ್ಣು ಮಕ್ಕಳನ್ನು ಬಿಟ್ಟವನಲ್ಲ' ಎಂಬ ಪ್ರಖ್ಯಾತಿಯೂ ಇತ್ತು. "ಅಂತವರ ಜೊತೆ ತನ್ನ ಪತಿಯ ವ್ಯವಹಾರವೇನಿರಬಹುದು?'

ಅರ್ಥವಾಗಲಿಲ್ಲ.

ಗೌರಿ ತಾಯಿಯನ್ನು ನೋಡುತ್ತಾ ನಿಂತೇ ಇದ್ದಳು. 'ಇಲ್ಲೇನು ಮಾಡುವೆ ಒಳಗೆ ನಡೆ." ಎಂದು ಮಗಳನ್ನು ತಳ್ಳಿಕೊಂಡು ಒಳ ನಡೆದಳು. ತಾಯಿ ತನ್ನ ಮೇಲೇಕೆ ಸಿಟ್ಟುಗೊಂಡಳೆಂಬುದೇ ಗೌರಿಗೆ ಅರ್ಥವಾಗಿರಲಿಲ್ಲ

೪

ಪತ್ನಿಯನ್ನು ವಂಚಿಸಿ ತೆಗೆದುಕೊಂಡು ಹೋದ ಚಿನ್ನವೆಲ್ಲಾ ಇಸ್ಪೀಟಾಟದಲ್ಲಿ ರಾತ್ರಿಯೇ ಗೌಡನ ಕೈಬಿಟ್ಟಿತ್ತು. ಗೆಳೆಯರಿಂದ ಮುಂದೆ ಸಹಾಯ ಸಿಗಲಾರದೆಂದು ತಿಳಿದಾಗಲೇ ದೇರಣ್ಣ ಮನೆಯತ್ತ ಹೊರಟಿದ್ದ. ನಿದ್ದೆ ಇಲ್ಲದ ಕಣ್ಣು ಕೆಂಪಾಗಿತ್ತು. ಬರುವಾಗ ದಾರಿಯಲ್ಲಿ ಎದುರಿಗೇನೇ ಸಾಹುಕಾರರು ಸಿಕ್ಕಿದರು.

ಸಾಹುಕಾರರನ್ನು ನೋಡಿದಾಗ ದೇರಣ್ಣನೇ ಬಗ್ಗಿ ನಮಸ್ಕರಿಸಿದ.

"ಗೌಡರೇ, ನಾನೀಗ ನಿಮ್ಮ ಮನೆಕಡೆಯಿಂದಲೇ ಬರುತ್ತಿದ್ದೇನೆ ಸಾಲದ ಹಣ ಬಡ್ಡಿ ತುಂಬಾ ಆಗಿದೆ."

"ಕೊಡುತ್ತೇನೆ ಸಾಹುಕಾರರೇ!" ಕೈ ಮುಗಿದ ಹೇಳಿದ.

"ಕೊಡುತ್ತೇನೆಂದರೆ ಆಗದು. ನನಗೆ ಕೂಡಲೇ ಬೇಕು'. ಗಟ್ಟಿಯಾಗಿಯೇ ಕೇಳಿದರು

'ಸ್ವಲ್ಪ ಸಮಯ ಅವಕಾಶ ಕೊಡಿ!" ನಮ್ರತೆಯಿಂದಲೇ ನುಡಿದನು.

"ಆದಾಗಲ್ಲ' ನಿಮ್ಮಲ್ಲಿರುವ ಆ ಎಳೆ ಹಕ್ಕಿಯಾವುದು?' ಮಗಳು ನಗೆಯಿಂದಲೇ ಕೇಳಿದರು.

ಸಾಹುಕಾರರ ಮನಸ್ಸು ಮಗಳು ಗೌರಿ ಮೇಲೆ ಬಿದ್ದಿದೆ ಎಂಬುದನ್ನು ಅರಿತುಕೊಂಡ ದೇರಣ್ಣ ಗೌಡ. ಆಗಲೇ ಆತನಿಗೆ ತನ್ನ ತಪ್ಪು ಅರಿವಾಗಿ ವಿವೇಕ ಉದಯಿಸಲು ಆರಂಭವಾಗಿತ್ತು.

"ಮುದ್ದಾದ ಹಕ್ಕಿಯನ್ನು ಮನೆಯಲ್ಲಿಯೇ ಇಟ್ಟಂತೆ ಕಾಣುತ್ತಿದೆ."

'ಸಾಹುಕಾರರೇ! ಸಾಲದ ಹೊರತು ಮನೆಯ ವಿಚಾರ ಮಾತನಾಡಬಾರದು.' ಎಚ್ಚರಿಸುವಂತೆ ಹೇಳಿದ.

"ನಾನು ಕೇಳಿದ್ದು ಸಾಲವಲ್ಲವೇನೋ? ಏನು ತಲೆ ಹರಟೆ ಮಾತಾಡ್ತಿ?" ದರ್ಪದಿಂದಲೇ ಹೇಳಿದರು.

"ಕೊಡೋಣ ಹೋಗಿ" ಅಷ್ಟೇ ನಿಷ್ಠುರದಿಂದ ನುಡಿದನು.

"ನಾಳೆ ಸಂಜೆ ಒಳಗೆ ಅಸಲು ಬಡ್ಡಿ ಸಮೇತ ಬರಬೇಕು. ಇಲ್ಲವಾದಲ್ಲಿ ಮುಂದೇನಾಗುವುದೆಂಬುದನ್ನು ಆ ಮೇಲೆ ನೋಡು" ಬೆತ್ತವನ್ನು ಕುಟ್ಟುತ್ತಾ ಹೊರಟು ಹೋದರು.

ದೇರಣ್ಣ ಕ್ಷಣ ಕಾಲ ಸ್ತಂಭೀಭೂತನಾದ. ಅಂದಿನ ವರೆಗೆ ಸತಿ ಸಾಧ್ವಿಯನ್ನು ವಂಚಿಸಿ ಮನಬಂದಂತೆ ದುಂದು ಮಾಡಿದ್ದ. ನಂಬಿದ ಸತಿಗೆ ದ್ರೋಹವನ್ನು ಬಗೆದು ಪರ ತರುಣಿಯನ್ನು ಕೂಡಿದ್ದ. ಆದರೆ ಇಂದು ಸಾಲದ ನೆಪದಿಂದ ಸಾಹುಕಾರರ ಕಣ್ಣು ಮಗಳು ಗೌರಿಯತ್ತ ಹೊರಳಿದಾಗ ತನ್ನ ಕಾರ್ಯದ ಅರಿವಾಗ ತೊಡಗಿತ್ತು. ಪುಟ್ಟ ಹಾಳೆ ಚಿನ್ನವನ್ನು ಕೊಂಡೊಯ್ಯುವಾಗ ಸಂತೋಷಪಟ್ಟಿದ್ದ. ಅದನ್ನೇ ಮನದಲ್ಲಿ ಯೋಚಿಸುವಾಗ ಭಯಭೀತನಾದ. ತನ್ನನ್ನೇ ನಂಬಿರುವ ಸತಿಯಾಗ?

ಸಾಹುಕಾರರ ಸಾಲದಿಂದ ಮನೆ ಆಸ್ತಿಯೆಲ್ಲಾ ಕೊಚ್ಚಿ ಹೋಗುವಂತಿತ್ತು. ವರುಷಗಳುರುಳಿದರೂ ತನ್ನ ವ್ಯವಹಾರ ಅರಿಯದೆ ತನ್ನ ಮೇಲೆ ವಿಶ್ವಾಸವನ್ನಿಟ್ಟ ಪತ್ನಿಯ ಮಾಂಗಲ್ಯಕ್ಕಾಗಿ ಮರುಗಿದ. ಯೋಚಿಸುವ ಕಾಲ ಅದಲ್ಲವಾಗಿತ್ತು. ಸಾಹುಕಾರರ ಸಾಲ ತೀರಿಸಲೇ ಬೇಕಿತ್ತು.

(ಹದಿನೈದನೇ ಪುಟ ನೋಡಿರಿ)

ರಾಷ್ಟ್ರಕವಿ ಎಂ. ಗೋವಿಂದ ಪೈಯವರು

(ಹತ್ತನೇ ಪುಟದಿಂದ)

ಪ್ರಾಯಕ್ಕೆ ಆ ಸಂಪಾದಕರ ಪತ್ರ ಬಂದಿತ್ತು ಬರೆವೆ" ನೆಂದಾಗ ನನ್ನ ಉದ್ವೇಗ ಕಡಿಮೆಯಾಯಿತು. ತಾನು ಬರೆದ ಲೇಖಗಳ ವಿಚಾರದಲ್ಲಿ ಕಡಾ ಕಂಡಿತವಾಗಿ ಹೇಳುವಾಗ ಅದೆಷ್ಟು ರೊಚ್ಚು ಕಾಣುವುದೋ ಅಷ್ಟೇ ಮಟ್ಟದಲ್ಲಿ ಆ ವಿಷಯದ ಬಗ್ಗೆ ಬರೆದವನ ವ್ಯವಸಾಯದ ಬಗ್ಗೆ ಮೆಚ್ಚುಗೆ ಅವರಲ್ಲಿತ್ತು.

ಅವರು 1935ರ ಜಯಕರ್ನಾಟಕ ಪತ್ರಿಕೆಯಲ್ಲಿ - ತಾನು ಬರೆದ 'ಅಭಿನವ ಪಂಪನ ಕಾಲ ವಿಚಾರದ ಬಗ್ಗೆ ಆಕ್ಷೇಪಗಣಿಸಿದ ಡಾ॥ ಎ. ವೆಂಕಟ ಸುಬ್ಬಯ್ಯನವರಿಗೆ ಉತ್ತರಿಸಿ ಬರೆದ ಲೇಖನದಲ್ಲಿ- ಹೇಳಿದುದು: "ಕನ್ನಡ ಸಾಹಿತ್ಯದಲ್ಲಿರುವ ಅದೊಂದು ಜನಶ್ರುತಿಯನ್ನು (ಅಭಿನವ ಪಂಪ-ಕಾಂತಿಯರ ಸಂವಾದದ ಬಗ್ಗೆ) ಪರೀಕ್ಷಾರ್ಥದಿಂದಲಾದರೂ ಸೂಚಿಸುವಷ್ಟು ಸ್ವತಂತ್ರ್ಯವು ನನಗಿಲ್ಲವೆಂದಾದರೆ ನನ್ನ ಲೇಖನಿಯನ್ನು ನಮ್ಮ ಮುಯ ಮುಂಗಡೆಯಲ್ಲಿರುವ ಅರಬೀ ಸಮುದ್ರಕ್ಕೆ ಒಗೆದುಬಿಡುವುದೇ ಮೇಲು." ಶ್ರೀ ಪೈಯವರು ಕಂಡಿತವಾದ ಮಾತನ್ನು ಆಜನ್ಮೋನುಡಿಯುವವರು.

ಅವರ ಲೇಖನದಲ್ಲಿ ಒದಗಿದ ತಪ್ಪು-ಮರೆವುಗಳನ್ನು ತಿಳಿಸಿದಲ್ಲಿ ಕೃತಜ್ಞತೆಯಿಂದ ಒಪ್ಪಿಗೊಳ್ಳುವ ಪ್ರಾಂಜಲತೆಯೂ ಅವರಲ್ಲಿತ್ತು: ಇದೇ—ಮೇಲೆ ಉದಾಹರಿಸಿದ-ಲೇಖನದಲ್ಲಿದೆ: "ನಾಗಚಂದ್ರನು ಸ್ತುತಿಸಿದ ಅಭಯನಂದಿ ವೇದಲಾದವರನ್ನು ಕುರಿತು ಇವರು ಈ ಮಾಂಚೆ ಹೇಳಿರುವದನ್ನು ಓದಿದ್ದೇನಾದರೂ, ಉದಾಸೀನತೆಯಿಂದಲ್ಲ, ಮರವೆಯಿಂದಲೇ ಅದು ನಾನು ನಾಗಚಂದ್ರನ ಕಾಲವಿಚಾರವನ್ನು ಮಾಡುತ್ತಿದ್ದ ಹೊತ್ತಿಗೆ ನನ್ನ ಗಮನದಿಂದ ನುಸುಳಿರ ಬೇಕೆಂಬ ಬಗ್ಗೆ ತುಂಬಾ ವಿಷಾದಿಸುತ್ತೇನೆ. ಹೇಗಾದರೂ ಈಗ ನೋಡ ಪಲ್ಲಿ ಇದೊಂದು ನನ್ನ ತಪ್ಪೇ ಸರಿ...ನನ್ನ ಇದೊಂದು ತಪ್ಪನ್ನು ತೋರಿಸಿಕೊಟ್ಟು ನನ್ನನ್ನು ಉಪಕರಿಸಿರುವ ಬಗ್ಗೆ ಇವರಿಗೆ ನಾನು ಕೃತಜ್ಞನಾದಷ್ಟು ಸಾಲದು'! ಪ್ರತಿಯೊಬ್ಬ ಲೇಖಕನಲ್ಲಿ-ವ್ಯಕ್ತಿಯಲ್ಲಿ-ಇಂತಹ ಸದ್ಗುಣವಿರ ಬೇಕು!

ಕೆಲವು ಲೇಖನಗಳ ವಿಷಯಾಂಶಗಳ ಬಗ್ಗೆ—ಅವರ ಲೇಖನದಲ್ಲಿ ಉದಾಹರಿಸಿದ ಗ್ರಂಥಗಳ ಪ್ರಾಮಾಣಿಕತೆಯ ಬಗ್ಗೆ—ನಾನು ಕೆಲವೊಮ್ಮೆ ಪತ್ರ ಮೂಲಕ ಪರಸ್ಪರವಾಗಿ ಚರ್ಚಿಸಿದ್ದೇನೆ. ಈ ನನ್ನ ಚರ್ಚೆ ಕೆಲವು ಬಾರಿ ಉತ್ತರಿಸಿದ್ದಾರೆ, ಕೆಲವೊಮ್ಮೆ ಮೌನವಾಗುತ್ತಿದ್ದರು. ಆಗ ಮೇಲಿಂದ ಮೇಲೆ ಪತ್ರ ಬರೆಯುತ್ತಿದ್ದೆ! ಈ ನನ್ನ ಹಟಮಾರಿತನಕ್ಕೆ ನನ್ನನ್ನು ಕುರಿತು ಅದೊಬ್ಬ ಗೆಳೆಯರೊಡನೆ ಮಾತನಾಡುತ್ತಾ ಇವರು ಒಬ್ಬೆ ಒಟ್ಟಿಗೆ ಹಿಡಿದ ಕಂಬಳಿ ಕಾಳದಂತೆ! ಉತ್ತರಿಸಿದರೂ ಪ್ರಶ್ನೆ ಕೇಳುತ್ತಾರೆ, ಉತ್ತರಿಸದಿದ್ದರೂ ಪ್ರಶ್ನೆ ಕೇಳುತ್ತಾರೆ. ಅತ್ತಿಂದಿತ ಕೊಡಹಿದರೂ ಬಿಡಲೊಲ್ಲರು' ಎಂದರಂತೆ! ನನ್ನಂತ ಆ ಭಾಗ್ಯಗಳು ಇಂತಹ ಬಲ್ಲವರಿಂದ ವಿಷಯಾಂಶ ತಿಳಿಯಲು ಹಟಮಾರಿತನವೇ ಬೇಕು!

ತನಗೆ ಗೊತ್ತಿದ್ದ ವಿಷಯಗಳನ್ನು ಕೇಳಿದವರಿಗೆ ತಿಳಿಸುವುದಕ್ಕೆ ಅವರು ಹಿಂಜರಿಯುತ್ತಿದ್ದಿಲ್ಲ. ತನ್ನಲ್ಲಿದ್ದ ಉತ್ತಮ ಕೃತಿಗಳನ್ನು ಬಯಸಿದವರಿಗೆ ಒದಗಿಸಲೂ ಹಿಂದಾಗಿಲ್ಲ. ಜಾಯೇಂದ್ರ ಕವಿ ರಚಿತ "ಕನ್ನಡ ಕುವಲಯಾನಂದ'ವನ್ನು ಪ್ರತಿ ಬರೆಯಿಸಿ ಕವಿವರ್ಯ ಶ್ರೀ ದ.ರಾ. ಬೇಂದ್ರೆಯವರಿಗೆ ಕಳುಹಿದ್ದರೆಂದು ಅವರಿಂದಲೇ ನನಗೆ ತಿಳಿದುದು. ಹಾಗೆಯೇ ನಾರಾಯಣ ಕವಿ ರಚಿತ "ಉತ್ತರ ರಾಮಕಥೆ"ಯ ತಾಳೆಗರಿ ಪುಸ್ತಕವನ್ನು ಎರವಲಾಗಿ 19-8—9 ರಲ್ಲಿ ನನಗೆ ಅವರು ನೀಡಿದುದರಿಂದಲೇ ನಾನು ಅದರ ಶುದ್ಧ ಪ್ರತಿ ಬರೆದುದು; ಇತ್ತೀಚೆಗೆ ಅದು ಪ್ರಕಟವಾದಾಗ, "ನಾಲ್ಕು ಮಾತು"ಗಳನ್ನು ಬರೆದ ಅವರು ನನಗೆ ಹರಸಿದ್ದಾರೆಂದು ತಿಳಿಸಲು ಸಂತೋಷವೆನ್ನಿಸುತ್ತದೆ.

1963 ರಲ್ಲಿ ಅವರು ಮಂಗಳೂರು ಸರಕಾರಿ ಚಿಕಿತ್ಸಾಲಯದಲ್ಲಿದ್ದಾಗ ಶ್ರೀ ಅಮ್ಮೆಂಬಳ ಶಂಕರ ನಾರಾಯಣ ನಾವಡರೊಡನೆ ನಾನು ಅವರನ್ನು ಕಾಣಲು ಹೋಗಿದ್ದೆನು. ಎದ್ದು ನಿಲ್ಲುವುದಕ್ಕೆ ತ್ರಾಣವಿಲ್ಲ, ಕಣ್ಣಿಂದ ನೋಡಿ ತಲೆ ಅಲ್ಲಾಡಿಸುತ್ತಿದ್ದರು. "ನಾನು ಇಂತಹವನು" ಎನ್ನಲು "ತಿಳಿಯಿತು" ಎಂದು ಉತ್ತರಿಸಿದರು. ತುಸ ತಡೆದು, 'ಒಳ್ಳೆಯ ಗೆಳೆಯರು' ಎಂದು ಉದ್ಗರಿಸುತ್ತಿದ್ದರು. ಮತ್ತೆ ತುಸ ಹೊತ್ತಿನಲ್ಲಿ ನಾವು ಅಲ್ಲಿಂದ ಹೋಗಬೇಕೆಂದಾಗ, ಎದ್ದು ನಿಲ್ಲುತ್ತಾ (ಒಬ್ಬರು ರಟ್ಟೆ ಹಿಡಿದು ನಿಲ್ಲಿಸುತ್ತಾ), ಮೆಲ್ಲಗೆ ದಿಟ್ಟಿಸಿ ಬಲು ಮೂಕನಾಗಿ—ಕೈ ಮುಗಿದುದು ಅದೆಂದಿಗೂ ಮರೆಯಲಾಗದ ರೋಮಾಂಚಕಾರಕವಾದ ಮಾರ್ಮಿಕ ವಿಷಯವಾಗಿದೆ! ಅನಂತರ ಒಂದೆರಡು ತಿಂಗಳೊಳಗೆ ಅವರು ನಿರ್ಯಾಣ (ಸ್ವರ್ಗಸ್ಥ)ರಾದರೆಂಬ ಸುದ್ದಿ ಕೇಳಿ ನನಗೆ ಮನಸ್ಸಿನ ದುಃಖವು ತಡೆಯಲಾಗಲಿಲ್ಲ. ಆದಾಗ ಒಂದೆರಡು ಕಡೆ ಅವರನ್ನು ಕುರಿತು 'ಶ್ರದ್ಧಾಂಜಲಿ'ಯ ವಾಕ್ಯಗಳನ್ನು ನಾನು ಗದ್ಗದ ಕಂಠದಿಂದ ಹೇಳುತ್ತಾ, ಕಣ್ಣೀರು ತಾನಾಗಿ ಹರಿಯಿಸಿದುದೂ ಉಂಟು!

ಶ್ರೀ ಪೈಯವರು ತಾರುಣ್ಯದಲ್ಲಿ 'ಆರ್ಕಿಯೊಲಾಜಿಕಲ್" ಖಾತೆಗೆ 'ಡೈರೆಕ್ಟರ್" ಆಗುವ ವ್ಯವಹಾರದ ಸದವಕಾಶವೂ ಒದಗಿತ್ತು; ಅವರಿಗೆ ಅರ್ಜಿ ಬರೆಯುವುದಕ್ಕೆ ಬಾಸಾ ಹೇಳಿಕೆಯೂ ಬಂದಿತ್ತೆಂದು ಮಂಗಳೂರು ಮಿತ್ರರೊಬ್ಬರು ನನ್ನೊಡನೆ ಅಂದಿದ್ದರು. ಅದನ್ನೊಪ್ಪದೆ ಅವರು ತಾನೊಬ್ಬನೇ ನೇರವಾಗಿ ನಿಂತು, ಸಂಶೋಧನೆಯ ಸಾಹಿತ್ಯದ ರಂಗದಲ್ಲಿ ಮೆರೆದಾಡಿದರು. 1963ನೇ ತಿಂಗಳಲ್ಲಿ ಅವರು ಮೈಸೂರು ವಿಶ್ವವಿದ್ಯಾಲಯಕ್ಕೆ ಬರೆದಿಟ್ಟ ಪತ್ರದಲ್ಲಿ 'ತನಗೆ ಗೌರವ ಡಾಕ್ಟರೇಟ್' ಪ್ರಶಸ್ತಿ ಬೇಕಾಗಿಲ್ಲ"ವೆಂದು ಒಕ್ಕಣಿಸಿದ್ದರು! "ರಾಷ್ಟ್ರ ಕವಿ'ಯೆಂದು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೆಂದು ಅವರೊಪ್ಪಿದುದು ಹಿರಿಯ ಗೆಳೆಯರ ಒತ್ತಾಸೆಗಾಗಿ ಎಂದು ಬೇರೆ ತಾನೇ ತಿಳಿಯುತ್ತದೆ. ಬಿರುದು ಬಾವಲಿಗಳಿಂದ ಆಗಬೇಕಾದುದೇನೂ ಇಲ್ಲ, ಮನಃಶುದ್ಧಿ ಸತ್ಯನಿಷ್ಠೆ—ಜ್ಞಾನ ನಿಷ್ಠೆಯಿಂದ ಸಾಹಿತ್ಯ ಸೇವೆ ಮಾಡುವುದು ತನ್ನ ಕೆಲಸ. ಆ ಬಗ್ಗೆ ಜನತೆ ಓದಿ ತಿಳಿದು, ಕೇವಲ ಮನಸಾರೆ ಪ್ರೀತ್ಯಾದರ ತೋರಿಸುವುದೇ ತನಗೆ ಗೌರವದ ಸತ್ಕಾರದ ಪದವಿಯೆಂದು ಸನ್ಮಾನ್ಯ ಶ್ರೀ ಪೈಯವರು ಬಗೆದವರು!

ಕನ್ನಡದ ಕವಿವರೇಣ್ಯರೂ, ಇತಿಹಾಸ ಸಂಶೋಧಕಾಚಾರ್ಯರೂ ಆದ ಶ್ರೀ ಗೋವಿಂದ ಪೈಯವರ ಕೃತಿಗಳ ಆದರ್ಶದಲ್ಲಿ ಸಾಗಿ, ಸಾಹಿತ್ಯ ಸೇವಕರಾಗುವುದೇ ಅವರಿಗೆ ನಾವು ಮಾಡಲಾಪ ಗೌರವವೆನ್ನಬಹುದು!

(ಎಲ್ಲಾ ಹಕ್ಕು ಕಾದಿರಿಸಲಾಗಿದೆ.)

ಬಾಸ್ಕರಾಚಾರ್ಯರ ಕುಲದವರು

(ನಾಲ್ಕನೇ ಪುಟದಿಂದ)

'ಹಾಗಾದ್ರೆ ನೋಡು, ಉಣ್ಣೋ ಆಸೆಯಿರೋವರ್ಗೆ ಸರ್ವೀಸ್‌ನ ಯೋಚನೆ ಯಾಕೇಂತ?"

'ತಾವು ಇದು ಏರಿಗೆ ದುಡಿದದ್ದು ವ್ಯರ್ಥವಾಯ್ತು ಅನ್ನಾಂತ ..."

'ಇಲ್ವೆ, ಅವ್ರೇನೂ ಧರ್ಮಕ್ಕೆ ದುಡಿದಿದ್ದಾರಾ?"

"ಇಲ್ಲಾನ್ನಿ, ಆದ್ರೂ ...'

"ಪಾಪ, ನಿನಗೆ ಸಹಾನುಭೂತಿ ಅಲ್ವೆ? ಕೊಟ್ಟಾರು ಏನಾದ್ರೂ...ಏನಂತಾನೆ ನಿನ್ನ ನಿರಂಜನ?"

"ಅವನೇನ್ನೋನು? ಒಗರಲ್ಲಾ ವೈಟೇಜ್ ಕೊಡ್ಲಿಲ್ಲ, ಆ ಮೇಲಿನ ಸರ್ವೀಸನ್ನಾದ್ರೂ ಹಿಡಿದು ವೈಟೇಜ್ ಕೊಟ್ರೆ ಸರ್ವಿಸಿಗೊಂದು ಬೆಲೆಯಾದ್ರೂ ಬರುತ್ತೆ ಅಂತಾನೆ...'

'ಅವ ಹೇಳೋದೂ ಅನ್ಯಾಯವಲ್ಲ ನೋಡು."

"ಅಂದ್ರೇ ನೀವೂ ನನ್ನ ಕಡೆಗಿದ್ದೀರೀಂತಾಯ್ತು...."

'ಇಲ್ಲ ಕಣೇ, ಇಲ್ಲ..."

"ಮತ್ತೆ?"

'ನನ್ನ ಕೈಯಲ್ಲಿ ಅಧಿಕಾರವಿರುತ್ತಿದ್ರೆ ಕ್ರಾಂತಿಕಾರಿ ಬದಲಾವಣೆ ಮಾಡ್ತಿದ್ದೆ...."

"ಏನದೂಂತ ತುಸ ಕೇಳಲೆ?"

'ಓಹೋ, ಕೇಳೋದಕ್ಕೇನಡ್ಡಿ"

'ಹೇಳಿ ಹಾಗಾದ್ರೆ ..."

"ನೋಡು, ಹೊಸತಾಗಿ ಕೆಲ್ಸಕ್ಕೆ ಸೇರಿದವನಿಗೆ ಮಾಕ್ಸಿಮಂನಲ್ಲಿ ಫಿಕ್ಸ್ ಮಾಡೋದು..."

"ಹ್ಞಾಂ....'

'ಸರ್ವೀಸಾದ ಹಾಗೆಲ್ಲಾ ಒಂದೊಂದೇ ಡಿಕ್ರಿಮೆಂಟ್ ಮಾಡ್ತಾ ಬರೋದು...."

"ಇದು ವಿಲಕ್ಷಣ...ಅಲ್ಲಾ ಯಾಕೇಂತ?"

"ಯಾಕೇಂದ್ರೆ..ಹೊಸತಾಗಿ ಉದ್ಯೋಗಕ್ಕೆ ಬರುವವನಲ್ಲಿ ಉತ್ಸಾಹವಿರುತ್ತೆ, ಹೆದರಿಕೆಯಿರುತ್ತೆ, ಕೆಲ್ಸ ಸರಿಯಾಗೇ ಮಾಡ್ತಾನೆ. ಸರ್ವಿಸು ಆದಂತೆಲ್ಲಾ ಅವಿಧೇಯತೆ ಸೋಮಾರಿತನ, ಉದಾಸೀನತೆ, ಅಲಕ್ಷ್ಯತೆ—ಎಲ್ಲವೂ ಹೆಚ್ಚಾಗುತ್ತೆ, ಕೆಲ್ಸ ಸರಿಯಾಗಿ ನಡೆಯೋದಿಲ್ಲ. ಮನೆತಾಪತ್ರಯಗಳಿಂದ ಆಫೀಸಿನ ಕೆಲ್ಸ ತಾಪವೇ ಆಗುತ್ತೆ..."

"ಅಂತೂ ನೀವ ಪ್ರೆ ವಕೀಲ್ರು ಹಾದು....ಹೆಂಡ್ತಿ ಮಕ್ಳನ್ನ ಸಾಕೋಕೆ ಸರ್ಕಾರ ಸಂಬ್ಳ ಕೊಡೋದಲ್ಲ. ತನ್ನ ಕೆಲ್ಸ ಮಾಡಿದ್ದಕ್ಕೆಂದು ವಾದಿಸಿದ್ರಿ ಅಂದು... ನೋಡ್ರಿ, ನಿಮ್ಮ ಈ ಸಲಹೆಯನ್ನ ಸರ್ಕಾರದ ಮುಂದಿಡಿ...."

"ಅದನ್ನೇ ಆಲೋಚನೆ ಮಾಡ್ತಾ ಇದ್ದೀನಿ. ಅಪ್ರೆ ಅವಕಾಶ ಸರಿಯಾಗಿ ದೊರೆಯೋಲ್ಲ...."

"ಅಲ್ರಿ, ಸರ್ವೀಸಾದಂತೆ ಅನುಭವ ಹೆಚ್ಚುತ್ತೆ, ಕೆಲಸ ಸಮರ್ಪಕವಾಗುತ್ತೆ ಅಂತಾರಲ್ಲ...."

"ಸರ್ವೀಸು ಹೆಚ್ಚಾದಂತೆ ಕಡಿಮೆ ಸಮಯದಲ್ಲಿ ಹೆಚ್ಚು ಕೆಲ್ಸ ಮಾಡೋದು ನಿಜ. ಆದ್ರೆ, ಅತನಿಗೆ ಕೆಲ್ಸ ಮಾಡೋಕೇ ಬಿಡುವು ಇಲ್ಲವಲ್ಲಾ....ಅದ್ಕೇ ನೋಡು, ನನ್ನ ಸಲಹೆ ಬಾರದೇನೇ ನಮ್ಮ ಸರ್ಕಾರ ಆ ಕೆಲ್ಸವನ್ನೇ ಮಾಡ್ತಾ ಇದೆ ಒಂದು ರೀತಿಯಲ್ಲಿ...."

"ಹ್ಞಾ..ಸರ್ವೀಸಿಗೆ ಬೆಲೆಯಿಲ್ಲಾಂತ..'

"ಅದೇ ನಾನೂ ಅನ್ನೋದು. ನನ್ನದು ಬೆಲೆಯಿಲ್ಲ ಮಾತ್ರವಲ್ಲ, ಬೆಲೆ ಕಡಿಮೆ ಮಾಡ್ತಾ ಬರ ಬೇಕೂಂತನ್ನೋ ಇದೆ...."

"ಅದ್ಕೇ ನೋಡಿ ನಿಮ್ಮನ್ನ ಅಧಿಕಾರಕ್ಕೆ ಏರ್ಸಿಲ್ಲ."

'ಹೌದು. ಇದೇನೂ ನನ್ನ ಹೊಸ ಸೂತ್ರವಲ್ಲ..."

'ಮತ್ತೆ?"

'ಭಾಸ್ಕರಾಚಾರ್ಯನದ್ದು.... ಅವನೊಬ್ಬ ಮಹಾಗಣಿತಜ್ಞ...."

'ಹ್ಞಾಂ....ಏನಂತಾನೆ ಅಂವ?"

"೧೪ ವರ್ಷದ ಹುಡುಗಿಗೆ ೨೦ ಸಾವಿರ ವಧು ದಕ್ಷಿಣೆಯಾದರೆ ೨೫ ವರ್ಷದವಳಿಗೆ ಬರೀ ಒಂದು ಸಾವಿರವಾಗುತ್ತೆ ಅವನ ಲೆಕ್ಕಾಚಾರ ಪ್ರಕಾರ...."

'ಸಾಕು ಬಿಡೀಂದ್ರೆ....ಕುರುವಾಯ್ತು ಅಧಿಕ ಪ್ರಸಂಗ.. ನಿನ್ನೇನೋ ನಿದ್ದೆಯಿಲ್ಲ. ನಾದುನೆ ಗಾಜಿಯಲ್ಲಿ ಬನ್ನಿ ಮತ್ತೆ....'

"ನಿನ್ನ ಬಾಯಿ ಮುಚ್ಚಿಸೋಕೆ ಅಧಿಕ ಪ್ರಸಂಗವೇ ಬೇಕು ಕಣೇ....'

"ಅಬ್ಬಾ, ನೀವೇ .."

"ಹ್ಞಾಂ....ನಾನೇ...'

—**ಗೋರಾ.**

ನಿಧನ

ಪ್ರಸಿದ್ಧ ಬಂಟರ ಯಾನೆ ನಾಡವರ ಸಮಾಜದ ಶ್ರೀ ಅಲ್ತಾರು ಪಡುಮನೆ ದುಗ್ಗಪ್ಪ ಶೆಟ್ಟರು ತಮ್ಮ 70ನೇ ವಯಸ್ಸಿನಲ್ಲಿ ತಾ. 6-9-65ರಂದು ಅಲ್ತಾರಿನಲ್ಲಿ ದಿವಂಗತರಾದರೆನ್ನಲು ವಿಷಾದಿಸುತ್ತೇವೆ. ದಿವಂಗತರು ಬಹಳ ಶಿಸ್ತು ನಿಯಮದವರೂ ಬಡಬಗ್ಗರಿಗೆ ಮಹದುಪಕಾರಿಗಳೂ ಆಗಿದ್ದು ಜನಾನುರಾಗ ಗಳಿಸಿದ್ದರು. ಇವರಿಗೆ ಇಬ್ಬರು ಗಂಡು ಮಕ್ಕಳೂ (ಒಬ್ಬರು ಕುಂದಾಪುರದ ತರುಣ ಕಂಟ್ರಾಕ್ಟರ್ ಶ್ರೀ ಶಂಕರ ಶೆಟ್ಟಿ ಹಾರ್ದಳ್ಳಿ ಇವರು) ಇಬ್ಬರು ಹೆಣ್ಣು ಮಕ್ಕಳೂ ಇರುವರು.

ಜನತಾ ಉವಾಚ

ರೈತರನ್ನು ಬದುಕಲು ಬಿಡಿ

ರಾಜ್ಯದ ಭೂಕಂದಾಯ ಪುನರ್ವಿಮರ್ಶೆಯ ಕುರಿತಾದ ನಿರ್ಣಯವನ್ನು ಈ ಬಾರಿಯ ವಿಧಾನ ಸಭಾ ಅಧಿವೇಶನದಲ್ಲಿ ಕಂದಾಯ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಮಂಡಿಸಿದ್ದಾರೆ. ಭೂಕಂದಾಯವನ್ನು ಏರಿಸುವ ನಿರ್ಣಯವನ್ನು ಸರಕಾರ ಏಕಾಏಕಿ ಮಾಡಿರುವುದು, ತೀರಾ ಅವಸರದ ಕಾರ್ಯವಾಗಿ ಪರಿಣಮಿಸಿದೆ. ಈಗಾಗಲೇ ಸಾಲದ ರೂಪದಲ್ಲಿ ನರಳುತ್ತಿರುವ ರೈತನ ಮೇಲೆ ಇನ್ನಷ್ಟು ಭೂಕಂದಾಯ ಹೊರಿಸುವುದೆಂದರೆ ಇದು ಅವನ ಜೀವನವನ್ನೇ ಇನ್ನಷ್ಟು ದುರ್ಭರಗೊಳಿಸಿದಂತೆ.

ಸರಕಾರ ಈ ರೀತಿಯ ತಿದ್ದುಪಡಿ ಮಾಡುವಾಗ ಈ ಕುರಿತು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಸಾಕಷ್ಟು ಪ್ರಚಾರವನ್ನು ಕೊಡಲಿಲ್ಲ. ಈ ಕಾಯಿದೆಯೊಂದು ಜಾರಿಗೆ ಬರುವುದೆಂಬುದರ ಸುಳಿವು ಕೂಡಾ ರೈತವರ್ಗಕ್ಕೆ ಹತ್ತಲಿಲ್ಲ. ಇದರಿಂದಾಗಬಹುದಾದ ಪರಿಣಾಮದ ಕಲ್ಪನೆಯೂ ಅವರಿಗೆ ಇದ್ದಂತಿಲ್ಲ. ಆದರೆ, ಇತ್ತೀಚೆಗೆ ಈ ಮಸೂದೆಯು ಮಂಡನೆಯಾದಾಗಲೇ ರೈತವರ್ಗ ನಿದ್ದೆಯಿಂದ ಎಚ್ಚೆತ್ತಂತೆ ಕಾಣುತ್ತದೆ!

ಆದರೂ ಹಲವು ಕಡೆ ರೈತರು, ಜನತಾ ಮುಂದಾಳುಗಳು ಈ ಕುರಿತು ತಮ್ಮ ಅಭಿಪ್ರಾಯವನ್ನು ಸರಕಾರದ ಮುಂದೆ ಇಟ್ಟಿರುತ್ತಾರೆ. ಈ ಕಾಯಿದೆಯಿಂದ ರೈತವರ್ಗಕ್ಕೆ ಹಾನಿಯಾಗುವುದೆಂದೂ, ಕೃಷಿಯ ಉತ್ಪಾದನೆ ತಗ್ಗಿ, ಬಡ ಕೃಷಿಕರ ಬಾಳು ಗೋಳಾಗಬಹುದೆಂದೂ ತಿಳಿಸಿವೆ. ಆದರೆ, ಸರಕಾರ ಈ ಕುರಿತು ಮೌನವೃತ ತಾಳಿ, ಆಕ್ಷೇಪಣೆಗಳನ್ನು ಬದಿಗೆ ತಳ್ಳಿದೆ. ಇದು ಪ್ರಜಾಸತ್ತೆಗೆ ಭೂಷಣವೆನಿಸುವುದೆ?

ಮಂತ್ರಿಗಳು ಹೆಚ್ಚಿದ ಕಂದಾಯದ ವಿನಿಯೋಗದ ಕುರಿತು ಬಹು ಸುಂದರವಾದ ಚಿತ್ರವನ್ನು ನೋಡುತ್ತಿದ್ದಾರೆ. ರೈತನು ಹೆಚ್ಚು ಭೂಕಂದಾಯ ಕೊಡಬೇಕಾಗಿ ಬಂದರೂ, ಒಟ್ಟಿನಲ್ಲಿ ಈ ಹಣದ ವಿನಿಯೋಗವು ರೈತನ ಹಿತಕ್ಕಾಗಿಯೇ ಆಗುವುದೆಂಬ ಭರವಸೆಯನ್ನು ಅವರು ಇತ್ತಿದ್ದಾರೆ. ಈ ಭರವಸೆಯಲ್ಲಿ ಹುರುಳಿಲ್ಲವೆಂದೇನೂ ಯಾರೂ ಹೇಳುವದಿಲ್ಲ. ಆದರೆ ಈ ವರೆಗೆ ಸರಕಾರ ನಮ್ಮ ರೈತರನ್ನು ಉದ್ಧಾರ ಮಾಡಿದ ರೀತಿ ಕಂಡರೆ, ಇಂದಿನ ಹೊಸ ಭರವಸೆಯೂ ಹಿಂದಿನಂತೆಯೇ ಬಾಯಿ ಮಾತಾಗಿ ಮಾತ್ರ ಉಳಿಯುವುದೇನೋ ಎಂಬ ಸಂಶಯ ಮೂಡುತ್ತದೆ.

ಸರಕಾರ ಪಂಚವಾರ್ಷಿಕ ಯೋಜನೆಗಳ ಮೂಲಕ ಕೃಷಿಗಾಗಿ ಲಕ್ಷಗಟ್ಟಲೆ ಹಣ ವ್ಯಯಿಸಿತು ಆದರೆ ಇದರಿಂದ ನಮ್ಮ ರೈತರ ಸ್ಥಿತಿ ಸುಧಾರಿಸಿದೆಯೆ? ಸಹಕಾರಿ ಸಂಘಗಳು, ಕೃಷಿ ಇಲಾಖೆ, ಪಂಪುಸೆಟ್ಟುಗಳ ಸರಬರಾಯಿ, ನೀರಾವರಿ ಯೋಜನೆ, ಆಧುನಿಕ ಕೃಷಿ ಪ್ರಚಾರವೆಂದು ಸರಕಾರ ವ್ಯಯಿಸಿದ ಹಣದ ಉಪಯೋಗವನ್ನು ಪಡೆದವರು ರೈತರೆಂದು ಹೇಳಿಸಿಕೊಂಡ ಜಮೀನ್ದಾರರು ಮಾತ್ರ! ನಮ್ಮ ಬಡ ಬೋರೇ ಗೌಡನ ಸ್ಥಿತಿ ಹಿಂದಿಗಿಂತಲೂ ನಿಕೃಷ್ಟವಾಗಿದೆ. ಯೋಜನೆಗಳ ಕುರಿತಾದ ಸಾಕ್ಷಿ ಚಿತ್ರ ಅವನು ಕಂಡನ್ದೇ ಹೊರತು, ಅವುಗಳ ಫಲ ಅತನ ಕೈಗೆಟುಕಲಿಲ್ಲ ಎಂಬುದು ಸತ್ಯ.

ಆಹಾರದ ಅಭಾವ ತಲೆ ಎತ್ತಿರುವ ಇಂದಿನ ದಿನಗಳಲ್ಲಿ ಕೃಷಿಗೆ, ಕೃಷಿಕರಿಗೆ ಪ್ರೋತ್ಸಾಹ ಕೊಟ್ಟು, ಅವರು ಹೆಚ್ಚು ಉತ್ಪಾದಿಸುವಂತೆ ಮಾಡುವುದು ಸರಕಾರದ ಕರ್ತವ್ಯ. ಬದಲು ಈ ರೀತಿ ಕಂದಾಯ ಏರಿಸುವುದೆಂದರೆ ಇದಕ್ಕೆ ಏನೆನ್ನಬೇಕೋ ತಿಳಿದಿಲ್ಲ. ಇದು ತೀರಾ ಅಭಾಸಕರವಾಗಿ ಕಾಣುವುದಿಲ್ಲವೆ?

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದೆಂದರೆ, ಸರಕಾರದ ಯಾವುದೇ ಯೋಜನೆಯಿಂದ ಇಲ್ಲಿಯ ರೈತರು ಪ್ರಯೋಜನ ಹೊಂದಿಲ್ಲವೆಂದೇ ಹೇಳಬೇಕು. ನಮ್ಮ ಸಾಗುವಳಿ ಭೂಮಿಯೆಲ್ಲ ಮುಂಗಾರು ಮಳೆಯನ್ನೇ ಹೊಂದಿಕೊಂಡಿದೆ. ಸರಕಾರದ ನೀರಾವರಿ ಯೋಜನೆಗಳು ನಮ್ಮಲ್ಲಿ ಆಗಲೂ ಇಲ್ಲ. ರೈತರು ಇದರಿಂದ ಪ್ರಯೋಜನ ಹೊಂದಲೂ ಇಲ್ಲ. ಆದರೂ, ಇಲ್ಲಿನ ರೈತರು ಹೆಚ್ಚಿನ ತೆರಿಗೆ ಕೊಡಬೇಕೆಂದರೆ, ಇದರಲ್ಲಿ ನ್ಯಾಯವಿದೆಯೆ ?

ಸರಕಾರ ಈ ಕುರಿತು ಅವಸರದ ನಿರ್ಣಯ ಕೈಕೊಳ್ಳುವುದು ನ್ಯಾಯವಲ್ಲ. ರೈತ ವರ್ಗದ, ಜನತಾ ಪ್ರತಿನಿಧಿಗಳ ಅಭಿಪ್ರಾಯವನ್ನು ತಿಳಿದು, ಪರಿಶೀಲನೆ ನಡೆಸಿದ ಬಳಿಕವೇ ಈ ಕುರಿತಾದ ಕಾನೂನ ಜಾರಿಗೆ ತರಬೇಕು. ಭಾರತದ ಬೆಂಗೋಲೆಂದು ನಾವು ಕರೆಯುತ್ತಿರುವ ರೈತನ ಬೆಂಗೋಲನ್ನು ಈ ರೀತಿಯ ಅಧಿಕ ಕಂದಾಯದಿಂದ ಸರಕಾರ ಮುರಿಯುವಂತೆ ಮಾಡಬಾರದು. ಇದರ ಪರಿಣಾಮ ಭೀಕರವಾದೀತು! ಈ ಕುರಿತು ವಿವೇಕದಿಂದ ಸರಕಾರ ವರ್ತಿಸಲಿ ಎಂದು ಕೇಳಿಕೊಳ್ಳುತ್ತೇನೆ.

— ಓರ್ವ ಕೃಷಿಕ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

R.E.P. No. 527/1964.
in O.S No. 69/63
of Karkal Munsif Court,

ಕಮಲ ಶೆಡ್ತಿ — ಅರ್ಜಿದಾರಳು

ಮತ್ತು

ದೇಜು N. ಕೊರಗರ್– ನಾಯಿ ಪೂಜಾರಿ ಮಗ ಉಡ್ಪಿ ತಾಲೂಕು ಹಜ್ಮಾಡಿ ಗ್ರಾಮದ ಉಮ್ಮಪ್ಪ ತೋಟದಲ್ಲಿ ಇರುವವ — ಎದುರು

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರಳು ಮೇಲ್ಕಂಡ ಅಸಲ್ದಾವೆಗೆ ಕಾರಣವಾದ ವ್ಯಾಜ್ಯದಲ್ಲಿ ಜಡ್ಜ್‌ಮೆಂಟ್ ಮುಂಚೆ ಜಪ್ತಿ ಮಾಡಿಸಿದ ಸ್ಥಿರಾಸ್ತಿ ಏಲಂನ ಕುರಿತು ಅರ್ಜಿದಾರಳು ದಾಖಲು ಮಾಡಿರುವ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ಸದ್ರಿ ಅಮಲ್ದಾರಿಯು ಎದ್ರಿ ಆಪ್ಯೆರು ಇಸ್ತಿಯಾರು ನೋಟಿಸಿನ ಬಗ್ಗೆ ತಾ. 9-4-65ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪಿ ಬಗ್ಗೆ ಇಡಲಾಗಿಯದೆ ಎಂಬ ಸಂಗ್ತಿ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸಲಾಗಿದೆ.

B. ANANDA SHETTY,
Advocate for Petitioner.

Udipi, Dated 15-3-1965

ಎಲ್ಲೆಲ್ಲಿ ಏನೇನು?

ಸತ್ಕಾರ ಸಮಾರಂಭ

ಎಲ್. ಐ. ಸಿ.ಯ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಯವರ ಪುತ್ರಿ ಕುಮಾರಿ ಇವರ ವಿವಾಹ ಸಮಾರಂಭವು ದಿ| ಶ್ರೀ ಕೆ. ಅನಂತ ಕಾಮತ್‌ರ ಪುತ್ರ ಡಾ| ಗೋಪಾಲಕೃಷ್ಣ ಕಾಮತ ಇವರೊಂದಿಗೆ ತಾ. 10ರಂದು ಉಡುಪಿ ವರದೇಂದ್ರ ಕಲಾಮಂದಿರದಲ್ಲಿ ಜರಗಿದ ಪ್ರಯುಕ್ತ ಮರುದಿನ ಸಂಜೆ ಉಪೇಂದ್ರ ಭಾಗದ ಕಲ್ಪನಾದಲ್ಲಿ ಸತ್ಕಾರ ಸಮಾರಂಭವೊಂದು ಜರಗಿತು. ಇದಕ್ಕೆ ಅನೇಕ ಮಹನೀಯರನೇಕರು ಆಗಮಿಸಿದ್ದರು.

ಹಿಂದಿ ಪಂಡಿತ್ ಶ್ರೀ ಕೆ. ಆರ್. ಕೃಷ್ಣರಾಜ ಭಟ್ಟರ ಪುತ್ರಿ ಸೌ| ಗಿರಿಜಾ ಇವರ ವಿವಾಹವು ಶ್ರೀ ಕೆ. ಗೋಪಾಲ ಭಟ್ಟರ ಪುತ್ರ ಶ್ರೀ ಕೆ. ಶ್ರೀಶ ಭಟ್ಟರೊಂದಿಗೆ ತಾ. 11ರಂದು ಬೆಳಗ್ಗೆ ಕಿನ್ನಿಮೂಲ್ಕಿಯ ವಧೂಗೃಹದಲ್ಲಿ ನೆರವೇರಿದ ಪ್ರಯುಕ್ತ ಸಂಜೆ ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಬಂಟರ ಯಾನೆ ನಾಡವರ ಸಂಘ

ಮುಂಬಯಿ–ಮೇಲಿನ ಸಂಘದವರು ತಾ. 26-2-65ರಂದು ತಮ್ಮ ನಿಯೋಜಿತ ಶಾಲಾ ಕಟ್ಟಡದ ಸಹಾಯಾರ್ಥವಾಗಿ ಮುಂಬಯಿಯ ಕಿಂಗ್ಸ್ ಸರ್ಕಲ್‌ನಲ್ಲಿರುವ ಷಣ್ಮುಖಾನಂದ ಸಭಾಭವನದಲ್ಲಿ ಸುಪ್ರಸಿದ್ಧ ಛಲಚಿತ್ರ ನಾಟ್ಯಗಾರ ಗೋಪಿಕೃಷ್ಣ ಮತ್ತು ಬಳಗದವರಿಂದ ಸಂಗೀತ, ನೃತ್ಯ-ನಾಟಕ ಮತ್ತು ನಾಟ್ಯ ಪ್ರದರ್ಶನವನ್ನು ಏರ್ಪಡಿಸಿದರು. ಅಂದಿನ ಅಧ್ಯಕ್ಷ ಸ್ಥಾನವನ್ನು ಉತ್ತರ ಪ್ರದೇಶದ ಮಾಜಿ ರಾಜ್ಯಪಾಲ ಸರ್ ಹೋಮಿ ಮೋದಿಯವರು ಅಲಂಕರಿಸಿದ್ದರು. ಮಹಾರಾಷ್ಟ್ರದ ರಾಜ್ಯಪಾಲ ಡಾ| ಪಿ. ವಿ. ಚೆರಿಯನ್ ಅಂದಿನ ಮುಖ್ಯ ಅತಿಥಿಗಳಾಗಿದ್ದರು. ಸಂಘದ ಅಧ್ಯಕ್ಷ ಡಾ| ಯಚ್. ಬಾಲಕೃಷ್ಣ ಶೆಟ್ರು ಅಧ್ಯಕ್ಷರನ್ನೂ, ಅತಿಥಿಗಳನ್ನೂ, ನೆರೆದ ಸಭಿಕರನ್ನೂ ಸ್ವಾಗತಿಸಿ ಭಾಷಣ ಮಾಡಿದರು. ಮಹಾರಾಷ್ಟ್ರದ ರಾಜ್ಯಪಾಲ ಡಾ| ಪಿ. ವಿ. ಚೆರಿಯನವರು ಬಂಟರ ಯಾನೆ ನಾಡವರ ಕಾರ್ಯಕಲಾಪಗಳನ್ನು ಕೊಂಡಾಡಿ ಮಾತಾಡಿದರು. ಅಧ್ಯಕ್ಷ ಸರ್ ಮೋದಿಯವರು ಸಮಯೋಚಿತ ಭಾಷಣ ಮಾಡಿದರು. ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಶ್ರೀ ಯಸ್. ಗೋಪಾಲ ಶೆಟ್ರು ಧನ್ಯವಾದವನ್ನು ಅರ್ಪಿಸಿದರು. ನೃತ್ಯಕೇಸರಿ ಗೋಪಿಕೃಷ್ಣ ಮತ್ತು ಬಳಗದವರು ತಮ್ಮ ನೃತ್ಯಗಳಿಂದ ಸಭಿಕರನ್ನು ಸಂತೋಷಗೊಳಿಸಿದರು. ಕುಮಾರಿ ಅಲ್ಕಾ ಶೆಟ್ಟಿಯವರ ನೃತ್ಯವು ತುಂಬಾ ಮನೋರಂಜನೆಯನ್ನು ಕೊಟ್ಟಿತ್ತು.

ಉಡುಪಿ ರೋಟರಿಯ ಹೊಸ ಪದಾಧಿಕಾರಿಗಳು

ಶ್ರೀ ಕೆ. ಕೆ. ಪೈಯವರು ಉಡುಪಿ ರೋಟರಿ ಕ್ಲಬ್ಬಿನ ೧೯೬೫-೬೬ನೇ ಸಾಲಿನ ಅಧ್ಯಕ್ಷರಾಗಿ ತಾ. 9-3-65ರಂದು ಉಡುಪಿಯಲ್ಲಿ ಸೇರಿದ್ದ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ಆಯ್ಕೆಗೊಂಡ ಹೊಸ ಡೈರೆಕ್ಟರುಗಳ ಸಭೆಯಲ್ಲಿ ಚುನಾಯಿಸಲ್ಪಟ್ಟಿದ್ದಾರೆ. ಶ್ರೀ ಪೈಯವರು ಪ್ರಸ್ತುತ ಕ್ಲಬ್ಬಿನ ಉಪಾಧ್ಯಕ್ಷರೂ, ಸಿಂಡಿಕೇಟ್ ಬೇಂಕ್ ಲಿಮಿಟೆಡ್‌ನ ಮುಖ್ಯಾಧಿಕಾರಿಯೂ ಆಗಿದ್ದಾರೆ. ಅವರು ಹಿಂದೆ ಉಡುಪಿ ಪುರಸಭಾಧ್ಯಕ್ಷರಾಗಿದ್ದರು.

ಡಾ| ಕೆ. ಎಲ್. ನಾಡಿಗ ಮತ್ತು ಡಾ| ಕೆ. ಕೃಷ್ಣಸ್ವಾಮಿಯವರು ಉಪಾಧ್ಯಕ್ಷರುಗಳಾಗಿಯೂ, ಶ್ರೀ ವಿ. ಚಂದ್ರಶೇಖರ್ ಮತ್ತು ಡಾ| ಟಿ. ರಾಮದಾಸ ಪೈಯವರು ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದಾರೆ. ಡಾ| ಎಚ್. ಶಾಂತಾರಾಮರವರು ಖಜಾಂಚಿಯಾಗಿ ಮತ್ತು ಯು. ಎನ್. ಶೆಣೈಯವರು ಸಾರ್ಜಂಟ್-ಎಟ್-ಆರ್ಮ್ಸ್ ಆಗಿ ಚುನಾಯಿತರಾಗಿದ್ದಾರೆ.

ಈಗ ಅಧ್ಯಕ್ಷರಾಗಿರುವ ಡಾ| ಎ. ಕೃಷ್ಣದಾಸ್, ಈಗ ಕಾರ್ಯದರ್ಶಿಯಾಗಿರುವ ಶ್ರೀ ಎನ್. ಎಸ್. ಪ್ರಭು, ಶ್ರೀ ಪಿ. ವಿ. ಭಟ್ ಮತ್ತು ಪ್ರೊ| ಕು. ಶಿ. ಹರಿದಾಸ ಭಟ್ಟರವರು ನಾಲ್ಕು ಸೇವಾ ವಿಭಾಗಗಳ ನಿರ್ದೇಶಕರಾಗಿ ಆಯ್ಕೆ ಮಾಡಲ್ಪಟ್ಟಿದ್ದಾರೆ. ಡಾ| ರಾಮದಾಸ ಪೈ ಮತ್ತು ಶ್ರೀ ಯು. ಎಸ್. ಶೆಣೈಯವರ ವಿನಃ ಉಳಿದವರು ಹೊಸ ನಿರ್ದೇಶಕರ ಮಂಡಳಿಯಲ್ಲಿದ್ದಾರೆ. ಈ ಹೊಸ ಪದಾಧಿಕಾರಿಗಳು ಜುಲೈ ತಿಂಗಳಿನ ಪ್ರಥಮ ವಾರದಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಪದ್ಮಶ್ರೀ ಡಾ| ಪೈಯವರಿಗೆ ಸನ್ಮಾನ

ಪದ್ಮಶ್ರೀ ಡಾ| ಟಿ. ಮಾಧವ ಅನಂತ ಪೈ ಅವರಿಗೆ, ಪೆರ್ಡೂರಿನ ನಾಗರಿಕರು ತಾ. 8 ರಂದು ಸನ್ಮಾನ ಪತ್ರವಿತ್ತು ಸತ್ಕರಿಸಿದರು. ಗ್ರಾಮಪಂಚಾಯತ್ ಆಫೀಸಿನಲ್ಲಿ ಪಂಚಾಯತ್ ಅಧ್ಯಕ್ಷ ಶ್ರೀ ಬಿ. ಭುಜಂಗ ಹೆಗ್ಡೆ ಮೊದಲಾದವರು ಸ್ವಾಗತಿಸಿದರು. ಶ್ರೀ ಅನಂತ ಪದ್ಮನಾಭ ದೇವಾಲಯದಲ್ಲಿ ಪ್ರಸಾದವನ್ನು ಸ್ವೀಕರಿಸಿದ ಬಳಿಕ ಪೆರ್ಡೂರು ಹೈಸ್ಕೂಲಿನ ಸಭಾ ಮಂದಿರದಲ್ಲಿ ನೆರೆದ ಸಭೆಯಲ್ಲಿ ವಿವಿಧ ಸಂಘ ಸಂಸ್ಥೆಗಳ ಪರವಾಗಿ ಮುಖ್ಯ ಅತಿಥಿಗಳಿಗೆ ಹಾರಾರ್ಪಣೆ ಮಾಡಲಾಯಿತು. ಶ್ರೀ ಅಲಂಗಾರು ನಾರಾಯಣ ಹೆಗ್ಡೆಯವರು ಅತಿಥಿಗಳನ್ನು ಸ್ವಾಗತಿಸಿದರು. ಡಾ| ಎಂ. ಆರ್. ಹೆಗ್ಡೆಯವರು ಡಾ| ಪೈಯವರಿಗೆ ಮಾನಪತ್ರವನ್ನು ಓದಿ ಅರ್ಪಿಸಿದರು. ಅದರಲ್ಲಿ ಡಾ| ಪೈಯವರ ಸರ್ವತೋಮುಖ ಸೇವೆಯನ್ನು ಪ್ರಶಂಸಿಸಲಾಗಿತ್ತು. ಡಾ| ಪೈಯವರು ಉತ್ತರಿಸುತ್ತ, ತನಗೆ ದೊರೆತ ಸನ್ಮಾನವು ಎಕಾಡೆಮಿಯ ಹಲವಾರು ವಿದ್ಯಾ ಸಂಸ್ಥೆಗಳಿಗೆ ಲಭಿಸಿದ ಅಧಿಕೃತ ಪ್ರಶಸ್ತಿಯೆಂದು ತಿಳಿಸಿ ಗ್ರಾಮೀಣ ಜನತೆಯು ಉನ್ನತವಾಗುವುದರಿಂದಲೇ ಭಾರತದ ಉದ್ಧಾರ ಸಾಧ್ಯವೆಂದೂ ಈ ದಿಸೆಯಲ್ಲಿಯೇ ಎಕಾಡೆಮಿಯು ಮುಂದುವರಿಯುತ್ತಿದೆಯೆಂದೂ ನಾಗರಿಕರ ನೆರವಿನಿಂದಲೇ ಅದು ಬೆಳೆದು ಬಂದುದೆಂದೂ ನುಡಿದರು. ಅಧ್ಯಕ್ಷ ಸ್ಥಾನದಿಂದ ಶ್ರೀ ಆರೂರು ನಾಥನಾದಿ ಡಾ| ಪೈಯವರ ಕಾರ್ಯದಕ್ಷತೆಯನ್ನೂ ತನ್ನ-ಅವರ ಒಡನಾಟದ ಕೆಲವು ಅನುಭವಗಳನ್ನೂ ಉಲ್ಲೇಖಿಸಿದರು. ಕೊನೆಯಲ್ಲಿ ಶ್ರೀ ಎ. ಜಿ. ಕಲ್ಯಾಣಿಯವರು ಧನ್ಯವಾದ ವಹಿಸಿದರು.

ಆ ದಿನ ಮಧ್ಯಾಹ್ನ ಶ್ರೀ ಅಲಂಗಾರು ನಾರಾಯಣ ಹೆಗ್ಡೆಯವರು ಮುಖ್ಯ ಅತಿಥಿಗಳ ಗೌರವಾರ್ಥವಾಗಿ ಭೋಜನ ಕೂಟವನ್ನೇರ್ಪಡಿಸಿದ್ದರು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ, ಮೈಸೂರು

ಹೊಸ ಕಾರ್ಯಕಾರೀ ಸಮಿತಿಯ ಸಭೆಯು ತಾ. 12ರಂದು ಶ್ರೀ ಕೆ. ದೇಜು ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ ಕೆ. ದೇಜು ಶೆಟ್ಟಿ, ಅಧ್ಯಕ್ಷರು, ಶ್ರೀ ಎ. ಸಿ. ಶ್ರೀಕಂಠಯ್ಯ, ಉಪಾಧ್ಯಕ್ಷರು, ಶ್ರೀ ಎ. ರಾಮಣ್ಣ, ಕಾರ್ಯದರ್ಶಿಗಳು ಮತ್ತು ಶ್ರೀ ಎಸ್ ಬೈರಪ್ಪ ಕೋಶಾಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 405/1964.

ಶೇಕ್ ಮಹಮ್ಮದ್ ಇಬ್ರಾಹಿಂ ಸಾಹೇಬ್. — ವಾದಿ

ಮತ್ತು

ನೇಬರ್ಟ್ ಲಸ್ರಾದೋ, ರಂಜಾರಿ ಲಸ್ರಾದರ ಮಗ ಪಡು ತೋನ್ಸೆ ಗ್ರಾಮದ ಕೆಮ್ಮಣ್ಣು — ಪ್ರತಿವಾದಿ

ಇವರೊಳಗೆ

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ: —

ವಾದಿಗೆ ಪ್ರತಿವಾದಿಯು ತಾ. 26-9-1963 ರಲ್ಲು ಗಿರವು 4000ಕ್ಕೆ ಬರೆಕೊಟ್ಟ ಸ್ಥಿರಾಸ್ತಿ ಈಡು ದಸ್ತಾವೇಜು ಮೇರೆಗೆ ಬರತಕ್ಕ ಅಸಲು ಬಡ್ಡಿ ಅಪ್ರವೇಜು ವಗೈರೆ ಕೇಳಿ ವಾದಿಯು ಮಾಡಿದ ಮೇಲಿನ ದಾವೆಯು ಪ್ರತಿವಾದಿಯು ಆಪ್ಯೆರು ನೋಟಿಸಿನ ಬಗ್ಗೆ ತಾ. 29-3-65ರಲ್ಲು ಮೇಲಿನ ಕೋರ್ಟಿನಲ್ಲಿ ತಪ್ಪಿ ಬಗ್ಗೆ ಇಡಲಾಗಿದೆ ಎಂಬ ಸಂಗ್ತಿ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸಲಾಗಿಯದೆ.

B Ananda Shetty,
Advocate for Plaintiff.

ಉಡುಪಿ,

Dated 15-3-65.

ತೀರದ ಸಾಲ

(ಹನ್ನೆರಡನೇ ಪುಟದಿಂದ)

ಹಿಂದೊಮ್ಮೆ ಗಿರಿಯಪ್ಪ ಶೆಟ್ಟರಲ್ಲಿಗೆ ಸಾಲ ಕೇಳಲು ಹೋದಾಗ ಅವರು ಆತನ ಆಸ್ತಿಯನ್ನೇ ಅಡವು ಕೇಳಿದ್ದರು. ಅದು ಸಾಧ್ಯವಿಲ್ಲವೆಂದು ಸಾಹುಕಾರರಿಂದ ಸಾಲ ಪಡೆದಿದ್ದ. ಆದರೆ ಇಂದು ಅವರ ಹೊರತು ಮತ್ತಾರು ತೋರಲಿಲ್ಲ.

ಮನೆಯತ್ತ ಮರಳದೆ ನೇರವಾಗಿ ಗಿರಿಯಪ್ಪ ಸೆಟ್ಟರಲ್ಲಿಗೆ ಹೋದ. ಆಗ ತಾನೆ ಊಟ ತೀರಿಸಿ ಸೆಟ್ಟರು ಚಾವಡಿಯಲ್ಲಿ ಕುಳಿತಿದ್ದರು.

'ಗೌಡರೇ ಏನು ಬರೋಣವಾಯ್ತು' ವ್ಯಂಗ್ಯಪೂರಿತ ದನಿಯಿಂದಲೇ ಕೇಳಿದರು ಸೆಟ್ಟರು.

"ಸೆಟ್ಟರೇ! ಇಂದು ನನ್ನ ಮರ್ಯಾದೆಯನ್ನು ಉಳಿಸಬೇಕು." ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡ.

"ಎಳಿ! ಏನಾಯ್ತು? ಏನಾಗಬೇಕಿತ್ತು?"

"ನೀವು ನಡೆಸಿ ಕೊಡುತ್ತೇನೆಂದು ವಚನ ಕೊಟ್ಟರೇನೇ ಹೇಳುತ್ತೇನೆ."

"ಸಾಧ್ಯವಾದಲ್ಲಿ ನಡೆಸಿಕೊಡುತ್ತೇನೆ. ಹೇಳಿ!"

"ಸಾಲಬೇಕಿತ್ತು!"

"ಕೊಟ್ಟ ಸಾಲವಿನ್ನೂ ವಸೂಲಿ ಆಗಿಲ್ಲ. ಆಮೇಲೆ ನೋಡೋಣ ಗೌಡರೇ!"

"ಹಾಗೆ ಆಗೋಲ್ಲ ಶೆಟ್ಟರೇ ನನ್ನ ಮನೆ ಆಸ್ತಿ ಎಲ್ಲವನ್ನೂ ಬರಸಿಕೊಂಡು ಹಣ ಕೊಡ್ಡಿ." ಅಂಗಲಾಚಿದ.

"ಅಷ್ಟೊಂದು ಹಣ ಏಕೆ ಗೌಡರೆ?"

ಸಾಹುಕಾರರ ಸಾಲ ತೀರಿಸಬೇಕಿತ್ತು ಮಗಳಿಗೆ ಮದುವೆ ಮಾಡಬೇಕಿತ್ತು.

"ನಾಲ್ಕು ದಿನಕ್ಕೆ ಬಿಟ್ಟು ಬನ್ನಿ ಗೌಡರೇ! ಆಗ ಎಲ್ಲವನ್ನೂ ಆಣಿಮಾಡುವ!"

"ನಾಲ್ಕು ದಿನ ನಾಲ್ಕು ಒಪ್ಪತ್ತು ಕೂಡಾ ಸಾಧ್ಯವಿಲ್ಲ ಸೆಟ್ಟರೇ! ನಾಳೆ ಸಂಜೆಯೊಳಗಾಗಿ ಸಾಹುಕಾರರ ಸಾಲ ಕೊಡಲೇ ಬೇಕಾಗಿದೆ."

ಗೌಡನು ಕಷ್ಟದಲ್ಲಿರುವನೆಂದು ತಿಳಿದು ಚಾಕಸಿಯಿಂದಲೇ ವ್ಯಾಪಾರ ಮಾಡಿದರು ಆತನ ಆಸ್ತಿಯ ಮೇಲೆ ಎಂದೋ ಕಣ್ಣಿಟ್ಟಿದ್ದರು. ಅಂದು ಅದು ಅವರಿಗೆ ಅನಾಯಾಸವಾಗಿಯೇ ದೊರಕಿತ್ತು.

೫

ಮೂರು ದಿನಗಳಿಂದಲೂ ಪತಿ ಮನೆಗೆ ಬಾರದಿರುವುದನ್ನು ನೋಡಿ ಸಂಕಮ್ಮ ಹೌಹಾರಿದಳು. ಯಾರನ್ನು ಕೇಳಲಿ; ಎಲ್ಲಿ ಹುಡುಕಲಿ; ಎಂಬುದೇ ಆಕೆಳಿಗೆ ಗೊತ್ತಾಗಲಿಲ್ಲ. ತಾಯಿ ಮಗಳಿಬ್ಬರೂ ನಿಸ್ಸಹಾಯಕರಾಗಿ ಕಣ್ಣೀರುಗರೆಯುತ್ತಾ ಕುಳಿತಿದ್ದರು. ಆಗ ತಾನೆ ಪೀಠಾಚ ಕಳೆಯಿಂದ ಕೂಡಿದ ದೇಹವನ್ನು ತೂರಾಡುತ್ತಾ ಮನೆಯ ಒಳ ಹೊಕ್ಕನು. ಕುಡಿದು ಬಂದ ಗೌಡನನ್ನು ನೋಡಿ ತಾಯಿ ಮಗಳಿಬ್ಬರೂ ಭಯ ಭೀತರಾದರು. ಪತಿ ಮನೆಗೆ ಬಾರದಿರುವ ಕಾರಣಗಳೊಂದೊಂದಾಗಿ ಆತನ ಮನದಲ್ಲಿ ಮೂಡಲಾರಂಭಿಸಿತ್ತು.

ಗೌಡನು ತೊದಲುತ್ತಾ "ಸಂ.... ಕ.... ಸಂ.... ಕ." ಎಂದು ತೊದಲುತ್ತಾ ಆತಳ ಕಾಲ ಬುಡದಲ್ಲಿ ಬಿದ್ದು ಬಿಟ್ಟನು. ತಾಯಿ ಮಗಳಿಬ್ಬರೂ ಸೇರಿ ಎತ್ತಿ ಹಾಸಿಗೆಯಲ್ಲಿ ಮಲಗಿಸಿದರು.

ಸುಮಾರು ಎರಡು ಗಂಟೆ ಕಳೆದ ಮೇಲೆ ನಿಲ್ಲ ಕಣ್ಣು ಬಿಟ್ಟನು. ಕಣ್ಣುಗಳಿಂದ ನೀರಿಳಿಯಹತ್ತಿತ್ತು.

"ಯಾಕೆ ಕಣ್ಣೀರು? ಏನಾಯ್ತು?" ತನ್ನ ಕಣ್ಣೀರನ್ನು ಒರಸಿ ಕೊಳ್ಳುತ್ತಾ ಕೇಳಿದಳು ಸಂಕಮ್ಮ.

"ನಾನು ಪಾಪಿ! ನನ್ನನ್ನು ಕ್ಷಮಿಸಿರುವೆನೆಂದು ಒಮ್ಮೆ ಹೇಳು ಸಂಕ!" ಅಂಗಲಾಚಿದನು

"ನಿಮಗಿಂದು ಏನಾಗಿದೆ? ಹೀಗೇಕೆ ಮಾತನಾಡುವಿರಿ?" ದುಃಖದಿಂದಲೇ ಕೇಳಿದಳು.

"ನೀನು ಕ್ಷಮಿಸಿರುವೆನೆಂದು ಹೇಳದೆ ನಿನ್ನ ಪಾದಗಳನ್ನು ಬಿಡಲಾರೆ." ಗಟ್ಟಿಯಾಗಿ ಕಾಲುಗಳನ್ನು ಹಿಡಿದುಕೊಂಡನು.

ಪತಿಯ ಮಾತಿನ ಅರ್ಥವಾಗದೆ "ಇದೇನು ಹುಡುಗಾಟ! ಕಾಲು ಬಿಡಿ!" ಬಿಡಿಸಿಕೊಳ್ಳಲು ಪ್ರಯತ್ನಿಸಿದಳು.

"ಇಲ್ಲ! ನೀನು ಈ ಪಾಪಿಯನ್ನ ಕ್ಷಮಿಸದೆ ಕಾಲುಗಳನ್ನು ಬಿಡಲಾರೆ ಸಂಕ!"

"ಕ್ಷಮಿಸಿರುವೆ! ಈಗಾದರೂ ಹೇಳಿರಿ! ನಡೆದದ್ದೇನು?"

"ನಾನು ಕುಡಿದದ್ದು ಇದೇ ಮೊದಲನೆಯ ಬಾರಿ! ನಿನಗೆ ತಕ್ಕ ಪತಿಯಾಗಿ ನಾನು ಬಾಳಿಲ್ಲ. ಗೌರಿಯ ಭವಿಷ್ಯತ್ತಿಗೆ ಮೋಸ ಮಾಡಿದ ಪಾಪಿ ನಾನು. ಮಮತೆಯಿಂದ ಸಾಕಿದ ತಂದೆಯನ್ನೇ ವಿಷ ಉಣಿಸಿ ಕೊಂದ ಪಾಪಿ ನಾನು"

ಕಣ್ಣೀರುಗರೆಯುತ್ತಾ ಎಲ್ಲವನ್ನೂ ಹೇಳತೊಡಗಿದ. ತಾಯಿ ಮಗಳಿಬ್ಬರೂ ಕಣ್ಣೀರು ಹರಿಸುತ್ತಾ ಮೂಕರಂತೆ ಕುಳಿತು ಕೇಳುತ್ತಿದ್ದರು.

"ಕೊನೆಗೆ ಆಸ್ತಿ ಮನೆ ಕೂಡಾ ಮಾರಾಟವಾಯಿತು" ಎಂಬುದನ್ನು ಕೇಳಿ ಸಂಕಮ್ಮ ಚಿಟ್ಟನೆ ಚೀರಿ ಕೆಳಗುರುಳಿದಳು. ಗೌರಿಯೇ ತಾಯಿಯ ನೆರವಿಗೆ ಬರಬೇಕಾಯ್ತು.

ಅಂದು ಯಾರೂ ಊಟ ಮಾಡಿರಲಿಲ್ಲ. ಯಾರಿಗೂ ಊಟ ಬೇಕಿರಲಿಲ್ಲ. ಗೌಡತಿ ಆಗಾಗ ಕಣ್ಣು ತೆರೆದು ನೋಡುತ್ತಾ ಏನನ್ನೋ ಬಾಯಿಂದ ಹೇಳುತ್ತಿದ್ದಳು.

ಗೌಡ ಪತ್ನಿಯ ಹತ್ತಿರ ಕುಳಿತು ಆದೇನನ್ನೋ ಯೋಚಿಸುತ್ತಾ ಕುಳಿತಿದ್ದನು.

ಮನೆಯನ್ನು ಮಾರಿದ್ದರೂ ಕೂಡಾ ಆತನ ಸಾಲ ಸಂಪೂರ್ಣ ತೀರಿರಲಿಲ್ಲ. ಗೌರಿಯ ಮದುವೆಯ ನೆನಪಾಗುತ್ತಲೇ ಪರೀಕ್ಷೆಗೆ ಉತ್ತರಿಸಲಾರದ ಬಾಲಕನಂತಾಗುತಿತ್ತು ಆತನ ಮುಖ.

ಹಗಲು ಕಳೆದು ಕತ್ತಲಾವರಿಸಿದರೂ ಕೂಡಾ ಯಾರೂ ದೀಪ ಹಚ್ಚುವ ಗೋಜಿಗೆ ಹೋಗಿರಲಿಲ್ಲ. ಎಲ್ಲರೂ ಕುಳಿತಲ್ಲಿಯೇ ಮಲಗಿದರು. ಸ್ಮಶಾನ ಮೌನ ಆವರಿಸಿತ್ತು.

ಅಂದು ಗೌರಿಯು ನಿದ್ರಾದೇವಿಯ ಕೈಸೆರೆಗೆ ಸಿಲುಕದೆ, ಯೋಚಿಸುತ್ತಲೇ ಇದ್ದಳು. ತಂದೆ ಮಾಡಿದ ಅತ್ಯಾಚಾರಗಳೊಂದೊಂದ. ಆತಳ ಮನದಲ್ಲಿ ಸುಳಿಯಲಾರಂಭಿಸಿತು. ಹಿಂದೆ ತನ್ನಡೆಂದಿದ್ದ ಮನೆ ಮಾರವೆಲ್ಲಾ ಇಂದು ಪರರ ಪಾಲಾಗಿತ್ತು. ಸಾಲದ ಹೊರೆ ಇದು ತಂದೆಯನ್ನು ಬಲವಾಗಿ ಬಂಧಿಸಿತ್ತು. ತಾಯಿಯ ಅಸಾಯಕತೆಗಾಗಿ ಮಮ್ಮಲ ಮರುಗಿದಳು. ತಾನು ಕೊಲೆಪಾತಕಿಯ ಮಗಳೆಂಬುದನ್ನಂತು ಆಸಹ್ಯಪಟ್ಟಳು. ತನ್ನಿಂದ ಮುಂದೆ ತಂದೆ ತಾಯಿಗಳಿಗೆ ತೊಂದರೆ ಎಂಬುದನ್ನರಿತಳು. ವಯಸ್ಸಿಗೂ ಮಿಕ್ಕಿದ ಯೋಚನೆಯಲ್ಲಿ ತಲ್ಲೀನಳಾಗಿದ್ದಳು.

"ಗೌರಿಯನ್ನು ಹೇಗೆ ಮದುವೆ ಮಾಡಲಿ" ಎಂದು ತಂದೆ ಕಣ್ಣೀರುಗರೆದ ದೃಶ್ಯ ಕಣ್ಮುಂದೆ ಕುಣಿಯುತಿತ್ತು. ಸಾಲವೊಂದು ಹೊರೆಯಾಗಿರುವಾಗ ನಾನು ಮತ್ತೊಂದು ಹೊರೆಯಾಗಿ ಇರಬೇಕೆ? ಎಂದು ಭಾವಿಸಿದಳು. ಹೌದ! ಬದುಕಲೇ ಬಾರದೆಂದೂ ನಿರ್ಧರಿಸಿದಳು. ಸುತ್ತಲೂ ಕಾರ್ಗತ್ತಲು ಕವಿದಿತ್ತು. ಕತ್ತಲೆಯಲ್ಲಿ ಕಳ್ಳ ಹೆಜ್ಜೆಯನ್ನಿಟ್ಟು ಹೊರ ನಡೆದಳು.

೬

ಕಷ್ಟವನ್ನನುಭವಿಸಿ ಗೌಡನ ಮನ ಕಠಿಣವಾಗಿತ್ತು. ಮಗಳು ಹೋದುದನ್ನು ಅರಿತ ಸಂಕಮ್ಮ ಚಾಪೆಯನ್ನು ಬಿಟ್ಟೇಳದಾದಳು. ಕಂಡವರಿಂದ ಸಾಲವನ್ನು ಪಡೆದು ಪತ್ನಿಗೆ ಔಷಧವನ್ನು ತರುತ್ತಿದ್ದ. ದಿನಕ್ಕೊಂದು ಗಂಜಿಯನ್ನು ತಾನೇ ಬೇಯಿಸಿ ಹಾಕುತ್ತಿದ್ದ.

ಡಾಕ್ಟರರು ಮುಂದೆ ಬಿಟ್ಟಿಯಾಗಿ ಔಷಧವನ್ನು ಕೊಡುವಂತಿರಲಿಲ್ಲ.

"ತೀರದ ಸಾಲ" ಆತನಿಗೆ ಹೊರಲಾರದ ಹೊರೆಯಾಗಿ ಕತ್ತನ್ನು ಬಾಗಿಸಿತ್ತು.

ಗುಣವಾಗದ ರೋಗವೆಂಬುದನ್ನು ಅರಿತೂ ಔಷಧ ತರಲು ಹೊರಟಿದ್ದ.

ಯಾರನ್ನೂ ಸಾಲ ಕೇಳಬಾರದೆಂದು ನಿರ್ಧರಿಸಿದ್ದ. ಉರಿ ಬಿಸಿಲು ಸುಡುತ್ತಿದ್ದರೂ ಲಕ್ಷಿಸದೆ ... ನಡೆಯುತ್ತಿದ್ದ.

ಮುಖವೆತ್ತಿ ಕೇಳಲು ಆತನಿಗೆ ಧೈರ್ಯವಿಲ್ಲದಿದ್ದರೂ ಕಂಡವರನ್ನು ಅಂಗಲಾಚುತ್ತಿದ್ದ.

ಹಿಂದೆ ಸಾಲವೆಂದು ಚಾಚಿದ್ದ ಕೈಯನ್ನಿಂದು ಭಿಕ್ಷೆಗಾಗಿ ನೀಡಿದ್ದ.

ಹೊಸ ಉದ್ಯೋಗವನ್ನು ಹುಡುಕಿದುದಕ್ಕಾಗಿ ತನ್ನಲ್ಲಿಯೇ ತಾನು ಆಶ್ಚರ್ಯ ಪಡುತ್ತಿದ್ದ. ಕೊಟ್ಟ "ದಾನಿ" ಎನ್ನಿಸಿಕೊಂಡವರು ಕೆಲ ಮಂದಿ. "ಇಲ್ಲ! ಮುಂದೆ ಹೋಗೆಂದು" ದಾಡಿಸಿದವರು ಕೆಲ ಮಂದಿ.

ಸಂಜೆಯಾಗುವುದನ್ನರಿತು ಹಣವನ್ನೆಣಿಸಿದ. ಅಂದಿನ ಸಂಪಾದನೆ ಒಂದು ದಿವಸದ ಔಷಧಕ್ಕೆ ಸಾಕಾಗುವಂತಿತ್ತು. ಕೂಡಲೇ ಆಸ್ಪತ್ರೆಗೆ ತೆರಳಿದ. ದುಡ್ಡನ್ನು ಮೊದಲು ಡಾಕ್ಟರರ ಕೈಗಿತ್ತ ಅವರು ಕೊಟ್ಟ ಶೀಸೆಯನ್ನು ಹಿಡಿದು ಮನೆಯತ್ತ ಓಡಿದ; ತೆರೆದ ಬಾಗಿಲು ತೆರೆದೇ ಇತ್ತು. ಪತ್ನಿಯ ಬಳಿಗೋಡಿದ. ಮುಟ್ಟಿನೋಡಿದ. ದೇಹವೆಲ್ಲಾ ತಣ್ಣಗಾಗಿತ್ತು.

"ಸಂಕಾ!... ಸಂಕಾ!...." ಕೂಗಿದ.

ಆದರೆ ತೆರೆದ ಬಾಗಿಲಿನಿಂದ ಅದಾವಾಗಲೋ ಆತಳ ಪ್ರಾಣಪಕ್ಷಿ ಹೊರಟು ಹೋಗಿತ್ತು.

ಆತನ ಪಾಲಿಗಂದು "ತೀರದ ಸಾಲ" ಮಾತ್ರ ಉಳಿದಿತ್ತು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 14/1965.

ತಿಮ್ಮಣ್ಣ ಭಟ್ಟ — ವಾದಿ

ಅಬ್ದುಲ್ ಖಾದರ್ ಬ್ಯಾರಿ — ಪ್ರತಿವಾದಿ.

ಸದ್ರಿ ಪ್ರತಿವಾದಿ—ಬೆಳ್ತಂಗಡಿ ತಾಲ್ಲೂಕು ಬಜ್ರೆ ಗ್ರಾಮದ ಬಜ್ರೆ ಎಂಬಲ್ಲಿರುವ ಬೆಯ್ಯ ಬ್ಯಾರಿ ಮಗ ಅಬ್ದುಲ್ ಖಾದರ್ ಬ್ಯಾರಿ ಯವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿರಾದ ನೀವು ಶ್ರೀಧರ ಆರಿಗರಿಂದ ತಾ. 2-7-58 ರಲ್ಲಿ ಆ ವಾದಿರು ಮಾಡಿಕೊಂಡು ಅನುಭವಿಸುತ್ತಿರುವ ಬಜ್ರೆ ಗ್ರಾಮದ ಸ. ನಂ. 25/1, 2, 4ಕ್ಕೆ ಸಪ್ಪಿದ ಆಸ್ತಿಯನ್ನು ಕ್ರಯಕ್ಕೆ ಪಡೆದ ವಾದಿಯು ಕೈಪೇಕ್ಷಿಸಲ್ಲ ಹೇಳಿದಂತೆ ತನಗೆ ಬಹಾ ಸದ್ರಿ ಆಸ್ತಿಯ ಸುಟ್ಟುವಳ್ಳಿ ಮತ್ತು ಆ ಮೇಲಿನ ಪ್ರತಿಫಲದ ಬಾಬ್ತು ಹಣ, ನಷ್ಟ ಯಿತ್ಯಾದಿ ನಿವೃತ್ತಿಗಳ ಬಗ್ಗೆ ರೂಪಾಯಿ 604-72+904-00ಕ್ಕೆ ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ತಾ. 23-3-65ಕ್ಕೆ ತನ್ನಿಗೆ ಇಟ್ಟಿರುತ್ತದೆ. ನೀವು ಸದ್ರಿ ವ್ಯಾದೆ ದಿನ ಪೂರ್ವಾಹ್ನ ಗಂಟೆ 10-30ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಃ ಯಾ ವಕೀಲ್ ದ್ವಾರಾ ಹಾಜರಾಗಿ ವ್ಯವಹರಿಸದಿದ್ರೆ, ಸದ್ರಿ ದಾವೆಯಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಮುಕ್ತ ಕಂಡಂತೆ ತೀರ್ಮಾನಿಸಲ್ಪಡುವದು.

ಕೋರ್ಟು ಹುಕುಂ ಪ್ರಕಾರ

B. K. Soorya Narayana Rao,
Advocate for Plaintiff.

ಬೆಳ್ತಂಗಡಿ, ತಾ. 5-3-65.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ, ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA 18-3-1965

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೮-೩-೬೫ರಿಂದ ೨೪-೩-೬೫ರ ವರೆಗೆ

೧. ಮೇಷ

ನಿಮ್ಮ ಸ್ವಯ ರಾಶಿಯಲ್ಲಿಂದು ಗ್ರಹತ್ರಯರ ಸಮಾಗಮವಾಗಿದ್ದರೂ ನೀವು ಬೆದರಬೇಕಾಗಿಲ್ಲ. ನಿಮ್ಮ ಖರ್ಚಿಗೆ ಬೇಕಾಗುವಷ್ಟು ಧನವನ್ನು ಸ್ವಯಮೇವ ದುಡಿಯುವಿರಿ. ಜನತೆಯ ಸಹಕಾರವು ಸಾಕಷ್ಟಿರುವುದರಿಂದ ಪ್ರಬಲರಾದ ಶತ್ರುಗಳನ್ನೂ ಪರಾಭವಗೊಳಿಸುವಿರಿ. ಕೆಲವೊಂದು ಸಾಂಸಾರಿಕ ತಾಪತ್ರಯಗಳು ನಿಮ್ಮ ಮನಸ್ಸಿನ ನೆಮ್ಮದಿಗೆ ಭಂಗ ತರಲಿವೆ. ವಾರದ ಆದಿಯ 4 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಪೂರ್ಣವಾಗುವವು.

೨. ವೃಷಭ

ನಿರೀಕ್ಷೆಗಿಂತಲೂ ಅಧಿಕವಾದ ಫಲವನ್ನು ನೀವಿಂದು ಅನಾಯಾಸದಿಂದ ಪಡೆವಿರಿ. ಆರ್ಥಿಕ ಭಾಗದಲ್ಲಿ ನಿಶ್ಚಿಂತರಾದ ನೀವು ಹಿಂದಿನ ಸಾಲ ಕಡಗಳಿಂದ ಮುಕ್ತರಾಗುವಿರಿ. ಆದರೂ ನಿಮ್ಮ ದೇಹ ಮನಸ್ಸುಗಳಿಗೆ ಸುಖ ನೆಮ್ಮದಿಯಿರದು. ಆಪ್ತ ಜನರ ವಿಯೋಗವುಂಟಾಗಲಿದೆ. ಸಾಂಸರ್ಗಿಕ ದೋಷದಿಂದ ಜನಾಪವಾದವು ಪ್ರಾಪ್ತವಾಗುವ ಸಂಭವವಿದೆ. ತಾ. 20ರಿಂದ 23ರ ವರೆಗಿನ ದಿನಗಳು ಅನುಕೂಲವಾಗಿವೆ.

೩. ಮಿಥುನ

ನಿಮ್ಮ ಜೀವನದಲ್ಲಿಂದು ಒಂದೊಮ್ಮೆಗೇ ಹಲವಾರು ಮಾರ್ಪಾಟುಗಳುಂಟಾಗಲಿವೆ. ಶ್ರಮವಹಿಸಿ ದುಡಿಯುವಿರಿ. ಆದರೂ ಕೆಲವೊಮ್ಮೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬಂತಹ ಘಟನೆಗಳು ಜರಗಲಿವೆ. ಖರ್ಚಿಗೆ ತಕ್ಕ ಆದಾಯವಿರುವುದರಿಂದ ಹಣದ ತಗಾದೆ ಕಾಣಿಸದು. ಹೆಚ್ಚಿನಂಶ ದುಡಿಮೆಯನ್ನು ಸದ್ವಿನಿಯೋಗ ಮಾಡುವಿರಿ. ವಾರಾಂತ್ಯದ 3 ದಿನಗಳು ಇಷ್ಟಾರ್ಥ ಸಾಧಕಗಳಾಗಿವೆ.

೪. ಕರ್ಕಟ

ಭಾಗ್ಯಪತಿಯಾದ ಬೃಹಸ್ಪತಿಯು ಲಾಭಸ್ಥಾನಕ್ಕೆ ಬಂದಿಹನು. ಸುಖ ಲಾಭಪತಿಯಾದ ಶುಕ್ರಾಚಾರ್ಯರು ಭಾಗ್ಯಸ್ಥಾನದಲ್ಲಿ ಉಚ್ಚರಾಗಿ ಕುಳಿತಿರುವರೆಂದ ಮೇಲೆ ಕೇಳಬೇಕೆ? ನಿಮ್ಮ ಆರ್ಥಿಕ ಸಂಪತ್ತು ಪರಿಪೂರ್ಣವಾಗಲಿದೆ. ನಷ್ಟವೆಂದೆಣಿಸಿದ ಧನವೂ ತಾನಾಗಿ ಅನಾಯಾಸದಿಂದ ನಿಮ್ಮ ಕೈ ಸೇರೀತು. ವಿರೋಧಿ ವರ್ಗದವರ ಕಾಟ ಮಾತ್ರ ದಿನದಿಂದ ದಿನಕ್ಕೇರುತ್ತಿರುವುದು. ಗ್ರಹತಾಪತ್ರಯಗಳು ಆಗಾಗ ಕಾಣಿಸಲಿವೆ. ತಾ. 18, 24 ಈ ಎರಡು ದಿನಗಳಲ್ಲಿ ನಿಮ್ಮ ಆಶಾಕಾಂಕ್ಷೆಗಳು ನೆರವೇರುವವು.

೫. ಸಿಂಹ

ಹೆಚ್ಚಿನ ಗ್ರಹರ ಮುನಿಸಿಗೆ ಗುರಿಯಾದ ನಿಮಗೆ ಇಂದಿನ ದಿನಗಳು ಸ್ವಲ್ಪ ಕಷ್ಟದಾಯಿಗಳಾಗಿ ಪರಿಣಮಿಸಲಿವೆ. ನಿಮ್ಮ ಆತ್ಮೀಯರೇ ನಿಮ್ಮ ಮೇಲಿಂದು ಎರಡೆಣಿಸಲಿರುವರು. ಪತ್ನಿಪುತ್ರರ ವಿರಹ ವಿಯೋಗಾದಿ ದುಃಖಿತರಾಗುವಿರಿ. ಆದರೂ ದ್ಯೂತಪ್ರೇಮಿಗಳಿಗೀ ವಾರವು ಸಾಕಷ್ಟು ಅನುಕೂಲವಾಗಿ ಪರಿಣಮಿಸಲಿದೆ.

೬. ಕನ್ಯಾ

ಸುಖ ಸಪ್ತಮ ಪತಿಗಳಾಗಿದ್ದ ಸುರಗುರುಗಳು ಅನೇಕ ಸಮಯದಿಂದ ಅಷ್ಟಮ ಸ್ಥಾನದಲ್ಲಿದ್ದು ನಾನಾ ತರದ ಕಷ್ಟನಷ್ಟಗಳಿಗೆ ನಿಮ್ಮನ್ನು ಗುರಿಮಾಡಿದ್ದರೂ ಇಂದು ಭಾಗ್ಯಸ್ಥಾನದಲ್ಲಿ ಪ್ರಸನ್ನರಾಗಿ ಕುಳಿತಿರುವ ಕಾರಣ ನಿಮ್ಮ ಹೆಚ್ಚಿನ ಎಲ್ಲಾ ತಾಪತ್ರಯಗಳೂ ದೂರವಾಗಲಿವೆ. ವಿಶೇಷತಃ ಆರ್ಥಿಕ ಭಾಗವು ಸುಧಾರಿಸುವದು. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟವಾದರೂ ಹಣದ ಅಡಚಣೆಯುಂಟಾಗದು. ಸ್ವಂತ ಆರೋಗ್ಯದತ್ತ ಸ್ವಲ್ಪ ಗಮನವಿರಲಿ. ತಾ. 18, 22, 23 ಈ ದಿನಗಳು ತುಂಬ ಅನುಕೂಲವಾಗಿವೆ.

೭. ತುಲಾ

ಸುರಗುರುವು ಪ್ರತಿಕೂಲನಾದರೂ ಇತರ ಗ್ರಹಬಲವು ಸಾಕಷ್ಟಿರುವ ನಿಮಗೆ ದಿನಗಳು ಹಿಂದಿಗಿಂತ ಇಂದೇ ಉತ್ತಮವಾಗಿ ಕಾಣಿಸಲಿವೆ. ನೆನೆದಂತೆ ಕಾರ್ಯವು ನೆರವೇರುವದು. ಪರಿಶ್ರಮವೆಂದೂ ವಿಫಲವಾಗದು. ಜನತೆಯ ಸಹಕಾರವು ಲಭಿಸದಾದರೂ ಕೈಗೊಂಡ ಕಾರ್ಯಗಳಲ್ಲಿ ಯಶಸ್ವಿಯಾಗುವಿರಿ. ಕಫದೋಷದಿಂದ ಆರೋಗ್ಯಕ್ಕೆ ಧಕ್ಕೆಯುಂಟಾದೀತು. ತಾ. 20, 21, 24 ಈ ದಿನಗಳಲ್ಲಿ ಸುಖಭೋಗಗಳನ್ನು ಪಡೆವಿರಿ.

೮. ವೃಶ್ಚಿಕ

ಧನಪತಿಯ ಪೂರ್ಣಾನುಗ್ರಹಕ್ಕೆ ಪಾತ್ರರಾದ ನಿಮಗೆ ದಿನಗಳು ಸುಖಕರವಾಗಿ ಸಾಗಲಿವೆ. ಶತ್ರುಪೀಡೆಯಿಂದ ಮುಕ್ತರಾದ ನಿಮ್ಮ ಕಾರ್ಯಕಲಾಪಗಳು ನಿರೀಕ್ಷಿಸಿದ ಗುರಿ ಸೇರುವವು. ಚಂಚಲಚಿತ್ತರಾದ ನಿಮ್ಮ ಸಂಸಾರದಲ್ಲಿ ಕೆಲವೊಂದು ಅವ್ಯವಸ್ಥೆಗಳುಂಟಾಗಿ ನಿಮ್ಮನ್ನು ಮನೋರೋಗಕ್ಕೀಡು ಮಾಡಲಿವೆ. ತಾ. 18, 22, 23 ಇವು ಇತರ ದಿನಗಳಿಗಿಂತ ಉತ್ತಮವಾಗಿವೆ.

೯. ಧನು

ಅದೃಷ್ಟವು ಕೃಷ್ಣಪಕ್ಷದ ಚಂದ್ರಮನಂತೆ ಹ್ರಾಸವಾಗುತ್ತಲಿದೆ. ಆರ್ಥಿಕ ವಿಚಾರದಲ್ಲಿ ನೀವು ನಿಶ್ಚಿಂತರಾಗಿದ್ದರೂ ಆರೋಗ್ಯ ಭಾಗದಲ್ಲಿ ಉತ್ತಮವಿರದು. ನಿಶ್ಶಕ್ತಿ ಕ್ಷೀಣತೆಗಳುಂಟಾಗುವವು. ಅನಿರೀಕ್ಷಿತ ಪರ್ಯಟನಗಳಿಂದಾಗಿ ಕಷ್ಟನಷ್ಟಗಳಿಗೀಡಾಗುವಿರಿ. ರಾಜಕೀಯ ರಂಗದಲ್ಲಿ ಪ್ರತಿಪಕ್ಷಿಗಳಿಂದ ಪರಾಜಯ ಹೊಂದುವ ಸಂಭವವಿದೆ. ತಾ. 22, 23ರಲ್ಲಿ ಅಧಿಕ ವ್ಯಯಗಳು ಕಾಣಿಸುವವು.

೧೦. ಮಕರ

ಅನಿಷ್ಟ ಸ್ಥಾನವಾದ ಅಷ್ಟಮದಲ್ಲಿ ಅಂಗಾರಕನಿದ್ದು ನಾನಾ ಕಷ್ಟಗಳಿಗೆ ನಿಮ್ಮನ್ನು ಗುರಿಮಾಡುವಂತಿದ್ದರೂ ಸುರ ಗುರುಗಳ ಪೂರ್ಣ ದೃಷ್ಟಿಯು ನಿಮ್ಮ ಮೇಲಿರುವುದರಿಂದ ಅಪಾಯಗಳನ್ನು ಉಪಾಯಗಳಿಂದ ಪಾರುಗಾಣುವಿರಿ. ಬಂಧುಮಿತ್ರರ ನೆರವಿನಿಂದಾಗಿ ಹಿಡಿದ ಕಾರ್ಯವನ್ನು ಪೂರ್ತಿ ಮಾಡುವಿರಿ. ಪ್ರತಿಕಾರಾಸಕ್ತರಾದ ಶತ್ರು ವರ್ಗದವರು ಸಮಯ ಸಾಧನೆಯಲ್ಲಿರುವುದರಿಂದ ನೀವಿಂದು ಜಾಗರೂಕರಾಗಿದ್ದಷ್ಟು ಒಳ್ಳಿತು. ತಾ. 20, 21, 22, 23 ಈ ದಿನಗಳಲ್ಲಿ ಧನಲಾಭ ಯಶಸ್ಸುಗಳನ್ನು ಪಡೆವಿರಿ.

೧೧. ಕುಂಭ

ಅರಕ್ಕೆ ಪೆಚ್ಚು ಮೂರಕ್ಕೆ ಕುಂಪವೆಂಬ ಗಾದೆಯಂತೆ ನಿಮ್ಮ ಜೀವನದಲ್ಲಿ ಏನೊಂದೂ ವಿಶೇಷ ಪರಿವರ್ತನೆ ಕಾಣದು. ಧನಸ್ಥಾನದಲ್ಲಿ ಉಚ್ಚ ಶುಕ್ರನು ಕುಳಿತಿಹ ಕಾರಣ ವ್ಯಾಪಾರದಲ್ಲಿ ನಿರೀಕ್ಷೆಗಿಂತಲೂ ಹೆಚ್ಚಿನ ಧನಲಾಭವಾಗುವುದು. ಆರ್ಥಿಕ ವಿಚಾರದಲ್ಲಿ ನೀವಿಂದು ನಿಶ್ಚಿಂತರಾಗಿದ್ದರೂ ಗ್ರಹತಾಪತ್ರಯಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ವಾರಾಂತ್ಯದ 3 ದಿನಗಳು ಸಾಕಷ್ಟು ಉತ್ತಮವಾಗಿವೆ.

೧೨. ಮೀನ

ದೈವವು ನಿಮ್ಮ ಮೇಲಿಂದು ಸ್ವಲ್ಪ ಪಿಸುಣವಾಗಿರುವುದರಿಂದ ದಿನಯಾಪನೆಯು ಸ್ವಲ್ಪ ಕಷ್ಟವಾಗಲಿದೆ. ಕಷ್ಟಪಟ್ಟು ದುಡಿಯುವರಾದರೂ ಇಷ್ಟಾರ್ಥ ನೆರವೇರದ ಕಾರಣ ಹಣ ಬಿಕ್ಕಟ್ಟು ಕಾಣಿಸಲಿದೆ. ಉದ್ಯೋಗದಲ್ಲಿ ನಿರಾಶೆ, ಸ್ಥಾನಚಲನೆಗಳುಂಟಾದಾವು. ಕಫ ವಾತ ದೋಷದಿಂದ ಆರೋಗ್ಯಕ್ಕೂ ಸ್ವಲ್ಪ ಹಾನಿಯಿರುವದು. ಪ್ರವಾಸ [illegible] ನಿಮಗೆ ತಾ. 18, 24 ಈ ದಿನಗಳು ಸ್ವಲ್ಪ ಅನುಕೂಲವಾಗಿ ಕಾಣುವವು.

ಉಡುಪಿ ಸಿವಿಲ್ ಜಜ್ ಕೋರ್ಟಿನಲ್ಲಿ

O. S. 58/64.

Between

ಕಮಲ ಯಾನೆ ಪಂಜಮ್ಮ ಶೆಡ್ತಿ ಕೂಡಾ —ವಾದಿರು.

ಮತ್ತು

ಅಬ್ಬಕ್ಕ ಶೆಡ್ತಿ ಕೂಡಾ ... ಪ್ರತಿವಾದಿರು.

ನೋಟೀಸು

ಉಡುಪಿ ತಾಲೂಕು 34ನೇ ಕುದಿಗ್ರಾಮದ ಹಳ್ಳಿ ದೊಡ್ಡಮನೆ ಎಂಬಲ್ಲಿರುವ ಮೇಲಿನ ವ್ಯಾಜ್ಯದ ಮೂರನೇ ಪ್ರತಿವಾದಿ ಶೀನಪ್ಪ ಶೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:— ಹಿಸೆ ಕೇಳಿ ಮಾಡಿದ ವಾದಿರ ದಾವೆಯು ತಾ. 26-3-1965ಕ್ಕೆ ಇಟ್ಟಿದೆ. ಆ ಬಗ್ಗೆ ನಿಮ್ಮ ಆಕ್ಷೇಪ ಏನಾದರೂ ಇದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದರ್ಜಿಸಿಕೊಳ್ಳತಕ್ಕದ್ದು.

D. N. Krishnamoorthy Rao.
Advocate for Plaintiff.

Udipi, S. K,
Dated 4-3-1965.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ.ಖ ಪ್ರತ್ಯೇಕ)

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಎಕಾಡೆಮಿ ಪುಸ್ತಕ ಭಂಡಾರ

ಮಣಿಪಾಲ, ಇಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುವ ಎಕಾಡೆಮಿ ಸಾರ್ವಜನಿಕ ಪುಸ್ತಕ ಭಂಡಾರದ ಕಟ್ಟಡವನ್ನು ದಿವಂಗತ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂರವರ ಸ್ಮರಣೆಗಾಗಿ ಉಪಯೋಗಿಸಲಾಗುವುದು. ತಾ. 6-3-65ರಂದು ಮಣಿಪಾಲ ಇಂಜಿನಿಯರಿಂಗ್ ಕಾಲೇಜ್ ದಿನೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದಾಗ ಶಿವಳ್ಳಿ ಪಂಚಾಯತ್ ಅಧ್ಯಕ್ಷ ಶ್ರೀ ಟಿ. ರಮೇಶ ಪೈಯವರು ಇದನ್ನು ತಿಳಿಸಿದರು. ಕೇಂದ್ರ ಸರಕಾರದಿಂದ ಈ ಕಟ್ಟಡಕ್ಕಾಗಿ ೩೦,೦೦೦ ರೂ. ಸಹಾಯ ಸಿಕ್ಕಿದ್ದು, ಅಷ್ಟೇ ಮೊತ್ತವನ್ನು ಪುಸ್ತಕ ಭಂಡಾರ ವಿನಿಯೋಗಿಸುತ್ತದೆಂದರು. ಉಳಿದರ್ಧವನ್ನು ಈ ಯೋಜನೆಗೆ ಮೂಲ ಕಾರಣರಾದ ವಿದ್ಯಾರ್ಥಿಗಳು ಸಂಗ್ರಹಿಸುತ್ತಲಿದ್ದಾರೆಂದರು. ಕಟ್ಟಡದ ಕಾರ್ಯ ಆರಂಭವಾಗಿದ್ದು, ನೆಹರೂರವರ ಮುಂದಿನ ಜನ್ಮದಿನವಾದ ನವೆಂಬರ್ ೧೪ರ ವೇಳೆಗೆ ಪೂರ್ತಿಗೊಳ್ಳುವ ನಿರೀಕ್ಷೆ ಇದೆ ಎಂದರು.

ಎಕಾಡೆಮಿ ಆಫ್ ಜನರಲ್ ಎಜುಕೇಶನ್ನಿನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯರು ಮಾತನಾಡಿ ಬರುವ ವರ್ಷಗಳಲ್ಲಿ ಈ ಕಾಲೇಜು ಪ್ರಖ್ಯಾತಿ ಹೊಂದುವುದೆಂಬ ಭರವಸೆಯನ್ನು ವ್ಯಕ್ತಪಡಿಸಿದರು. ಕಾಲೇಜ್ ಧರ್ಮದರ್ಶಿ ಮಂಡಳಿಯ ಅಧ್ಯಕ್ಷ ಶ್ರೀ ರೋಶ್ ಫರ್ನಾಂಡಿಸ್‌ರವರು ಸ್ವಾಗತ ಭಾಷಣ ಮಾಡಿದರು. ಪ್ರಿನ್ಸಿಪಾಲ್ ಶ್ರೀ ಪಿ. ವೆಂಕಟರಮಣ ಭಟ್ ಮತ್ತು ಪ್ರೊ| ಬಿ. ವಿ. ಕೃಷ್ಣಮೂರ್ತಿಯವರು ವರದಿಗಳನ್ನೋದಿದರು. ಶ್ರೀಮತಿ ಶಾಂತಿ ಆರ್. ಪೈಯವರು ಬಹುಮಾನಗಳನ್ನು ಹಂಚಿದರು. ಕಾಲೇಜು ಯೂನಿಯನ್ ಕಾರ್ಯದರ್ಶಿ ಶ್ರೀ ಟಿ. ಗೋಕುಲದಾಸ ಪೈಯವರು ವಂದನಾರ್ಪಣೆ ಮಾಡಿದರು.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪]   ಮಾರ್ಚ್, ೨೫ ೬೫,   [ಸಂಚಿಕೆ ೩೦



Phone No.
ಫೋನ್ ಸಂಖ್ಯೆ: 226

leading nationalist weekly

೨೦
ಪೈಸೆ

ವಾರದ ಕಥೆ

ತಂಗೀ, ನಿನಗೆ ಈ ದಾರಿ ಬೇಡ

ಕತೆಗಾರ್ತಿ
ಶ್ರೀಮತಿ ಯಶೋದಾ ಎಸ್. ಜೆನ್ನಿ.

ಅನಿರೀಕ್ಷಿತವಾಗಿ ಬಂದಿಳಿದ ಆ ಮಹಿಳೆಯನ್ನು (ಆ) ಬಡ ಗುಡಿಸಲಿನ ವೃದ್ಧೆ ಮತ್ತು ಅವಳ ಮಗಳು ದಿಗ್ಭ್ರಾಂತರಾಗಿ ನೋಡಿದರು.

ಹಿಂದಿನಿಂದ ಟ್ರಂಕು ಹೊತ್ತು ತಂದ ಬಡ ಕೂಲಿಗೆ ಎಂಟಾಣೆ ಎಸೆದು ಕರವಸ್ತ್ರದಿಂದ ಮುಖದ ಮೇಲಿನ ಬೆವರನ್ನೊರಸಿಕೊಳ್ಳುತ್ತಾ ನಿಟ್ಟುಸಿರು ಬಿಟ್ಟಳಾಕೆ.

ಮಿಂಚುವ ನೈಲಾನ್ ಸೀರೆಯೊಳಗೆ ಹೊಳೆಯುವ ಬಣ್ಣದ ಸಿಲ್ಕಿನ ಲಂಗ, ಪೌಡರ್ ಬಳಿದ ಮುಖದಲ್ಲಿ ರಂಗೇರಿದ ತುಟಿಗಳು, ಒಂದು ಕೈಯಲ್ಲಿ ಕೈಗಡಿಯಾರ, ಇನ್ನೊಂದರಲ್ಲಿ ಚಿನ್ನದ ನಾಲ್ಕು ಬಳೆಗಳು... ಕತ್ತಿನಲ್ಲಿ ಹೊಳೆಯುವ ನೆಕ್ಲೇಸ್. 'ಯಾರೀಕೆ....?' ಮುದುಕಿ ತನ್ನೊಳಗೇ ಕೇಳಿಕೊಂಡಳು.

ಆಕೆ ಬಾಯಿ ತೆರೆದ ಬಾಯಿ ತೆರೆದಂತೆಯೇ ಇತ್ತು. ಅತಿಯಾದ ಆಶ್ಚರ್ಯದಿಂದ ಮಾತು ಮಾತ್ರ ಹೊರ ಬರಲಿಲ್ಲ. ನೆಟ್ಟಗೆ ಮೆಟ್ಟಲೇರಿ ಬಂದ ರೀತಿ ನೋಡಿದರೆ ದಾರಿ ತಪ್ಪಿ ಬಂದಂತಿರಲಿಲ್ಲ. ಆದರೆ.... ಈ ಬಡ ಗುಡಿಸಲಿಗೆ ಬಂದ ಅಪ್ಸರೆಯಂತಹ ಹುಡುಗಿ...! ಕಣ್ಣು ತಿಕ್ಕಿಕೊಳ್ಳುತ್ತಾ ಮುದುಕಿ ಅವಳನ್ನೇ ಇನ್ನೂ ದಿಟ್ಟಿಸಿದಳು.

"ಅಮ್ಮಾ....ಗಿರಿಜಕ್ಕ ಅಲ್ವಾ....?" ಮಿಕಿ ಮಿಕಿ ನೋಡುತ್ತಿದ್ದ ಹುಡುಗಿ ಆಶ್ಚರ್ಯೋದ್ಗಾರದೊಂದಿಗೆ ಕೂಗಿ ಮೂಲೆಯಲ್ಲಿದ್ದ ಚಾಪೆಯನ್ನು ತರಲೋಡಿದಳು.

"ಆಂ....ಗಿರಿಜೆಯೇ? ಹೌದೇ... !"

ಆಶ್ಚರ್ಯ ಮತ್ತು ಆನಂದದಿಂದ ಮಗಳ ಬಳಿಗೋಡಿ ಬಂದಳು ಆ ಬಡ ತಾಯಿ.

ವಿಸ್ಮಯ, ಸಂತೋಷ, ಕುತೂಹಲಗಳಿಂದ ಎವೆಯಿಕ್ಕದೆ ಗಿರಿಜೆಯನ್ನೇ ನೋಡುತ್ತಾ ಕುಳಿತಳು ಆ ವೃದ್ಧೆ.

ಆಗ ಆಕೆಗೆ ಒಮ್ಮೆಯೇ ಎರಡು ವರ್ಷಗಳ ಹಿಂದಿನ ಘಟನೆಯು ನೆನಪಾಯಿತು. ಪತಿ ಗೃಹದಲ್ಲಿ ಜಗಳವಾಡಿ ಬಂದ ಗಿರಿಜ ತಾಯ ಹಿತೋಪದೇಶದಿಂದ ಬೇಸರಗೊಂಡು ಜಗಳವಾಡಿದ್ದು.. ಆ ಮೇಲೆ ಕೆಲವೇ ದಿನಗಳಲ್ಲಿ ಕಣ್ಮರೆಯಾದುದು.. ಬೆದರಿದ ತಾಯಿ ಊರ ಕೆರೆ ಬಾವಿಯನ್ನೆಲ್ಲ ಹುಡುಕಿ ಸೋತುದು.. ಕಣ್ಣೀರಿನಿಂದಲೇ ದಿನಗಳೆಯುತ್ತಿದ್ದಾಗ ಬಂದ ಗಿರಿಜೆಯ ಪತ್ರ.... ಆಮೇಲೆ ನಾಲ್ಕೈದು ತಿಂಗಳುಗಳ ಮೇಲೆ ಬಂದ ರೂಪಾಯಿಗಳು...

ಏನಾದರೂ ಮಗಳು ಸುಖವಾಗಿರುವಳಲ್ಲಾ ಎಂದು ನಂಬಿದ ತಾಯಿಗೆ ಊರ ಜನ ಸಮಾಧಾನದಿಂದಿರಲು ಬಿಡಲಿಲ್ಲ.

'ಮಾನ, ಮರ್ಯಾದೆ ಬಿಟ್ರೆ ಬೇಕಾದಷ್ಟು ಹಣ ಸಂಪಾದಿಸಬಹುದು!" ಆದರೂ ಆ ಬಡ ತಾಯಿಗೆ ಹಣ ಲೆಹಿಯೆನಿಸದೆ ಬಹಳ ಪ್ರಯೋಜನಕ್ಕೆ ಬಂದಿತ್ತು. ಆದರೆ.. ಕಿರಿಯ ಮಗಳು ರಾಧೆಯ ವಿವಾಹಕ್ಕೆ ಮಾತ್ರ ದೊಡ್ಡ ವಿಘ್ನ ಬಂದೊದಗಿತು.

"ಮರ್ಯಾದೆಗೆಟ್ಟ ಮನೇಲಿರುವ ರಾಧಾಳನ್ನು ಯಾರು ಮದುವೆಯಾಗ್ತಾರೆ?" "ಹಿರಿಯಕ್ಕನ ಚಾಳೀನೇ ಬಂದ್ಬಿಟ್ರೆ?" ಹದಿನೆಂಟರ ರಾಧೆ ಮದುವೆಯಾಗದೆ ಉಳಿದು ಬಿಟ್ಟಿದ್ದಳು.

"ಹೇಗಿದ್ದಿ ಗಿರಿಜಾ" ಮಗಳು ಸುಖವಾಗಿಯೇ ಇರುವಳೆಂದು ನಂಬಿದ್ದರೂ ಕೇಳಿದಳಾಕೆ.

ಮಗಳು ನಕ್ಕಳು. ಯೋಚನೆ, ವ್ಯಥೆ, ಅಪಮಾನಗಳಿಂದ ಕೃಶಳಾದ ತಾಯಿಯ ಸುಕ್ಕು ಗಟ್ಟಿದ ಮುಖವತ್ತ ನೋಡಿ ನಕ್ಕಳು. ಹದಿನೆಂಟರ ತುಂಬು ದೇಹದ ತಂಗಿಯ ಬಾಡಿದ ಮುಖದತ್ತ ನೋಡಿದಳೊಮ್ಮೆ. ತನಗೆ ಆ ವಯಸ್ಸಿನಲ್ಲಾಗಲೇ ಮದುವೆಯಾಗಿತ್ತು. ಆದರೆ ಈಕೆಗೆ...ತನ್ನಿಂದಾಗಿಯೇ ಆಗಲಿಲ್ಲವೆಂಬುದನ್ನು ಯಾರೂ ಹೇಳಬೇಕಾದಿರಲಿಲ್ಲ. ತನ್ನ ಮದುವೆಯ ಮೊದಲ ದಿನಗಳು...! ಗಿರಿಜಾಳಿಗೆ ಪತಿಗೃಹದ ನೆನಪು ಬಂತು. ಸೋಮಪ್ಪ ಬಡವ. ಅಷ್ಟೇ ಅಲ್ಲ ಬಿಳಿವರ್ಣದ ಚೆಲುವೆಯೆನಿಸಿದ ಗಿರಿಜಾಳಿಗೆ ಕಾಗೆಯ ಬಣ್ಣದ ಗಂಡ...!

ಮದುವೆಯ ದಿಂದ ? ;

ಪತ್ನಿ ಜೋಡಿಯನ್ನು ನೋಡಿ ಎಷ್ಟೋ ಜನರು ಹಾಸ್ಯ ಮಾಡಿದ್ದರು.

ಆದರೆ ವಿಧಿ ಅವರನ್ನು ಒಂದು ಗೂಡಿಸಿತ್ತು. ಅದನ್ನು ಮೀರುವುದು ಸಾಧ್ಯವೆನಿಸಲಿಲ್ಲ ಗಿರಿಜೆಗೆ.

ಆದರೂ...ಅತೃಪ್ತಿ, ಅಶಾಂತಿ....ಕಳವಳ.. ಜಿಗುಪ್ಸೆ....ಸಾಲದ್ದಕ್ಕೆ ಬಡತನ ಮೊದಲೇ ನೊಂದ ಮನವನ್ನು ಇನ್ನಷ್ಟು ಕದಡಿಸಿತು. ಯಾವುದೋ ಸಣ್ಣ ಮಾತಿಗೆ ಜಗಳವಾಡಿದ ಗಿರಿಜಾ ತಾಯ ಬಳಿಗೋಡಿ ಬಂದಳು.

ತಾಯ ಹಿತೋಪದೇಶ ಅವಳಿಗೆ ಕಹಿ ಔಷಧಿಯಂತಾಯಿತು. ಆಗ ಆಕೆಗೆ ಕಲ್ಯಾಣಿಯ ಪರಿಚಯವಾಯ್ತು. ಅವರ ಹಳ್ಳಿಯಿಂದ ಒಂದು ಮೈಲು ದೂರದ ಸಣ್ಣ ಪೇಟೆಯ ಸಂತೆಗೆ ಹೋದಾಗ ದೂರದಲ್ಲಿ ನಿಂತ ಶ್ರೀಮಂತ ಮಹಿಳೆಯ ಆಡಂಬರದ ಉಡಿಗೆಯ ತೊಡಿಗೆಗಳನ್ನು ಬೆರಗುಗಣ್ಣಿಂದ ನೋಡುತ್ತಾ ನಿಂತಿದ್ದಳು ಗಿರಿಜ.

ಕಲ್ಯಾಣಿಯ ಪಕ್ಕದಲ್ಲಿ ನಿಂತಿದ್ದ ರಂಗಣ್ಣ.. ಗಿರಿಜೆಯ ಹಳ್ಳಿಯ ಮನೇ.. ಗಿರಿಜೆ ಬೆರಗುಗಣ್ಣುಗಳಿಂದ ನೋಡುತ್ತಲೇ ಇದ್ದಳು. ಆತ ಮುಗುಳ್ನಕ್ಕ. ಗಿರಿಜೆ ಪ್ರತಿಯಾಗಿ ನಗು ಸೂಸಿದಳು. ಆದರೆ ಆದೇಕೋ ಆ ಅಲಂಕೃತ ಮಹಿಳೆಯಿಂದ ದೃಷ್ಟಿ ಸರಿಸುವುದು ಮಾತ್ರ ಸಾಧ್ಯವಾಗಲಿಲ್ಲ.

ಆತ ಅವಳ ಕಿವಿಯಲ್ಲೇನೋ ಪಿಸುಗುಟ್ಟಿದ. ಮತ್ತೂ ಏನೋ ಹೇಳಿದ. ಆಗ ಆಕೆ ಗಿರಿಜಳತ್ತ ನೋಡಿದಳು. ಕೈ ಸನ್ನೆಯಿಂದ ಕರೆದಳು.

ಗಿರಿಜಳಿಗೆ ಸಂಕೋಚ, ಆನಂದ, ಹೆಮ್ಮೆ ಎಲ್ಲ ಜತೆ ಸೇರಿ ನಡೆಯುವುದೂ ಪ್ರಯಾಸವೆನಿಸಿತು.

ಆ ವೇಳೆ ಮಾತು ಕತೆ, ಎಲ್ಲ ಮುಗಿದಾಗ ಗಿರಿಜ ಕನಸಿನ ಸ್ವರ್ಗ ಲೋಕವನ್ನೇ ಸೇರಿ ಬಿಟ್ಟಿದ್ದಳು.

ಆದು ಮುಗಿದ ಒಂದೇ ವಾರದಲ್ಲಿ ಗಿರಿಜ ಕಲ್ಯಾಣಿಯೊಂದಿಗೆ ಮುಂಬೈಯ ಸ್ವರ್ಗಲೋಕವೆಂದುಕೊಂಡ ಕೊಳಕು ಗಲ್ಲಿಗೆ ಬಂದು ಬಿದ್ದಳು.

ಆದರೆ.. ಆ ಮೇಲೆ ತಿಳಿಯಿತು ಯ ಸ್ವರ್ಗ ಸುಖ!

ಅಲ್ಲಿಯ ಅಸಹ್ಯ ಜೀವನ ಬೇಸರಗೊಳಿಸಿತು. ವಿಧ ವಿಧದ ಮನುಷ್ಯ ಪ್ರಾಣಿಗಳ ಹೊಲಸು ವ್ಯವಹಾರದಿಂದ ಕಂಗಾಲಾದಳು. ಜುಗುಪ್ಸೆಗೊಂಡಳು. ಅತ್ತಳು. ಆಕೆ ಊಹಿಸಿದ ಸುಖಕ್ಕೂ, ಕನಸಿನ ಆಶಾ ಗೋಪುರಕ್ಕೂ ಅಲ್ಲಿಯ ನರಕದೃಶ ಜೀವನಕ್ಕೂ ಇರುವ ಅಂತರ ನೋಡಿ ನಡುಗಿದಳು. ಎಲ್ಲವೂ ಮುಗಿದ ಮೇಲೆ ಮಾಡುವುದೇನಿದೆ? ಕಾಲ ಮೀರಿತು. ತಾನಾಗಿಯೇ ಮಡುವಿಗೆ ಧುಮುಕಿದ ಮೇಲೆ ಯಾರನ್ನು ಹಳಿಯುವಂತಿದೆ?

ಅಯ್ಯೋ.. ತಾನೇಕೆ ಹೀಗಾದೆ? ಏಕೆ ಈ ನರಕಕ್ಕೆ ಬಂದು ಬಿದ್ದೆ? ಎಂದು ದಿನಕ್ಕೆ ಸಾವಿರ ಬಾರಿ ಯೋಚಿಸಿ ಯೋಚಿಸಿ ಕೃಶಳಾದಳು.

ತನ್ನ ಪತಿ ಬಡವನಾದರೂ, ಕುರೂಪಿಯಾದರೂ ತನ್ನನ್ನು ಪ್ರೀತಿಸುತ್ತಿದ್ದ. ತನ್ನೊಡನೆ ಎಷ್ಟೊಂದು ನಯವಾಗಿ ವರ್ತಿಸುತ್ತಿದ್ದ! ಆದರೆ...ಇಲ್ಲಿ ಬರುವ ಗಂಡಸರೋ....ಶುದ್ಧ ಒರಟು ಪ್ರಾಣಿಗಳು.. ಅವರ ವ್ಯವಹಾರವೋ ಕಾಡು ಪಶುಗಳಿಗಿಂತಲೂ ಕೀಳಾದ್ದು ...ಗಿರಿಜ ಯೋಚಿಸಿ ದಣಿದಳು ಅತ್ತು ಸೊರಗಿದಳು ಆದರೆ ಅಲ್ಲಿ ಅವಳಿಗಾಗಿ ಯೋಚಿಸುವ ಇಲ್ಲವೇ ವ್ಯಥೆಪಡುವ ಜೀವವೊಂದೂ ಇರಲಿಲ್ಲ. ಹಣ, ಬಣ್ಣ ಬಣ್ಣದ ಸೀರೆ, ಚಿನ್ನಾಭರಣ ಎಲ್ಲವೂ ಕಲ್ಯಾಣಿಯ ಕೃಪೆಯಿಂದ ದೊರೆತಿತ್ತು. ಸುಖ, ಶಾಂತಿ ಮಾತ್ರ ಲಭಿಸಲಿಲ್ಲ. ದೇಹಕಾಂತಿ ಕತ್ತಲಲ್ಲಿ ಥಳಥಳಿಸುತಿತ್ತು. ಸರಿಯಾಗಿ ನೋಡಿದರೆ ಮಾತ್ರ ಒಣಗಿ ಕೃಶವಾದ್ದು ಕಾಣಿಸುತಿತ್ತು.

ಎರಡು ವರ್ಷಗಳ ಸೆರೆಮನೆಯ ನರಕವಾಸವನ್ನನುಭವಿಸಿದ ಗಿರಿಜಾ ಊರಿಗೆಂದು ಹೊರಟು ಬಂದಿದ್ದಳು.

ಆದರೆ ಮದುವೆಯಾಗದೆ ಬೆಳೆದು ನಿಂತ ರಾಧಾಳಿಗೆ ಕಾಣಿಸಿದ್ದೇ ಬೇರೆ.

ಅಕ್ಕ ಶೀಲವನ್ನೇ ಮಾರಿಕೊಂಡವಳೆಂದು ರಾಧಾಳಿಗೆ ವರ ದೊರೆತಿರಲಿಲ್ಲ. ಊರಲ್ಲೇನೋ ಅಕ್ಕನ ವಿಷಯವಾಗಿ ಏನೇನೋ ಮಾತನಾಡುತ್ತಿದ್ದರು. ಆಗ ರಾಧಾಳಿಗೂ ಅಕ್ಕನ ಮೇಲೆ ಕ್ರೋಧ, ಜಿಗುಪ್ಸೆ ಉಂಟಾಗುತ್ತು.

ಆದರೆ ಪ್ರತ್ಯಕ್ಷವಾಗಿ ಅಕ್ಕನನ್ನು ನೋಡಿದರೆ ..ಸುರಲೋಕದ ಅಪ್ಸರೆಯೇ ಪ್ರತ್ಯಕ್ಷವಾದಂತಿದ್ದಾಳೆ ಈ ಹಳ್ಳಿಯಲ್ಲಿ ಅಂತಹ ಮಹಿಳೆಯನ್ನೇ ಕಂಡರಿಯದ ರಾಧಾಗೆ ಅಕ್ಕ ಸ್ವರ್ಗ ಲೋಕದಲ್ಲೇ ವಿಹರಿಸುವಳೇನೋ ಎಂದೂ ತೋರಿತು.

ಗಿರಿಜಾಳಿಗೆ ಸ್ನಾನ, ಊಟದ ಉಪಚಾರವೆಲ್ಲ ಬಹು ಸಂಭ್ರಮದಿಂದ ನೆರವೇರಿತು. ಆ ರಾತ್ರಿಯೆಲ್ಲ ರಾಧಾಳಿಗೆ ನೂರಾರು ಕನಸುಗಳು, ತಾನೂ ಅಕ್ಕನೊಂದಿಗೆ ಬಣ್ಣಬಣ್ಣದ ಸೀರೆಯನ್ನುಟ್ಟುಕೊಂಡು ದೇವತೆಯಂತೆ ಮೆರೆದಾಡಿದ ಹಾಗೆ.. ಇನ್ನೂ ಏನೇನೋ..

ಗಿರಿಜಾ ಊರಿಗೆ ಬಂದ ಮೇಲೆ ನಗ್ಗ ನಗುತ್ತಲೇ ಕೆಲವು ದಿನ ಕಳೆದಳು. ಆಗ ರಾಧಾಳಿಗೆ ಒಂದೇ ಯೋಚನೆ. ಅಕ್ಕ ಈ ಬಾರಿ ತನ್ನನ್ನೂ ಸುಂದರ ಸ್ವ

(ಹದಿನೈದನೇ ಪುಟ ನೋಡಿರಿ)

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ.

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ ಗನ್‌ಬೋ ಸ್ಟ್ರೀಟ್, ಮುಂಬೈ—1.

ನಮ್ಮ ವೈಶಿಷ್ಟ್ಯಗಳು:

- ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ
- ಮೆಳ್ಳಗಣ್ಣಿನ ನಿವಾರಣ— ಆಪರೇಶನ್ನು ಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು ● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವವು



Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಟಪಾಲಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಕ್ಯೂಬಾ ಬಿಕ್ಕಟ್ಟಿನ ಕಾಲ, ಈ ಪ್ರಶ್ನೆಯುತ್ತರಿಸ ಸಂಘದ ಭದ್ರತಾ ಸಮಿತಿಯಲ್ಲಿ ಪ್ರಸ್ತಾಪಿಸಲ್ಪಟ್ಟಾಗ ಅಮೆರಿಕನ್ ಪ್ರತಿನಿಧಿ ಶ್ರೀ ಎಡ್ಲೈ ಸ್ಟೀವನ್‌ಸನ್‌ರು ಸದಸ್ಯರಿಗೆ, ರಶ್ಯವು ಕ್ಯೂಬಾದಲ್ಲಿ ಕ್ಷಿಪಣಿ ನೆಲೆಗಳನ್ನು ಸ್ಥಾಪಿಸಿದೆ ಎಂಬುವನ್ನು ಛಾಯಾ ಚಿತ್ರಗಳ ಸಮೇತ ವಿವರಿಸುತ್ತಿರುವರು. ಸೋವಿಯೆತ್ ಪ್ರತಿನಿಧಿ ಶ್ರೀ| ಜೋರಿನ್‌ರನ್ನೂ ಈ ಚಿತ್ರದಲ್ಲಿ ಕಾಣಬಹುದು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೩೦	೨೫—೩—೧೯೬೫	No. 30

ಅನಿವಾರ್ಯ ಕ್ರಮ

ಇತ್ತೀಚೆಗೆ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿ ಕೇರಳೀಯರು ಯಾವುದೇ ಒಂದು ಪಕ್ಷವನ್ನು ಸರಕಾರ ರಚಿಸುವಂತೆ ಬಹುಮತದಿಂದ ಆರಿಸಲು ನಿರಾಕರಿಸಿದರು. ಈ ನಿರಾಕರಣೆಯು ಕೇರಳದಲ್ಲಿ ಮುಂದೇನು ಎಂಬ ಬೃಹತ್ ಪ್ರಶ್ನೆಯನ್ನು ಮುಂದೆ ಮಾಡಿತು; ಎಲ್ಲ ರಾಜಕೀಯ ನಾಯಕರನ್ನೂ ಚಿಂತನೆಗೆ ಗುರಿಮಾಡಿತು. ಇಷ್ಟರಲ್ಲೇ ಕೇರಳದ ಭವಿಷ್ಯವನ್ನು ರಾಷ್ಟ್ರಪತಿಯವರು ನಿರ್ಧರಿಸಿದ್ದು ಇದಕ್ಕೆ ಪ್ರತಿಮಾರ್ಗವಿಲ್ಲವೆಂದೇ ಹೇಳಬೇಕು. ಕೇರಳೀಯರು ಪ್ರಜಾಸತ್ತಾತ್ಮಕ ಆಡಳಿತೆಯನ್ನು ಬಯಸುವುದು ಸಹಜವಾದರೂ ಅದಕ್ಕೆ ಅನುಕೂಲವಾದ ವಾತಾವರಣ ಅಲ್ಲಿ ಇಲ್ಲದಿರುವುದನ್ನು ವೀಕ್ಷಿಸಬಹುದು. ಆದುದರಿಂದ ಅಲ್ಲಿಗೆ ಭಾರತದ ಸಂವಿಧಾನಕ್ಕನುಗುಣವಾಗಿ ರಾಷ್ಟ್ರಪತಿ ಆಳಿಕೆಯನ್ನ ಘೋಷಿಸುವುದೇ ಸದ್ಯ ಮಾಡಬೇಕಾದ ಕಾರ್ಯ.

ನಿಚ್ಚಳ ಬಹುಮತ ಪಡೆಯದ ಕಾಂಗ್ರೆಸ್ಸು ತಾನು ವಿರೋಧೀ ಪಕ್ಷವಾಗಿಯೇ ನಿಲ್ಲುವ ನಿರ್ಧಾರ ಮಾಡಿದುದು ನ್ಯಾಯೋಚಿತವೇ. ಇತರ ಯಾವ ಪಕ್ಷದ ಸಹಕಾರದಿಂದ ಅದು ಅಧಿಕಾರದಲ್ಲಿ ಉಳಿಯಲು ಬಯಸದೆ ಅಧಿಕಾರ ಲಾಲಸೆ ಕಾಂಗ್ರೆಸ್ಸಿಗಿಲ್ಲವೆಂಬುದನ್ನು ಸಾರಿ ತೋರಿಸಿದೆ; ಪ್ರಜಾಸತ್ತೆಯ ಪರಿಪಾಠವನ್ನು ಅನುಸರಿಸಿವೆ. ಇದು ಸ್ವಾಗತಾರ್ಹ. ಕಾಂಗ್ರೆಸೇತರ ಪಕ್ಷಗಳೆಲ್ಲವೂ ಒಂದು ಸೇರಿ ಸರಕಾರ ಸ್ಥಾಪಿಸಬಹುದಿತ್ತು; ಆದರೆ, ಎಡ ಕಮ್ಯೂನಿಸ್ಟ್ ಪಕ್ಷದ ೪೦ ಮಂದಿ ಚುನಾಯಿತರ, ಭಾರತ ಸಂರಕ್ಷಣಾ ಕಾಯಿದೆಯ ನ್ವಯ ಸೆರೆಮನೆಯಲ್ಲಿರುವುದರಿಂದ ಇದೂ ಸಾಧ್ಯವಿಲ್ಲ. ಯಾವ ಪಕ್ಷದ ನಾಯಕರೂ ಸ್ವತಃ ಸರಕಾರ ರಚಿಸಲು ಸಿದ್ಧರಿಲ್ಲವಾದರೂ ಎಡ ಕಮ್ಯುನಿಸ್ಟರು ಮುಂದೆ ಬಂದರು. ಅವರ ನಾಯಕ ನಂಬೂದರಿಪಾದರು ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಮಾಡಿದರು. ಕೇರಳದಲ್ಲಿ ತನ್ನ ಪಕ್ಷವು ಉಳಿದೆಲ್ಲವುಗಳಿಗಿಂತ ಅಧಿಕ ಸ್ಥಾನಗಳನ್ನು ಪಡೆದುದರಿಂದ ಅದಕ್ಕೆ ಸರಕಾರ ಸ್ಥಾಪಿಸಲು ನ್ಯಾಯವಾದ ಅಧಿಕಾರವಿರುವುದೆಂಬುದನ್ನು ಪ್ರತಿಪಾದಿಸಿದರು. ರಾಜ್ಯಪಾಲ ಗಿರಿಯವರು ತನ್ನ ಮಾತಿನ ಬಗ್ಗೆ ಅನುಕೂಲಾಭಿಪ್ರಾಯ ವ್ಯಕ್ತಪಡಿಸಲಾರರೆಂಬ ಸಂದೇಹದಿಂದಲೋ ಏನೋ ಪಹಲಿಯವರೆಗೂ ಯಾತ್ರೆ ಮಾಡಿದರು. ಪ್ರಧಾನಿ ಶಾಸ್ತ್ರಿ ಮತ್ತು ಗೃಹಮಂತ್ರಿ ನಂದಾರೊಡನೆ ಮಾತುಕತೆ ನಡೆಸಿದರು. ಬಂಧನದಲ್ಲಿರುವ ಚುನಾಯಿತ ಪ್ರತಿನಿಧಿಗಳನ್ನು ಮುಕ್ತಗೊಳಿಸುವಂತೆ ಒತ್ತಾಯದಿಂದ ಕೇಳಿಕೊಂಡರು; ತನ್ನ ಪಕ್ಷಕ್ಕೆ ಸರಕಾರ ರಚಿಸುವ ಅವಕಾಶವನ್ನು ಒದಗಿಸಬೇಕೆಂದೂ ಭಾರತದ ಸಂವಿಧಾನ ಮತ್ತು ಜನಹಿತಗಳನ್ನು ಕಡೆಗಣಿಸದೆ ಸರಕಾರವು ಕಾರ್ಯಪ್ರವೃತ್ತವಾಗುವುದೆಂದೂ ತಿಳಿಸಿದರು. ಆದರೆ ಅವರು ರಾಜ್ಯಪಾಲರ ವರದಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದೆಂದರಲ್ಲದೆ ಯಾವ ಭರವಸೆಯನ್ನೂ ನೀಡಲಿಲ್ಲ. ಬಂಧನದಲ್ಲಿರುವ ಪ್ರತಿನಿಧಿಗಳನ್ನು ಬಿಡುಗಡೆ ಮಾಡಲು ಸ್ಪಷ್ಟವಾಗಿಯೇ ನಿರಾಕರಿಸಿದುದು ವಿಶಿಷ್ಟ ದೃಢನಿಲುವೆಯೆಂದೇ ಹೇಳಬೇಕು. ಇಲ್ಲಿಯೂ ಅಸರೆ ಕಾಣದ ನಂಬೂದರಿಪಾದರು ರಾಷ್ಟ್ರಪತಿ ಅಧಿಕಾರದಲ್ಲಿರುವ ಡಾ| ಜಾಕೀರ್ ಹುಸೇನರನ್ನು ಕೊನೆಗೆ ಕಂಡರು. ಅಲ್ಲಿಯೂ ಅವರು ತನ್ನ ಹಳೆಯ ರಾಗವನ್ನೇ ಹಾಡಿ ರಾಷ್ಟ್ರಪತಿಗಳು ಗವರ್ನರರ ವರದಿಯನ್ನು ಕೇಂದ್ರ ಸಚಿವ ಸಂಪುಟದ ಅಭಿಪ್ರಾಯ ಮತ್ತು ಸಲಹೆಗಳನ್ನೂ ಕಡೆಗಣಿಸಿ, ತನ್ನ ಪಕ್ಷಕ್ಕೆ ಸರಕಾರ ರಚಿಸಲು ಅನುಮತಿ ನೀಡಬೇಕೆಂದು ಸಲಹೆಯನ್ನೂ ಮಾಡುವಲ್ಲಿಯತನಕ ಮುಂದುವರಿದರು.

ಇಲ್ಲಿ ನಾವೊಂದು ಮಾತನ್ನು ಮರೆಯುವಂತಿಲ್ಲ. ರಾಷ್ಟ್ರಪತಿಯು ತನ್ನ ಸಚಿವ ಸಂಪುಟದ ಸಲಹೆಯನ್ನು ಕಡೆಗಣಿಸಬೇಕೆಂದು ಸಲಹೆ ನೀಡುವುದು ಸರಿಯಾದುದೆ? ಸಂಪುಟದ ಅಭಿಪ್ರಾಯವನ್ನು ಕಡೆಗಣಿಸುವ ಅಧಿಕಾರವು ರಾಷ್ಟ್ರಪತಿಗೆ ಇರುವುದೆ, ಸದಾ ಇಂತಹ ಧಾರ್ಷ್ಟ್ಯ ವಹಿಸುವುದು ಅಸಾಮಾನ್ಯವಲ್ಲವೆ? ಇದನ್ನು ನಂಬೂದರಿಪಾದರೂ ಒಪ್ಪುತ್ತಾರೆ; ಆದರೆ, ಪ್ರಜಾಪ್ರಭುತ್ವವು ಬದುಕಬೇಕೆಂಬ ಇರಾದೆಯಿಂದ ತಾನು ಹಾಗೆ ನುಡಿದಿರುವೆನೆಂದಿದ್ದಾರೆ ಅವರು. ಸಂಪುಟದ ಸಲಹೆಗಳನ್ನು ಪರ್ಯಾಲೋಚಿಸಿ ಯೋಗ್ಯ ನಿರ್ಣಯಕ್ಕೆ ಬರುವ ಶಕ್ತಿಯು ರಾಷ್ಟ್ರಪತಿಯವರಲ್ಲಿ ಅವಶ್ಯವಾಗಿಯೂ ಇದೆ. ಆದುದರಿಂದ, ಇನ್ನು ನಂಬೂದರಿಪಾದರು ತುಸು ಮುಂದುವರಿದೇ ಹೋಗಿದ್ದಾರೆನ್ನಬಹುದು. ಎಡ ಕಮ್ಯುನಿಸ್ಟ್ ಪಕ್ಷವು ಚೀನೀಯರ ಹಸ್ತಕನಾಗಿ ಭಾರತದಲ್ಲಿ ಕಾರ್ಯಮಾಡುತ್ತಿದೆಯೆಂದು ಕೇಂದ್ರ ಸರಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿರುವಾಗ, ಸರಕಾರ ರಚಿಸಲು ಅದಕ್ಕೆ ನಿಚ್ಚಳ ಬಹುಮತ ದೊರೆಯುವ ಸಂದರ್ಭವೇ ಇಲ್ಲದಾಗ, ಭದ್ರ ಸರಕಾರ ರಚನೆ ಮಾಡುವುದು ಆದರಿಂದ ಎಷ್ಟುಮಾತ್ರಕ್ಕೂ ಸಾಧ್ಯವಿಲ್ಲ. ಕೇರಳದಲ್ಲಿ ಇದುವರೆಗೆ ಸಾಮಾನ್ಯವಾಗಿ ಎಲ್ಲ ಬಗೆಯ ಮಂತ್ರಿಮಂಡಲಗಳೂ ರಚಿತವಾಗಿ ಪತಿತವಾಗಿವೆ. ಬಹುಮತ, ಸಂಮಿಶ್ರ, ಅಲ್ಪಮತ ಪಕ್ಷಗಳ ಸರಕಾರ ಅಲ್ಲಿ ಆಳಿತು. ಅನುಭವದಿಂದ ಪಾಠ ಕಲಿಯುವುದಾದರೆ, ಅಲ್ಲಿಗೆ ರಾಷ್ಟ್ರಪತಿ ಆಳಿಕೆಯೇ ಪರಮೌಷಧಿಯೆನ್ನದೆ ಗತ್ಯಂತರವಿಲ್ಲ.

ಎಲ್ಲೆಡೆಯೂ ನಿರಾಶರಾದ ನಂಬೂದರಿಪಾದರು ರಾಷ್ಟ್ರಪತಿಯವರ ಆಳಿಕೆಯನ್ನೇ ಕೇರಳದಲ್ಲಿ ಮುಂದುವರಿಸಿದರೆ, ಅದನ್ನು ಪ್ರತಿಭಟಿಸಲು ನೇರ ಕ್ರಮಕ್ಕೆ ಕೈಗೊಳ್ಳುವುದಾಗಿ ಪತ್ರಕಾರರ ಮುಂದೆ ಸಾರಿ, ಬೆದರಿಕೆ ಹಾಕಿದ್ದಾರೆ. ಪ್ರಜಾತಂತ್ರದ ಉಳಿವಿಗೋಸ್ಕರವೇ ಈ ಕ್ರಮವಂತೆ. ಭಾರತವನ್ನು ಪ್ರಜಾಸತ್ತಾತ್ಮಕ ರಾಷ್ಟ್ರವೆಂದು ಸಾರುವ ಸಂವಿಧಾನದಲ್ಲಿಯೇ ರಾಷ್ಟ್ರಪತಿ ಆಳ್ವಿಕೆಗೂ ಅವಕಾಶವಿದೆ. ಹಾಗಿರುವಾಗ ಅದು ಅಪ್ರಜಾತಂತ್ರಾತ್ಮಕವಾಗುವುದಿಲ್ಲ. ಒಂದು ವೇಳೆ ಎಡ ಕಮ್ಯುನಿಸ್ಟರು ನೇರ ಕ್ರಮವನ್ನು ಕೈಗೊಂಡರೂ ಅವರಿಗೆ ಉಳಿದ ಕೆಲವಾದರೂ ರಾಜಕೀಯ ಪಕ್ಷಗಳು ನೆರವಾದರೂ ಅದರಿಂದ ಜಗ್ಗಬಾರದು; ಕೇರಳದಲ್ಲಿ ಸ್ಥಿರವಾದ ಪ್ರಜಾಸತ್ತಾತ್ಮಕ ರಾಜ್ಯತಂತ್ರವನ್ನು ಸ್ಥಾಪಿಸಲು ಪ್ರಯುಕ್ತವಾದ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳವರ ಕರ್ತವ್ಯವಾಗಿದೆ. ನಡೆಯಬಹುದಾದ 'ನೇರ ಕ್ರಮ'ವನ್ನು ನೇರವಾಗಿಯೇ ಎದುರಿಸಬೇಕು. ವಿದೇಶೀ ನಿಷ್ಠೆಯಿಂದ ಇಲ್ಲಿದ್ದು, ಸಮಯ ಬಂದಾಗ ದೇಶ ದ್ರೋಹಕ್ಕೂ ಹಿಂಜರಿಯದವರ ಬೆದರಿಕೆ-ಗದರಿಕೆಗಳಿಗೆ ಎಂದಿಗೂ ಬಗ್ಗಬಾರದು. ಭಾರತವು ಸ್ವತಂತ್ರ ಪ್ರಜಾಸತ್ತೆಯಾಗಿಯೇ ಕೊನೆಯವರೆಗೂ ಉಳಿಯಬೇಕು.

ವಚನ ಸುಧೆ

ಆಚ್ಛೈಷಾಮ್ರದ್ಯಾಸನಾನು

ಚ್ಛಭೂಯಮಾನಾಗಸೋವಯಂ||

(ಋಗ್ವೇದ ೧೦-೧೪-೨೫)

O ನಾವು ಇಂದೇ ವಿಜಯ ಗಳಿಸುವೆವು ಮತ್ತು ಪೂಜಿಸುವೆವು, ನಿಷ್ಪಾಪಿಗಳಾಗುವೆವು.

OO ಇಂದಿನ ಕೆಲಸಗಳನ್ನು ನಾಳೆಗೆಂದಿಡಬಾರದು. ಒಳ್ಳೆಯ ಕಾರ್ಯಗಳನ್ನು ಇಂದೀಗಲೇ ಆರಂಭಿಸಬೇಕು. ಸಜ್ಜನರ ಸತ್ಕಾರ ಮತ್ತು ವಿಜಯ ಪ್ರಾಪ್ತಿಗಾಗಿ ಸದಾ ಪ್ರಯತ್ನಿಸುತ್ತ ಇರಬೇಕು. ಪಾಪಕರ್ಮ ಅಥವಾ ದುರಾಚಾರಗಳನ್ನು ಯಾವ ಸಂದರ್ಭದಲ್ಲಿಯೂ ಮಾಡಬಾರದು.

ನೆರಸಣ್ಣನ ಸರಸ



"ರಾಜ್ಯದ ಪೊಲೀಸು ಶಾಖೆಯು ಗಣನೀಯ ಸೇವೆ ಸಲ್ಲಿಸಿದೆ, ಎಂದು ಸರ್ಟಿಫಿಕೇಟನ್ನು ರಾಜ್ಯ ಗೃಹ ಸಚಿವರು ನೀಡಿದ್ದಾರೆ. ಇನ್ನು ಆಗಬೇಕಾದುದಾದರೂ ಏನು?"

"ಮತ್ತೇನೂ ಇಲ್ಲ. ಕಳ್ಳಭಟ್ಟಿಗಳನ್ನು ಗುಡಿ ಕೈಗಾರಿಕೆಗಳ ಸಾಲಿಗೆ ಸೇರಿಸಿ ಅವುಗಳಿಗೆ ಸಹಾಯ ಧನ ನೀಡುವುದು."

ಗೇಹ ರಾಜ್ಯದಲ್ಲಿ

ಮಾವನ ಮನೆಯಿಂದ ಮರಳಿದ ಅಳಿಯ

"ಸ್ವಲ್ಪ ಇಲ್ಲಿ ಕೇಳೀಂದ್ರೆ..."

ಅಲ್ಲಾ, ನಿನಗೆ ಎಷ್ಟು ಬಾರಿ ಹೇಳೋದೂಂತ?"

"ಏನು ಹೇಳಿದ್ರಿ ನೀವು?"

"ಕಿವಿ ಕೇಳ್ಸೋದಿಲ್ವಾದ್ರಿಂದ್ಲೇ ಈ ಸಮಸ್ಯೆ ಎದ್ದಿರೋದು...."

"ಏನಪ್ಪ ಅಂತಹ ಸಮಸ್ಯೆ?"

"ಸಮಸ್ಯೆ ಅಲ್ಲದಿರೋದಾದ್ರೂ ಏನೂಂತ?"

"ಹ್ಞಾನಪ್ಪ, ಎಲ್ಲ ಸಮಸ್ಯೆಯೇ ಅನ್ನೋಣ. ಆದ್ರೂ ಈಗ ಎದ್ದಿರೋದಾದ್ರೂ ಏನು?"

"ಎದ್ದಿರೋದು? ನಾನು ಮತ್ತು ನೀನು...."

"ಛಿ, ನಿಮ್ಮ. ಅಲ್ಲಾ ಇದ್ರಲ್ಲಿ ಹೊಸ್ತು ಏನಿದೇಂತ?"

"ಮತ್ತೆ ಯಾವುದ್ರಲ್ಲಿ ಹೊಸ್ತಿದೇಂತ?"

"ಅಲ್ರಿ, ರಷ್ಯದವ್ರು ಬಾಹ್ಯಾಂತರಿಕ್ಷದಲ್ಲಿ ಹಾರಿ ಮರಳಿದ್ರಂತೆ...."

"ಇದ್ರಲ್ಲಿ ಏನಂತೆ ವಿಶೇಷ?"

"ಅಲ್ಲಾ, ಮಾನವ ಹಾರಿ ಹಿಂದೆ ಬಂದಾಂತನ್ನೋದು ಸಾಮಾನ್ಯ ವಿಷಯವಲ್ವೆ?"

"ಹಾರಿದವ ಇಳೀಲೇ ಬೇಕು ತಾನೆ?"

"ಅದು ಹೌದೂನ್ನಿ. ಆದ್ರೂ ನೆಮ್ಮದಿಯಾಗೇ ಇಳಿ ಬಂದಾಂತನ್ನೋದು..."

"ಹ್ಞಾ ಸರೀನ್ನು..."

"ಇನ್ನು ಮುಂದಿನ ಗುರಿ ಚಂದ್ರಲೋಕವಂತೆ"

"ಸೂರ್ಯ ಲೋಕವಲ್ಲ ತಾನೆ?"

"ಯಾಕೆ ಹಾಗಂತೀರಿ?"

"ಅಲ್ವೆ, ನಮ್ಮ ಹನುಮಂತ ಇದ್ದಾನಲ್ಲಾ...."

"ಯಾವ ಹನುಮಂತ? ಬಿಳಿಯನೇ ಅಥವಾ...."

"ಬಿಳಿಯನೂ ಅಲ್ಲ, ಕರಿಯನೂ ಅಲ್ಲ ...ಇವ ರಾಮಾಯಣದ ಹನುಮಂತ.."

"ಓ ಅವನೆ?"

"ಹ್ಞಾಂ ಅವ್ನೇ. ನೋಡು, ಅವ ಸೂರ್ಯಲೋಕಕ್ಕೂ ನೆಗೆದಿದ್ದಾನೆ. ಹಾಗಿರುವಾಗ...."

"ಅಲ್ರಿ, ಅವ ನೆಗೆದಿದ್ದಾನೇಂತ ಯಾರಿಗೆ ಗೊತ್ತು?"

"ಯಾರಿಗೇಂತಂದ್ರೆ? ಆಂಜನೇಯ ಚರಿತ್ರವನ್ನು ಓದು...'

" ಆ ನಿಮ್ಮ ಪುರಾಣವನ್ನ ಸ್ವಲ್ಪ ಬೆಂಕಿಗೆ ಹಾಕಿ...."

"ಸರಿಯಾಗಿ ಹೇಳಿದೆ ಕಣೇ. ಪುರಾಣವನ್ನ ಬೆಂಕಿಗೆ ಹಾಕೋಣ. ಆದ್ರೆ ಅದ್ರಿಂದ ಫಲ?"

"ಅದು ನಾಶವಾಗುತ್ತೆ..."

"ಅದೇ ನೋಡು ನಿನ್ನ ಅಜ್ಞಾನ..'

'ಯಾವುದು?"

"ಇಂಗ್ಲಿಷ್ ಭಾಷೆಯೇ ಮುಂದುವರಿಯ ಬೇಕೂಂತ ಸಂವಿಧಾನ ಸುಡೋದು, ಹೆಚ್ಚು ಆಹಾರ ಬೆಳೆಯಿರೀಂತ ಮೆರವಣಿಗೆ ಮಾಡೋದು, ಸಂಬ್ಳ ಹೆಚ್ಚು ಮಾಡೀಂತ ಪೆನ್ ಡೌನ್ ಸ್ಟ್ರೈಕ್ ಮಾಡೋದು.."

"ಹಾಗೇ ಪುರಾಣ ನಾಶವಾಗ಼್ೀಂತ ಅದರ ಪ್ರತಿಯನ್ನ ಸುಡೋದು ಅಲ್ವೇ?'

'ಪುರಾಣದ ಲಿಖಿತ ರೂಪವನ್ನ ಸುಟ್ರೆ ಪುರಾಣ ಹಾರಿ ಹೋಗುತ್ತೈ?"

"ಹ್ಞೂ.... ಸರಿಯಪ್ಪ. ಪುಸ್ತಕದ ಬದನೆಕಾಯಿಯನ್ನ ಸುಟ್ಟು ಪಲ್ಯ ಮಾಡೋಕಾಗೋದಿಲ್ಲ. ಆದ್ರೆ ನೋಡಿ, ನಿಮ್ಮ ಹನುಮಂತನ ಕತೆ ಯಾಕೆ ಕಟ್ಟಿಕತ್ರೂ ಗಿದ್ಬಿದ್ರು? ಅದನ್ನ ನೋಡಿದವ್ರು ಇದ್ದಾರಾ ಯಾರಾದ್ರೂ...?"

"ಎಲ್ಲವನ್ನೂ ನೋಡಿಯೇ ತಿಳಕೊಳ್ಬೇಕೇನು?"

"ಇಲ್ದಾದ್ರೆ ಗೊತ್ತು ಹೇಗಾಗುತ್ತೇಂತ?"

ಅಲ್ವೆ, ನಿನ್ನ ರಷ್ಯನ್ನರು ಹಾರಿದ್ದನ್ನ ನೀನು ನೋಡಿದ್ದೀಯ?"

"ಇಲ್ಲಿ ನೋಡಿ, ಪೇಪರಿನಲ್ಲಿ ಇಷ್ಟು ದೊಡ್ಡದಾಗಿ ಇದೆಯಲ್ಲಾ...."

"ಅದೂ ನೋಡು ಪುಸ್ತಕದ ಬದನೆಕಾಯಿ...."

"ಸಾಕು ಬಿಡೀಂದ್ರೆ...."

'ಬಿಟ್ಟೆ....'

'ಏನನ್ನ?'

"ನನಗೇನು ಗೊತ್ತು?"

'ಮತ್ತೆ ಬಿಟ್ಟೆ ಅಂದ್ರುಲ್ಲಾ....'

"ಹೌದು...."

"ಅದೇ ಏನನ್ನೂಂತ..."

"ಮತ್ತೇನನ್ನ! ನೀನೇನು ಬಿಡಬೇಕೂಂತಂದಿ ಅದನ್ನೇ..."

"ನಾನೇನನ್ನೂ ಬಿಡಲು ಹೇಳ್ಲಿಲ್ಲ ನೋಡಿ...."

"ಮತ್ತೆ, ಸಾಕು ಬಿಡೀಂದ್ರೇಂತ ಕೊರಳೆತ್ತಿ ಮಾಡಿ ಅಂದೆಯಲ್ಲಾ...."

"ಅಯ್ಯೋ, ನಿಮ್ಮದೊಂದು...."

"ಹೌದು, ನನ್ನದೊಂದೇ..."

"ಏನು?'

"ನೀನು...."

"ಹೋಗೀಂದ್ರೆ....'

'ಅಲ್ವೆ, ಆಗ ಬಿಡಿ ಅಂದೆ. ಮತ್ತೀಗ ಹೋಗಿ ಅಂದ್ರೆ...."

"ಅಯ್ಯೋ, ಮಾತಿಗೆ ಮಾತು ಅಂದ್ರೆ ಯಾಕೆ ಇಷ್ಟು ಕೋಪ ನಿಮ್ಗೆ?'

"ಮತ್ತೆ ಹೋಗೀಂತಂದ್ರೆ ನೆಟ್ಟಗೆ ಹೊರ ಹೋಗ್ಬೇಕು ಅಲ್ವೆ?'

"ನಿಮ್ಮನ್ನ ಹೋಗಿ ಬನ್ನಿ ಅನ್ನೋಕೆ ನಾನು ಯಾರು?"

"ಅದನ್ನೂ ನಾನು ತನ್ನ ತಿಳಿಸಿ ಹೇಳ್ಬೇಕು ಅಲ್ವೆ?"

"ಯಾಕೆ ಇಷ್ಟು ಕೋಪಿಸ್ಕೋತೀರಾ?"

"ಮತ್ತೆ ಮಾಡ ಬೇಕಾದ್ದೂ ಏನೂಂತ?"

ಬಿದ್ದಿವೆ ನೋಡಿ ಮನೆಗೆಲ್ಸ....ಹೊಟ್ಟೆ ನೋವಿನಿಂದ ಮಲಗಿದವ್ಳು ಈಗ ತಾನೇ ಎದ್ದದ್ದು..."

"ಹೇಳಿದ ಹಾಗೆ ಕುಣಿಯೋಕೆ ಯಾರಾದ್ರೂ ಇದ್ರೆ ನಿನಗೆ ಹೊಟ್ಟೆಯೂ ನೋಯುತ್ತೆ, ತಲೆಯೂ ನೋಯುತ್ತೆ...."

"ಹೌದು, ಹೇಳಿದ್ದನ್ನ ಕೇಳಿಕೊಂಡು ಸುಮ್ಮನಿರೋವ್ರು ಇದ್ರೆ ನಿಮ್ಗೆಲ್ಲಾ ಕೋಪವೂ ಬರುತ್ತೆ"

"ಏ, ಸ್ವಲ್ಪ ಜಾಗ್ರತೆಯಿಂದ ಮಾತಾಡು..."

"ಮತ್ತೆ ನಿಮ್ಮ ಹಾಗೆ ನಿದ್ದೆಯಲ್ಲಿಲ್ಲ ನೋಡಿ..."

"ನೋಡೋದೇನೇ ನಿನ್ನನ್ನ. ದಿನಾ ನೋಡಿ ನೋಡಿ ಸಾಕಾಗಿ ಬಿಟ್ಟಿದೆ...."

"ಸರಿ ಹಾಗಾದ್ರೆ ಅಂದ ಇನ್ನು ನನ್ನ ನೋಡೋಕಿಲ್ಲ ಅಲ್ವೆ? ಸಾರ್ಥಕವಾಯ್ತು ನಿಮ್ದು...."

'ಏ, ಏಕೆ ಭಾಗೀರಥಿಯಾಗ್ತೀಯ?"

'ಬಿಡಿ, ನನ್ನ ಸುದ್ದಿ ಬರಬೇಡಿ....'

"ಏನಾಯ್ತು?"

"ಆಗೋದೇನು? ಎಲ್ಲಾದ್ರೂ ಬಾವಿನೋ ಕೆರೇನೋ..."

'ಅಯ್ಯೋ ಹುಡುಗಿ, ಹೀಗೆಲ್ಲಾ ರಂಪಾಟ ಮಾಡಿದ್ರೆ ಹೇಗೆ?'

(ಹದಿಮೂರನೇ ಪುಟ ನೋಡಿರಿ)

ಸೇವಿಂಗ್ಸ್
ಸೇವಿಂಗ್ಸ್ ಶೇ. ಬಡ್ಡಿ, 4½%
ಶೇ. ಬಡ್ಡಿ, 4½%
ಸೇವಿಂಗ್ಸ್ ಶೇ. ಬಡ್ಡಿ, 4½%
ಸೇವಿಂಗ್ಸ್ ಶೇ. ಬಡ್ಡಿ, 4½%
ಸೇವಿಂಗ್ಸ್ ಸೇವಿಂಗ್ಸ್
ಸೇವಿಂಗ್ಸ್ ಶೇ. ಬಡ್ಡಿ, ಸೇವಿಂಗ್ಸ್
ಶೇ. ಬಡ್ಡಿ, 4½%
ಶೇ. ಬಡ್ಡಿ, 4½%
ಶೇ. ಬಡ್ಡಿ, 4½% ಸೇವಿಂಗ್ಸ್
ಶೇ. ಬಡ್ಡಿ, 4½%

ಹೆಚ್ಚು ಬಡ್ಡಿ

ನಿಮ್ಮ ಹಿತಕ್ಕಾಗಿ ಹೆಚ್ಚು ಬಡ್ಡಿ

ವಿಜಯ ಬ್ಯಾಂಕು ಈಗ ನಿಮ್ಮ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ಟುಗಳ ಮೇಲೆ ಹೆಚ್ಚು ಬಡ್ಡಿ-ವರ್ಷಕ್ಕೆ ಶೇ. 4½ ಯಂತೆ-ನೀಡುತ್ತದೆ.

ಇದು ನಿಮ್ಮ ಹಿತಕ್ಕಾಗಿರುವ ಹೆಚ್ಚು ದರ ಎಂಬುದನ್ನು ಒಪ್ಪುತ್ತೀರಲ್ಲವೇ?

ವಿಜಯ ಬ್ಯಾಂಕಿನಲ್ಲಿ ಇಂದೇ ನಿಮ್ಮ ಸೇವಿಂಗ್ಸ್ ಬ್ಯಾಂಕ್ ಲೆಕ್ಕ ಆರಂಭಿಸಿ.

ಇದು ನಿಮಗಾಗಿ, ನಿಮ್ಮ ಹಣಕ್ಕಾಗಿ ಇರುವ ಬ್ಯಾಂಕು.

ವಿವರಗಳಿಗೆ

ವಿಜಯ ಬ್ಯಾಂಕಿನ ಯಾವುದೇ ಕಚೇರಿಯೊಡನೆ ವ್ಯವಹರಿಸಿ.
ನಿಮ್ಮ ಬ್ಯಾಂಕ್ ವ್ಯವಹಾರಗಳಿಗೆ, ನಿಮ್ಮ ಉಳಿತಾಯಕ್ಕೆ
ನೆರವಾಗಲು 52 ಕಚೇರಿಗಳಿವೆ.

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ಕೇಳಿರಿ:

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ವಿಜಯ ಬ್ಯಾಂಕ್ ಬಿಲ್ಡಿಂಗ್
ಲೈಟ್ ಹೌಸ್ ಹಿಲ್ ರೋಡು, ಮಂಗಳೂರು-3.

VB-19 KAN.

ಸಾಮಾಜಿಕ ನೈತಿಕ ಜೀವನದ ಮೇಲೆ

ದಾಸವರ್ಯರು ಬೀರಿದ ಪ್ರಭಾವ

ಬರೆದವರು: ಕಾಕೋಳು ರಾಘವೇಂದ್ರ, ಬೆಂಗಳೂರು.

ಭರತ ಖಂಡದಲ್ಲಿ ಅಧರ್ಮ, ಅನ್ಯಾಯ—ಅನಾಚಾರಗಳು ತಲೆದೋರಿದಾಗ ಅವನ್ನು ನಾಶಗೊಳಿಸಿ, ಧರ್ಮ, ನ್ಯಾಯ, ಸದಾಚಾರಗಳು ತಲೆದೋರುವಂತೆ ಮಾಡುವುದಕ್ಕಾಗಿ ಭಗವಂತನು ಅನೇಕ ರೂಪಗಳಲ್ಲಿ ಅವತರಿಸುತ್ತಾನೆ. ಈ ಮಾತಿನಲ್ಲಿ ಎಳ್ಳಷ್ಟೂ ಸುಳ್ಳಿಲ್ಲ. ಏಕೆಂದರೆ ಧರ್ಮ ಸಂಸ್ಥಾಪಕರಾದ ಬುದ್ಧ, ಶಂಕರ, ರಾಮಾನುಜ, ಮಧ್ವ, ಕಬೀರ, ತುಳಸೀದಾಸ, ಮೀರಾ ಬಾಯಿ ಮೊದಲಾದವರು ತಮ್ಮ ಕೀರ್ತನೆಗಳಿಂದ ಜನರಲ್ಲಿ ಧರ್ಮ ಬುದ್ಧಿಯನ್ನು ಬೆಳಗಿಸಿದರು. ಕರ್ನಾಟಕದಲ್ಲಿ ಬಸವೇಶ್ವರ ಮೊದಲಾದವರು ತಮ್ಮ ವಚನ ಮತ್ತು ಗೀತೆಗಳಿಂದ ಜನರ ನೈತಿಕ ಜೀವನವನ್ನು ಶ್ರೀಮಂತಗೊಳಿಸಿದರು. ಇವರಂತೆಯೇ ದಾಸ ಕೂಟವೂ ಇದೇ ಕಾರ್ಯವನ್ನು ಮಾಡಿತು.

ಪರಮಾತ್ಮನ ಸಾನ್ನಿಧ್ಯವನ್ನು ಸೇರಲು ಮೂರು ಮಾರ್ಗಗಳಿವೆ. ಜ್ಞಾನ ಮಾರ್ಗ, ಕರ್ಮ ಮಾರ್ಗ, ಭಕ್ತಿ ಮಾರ್ಗ. ಪುರಂದರ ದಾಸರು ಕೊನೆಯದಾದ ಭಕ್ತಿ ಮಾರ್ಗವನ್ನು ಅನುಸರಿಸಿದರು. ಇವರು ಪ್ರಪಂಚವನ್ನು ತಿರಸ್ಕರಿಸುವುದಿಲ್ಲ, ಸಂಸಾರಕ್ಕೆ ಹೇಸುವುದಿಲ್ಲ, ಜನರ ಗುಂಪಿಗೆ ಬೆದರುವುದಿಲ್ಲ. ಸದಾ ದೇವರು, ಲೋಕ, ಸಮಾಜ ಇವುಗಳೇ ಅವರ ಕಣ್ಣ ಮುಂದಿರುವ ದೃಶ್ಯ. ಅವರಾಡಿದ ಪ್ರತಿಯೊಂದು ಮಾತೂ ದೇವರ ನಾಮವಾಗಿಯೂ, ಕೃತಿಯೊಂದು ಕಾರ್ಯವೂ ಸಮಾಜೋದ್ಧಾರಕ್ಕಾಗಿಯೂ ಮೀಸಲಾಗಿ. ಇವೇ ದಾಸ ಪಂಥದ ಆದರ್ಶಗಳು, ಇವೇ ಅವರ ಕೀರ್ತನ ಬೋಧೆ.

ಜನರ ಜೀವನ ಸುಂದರವಾಗಬೇಕು ಮತ್ತು ಸುಖಮಯವಾಗಬೇಕು. ಅಂತಹ ಶುದ್ಧ ಜೀವನದಿಂದಲೇ ಮೋಕ್ಷ ಸಾಧ್ಯ. ದೇಹವನ್ನು ನಿತ್ಯವೂ ತೊಳೆದು ಸ್ವಚ್ಛಪಡಿಸುವಂತೆ ಅಂತರಂಗದ ಮನ ಮತ್ತು ಬುದ್ಧಿಗಳೆರಡನ್ನೂ ದುರಾಲೋಚನೆಗಳಿಂದ ದೂರಮಾಡಿ ಶುದ್ಧವಾಗಿಡಬೇಕು. ಅದಕ್ಕೆ ನೀತಿಯೇ ಮುಖ್ಯ ಸಾಧನೆಯಾಗಿದೆ. ಮಿತಹಾರ-ವಿಹಾರಗಳಿಂದ ದೇಹವನ್ನು ಆರೋಗ್ಯಗೊಳಿಸುವುದೂ ಒಂದು ತಪಸ್ಸು; ಹಾಗೆಯೇ ಸತ್ಯವನ್ನಾಡುವುದೂ ಒಂದು ತಪಸ್ಸು; ಒಳ್ಳೆಯ ಭಾವನೆಯನ್ನು ತಾಳುವುದೂ ಒಂದು ತಪಸ್ಸು. ಸಮಾಜದಲ್ಲಿ ಕಂಡು ಬರುವ ಉಚ್ಚ—ನೀಚ, ಬಡವ—ಶ್ರೀಮಂತ, ಮೇಲ್ಜಾತಿ, ಕೀಳ್ಜಾತಿ ಎಂಬ ಕ್ಷುದ್ರ ಭಾವನೆಯನ್ನು ತೊರೆದು ಎಲ್ಲರೂ ಒಂದೇ ದೇವರ ಮಕ್ಕಳೆಂಬ ಭಾವನೆಯಿಂದ ಪರಸ್ಪರ ಪ್ರೀತಿ ಮತ್ತು ಸಹಕಾರದಿಂದ ನಡೆಯಬೇಕು. ಈ ಭಾವನೆಯು ಜನರಲ್ಲಿ ಹುಟ್ಟುವಂತೆ ಮಾಡುವುದಕ್ಕಾಗಿ ಪುರಂದರ ದಾಸರು ಹೊಲೆಯನೆಂಬವನು ಊರಾಚೆ ಇರುವವನೆ ಇಲ್ಲವೆ ಊರೊಳಗೆ ಇರುವವನೆ ಎಂಬ ಶಂಕೆಗೆ "ಶೀಲವನು ಕೈಕೊಂಡು ನಡೆಸದಾತನೆ ಹೊಲೆಯ | ಅಳಿಗಿ ಪರಸತಿಗೆ ಕೇಡು ಬಗೆವವ ಹೊಲೆಯ |... ಉಂಡ ಮನೆಗೆರಡನ್ನು ಬಗೆವಾತನೇ ಹೊಲೆಯ." ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಇನ್ನೊಂದೆಡೆಯಲ್ಲಿ "ಮಡಿ ಮಡಿಯೆಂದು ಮೂರ್ಖರು ಹಾರುತಿ ಮಡಿಯಲ್ಲಿ ಬಂತೆ ಬಿಕನಾಸಿ" ಎಂದು ಟೀಕಿಸಿದ್ದಾರೆ.

ಈ ಸಂಸಾರ ಅಸ್ಥಿರ, ಸತಿ ಸುತ, ಬಂಧು, ಬಳಗಗಳೆಲ್ಲ ಅಂತ್ಯ ಕಾಲಕ್ಕೆ ಬರುವುದಿಲ್ಲ. ಆದ್ದರಿಂದ ದಾನ ಧರ್ಮ ಮಾಡಿ, ಸ್ವೇಚ್ಛಾಚಾರವನ್ನು ಬಿಟ್ಟು, ಯೋಗ್ಯ ರೀತಿಯಿಂದ ಇರಬೇಕು ಎನ್ನುವುದನ್ನು "ನೆಚ್ಚಬೇಡ ಪ್ರಾಣಿ, ಸಂಸಾರ ಸ್ಥಿರವೆಂದ್ಹೆಚ್ಚಿ ಬಿದ್ದಿಲಿ ನೀನು ಕೆಡಬೇಡ ಕಂಡ್ಯಾ | ಸ್ವೇಚ್ಛೆಯಿಂದಿರದೆ ಧರ್ಮದಿ ನೀನು ನಡೆಪಣ್ಣ | ಬೆಚ್ಚಿದ ಮೇಲುಂಟೆ ಸಂಜನ್ನ ಸ್ಥಿರವೆಂದು "ನಿತ್ಯವಲ್ಲ ಈ | ನಿಕ್ಕಿ ದೇಹವಿದಣ್ಣ" "ಈ ಶರೀರದ ಭ್ರಾಂತಿ ಇನ್ನೇಕೆ ಮಾಡುವೆ? ಧಾರುಣೀ ಧನ ಸ್ತ್ರೀಗೆ ಮರುಳಾಗಬೇಡ" "ಹಿಗ್ಗುವೆ ಯಾಕೋ ಈ ದೇಹಕ್ಕೆ" ಎಂದು ಮುಂತಾಗಿ ಬದುಕಿನ ನಿಸ್ಸಾರತೆಯನ್ನು ಸಾರಿದ್ದಾರೆ. ಕಾಮಿನಿ ಕಾಂಚನಗಳನ್ನು ಕುರಿತು ಹೇಳಿದ ಪದಗಳಂತೂ ಅನೇಕ. "ಯಾರು ಹಿತವರು ನಿನಗೆ ಈ ಮೂವರೊಳಗೆ| ನಾರಿಯೋ ಧಾರುಣಿಯೋ ಬಲು ಧನದ ಸಿರಿಯೋ" ಎಂದು ಪ್ರಶ್ನೆಯನ್ನು ಹಾಕಿ ಆ ಎಲ್ಲ ವಸ್ತುಗಳ ಅಸ್ಥಿರತೆಯನ್ನು ಕ್ಷಣಿಕತೆಯನ್ನೂ ಸಾರಿ ಹೇಳಿದ್ದಾರೆ. ಹೆಣ್ಣಿಗಿಚ್ಛಿಸುವರೇ ವ್ಯರ್ಥ ಇದನ್ನು ಕಣ್ಣು ಮನಗಳಿಂ ನೋಡಲೇ ಬೇಡ |.... ಹಿತಶತ್ರುವಾಗಿ ಕಾಡುವುದು | ನಿಮಿಷ | ಚಿಗಿರಗೊಟ್ಟು ನಿತ್ಯನಾಶಗೊಳಿಸುವುದು || ಹಿತಿಯೂ ಪೂಜ್ಯತೇ ಕೈಯಿಡಿಸುವುದು | ಮುಂದೆ ಶತಜನ್ಮಂಗಳಿಗೆ ಹೊಣೆಯಾಗಿ ನಿಲ್ಲುವುದು ||" ಎಂದು ಇನ್ನೊಂದೆಡೆಯಲ್ಲಿ ಹೇಳಿದ್ದಾರೆ. ದುಗ್ಗಾಣಿ ಬಲು ಕೆಟ್ಟದಣ್ಣಾ | ದುಗ್ಗಾಣಿ ಎಂಬುದು ದುರ್ಜನ ಸಂಘ" ಲೋಕಕ್ಕೆ ಎಂದೆಂದೂ ದುಃಖ ಕಾರಣಕ್ಕೆ |" ಎಂದು ಹಾಡಿದ್ದಾರೆ. ಇದಲ್ಲದೆ ದುರ್ಜನರ ಸಹವಾಸವನ್ನು ತ್ಯಜಿಸಬೇಕು; "ದುರ್ಜನರೆಂದರೆ ಜಾಲಿಯ ಮರ"ವೆಂದೂ, ಅವರಕ್ಕೆ ಸಿಹಿ ಉದರಕ್ಕೆ ಕಹಿಯಾಗಿದ್ದಾರೆಂದೂ ಆದ್ದರಿಂದ ಅಂಥವರ ಸಂಗವನ್ನು ಬೇಡ ಬೇಕು. "ಇರಬೇಕು ಹರಿದಾಸರ ಸಂಗ || ಪರಮ ಜ್ಞಾನಿಗಳ ಸಂಪಾದಿಸಬೇಕು ಶ್ರೀ ಹರಿಯ ನಾಮವನ್ನು ನಾಲಿಗೆಯ ಮೇಲೆ ಬಿತ್ತಬೇಕು, ಗುರುವಿನ ಗುಲಾಮನಾಗಿ ಬೋಧೆ ಪಡೆಯಬೇಕು ವೃಥಾ ಕಾಲಕ್ಷೇಪ ಮಾಡಬಾರದು. "ಮಾನವ ಜನ್ಮ ದೊಡ್ಡದು" ಎಂದಿದ್ದಾರೆ. ಧರ್ಮವೆಂಬ ಮಡಿಕೆಯಲ್ಲಿ | ನವ ಕಲಶ ಗಂಗೆ ತುಂಬಿ | ಸುಮ್ಮಾನ ದುರಿಯು ಹಚ್ಚಿ | ಅರಿವು ಎಂಬ ಹರಿವೆ ಹಾಸಿ | ಹರವಿ ಹಾಲ ಮೊಸರ ತೀದ || ಪರಮ ವೈರಾಗ್ಯದಿಂದಲೇ ಶ್ರೀ ಹರಿಗೆ ಅರ್ಪಿತವೆಂದು "ಬುತ್ತಿಯ ಕಟ್ಟಬೇಕು. ಎಂದಿದ್ದಾರೆ. ದಾನಧರ್ಮ ಮಾಡುವಂತೆ ಕುರಿತು ಮುಚ್ಚಿದಳೇಕೋ ಗಯ್ಯಾಳಿ ಮೂಳಿ ಕದ ಮುಚ್ಚಿದಳೇಕೋ ಕದಲಿ ಅಲ್ಲಾಡುತ್ತಿದೆ! ಒಳಗಿದ್ದ ಪ್ರಾಣವು ಹೊರಗೆ ಹೋದೀತೆಂದು ಹೀಗೆಂದು ಕಟುವಾಗಿ ಟೀಕಿಸಿ ಹಾಡಿದ್ದಾರೆ ಇದೇ ಮಾತನ್ನೇ ಧರ್ಮಕ್ಕೆ ಕೈಬಾರದೀ ಕಾಲ ಪಾಪ ಕರ್ಮಕ್ಕೆ ಮನ ಸೋಲ್ವದೀ ಕಾಲ" ಎಂಬ ಪದದಲ್ಲಿ ಹೇಳಿದ್ದಾರೆ ಸ್ವೇಚ್ಛಾಚಾರಿಗಳಾಗಿ ನಡೆಯುವ ಸ್ತ್ರೀ ಪುರುಷರ ಕುರಿತು "ನಗೆಯು ಬರುತಿದೆ ಎನಗೆ| ಜಗದೊಳಗಿರುವ ಮನುಜರೆಲ್ಲ ಹಾರಣ ಮಾಡುವದ ಕಂಡ| ಪರರ ವನಿತೆಯೊಲುಮೆಗೊಲಿದು ... ಹರಿವ ನೀರೊಳಗೆ ಮುಳುಗಿ ಬೆರಳ ಎಣಿಸುವವರ ಕಂಡು | ಕಾಮ ಕ್ರೋಧ ಮನದೊಳಿಟ್ಟು.... ಸ್ವಾಮಿ ಪುರಂದರ ವಿಠಲನ ನಾಮವ ನೆನೆವರ ಕಂಡ ||" ಎಂದು ವ್ಯಂಗವಾಗಿ ಟೀಕಿಸಿದ್ದಾರೆ.

ಈ ವರೆಗೆ ಪುರಂದರ ದಾಸರ ಪದಗಳ ಸಿಂಹಾವಲೋಕನ ಮಾಡಿದ ಮೇಲೆ ಅವರ ಕೃತಿಯ ಅರಿವಾಗುವುದು. ಅವರು ತಮ್ಮ ಈ ಹಾಡುಗಳ ಮೂಲಕ ಧರ್ಮ ಜಾಗೃತಿಯನ್ನುಂಟು ಮಾಡಿದ್ದಾರೆನ್ನಬಹುದು. ಸಮಾಜದ ಮೇಲೆ ಮುಸುಕಿರುವ ಮೌಢ್ಯದ ಪರೆಯನ್ನು ಕಳಚಿ ಹಾಕಲು ಯತ್ನಿಸಿದ್ದಾರಲ್ಲದೆ ಯಶಸ್ವಿಗಳೂ ಆಗಿದ್ದಾರೆ. ಏಕೆಂದರೆ ಇವರ ನುಡಿ ಸರಳ; ಸಾಮಾನ್ಯರಿಗೂ ತಿಳಿಯುವಂತಹುದು. ಕಾಮ ಕ್ರೋಧ, ಮೋಹ, ಕಪಟ, ಮದ ಮತ್ಸರಗಳೆಂಬ ಷಡ್ವೈರಿಗಳನ್ನು ತರಿದ ತರುವಾಯವೇ ಒಂದು ಸುಂದರವಾದ, ಧನ್ಯವಾದ, ದೇಹವೆಂಬ ದೇಗುಲವನ್ನು ಸೃಷ್ಟಿಸಲು ಸಾಧ್ಯವೆಂಬುದನ್ನು ಅನೇಕ ಒಗೆಯ ಸುಲಲಿತ ನುಡಿಗಳಲ್ಲಿ ಹೇಳಿದ್ದಾರೆ. ಆದುದರಿಂದ ದಾಸರ ಪದಗಳೆಂದರೆ ಧರ್ಮ ಸಾಮ್ರಾಜ್ಯಕ್ಕೆ ಹೋಗಲು ಮಾರ್ಗದರ್ಶನ ಮಾಡುವ ದಾರಿದೀವಿಗೆಗಳಾಗಿವೆ.

ದಾಸ ಪಂಥದವರು ಭಕ್ತಿ ಮತ್ತು ದೇವರ ನಾಮ ಸಂಕೀರ್ತನದ ಹೆದ್ದಾರಿಯಲ್ಲಿ ನಡೆಯಲು ಎಲ್ಲರಿಗೂ ಆಸ್ಪದ ಮಾಡಿಕೊಟ್ಟಿದ್ದಾರೆ. ವರ್ಣಾಶ್ರಮ ಧರ್ಮದಂತೆ ಎಲ್ಲ ಜನರೂ ತಮ್ಮ ತಮ್ಮ ಸ್ವಧರ್ಮವನ್ನು ಪ್ರಾಮಾಣಿಕತೆಯಿಂದ ನಡೆಸಬೇಕು; ಹಾಗೂ ಅನ್ಯರ ಧರ್ಮ ಮತ್ತು ಆಚಾರಗಳನ್ನು ಟೀಕಿಸದೆ, ಸಕಲರನ್ನು ಪ್ರೀತಿಸಬೇಕೆಂದು ಅವರು ಬೋಧಿಸಿದ್ದಾರೆ. ಸತ್ಯ, ಅಹಿಂಸೆ, ಶಾಂತಿ, ಧರ್ಮನಿಷ್ಠೆ, ದೈವಭಕ್ತಿ ಮತ್ತು ಭ್ರಾತೃಪ್ರೇಮಗಳ ಬಗೆ ಸದಾಚಾರಗಳು ಎಲ್ಲ ಧರ್ಮಗಳಿಗೂ ಸಮಾನವಾಗಿವೆ. ಅವುಗಳಂತೆ ನಡೆಯುವುದೇ ಸಹಜೀವನ ಪದ್ಧತಿ. "ಸಹನಾಭವತು ಸಹನೌಭುನಕ್ತು....!" ಎಂದ ಹೇಳಿದಂತೆಯೇ ದಾಸರು, ಸರಳಗನ್ನಡ ಭಾಷೆಯಲ್ಲಿ ಹೇಳಿದ್ದಾರೆ. ಸಾಮಾನ್ಯ ಜನರಿಗೂ ತಿಳಿಯುವಂತೆ ಕೀರ್ತನೆಗಳನ್ನು ರಚಿಸಿ, ಸಾಮಾಜಿಕ ಜೀವನದ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರಿದ್ದಾರೆ.

ಸಿಂಡಿಕೇಟ್ ಬ್ಯಾಂಕು

ನಿಮ್ಮ ಠೇವಣಾತಿಗಳ ಮೇಲೆ ಇನ್ನೂ ಹೆಚ್ಚಿನ ಬಡ್ಡಿ ಈಯುವುದು!
ನಿಮ್ಮ ಹಿತಾಸಕ್ತಿಗಳನ್ನು ದಕ್ಷತೆಯಿಂದ ಕಾಯುವುದು.

ಫೆಬ್ರುವರಿ ತಾರೀಕು 18, 1965ರಿಂದ ಠೇವಣಾತಿಗಳ ಮೇಲೆ ಬಡ್ಡಿಯ ದರವನ್ನು ಹೆಚ್ಚಿಸಲಾಗಿದೆಯೆಂದು ತಿಳಿಸಲು ಸಿಂಡಿಕೇಟ್ ಬ್ಯಾಂಕು ಹರ್ಷಪಡುತ್ತದೆ. ಖಾಯಂ ಠೇವಣಾತಿಗಳ ಮೇಲೆ ಈಗ 5½% ರಿಂದ 7½% ರ ವರೆಗೆ ಬಡ್ಡಿ ಸಲ್ಲುವುದು.

ಫೆಬ್ರುವರಿ ತಾರೀಕು 1, 1965ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲಣ ಬಡ್ಡಿಯ ದರವನ್ನು 3% ರಿಂದ 4% ಕ್ಕೆ ಹೆಚ್ಚಿಸಲಾಗಿದೆ.

ಸೇವಿಂಗ್ಸ್ ಬೇಂಕ್ ಖಾತೆಯವರಿಗೆ ಇನ್ನೂ ಹಲವಾರು ಸೌಲಭ್ಯಗಳಿವೆ.

— ಅತ್ಯುಪಯುಕ್ತ ಬ್ಯಾಂಕ್ ವ್ಯವಹಾರಕ್ಕೆ —

FAITHFUL SB FRIENDLY ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, (ಮೈಸೂರು ರಾಜ್ಯ)

ಶಾಖೆಗಳು: 200ಕ್ಕಿಂತ ಹೆಚ್ಚು

ಸಂಪನ್ಮೂಲಗಳು: 70 ಕೋಟಿಗೂ ಮಿಕ್ಕಿದೆ.

READ & ADVERTISE IN NAVAYUGA WEEKLY

ಚೆಂಗೀಸ ಖಾನ ಸಂತತಿ

ಚೈನೀಯರ ಅಣುಗುಂಡು ಸ್ವಭಾವ

ಲೇಖಕರು: ಶ್ರೀ ಶಿವಶಂಕರ.

"ಚೈನಾ ನಮ್ಮ ಮೇಲೆ ಎಂದೂ ಅಕ್ರಮಣ ನಡೆಸಲಾರದು. ಯಾಕೆಂದರೆ ಒಂದು ಸಮತಾವಾದಿ ರಾಷ್ಟ್ರ ಇನ್ನೊಂದು ಸಮತಾವಾದಿ ಅಥವಾ ಸಮಾಜವಾದ ಮಾದರಿ ರಾಷ್ಟ್ರದ ಮೇಲೆ ಆಕ್ರಮಣ ನಡೆಸುವದೇ ಇಲ್ಲ"ವೆಂದು ಆಸ್ಯಾ ಜ್ಯೋತಿ ನೆಹ್ರೂಜೀ ಆಡುತ್ತಿದ್ದಾಗ "ಇರಲೇಬೇಕು" ಎನ್ನುವ ಆಶೆಯ ಜ್ಯೋತಿ ಜನತೆಯ ಮನಸ್ಸಿನಲ್ಲಿ ಬೆಳಗುತ್ತಿತ್ತು. ಕ್ರಮಶಃ ಅದು "ಇದ್ದರೂ ಇರಬಹುದು" ಎನ್ನುವ ಸ್ಥಿತಿಗೆ ಬಂತು. ಅನಂತರ ಇರಬಹುದೇ? ಪ್ರಶ್ನಾರ್ಥಕ ಚಿನ್ಹೆ ತಾಂಡವವಾಡಲಾರಂಭಿಸಿತು. ಅಷ್ಟರಲ್ಲಿ ಮಕ್ಕಳ ಚಾಚಾ ನೆಹ್ರೂಜೀಯವರು "ಮೋಸಹೋದೆ.... ಚೈನೀಯರು ಬೆನ್ನಿಗೆ ಇರಿದರು...." ಉದ್ಗಾರವೆತ್ತಲಾರಂಭಿಸಿದಾಗ ಜನತೆ ಕಣ್ಣುಜ್ಜಿಕೊಳ್ಳಲಾರಂಭಿಸಿತು. ದೇಶದ ಮೂಲೆಮೂಲೆಯನ್ನು ಸುತ್ತಿ ರಾಷ್ಟ್ರಭಕ್ತಿಯ ಸಂಜೀವಿನಿಯ ನಡೆಸುತ್ತಿರುವ ಭಾರತಮಾತೆಯ ಶ್ರೇಷ್ಠ ಸುಪುತ್ರರು ಆ ಕುರಿತು ಎಚ್ಚರಿಕೆ ನೀಡಿದ್ದಾಗ ಅವರನ್ನು "ಯುದ್ಧಕೋರ" "ಕಮ್ಯೂನಿಸ್ಟರ ವಿರೋಧಿ".... ಅದರಿಂದಲೂ ತೃಪ್ತಿಪಟ್ಟು "ಹುಚ್ಚ"ನೆಂದು ಕರೆಯಲಾಗಿತ್ತು. ಪ್ರಧಾನಿ ಪಟ್ಟದ ವೃದ್ಧ ಜವಾಹರಲಾಲಜೀ ಉದ್ಗಾರವೆತ್ತಿದಾಗ 'ಏನೋ ಇರಬೇಕೆ'ಂದು ವಿಚಾರವಂತರು ಯೋಚಿಸತೊಡಗಿದರು. ಸಾಧಾರಣ ಪಾಮರನಿಗೆ ಆ ವಿಷಯ ಅದ್ಯಾವಾಗಲೋ ಮರೆತು ಹೋಗಿತ್ತು.

ಚೈನೀಯರು ನಮ್ಮ ಮೇಲೆ ಆಕ್ರಮಣ ನಡೆಸದೆ ಇರಬೇಕಾಗಿದ್ದಲ್ಲಿ ನಮ್ಮ ಗುಣ ಸ್ವಭಾವವೂ ಅವರದ್ದೂ ಒಂದೇ ರೀತಿಯದ್ದಾಗಿರಬೇಕು. ಅಂದರೆ ಭಾರತದಂತೆ ಚೈನಾವೂ ಆಕ್ರಮಣ ಮನೋಭಾವನೆ ಇಲ್ಲದ ರಾಷ್ಟ್ರವಾಗಿರಬೇಕು. ವಾಸ್ತವ್ಯ ಸ್ಥಿತಿ ಹಾಗಿರುವದಿಲ್ಲ. ಕೆಲವು ಬಾರಿ ಚೈನಾವು ಜಗದ್ಗುರು ಭಾರತದ ಮೇಲೆ ಆಕ್ರಮಣ ನಡೆಸಲು ಪ್ರಯತ್ನಿಸಿತ್ತು. ಆದರೆ ಅದರಿಂದ ಅದು ಕೈ ಸುಟ್ಟುಕೊಂಡಿತ್ತು. ಶ್ರೀಲಂಕೆಯ ಇತಿಶ್ರೀ ಮಾಡಬಿಡಲು ಅದು ಹವಣಿಸಿರುವದನ್ನು ಅದಾಗಲೇ 'ನವಯುಗ'ವು ವಾಚಕರಿಗೆ ಸ್ಪಷ್ಟಪಡಿಸಿರುತ್ತದೆ. ಅದೆಂತು ಅವರಲ್ಲಿ ಮಹತ್ವಾಕಾಂಕ್ಷೆಯ ಗುಣ ರಕ್ತಗತವಾಗಿಕೊಂಡಿದೆಂಬುದನ್ನು ಕಳೆದೆರಡು ವಾರಗಳಲ್ಲಿ ಬಡಜೆ 'ನವಯುಗ' ವಾಚಕರಿಗೆ ತಿಳಿಸಿರುತ್ತದೆ. ಈ ವಾರ ಅವರ ಗುಣ ಸ್ವಭಾವದ ಸ್ಥೂಲ ಪರಿಚಯವನ್ನು ಬೋಂಬಾಯಿಯ ಶ್ರೀ ಕಿಶನ್‌ಚಂದ್ ಮಾಲ್ಕಾನಿಯವರ ಲೇಖನದಿಂದ ಕೆಲ ವಿಷಯಗಳನ್ನು ಆರಿಸಿಕೊಂಡು ಇಲ್ಲಿ ಕೊಡಲಾಗಿರುತ್ತದೆ.

ಚೈನಾ ಮತ್ತು ಭಾರತ ಬಹಳ ಹಿಂದಿನಿಂದಲೂ ಮಿತ್ರ ರಾಷ್ಟ್ರಗಳಾಗಿದ್ದುವೇನು? ಮಾವೋ ಚೌ-ಎನ್-ಲ್ಯಾ ಅಲ್ಲದೆ ಶ್ರೀ ಜವಾಹರಲಾಲಜೀಯವರು ನಾವು ಅತ್ಯಂತ ನಿಕಟ ಸಂಪರ್ಕವುಳ್ಳ ನೇಹಿಗ ರಾಷ್ಟ್ರಗಳೆಂದು ನುಡಿಯುತ್ತಿದ್ದರು. ಆದರೆ ಅದೆಂದೂ ಚೈನೀ ಡ್ರೇಗನ್ ಭಾರತದ ಗೋವನ್ನು ನುಂಗಲು ಹವಣಿಸಿಲ್ಲವೆಂದಲ್ಲ. ಹಲವಾರು ಬಾರಿ ಹವಣಿಸಿತ್ತು. ಅವಾಗಲೆಲ್ಲಾ ಗೋವಿಂದನು ಭಾರತವನ್ನು ರಕ್ಷಿಸಿರುವನು. ಡ್ರೇಗನ್ ಮರ್ದನ ನಡೆದಿತ್ತು. ಆದರೆ ಭಾರತ ಅದೆಂದೂ ಅದ್ಯಾವ ರಾಷ್ಟ್ರದ ಮೇಲೂ, ಅದರಲ್ಲೂ ಚೈನಾದ ಮೇಲೆ ದಂಡೆತ್ತಿಕೊಂಡು ಹೋಗುದ್ದೆಂಬುದೇ ಇಲ್ಲ. ವಾಸ್ತವ್ಯ ಪರಿಸ್ಥಿತಿ ಹಾಗಿದೆಯಾದರೂ ಉಪ್ಪುಂಡ ಮನೆಗೆ ಎರಡು ಬಗೆಯುತ್ತಿರುವ ಇಲ್ಲಿಯ ಕಮ್ಯೂನಿಸ್ಟರು ಭಾರತನೇ ಆಕ್ರಮಣ ನಡೆಸಿರುತ್ತದೆಂದು ಅಪಪ್ರಚಾರ ನಡೆಸಿಕೊಂಡು ಮಾವೋ, ಚೌ—ಎನ್-ಲ್ಯಾಗಳನ್ನು ಪೂಜಿಸುತ್ತಿದ್ದಾರೆ.

ಶ್ರೀ ಕಿಶನ್ ಚಂದ ಮಾಲ್ಕಾನಿಯವರು ಸಾಧಾರಣ ಇಪ್ಪತ್ತಮೂರು ವರ್ಷಗಳ ಹಿಂದೆ ಶಾಂಗ್ಯಾಯಲ್ಲಿ ಮೂರು ವರ್ಷ ಕಳೆದಿರುವರು. ಆ ಅನುಭವದ ಮೇಲೆ ಅವರು ಚೈನೀಯರ ಗುಣ ಸ್ವಭಾವಗಳನ್ನು ತಿಳಿಸುತ್ತಿದ್ದಾರೆ. ಅವರು ಭಾರತಕ್ಕೂ ಚೈನಾಕ್ಕೂ ಅಂತಹ ಸಂಬಂಧವೇನೂ ಇದ್ದಿಲ್ಲವೆಂದೂ, ಕೇವಲ ಒಂದು ಸಾವಿರದೈನೂರು ವರ್ಷಗಳ ಹಿಂದೆ ಬೌದ್ಧ ಬಿಕ್ಕುಗಳಿಂದ ಸಂಪರ್ಕ ಬೆಳೆಯಿತೆಂದೂ ಅಭಿಪ್ರಾಯ ಪಟ್ಟಿರುವರು. ಆದರೆ ಅದು ಅಷ್ಟು ಸರಿ ಎನಿಸುವದಿಲ್ಲ.! ಭಾರತಕ್ಕೂ ಚೈನಾಕ್ಕೂ ಸಂಪರ್ಕ— ಸಂಬಂಧ ಇದ್ದೇ ಇತ್ತು., ಆದರೆ ಆ ಭಾದುರಷದ ಬಲಾಬಲವನ್ನು ಹೊಂದಿಕೊಂಡಿತ್ತು, ಸಂಬಂಧ ಇದ್ದಿಲ್ಲವೆಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಲು ಕಾರಣವೆಂದರೆ ಒಬ್ಬರನ್ನೊಬ್ಬರು ಅರಿತು ಕೊಂಡಿರುವಾಗ ಸ್ನೇಹ ಬೆಳೆಯುವುದು ಕಷ್ಟವೆನ್ನುವದನ್ನವರಿಗೆ ಹೇಳಬೇಕಾಗಿತ್ತು. ಶಾಂತಿಯ ಪ್ರತೀಕ ಜವಾಹರಲಾಲಜೀಯವರು "ಹಿಂದಿ—ಚೀನೀ ಭಾಯಿ ಭಾಯಿ" ಎಂದು ಘೋಷವೆತ್ತಿದರೂ, ಸಂಬಂಧವಿರದಿದ್ದ ಕಾರಣ ಸ್ನೇಹ ಬೆಳೆಯದೆ ನಾವು ಮೋಸಹೋಗಬೇಕಾಯಿತೆಂದು ಅವರು ಹೇಳುತ್ತಿದ್ದಾರೆ. ತೋರಿಕೆಗೆ ಅದು 'ಇರಬಹುದೆಂಬ'ಂತೆ ಕಂಡು ಬಂದರೂ, ಸಂಬಂಧವು ಬಲಾ- ಬಲಗಳ ಮೇಲೆ ಹೊಂದಿಕೊಂಡಿತ್ತೆನ್ನುವ ಸತ್ಯಾಂಶವನ್ನು ಮರೆಮಾಚಲು ಸಾಧ್ಯವಿಲ್ಲ. ಮಿತ್ರತ್ವವು ನೈಜ ಘಟನೆಯ ಮೇಲೆ ಹೊಂದಿಕೊಂಡಿದೆ ವಿನಃ ಪ್ರೀತಿಪಣೆಯ ಮೇಲೆ ಹೊಂದಿಕೊಂಡಿಲ್ಲವೆಂದು ಅವರೇ ಹೇಳುತಿದ್ದಾರೆ. ನೈಜಸಂಗತಿಯಾದರೂ ಏನು? ಭಾರತವನ್ನು ಚೈನಾವು ಗುರುವೆಂದೇ ಮರ್ಯಾದೆಯಿಂದ ಕಾಣುತಿತ್ತು. ಅಲ್ಲಿಂದ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು, ಕಲಿತುಕೊಂಡು ಹೋಗುತ್ತಿದ್ದರು. ಅವರಿಗೆ ಅದಿನಿತೂ ಅಡೆತಡೆ ಇರಲಿಲ್ಲ. ಆದರೂ ಕೆಲವೊಮ್ಮೆ ಭ್ರಮೆಗೊಳಗಾಗಿ ಅವರು ಆಕ್ರಮಣ ನಡೆಸುತ್ತಿದ್ದದ್ದುಂಟು, ಅವರು ಅದರ ಫಲವನ್ನು ಅನುಭವಿಸಿದ್ದಾರೆ. ಇಂದಿನ ದುರ್ಘಟನೆಯೂ ಅಷ್ಟೆ. ದಿಲ್ಲಿ ಗದ್ದುಗೆಯ ಮೇಲೆ ದುರ್ಬಲ ಸರಕಾರ ಇರುವ ವರೆಗೆ ಆಕ್ರಮಣ ಮುನ್ನಡೆಯ ಬಹುದು, ಅಷ್ಟೆ. ಅನಂತರ ಪ್ರಬಲ ಸರಕಾರ ಬಂತೆಂದರೆ "ಮಾಡಿದ್ದುಣ್ಣೊ ಮಹಾರಾಯಾ"ಇದ್ದೇ ಇದೆ. ಪ್ರಾಯಶ್ಚಿತ್ತ ಅನುಭವಿಸಿಯೇ ತೀರಬೇಕು, ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಆದರೆ ಆ ಜನತಾ ಸರಕಾರ ಅದೆಂದು ಬರುತ್ತದೆಯೋ!

"ಚೈನೀ ನಾಗರೀಕತೆಯು ಬಹಳ ಹಿಂದಿನದ್ದು. ಅದು ಕನ್‌ಫ್ಯೂಶಿಯಸ್ ಮುಂತಾದ ಮಹಾತ್ಮರಿಗೆ ಜನ್ಮವೆತ್ತಿರುತ್ತದೆ. ಚೈನೀಯರು ಉತ್ತಮ ಕಲಾಕಾರರು. ಅವರು ಯೋಗ್ಯ ಯಾಂತ್ರಿಕ ತಜ್ಞರು ಅಲ್ಲದೆ ಅನುಭವಶಾಲೀ ವ್ಯಾಪಾರಸ್ಥರು. ವೈಯಕ್ತಿಕವಾಗಿ ಅವರು ಉತ್ತಮ ಸ್ನೇಹಿತರು. ಆದರೆ ಅವರು ಬಾರೀ ಕ್ರೂರಿ ಜನರು.

"ಆದರೆ ಭಾರತದಲ್ಲಿ ನಾವು ರಕ್ತ ಕಂಡೊಡನೆ ಸ್ಮೃತಿ ತಪ್ಪಿ ಬಿದ್ದುಬಿಡುತ್ತೇವೆ. ಚೈನಾದಲ್ಲಿ ಕೊಲೆಯನ್ನು ಅದ್ಯಾರೂ ದೊಡ್ಡ ವಿಷಯವನ್ನಾಗಿ ತಿಳಿದುಕೊಳ್ಳುವುದಿಲ್ಲ. ಚೈನೀ ಕಳ್ಳನು ಕೇವಲ ಉಂಗುರವನ್ನೇ ಮಾತ್ರ ಕದಿಯುವದಿಲ್ಲ. ಅವನು ಬೆರಳನ್ನು ಕತ್ತರಿಸಿಯೇ ಉಂಗುರವನ್ನು ಕದಿಯುತ್ತಾನೆ"

"ನಾನು ಅಲ್ಲಿದ್ದಾಗ ಶಾಂಗ್ಯಾಯ ಜನರು ರಸ್ತೆಗಳಲ್ಲಿ ಜನರು ಸತ್ತುಬೀಳುತ್ತಿದ್ದರು. ಆಗ ಹಸಿವನ್ನು ತಾಳಲು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ಆದರೆ ಯಾರೂ ಅತ್ತ ಲಕ್ಷ್ಯ ಕೊಡುತ್ತಿರಲಿಲ್ಲ."

"ಸಾಧಾರಣ ಹದಿಮೂರು ವರ್ಷಗಳ ಹಿಂದೆ, ಕೊರಿಯಾ ಕಾಳಗದ ಕೊನೆಯಲ್ಲಿ ಅಲ್ಲಿಯ ಓರ್ವ ಮಂತ್ರಿಯು ಮಾಡಿದ್ದ ಮಾತುಗಳು ಭಾರತೀಯರ ಕಣ್ತೆರೆಸಲು ಸಾಕು. ಅವರು ಪೇಕಿಂಗ್ ಆಕಾಶವಾಣಿಯಲ್ಲಿ ತನ್ನ ಭಾಷಣವನ್ನು ಮಾಡಿದ್ದರು. ಹನ್ನೆರಡು ಲಕ್ಷ 'ಪ್ರತಿಗಾಮಿಗಳು' ಕೊಲ್ಲಲ್ಪಟ್ಟಿರುವರೆಂದು ಅವರಂದು ಹೇಳಿರುವರು. ಈ ಸುದ್ದಿ ಭಾರತದ ಪತ್ರಿಕೆಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿತ್ತೇ? ಇಲ್ಲವೇ, ಇಲ್ಲ. ಎಲ್ಲೋ ಒಂದು ಮೂಲೆಯಲ್ಲಿ ಕೆಲ ವಿಷಯಗಳು ಮಾತ್ರ ಪ್ರಕಟವಾಗಿದ್ದುವು. ಅದಕ್ಕೆ ಕಾರಣವೇನು? ನೆಹ್ರೂಜೀಯವರ ನಿರಂತರ ನುಡಿಗಳು! ಸ್ನೇಹತ್ವಕ್ಕೆ ಅದಲ್ಲಿ ಸಂಚಕಾರ ಬರುತ್ತದೋ ಎಂಬ ಭ್ರಮೆಯಿಂದ ನೈಜ ಸಂಗತಿಯನ್ನು ಅದು ಮರೆಮಾಚಲಾಯಿತು. ಅಂತಹ ಕೊಲೆಗಡುಕ ರಾಷ್ಟ್ರದೊಂದಿಗೆ ಅಹಿಂಸಾ ಪ್ರಿಯ ಭಾರತ ಕೈ ಮಿಲಾಯಿಸಿಕೊಳ್ಳಲು ಸಾಧ್ಯವೇ?

ಆದರೂ ಭಾರತವು ಶಾಂತಿ-ಸಂಧಾನದ ಮಾತುಕತೆಗಳ ಮೂಲಕ ಎಲ್ಲವನ್ನೂ ಬಗೆಹರಿಸಿಕೊಳ್ಳಬೇಕೆಂದು ಇಲ್ಲಿರುವ ಚೈನೀ ಪ್ರೇಕಸಿನ ಬಾಲ ಹಿಡಿಯುವ ಕ

(ಹನ್ನೊಂದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಇದು ಶುಭ ಸೂಚನೆಯಲ್ಲ!

ನಾವು ಸುಖದ ಮರೀಚಿಕೆಯ ಬೆಂಬತ್ತಿದ್ದೇವೆ

ದೇಶದ ಪುನಾರಚನೆಯು ಇಂದಿನ ದಿನಗಳಲ್ಲಿ ಸುಖವನ್ನು ದುಡಿಮೆಯಲ್ಲಿ ಕಾಣಬೇಕು

ಬರೆದವರು: ಶೃಂಗಾರಿ ತನಯ

ಕಲ್ಯಾಣ ರಾಜ್ಯ ಕಟ್ಟುವುದೇ ನಮ್ಮ ಜನತಾ ಸರಕಾರದ ಗುರಿ. ಈ ಗುರಿಯ ಸಾಧನೆಗಾಗಿ ಸರಕಾರ ಅನೇಕ ಯೋಜನೆಗಳನ್ನು ಜ್ಯಾರಿಗೆ ತಂದು ಕಾರ್ಯರೂಪಕ್ಕಿಳಿಸುತ್ತದೆ. ಆದರೆ, ಪರಿಶೀಲಿಸಿದಾಗ ದೇಶದ ಹಲವಾರು ಸಮಸ್ಯೆಗಳು ಇನ್ನೂ ಉಲ್ಬಣಾವಸ್ಥೆಯನ್ನೇ ಮುಟ್ಟುತ್ತಿರುವುದು ತೀರಾ ಶೋಚನೀಯ ಸಂಗತಿ. ಇಂಥವುಗಳಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯೂ ಒಂದು. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಈ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ೨ ಕೋಟಿಗೂ ಮೀರಬಹುದೆಂದು ತಜ್ಞರು ಅಂದಾಜು ಮಾಡಿರುತ್ತಾರೆ. ಈ ಸಂಖ್ಯೆಯು ನಿಜವಾಗಿಯೂ ಭೀತಿಯನ್ನು ಹುಟ್ಟಿಸುವುದಿಲ್ಲವೆ?

ನೌಕರಿಯ ಮೇಲೆ ವ್ಯಾಮೋಹ

ವಿದ್ಯಾರ್ಜನೆಯ ಗುರಿ ಕೇವಲ ನೌಕರಿ ಗಳಿಸುವುದೆಂಬುದೇ ಇಂದು ನಮ್ಮ ಜನರಲ್ಲಿರುವ ತಪ್ಪು ಕಲ್ಪನೆ. ತನ್ನ ಮಗನು ಓದಿ, ಕಲಿತು ಡಿಗ್ರಿ ಪಡೆದು ಕಲೆಕ್ಟರನೋ, ತಹಶೀಲ್ದಾರನೋ ಆಗಬೇಕೆಂದು ಪ್ರತಿಯೊಬ್ಬ ತಂದೆಯೂ ಬಯಸುತ್ತಾನೆ. ಆ ಉದ್ದೇಶದಿಂದ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುತ್ತಾನೆ. ವಿದ್ಯಾಭ್ಯಾಸ ಮುಗಿದ ತಕ್ಷಣ ನೌಕರಿಯ ಬೇಟೆ ಆರಂಭವಾಗುತ್ತದೆ. ಸ್ವಪ್ರತಿಭೆಯಿಂದಲೇ ಇನ್‌ಫ್ಲುಯೆನ್ಸಿನಿಂದಲೇ, ಯಾರ್‍ಯಾರ ಕೈಕಾಲು ಹಿಡಿದೇ ಅಂತೂ, ಒಂದು ನೌಕರಿ ದೊರೆಯಿತೆಂದರೆ ಅಲ್ಲಿಗೆ ಜೀವನ ಸಾರ್ಥಕ ಎಂದು ಭಾವಿಸುವವರೇ ಅನೇಕ! ತಮ್ಮ ಕುಲಕಸುಬನ್ನು ತೊರೆದು ಈ ರೀತಿ ನೌಕರಿಯ ದಾಸರಾಗಿ, ಸುಖ ಜೀವನ ನಡೆಸುವೆವೆಂಬ ಭ್ರಮೆಯನ್ನು ಕೆಲವರು ತಳೆದಿದ್ದಾರೆ. ನೌಕರಿ ದೊರೆತರೆ, ದಿನಯಾಪನೆಯು ಸುಲಭದ ಕಾರ್ಯ ಎಂದು ಎಲ್ಲರ ಭಾವನೆ. ಆದರೆ ಪರಿಸ್ಥಿತಿ ಹೀಗಿದೆಯೆ? ಜೀವನದಲ್ಲಿ ಸುಖವೆಂದರೆ ಇಲ್ಲಿ ಮಾತ್ರವೆ? ಇದನ್ನು ನಾವು ಇಂದು ತೀವ್ರ ಆಲೋಚಿಸಬೇಕು.

ಕುಲ ಕಸುಬು ಹೀನವಲ್ಲ

ತಮ್ಮ ಹಿರಿಯರು ಮಾಡಿಕೊಂಡು ಬಂದ ಕುಲ ಕಸುಬು ಹೀನ ಎಂಬ ಭಾವನೆ ಇಂದಿನ ವಿದ್ಯಾವಂತರಲ್ಲಿ ಮೂಡಿದೆ. ಅದು ತಮ್ಮ ಗೌರವಕ್ಕೆ ಕುಂದು; ವಿದ್ಯಾವಂತರಾದವರು ಕುರ್ಚಿಯಲ್ಲಿ ಕುಳಿತು ಗುಮಾಸ್ತಗಿರಿ ನಡೆಸಿದರೇನೇ ಪುರುಷಾರ್ಥ ಎಂಬ ತಪ್ಪು ಕಲ್ಪನೆ ನಮ್ಮ ಯುವಕರಲ್ಲಿದೆ. ಇಂದಿನ ವಿದ್ಯೆ ಈ ಭಾವನೆಯನ್ನೇ ನಮ್ಮ ಯುವಕರಲ್ಲಿ ಮೂಡಿಸುವುದಾದರೆ, ಇದು ತೀರಾ ಶೋಚನೀಯ ವಿಚಾರ. ವಿದ್ಯಾರ್ಜನೆಯು ಜ್ಞಾನಾಭಿವೃದ್ಧಿಗೆ ನೆರವಾಗುವುದರ ಜತೆಗೆ ಸ್ವತಂತ್ರ ಜೀವನವನ್ನು ನಡೆಸುವುದಕ್ಕೂ ಸಹಾಯಕವಾಗಬೇಕು. ವಿದ್ಯೆ ಕಲಿತು ನಮ್ಮ ಯುವಕರು ತಮ್ಮ ಕುಲ ಕಸುಬನ್ನು ಸುಧಾರಿಸಿದ ರೀತಿಯಲ್ಲಿ ನಡೆಸಿಕೊಂಡು ಬರಬಹುದು. ಬಡಗಿಯ ಮಗನು, ವಿದ್ಯಾರ್ಜನೆಯ ಜತೆಗೆ ತನ್ನ ಕುಲ ಕಸುಬನ್ನೂ ಕಲಿತನೆಂದಾದರೆ, ವಿದ್ಯಾರ್ಜನೆಯ ಬಳಿಕ ಆತ ಒಂದು 'ಫರ್ನಿಚರ್ ವರ್ಕ್ಸ್'ನ್ನೇ ತೆರೆದು, ಆಧುನಿಕ ವಿದ್ಯುತ್ ಸಲಕರಣೆಗಳ ಮೂಲಕ ಬಡಗಿತನವನ್ನು ಒಂದು ಲಾಭದಾಯಕವಾದ ಉದ್ಯೋಗವನ್ನಾಗಿ ಮಾಡಿಕೊಳ್ಳಬಹುದು. ಕಮ್ಮಾರನ ಮಗನು ತಾಂತ್ರಿಕ ಶಿಕ್ಷಣ ಪಡೆದು ವರ್ಕ್‌ಶಾಪನ್ನು ತೆರೆದು ಹೇರಳ ಸಂಪಾದನೆ ಮಾಡಬಹುದು. ಬೆಸ್ತನ ಮಗನಿಗೆ ದೊರೆಯುವ ವಿದ್ಯಾಭ್ಯಾಸ ಆಧುನಿಕ ಮೀನುಗಾರಿಕೆ ಮತ್ತು ಬಲವು ಹರಿಸಲು ನೆರವಾಗಬೇಕು. ಹೀಗೆ ನಮ್ಮ ಎಲ್ಲಾ ಕುಲ ಕಸುಬುಗಳಿಗೂ ಹೊಸತನವನ್ನು ಆಧುನಿಕತೆಯನ್ನು ಕೊಡುವಂತಾದರೆ, ಇದರಿಂದ ಹೆಚ್ಚು ಲಾಭವು ದೊರೆತೀತು. ಗುಮಾಸ್ತಗಿರಿ, ಆಫೀಸಿನ ಕ್ಲಾರ್ಕ್ ಆಗಿ ಪಡೆಯುವ ಸಂಬಳಕ್ಕಿಂತ ಅಧಿಕ ಉತ್ಪನ್ನ ಈ ತರದ ಕುಲ ಕಸುಬುಗಳಿಂದ ಮಾಡಲು ಸಾಧ್ಯವಿದೆ. ಇದನ್ನು ನಮ್ಮ ಯುವಕರು ಯೋಚಿಸಬೇಕು. ನಮ್ಮ ಹಳ್ಳಿಯ ಹಲವಾರು ಉದ್ಯೋಗಗಳಿಗೆ ನವೀನತೆಯ ಒಪ್ಪವನ್ನು ಕೊಟ್ಟು, ಅವುಗಳನ್ನು ಲಾಭದಾಯಕ ಉದ್ಯೋಗಗಳನ್ನಾಗಿ ಮಾಡಬೇಕು.

ಹಳ್ಳಿಗಳು ಹಾಳಾಗುತ್ತಿವೆ

ಇಂದು ನಮ್ಮ ಹಳ್ಳಿಗಳ ಚಿತ್ರವು ಏನೇನೂ ಸಮಾಧಾನಕರವಾಗಿಲ್ಲ. ಹಳ್ಳಿಗಳು ಹಾಳಾಗುತ್ತಿವೆ ಎಂದು ಬಹಳ ಬೇಸರದಿಂದ ಬರೆಯಬೇಕಾಗಿದೆ. ಹಳ್ಳಿಯ ಜನ ಇಂದು ಪೇಟೆಯ ಜೀವನ ಸುಖ ಎಂಬ ಭಾವನೆ ತಾಳಿ, ಅಲ್ಲಿಗೆ ವಲಸೆ ಹೋಗತೊಡಗಿದ್ದಾರೆ. ಹಿಂದೆ, ಮಣ್ಣಲ್ಲೇ ಹೊನ್ನನ್ನು ಕಂಡ ನಮ್ಮ ಗ್ರಾಮೀಣ ಜನತೆ, ಇಂದು ಪೇಟೆಯಲ್ಲೇ ಸುಖ ಜೀವನವಿದೆಯೆಂದು ಭಾವಿಸಿದ್ದಾರೆ. ಗದ್ದೆಯಲ್ಲಿ ದುಡಿದು, ಮೈ ಕೆಸರಾಗಿಸಿ ಕೊಂಡರೂ ದಿನಕ್ಕೆ ಎರಡು ರೂಪಾಯಿಗಳ ಗಳಿಕೆ ಇಲ್ಲದಿರುವಾಗ, ಪೇಟೆಯಲ್ಲಿ ನಾಲ್ಕು ಹೊರೆ ಸಾಮಾನು ಹೊತ್ತು ನಾಲ್ಕು ರೂಪಾಯಿ ಗಳಿಸುವುದೇ ಸುಲಭವಲ್ಲವೇ ಎಂಬ ಭಾವನೆ ಅವರಲ್ಲಿ ಮೂಡಿದೆ. ಇದು ಕೆಲಮಟ್ಟಿಗೆ ಸತ್ಯವಾಗಿರಬಹುದು. ಇದರ ದೆಸೆಯಿಂದ ಹಳ್ಳಿಗಳಲ್ಲಿ ಬೇಸಾಯದ ಕೆಲಸಕ್ಕೆ ಜನ ಸಿಗದಂತಾಗಿದೆ. ನಿರುದ್ಯೋಗ ದೇಶದಲ್ಲಿ ಹಬ್ಬಿದೆ ಎಂದು ಹೇಳುವಾಗ ಹಳ್ಳಿಗಳ ಪರಿಸ್ಥಿತಿ ತೀರಾ ವಿರುದ್ಧವೆನಿಸಿದೆ. ಕೂಲಿಗೆ ಜನ ಸಿಗುವುದಿಲ್ಲ. ಭತ್ತ ಕುಟ್ಟಲು ಹೆಂಗಸರು ಒಪ್ಪುವುದಿಲ್ಲ. ಹನ್ನೆರಡು ವರ್ಷ ದಾಟಿದ ಕೂಡಲೇ ಹುಡುಗರು ಶಾಲೆಗೆ ಶರಣು ಹೊಡೆದು ಬೊಂಬಾಯಿ, ಮದ್ರಾಸು, ಬೆಂಗಳೂರುಗಳ ಕಡೆ ಹೋಗುತ್ತಾರೆ. ಪರವೂರಲ್ಲಿ ಸುಖ ಜೀವನವನ್ನು ಅವರು ಕಾಣುತ್ತಿದ್ದಾರೆ. ಹೀಗಾಗಿ ಇಂದು ಹಳ್ಳಿಗಳು, ಕೆಲಸಗಾರರಿಲ್ಲದೆ, ಹಾಳಾಗುತ್ತಿವೆ ಎಂದು ವಿಷಾದದಿಂದ ಬರೆಯಬೇಕಾಗಿದೆ. ಕೃಷಿಯನ್ನು ಕಡೆಗಣಿಸಲಾಗಿದೆ.

ನಮ್ಮ ರೈತ ಬಂಧುಗಳೇ ಇಂದು ಕೃಷಿಯನ್ನು ಕಡೆಗಣಿಸಿದ್ದಾರೆ. ಇದು ಅವರ ತಪ್ಪೆಂದೂ ಹೇಳಲಾಗುವುದಿಲ್ಲ. ರೈತರು ತಮ್ಮ ಮಕ್ಕಳನ್ನು ಕೃಷಿ ಕೆಲಸದಲ್ಲಿ ತರಬೇತಿಗೊಳಿಸುವುದಿಲ್ಲ. ತಾನು ಕಷ್ಟಪಟ್ಟದ್ದೇ ಸಾಕು, ಮಕ್ಕಳಾದರೂ ಇನ್ನು ಸುಖವಾಗಿರಲಿ ಎಂಬ ಭಾವನೆಯಿಂದ ಅವರಿಗೆ ಓದು ಕಲಿಸಿಯೋ, ಅವರನ್ನು ಪರವೂರಿಗೆ ಕಳುಹಿಸಿಯೋ ಅವರನ್ನು ಬೇಸಾಯದ ಕಸುಬಿನಿಂದ ದೂರ ಇಡುತ್ತಿದ್ದಾರೆ. ಬೇಸಾಯಗಾರರಲ್ಲಿ ಸ್ಥಿತಿವಂತರು ಅನುಕೂಲಸ್ಥರಾದವರು ಕೂಡಾ, ತಮ್ಮ ಮಕ್ಕಳಲ್ಲಿ ಯಾರನ್ನೂ ಬೇಸಾಯದಲ್ಲಿ ತರಬೇತಿಮಾಡುವುದಿಲ್ಲ. ಮಕ್ಕಳನ್ನು ಇತರ ಉದ್ಯೋಗಗಳಿಗೆ ಹಾಕಿ, ಅವರಿಗೆ ಹಳ್ಳಿಯ ಜೀವನ ಸಲ್ಲದ ಜೀವನ ಎಂಬ ಭಾವನೆಯನ್ನು ಮೂಡಿಸುತ್ತಾರೆ. ನಮ್ಮ ಎಷ್ಟು ಜನ ಹಳ್ಳಿಯ ಜಮೀನ್ದಾರರ ಮಕ್ಕಳು ಕೃಷಿಯನ್ನು ಅವಲಂಬಿಸುತ್ತಿದ್ದಾರೆ? ತೀರಾ ಅಲ್ಪ. ಇದರ ದೆಸೆಯಿಂದ, ಹಳ್ಳಿಗಳಲ್ಲಿ ಜನನಿಬಿಡತೆ ಕಡಿಮೆಯಾಗಿದೆ ಎನ್ನೋಣವೇ?

ಕಾಯಕಷ್ಟದಲ್ಲಿ ಮನಸ್ಸಿಲ್ಲ

ಇಂದು ಸರ್ವ ಸಾಮಾನ್ಯವಾಗಿ ದುಡಿಯುವ ವರ್ಗಕ್ಕೆ ಕಾಯಕಷ್ಟದಲ್ಲಿ ಮನಸ್ಸಿಲ್ಲ. ಎಲ್ಲರೂ ಸುಲಭದ ರಾಗೂ ಸುಖ

(ಹತ್ತನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ವಿಠಲ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

H.R.C.O.P. No. 2/1965.

ಕೆ. ಪದ್ಮನಾಭ ಭಟ್ಟ —ಅರ್ಜಿದಾರ

ಮತ್ತು

ಕೆ. ಶ್ರೀನಿವಾಸ ರಾವ್, ಶ್ರೀ ಮಂಜುನಾಥ ಮೋಟರ್ ಸರ್ವಿಸಿನಲ್ಲಿ ನೌಕರನಾಗಿದ್ದವ (Door No. 2-2-57A) ಉಡ್ಪಿ ಕಸ್ಬಾ ಸಿರಿಬೀಡು. —ಎದ್ರಿ

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವುದೇನಂದ್ರೆ:—

ಸದ್ರಿ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರನು ಎದ್ರಿಯ ತಾಬೆಯಲ್ಲಿರುವ Door No. 2-2-57A ಕಟ್ಟಡದ ಸ್ವಾಧೀನತೆ ಬಗ್ಗೆ ದಾಖಲ್ಲ ಮಾಡಿರುವ ಮೇಲ್ಕಂಡ ಅರ್ಜಿಯನ್ನು ಎದ್ರಿಯ ಅಪ್ಪರ ನೋಟಿಸು ಬಗ್ಗೆ ತಾ. 12-1-65ಕ್ಕೆ ಇಟ್ಟಿರುವುದ್ರಿಂದ ಎದ್ರಿಗೆ ಆಕ್ಷೇಪಯಿದ್ದಲ್ಲಿ ಸದ್ರಿ ತಾ. 12-4-65ನೇ ದಗಲು ಘಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಎದ್ರಿಯ ಗೈರುಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವುದು.

P. V. ACHARYA,

Vakil for Petitioner.

ಉಡ್ಪಿ, ತಾ. 18-3-1965.

ಭಾರತ ದರ್ಶನ

ಗ್ರಾಮಾಂತರ

ಔದ್ಯಮೀಕರಣಕ್ಕೆ ಶಕ್ತಿಯನ್ನೊದಗಿಸುವುದು ಅತ್ಯಗತ್ಯ. ಇಂಧನ ಶಕ್ತಿಯು ಹ್ರಾಸಗೊಳ್ಳುವುದು ಮಾತ್ರವಲ್ಲದೆ ಅದು ಬಹು ತುಟ್ಟಿಯದೂ ಆಗಿದೆ. ಅದಕ್ಕಾಗಿಯೇ ನೀರಿನಲ್ಲಿ ಅಡಗಿರುವ ಭೀಮ ಶಕ್ತಿಯನ್ನು ಕರಗತ ಮಾಡಿಕೊಳ್ಳುವ ಸಾಹಸವಿಂದು ಯಶಸ್ವಿಯಾಗಿದೆ. ಇದನ್ನೇ ನಾವು ಜಲವಿದ್ಯುತ್ತೆನ್ನುತ್ತೇವೆ. ಮಳೆಯನ್ನೇ ನಂಬಿರುವ ಭಾರತೀಯ ರೈತನನ್ನು ಅದೃಷ್ಟದಾಟದಿಂದ ಬಿಡುಗಡೆ ಮಾಡಲು ನದಿಗಳಿಗೆ ಅಡ್ಡವಾಗಿ ಕಟ್ಟೆಗಳನ್ನು ಕಟ್ಟಿ ನೀರಾವರಿಯ ಸೌಕರ್ಯವನ್ನು ಒದಗಿಸಲಾಯಿತು. ಅದರೊಂದಿಗೇ ಜಲವಿದ್ಯುತ್ತಿನ ಉತ್ಪಾದನೆಯೂ ಸಾಧ್ಯವಾಗುವಂತಾಗಿದೆ. ಜಲವಿದ್ಯುತ್ತು ಇಂದು ಪ್ರಪಂಚದ ಜೀವನವನ್ನೆಲ್ಲಾ ಮಾರ್ಪಡಿಸಿದೆ. ಯಂತ್ರಗಳಿಗೆ, ಕೈಗಾರಿಕೆಗಳಿಗೆ, ನೀರಾವರಿ ಯಂತ್ರಗಳಿಗೆ ಚಾಲಕ ಶಕ್ತಿಯಾಗಿದೆ. ಇಂದು ವಿದ್ಯುಚ್ಛಕ್ತಿ ಮಾಡಲಾರದ ಕೆಲಸವೇ ಇಲ್ಲ. ವಿದ್ಯುತ್ತಿನಿಂದ ಅಣುಶಕ್ತಿಗೆ ಧಾವಿಸುತ್ತಿರುವ ಯುಗವಿದು.

ನೀರಾವರಿ ಕಾರ್ಯದ ಜೊತೆಗೆ ವಿದ್ಯುಚ್ಛಕ್ತಿಯನ್ನು ರೂಢಿಸುವುದು ನಮ್ಮ ಯೋಜನೆಯ ಗುರಿ. ಭಾರತದ ಪ್ರತಿ ಹಳ್ಳಿಗೂ ವಿದ್ಯುತ್ತನ್ನು ಸರಬರಾಜು ಮಾಡುವ ಅಮಿತ ಉದ್ದೇಶ ನಮ್ಮದು. ಇದು ಸಾಧಿತವಾಗಲು ಇನ್ನೂ ಹಲವಾರು ವರ್ಷಗಳು ಬೇಕಾಗಬಹುದು. ಆದರೂ ಈ ಗುರಿಯತ್ತ ನಾವು ನಿಧಾನವಾಗಿ ಮುಂದುವರಿಯುತ್ತೇವೆ ಎಂಬುದು ಗಮನಾರ್ಹವಿದೆ. ಮೂರನೆಯ ಯೋಜನೆಯಲ್ಲಿ ೧೧೮೮ ಕೋಟಿ ರೂಪಾಯಿಗಳನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಲು ಉದ್ದೇಶಿಸಲಾಗಿದೆ. ಮೊದಲೆರಡು ಯೋಜನೆಗಳಲ್ಲಿ ೮೬೭ ಕೋಟಿ ರೂಪಾಯಿಗಳು ಇದಕ್ಕಾಗಿಯೇ ವೆಚ್ಚವಾಗಿವೆ. ಸರಕಾರೇತರ ಕೈಗಾರಿಕಾ ಸಂಸ್ಥೆಗಳೂ ತಾವೇ ಸುಮಾರು ೩೮ ಕೋಟಿ ರೂಪಾಯಿಗಳ ಶಕ್ತಿಯನ್ನೂ ಒದಗಿಸಿಕೊಂಡಿವೆ.

ಹಿಂದೆ ಕರ್ನಾಟಕದ ಶಿವಸಮುದ್ರ, ಮದರಾಸಿನ ಮೆಟ್ಟೂರು, ಬೊಂಬಾಯಿ ಆಂಧ್ರ ಕಣಿವೆಗಳಲ್ಲಿ ಜಲವಿದ್ಯುತ್ತು ನಿರ್ಮಾಣವಾಗುತ್ತಿತ್ತು. ಆಗ ಉತ್ಪಾದಿತವಾಗುತ್ತಿದ್ದ ಶಕ್ತಿಯ ಪ್ರಮಾಣವೂ ಅತ್ಯಲ್ಪ. ಇಂದಾದರೋ ಇದರ ಹತ್ತು ಪಟ್ಟು ದೊಡ್ಡ ಗಾತ್ರದ ವಿದ್ಯುತ್ಸಂಗ್ರಹ ಕಾರ್ಯವನ್ನು ದೇಶದ ಮೇಲೆಲ್ಲಾ ಕಾಣಬಹುದು.

ಪಂಜಾಬದ ಭಾಕ್ರಾ ನಂಗಲ್‌ನ ಹೆಸರು ಇಂದು ಜಗಜ್ಜನಿತವಾಗಿದೆ. ಇದರಿಂದ ೬೭ ಲಕ್ಷ ಎಕ್ರೆ ಜಮೀನಿಗೆ ನೀರು ದೊರೆಯುವುದಲ್ಲದೆ ಆರು ಲಕ್ಷ ಕಿಲೋವಾಟ್ ಶಕ್ತಿಯೂ ತಯಾರಾಗುವುದು. ಪಂಜಾಬದ ಗ್ರಾಮೀಣ ಪ್ರದೇಶದ ವಿದ್ಯುತ್ತೀಕರಣ ಕಾರ್ಯದಲ್ಲಿ ಈ ಯೋಜನೆಯ ಪಾತ್ರ ಅಗ್ರಗಣ್ಯವಾದುದು. ಒಂದು ಲಕ್ಷ ಕಿಲೋವಾಟ್‌ಗೂ ಮಿಕ್ಕಿ ಒದಗಿಸುವುದು ಒರಿಸ್ಸಾದ ಹಿರಾಕುಡ್ ಬಿಹಾರ ಮತ್ತು ಪಶ್ಚಿಮ ಬಂಗಾಲಗಳಲ್ಲಿನ ದಾಮೋದರ ಕಣಿವೆಯ ಯೋಜನೆಯಲ್ಲಿ ಒಟ್ಟು ಒಂದು ಲಕ್ಷ ಕಿಲೋವಾಟ್ ಶಕ್ತಿಯನ್ನು ಪೂರೈಸುತ್ತದೆ. ಬೊಕಾರೊ ಶಕ್ತಿ ಕೇಂದ್ರವು ೧॥ ಲಕ್ಷ ಕಿಲೋವಾಟನ್ನು ಈಗಾಗಲೇ ಉತ್ಪಾದಿಸುತ್ತಿದ್ದು ಇನ್ನೂ ೭೫ ಸಾವಿರ ಕಿ. ವಾ. ಸಾಮರ್ಥ್ಯವುಳ್ಳ ಇನ್ನೊಂದು ವಿದ್ಯುತ್ಕೇಂದ್ರವೂ ಸ್ಥಾಪನೆಯಾಗುತ್ತಲಿದೆ. ರಾಜಸ್ಥಾನ—ಮಧ್ಯ ಪ್ರದೇಶದ ಚಂಬಲ್ ಕಣಿವೆ ಯೋಜನೆ, ಆಂಧ್ರಪ್ರದೇಶದ ನಾಗಾರ್ಜುನ ಸಾಗರ, ಮಹಾರಾಷ್ಟ್ರದ ಕೊಯ್ನಾ, ಉತ್ತರ ಪ್ರದೇಶದ ರಿಹಾಂದ, ಕರ್ನಾಟಕದ ಭದ್ರಾ, ಆಂಧ್ರ—ಒರಿಸ್ಸಾಗಳ ಸಹಯೋಗದಿಂದ ರಚಿತವಾದ ಮುಚುಕುಂದ, ಪಶ್ಚಿಮ ಬಂಗಾಲದ ಮಯೂರಾಕ್ಷಿ, ಶರಾವತಿಯಲ್ಲಿನ ಮಹಾತ್ಮಾ ಗಾಂಧಿ ಜಲವಿದ್ಯುತ್ತು ಯೋಜನೆ ಮತ್ತು ಶರಾವತಿ ಯೋಜನೆಗಳು—ಅತಿ ಪ್ರಧಾನವಾದ ಜಲವಿದ್ಯುದ್ಯೋಜನೆಗಳು. ದಿನದಿಂದ ದಿನಕ್ಕೆ ವಿದ್ಯುತ್ತಿನ ಬೇಡಿಕೆಯು ಹೆಚ್ಚುತ್ತ ಬರುತ್ತಿರುವುದರಿಂದ, ದೇಶದ ಪುನಾರಚನಾ ಕಾರ್ಯದಲ್ಲಿ ಇದರ ಮಹತ್ವದ ಪಾತ್ರವಿರುವುದರಿಂದ ಈ ದಿಸೆಯಲ್ಲಿ ನಾವು ಇನ್ನೂ ತೀವ್ರಗತಿಯಿಂದ ಮುಂದುವರಿಯ ಬೇಕಾಗಿದೆ.

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು ನಮ್ಮ ಮುಂದಿನ ಗುರಿಯಾಗಿದೆ. ಹೇಳಿ ಕೇಳಿ ಗ್ರಾಮೀಣ ಪ್ರದೇಶವಾದ ಭಾರತದಲ್ಲಿ ಐದು ಲಕ್ಷ ಗ್ರಾಮಗಳಿವೆ. ಇವುಗಳ ಪೈಕಿ ೪೫ ಸಾವಿರ ಗ್ರಾಮಗಳಿಗಾದರೂ ಮೂರನೆಯ ಯೋಜನಾಂತ್ಯದೊಳಗೆ ವಿದ್ಯುತ್ತನ್ನು ಪೂರೈಸಬೇಕೆಂಬುದು ನಮ್ಮ ಯೋಜನೆಯಾಗಿದೆ. ಈ ಗುರಿಯನ್ನು ನಾವು ಸಾಧಿಸಿದೆವೆಂದರೆ ನಮ್ಮ ಗ್ರಾಮಗಳಲ್ಲಿ ನೂರರಲ್ಲಿ ಎಂಟಕ್ಕೆ ವಿದ್ಯುತ್ ಸೌಕರ್ಯ ದೊರಕಿದಂತಾಗುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ತು ಪೂರೈಕೆಯಲ್ಲಿ ಒಂದಲ್ಲ ನೂರು ಅಡಚಣೆಗಳು ಬರುತ್ತವೆ. ಪೂರೈಸಲು ಶಕ್ತಿಯಿರುವುದಿಲ್ಲ ಮಾತ್ರವಲ್ಲ, ಒದಗಿಸ ಬಹುದಾದ ಶಕ್ತಿಯನ್ನು ಗ್ರಾಮೀಣ ಜನತೆಯೂ ಸ್ವೀಕರಿಸ ಬೇಕಾಗುತ್ತದೆ. ಆದರೂ ಬರಬಹುದಾದ ವಿಘ್ನ ವಿದ್ರೋಹಗಳನ್ನು ಎದುರಿಸುವುದು ಅತ್ಯಗತ್ಯವಿದೆ. ಗ್ರಾಮದ ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೂ, ವ್ಯವಸಾಯೋತ್ಪಾದನೆಗೆ ಪ್ರಚೋದನೆ ನೀಡಿ ಆಹಾರಾದಿ ಸಮಸ್ಯೆಗಳನ್ನು ಬಗೆಹರಿಸುವುದಕ್ಕೂ ವಿದ್ಯುತ್ತಿನ ಮೊರೆಹೋಗುವುದೊಂದೇ ನಮ್ಮ ಮುಂದಿರುವ ಏಕಮೇವ ಉಪಾಯವಾಗಿದೆ.

ಕೇಂದ್ರ ಸರಕಾರವೂ ರಾಜ್ಯ ಸರಕಾರಗಳೂ ಈ ದಿಸೆಯಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿವೆ. ಕಡಿಮೆ ವೆಚ್ಚದಲ್ಲಿ ಅಧಿಕ ಲಾಭ ತರುವಂತಹ ಯೋಜನೆಗಳಿಗೇನೇ ಅಗ್ರ ಪ್ರಾಶಸ್ತ್ಯ ನೀಡಲಾಗುತ್ತಿದೆ.

ಪ್ರತಿ ರಾಜ್ಯಗಳಲ್ಲಿಯೂ ಗ್ರಾಮಾಂತರ ವಿದ್ಯುತ್ತೀಕರಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಯೋಜನೆಯನ್ನು ಟ್ರಾನ್ಸ್‌ಮಿಷನ್ ಲೈನು ಮತ್ತು ಇತರ ಸೌಲಭ್ಯಗಳ ಆಧಾರದ ಮೇರೆಗೆ ಸಿದ್ಧಗೊಳಿಸಬೇಕಾಗಿದೆ. ರಾಜ್ಯ ಸರಕಾರಗಳೊಂದಿಗೆ ಪರ್ಯಾಲೋಚಿಸಿ [illegible] ಇದನ್ನು ಸಿದ್ಧ ಮಾಡಲಾಗುತ್ತಿದೆ. ಈಗ ಇಟ್ಟುಕೊಂಡಿರುವ ಯೋಜನೆಯಂತೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯೊಳಗಾಗಿ ಇನ್ನೂ ಒಂದು ಲಕ್ಷದಷ್ಟು ಹೆ

೧

೨

ಪ್ರದೇಶಗಳಿಗೂ ವಿದ್ಯುತ್ತು

೩

ಚ್ಚಿನ ಹಳ್ಳಿಗಳಿಗೆ ಈ ವಿದ್ಯುತ್ತಿನ ಸೌಲಭ್ಯವನ್ನು ಒದಗಿಸಲಾಗುವುದು. ಆಗ ಪ್ರತಿ ರಾಜ್ಯದಲ್ಲೂ ಸೇ-೨೦ರಷ್ಟು ಹಳ್ಳಿಗಳು ವಿದ್ಯುದ್ದೀಪಗಳಿಂದಲಂಕೃತವಾಗುವುವು. ಈ ಸಂಬಂಧದ ಕಾರ್ಯಕ್ರಮಗಳನ್ನು ಅಂತಿಮವಾಗಿ ರೂಪಿಸಲು ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಆಯೋಗದ ಇಬ್ಬರು ಅಧಿಕಾರಿಗಳು ಪ್ರತಿ ರಾಜ್ಯಗಳಿಗೂ ಸಂದರ್ಶನ ನೀಡುವರು.

ಗ್ರಾಮಾಂತರ ವಿದ್ಯುತ್ತೀಕರಣ ಕ್ಷೇತ್ರದಲ್ಲಿ ಹೆಚ್ಚು ಪ್ರಗತಿ ಸಾಧಿಸಿರುವ ರಾಜ್ಯಗಳಲ್ಲಿ ಮದ್ರಾಸವು ಒಂದು. ಇಲ್ಲಿ ಮಿತವ್ಯಯವನ್ನು ಸಾಧಿಸಲು, ವಿದ್ಯುತ್ತೀಕರಣ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿಯವರಿಗೆ ರಾಜ್ಯದಲ್ಲಿಯೇ ತರಬೇತಿಯೀಯಲಾಗುತ್ತಿದೆ. ಎಲ್ಲ ರಾಜ್ಯಗಳಲ್ಲಿಯೂ ಇದೇ ಮಾದರಿಯ ತರಬೇತಿ ನೀಡುವ ವ್ಯವಸ್ಥೆಯಾಗುತ್ತಿದೆ. ವಿದ್ಯುತ್ತೀಕರಣ ಕಾರ್ಯದಲ್ಲಿ ತೊಡಗುವ ಪ್ರಮುಖ ಸಿಬ್ಬಂದಿಯವರಿಗೆ ಮಾತ್ರ ದೆಹಲಿಯಲ್ಲಿ ಪ್ರತ್ಯೇಕವಾದ ತರಬೇತಿ ಕೇಂದ್ರವಿದೆ. ವಿವಿಧ ರಾಜ್ಯಗಳ ವಿದ್ಯುನ್ಮಂಡಳಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಒಟ್ಟಿಗೆ ಕೊಂಡುಕೊಳ್ಳುವುದು ಮಿತವ್ಯಯದ ಇನ್ನೊಂದು ಕ್ರಮ. ಇದರಿಂದಾಗಿ ಕಾಲವನ್ನೂ ಉಳಿಸಬಹುದು.

ಇಂದಿನ ದಿನಗಳಲ್ಲಿ ಗ್ರಾಮೀಣರಲ್ಲೂ ಹೆಚ್ಚಿರುವ ವಿದ್ಯುಚ್ಛಕ್ತಿ ಬಳಕೆಯ ಪ್ರಮಾಣವು ಕ್ರಮೇಣ ಹೆಚ್ಚುತ್ತಿದೆ. ಮದ್ರಾಸು ರಾಜ್ಯದಲ್ಲಿಯೇ ಇರುವ ನೀರಾವರಿ ಪಂಪುಗಳು, ನೇಯ್ಗೆ, ಮಗ್ಗ, ಕಮ್ಮಾರಶಾಲೆಗಳು ಇದಕ್ಕೆ ಉದಾಹರಣೆ. ಹೀಗೆಯೇ ಉಳಿದ ರಾಜ್ಯಗಳಲ್ಲೂ ಸೂಕ್ತ ಕ್ರಮ ಕೈಗೊಂಡು, ಯೋಜನೆಯ ನಿಯೋಜಿತ ಗುರಿಯನ್ನು ಸಾಧಿಸುವುದು ನಮ್ಮ ಉದ್ದೇಶವಿದೆ.

ಕೃಷಿ ಪ್ರಧಾನವಾದ ಭಾರತದಲ್ಲಿ ಕೃಷಿಯ ಅಭಿವೃದ್ಧಿಗಾಗಿ ನೀರಾವರಿಯ ಸೌಕರ್ಯಗಳು ಹೆಚ್ಚಬೇಕು. ನೀರಿನ ಪಂಪುಗಳನ್ನು ನಡೆಸುವುದಕ್ಕೂ ವಿದ್ಯುತ್ತನ್ನು ಬಳಸಲು ಅನುಕೂಲವಾಗುವಂತೆ ಗ್ರಾಮ ಗ್ರಾಮಕ್ಕೂ ಇದನ್ನು ಒದಗಿಸಬೇಕು. ಇದು ಸಾಧ್ಯವೆನಿಸಿದಾಗಲೇ ವ್ಯವಸಾಯಿಕವಾಗಿಯೂ ಔದ್ಯಮಿಕವಾಗಿಯೂ ಆರ್ಥಿಕವಾಗಿಯೂ ನಾವು ಉನ್ನತರಾದೇವು.

ಜಲವಿದ್ಯುತ್ತಿಗಿಂತಲೂ ಅಣುವಿದ್ಯುತ್ತು ಬಹಳ ಅಗ್ಗವಾದುದು. ಭಾರತದಲ್ಲಿಯೂ ಅಣುಶಕ್ತಿಯಿಂದ ವಿದ್ಯುತ್ತನ್ನು ತಯಾರಿಸುವ ಪ್ರಯತ್ನಗಳು ನಡೆಯುತ್ತಿವೆ. ತಾರಾಪುರ—ಬೊಕಾರೋಗಳಲ್ಲೂ ವಿದ್ಯುತ್ಕೇಂದ್ರಗಳು ತೆರೆಯಲಾಗುತ್ತಿವೆ. ಹೀಗೆ ಶಕ್ತಿಯ ಮೂಲ - ವಿದ್ಯುತ್ ಹೇರಳವಾಗಿ ಲಭಿಸುವ ಸುದಿನ ಮುಂದಿನ ಕಾಲು ಶತಮಾನದೊಳಗೆ ಬಂದರೂ ಬರಬಹುದು.

ಚಿತ್ರಗಳು

೧. ಪಂಜಾಬದ ಒಂದು ಹಳ್ಳಿಯಲ್ಲಿ ಕೊಯ್ಯುವ ಯಂತ್ರವು ವಿದ್ಯುತ್ತಿನ ಸಹಾಯದಿಂದ ಕಾರ್ಯ ನಿಮಗ್ನವಾಗಿದೆ.

೨. ಬಾಕ್ರಾ ನಂಗಲ್ ಒದಗಿಸಿದ ವಿದ್ಯುಚ್ಛಕ್ತಿಯಿಂದ ಪಂಜಾಬದ ಹಳ್ಳಿಹಳ್ಳಿಗರು ತಮ್ಮ ಮನೆಗಳನ್ನು ಬೆಳಗಿಸುತ್ತಿದ್ದಾರೆ. ಸಾಮಾನ್ಯ ಒಕ್ಕಲಿಗನೂ ಇದರಿಂದ ತುಂಬಾ ಪ್ರಯೋಜನ ಪಡೆದಿದ್ದಾನೆ.

೩. ಅಣು ಶಕ್ತಿಯಿಂದ ಸಂಚರಿಸಬಲ್ಲ ಅಮೇರಿಕನ್ ಸಬ್‌ಮೇರಿನ್ ಉತ್ತರ ಅಟ್ಲಾಂಟಿಕ ಸಾಗರವನ್ನು ಹಾದು ಹೋಗುತ್ತಿದೆ. ಧ್ರುವಸಂಶೋಧನಾ ಕಾರ್ಯದಲ್ಲಿ ಇದು ತುಂಬ ಅನುಕೂಲವೆನಿಸಿದೆ.

೪. ಬೊಕಾರೊ ಥರ್ಮಲ್ ಕೇಂದ್ರದ ಪಾರ್ಶ್ವದೃಶ್ಯ



೪

ಭಾರತೀಯರಿಗರ್ಪಿತ

ಬರೆದವರು
ಕುತ್ಯಾರುಗುತ್ತು ರವೀಂದ್ರ ಶೆಟ್ಟಿ.

೧

ಭಾರತದ ನೆಲದಲ್ಲಿ, ಭಾರತದ ಜಲವುಂಡು
ಸವಿನು ಸಂತೃಪ್ತರಾಗುತಿಹ ಜನರೇ .
ಭಾರತದ ಮಡಿಲಲ್ಲಿ ಜೀವನವತೀಯುತಿಹ
ಓ ಭಾರತೀಯರೇ ಎಚ್ಚರಾಗಿ!
ನಿದ್ರೆಯಿಂ ಎಚ್ಚೆತ್ತು ಕಿವಿಕೊಟ್ಟು ಆಲಿಸಿರಿ
ಉತ್ತರದ ಭಾರತದ ಗಡಿಯ ಕಡೆಗೆ
ನಿದ್ರೆಯಿಂ ಎದ್ದೇಳಿ, ವೀರ ಚೇತನ ಪಡೆದು
ವೀರ ಘರ್ಜನೆಯಿಂದ ಉತ್ತರಕೆ ಸಾಗಿ!
ಓ ಭಾರತೀಯರೇ ಎಚ್ಚರಾಗಿ!!
ಭಾರತಮಾತೆಗೆ ನಿಮ್ಮ ತನುವ ನವ ನೀಡಿ!

೨

ಹಿರಿಯರೇ, ಕಿರಿಯರೇ, ಬಡವರೇ,
ಬಲ್ಲಿದರೇ
ಭಾರತದ ನೆಲದಲ್ಲಿ ವಾಸಿಸುವ ಜನರೇ
ಎಲ್ಲರೂ ಒಂದಾಗಿ ವೀರಘರ್ಜನೆಯಿಂ
ಸಾಗಿ
ಓ ಭಾರತೀಯರೇ ಎಚ್ಚರಾಗಿ!
ಭಾರತ ಮಾತೆಗೆ ನಿಮ್ಮ ತನು ಮನವ
ನೀಡಿ!!

೩

ತಮಿಳು, ಕನ್ನಡ, ತೆಲುಗು, ಮತ್ತು
ಮಲೆಯಾಳ
ಹಿಂದಿ ಮತ್ತಿತರ ಭಾಷೆಗಳ ಪ್ರಭಾರ
ಎಲ್ಲವೂ ಸೇರಿ, ವೀರ ಘರ್ಜನೆಯಿಂ ಕೂಡಿ
ಭಾರತದ ನೆಲಜಲಕೆ ಅರ್ಪಣೆಯ ಮಾಡಿ
ಓ ಭಾರತೀಯರೇ ಎಚ್ಚರಾಗಿ!
ಭರತ ಮಾತೆಗೆ ನಿಮ್ಮ ತನುಮನವ ನೀಡಿ!!

೪

ಭಾರತದ ಪ್ರಜೆಗಳೇ ಐಕ್ಯಗಾನದಿ ಸಾಗಿ
ಪ್ರಾಣವಂ ಪಣವಾಗಿ ಇಟ್ಟು ಕಾದಾಡಿ
ಪುಣ್ಯ ಭಾರತಕೆ ನಿಮ್ಮ ತ್ಯಾಗವನು ನೀಗಿ
ಓ ಭಾರತೀಯರೇ ಎಚ್ಚರಾಗಿ!
ಭರತಮಾತೆಗೆ ನಿಮ್ಮ ತನುಮನವ ನೀಡಿ!!

೫

ಭಾರತದ ನೆಲದಲ್ಲಿ ಭಾರತದ ಜಲವುಂಡು
ಭರತಮಾತೆಗೆ ದ್ರೋಹವೆಂದೆಂದು
ಬಗೆಯದಿರಿ
ಮಂತ್ರಿಗಳೆ, ಮಾಗದರೇ ಓ ಭಾರತದ
ಜನರೆ
ಭಾರತದ ನೆಲಜಲವ ಪರರಿಗೊಪ್ಪಿಸದಿರಿ
ಓ ಭಾರತೀಯರೇ ಎಚ್ಚರಾಗಿ!
ಭರತಮಾತೆಗೆ ನಿಮ್ಮ ತನುಮನವ ನೀಡಿ!!

೬

ಪಡೆದ ಸ್ವಾತಂತ್ರ್ಯವನು ತಿರುಗಿ ನೀಡದಿರಿ
ಪುಣ್ಯ ಭಾರತಿಗೆ ನೀವ್ ಅವಮಾನ
ಗೊಳಿಸದಿರಿ
ವೀರ ಕರ್ಣ, ಅಶೋಕ ಮತ್ತೆ ಹರುಷನ
ನೆನೆದು
ಸಮರ ರಂಗಕೆ ಧುಮುಕಿ ಸ್ಫೂರ್ತಿಯನು
ಪಡೆದು
ಓ ಭಾರತೀಯರೇ ಎಚ್ಚರಾಗಿ!
ಭರತ ಮಾತೆಗೆ ನಿಮ್ಮ ತನುಮನವ ನೀಡಿ!!

ನಾವು ಸುಖದ ಮರೀಚಿಕೆಯ ಬೆಂಬತ್ತಿದೇವೆ

— ಎ ಧ

(ಏಳನೇ ಪುಟದಿಂದ)

ದ ದಾರಿಯನ್ನೇ ಹುಡುಕುತ್ತಿದ್ದಾರೆ. ಗದ್ದೆಯಲ್ಲಿ ಬೆಳಗ್ಗೆಯಿಂದ ಸಂಜೆ ತನಕ ದುಡಿಯುವುದರ ಬದಲು ಪೇಟೆಯಲ್ಲಿ ಕೈಗಾಡಿಯಲ್ಲಿ ಎರಡು ಸಲ ಸಾಮಾನು ಸಾಗಿಸಿದರೇನೇ ಹೆಚ್ಚು ಲಾಭ ದೊರೆಯುವಾಗ, ಜನ ಪೇಟೆಯ ಕಡೆ ಧಾವಿಸಿದರೆ ತಪ್ಪೇನಿಲ್ಲ. ದಿನವಿಡೀ ದುಡಿದರೂ, ಬೆವರಿಳಿಸಿದರೂ, ೨ ಸೇರು ಅಕ್ಕಿ ದೊರೆಯುವುದು ದುರ್ಲಭವಾಗಿರುವಾಗ ಕೂಲಿಕಾರ ಹೆಂಗಸು ನೇಜಿ ನೆಡುವುದಕ್ಕಿಂತ, ಭತ್ತ ಕುಟ್ಟುವುದಕ್ಕಿಂತ, ಆರಾಮವಾಗಿ ಕುಳಿತು ಬೀಡಿ ಕಟ್ಟುವುದೇ ಲಾಭದಾಯಕ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಪರವೂರಿನಲ್ಲಿ ಸುಖ ಜೀವನ ಬೇರೂರಿದೆ ಎಂಬ ಭಾವನೆಯಿಂದ ನಮ್ಮ ಹಳ್ಳಿಗಳ ಬರಿದಾಗುತ್ತಾ ಬರುತ್ತಿವೆ. ಕೇವಲ ಮುದುಕರು, ಮುದುಕಿಯರು ಹಾಗೂ ಚಿಕ್ಕ ಮಕ್ಕಳಷ್ಟೇ ಇಂದು ಹಳ್ಳಿಗಳಲ್ಲಿ ಹೆಚ್ಚಾಗಿ ಇರುವವರು. ಉಳಿದ ದುಡಿಯಬಲ್ಲ ವರ್ಗ ಪಟ್ಟಣಗಳತ್ತ ವಲಸೆಹೋಗಿದೆ

ಕೃಷಿಯ ಉತ್ಪಾದನೆ ತಗ್ಗುತ್ತಿದೆ.

ಇದರ ಪರಿಣಾಮವಾಗಿ ಹಳ್ಳಿಗಳಲ್ಲಿ ಕೃಷಿಯ ಉತ್ಪಾದನೆ ತಗ್ಗುತ್ತಿದೆ. ಗದ್ದೆಯಲ್ಲಿ ಚೆನ್ನಾಗಿ ದುಡಿಯಬಲ್ಲವರಿಲ್ಲದಿರುವಾಗ, ಸ್ವಾಭಾವಿಕವಾಗಿಯೇ ಕೃಷಿಯು ನಿಕೃಷ್ಟಾವಸ್ಥೆಗೆ ಬರಬೇಕಲ್ಲವೆ? ಹಲವು ಬೇಸಾಯಗಾರರ ಪರಿಸ್ಥಿತಿ ಯಾವ ಘಟ್ಟ ಮುಟ್ಟಿದೆಯೆಂದರೆ, ಗೇಣಿ ತುಂಬಿಸುವುದಕ್ಕೆ ಪರವೂರಿನಿಂದ ಮಕ್ಕಳು ಹಣ ಕಳುಹಿಸಬೇಕಾಗಿದೆ. ಇದು ಎಷ್ಟು ಅಭಾಸಕರ ವಿಷಯ? ಹಲವು ರೈತರ ಮನೆಯಲ್ಲಿ ಎತ್ತು, ನೊಗ, ನೇಗಿಲುಗಳಿಲ್ಲದಿರುವ ಪರಿಸ್ಥಿತಿಯೂ ಇದೆ. ಇತರರನ್ನು ನಂಬಿ, ಅವರು ಬೇಸಾಯ ಎಂಬುದನ್ನು ಹೆಸರಿಗೆ ಮಾತ್ರ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿರುವ ಜನ, ಪ್ರಾಚೀನ ಕರ್ಮಪ್ರೋ ಎಂದು ತಿಳಿದು, ಗದ್ದೆಯಲ್ಲಿ ದುಡಿಯುವ ಪರಿಸ್ಥಿತಿ ಬಂದಿದೆ. ತಮ್ಮ ಮಕ್ಕಳಿಗೆ ಈ ಕಸುಬಿನಲ್ಲಿ ಇಷ್ಟವಿಲ್ಲ. ಕೆಲಸ ಮಾಡಿಸಲು ಜನವಿಲ್ಲ. ತಮಗೆ ದುಡಿಯಲು ಶಕ್ತಿಯಿಲ್ಲ ಎಂಬಂತಾಗಿದೆ ನಮ್ಮ ಹಳ್ಳಿಯ ಹಿರಿಯರ ಸ್ಥಿತಿ. ಇದು ದೇಶದ ಉದ್ಧಾರದ ಕುರುಹೇ?

ಮನೋಭಾವ ಬದಲಾಗಬೇಕು

ಆದುದರಿಂದ ನಮ್ಮೆಲ್ಲರ, ಮುಖ್ಯವಾಗಿ ನಮ್ಮ ಯುವಜನಾಂಗದ ಮನೋಭಾವ ಬದಲಾಗಬೇಕು. ವಿದ್ಯೆಯ ಫಸೆಯಿಂದ ಅವರು ಸ್ವತಂತ್ರ ಜೀವನವನ್ನು ನಡೆಸುವುದನ್ನು ಕಲಿಯಬೇಕು. ವಿದ್ಯಾವಂತರಾದ ತರುಣರು ಬೇಸಾಯವೇ ಮೊದಲಾದ ಹಳ್ಳಿಯ ವೃತ್ತಿಗಳನ್ನು ಅವಲಂಬಿಸಿದರೆ, ಆಗ ಇತರರೂ ತಮ್ಮ ಕಸುಬು ಉತ್ತಮ ವರ್ಗದ್ದು ಎಂದು ತಿಳಿದು, ಒಂದು ವಿಧದ ಆಕರ್ಷಣೆ ಎನಿಸಬಹುದು. ವಿದ್ಯಾವಂತ ಯುವಕರು, ಹಳ್ಳಿಗಳ ಜೀವನದಲ್ಲಿ ಹೊಸ ಚೇತನವನ್ನು ತುಂಬಬೇಕು. ಕೃಷಿಯಲ್ಲಿ ಹಾಗೂ ಇನ್ನಿತರ ಕಸುಬುಗಳಲ್ಲಿ ನವೀನತೆಯನ್ನು ಅವರು ಹರಿಸಬೇಕು. ನಮ್ಮ ಸರಕಾರ ಇಂದು ಹಳ್ಳಿಗಳ ಉದ್ಧಾರವನ್ನು ಗಮನದಲ್ಲಿಟ್ಟು ಕೈಕೊಂಡಿರುವ ಹಲವಾರು ಕಾರ್ಯಕ್ರಮಗಳ ಯಶಸ್ಸಿಗೆ ಹಳ್ಳಿಯ ಯುವಕರ ಸಹಕಾರ ಅತ್ಯಗತ್ಯ. ನಮ್ಮ ಯುವಜನಾಂಗದ ಈ ದಿಸೆಯಲ್ಲಿ ಯೋಚಿಸಬೇಕು.

ಕೃಷಿಕರ ಮನೋವೃತ್ತಿಯಲ್ಲಿ ಬದಲಾವಣೆ

ಇಷ್ಟು ಮಾತ್ರವಲ್ಲದೆ ನಮ್ಮ ರೈತರ ಮನೋವೃತ್ತಿಯಲ್ಲಿ ಬದಲಾವಣೆ ಆಗಬೇಕಾದುದು ಅನಿವಾರ್ಯವೆನಿಸಿದೆ. ರೈತರು ಕೃಷಿಯಲ್ಲಿ ಆಧುನಿಕ ವಿಧಾನಗಳನ್ನು ಅನುಸರಿಸುವುದರ ಜತೆಗೆ ತಮ್ಮ ಆದಾಯ ಹೆಚ್ಚಿಸುವ ಲಾಭದಾಯಕವಾದ ಉಪವೃತ್ತಿಗಳನ್ನು ಕೈಕೊಳ್ಳಬೇಕು. ಕೋಳಿ ಸಾಕಣೆ, ಹಂದಿ ಸಾಕಣೆ, ಹೈನವೃತ್ತಿಯೇ ಮೊದಲಾದ ಉಪವೃತ್ತಿಗಳು ಆದಾಯ ಹೆಚ್ಚಿಸುವ ದಾರಿಗಳು. ಮಾತ್ರವಲ್ಲ, ಹೆಚ್ಚು ಆದಾಯ ತರುವ ವಾಣಿಜ್ಯ ಬೆಳೆಗಳತ್ತವೂ ನಮ್ಮ ರೈತರು ಒಲವು ಹರಿಯಿಸಬಹುದು. ಆಹಾರೋತ್ಪಾದನೆಯಲ್ಲಿ ಉಚ್ಚಮಟ್ಟವನ್ನು ಕಾಯ್ದುಕೊಳ್ಳುವುದರ ಜತೆಗೆ, ಹಣ್ಣುಹಂಪಲು, ತರಕಾರಿ ಹಾಗೂ ಇತರ ವಾಣಿಜ್ಯ ಬೆಳೆಗಳನ್ನು ಬೆಳೆಸುವುದನ್ನು ನಮ್ಮ ರೈತರು ಅನುಷ್ಠಾನಕ್ಕೆ ತಂದರೆ, ಆಗ ಅವರ ಬದುಕು ಬಂಗಾರವಾಗುವುದರಲ್ಲಿ ಸಂದೇಹವಿಲ್ಲ.

ಜನತೆಯಿಂದಲೇ ರಾಮರಾಜ್ಯ.

ಈ ರೀತಿಯ ಬದಲಾವಣೆಯಿಂದಲೇ ನಮ್ಮ ದೇಶ ಕಟ್ಟುವುದು ಸುಲಭವಾದೀತು. ಜನರ ಮನೋವೃತ್ತಿಯಲ್ಲಿ ಅಪೇಕ್ಷಿತ ಬದಲಾವಣೆಯಾಗದಿದ್ದರೆ, ನಮ್ಮ ಯಾವ ಪಂಚವಾರ್ಷಿಕ ಯೋಜನೆಗಳೂ ಫಲ ಕೊಡಲಾರವು. ಆದುದರಿಂದ ಇಂದು, ನಮ್ಮೆಲ್ಲರ ಮನೋಭಾವನೆ ಬದಲಾಗಬೇಕಾಗಿದೆ. ಹಳ್ಳಿಗಳ ಚಿತ್ರ ಬದಲಾಗಬೇಕಾಗಿದೆ. ರೈತರ ಹಾಗೂ ವಿದ್ಯಾವಂತರ, ಜೀವನದಲ್ಲಿ ಹೊಸ ಬೆಳಕು ಮೂಡಬೇಕಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬನೂ ತನ್ನ ಕರ್ತವ್ಯವೇನೆಂಬುದನ್ನು ಮನಃಪೂರ್ವಕ ವಿವೇಚಿಸಿ, ಅದನ್ನು ನೆರವೇರಿಸಿದರೆ ಆಗ ನಮ್ಮ ದೇಶ ರಾಮರಾಜ್ಯವಾದೀತು.

— — —

ಅಂಗಸಾಧನೆ

ಬಲಶಾಲಿ ಜನಾಂಗ ನಿರ್ಮಾಣ ಸಾಧನ

"ಜನತೆಯ ಆರೋಗ್ಯವೇ ದೇಶದ ಬಲ" ಎಂಬುದೊಂದು ಮಾತು. ಆರೋಗ್ಯವನ್ನುಳಿಸಿಕೊಳ್ಳಬೇಕಾದರೆ, ಬರೀ ತಿನ್ನುವುದು ಮಾತ್ರ ಸಾಲದು, ದೈಹಿಕ ಪರಿಶ್ರಮವೂ ಅಗತ್ಯ. "ದಯವಿಟ್ಟು ಎಲ್ಲರೂ ಬಂದು ಸಾಯಂಕಾಲದ ವೇಳೆಯಲ್ಲಿ ಕ್ರೀಡೆಗಳಲ್ಲಿ ಭಾಗವಹಿಸಿರಿ. ನೀವು ಮೆಚ್ಚುವ ಕ್ರೀಡೆಗಳಲ್ಲಿ ಪಾಲ್ಗೊಳ್ಳಿರಿ, ಅದಕ್ಕೆ ಬೇಕಾದ ಸಾಧನಗಳು, ಕ್ರೀಡಾಂಗಣಗಳು ಮುಫತ್ತಾಗಿ ದೊರೆಯುತ್ತವೆ. ಆಟ–ವ್ಯಾಯಾಮಗಳು—ಯಾವುದೇ ವಿಷಯದಲ್ಲಿ ಯಾವುದೇ ವಿಧವಾದ ಸಲಹೆ, ಶಿಕ್ಷಣಗಳು ಬೇಕೆಂದಿದ್ದರೂ ನಿಮಗೆ ಉಚಿತವಾಗಿ ನೀಡುವುದು."

—ಇದು ಪಶ್ಚಿಮ ಜರ್ಮನಿಯ ನಗರ ಸಭೆಯೊಂದರ ಕಳಕಳಿಯ ಕರೆ. ಅಲ್ಲಿನ ಮನ್‌ಸ್ಟರ್ ನಗರ ಸಭೆಯು ಈ ಒಕ್ಕಣೆಯ ಕರೆಯನ್ನು ನಗರದ ಪ್ರತ್ಯೇಕ ಪ್ರಜೆಗೂ ಕಳಿಸಿತು. ಇದಕ್ಕೆ ಮೊತ್ತಮೊದಲು ಓಗೊಟ್ಟವರು ಯಾರು ಬಲ್ಲಿರಾ? —ಪ್ರಾಯ ಸಂದವರು!

ನಾಗರಿಕ ಜೀವನವನ್ನು ನಡೆಸಿ ದೇಹ ಪೋಷಣೆಗೂ ದೇಹದ ಸರಿಯಾದ ಬೆಳವಣಿಗೆಗೂ ಸರಿಯಾದ ಗಮನ ನೀಡದಿದ್ದುದರಿಂದ ಸರಾಸರಿ ಜರ್ಮನ್ ಗಂಡಸು ತನ್ನ ೩೫ನೆಯ ವಯಸ್ಸಿನಲ್ಲಿ ಹೃದಯದ ಕ್ರಿಯಾಶಕ್ತಿಯಲ್ಲಿ ಮೂರರಲ್ಲೊಂದು ಭಾಗವನ್ನೂ ಹೆಂಗಸು ನಾಲ್ಕರಲ್ಲೊಂದಂಶವನ್ನೂ ಕಳೆದುಕೊಳ್ಳುತ್ತಾರೆ. ಯುಕ್ತ ವಯಸ್ಸಿನಲ್ಲಿ ಅಂಗಸಾಧನೆಯನ್ನು ಮಾಡಿದ್ದಲ್ಲಿ ಆ ನಷ್ಟವನ್ನುಳಿಸಿಕೊಳ್ಳಬಹುದಿತ್ತು. ೫೫ನೆಯ ವಯಸ್ಸಿನಲ್ಲಿಯೂ ಕ್ಲಪ್ತ ಅಂಗಸಾಧನೆಯಿಂದ ಈ ಕೊರತೆಯನ್ನು ಸಾಕಷ್ಟು ಕಡಿಮೆ ಮಾಡಿಕೊಳ್ಳುವುದು ಸಾಧ್ಯವೆಂಬ ಅನುಭವದಿಂದಲೇ ೫೫—೭೦ ವರ್ಷದ ಮುದುಕ ಮುದುಕಿಯರೂ ಆ ನಗರ ಸಭೆಯ ಕರೆಯನ್ನು ಮನ್ನಿಸಿ ಓಡಿ ಬಂದಿದ್ದಾರೆ.

ನಾಗರಿಕರು ವ್ಯಾಯಾಮದಲ್ಲಿ ಅನಾಸ್ಥೆಯನ್ನು ತೋರುತ್ತಿರುವುದು ನಗರ ಸಭೆಯ ಗಮನಕ್ಕೆ ಬಂದಿತ್ತು. ಈ ಬಗ್ಗೆ ಅದೊಂದು ಪರಿಶೀಲನೆಯನ್ನು ನಡೆಸಿತು. ಇದರಿಂದ ಐವರಿಗೊಬ್ಬ ತರುಣನಿಗೆ ಮಾತ್ರ ವ್ಯಾಯಾಮದಲ್ಲಿ ಆಸಕ್ತಿಯಿರುವುದೆಂದು ತಿಳಿದು ಬಂತು. ನಗರದಲ್ಲಿ ಸರಕಾರದ ಆರ್ಥಿಕ ನೆರವಿನಿಂದ ಕ್ರೀಡಾ ಸಂಘವನ್ನು ತೆರೆಯುವ ಆಲೋಚನೆಯನ್ನದು ಮಾಡಿತು. ಯಾರೇ ಬೇಕಾದರೂ ನಿಶ್ಶುಲ್ಕವಾಗಿ ಈ ಸಂಘದಿಂದ ಪರಿಪೂರ್ಣ ಲಾಭವನ್ನು ಪಡೆಯುವ ಸೌಲಭ್ಯವನ್ನದು ಒದಗಿಸಿತು.

ಇಲ್ಲಿ ಇದೇ ಕ್ರೀಡೆಯಲ್ಲಿ ಭಾಗವಹಿಸಬೇಕೆಂಬ ನಿಯಮವಿಲ್ಲ. ಅವನವನ ಮನಸ್ಸಿಗೆ ತೋರಿದ್ದನ್ನು ಆತ ಅನುಸರಿಸಬಹುದು. ಕುಳಿತಲ್ಲೇ ಕುಳಿತು ಮಾನಸಿಕವಾಗಿ ಕೆಲಸ ಮಾಡಿದವರು ಆಟವಾಡಬಹುದು, ವ್ಯಾಯಾಮ ಮಾಡಬಹುದು, ಈಜಾಡಬಹುದು. ಮಾನವನ ಶರೀರದಿಂದ ಬೆವರು ಚೆನ್ನಾಗಿ ಹೊರ ಹೋಗಬೇಕೆಂದಿದ್ದರೆ, ಅವನ ನಾಡಿಯು ನಿಮಿಷಕ್ಕೆ ೧೫೦ ಬಾರಿ ಹೊಡೆದುಕೊಳ್ಳಬೇಕು— ಎಂದು ಕಂಡುಹಿಡಿದಿದ್ದಾರೆ. ಹೀಗಾಗಿ ದೇಹದಲ್ಲಿನ ಅನಾವಶ್ಯಕ ನೀರು ಹೊರಗೆ ಹೋಗಿ ನರಮಂಡಲವು ಬಲಯುತವಾಗುವುದಕ್ಕೆ ಯಾವ ಬಗೆಯ ದೇಹ ಸಾಧನೆಯನ್ನೂ ಅನುಸರಿಸಬಹುದು.

ಮನ್‌ಸ್ಟರ್ ನಗರ ಸಭೆಯು ಕ್ರೀಡೆಗಳಲ್ಲಿ ಭಾಗ ವಹಿಸುವ ಸೌಲಭ್ಯಗಳನ್ನಷ್ಟೇ ಒದಗಿಸಿದ್ದಲ್ಲ. ಆಡುವಾಗ, ಏನಾದರೊಂದು ಅಪಘಾತ ನಡೆದೀತೆಂದು ಒಬ್ಬ ಆಟಗಾರನಿಗಾ ಜೀವವಿಮೆ ಮಾಡಿಸುವ ಏರ್ಪಾಡಿದೆ. ಮನ್‌ಸ್ಟರ್ ನಗರ ಸಭೆಯ ಮಾದರಿಯನ್ನೇ ಅನುಸರಿಸಲು ಪಶ್ಚಿಮ ಜರ್ಮನಿಯ ಉಳಿದ ನಗರ ಸಭೆಗಳೂ ಮುಂದೆ ಬಂದಿವೆ.

ಭಾರತದಲ್ಲಿ ಅಂಗಸಾಧನೆಯ ಬಗ್ಗೆ ಇತ್ತೀಚೆಗಿನ ವರ್ಷಗಳಲ್ಲಿ ಆಸಕ್ತಿಯು ಹುಟ್ಟಿ ಬೆಳೆದು ಬರುತ್ತಿದೆ. ಅನೇಕ ನಗರ ಸಭೆಗಳೂ ಕ್ರೀಡಾರಂಗಗಳನ್ನೂ ಸ್ಥಾಪಿಸಿ ನಡೆಸಿಕೊಂಡು ಬರುತ್ತಿವೆ. ಪ್ರತಿ ಶಾಲೆ—ಕಾಲೇಜುಗಳಲ್ಲಿಯೂ ವ್ಯಾಯಾಮ ಶಿಕ್ಷಣವನ್ನು ನೀಡುವ ವ್ಯವಸ್ಥೆಯು ಇಂದು ಇದೆ. ಹಲವಾರು ಕ್ರೀಡಾ ಸಂಸ್ಥೆಗಳೂ ಹುಟ್ಟಿ ಜನತೆಯಲ್ಲಿ ವ್ಯಾಯಾಮದ ಬಗ್ಗೆ ಕುತೂಹಲವನ್ನು ಕೆರಳಿಸುತ್ತಿವೆ; ತಮ್ಮತ್ತ ಆಕರ್ಷಿಸುತ್ತಿವೆ. ವ್ಯಾಯಾಮ—ಕ್ರೀಡೆಗಳು ಮಾನವನ ನಿತ್ಯ ಜೀವನದ ಅಂಗವಾದಾಗಲೇ ಸ್ವಸ್ಥ[illegible]ವಾದ ಪ್ರಜೆಗಳು ಬೆಳೆಯಲು ಅನುಕೂಲವಾಗುವುದು; ಆಗಲೇ ಸುದೃಢ ಜನಾಂಗವು ರೂಪುಗೊಳ್ಳುವುದು; ಅದೇ ದೇಶ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಬಲ್ಲದು.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಚೈನೀಯರ ಅಣುಗುಂಡು ಸ್ವಭಾವ

(ಆರನೇ ಪುಟದಿಂದ)

ಮ್ಯೂನಿಸ್ಟರು ಹೇಳುತ್ತಿದ್ದಾರೆ! ಕೊಲಂಬೋ ಸಲಹೆಗಳಿಗೇನೇ ಅವರು ಒಪ್ಪಿರುವದಿಲ್ಲ, ಹಾಗಿರುವಾಗ ಮಾತು ಕತೆಗಳಿಗೆ ಅದೆಂತು ಸಾಧ್ಯ? ಆದರೆ ಕಿಶನ್ ಚಂದರು ಹೇಳುವಂತೆ ಸ್ನೇಹಕ್ಕೆ ಸಾಧ್ಯವೇ ಇಲ್ಲವೇನು? ಒಂದೇ ಉಸಿರಿನಲ್ಲಿ ಸಾಧ್ಯವಿಲ್ಲವೆನ್ನುವದು ಸರಿಯಲ್ಲ. ಅದು ಭಾರತೀಯರ ಮೇಲೆ ಹೊಂದಿಕೊಂಡಿದೆ. ನಮ್ಮಲ್ಲಿ ಒಗ್ಗಟ್ಟು ಇದ್ದಲ್ಲಿ, ನಮ್ಮಿಂದ ಅವರನ್ನು ಜೀರ್ಣಿಸಿಕೊಳ್ಳಲು ಸಾಧ್ಯವಿದ್ದಲ್ಲಿ ಸ್ನೇಹತ್ವ ಸುಲಭಸಾಧ್ಯ. ಇಲ್ಲದಿದ್ದಲ್ಲಿ ಇಲ್ಲವೇ ಇಲ್ಲ.

"ಅವರ ವೈಯಕ್ತಿಕ ಜೀವನದ ಕುರಿತು ಹೇಳುವದಿದ್ದಲ್ಲಿ ಅವರು ಬಹಳ ಕೊಳಕು ಜನರು. ಸಂಸಾರ ಬಿಟ್ಟು ಹಾಕಿದಲ್ಲಿ ವರ್ಷಕ್ಕೊಮ್ಮೆ ಅವರು ಸ್ನಾನ ಮಾಡುತ್ತಾರೆಂದರೆ ಅತಿಶಯೋಕ್ತಿಯಾಗಲಾರದು. ಚೈನಾದ ಕರಾವಳಿ ಪ್ರದೇಶವು ಸೆಕೆಗಾಲದಲ್ಲಿ ಬಹಳ ಬೆಚ್ಚಗಿರುತ್ತದೆ. ಅವರ ಮುಖ್ಯ ಆಹಾರವೆಂದರೆ ಅನ್ನ ಮತ್ತು ಹಂದಿ ಮಾಂಸ."

"ಮತ ಸಂಪ್ರದಾಯವೆಂದರೆ ಅವರಿಗೆ ಅರ್ಥವಾಗುವಂತಿಲ್ಲ. ಲಾಭಕ್ಕಾಗಿ ಅವರು ಮತವನ್ನು ಬದಲಾಯಿಸುತ್ತಿರುತ್ತಾರೆ. ದೊಡ್ಡ ಮನೆತನದ ಹಕ್ಕಿಗಾಗಿ ಚಿಯಾಂಗ್ ಕೈಶೇಕ್ ಕ್ರಿಸ್ತೀಯ ಮತಕ್ಕೆ ಮತಾಂತರ ಹೊಂದಿದ್ದರು. ಸಾಧಾರಣ ಚೈನೀಯನ ವಿಷಯ ಇನ್ನು ಹೇಗಿರಬಹುದು?"

'ವೈಯಕ್ತಿಕವಾಗಿ ಹಾಗಿದ್ದಲ್ಲೂ ಸಾಮೂಹಿಕವಾಗಿ ಅವರಲ್ಲಿ ಒಗ್ಗಟ್ಟು ಇರುತ್ತದೆ. ಜಪಾನು ಆಕ್ರಮಣ ನಡೆಸಿದಾಗ ಎಲ್ಲಾ ಚೈನೀಯರೂ ಒಂದಾಗಿದ್ದರು. ಆಗ್ನೇಯ್ಯದಲ್ಲಿ ನಡೆದಿದ್ದ ಒಂದು ಘಟನೆ ಅದಕ್ಕೆ ಉತ್ತಮ ಉದಾಹರಣೆ. ಅಲ್ಲಿಯ ಒಂದು ಸ್ಥಳದಲ್ಲಿ ನಗರ ರಕ್ಷಕರು ಹೋಗಿ ಇಲ್ಲಿ 'ಚಾಂಗ್'ಯಾರೆಂದು ಕೇಳಿದರು. ಅಲ್ಲಿದ್ದವರೆಲ್ಲರೂ ತಾನು ಚಾಂಗ್, ತಾನು ಚಾಂಗೆಂದು ಹೇಳಿದರು. ನಗರ ರಕ್ಷಕರಿಗೆ ಏನು ಮಾಡುವದೆಂದು ಗೊತ್ತಾಗಲಿಲ್ಲ. ಅವರು ತಾವು ಬಂದಿರುವ ಕೆಲಸದ ಕುರಿತು ತಿಳಿಯಪಡಿಸಿದರು—ಚಾಂಗನು ಒಂದು ಅಪರಾಧ ಮಾಡಿದ್ದಾನೆ. ಆದುದರಿಂದ ಅವನನ್ನು ಬಂಧಿಸಬೇಕಾಗಿದೆಯೆಂದು ಅವರು ಹೇಳಿದರು. ಹಾಗೆ ಅವರು ಹೇಳಿದ್ದೇ ತಡ ಅವರೆಲ್ಲರೂ, "ಹೋ, ಆ ಚಾಂಗನೇ ಅವನು ಈ ಸ್ಥಳ ಬಿಟ್ಟು ಹೋಗಿ ಬಹಳ ದಿನಗಳಾಗಿವೆಯೆಂದು ಒಕ್ಕೊರಲಿನಿಂದ ಹೇಳಿದರು."

ಕಿಶನ್ ಚಂದರು ತಿಳಿಸಿರುವ ಚೈನೀಯರ ಈ ಒಂದು ಗುಣ ಪ್ರಶಂಸನೀಯವಿದೆಯಾದರೂ ಇಂದಿನ ಪರಿಸ್ಥಿತಿಯಲ್ಲಿ ಭಾರತೀಯರ ಎಚ್ಚರಿಸುವಂತಹದ್ದಿದೆ. ನಾವು ಅದೆಷ್ಟು ಜಾಗರೂಕತೆಯಿಂದ ಇದ್ದರೂ ಸಾಲದೆಂಬುದಕ್ಕೆ ಅದೊಂದು ಉತ್ತಮ ನಿದರ್ಶನ. ಶ್ರೀ ಲಂಕೆಯಲ್ಲಿ ನಡೆಯುತ್ತಿರುವ ಘಟನೆಗಳು ಅದಕ್ಕೆ ಪುಷ್ಟಿಯನ್ನೀಯುತ್ತಿವೆ. ಚೈನೀಯರು ಚೈನಾದಿಂದ ಬಂದು ಶ್ರೀ ಲಂಕೆಯ ವಿಮಾನ ನಿಲ್ದಾಣದಲ್ಲಿ ಇಳಿಯುವದೇ ತಡ, ಅವರ ರಾಯಭಾರಿ ಕಾರ್ಯಾಲಯದಿಂದ ಸುಸಜ್ಜಿತ ವಾಹನ ಅಲ್ಲಿಗೆ ಬರುತ್ತದೆ—ಅವರನ್ನು ಕರೆದುಕೊಂಡು ಹೋಗಲು. ಅನಂತರ ಆ ರೀತಿ ಬಂದವರನ್ನು ಹಿಡಿಯುವದಾದರೂ ಹೇಗೆ? ಸಿಂಹಳಕ್ಕೆ ಅದೊಂದು ತಲೆ ನೋವಿನ ವಿಷಯವಾಗುತ್ತ ಬರುತ್ತಿದೆ.

"ಚೈನಾದಲ್ಲಿಂದು ದನ-ಕರು, ಎತ್ತು-ಕೋಣಗಳು ಕಾಣಲು ಸಿಗುವದಿಲ್ಲ. ಮಾನವ ಬಲ ಅಲ್ಲಿ ಬಹಳ ಅಗ್ಗ. ಹಿಂದೆ ಎತ್ತು—ಕೋಣಗಳು ಮಾಡುತ್ತಿದ್ದ ಕೆಲಸವನ್ನಿಂದು ಅಲ್ಲಿ ಮನುಷ್ಯರೇ ಮಾಡುತ್ತಿದ್ದಾರೆ. ಚೈನೀಯರಿಗೆ ಹಾಲು ಕುಡಿಯುವ ಅಭ್ಯಾಸವೇ ಇಲ್ಲ. ಹಾಲು ಕುಡಿಯಬಹುದೆಂಬುದೇ ಅವರಿಗೆ ಗೊತ್ತಿಲ್ಲ!"

ಇದೊಂದು ತಮಾಷೆಯ ವಿಷಯವಿದೆಯಾದರೂ ಭಾರತೀಯರು ಗಮನಿಸಬೇಕಾಗಿರುವ ವಿಷಯವಿದೆ. ಹಾಲು ಕುಡಿಯಲೊಪ್ಪದವನ ಕುರಿತು ಅದೆಷ್ಟು ಜಾಗ್ರತೆಯಲ್ಲಿರಬೇಕಾಗುತ್ತದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ದನಕರುಗಳನ್ನು ಹುಲಿಯಾದರೂ ಬಿಟ್ಟೀತು. ಚೈನೀಯರು ಬಿಡುವದಿಲ್ಲವೆಂದು ಕಾಣುತ್ತದೆ. ಹಿಂದಿನ ಲೇಖನಗಳಲ್ಲಿ ತಿಳಿಸಿರುವಂತೆ, ಭಾರತೀಯರು ಅಯ್ಯಪ್ಪನ ಆರಾಧಕರಿದ್ದಾರೆ. ಹಾಗಿರುವಾಗ ಅವರು ಚೈನೀಯರಿಗೆ ಭಯಪಡುವದುಂಟೇ?

"ಇನ್ನು ಚೈನೀಯರಿಬ್ಬರು ಸಾಧಾರಣವಾಗಿ ಮಾತಾಡುತ್ತಿದ್ದಾರೆಂದರೆ ಬಡ ಭಾರತೀಯ ಚೋರಿ ಗೌಡನು ಅವರು ಜಗಳಾಡಿಕೊಳ್ಳುತ್ತಿದ್ದಾರೆಂದೇ ಮೋಸ ಹೋಗುತ್ತಾನೆ. ಅವರು ಮಾತಾಡುವದೇ ಆ ರೀತಿ. ಇನ್ನು ಅವರ ಅಭಿನಯ, ಢಂಗಿನ ಕುರಿತು ಹೇಳಬೇಕಾಗಿಯೇ ಇಲ್ಲ. ಆದೆಂತಹವನನ್ನು ಮೋಸಗೊಳಿಸಬಲ್ಲವು."

ಬಹುಶಃ ಈ ಅಭಿನಯದಿಂದಲೇ ಶ್ರೀ ಜವಾಹರಲಾಲಜೀ ಮೋಸ ಹೋದರೆಂದು ಕಾಣುತ್ತದೆ. ಮಾನವನೇನೋ ಒಮ್ಮೆ ಮೋಸ ಹೋಗಬಹುದು. ಆದರೆ ಪದೇ ಪದೇ ಮೋಸ ಹೋಗುವವನನ್ನು ಮಾನವನೆನ್ನುವದು ಸರಿಯಲ್ಲ.

ಚೈನೀಯರು ಈ ರೀತಿ ಅತ್ಯಂತ ಕ್ರೂರಿಗಳು (ಚೆಂಗೀಸಖಾನನ ಸಂತತಿಯವರು) ಹಾಗೂ ನಟನಾ ಕೌಶಲ್ಯತೆಯನ್ನು ಕರಗತಗೊಳಿಸಿಕೊಂಡಿದ್ದು ಒಕ್ಕಟ್ಟಿನ ಅರ್ಥವನ್ನು ತಿಳಿದುಕೊಂಡವರಾಗಿರುವರು. ಭಾರತೀಯರು ಪುನಃ ಮೋಸ ಹೋಗಬೇಕಾಗಿಲ್ಲ; ಧೈರ್ಯಗುಂದಬೇಕಾಗಿರುವದಿಲ್ಲ. ಅದರ ಕಾರಣವನ್ನು ಶ್ರೀ ಕಿಶನ್‌ಚಂದ್ ತಿಳಿಸಿರುವರು.

"ಭಾರತೀಯ ಸೈನಿಕನೆಂದರೆ ಚೈನೀಯರಿಗೆ ಎಲ್ಲಿಲ್ಲದ ಭಯ. ಅವರನ್ನು ಚೈನೀಯರು ಕಪ್ಪು ದೆವ್ವ ಅಥವಾ ಮೆಲ್ ಕಾಯಿಗಳೆಂದು ಕರೆಯುತ್ತಾರೆ."

ಹೀಗಿರುವಾಗ ನಾವು ಹೆದರಬೇಕಾಗಿದೆ ಏನು? ಆದರೆ ಇದ್ದಕ್ಕಿದ್ದಂತೆ ಮಿಡಿತೆಗಳೋಪಾದಿ ಬರುವ ಚೈನಿ ಸೈನಿಕರನ್ನು ಬರಿಗೈಯಲ್ಲಿ ಎದುರಿಸಲು ಸಾಧ್ಯವೇನು? ಅದಕ್ಕೆ ನಾವು ಸನ್ನದ್ಧಗೊಳ್ಳಬೇಕು. ಆಧುನಿಕ ಶಸ್ತ್ರಾಸ್ತ್ರ, ಔಷಧಿ, ಆಹಾರಗಳನ್ನು ಒದಗಿಸಬೇಕು. ಅದನ್ನು ಬಿಟ್ಟು

"ತೋಳ ಬಂದಿತು", "ತೋಳ ಬಂದಿತು" ಎನ್ನುವಂತೆ ಚುನಾವಣಾ ಕಾಲದಲ್ಲಿ ಚೈನೀಯರು ಮುಂದಕ್ಕೆ ಬರುತ್ತಿದ್ದಾರೆಂದು ರಕ್ಷಣೆಯ ಜವಾಬ್ದಾರಿ ಹೊತ್ತುಕೊಂಡಿರುವವರು ಘೋಷಣೆ ಹಾಕುತ್ತಿದ್ದರೇನು ಫಲ?

ಇದೀಗ ಸರಕಾರ [ಮಿಥ್ಯ?] ವರ್ಷ ಆರಂಭವಾಗುತ್ತದೆ. ಅಂದರೆ ಸರಕಾರದ ವಗ ಲೆಕ್ಕ ಪ್ರಕಾರ ಭಾರತ ಹೊಸ ವರ್ಷದಲ್ಲಿ ಕಾಲಿಡುತ್ತಿದೆ ಆಗ ಹಿಂದೆ ನಡೆದು ಬಂದುದ್ದ ಸಿಂಹಾವಲೋಕನಗೈಯ್ಯುವದು ಸ್ವಾಭಾವಿಕ. ಆದಾಯದ ಮಿಥ್ಯ ಘೋಷಣೆ ಹಾಕಿರುವತ್ತ ಸಿಂಹಾವಲೋಕನವನ್ನು ಆ ಸಮಯದಲ್ಲಿ ಮಾಡಿ ರಕ್ಷಣಾ ಕಾರ್ಯದತ್ತವೇ ಜನಮನ ಕೂಡಲು ಸ್ಫೂರ್ತಿ ಚಿಲುಮೆ ಆಗ ನಮ್ಮ ಹೃದಯದಿಂದ ಪುಟಿದೆದ್ದೀತೆ?

ದಕ್ಷಿಣ ಕನ್ನಡಕ್ಕೆ ಹೊಸ ರಿಸೆಟ್ಲ್‌ಮೆಂಟ್ ಕಂದಾಯ ಮಸೂದೆಯನ್ನು ಅನ್ವಯಿಸಬಾರದು

ಬೆಂಗಳೂರಿನಲ್ಲಿ ದ.ಕ. ಕೃಷಿಕ ಸಂಘದ ನಿಯೋಗ

ಮೈಸೂರು ಸರಕಾರವು ಜ್ಯಾರಿಗೆ ತರಲಿರುವ ಹೊಸ ರಿಸೆಟ್ಲ್‌ಮೆಂಟ್ ಕಂದಾಯ ಮಸೂದೆಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಅನ್ವಯಿಸಬಾರದೆಂದೂ ಇದು ಈ ಹಿಂದೆ ಬ್ರಿಟಿಷ್ ಸರಕಾರವು ಕೊಟ್ಟ ಆಶ್ವಾಸನೆಯ ಉಲ್ಲಂಘನೆಯೆಂದೂ, ಜಿಲ್ಲೆಯಲ್ಲಿ ಕಂದಾಯ ಏರಿಸುವುದು ರೈತ ವರ್ಗದ ಮೇಲೆ ಭೀಕರ ದುಷ್ಪರಿಣಾಮವನ್ನುಂಟುಮಾಡಲಿದೆಯೆಂದೂ ಮುಂದಿಟ್ಟು ಮಾಡಿ, ಈ ಕಾಯಿದೆಯನ್ನು ಪ್ರತಿಭಟಿಸುವರೆ ದ. ಕ. ಕೃಷಿಕ ಸಂಘದ ನಿಯೋಗವೊಂದು ಬೆಂಗಳೂರಿಗೆ ತೆರಳಿ ರಾಜ್ಯದ ಅರ್ಥ ಮಂತ್ರಿ ಶ್ರೀ ಬಿ.ಡಿ.ಜತ್ತಿ ಹಾಗೂ ಶಾಸನ ಸಭೆಯ ಸದಸ್ಯರನ್ನು ಭೇಟಿ ಮಾಡಿ ಮನವಿಯೊಂದನ್ನರ್ಪಿಸಿತು.

ಈ ನಿಯೋಗದ ಮುಂದಾಳುತ್ವವನ್ನು ಕೃಷಿಕ ಸಂಘದ ಅಧ್ಯಕ್ಷರಾದ ಶ್ರೀ ಎಂ.ಡಿ. ಅಧಿಕಾರಿಯವರು ವಹಿಸಿದ್ದರು. ಸರ್ವ ಶ್ರೀ ಕೆ. ಎಸ್. ನಾಯ್ಕ, ಪುತ್ತೂರು; ಕೊಚ್ಚಿಕಾರ್ ವರದರಾಯ ಪೈ, ಉಡುಪಿ; ಬೋಳ ರಘುರಾಮ ಶೆಟ್ಟಿ, ಕಾರ್ಕಳ; ನೂಜಿಬೈಲು ರಾಮಚಂದ್ರ ಭಟ್ಟ ಮತ್ತು ಮೂಲಿಂಗೇಶ್ವರ ಭಟ್ಟ, ಪುತ್ತೂರು. ಹಾಗೂ ಅಶ್ವತ್ಥಪುರದ ಮಧ್ವರಾಯ ಭಟ್ಟರು ಈ ನಿಯೋಗದ ಸದಸ್ಯರಾಗಿದ್ದರು.

ಅರ್ಪಿಸಿದ ಮನವಿಯು ಕೆಲವಾರು ವಿಷಯಗಳನ್ನೊಳಗೊಂಡಿದ್ದು, ಕಂದಾಯದ ಏರಿಕೆಯು ಯಾವ ರೀತಿಯಲ್ಲಿ ನ್ಯಾಯಬಾಹಿರವಾಗಿದೆ ಎಂಬುದನ್ನು ವಿಶದಪಡಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೦೪ ಹಾಗೂ ೧೯೩೪ರ ಹೀಗೆ ಎರಡು ಬಾರಿ ಕಂದಾಯವನ್ನು ಏರಿಸಿದ್ದು, ಮೊದಲ ಬಾರಿ ೬೫% ಹಾಗೂ ಎರಡನೇ ಬಾರಿ ೧೨½%ದಷ್ಟು ಕಂದಾಯ ಏರಿಸಲಾಗಿದೆ. ಈ ಸಂದರ್ಭ ಅಂದಿನ ಬ್ರಿಟಿಷ್ ಸರಕಾರವು ಇನ್ನು ಮುಂದಕ್ಕೆ ಕಂದಾಯವನ್ನು ಏರಿಸುವುದಿಲ್ಲ ಎಂಬ ಆಶ್ವಾಸನೆ ಇತ್ತಿತ್ತು. ಈಗ ಈ ಆಶ್ವಾಸನೆಯನ್ನು ಮೈಸೂರು ಸರಕಾರವು ಮೀರಿಯುವುದು ಸಾಧ್ಯವಾದ ಕಾರ್ಯವಲ್ಲ ಎಂದು ಮನವಿಯಲ್ಲಿ ವಾದಿಸಲಾಗಿದೆ.

ಮೇಲಾಗಿ ಸೆಟ್ಲ್‌ಮೆಂಟ್ ಆಫೀಸರರು ಕಾನೂನಿಗನುಗುಣವಾಗಿ ಕಂದಾಯ ವಲಯಗಳನ್ನು ನಿಶ್ಚಯಮಾಡಿರುವುದಿಲ್ಲ. ಕಂದಾಯ ವಲಯದೊಳಗೆ ಮಣ್ಣಿನ ಗುಣದ ಮೇಲೆ ಅಥವಾ ಭತ್ತ, ಅಡಿಕೆ, ತೆಂಗು ಮುಂತಾದ ಬೆಳೆಗಳ ಉತ್ಪತ್ತಿಯ ಪ್ರಮಾಣದಲ್ಲಿ ಕಂದಾಯ ನಿರ್ಣಯವನ್ನು ಮಾಡಿರುವುದಿಲ್ಲ. ಆಫೀಸರರು ಮಾಡಿರುವ ವರದಿ ಕೇವಲ ಊಹನೆ ಹಾಗೂ ಕಲ್ಪನೆಗಳಿಂದ ಮಾಡಿದ್ದು ವಾಸ್ತವಿಕ ಅಂಶಗಳಿಂದ ದೂರವಾಗಿದೆ ಎಂದೂ ಮನವಿಯಲ್ಲಿ ತಿಳಿಸಲಾಗಿದೆ.

ಈ ಸಂದರ್ಭ ಕೃಷಿಕರು ಅರ್ಪಿಸಿದ ಮನವಿಗಳನ್ನು ತಳ್ಳಿಹಾಕಿ ಏಕಪಕ್ಷೀಯವಾಗಿ ವರದಿ ಸಲ್ಲಿಸಲಾಗಿದೆ ಎಂದೂ, ವಾಸ್ತವಿಕಾಂಶಗಳಿಂದ ದೂರವಿರುವ ಸೆಟ್ಲ್‌ಮೆಂಟ್ ಆಫೀಸರರ ವರದಿಯ ಆಧಾರದ ಮೇಲೆ ಕಂದಾಯದ ಪುನರ್ವಿಮರ್ಶೆ ಮಾಡಿರುವುದು ಪ್ರಜಾಸತ್ತೆಗೆ ವಿರೋಧವಾದ ಕಾರ್ಯವೆಂದೂ ಹೇಳಿ, ರೈತವರ್ಗದ ಮೇಲೆ ಈ ರೀತಿಯ ಅನ್ಯಾಯ ಮಾಡುವುದು ಸರಿಯಲ್ಲ ಎಂದು ಪ್ರತಿಭಟನೆ ಸೂಚಿಸಲಾಗಿದೆ.

ದಕ್ಷಿಣ ಕನ್ನಡದ ಮಣ್ಣು ನಿಸ್ಸಾರವಾಗಿದ್ದು, ಇಲ್ಲಿಯ ವ್ಯವಸಾಯವು ಮುಖ್ಯವಾಗಿ ಮುಂಗಾರು ಮಳೆಯನ್ನೇ ಹೊಂದಿಕೊಂಡಿದೆ. ಯಾವುದೇ ಬೃಹತ್ ರೂಪದ ನೀರಾವರಿ ಸೌಕರ್ಯ ನಮ್ಮ ಜಿಲ್ಲೆಯಲ್ಲಿಲ್ಲ. ಕೃಷಿಯ ಉಪಕರಣಗಳ ಬೆಲೆ, ನಾಗುವಳಿಯ ಮಜೂರಿ, ಬೀಜ ಗೊಬ್ಬರಗಳ ಬೆಲೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕೃಷಿಕನ ವರಮಾನ ಕಡಿಮೆಯಾಗುತ್ತ ಬರುತ್ತಿದೆ. ಮೇಲಾಗಿ ನಮ್ಮ ಹಳ್ಳಿಯ ರೈತರು ಸಾಲದ ಹೊರೆಯಿಂದ ನರಳುತ್ತಿದ್ದು, ಕೃಷಿಕರ ಜೀವನದಲ್ಲಿ ಯಾವುದೇ ಸುಧಾರಣೆಯಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚಿರುವ ಭೂಕಂದಾಯವನ್ನು ಮತ್ತಷ್ಟು ಏರಿಸುವುದು ನ್ಯಾಯೋಚಿತವಲ್ಲ. ಎಂದು ಮನವಿಯಲ್ಲಿ ಮನಗಾಣಿಸಲಾಗಿದೆ.

ದೇಶದಲ್ಲಿ ಆಹಾರ ಸಮಸ್ಯೆಯು ಭೀಕರ ತಾಂಡವನಾಡುತ್ತಿರುವ ಇಂದಿನ ದಿನಗಳಲ್ಲಿ ಕೃಷಿಕನ ಜೀವನವನ್ನು ಇನ್ನಷ್ಟು ದುರ್ಭರಗೊಳಿಸುವುದು, ದೇಶದ ಹಿತದೃಷ್ಟಿಯಿಂದ ಉಚಿತವಲ್ಲ. ಎಂದು ಹೇಳಿ ರೈತರಿಗಾಗುವ ಈ ಅನ್ಯಾಯವನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳಲಾಗಿದೆ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Directer of Public Instruction Madras.

ಕೃಷಿಕ ರಂಗ

ಯುಗಾದಿಗೆ ಮೊದಲ ಕರ್ತವ್ಯ

ಮಾರ್ಚ್ ತಿಂಗಳು ರೈತರಿಗೆ ತುಸು ಬಿಡುವಿನ ಕಾಲ; ಇದು ಫಸಲು ಮಾರುವ ಕಾಲ ಬೇರೆ. ರೈತರು ಆತುರಬಿದ್ದು ಬೆಳೆಯನ್ನು ಬಂದ ಬೆಲೆಗೆ ಮಾರಬಾರದು. ರೈತರು ಕೊಳ್ಳುವುದೂ ಕೊಡುವುದೂ ಸಹಕಾರ ಸಂಘಗಳ ಮೂಲಕ ನಡೆದರೆ, ಕಾಳುಗಳ ಏರಿದ ಬೆಲೆಯ ಲಾಭವು ರೈತರಿಗೆನೇ ದೊರೆಯುತ್ತದೆ. ಬಿಡುವಿನ ವೇಳೆಯನ್ನು ಹಾಳು ಮಾಡದೆ, ರೈತನು ಯೋಜನೆಯನ್ನು ಹಾಕಿಕೊಂಡು ಅಧಿಕೋತ್ಪಾದನೆಗೆ ನೆರವಾಗಬೇಕು.

ಬೇಸಗೆ ಭತ್ತ

ಮಾರ್ಚಿಯಲ್ಲಿ ಬೇಸಗೆ ಭತ್ತದ ನಾಟಿಯನ್ನು ಪ್ರಾರಂಭಿಸಬೇಕು. ಬಿತ್ತನೆ ಇಷ್ಟರೊಳಗಾಗಿಯೇ ಪೂರ್ತಿಯಾಗಿದೆ. ಪಾತಿಯಲ್ಲಿ ಕಳೆಗಳಿಲ್ಲದಂತೆ ಭೂಮಿಯನ್ನು ನೋಡಿಕೊಳ್ಳಬೇಕು. ಕಾಲ ಕಾಲಕ್ಕೆ ನೀರೆರೆದ, ಸಸಿಗಳನ್ನು ಕಾಪಾಡಬೇಕು.

ಜಪಾನ್ ಮಾದರಿಯ ಬೇಸಾಯವು ಲಾಭಕಾರಕವೆಂಬುದು ಇದು ವರೆಗಿನ ಅನುಭವ. ಆದುದರಿಂದ ನೀವೂ ಯಾಕೆ ಈ ಮಾದರಿಯಲ್ಲಿ ಬೇಸಾಯ ಮಾಡಬಾರದು? ಇನ್ನೂ ಬೇಸಾಯ ಮುಗಿಯದಿದ್ದರೆ, ಸುಧಾರಿಸಿದ ಬಿತ್ತನೆ ಬೀಜವನ್ನು ಆಯ್ದುಕೊಳ್ಳಿ. ಇದಕ್ಕೆ ಅಗ್ರೊಸಾನ್ ಅಥವಾ ಸೆರೆಸಾನ್ ಪುಡಿಯನ್ನು ೧೦-೧೫ ಸೇರುಗಳಿಗೆ ಒಂದು ತೊಲದಂತೆ ಬೆರಸಿ, ಎತ್ತರಿಸಿದ ಮಡಿಗಳಲ್ಲಿ ಮಡಿಯೊಂದಕ್ಕೆ ॥ ಪಾವಿನಷ್ಟು ಬೀಜವನ್ನು ತೆಳುವಾಗಿ ಬಿತ್ತಿ ಸಸಿಗಳಿಗೆ ೨೫-೩೦ ದಿನಗಳಾಗುವುದರೊಳಗೆ ನಾಟಿಮಾಡಿ ಕೆಲಸವನ್ನು ಮುಗಿಸಿ ಬಿಡಿ. ನಿಯಮಿತ ಪ್ರಮಾಣದಲ್ಲಿ ಜಮೀನಿಗೆ ಗೊಬ್ಬರ ಹಾಕಿ ನಾಟಿಯ ದಿನ ೫೦ ಕಿಲೋಗ್ರಾಮು ಅಥವಾ ೧೧೦ ರಾತಲು ಅಮೋನಿಯಂ ಸಲ್ಫೇಟು ಚೆಲ್ಲಿಕೊಂಡು ನಾಟಿಮಾಡಿ. ಪೈರನ್ನು ಸಾಲಾಗಿ ನಾಟಿ. ಜಪಾನು ಮಾದರಿಯ ರೋಟರಿ ಕಳೆಕೀಳಕವನ್ನು ಉಪಯೋಗಿಸುವುದರಿಂದ ಕಳೆ ನಾಶವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೊಳಕೆ ಬೆಳೆಯುವ ಸಮಯವಿದು. ಇದು ಅಲ್ಪಾವಧಿಯ ಬೆಳೆಯಾದುದರಿಂದ ಸಾರಜನಕ ಕೊಡುವ ಅಂಶವನ್ನು ಕಡಿಮೆ ಮಾಡಬೇಕು.

ನಾಟಿನ ಪೈರಿನ ಕಾಂಡ ಕೊರೆವ ಹುಳಗಳನ್ನು ನಾಶಪಡಿಸಬೇಕು. ಇಲ್ಲವಾದರೆ ಗಿಡದ ಸುಳಿ ಒಣಗಿ ಸಾಯುತ್ತದೆ. ಪೈರು ಚಿಕ್ಕದಿರುವಾಗಲೇ ಹುಳಗಳು ಬುಡವನ್ನು ಕೊರೆದು ಕಾಂಡದೊಳಗಡೆ ಸೇರುತ್ತವೆ.

ಪೆಟ್ರೋಮ್ಯಾಕ್ಸ್ ದೀಪದ ಗೂಡನ್ನು ರಚಿಸಿದರೆ, ಅದರಿಂದ ಆಕರ್ಷಿತವಾದ ಚಿಟ್ಟೆಗಳು ಸಾಯುವುವು. ಸುಳಿ ಸತ್ತ ಪೈರು ಕಂಡರೆ, ಅಂತಹ ಸಸಿಯನ್ನು ಬೇರು ಸಹಿತ ಕಿತ್ತು ಹಾಕಿ ಫಾಲಿಡಾಲ್ ದ್ರಾವಕವನ್ನು ಸೇ. ೦.೦೫ ರಂತೆ ಮಾಡಿ ಸಿಂಪಡಿಸಿ.

ಗೋಧಿ

ಉತ್ತರ ಕರ್ನಾಟಕದ ಅನೇಕ ಕಡೆಗಳಲ್ಲಿ ನೀರಾವರಿ ಗೋಧಿ ಬೆಳೆಗೆ ಈಗ ನೀರು ಹಾಯಿಸುವ ಕಾಲ. ಈ ಫಸಲಿಗೆ ಗೊಬ್ಬರ ಹಾಕಿದಷ್ಟೂ ಬೆಳೆ ಹುಲುಸಾಗುತ್ತದೆ. ರಾಸಾಯನಿಕ ಗೊಬ್ಬರ ಹಾಗೂ ಹಟ್ಟಿ ಗೊಬ್ಬರಗಳ ಮಿಶ್ರಣ ರೂಪದಲ್ಲಿ ಸಾರಜನಕ ಕೊಟ್ಟರೆ, ಹೆಚ್ಚು ಪರಿಣಾಮವಾಗುತ್ತದೆ. ಬಿತ್ತನೆಯಾದ ನಾಲ್ಕೈದು ವಾರಗಳಾದೊಡನೆಯೇ ನೀರು ಹಾಯಿಸಿ ಅನಂತರ ೧೫-೨೦ ದಿನಗಳಿಗೊಂದಾವರ್ತಿ ನೀರು ಬಿಡಬೇಕು.

ಕಬ್ಬು

ಈ ತಿಂಗಳು ಆಲೆಮನೆಯಲ್ಲಿ ಚಟುವಟಿಕೆ ತುಂಬಿರುತ್ತದೆ. ಹೊಸ ಕಬ್ಬನ್ನು ಬಿತ್ತದಿರುವವರು ಇನ್ನು ತಡ ಮಾಡಬಾರದು. ಬಿತ್ತನೆಗೆ ೮-೧೦ ತಿಂಗಳು ಆಗಿರುವ ಹೊರವಾದ ಎಳೆಯ ಕಬ್ಬನ್ನು ಆರಿಸಿ ಕತ್ತರಿಸಿಡಬೇಕು. ಒಂದು ತುಂಡಿಗೆ ಮೂರು ಕಣ್ಣುಗಳಿರಬೇಕು. ೪೮ ತಾಸು ನೀರಿನಲ್ಲಿ ನೆನೆಹಾಕಿ ತುಂಡುಗಳನ್ನೆಲ್ಲಾ ಒಂದು ನೀರ ಗಾಲುವೆಯಲ್ಲಿಟ್ಟು ನೀರು ಸಿಕ್ತಿಸಿದರೆ ಒಳ್ಳೆಯದು. ಬಿತ್ತನೆಯಲ್ಲಿ ಸಕ್ಕರೆ ಅಂಶ ಕಡಿಮೆಯಾಗಬೇಕು. ಸಾಧಾರಣ ಸೂಪರ್‌ಫಾಸ್ಫೇಟು ಗೊಬ್ಬರ ಒಂದು ಎಕ್ರೆಗೆ ೧೦೦ ಕಿಲೋಗ್ರಾಮು ಅಮೋನಿಯಂ ಸಲ್ಫೇಟು ಹಾಕಿ ಹಗುರವಾಗಿ ಮಣ್ಣಿನಲ್ಲಿ ಬೆರೆಸಬೇಕು. ಕಣ್ಣುಗಳು ತಳಕ್ಕೆ ಸಿಕ್ಕಿಕೊಳ್ಳದ ಹಾಗೆ ತುಂಡುಗಳ ಎರಡೂ ಕಡೆಗಳಲ್ಲಿ ಬರುವಂತೆ ಇಡಿ.

ಹಸಿರು ಗೊಬ್ಬರ

ಮಾರ್ಚಿಯಲ್ಲಿ ಹುರುಳಿ, ಅಲಸಂಡೆ, ಅಪ್ಸಣಬು ಮುಂತಾದುವನ್ನು ಬೆಳೆದು ಭೂಮಿಗೆ ಸೇರಿಸಿ ಮುಖ್ಯ ಬೆಳೆಗೆ ಉತ್ತಮ ಹಸಿರು ಗೊಬ್ಬರವನ್ನಾಗಿಸುವುದು ಸಾಮಾನ್ಯ ವಾಡಿಕೆ. ಈ ಹಸಿರು ಗೊಬ್ಬರಕ್ಕೆ ಗ್ಲಿರಿಸೀಡಿಯಾ ಗಿಡ ಬಹಳ ಉಪಯುಕ್ತವಾದುದು. ಇದು ಸುಲಭವಾಗಿ ಬೆಳೆದ, ಮಂಡೆ ಸೌದೆಗೂ ಉಪಯೋಗವಾಗುವುದು. ಮುಂಗಾರು ಮಳೆಯ ಸಮಯ ತುಂಡುಗಳನ್ನು ಅಥವಾ ಸಸಿಗಳನ್ನು ನಾಟಿದರೆ ಮಳೆಗಾಲ ಮುಗಿಯುವುದರೊಳಗೆ ಪುಷ್ಟ ಗಿಡವಾಗಿ ಮುಂದಿನ ಬೆಳೆಗೆ ಅನುಕೂಲವಾಗುತ್ತದೆ. ಭತ್ತದ ಗದ್ದೆಗೆ ಸೊಪ್ಪನ್ನೊದಗಿಸುತ್ತವೆ ಇವು. ಈ ಗಿಡಗಳನ್ನು ಗದ್ದೆಯ ಅಂಚುಗಳಲ್ಲಿ ಅಥವಾ ಹಿತ್ತಲ ತೋಟದ ಬದಿಯಲ್ಲಿ ಬೆಳೆಸಬಹುದು.

ತರಕಾರಿ ತೋಟ

ತರಕಾರಿ ತೋಟಗಳಿಗೆ ಹೆಚ್ಚು ನೀರನ್ನು ಒದಗಿಸಿ ನೀರಿನ ಕೊರತೆಯಿಂದ ಹೆಚ್ಚು ಬಿತ್ತನೆ ಮಾಡಲು ಸಾಧ್ಯವಾಗದ ಹೋದರೆ ಸೊಪ್ಪುಗಳು, ಪಡವಲ, ಹಾಗಲ, ಬೂದುಗುಂಬಳಗಳನ್ನು ಬಿತ್ತಬಹುದು.

ಮಾವಿನ ತೋಟದಲ್ಲಿ ಕಾಯಿಬಿಟ್ಟು ಕಾಯಾಗುವ ಕಾಲವಿದು. ನಿಂಬೆ, ದಾಳಿಂಬೆ, ಮೂಸಂಬಿ, ದ್ರಾಕ್ಷಿ ಮೊದಲಾದ ಹಣ್ಣಿನ ಗಿಡಗಳ ಆರಯ್ಕೆಯನ್ನು ಚೆನ್ನಾಗಿ ನೋಡಿಕೊಳ್ಳಬೇಕು.

ಜೇನು

ಗೂಡುಗಳು ವಿಭಾಗವಾಗಿ ಹೋಗುವ ಈ ಸಮಯದಲ್ಲಿ ತಾಯಿ ಹುಳು ಬಿಡದಿರಬೇಕು. ರಾಣಿ ಹುಳವು ಮುದಿಯಾಗಿದ್ದರೆ, ಗೂಡನ್ನು ಬಿಟ್ಟು ಹಳೆಯ ತಾಯನ್ನು ತೆಗೆದರೆ ಒಳ್ಳೆಯದು.

ಮುನ್ಸೂಚನೆ

ಮುಂಗಾರಿನ ಬಿತ್ತನೆಗೆ ಈಗಲೇ ಒಂದು ಸಲ ಗದ್ದೆಯನ್ನು ಉಳಬೇಕು. ಮಣ್ಣು ಗಟ್ಟಿಯಾಗಿದ್ದಲ್ಲಿ ಭಾರವಾದ ಕುಂಟೆಯನ್ನು ಉಪಯೋಗಿಸಬೇಕು. ಇದರಿಂದ ಏಪ್ರಿಲ್—ಮೇ ತಿಂಗಳಲ್ಲಿ ಮೊದಲ ಮಳೆ ಸಿಕ್ಕಿದೊಡನೆಯೇ ಉಳುವುದು ಸುಲಭವಾಗುತ್ತದೆ.

ಕಾರು ತಿಂಗಳ ಭತ್ತ, ರಾಗಿ ಬಿತ್ತನೆಗಾಗಿ ಸುಧಾರಿತ ತಳಿಯ ಬೀಜಗಳನ್ನು ಈಗಲೇ ವ್ಯವಸಾಯದ ಇಲಾಖೆಯವರಿಂದ ತೆಗೆದಿರಿಸಲು ಮರೆಯಬೇಡಿ. ಮುಂದಾಗಿ ಕೇಳಿಕೊಳ್ಳದಿದ್ದರೆ ಕೊನೆಗಳಿಗೆಯಲ್ಲಿ ಕಷ್ಟಪಡಬೇಕಾದೀತು. ಅದೇ ರೀತಿ ನಿಮಗೆ ಬೇಕಾದ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ವಸ್ತುಗಳು ಎಲ್ಲವನ್ನೂ ಈಗಲೇ ತಂದು ಸಿದ್ಧಮಾಡಿಟ್ಟುಕೊಳ್ಳಿ.

ನೀವೂ ಅತ್ತುಬಿಡಿ

ಕಣ್ಣೀರಿನಲ್ಲಿ ರೋಗ ನಿವಾರಕ ಗುಣವಿದೆ

'ಹೆಣ್ಣಿನ ಬಾಳೇ ಕಣ್ಣೀರು!' 'ಹೆಣ್ಣಿನ ಕಣ್ಣುಗಳು ಕಂಬನಿ ಹೊಳೆಯ ಉಗಮ ಸ್ಥಾನ!'—ಹಾಗೆ, ಹೀಗೆ ಎಂದು ಸ್ತ್ರೀಪರ ಸಹಾನುಭೂತಿಯುಳ್ಳವರು ಅಡಿಗಡಿಗೆ ನಿಟ್ಟುಸಿರು ಬಿಟ್ಟು ಹೇಳುವುದುಂಟು. ಆದರೆ, ಈಚೆಗೆ ನಡೆದ ಒಂದು ಸಂಶೋಧನೆಯಿಂದ, ಕಣ್ಣೀರಿಗೆ ಶರೀರದಲ್ಲಿರುವ ರೋಗಗಳನ್ನು ಶೀಘ್ರವಾಗಿ ಗುಣಪಡಿಸುವ ಅದ್ಭುತ ಶಕ್ತಿಯಿದೆಯೆಂದು ತಿಳಿದು ಬಂದಿದೆ. ಇದನ್ನು ಓದಿದ ಮೇಲೆ, ಇನ್ನು ಮುಂದೆ ಗಂಡಸರೂ ದಿನ ಬೆಳಗಾದರೆ ಮುಟ್ಟಿದ್ದಕ್ಕೆಲ್ಲಾ ಅಳುತ್ತಾ ಕುಳಿತರೆ ಆಶ್ಚರ್ಯ ಪಡಬೇಕಾದ್ದೇನೂ ಇಲ್ಲ.

'ಕಣ್ಣೀರನ್ನು ತಡೆಹಿಡಿಯಬೇಡ. ಮನಸ್ಸಿನ ದುಗುಡವನ್ನು ಪರಿಹರಿಸಿಕೊಳ್ಳಲು ಚೆನ್ನಾಗಿ ಅತ್ತು ಬಿಡು, ಕಣ್ಣೀರೇ ಬರದೆ, ಕಲ್ಲಿನಂತೆ ನಿಂತರೆ ಹೃದಯ ಸ್ತಂಭನದಿಂದ ಸತ್ತು ಹೋದೀಯೆ!' ಮುಂತಾಗಿ ಕಷ್ಟಗಳನ್ನು ಕಂಡಾಗ ವಿವೇಕಿಗಳು ಹೇಳುವುದುಂಟು. ಇದು ಇಂದು, ನಿನ್ನೆಯಿಂದ ಹೇಳುತ್ತಿರುವುದಲ್ಲ. ಪುರಾತನ ಕಾಲದಿಂದಲೂ ಈ ರೀತಿ ದುಃಖಿಗಳಿಗೆ ಹಿತೋಪದೇಶವನ್ನು ನೀಡಲಾಗುತ್ತಿದೆ. ಅತ್ತಷ್ಟೂ ತಲೆಯನ್ನು ಕವಿದುಕೊಂಡಿರುವ ಅಂಧಕಾರವು ದೂರಾಗಿ, ಮನಸ್ಸು ನಿರ್ಮಲವಾಗುವುದು. ದುಗುಡವು ದೂರಾಯಿತೆಂದರೆ, ದುಮ್ಮಾನವೂ ದೂರಾಗುವುದು. ಕಣ್ಣೀರಿನ ಈ ಮಹಾತ್ಮ್ಯವನ್ನು ತಿಳಿಯದವರೇ ಇಲ್ಲ.

ಆದರೆ, ಅದೇ ಕಣ್ಣೀರಿಗೆ ರೋಗ ನಿವಾರಣೆ ಶಕ್ತಿಯೂ ಇದೆಯೆಂಬ ವಿಷಯ ಮಾತ್ರ ಇದುವರೆಗೆ ಯಾರೂ ತಿಳಿದಿರಲಿಲ್ಲ. ಈಚೆಗೆ ಸ್ಟಟ್‌ಗಾರ್ಟಿನ ಮನಶ್ಶಾಸ್ತ್ರಜ್ಞನೊಬ್ಬ ಅಮೇರಿಕಾದ ಕೆಲವು ಲೇಖನಗಳಿಂದ ಪ್ರಚೋದಿತನಾಗಿ ಸಂಶೋಧನೆಗಳನ್ನು ನಡೆಸಿ, ಕಣ್ಣೀರಿಗೆ ರೋಗ ದೂರ ಮಾಡುವ ಮಹಾಶಕ್ತಿಯಿದೆಯೆಂಬುದನ್ನು ಕಂಡುಹಿಡಿದಿದ್ದಾನೆ.

ಮಧ್ಯರಾತ್ರಿಯಲ್ಲಿ ನಾಯಿಗಳು ಆಕಾಶವನ್ನು ನೋಡುತ್ತ ಊಳಿಯಿಡುವುದುಂಟು. ಗಂಭೀರ ನಿಶ್ಶಬ್ದವನ್ನು ಕದಡುವ ಆ ಊಳಿಯನ್ನು ಕೇಳಿ "ಹಾಳು ನಾಯಿ. ಅಳೋಕ್ಕೆ ಆರಂಭಿಸಿದೆ. ಯಾರಿಗೆ ಕೇಡು ಕಾದಿದೆಯೋ" ಎಂದು ಮನೆಯಲ್ಲಿನ ಮುಸಿಸಂಜೆ ದಾಟಿದ ಅಜ್ಜಮ್ಮಗಳು ಅನ್ನುವುದುಂಟು. ಇನ್ನು ಯಾರಾದರೂ ಮುಸಿಮುಸಿ ಅಳುತ್ತಿರುವಾಗ "ಈ ನಿನ್ನ ಮೊಸಳೆ ಕಣ್ಣೀರಿಗೆಲ್ಲಾ ನಾನು ಸೊಪ್ಪು ಹಾಕುತ್ತೀನಿ ಅಂತ ತಿಳೀ ಬೇಡ' ಅನ್ನುವುದುಂಟು. ನಿಜ ಹೇಳಬೇಕೆಂದರೆ, ನಾಯಿ, ಮೊಸಳೆ, ಅಷ್ಟೇಕೆ, ಯಾವ ಪ್ರಾಣಿಯೂ ಅಳುವುದೇ ಇಲ್ಲ. ಅಳುವ ಶಕ್ತಿಯೂ ಅವಕ್ಕಿಲ್ಲ. ನಾಯಿಯಂತೆ ಊಳಿಯಿಡುವ, ಮೊಸಳೆಯಂತೆ ಕಣ್ಣೀರು ಸುರಿಸುವ ಎಲ್ಲಾ ಶಕ್ತಿಯಿರುವುದೂ ಮನುಷ್ಯನೊಬ್ಬನಿಗೇ. ಈ ವಿಷಯದಲ್ಲಿ ಅವನಿಗೆ ಸಾಟಿಯೇ ಇಲ್ಲ!

ಕಣ್ಣೀರೆಂದರೇನು? ಕಣ್ಣೀರು ಗ್ರಂಥಗಳು ಸುರಿಸುವ, ಕ್ಷಾರವಾದ ದ್ರವ ಎಂದು ನಿಘಂಟು ತಿಳಿಸುತ್ತದೆ. ಆದರೆ, ಸಂಶೋಧನೆಗಳಿಂದ ಕಣ್ಣೀರಿನಲ್ಲಿ ಶರ್ಕರ, ಪ್ರೋಟೀನು, ಕ್ರಿಮಿನಾಶಕ ವಸ್ತುಗಳು ಅಡಗಿವೆಯೆಂದು ತಿಳಿದು ಬಂದಿದೆ. ಈರುಳ್ಳಿ ಹೆಚ್ಚಿದಾಗ, ಹೊಗೆ ತುಂಬಿದಾಗ ಬರುವ ಕಣ್ಣೀರಿನಲ್ಲಿ ಈ ಗುಣಕಾರಿ ಅಂಶಗಳಿರುವುದಿಲ್ಲ. ನಿಜವಾದ 'ಕಣ್ಣೀರ'ನಲ್ಲಿ ಈ ಅಂಶಗಳಿರುತ್ತವೆ. ಕಾಮಾಲೆಯವರು ಸುರಿಸುವ ಕಣ್ಣೀರು ಹಳದಿಯಾಗಿರುತ್ತದೆ. ಹಾಗೆಯೇ, ಬೇರೆ ಬೇರೆ ರೋಗಿಗಳ ಕಣ್ಣೀರಿನಿಂದ ಅವರ ರೋಗಗಳನ್ನು ಕಂಡುಹಿಡಿಯಬಹುದೇ ಎಂದು ನೋಡಲಾಗುತ್ತಿದೆ. ವಿಷಯ ಹೀಗಿರುವಾಗ, ಎಲ್ಲರೂ ಒಟ್ಟಿಗೆ ಕುಳಿತು 'ಹೋ' ಎಂದು ದಿನಕ್ಕೊಮ್ಮೆ ಅತ್ತರೆ ತಪ್ಪೇನು?

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 419/64.

ದ್ಯಾಮು ಹೆಗಡ್ತಿ —ವಾದಿಳು.

ಮತ್ತು

ಕೊರಪಳು ಸೆಟ್ಟಿ ಕೊಡಾ —ಪ್ರತಿವಾದಿರು.

ಯಿವರೊಳಗೆ

2ನೇ ಪ್ರತಿವಾದಿ ಅಂಗರ ಸೆಟ್ಟಿ—ಪದ್ಮ ಸೆಟ್ಟಿ ಮಗ—ಉಡುಪಿ ತಾಲ್ಲೂಕು ಬಡಾ ಗ್ರಾಮದ ಪೊಲ್ಯ.

ವಾದಿಳು ಪ್ಲೈಂಟು ನಿವೃತ್ತಿಗಳಿಗೆ ಮಾಡಿದ ಮೇಲಿನ ದಾವೆಯು ತಾ. 30.3.65ಕ್ಕೆ 2ನೇ ಪ್ರತಿವಾದಿಯು ಹಾಜರಿ ಬಗ್ಗೆ ಇಟ್ಟಿರುವುದರಿಂದ ಅದರಲ್ಲಿ ಸಾಫಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ 2ನೇ ಪ್ರತಿವಾದಿಗೆ ತಿಳಿಯಪಡಿಸಿರುತ್ತದೆ.

Y. C. S. HEGDE,
Advocate for Plaintiff.

ಉಡುಪಿ, ತಾ. 13.3.65.

ಮಾವನ ಮನೆಯಿಂದ ಮರಳಿದ ಅಳಿಯ

(ನಾಲ್ಕನೇ ಪುಟದಿಂದ)

"ಮತ್ತೆ ನೀವೆಲ್ಲಾ ಹೀಗಂದ್ರೆ....'

'ಏನೋ ತಮಾಷೆಗೆ ಅಂದ್ರೆ....'

'...ನಾನೂ ಹಾಗೇನೇ..."

"ಓ, ಹಾಗೋ...."

'ಹೌದು ಹಾಗೇನೇ ..."

'ಅಲ್ವೆ, ಏನೋ ಕೇಳೇಂದ್ರೆ ಅಂದೆಯಲ್ಲಾ...'

'ಅಂದಿರಬಹುದು. ನೀವು ಆಗ ಕೇಳ್ಲಿಲ್ಲ?'

'ಆಗ ಆಗ್ಲಿಲ್ಲ ಬಿಡು, ಈಗಾದ್ರೂ..."

'ಹೊತ್ತಿಗೆ ಬಾರದ ಹೊನ್ನಪ್ಪನಾದ್ರೆ....'

'ಅಲ್ವೆ, ಹೊತ್ತಿಗೆ ಸರಿಯಾಗಿ ಬರೋರಾದ್ರೂ ಯಾರೊಂತ?"

"ಹೌದು, ಎಲ್ರೂ ನಿಮ್ಮ ಹಾಗೇನೇ ಇದ್ದಾರೇಂತ ತೋರುತ್ತೆ..."

"ಇಲ್ಲಪ್ಪಾ, ಏನೋ ತುಸು ಕೆಲ್ಸ ಇತ್ತು...."

"ಕೆಲ್ಸವಿರೋದು ನಿಮ್ಗೆ ಮಾತ್ರಾಂತ ತೋರುತ್ತೆ..."

"ಅಲ್ವೆ, ಅಪ್ಪಾರಿಗೂ ಇಲ್ಲದ ಕೆಲ್ಸ ನನ್ಗೆ ಇತ್ತು.'

"ಏನು? ಅಂತಹ ಜೀವ ಹೋಗೋ ಕೆಲ್ಸ?'

"ಜೀವ ಹೋಗೋದಲ್ವೆ, ಜೀವ ತರೋದು?"

"ಏನೂಂತ?'

'ನಿಂಗೆ ಗೊತ್ತಿಲ್ವೆ?"

"...ಗೊತ್ತು. ನನ್ನನ್ನ ರೇಗಿಸಿ ಬಿಟ್ರು ತಾನು...."

"ಹೂ...ಹಾಗನ್ನ ಬೇಡ. ಯಾರಾದ್ರೂ ಕೇಳೇದ್ರೆ ಮತ್ತೆ..."

'ಕೇಳ್ಲಿ. ಮುಖಕ್ಕೆ ಮಂಗಳಾರತಿ ಎಲ್ಲೆ....'

"ಅಲ್ವೆ ನನ್ನ ಮುಖಕ್ಕೋ ನಿನ್ನ ದಕ್ಕೋ?'

"ಇಬ್ರದ್ದಕ್ಕೂ....'

"ಅದೀಗ ಸರಿಹೋಯ್ತು..."

"ಸರಿಹೋಯ್ತಲ್ಲ ಇಲ್ಲಿ ಅದು...."

"ಹ್ಞಾಂ ಇಲ್ಲಿ, ಇಲ್ಲಿ. ಯಾರು ಬೇಡಾಂತಾರೆ?"

"ಅಲ್ಲಿ..."

"ಎಲ್ಲಿ?"

"ಅಲ್ಲಿ, ನಿಮ್ಮ ತಲೆಯಲ್ಲಿ...."

"ಏನೂಂತ?"

"ಏನೂ ಇಲ್ಲ..."

"ಸುಳ್ಳು..."

"ಸತ್ಯ, ಸತ್ಯ, ಸತ್ಯ...."

"ಅಲ್ವೆ, ನನ್ನ ತಲೆಯಲ್ಲಿ ಏನೂ ಇಲ್ವೆ?"

"ಇದ್ರೆ ಯಾಕೆ ಹೀಗೆ ಮಾತಾಡ್ತೀರಿ?"

"ಸರಿಯಪ್ಪ, ಇನ್ನು ಹಾಗನ್ನೋಲ್ಲ.."

"ಹೇಗೆ?"

"ನನ್ನ ತಲೇಲಿ ಏನೂ ಇಲ್ಲೇಂತ..'

"ಇಲ್ದಿದ್ರೆ, ಒಂದು ಮಾತನಾಡಿದ್ರೆ ನೂರು ತಿಳ್ಕೊಂಡು ಸಾವಿರ ಅಂದು...."

"ಸದ್ಯ ಅಷ್ಟಾದ್ರೂ ಶಕ್ತಿಯಿದೆಯಲ್ಲಾ ತಲೇಲಿ! ಅದೇ ಸಂತೋಷ..."

"ಹ್ಞಾಂ....ನೋಡು..."

'ನೋಡ್ತಾ ಇದ್ದೀನಲ್ವೆ?'

'ಏನನ್ನ?'

"ನಿನ್ನ ಮುಖವನ್ನ....'

"ಹ್ಞಾಂ....ಹಾಗೇ ನೋಡ್ತಾ ಇರಿ.. ಅಲ್ಲಿ, ಪಾಕಿಸ್ತಾನ-ಭಾರತ ಗಡಿಯಲ್ಲಿ ಭಾರಿ ಗುಂಡು ಹಾರುತ್ತಿದೆ ಅಂತಲ್ಲಾ.."

"ನನ್ಗೇನೂ ಕಾಣಿಸೋಲ್ಲ...."

"ಅಯ್ಯೋ ನೀವೊಬ್ರು...."

"ಅಲ್ವೇ ನಾವಿಬ್ರು?"

"ಹೌದು ಹೌದು. ನಾವಿಬ್ರೇ ಇಲ್ಲಿರೋದು. ಅದ್ರಿಂದ ಬಚಾವಾಯ್ತನ್ನಿ.. ಆದ್ರೆ, ಆ ಗುಂಡಿನ ಮಳೆಯಿಂದ..."

"ಮಳೆ...ಮಳೆ ಬರೋಕಾಲಲ್ಲವಿದು.." ಗುಂಡು ಬಿಡುತಿದ್ದಾರಂತಲ್ಲಾ ಅವ್ರು, ಪಾಕಿಸ್ತಾನದವ್ರು...."

"ಹ್ಞಾಂ... ಪಾಕಿಸ್ತಾನದವ್ರು... ಹೌದು, ಪಶ್ಚಿಮ—ಪೂರ್ವ ಎಲ್ಲಾ ಗಡಿ ಪ್ರದೇಶದಲ್ಲೂ ಅವರದಿದೊಂದೇ ರೋಗ...."

"ಯಾಕೆ ಹಾಗೆ ಮಾಡ್ತಾರಂತೆ?"

"ಯಾಕೇಂತಂದ್ರೆ? ಈ ಅಳಿಯ ಮಾವನ ಮನೆಗೆ ಹೋಗಿ ಬಂದಿದ್ದಾನೆ ನೋಡು..."

"...ಅಂದ್ರೆ ಅಯ್ಯೂಬಖಾನರು ಪೀಕೆಂಗಿಗೆ ಹೋಗಿದ್ದಾರೆ...."

"ಹೌದು... ಅದರ ಪರಿಣಾಮವಿದು..

"ಅಂದ್ರೆ ಮತ್ತೊಮ್ಮೆ ನಮ್ಮ ಮೇಲೆ ದಾಳಿ...."

"ಅಯ್ಯೂಬಖಾನರ ಇರಾದೆಯೇ ಅದು ನೋಡು...."

"ಯಾಕೆ ಹಾಗಂತೀರಾ?"

'ನೋಡು, ಭಾರತದ ಶತ್ರುಗಳು ಯಾರಿದ್ದಾರೇಂತ ನೋಡಿಕೊಂಡೇ ಅವರ ಸ್ನೇಹ ಸಂಪಾದಿಸುತ್ತಾರೆ ಅವ್ರು....'

'ಅದರಿಂದ ನಮಗೇನಂತೆ?"

"ಮತ್ತಿನ್ನೇನೂ ಇಲ್ಲ. ನಮ್ಮ ಶಸ್ತ್ರ ಬಲ ಹೆಚ್ಚುತ್ತೆ..."

"ಅಲ್ರಿ, ಪೀಕೆಂಗಿನಲ್ಲಿ ಚೌ ಮತ್ತು ಅಯೂಬರು ಭಾಯಿ ಭಾಯಿ ಅದ್ರಂತಲ್ಲಾ?"

"ತಮ್ಮದಲ್ಲದ ನೆಲವನ್ನು ಪಡೆದವ್ರೂ, ಪಡಿಯೋವವ್ರೂ ತಮ್ಮ ಆಸೆ ಈಡೇರುವ ತನಕ ಭಾಯಿ ಭಾಯಿ...."

"ಅದು ಹೌದೂನ್ನಿ, ಹಿಂದೀ ಚೀನೀ ಭಾಯಿ ಭಾಯಿ ಆಗ್ಲಿಲ್ವೆ ಒಂದು ಸಲ ಹಾಗೆ ..."

"ಅದ್ರ ಮುಂದೆಯೂ ಅಷ್ಟೆ. ಭಾರತವನ್ನು ಬಗ್ಗು ಬಡೆಯಲು ಚೀನಕ್ಕೊಬ್ಬ ಭಾಯಿ ಬೇಕಾಗಿದ್ದಾರೆ. ಒಳ್ಳನಿಗೆ ಸಿಕ್ಕಿದ ಟಿಕ್ಕ. ಇನ್ನು ನೋಡಬೇಕು ಅವರ ಪ್ರತಾಪ...."

"ಕಳ್ಳ ಕಳ್ಳಗೆ ನಂಟು ಅನ್ನುತ್ತಾರಲ್ಲಾ....ಅಲ್ಲಾ ಈ ಕಳ್ಳರ ಹಾವಳಿಯಿಂದ ನಾವು ಹೇಗೆ ಬದುಕ ಬೇಕೂಂತ ...'

'ನಿನ್ನ ಕೈಯಿಂದ ಬದುಕೋಕ್ಕೆ ಆಗೊಲ್ಲಾಂತಂದ್ರೆ, ಒಂದೋ ಪ್ರಾಣ ಬಿಡಬೇಕು. ಇಲ್ವೇ ಪೋಲೀಸರನ್ನ ಕರೀಬೇಕು ...'

"ಅಲ್ಲಾ, ಇನ್ನೊಮ್ಮೆ ಚೀನಾದವ್ರು ದಾಳಿ ಮಾಡ್ತಾರಾ?"

"ಯಾರನ್ನ ಕೇಳೋದು? ಅದ್ರ ಭೀತಿ ಇನ್ನೂ ಕೆಲಕಾಲ ಇದೆ. ಒಂದು ಮಾತು ಓದಿದ್ದೆ..."

"ಏನು?"

'ಪರರ ಆಕ್ರಮಣದ ಭೀತಿ ದೂರವಾಗಬೇಕಾದ್ರೆ, ಕೆಚ್ಚೆದೆಯ ಸರಕಾರ ದೇಶದಲ್ಲಿರ ಬೇಕಂತೆ....'

"ಅಲ್ರಿ, ಶಾಸ್ತ್ರಿ ಅಂದಿದ್ರಲ್ಲ ಮೊನ್ನೆ, ತನ್ನ ಸರಕಾರ ಸಂದರ್ಭ ಬಂದರೆ..."

"ತಾನು ದುರ್ಬಲನಲ್ಲಾಂತಲ್ಲ ಅಂದಿದ್ರು..."

"ಅಂದ್ರೆ ಅವ್ರು...."

'ಅವ್ರು ಹೇಗೇ ಇರ್ಲಿ, ನಮಗೇನಂತೆ?'

"ಇದು ಒಳ್ಳೆಯ ಕತೆಯಾಯ್ತು...'

"ಏನು ಕಥೆ?"

"ಅಲ್ಲ, ಪ್ರಧಾನಿಯೇ ದುರ್ಬಲನಾದ್ರೆ ...."

"ದೇಶ ಕೆಡುತ್ತೆ..."

"ನೀವು ಏನೇ ಅನ್ನಿ. ಅವ್ರು ಮಹಾ ಬುದ್ಧಿವಂತ. ಅದ್ರಿಂದ್ಲೆ ಅವ್ರು ಸಿಕ್ಕಾಪಟ್ಟೆ ಬಾಯಿ ಬಿಡೋಲ್ಲ..."

"ಬಾಯಿ ಬಿಡದವರಿಗೆ ಜಗಳವಿಲ್ಲವಂತೆ...."

ಅದು ಹೌದೂನ್ನಿ.."

'ಮತ್ತೆ ನನ್ಗೂ ನಿನ್ಗೂ ಜಗಳವಾಗುತ್ತಲ್ಲ...."

"ಅಲ್ರಿ, ಬಾಯಿ ಬಿಡೋದಾದ್ರೂ ಎಷ್ಟು ನೀವು?"

'ಹಾಗಾದ್ರೆ, ಇನ್ನು ನಾನು ಬಾಯಿ ಬಿಡೋಲ್ಲ....'

'ಮತ್ತೆ ಹಲ್ಲು ಬಿಡ್ತೀರಾ?

'ಊಹ್ಞೂಂ....'

'ಪಾಪ ಅಂತೂ ಒಂದು ಮಾತು ನಿಜಾನ್ನಿ'

'ಏನು?'

"ಭಾರತವನ್ನು ನಂಬಿಸಿ ಮೋಸ ಮಾಡಿದಂತೆಯೇ ಪಾಕಿಸ್ತಾನವನ್ನೂ ಚೀನಾ ನುಂಗುವ ದಿನ ಬಂದಿದೆ..'

'ಇಡಿಯ ಲೋಕವೇ ಮುಳುಗಿ ಹೋಗುತ್ತಂತೆ. ಮತ್ತೆ ಇವೆದ್ದಾ ಏತರ ಮಾತು?"

'ಮಾನವನ ಬುದ್ಧಿಶಕ್ತಿ ಹೆಚ್ಚಿದ ಹಾಗೆ ಅಂತಹ ದಿನ ಬೇಗನೇ ಬರುತ್ತೆ..."

"ಅದಕ್ಕೇ ನೋಡು ಅಂದದ್ದು, ಬುದ್ಧಿವಂತನಿಗೆ ನೂರು ದಾರಿ. ಒಡ್ಡನಿಗೆ ಒಂದೇ ದಾರೀಂತ....'

"ಅಯ್ಯೂಬಖಾನರು ಭಾರೀ ಬುದ್ಧಿವಂತರಾದುದರಿಂದಲೇ ಹಾಗೆ ಮಾಡಿದ್ರು'

'ಲಾಯರೂ ಕಡಿಮೆಯಿಲ್ಲಾ...'

'ಮತ್ತೆ ಯಾರು ಕಡಿಮೆ?'

'ಯಾರಿಗೆ ಯಾರೂ ಕಡಿಮೆಯಿಲ್ಲ. ಒಬ್ಬ ಸೇರಾದ್ರೆ ಇನ್ನೊಬ್ಬ ಸವಾಸೇರು....'

'ಸೇರುನಷ್ಟತ್ಲೇ ನೆನಪಾಯ್ತು. ಇನ್ನು ಉಳಿದಿರೋದು ಮೂರು ಸೇರು ಮಾತ್ರ ಅಕ್ಕಿ..'

'ಮೂರು ದಿನಕ್ಕೆ ತೊಂದರೆಯಿಲ್ಲ...'

'ಹೌದ್ರಿ, ನಾನು ಮೂರು ದಿನ ರಜೆ ತೆಕ್ಕೊಂಡಿದ್ದೇನೆ ಇವತ್ತಿನಿಂದ...'

'ಅಯ್ಯೋ ಮಹಾರಾಯ್ರೆ, ಬಂದ ಕೂಡ್ಲೇ ಹೇಳ್ಬಾರ್ದಿತ್ತೆ? ಇನ್ನೀಗ ಈ ರಾತ್ರೆಯಲ್ಲಿ...'

"ಆಗ ಹೇಳಿದ್ರೆ ನೀವು ಕೇಳ್ಬೇಕಲ್ಲಾ, ನಿಮ್ಮ ಮಾತಿನ ಸರಪಳಿಯನ್ನು ಇಂಡಿಯಾ ರಬ್ಬರ್ ಮಾಡಿ ಬಿಟ್ರೆ....ನೋಡಿ, ಬೆಕ್ಕು ಹೋಯ್ತು ಒಳಗೆ. ಇನ್ನು ಹಾಲೆಲ್ಲಿ....'

'ಹಾಲೆಲ್ಲಾ ಬೆಕ್ಕು ಕುಡೀಲಿ, ನೀನು ಹಲ್ಲು ಬಿಡ್ತಾ ಇರು...."

"ಮತ್ತೆ ನೀವು?"

"ಕೊಟ್ಟದ್ದೀಯಲ್ಲ, ದೊಡ್ಡ ಕೆಲ್ಸ..'

'ನಾನೆಲ್ಲಿ ಕೊಟ್ಟದ್ದ? ನೀವೇ ನನ್ನ ತಂದು ಕೊಂಡದ್ದು....'

"ಹೇಗೂ ಇರ್ಲಿ ಪರಿಣಾಮ ಒಂದೇ....'

'ಹ್ಞಾಂ....'

— ಗೋರಾ.

ಜಿಲ್ಲಾ ಮಟ್ಟದ ಪಂಚಾಯತ್ ಕೃಷಿ ಉತ್ಪಾದನಾ ಪರಿಷತ್

ಬೆಳ್ತಂಗಡಿ, ತಾ. 10ರಂದು ಬೆಳ್ತಂಗಡಿ ಸಮಾಜ ಮಂದಿರದಲ್ಲಿ ದ. ಕ. ಜಿಲ್ಲಾ ಮಟ್ಟದ ಪಂಚಾಯತ್ ಕೃಷಿ ಉತ್ಪಾದನಾ ಪರಿಷತ್ತೊಂದು ಜಿಲ್ಲಾಧಿಕಾರಿ ಶ್ರೀ ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಶ್ರೀ ಜಿ. ಸೋಮಶೇಖರ ರಾಯರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಸೋಮಶೇಖರ ರಾಯರು ಉದ್ಘಾಟಿಸುತ್ತಾ ಆಹಾರ ಧಾನ್ಯಗಳ ಏರುತ್ತಿರುವ ಬೆಲೆಗಳನ್ನು ತಡೆಗಟ್ಟಲು ಸರ್ವಪ್ರಯತ್ನ ಮಾಡಬೇಕೆಂದೂ, ದೇಶದಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸಬೇಕೆಂದೂ ನುಡಿದರು. ಅಧ್ಯಕ್ಷರು ಮಾತನಾಡುತ್ತಾ, ರೈತರು ಹೆಚ್ಚು ಹೆಚ್ಚು ಆಸಕ್ತಿ ವಹಿಸಿ ದುಡಿಯಬೇಕೆಂದರು. ಆರಂಭದಲ್ಲಿ ಶ್ರೀ ಜಿ. ಎಸ್. ಭಿಡೆಯವರು ಸ್ವಾಗತಿಸಿದರು. ಸಂಜೆ ಶ್ರೀ ಎಸ್. ರಾಮರಾವ್‌ರವರು ಸಮಾರೋಪ ಭಾಷಣ ಮಾಡುತ್ತಾ, ಜಪಾನಿ ಮಾದರಿಯ ಭತ್ತ ಕೃಷಿಯನ್ನು ವಿವರಿಸಿ ಆ ಮಾದರಿಯನ್ನನುಸರಿಸಿದರೆ ನಮ್ಮ ಆಹಾರ ಸಮಸ್ಯೆ ಸುಲಭವಾಗಿ ಬಗೆಹರಿಯಬಹುದೆಂದು ನುಡಿದರು. ಮಧ್ಯಾಹ್ನ ಕಾರ್ಕಳ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಎಸ್. ಎಂ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಕೃಷಿಗೆ ಸಂಬಂಧಪಟ್ಟ ಹಲವಾರು ಸಮಸ್ಯೆಗಳನ್ನು ಚರ್ಚಿಸಲಾಯಿತು. ಅಂತ್ಯದಲ್ಲಿ ಶ್ರೀ ಭಿಡೆಯವರು ವಂದನಾರ್ಪಣೆಗೈದರು. ಅನಂತರ ಕೃಷಿಗೆ ಸಂಬಂಧಿಸಿದ ಚಲನ ಚಿತ್ರ ಪ್ರದರ್ಶನವಾಯಿತು.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S.C. No. 3/1965

ಕಲ್ಯಾಂಕ ವೆಂಕಟ್ರಾಯ ಪೈ ಎಂಡ್ ಸನ್ಸ್ —ವಾದಿ.

ಮತ್ತು

ಪಾಂಗಣ್ಣಾಯ ಆರ್. ನರಸಿಂಹಾಚಾರ್ಯ, ಶ್ಯಾಮ ಪಾಂಗಣ್ಣಾಯರ ಮಗ, ಉಡುಪಿ ಕಸಬಾ ನೋದೆ ಮಠದ ಓಣಿ —ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನಂದ್ರೆ:—

ವಾದಿರ ಅಂಗಡಿಯಲ್ಲಿ ಪ್ರತಿವಾದಿಯು ನಡ್ಸಿದ ಲೇವಾದೇವಿ ಬಾಬ್ತು ವಾದಿಗೆ ಪ್ರತಿವಾದಿಯಿಂದ ಬರತಕ್ಕ ಬಾಕಿ ರೂಪಾಯಿ 1153-19 ಕ್ಕೆ ವಾದಿಯು ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯವನ್ನು ಪ್ರತಿವಾದಿಯು ಅಪ್ಪೆರ ನೋಟೀಸು ಬಗ್ಗೆ ತಾ. 19-4-65ಕ್ಕೆ ಮುಟ್ಟಿರುವುದ್ರಿಂದ ಪ್ರತಿವಾದಿಗೆ ಉದಾಹರಣೆ ಕೊಟ್ಟು ವ್ಯವಹರಿಸುವುದಿದ್ದಲ್ಲಿ ಸದ್ರಿ ತಾ. 19.4.65 ನೇ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಃ ವ ವಕೀಲರ ಮುಖಾಂತ್ರ ಹಾಜರಾಗಿ ಪ್ರತಿಪಾದಿಸತಕ್ಕದ್ದು. ತಪ್ಪಿದ್ರೆ ಪ್ರತಿವಾದಿಯ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯದ ಫೈಸಲು ಮಾಡಲ್ಪಡುವುದು.

P. V. ACHARYA,

Vakil for Plaintiff.

ಉಡುಪಿ, ತಾ. 20.8.65.

ಎಲ್ಲೆಲ್ಲಿ ಏನೇನು?

ನಗರದಲ್ಲಿ ಅಕ್ಕಿ ವಿತರಣೆಗಾಗಿ ಉಡುಪಿ ನಗರ ಸಭಾ ಸದಸ್ಯರ ಅನ್ನ ಸತ್ಯಾಗ್ರಹ

ಉಡುಪಿ: ಉಡುಪಿ ನಗರಸಭೆಯ ಸರಹದ್ದಿನೊಳಗೆ ಜನತೆಗೆ ಸರಕಾರವು ನಿರ್ಧರಿಸಿದ ದರದಲ್ಲಿ ಒಂದಿಷ್ಟಾದರೂ ಅಕ್ಕಿ ಸಿಗಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಉಡುಪಿ ನಗರ ಸಭಾ ಸದಸ್ಯರು ಕಳೆದ ತಾ. 16ರಂದ ಉಡುಪಿ ತಾಲೂಕ್ ಆಫೀಸಿನ ಎದುರು ಅನ್ನ ಸತ್ಯಾಗ್ರಹವನ್ನಾರಂಭಿಸಿದರು. ಜಿಲ್ಲಾಧಿಕಾರಿಯವರು ತಾವು ಇತ್ತ ಆಶ್ವಾಸನೆಯ ಪ್ರಕಾರ ನಡೆದುಕೊಳ್ಳದೆ ಇದ್ದುದರಿಂದ, ಹಾಗೂ ಅಕ್ಕಿಯ ವಿತರಣೆಯನ್ನು ಇನ್ನೂ ಜಾರಿಗೊಳಿಸದಿರುವುದರಿಂದ, ಈ ಸತ್ಯಾಗ್ರಹ ಆರಂಭಿಸಬೇಕಾಯಿತು ಎನ್ನಲಾಗಿದೆ. ನಗರ ಸಭಾ ಸದಸ್ಯರು ಮೊದಲ ದಿನಗಳಲ್ಲಿ ಐದುಮಂದಿಯ ತಂಡವಾಗಿ ಪ್ರತಿ ತಂಡವೂ 24 ಗಂಟೆಗಳ ಅನ್ನ ಸತ್ಯಾಗ್ರಹ ಕೈಕೊಂಡಿತು. ಕಳೆದ ತಾ. 18ರಂದು ಈ ಸತ್ಯಾಗ್ರಹಕ್ಕೆ ಸಹಾನುಭೂತಿ ಸೂಚಿಸುವ ಸಲುವಾಗಿ, ಉಡುಪಿ ನಗರದಲ್ಲಿ ಸಾರ್ವತ್ರಿಕ ಹರತಾಳವನ್ನಾಚರಿಸಲಾಗಿತ್ತು. ಆ ದಿನ ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನಾಗರಿಕರ ಸಭೆ ಸೇರಿ ಈ ಸತ್ಯಾಗ್ರಹಕ್ಕೆ ಪೂರ್ಣ ಬೆಂಬಲ ವ್ಯಕ್ತಪಡಿಸಲಾಯಿತು. ಪಿ. ಎಸ್. ಪಿ. ಹಾಗೂ ಕಮ್ಯೂನಿಸ್ಟ್ ಎಡ ಹಾಗೂ ಬಲ ಪಕ್ಷಗಳೂ ಈ ಸತ್ಯಾಗ್ರಹಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿವೆ.

ಈ ಮಧ್ಯೆ ಈ ಸತ್ಯಾಗ್ರಹವನ್ನು ಸಂಧಾನ ಪೂರ್ವಕ ಕೊನೆಗೊಳಿಸುವ ಪ್ರಯತ್ನವನ್ನು ಸ್ಥಳೀಯ ಎಂ. ಎಲ್. ಎ.ಗಳಾದ ಶ್ರೀ ಎಂ. ಮಧ್ವರಾಜರು ಇತರ ಮುಖಂಡರ ಸಹಾಯದಿಂದ ನಡೆಸಿದರು. ಆದರೆ ಯಾವುದೇ ಒಮ್ಮತದ ನಿರ್ಣಯವಾಗದೆ ಸಂಧಾನವು ಕುಸಿಯಿತು. ಶ್ರೀ ಮಧ್ವರಾಜರು ಈ ಸಮಸ್ಯೆಯ ಕುರಿತು ಪರ್ಯಾಲೋಚಿಸಲು ಬೆಂಗಳೂರಿಗೆ ತೆರಳಿರುವರೆಂದು ತಿಳಿದು ಬರುತ್ತದೆ.

ಸತ್ಯಾಗ್ರಹಿಗಳ ತಂಡದಲ್ಲಿ ಈಗ ಹೊರಗಿನವರು ಸಾರ್ವಜನಿಕರೂ ಭಾಗವಹಿಸುತ್ತಿದ್ದಾರೆ. ಮಾಜಿ ಕೌನ್ಸಿಲರುಗಳೂ ಇದರಲ್ಲಿ ಭಾಗವಹಿಸುವ ಒಂದು ಸುದ್ದಿ ಇತ್ತು; ಆದರೆ ಈ ಕುರಿತು ನಿರ್ಣಯ ಕೈಕೊಳ್ಳಲು ಕರೆದಿದ್ದ ಸಭೆಗೆ ಹೆಚ್ಚಿನ ಮಾಜಿ ಕೌನ್ಸಿಲರುಗಳು ಹಾಜರಾಗಲಿಲ್ಲ ಎಂದು ವರದಿಯಾಗಿದೆ.

ಸತ್ಯಾಗ್ರಹವನ್ನು ಸೂಕ್ತ ಪರಿಹಾರ ದೊರಕುವ ತನಕ ಮುಂದುವರಿಸುವ ನಿರ್ಣಯವನ್ನು ಕೌನ್ಸಿಲರುಗಳು ಮಾಡಿರುವರೆಂದು ಹೇಳಲಾಗಿದೆ. ಸಂಧಾನದ ಮಾರ್ಗಗಳು ಮುಚ್ಚಿ ಹೋಗಿರುವುದರಿಂದ, ಪರಿಸ್ಥಿತಿ ಯಾವ ಘಟ್ಟ ಮುಟ್ಟುವುದೆಂಬುದನ್ನು ಹೇಳಲಾಗುವುದಿಲ್ಲ. ಉಡುಪಿ ಅನ್ನಸತ್ಯಾಗ್ರಹದ ಪ್ರತಿಸ್ಪಂದನ ಬೆಂಗಳೂರಿನ ವಿಧಾನ ಸಭೆಯಲ್ಲೂ ಕೇಳಬರುವ ಸೂಚನೆ ಇದೆಯೆಂದೂ ನಂಬಲಾಗಿದೆ.

ವಾರ್ಷಿಕೋತ್ಸವ

ಬೆಳ್ಮಣ್ಣು, ಸ್ಥಳೀಯ ಬೋರ್ಡ್ ಹೈಸ್ಕೂಲಿನ ಪ್ರಥಮ ವಾರ್ಷಿಕೋತ್ಸವವು ತಾ. 16-3-1965ರಂದು ಶ್ರೀ ಎಂ. ಆರ್. ಎಚ್. ಪೂಂಜರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ ಎಚ್. ಸಿ. ಸೋಮಸುಂದರ್ ಅವರು ಬಹುಮಾನ ವಿತರಣೆ ಮಾಡಿದರು. ಹಳೆಯಂಗಡಿ ಪಂಚಾಯತ್ ಬೋರ್ಡಿನ ಚೇರ್‌ಮೆನ್ ಶ್ರೀ ಎಚ್. ನಾರಾಯಣ ಸಾಲಿಯಾನರು ಅಂದು ಬೆಳಿಗ್ಗೆ ಧ್ವಜವನ್ನೇರಿಸಿ ಕಾರ್ಯಕ್ರಮಗಳನ್ನು ಉದ್ಘಾಟಿಸಿದರಲ್ಲದೆ ಸಂಜೆ ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ತಿಮ್ಮಪ್ಪಯ್ಯನವರು ಶಾಲಾ ವರದಿಯನ್ನೋದಿದರು. ಶ್ರೀ ವಿಶ್ವನಾಥ ಸಾಲಿಯರು ಸಂದೇಶ ವಾಚನ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸೊಗಸಾಗಿ ತೆರೆದಿಟ್ಟು ಈ ಶಾಲೆಯ ಅಭಿವೃದ್ಧಿಯನ್ನು ಮುಕ್ತಕಂಠದಿಂದ ಕೊಂಡಾಡಿದರಲ್ಲದೆ ಶಾಲಾ ನಿಧಿಗೆ 1,001 ರೂಪಾಯಿಗಳನ್ನು ದಾನ ಕೊಡುವುದಾಗಿ ಘೋಷಿಸಿದರು. ಅಂತೆಯೇ ಶ್ರೀ ಎಚ್. ಸಿ. ಸೋಮಸುಂದರರೂ, ಶಾಲೆಯ ಸರ್ವತೋಮುಖ ಅಭ್ಯುದಯವನ್ನು ಕೋರಿ ಪ್ರತ್ಯೇಕ 1,001 ರೂಪಾಯಿಗಳನ್ನು ಶಾಲಾ ನಿಧಿಗೆ ದಾನವಾಗಿ ಕೊಡುವುದಾಗಿ ಸಾರಿದರು. ಮನೋರಂಜನಾ ಕಾರ್ಯಕ್ರಮಗಳಾದ ಮೇಲೆ ಶ್ರೀ ಎ. ಶಂಕರ ಸೆಟ್ಟರು ಧನ್ಯವಾದ ಸಮರ್ಪಣೆಗೈದರು. ಶಾಲಾ ಮಕ್ಕಳಿಗೆ ಲಘೂಪಹಾರವನ್ನು ಸಿಹಿತಿಂಡಿ ಕುಂದ್ರು ದೊಡ್ಡಮನೆ ಕೃಷ್ಣರಾಯರ ಪುತ್ರ ಶ್ರೀಧರರಾಯರ ವತಿಯಿಂದ ಕೊಡಲಾಗಿತ್ತು.

ಶ್ರೀ ಭಂಡಾರಿಯವರಿಗೆ ಸ್ವಾಗತ — ಸತ್ಕಾರ

ಕಳೆದ ಮಾರ್ಚ್ 4ರಂದು ಜರಗಿದ ಕೇರಳ ಎಸೆಂಬ್ಲಿ ಸದಸ್ಯ ಚುನಾವಣೆಯಲ್ಲಿ ಸುಮಾರು 5000ಕ್ಕೂ ಮಿಕ್ಕಿದ ಅಧಿಕ ಮತಗಳಿಂದ ಮಂಜೇಶ್ವರ ಮತದಾರ ಕ್ಷೇತ್ರದಿಂದ ಆರಿಸಿ ಬಂದ ಶ್ರೀ ಕಳ್ಳಿಗೆ ಮಹಾಬಲ ಭಂಡಾರಿಗಳನ್ನು ಅಲ್ಲಲ್ಲಿ ಸಾರ್ವಜನಿಕ ಮೆರವಣಿಗೆಗಳಿಂದ ಸ್ವಾಗತವನ್ನಿತ್ತು ಸತ್ಕರಿಸಲಾಯಿತು.

ತಾ. 13ರಂದು ಪೂರ್ವಾಹ್ನ ಎಡ್ವಕೇಟ್ ಯು. ಈಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ವಿಟ್ಲ ಯುವಜನಸಂಘದಲ್ಲಿಯೂ, ಅಪರಾಹ್ನ ಕೋಳ್ಯೂರು ಶಾಲಾ ಆವರಣದಲ್ಲಿ ಶ್ರೀ ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲೂ, ಸಂಕದ ಕಟ್ಟೆಯಲ್ಲಿ ಡಾ| ಸ್ಟ್ಯಾನಿ ಲೋಯಿಸ್ ಫರ್ನಾಂಡಿಸರವರ ಅಧ್ಯಕ್ಷತೆಯಲ್ಲಿಯೂ, ರಾತ್ರಿ ಮಂಜೇಶ್ವರದಲ್ಲಿ ಶ್ರೀ ಎಂ. ಎಸ್. ಕಿಣಿಯವರ ಅಧ್ಯಕ್ಷತೆಯಲ್ಲಿಯೂ ಸಾರ್ವಜನಿಕ ಸಭೆಗಳು ಜರಗಿದುವು. ಹಾಗೆಯೇ ತಾ. 14ರಂದು ಕಯ್ಯಾರಿನಲ್ಲಿ ಶ್ರೀ ದಾಮೋದರ ಅಗ್ಗಿತ್ತಾಯ ಬೈಲಂಗಡಿಯವರ; ಪೈವಳಿಕೆಯಲ್ಲಿ ಡಾಕ್ಟರ್ ಕೆ. ಶ್ಯಾಮ ಭಟ್ಟರ, ಕುರುಡುಪದವಿನಲ್ಲಿ ಶ್ರೀ ವೆಂಕಟರಮಣ ಭಟ್ಟರ, ಬಾಯಾರು ಮುಳಿಗದ್ದೆಯಲ್ಲಿ ಡಾ| ಎಂ. ಶಿವಶರ್ಮರ ಮತ್ತು ಸಜಂಕಿಲದಲ್ಲಿ ಮಾಣಿಪ್ಪಾಡಿ ವಿಷ್ಣುಭಟ್ಟರ ಅಧ್ಯಕ್ಷತೆಗಳಲ್ಲಿ ಪ್ರತ್ಯಪ್ರತ್ಯೇಕವಾಗಿ ಸಭೆಗಳು ಜರಗಿದವು. ಪ್ರತಿ ಕಡೆಗಳಲ್ಲೂ ಹಾರಾರ್ಪಣೆ, ಲಘೂಪಹಾರಗಳು ಜರಗಿ ಗಡಿ ಸಮಸ್ಯೆಯು ಪರಿಹಾರವಾಗುವಂತೆ ಪ್ರಯತ್ನಿಸಬೇಕೆಂಬ ನಿರ್ಣಯವಾಯಿತು. ಶ್ರೀ ಭಂಡಾರಿಯವರು ತಮ್ಮಿಂದಾದಷ್ಟು ಸೇವೆ ಸಲ್ಲಿಸುವ ಭರವಸೆ ನೀಡಿದರು.

ಯಕ್ಷಗಾನ ಕಲಾಕ್ಷೇತ್ರದ ವಾರ್ಷಿಕೋತ್ಸವ

ಉಡುಪಿಯ ಯಕ್ಷಗಾನ ಕಲಾಕ್ಷೇತ್ರದ ವಾರ್ಷಿಕೋತ್ಸವವು ಪದ್ಮಶ್ರೀ ಡಾ| ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿ ವಿಕ್ಟೋರಿಯಾ ಜ್ಯೂಬಿಲೀ ಕ್ಲಬ್ಬಿನ ಡಾ| ಸುಂದರರಾಮ ಪೈ ಸ್ಮಾರಕ ರಂಗಮಂಟಪದಲ್ಲಿ ಇತ್ತೀಚೆಗೆ ಜರಗಿತು. ಆರಂಭದಲ್ಲಿ ಶ್ರೀ ಕರ ಎಲ್. ಭಂಡಾರ್ಕರ್‌ರವರು ಸ್ವಾಗತಿಸಿದರು. ಶ್ರೀ ಎನ್. ನಾರಾಯಣ ಬಲ್ಲಾಳರು ಸಂದೇಶಗಳನ್ನೋದಿದರು. ಎನ್. ಮನೋಹರರಾಯರು ವರದಿಯೊಪ್ಪಿಸಿದರು. ಇದೇ ಸಂದರ್ಭದಲ್ಲಿ ಅಧ್ಯಕ್ಷರು ಯಕ್ಷಗಾನ ಕಲಾಕ್ಷೇತ್ರದಲ್ಲಿ ಖ್ಯಾತಿವೆತ್ತ ಶ್ರೀ ವೀರಭದ್ರ ನಾಯಕರಿಗೆ ಮಾನಪತ್ರವನ್ನಿತ್ತು ಸನ್ಮಾನಿಸಿದರು. ಪ್ರೊ| ಬಿ.ವಿ. ರಾಜಪುರೋಹಿತರು ಯಕ್ಷಗಾನದ ಕುರಿತಾದ ಸ್ಮಾರಕ ಸಂಚಿಕೆಯನ್ನು ಉದ್ಘಾಟಿಸಿ ಯಕ್ಷಗಾನದ ವಿಷಯ ಮಾತಾಡಿದರು. ಪದ್ಮಶ್ರೀ ಡಾ| ಪೈಗಳಿಗೆ ಸಂಘದ ಪರವಾಗಿ ಮಾನಪತ್ರ ಸಮರ್ಪಿಸಿದ ತರುವಾಯ ಅಧ್ಯಕ್ಷರ ಭಾಷಣವಾಗಿ ಶ್ರೀ ಮಾಧವ ಶಿಣೈಯವರು ಧನ್ಯವಾದ ಸಮರ್ಪಿಸಿದರು. ರಾತ್ರಿ ಯಕ್ಷಗಾನ ಬಯಲಾಟ ನೆರವೇರಿತು.

ಉದ್ಘಾಟನೆ

ಬಂಟ್ವಾಳ, "ಕಿರಿಯ ಪ್ರಾಥಮಿಕ ಶಾಲೆಯು ಹಿರಿಯ ಪ್ರಾಥಮಿಕ ಶಾಲೆಯಾಗಲಿ" ಎಂದು ಹಾರೈಸುತ್ತಾ ತಾರೀಕು 27ರಂದು ಬಂಟ್ವಾಳ ತಾಲೂಕು ಬೋರ್ಡ್ ವೈಸ್ ಪ್ರಸಿಡೆಂಟರಾದ ಶ್ರೀ ಟಿ. ವೆಂಕಟೇಶ ಪೈಯವರು ಎತ್ತುಕಲ್ಲು ಎಂಬಲ್ಲಿ ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ಹೊಸ ಕಟ್ಟಡವನ್ನು ಉದ್ಘಾಟಿಸುತ್ತ ನುಡಿದರು. ಸ್ಥಳವನ್ನು ಉದಾರವಾಗಿ ಕೊಟ್ಟ ಶ್ರೀ ಪಡಾರು ತಿಮ್ಮಪ್ಪ ಅಡ್ಯಂತಾಯರನ್ನು ಪ್ರಶಂಸಿಸಿದರು. ಈ ಶಾಲಾ ಮಕ್ಕಳಿಗೆ ಒಂದು ಬಾವಿ ಅಗತ್ಯವಿದ್ದು ಇದು ಬೇಗನೇ ಆಗುವಂತೆ ಪ್ರಯತ್ನಿಸುವೆನೆಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸ್ಥಳೀಯ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಸಿ. ದೇವಕಿ ಅಮ್ಮನವರು ಶಾಲಾ ಕಟ್ಟಡ ಕಟ್ಟಿಸುವರೆ ಸಹಕರಿಸಿದ ಊರ ಮಹನೀಯರನ್ನೂ ಸ್ಥಳವನ್ನು ಉದಾರವಾಗಿ ಬಿಟ್ಟುಕೊಟ್ಟ ಶ್ರೀ ಪಡಾರು ತಿಮ್ಮಪ್ಪ ಅಡ್ಯಂತಾಯರನ್ನೂ ಶಾಲಾ ಏಳಿಗೆಗೆ ದುಡಿಯುತ್ತಿರುವ ಶಾಲಾ ಮುಖ್ಯೋಪಾಧ್ಯಾಯರನ್ನೂ ಪ್ರಶಂಸಿಸಿದರು. ಗ್ರಾಮದ ನಾಲ್ಕು ಬ್ಲೋಕುಗಳಲ್ಲಿಯೂ ಈ ರೀತಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡದ ರಚನೆಯಾಗಲಿ ಎಂದು ಹಾರೈಸಿದರು.

ಪ್ರಾರಂಭದಲ್ಲಿ ಸ್ಥಳೀಯ ಪಂಚಾಯತ್ ವೈಸ್ ಚೇರ್‌ಮೆನರಾದ ಶ್ರೀ ಪಂಜಿಗಟ್ಟೆ ಈಶ್ವರ ಭಟ್ಟರು ಸ್ವಾಗತಿಸಿದರು. ಗ್ರಾಮಸೇವಕ ಶ್ರೀ ರಾಮುಲಾಲ್ ಮೊದಲಾದವರು ಮಾತನಾಡಿದರು. ಕೊನೆಗೆ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ. ಪದ್ಮನಾಭ ರಾಯರು ವಂದನಾರ್ಪಣೆಯನ್ನು ಸಮರ್ಪಿಸಿದರು.

ಸುವರ್ಣ ಮಹೋತ್ಸವ

ಕಾರ್ಕಳ, ತಾ. 19ರಂದು ಕಾರ್ಕಳ ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲಿನ ಸಭಾಭವನದಲ್ಲಿ, ಸ್ಥಳೀಯ ಕೋ ಒಪರೇಟಿವ್ ಟೌನ್ ಬೇಂಕ್‌ನ ಸುವರ್ಣ ಮಹೋತ್ಸವವು ಸಚಿವ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಬೇಂಕಿನ ಅಧ್ಯಕ್ಷ ಶ್ರೀ ಕೆ. ವಾಸುದೇವ ಕಾಮತ್‌ರವರು ಸ್ವಾಗತಿಸಿದರು. ಶ್ರೀ ಕೆ. ಜಿ. ಕುಡ್ವಾರವರು ಬಂದ ಸಂದೇಶಗಳನ್ನೋದಿದರು. ತರುವಾಯ ಶ್ರೀ ಕೆ. ವಿ ಕಾಮತರು ವರದಿಯನ್ನೊಪ್ಪಿಸಿದರು. ಶ್ರೀ ಟಿ. ವೆಂಕಟೇಶ ಭಟ್ಟರು ಈ ಸಹಕಾರ ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿದ್ದ ಶ್ರೀ ಕುಕ್ಕುಂದೂರು ಸುಬ್ರಾಯ ಕಮ್ತಿಯವರ ಪರಿಚಯ ಮಾಡಿದ ಬಳಿಕ ಸಚಿವ ಶ್ರೀ ಹೆಗ್ಗಡೆಯವರು ಶ್ರೀ ಸುಬ್ರಾಯ ಕಮ್ತಿಯವರ ಭಾವಚಿತ್ರ ಅನಾವರಣಗೈದು ಮಾತನಾಡುತ್ತಾ ಸಹಕಾರೀ ಆಂದೋಲನ ಯಶಸ್ವಿಯಾಗಿ ಸಹಕಾರೀ ಸಮಾಜ ನಿರ್ಮಾಣ ಸುಲಭವಾಗಬೇಕಾದರೆ ಸಹಕಾರೀ ಸಂಸ್ಥೆಗಳು ಸ್ವಾವಲಂಬನದ ದಾರಿಯಲ್ಲಿ ಮುಂದುವರಿಯಲು ಪ್ರಯತ್ನಿಸುವುದು ಅತ್ಯವಶ್ಯವೆಂದರು. ಶ್ರೀ ಎಂ. ಜಿ. ಆರ್. ಸಂಜೀವರಾಯರಿಂದ ವಂದನಾರ್ಪಣೆಯಾದ ಬಳಿಕ ನೃತ್ಯ ಪ್ರದರ್ಶನ ನಡೆಯಿತು.

ನಿಧನ

ದಕ್ಷ ಅಧ್ಯಾಪಕರೆನಿಸಿ ನಿವೃತ್ತರಾಗಿದ್ದ ಶ್ರೀ ಕಾಪು ಶೇಸು ಸೆಟ್ಟರು ತಮ್ಮ ಸ್ವಗೃಹದಲ್ಲಿ 57ನೇ ಪ್ರಾಯದಲ್ಲಿ ಸ್ವರ್ಗಸ್ಥರಾದರು. ಶ್ರೀಯುತರು ಬೇರೆ ಬೇರೆ ಬೋರ್ಡ್ ಶಾಲೆಗಳಲ್ಲಿಯೂ ಬೋರ್ಡ್ ಹೈಸ್ಕೂಲುಗಳಲ್ಲಿಯೂ ಸುಮಾರು 40 ವರುಷ ಕಾಲ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು.

ಮಣಿಪಾಲ— ತಾ. 16-3-65ರಂದು ಮಣಿಪಾಲ ಹೈಸ್ಕೂಲಿನಲ್ಲಿ ರೋಟರಿ ಇಂಟರ್ಯಾಕ್ಟ್ ಕ್ಲಬ್ಬಿನ ಉದ್ಘಾಟನೆಯನ್ನು ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರು ನೆರವೇರಿಸಿ ಕ್ಲಬ್ಬಿನ ಸದಸ್ಯರಾದ ಮಣಿಪಾಲ ಹೈಸ್ಕೂಲಿನ ವಿದ್ಯಾರ್ಥಿಗಳು ಮಾಡಬಹುದಾದ ಸಾಮಾಜಿಕ ಕಾರ್ಯಗಳನ್ನೂ, ಸದಸ್ಯರಿಗೆ ದೊರೆಯುವ ವಿವಿಧ ಸೌಲಭ್ಯಗಳನ್ನೂ ವಿವರಿಸಿದರು. ಮುಖ್ಯೋಪಾಧ್ಯಾಯ ಶ್ರೀ ಕೆ. ರಾಮರಾಯರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಶ್ರೀ ಎಲ್. ಕೆ. ಶೆಟ್ಟಿಯವರು ಸ್ವಾಗತಿಸಿದರು.

ವಂದನಾರ್ಪಣೆ

ಕಳೆದ ವಾರದಲ್ಲಿ ನವಯುಗದ ಪ್ರಚಾರಾರ್ಥವಾಗಿ ಮುಡಿಕೇರಿ, ಭಾಗಮಂಡಲ, ಪುಂಡಿಕೊಪ್ಪ ಮೊದಲಾದ ಕಡೆಗಳಿಗೆ ತೆರಳಿದಾಗ ಶ್ರೀಗಳಾದ ದಾಸಪ್ಪ ರೈ, ರಘುರಾಮ ರೈ, ಮುತ್ತಣ್ಣ ರೈ, ಡಾ| ಬಿ. ಮನೋಹರ ಹೆಗ್ಡೆ ಮೊದಲಾದವರೂ, ಬೆಳ್ಳಾರೆ, ಕಳಂಜ ಮೊದಲಾದ ಕಡೆಗಳಲ್ಲಿ ಶ್ರೀಗಳಾದ ಕಿಟ್ಟಣ್ಣ ರೈ, ವಿಠಲ ರೈ, ಸೆಟ್ಟಾರ್ ವೆಂಕಟ ಸುಬ್ಬರಾವ್ ಮೊದಲಾದವರೂ ಸಹಕರಿಸಿ ನೆರವಾಗಿದ್ದಾರೆ. ಅಲ್ಲದೇ ನವಯುಗದ ಪರಿಷ್ಕರಣಕ್ಕಾಗಿ ಶ್ರೀಗಳಾದ ಎಂ. ಟಿ. ವಿಶ್ವನಾಥ ರೈ, ಡಾ| ಎಸ್. ಗೋಪಾಲಕೃಷ್ಣ, ಎಸ್. ಬಿ. ದಳ್ವಿ, ಕಾಗಿನಮೂಲೆ ಗೋವಿಂದಯ್ಯ, ಕೋಟಿ ಲಕ್ಷ್ಮೀನಾರಾಯಣಯ್ಯ ಮತ್ತು ಸಹೋದರರು ಪ್ರೋತ್ಸಾಹಿಸಿದ್ದರು. ಇವರೆಲ್ಲರಿಗೂ ಈ ಮೂಲಕ ನಮ್ಮ ಹಾರ್ದಿಕ ವಂದನೆಗಳನ್ನು ಸಲ್ಲಿಸುತ್ತೇವೆ.

, ಈ ಮೊದಲು ಕಾರ್ಕಳ ಬೆಳ್ಮಣ್ಣು, ಮುಣ್ಡ್ಕೂರು ಮೊದಲಾದ ಕಡೆಗಳಿಗೆ ನಮ್ಮೊಂದಿಗೆ ಬಂದು ಸಹೃದಯಾಂತಃಕರಣದಿಂದ ಅತ್ಯಲ್ಪ ಕಾಲದಲ್ಲಿ ಹೆಚ್ಚಿನ ಚಂದಾದಾರರನ್ನು ಒದಗಿಸಿ ಕೊಟ್ಟು ಪ್ರೋತ್ಸಾಹಿಸಿದ ಕಾರ್ಕಳ ತಾಲೂಕು ಬೋರ್ಡ್ ಪ್ರೆಸಿಡೆಂಟ್ ಶ್ರೀ ಎಸ್. ಎಂ. ಅಡ್ಯಂತಾಯ, ಎಡ್ವಕೇಟ್ ಇವರ ಉಪಕಾರವನ್ನು ಸ್ಮರಿಸುತ್ತೇವೆ. ಅಲ್ಲದೆ ಬೈಲೂರು, ಎಣ್ಣೆಹೊಳೆ, ಹೆಬ್ರಿ ಮೊದಲಾದ ಕಡೆಗಳಿಗೆ ತೆರಳಿದಾಗ ಶ್ರೀಗಳಾದ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಬೇಳಂಜೆ ವಿಠ್ಠಲ ಹೆಗ್ಡೆ, ಇವರೂ, ಕುಂದಾಪುರ ಬಸ್ರೂರು ಮೊದಲಾದ ಕಡೆಗಳಿಗೆ ತೆರಳಿದಾಗ ಬಿ. ಕುಶಲ ಹೆಗ್ಡೆ, ಎಡ್ವಕೇಟ್, ಬಿ. ವಿಶ್ವನಾಥ ಶೆಟ್ಟಿ, ಶಂಕರ ಶೆಟ್ಟಿ ಮೊದಲಾದವರೂ ಸಹಕರಿಸಿದ್ದಾರೆ. ಶ್ರೀಗಳಾದ ಜತ್ತಪ್ಪ ರೈ, ಕೆದಂಬಾಡಿ, ಎಂ. ಜತ್ತಪ್ಪ ರೈ, ಮುಂಡಾಳ, ವೈ. ಮಂಜಯ್ಯ ಶೆಟ್ಟಿ, ಎಂ ಎಲ್ ಎ, ಕುಂದಾಪುರ, ಬಿ. ಎಸ್. ಜಗನ್ನಾಥ ಶೆಟ್ಟಿ, ಕಂಟ್ರಾಕ್ಟರ್ ಕುಂದಾಪುರ, ಕೆ. ರಘುನಾಥ ಶೆಟ್ಟಿ, ಕಾರ್ಕಳ, ಶ್ರೀ ಶ್ರೀ ವಿದ್ಯಾವಲ್ಲಭ ತೀರ್ಥ ಸ್ವಾಮೀಜಿ, ಚಿತ್ರಾಪುರ ಮಠ ಇವರೂ ಪರಿಷ್ಕರಣಕ್ಕಾಗಿ ನೆರವಾಗಿದ್ದಾರೆ. ಇವರೆಲ್ಲರಿಗೂ ನಾವು ಋಣಿಗಳಾಗಿದ್ದೇವೆ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ

MEMBERS VOLUNTARY WINDING-UP

Name of the Company: Homes & Estates (Private) Ltd.,

Notice Convening Final Meeting

Notice is hereby given in persuance of Section 497 that a General Meeting of the Members of the above named Company will be held at Udipi, on Monday the 10th day of May, 1965 at 4-30 in the afternoon for the purpose of having an account laid before them showing the manner in which the winding-up has been conducted and the property of the company disposed off and of hearing any explanation that may be given by the liquidator and also of determining by a special resolution of the company the manner in which the books, accounts and documents of the company and of the liquidator shall be disposed.

M. G. Bhat.
Signature of the Liquidator.

ಅಗಲಿದವರನ್ನು ನೆನೆದು

ಅಗಲಿ ಹೋದೆಯ, ದುಃಖಿದಾಗರದ ಕಣ್ಣೀರಲಿ |
ನಿನ್ನ ತಾಯ್ತಂದೆಗಳ ಬಂಧುಗಳ ಭಗಿನಿಯರ |
ಲೆಕ್ಕವಿಲ್ಲದ ನೇಹಿಗರ ಬಳಗವನು ಕೆಡವಿ ||
ಬಿದ್ದೆವಾಘಾತದಲಿ ನಾವೆಲ್ಲ ಕಾಲೆಡವಿ || ೧ ||

ಎದ್ದು ಬಾರೆಯ ನೀನು ಬಿದ್ದವರ ಎತ್ತಲಿಕೆ |
ಗಾಢಾಂಧಕಾರದಲಿ ಬೆಳಕನ್ನು ಚೆಲ್ಲಲಿಕೆ |
ಓ ಸತ್ಯ, ತಾಳ್ಮೆಗಳ ಪ್ರೇಮದಾ ಮೂರುತಿಯೆ |
ಕೈ ಕೊಟ್ಟು ಮೇಲೆತ್ತು ನಿನ್ನವರ ಕೀರುತಿಯೆ || ೨ ||

ಬಾಳು ನಿನ್ನದು ಗಣಿಯು ತೆರದ ಸಾರ್ಥಕ ಬದುಕು !
ಅಲ್ಪ ಆಯುಷ್ಯದಲಿ ಬಾಳ ಸಿದ್ಧಿಯ ಪಡೆದೆ |
ಕಷ್ಟ ಕಾರ್ಪಣ್ಯಗಳ, ಜೀನೆ ಬೇಸರಿಕೆಗಳ |
ನೀಲಕಂಠನ ತೆರದಿ ನಗುತ ನೀನದ ಉಂಡೆ || ೩ ||

ವಿದ್ಯಾರ್ಜನೆಯ ದಿನದಿ ವಿದ್ಯಾರ್ಥಿ ನೀನಾಗಿ |
ಮೆಚ್ಚುಮೆಚ್ಚುಗೆ ಗಳಿಸಿ ಎಲ್ಲರಿಗೂ ಬೇಕಾಗಿ |
ಪ್ರತಿಭೆ, ಪಾಂಡಿತ್ಯ ಸಿರಿ ತುಂಬಿ ಹರಿದರು ಕೂಡ |
ನಿನಗದರ ಹೆಮ್ಮೆ ತಲೆಗಡರಲಿಲ್ಲವು ನೋಡ || ೪ ||

ಗುರು ಹಿರಿಯರಲ್ಲಿ ನಿನಗಿದ್ದ ಭಕ್ತಿ ಅಪಾರ |
ವಿನಯವೇ ಸಂಪತ್ತು ಎಂಬ ನುಡಿಗಾಧಾರ |
ಮನದಲ್ಲಿ ಮಲಿನತೆಯ ಸುಳಿಯದಿದ್ದರು ಕೂಡ |
ವಿಧಿ ನಿನ್ನ ಬಾಳಿನಲಿ ತಂದು ಒಗೆದನು ಕೇಡ || ೫ ||

ಗೆಲವು ನಲಿವಿನ ಜೀವಲತೆ ಬಾಡಿ ಬೆಂಡಾಯ್ತು |
ಕ್ರೂರ ವಿಧಿ ಲೀಲೆಯಲಿ ಬಾಳ ಸೌಧವು ಬಿತ್ತು |
ಆದರೂ ಧೃತಿಗೆಡದೆ ನೋವ ರಾಶಿಯ ನುಂಗಿ |
ಕಷ್ಟವನೆ ಸುಖವೆಂದು ತಿಳಿದು ಬದುಕಿದೆ ನಂಬಿ || ೬ ||

ಆದರೂ ಒಂದು ದಿನ ನಮ್ಮೆಲ್ಲರನು ಬಿಟ್ಟು |
ದೂರ ಹೋದೆಯ ನೀನು ಈ ಲೋಕವನೆ ತೊರೆದು ||
ಓ ಬಾಳ ಮರಳುಗಾಡಿನಲಿ ಚಿಮ್ಮಿದ ಗಂಗೆ |
ಪ್ರೇಮ ತ್ಯಾಗದ ಸತ್ಯ ಮೂರುತಿಯು ರಸಗಂಗೆ || ೭ ||

ಇಂದು ನೀನಿಲ್ಲ, ಬಳಿ ಎಂದು ಕೊರಗುವೆವೆಲ್ಲ |
ಕಾಡುತಿವೆ ನೆನಪುಗಳು ಸುಳಿದು ಸುತ್ತಲು ಎಲ್ಲ |
ಕಡು ಅಂಧಕಾರದಲಿ ಸತ್ಯ ದೀವಿಗೆಯಾಗಿ |
ಮುನ್ನಡೆಸು ನೀನೆಮ್ಮ ಬಾಳ ಜ್ಯೋತಿಯು ಆಗಿ || ೮ ||

"ಶೃಂಗಾರಿ ತನಯ"

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ, ರೂ. 1-50

ರೂ 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು
ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ತಂಗೀ, ನಿನಗೆ ಈ ದಾರಿ ಬೇಡ

(ಎರಡನೇ ಪುಟದಿಂದ)

ಗಕ್ಕೆ ಕರೆದೊಯ್ಯುತ್ತಿದ್ದರೆ... ಊರಲ್ಲಿನ ಕಷ್ಟ, ತಿರಸ್ಕಾರ, ಅವಮಾನ, ನಿಂದೆಗಳನ್ನೆಲ್ಲ ಸುಲಭವಾಗಿ ಮರೆತು ಸಂತೋಷ ಸಾಗರದಲ್ಲಿ ತೇಲಾಡ ಬಹುದಿತ್ತು.

ಆದರೆ ಒಂದು ರೀತಿಯ ಭಯ, ಸಂಕೋಚಗಳಿಂದ ಅಕ್ಕನೊಂದಿಗೆ ಆ ಮಾತನ್ನು ಕೇಳಲಾರಳು. ಕೇಳದಿರಲಾರಳು.

ಕೊನೆಗೊಮ್ಮೆ ಸಂಜೆಯ ಹೊತ್ತು ಅಕ್ಕ ಅತ್ತಿತ್ತ ಸುಳಿಯುವಾಗ ತಂಗಿಯನ್ನು ಮಾತನಾಡ ಬಯಸಿದಾಗ ರಾಧಾ ಮೆಲ್ಲನೆ ಬಾಯ್ಬಿಟ್ಟಳು.

"ಅಕ್ಕಾ... ನೀನು ಇನ್ನೊಮ್ಮೆ ಯಾವಾಗ ಹೋಗ್ತಿ?"

"ಯಾಕೆ ರಾಧಾ! ನಾನು ಇಲ್ಲಿರುವುದು ನಿನಗೆ ಅಸಮಾಧಾನವೇ?" ಗಿರಿಜೆ ನಗುತ್ತಲೇ ಹೇಳಿದಳು.

"ಊಹ್ಞೂ ... ಹಾಗಲ್ಲ ಅಕ್ಕಾ... ನನಗೆ..."

ನನಗೆ .... ನಿನ್ನೊಂದಿಗೆ...ಬರುವ .... ರಾಧಾ ವಾಕ್ಯ ಪೂರ್ತಿಗೊಳಿಸಲಾರದೆ ತೊದಲುತ್ತಿದ್ದಳು.

ಗಿರಿಜಾ ಬೆಚ್ಚಿ ಬಿದ್ದಳು. ಭಯದಿಂದ ತತ್ತರಿಸಿದಳು. ತಾನು ಮೇಲೇಳಲಾರದೆ ಹೊರಳಾಡುವ ನರಕ ಕೂಪಕ್ಕೆ ತಂಗಿಯನ್ನೂ ಎಳೆದೊಯ್ಯಲೇ? ಅಯ್ಯೋ... ತಾನೂ ಕಲ್ಯಾಣಿಯ ವೈಭವವನ್ನು ನೋಡಿ ಮರುಳಾಗಿಯೇ ಈ ಗತಿಯನ್ನು ಹೊಂದಿದೆನಲ್ಲವೇ? ತಂಗಿಯಾದರೂ ಹಾಗೆಯೇ ಥಳಥಳಿಸುವ ಜೀವನದ ಆಕರ್ಷಣೆಗೆ ಬಲಿಯಾಗಿದ್ದಾಳೆ ಅವಳದೇನು ತಪ್ಪು?

ತಂಗಿಗೊಂದು ವರ ದೊರೆತು ಆಕೆ ಸುಖವಾಗಿ ಗೃಹಿಣಿಯಾಗಿ ಬಾಳುವ ಸುಸಮಯವನ್ನು ನೋಡಿ ತನ್ನ ಜೀವನವನ್ನು ಕೊನೆಗೊಳಿಸಬೇಕೆಂದನಿಸಿದ ಗಿರಿಜೆ ಕಂಗಾಲಾದಳು. ಉತ್ತರಕ್ಕಾಗಿ ರಾಧಾ ಮೆಲ್ಲನೆ ಗಿರಿಜೆಯ ಮುಖ ನೋಡಿದಳು. ಆದರೆ... ಉತ್ತರಿಸುವ ಉತ್ಸಾಹ ಗಿರಿಜೆಗಿರಲಿಲ್ಲ.

"ಅಯ್ಯೋ... ರಾಧಾ.... ತಂಗೀ.... ನಿನಗೀ ಗತಿ ಬೇಡಮ್ಮ" ಎಂದು ಗಿರಿಜಾ ಬಿಕ್ಕಿ ಬಿಕ್ಕಿ ಅಳತೊಡಗಿದಳು. ರಾಧಾಳಿಗೆ ಆಶ್ಚರ್ಯ, ವ್ಯಥೆಗಳೊಂದಿಗೆ ಕುತೂಹಲವೂ ಸೇರಿತ್ತು. ಆದರೆ ಮುಂದೆ ಮಾತನ್ನಾಡುವ ಸಾಹಸ ಮಾತ್ರ ಇರಲಿಲ್ಲ

ಮರುದಿನ ಮುಂಜಾನೆ ರಾಧಾ ಏಳುವಷ್ಟರಲ್ಲೇ ಎದ್ದು ಗಡಿಬಿಡಿಯಿಂದ ಗಿರಿಜೆಯನ್ನು ಹುಡುಕುತ್ತಿದ್ದಳು. ಆಗ ರಾಧೆಗೆ ತನ್ನ ಹಾಸಿಗೆಯ ಎಡೆಯಲ್ಲಿ ಸಣ್ಣ ಕಾಗದದ ತುಂಡೊಂದು ದೊರೆಯಿತು. ರಾಧಾ ನಡುಗುವ ಕೈಗಳಿಂದ ಬಿಡಿಸಿ ಓದತೊಡಗಿದಳು

ಒಲವಿನ ತಂಗಿ ರಾಧಾ,

ನಿನ್ನಂತೆಯೇ ನಾನು ಅಂದೊಮ್ಮೆ ಈ ಪಾಪಕೂಪವನ್ನೇ ಸ್ವರ್ಗ ಸುಖವೆಂದು ಕೊಂಡು ಬಂದು ಬಿದ್ದೆ. ಈಗ ನಾನು ಈ ನರಕದ ಕೂಪದಿಂದ ಮೇಲೆ ಬರಲಾರದ ಸ್ಥಿತಿಯಲ್ಲಿದ್ದೇನೆ. ಎಂದೇ ಇನ್ನು ಈ ಬಾಳಲ್ಲಿ ಬೆಂದು ನೊಂದಿದ್ದೇನೆ. ಆದರೆ ತಂಗೀ... ನಿನಗೆಂದಿಗೂ ಈ ಸ್ಥಿತಿ ಬೇಡ. ಇಲ್ಲಿಯ ಜೀವನದ ಅರಿವಿದ್ದವರಿಂದಿಗೂ ಈ ಮಾರ್ಗದರ್ಶನವನ್ನು ಮಾಡಲಾರರು.

ಕೊನೆಯದಾಗಿ ಹೇಳುವೆ. ಬಡವನಾದರೂ ಯಾವನೊಬ್ಬ ಯೋಗ್ಯನನ್ನು ಮದುವೆಯಾಗಿ ಗೃಹಿಣಿಯಾಗಿ ಬಾಳು. ಇದೇ ನಿನಗೆ ನನ್ನ ಆಶೀರ್ವಾದ. ಅಷ್ಟೆ. ಇದನ್ನೆಂದಿಗೂ ಮೀರಿ ನಡೆಯಬೇಡ.

ಇಂತು ಅಭಾಗಿನಿ ಗಿರಿಜಾ.

ಪತ್ರವನ್ನೋದಿದ ರಾಧಾ ಬಿಕ್ಕಿ ಬಿಕ್ಕಿ ಅತ್ತಳು.

'ದೇಶಭಕ್ತಿ'—ಭಾಷಣ

ಅಳಿಕೆ, ತಾ. 9.3.65ರಂದು ಲೋಕಸೇವಾ ಹೈಸ್ಕೂಲಿನ ನೆಹರೂ ಸಭಾಭವನದಲ್ಲಿ ಜಿಲ್ಲಾ ಸರಕಾರಿ ಶಿಕ್ಷಣಾಧಿಕಾರಿಗಳೂ, ಅಖಿಲ ಪಂಚಾಯತ ಕೌನ್ಸಿಲಿನ ಸದಸ್ಯರೂ ಆದ ಶ್ರೀ ಕೆ. ಗಣಪತಿ ನಾಯಕ್‌ರು ದೇಶಭಕ್ತಿಯ ವಿಷಯದಲ್ಲಿ ಮಾತನಾಡುತ್ತಾ "ಇಂದು ಜನರಲ್ಲಿ ಹಲವರು ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿ ಇಷ್ಟು ಸಮಯ ಕಳೆದರೂ ನಮಗೆ ಏನೂ ಹೊಸ ಸುಖ ಸಿಗಲಿಲ್ಲವೆನ್ನುವರಾದರೂ ಒಬ್ಬ ರೋಗಿಗೆ ಔಷಧ ಕೊಟ್ಟೊಡನೆ ಆತನು ಹೇಗೆ ಗುಣಮುಖನಾಗಲಾರನೋ ಹಾಗೆಯೇ ಭಾರತವು ಒಮ್ಮೆಲೇ ಎದ್ದು ನಿಲ್ಲಲು ಸಾಧ್ಯವಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಭಾರತದ ಪ್ರಗತಿಯಾಗದಿದ್ದರೆ ಅದಕ್ಕೆ ಹೊಣೆ ನಾವೇ ಹೊರತು ಅನ್ಯರಲ್ಲ. ನಮ್ಮಲ್ಲೀಗ ನಮ್ಮ ಹಕ್ಕುಗಳ ಪ್ರಜ್ಞೆ ಇದ್ದರೂ, ನಮ್ಮ ಕರ್ತವ್ಯದ ಪ್ರಜ್ಞೆ ಇರುವವರು ಕಡಿಮೆ. ನಾವು ಭಾರತದ ನಾಗರಿಕರಾಗಿ ಬಾಳಿದರೆ ಸಾಲದು ಭಾರತದ ನಾಗರಿಕರಂತೆ ಬಾಳಬೇಕು.

ಹಸಿದ ಹೊಟ್ಟೆಯಲ್ಲಿ ದೇಶಭಕ್ತರಾಗಲು ಸಾಧ್ಯವಿಲ್ಲ ಆದುದರಿಂದ ನಾವು ಜನತೆಯ ಹೊಟ್ಟೆ ತುಂಬಿಸಲು ಪ್ರಯತ್ನಿಸಬೇಕು. ನಾವು ದೇಶಭಕ್ತಿಯನ್ನು ಬೆಳೆಸುವ ವಿಧಾನಗಳಲ್ಲಿ ಅದೊಂದು ಮಾತ್ರವಲ್ಲ, ಭಾರತದ ರಾಜಕೀಯ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಬೇಕು. ನಾವು ಮುಂದೆ ರಾಜಕೀಯಕ್ಕೆ ಹೋಗುವವರಾದರೆ ರಾಷ್ಟ್ರೀಯ ಮುಖಂಡರಾಗಿ ಬಾಳಬೇಕು. ರಾಜಕಾರಣಿಗಳಾಗಿ ಬಾಳುವುದು ಸರಿಯಲ್ಲ. ರಾಷ್ಟ್ರೀಯ ಮುಖಂಡನು ಮುಂದಿನ ತಲೆಮಾರಿನ ಕುರಿತಾಗಿ ಯೋಚಿಸಿದರೆ ರಾಜಕಾರಣಿಯು ಮುಂದಿನ ಚುನಾವಣೆಯ ಕುರಿತಾಗಿ ಮಾತ್ರ ಯೋಚಿಸುತ್ತಾನೆ. ಆದ್ದರಿಂದ ಹಾಗಾಗಬಾರದು.

ಇಂದು ರಾಷ್ಟ್ರದಲ್ಲಿ ನಡೆಯುವಂತಹ ವಿಧ್ವಂಸಕ ಕೃತ್ಯಗಳು ಅಪಾಯಕಾರಿ. ಅದರಿಂದ ಮುಂದಿನಾದಲ್ಲಿ ಬರುವ ಸಂಭವವಿದೆ. ನಾವು ಪ್ರಜಾಪ್ರಭುತ್ವವನ್ನು ಮುಂದುವರಿಸಲು ಶಕ್ತರಾಗಿರಬೇಕು. "ಜಗವೆಲ್ಲ ನಗಲಿ ಜಗವಳಲು ನನಗಿರಲಿ ಎಂಬುದನ್ನು ನಾವು ಯಾವಾಗಲೂ ಕಾರ್ಯದಲ್ಲಿ ತೋರಿಸುತ್ತಿರಬೇಕು" ಎಂದು ಮಧುರವಾಗಿ ಸ್ಫೂರ್ತಿದಾಯಕವಾಗಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಲೋಕಸೇವಾ ವೃಂದದ ಅಧ್ಯಕ್ಷ ಶ್ರೀ ಯಂ. ನಾರಾಯಣ ಭಟ್ಟರು, "ನಾವು ಹೇಗೆ ದೇಶಭಕ್ತಿಯನ್ನು ದೈನಂದಿನ ಜೀವನದಲ್ಲಿಯೂ ಬೆಳೆಸಬೇಕು? ಅದುವೇ ಹೇಗೆ ದೈವಭಕ್ತಿಗೂ ನಾಂದಿಯಾಗುವುದು" ಎಂಬ ವಿಷಯಗಳನ್ನು ವಿವರಿಸಿದರು.

ಕೊನೆಗೆ ಶಾಲಾ ವಿದ್ಯಾರ್ಥಿ ನಾಯಕರು ಧನ್ಯವಾದ ಸಮರ್ಪಿಸಿದರು.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

NAVAYUGA 25-3-1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೫-೩-೬೫ರಿಂದ ೩೧-೩-೬೫ರ ವರೆಗೆ

೧. ಮೇಷ

ಬಹು ದಿನದ ನಿಮ್ಮ ಬಯಕೆಗಳು ನೆರವೇರುವ ಕಾಲವಿಂದು ಸಮೀಪಿಸಿದೆ. ನಿಮ್ಮ ಧನಪತಿಯಾದ ಶುಕ್ರನು ಉಚ್ಚನಾಗಿದ್ದು ಭಾಗ್ಯಪತಿಯಾದ ಬೃಹಸ್ಪತಿಯು ಧನಸ್ಥಾನಕ್ಕೆ ಬಂದಿಹನು ಮಾತ್ರವಲ್ಲ ಲಾಭಪತಿಯಾದ ಶನೈಶ್ಚರನು ಲಾಭಸ್ಥಾನದಲ್ಲೇ ಕುಳಿತಿರುವನೆಂದ ಮೇಲೆ ನಿಮ್ಮ ಪ್ರತಿಯೊಂದು ಕಾರ್ಯಕಲಾಪಗಳು ನಿರೀಕ್ಷೆಗಿಂತಲೂ ಅಧಿಕವಾದ ಫಲವನ್ನು ಕೊಡಲಿವೆ. ಮಕ್ಕಳ ಅನಾರೋಗ್ಯ ಸೋದರರೊಳು ಮನಸ್ತಾಪ ಇತ್ಯಾದಿ ಕೆಲವೊಂದು ಗೃಹ ತಾಪತ್ರಯಗಳು ಕಂಡುಬಂದರೂ ವಾರಾಂತ್ಯದ 5 ದಿನಗಳು ಸುಖ ಸಂಪತ್ತುಗಳನ್ನು ನೀಡಲಿವೆ.

೨. ವೃಷಭ

ನಿಮ್ಮ ವ್ಯಯ ಸ್ಥಾನಪತಿಯು ಶುದ್ಧವಾಗಿದ್ದು ಲಾಭದಲ್ಲಿ ಗೃಹತ್ರಯರ ಸಮಾಗಮವಾಗಿರುವುದರಿಂದ ಇಂದು ನಿಮ್ಮ ಸಾಂಪತ್ತಿಕ ಪರಿಸ್ಥಿತಿಯು ಬಹುಮಟ್ಟಿಗೆ ಸುಧಾರಿಸಲಿದೆ. ವ್ಯಾಪಾರ ವ್ಯವಹಾರ ಚತುರರಾದ ನಿಮಗೆ ಕೆಲವೊಂದು ದುಷ್ಟ ಶಕ್ತಿಗಳ ಸಹವಾಸದಿಂದಾಗಿ ಆಕಸ್ಮಿಕ ನಷ್ಟ ಜನನಿಂದೆಗೆ ಗುರಿಯಾಗಲಿರುವಿರಿ. ಆಪ್ತಜನರ ವಿರಹದ ಯೋಗವಿದೆ. ಪ್ರವಾಸವು ಸುಖಕರವಿದ್ದರೂ ಖರ್ಚು ಅಧಿಕವಾದೀತು. ವಾರಾಂತ್ಯದ 3 ದಿನಗಳು ಇಷ್ಟಾರ್ಥಪ್ರದಗಳಿವೆ.

೩. ಮಿಥುನ

ಯಾವೊಂದೂ ತಾಪತ್ರಯಗಳಿಲ್ಲದ ನಿಮಗೆ ಇಂದು ಕೆಲವೊಂದು ಭಾಗದಲ್ಲಿ ನಷ್ಟನಿಷ್ಠುರಗಳಾಗಲಿವೆ. ನಿಷ್ಕಾರಣವಾಗಿ ಜನತೆಯೊಡನೆ ಕಲಹವಾಗುವದು. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟವಾಗಲಿದೆ. ಆದರೂ ಸಾಹಸಿಗಳೂ ಕರ್ತವ್ಯ ದಕ್ಷರೂ ಆದ ನಿಮಗೆ ಕೋರ್ಟು ಕಚೇರಿಗಳ ವ್ಯವಹಾರಗಳಲ್ಲೂ ರಾಜಕೀಯ ಕ್ಷೇತ್ರಗಳಲ್ಲೂ ಲಾಭ ಕೀರ್ತಿಗಳು ಲಭಿಸುವವು. ವಾರಾದಿಯ 2 ದಿನಗಳು ತುಂಬ ಅನುಕೂಲವಿವೆ.

೪. ಕರ್ಕಾಟ

ಆರ್ಥಿಕ ಬಿಕ್ಕಟ್ಟಿನಿಂದ ತೊಳಲುತ್ತಿದ್ದ ನಿಮಗೆ ಇಂದು ಸುಖಕ್ಕೆ ಸಾಕಾಗುವಷ್ಟು ಧನಾಗಮವಾಗುವುದರಿಂದ ಹಿಂದಿಗಿಂತ ಇಂದಿನ ದಿನಗಳು ಸ್ವಲ್ಪ ಸುಗಮವಾಗಿ ಸಾಗಲಿವೆ. ವಿಶೇಷತಃ ವ್ಯಾಪಾರದಲ್ಲಿ ನಿರೀಕ್ಷೆಗೂ ಮಿಕ್ಕಿದ ಧನಲಾಭವಾಗುವದು. ಬಂಧುಮಿತ್ರರ ನೆರವು ಸಾಕಷ್ಟಿದ್ದರೂ ಕೋರ್ಟು ವ್ಯವಹಾರಗಳಲ್ಲಿ ಪ್ರತಿಪಕ್ಷಿಗಳ ಕೈಯ್ಯೇ ಮೇಲಾಗಲಿದೆ. ಸೇವಕ ಜನತೆಗೂ ಶ್ರಮಜೀವಿವರ್ಗಕ್ಕೂ ಇಂದಿನ ದಿನಗಳು ಅಷ್ಟೊಂದು ಅನುಕೂಲವಾಗಿಲ್ಲವು. ವಾರಾದಿಯ 4 ದಿನಗಳು ಇಷ್ಟಪ್ರದಗಳಿವೆ.

೫. ಸಿಂಹ

ಇಷ್ಟಕ್ಕಿಂತ ದ್ವಿಗುಣ ಅನಿಷ್ಟಗಳೇ ನಿಮಗಿಂದು ಪ್ರಾಪ್ತವಾಗಲಿವೆ. ಪರಿಶ್ರಮಕ್ಕೆ ತಕ್ಕ ಫಲ ಕಾಣೆವು. ಖರ್ಚುಗಳು ಮಾತ್ರ ದಿನದಿಂದ ದಿನಕ್ಕೆ ಏರುತ್ತಿದ್ದು ಅದನ್ನು ನಿರ್ವಹಿಸುವ ಸಲುವಾಗಿ ಸಾಲ ಮಾಡಬೇಕಾಗುವುದು. ಹಿಂದೆ ಮಿತ್ರರಾಗಿದ್ದವರೇ ಇಂದು ನಿಮ್ಮ ಶತ್ರು ಪಕ್ಷವನ್ನು ವಹಿಸುವರು. ಪಿತ್ಥ ದೋಷದಿಂದಾಗಿ ಆರೋಗ್ಯ ಕೆಡಲಿದೆ. ಸದಾ ಮನೋರೋಗದಿಂದ ಪೀಡಿತರಾದ ನಿಮಗೆ ವಾರಾಂತ್ಯದ 5 ದಿನಗಳಲ್ಲಿ ಸ್ವಲ್ಪ ನೆಮ್ಮದಿ ದೊರೆತೀತು.

೬. ಕನ್ಯಾ

ಶ್ರಮವಹಿಸಿ ದುಡಿಯುವಿರಿ. ನಿಮ್ಮ ಪರಿಶ್ರಮವು ಸಫಲವಾಗುವದು. ಆದರೇನು? ಗೃಹತಾಪತ್ರಯ ಕೋರ್ಟು ವ್ಯವಹಾರಗಳಿಂದಾಗಿ ನಿಮ್ಮ ಖರ್ಚುವೆಚ್ಚಗಳು ಆಯಕ್ಕಿಂತ ದ್ವಿಗುಣವಾಗಿರುವುದರಿಂದ ದಿನಗಳನ್ನು ಬಹಳ ಕಷ್ಟದಿಂದ ಕಳೆಯಬೇಕಾಗುವದು. ಸತಿಪತಿಗಳಲ್ಲಿ ಸದಾ ವಿರಸವುಂಟಾಗುವದಲ್ಲದೆ ಸ್ತ್ರೀವರ್ಗವನ್ನೇ ನೀವಿಂದು ದ್ವೇಷಿಸುವಂತಹ ಪರಿಸ್ಥಿತಿಯುಂಟಾಗಲಿದೆ. ಸ್ವಂತ ಆರೋಗ್ಯದತ್ತ ಗಮನವಿರಲಿ. ವಾರಾಂತ್ಯದ 3 ದಿನಗಳು ಇದ್ದುದರಲ್ಲುತ್ತಮವಾಗಿವೆ.

೭. ತುಲಾ

ಒಂದೊಮ್ಮೆಗೇ ನಿಮ್ಮ ಪರಿಸ್ಥಿತಿಯಲ್ಲಿ ಅನೇಕ ಪರಿವರ್ತನೆಗಳುಂಟಾಗಲಿವೆ. ಬಂಧುಮಿತ್ರರ ನೆರವಿಂದ ಪಂಡಿತರಾದ ನೀವು ಅವರೊಂದಿಗೆ ವೈರವನ್ನು ಸಾಧಿಸುವಿರಿ. ಎಷ್ಟೇ ಶ್ರಮವಹಿಸಿ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾಗುವದು. ನೌಕರಿ ಭಾಗದಲ್ಲಿ ಹೆಚ್ಚಿನ ಪ್ರಗತಿಯ ಚಿಹ್ನೆಗಳಿವೆ. ಕೋರ್ಟು ಕಚೇರಿಗಳ ವ್ಯವಹಾರಗಳೂ ಹೆಚ್ಚಿನಂಶ ನಿಮ್ಮಂತೆಯೇ ಆಗುವವು. ವಾರಾದಿಯ 2 ದಿನಗಳಲ್ಲಿ ನಿಮ್ಮ ಬಯಕೆಯು ನಿರ್ವಿಘ್ನದಿಂದ ನೆರವೇರಲಿದೆ.

೮ ವೃಶ್ಚಿಕ

ನಿಮ್ಮ ಪರಿಸ್ಥಿತಿಯಿಂದು ಬಹುತೇಕ ಸುಧಾರಿಸಲಿದೆ. ಹಲವಾರು ದಿನಗಳಿಂದ ಪ್ರತಿಕೂಲನಾಗಿ ನಿಂತಿದ್ದ ನಿಮ್ಮ ಧನಪತಿಯು ಇಂದು ನಿಮ್ಮ ಮೇಲೆ ಪ್ರಸನ್ನನಾಗಿರುವನು. ಆದಕಾರಣ ನಿಮ್ಮ ಖರ್ಚುವೆಚ್ಚಗಳಿಗಾಗಿ ನೀವಿಂದು ಹೆರವರ ಮುಖವನ್ನು ನೋಡಬೇಕಾಗಿಲ್ಲವು. ವ್ಯಾಪಾರ ವ್ಯವಹಾರ ಚತುರರಾದ ನಿಮಗೆ ಸರ್ವತ್ರ ಸನ್ಮಾನಮಾನಗಳು ಲಭಿಸುವವು. ಆದರೆ ಗೃಹಚ್ಛಿದ್ರಗಳಿಂದಾಗಿ ನಿಮ್ಮ ಮನಸ್ಸಿಗೆ ಮಾತ್ರ ನೆಮ್ಮದಿಯಿರದು. ತಾ. 27, 28 ಈ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

೯. ಧನು

ಕಫ ದೋಷದಿಂದಾಗಿ ನಿಮ್ಮ ಆರೋಗ್ಯವು ಕೆಡುವದಲ್ಲದೆ ಆರ್ಥಿಕ ಭಾಗದಲ್ಲೂ ಸ್ವಲ್ಪ ಬಿಕ್ಕಟ್ಟು ತಲೆದೋರಲಿದೆ. ವಿಪಕ್ಷೀಯರು ತಮ್ಮ ಅಸ್ತಿತ್ವವನ್ನು ಆಗಾಗ ಮನಗಾಣಿಸುವರು. ಗೃಹಕೃತ್ಯದಲ್ಲಾವ ಕೊರತೆಯಿಲ್ಲವಾದರೂ ಆತ್ಮೀಯರ ವಿಯೋಗವುಂಟಾಗಲಿದೆ. ಎಷ್ಟೇ ಕಷ್ಟ ಬಂದರೂ ಹಿಡಿದ ಕಾರ್ಯವನ್ನು ಬಿಡದೆ ಮುಂದುವರಿಸುವ ನಿಮಗೆ ತಾ. 25, 26, 29, 30, 31 ಈ ದಿನಗಳು ಅನುಕೂಲವಾಗಿವೆ.

೧೦. ಮಕರ

ಸುದಿನಗಳು ಸನ್ನಿಹಿತವಾಗಿವೆ. ನಿಮ್ಮ ಹೆಚ್ಚಿನ ಅಪಜನಿಷ್ಟಗಳು ದಿನಕರನಂ ಕಂಡ ದಿವಾಂಧಗಳಂತೆ ಮಾಯವಾಗುವವು. ವ್ಯವಹಾರ ಚತುರರಾದ ನಿಮಗೆ ಜನತೆಯ ಸಹಕಾರವೂ ಲಭಿಸುವದು. ಪ್ರಯತ್ನಕ್ಕೆ ತಕ್ಕ ಫಲ ಲಭಿಸುವುದರಿಂದಾಗಿ ದಿನಗಳು ಸುಗಮವಾಗುವವು. ನಿಮ್ಮ ಸಾಹಸಕ್ಕೆ ಕಂಟಕಪ್ರಾಯರಾಗಿರುವ ಶತ್ರುವರ್ಗದವರು ಹಲವಾರು ತೆರದಿಂದ ಕೀಟಲೆಗಳನ್ನೊಡ್ಡುವರಾದರೂ ಬೃಹಸ್ಪತಿಯ ಅನುಗ್ರಹವೆಂಬ ಕವಚವಂ ಧರಿಸಿದ ನಿಮಗೆ ಏನೊಂದೂ ತೊಂದರೆಯಾಗದು. ತಾ. 27, 28 ಅತೀವ ಪ್ರಶಸ್ತವಿವೆ.

೧೧. ಕುಂಭ

ಸುಖಭಾಗ್ಯಪನಾದ ಶುಕ್ರನು ಉಚ್ಚನಾಗಿ ಧನಸ್ಥಾನದಲ್ಲಿದ್ದ ಕಾರಣ ನೀವಿಂದು ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾಗುವಿರಲ್ಲದೆ ಸುಖನೆಮ್ಮದಿಯಿಂದ ಕಾಲ ಕಳೆವಿರಿ. ಕೆಲವೊಂದು ಚಿಕ್ಕ ಪುಟ್ಟ ವಿಷಯಗಳ ಸಲುವಾಗಿ ಬಂಧುಜನರೊಳು ಮನಸ್ತಾಪವುಂಟಾಗುವ ಯೋಗವಿದೆ. ನಿರಾಮಯವಾದ ಸಂಸಾರದಲ್ಲಾವ ಕುಂದುಕೊರತೆಗಳಿಗೂ ಅವಕಾಶವಿಲ್ಲವು. ತಾ. 25 26, 29, 30, 31 ಈ ದಿನಗಳು ಕಾರ್ಯಸಿದ್ಧಿ ಸುಖದಾಯಿಗಳಾಗಿವೆ.

೧೨. ಮೀನ

ಸಾಹಸಿಗಳಾದ ನಿಮ್ಮ ಯತ್ನಗಳು ಬಹ್ವಂಶ ನೀರಲ್ಲಿ ಗೈದ ಹೋಮದಂತೆ ವಿಫಲವಾಗಲಿವೆ. ಜನ್ಮರಾಶಿಗತ ರವಿ ಬುಧರಿಂದಾಗಿ ದೇಹಾಲಸ್ಯ ಬಂಧುಜನ ವಿರೋಧಾದಿಗಳಿಗೆಡೆಯಾಗುವಿರಿ. ಅನಿರೀಕ್ಷಿತ ಪರ್ಯಟನದಿಂದಾಗಿ ನಷ್ಟಕಷ್ಟಗಳು ಸಂಭವಿಸುವವು. ಆದರೂ ಧನಭಾಗ್ಯಪತಿಯು ಪೂರ್ಣಾನುಗ್ರಹವು ನಿಮ್ಮ ಮೇಲಿರುವದರಿಂದ ಹಣದ ವಿಚಾರದಲ್ಲಿ ನಿಶ್ಚಿಂತರಾಗಿರುವಿರಿ. ವಾರಾದಿಯ 4 ದಿನಗಳಲ್ಲಿ ಮಿತ್ರರ ಸಮಾಗಮ ಮೃಷ್ಟಾನ್ನ ಭೋಜನಾದಿಗಳು ಲಭಿಸುವವು.

In the Court of the Town Panchayat of Coondapoor

Civil Suit No. 36/1964

Nailady Shivaram Shetty — Plff.
A. Rajeeva Shety — Deft.

To
Defendant A. Rajeeva Shetty
N/o Badakere Venkappa Shetty
Coondapoor Kasba.

Take notice that the above suit filed against you for the recovery of amounts given by plaintiff on Pronote, stands posted to 31-3-1965, for your appearance. If you fail to appear on the said date at 2-30 P. M. the same will be determined expatte.

(By order of the Court)

(*Sd.*) K. Ganapathi Kini
Vakil's Clerk
Authorised Agent for plaintiff.
Coondapoor, 15-3-1965.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ ಖ ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.